
ಕಾದಂಬರಿ ಲೋಕ

ಕೆಲವು ಪ್ರಮುಖ ವಿಶ್ವ ಕಾದಂಬರಿಗಳ ಅವಲೋಕನ



ಸಂಪಾದಕರು:
ಡಾ|| ಹಾ ಮಾ ನಾಯಕ
ಎಂ ವಿ ವೆಂಕಟೇಶ ಮೂರ್ತಿ

ವಸಂತ ಪ್ರಕಾಶನ

ಕಾದಂಬರಿ ಲೋಕ

ಪ್ರೊಫೆಸರ್ ವಿ.ಎಂ. ಇನಾಂದಾರ್ ನೆನಪಿನ ಸಂಪುಟ

ಸಂಪಾದಕರು

ಡಾ॥ ಹಾ.ಮಾ. ನಾಯಕ
ಎಂ.ವಿ. ವೆಂಕಟೇಶ ಮೂರ್ತಿ

ಕೆಲವು ಪ್ರಮುಖ ವಿಶ್ವ ಕಾದಂಬರಿಗಳ ಅವಲೋಕನ

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ
3ನೇ ಬ್ಲಾಕ್, ಜಯನಗರ, ಬೆಂಗಳೂರು–560 011

Kaadambari Loka : V.M. Inamdar Nenapina Samputa (The World of the Novel: Professor V.M. Inamdar Commemoration Volume)(Kannada): Edited by Dr. Ha.Ma. Nayak and M.V. Venkatesh Murthy; published during the Birth Centenary Year of Prof. V.M. Inamdar by Vasantha Prakashana; No. 360, 10th 'B' Main, 3rd Block, Jayanagar, Bangalore - 560 011, India. Telephone : 080-22443996, email : vasantha_prakashana @yahoo.com; website: www.vasanthaprakashana.com

ISBN : 978-93-83052-50-9

ಸಾಹಿತ್ಯ ಸಲಹೆಗಾರರು : ಎಸ್. ದಿವಾಕರ್

ಪ್ರಥಮ ಮುದ್ರಣ : 1990
ಮರುಮುದ್ರಣ : 2013
ಹಕ್ಕುಗಳು : ಆಯಾ ಲೇಖಕರು
ಉಪಯೋಗಿಸಿದ ಕಾಗದ : 70 ಜಿಎಸ್ಎಂ ಮ್ಯಾಪ್‌ಲಿಥೊ
ಪುಟಗಳು : 546 ಬೆಲೆ : ರೂ. 350

ಮುಖಪುಟ ವಿನ್ಯಾಸ : ಅಪಾರ
ಅಕ್ಷರ ಜೋಡಣೆ : ವಸಂತಲಕ್ಷ್ಮಿ
ಮುದ್ರಣ : ಶ್ರೀವಿದ್ಯಾಮಾನ್ ಪ್ರಿಂಟರ್ಸ್

ಮೊದಲ ಮಾತು

(ಮರು ಮುದ್ರಣಕ್ಕೆ)

ಪ್ರೊ. ವಿ.ಎಂ. ಇನಾಂದಾರರು ನಮ್ಮೊಡನೆ ಇದ್ದಾಗಲೇ ಈ 'ಕಾದಂಬರಿಲೋಕ' ಗೌರವಗ್ರಂಥವಾಗಿ ಅವರಿಗೆ ಅರ್ಪಿತವಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ಅವರು ಕೀರ್ತಿಶೇಷರಾದ ಮೇಲೆ ಸ್ಮರಣಸಂಪುಟವಾಗಿ ಪ್ರಕಟಗೊಂಡಿತು. ಅವರ 79ನೆಯ ಜನ್ಮದಿನದಂದು (1.10.1990) ನಡೆದ ಕಾರ್ಯಕ್ರಮದಲ್ಲಿ ಕನ್ನಡದ ಹಿರಿಯ ಚೇತನ ಪ್ರೊ. ಎ.ಎನ್. ಮೂರ್ತಿರಾಯರು ಅದನ್ನು ಬಿಡುಗಡೆ ಮಾಡಿದರು. ನಾಡಿನ ಖ್ಯಾತ ಸಾಹಿತಿಗಳು, ವಿಮರ್ಶಕರು ಬರೆದುಕೊಟ್ಟ ವಿಶ್ವ ಕಾದಂಬರಿಗಳನ್ನು ಕುರಿತ ಇಲ್ಲಿನ ಮೂವತ್ತಕ್ಕೂ ಹೆಚ್ಚು ವಿಮರ್ಶಾತ್ಮಕ ಲೇಖನಗಳಲ್ಲಿನ ಒಳನೋಟಗಳಿಂದಾಗಿ ಈ ಕೃತಿ ವಿದ್ವಾಂಸರ, ಸಾಹಿತ್ಯಾಸಕ್ತರ ಮೆಚ್ಚುಗೆ ಗಳಿಸಿತು.

ಕಳೆದ ವರ್ಷ ಇನಾಂದಾರರ ಜನ್ಮಶತಾಬ್ದ ವರ್ಷ. ಅವರ ನೆನಪಿನಲ್ಲಿ ನಾಡಿನ ಸಂಘಸಂಸ್ಥೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿತ್ತು. ಆದರೆ ಧಾರವಾಡದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ಒಂದು ವಿಚಾರ ಸಂಕಿರಣ, ಬೇರೆಲ್ಲೋ ನಡೆದ ಒಂದೆರಡು ಕಿರುಕಾರ್ಯಕ್ರಮ, ದೂರದ ಪುಣೆಯಲ್ಲಿ ಜರುಗಿದ ಒಂದು – ಬೆರಳೆಣಿಕೆಯ ಇಷ್ಟನ್ನು ಬಿಟ್ಟರೆ ನಮ್ಮ ಅಕಾಡೆಮಿಗಳಾಗಲಿ, ವಿಶ್ವವಿದ್ಯಾನಿಲಯಗಳಾಗಲಿ, ಕನ್ನಡಪರ ಸಂಘಟನೆಗಳಾಗಲಿ ತಮ್ಮ ಗಮನವನ್ನು ಅತ್ತಹರಿಸಲಿಲ್ಲ; ಇನ್ನು ಮುಂದೆ ಹರಿಸುವಂತೆಯೂ ಕಾಣುವುದಿಲ್ಲ. ಕನ್ನಡ ಸಾಹಿತ್ಯದ ಕಣಜವನ್ನು ತಮ್ಮ ಅನನ್ಯ ಕೊಡುಗೆಯಿಂದ ಶ್ರೀಮಂತಗೊಳಿಸಿ ಕೀರ್ತಿಶೇಷರಾಗಿರುವ ಇನಾಂದಾರರಂಥ ಹಲವು ಮಂದಿ ಹಿರಿಯರನ್ನು ಅಂಥ ವಿಶೇಷ ಸಂದರ್ಭದಲ್ಲಿಯಾದರೂ ಸ್ಮರಿಸಿ, ಅವರ ಕೊಡುಗೆಗೆ ಕೃತಜ್ಞತೆ ಸಲ್ಲಿಸುವ ಕನಿಷ್ಠ ಸೌಜನ್ಯವನ್ನೂ ನಾವು ಕಳೆದುಕೊಳ್ಳುತ್ತಿರುವುದು ನಿಜಕ್ಕೂ ಖೇದದ ಸಂಗತಿ.

ಅದು ಹೇಗೇ ಇರಲಿ, ಪ್ರಕಟಗೊಂಡು ಒಂದು ದಶಮಾನ ಕಾಲವೇ ಉರುಳಿರುವ ಈಗಲೂ 'ಕಾದಂಬರಿಲೋಕ'ದ ವಿಮರ್ಶಾಲೇಖನಗಳು ಅಂದು ಹೇಗೊ ಇಂದಿಗೂ ಹಾಗೆಯೇ ತಮ್ಮ ವಿಶಿಷ್ಟತೆಯನ್ನೂ ಮೌಲಿಕತೆಯನ್ನೂ ಉಳಿಸಿಕೊಂಡಿರುವುದು ಕೃತಿಯ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ. ಹೀಗಾಗಿ ಇನಾಂದಾರರ ಜನ್ಮಶತಾಬ್ದದ ಸುಸಂದರ್ಭದಲ್ಲಿ ಈ ಸಂಪುಟ ಮರುಮುದ್ರಣದ ಯೋಗವನ್ನು ಕಾಣುವಂತಾದರೆ ಅದು ಸೂಕ್ತವೂ ಉಚಿತವೂ ಆಗುವುದಲ್ಲದೆ, ಆ ಮೂಲಕ ಇನಾಂದಾರರ ಸ್ಮೃತಿಗೆ ನಮ್ಮ ಗೌರವಾಂಜಲಿಯನ್ನು ಸಲ್ಲಿಸಿದಂತೆಯೂ ಆಗುತ್ತದೆಂಬ ಆಶಯದಿಂದ ಅದಕ್ಕಾಗಿ ಪ್ರಯತ್ನಿಸಲಾಯಿತು.

‘ವಸಂತ ಪ್ರಕಾಶನ’ದ ಮಾನ್ಯ ಗೆಳೆಯರಾದ ಶ್ರೀ ಕೆ.ಎಸ್. ಮುರಳಿಯವರು ಆ ಸಾಹಸವನ್ನು ಕೈಕೊಂಡು ನಿರ್ವಹಿಸಿ ನಮ್ಮ ಆಶಯವನ್ನು ಈಡೇರಿಸಿದ್ದಾರೆ. ಈ ಮುಂಚೆ ಇನಾಂದಾರರ ಹಲವು ಕಾದಂಬರಿಗಳನ್ನು ಅವರು ಮರುಮುದ್ರಿಸಿದ್ದಾರೆ. ಇದುವರೆಗೆ ಲಭ್ಯವಿಲ್ಲದಿದ್ದ ಇನಾಂದಾರರ ಲಘುಪ್ರಬಂಧಗಳ ಎರಡು ಸಂಕಲನಗಳನ್ನೂ ಅವರು ಪ್ರಕಟಿಸಿದ್ದಾರೆ. ಇದೀಗ ‘ಕಾದಂಬರಿಲೋಕ’ವನ್ನು ಪ್ರಕಟಿಸುತ್ತಿದ್ದಾರೆ. ಅವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು.

ಈ ಹಿನ್ನೆಲೆಯಲ್ಲಿ ‘ಕಾದಂಬರಿಲೋಕ’ದ ಮರುಮುದ್ರಣಕ್ಕೆ ಅನುಮತಿ ನೀಡಲು ಪ್ರಾರ್ಥಿಸಿದಾಗ ಅದರ ಹಾಗೂ ಇನಾಂದಾರರ ಹಲವಾರು ಕಾದಂಬರಿಗಳ ಮೊದಲ ಪ್ರಕಾಶಕರೂ ಅವರಿಗೆ ಆತ್ಮೀಯರೂ ಆಗಿದ್ದ ಮೈಸೂರಿನ ಪ್ರತಿಷ್ಠಿತ ‘ಗೀತಾ ಬುಕ್ ಹೌಸ್’ನ ಶ್ರೀ ಎಂ. ಸತ್ಯನಾರಾಯಣರಾವ್ ಸೋದರರು ಉದಾರವಾಗಿ ಕೂಡಲೇ ಅನುಮತಿಯಿತ್ತು ಉಪಕರಿಸಿದ್ದಾರೆ. ಅವರಿಗೆ ನಾವು ಋಣಿಯಾಗಿದ್ದೇವೆ.

‘ಕಾದಂಬರಿಲೋಕ’ದ ಹಿಂದಿನ ಪ್ರೇರಕಶಕ್ತಿಯೂ ಅದರ ಮುಖ್ಯ ಸಂಪಾದಕರೂ ಆಗಿದ್ದ ಡಾ. ಹಾ. ಮಾ. ನಾಯಕ ಅವರೂ ಈಗ ನಮ್ಮ ನಡುವೆ ಇಲ್ಲದಿರುವುದು ನೋವಿನ ಮತ್ತು ವಿಷಾದದ ಸಂಗತಿಯಾಗಿದೆ. ಅವರು ಇದ್ದಿದ್ದರೆ ಈ ಕೃತಿಯ ಮರುಮುದ್ರಣ ಅವರಿಗೆ ಸಂತೋಷ ತರುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಬಹುಹಿಂದೆ ‘ಕಸ್ತೂರಿ’ಯಲ್ಲಿ ಪ್ರಕಟಗೊಂಡ ಇನಾಂದಾರರನ್ನು ಕುರಿತ ನನ್ನ ಲೇಖನವನ್ನು ಮೆಚ್ಚಿದ್ದ ಡಾ. ನಾಯಕರು ‘ಕಾದಂಬರಿಲೋಕ’ದಲ್ಲಿ ಅದನ್ನು ಅಚ್ಚುಮಾಡಬೇಕೆಂದು ಆಗ್ರಹಿಸಿದ್ದರು. ಆಗ ಏಕೊ ಒಪ್ಪಿರದಿದ್ದ ನಾನು ಅವರ ಆಶಯವನ್ನು ಗೌರವಿಸಿ ಆ ವಿಸ್ತೃತ ಲೇಖನದ ಆಯ್ದ ಭಾಗಗಳನ್ನು ಈಗ ಸೇರಿಸಿದ್ದೇನೆ. ಈ ಸೇರ್ಪಡೆಯನ್ನು ಹೊರತುಪಡಿಸಿ ‘ಕಾದಂಬರಿಲೋಕ’ ಇನ್ನು ಯಾವುದೇ ಬದಲಾವಣೆಯಿಲ್ಲದೆ ಯಥಾವತ್ ಮರುಮುದ್ರಣಗೊಂಡಿದೆ. ಇದರ ಪ್ರಕಟಣೆಯೊಂದಿಗೆ ಇನಾಂದಾರರ ದಿವ್ಯಸ್ಮೃತಿಗೆ ಅವರ ಜನ್ಮಶತಾಬ್ದ ಸಂದರ್ಭದಲ್ಲಿ ಮತ್ತೊಮ್ಮೆ ನಮ್ಮ ಗೌರವಪೂರ್ವಕ ಪ್ರಣಮಾಂಜಲಿಗಳನ್ನು ಸಲ್ಲಿಸುತ್ತಿದ್ದೇವೆ.

ಸಾಹಿತ್ಯಾಸಕ್ತ ಸಹೃದಯರು ಈ ಕೃತಿಯನ್ನು ಮತ್ತೊಮ್ಮೆ ಸ್ವಾಗತಿಸುವರೆಂದು ನಂಬಿದ್ದೇವೆ.

ಜೂನ್ 30, 2013
ಬೆಂಗಳೂರು — ಎಂ. ವಿ. ವೆಂಕಟೇಶ ಮೂರ್ತಿ

ವಿ.ಎಂ. ಇನಾಂದಾರ್ : ಬದುಕು, ಬರೆಹ, ವ್ಯಕ್ತಿತ್ವ

ನಮ್ಮ ಹಿರಿಯ ಸಾಹಿತ್ಯಜ್ಞರೂ ಮೌಲಿಕ ಕಾದಂಬರಿಕಾರರಲ್ಲಿ ಒಬ್ಬರೂ ಆಗಿದ್ದ ಕೀರ್ತಿಶೇಷ ಪ್ರೊ. ವೆಂಕಟರಾವ್ ಮಧ್ವರಾವ್ ಇನಾಂದಾರರು ಹುಟ್ಟಿದ್ದು ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ; ಅಕ್ಟೋಬರ್ 1, 1912ರಂದು. ತಂದೆ ಮಧ್ವರಾಯರು ಬಿಜಾಪುರದಲ್ಲಿ ಪೋಸ್ಟ್‌ಮಾಸ್ಟರಾಗಿದ್ದು ನಿವೃತ್ತರಾದವರು. ತಾಯಿ ಶ್ರೀಮತಿ ಕಮಲಮ್ಮ ಕರ್ನಾಟಕ ಕೇಸರಿ ಸ್ವಾತಂತ್ರ್ಯ ಹೋರಾಟಗಾರ ಗಂಗಾಧರರಾವ್ ದೇಶಪಾಂಡೆಯವರಿಂದ ಖ್ಯಾತವಾದ ಹುದಲಿ ದೇಶಪಾಂಡೆ ಮನೆತನದವರು. ಮೂವರು ಸೋದರರು, ಇಬ್ಬರು ಸೋದರಿಯರಲ್ಲಿ ಹಿರಿಯವರೇ ವೆಂಕಟರಾಯರು. ತಂದೆಯ ತಾತ ಬ್ರಿಟಿಷ್ ಸರ್ಕಾರದಲ್ಲಿ ದೊಡ್ಡ ಹುದ್ದೆಗೇರಿ, ಧಾರವಾಡದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿದ್ದು ವಿಶ್ರಾಂತರಾದವರು. ಅವರ ಹೆಸರೂ ವೆಂಕಟರಾಯರೆಂದೇ. ಆ ಕಾಲದಲ್ಲಿ ಅವರು ಕಟ್ಟಿಸಿದ ಭಾವಿ 'ಜಡ್ಜಿ ಭಾವಿ' ಎಂದೇ ಹೆಸರಾಗಿ ಧಾರವಾಡದಲ್ಲಿ ಇಂದಿಗೂ ಉಳಿದಿದೆಯಂತೆ. ಮುತ್ತಾತನ ಹೆಸರೇ ಇವರಿಗೂ ಇಳಿದು ಬಂದಿತು.

ಇನಾಂದಾರರ ಪ್ರಾಥಮಿಕ ವಿದ್ಯಾಭ್ಯಾಸ (ಸುಮಾರು 1922ರವರೆಗೆ) ಹುದಲಿಯಲ್ಲಿಯೇ ನಡೆಯಿತು. ಆ ಹಳ್ಳಿಯ ಮುಗ್ಧ ವಾತಾವರಣ, ಚೆಲುಪರಿಸರ ಇತ್ಯಾದಿಯ ಪ್ರಭಾವ ಅವರ ಮನಸ್ಸಿನಲ್ಲಿ ಅದನ್ನು ಬಿಟ್ಟು ಬಹುಕಾಲವಾದರೂ ಬೇರೂರಿತ್ತು. ಬೆಳಗಾವಿಯಲ್ಲಿ ಮಾಧ್ಯಮಿಕ ವಿದ್ಯಾಭ್ಯಾಸ, ಅಥಣಿ-ಬಿಜಾಪುರಗಳಲ್ಲಿ ಹೈಸ್ಕೂಲು ಕಲಿಕೆಯನ್ನು ಮುಗಿಸಿದ ಇನಾಂದಾರರು ಮೊದಲಿನಿಂದಲೂ ಪ್ರತಿಭಾವಂತ ವಿದ್ಯಾರ್ಥಿ. 1930ರಲ್ಲಿ ಬಿಜಾಪುರದಿಂದ ಮೆಟ್ರಿಕ್ ಪಾಸಾದ ಮೇಲೆ ಅವರ ಆಸಕ್ತಿ, ಗಮನ ಎರಡೂ ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳತ್ತ ಒಲಿದುದು ಸುದೈವವೆನ್ನಬೇಕು. ಬಿಜಾಪುರದಲ್ಲಿ ಓದುತ್ತಿದ್ದಾಗ ಶಿವಣಗಿ ಎಂಬ ಮಾಸ್ತರರ ಪ್ರಭಾವ ಈ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡಿದ್ದಕ್ಕೆ ಕಾರಣ. ಈ ಮಾಸ್ತರರ ಬಗ್ಗೆ ಇನಾಂದಾರರಲ್ಲಿ ಅಮಿತ ಕೃತಜ್ಞತೆಯಿತ್ತು.

ಮುಂದಿನ ಎರಡೆರಡು ವರ್ಷ ಕ್ರಮವಾಗಿ ಧಾರವಾಡದ ಕರ್ನಾಟಕ ಕಾಲೇಜು ಮತ್ತು ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜುಗಳಲ್ಲಿ ಓದಿ, 1934ರಲ್ಲಿ ಇಂಗ್ಲಿಷ್-ಸಂಸ್ಕೃತಗಳಲ್ಲಿ, ಐಚ್ಛಿಕವಾಗಿ ಇಂಗ್ಲಿಷನ್ನು ಆಯ್ದು ಬಿ.ಎ. ಆನರ್ಸ್ ಪದವಿ ಸಂಪಾದಿಸಿದರು. ಇಂಗ್ಲಿಷಲ್ಲಿ ಚಿನ್ನದ ಪದಕವೂ ದೊರೆಯಿತು. ಇಂಗ್ಲಿಷ್ ಆಯ್ದುದರ ಹಿನ್ನೆಲೆಯಲ್ಲಿ ಆದ್ಯರಂಗಾಚಾರ್ಯರ ಸ್ಪಷ್ಟ ಪ್ರಭಾವವಿತ್ತು. ಆ ಹೊತ್ತಿಗಾಗಲೇ ನಾಟಕಗಳನ್ನು ಬರೆದು, ಸ್ವಯಂ ಆಡಿಸುತ್ತಿದ್ದು, ರಂಗಭೂಮಿಯ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಆದ್ಯರ ಪರಿಚಯ ಇನಾಂದಾರರಿಗಾಗಿತ್ತು. ಇವರು ಕರ್ನಾಟಕ ಕಾಲೇಜು ಪ್ರವೇಶಿಸಿದ

ದಿನವೇ ಅಲ್ಲಿ ಸಂಸ್ಕೃತ ಅಧ್ಯಾಪಕರಾಗಿ ನಿಯುಕ್ತರಾಗಿದ್ದ ಆದ್ಯರು ಇವರ ತರಗತಿಯನ್ನು ತೆಗೆದುಕೊಂಡಿದ್ದರು. ಹೀಗಾಗಿ ಹೆಚ್ಚಿನ ಸಂಪರ್ಕವೂ ಬೆಳೆದಿತ್ತು. ಸಂಸ್ಕೃತವನ್ನು ಓದಿ ನೌಕರಿ ದೊರಕಿಸಿಕೊಳ್ಳಲು ಬಹುವಾಗಿ ಕಷ್ಟಪಟ್ಟಿದ್ದ ಆದ್ಯರು ಆಗ ಸಂಸ್ಕೃತದ ಅತೀವ ಅಭಿಮಾನಿಯಾಗಿದ್ದ ಇನಾಂದಾರರಿಗೆ "ಸ್ವಂತವಾಗಿ ಈಗಾಗಲೇ ನಿಮಗೆ ಸಂಸ್ಕೃತದಲ್ಲಿ ಸಾಕಷ್ಟು ತಿಳಿವಳಿಕೆ, ಪರಿಶ್ರಮ ಇದೆ. ಅಷ್ಟು ಸಾಕು ; ಸ್ವತಂತ್ರವಾಗಿ ನೀವೇ ಅದನ್ನು ಅಭ್ಯಾಸ ಮಾಡಿಕೊಳ್ಳಿ ; ಕೇವಲ ಸಂಸ್ಕೃತವನ್ನೇ ಆಯ್ದು ಓದಿದರೆ ಮುಂದಿನ ಕಾಲದಲ್ಲಿ ನೌಕರಿ ದೊರಕಿಸಿಕೊಳ್ಳುವುದು ಕಷ್ಟವಾಗುತ್ತದೆ ; ಆದ್ದರಿಂದ ಇಂಗ್ಲಿಷ್ ಆಯ್ದುಕೊಳ್ಳಿ" ಎಂದು ಹಿತವಾದ ಹೇಳಿದರು. ಆ ಮಾತು ಇನಾಂದಾರರಿಗೆ ಒಪ್ಪಿಕೆಯಾಗಿ ಇಂಗ್ಲಿಷನ್ನೇ ಐಚ್ಛಿಕವಾಗಿ ಆಯ್ದುಕೊಳ್ಳುವಂತೆ ಮಾಡಿತು. ಜೊತೆಗೆ ಆಗ ಬೆಳೆದ ಆದ್ಯರ ಪರಿಚಯ ಸ್ನೇಹ ಗೌರವಗಳಾಗಿ ಮಾರ್ಪಟ್ಟು ಆದ್ಯರ ಕೊನೆಗಾಲದವರೆಗೂ ಮುಂದುವರಿಯಿತು. ಅವರ ಕೆಲವು ನಾಟಕಗಳಲ್ಲಿ ಇನಾಂದಾರರು ಅಭಿನಯಿಸಿದ್ದೂ ಉಂಟಂತೆ. ಆದ್ಯರ ಸಾಹಚರ್ಯ, ಪ್ರಭಾವಗಳಿಂದಲೇ 'ಬಿಡುಗಡೆ' ಎಂಬ ಏಕೈಕ ನಾಟಕವನ್ನು ಇನಾಂದಾರರು ಮುಂದಿನ ಕಾಲಗಳಲ್ಲಿ (1955) ಬರೆದದ್ದು (ಆ ವರ್ಷದ ಅತ್ಯುತ್ತಮ ನಾಟಕವೆಂದು ಹೆಸರಾಗಿ ಮುಂಬಯಿ ಸರ್ಕಾರದಿಂದ ಅದಕ್ಕೆ ಬಹುಮಾನವೂ ದೊರೆಯಿತು). ಆದ್ಯರೇ ಆ ನಾಟಕವನ್ನು ಆಕಾಶವಾಣಿಯಲ್ಲಿ ವಿಮರ್ಶಿಸಿದರು (1958).

ಅಲ್ಪಕಾಲ ನಿರುದ್ಯೋಗದ ಸಮಸ್ಯೆ ಅವರನ್ನು ಕಾಡಿತಾದರೂ ಬಿಜಾಪುರದ ಸಿವಿಲ್ ಕೋರ್ಟಿನಲ್ಲಿ 1935 ರಿಂದ ಆರುವರ್ಷ ಕಾಲ ಆಕ್ಸ್‌ಫರ್ಡ್ ಎಂ.ಎ. ಪಡೆದಿದ್ದ ಎ.ಜಿ. ವೇಲ್ಸ್ ಎಂಬ ಆಂಗ್ಲ ನ್ಯಾಯಾಧೀಶನ ಕೈಕೆಳಗೆ interpreter (ದುಭಾಷಿ) ಆಗಿ ಕೆಲಸ ಮಾಡಿದರು. ಆ ಕೆಲಸಕ್ಕೆ ಆಯ್ಕೆಯಾಗಲು ಸಂದರ್ಶನಕ್ಕೆ ಬಂದಿದ್ದ 45 ಮಂದಿ ಅಭ್ಯರ್ಥಿಗಳಲ್ಲಿ ಆ ಆಂಗ್ಲ ಅಧಿಕಾರಿಯ ಮಾತಿನ ಉಚ್ಚಾರಣೆಯನ್ನು ಗ್ರಹಿಸಿ ಆ ವಾಕ್ಯವನ್ನು ಅರ್ಥಮಾಡಿಕೊಂಡು ಅದಕ್ಕೆ ಸಮರ್ಪಕವಾಗಿ ಉತ್ತರಿಸಿದವರು ಇನಾಂದಾರರೊಬ್ಬರೇ ಎಂಬ ಕಾರಣಕ್ಕಾಗಿ ಆ ಹುದ್ದೆ ಇವರಿಗೇ ದೊರೆಯಿತು. ತಿಂಗಳಿಗೆ ಐವತ್ತು ರೂಪಾಯಿ ಸಂಬಳ. ಆದರೆ ನ್ಯಾಯಾಲಯದಲ್ಲಿನ ವೈವಿಧ್ಯವಿಲ್ಲದ ನಿತ್ಯ ಯಾಂತ್ರಿಕತೆ, ನೀರಸತೆ, ನಿರ್ಣಯಕ್ಕಾಗಿ ಬರುತ್ತಿದ್ದ ವ್ಯವಹಾರಗಳಲ್ಲಿನ ಅನ್ಯಾಯ, ದೌರ್ಜನ್ಯ, ಅಮಾನವೀಯತೆ ಇತ್ಯಾದಿ ಸಾಹಿತ್ಯಾಸಕ್ತರಾಗಿದ್ದ ಅವರಲ್ಲಿ ಬೇಸರ, ನಿರುತ್ಸಾಹ, ಜುಗುಪ್ಸೆ ಕೂಡ ಹುಟ್ಟಿಸಿ, 1940ರಲ್ಲಿ ಕೆಲಸವನ್ನು ತ್ಯಜಿಸುವಂತೆ ಮಾಡಿತು. ಆದರೆ ಆ ಆರೂವರೆ ವರ್ಷ ಅವಧಿ ಅವರ ಪ್ರೀತಿ ಪಕ್ಷಪಾತಗಳಿಗೆ ಕಾರಣವಾಗಿದ್ದ ಸಂಸ್ಕೃತ-ಕನ್ನಡ-ಇಂಗ್ಲಿಷ್ ಸಾಹಿತ್ಯವನ್ನು ಸಾಕಷ್ಟು ವ್ಯಾಪಕವಾಗಿ ಅಭ್ಯಾಸ ಮಾಡಲೂ ತತ್ಕಾಲೀನ ವೃತ್ತಿಗೆ ಅವಶ್ಯವಾಗಿದ್ದ ಕಾನೂನುಗಳನ್ನು ಕುರಿತ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಲೂ ಅವರಿಗೆ ನೆರವಾಯಿತು ಎಂಬುದನ್ನು ನೆನೆಯಬೇಕು. ಈ ಪೂರ್ವಸಿದ್ಧತೆ ಅವರ ಬದುಕು-ಬರಹಗಳಿಗೆ ತೂಕ ತಂದಿತು. ವಿಶೇಷ

ವಾಗಿ ಮುಂದೆ ಅವರು ಬರೆದ 'ಮೋಹಿನಿ' ಕಾದಂಬರಿ ಮಾಲಿಕೆಯಲ್ಲಿ ವಿಸ್ತಾರವಾಗಿ ಬರುವ ನ್ಯಾಯಾಲಯ ವ್ಯವಹಾರದಲ್ಲಿನ ಆರೋಪ, ಪ್ರತ್ಯಾರೋಪ, ಸವಾಲು, ಪಾಟೀಸವಾಲು, ಉಲ್ಲೇಖಿಸುವ ಕಾನೂನಿನ ವಿವರ, ನ್ಯಾಯಾಧೀಶರು ತೀರ್ಪು ನೀಡುವಾಗ ನಡೆಸುವ ಕೂಲಂಕಷ ಪರ್ಯಾಲೋಚನೆ ಇತ್ಯಾದಿ ವಿವರಗಳನ್ನು ಅತ್ಯಂತ ನೈಜವಾಗಿ, ಖಚಿತವಾಗಿ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಲು ಇನಾಂದಾರರಿಗೆ ಸಾಧ್ಯವಾದದ್ದು ಬಹುಶಃ ನ್ಯಾಯಾಲಯದಲ್ಲಿ ಕೆಲಸ ಮಾಡಿದ ಈ ಅವಧಿಯಲ್ಲಿನ ಪ್ರತ್ಯಕ್ಷ ಅನುಭವದಿಂದ ಮಾತ್ರ. ಅವರು ಬಿಜಾಪುರದಲ್ಲಿ ಇದ್ದಾಗಲೇ (1937) ಒಮ್ಮೆ ಅಲ್ಲಿಗೆ ಆಗಮಿಸಿದ್ದ ವಿಸೀ ಮತ್ತು ಮಾಸ್ತಿಯವರ ಪರಿಚಯ ವಾದದ್ದು ಅವರ ಕೊನೆಗಾಲದವರೆಗೂ ಉಳಿದ ಸೌಭಾಗ್ಯವಾಯಿತು. ವಿಶೇಷವಾಗಿ ವಿಸೀ ಅವರಂತೂ ಇನಾಂದಾರರಿಗೆ ಉದ್ದಕ್ಕೂ "an encouraging and corrective influence" ಆಗಿದ್ದರು.

ನ್ಯಾಯಾಲಯದ ಕೆಲಸ ಬಿಟ್ಟ ಮೇಲೆ ಮುಂಬಯಿ ಸೇರಿ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ವಿದ್ಯಾಭ್ಯಾಸ ಮುಂದುವರೆಸಿ, 1941ರಲ್ಲಿ ಎಂ.ಎ. ಪದವಿ ಪಡೆದರು.

★★★

ಎಂ.ಎ. ಪದವಿ ಪಡೆವ ಮೊದಲಿಗೇ – ಕಾಲೇಜಿನಲ್ಲಿ ಓದುತ್ತಿದ್ದಾಗಲೇ – ಅವರ ಸಾಹಿತ್ಯಕ ಬರವಣಿಗೆ ತೊಡಗಿತ್ತು. "The Moral Problem in Shakuntala" ಎಂಬಂಥ ಗಂಭೀರ ಸಮಸ್ಯೆಯನ್ನು ಕುರಿತ ಅವರ ಪ್ರಬಂಧ ಕಾಲೇಜ್ ಮ್ಯಾಗಜಿನ್ನಲ್ಲಿ ಪ್ರಕಟವಾಗಿತ್ತಾದರೂ 1936ರಲ್ಲಿ ಬರೆದ "Heroines in Sanskrit Drama" ಎಂಬ ಪುಸ್ತಕ ಗಾತ್ರದ ಪ್ರೌಢ ಪ್ರಬಂಧವನ್ನು ಅವರ ಚೊಚ್ಚಲು ಬರಹವೆನ್ನಬಹುದು. ಆ ಪ್ರಬಂಧ ಬೊಂಬಾಯಿ ವಿಶ್ವವಿದ್ಯಾನಿಲಯದ ಮಾಂಡಲಿಕ ಚಿನ್ನದ ಪದಕವನ್ನು ಗಳಿಸಿದ್ದು ಪ್ರಬಂಧದ ವಿಷಯ ಸಂಪತ್ತಿಗೆ, ಅವರ ವಿದ್ವತ್ತಿಗೆ ಎರಡಕ್ಕೂ ಸಾಕ್ಷಿ. "The Moral Problem in Shakuntala" ಲೇಖನ ಮುಂದೆ 'ತ್ರಿವೇಣಿ'ಯಲ್ಲಿ ಪ್ರಕಟವಾದಾಗ ಅದರ ಸಂಪಾದಕ ರಾಗಿದ್ದ ರಾಮಕೋಟೀಶ್ವರರಾಯರು ಅದನ್ನು ಬಹುವಾಗಿ ಮೆಚ್ಚಿ "ನನ್ನ ಮೆಚ್ಚುಗೆಯ ಕುರುಹಾಗಿ ನಿಮಗೆ ಏನು ಕೊಡಲಿ ?" ಎಂದವರೇ ತಾವು ಹೊದೆದಿದ್ದ ಉತ್ತಮ ರೇಸಿಮೆಯ ಶಲ್ಯವನ್ನು ಅವರಿಗೆ ಹೊದೆಸಿ ಕೈಕುಲುಕಿದರಂತೆ. ತಾವು ಕುಳಿತು ಬರೆಯುತ್ತಿದ್ದ ಕುರ್ಚಿಯ ಹೆಗಲ ಮೇಲೆ ಸರ್ವದಾ ಆ ಶಲ್ಯವನ್ನು ಕಣ್ಣಿಗೆ ಕಾಣುವಂತೆ ಇನಾಂದಾರರು ಹಾಕಿಕೊಂಡಿರುತ್ತಿದ್ದುದು ಉಲ್ಲೇಖಾರ್ಹ : ಆಶೀರ್ವಾದ ರೂಪದಲ್ಲಿ ಅದು ತಮ್ಮನ್ನು ಯಾವಾಗಲೂ ಕಾಪಾಡುತ್ತಿದೆ ಎಂಬುದು ಅವರ ಭಾವನೆಯಾಗಿತ್ತು.

ಮೊದಮೊದಲು ಇಂಗ್ಲೀಷಲ್ಲಿ ಬರೆಯತೊಡಗಿದರಾದರೂ ಕನ್ನಡದಲ್ಲಿ ಅವರಿಗೆ ಆಸಕ್ತಿ ಹುಟ್ಟಿದ್ದು ಕಳೆದ ಶತಮಾನದ 2-3ನೆಯ ದಶಕದ ಎಲ್ಲ ಪ್ರಮುಖ ಸಾಹಿತಿಗಳಿಗೂ

ಸ್ಫೂರ್ತಿ-ಉತ್ತೇಜನ ನೀಡಿದ ಪ್ರಬುದ್ಧ ಕರ್ನಾಟಕದಿಂದ. ('I am proud to say I am a P.K. man. It shaped me' ಎಂದೂ ಅವರು ಒಮ್ಮೆ ಹೇಳಿದ್ದುಂಟು). ಬೊಂಬಾಯಲ್ಲಿ ಓದುತ್ತಿದ್ದಾಗ ಪ್ರ.ಕ.ಕ್ಕೆ ಚಂದಾದಾರರನ್ನು ಕಲೆಹಾಕಲು ಅಲ್ಲಿಗೆ ಬಂದಿದ್ದ ಯುವಕರೊಬ್ಬರು ಅದರ ಪ್ರತಿಯೊಂದನ್ನು ಇವರಿಗೆ ಕೊಟ್ಟರಂತೆ. ಅಂದು ಮೊದಲಾಗಿ ತಮ್ಮ ಕೊನೆಯ ವರೆಗೂ ಇನಾಂದಾರರು ಪ್ರ.ಕ.ದ ಚಂದಾದಾರರಲ್ಲೊಬ್ಬರಾಗಿದ್ದರು ; ಅದರೊಡನೆ ತಾವೂ ಬೆಳೆದರು. ಅಲ್ಲಿ ಅಚ್ಚಾಗುತ್ತಿದ್ದ ಬರವಣಿಗೆಯ ಗುಣಮಟ್ಟ ವೈವಿಧ್ಯ ಎಲ್ಲವೂ ಅವರ ಮೇಲೆ ಪ್ರಭಾವ ಬೀರಿ, ಕನ್ನಡ ಬರವಣಿಗೆಯಲ್ಲಿ ಪ್ರೀತಿಯುಂಟಾಗಿ, ತಾವೂ ಕನ್ನಡದಲ್ಲಿ ಬರೆಯ ಬೇಕೆನ್ನಿಸಿತು. ಆ ಸುಮಾರಲ್ಲಿಯೇ ದೊರೆತಿದ್ದ ಶ್ರೀರಂಗ, ವಿಸೀ, ಮಾಸ್ತಿ ಮುಂತಾದ ಹಿರಿಯರ ಸ್ನೇಹ, ಸಾಹಿತ್ಯ ಸಾಧನೆ ಕನ್ನಡ ಬರವಣಿಗೆಗೆ ಅವರ ಮನಸ್ಸನ್ನು ಕಟ್ಟನಿಲ್ಲಿಸಿ ಸಾಹಿತ್ಯರಂಗಕ್ಕೆ ತಮ್ಮನ್ನು ಮುಡಿಪಿಟ್ಟುಕೊಳ್ಳಲು ಪ್ರೇರೇಪಿಸಿತು.

ಖ್ಯಾತ ಮರಾಠಿ ಸಾಹಿತಿ ವಿ.ಎಸ್. ಖಾಂಡೇಕರ್ ಅವರ ಸಣ್ಣಕತೆಗಳನ್ನು ಅನುವಾದಿಸಿ 'ದೃಷ್ಟಿಲಾಭ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವುದರ ಮೂಲಕ (1936-37) ಕನ್ನಡದಲ್ಲಿ ಅವರ ಸಾಹಿತ್ಯ ಪ್ರಕಟಣೆ ತೊಡಗಿತು. (ಹಾಗೇ ಮಾಸ್ತಿಯವರ 'ಹೇಮಕೂಟದಿಂದ' ಮತ್ತು ಕ್ಷೀರಸಾಗರರ 'ನಮ್ಮೂರಿನ ಪಶ್ಚಿಮಕ್ಕೆ' ಇತ್ಯಾದಿಯನ್ನು ಆಗಿಗೇ ಇಂಗ್ಲಿಷಿಗೆ ಭಾಷಾಂತರಿಸಿ ಪ್ರಕಟಿಸಿದ ಯಶಸ್ಸೂ ಅವರದು.) ಮರುವರ್ಷ ಖಾಂಡೇಕರರದೇ ಕಾದಂಬರಿ 'ಎರಡು ಧ್ರುವ'ವನ್ನು ಅನುವಾದಿಸಿ ಪ್ರಕಟಿಸಿದರು. ತರುವಾಯದ ಹತ್ತು ವರ್ಷ ಏನನ್ನೂ ಬರೆಯುವುದು ಬೇಡ ಎಂದಿದ್ದ ಸಹಪಾಠಿ ಮತ್ತು ಗೆಳೆಯ ಶ್ರೀ ಪಿ.ವಿ. ಜೋಶಿ ಅವರ ಸಲಹೆಗೆ ಮಾನ್ಯತೆ ಕೊಟ್ಟು ಹೆಚ್ಚಿನ ಅಧ್ಯಯನಕ್ಕೇ ತಮ್ಮನ್ನು ತಾವು ಮುಡಿಪಿಟ್ಟುಕೊಂಡರು. ಈ ಅವಧಿಯಲ್ಲಿ ಅವರು ಬರೆದುದು ಅತ್ಯಲ್ಪ. ವೃತ್ತಿಜೀವನವನ್ನು ಉತ್ತಮಪಡಿಸಿಕೊಳ್ಳುವ ದರಲ್ಲಿಯೂ ಸಾಹಿತ್ಯ ಸಂಗೀತ ಸಿನೆಮಾ ನಾಟಕಗಳ ಆಸ್ವಾದನೆ ವಿಮರ್ಶೆ ಚರ್ಚೆಗಳಲ್ಲಿಯೂ ತೊಡಗಿದ್ದು ಮುಂದಿನ ಕಲಾಸೃಜನೆಗೆ ಅನುಭವದ ತಳಹದಿಯನ್ನು ನಿರ್ಮಿಸಿಕೊಳ್ಳುತ್ತಿದ್ದ ರೆಂದು ತೋರುತ್ತದೆ. 'ಜಯಂತಿ'ಯಲ್ಲಿ 'ವಿಹಾರಿ' ಎಂಬ ಹೆಸರಲ್ಲಿ 'ಸಾಹಿತ್ಯ ವಿಹಾರ'ಕ್ಕೆ ಅಂಕಣಗಳನ್ನು, ತ್ರಿವೇಣಿ, ಜಯಂತಿ ಮತ್ತು 'ಪೆನ್' ಸಂಸ್ಥೆ ಪ್ರಕಟಿಸುತ್ತಿದ್ದ 'ಆರ್ಯನ್ ಪಾಥ್' ಮತ್ತು 'Indian PEN' ಪತ್ರಿಕೆಗಳಿಗೆ ಪುಸ್ತಕಾವಲೋಕನಗಳನ್ನು ಬರೆದರು. ಕೊನೆಯ ಎರಡು ಪತ್ರಿಕೆಗಳ ಸಂಪಾದಕರಾಗಿದ್ದ ಮೇಡಂ ಸೋಫಿಯಾ ವಾಡಿಯಾ ಅವರಿಗೆ ಸಹಾಯಕ ರಾಗಿ (Editorial Assistant) ಕೆಲಸ ಮಾಡಿ, ಪತ್ರಿಕೋದ್ಯಮ ರಂಗದಲ್ಲಿಯೂ ಸಾಕಷ್ಟು ಅನುಭವ ಪಡೆದರು.

1943ರಲ್ಲಿ ಮುಂಬಯಿನ ಸಿಡ್ನೆಹ್ಯಾಂ ಕಾಲೇಜಲ್ಲಿ ಮೊದಲಿಗೆ ಕೆಲವು ಗಂಟೆಗಳ ಅವಧಿಗೆ, ಅನಂತರ ಪೂರ್ಣಾವಧಿಗೆ ಇಂಗ್ಲಿಷ್ ಉಪನ್ಯಾಸಕರಾಗಿ ನಿಯುಕ್ತರಾದ ಮೇಲೇ ಅವರಿಗೆ ಉದ್ಯೋಗಸ್ಥಿರತೆ ಲಭಿಸಿದ್ದು. ಮೊದಲಿಂದ ಅವರಿಗೆ ಅಧ್ಯಾಪಕರಾಗುವ ಹಂಬಲ

ವಿದ್ದು ಮನಸ್ಸಿಗೆ ಒಪ್ಪುವ ಉದ್ಯೋಗಕ್ಕೇ ಅವರು ಆ ಮೂಲಕ ಕಾಲಿಡುವಂತಾಯಿತು. ಅನಂತರ ಧಾರವಾಡದ ಕರ್ನಾಟಕ ಕಾಲೇಜಿಗೆ ವರ್ಗಾವಣೆ. ಅದೂ ಬಾಂಬೆ ಪ್ರೆಸಿಡೆನ್ಸಿಯ ಅಧೀನದಲ್ಲಿತ್ತು. ಈ ಉದ್ಯೋಗಸ್ಥಿರತೆ ಅವರನ್ನು ಮುಂದಿನ ಸಾಹಿತ್ಯಕೃಷಿಗೆ ಪ್ರೇರೇಪಿಸಿತು. 1944ರಲ್ಲಿ ಸುಮಾರು ನೂರೈವತ್ತು ಪುಟಗಳ ಪುಸ್ತಕರೂಪದ 'Vidusaka in Sanskrit Drama' ಎಂಬ ಪ್ರಬಂಧವನ್ನು ಇಂಗ್ಲಿಷಲ್ಲಿ ಬರೆದರು (ಅದಕ್ಕೆ 1945ರಲ್ಲಿ ಭಾರತೀಯ ವಿದ್ಯಾಭವನದ ಚಿನ್ನದ ಪದಕ ದೊರೆಯಿತು). ಆ ಸುಮಾರಲ್ಲಿಯೇ ಶೇ.ಗೋ. ಕುಲಕರ್ಣಿ ಅವರ ಕಾದಂಬರಿ ಒಂದನ್ನು ಕುರಿತು ಅವರು ಬರೆದಿದ್ದ ಅವಲೋಕನದ ಬಗ್ಗೆ ಮಿತ್ರರಾದ ಜಿ.ಬಿ. ಜೋಶಿ ಅವರು ''ಟೀಕಿಸುವುದು ಬಹುಸುಲಭ, ಕಾದಂಬರಿ ಬರೆವವನ ಕಷ್ಟ ನಿಮಗೇನು ಗೊತ್ತು ? ಬರೆದರೆ ತಾನೆ ಗೊತ್ತಾಗುವುದು?'' ಎಂಬ ಸುಮಾರಿನ ಸ್ನೇಹದ ಮೂದಲೆ ಸಹಜವಾಗಿ ಇನಾಂದಾರರನ್ನು ಕೆಣಕಿತು. ಹತ್ತೇ ದಿನಗಳ ಅತ್ಯಲ್ಪ ಅವಧಿಯಲ್ಲಿ ಆ ಮೂದಲೆ ಅವರಿಂದ ಮೊದಲ ಸ್ವತಂತ್ರ ಕಾದಂಬರಿ 'ಮೂರಾಬಟ್ಟೆ'ಯನ್ನು ಬರೆಸಿತು. ದೇಶದ ಸ್ವಾತಂತ್ರ್ಯ ಹೋರಾಟದ ದಿನಗಳನ್ನು ಚಿತ್ರಿಸಿರುವ ಕನ್ನಡದ ಕೆಲವೇ ಕಾದಂಬರಿಗಳಲ್ಲಿ ಇಂದಿಗೂ ಅದಕ್ಕೆ ವಿಶಿಷ್ಟ ಸ್ಥಾನವಿದೆ. ಹೀಗೆ ತಾವಾಗಿ ಅಡಗಿದ್ದ ಚಿಪ್ಪಿನಿಂದ ಹೊರಬಿದ್ದ ಇನಾಂದಾರರಿಂದ ಅನಂತರ ಒಂದಾದ ಮೇಲೊಂದು ಸೃಜನಶೀಲ ಕಾದಂಬರಿಗಳು ರಚನೆಗೊಂಡವು. 1947ರಲ್ಲಿ 'ಕನಸಿನ ಮನೆ', 48ರಲ್ಲಿ 'ವಿಜಯಯಾತ್ರೆ', 49ರಲ್ಲಿ 'ಶಾಪ' ('ಮುಕ್ತಿ' ಎಂಬ ಹೆಸರಲ್ಲಿ ಇದು ಖ್ಯಾತ ನಿರ್ದೇಶಕ ಶ್ರೀ ಲಕ್ಷ್ಮೀನಾರಾಯಣರಿಂದ ಚಲನಚಿತ್ರವಾಗಿ ರಜತಪರದೆಯ ಮೇಲೂ ಕಾಣಿಸಿಕೊಂಡಿತು), 50ರಲ್ಲಿ 'ಸ್ವರ್ಗದ ಬಾಗಿಲು', 53ರಲ್ಲಿ 'ಕಟ್ಟಿದ ಮನೆ', 'ಮುಗಿಯದ ಕತೆ' ಹಾಗೂ ಅವರಿಗೆ ವಿಶೇಷ ಖ್ಯಾತಿ, ಜನಪ್ರಿಯತೆ ತಂದಿತ್ತ 'ಈ ಪರಿಯ ಸೊಬಗು' ಪ್ರಕಟವಾದವು. ಸಂಸ್ಕೃತ ಸಾಹಿತ್ಯದ ಆಳವಾದ ಅಧ್ಯಯನದ ಪರಿಣಾಮವಾಗಿ 'ಕಾಳಿದಾಸನ ಕಥಾನಕಗಳು' (1956) ಮತ್ತು 'ಉತ್ತರರಾಮಚರಿತೆ : ಒಂದು ಮುನ್ನುಡಿ' (ಇಂಗ್ಲಿಷಿನಲ್ಲಿ) (1957) ರಚಿತವಾಗಿ ಪ್ರಕಟ ವಾದವು. 'ಉತ್ತರರಾಮಚರಿತೆ' ಅವರನ್ನು ಉತ್ತಮ ಸಾಹಿತ್ಯ ವಿಮರ್ಶಕರಲ್ಲೊಬ್ಬರನ್ನಾಗಿಸಿ, ವಿದ್ವದ್ ವಲಯಗಳಲ್ಲಿ ಮನ್ನಣೆ ತಂದಿತ್ತಿತು. ಡಾ. ಕುನ್ಹನ್ ರಾಜಾ ಆ ಪುಸ್ತಕಕ್ಕೆ ಮೆಚ್ಚುಗೆಯ ಸುದೀರ್ಘ ಅವಲೋಕನವನ್ನು ಬರೆದರು. ಖ್ಯಾತ ಸಂಸ್ಕೃತ ವಿದ್ವಾಂಸರೂ ರಾಷ್ಟ್ರೀಯ ಪ್ರಾಧ್ಯಾಪಕರೂ (National Professor) ಆಗಿದ್ದ ಡಾ. ವಿ. ರಾಘವನ್ "I would like that to be an introduction in the National Edition of Uttararama Charita" ಎಂದರು. ಮುಂದೆ 1961ರಲ್ಲಿ ಪ್ರಕಟವಾದ 'ಚಿತ್ರಲೇಖಾ' ಕಾದಂಬರಿ ಅವರನ್ನು ಕನ್ನಡದ ಖ್ಯಾತ ಕಾದಂಬರಿಕಾರರಲ್ಲಿ ಒಬ್ಬರನ್ನಾಗಿಸಿತು. ವಿಶೇಷವಾಗಿ ಕಾದಂಬರಿ ಅವರ ಮೆಚ್ಚಿನ ಸಾಹಿತ್ಯ ಪ್ರಕಾರವಾಯಿತು.

ಅವರ ಮಾತಿನಲ್ಲೇ ಹೇಳುವುದಾದರೆ, ಮೊದಲಿನಿಂದ "Novel infection"

ಹೊಂದಿದ್ದ ಇನಾಂದಾರರಿಗೆ ಆ ಪ್ರಕಾರ ಪ್ರಿಯವಾಗಲು ಅವರು ಓದಿದ ಎಲ್ಲ ಮಹಾನ್ ಲೇಖಕರ ಕಾದಂಬರಿಗಳೇ ಮುಖ್ಯ ಕಾರಣ. ಅವರ "Formative years" ನಲ್ಲಿ ವಿಶೇಷವಾಗಿ ಥಾಮಸ್ ಹಾರ್ಡಿ (ಅದರಲ್ಲಿಯೂ ಹಾರ್ಡಿಯ ''ಟೆಸ್''), ಜಾನ್ ಗಾಲ್ಸ್‌ವರ್ದಿ ('ಫಾರ್ಸಾಯಿಟ್ ಸಾಗಾ''), ಚಾರ್ಲ್ಸ್ ಮಾರ್ಗನ್, ಇ.ಎಂ. ಫಾರ್‌ಸ್ಟರ್, ವರ್ಜಿನಿಯಾ ವುಲ್ಫ್ ಮತ್ತು ಮರಾಠಿ ಲೇಖಕರಾದ ವಿ.ಎಸ್. ಖಾಂಡೇಕರ್ ಇವರಿಂದ ಬಹುವಾಗಿ ಪ್ರಭಾವಿತರಾದರು. ಗಾಲ್ಸ್‌ವರ್ದಿ ಮತ್ತು ಖಾಂಡೇಕರರದಂತೂ ನಿಸ್ಸಂದೇಹ ಪ್ರಭಾವ ; ತರುವಾಯದ ಕಾಲಗಳಲ್ಲಿ ಫಾರ್‌ಸ್ಟರ್ ಮತ್ತು ಮಾರ್ಗನ್. ಕಡೆಕಡೆಯ ವರ್ಷಗಳಲ್ಲಿಯೂ "Even today, I swear by them" ಎನ್ನುತ್ತಿದ್ದವರು ಅವರು.

★★★

ಈ ನಡುವೆ ಉಪಪ್ರಾಧ್ಯಾಪಕರಾಗಿ ಬಡತಿ ಪಡೆದು ಧಾರವಾಡದಿಂದ ಅಹಮದಾಬಾದಿಗೆ ಬಂದು ಎರಡು ವರ್ಷ ಅಲ್ಲಿ ವಾಸ್ತವ್ಯ ಹೂಡಿ, ತರುವಾಯ ಧಾರವಾಡದ ಕರ್ನಾಟಕ ಕಾಲೇಜಿಗೆ ಇನಾಂದಾರರು ಮರಳಿದರು. 1958ರವರೆಗೆ ಅಲ್ಲಿ ಸೇವೆ ಸಲ್ಲಿಸಿ, ಅಲ್ಲಿಂದ ಮಂಗಳೂರಿನ ಸರ್ಕಾರಿ ಕಾಲೇಜಿಗೆ ವರ್ಗವಾದರು. 1960ರಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರಾಗಿ ನಿಯುಕ್ತರಾಗಿ 1967ರವರೆಗೆ ಅಲ್ಲಿದ್ದು 68ರಲ್ಲಿ ಶಿವಮೊಗ್ಗೆಗೆ ತೆರಳಿ ಅಲ್ಲಿ ಸರ್ಕಾರದ ಸೇವೆಯಿಂದ ನಿವೃತ್ತರಾದರು. ಈ ನಿವೃತ್ತಿ ಕೇವಲ ಔಪಚಾರಿಕವಾದದ್ದು. ಅವರ ಅಧ್ಯಯನ, ಅಧ್ಯಾಪನಗಳೆರಡೂ ಅವಿರತವಾಗಿ ಮುಂದುವರಿದು, ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಮತ್ತೆರಡು ವರ್ಷ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅವರಿಗೆ ಪ್ರಿಯನಾಗಿದ್ದ ಕಾದಂಬರಿಕಾರರಲ್ಲಿ ಒಬ್ಬನಾದ ಚಾರ್ಲ್ಸ್ ಮಾರ್ಗನ್ನನ ಆರೂ ಕಾದಂಬರಿಗಳ ಮೇಲೆ ಇಂಗ್ಲಿಷಲ್ಲಿ ಮಹಾಪ್ರಬಂಧ ರಚಿಸಿ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದರು. ಆ ಮುಂಚೆ ಅಂಥ ಪ್ರಬಂಧಗಳನ್ನು ವಿಶ್ವವಿದ್ಯಾನಿಲಯ ಅಚ್ಚುಮಾಡುತ್ತಿತ್ತು. ಆದರೆ ಅದೇ ವರ್ಷ ಅವುಗಳ ಪ್ರಕಟಣೆಯನ್ನು ರದ್ದುಗೊಳಿಸುವ ನಿರ್ಣಯವನ್ನು ಅಂಗೀಕರಿಸಿದ್ದರ ಫಲವಾಗಿ ಅದಿನ್ನೂ ಅಪ್ರಕಟಿತವಾಗಿಯೇ ಉಳಿದಿದೆ.

''ಚಿತ್ರಲೇಖಾ'' ಕಾದಂಬರಿಯ ಪ್ರಕಟನೆಯ ನಂತರದ ನಾಲ್ಕೈದು ವರ್ಷ ಇನಾಂದಾರರು ಏನನ್ನೂ ಬರೆಯದಿದ್ದುದು ಸೋಜಿಗದ ಸಂಗತಿ. ಅಧ್ಯಾಪನದ ಜೊತೆಗೆ ಪ್ರಾಂಶುಪಾಲ ಹುದ್ದೆಯ ಕೆಲಸದ ಹೆಚ್ಚಳ ಮತ್ತು ಹೊಣೆಗಾರಿಕೆಯೂ ಇದಕ್ಕೆ ಕಾರಣವಿದ್ದಿರಬಹುದು. 1966ರಲ್ಲಿ ಪುನಃ ಅವರ ಸೃಜನಶೀಲ ಕಾದಂಬರಿ ರಚನೆ ಆ ವರ್ಷ ಪ್ರಕಟವಾದ 'ಮಂಜು ಮುಸುಕಿದ ದಾರಿ''ಯಿಂದ ಚೈತನ್ಯ ಪಡೆಯಿತು. ಶಿವಮೊಗ್ಗೆಯಲ್ಲಿ

ಸೇವಾನಿವೃತ್ತಿಪೂರ್ವರಜೆಯಲ್ಲಿ ಇದ್ದಾಗ ''ಊರ್ವಶಿ''ಯ ರಚನೆಯಾಯಿತು (1968). ಮೂರು ವರ್ಷಾನಂತರ ''ನವಿಲು ನೌಕೆ'' (1971) ಪ್ರಕಟವಾಯಿತು. ಆ ವರ್ಷವೇ ಮೊದಲ ಬಾರಿಗೆ ಕೆನಡಾ, ಅಮೆರಿಕಾ, ಇಂಗ್ಲೆಂಡ್‌ಗಳಿಗೆ ಇನಾಂದಾರರು ಸಂಚಾರ ಕೈಗೊಂಡರು. ಅಲ್ಲಿಂದ ಹಿಂದಿರುಗಿದ ಆರು ತಿಂಗಳ ಅವಧಿಯಲ್ಲಿ ಸ್ವೀಡಿಷ್ ರಚನೆಯೊಂದರಿಂದ ಪ್ರೇರಣೆ ಪಡೆದು "The Wandering Jew" ಕಲ್ಪನೆಯ ಆಧಾರದ ಮೇಲೆ ''ಯಾತ್ರಿಕರು'' ಎಂಬ ಕಾದಂಬರಿಯ ಹಸ್ತಪ್ರತಿಯನ್ನು ಸಿದ್ಧಪಡಿಸಿದರು. ಆದರೆ ಅದು ಅಚ್ಚಾಗಲು ಐದಾರು ವರ್ಷಗಳೇ ಕಾದವು. ಈ ನಡುವೆ 1972ರಲ್ಲಿ ಮತ್ತೆರಡು ಕಾದಂಬರಿ ''ಕತ್ತಲೆಯ ಕಡಲು'' ಮತ್ತು ''ಬಾಡಿದ ಹೂ'' ಪ್ರಕಟವಾದವು. ಸ್ವಿಫ್ಟ್‌ನ ''ಗಲಿವರನ ಪ್ರವಾಸಗಳು'' ಮಾದರಿಯಲ್ಲಿ ಬರೆದ ''ಮಂಗಲ್ಯಾಂಡಿನಲ್ಲಿ ಮೂರು ವಾರಗಳು'' ಎಂಬ ವಿಡಂಬನಾತ್ಮಕ ಕೃತಿಯೂ ಪ್ರಕಟವಾಯಿತು.

ಇನಾಂದಾರರ ವಿಮರ್ಶನ ಪ್ರತಿಭೆ ಅವರ ಸೃಜನಶೀಲತೆಯನ್ನು ಮೆಟ್ಟಿ ನಿಂತುದರ ಪರಿಣಾಮವೆಂಬಂತೆ 1972 ರಿಂದಾಚೆಗೆ ಅವರ ಕಾದಂಬರಿ ರಚನೆ ಕಡಿಮೆಯಾಯಿತೇನೊ. 1973ರಲ್ಲಿ ಶಿವರಾಮ ಕಾರಂತರ ಸಮಗ್ರ ಸಾಹಿತ್ಯ ರಚನೆಯನ್ನು ಕುರಿತ ವಿಮರ್ಶನ ಕೃತಿ ಮೊದಲು ಇಂಗ್ಲಿಷಿನಲ್ಲಿ ರಚಿತವಾಗಿ ಪ್ರಕಟಗೊಂಡು, ಸ್ವಯಂ ಕಾರಂತರ ಮೆಚ್ಚುಗೆಗೇ ಪಾತ್ರವಾಯಿತು. ಅಷ್ಟು ಸಾಕಲ್ಯ ದೃಷ್ಟಿಯ ಕಾರಂತಕೃತಿ ವಿಮರ್ಶೆ ಆ ಮುಂಚೆ ಬಂದಿರಲಿಲ್ಲ ವೆನ್ನಬೇಕು. ಐದು ವರ್ಷಗಳ ಅನಂತರ ಪ್ರಕಟವಾದ ಅದರದೇ ಕನ್ನಡಾನುವಾದ ಸ್ವತಂತ್ರ ವಾಗಿ ಕನ್ನಡದಲ್ಲಿಯೇ ರಚಿತವಾದದ್ದೆಂಬಷ್ಟರ ಮಟ್ಟಿನ ಸಿದ್ಧಿಯನ್ನು ಪಡೆದಿದೆ (1978). ಅದೇ ವರ್ಷ ''ಆಚಾರ್ಯ ಕೃತಿ'' ಎನಿಸಿಕೊಂಡಿರುವ ''ಪಾಶ್ಚಾತ್ಯ ಕಾವ್ಯ ಮೀಮಾಂಸೆ''ಯ ಮೊದಲ ಭಾಗವಾದ 'ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ' ಪ್ರಕಟವಾಯಿತು. 1974-75ರಲ್ಲಿ ಎರಡನೆಯ ಬಾರಿಗೆ ಅವರು ವಿದೇಶ ಸಂಚಾರ ಕೈಕೊಂಡರು. ಹಿಂದಿರುಗಿದ ಮೇಲೆ ವಿಮರ್ಶೆಯ 'ಮಧ್ಯಯುಗ' (1976), 'ಸಂಪ್ರದಾಯ ಯುಗ' (1978) ಅಚ್ಚಾದವು. ಅದೇ ವರ್ಷ ಅವರ ಆನ್ವಯಿಕ ಸಾಹಿತ್ಯವಿಮರ್ಶೆಯ ಸೀಮಾಕೃತಿ ಎನ್ನಿಸಿಕೊಂಡಿರುವ 'ಕುವೆಂಪು ಕಾದಂಬರಿಗಳು', ಹಿಂಬಾಲಿಸಿ 'ಶ್ರೀರಾಮ ಪಟ್ಟಾಭಿಷೇಕ : ಒಂದು ಸಮಾಲೋಕನ', 'ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ' (ಎರಡೂ 1980) ಪ್ರಕಟವಾದವು. ಮರುವರ್ಷ ಸಾಹಿತ್ಯಾವಲೋಕನಕ್ಕೆ - ವಿಶೇಷವಾಗಿ ಕಾದಂಬರಿ ಪ್ರಕಾರಕ್ಕೆ ಸಂಬಂಧಿಸಿದ ಬಿಡಿಲೇಖನಗಳ ಸಂಕಲನ 'ಆಲೋಕ', 1982ರಲ್ಲಿ 'ಪಾಶ್ಚಾತ್ಯ ವಿಮರ್ಶೆಯ ರೊಮ್ಯಾಂಟಿಕ್ ಯುಗ' ಮತ್ತು 'ಆಧುನಿಕ ಯುಗ' ಅಚ್ಚಾದವು. ಜೊತೆಗೇ ಆ ಎಲ್ಲವನ್ನೂ ಕ್ರೋಢೀಕರಿಸಿ ಸಂಕಲಿಸಿದ ಸುಮಾರು 625 ಪುಟಗಳ ''ಪಾಶ್ಚಾತ್ಯ ಕಾವ್ಯ ಮೀಮಾಂಸೆ''ಯ ಬೃಹತ್ ಸಂಪುಟವೂ ಪ್ರಕಟವಾಗಿ ಅವರ ವಿದ್ವತ್ತನ್ನು ಸ್ಥಾಪಿಸಿತು. ಡಾ. ಹಾ.ಮಾ. ನಾಯಕರು ಹೇಳಿದಂತೆ ''ಆಧುನಿಕ ಕನ್ನಡದ ಆಕರ ಗ್ರಂಥಗಳಲ್ಲಿ ಇದಕ್ಕೊಂದು ಮಹತ್ವದ ಸ್ಥಾನವಿದೆ.''

24 ಅಧ್ಯಾಯಗಳ ಆ ಸಂಪುಟದಲ್ಲಿ 2500 ವರ್ಷಗಳ ಅವಧಿಯಲ್ಲಿ ಪಾಶ್ಚಾತ್ಯ ಸಾಹಿತ್ಯ ಜಗತ್ತಿನಲ್ಲಿ ಪ್ರಕಟಗೊಂಡ ಸಾಹಿತ್ಯ ತತ್ವಮೀಮಾಂಸಾ ಕೃತಿಗಳ ಸಾರಸಂಗ್ರಹವೇ ಅಡಗಿದೆ. ಪಿ.ವಿ. ಜೋಶಿಯವರು ಹೇಳಿರುವಂತೆ "ಕನ್ನಡದಲ್ಲಿ ಮಾತ್ರವಲ್ಲ, ಇನ್ನಾವ ಭಾರತೀಯ ಭಾಷೆಯಲ್ಲಿಯೂ ಇಂಥ ಸಂಗ್ರಹ ಬಹುಶಃ ಲಭ್ಯವಿಲ್ಲ." ಆದುದರಿಂದಲೇ ಸೃಜನೇತರ ವಿಭಾಗದಲ್ಲಿ ಆ ವರ್ಷ ಪ್ರಕಟವಾದ ಅತ್ಯುತ್ತಮ ಗ್ರಂಥವೆಂದು ಅದು ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರವಾಯಿತು ; ಜೊತೆಗೇ ಕರ್ನಾಟಕ ವಿಶ್ವವಿದ್ಯಾನಿಲಯ ದಿಂದ ಪ್ರೊ. ಮಾಳವಾಡ ಸಾಹಿತ್ಯ ಪ್ರಶಸ್ತಿಯೂ ಲಭಿಸಿತು.

ಈ ನಡುವೆ ಅವರ ಮೆಚ್ಚಿನ ಮರಾಠಿ ಕಾದಂಬರಿಕಾರ ವಿ.ಎಸ್. ಖಾಂಡೇಕರರ ಜ್ಞಾನಪೀಠ ಪ್ರಶಸ್ತಿ ವಿಜೇತ ಕಾದಂಬರಿ 'ಯಯಾತಿ'ಯನ್ನು ಅನುವಾದಿಸಿ ಪ್ರಕಟಿಸಿದರು (1977). ಆ ಬಗೆಯ ಅನುವಾದಕ್ಕೊಂದು ಮಾದರಿ ಆಗಿರುವ ಆ ಕೃತಿ ಆ ವರ್ಷದ ಉತ್ತಮ ಅನುವಾದ ಗ್ರಂಥವೆಂದು ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತಗೊಂಡಿತು. ಮೂರು ವರ್ಷ ತರುವಾಯ, ವಿದೇಶದಲ್ಲಿ ನೆಲೆಸಿದ ಭಾರತೀಯರ ಮನಃಸ್ಥಿತಿಯನ್ನು ಅವರ ಸಾಸ್ಕೃತಿಕ ತೊಳಲಾಟವನ್ನು ಅತ್ಯುತ್ತಮವಾಗಿ ಚಿತ್ರಿಸುವ ಅವರ ಕೊನೆಯ ಕಾದಂಬರಿ "ತ್ರಿಶಂಕು" ಪ್ರಕಟವಾಯಿತು (1980). ಮರುವರ್ಷ ಅವರು ಬರೆದ ಏಕೈಕ ಜೀವನ ಚರಿತ್ರೆ "ಬಿ. ಆರ್. ಅಂಬೇಡ್ಕರ್ : ವ್ಯಕ್ತಿ-ವಿಚಾರ" ಪ್ರಕಟವಾಯಿತು ; ಆ ವರ್ಷದ ಅತ್ಯುತ್ತಮ ಕೃತಿಗಳಲ್ಲಿ ಒಂದು ಎಂದು ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತಗೊಂಡಿತು. ಈ ಹೊತ್ತಿಗೆ ಇನಾಂದಾರರು ಬೆಂಗಳೂರನ್ನು ಬಿಟ್ಟು ಮೈಸೂರಲ್ಲಿ ನೆಲೆಸಿದ್ದರು. ತಮ್ಮ ಸಾಹಿತ್ಯಕ ಚಟುವಟಿಕೆಗಳಿಗೆ ಹೆಚ್ಚಿನ ನೆರವು ದೊರಕೀತೆಂಬ ಉದ್ದೇಶ, ನಿರೀಕ್ಷೆ ಈ ಬದಲಾವಣೆಯ ಹಿಂದಿದ್ದು ತಕ್ಕಮಟ್ಟಿಗೆ ಆ ಉದ್ದೇಶ ನೆರವೇರಿತೆನ್ನಬೇಕು.

ಆದರೆ "ಪಾಶ್ಚಾತ್ಯ ಕಾವ್ಯ ಮೀಮಾಂಸೆ"ಯ ಸಮಗ್ರ ಸಂಪುಟ ಪ್ರಕಟವಾದ ಮೇಲೆ ಅನಾರೋಗ್ಯ ಅವರನ್ನು ಪೀಡಿಸಲಾರಂಭಿಸಿತು. ವಯೋಮಾನಕ್ಕೆ ತಕ್ಕಂತೆ ದೇಹ ದೌರ್ಬಲ್ಯವೂ ಕಾಣಿಸಿಕೊಂಡಿತು. ಆದರೂ ಬೌದ್ಧಿಕ ಚಟುವಟಿಕೆಗಳಿಗೆ ಯಾವುದೇ ರೀತಿಯ ಧಕ್ಕೆಯೊದಗಿರಲಿಲ್ಲವೆಂಬುದು ಸಮಾಧಾನಕರ ಸಂಗತಿ. 1983ರಲ್ಲಿ 'ಶ್ರೀ' ಶತಮಾನೋತ್ಸವ ವರ್ಷದಲ್ಲಿ ತಮ್ಮ ಗೌರವಕಾಣಿಕೆಯೆಂಬಂತೆ "ಬಿ.ಎಂ.ಶ್ರೀ. ಬದುಕು, ಬರಹ" (ಕನ್ನಡ) ಮತ್ತು "ಗೋವಿಂದ ಪೈ - ಜೀವನ, ಸಾಹಿತ್ಯ" (ಇಂಗ್ಲಿಷ್) ಕುರಿತ ಎರಡು ವಿಮರ್ಶಾಕೃತಿಗಳನ್ನು ಪ್ರಕಟಿಸಿದರು. "ಇಂಗ್ಲಿಷ್ ಗೀತೆ"ಗಳನ್ನು ಕುರಿತ ಅತ್ಯುತ್ತಮ 'ವಿವೇಚನೆ 'ಶ್ರೀ'ಯವರನ್ನು ಕುರಿತ ಕೃತಿಯಲ್ಲಿದೆ. ಕವಿತೆಯನ್ನೂ ಎಷ್ಟು ಸಾರವತ್ತಾಗಿ ಹೃದ್ಯವಾಗಿ ಇನಾಂದಾರರು ವಿಮರ್ಶಿಸಬಲ್ಲರೆಂಬುದಕ್ಕೆ ಉತ್ತಮ ದಾಖಲೆ ಅಲ್ಲಿದೆ. ಇನ್ನೂ ಹಲವಾರು ಸಾಹಿತ್ಯಕ ರಚನೆಗಳ ರೂಪರೇಷೆಯನ್ನು ಸಿದ್ಧಪಡಿಸಿ ಪೂರ್ವಸಿದ್ಧತೆಯಲ್ಲಿ ತೊಡಗಿದ್ದರು. ಮುದ್ದಣ, ಅನಕೃ ಅವರ ಬಗೆಗೆ ಪರಿಚಯಾತ್ಮಕ ವಿಮರ್ಶೆ, ವಾಲ್ಮೀಕಿ

ರಾಮಾಯಣ ಪ್ರಸಂಗಗಳನ್ನು ಕುರಿತ ವ್ಯಾಖ್ಯಾನ, ಟಿಪ್ಪಣಿ, ವಿ.ಸೀ. ಅವರನ್ನು ಕುರಿತ ಗೌರವ ಗ್ರಂಥವೊಂದರ ಸಂಪಾದನೆ ಇತ್ಯಾದಿ ಹಲವನ್ನು ಹಮ್ಮಿಕೊಂಡಿದ್ದರು. ಈ ನಡುವೆ ಶ್ರೀಮತಿಯವರೊಡಗೂಡಿ ಇನ್ನೊಮ್ಮೆ ವಿದೇಶ ಸಂಚಾರವನ್ನೂ ಕೈಕೊಂಡರು : "may be my last tour abroad" ಎಂದೂ ಹೇಳಿದ್ದರು. ಪುಣೆಯಲ್ಲಿದ್ದ ಮಗಳು, ಕೆನಡಾದಲ್ಲಿದ್ದ ಮಗ, ಮಗಳು, ಮೊಮ್ಮಕ್ಕಳು, ಸ್ನೇಹಿತರು ಎಲ್ಲರನ್ನೂ ಕಂಡು ಒಡನಿದ್ದು ಸುಖಿಸಿದರು. ಕೆನಡಾದಿಂದ ಹಿಂದಿರುಗಿ ಏಪ್ರಿಲ್ ಮೊದಲ ವಾರದ ಹೊತ್ತಿಗೆ ಮೈಸೂರಿಗೆ ಮರಳಿ ತಾವು ಹಮ್ಮಿಕೊಂಡಿದ್ದ ಸಾಹಿತ್ಯ ಚಟುವಟಿಕೆಗಳನ್ನು ಮುಂದುವರೆಸುವ ನಿರೀಕ್ಷೆಯಲ್ಲಿರುವಾಗಲೇ ಪುಣೆಯಲ್ಲಿ ಅನಿರೀಕ್ಷಿತವಾಗಿ (26.1.1986ರಂದು) ವಿಧಿವಶರಾದರು.

2

ನನಗೆ ಇನಾಂದಾರರ ಪರಿಚಯವಾದದ್ದು ವಿ.ಸೀ. ಅವರ ಮನೆಯಲ್ಲಿ; ಅವರು ಯುಜಿಸಿ ಪ್ರೊಫೆಸರಾಗಿ ನೆಲಸಲು ಬೆಂಗಳೂರಿಗೆ ಬಂದ ಹೊಸತರಲ್ಲಿ. ಆಗಿನಿಂದ ತಮ್ಮ ವಿಶ್ವಾಸವನ್ನು ಕಿರಿಯನಾದ ನನಗೆ ಒಂದೇ ಸಮನಾಗಿ ಕಾಣಿಸಿದ್ದಾರೆ. ಅವರೊಡನೆ ಪ್ರವಾಸ ಹೋಗಿದ್ದುಂಟು : ಮನೆಯಲ್ಲಿ ಊಟ ತಿಂಡಿ ಉಂಡದ್ದುಂಟು ; ಸರಸ ಸಂಭಾಷಣೆ ನಡೆಸಿದ್ದುಂಟು ; ಪ್ರೀತಿಯ ಕೊಡುಗೆಯಾಗಿ ಅವರಿಂದ ಹಲವಾರು ಪುಸ್ತಕಗಳನ್ನು ಪಡೆದದ್ದುಂಟು. ಆ ಸಂಬಂಧಿ ನೆನಪು ಎಲ್ಲವನ್ನೂ ಬರೆಯಹೊರಟರೆ ಅವಕ್ಕೆ ಕೊನೆಮೊದಲಿಲ್ಲವಾಗುತ್ತದೆಯಾಗಿ ಅವರ ಸ್ವಭಾವಲಕ್ಷಣಗಳನ್ನು ಮನೋಭಾವವನ್ನು ಕಾಣಿಸುವ ಕೆಲವನ್ನಷ್ಟೆ ಸ್ಮರಿಸುತ್ತೇನೆ.

ಇನಾಂದಾರರು ಮಿತಭಾಷಿ. ಮಾತಿಗಿಂತ ಹೆಚ್ಚು ಮೌನಪ್ರಿಯರು. ಹಿತಮಿತಮೃದು ವಚನ ಎಂಬ ವಿಶೇಷಣ ಅವರಿಗೆ ಒಪ್ಪುತ್ತಿತ್ತಾದರೂ ಸ್ಮಿತಭಾಷಿ ಎಂದು ಹೇಳಲಾಗುತ್ತಿರಲಿಲ್ಲ. ಸದಾ ಹೆಚ್ಚು ಅಂತರ್ಮುಖಿಯಾಗಿರುತ್ತಿದ್ದವರು. ಸ್ವಭಾವತಃ 'introvert', 'reserved' ಎನ್ನಬಹುದಾದವರು. ಕುರ್ಚಿಯ ಮೇಲೆ ಕುಳಿತು ಟೀ ಕುಡಿಯುತ್ತ ಸಿಗರೇಟ್ ಹಚ್ಚಿ ಹಿಡಿದು, ಅರೆ ಕಣ್ಣು ಮುಚ್ಚಿ ಏನನ್ನೋ 'ಧೇನಿಸುತ್ತ', ತಮ್ಮದೇ ಆದ ಕಲ್ಪನೆಯ ಜಗತ್ತಿನಲ್ಲಿ ವಿಹರಿಸುತ್ತ ಇರುವಂತಿರುತ್ತಿದ್ದುದೇ ಹೆಚ್ಚು. ಅದು ಅವರ ಚಿಂತನಪರ ಸ್ಥಿತಿ. ಮಾತಿನಲ್ಲಿ ಅವರು ಮಿತವ್ಯಯಿ. ಅಪವ್ಯಯವಂತೂ ಇಲ್ಲವೇ ಇಲ್ಲ, ಸಲ್ಲ! 'ಏನಂತೀರಿ?' ಎಂದು ಮೊದಲಾಗಿ, 'ಎಲ್ಲಿಯವರೆಗೆ ಬಂತು ?' 'ಏನು ನಡೀತಿದೆ?' ಇತ್ಯಾದಿಯ ಜಾಡಿನಲ್ಲಿಯೇ ಮುಂದುವರಿದು ಮುಗಿಯುತ್ತಿತ್ತು. ಹೇಳಬೇಕೆನಿಸಿದುದನ್ನು ಒಂದೆರಡು ಮಾತುಗಳಲ್ಲಿ ಹೇಳಿ ಮುಗಿಸುತ್ತಿದ್ದರೆ ವಿನಾ ಮಾತು ಪೋಲು ಮಾಡುತ್ತಿರಲಿಲ್ಲ. ಚಿತ್ತ ನಡೆಸಿದಾಗ ಮನಸ್ಸು ತೆರೆದು ಮಾತನಾಡುತ್ತಿದ್ದರಾದರೂ ಅಂಥದು ವಿರಳ. ಆದರೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಉತ್ತಮ ವಾಗ್ಮಿ ಎಂದು ಹೆಸರಾಗಿದ್ದರು.

ಹಣದ ವೆಚ್ಚದ ವಿಚಾರದಲ್ಲಿ ಅವರ ಕೈ ಬಿಗಿ, ಹಿಡಿತ : ಎಷ್ಟೋ ಅಷ್ಟೆ ಆಡಂಬರವಿಲ್ಲ, ನಿರಾಡಂಬರತೆಯನ್ನು ಅವರ ಯಾವುದೇ ವ್ಯವಹಾರದಲ್ಲಿ ಕಾಣಬಹುದಿತ್ತು. ಈ ಧಾರಾಳ ವಲ್ಲದ ನಡೆ-ನುಡಿ, ಕೈಬಿಗಿ ಇವು ಅವರನ್ನು highbrow, ಗರ್ವಿ, ಅಹಂಕಾರಿ ಇತ್ಯಾದಿ ಅಪಪ್ರಥೆಗೂ ಈಡುಮಾಡಿತ್ತು. ಆದರೆ ಅಂಥ ಟೀಕೆಯತ್ತ ಅವರದು ದಿವ್ಯ ನಿರ್ಲಕ್ಷ್ಯ. ತಮ್ಮ ಮಾತು, ತಮ್ಮ ಕೆಲಸ, ತಮ್ಮ ಹಣ ; ಇತರರ ಮಾತಿಗೆ ಲಕ್ಷ್ಯ, ಲೆಕ್ಕ, ಗಣನೆ ಸಲ್ಲ; 'ನಿಸ್ಪೃಹಸ್ಯ ತೃಣಂ ಜಗತ್' ಎಂಬ ನಿಲವು ಬಹುಶಃ ಆ ದಿವ್ಯ ನಿರ್ಲಕ್ಷ್ಯಕ್ಕೆ ಕಾರಣ. ಸಾಲದ್ದಕ್ಕೆ ಬಡತನದ ಬವಣೆಯನ್ನು ಸಾಕಷ್ಟು ಉಂಡು, ಅದರಲ್ಲಿಯೇ ಬೆಳೆದು, 'Self-made man' ಆಗಿ ಬದುಕಿನ ಒಂದೊಂದೇ ಮೆಟ್ಟಿಲೇರಿ, ನಡುವೆ ಹಲವು ಆಘಾತಗಳನ್ನು ಎದುರಿಸಿ, ಕೊನೆ ಕೊನೆಗೆ ಒಂದು ನೆಮ್ಮದಿಯ ನೆಲೆಗೆ, ಸ್ಥಿತಿಗೆ ಮುಟ್ಟಿದ್ದವರು. ಆದ್ದರಿಂದ ಅವರಿಗೆ ಹಣದ ಬೆಲೆ ಗೊತ್ತಿತ್ತು; ಋಜು ಮಾರ್ಗದಲ್ಲಿ ಅದರ ಸಂಪಾದನೆಯ ಕಷ್ಟದ ಅರಿವಿತ್ತು. ತಮ್ಮಲ್ಲಿ ಇಲ್ಲದಿದ್ದರೂ ದೇಹಿ ಎಂದು ಇನ್ನೊಬ್ಬರ ಮುಂದೆ ಕೈ ಒಡ್ಡಿ ಅನಗತ್ಯ ಧಾರಾಳ ಕಾಣಿಸುವಿಕೆ, ಮೆರೆಯುವಿಕೆ ಅವರಿಗೆ ಒಪ್ಪದು. 'ಋಣಂ ಕೃತ್ವಾ ಘೃತಂ ಪಿಬ' ಅವರ ಮಾರ್ಗವಲ್ಲ. ಹಾಗೇ ಇತರರ ಹಂಗಿಗೂ ಹೆಚ್ಚು ಒಳಗಾದವರಲ್ಲ. ಹೀಗೆಂದಾಗ ಯಾವುದೇ ಸಣ್ಣತನವನ್ನು ಅವರು ಕಾಣಿಸಿದರೆಂದಲ್ಲ. ಅವರ ಸ್ವಭಾವವನ್ನು Aristocrat ಎಂದವರುಂಟು. ಅದಕ್ಕಿಂತ Elite ಎನ್ನುವುದು ಹೆಚ್ಚು ಸೂಕ್ತವಾದ್ದು. ಆದರೆ ಅಪರೂಪಕ್ಕೆ ಅವರು ತಮ್ಮ ಶ್ರೀಮದ್ ಗಾಂಭೀರ್ಯದಿಂದ ಹೊರಬಂದು ನಗೆಮುಖದಲ್ಲಿರುವಾಗ, ತಮ್ಮ ಮನಸ್ಸಿನ ಹಗುರತೆ ಯನ್ನೂ ನಿಷ್ಕಲ್ಮಶ ಪ್ರೀತಿಯನ್ನೂ ಕಾಣಿಸಬಲ್ಲವರಾಗಿದ್ದರು. ಅಂಥ ಸಂದರ್ಭ ಹಲವನ್ನು ನಾನು ಕಂಡಿದ್ದೇನೆ; ಅಂಥ ಪ್ರೀತಿಯನ್ನೂ ಪಡೆದಿದ್ದೇನೆ.

ಒಂದು ಸಂದರ್ಭವನ್ನಂತೂ ಮರೆಯಲಾರೆ. ವಿಸೀ - ರಾವ್‌ಬಹದ್ದೂರ್-ಜೋಶಿ-ಇನಾಂದಾರರೊಡನೆ ಬಿಜಾಪುರಕ್ಕೆ ಹೋಗಿದ್ದು, ಗೋಲ್‌ಗುಂಬಜ್ ಆವರಣದಲ್ಲಿದ್ದಾಗಿನ ಸಂದರ್ಭ ಅದು. ಗುಂಬಜ್‌ನ ಮಾಯಾಲೋಕ ಅವರನ್ನು ಸಹಜವಾಗಿ ಆಕರ್ಷಿಸಿ ಗೋಳದ ಮೇಲೆ ಮಕ್ಕಳಂತೆ ಕೇಕೆ ಹಾಕಿ ನಗಲು, ಕೂಗಿ ಸಿಳ್ಳೆ ಹಾಕಲು, ತರಂಗ ತರಂಗವಾಗಿ ಬರುತ್ತಿದ್ದ ಅದರ ಪ್ರತಿಧ್ವನಿಯನ್ನು ಕೇಳಿ ಆನಂದಿಸಲು ಪ್ರೇರೇಪಿಸಿದ್ದನ್ನು ಕಂಡು ವಿಸ್ಮಿತನಾಗಿದ್ದೇನೆ. ಅದೇ ಅವರ ನೈಜಸ್ವಭಾವವಾದರೂ ಅದನ್ನು ಕಾಣಿಸದಂತೆ ಸರ್ವದಾ ಗಾಂಭೀರ್ಯದ ಸೋಗನ್ನು ಮುಖವಾಡವನ್ನು ಧರಿಸಿರುತ್ತಿದ್ದವರು ಅವರು. ಬಿಜಾಪುರ ದಿಂದ ಹಿಂದಿರುಗುವಾಗ ಬಾದಾಮಿಯಲ್ಲಿ ಆದ ಅನುಭವ ಇದಕ್ಕೆ ವ್ಯತಿರಿಕ್ತವಾದ್ದು; ಅವರ ಬೇರೊಂದು ಮುಖವನ್ನೇ ಅದು ಕಾಣಿಸಿತು. ಬೆಳಿಗ್ಗೆ ಹನ್ನೊಂದೂವರೆಯ ಹೊತ್ತಿಗೆ ಬಾದಾಮಿ ಸೇರಿ ಅಲ್ಲಿನ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಸ್ವಲ್ಪ ಹೊತ್ತಿನ ವಿಶ್ರಾಂತಿಗೆ, ಮಧ್ಯಾಹ್ನದ ಊಟಕ್ಕೆ ಅವಕಾಶ ಕಲ್ಪಿಸಿಕೊಡಲು ಅಲ್ಲಿಯ ಮೇಲ್ವಿಚಾರಕನನ್ನು ವಿಸೀ ತಮ್ಮ ಸಹಜ ಸೌಮ್ಯ ರೀತಿಯಲ್ಲಿ ಕೇಳಿಕೊಂಡರು. ಆತ 'ಸಾಧ್ಯವಿಲ್ಲ, ಕೋಣೆಯನ್ನು ಬೇರೆ

ಯಾರಿಗೋ ಕಾದಿರಿಸಲಾಗಿದೆ' ಇತ್ಯಾದಿ ಸಬೂಬು ಹೇಳಿ, ಕೋಣೆ ಖಾಲಿ ಇದ್ದರೂ ಕೊಡದೆ, ಆ ಹೊತ್ತಿನಲ್ಲಿ ಅಡುಗೆ ಮಾಡಿ ಬಡಿಸಲು ಒಪ್ಪದೆ, ನಮ್ಮನ್ನು ನಿವಾರಿಸಿಕೊಳ್ಳಲು ಯತ್ನಿಸಿದ. ಹೀಗೆ ಸತಾಯಿಸುತ್ತಿದ್ದುದನ್ನು ಕಂಡ ಇನಾಂದಾರರು ಗಟ್ಟಿದನಿಯಲ್ಲಿ ''ಹಾಗೆಂದು ಬರೆದುಕೊಡು, ನಿನಗೆ ತಕ್ಕ ಗತಿ ಕಾಣಿಸುತ್ತೇನೆ. You don't know to whom you are talking like this" ಎಂದು ಗುಡುಗಿದರು. ಅವರ ಆಕಾರಕ್ಕೆ, ದನಿಗೆ ಹೆದರಿದ ಮೇಲ್ವಿಚಾರಕ ಮರುಮಾತಾಡದೆ ತಕ್ಷಣ ಒಂದು ವಿಶಾಲವಾದ ಕೋಣೆಯನ್ನು ತೆರವು ಮಾಡಿಕೊಟ್ಟು, ನಾವಾಗಿ ಕೇಳದಿದ್ದರೂ ತಾನಾಗಿ ಮೊದಲಿಗೆ ಬಿಸಿಬಿಸಿಯಾಗಿ ಟೀ ಮಾಡಿಕೊಟ್ಟು ರುಚಿಕರವಾದ ಅಡುಗೆ ಮಾಡಿ ಊಟಕ್ಕೆ ಬಡಿಸಿದ! ಅದನ್ನು ಕಂಡು ''ಹೀಗೆ ಹೇಳಿದರೇ ಇವರಿಗೆ ಅರ್ಥವಾಗೋದು'' ಎಂದು ಇನಾಂದಾರರು ನಮ್ಮತ್ತ ತಿರುಗಿ ಕಣ್ಣು ಮಿಟುಕಿಸಿದರು. ವಿಸೀ ಅವರೂ ನಾನೂ ನಮ್ಮ ಕೈಯಲ್ಲಿ ಇದು ಅಶಕ್ಯವೆಂದು ಒಪ್ಪಿಕೊಂಡೆವು. 'ಬಾಯಿದ್ದರೆ ಮಾತ್ರ ಈ ಕಾಲದಲ್ಲಿ ಬದುಕಬಹುದಪ್ಪ!' ಎಂದರು ವಿಸೀ. ಆ ಕ್ಷಣದಲ್ಲಿ ಅದೆಷ್ಟು ನಿಜ ಎನ್ನಿಸಿದ್ದೂ ಉಂಟು. ಇದಕ್ಕೆ ವಿರುದ್ಧದ ನಡವಳಿಕೆಯನ್ನೂ ಇನಾಂದಾರರಲ್ಲಿ ಕಂಡಿದ್ದುಂಟು. ಒಮ್ಮೆ ಡಿವಿಜಿ ಅವರ ಮನೆಯಲ್ಲಿ ಎರಡು ಗಂಟೆಗಳ ಕಾಲ ರಾಶಿ ಅವರೂ ಇನ್ನೊಬ್ಬರೂ ಲೋಕಾಭಿರಾಮವಾಗಿ ಎಲ್ಲರನ್ನೂ ಲೇವಡಿ ಮಾಡಿಕೊಂಡು ಮಾತನಾಡಿಸುತ್ತ ಕುಳಿತಿದ್ದಾಗ, ತುಟಿತೆರೆಯದೆ 'ಪಿಟಕ್ಕೆನ್ನದೆ' ಕುಳಿತಿದ್ದ ಇನಾಂದಾರರನ್ನು ಕಂಡು ಅಚ್ಚರಿಪಟ್ಟಿದ್ದೇನೆ. ಇದೇ ಇನಾಂದಾರರು ಜಮಖಂಡಿಯಲ್ಲಿ ವಿಜಯದಶಮಿಯ ದಿನದಂದು ರಾವಬಹದ್ದೂರರ ಮನೆಯ ಅಟ್ಟದ ಮೇಲೆ ಎರಡು ತಾಸು ಕಾಲ ಕುಳಿತು ಅವರು ಹೇಳುತ್ತಿದ್ದ ಸ್ವಾರಸ್ಯಕರ ನೈಜಘಟನೆಗಳನ್ನಾಧರಿಸಿದ್ದ ರೋಮಾಂಚಕಾರಿ ಕತೆಗಳನ್ನು ಕೇಳಿ ನಕ್ಕು ನಲಿದು ಸಂಭಾಷಣೆಯಲ್ಲಿ ಬೆರೆಯುತ್ತ ಸುಖಿಸಿದ್ದನ್ನೂ ಕಂಡಿದ್ದೇನೆ.

ಒಂದು ಸಂಗತಿಯನ್ನಂತೂ ಮರೆಯದೆ ಉಲ್ಲೇಖಿಸಬೇಕು : ಇನಾಂದಾರರ ಹಸ್ತಪ್ರತಿಗಳ-ಕನ್ನಡವಾಗಲಿ, ಇಂಗ್ಲಿಷಾಗಲಿ-ಚೆಲುವು ಕಣ್ಣಿಗೊತ್ತಿಕೊಳ್ಳುವಂಥದ್ದು. ಸ್ಫುಟ ವಾದ, ಮುದ್ದಾದ ಕೈಬರಹ ಅವರದು. ಗೊತ್ತಾದ ಸೈಜಿಗೆ ಕತ್ತರಿಸಿಟ್ಟುಕೊಂಡಿದ್ದ - ಒಂದೇ ಬಗೆಯ ತೆಳುನೀಲಿ ಗೆರೆ ಉಳ್ಳ - ಉತ್ತಮ ದರ್ಜೆಯ ಕಾಗದದಲ್ಲಿ ಬರೆದು ಅಳಿಸದ, ಏಕೆ ಬರೆದು ಹೊಡೆಯದ, ಒಂದು ಚಿತ್ತೂ ಇರದಂತೆ ಬರೆವ ಹೆಗ್ಗಳಿಕೆ, ಅಗ್ಗಳಿಕೆ ಅವರ ಲೇಖನಿಯದು. 200-300 ಪುಟಗಳ - ಇನ್ನೂ ಹೆಚ್ಚು ಪುಟಗಳ - ಅವರ ಹಸ್ತಪ್ರತಿಯಲ್ಲಿ ಹುಡುಕಿದರೂ ಒಂದು ಚಿತ್ತು, ಬರೆದುದನ್ನು ಹೊಡೆದು ಬದಲಾಯಿಸಿ ಸೇರಿಸಿದ ಪದದ ಸುಳಿವು ಸಿಗುತ್ತಿರಲಿಲ್ಲವೆಂಬುದು ಆಶ್ಚರ್ಯದ ಸಂಗತಿ. ಇಂಗ್ಲಿಷ್ ಬರವಣಿಗೆಯಲ್ಲಿ ಅಪವಾದಕ್ಕೆ ಎಂಬಂತೆ ಅಲ್ಲೊಂದು ಇಲ್ಲೊಂದು ಪದ ಬದಲಾವಣೆ ಕಾಣಿಸುತ್ತಿತ್ತು. ಆದರೆ ಕನ್ನಡದಲ್ಲಿ ಸುತರಾಂ ಇಲ್ಲವೇ ಇಲ್ಲ. ಅಷ್ಟು ಖಚಿತ, ನಿರ್ದುಷ್ಟ, ಪೂರ್ವನಿರ್ಧಾರಿತ ಅವರ ಆಲೋಚನೆ, ಬರವಣಿಗೆ. ಅಂಥ ಏಕಾಗ್ರಚಿತ್ತತೆ ಅವರದು. ಇನಾಂದಾರರ ಪತ್ರಗಳೂ ಹಾಗೇ :

ಉತ್ತಮ 'ಬಾಂಡ್' ಕಾಗದದಲ್ಲಿ ಸುಂದರವಾದ ಕೈ ಬರಹದಲ್ಲಿ ಇರುತ್ತಿದ್ದವು. ಜೊತೆಗೆ ಎಷ್ಟು ಎಚ್ಚರಿಕೆ ವಹಿಸುತ್ತಿದ್ದರೆಂದರೆ ಬರೆದ ಕಾಗದಗಳನ್ನು ಅಂಚೆಗೆ ಹಾಕಲು ಉಪಯೋಗಿಸುತ್ತಿದ್ದ ಲಕೋಟೆಗಳನ್ನೂ ಸ್ವಯಂ ತಾವೇ ತಯಾರಿಸಿಕೊಳ್ಳುತ್ತಿದ್ದರು. ಗೋಂದು, ಕತ್ತರಿ, ಕಾಗದ, ಸರ್ವದಾ ಸಿದ್ಧವಾಗಿರುತ್ತಿತ್ತು, ಆ ಲಕೋಟೆ ಸರಿಯಾದ ಸೈಜಿನದಾಗಿರಬೇಕು ; ಕೊಳೆಯಿಲ್ಲದಿರಬೇಕು ; ತೆಳುವಾಗಿ ಗೋಂದು ಸವರಿರಬೇಕು ; ನಡುವೆ ವಿಳಾಸ ಅಂದವಾಗಿ ಬರೆದಿರಬೇಕು ; ಬಲತುದಿಯ ಮೇಲೆ, ಅಂಚೆ ಚೀಟಿ ಅಂಟಿಸಲು ಗೊತ್ತಾದ ಸ್ಥಳದಲ್ಲಿಯೇ ಅದನ್ನು ನೇರವಾಗಿ ಅಂಟಿಸಿರಬೇಕು ; ತಲೆಕೆಳಕಾಗಿ ಅಂಟಿಸಬಾರದು - ಇತ್ಯಾದಿ ಸಣ್ಣ ಸಣ್ಣ ವಿವರಗಳತ್ತಲೂ ಅವರ ಗಮನ ಹೋಗಿರುತ್ತಿತ್ತು. ಮಾಡಿದ ಯಾವುದೇ ಕೆಲಸ ಪರಿಷ್ಕಾರವಾಗಿರಬೇಕು, ಚೊಕ್ಕಟವಾಗಿರಬೇಕು ; ಪಡಪೋಸಿತನದ್ದು ಅಥವಾ ಅಡ್ಡಕಸಬಿಯದು ಆಗಿರಬಾರದು ಎಂಬುದು ಅವರ ದೃಢ ನಿಲುವು. ಅದು ಅವರ ಸ್ವಭಾವ ಲಕ್ಷಣವೂ ಹೌದು. ಬರೆಯುವುದು, ಓದುವುದರಲ್ಲಿಯೂ ಹಾಗೆಯೇ. ತಮ್ಮ ಅಧ್ಯಯನ ಕೋಣೆಯಲ್ಲಿ ಪುಸ್ತಕ ಭಂಡಾರದ ನಡುವೆ ಹಾಕಿರುತ್ತಿದ್ದ ಎರಡು ಕುರ್ಚಿಯಲ್ಲಿ (ಒಂದು ಅವರಿಗೆ, ಇನ್ನೊಂದು ಬಂದವರಿಗೆ) ಒಂದರ ಮೇಲೆ ಕುಳಿತು ಮೇಜಿನ ಮೇಲೆ ಕಾಗದವಿಟ್ಟು ಬರೆಯಬೇಕು ; ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಕುಳಿತೊ ಮಲಗಿಯೊ ಒರಗಿಯೋ ಬರೆಯುತ್ತಿರಲಿಲ್ಲ. ಅಧ್ಯಯನವೂ ಹಾಗೇ. ಎಲ್ಲದರಲ್ಲಿಯೂ ತಾವಾಗಿ ತಮ್ಮ ಮೇಲೆ ಹಾಕಿಕೊಂಡಿದ್ದ ಒಂದು ಕ್ರಮಬದ್ಧತೆ, ಶಿಸ್ತು ಎದ್ದು ಕಾಣುತ್ತಿತ್ತು. ಅವರದು ಶಿಸ್ತಿನ ಜೀವನ. ಎಲ್ಲವೂ ಕ್ಲುಪ್ತ ಕಾಲಕ್ಕೆ ಒಂದು ಕ್ರಮಕ್ಕೆ ಒಳಪಟ್ಟು ನಡೆಯಬೇಕೆಂದು ಅವರು ಬಯಸುತ್ತಿದ್ದರು. ಬಹುಮಟ್ಟಿಗೆ ಹಾಗೆ ನಡೆದುಕೊಳ್ಳುತ್ತಿದ್ದರು. ಎಲ್ಲ ವಿಷಯಗಳಲ್ಲಿಯೂ ಹೀಗೆ ಪರಿಪೂರ್ಣತಾವಾದಿಯಾಗಿದ್ದರು. ಅವರು ಕುಳಿತುಕೊಳ್ಳುತ್ತಿದ್ದ ಕೋಣೆಯಲ್ಲಿ ಎದುರು ಗೋಡೆಗೆ ನೇತುಹಾಕಿರುತ್ತಿದ್ದ ಒಂದು ಚಿತ್ರಪಟದ ಒಕ್ಕಣೆ ಹೀಗಿತ್ತು:

"A House is built by Hands :
But a Home is built by Hearts...."

ಇದು ಅವರ 'ಮೋಹಿನಿ' ಬೃಹತ್ ಕಾದಂಬರಿ ಪ್ರತಿಫಲಿಸುವ ಸಂದೇಶದ ಸಾರಸಂಗ್ರಹವೆಂಬಂತಿದ್ದು ಆ ಕಥಾಮಾಲಿಕೆಗೆ ಏಕಸೂತ್ರತೆಯನ್ನು ಒದಗಿಸುವುದೇನೊ ಎನ್ನಿಸುತ್ತಿತ್ತು. ಕಾದಂಬರಿಯ ನಾಯಕಿ ಮೋಹಿನಿಯ ಮನೆ ಕೇವಲ ಮರಳು ಇಟ್ಟಿಗೆಗಳಿಂದ ಕಟ್ಟಿದ್ದಾಯಿತೇ ಹೊರತು ಮನಸ್ಸು, ಹೃದಯಗಳಿಂದ ಬೆಸೆದು ನಿಂತದ್ದಾಗಲಿಲ್ಲ.... ಆದ್ದರಿಂದಲೇ ಅಲ್ಲಿನ ದುರಂತ ಅನಿವಾರ್ಯವಾಯಿತು.

ಅವರ ಗ್ರಂಥ ಭಂಡಾರ ಅಮೂಲ್ಯವಾದ್ದು. ಅಲ್ಲಿ ಅವರ ಧಾರಾಳತೆ, ಅಭಿರುಚಿ ಎದ್ದು ಕಾಣುತ್ತಿತ್ತು. 'ಪೇಪರ್ ಬ್ಯಾಕ್'ಗಳಿಗಿಂತ ಉತ್ತಮ ಕ್ಯಾಲಿಕೊ ಮೊರಾಕೊ ಬೈಂಡಿನ 'ಡಿಲಕ್ಸ್' ಎಡಿಷನ್‌ಗಳಲ್ಲಿ ಅಂದವಾಗಿ ಅಚ್ಚಾಗಿರುವ ಪುಸ್ತಕಗಳಲ್ಲಿ ಅವರಿಗೆ ಪ್ರೀತಿ,

ಪಕ್ಷಪಾತ. ತಮ್ಮ ಮೆಚ್ಚಿನ ಇಂಗ್ಲಿಷ್ ಕಾದಂಬರಕಾರರ, ವಿಮರ್ಶಕರ ಎಲ್ಲ ಕೃತಿಗಳನ್ನೂ – ಎಷ್ಟೇ ಬೆಲೆಯವಾಗಿರಲಿ – ಸ್ವಂತ ಸಂಪಾದನೆಯ ಹಣದಿಂದ ಖರೀದಿಸಿ ಶೇಖರಿಸಿದ್ದವರು ಅವರು. ಅವರ ಒಟ್ಟು ಸಂಪಾದನೆಯಲ್ಲಿ ಅರೆಪಾಲಿಗೂ ಹೆಚ್ಚನ್ನು ಬಹುಶಃ ಅವರು ಗ್ರಂಥ ಖರೀದಿಗಾಗಿಯೇ ವ್ಯಯಿಸಿದ್ದಿರಬೇಕು. ಅವುಗಳಿಗೆ ಬ್ರೌನ್ ಪೇಪರಲ್ಲಿ ರೊಟ್ಟು ಹಾಕಿ, ಅಚ್ಚುಕಟ್ಟಾಗಿ ಬೇಕಾದ ಪುಸ್ತಕ ಬೇಕಾದ ಕ್ಷಣದಲ್ಲಿ ಕೈಗೆ ಸಿಕ್ಕುವಂತೆ ಜೋಡಿಸಿ ಇಟ್ಟುಕೊಂಡಿದ್ದರು. ಅಸ್ತವ್ಯಸ್ತತೆಗೆ, ದೂಳು ಗೆದ್ದಲಿಗೆ ಅಲ್ಲಿ ಅವಕಾಶವಿರುತ್ತಿರಲಿಲ್ಲ. ಹಾಗೇ, ಯಾರಿಗೆಂದರೆ ಅವರಿಗೆ ಪುಸ್ತಕಗಳನ್ನು ಎರವಲಾಗಿ ಕೊಡುತ್ತಿರಲೂ ಇಲ್ಲ. ಕೊಂಡವರು ಅದನ್ನು ಬಣ್ಣಗೆಡಿಸದೆ, ಪೆನ್ಸಿಲಿಂದ ಪೆನ್ನಿಂದ ಚಿತ್ತಾರ ಬರೆಯದೆ, ಬೇಕಾಬಿಟ್ಟಿ ಹಿಡಿದು ಹಾಳೆ ಮಡಿಸಿ ಹರಿದುಹಾಕದೆ, ಹಾಳುಗೆಡವದೆ ಹಿಂದಿರುಗಿಸಿದರೆ ಮಾತ್ರ ಇನ್ನೊಮ್ಮೆ ಅವರಿಗೆ ಪುಸ್ತಕ ದೊರೆಯುತ್ತಿತ್ತು ; ಇಲ್ಲವಾದರೆ ಇಲ್ಲ. ತಾವು ಇತರರಿಂದ ಓದಲು ಪಡೆದ ಪುಸ್ತಕಗಳನ್ನೂ ಅಷ್ಟೇ ಜಾಗರೂಕತೆಯಿಂದಿಟ್ಟುಕೊಂಡಿದ್ದು ಜತನದಿಂದ ಕಾಪಾಡಿ ಹಿಂದಿರುಗಿಸುತ್ತಿದ್ದರು. ಅವರ ಪುಸ್ತಕ ಪ್ರೀತಿಯ ಈ ಆಸ್ಥೆಯನ್ನು ಮೆಚ್ಚಲೇಬೇಕು.

ಅಪ್ರಿಯ ಸಂಗತಿ ಒಂದನ್ನೂ ಹೇಳಬೇಕು : ಕಾರಣ ಏನೇ ಇದ್ದರೂ ಅವರ ಅನಪೇಕ್ಷಿತ, ಅಸಾಮಯಿಕ ಮೌನ ಒಮ್ಮೊಮ್ಮೆ ಅವರನ್ನು ಹತ್ತಿರದಿಂದ ಬಲ್ಲ ಸ್ನೇಹಿತರಿಗೂ ಇರಿಸು ಮುರುಸನ್ನು ಉಂಟು ಮಾಡುತ್ತಿತ್ತು. ತೀರ ಅಗತ್ಯವಾಗಿದ್ದಾಗಲೂ ಹಲವಾರು ತಿಂಗಳು ಅವರಿಂದ ಯಾವುದೇ ಸುದ್ದಿ ಬಾರದೆ ಹೋಗಿ ಅವರ ಬಗೆಗೆ ಒಂದು ಬಗೆಯ ಉಪೇಕ್ಷೆಯ ಭಾವನೆ ಬೆಳೆಯಲೂ ಅವರನ್ನು ತಪ್ಪು ತಿಳಿಯಲೂ ಅವಕಾಶವಾಗುತ್ತಿತ್ತು. ದೀರ್ಘಕಾಲದ ಅವರ ಸ್ನೇಹಿತರೂ ಅಂಥ ಕೆಲವು ಸಂದರ್ಭಗಳಲ್ಲಿ ಬೇಸರಪಟ್ಟುಕೊಂಡು ದನ್ನು ನಾನು ಬಲ್ಲೆ. ಆದರೆ ಅಂಥ ನಡೆ ಬಹುಶಃ ಉದ್ದೇಶಪೂರ್ವಕವಾದ್ದಲ್ಲದ್ದರಿಂದ ಇನಾಂದಾರರನ್ನು ಮಾತ್ರವೇ ಹೊಣೆಗಾರರನ್ನಾಗಿಸುವುದು ತಪ್ಪಾಗುತ್ತದೇನೋ.

3

ತೀರಿಕೊಳ್ಳುವ ಹನ್ನೆರಡು ದಿನ ಮುಂಚೆ, ಪುಣೆಯಲ್ಲಿ ಮಗಳ ಮನೆಯಲ್ಲಿ ಅವರನ್ನು ಕಂಡಿದ್ದೆ. ಆ ಮುಂಚೆಯೇ ಬರುವೆನೆಂದು ಅವರಿಗೆ ಪತ್ರ ಬರೆದಿದ್ದೆ. ನಾನು ಹೋದದ್ದು ಸೋಮವಾರ ಮಧ್ಯಾಹ್ನ. ಎರಡು ಮೂರು ದಿನಗಳಿಂದ ನನ್ನನ್ನು ನಿರೀಕ್ಷಿಸಿದ್ದರೆಂದು ಶ್ರೀಮತಿ ನಿರ್ಮಲಾ ಇನಾಂದಾರ್ ತಿಳಿಸಿದರು. ಹೋದಾಗ ನನ್ನ ಕಡೆಗೆ ಬೆನ್ನು ಮಾಡಿಕೊಂಡು ಮಂಚದ ಮೇಲೆ ಕುಳಿತು ಮುಖಕ್ಷೌರ ಮಾಡಿಕೊಳ್ಳುತ್ತಿದ್ದರು. ಅವರ ಬೆನ್ನು ಬಾಗಿತ್ತು; ದೇಹ ಬಹುವಾಗಿ ಕುಗ್ಗಿತ್ತು ; ಹಿನ್ನೋಟಕ್ಕೆ ಆ ಆಕೃತಿ ಇನಾಂದಾರರದೆ ಎಂಬ ಸಂದೇಹವನ್ನು ತರಿಸುವಂತಿತ್ತು. "ನೋಡಿ, ಯಾರು ಬಂದಿದ್ದಾರೆ" ಎಂದು ಶ್ರೀಮತಿ ಇನಾಂದಾರರು ನನ್ನತ್ತ

ಅವರ ಗಮನ ಸೆಳೆದಾಗ ನೋಡಿ ಮುಗುಳ್ನಕ್ಕು "ಬನ್ನಿ, ಬನ್ನಿ, ಒಂದೇ ನಿಮಿಷ" ಎಂದು ನುಡಿದು, ನಾನು ಕುಳಿತಾದ ಮೇಲೆ ತಮ್ಮ ಕ್ಷೌರವನ್ನು ಮುಂದುವರಿಸಿ ಮುಗಿಸಿ, ಮುಖ ತೊಳೆದು ಬಂದು, ತಮ್ಮ ಕೋಣೆಗೆ ಕರೆದೊಯ್ದರು. ತಾವು ಮಲಗುವ ಮಂಚದ ಮೇಲೆ ತಮ್ಮ ಪಕ್ಕ ಕೂರಿಸಿಕೊಂಡು ಆತ್ಮೀಯ ಮಾತುಕತೆಗೆ ತೊಡಗಿದರು. ಕಳೆದ ವಾರದಿಂದಷ್ಟೆ ಸ್ವಲ್ಪ ಮಾತನಾಡಲು ಶಕ್ಯವಾಗುತ್ತಿತ್ತಂತೆ. ಹಿಂದಿನ ದಿನದಿಂದ ತಮ್ಮ ಕೋಣೆಯೊಳಗೆ, ಮನೆಯೊಳಗೆ, ಕಾಂಪೌಂಡ್ ಒಳಗೆ ಅತ್ತಿತ್ತ ಹತ್ತು ಹೆಜ್ಜೆ ಓಡಾಡಲು ಆರಂಭಿಸಿದ್ದರಂತೆ ; ಹೊರಗಿದ್ದ ಹಸಿರನ್ನು ಕಾಣಲು, ಗಾಳಿಬಿಸಿಲಿಗೆ ಮೈಯ್ಯೊಡ್ಡಲು.

ಅವರೊಡನೆ ಅಂದು ಕಳೆದ ಮೂರು ನಾಲ್ಕು ಗಂಟೆಯ ಅವಧಿಯಲ್ಲಿ ತಮ್ಮ ಸದ್ಯದ ಅನಾರೋಗ್ಯ ಸ್ಥಿತಿಯ ವಿವರಣೆ ಕೊಟ್ಟರು. ಕೆನಡಾದಿಂದ ಹಿಂದಿರುಗುವಾಗ ವಿಮಾನಯಾನ ದಲ್ಲಿರುವಾಗಲೇ ತೀವ್ರ ಉಸಿರಾಟದ ತೊಂದರೆ ತಲೆದೋರಿ ಹೇಗೋ ಮುಂಬಯಿ ಮುಟ್ಟಿದ್ದನ್ನೂ, ಅಲ್ಲಿಂದ ಪುಣೆಗೆ ಧೈರ್ಯವಹಿಸಿ ಬಂದು ಆಸ್ಪತ್ರೆ ಸೇರಿದ್ದನ್ನೂ, ಅಲ್ಲಿ ಅವರ ಹೆಚ್ಚಿನ ವಿಶ್ವಾಸಕ್ಕೆ ಪಾತ್ರರಾಗಿದ್ದ ಡಾ॥ ಪ್ರಯಾಗ್ ಎಂಬವರ ರೋಗನಿದಾನ ನೈಪುಣ್ಯ ಮತ್ತು ದೊರಕುತ್ತಿರುವ ಉತ್ತಮ ವೈದ್ಯಕೀಯ ಚಿಕಿತ್ಸೆ ಇತ್ಯಾದಿಯ ಬಗೆಗೂ ಹೇಳಿದರು. ಬಯಾಪ್ಸಿ ಸ್ಕ್ಯಾನಿಂಗ್ ಇತ್ಯಾದಿ ಮುಗಿಸಿ, ಸದ್ಯ 'ಕೆಮೊಥೆರಪಿ' ಚಿಕಿತ್ಸೆ ಪಡೆಯು ತ್ತಿರುವುದಾಗಿಯೂ, ಆ ಕಾರಣ ತಮ್ಮ ದೇಹದಲ್ಲಿ ತೀವ್ರ ನಿಶ್ಶಕ್ತಿ ತಲೆದೋರಿರುವುದನ್ನೂ ತಿಳಿಸಿದರು. "ಎರಡು ಕೋರ್ಸ್ ಚಿಕಿತ್ಸೆ ಮುಗಿದಿದೆ (ಐದು ದಿನ ಆಸ್ಪತ್ರೆ ವಾಸ, ಅನಂತರದ ಹತ್ತು ದಿನದ ಗೃಹಚಿಕಿತ್ಸೆ- ಇದು ಒಂದು ಕೋರ್ಸ್) ; ಇನ್ನೂ ನಾಲ್ಕು ಕೋರ್ಸ್ ಉಳಿದಿದೆ. ಈಗ ಸ್ಥಿತಿ ಸುಧಾರಿಸಿದೆ ; ಉಸಿರಾಟದ ತೊಂದರೆ ಬಹುಮಟ್ಟಿಗೆ ನಿವಾರಣೆಯಾಗಿದೆ. ಔಷಧದ ಪರಿಣಾಮವಾಗಿ ನಾಲಿಗೆ ಒಡೆದು ಸೆಡೆತುಬಿಟ್ಟಿದೆ ; ಹೆಚ್ಚು ಕೂತಿರಲು, ಓಡಾಡಲು, ಮಾತಾಡಲು ಆಗುತ್ತಿಲ್ಲ. ಬೆಂಗಳೂರಲ್ಲಿ ಈ ಚಿಕಿತ್ಸೆ ಮುಂದುವರಿಸಬಹುದು, ಆದರೆ ಇಲ್ಲಿಯೇ ಮುಗಿಸಿ ಏಪ್ರಿಲ್ ಮೊದಲ ವಾರದಲ್ಲಿ ಮೈಸೂರಿಗೆ ಬಂದುಬಿಡುತ್ತೇನೆ, and will resume my normal activity" ಎಂದರು. ಅವರ ಮಾತಿನಲ್ಲಿ ಮುಖಭಾವ ದಲ್ಲಿ ಆ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು. ಮುಂದಿನ ಕೇವಲ 11-12 ದಿನಗಳಲ್ಲಿ ಸಾವಿನ ಕರಿಯ ನೆರಳು ಅವರ ಮೇಲೆ ಕವಿದೆರಗಬಹುದೆಂಬ ಅತಿಸಣ್ಣ ಸೂಚನೆಯೂ ಆಗ ಕಾಣಲಿಲ್ಲ.

ತಮ್ಮೊಡನೆ ಊಟಮಾಡಿಯೇ ಹೋಗಬೇಕೆಂದು ಒತ್ತಾಯಿಸಿದರು. ಹಿಂದಿನ ದಿನವಷ್ಟೆ ಅವರ ಪ್ರಿಯಮಿತ್ರರಾಗಿದ್ದ ಶ್ರೀ ಕು.ಶಿ. ಹರಿದಾಸ ಭಟ್ಟರು ಏನೊ ಕೆಲಸ ನಿಮಿತ್ತ ಮುಂಬಯಿಗೆ ಬಂದಿದ್ದವರು ಪುಣೆಯವರೆಗೂ ಬಂದು ಅವರನ್ನು ಕಂಡು ಆರೋಗ್ಯ ವಿಚಾರಿಸಿ ಮಾತನಾಡಿಸಿ ಹೋಗಿದ್ದರಂತೆ. "ಇಂದು ನೀವು ಬಂದಿದ್ದೀರಿ, ಸಂತೋಷ. ಭಾನುವಾರವೇ ಬರಬಹುದೇನೊ ಎಂದಿದ್ದೆ" ಎಂದು ಹರ್ಷ ಕಾಣಿಸಿದರು. ಜೊತೆಯಲ್ಲಿ ಕುಳಿತು ಊಟ ಮಾಡಿದೆವು. ಅದೇ ನನ್ನ ಪಾಲಿಗೆ ಅವರೊಡನೆಯ ಕೊನೆಯ ಊಟವಾದೀತೆನಿಸಿರಲಿಲ್ಲ.

ಕಾಳಿದಾಸನ ರಘುವಂಶ ಅವರ ಪಕ್ಕದಲ್ಲಿತ್ತು: "Something to keep me engaged" ಎಂದು ಅವನ ಕವಿತಾವೈಭವವನ್ನು ಪ್ರಶಂಸಿಸಿದರು. "Problems of Translating Sanskrit Classics" ವಿಷಯವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಲೇಖನ ಬರೆದುಕೊಡಲೊಪ್ಪಿದ್ದರಂತೆ ; ಅದಕ್ಕಾಗಿ ಸಿದ್ಧತೆ ನಡೆಸಿದ್ದರು. "I may be able to dictate it in a fortnight" ಎಂದರು. ಕೆನಡಾಕ್ಕೆ ಹೋಗುವ ಮುಂಚೆ ವಿದೇಶದಲ್ಲಿರುವಾಗಲೇ ಒಂದು ಹೊಸ ಕಾದಂಬರಿ ಬರೆದು ತರಲು ಹವಣಿಸಿದ್ದರು. ಅದು ಮುಗಿಯಿತೆ ಎಂದಾಗ ''ಇಲ್ಲ, ಎಲ್ಲವೂ ಮನಸ್ಸಿನಲ್ಲಿ fix ಆಗಿದೆ. ಮೈಸೂರಿಗೆ ಹಿಂದಿರುಗಿದೊಡನೆಯೇ ಬರೆದು ಮುಗಿಸುತ್ತೇನೆ. But I need some help from you and your friends there. I can't hold my pen between my fingers. I have to only dictate hereafter" ಎಂದು ತಮ್ಮ ಕೈಬೆರಳುಗಳಲ್ಲಿ ಗಟ್ಟಿ ಹಿಡಿತ, ದೃಢತೆ ಇಲ್ಲದಿರುವುದನ್ನು ಕಾಣಿಸಿದರು. ಆ ನೆರವು ನಮ್ಮಿಂದ ಧಾರಾಳವಾಗಿ ದೊರೆಯುತ್ತದೆಂಬ ಆಶ್ವಾಸನೆ ಕೊಟ್ಟೆ. ಇನ್ನಿತರ ಸಂಗತಿಗಳ ಬಗ್ಗೆ ಸ್ವಲ್ಪ ಹೊತ್ತು ಲೋಕಾಭಿರಾಮವಾಗಿ ಮಾತನಾಡುತ್ತಿದ್ದೆವು. ಅವರನ್ನು ಕುರಿತ ಗೌರವಗ್ರಂಥ 'ಕಾದಂಬರಿ ಲೋಕ'ಕ್ಕೆ ಅವರಿಗೆ ಪ್ರಿಯವಾಗಿದ್ದ ಗಾಲ್ಸ್‌ವರ್ದಿಯ 'ಫಾರ್ಸೈಯಿಟ್ ಸಾಗಾ' ಕುರಿತು ನಮಗಾಗಿ ವಿಮರ್ಶನ ಲೇಖನವನ್ನು ಬರೆದುಕೊಡಲೊಪ್ಪಿದ್ದುದನ್ನು ತಾವಾಗಿಯೇ ಸ್ಮರಿಸಿ, ಖಂಡಿತ ಬರೆಯುವೆನೆಂಬ ಭರವಸೆಕೊಟ್ಟರು. ಕೆನಡಾದಲ್ಲಿದ್ದಾಗ ಆ ಪುಸ್ತಕವನ್ನು ದೊರಕಿಸಿಕೊಳ್ಳಲು ಯತ್ನಿಸಿ 'Who reads him here Professor now?' ಎಂಬ ಉತ್ತರ ಪಡೆದಿದ್ದರಂತೆ ! "Without my article on the Saga, the volume will not be printed" ಎಂಬ ಖಚಿತ ನೆಚ್ಚಿಕೆಯ ಮಾತನ್ನು ತಿಳಿಸಿದರು. (ಆದರೆ ಅವರ ಆ ಲೇಖನವಿಲ್ಲದೆ, ಅವರಿದ್ದಾಗ ಸಂಭಾವನಾ ಗ್ರಂಥವಾಗಿ ಪ್ರಕಟವಾಗಬೇಕಿದ್ದ 'ಕಾದಂಬರಿ ಲೋಕ' ಅವರು ಕೀರ್ತಿಶೇಷರಾದ ಮೇಲೆ ಸಂಸ್ಮರಣ ಗ್ರಂಥವಾಗಿ ಪ್ರಕಟವಾಗಬೇಕಾಗಿ ಬಂದುದು ವಿಷಾದನೀಯ.) ಸರ್ಕಾರದಿಂದ ತಮ್ಮ ವೈದ್ಯಕೀಯ ಚಿಕಿತ್ಸೆಗಾಗಿ ಸಹಾಯ ದೊರಕಿಸಲು ಶ್ರಮಿಸಿ ಸಕಾಲಕ್ಕೆ ಅದನ್ನು ದೊರಕಿಸಿ ಕೊಟ್ಟ ಡಾ. ಹಾ.ಮಾ. ನಾಯಕರ ಬಗೆಗೆ, ಸಹಪಾಠಿ ಹಾಗೂ ನಿಡುಗಾಲದ ಗೆಳೆಯ ಶ್ರೀ ಪಿ.ವಿ. ಜೋಶಿ ಮತ್ತು ಹತ್ತಿರದ ಮಿತ್ರರೂ ಪ್ರಕಾಶಕರೂ ಆದ ಶ್ರೀ ರಾ.ನಾ. ಹಬ್ಬು - ಇವರ ಬಗೆಗೆ ತುಂಬಾ ಹಾರ್ದವಾದ ವಿಶ್ವಾಸ, ಕೃತಜ್ಞತೆಯ ಮಾತುಗಳನ್ನಾಡಿದರು. ಅವರ ಮನಸ್ಸು ಎಷ್ಟು ಮೃದುವಾಗಿತ್ತು, mellow ಆಗಿತ್ತು ಎಂಬುದನ್ನು ಆಗ ಯಾರೂ ಕಾಣಬಹುದಿತ್ತು.

ಹೆಚ್ಚು ಹೊತ್ತು ಮಾತನಾಡಿಸುತ್ತ ಕುಳಿತು ಅವರನ್ನು ಆಯಾಸಗೊಳಿಸಬಾರದೆಂದು, ಅವರು ಶೀಘ್ರ ಗುಣಮುಖರಾಗಿ ಮೈಸೂರಿಗೆ ಹಿಂದಿರುಗಲು ನನ್ನ ಶುಭಹಾರೈಕೆಯನ್ನು ತಿಳಿಸಿ, ಹೊರಡುವ ಸೂಚನೆ ಕೊಟ್ಟೆ. ಅವರಲ್ಲಿ ಆರೇಳು ತಿಂಗಳಿಂದ ಉಳಿದಿದ್ದ ಗೌರವ

ಗ್ರಂಥ ಸಂಬಂಧಿ ಲೇಖನಗಳೆಲ್ಲವನ್ನೂ ಹಿಂದಕ್ಕೆ ಕೊಟ್ಟರು. ಅಚ್ಚಾದ ಮೇಲೆ ಅದನ್ನು ಅವರು ಕಾಣದಿದ್ದರೂ ಆ ಮುಂಚೆ ಅವನ್ನು ಓದಿದ್ದರೆಂಬುದಷ್ಟೇ ನಮಗೆ ಸಮಾಧಾನ ತಂದಿದೆ. ತಮ್ಮ ಕೃತಿಗಳ ಪರಿಚಯಾತ್ಮಕ ಸಮೀಕ್ಷಾ ಲೇಖನ ಬರೆದಿದ್ದ ಗೆಳೆಯ ಶ್ರೀ ಜೋಶಿ ಅವರ ಲೇಖನದ ಮುಕ್ತಾಯ ವಾಕ್ಯಗಳನ್ನು ವಿಶೇಷವಾಗಿ ನೆನಪಿಸಿಕೊಂಡರು. ''.... ಕೆಲವರಿಗೆ ಅಂತ್ಯ ಸಮೀಪಿಸಿದಂತೆ ಮರಣಾಂತರದ, ಜನ್ಮಾಂತರದ ಚಿಂತೆ ಆರಂಭವಾಗುತ್ತದೆ. ಹಿಂದೆ ಹಣವನ್ನು ಗಳಿಸುವಾಗ ಯಾರಿಗೆ ಏನು ಅನ್ಯಾಯ ಮಾಡಿ, ಕಷ್ಟ ಕೊಟ್ಟೆ; ಅದಕ್ಕೆ ನಾನು ಯಾವ ಶಿಕ್ಷೆ ಎದುರಿಸಬೇಕಾದೀತು ಎಂದೆಲ್ಲ ಗಾಬರಿಯಾಗುತ್ತದೆ. ಅದೇ ತನ್ನ ಸಂಪಾದನೆಯೆಲ್ಲ ಧರ್ಮದಿಂದ ಮಾಡಿದ್ದು ಎಂಬ ವಿಶ್ವಾಸವಿರುವವನಿಗೆ ಇಂತಹ ಚಿಂತೆಗಳಿರುವುದಿಲ್ಲ. ಅಂಥವನಿಗೆ ತನ್ನ ಸಂಪತ್ತಿನಿಂದ ಒಂದು ವಿಧದ ಸ್ವಾತಂತ್ರ್ಯ ಸಮಾಧಾನಗಳಿರುತ್ತವೆ. ತಾನು ಯಾರನ್ನೂ ವಂಚಿಸಬೇಕಿಲ್ಲ ಸುಳ್ಳು ಹೇಳಬೇಕಿಲ್ಲ ಸಾಲ ಕೊಟ್ಟವರನ್ನು ತಪ್ಪಿಸಿ ಓಡಬೇಕಿಲ್ಲ; ದೇವತೆಗಳಿಗೆ ಸಲ್ಲಿಸಬೇಕಾದದ್ದನ್ನು ನಿಲ್ಲಿಸಿಕೊಂಡೆನೆಂಬ ಭೀತಿಯಿಲ್ಲ ಎಂದುಕೊಂಡು ಸುಖಿಯಾಗಿರುತ್ತಾನೆ....'' ಎಂಬ ಸೊಕ್ರೆಟೀಸ್-ಸಿಫಾಲೆಸ್‌ರ ಮಾತುಗಳನ್ನು ಉದ್ಧರಿಸಿ, 'ಸಿಫಾಲೆಸ್‌ನ ಈ ಯೋಗವನ್ನು ಇನಾಮದಾರರು ನಡೆಸಿಕೊಂಡು ಬಂದಿದ್ದಾರೆ' ಎಂಬಂತೆ ಶ್ರೀ ಜೋಶಿ ತಮ್ಮ ಲೇಖನವನ್ನು ಮುಗಿಸಿದ್ದರು. ಇದನ್ನು ಸ್ಮರಿಸಿ, ಗದ್ಗದ ಕಂಠದಿಂದ "I didn't know that he had so much of regard towards me. I am grateful for it. I didn't know I deserved so much." ಎಂದರು. (ಇದನ್ನು ಇನ್ನೂ ನಾಲ್ಕಾರು ಮಂದಿ ಗೆಳೆಯರೊಡನೆ ಹೇಳಿಕೊಂಡಿದ್ದರೆಂದೂ ಈಚೆಗೆ ತಿಳಿಯಿತು). ಅವರ ಮಾತಿನಲ್ಲಿ ಮುಖದಲ್ಲಿ ಒಂದು ಸಮಾಧಾನ, ಸಂತೃಪ್ತ ಭಾವ ನೆಲೆಸಿದ್ದವು. ತಾವು ಮಾಡಬೇಕೆಂದುಕೊಂಡಿದ್ದುದನ್ನು ಮಾಡಿ ಮುಗಿಸಿದ, ಬದುಕಬೇಕೆಂದು ಬಯಸಿದಂತೆ ಬದುಕಿದ, ಸಮಾಜಕ್ಕೆ ಲೋಕಕ್ಕೆ ಸಲ್ಲಿಸಬೇಕೆಂದಿದ್ದುದನ್ನು ಸಲ್ಲಿಸಿದ ಕೃತಕೃತ್ಯತೆ, ಧನ್ಯತಾಭಾವ ಆ ಮಾತುಗಳಲ್ಲಿತ್ತು. ಅಂಥ ಸಮಾಧಾನ ಬಹುಮಂದಿಗೆ ಕೊನೆಗಾಲದಲ್ಲಿ ದೊರೆಯದ ಭಾಗ್ಯ.

ಹೊರಡುವ ಮುನ್ನ ಅವರ ಎರಡೂ ಹಸ್ತಗಳನ್ನು ನನ್ನ ಕೈಗಳಲ್ಲಿ ಹಿಡಿದು ಕಣ್ಣಿಗೊತ್ತಿಕೊಂಡೆ. ತುಂಬ ಆತ್ಮೀಯತೆಯಲ್ಲಿ ವಿಶ್ವಾಸದಲ್ಲಿ 'So kind of you' ಎಂದು ಮೃದುವಾಗಿ ಅವನ್ನು ಅಮುಕಿದರು. ಹಿಂದಿನಂತೆ ಸಶಕ್ತ ಹಸ್ತಗಳಾಗಿರದೆ ಅವು ಕೃಶವಾಗಿ ದುರ್ಬಲವಾಗಿದ್ದವು. ರಷ್ಯನ್ ಕಲಾವಿದ ಕಾನ್‌ಸ್ಟಂಟಿನ್ ಸ್ಟಾನಿಸ್ಲೊವ್‌ಸ್ಕಿಯ ಮುಖಚಹರೆಯನ್ನು ಸುಮಾರು ಹೋಲುವಂತಿದ್ದ ಅವರ ಮುಖ ನಿಸ್ತೇಜವಾಗಿತ್ತು. ಆದರೆ ಕಣ್ಣುಗಳಲ್ಲಿನ ಕಾಂತಿ ಸ್ವಲ್ಪವೂ ಮಾಸಿರಲಿಲ್ಲ ; ಹೊಳಪು ಕುಗ್ಗಿರಲಿಲ್ಲ. "He is of very strong will, nature and temper. He never expresses or gives expression to his emotions" ಎಂದು ಅವರ ಮನಃಸ್ಥೈರ್ಯ, ಸಂಯಮಗಳನ್ನು ಕುರಿತು ಅವರನ್ನು ದೀರ್ಘಕಾಲದಿಂದ ಬಲ್ಲವರಾಗಿದ್ದ ಶ್ರೀ ಜೋಶಿ ಒಮ್ಮೆ ನನಗೆ ಹೇಳಿದ್ದರು ; ಅವರನ್ನು

ಬಲ್ಲವರಿಗೆಲ್ಲ ಅದೆಷ್ಟು ನಿಜವೆಂದು ಗೊತ್ತಾಗುತ್ತಿತ್ತು. ಆದ್ದರಿಂದ ಇಷ್ಟನ್ನು ಅವರು ಕಾಣಿಸಿದ್ದೇ ಹೆಚ್ಚೆನ್ನಬೇಕು, ಅತಿಶಯವೆನ್ನಬೇಕು. ಮಾತಿನಲ್ಲಿ ತಮ್ಮ ವಿಶ್ವಾಸಾಭಿಮಾನಗಳನ್ನು ಹೇಳಿ ಮುಗಿಸದೆ ಆಂತರ್ಯದಲ್ಲಿಟ್ಟುಕೊಂಡು ಪೋಷಿಸುವ ಸ್ವಭಾವ ಅವರದು. ಅಂಥವರಿಗೆ "The affections are more reticent than the passions and their expression more subtle."

ಪುಣೆಯಿಂದ ಹಿಂದಿರುಗಿ ಬಂದು ನನ್ನ ಎಂದಿನ ಯಾಂತ್ರಿಕ ದಿನಚರಿಯಲ್ಲಿ ಮುಳುಗಿದ್ದಾಗ ಇನಾಂದಾರರು ತೀರಿಕೊಂಡ ಸುದ್ದಿ ತಿಳಿಯಿತು. ಪೂರ್ಣಿಮೆಯಂದು ಎಂದು ಶ್ರೀ ಜೋಶಿ ತಿಳಿಸಿದರು. ತಮ್ಮ ಬದುಕು ಸಾಹಿತ್ಯಗಳಲ್ಲಿ ಉದ್ದಕ್ಕೂ ಚೆಲುವನ್ನು ಮೆಚ್ಚಿ ಆರಾಧಿಸಿ, ತಮ್ಮ ಹೃದಯ ಮನಸ್ಸುಗಳಲ್ಲಿ ಅದನ್ನು ತುಂಬಿಕೊಂಡಿದ್ದು ತಮ್ಮ ಬರವಣಿಗೆಗಳಲ್ಲಿ ಅದನ್ನು ವಿಶೇಷವಾಗಿ ಹೊಮ್ಮಿಸಿದ್ದವರು ಇನಾಂದಾರರು. ಇಂಥವರು ಹುಣ್ಣಿಮೆಯ ದಿನವೇ ತೀರಿಕೊಂಡದ್ದು ಒಂದು ಆಕಸ್ಮಿಕವೇ ಆದರೂ ತುಂಬಾ ಅರ್ಥಪೂರ್ಣವಾದ್ದು. ಪುನಃ ಶ್ರೀ ಜೋಶಿಯವರೇ ಹೇಳಿದಂತೆ, ತಮ್ಮ ಕೊನೆಯ ಕ್ಷಣಗಳಲ್ಲಿಯೂ ಇನಾಂದಾರರು ನಿಸ್ಸಂದೇಹವಾಗಿ ತಾವು 'ನವಿಲು ನೌಕೆ' ಕಾದಂಬರಿಯಲ್ಲಿ ಸುವಿಸ್ತಾರವಾಗಿ ಕಾಣಿಸಿರುವ ಕೆರೆಯ ಮೇಲಿನ ಹುಣ್ಣಿಮೆಯ ಚೆಲುವಿನ ದೃಶ್ಯದ ಅನ್ಯಾದೃಶ ಸೊಬಗನ್ನು ನೆನೆಯುತ್ತ, ಅದನ್ನು ತಮ್ಮ ಮನಃಪಟಲದಲ್ಲಿ ಕಾಣುತ್ತ, ತಮ್ಮ ಬದುಕನ್ನು ಮುಗಿಸಿಕೊಂಡಿರಬೇಕು. "It was haunting him throughout and it must have haunted him on that day too. He loved beauty and it compensated and consoled him throughout" ಎಂಬುದೂ ಜೋಶಿಯವರದೇ ಮಾತು. ಅದು ತುಂಬ ಮಹತ್ವದ್ದೆನ್ನಿಸಿದೆ.

ಹಿಂದೆ ವಿಸೀ - ಇನಾಂದಾರ್ - ಜೋಶಿ - ರಾವ್‌ಬಹದ್ದೂರರೊಡನೆ ಬಿಜಾಪುರಕ್ಕೆ ಹೋಗಿದ್ದುದನ್ನು ಉಲ್ಲೇಖಿಸಿದ್ದೇನೆ : ಅಲ್ಲಿಯ ಅಪೂರ್ಣ ಕಟ್ಟಡ 'ಬಾರಾಕಮಾನ್' ಮುಂದೆ ಒಂದು ದೊಡ್ಡಕಲ್ಲಿನ ಗೋಡೆಗೊರಗಿ ಅದರ ನೆಳಲಿನಲ್ಲಿ ನಿಂತು, ಹಾಳು ಸುರಿಯುತ್ತಿದ್ದ ಆ ಪ್ರದೇಶವನ್ನೂ ಅಲ್ಲಿನ ಶೂನ್ಯವನ್ನೂ ದಿಟ್ಟಿಸಿ ಕಣ್ತುಂಬ ತುಂಬಿಕೊಳ್ಳುತ್ತ ನೋವಿನ ದನಿಯಲ್ಲಿ "Death, death, everywhere death—"ಎಂದು ವಿಸೀ ಕೊರಗಿದಾಗ, ಹತ್ತಿರವೇ ನಿಂತಿದ್ದ ಇನಾಂದಾರರು ತಕ್ಷಣ "but it is the cradle of life...." ಎಂದು ವಿಸೀ ಅವರ ಮಾತಿಗೆ ಪೂರಕವಾಗಿ ನುಡಿದು, ಆ ವಾಕ್ಯಕ್ಕೆ ತುಂಬಾ ಸಮರ್ಪಕವೆನ್ನಬಹುದಾದ ಮುಕ್ತಾಯವನ್ನು ಕೊಟ್ಟಿದ್ದರು. ಅದು ಇನಾಂದಾರರ ನಂಬಿಕೆಯೂ ಆಗಿತ್ತೆನ್ನಬೇಕು. ಸಾವು ಅವರ ಪಾಲಿಗೆ ಬದುಕಿನ ತೂಗುತೊಟ್ಟಿಲು. ಅದರ ಗತಿ ಅವಿರತವಾಗಿ ಮುಂದುವರಿಯುತ್ತಿರುವಂಥದು. ಇಂದು ಇನಾಂದಾರರು ನಮ್ಮೊಡನಿಲ್ಲ; ಆದರೇನು, ಅವರ ನೆನಪು ನಮ್ಮಲ್ಲಿ ಜೀವಂತವಾಗಿರುವವರೆಗೂ ಅವರು ನಮ್ಮೊಡನೆಯೇ ಇರುತ್ತಾರೆ, ಇದ್ದಾರೆ....

("ಕಸ್ತೂರಿ", ಏಪ್ರಿಲ್ 1988)

– ಎಂ.ವಿ. ವೆಂಕಟೇಶ ಮೂರ್ತಿ

ಪರಿವಿಡಿ

ಪ್ರಸ್ತಾವನೆ

ನಲವತ್ತರ ದಶಕದ ಆರಂಭ ಕಾಲದಲ್ಲಿ ನಾನು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಮೊದಲ ಬಾರಿಗೆ ವಿ.ಎಂ. ಇನಾಂದಾರರ ಹೆಸರನ್ನು ಗಮನಿಸಿದ್ದೆ. ನನ್ನ ಬಂಧುಗಳೊಬ್ಬರು ಮನೋಹರ ಗ್ರಂಥಮಾಲೆಯ ಚಂದಾದಾರರಾಗಿದ್ದರು. ಮಾಲೆಯಲ್ಲಿ ಪ್ರಕಟವಾಗುತ್ತಿದ್ದ ಪ್ರತಿಯೊಂದು ಪುಸ್ತಕದಲ್ಲಿಯೂ, ಅಲ್ಲಿಯವರೆಗೆ ಪ್ರಕಟವಾಗಿದ್ದ ಮಾಲೆಯ ಪುಸ್ತಕಗಳ ಪಟ್ಟಿಯೊಂದು ಇರುತ್ತಿತ್ತು. ಆ ಪಟ್ಟಿಯಲ್ಲಿರುತ್ತಿದ್ದ ಒಂದು ಹೆಸರು 'ಎರಡು ಧ್ರುವ' — ವಿ.ಎಂ. ಇನಾಂದಾರ್. ನಾನೇನೂ ಆ ಪುಸ್ತಕ ನೋಡಿರಲಿಲ್ಲ, ಓದಿರಲಿಲ್ಲ, ಆದರೆ ಅದರ ಹೆಸರು ಮಾತ್ರ, ಇತರ ಕೆಲವು ಪುಸ್ತಕಗಳ ಹೆಸರುಗಳೊಡನೆ ಬಾಯಿಪಾಠವಾಗಿತ್ತು. 'ಎರಡು ಧ್ರುವ' ಎಂಬುದೊಂದು ಪುಸ್ತಕ ; ವಿ.ಎಂ. ಇನಾಂದಾರ್ ಎಂಬುವರೊಬ್ಬರು ಲೇಖಕರು ; ಇದು ಸ್ವತಂತ್ರ ಪುಸ್ತಕ ಅಲ್ಲ, ಖಾಂಡೇಕರ್ ಎನ್ನುವವರ ಮರಾಠಿ ಪುಸ್ತಕದ ಅನುವಾದ — ಇಷ್ಟು ವಿಷಯ ನನಗೆ ತಿಳಿದಿದ್ದವು. ಎಂಟೊಂಬತ್ತು ವರ್ಷದ ಹುಡುಗನಾಗಿದ್ದ ನನಗೆ ಕೆಲವು ಸಮಸ್ಯೆಗಳೂ ತೋರಿದವು. ಮೊದಲನೆಯದಾಗಿ, ಮಲೆನಾಡಿನ ಮೂಲೆಯ ಹಳ್ಳಿ ಹುಡುಗನಾದ ನನಗೆ ಇನಾಂದಾರ್ ಎಂಬ ಹೆಸರು, ಅದಕ್ಕಿಂತ ಹೆಚ್ಚಾಗಿ ಖಾಂಡೇಕರ್ ಎಂಬ ಹೆಸರು ವಿಚಿತ್ರವಾಗಿ ತೋರುತ್ತಿದ್ದವು. ಎರಡನೆಯದಾಗಿ, 'ಎರಡು ಧ್ರುವ' ಎನ್ನುವುದು ಸರಿಯೆ ? ಇನ್ನೊಬ್ಬ ಧ್ರುವ ಯಾರು ? ಅವನಿದ್ದರೂ 'ಇಬ್ಬರು ಧ್ರುವ' ಆಗಬೇಕಾಗಿತ್ತಲ್ಲವೆ ? ಎಂಬ ಅನುಮಾನಗಳೂ ಕಾಡುತ್ತಿದ್ದವು. ಅಧ್ಯಾಪಕರು ಒಬ್ಬಿಬ್ಬರಲ್ಲಿಯೂ ನಾನು ಈ ಪ್ರಶ್ನೆಗಳನ್ನು ಎತ್ತಿದ್ದುಂಟು. ಆದರೆ ಅದರಿಂದ ಪ್ರಯೋಜನವೇನೂ ಆಗಲಿಲ್ಲ. ಈ ಸಮಸ್ಯೆಗಳು ಬಗೆಹರಿಯಲು ಮುಂದೆ ಮೂರು ನಾಲ್ಕು ವರ್ಷಗಳೇ ಹಿಡಿದವು.

ನನ್ನ ಹದಿಹರೆಯದ ಮಧ್ಯದಲ್ಲಿ, ಮೊದಲನೆ ಸಲ, ಕಾಸರಗೋಡು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಮೈಸೂರಿನಲ್ಲಿ ಉಷಾ ಸಾಹಿತ್ಯಮಾಲೆ ಎಂಬೊಂದು ಪ್ರಕಟಣ ಸಂಸ್ಥೆ ಸುಮಾರು ಅದೇ ಕಾಲಕ್ಕೆ ಸ್ಥಾಪನೆಗೊಂಡು ಒಂದೇ ಬಗೆಯ ಮುಖಚಿತ್ರಗಳ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿತ್ತು. ಆ ಪುಸ್ತಕಗಳು ಸಮ್ಮೇಳನದಲ್ಲಿ ಮಾರಾಟಕ್ಕೆ ಬಂದಿದ್ದವು. ಅವುಗಳಲ್ಲಿ ಒಂದು 'ಕನಸಿನ ಮನೆ' ಎಂಬ ಕಾದಂಬರಿ. ಅದನ್ನು ಬರೆದವರು ವಿ.ಎಂ. ಇನಾಂದಾರ್. ಅದನ್ನು ನಾನು ಕೊಂಡುಕೊಂಡೆ. ಊರಿಗೆ ಬರುವುದರೊಳಗೆ ಓದಿ ಮುಗಿಸಿದೆ. ನನ್ನ ಮನಸ್ಸಿನಲ್ಲಿ ಒಂದು ಹೊಸ ಪ್ರಪಂಚದ ಸೃಷ್ಟಿಯಾಗಿತ್ತು. ಅತ್ಯಂತ ಕುತೂಹಲಕಾರಿಯಾದ ಆ ಬರವಣಿಗೆಯ ಸೊಗಸು ನನ್ನನ್ನು ಸಂಪೂರ್ಣವಾಗಿ ಆಕರ್ಷಿಸಿತ್ತು. ಅಲ್ಲಿನ ಕಥಾನಾಯಕಿ ಮೋಹಿನಿ ಖಂಡಿತವಾಗಿಯೂ ನನಗಿಂತ ದೊಡ್ಡವಳಾಗಿದ್ದಳು. ಆದರೂ

ನಾನು ಅವಳನ್ನು ಮೋಹಿಸಿಬಿಟ್ಟಿದ್ದೆ! ಆ ಕಾದಂಬರಿಯ ಕೊರತೆಗಳು ವಿಮರ್ಶಕರ ಪಾಡು. ಅಲ್ಲಿನ ಸನ್ನಿವೇಶಗಳು, ಮೋಹಿನಿ ಪಾತ್ರಚಿತ್ರಣ, ಅವಳ ಅಸಹಾಯಕತೆ – ಇದೆಲ್ಲವೂ ಹದಿಹರೆಯದ ಹುಡುಗನ ಹೃದಯವನ್ನು ತುಂಬಿಕೊಂಡಿದ್ದವು. ನನ್ನ ಓದುಗರು ನಕ್ಕರೂ ಚಿಂತೆಯಿಲ್ಲ — ಬಹಳ ಕಾಲ ಮೋಹಿನಿ ನನ್ನ ಜೊತೆಗಾತಿಯಾಗಿದ್ದಳು ! ಅವಳು ಬಳಸಿದ ಸುಗಂಧ ದ್ರವ್ಯಗಳ ಕಂಪು, ಅವಳ ಸೀರೆ ನೆರಿಗೆಯ ಸದ್ದು, ಅವಳ ಕೈಬಳೆಗಳ ನಿನಾದ ನನ್ನನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದವು. ಅದು ಎಷ್ಟರಮಟ್ಟಿಗೆ ಗಾಢವಾಗಿತ್ತು ಎಂದರೆ ನಾನು ಮೊದಲ ಸಲ ಮುಂಬಯಿಗೆ ಹೋದಾಗ, 'ಕನಸಿನ ಮನೆ'ಯಲ್ಲಿ ಉಲ್ಲೇಖಗೊಂಡ ಬೇರೆ ಬೇರೆ ಸ್ಥಳಗಳನ್ನು ಕಂಡಾಗ, ಅವುಗಳ ಹೆಸರು ಕೇಳಿದಾಗ, ನನಗೆ ಮೋಹಿನಿ ಇಲ್ಲೇ ಎಲ್ಲೋ ಇದ್ದಿರಬೇಕೆಂದು ಅನ್ನಿಸುತ್ತಿತ್ತು ! ಕೆಲವು ತರುಣಿಯರು ಮೋಹಿನಿಯಂತೆಯೇ ಕಾಣಿಸಿದ್ದೂ ಉಂಟು ! ಹೀಗೆ ಇನಾಂದಾರರರೂ, ಅವರ ಕೃತಿಗಳೂ ನನ್ನ ಮನಸ್ಸಿನಲ್ಲಿ ಪ್ರವೇಶ ಗಳಿಸಿದವು.

ಮುಂದೆ ಇನಾಂದಾರರ ಕೃತಿಗಳು ಪ್ರಕಟವಾದಂತೆಲ್ಲ ಓದುತ್ತ ಬಂದೆ. ನಾನು ಪದವಿ ತರಗತಿಗಳಲ್ಲಿ ಓದುತ್ತಿದ್ದ ದಿನಗಳಲ್ಲಿ ಅವರ ಒಂದೆರಡು ಕಾದಂಬರಿಗಳನ್ನು ವಿಮರ್ಶಿಸಿಯೂ ಇದ್ದೆ! ಆದರೆ ಅವರನ್ನು ಮುಖತಃ ನೋಡುವ ಅವಕಾಶಕ್ಕೆ ಅನೇಕ ವರ್ಷ ಕಾಯಬೇಕಾಯಿತು. ಅರವತ್ತರ ದಶಕದ ಮಧ್ಯಭಾಗದಲ್ಲಿ ಒಮ್ಮೆ ಮೈಸೂರಿನ ಗೀತಾ ಬುಕ್ ಹೌಸ್‌ನಲ್ಲಿ ತೀರ ಅನಿರೀಕ್ಷಿತವಾಗಿ ಅವರ ಭೇಟಿಯಾಯಿತು. ನಮ್ಮಿಬ್ಬರಿಗೂ ಬಹಳ ಬೇಕಾದವರಾಗಿದ್ದ ಕು.ಶಿ. ಹರಿದಾಸ ಭಟ್ಟರು ನಮ್ಮನ್ನು ಪರಿಚಯಿಸಿದರು. ನಾನು ಆಗಷ್ಟೇ ಅಮೆರಿಕೆಯಿಂದ ಹಿಂದಿರುಗಿದ್ದೆ. ಇನಾಂದಾರರು ಉಡುಪಿಯ ಕಾಲೇಜೊಂದರಲ್ಲಿ ಪ್ರಿನ್ಸಿಪಾಲರಾಗಿದ್ದರೆಂದು ನೆನಪು. ಮೊದಲ ಪರಿಚಯದಲ್ಲಿಯೇ ನಾವು ಒಬ್ಬರಿಗೊಬ್ಬರು ಹತ್ತಿರದವರಾದೆವು. ಈ ಪರಿಚಯ ಸ್ನೇಹವಾಗಿ, ಸ್ನೇಹ ಆತ್ಮೀಯತೆಯಾಗಿ, ಆತ್ಮೀಯತೆಯನ್ನು ಮೀರಿದ ಬಂಧುತ್ವ ವಾಗಿ ಮಾರ್ಪಡಲು ಬಹಳ ಕಾಲ ಹಿಡಿಯಲಿಲ್ಲ.

ಇನಾಂದಾರರು ಉಡುಪಿಯಿಂದ ಶಿವಮೊಗ್ಗೆಗೆ ಹೋದರು ; ಬೆಂಗಳೂರಿಗೆ ಬಂದರು. ಒಂದೆರಡು ಸಲ ವಿದೇಶಗಳಿಗೂ ಹೋಗಿ ಬಂದರು. ಕೊನೆಗೆ ಮೈಸೂರನ್ನು ಆಯ್ದುಕೊಂಡರು. ಬೆಂಗಳೂರಿನ ತಮ್ಮ ಮನೆಯನ್ನು ಮಾರಿ, ಮೈಸೂರಿನಲ್ಲಿ ಒಂದು ಮನೆಯನ್ನು ಕೊಂಡರು. ನಿವೃತ್ತಿ ಜೀವನಕ್ಕೆ ಅದರಲ್ಲೂ ಅಧ್ಯಯನಮಗ್ನರಾದವರಿಗೆ ಮೈಸೂರಿಗಿಂತಲೂ ಪ್ರಶಸ್ತವಾದ ಜಾಗ ಇನ್ನೊಂದಿಲ್ಲವೆಂದು ಅವರು ಆಗಾಗ ಹೇಳುತ್ತಿದ್ದರು. ಅವರು ಮೈಸೂರಿಗೆ ಬಂದು ನೆಲೆಸಿದ ಮೇಲೆ ನಮ್ಮ ಸಂಪರ್ಕ ಹೆಚ್ಚಾಯಿತು. ಮತ್ತೆ ಮತ್ತೆ ನಾವು ಸಂಧಿಸುತ್ತಿದ್ದೆವು ; ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದೆವು. ಪೂರ್ವಜನ್ಮದ ಸಂಬಂಧ ವೆಂಬೊಂದು ಮಾತನ್ನು ನಾವು ಆಗಾಗ ಆಡುತ್ತೇವೆ ; ಕೇಳುತ್ತೇವೆ. ನನಗೆ ಪೂರ್ವಜನ್ಮದಲ್ಲಿ ನಂಬುಗೆಯಿಲ್ಲ. ಆದರೆ ಇನಾಂದಾರರನ್ನು ಕಂಡ ಮೇಲೆ ಆ ಬಗೆಯ ಸಂಬಂಧವನ್ನು

ತಿರಸ್ಕರಿಸಲಾರದವನಾಗಿದ್ದೇನೆ. ನನ್ನನ್ನು ಅವರು ಪ್ರೀತಿಯಿಂದ ಕಂಡದ್ದಷ್ಟೇ ಅಲ್ಲ, ಕೆಲವು ಸಂದರ್ಭಗಳಲ್ಲಿ ತೀರ ಅಗತ್ಯವಾಗಿದ್ದ ನೆರವನ್ನೂ ಕೊಟ್ಟರು ! ಅವರು ಯಾವುದಾದರೂ ಕೆಲಸವನ್ನು ಒಪ್ಪಿಕೊಂಡ ಮೇಲೆ ನಾನು ಆ ವಿಷಯವಾಗಿ ಚಿಂತಿಸಬೇಕಾಗಿರಲಿಲ್ಲ. ನನ್ನ ಬದುಕಿಗೆ ಬಂದ ಅಪರೂಪದ ವ್ಯಕ್ತಿಗಳು ಕೆಲವೇ ಕೆಲವರಲ್ಲಿ ಇನಾಂದಾರರು ಒಬ್ಬರಾಗಿದ್ದರು.

ನಾನು ಗುಲಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಯೆಂದು ನೇಮಕಗೊಂಡ ಸುದ್ದಿ ಪ್ರಕಟವಾದ ದಿನ ಅವರು ನನ್ನ ಬಳಿ ಬಂದು ಅಭಿನಂದಿಸಿ, ಅಪ್ಪಿಕೊಂಡು, ಆಡಿದ ಮಾತುಗಳನ್ನು ನೆನಪಿಸಿಕೊಂಡಾಗಲೆಲ್ಲ ಕಣ್ಣು ಮಂಜಾಗುತ್ತವೆ. ಅದೆಂಥ ಪ್ರೀತಿ, ಅಭಿಮಾನ ! ಅದೇ ಸಂದರ್ಭದಲ್ಲಿ ವ್ಯವಸ್ಥಿತವಾಗಿದ್ದ ಒಂದು ಭೋಜನಕೂಟದಲ್ಲಿಯೂ ಅವರು ಭಾಗವಹಿಸಿ ನನ್ನ ಬಗೆಗೆ ಒಳ್ಳೆಯ ಅನೇಕ ಮಾತುಗಳನ್ನು ಆಡಿ ಶಾಲು ಹೊದ್ದಿಸಿದ ನೆನಪು ಹಸಿರಾಗಿದೆ. ಆದರೆ ಅದೇ ನಮ್ಮ ಕೊನೆಯ ಭೇಟಿಯಾಗುತ್ತದೆಂಬುದು ನನ್ನ ಊಹೆಗೂ ಬಂದಿರಲಿಲ್ಲ. ನಾನು ಗುಲಬರ್ಗಾಕ್ಕೆ ಹೋದೆ. ಅವರು ಕೆಲವು ಕಾಲ ಅಮೆರಿಕೆ ಕೆನಡಾಗಳಿಗೆ ಹೋದರು ; ದೇಶಕ್ಕೆ ಹಿಂದಿರುಗಿದ ಮೇಲೆ ಪುಣೆಗೆ ಹೋದರು. ಈ ಎಲ್ಲ ಕಡೆಗಳಿಂದಲೂ ಅವರು ಕಾಗದ ಬರೆಯತ್ತಿದ್ದರು ; ನಾನೂ ಬರೆಯುತ್ತಿದ್ದೆ. ಇನಾಂದಾರರ ಅನೇಕ ಸಂತೋಷದ ಕ್ಷಣಗಳಿಗೆ ನಾನು ಕಾರಣನಾಗಿದ್ದೆನೆಂದುಕೊಳ್ಳುವುದು ಒಂದು ಬಗೆಯ ಸಮಾಧಾನವನ್ನುಂಟು ಮಾಡುತ್ತದೆ. ಬೆಂಗಳೂರಿನಲ್ಲಿ ಡಾ. (ಶ್ರೀಮತಿ) ವಿಜಯಾ ಅವರು ಏರ್ಪಡಿಸಿದ್ದ ಇನಾಂದಾರ್ ಅಭಿನಂದನಾ ಸಮಾರಂಭದ ಒಂದು ಗೋಷ್ಠಿಯಲ್ಲಿ ಅಧ್ಯಕ್ಷನಾಗಿದ್ದೆ ; ಅವರ 'ಪಾಶ್ಚಾತ್ಯ ಕಾವ್ಯ ಮೀಮಾಂಸೆ'ಯ ಪ್ರಕಟಣೆಯ ಸಂದರ್ಭದಲ್ಲಿ ವ್ಯವಸ್ಥಿತವಾಗಿದ್ದ ಮೈಸೂರಿನ ಸನ್ಮಾನ ಸಭೆಗೆ ಅಧ್ಯಕ್ಷನಾಗಿದ್ದೆ. ನಾನೂ ಆ ಸಂದರ್ಭಗಳಲ್ಲಿ ಮಾತನಾಡಿದ್ದನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ''ಈ ಇಳಿವಯಸ್ಸಿನಲ್ಲಿ ನಮ್ಮನ್ನು ಮೆಚ್ಚುವವರು ಇದ್ದಾರೆಂಬುದೇ ನಮ್ಮಲ್ಲಿ ಉತ್ಸಾಹವನ್ನು ತರುತ್ತದೆ'' ಎಂದು ಅವರೊಮ್ಮೆ ಹೇಳಿದ್ದರು. ವಿಮರ್ಶಕರು ತಮ್ಮನ್ನು ಕಂಡ ರೀತಿ ಇನಾಂದಾರರಿಗೆ ಒಪ್ಪಿಗೆಯಾಗಿರಲಿಲ್ಲ. ''ಮಾವಿನ ಹಣ್ಣಿನಲ್ಲಿ ಅವರು ಕಿತ್ತಳೆಯ ರುಚಿಯನ್ನು ಬಯಸುತ್ತಾರೆ. ಕಿತ್ತಳೆಯಲ್ಲಿ ದಾಳಿಂಬೆಯನ್ನು ನಿರೀಕ್ಷಿಸುತ್ತಾರೆ'' ಎಂದು ಅವರು ಒಂದು ಸಂದರ್ಭದಲ್ಲಿ ಹೇಳಿದ್ದು ನನಗೆ ನೆನಪಿದೆ.

ಮೈಸೂರಿನಲ್ಲಿ ನಡೆಯಲಿದ್ದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗಿ ನಾನು ಗುಲಬರ್ಗಾದಿಂದ ಹೊರಟಿದ್ದೆ. ಕಾರು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಜವಾನನೊಬ್ಬ ಓಡುತ್ತಾ ಬಂದು ಅಂದಿನ ಅಂಚೆ ಕಾಗದಗಳ ಕಟ್ಟನ್ನು ಕೊಟ್ಟ. ಅದರಲ್ಲಿ ಇನಾಂದಾರರು ನನಗೆ ಬರೆದ, ಅಲ್ಲ ಬರೆಸಿದ, ಕಾಗದವಿತ್ತು. ಅದರಲ್ಲಿ ಅವರು ತಮ್ಮ ಅನಾರೋಗ್ಯದ ವಿಚಾರವನ್ನು ತಿಳಿಸಿ, ಸರ್ಕಾರದಿಂದ ಔಷಧೋಪಚಾರಕ್ಕೆ ಏನಾದರೂ ಸಹಾಯ ದೊರಕಿದ್ದಿದ್ದರೆ ಚೆನ್ನಾಗಿತ್ತು ಎಂದು ಸಂಕೋಚದಿಂದ ಹೇಳಿಕೊಂಡಿದ್ದರು. ಆ ಘಳಿಗೆಯಲ್ಲಿ ನನಗೆ ಆ ಕಾಗದ ಸಿಕ್ಕದಿದ್ದಿದ್ದರೆ ಏನೂ ಮಾಡಲಾಗುತ್ತಿರಲಿಲ್ಲ. ಮೈಸೂರಿಗೆ

ಬಂದೆ. ಮರುದಿನ ಬೆಳಿಗ್ಗೆ ಮುಖ್ಯಮಂತ್ರಿಯವರನ್ನು ಕಂಡು ವಿಚಾರ ಅವರ ಗಮನಕ್ಕೆ ತಂದೆ. ಅವರು ಒಡನೆಯೇ ನೆರವಿಗೆ ವ್ಯವಸ್ಥೆ ಮಾಡಿದರು. ನಾನು ಮೈಸೂರು ಬಿಡುವುದಕ್ಕಿಂತ ಮೊದಲೇ ಸರ್ಕಾರದ ಚೆಕ್ಕು ಪುಣೆಗೆ ಹೋಗಿತ್ತು! ಇದರಿಂದ ತಮ್ಮ ತಂದೆಯವರಿಗೆ ತುಂಬ ಸಂತೋಷವಾಗಿದೆಯೆಂದು ಮಗಳು ಜಾನಕಿಯವರು ನನಗೆ ಬರೆದಿದ್ದರು. ಈ ಕಡೆಯಿಂದ ಅವರನ್ನು ನೋಡಲು ಹೋದವರೊಡನೆ ಇನಾಂದಾರರು ಕರ್ನಾಟಕ ಸರ್ಕಾರದ ಔದಾರ್ಯವನ್ನು ಮೆಚ್ಚಿ ಮಾತಾಡುತ್ತಿದ್ದರಂತೆ. ಅದಕ್ಕೆ ನಾನು ಕಾರಣನೆಂಬ ಭಾವನೆ ಅವರಲ್ಲಿದ್ದಂತೆ ತೋರುತ್ತದೆ ('ಕಸ್ತೂರಿ', ಏಪ್ರಿಲ್ 1988 ; ಪುಟ 127) ! ವಾಸ್ತವವಾಗಿ ಅದು ಮುಖ್ಯಮಂತ್ರಿ ಹೆಗಡೆಯವರ ಔದಾರ್ಯವಾಗಿತ್ತು.

ಕೆಲವೇ ದಿನಗಳಲ್ಲಿ ಇನಾಂದಾರರು ತೀರಿಕೊಂಡ ವಿಷಯವನ್ನು ಆಕಾಶವಾಣಿಯಲ್ಲಿ ಕೇಳಿದೆ. ಸುಮಾರು ಎರಡು ದಶಕಗಳ ಸ್ನೇಹದ ಪುಟಗಳು ತೆರೆದುಕೊಂಡವು. ಅವರ ಸಂಪರ್ಕದಿಂದ ನಾನು ಪಡೆದಿದ್ದ ಬೆಳಕು ಮಾಧುರ್ಯಗಳನ್ನು ನೆನಪಿಸಿಕೊಳ್ಳುತ್ತ ಹೃದಯ ಭಾರವಾಯಿತು. ಆ ಘಳಿಗೆಯಲ್ಲಿ ಯಾರೊಡನಾದರೂ ಮಾತಾಡಬೇಕು ಎನ್ನಿಸಿತು. ಪುಣೆಗೆ ಫೋನ್ ಮಾಡಿದೆ. ಸಂಪರ್ಕ ಸಿಕ್ಕುವುದು ಸುಲಭವಾಗಿರಲಿಲ್ಲ; ಅಂತೂ ಸಿಕ್ಕಿತು. ನನಗೆ ಶ್ರೀಮತಿ ಜಾನಕಿ ಅವರೊಡನೆ ಮಾತಾಡಬೇಕೆನ್ನಿಸಿತ್ತು; ಆದರೆ ಅವರ ಯಜಮಾನರು ಆ ತುದಿಯಲ್ಲಿದ್ದರು. ಅವರಿಗೆ ನನ್ನ ಪರಿಚಯವಿರಲಿಲ್ಲ, ತಮ್ಮ ಮಾವ ಆಗಾಗ ನನ್ನ ವಿಚಾರ ಹೇಳುತ್ತಿದ್ದುದರಿಂದ ಪರೋಕ್ಷವಾಗಿ ನನ್ನ ಪರಿಚಯವಿದೆಯೆಂದು ಅವರು ಹೇಳಿದರು. ಅವರೊಡನೆ ಏನು ಮಾತನಾಡಬೇಕೆಂಬುದೇ ನನಗೆ ಹೊಳೆಯಲಿಲ್ಲ. ''ನನ್ನ ಬದುಕಿನಲ್ಲಿ ಏನೋ ಮುಕ್ಕಾದ ಅನುಭವ ಆಗುತ್ತಿದೆಯೆಂದು'' ಅವರಿಗೆ ಹೇಳಿದೆ. ಇನಾಂದಾರರು ತೀರಿಕೊಂಡು ಸುಮಾರು ಐದು ವರ್ಷಗಳೇ ಆದವು. ಈಗಲೂ ಅವರನ್ನು ನೆನಪಿಸಿಕೊಂಡರೆ ಅದೇ ಅನುಭವವಾಗುತ್ತದೆ. ಒಬ್ಬ ವ್ಯಕ್ತಿ ಮತ್ತೊಬ್ಬನ ಬದುಕನ್ನು ತುಂಬಿಕೊಳ್ಳುವುದೆಂದರೆ ಇದೇ ಇರಬೇಕು !

* * *

ಇನಾಂದಾರರು ಬದುಕಿದ್ದ ದಿನಗಳಲ್ಲಿಯೇ ಅವರಿಗೊಂದು ಗೌರವ ಗ್ರಂಥವನ್ನು ಅರ್ಪಿಸಬೇಕೆಂಬುದು ಅವರ ಕೆಲವು ಅಭಿಮಾನಿಗಳ ಆಸೆಯಾಗಿತ್ತು, ಅದಕ್ಕೆ ಎಂ.ವಿ. ವೆಂಕಟೇಶ ಮೂರ್ತಿಯವರು ಸೂತ್ರಧಾರರಾಗಿದ್ದರು. ಇನಾಂದಾರರ ಆಪ್ತ ಮಿತ್ರರಲ್ಲಿ ಒಬ್ಬರಾಗಿದ್ದ ಉಷಾ ಸಾಹಿತ್ಯ ಮಾಲೆಯ ರಾ. ನಾ. ಹಬ್ಬು ಅವರು ಗ್ರಂಥವನ್ನು ಪ್ರಕಟಿಸುವ ಜವಾಬ್ದಾರಿ ತೆಗೆದುಕೊಂಡಿದ್ದರು. ವ್ಯಾವಹಾರಿಕ ಕಾರಣಗಳಿಗಾಗಿ 'ಪ್ರೊಫೆಸರ್ ವಿ.ಎಂ. ಇನಾಂದಾರ್ ಅಭಿನಂದನ ಸಮಿತಿ'ಯೊಂದು ರಚನೆಯಾಯಿತು. ಕು.ಶಿ. ಹರಿದಾಸ ಭಟ್ಟ ಚೆನ್ನವೀರ ಕಣವಿ, ಡಾ॥ ಎಂ. ಚಿದಾನಂದ ಮೂರ್ತಿ, ವ್ಯಾಸರಾಯ ಬಲ್ಲಾಳ, ಕೆ.ಸಿ. ಶಿವಪ್ಪ

ರಾ.ನಾ. ಹಬ್ಬು, ಡಾ॥ ಶ್ರೀನಿವಾಸ ಹಾವನೂರ, ಸೂ. ಸುಬ್ರಹ್ಮಣ್ಯಂ, ಚಿ. ಶ್ರೀನಿವಾಸ ರಾಜು – ಇವರು ಸದಸ್ಯರಾಗಿದ್ದ ಸಮಿತಿಗೆ ನಾನೇ ಅಧ್ಯಕ್ಷನಾದೆ. ವೆಂಕಟೇಶ ಮೂರ್ತಿ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊತ್ತರು. ಸುಮಾರು ಅರ್ಧಶತಮಾನ ಕಾಲ ವಿ.ಎಂ. ಇನಾಂದಾರರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗೆ ಅಭಿನಂದನೆಗಳನ್ನು ಸಲ್ಲಿಸುವುದು, ಕೃತಜ್ಞತೆ ಸೂಚಿಸುವುದು ಈ ಗ್ರಂಥ ಗೌರವದ ಉದ್ದೇಶವಾಗಿತ್ತು. ಗ್ರಂಥವನ್ನು ಇನಾಂದಾರರ ಎಪ್ಪತ್ತೊಂದನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ (1983) ಪ್ರಕಟಿಸಬೇಕೆಂಬುದೂ ನಮ್ಮ ಅಪೇಕ್ಷೆಯಾಗಿತ್ತು.

ಕನ್ನಡ ನಾಡಿನ ಹಲವಾರು ಪ್ರಸಿದ್ಧ ಲೇಖಕರಿಗೆ ಲೇಖನ ಕೋರಿ ಒಂದು ಕಾಗದ, ನನ್ನ ಹೆಸರಿನಲ್ಲಿ ಹೋಯಿತು. ಆದರಲ್ಲಿ ಪುಸ್ತಕದ ಸ್ವರೂಪದ ಬಗೆಗೆ ಹೀಗೆ ಹೇಳಲಾಗಿತ್ತು: "ಶ್ರೀ ಇನಾಂದಾರ್ ಗೌರವ ಗ್ರಂಥದಲ್ಲಿ ಅವರ ಜೀವನ, ವ್ಯಕ್ತಿತ್ವ, ಕೃತಿಗಳನ್ನು ಕುರಿತಂತೆ ಒಂದೆರಡು ಲೇಖನಗಳಿರುತ್ತವೆ. ಜೊತೆಗೆ ಜಗತ್ತಿನ ಪ್ರಖ್ಯಾತವಾದ ಇಪ್ಪತ್ತೈದು ಕಾದಂಬರಿಗಳನ್ನು ಕುರಿತ ಇಪ್ಪತ್ತೈದು ವಿಮರ್ಶೆಯ ಲೇಖನಗಳಿರುತ್ತವೆ. ಲೋಕದ ಶ್ರೇಷ್ಠ ಸಾಹಿತ್ಯದ ಸ್ವರೂಪವನ್ನು ಕನ್ನಡಿಗರಿಗೆ ಪರಿಚಯಿಸುವುದರ ಜೊತೆಗೆ, ಕನ್ನಡ ವಿಮರ್ಶೆಯ ದಿಗಂತಗಳನ್ನು ವಿಸ್ತರಿಸುವುದೂ ಗ್ರಂಥದ ಉದ್ದೇಶವಾಗಿದೆ. ಅತ್ಯುತ್ತಮವಾದ ಸಾಹಿತ್ಯ ನಿರ್ಮಾಣಕ್ಕೆ ಶ್ರಮಿಸಿದ ಶ್ರೀ ಇನಾಂದಾರರಿಗೆ ಇದು ಪ್ರಿಯವಾದ ಕೆಲಸವಾಗುತ್ತದೆಂದೂ ನಮ್ಮ ನಂಬಿಕೆ."

ಸೂಚಿತವಾದ ಒಂದು ಕಾದಂಬರಿಯನ್ನು ಕುರಿತು ಡೆಮ್ಮೈ ಆಕಾರದ ಹತ್ತು ಹನ್ನೆರಡು ಪುಟಗಳಿಗೆ ಮೀರದ ಒಂದು ವಿಮರ್ಶಾತ್ಮಕವಾದ ಲೇಖನವನ್ನು ಬರೆದು ಕೊಡುವಂತೆ ಆ ಕಾಗದದಲ್ಲಿ ಲೇಖಕರನ್ನು ಪ್ರಾರ್ಥಿಸಲಾಗಿತ್ತು. "ಲೇಖನದ ಆರಂಭದಲ್ಲಿ ಒಂದು ಪುಟಕ್ಕೆ ಮೀರದಂತೆ ಲೇಖಕ ಹಾಗೂ ಅವನ ಒಟ್ಟು ಸಾಹಿತ್ಯದ ಸ್ಥೂಲ ಪರಿಚಯ ಇರಬೇಕು. ಲೇಖನದಲ್ಲಿ ಎಲ್ಲಾದರೂ ಒಂದೆರಡು ಪುಟಗಳಿಗೆ ಮೀರದಂತೆ ಕಾದಂಬರಿಯ ವಸ್ತುವಿನ ಸ್ಥೂಲ ನಿರೂಪಣೆ ಬರಬೇಕು. ಮಿಕ್ಕ ಭಾಗ ವಿಶ್ಲೇಷಣೆ, ವಿಮರ್ಶೆಗೆ ಮೀಸಲಾಗಿರಬಹುದು. ಮೂಲ ಪುಸ್ತಕವನ್ನು ಓದಿರದ ಕನ್ನಡ ಓದುಗರಿಗೂ ಆ ಪುಸ್ತಕದ ಪರಿಚಯ ಪೂರ್ಣವಾಗಿ ಆಗಬೇಕು" ಎಂಬ ಸೂಚನೆಗಳನ್ನು ಕೊಡಲಾಗಿತ್ತು. ಅದು ನಾವು ಆ ಪುಸ್ತಕವನ್ನು ಯೋಜಿಸಿದ ಬಗೆ. ಇನಾಂದಾರರ ಬಗೆಗೆ ಆದರಾಭಿಮಾನಗಳನ್ನು ತಾಳಿದ್ದ ಬಹುಮಂದಿ ಬರೆಯಲು ಒಡನೆಯೇ ಒಪ್ಪಿಕೊಂಡರು. ಅನಿವಾರ್ಯ ತೊಂದರೆಗಳಿಂದ ಕೆಲವರಿಗೆ ನಮ್ಮ ಆಹ್ವಾನವನ್ನು ಒಪ್ಪಿಕೊಳ್ಳುವುದು ಸಾಧ್ಯವಾಗಲಿಲ್ಲ.

ಇನಾಂದಾರರು ಬದುಕಿರುವಾಗಲೇ, ಅವರ ಎಪ್ಪತ್ತೊಂದನೆಯ ಹುಟ್ಟುಹಬ್ಬದಂದು, ಅಭಿನಂದನ ಗ್ರಂಥವಾಗಿ ಪ್ರಕಟವಾಗಬೇಕಿದ್ದ ಈ ಸಂಪುಟ, ಈಗ ಅವರು ತೀರಿಕೊಂಡು ಸುಮಾರು ಐದು ವರ್ಷಗಳ ಮೇಲೆ, ಅವರ ಎಪ್ಪತ್ತೆಂಟನೆಯ ಜನ್ಮದಿನದಂದು ನೆನಪಿನ ಗ್ರಂಥವಾಗಿ ಪ್ರಕಟವಾಗುತ್ತಿರುವುದು ವಿಷಾದದ ಸಂಗತಿಯಾದರೂ, ಸಮಾಧಾನದ

ಮಾತಾಗಿದೆ. ಸುಮಾರು ಏಳು ವರ್ಷಗಳ ಈ ವಿಳಂಬಕ್ಕೆ ಕಾರಣಗಳು ಹಲವು. ಲೇಖನಗಳು ಬರುವುದರಲ್ಲಿ ಆದ ವಿಳಂಬ, ಒಪ್ಪಿಕೊಂಡ ಕೆಲ ಲೇಖಕರು ಕೊನೇ ಘಳಿಗೆಯಲ್ಲಿ ತಮ್ಮ ಅಸಹಾಯಕತೆಯನ್ನು ಸೂಚಿಸಿದ್ದರಿಂದ ಬೇರೆಯವರನ್ನು ಕೇಳಬೇಕಾಗಿ ಬಂದ ಸಂದರ್ಭ, ಗ್ರಂಥ ಪ್ರಕಟಣೆಗೆ ಮುಂದೆ ಬಂದಿದ್ದ ಶ್ರೀ ಹಬ್ಬು ಅವರಿಗೆ ಒದಗಿದ ಅನಿರೀಕ್ಷಿತ ತೊಂದರೆಗಳು, ಅಭಿನಂದನ ಸಮಿತಿಯ ಕಾರ್ಯದರ್ಶಿಗಳ ವೇಗಕ್ಕೆ ತಕ್ಕಂತೆ ಅಧ್ಯಕ್ಷರು ಹೆಜ್ಜೆ ಹಾಕಲು ಸಾಧ್ಯವಾಗದೆ ಹೋದದ್ದು — ಇದೇ ಮೊದಲಾದ ಕಾರಣಗಳಿಂದ ಪ್ರಕಟಣೆ ವಿಳಂಬವಾಯಿತು. ಈ ಪುಸ್ತಕಕ್ಕೆ ಬರೆದ ಲೇಖಕರ, ಪುಸ್ತಕದ ಬಗೆಗೆ ಆಸಕ್ತರಾದ ಓದುಗರ, ಇನಾಂದಾರರ ಕುಟುಂಬವರ್ಗದವರ ತಾಳ್ಮೆಯನ್ನು ಪರೀಕ್ಷಿಸುವಂತಾಯಿತು. "ಕ್ಷಮಿಸಿ" ಎನ್ನುವುದೊಂದೇ ಈಗ ನಮಗಿರುವ ಮಾತು. ಅವರು ಕ್ಷಮಿಸುತ್ತಾರೆನ್ನುವ ಆಸೆ ನಮಗಿದೆ.

ನಾವು ಮೊದಲು ಉದ್ದೇಶಿಸಿದ್ದು ಈ ಪುಸ್ತಕದ ಮೂರನೆಯ ಭಾಗದಲ್ಲಿ, ಇಪ್ಪತ್ತೈದು ಲೇಖಕರ ಇಪ್ಪತ್ತೈದು ಕಾದಂಬರಿಗಳ ವಿಮರ್ಶೆಯನ್ನು, ಕೆಲಸ ಮುಗಿಯುವ ಹೊತ್ತಿಗೆ ಇದರಲ್ಲಿ ಮೂವತ್ತೊಂದು ಕಾದಂಬರಿಗಳು ಸೇರಿಕೊಂಡಿವೆ ! ಆ ಕಾದಂಬರಿಕಾರರ, ಕಾದಂಬರಿಗಳ ಹಾಗೂ ಈ ವಿಮರ್ಶಾತ್ಮಕ ಲೇಖನಗಳ ಆಧಾರದಿಂದ ಕಾದಂಬರಿ ಪ್ರಕಾರದ ಸ್ವರೂಪ, ಬೆಳವಣಿಗೆಗಳ ಪರಿಚಯವಾಗಬೇಕೆಂಬುದೂ ನಮ್ಮ ಮೂಲ ಆಶಯವಾಗಿತ್ತು. ಪೂರ್ತಿಯಾಗಿ ಹಾಗೆ ಆಗದಿರುವುದು ವಿಷಾದದ ಸಂಗತಿ. ಆದರೆ ನಮ್ಮ ಆಶಯದ ಸ್ಥೂಲ ಸ್ವರೂಪವಾದರೂ ಉಳಿದುಕೊಂಡಿರುವುದು ಸಮಾಧಾನವನ್ನು ತಂದಿದೆ. ಒಬ್ಬೊಬ್ಬ ಕಾದಂಬರಿಕಾರನ ಒಂದೊಂದು ಮುಖ್ಯ ಕೃತಿಯನ್ನು ನಾವು ಆಯ್ಕೆ ಮಾಡಿದ್ದೆವು. ಆದರೆ ಇಲ್ಲಿ ಒಬ್ಬ ಕಾದಂಬರಿಕಾರನ (ಹಾರ್ಡಿ) ಎರಡು ಕಾದಂಬರಿಗಳನ್ನು ಕುರಿತು ಪ್ರತ್ಯೇಕ ಲೇಖನಗಳಿವೆ. ಇನ್ನೊಂದು ಲೇಖನದಲ್ಲಿ ಗ್ರಹಾಂ ಗ್ರೀನನ ಮೂರು ಕಾದಂಬರಿಗಳ ವಿವೇಚನೆಯಿದೆ. ಈ ಎರಡು ಪ್ರಸಂಗಗಳು ಮಾತ್ರ ನಮ್ಮ ಮೂಲಸೂತ್ರದಿಂದ ಹೊರಗಾದವು. ಈ ಅಪವಾದಗಳಿಂದ ಗ್ರಂಥದ ವೈಶಿಷ್ಟ್ಯಕ್ಕೆ ಕುಂದುಂಟಾಗಿಲ್ಲವೆಂದೇ ನಮ್ಮ ಭಾವನೆ. ಲೇಖಕರಿಗೆ ನಾವು ಕೊಟ್ಟ ಸೂಚನೆಗಳನ್ನು ಅದೇ ಚೌಕಟ್ಟಿನಲ್ಲಿ ಎಲ್ಲರೂ ಸ್ವೀಕರಿಸಿ ದ್ದಾರೆಂದೂ ಹೇಳುವಂತಿಲ್ಲ. ಆದ್ದರಿಂದ ಲೇಖನಗಳ ಸ್ವರೂಪದಲ್ಲಿ ಸ್ವಲ್ಪ ವೈವಿಧ್ಯವಿದೆ. ನಮಗೆ ಬಂದ ಲೇಖನಗಳಲ್ಲಿ ನಾವು ಗಮನಾರ್ಹವಾದ ಯಾವ ಬದಲಾವಣೆಗಳನ್ನೂ, ತಿದ್ದುಪಡಿಗಳನ್ನೂ ಮಾಡಿಲ್ಲ. ಲೇಖಕರ ಅಭಿಪ್ರಾಯ, ಶೈಲಿಗಳಲ್ಲಾಗಲಿ, ಕೃತಿ-ವ್ಯಕ್ತಿ-ಸ್ಥಳ ಉಚ್ಚಾರಣೆಯ ರೂಪಗಳಲ್ಲಾಗಲಿ ಯಾವ ವ್ಯತ್ಯಾಸಗಳನ್ನೂ ಮಾಡಿಲ್ಲ. ಅವರವರು ಬಳಸಿದುದನ್ನು ಹಾಗೆಯೇ ಉಳಿಸಿಕೊಂಡಿದೆ. ಒಂದೆರಡು ಕಡೆ ಬಳಕೆಗಳು ಸಮರ್ಪಕವಲ್ಲ ಎಂದು ನಮಗನ್ನಿಸಿದ್ದರೂ ಅವನ್ನು ಬದಲಿಸುವ ಗೋಜಿಗೆ ಹೋಗಿಲ್ಲ.

ಇಲ್ಲಿ ಚರ್ಚಿತವಾಗಿರುವ ಲೇಖಕರನ್ನೂ, ಕಾದಂಬರಿಗಳನ್ನೂ ಗಮನಿಸಿದಾಗ ಒಂದು ಪ್ರಶ್ನೆ ಏಳುವುದು ಸಹಜವಾಗಿದೆ. ವಿಶ್ವ ಎಂದರೆ ಯಾವುದು ಎನ್ನುವುದೇ ಆ ಪ್ರಶ್ನೆ! ಇಲ್ಲಿ

ಪ್ರಾತಿನಿಧ್ಯ ಪಡೆದ ಯೂರೋಪ್, ಅಮೆರಿಕಾ ಭೌಗೋಳಿಕ ಪ್ರದೇಶ, ಭಾಷೆಗಳ ಹೊರಗೆ ಇನ್ನೇನೂ ಇಲ್ಲವೆ ? ಎಂದು ಅಗತ್ಯವಾಗಿ ಕೇಳಬೇಕಾಗುತ್ತದೆ. ಭಾರತದಂಥ ಒಂದು ದೇಶವನ್ನೇ ತೆಗೆದುಕೊಂಡರೂ, ಇಲ್ಲಿ ಸೇರಿರುವ ಲೇಖಕರ ಸಾಲಿಗೆ ಸೇರಬಲ್ಲಂಥ ಲೇಖಕರು ಇಲ್ಲವೆ ? ಇಲ್ಲಿ ಬಂದಿರುವ ಕಾದಂಬರಿಗಳ ಜೊತೆಗೆ ನಿಲ್ಲಬಲ್ಲ ಕಾದಂಬರಿಗಳು ಇಲ್ಲವೆ ? ಎಂದು ಅನ್ನಿಸುವುದು ಸ್ವಾಭಾವಿಕವಾಗಿಯೇ ಇದೆ. ಮಹಾಲೇಖಕರಿದ್ದಾರೆ, ಮಹಾಕಾದಂಬರಿಗಳೂ ಇವೆ. ಆದರೆ ಅವು ವಿಶ್ವಪ್ರಚಾರದ ಪ್ರತಿಷ್ಠೆಗೆ ಒಳಗಾಗಿಲ್ಲ ಎಂಬುದೇ ವ್ಯಥೆಯ ಸಂಗತಿ. ಈ ಕಾರಣದಿಂದ ಇಲ್ಲಿನ ಕಾದಂಬರಿಗಳನ್ನು ಆಯ್ಕೆ ಮಾಡುವಾಗ ಕೇವಲ ವ್ಯವಹಾರದ ದೃಷ್ಟಿಯಷ್ಟನ್ನೇ ತಳೆದು ಇಂಗ್ಲಿಷ್, ಅಮೆರಿಕನ್ ಮತ್ತು ಯೂರೋಪಿಯನ್ ಕೃತಿಗಳಷ್ಟನ್ನೇ ಆಯ್ಕೆ ಮಾಡಿದೆ. ಈ ಆಯ್ಕೆ ಆದರೂ ಸಮರ್ಪಕವೆ ? ಎಂದು ಯಾರು ಬೇಕಾದರೂ ಕೇಳಬಹುದು. ಇಂಥ ಆಯ್ಕೆಗಳು ಯಾವಾಗಲೂ ಸರ್ವಸಮರ್ಪಕ ಎನ್ನಿಸುವುದಿಲ್ಲ. ಒಬ್ಬ ಲೇಖಕನದೇ ಎರಡು-ಮೂರು ಕಾದಂಬರಿಗಳಿದ್ದಾಗ ಯಾವುದೋ ಒಂದನ್ನು ಆಯ್ದರೆ ಅದು ಆಯ್ಕೆದಾರರ ರುಚಿ, ಅಭಿರುಚಿಗಳನ್ನು ಆಧರಿಸುತ್ತದೆ. ಇನ್ನೊಬ್ಬರು ಆಯ್ಕೆ ಮಾಡುವಾಗ ಮತ್ತೊಂದು ಕೃತಿಗೆ ಮಾನ್ಯತೆ ಬರಬಹುದು. ಮೂಲ ಲೇಖಕರ ಆಯ್ಕೆಯೂ ಕೂಡ ಹೀಗೆಯೇ ಇರುತ್ತದೆ. ಯಾವ ಆಯ್ಕೆಯಾದರೂ ವೈಯಕ್ತಿಕವಾದದ್ದು. ಇಂಥ ಆಯ್ಕೆಯನ್ನು ಬಹುಜನರು ಒಪ್ಪಿಕೊಂಡಾಗ, ಅದನ್ನು ಪ್ರಾತಿನಿಧಿಕ ಆಯ್ಕೆ ಎನ್ನಬಹುದು. ನಮ್ಮ ಪ್ರಸ್ತುತ ಆಯ್ಕೆಗೆ ಅಂಥ ಮಾನ್ಯತೆ ದೊರೆತೀತೆಂದು ನಾವು ಆಶಿಸಿದ್ದೇವೆ. ಮುಖ್ಯವಾಗಿ ಇಲ್ಲಿರುವಷ್ಟೇ ಕಾದಂಬರಿಗಳು ವಿಶ್ವ ಕಾದಂಬರಿಗಳಲ್ಲ ಎಂಬುದನ್ನು ಓದುಗರು ನೆನಪಿನಲ್ಲಿಟ್ಟುಕೊಳ್ಳಬೇಕು.

ಈ ಗ್ರಂಥದ ಆರಂಭದ ಮೂರು ಲೇಖನಗಳು ಇನಾಂದಾರರ ವ್ಯಕ್ತಿತ್ವ, ಸಾಧನೆಗಳಿಗೆ ಸಂಬಂಧಿಸಿವೆ. ವ್ಯಕ್ತಿತ್ವವನ್ನು ಕುರಿತು ಬರೆದವರಲ್ಲಿ ಒಬ್ಬರು ತಂಗಿ, ಇನ್ನೊಬ್ಬರು ಮಗಳು. ಆದ್ದರಿಂದಲೇ ಆ ಲೇಖನಗಳಲ್ಲಿ ಆತ್ಮೀಯತೆಯ ಸ್ಪರ್ಶವಿದೆ. ಸಮಗ್ರ ಸಾಹಿತ್ಯವನ್ನು ಸಮಾಲೋಚಿಸಿದವರು ಇನಾಂದಾರರ ನಿಡುಗಾಲದ ಸ್ನೇಹಿತರು, ಇನಾಂದಾರರ ಒಳ ಹೊರಗುಗಳನ್ನು ಚೆನ್ನಾಗಿ ಬಲ್ಲವರು. ಆದ್ದರಿಂದಲೇ ಅಲ್ಲಿ ಕೆಲವಾದರೂ ಒಳನೋಟಗಳಿವೆ. ಈ ಲೇಖನಗಳು ಇನಾಂದಾರರು ಇದ್ದ ದಿನಗಳಲ್ಲಿಯೇ ರಚಿತವಾದವು. ಆದ್ದರಿಂದಲೇ ಅವುಗಳಲ್ಲಿ ವರ್ತಮಾನದ ಬಳಕೆಯಾಗಿದೆ. ಈಗ ಇನಾಂದಾರರು ಇಲ್ಲ, ಆದರೂ ನಾವು ಅದನ್ನು ತಿದ್ದಿಲ್ಲ.

* * *

ಹತ್ತಿರಹತ್ತಿರ ಎಂಟು ವರ್ಷಗಳ ಹಿಂದೆ ಮೊಳಕೆಯೊಡೆದ ಒಂದು ಯೋಜನೆ ಅನೇಕ ಅಡೆತಡೆಗಳನ್ನು ದಾಟಿಕೊಂಡು ಈಗ ಮುಕ್ತಾಯಗೊಂಡಿರುವುದು, ಅದರಲ್ಲಿ

ಭಾಗಿಗಳಾದ ಎಲ್ಲರಿಗೂ ಸಮಾಧಾನವನ್ನೂ, ನೆಮ್ಮದಿಯನ್ನೂ ತಂದಿದೆ. ಇಂಥ ಹೊತ್ತಿನಲ್ಲಿ ನಾವು ಮೊದಲು ನೆನೆಯಬೇಕಾದದ್ದು ದಿವಂಗತ ಪ್ರೊಫೆಸರ್ ವಿ.ಎಂ. ಇನಾಂದಾರರನ್ನು. ಈ ಕೆಲಸದ ಉದ್ದಕ್ಕೂ ಅವರ ನೆನಪೇ ನಮ್ಮ ಕೈಹಿಡಿದು ನಡೆಸಿದೆ. ತಮ್ಮ ಜೀವಮಾನದಲ್ಲಿ ಯಾವಾಗಲೂ ಪರಿಪೂರ್ಣತಾವಾದಿಯೇ ಆಗಿದ್ದ ಅವರ ಆತ್ಮಕ್ಕೆ ನಮ್ಮ ಈ ಪ್ರಯತ್ನ ಪ್ರಿಯವೆನ್ನಿಸೀತು ಎಂದು ಹಂಬಲಿಸಿದ್ದೇವೆ. ಹಾಗಾದರೆ ನಾವು ಧನ್ಯರು. ಇನಾಂದಾರರ ಗೆಳೆಯರ ಬಳಗ ನನ್ನನ್ನು ಅಭಿನಂದನ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿ, ಈ ನೆನಪಿನ ಗ್ರಂಥದ ಸಂಪಾದಕನೆಂದು ಹೆಸರಿಸಿ ಗೌರವ ತೋರಿಸಿದ್ದಾರೆ. ಇದಕ್ಕಾಗಿ ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ನನ್ನ ಹೆಸರು ನೆಪಕ್ಕೆ ಮಾತ್ರ. ಕೆಲಸ ಮಾಡಿದವರೆಲ್ಲ ಅವರು. ಆ ವಿಷಯದಲ್ಲಿ ನಾನು ಭಾಗ್ಯಶಾಲಿ ಎಂದೇ ಹೇಳಬೇಕು. ಪ್ರಸ್ತುತ ಕೆಲಸ ಯಶಸ್ವಿಯಾಗಿ ಮುಗಿಯುತ್ತಿರುವುದಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞತೆ ತಿಳಿಸುವುದು, ವಂದನೆ ಹೇಳುವುದು ನನ್ನ ಪಾಲಿಗೆ ಬಂದ ಕೆಲಸವಾಗಿದೆ.

ಇನಾಂದಾರರಿಗೆ ಒಂದು ಗೌರವ ಗ್ರಂಥ ಸಮರ್ಪಿಸಬೇಕೆಂದು ಯೋಚಿಸಿ, ಆ ಕೆಲಸಕ್ಕೆ ಚಾಲನೆ ಕೊಟ್ಟು, ಅದರ ಪ್ರಕಟಣೆಯನ್ನು ನಿರ್ವಹಿಸುವ ಆಶ್ವಾಸನೆ ನೀಡಿ ನಮಗೆ ಉತ್ಸಾಹ ತುಂಬಿದವರು ಉಷಾ ಸಾಹಿತ್ಯ ಮಾಲೆಯ ಒಡೆಯರೂ, ನನಗೆ ತುಂಬ ಪ್ರಿಯರೂ, ಇನಾಂದಾರರ ನಿಕಟ ಸ್ನೇಹಿತರಲ್ಲೊಬ್ಬರೂ ಆದ ರಾ. ನಾ. ಹಬ್ಬು ಅವರು. ಅವರು ಈ ಕೆಲಸ ಪೂರ್ಣವಾದುದನ್ನು ನೋಡಲು ಉಳಿಯಲಿಲ್ಲ, ಕೆಲವು ತಿಂಗಳುಗಳ ಹಿಂದೆ ತೀರಿಕೊಂಡರು. ಅವರು ಇದ್ದಿದ್ದಿದ್ದರೆ ಎಷ್ಟು ಸಂತೋಷ ಪಡುತ್ತಿದ್ದರೆಂಬುದನ್ನು ನಾನು ಊಹಿಸಬಲ್ಲೆ. ದೃಷ್ಟಿಹೀನರಾಗಿ ತಮ್ಮ ಮನೆಯ ಮಹಡಿಗೇ ಸೀಮಿತರಾಗಿ ಹೋಗಿದ್ದ ಅವರನ್ನು ಒಂದೆರಡು ಸಲ ನಾನು ನೋಡಲು ಹೋಗಿದ್ದಾಗ, ಇನಾಂದಾರರನ್ನು ನೆನಪಿಸಿ ಕೊಂಡು ಈ ಯೋಜನೆ ಮುಗಿಯದಿರುವುದಕ್ಕೆ ತಮ್ಮ ಕಾತರವನ್ನು ವ್ಯಕ್ತಪಡಿಸಿದ್ದು ನನಗೆ ನೆನಪಿದೆ. ಈ ಪುಸ್ತಕವನ್ನು ಪ್ರಕಟಿಸುವುದು ತಮ್ಮಿಂದ ಸಾಧ್ಯವಾಗದೇ ಹೋಯಿತಲ್ಲ ಎಂದೂ ಅವರು ವಿಷಾದಿಸುತ್ತಿದ್ದರು. ಅವರನ್ನು ನಾನು ಈ ಹೊತ್ತು ಸ್ಮರಿಸಬೇಕು.

ಹಬ್ಬು ಅವರಿಗೆ ಗ್ರಂಥವನ್ನು ಪ್ರಕಟಿಸುವುದು ಸಾಧ್ಯವಾಗದೆ ಹೋದಾಗ, 'ಮುಂದೇನು?' ಎಂಬ ಸಮಸ್ಯೆ ನಮ್ಮನ್ನು ಕಾಡದಂತೆ ಮಾಡಿದವರು, ಇನಾಂದಾರರ ಇನ್ನೊಬ್ಬ ಸ್ನೇಹಿತರೂ, ನಮಗೆಲ್ಲ ತುಂಬ ಬೇಕಾದವರೂ ಆದ ಎಂ. ಸತ್ಯನಾರಾಯಣರಾವ್. ಅವರೂ ಅವರ ಬಂಧುಗಳೂ ಇದರ ಪ್ರಕಟಣೆಯಲ್ಲಿ ತೀವ್ರವಾದ ಆಸಕ್ತಿ ತಳೆದು, ಗ್ರಂಥ ಸೊಗಸಾಗಿ ಹೊರ ಬರಲು ಶ್ರಮಿಸಿದ್ದಾರೆ. ಇನಾಂದಾರರ ಅನೇಕ ಪುಸ್ತಕಗಳ ಪ್ರಕಾಶಕರೂ, ಅವರ ಅಭಿರುಚಿ ಯನ್ನು ಚೆನ್ನಾಗಿ ತಿಳಿದವರೂ ಆದ ಈ ಸ್ನೇಹಿತರು 'ಕಾದಂಬರಿ ಲೋಕ'ವನ್ನು ಸಾಧ್ಯ ವಾದಷ್ಟೂ ಚಂದಗೊಳಿಸಿದ್ದಾರೆ. ಪುಸ್ತಕ ಪ್ರಕಟಣೆ ಕನ್ನಡದಲ್ಲಿ ಎಷ್ಟು ಕಷ್ಟವಾಗಿದೆ ಎಂಬುದನ್ನು ಬಲ್ಲವರಿಗೆ ನಾನು ರಾವ್ ಬಂಧುಗಳ ಸ್ನೇಹಕಾರ್ಯದ ಮಹತ್ವವನ್ನು ಹೇಳುವ ಅಗತ್ಯವಿಲ್ಲ.

ಈ ಪುಸ್ತಕಕ್ಕೆ ಬರೆದ ಲೇಖಕ ಮಿತ್ರರ ನೆರವು ದೊರೆಯದಿದ್ದಿದ್ದರೆ, ಇದು ಸಾಕಾರಗೊಳ್ಳುತ್ತಿರಲಿಲ್ಲ. ನಮ್ಮ ಆಹ್ವಾನವನ್ನು ಒಪ್ಪಿಕೊಂಡು ಲೇಖನಗಳನ್ನು ಬರೆದು ಕೊಟ್ಟಿದ್ದಷ್ಟೇ ಅಲ್ಲ ತುಂಬ ತಾಳ್ಮೆಯಿಂದ ಈ ಪುಸ್ತಕದ ಪ್ರಕಟಣೆಗಾಗಿ ಕಾಯ್ದಿದ್ದಾರೆ. ಪಿ.ವಿ. ಜೋಶಿ ಅವರನ್ನು ಕುರಿತು ಪ್ರತ್ಯೇಕವಾಗಿ ನಾನು ಒಂದೆರಡು ಮಾತುಗಳನ್ನು ಹೇಳಬೇಕು. ಪುಸ್ತಕದ ಸಿದ್ಧತೆಯಲ್ಲಿ ಅವರು ವಿಶೇಷ ಆಸಕ್ತಿ ತಳೆದಿದ್ದಾರೆ. ಅವರು ಇನಾಂದಾರರ ಆಪ್ತಮಿತ್ರರಲ್ಲಿ ಒಬ್ಬರು. ಅವರ ನೆರವು ನಮಗೆ ವಿಪುಲವಾಗಿ ದೊರೆತಿದೆ. ಇನಾಂದಾರರ ಸಮಗ್ರ ಸಾಹಿತ್ಯವನ್ನು ಕುರಿತಂತೆ ತುಂಬ ಸಮರ್ಪಕವಾದ ಒಂದು ಲೇಖನವನ್ನು ಬರೆದುಕೊಟ್ಟಿರುವುದಲ್ಲದೆ, ಗಾಲ್ಸ್‌ವರ್ದಿಯ ಕಾದಂಬರಿಯನ್ನು ಕುರಿತೂ ಬರೆದಿದ್ದಾರೆ (ವಾಸ್ತವವಾಗಿ ಆ ಲೇಖನವನ್ನು ಸ್ವತಃ ಇನಾಂದಾರರೇ ಬರೆಯಬೇಕಾಗಿತ್ತು, ಆದರೆ ಅವರ ಅನಾರೋಗ್ಯದ ಕಾರಣದಿಂದ ಅದು ಸಾಧ್ಯವಾಗಲೆ ಇಲ್ಲ!). ಗ್ರಹಾಂ ಗ್ರೀನನ ಮೂರು ಕಾದಂಬರಿಗಳನ್ನು ಕುರಿತ ಡಾ॥ ಹೇಮಂತ ಕುಲಕರ್ಣಿ ಅವರ ಇಂಗ್ಲಿಷ್ ಲೇಖನವನ್ನು ಕನ್ನಡಿಸಿ ಕೊಟ್ಟವರೂ ಪಿ.ವಿ. ಜೋಶಿಯವರೇ. ಮೈಸೂರಿನ ವಾಣಿ ಪ್ರೆಸ್ಸಿನವರು ಪುಸ್ತಕವನ್ನು ಅಚ್ಚುಮಾಡಿ ಕೊಟ್ಟಿದ್ದಾರೆ. ಈ ಎಲ್ಲ ಮಿತ್ರರಿಗೂ ನಾನು ಹೃದಯಪೂರ್ವಕವಾದ ವಂದನೆಗಳನ್ನೂ, ಮೆಚ್ಚುಗೆಯನ್ನೂ ಸಲ್ಲಿಸಬೇಕು.

ಕೊನೆಯದಾಗಿ, ಆದರೆ ಖಂಡಿತವಾಗಿಯೂ ಕನಿಷ್ಠವಲ್ಲ, ನಾನು 'ಕಾದಂಬರಿ ಲೋಕ'ದ ಜೊತೆ ಸಂಪಾದಕರೂ, ಇನಾಂದಾರ್ ಅಭಿನಂದನ ಸಮಿತಿಯ ಕಾರ್ಯದರ್ಶಿಯೂ ಆದ ಎಂ.ವಿ. ವೆಂಕಟೇಶ ಮೂರ್ತಿ ಅವರನ್ನು ವಿಶೇಷವಾಗಿ ಹೆಸರಿಸಬೇಕು. ಅವರು ಇನಾಂದಾರರ ಕಿರಿಯ ಸ್ನೇಹಿತರಲ್ಲಿ ಒಬ್ಬರು ; ಅವರನ್ನು ಚೆನ್ನಾಗಿ ಬಲ್ಲವರು ; ಅವರಲ್ಲಿ ಹೆಚ್ಚಿನ ಪ್ರೀತ್ಯಾದರ ಗೌರವಗಳನ್ನು ತಾಳಿದವರು ; ಉದಾರ ಹೃದಯಿಗಳು ; ಸಜ್ಜನರು. ಇಂಥವರ ಸ್ನೇಹ ಎಂಥವರ ಬದುಕಿಗೂ ಒಂದು ವರ. ಅವರ ಸ್ನೇಹದ ಸವಿಯನ್ನು ನಾನು ಹಲವು ವರ್ಷಗಳಿಂದ ಸವಿದಿದೇನೆ. 'ಕಾದಂಬರಿ ಲೋಕ'ದ ಸಿದ್ಧತೆಯಲ್ಲಿ ನಾವು ನಾಲ್ಕಾರು ಸಲ ಸಂಧಿಸಿದೇವೆ ; ದೀರ್ಘ ಪತ್ರವ್ಯವಹಾರ ಮಾಡಿದೇವೆ. ಆದರೆ ಅವರ ಉತ್ಸಾಹ ವೇಗ ಗಳೊಂದಿಗೆ ಸ್ಪರ್ಧಿಸಲು, ನನಗೆ ನನ್ನವೇ ಕಾರಣಗಳಿಂದ, ಸಾಧ್ಯವಾಗದೆ ಹೋಯಿತು. ಅದನ್ನು ಅವರು ಕ್ಷಮಿಸುತ್ತಾರೆಂದು ನಾನು ನಂಬಿದೇನೆ. ಈ ಪುಸ್ತಕಕ್ಕಾಗಿ ಅವರೆಷ್ಟು ಶ್ರಮಿಸಿದಾರೆಂಬುದನ್ನು ನಾನು ಚೆನ್ನಾಗಿ ಬಲ್ಲೆ. ಲೇಖಕರ ಪಟ್ಟಿ ಮಾಡುವುದರಿಂದ ತೊಡಗಿ, ಪುಸ್ತಕಗಳಿಗೆ ಚಂದಾದಾರರನ್ನು ಸಂಗ್ರಹಿಸುವುದರವರೆಗೆ ಅವರು ದುಡಿದಿದ್ದಾರೆ. ಈ ದುಡಿಮೆಯ ಮೆಚ್ಚುಗೆ ಮಾತಿಗೆ ಮೀರಿದ್ದು. ಅವರಿಗೆ ಋಣಿ ಎಂದಷ್ಟೇ ಈ ಸಂದರ್ಭದಲ್ಲಿ ನಾನು ಹೇಳಬಹುದು.

ಇನಾಂದಾರರನ್ನು ಅವರ ತೀರ ಕೊನೆಯ ದಿನಗಳಲ್ಲಿ, ಪುಣೆಯಲ್ಲಿ, ಕಂಡ ಇಬ್ಬರು ಮೂವರು ಸ್ನೇಹಿತರಲ್ಲಿ ವೆಂಕಟೇಶ ಮೂರ್ತಿ ಒಬ್ಬರು. ಆ ಸಂದರ್ಭವನ್ನು ಸ್ಮರಿಸಿಕೊಂಡು

ಅವರು ಬರೆದ ಒಂದು ಲೇಖನದ ಕೆಲವು ಮಾತುಗಳು ಈ ಪ್ರಸ್ತಾವನೆಗೆ ಸೂಕ್ತ ಮುಕ್ತಾಯವೆಂದು ಭಾವಿಸುತ್ತೇನೆ :

''ಹೊರಡುವ ಮುನ್ನ ಅವರ ಎರಡೂ ಕೈಗಳನ್ನು ನನ್ನ ಕೈಗಳಲ್ಲಿ ಹಿಡಿದು ಕಣ್ಣಿಗೊತ್ತಿಕೊಂಡೆ. ತುಂಬ ಆತ್ಮೀಯತೆಯಲ್ಲಿ, ವಿಶ್ವಾಸದಲ್ಲಿ 'So kind of you' ಎಂದು ಮೃದುವಾಗಿ ಅವನ್ನು ಅಮುಕಿದರು. ಹಿಂದಿನಂತೆ ಸಶಕ್ತ ಹಸ್ತಗಳಾಗಿರದೆ ಅವು ಕೃಶವಾಗಿ ದುರ್ಬಲವಾಗಿದ್ದವು. ರಷ್ಯನ್ ಕಲಾವಿದ ಕಾನ್‌ಸ್ಟಾಂಟಿನ್ ಸ್ಟಾನಿಸ್ಲೋವ್‌ಸ್ಕಿಯ ಮುಖಚಹರೆಯನ್ನು ಸುಮಾರು ಹೋಲುವಂತಿದ್ದ ಅವರ ಮುಖ ನಿಸ್ತೇಜವಾಗಿತ್ತು. ಆದರೆ ಕಣ್ಣುಗಳಲ್ಲಿ ಕಾಂತಿ ಸ್ವಲ್ಪವೂ ಮಾಸಿರಲಿಲ್ಲ, ಹೊಳಪು ಕುಗ್ಗಿರಲಿಲ್ಲ... ಮಾತಿನಲ್ಲಿ ತಮ್ಮ ವಿಶ್ವಾಸಾಭಿಮಾನಗಳನ್ನು ಹೇಳಿ ಮುಗಿಸದೆ ಅಂತರ್ಯದಲ್ಲಿಟ್ಟುಕೊಂಡು ಪೋಷಿಸುವ ಸ್ವಭಾವ ಅವರದು. "The affections are more reticent than the passions, and their expression more subtle." ಅಂಥವರಿಗೆ. ('ಕಸ್ತೂರಿ', ಏಪ್ರಿಲ್ 1988)

— ಹಾ. ಮಾ. ನಾಯಕ

'ಗೋಧೂಳಿ', ಜಯಲಕ್ಷ್ಮೀಪುರಂ
ಮೈಸೂರು 570 012
ಸೆಪ್ಟೆಂಬರ್ 9, 1990

ಅರಿಕೆ

ಸುಮಾರು ಐದು ದಶಕ ಕಾಲ ಕನ್ನಡ ಸಾಹಿತ್ಯಕ್ಕೆ ಪ್ರೊ|| ವಿ.ಎಂ. ಇನಾಂದಾರರು ಸಲ್ಲಿಸಿದ ಸೇವೆಗೆ ಅಭಿನಂದನೆ ಸಲ್ಲಿಸಿ, ಅವರಿಗೆ ಗೌರವ ಗ್ರಂಥವೊಂದನ್ನು ಅರ್ಪಿಸಿ, ಕೃತಜ್ಞತೆ ಸೂಚಿಸುವ ಮುಖ್ಯ ಉದ್ದೇಶದಿಂದ ಏಳೆಂಟು ವರ್ಷ ಹಿಂದೆಯೇ ರೂಪಿತವಾದ ಈ ಯೋಜನೆ ಅನಿವಾರ್ಯ ಕಾರಣಗಳಿಂದಾಗಿ ಬಹುವಾಗಿ ವಿಳಂಬಗೊಂಡು, ನಾಲ್ಕು ವರ್ಷ ಹಿಂದೆ ಅನಿರೀಕ್ಷಿತವಾಗಿ ಅವರು ವಿಧಿವಶರಾದ ಮೇಲೆ, ಈಗ ಸಂಸ್ಮರಣ ಗ್ರಂಥವಾಗಿ ಯಾದರೂ ಪ್ರಕಟಗೊಳ್ಳುತ್ತಿರುವುದು ಅವರ ಅಭಿಮಾನಿ ವರ್ಗಕ್ಕೆಲ್ಲ ಸಮಾಧಾನ ತರಬಲ್ಲ ಸಂಗತಿಯಾಗಿದೆ. ಪ್ರೊ|| ಇನಾಂದಾರರು ಜೀವಿಸಿದ್ದಿದ್ದರೆ ಈ ಅಕ್ಟೋಬರ್ 1ಕ್ಕೆ ಅವರಿಗೆ ಎಪ್ಪತ್ತೆಂಟು ತುಂಬಿ, 79ನೆಯ ವಯಸ್ಸಿಗೆ ಅಡಿಯಿಡುತ್ತಿದ್ದರು. ಅವರ ಎಪ್ಪತ್ತೊಂಬತ್ತನೆಯ ಜನ್ಮದಿನದ ಹೊತ್ತಿಗೆ ಇದು ಹೊರಬೀಳುತ್ತಿರುವುದು ಸಂತೋಷವೇ.

ಇಂಥ ಒಂದು ಯೋಜನೆಗೆ ತೊಡಗಿದಂದಿನಿಂದ ಅದು ಕಾರ್ಯರೂಪಕ್ಕೆ ಇಳಿದು, ಮುಕ್ತಾಯ ಘಟ್ಟವನ್ನು ತಲುಪುತ್ತಿರುವ ಈವರೆಗೂ ಪ್ರೇರಕಶಕ್ತಿಯಾಗಿ ನಿಂತು ಸೂಕ್ತ ಮಾರ್ಗದರ್ಶನ ನೀಡಿ ಇದನ್ನು ಆಗುಮಾಡಿಸಿದವರು ಸಮಿತಿಯ ಅಧ್ಯಕ್ಷರೂ ಸಂಪುಟದ ಸಂಪಾದಕರಲ್ಲೊಬ್ಬರೂ ಆದ ಡಾ|| ಹಾ.ಮಾ. ನಾಯಕರು. ನಮಗೆ ಬೆಂಬಲವಾಗಿ ಡಾ|| ಹಾ.ಮಾ.ನಾ. ಇದ್ದಾರೆಂದರೆ 'ಅಂಜಿಕಿನ್ಯಾತಕಯ್ಯಾ' ಎಂದು ಪುರಂದರರನ್ನು ಉದ್ಧರಿಸಿ ನುಡಿದಿದ್ದ ಪ್ರೊ|| ಕು.ಶಿ. ಹರಿದಾಸ ಭಟ್ಟ ಅವರ ಮಾತನ್ನು ಅಕ್ಷರಶಃ ನಿಜವಾಗಿಸಿದ ಡಾ|| ಹಾ.ಮಾ.ನಾ. ಅವರಿಗೆ ಗೌರವ ಪೂರ್ವಕ ಕೃತಜ್ಞತೆಗಳು. ಅಷ್ಟೇ ಕೃತಜ್ಞತೆ ಮೈಸೂರಿನ ಗೀತಾ ಬುಕ್ ಹೌಸ್ ಸಂಸ್ಥೆಯ ಮಾನ್ಯ ಶ್ರೀ ಎಂ. ಸತ್ಯನಾರಾಯಣ ರಾವ್ ಸೋದರರಿಗೂ ಸಲ್ಲಬೇಕು. ಮಾರುಕಟ್ಟೆಯಿಲ್ಲದ ಇಂಥದೊಂದು ಪ್ರಕಟಣೆಯ ಜವಾಬ್ದಾರಿಯನ್ನು ಸಂದಿಗ್ಧ ಪರಿಸ್ಥಿತಿಯಲ್ಲಿ ಕೇವಲ ಪ್ರೊ|| ಇನಾಂದಾರರಲ್ಲಿನ ತಮ್ಮ ಸ್ನೇಹ-ವಿಶ್ವಾಸಗಳ ಕುರುಹಾಗಿ ಕೈಗೆತ್ತಿಕೊಂಡು ಸಮರ್ಥವಾಗಿ ನಿರ್ವಹಿಸಿದವರು ಅವರು. ಹಾಗೆಯೇ, ಎಪ್ಪತ್ತಾರರ ಹರೆಯದಲ್ಲಿದ್ದರೂ ತರುಣರನ್ನೂ ನಾಚಿಸುವ ತಮ್ಮ ಉತ್ಸಾಹದಿಂದ ಈ ಕ್ರಿಯಾವ್ಯಾಪಾರ ದುದ್ದಕ್ಕೂ ಆಸಕ್ತಿ ವಹಿಸಿ, ಹಲವು ಬಗೆಯ ನೆರವನ್ನು ನೀಡಿ, ನಿರ್ವ್ಯಾಜ ವಾತ್ಸಲ್ಯವನ್ನು ತೋರಿಸುತ್ತಿರುವ ಹಿರಿಯರು, ಪ್ರೊ|| ಇನಾಂದಾರರ ಸಹಪಾಠಿ ಮತ್ತು ನಿಡುಗಾಲದ ಗೆಳೆಯರಾದ ಶ್ರೀ ಪಿ.ವಿ. ಜೋಶಿ ; ಅವರಿಗೆ ನಾವು ಋಣಿ. ಅಭಿನಂದನ ಸಮಿತಿಯ ಮಾನ್ಯ ಸದಸ್ಯರೆಲ್ಲರಿಗೂ ನಮ್ಮ ವಂದನೆಗಳು. ನಮ್ಮ ಮನವಿಯನ್ನು ಒಪ್ಪಿ ಈ ಸಂಪುಟಕ್ಕೆ ಲೇಖನಗಳನ್ನು ಬರೆದುಕೊಟ್ಟು ಉಪಕರಿಸಿ, ಇದರ ಪ್ರಕಟಣೆಯಲ್ಲಿನ ದೀರ್ಘವಿಳಂಬವನ್ನು ಮನಸ್ಸಿಗೆ ತಂದುಕೊಳ್ಳದೆ ಸಹನೆ, ಔದಾರ್ಯ ತೋರಿರುವ ನಮ್ಮ ಸನ್ಮಾನ್ಯ ಲೇಖಕ-

ಲೇಖಕಿಯರೆಲ್ಲರಿಗೆ ನಮ್ಮ ವಿನಮ್ರ ವಂದನೆಗಳು ; ಈ ಕೃತಿಯ ಎಲ್ಲ ಯಶಸ್ಸು ಅವರಿಗೆ ಸಲ್ಲತ್ತದೆ.

ಈ ಸಂಪುಟದ ಬಹುಪಾಲು ಲೇಖನಗಳನ್ನು ಅಚ್ಚಾದ ಮೇಲೆ ಅವರು ಕಾಣದಿದ್ದರೂ ಪ್ರೊ॥ ಇನಾಂದಾರರು 1985ರಲ್ಲಿ ವಿದೇಶಕ್ಕೆ ಹೋಗುವ ಮುನ್ನ ಅವಲೋಕಿಸಿ ಮೆಚ್ಚಿಗೆ ವ್ಯಕ್ತಪಡಿಸಿದ್ದರೆಂಬುದು ನಮಗೆ ಸಮಾಧಾನ ತಂದಿದೆ. ಮುಖ್ಯವಾಗಿ, ಕಾದಂಬರಿಕಾರ-ವಿಮರ್ಶಕ ಇನಾಂದಾರರಿಗೆ ವಿಶ್ವದ ಪ್ರಮುಖ ಕಾದಂಬರಿ ಕೆಲವನ್ನು ಕುರಿತ ವಿಮರ್ಶನ ಲೇಖನಗಳನ್ನೊಳಗೊಂಡಂತೆ ರೂಪಿತಗೊಂಡಿದ್ದ ಇಂಥ ಗ್ರಂಥಸಂಯೋಜನೆ ಪ್ರಿಯವಾಗಿತ್ತು. ಪ್ರೊ॥ ಇನಾಂದಾರರಿಗೆಂತೂ ಸಾಹಿತ್ಯಾಸಕ್ತರೆಲ್ಲರಿಗೂ ಇದು ಪ್ರಿಯವಾಗುತ್ತದೆಂದು ನಿರೀಕ್ಷಿಸಲಾಗಿದೆ.

– ಎಂ.ವಿ. ವೆಂಕಟೇಶ ಮೂರ್ತಿ

ಬೆಂಗಳೂರು
ಸೆಪ್ಟೆಂಬರ್ 19, 1990

ಭಾಗ ಒಂದು

ವ್ಯಕ್ತಿತ್ವ

ಅಚ್ಚುಮೆಚ್ಚಿನ ವೆಂಕಣ್ಣ

ಸುಶೀಲಾ ಕೊಪ್ಪರ

ಪ್ರೊಫೆಸರ್ ಇನಾಮದಾರರು ಒಳ್ಳೆ ಕಾದಂಬರಿಕಾರರು, ನುರಿತ ಪ್ರಾಧ್ಯಾಪಕರು, ಪರಿಣಿತ ವಿಮರ್ಶಕರು, ಸುಲಲಿತ ವಾಗ್ಮಿ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯ ಪಡೆದವರು... ಕನ್ನಡ ನೀರು ಕುಡಿದಂತೆ... ಮರಾಠಿ ಊಟ ಮಾಡಿದಂತೆ.... ಹಿಂದೀ ಹಾಲು ಕುಡಿದಂತೆ — ಮುಂತಾಗಿ ಬಲ್ಲವರು ಅವರ ವಿಷಯ ಏನೆಲ್ಲ ಹೇಳ ಬಹುದು. ಇದೆಲ್ಲ ಸತ್ಯವೆ. ಬಿ.ಎ.ನಲ್ಲಿ ಬಂಗಾರದ ಪದಕ, ಸಂಸ್ಕೃತ ಸಾಹಿತ್ಯದಲ್ಲಿಯ ಇಂಗ್ಲಿಷ್ ಕೃತಿಯೊಂದಕ್ಕೆ ಸುವರ್ಣ ಪದಕ, ಅಕೆಡೆಮಿ ಪ್ರಶಸ್ತಿಗಳು ಮುಂತಾದವುಗಳು ಕನ್ನಡ ಸಾರಸ್ವತ ಪ್ರಪಂಚ ಅರಿಯದ ವಿಷಯವಲ್ಲ. ಪಟ್ಟಿ ಮಾಡುತ್ತ ಹೋದರೆ ಕಾನೂನಿನಿಂದ ಪ್ರಾರಂಭಿಸಿ ಪತ್ರಕರ್ತರೂ ಆಗಿ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾಗಿ, ಎಪ್ಪತ್ತು ಸಂವತ್ಸರಗಳನ್ನು ದಾಟಿದರೂ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಯಂತೆ ಸದಾಕಾಲ ಪುಸ್ತಕಗಳ ಮಧ್ಯೆ ಅಡಗಿರುವ ಪ್ರೊ॥ ಇನಾಮದಾರ್ ಅವರ ಪ್ರತಿಭೆ ಏನೇ ಇದ್ದರೂ ನನಗೆ ಮಾತ್ರ ಕೇವಲ ಅಣ್ಣ! ತುಂಬಾ ಅಚ್ಚುಮೆಚ್ಚಿನ ಹಿರಿ ಅಣ್ಣ. ನಾವೆಲ್ಲ ಇವರನ್ನು ಕರೆಯುವುದು ವೆಂಕಣ್ಣ ಎಂದು.

'ನಾವು' ಎಂದರೆ — ನಾವು ಮೂರು ಜನ. ನನ್ನ ಇನ್ನೊಬ್ಬ ಅಣ್ಣ ಎಲ್. ಎಂ. ಇನಾಮದಾರ್ (ನಾವು ಅವನನ್ನು ಲಕ್ಕಾ ಎನ್ನುತ್ತೇವೆ) ನಿವೃತ್ತ ಕ್ಷೇತ್ರ ಪ್ರಚಾರಾಧಿಕಾರಿ; ನನ್ನ ತಂಗಿ ಉಷಾ ಬೆಳಗುಂದಿ (ಆಕೆಯನ್ನು ಪುಟ್ಟಾ ಎನ್ನುತ್ತೇವೆ) ; ಹಾಗೂ ನಾನು. ನಾವು ಮೂರು ಜನಕ್ಕೆ ವೆಂಕಣ್ಣ ಹಿರಿ ಅಣ್ಣ. ನಮ್ಮ ತಾಯಿಯ ಹೆಸರು ಕಮಲಾಬಾಯಿ. ಅವರನ್ನು ನಾವು 'ಅಬಚಿ' ಎಂದು ಕರೆಯುತ್ತಿದ್ದೆವು. ನಮ್ಮ ತಂದೆ ಮಧ್ವರಾವ್ ಇನಾಮದಾರ್. ಅವರನ್ನು 'ಮದ್ದುಕಾಕಾ' ಎನ್ನುತ್ತಿದ್ದೆವು.

ನಮ್ಮ ತಾಯಿ ಹುದ್ಲಿಯ ದೇಶಪಾಂಡೆ ಮನೆತನದವರು. 'ಕರ್ನಾಟಕದ ಸಿಂಹ' ಗಂಗಾಧರರಾವ್ ದೇಶಪಾಂಡೆ ನಮ್ಮ ತಾಯಿಗೆ ಸೋದರ ಸಂಬಂಧ. ಆ ಸಿಂಹದ ಮರಿಯಂತೆಯೇ ನಮ್ಮ ತಾಯಿಯ ವ್ಯಕ್ತಿತ್ವವೂ ಇತ್ತು. ಆಕೆಯನ್ನು ಕಂಡರೆ ನನಗಂತೂ ಭಕ್ತಿಗಿಂತ ಭಯವೇ ಜಾಸ್ತಿ! ಆದರೆ ವೆಂಕಣ್ಣನಿಗೆ ಭಕ್ತಿ ಜಾಸ್ತಿ.

ನಮ್ಮ ತಂದೆ ಧಾರವಾಡದವರು. ಪೂರ್ವಿಕರು ಆಂಧ್ರದ ಕಡೆಯಿಂದ ಬಂದವ ರಂತೆ. ಹಿರಿ ಮಗನ ಹೆಸರು ಯಾವಾಗಲೂ ತಿರುಪತಿ ತಿಮ್ಮಪ್ಪನದೆ. ಆದರಿಂದಾಗಿಯೇ ಬಹುಶಃ ನಮ್ಮಣ್ಣನ ಹೆಸರು 'ವೆಂಕಟೇಶ' ಎಂದು ಆಗಿರಬಹುದು. ನಮ್ಮ ತಂದೆಯ ಪೂರ್ವಿಕರು ಬ್ರಿಟಿಷ್ ಸರಕಾರದಲ್ಲಿ ಮೂರು ತಲೆಮಾರು ನ್ಯಾಯಾಧೀಶರಾಗಿದ್ದು

ಅವರಿಗೆ ರಾವ್ ಬಹಾದ್ದೂರ್ ಸರದಾರ್ ಇನಾಮದಾರ್ ಎಂದು ಪದವಿ ದೊರಕಿತ್ತು. ನಮ್ಮ ತಂದೆ ಅಂಚೆ ಇಲಾಖೆಯಲ್ಲಿ ಕೆಲಸ ಮಾಡಿದರು. ದೇಶಪಾಂಡೆ ಮನೆತನದಲ್ಲಿ ಹುಟ್ಟಿ ಸರದಾರ್ ಇನಾಮದಾರ್ ಮನೆಯ ಸೊಸೆಯಾದ ನಮ್ಮ ತಾಯಿಗೆ ಎರಡೂ ಮನೆತನದ ಆಸ್ತಿಪಾಸ್ತಿಗಳು ಹಾಳಾಗಿ ಬರೀ ಪೊಳ್ಳು ಹೆಸರುಗಳು ಮಾತ್ರ ಉಳಿದದ್ದರಿಂದ ತನ್ನ ಮಗ ತುಂಬ ಓದಿ ದೊಡ್ಡ ಮನುಷ್ಯನಾಗಬೇಕು ಎಂಬ ಹಿರಿ ಆಸೆ. ಅದಕ್ಕಾಗಿ ಆಕೆ ತನ್ನ ಜೀವನವನ್ನೇ ಮುಡುಪು ಇಟ್ಟವರಂತೆ ಕಷ್ಟಪಟ್ಟು ದುಡಿದರು. ವೆಂಕಣ್ಣ ಆಕೆಯನ್ನು ನಿರಾಶೆಗೊಳಿಸದಂತೆ ಓದಿದ. ಆ ದಿನಗಳನ್ನು ನೆನೆಸಿಕೊಂಡಾಗ ಈಗ ನನಗೆನಿಸುತ್ತದೆ – ಆ ಚಿಕ್ಕ ವಯಸ್ಸಿನಲ್ಲಿ ವೆಂಕಣ್ಣನ ಮನಸ್ಸಿನ ಮೇಲೆ ಅದೆಷ್ಟು ಒತ್ತಡ ಇದ್ದಿರಬಹುದು ಎಂದು ! ಆದರೆ ಆ ಕಾಲದಲ್ಲಿ ಈ ಮಾನಸಶಾಸ್ತ್ರ – ಸೈಕಾಲಜಿ – ಮುಂತಾದ ವಿಷಯ ಯಾರು ಯೋಚಿಸುತ್ತಿದ್ದರು ? ಪಾಲಕರು ಕಷ್ಟದಿಂದ ಓದಿಸಿದಾಗ ಕಷ್ಟಪಟ್ಟು ಓದಿ ಅತ್ಯಂತ ಹೆಚ್ಚು ಅಂಕ ಗಳಿಸುವುದು ಮಕ್ಕಳ ಕರ್ತವ್ಯವೇ ಆಗಿತ್ತು ! ನಮ್ಮಣ್ಣ ಬುದ್ಧಿವಂತ. ಕಷ್ಟಪಟ್ಟು ಓದಿದ. ಅದರಿಂದಾಗಿ ಸರಿಹೋಯಿತು ! ಎಷ್ಟೋ ಮನೆಗಳಲ್ಲಿ ತಂದೆತಾಯಿಗಳ ನಿರಾಶೆಯ ಮುಖವನ್ನು ಕಾಣಲು ಸಾಧ್ಯವಾಗದೆ ಫೇಲಾದ ಮಕ್ಕಳು ಮನೆಬಿಟ್ಟು ಹೋದದ್ದು, ಪ್ರಾಣ ಕೊಟ್ಟದ್ದೂ ಉಂಟು ! ನಮ್ಮ ತಂದೆತಾಯಿಗಳ ಕಷ್ಟಕ್ಕೆ ಸರಿಯಾಗಿ ನಮ್ಮಣ್ಣ ಓದಿ ಅವರ ಅಭಿಮಾನ ಹಾಗೂ ಗೌರವಕ್ಕೆ ಪಾತ್ರನಾದ.

ನಮ್ಮಣ್ಣನ ಪ್ರಾಥಮಿಕ ಶಿಕ್ಷಣ ನಮ್ಮ ತಾಯಿಯ ತವರಾದ ಹುದ್ಲಿಯಲ್ಲಿ ನಡೆಯಿತು. ಆಗ ನಮ್ಮ ತಾಯಿಯ ತಂದೆ ತಾಯಿಗಳೂ ಜೀವಿತವಿದ್ದರು. ನಮ್ಮ ತಾಯಿ ಅವರ ಕೊನೆಯ ಮಗಳು. ಆಕೆಯ ಮಗ ಅಜ್ಜ ಅಜ್ಜಿಯರಿಗೆ ಮುದ್ದಿನ ಮೊಮ್ಮಗ. ಅಲ್ಲದೆ ಬುದ್ಧಿವಂತ. ನನಗೆ ನೆನಪು ಇದ್ದದ್ದು ಬಹುಶಃ ನಮ್ಮಣ್ಣ ಮೆಟ್ರಿಕ್ ಕ್ಲಾಸ್‌ನಲ್ಲಿ ಓದುವಾಗಿನದು ಇರಬಹುದು. ನಮ್ಮ ತಂದೆಗೆ ಆಗ ವಿಜಾಪುರದಲ್ಲಿ ಕೆಲಸವಿತ್ತು. ಆತ ರಾತ್ರಿ ಓದುತ್ತಿದ್ದ. ಆತನಿಗೆ ನಿದ್ರೆ ಬರಬಾರದೆಂದು ನಮ್ಮ ತಾಯಿ ಅವನಿಗೆ ಸಂಜೆ ಚಹಾ ಮಾಡಿಕೊಡುತ್ತಿದ್ದರು. ಆ ಚಹಾದ್ದೊಂದು ಕತೆ —

ಸಂಜೆ ಏಳು ಗಂಟೆಯ ಸುಮಾರಿಗೆ ಅದೇ ತಾನೆ ಎಮ್ಮೆ ಹಿಂಡಿ ಹಾಲಿನ ಸೌಂದಕ್ಕ ನೊರೆ ಹಾಲು ತರುತ್ತಿದ್ದಳು. ಆಗ ನಮ್ಮ ತಾಯಿ ತಾಜಾ ಹಾಲಿನ ಚಹಾ ಮಾಡುತ್ತಿದ್ದರು. 'ಚಹಾ' ಎಂದರೆ ಎಲ್ಲರೂ ಬಂದಾರೆಂದು ಆಕೆ "ವೆಂಕಣ್ಣ ಚೇಳು" ಎಂದು ಕೂಗುತ್ತಿದ್ದರು. ವಿಜಾಪುರದಲ್ಲಿ ಅದೂ ಬಿಸಿಲು ಕಾಲದಲ್ಲಿ ವಾರಕ್ಕೆ ನಾಲ್ಕು ಬಾರಿಯಾದರೂ ಕುಳ್ಳು ಕಟ್ಟಿಗೆಗಳಲ್ಲಿ, ಬಚ್ಚಲ ಬಳಿ, ಒಲೆಯ ಬಳಿ ಎಲ್ಲಿಯಾದರೂ ಚೇಳು ಕಾಣಿಸಿಕೊಳ್ಳುವುದು ತೀರಾ ಸಾಮಾನ್ಯವಾಗಿತ್ತು. ಆ ಚೇಳು ಹೊಡೆಯುವ ಕೆಲಸ ಯಾವಾಗಲೂ ವೆಂಕಣ್ಣನದು. ನಮ್ಮ ತಾಯಿ 'ಚೇಳು' ಎಂದು ಕೂಗಿದರೆ ಯಾರು ಅಡುಗೆಮನೆಗೆ ಹೋಗುತ್ತಾರೆ ? ವೆಂಕಣ್ಣ ಹೋಗುತ್ತಿದ್ದ. ಅಲ್ಲಿ ಅವನಿಗೆ ತಾಜಾ ಹಾಲಿನ ಚಹಾ ಕಾದಿರುತ್ತಿತ್ತು. ಇದು

ನಾಲ್ಕಾರು ದಿನ ನಡೆದಿರಬಹುದು. ನಿತ್ಯ ಎಂಥ ಚೇಳು ?! ಒಂದು ದಿನ ನಮ್ಮ ತಂದೆ ಎದ್ದು ಹೋದರು. ಚಹಾ ಸೋಸುತ್ತಿದ್ದ ನಮ್ಮ ತಾಯಿಯನ್ನು ಕಂಡು ಅವರಿಗೆ ತುಂಬಾ ನಗು ಬಂದಿತು. ''ಬನ್ನಿ ಕಪ್‌ನಲ್ಲಿ ಚೇಳು ಬಂದಿದೆ'' ಎಂದು ಎಲ್ಲರನ್ನೂ ಕರೆದರು. ಸರಿ, ಅಂದಿನಿಂದ ಹಾಲು ಬಂದ ತಕ್ಷಣ ಕಪ್ ಹಿಡಿದುಕೊಂಡೇ ಎಲ್ಲರೂ 'ಚೇಳು' ಹೊಡೆಯಲು ಮುಂದಾಗತೊಡಗಿದರು !

ಹತ್ತೊಂಬತ್ತುನೂರ ಮೂವತ್ತನೆಯ ದಶಕ. ಪ್ರಪಂಚದಲ್ಲಿ 'ಡಿಪ್ರೆಶನ್' ಕಾಲ. ನಮ್ಮ ತಂದೆಯ ಜೊತೆ ಕೆಲಸಮಾಡುತ್ತಿದ್ದವರಲ್ಲಿ ಯಾರೂ ತಮ್ಮ ಮಕ್ಕಳನ್ನು ಕಾಲೇಜಿಗೆ ಕಳಿಸಿರಲಿಲ್ಲ. ಕೆಲವರಿಗೆ ಹಿರಿಯ ಮಕ್ಕಳು ಹೆಣ್ಣಾಗಿ ಅವರ ಮದುವೆಗೆ ಸಾಲ ಮಾಡಿದವರು. ಹೆಂಡತಿಯದೂ ಮಗಳದೂ ಒಟ್ಟಿಗೆ ಬಾಣಂತನದ ಖರ್ಚಿಗಾಗಿ ಗೋಳಾಡುವವರು. ಕೆಲವರು ತಮ್ಮ ಮಗ ಮೆಟ್ರಿಕ್ ಆದ ತಕ್ಷಣ ತಮ್ಮದೇ ಕಚೇರಿಯಲ್ಲಿ ಎಲ್ಲಿಯಾದರೂ ಕೆಲಸಕ್ಕೆ ಸೇರಿಸಿದ್ದರು. ಅಂಥ ಕಷ್ಟಕಾಲದಲ್ಲಿಯೂ ನಮ್ಮ ತಂದೆ ಮಗನನ್ನು ಕೆಲಸಕ್ಕೆ ಸೇರಿಸದೆ ಕಾಲೇಜಿಗೆ ಕಳಿಸಿದ್ದು ಕೆಲವರಿಗೆ ಹೊಟ್ಟೆಯುರಿ. ಅಂಥವರು ಕೆಲವೊಮ್ಮೆ ಕುಹಕ ನುಡಿಯುತ್ತಿದ್ದರು. ''ಇನ್ನೇನು ಇನಾಮದಾರ್ ಮಗ ಐ.ಸಿ.ಎಸ್. ಪಾಸು ಮಾಡಿ ಬರುತ್ತಾನೆ. ಆಮೇಲೆ ಇನಾಮದಾರ್ ಅವರನ್ನು ಮಾತಾಡಿಸುವುದು ಸಾಧ್ಯವೇ'' ಮುಂತಾಗಿ ! ತುಂಬ ಸಭ್ಯ ಹಾಗೂ ಮೃದುಸ್ವಭಾವದ ನಮ್ಮ ತಂದೆಗೆ ತುಂಬಾ ಬೇಜಾರಾಗುತ್ತಿತ್ತು. ಅವರು ಮನೆಗೆ ಬಂದನಂತರ ನಮ್ಮ ತಾಯಿಗೆ ಆ ಮಾತು ಹೇಳಿದರು. ಆಗ ನಮ್ಮ ತಾಯಿ ತುಂಬ ಅಭಿಮಾನದಿಂದ ''ನೀವೇಕೆ ಸುಮ್ಮನಿದ್ದಿರಿ ? ಅವರಿಗೆ ಹೇಳಬೇಕಿತ್ತು – ನನ್ನ ಮಗ ಐ.ಸಿ.ಎಸ್. ಪಾಸು ಮಾಡಿ ಬರುವವರೆಗೆ ನಿಮ್ಮ ಚಿಳ್ಳೆಪಿಳ್ಳೆ ಮಕ್ಕಳು ದೊಡ್ಡವರಾಗಿರುತ್ತಾರೆ. ಅವರಿಗೆಲ್ಲ ಕೆಲಸ ಕೊಡಿಸುತ್ತಾನೆ ಅಂತ !'' ಅಷ್ಟು ಅಭಿಮಾನ ನಮ್ಮ ತಾಯಿಗೆ, ತನ್ನ ಮಗನ ವಿಷಯಕ್ಕೆ ! ಇಂದಿನಂತೆ ಆಗ ಜಿಲ್ಲೆ ತಾಲ್ಲೂಕುಗಳಲ್ಲೆಲ್ಲ ಕಾಲೇಜುಗಳಿರಲಿಲ್ಲ. ನಮ್ಮಣ್ಣ ಓದುವುದಕ್ಕೆ ಧಾರವಾಡಕ್ಕೆ ಹೋಗಬೇಕಾಯಿತು. ನಮ್ಮ ತಾಯಿಗೆ ಮಗ ವಿದೇಶಕ್ಕೆ ಹೋದಷ್ಟು ದೂರ. ಅದೆಷ್ಟು ಅಳುತ್ತಿದ್ದಳೊ.

ವೆಂಕಣ್ಣ ರಜೆಗೆ ಮನೆಗೆ ಬಂದಾಗ ನಮಗೆ ದೀಪಾವಳಿ ಹಬ್ಬ ಬಂದಂತೆ ಸಂಭ್ರಮ. ಎಲ್ಲ ಹಬ್ಬ ಬಿಟ್ಟು ದೀಪಾವಳಿಯೇ ಏಕೆ ? ಅದಕ್ಕೆ ಕಾರಣ ಸುಗಂಧ. ದೀಪಾವಳಿ ಹಬ್ಬಕ್ಕೆ ನಮ್ಮ ಮನೆಯಲ್ಲಿ ಅತ್ತರು, ಸುವಾಸನೆ ಎಣ್ಣೆ ಮುಂತಾದವುಗಳನ್ನು ಬೆಳ್ಳಿ ಬಟ್ಟಲಿನಲ್ಲಿ ಹಾಕಿ ಸ್ನಾನದ ಸಿದ್ಧತೆ ಮಾಡುತ್ತಿದ್ದರು. ಸೀಗೆಕಾಯಿಯಲ್ಲಿ ಸುಗಂಧ ಮಿಶ್ರಿತಪುಡಿ ಇರುತ್ತಿತ್ತು. ವೆಂಕಣ್ಣ ಧಾರವಾಡ ಅಥವಾ ಮುಂಬಯಿಯಿಂದ ಬಂದರೆ ದೀಪಾವಳಿ ಇಲ್ಲದೇ ಆ ಸುವಾಸನೆ ನಮಗೆ ಸಂತೋಷ ತರುತ್ತಿತ್ತು. ಆತ ಬಂದ ಕೂಡಲೇ ಆತನ ಟ್ರಂಕ್ ತೆಗೆದು ನೋಡುವುದಕ್ಕೆ ನಮಗೆಲ್ಲ ಉತ್ಸಾಹ. ಚಹಾ ತಿಂಡಿ ಮುಗಿದ ಮೇಲೆ ಟ್ರಂಕ್ ತೆಗೆಯುವುದು. ನಾವೆಲ್ಲ ಸುತ್ತಲೂ ಸೇರಿ ಟ್ರಂಕ್‌ನಲ್ಲಿ ತಲೆ ಬಗ್ಗಿಸುವುದು. ಪುಸ್ತಕಗಳು,

ಇಸ್ತ್ರಿ ಬಟ್ಟೆಗಳು ! ಅವುಗಳನ್ನು ನೋಡಿಯೂ ನಮಗೆ ಖುಷಿ. ನಮ್ಮಣ್ಣ ಎಷ್ಟೊಂದು ಓದುತ್ತಾನೆ ಎಂದು. ಆದರೆ ನನ್ನ ದೃಷ್ಟಿ ಆ ಪುಸ್ತಕ ಹಾಗೂ ಬಟ್ಟೆಗಳ ಮಧ್ಯದ ಬಿರುಕಿನಲ್ಲಿಟ್ಟ ಒಂದೆರಡು ವಸ್ತುಗಳತ್ತಲೇ ಹರಿಯುತ್ತಿತ್ತು. ''ವೆಂಕಣ್ಣ ಅದನ್ನು ತೋರಿಸು... ಇದನ್ನು ತೋರಿಸು, ಅದೇನು.... ಇದೇನು ? ಕೇಳಿದಾಗ ನಮ್ಮಣ್ಣ ಹೆಜಲಿನ್ ಸ್ನೋ.. ಬ್ರಿಲಿಯಂಟೈನ್‌ನ ಆಕರ್ಷಕವಾದ ಗಾಜಿನ ಪುಟ್ಟ ಬಾಟಲ್, ಪಿಯರ್ಸ್ ಸೋಪು, ಕನ್ನಡಿ, ಬಣ್ಣದ ಉದ್ದವಾದ ಬಾಚಣಿಕೆ — ಎಲ್ಲವನ್ನೂ ಹೊರಗೆ ತೆಗೆಯುತ್ತಿದ್ದ. ಮುಚ್ಚಳ ತೆಗೆದು ಒಂದೊಂದನ್ನೇ ನಾನು ಮೂಸಿ ನೋಡಿ 'ಹಾಽಽ' ಎನ್ನುತ್ತಿದ್ದೆ. ನನಗೆ ಅದನ್ನು ಉಪಯೋಗಿಸಿ ನೋಡುವ ಕುತೂಹಲ. ಆದರೆ ನಮ್ಮ ತಾಯಿ ಅದೆಲ್ಲ ಹೆಣ್ಣುಮಕ್ಕಳು ಉಪಯೋಗಿಸುವಂಥದಲ್ಲ ಎಂದಾಗ ಪಿಯರ್ಸ್ ಸೋಪು ಮಾತ್ರ ತೆಗೆದುಕೊಂಡು ಅದರ ಮಧ್ಯದ ತಗ್ಗನ್ನು ಬಿಸಿಲಿನಲ್ಲಿ ಸೂರ್ಯನತ್ತ ಎತ್ತಿ ಹಿಡಿಯುವುದು. ಕಣ್ಣು ಕುಕ್ಕುತ್ತಿರಲಿಲ್ಲ. ಅದರ ಪಾರದರ್ಶಕತೆ ಏನೋ ಖುಷಿ ಕೊಡುತ್ತಿತ್ತು. ಅದನ್ನು ನಾನು ವರ್ಣಿಸಿದಾಗ ವೆಂಕಣ್ಣ ''ಅದರಲ್ಲಿ ಕುದುರೆ ಲದ್ದಿ, ಮುದುಕಿಯ ಸಿ – ಸಿ'' ಎಂದು ಹೇಳಿ ''ಅದಕ್ಕೇ ಸೋಪು ಅಷ್ಟು ಕಪ್ಪಾಗಿರುವುದು'' ಎಂದು ಹಾಸ್ಯ ಮಾಡುತ್ತಿದ್ದ. ಅದು ನನಗೆ ನಿಜ ಎನಿಸದಿದ್ದರೂ ಸುಳ್ಳು ಎಂದು ಎಂದೂ ಹೊಳೆಯುತ್ತಿರಲಿಲ್ಲ. ನಮ್ಮಣ್ಣ ಹೇಳುವುದು ಸುಳ್ಳು ಹೇಗಿರಲು ಸಾಧ್ಯ?!

ಹಾಗೆಯೇ ವೆಂಕಣ್ಣ ಮುಂಬಯಿಯಲ್ಲಿ ಓದುತ್ತಿದ್ದಾಗ ಕರ್ಪೂರದ ಬೊಂಬೆ ತರಲು ಪೀಡಿಸುತ್ತಿದ್ದೆವು — ನಾನು, ನನ್ನ ತಂಗಿ, ನಮ್ಮಣ್ಣ ರಜೆಗೆ ಬಂದ ಕೂಡಲೆ ಯಥಾ ಪ್ರಕಾರ ಟ್ರಂಕಿನಲ್ಲಿ ಮೂಗು ತೂರಿಸುವುದು, ಬೊಂಬೆ ಕೇಳುವುದು. ಅವನು ''ದೊಡ್ಡವಾದ ಎರಡು ಬೊಂಬೆಗಳನ್ನು ಕೊಂಡಿದ್ದೆ. ಅದಕ್ಕೆ ಕೀಲಿ ಕೊಟ್ಟರೆ ನಡೆಯಲು ಬರುತ್ತಿತ್ತು. ನನ್ನ ಟ್ರಂಕಿನಲ್ಲಿ ಅದಕ್ಕೆ ಸ್ಥಳ ಸಾಲಲಿಲ್ಲ. ನೀವು ನಡೆಯುತ್ತ ಬನ್ನಿ ಎಂದು ಹಿಂದೆಯೇ ಬಿಟ್ಟು ಬಂದೆ. ಮುಂಬಯಿಯಿಂದ ಬರುವುದೆಂದರೆ ಮಧ್ಯ ಅದೆಷ್ಟು ಸಮುದ್ರಗಳು, ನದಿಗಳು, ಸುರಂಗ ಮಾರ್ಗಗಳು .... ಕತ್ತಲಿನಲ್ಲಿ ತಪ್ಪಿಸಿಕೊಂಡವೋ, ನದಿಯಲ್ಲಿ ಬಿದ್ದು ಹರಿದು ಹೋದವೋ, ಸಮುದ್ರದಲ್ಲಿ ಸತ್ತು ಹೋದವೋ...' ಎಂದು ಹೇಳುತ್ತಿದ್ದ. ಅದು ನಿಜವೋ ಸುಳ್ಳೋ ಎಂದು ನಾನು ಎಂದೂ ವಿಚಾರ ಮಾಡಿದ್ದೇ ಇಲ್ಲ! ಕತ್ತಲಿನಲ್ಲಿ ಆ ಬೊಂಬೆಗಳು ನಡೆದು ಬರುತ್ತಿದ್ದಾಗ ಎದುರಿಗೆ ನದಿ ಅಡ್ಡವಾಗಿ ಬಂದ ಚಿತ್ರ ನನ್ನ ಕಣ್ಣ ಮುಂದೆ ನಿಲ್ಲುತ್ತಿತ್ತು. ಅದನ್ನು ನಾನು ಯೋಚಿಸುತ್ತ ಮುಂದಿನ ಪ್ರಶ್ನೆಗಳನ್ನು ಕೇಳಿದ್ದೇ ಇಲ್ಲ! ಈಗಲೂ ನಮ್ಮಣ್ಣ ಹೇಳಿದ ಆ ಬೊಂಬೆಗಳ ಚಿತ್ರ ಕಣ್ಣೆದುರು ನಿಲ್ಲುತ್ತದೆ. ನಮ್ಮ ತಂದೆತಾಯಿಗಳು ಕಳಿಸಿದ ಅಲ್ಪ ಹಣದಲ್ಲಿ ಬೊಂಬೆ ಎಲ್ಲಿಂದ ತಂದಾನು ಎಂದು ಈಗ ಅರ್ಥವಾಗುತ್ತದೆ.

ಕಣ್ಣೆದುರು ಚಿತ್ರ ನಿಲ್ಲುವಂತೆ ಕತೆ ಕಟ್ಟುವುದು ಚಿಕ್ಕಂದಿನಿಂದಲೇ ನಮ್ಮಣ್ಣನಿಗೆ ಸಹಜ ಕಲೆ ಇರಬಹುದು. ವೆಂಕಣ್ಣ ಓದಿದ ನಾಟಕ ಅಥವಾ ಕತೆ ಕಾದಂಬರಿಗಳನ್ನು ನಾವು

ಎಂದೂ ಮರೆಯುವಂತೆಯೇ ಇಲ್ಲ. ಒಂದು ಬಾರಿ ನಾವು ಧಾರವಾಡಕ್ಕೆ ಹೋದಾಗ 'ಮಂಕೀಸ್ ಪಾ' ಹಾಗೂ 'ಡಾಲ್ಸ್ ಹೌಸ್' ನಾಟಕ ಓದಿಸಿಕೊಂಡಿದ್ದೆವು. 'ಡಾಲ್ಸ್ ಹೌಸ್' ಮುಗಿದ ನಂತರ ಪ್ರಾರಂಭವಾದ ಚರ್ಚೆ ಬೆಳಗಿನ ನಾಲ್ಕು ಗಂಟೆಯವರೆಗೂ ಮುಂದುವರಿಯಿತು. ಕೊನೆಗೆ ವೆಂಕಣ್ಣ — ''ಇಬ್ಸೆನ್ ಆ ನಾಟಕವನ್ನು ಹೆಂಗಸರ ಪರವಹಿಸಿ ಬರೆದದ್ದೇನೂ ಅಲ್ಲ. ಇದು ಇಂದು ನಿನ್ನೆಯ ಚರ್ಚೆಯೂ ಅಲ್ಲ. ಸುಮ್ಮನೆ ಮಲಗಿಕೊಳ್ಳಿ'' ಎಂದು ಹೇಳಿದರೂ ನೋರಾ ಮನೆ ಬಿಟ್ಟು ಹೋದ ಚಿತ್ರ ಮನದಿಂದ ಮರೆಯಾಗಲಿಲ್ಲ.

'ಮಂಕೀಸ್ ಪಾ' ಓದಿದ ದಿನ ಹೊರಗಡೆ ಹುಣ್ಣಿಮೆಯ ಬೆಳದಿಂಗಳು. ದೀಪ ತೆಗೆದರೂ ಕಿಟಕಿ ಬಾಗಿಲುಗಳಿಂದ ಗಾಳಿಗೆ ಅಲ್ಲಾಡುವ ಗಿಡಗಳ ನೆರಳು-ಬೆಳಕಿನ ಕಣ್ಣು ಮುಚ್ಚಾಲೆ ಕಂಡುಬರುತ್ತಿತ್ತು. ಸಣ್ಣ ಚೌಕಗಳಲ್ಲಿ ಗಾಜು ಕೂಡಿಸಿದ ಬಾಗಿಲಿನ ಒಂದುಗಾಜು ಒಡೆದು ಅದಕ್ಕೆ ಕಾಗದ ಅಂಟಿಸಿತ್ತು. ಗಾಳಿಗೆ ಹರಿದ ಆ ಕಾಗದ ಅದುರಿ ಅದು ಶಬ್ದ ಮಾಡುತ್ತಿತ್ತು. ವೆಂಕಣ್ಣ ಈ ನಾಟಕವನ್ನು ಎಷ್ಟು ಭಾವಪೂರ್ಣವಾಗಿ ಓದಿದ್ದನೆಂದರೆ ಆ ಕತೆ ಕಣ್ಣೆದುರು ನಡೆದಂತೆ ಭಾಸವಾಯಿತು. ರಾತ್ರಿ ಮಲಗಿದರೆ ನನಗೆ ನಿದ್ರೆಯೇ ಬರಲಿಲ್ಲ. ಬಾಗಿಲಿನತ್ತ ನೋಡುವ ಧೈರ್ಯವೇ ಇಲ್ಲ. ಗಾಳಿಗೆ ಬಾಗಿಲಿನ ಶಬ್ದವಾದರೆ ಆ ಜೀವಾತ್ಮ ಗೋರಿಯಿಂದ ಎದ್ದು ಬಂದು ಬಾಗಿಲು ಬಡಿದಂತೆ ! ನಮ್ಮಣ್ಣನ ಕೈಲಿ ಕಲಿತ ವಿದ್ಯಾರ್ಥಿಗಳು ಅವರು ಪಾಠ ಹೇಳುವುದನ್ನು ತುಂಬ ಹೊಗಳುತ್ತಾರೆ. ಅವರು ಹೊಗಳಿದಾಗ ನನ್ನ ಅನುಭವ ನೆನೆಸಿಕೊಳ್ಳುತ್ತೇನೆ. ಆಗ ನಮ್ಮಣ್ಣನ ಕ್ಲಾಸಿನಲ್ಲಿ ಓದುವ ಭಾಗ್ಯ ದೇವರು ನನಗೆ ಕರುಣಿಸಲಿಲ್ಲವಲ್ಲ ? ಎಂದುಕೊಳ್ಳುತ್ತೇನೆ. ಈ ಮಾತು ನಿಜವಾಗಿಯೂ ವರ್ಣರಂಜಿತವಲ್ಲ. ಅಥವಾ ನಮ್ಮಣ್ಣನನ್ನು ಕುರಿತು ಹೊಗಳಿಕೆಯ ಮಾತೂ ಅಲ್ಲ. ಒಂದು ಬಾರಿ 'ಬಾಟಲ್ ಇಂಪ್' ಓದಿಸಿಕೊಂಡಿದ್ದೆವು. ನನಗಂತೂ ಸೀಮೆಎಣ್ಣೆ ಸ್ಟವ್‌ಗೆ ಸುರಿಯುವಾಗಲೂ ಆ 'ಜಿನ್' ಜಿಗಿದು ಬಂದಂತೆ ತೋರುತ್ತಿದ್ದ.

ಇತ್ತೀಚೆಗೆ ಇಂಥ ಸುದಿನಗಳೇ ನಮ್ಮ ಪಾಲಿಗಿಲ್ಲ ಎನಿಸುತ್ತದೆ. ಹಿಂದಿನಂತೆ ಅಣ್ಣ ನೀಡುತ್ತಿದ್ದ ಆ ಸಾಹಿತ್ಯಸುಧೆಯನ್ನು ಸವಿಯುವ ಅವಕಾಶವೇ ಸಿಕ್ಕುವುದಿಲ್ಲ. ನಮ್ಮಣ್ಣ ತುಂಬ ಗಂಭೀರವಾಗಿಬಿಟ್ಟಿದ್ದಾನೆ. ಕೆಲಸ ಕಾರ್ಯಗಳೂ ತುಂಬಾ ಹೆಚ್ಚಿವೆ. ನಿಶ್ಚಿತ ಅವಧಿಯಲ್ಲಿ ಆ ಬರವಣಿಗೆಗಳೆಲ್ಲ ಮುಗಿಯಬೇಕು. ಸದಾ ಆ ಕುರಿತು ಚಿಂತನ. ಪ್ರಪಂಚದಲ್ಲಿ ನಡೆಯುವ ಘಟನೆಗಳನ್ನು ಕುರಿತು ಯೋಚನೆ. ಅದಕ್ಕಾಗಿ ತಾನೇನೂ ಮಾಡಲಾಗದ್ದಕ್ಕೆ ಅನೇಕ ಬಾರಿ ನಿಸ್ಸಹಾಯಕತೆ ಕಂಡುಬರುತ್ತದೆ. ಒಳ್ಳೆಯದನ್ನು ಪತ್ರಿಕೆಯಲ್ಲಿ ಓದಿದಾಗ ಸಂತೋಷದಿಂದ ನಾನು ಹಾಗೂ ನಮ್ಮತ್ತಿಗೆ ಇದ್ದಲ್ಲಿ ಬಂದು ಹೇಳುವುದೂ ಉಂಟು. ನಾನು ಬೆಳಿಗ್ಗೆ ರೇಡಿಯೊ ಹಾಕಿದಾಗ ಅಕಸ್ಮಾತ್ ಒಮ್ಮೊಮ್ಮೆ ನಮ್ಮಣ್ಣನ ಧ್ವನಿ ಕೇಳಿಸುತ್ತದೆ. ಅದು ಚಿಂತನ ಕಾರ್ಯಕ್ರಮದಲ್ಲಿಯ ಪ್ರಸಾರ. ಒಂದು ಬಾರಿ ವ್ಯಕ್ತಿ ಸ್ವಾತಂತ್ರ್ಯ ಕುರಿತು

ಹೇಳಿದ್ದು ತುಂಬ ಚೆನ್ನಾಗಿತ್ತು. ಅದನ್ನು ಪ್ರತಿಯೊಬ್ಬರೂ ಕೇಳಬೇಕು ಎನಿಸಿತು ನನಗೆ. ಆದರೆ ನಾನು ಖಾಲಿ ಟೇಪ್ ತಂದು ರಿಕಾರ್ಡ್ ಮಾಡುವಷ್ಟರಲ್ಲಿ ಮಾತು ಮುಗಿಯುವುದಕ್ಕೆ ಬಂದಿತ್ತು. ಸರ್ವರಿಗೂ ಸಂಬಂಧಿಸಿದ ಸಾಮಾನ್ಯ ವಿಷಯವನ್ನು ಎಳೆಎಳೆಯಾಗಿ ಬಿಡಿಸಿ ತಿಳಿಯಾಗಿ ಹೇಳುವುದು ವೆಂಕಣ್ಣನಿಗೆ ಸಹಜ ಮನೋಧರ್ಮ. ಈ ಚಿಂತನದಲ್ಲಿ ಹೇಳುವ ಮಾತುಗಳಲ್ಲಿ ಅನುಭವದ ಪಾಕವಿರುತ್ತದೆ. ಪಾಂಡಿತ್ಯದ ಪ್ರದರ್ಶನ ಅಥವಾ ಭಾಷೆಯ ಗಡಸುತನ ಸ್ವಲ್ಪವೂ ಕಂಡುಬರುವದಿಲ್ಲ. ಮನಸ್ಸಿನಲ್ಲಿ ಸದಾಕಾಲವೂ ಏನನ್ನಾದರೂ ಮಥಿಸುತ್ತಲೇ ಇರುವುದರಿಂದಲೋ ಏನೊ, ಏನಾದರೂ ಕೇಳುವುದಕ್ಕೆ ಅಥವಾ ಹೇಳುವುದಕ್ಕೆ ಹೋದರೆ ಗಮನವೇ ಇರುವುದಿಲ್ಲ. ಮತ್ತೆ ಕೇಳಿದರೆ ಒಂದು ಮಾತಿಗೆ ಒಂದು ಉತ್ತರ! ಅಷ್ಟರಮಟ್ಟಿಗೆ ಚಿಂತನ – ಮಂಥನ – ಲೇಖನಗಳಲ್ಲಿ ನಿಮಗ್ನ.

'ಹುಟ್ಟುಗುಣ ಹುಗಿದರೂ ಹೋಗುವುದಿಲ್ಲ – ಮೂರು ವರ್ಷದ ಬುದ್ಧಿ ನೂರು ವರ್ಷಕ್ಕೂ ಬದಲಾಗುವುದಿಲ್ಲ' ಮುಂತಾದ ನಾಣ್ಣುಡಿಗಳಿವೆ. ಇವು ಸುಳ್ಳು ಎನಿಸುತ್ತವೆ – ನಮ್ಮಣ್ಣನನ್ನು ಚಿಕ್ಕಂದಿನಿಂದ ಇಂದಿನವರೆಗೆ ನೋಡಿದವರಿಗೆ. ಸಣ್ಣವನಾಗಿದ್ದಾಗಿನ ನಮ್ಮಣ್ಣ ಹಾಗೂ ಇಂದಿನ ನಮ್ಮಣ್ಣನಲ್ಲಿ ಹೋಲಿಕೆ ತೀರಾ ಕಡಿಮೆ. ಆಗಿನಂತೆ ಈಗ ಇಲ್ಲವೆಂದೇ ಹೇಳಬಹುದು. ಆಗ ತೀರಾ ಹಾಸ್ಯ ಸ್ವಭಾವದವನಾಗಿದ್ದ.

ನಾನು ಒಮ್ಮೊಮ್ಮೆ ಯೋಚಿಸುತ್ತೇನೆ – ನನಗೆ ನಮ್ಮಣ್ಣನ ಯಾವ ವ್ಯಕ್ತಿತ್ವ ಇಷ್ಟ ಎಂದು. ನಮ್ಮಣ್ಣನನ್ನು ನೋಡಿದಾಕ್ಷಣ ನನಗೆ ಉತ್ತರ ಹೊಳೆಯುತ್ತದೆ. ಚಿಕ್ಕವರಿದ್ದಾಗ ಹುಳಿ ಹುಣಸೇಕಾಯಿ ಕಸಕು ಮಾವಿನಕಾಯಿ ಇಷ್ಟವಾಗುತ್ತದೆ. ಆದರೆ ವಯಸ್ಸಾದ ನಂತರ ಇಷ್ಟವಾಗುವುದು ಹಣ್ಣಾದ ಮಾವಿನ ಹಣ್ಣು!

ನನಗೆ ಸುಮಾರು ಹನ್ನೆರಡು ವರ್ಷಗಳಿದ್ದಾಗಿನ ಒಂದು ಸಂದರ್ಭ. ನಮ್ಮ ಪಕ್ಕದ ಮನೆಯ ಯಜಮಾನನ ತಾಯಿ ಮುದುಕಿ ಮುತ್ತೈದೆ ತೀರಿಕೊಂಡಳು. ಅಕ್ಕಪಕ್ಕದ ಮನೆಯವರು ಸಮೀಪದವರು ದೂರದವರು ಆ ಮನೆಯ ಮುಂದೆ ನೆರೆದರು. ಸ್ವಲ್ಪ ಸಮಯದ ನಂತರ ಕಳೇಬರವನ್ನು ಹೊರಗೆ ತರಬೇಕು. ಆ ಸಮಯಕ್ಕೆ ನಮ್ಮ ತಾಯಿ ನಾವು ಹೆದರಿಕೊಳ್ಳಬಾರದೆಂದು ನಮ್ಮನ್ನು ಮಹಡಿ ಮೇಲೆ ಕಳಿಸಿ ಹೊರಗಿನ ಬಾಗಿಲನ್ನು ಭದ್ರಪಡಿಸಿ ಪಕ್ಕದ ಮನೆಯ ಮುಂದೆ ಹೋದರು. ನನಗೂ ನಮ್ಮ ಇನ್ನೊಬ್ಬ ಅಣ್ಣ ಲಕ್ಕಾನಿಗೂ (ಎಲ್.ಎಂ. ಇನಾಂದಾರ್) ಹೊರಗೆ ನಡೆಯುವುದನ್ನೆಲ್ಲ ನೋಡುವ ಆಸೆ. ಅವನು ಒಂದು ಉಪಾಯ ಸೂಚಿಸಿದ. ಮಹಡಿಯ ಮೇಲಿನ ಒಂದು ಕಟ್ಟೆಯ ಮೇಲೆ ಹತ್ತಿದರೆ ಅಲ್ಲಿಯ ಕಿಟಕಿಯಿಂದ ಹೊರಗಿನದೆಲ್ಲ ಕಾಣಿಸುತ್ತಿತ್ತು. ಅವನ ಉಪಾಯ ನನಗೂ ಇಷ್ಟವಾಯಿತು. ನಾವಿಬ್ಬರೂ ಕಟ್ಟೆ ಹತ್ತಿ ನಮ್ಮ ತಾಯಿಯ ಹೆದರಿಕೆ ಇಲ್ಲದೆ ಹೊರಗೆ ನಡೆಯುತ್ತಿದ್ದುದನ್ನು ಸಿನೆಮಾದ ಬಾಕ್ಸ್ ಟಿಕೆಟ್ ಸ್ಥಳದಲ್ಲಿ ಕುಳಿತಂತೆ ನಿಂತು

ನೋಡಿದೆವು. ಆ ಮುದುಕಿ ಮುತ್ತೈದೆಗೆ ಸ್ನಾನ ಮಾಡಿಸಿ ಕಡ್ಡು ಜರತಾರಿ ಸೀರೆ ಉಡಿಸಿದರು. ಹಣೆಗೆ ದೊಡ್ಡ ಕುಂಕುಮ ಇಟ್ಟರು. ತಲೆತುಂಬ ಹೂ ಮುಡಿಸಿದರು. ತೆಂಗಿನಕಾಯಿ ಅಕ್ಕಿ ಅಡಿಕೆ ಹಣ್ಣು ಕಾಯಿಗಳಿಂದ ಮಡಿಲು ತುಂಬಿದರು. ಕೊನೆಗೆ ಆಕೆಯನ್ನು ಬಿದಿರು ಚಟ್ಟಕ್ಕೆ ಬಿಗಿದರು. ಆಕೆಯ ಮಗಳು ತುಂಬಾ ಜೋರಾಗಿ ಕಿರುಚಿ ಅಳಲಾರಂಭಿಸಿದರು. ಆಕೆಯನ್ನು ಯಾರೋ ಹಿಡಿದುಕೊಂಡರು. ನಾಲ್ಕು ಜನ ಆ ಬಿದಿರು ಚಟ್ಟ ಎತ್ತಿದರು. ಆಗ ಸುಮಾರು ಸಂಜೆ ಆರೂವರೆ ಏಳು ಗಂಟೆ ಆಗಿರಬಹುದು. ಮಬ್ಬು ಕತ್ತಲಾಗುತ್ತ ಬಂದಿತ್ತು. ನಾನು ಲಕ್ಕಾ ಬಗ್ಗಿ ಬಗ್ಗಿ ಅದು ಕಣ್ಮರೆ ಆಗುವವರೆಗೆ ನೋಡಿದೆವು. ಆದರೆ ಆ ಮುದುಕಿಯ ತಲೆಯ ಭಾಗ ಗಟ್ಟಿಯಾಗಿ ಕಟ್ಟಿರಲಿಲ್ಲವೊ ಏನೊ — ಆ ನಾಲ್ಕು ಜನ ಹೊತ್ತವರು ಹೆಜ್ಜೆ ಇಡುವಾಗ ಆ ತಲೆ ಆಚೆಈಚೆ ಅಲ್ಲಾಡುತ್ತಿತ್ತು. ನಾನು ಲಕ್ಕಾ ಭಯದಿಂದ ಕೈಕೈ ಹಿಡಿದುಕೊಂಡು ಓಡಿಬಂದೆವು. ಅಂದಿನಿಂದ ಸುಮಾರು ತಿಂಗಳು ದಿನ ಕಾಲ ನಾವಿಬ್ಬರೂ ಒಬ್ಬೊಬ್ಬರೇ ಓಡಾಡಿದ್ದೇ ಇಲ್ಲ. ಸಂಜೆ ಆದರೆ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಅಗಲುತ್ತಿರಲಿಲ್ಲ. ಊಟಕ್ಕೆ ಕುಳಿತಾಗ, ಕೈ ತೊಳೆಯಲು ಬಚ್ಚಲು ಮನೆಗೆ ಹೋಗುವಾಗ, ಮಲಗುವಾಗ ತೀರ ಹತ್ತಿರ ಕೈ ಹಿಡಿದುಕೊಂಡೇ ನಮ್ಮ ಕೆಲಸ ಕಾರ್ಯಗಳು ನಡೆಯುತ್ತಿದ್ದವು. ಇದನ್ನು ಕಂಡು ವೆಂಕಣ್ಣನಿಗೆ ತುಂಬ ತಮಾಷೆ ಎನಿಸುತ್ತಿತ್ತು. ''ಆ ಮುದುಕಿ ದೆವ್ವವಾಗಿದೆ. ನಿಮ್ಮ ಹಿಂದೆ ಬರುತ್ತಿದೆ. ಮಹಡಿ ಮೇಲೆ ಕುಳಿತಿದೆ. ಹಂಡೆಯಲ್ಲಿ ತೇಲುತ್ತಿದೆ. ಬಕೆಟ್‌ನಲ್ಲಿ ಡಬ್ಬು ಬಿದ್ದಿದೆ, ಈಗ ನೋಡಿದೆ'' ಮುಂತಾಗಿ ಹಾಸ್ಯ ಮಾಡುತ್ತಿದ್ದ. ನಮ್ಮ ನೆರಳಿಗೆ ಕೂಡ ನಾವು ಹೆದರುತ್ತಿದ್ದೆವು. ರಾತ್ರಿ ಏನು ಕೆಲಸ ಹೇಳಿದರೂ ಮಾಡುತ್ತಿರಲಿಲ್ಲ!

ಒಂದು ದಿನ ಈ ಮಾತಿಗೆ ಸುಮಾರು ತಿಂಗಳು ಕಳೆದುಹೋಗಿತ್ತು, ನಮ್ಮ ಅತ್ತಿಗೆ ತವರು ಮನೆಗೆ ಹೋಗಿದ್ದರು. ನನಗೆ ಎಂಜಲು ತಟ್ಟೆ ಎತ್ತಿ ನೆಲ ಸಾರಿಸುವ ಕೆಲಸವಿತ್ತು. ಲಕ್ಕಾನಿಗೆ ಸ್ವಲ್ಪ ಭಯ ಕಡಿಮೆ ಆಗಿತ್ತೊ ಅಥವಾ ಅಲ್ಲಿದ್ದರೆ ತಟ್ಟೆ ಎತ್ತಲು ಜೊತೆ ಬರಬೇಕಾಗುತ್ತಿತ್ತು ಎಂತಲೋ ಏನೋ ಅಡಿಗೆಮನೆಯಿಂದ ತಪ್ಪಿಸಿಕೊಂಡಿದ್ದ. ನಾನು ತಟ್ಟೆಗಳನ್ನು ಎತ್ತಿ ಮನಸ್ಸಿನಲ್ಲಿ ಆ ಮುದುಕಿಯ ಚಿತ್ರವನ್ನೇ ಕಾಣುತ್ತ ಬಚ್ಚಲು ಬಳಿ ಹೋದೆ. ಇನ್ನೇನು ಆ ತಟ್ಟೆಗಳನ್ನು ಬಚ್ಚಲಿನ ಹೊಸ್ತಿಲ ಬಳಿಯೇ ಒಳಗಡೆ ಥಟ್ಟನೆ ಬಿಸಾಕಿ ಓಡಿ ಬರುವವಳಿದ್ದೆ. ಅಲ್ಲಿ ದೀಪವೂ ಇರಲಿಲ್ಲ. ವೆಂಕಣ್ಣ ಎಲ್ಲಿದ್ದನೋ ಗೊತ್ತಿಲ್ಲ. ಆದರೆ ಇದನ್ನೆಲ್ಲ ನೋಡುತ್ತಿದ್ದ. ''ಬಂದಿತು ಮುದುಕಿ'' ಎಂದು ಕೂಗಿ ಚಪ್ಪಾಳೆ ತಟ್ಟಿದ.

ನಾನು ಜೋರಾಗಿ ಕಿರುಚಿದ್ದೊಂದೇ ನನಗೆ ನೆನಪು ! ಮುಂದೇನಾಯಿತೋ ! ನಮ್ಮ ತಾಯಿ ನಮ್ಮ ತಂದೆ ವೆಂಕಣ್ಣನನ್ನು ಹುಡುಕಿದರೆ ಆತನ ಪತ್ತೆಯೇ ಇರಲಿಲ್ಲ ! ಇನ್ನೇನಾಗುತ್ತದೆಯೋ ಎಂದು ಆತನಿಗೂ ತುಂಬ ಗಾಬರಿ ಆಗಿರಬಹುದು. ಮಿತ್ರರಾದ ಪಿ.ವಿ. ಜೋಶಿಯವರ ಮನೆಗೆ ಹೋಗಿದ್ದು ರಾತ್ರಿ ಯಾವಾಗಲೋ ಮನೆಗೆ ಬಂದದ್ದು ಅನಂತರ ಗೊತ್ತಾಯಿತು !

ನಮ್ಮ ಅಣ್ಣನಿಗೆ ತುಂಬ ಚಿಕ್ಕ ವಯಸ್ಸಿನಿಂದಲೇ ಆತ್ಮಗೌರವ ಅಭಿಮಾನ ಜಾಸ್ತಿ ಎಂದು ನಮ್ಮ ತಾಯಿ ಹೇಳುತ್ತಿದ್ದರು. ಚಿಕ್ಕವನಿದ್ದಾಗ ನಮ್ಮಣ್ಣ ನಮ್ಮ ತಾಯಿಯ ತವರುಮನೆ ಹುದ್ಲಿಯಲ್ಲೇ ಹೆಚ್ಚಾಗಿ ಇರುತ್ತಿದ್ದ. ಒಂದು ಸಂದರ್ಭ ನಮ್ಮ ತಾಯಿ ಹೇಳುತ್ತಿದ್ದರು. ನಮ್ಮಣ್ಣನಿಗೆ ಆಗ ಎರಡು ವರ್ಷ ಇರಬಹುದು. ನಮ್ಮ ಸೋದರಮಾವನ ಮಗನಿಗೂ ಅದೇ ವಯಸ್ಸು. ಆರೆಂಟು ತಿಂಗಳು ಆತ ನಮ್ಮಣ್ಣನಿಗಿಂತ ಹಿರಿಯ. ಆದರೆ ಆತ ಹಣವಿದ್ದ ಒಂದು ತಾಯಿಗೆ ದತ್ತುಪುತ್ರ. ಆ ಮನೆಯಲ್ಲಿ ಆ ಮಗು ಎಂದರೆ ರಾಜಪುತ್ರ! ಮೊದಲ ಮಹಾಯುದ್ಧದ ಸಮಯವೇನೊ – ಸಕ್ಕರೆಗೆ ತಾಪತ್ರಯ. ಮನೆಯಲ್ಲಿ ಬುಂದಿಲಾಡು ಮಾಡಿದ್ದರಂತೆ. ಆ ದತ್ತುಪುತ್ರನಿಗೆ ಮಾತ್ರ ಸಕ್ಕರೆ ಬುಂದಿಲಾಡು. ಉಳಿದವರಿಗೆ ಬೆಲ್ಲದಲ್ಲಿ ಮಾಡಿದ ಕಪ್ಪು ಲಾಡುಗಳು. ಒಂದೇ ವಯಸ್ಸಿನ ಈ ಇಬ್ಬರೂ ಮಕ್ಕಳಿಗೆ ಲಾಡು ಕೊಡುವಾಗ ಆತನಿಗೆ ಸಕ್ಕರೆಯದು, ನಮ್ಮಣ್ಣನ ಕೈಯಲ್ಲಿ ಬೆಲ್ಲದ್ದು ಕೊಟ್ಟರಂತೆ ನಮ್ಮ ಸೋದರತ್ತೆ. ನಮ್ಮಣ್ಣ ಒಂದು ಮಾತು ಪಿಟ್ಟೆನ್ನದೆ ಆ ಲಾಡೂನ ಕ್ರಿಕೆಟ್ ಬಾಲ್‌ನಂತೆ ಬಿಸಾಕಿಬಿಟ್ಟ. ಉಳಿದ ಮಕ್ಕಳು ಸುಮ್ಮನೆ ತಿನ್ನುತ್ತಿದ್ದರು ! ಕೊಟ್ಟವರಿಗೆ ತುಂಬ ಅವಮಾನವಾಯಿತು ಈ ಮಗುವಿನಿಂದ. ಸುದ್ದಿ ನಮ್ಮ ತಾಯಿಯ ತಂದೆಯವರೆಗೆ ತಲುಪಿತು. ದೊಡ್ಡ ಜಮೀನುದಾರರ ಮನೆ ಅದು. ಅವರು ಹೊರಗಿನಿಂದ ಬಂದು, ‘ಆತ ಮಾಡಿದ್ದು ಸರಿ ! ನೀವು ಎರಡು ನಮೂನೆಯ ಲಾಡುಗಳನ್ನು ಮಾಡಿದ್ದೇಕೆ ?’ ಎಂದು ಜೋರು ಮಾಡಿದರಂತೆ. ಅಂದಿನಿಂದ ಆ ‘ರಾಜಪುತ್ರ’ ಹಾಗೂ ಸಾಮಾನ್ಯರ ಮಧ್ಯದ ಅಂತರ ನಿಂತುಹೋಯಿತಂತೆ !

ಕನ್ನಡದ ಗಾದೆ ಮಾತೊಂದಿದೆ : “ಹಿರಿ ಸೊಸೆ ಆಗಬಾರದು — ಹಿತ್ತಿಲಿನ ಬಾಗಿಲಾಗಬಾರದು” ಎಂದು. ಹಿರಿ ಸೊಸೆಗೆ ಜವಾಬ್ದಾರಿಗಳು ಜಾಸ್ತಿ. ಅದರಂತೆ ಹಿತ್ತಿಲು ಬಾಗಿಲಿನಿಂದ ನಡೆಯುವ ಕೆಲಸಗಳೂ ಹೆಚ್ಚು. ದನಕರುಗಳ ಆಗಮನಗಳು ಮಾತ್ರ ಅಲ್ಲದೆ ಅನೇಕ ಪ್ರಮುಖ ಪ್ರಕರಣಗಳಿಂದ ‘ಹಿತ್ತಿಲ ಕಡೆಗೆ’ ಹೋಗುವವರೆಗೂ ಹಿತ್ತಿಲು ಬಾಗಿಲಿಗೆ ಮಹತ್ವವಿದ್ದರೂ ಅದಕ್ಕೆ ಮುಂಬಾಗಿಲಿನ ಸೌಂದರ್ಯವಿಲ್ಲ. ತಳಿರುತೋರಣಗಳ ಅಲಂಕಾರಗಳಿಲ್ಲ. ಆರತಿ ಎತ್ತಿ ಮದುಮಕ್ಕಳನ್ನು ಒಳಗೆ ಕರೆತರುವ ಮಾನ ಮರ್ಯಾದೆ ಇಲ್ಲ!

ಆದರೆ ಇದೇ ಮಾತನ್ನು ಹಿರಿಯ ಮಗನಿಗೆ ಹೋಲಿಸುವುದಾದರೆ ಆತನಿಗೆ ಹಿಂಬಾಗಿಲಿನ ಕರ್ತವ್ಯ, ಮುಂಬಾಗಿಲಿನ ಮರ್ಯಾದೆ ಎರಡೂ ಇವೆ. ಇವೆರಡನ್ನೂ ತೂಗಿಸಿಕೊಂಡು ಹೋಗುವ ಹಿರಿ ಹೊಣೆಗಾರಿಕೆ ನಮ್ಮ ಮನೆಯಲ್ಲಿ ವೆಂಕಣ್ಣನಿಗೆ ಇತ್ತು. ಕಾರಣ ಆತ ನಮ್ಮ ತಂದೆತಾಯಿಗಳಿಗೆ ಮೆಚ್ಚಿನ ಚೊಚ್ಚಲು ಮಗ.

ನಮ್ಮ ತಾಯಿ ‘ಹೊರಗೆ’ ಇದ್ದಾಗ ನಮ್ಮಣ್ಣ ಅಡಿಗೆಮಾಡಿ ಎಲ್ಲರಿಗೂ ಊಟ ಬಡಿಸಿ ನನ್ನದೂ ನನ್ನ ತಂಗಿಯದೂ ತಲೆಬಾಚಿ ಜಡೆ ಹೆಣೆಯಬೇಕು. ಮುಖ ತೊಳೆದು

ಕುಂಕುಮ ಇಟ್ಟು ಆತ ಪುಸ್ತಕ ಜೋಡಿಸಿಕೊಳ್ಳುತ್ತಿದ್ದರೆ ನಾನು ಆತ ಇಟ್ಟ ಕುಂಕುಮ ದುಂಡಾಗಿಲ್ಲ, ಜಡೆ ಸಡಿಲಾಗಿದೆ ಎಂದು ರಂಪಾಟ ಮಾಡುತ್ತಿದ್ದೆ. ನಮ್ಮ ತಾಯಿ ಹೆಣೆಯುತ್ತಿದ್ದ ಜಡೆ ಪಿಟ್ ಎಂದು ಬಿಗಿಯಾಗಿರುತ್ತಿತ್ತು. ನಮ್ಮಣ್ಣ ದಪ್ಪದಾದ ದಾರ ಅಥವಾ ಸುತಳಿಯನ್ನು ಜಡೆಯ ಮೇಲ್ಗಡೆ ಗಟ್ಟಿಯಾಗಿ ಕಟ್ಟಿ ಬಿಗಿಯುತ್ತಿದ್ದ. ಕುಂಕುಮ ದುಂಡಾಗಿಸಲು ಒಂದು ಕಾಗದ ಚೌಕವಾಗಿ ಮಡಿಸಿ ಅದರ ಮೂಲೆ ಕತ್ತರಿಸಿ ಹಣೆಯ ಮೇಲೆ ಆ ರಂಧ್ರದ ಭಾಗ ಇಟ್ಟು ಅದರಲ್ಲಿ ಮೇಣ ತುಂಬಿ ಕುಂಕುಮ ಸವರುತ್ತಿದ್ದ. ಈ ಕಾರ್ಯ ನಡೆಯುತ್ತಿರುವಾಗಲೇ ನನ್ನ ಹಣೆಗೆ ಕಾಗದ ಬೇಡ ಎಂದು ಕೂಗಿಕೊಳ್ಳುತ್ತಿದ್ದೆ! ಆಗ ಆತ ಪೈಮಸ್ ಸ್ಟವ್‌ನ ಪಿನ್ ತಂದು ಅದರ ಹಿಂಭಾಗದ ರಂಧ್ರ ಹುಬ್ಬಿನ ಮಧ್ಯ ಇಟ್ಟು ದುಂಡಾದ ಕುಂಕುಮ ಇಡಲು ಪ್ರಯತ್ನಿಸುತ್ತಿದ್ದ. ನನ್ನ ಗಲಾಟೆ ನಡೆದೇ ಇರುತ್ತಿತ್ತು. ಈಗ ತೆಗೆದುಬಿಡುತ್ತೇನೆ ಎಂದು ಸಮಾಧಾನ ಹೇಳಿ ಆ ಕುಂಕುಮ ಕಾರ್ಯ ಮುಗಿಸುತ್ತಿದ್ದ. ಪಿನ್ನಿನ ರಂಧ್ರದಲ್ಲಿ ಮೇಣ ತುಂಬಿ ಕುಂಕುಮ ತುಂಬಿ ಅದನ್ನು ಎತ್ತಿ ತೆಗೆದಾಗ ಆ ಕುಂಕುಮ ನಮ್ಮ ತಾಯಿ ಇಟ್ಟ ಸ್ಥಳದಲ್ಲಿ ಇರುತ್ತಿರಲಿಲ್ಲ. ಆಕೆ ಇಡುತ್ತಿದ್ದ ಅಳತೆ ಆಕಾರವೂ ಇಲ್ಲ. ದಾರ ಬಿಗಿದ ಆ ಜಡೆ, ಕುಂಕುಮ ಉಜ್ಜಿ ಉಜ್ಜಿ ತಿಕ್ಕಿದ ಆ ಕೆಂಪು ಮಿಶ್ರಿತ ಕಪ್ಪು ಹಣೆ ಹೇಗೆ ಕಾಣಿಸುತ್ತಿರಬಹುದು ಎಂದು ನೆನಪಾದರೆ ನಗು ಬರುತ್ತದೆ!

ಗಡಿಬಿಡಿಯಲ್ಲಿ ಅಡಿಗೆ ಮಾಡಿ ಎಲ್ಲರಿಗೂ ಊಟ ಬಡಿಸಿ ಆತ ಶಾಲೆಗೆ ಹೋಗುವುದಕ್ಕೆ ಅದೆಷ್ಟು ಹೊತ್ತು ಹಿಡಿಯುತ್ತಿತ್ತೋ. ಆದರೆ ನಾನು ಮಾತ್ರ ಆತ ಮಾಡಿದ ಪಳದ್ಯೆ ನೀರಾಗಿದೆ, ಸಾಂಬಾರ್ ಚೆನ್ನಾಗಿಲ್ಲ, ಪಲ್ಲೆ ಇಲ್ಲದೆ ಊಟ ಹೇಗೆ ಮಾಡುವುದು, ಮುಂತಾಗಿ ಅಳುತ್ತಿದ್ದೆ. ಎಲ್ಲರೂ ನನಗೆ 'ಅಳಬುರುಕಿ' ಎಂದು ಕರೆಯುತ್ತಿದ್ದರು! 'ಅಂಬಾ ಭವಾನಿ !' ಎಂದು ಬೈಯುತ್ತಿದ್ದರು. ಆದರೆ ವೆಂಕಣ್ಣ ಎಂದೂ ನನ್ನನ್ನು ಬೈದದ್ದು ಇಲ್ಲವೇ ಇಲ್ಲ! ಅದರಿಂದಾಗಿಯೇ ಇರಬಹುದು ನನಗೆ ಆತನ ಮೇಲೆ ನನ್ನ ತಾಯಿಗಿಂತ ಜಾಸ್ತಿ ಪ್ರೀತಿ! ಈಗ ನಮ್ಮ ತಾಯಿ ಇಲ್ಲದಿರುವುದರಿಂದ ಈ ಮಾತು ಹೇಳುವ ಧೈರ್ಯ !! ನಾವು ಚಿಕ್ಕವರಿದ್ದಾಗ ನಮ್ಮಣ್ಣ ಹಬ್ಬಹರಿದಿನಗಳಲ್ಲಿ ಕಷ್ಟಕಾರ್ಪಣ್ಯಗಳಲ್ಲಿ ತಾಯಿಯೊಂದಿಗೆ ದುಡಿಯುತ್ತಿದ್ದುದನ್ನು ನೆನೆಸಿಕೊಂಡರೆ ಅಂದಿನ ಬ್ರಾಹ್ಮಣ ಕುಟುಂಬದಲ್ಲಿ ಗಂಡು ಮಕ್ಕಳು ಸಹ ಪಡುತ್ತಿದ್ದ ಪಾಡಿನ ಒಂದು ಚಿತ್ರ ಕಣ್ಣೆದುರು ನಿಲ್ಲುತ್ತದೆ.

ಚಿಕ್ಕಂದಿನಲ್ಲಿಯ ಇನ್ನೊಂದು ನೆನಪು ಎಂದರೆ ಸಂಕ್ರಾಂತಿ. ಉತ್ತರ ಕರ್ನಾಟಕದಲ್ಲಿ ಎಳ್ಳಿನ ಜೊತೆ ಕಬ್ಬು ಕಡ್ಲೆಗಿಡ ಅಥವಾ ಬದನೆಕಾಯಿ ಬಾಳೆಹಣ್ಣುಗಳನ್ನು ಕುಮಾರಿಕೆಯರು ಬೀರಿ ಬರುವ ಪದ್ಧತಿ. ನಮ್ಮ ತಾಯಿ ನನಗೆ ತನ್ನದೊಂದು ದೊಡ್ಡ ಸೀರೆ ಎರಡು ಮಡಿಕೆ ಮಡಿಸಿ ಉಡಿಸಿದರು. ಸೊಂಟಕ್ಕೆ ತೆಳುವಾದ ಬಿಳಿ ಹಗ್ಗ ಬಿಗಿದು ಗಟ್ಟಿಯಾಗಿ ಕಟ್ಟಿ ಅದರ ಮೇಲೆ ಬೆಳ್ಳಿ ಡಾಬು ಹಾಕಿ ಕೊರಳಿಗೆ ಒಂದೆರಡು ದೊಡ್ಡ ಸರಗಳನ್ನು ಹಾಕಿ ಹತ್ತೆಂಟು ಮನೆಗಳಿಗೆ ಬೀರಿ ಬರಲು ನಮ್ಮಣ್ಣನನ್ನು ಜೊತೆಮಾಡಿ ಕಳಿಸಿದರು. ನಮ್ಮಣ್ಣನ ಒಂದು

ಕೈಯಲ್ಲಿ ಕಬ್ಬುಗಳ ತುಂಡು ಕಡ್ಲೆಗಿಡಗಳ ಕಟ್ಟುಗಳನ್ನು ತುಂಬಿದ ತಟ್ಟೆ, ಇನ್ನೊಂದು ಕೈಯಲ್ಲಿ ನನ್ನ ಕೈ. ಒಂದೆರಡು ಮನೆಗಳಲ್ಲಿ ಬೀರಿಸಿ ಆಗಿರಬಹುದು – ಬೀದಿಗೆ ಬಂದಾಗ ಸೀರೆ ಸೊಂಟದಿಂದ ಜಾರಿ ಬೀಳತೊಡಗಿತು. ಜೊತೆಗೆ ನನ್ನ 'ಏಕನಾದ'. ನಮ್ಮಣ್ಣ ಒಂದು ಕೈಯಲ್ಲಿ ಆ ಸೀರೆ ಮುದ್ದೆಯೊಂದಿಗೆ ನನ್ನನ್ನೂ, ಇನ್ನೊಂದು ಕೈಯಲ್ಲಿ ಆ ಕಬ್ಬು ಕಡ್ಲೆಗಿಡದ ತಟ್ಟೆಯನ್ನೂ ಹೊತ್ತು ಮನೆ ತಲುಪಬೇಕಾಗಿದ್ದರೆ ದೊಡ್ಡ ಸರ್ಕಸ್ ಆಗಿರಬಹುದು, ಇಲ್ಲವೆ ಸಂಜೀವಿನಿ ಪರ್ವತ ಹೊತ್ತ ಹನುಮಂತನ ದೃಶ್ಯ ಇರಬಹುದು ! ಮನೆಯಲ್ಲಿ ಎಲ್ಲರೂ 'ನಿನಗೆ ಸೀರೆ ಉಡಬೇಕಿತ್ತಲ್ಲವೆ ? ಹೇಗಾಯಿತು !' ಎಂದು ಹಾಸ್ಯ ಮಾಡಿದರು. ಆದರೆ ಅಷ್ಟು ಕಷ್ಟದಿಂದ ಆತನ ವಯಸ್ಸಿಗೆ ಭಾರವಾದ ನನ್ನನ್ನು, ಸೀರೆಮುದ್ದೆ, ಕಡ್ಲೆಗಿಡ, ಕಬ್ಬು ಅರಿಷಿಣ, ಕುಂಕುಮ ಮುಂತಾದ್ದನ್ನು ಕೆಳಗೆ ಚೆಲ್ಲದೆ ಮನೆ ತಲುಪಿದವನು ತನ್ನ ಕೆಲಸಕ್ಕೆ ತಾನು ಹೊರಟುಹೋದ. ಈ ನೆನಪು ನನಗೆ ತುಂಬ ಮಸುಕಾಗಿದ್ದರೂ ಸಂಕ್ರಾಂತಿ ಎಂದಾಗಲೆಲ್ಲ ಆ ದೃಶ್ಯ ಕಣ್ಣೆದುರು ನಿಲ್ಲುತ್ತದೆ.

''ಹೆಣ್ಣುಮಕ್ಕಳು ಇನ್ನೊಬ್ಬರ ಮನೆಯ ಸೊತ್ತು. ಯಾರದೋ ಮನೆಯ ಮುಸುರೆ ತೊಳೆಯಲು ಹೋಗುವವರು. ಅವರಿಗೇಕೆ ಇಂಗ್ಲಿಷು ? ಎರಡಕ್ಷರ ಓದಲು ಬಂದರೆ ಸಾಕು'' ಎನ್ನುವುದು ನಮ್ಮ ಹಳೆಯ ಕಾಲದ ತಾಯಿಯ ಅಭಿಪ್ರಾಯ. ಆದರೆ ಮನೆಗೆ ತಂತಿ ಬಂದರೆ ಮಾತ್ರ ಆಕೆಗೆ ತುಂಬ ಹೆದರಿಕೆ. ಆಗ ಇಂದಿನಷ್ಟು ಸಲೀಸಾಗಿ ಹುಟ್ಟುಹಬ್ಬ, ಮದುವೆ, ಮುಂಜಿಗಳಿಗೆಲ್ಲ ತಂತಿ ಮೂಲಕ ಅಭಿನಂದನೆ ಕಳಿಸುವ ಪರಿಪಾಠ ಅಷ್ಟಾಗಿ ಇರಲಿಲ್ಲ. ದೊಡ್ಡ ದೊಡ್ಡ ಪರೀಕ್ಷೆಗಳ ಫಲಿತಾಂಶಗಳಿಗೆ ಅಥವಾ ಯಾರಾದರೂ 'ಗೊಟಕ್' ಎಂದರೆ ತಂತಿ ಬರುತ್ತಿದ್ದವು. ಆಕೆ ಬೆಳೆದ ವಾತಾವರಣದಲ್ಲಿ ನಮ್ಮ ತಾಯಿಗೆ ತಂತಿ ಓದಲು ಬಾರದು. ಅದಕ್ಕಾಗಿ ಹೆಣ್ಣು ಮಗಳಾದರೂ ತಂತಿ ಓದಲು ಬರುವಷ್ಟು ಶಿಕ್ಷಣ ಇರಲಿ ಎಂದು ನನ್ನನ್ನು ಇಂಗ್ಲಿಷ್ ಸ್ಕೂಲಿಗೆ ಸೇರಿಸಲು ಒಪ್ಪಿದ್ದರು ನಮ್ಮ ತಾಯಿ. ಆ ಒಂದು ಘಟನೆಯನ್ನು ನಾನು ಎಂದೂ ಮರೆಯುವಂತಿಲ್ಲ.

ನನಗೆ ಆಗ ಹತ್ತು ಹನ್ನೊಂದು ವಯಸ್ಸು. ಆಗಿನ ಶಿಕ್ಷಣ ಪದ್ಧತಿಯ ಪ್ರಕಾರ ಪ್ರೈಮರಿ ನಾಲ್ಕು ವರ್ಷ ಓದಿದ ನಂತರ ಇಂಗ್ಲಿಷ್ ಒಂದರಿಂದ ಏಳರವರೆಗೆ ಓದಬೇಕು. ಏಳನೇ ಕ್ಲಾಸಿಗೆ ಅಂದರೆ ಒಟ್ಟು ಹನ್ನೊಂದನೇ ಕ್ಲಾಸಿಗೆ ಮೆಟ್ರಿಕ್ ಪರೀಕ್ಷೆ. ಪ್ರೈಮರಿ ಒಂದರಿಂದ ಕನ್ನಡದಲ್ಲಿಯೇ ಏಳು ಕ್ಲಾಸು ಓದಿದರೆ ಮುಲ್ಕಿ ಪರೀಕ್ಷೆ ಅಥವಾ ಎಲ್.ಎಸ್. ಪರೀಕ್ಷೆ ಪಾಸು ಮಾಡಬೇಕು. ನನಗೆ ಇಂಗ್ಲಿಷ್ ಓದುವ ಆಸೆ. ನಮ್ಮ ತಾಯಿ ಇಂಗ್ಲಿಷ್ ಓದಿದರೆ ಹೆಣ್ಣು ಮಕ್ಕಳು ಕೆಟ್ಟೇ ಹೋಗುತ್ತಾರೆ ಎಂದು ತಿಳಿದಿದ್ದರು. ಏನೋ ನಮ್ಮಣ್ಣನ ಕೃಪೆಯಿಂದ ನನಗೆ ಇಂಗ್ಲಿಷ್ ಶಾಲೆ – ಎ. ಕೆ. ಗರ್ಲ್ಸ್ ಹೈಸ್ಕೂಲ್ – ಕಟ್ಟೆ ಏರುವುದಕ್ಕೆ ಸಿಕ್ಕಿತು.

ನಮ್ಮ ತಾಯಿ ಕಟ್ಟಾಜ್ಞೆ ಮಾಡಿಯೇ ಸ್ಕೂಲಿಗೆ ಸೇರಿಸಿದ್ದರು. ಶಾಲೆ ಪ್ರಾರಂಭ ಆಗುವುದಕ್ಕೆ ಹತ್ತು ನಿಮಿಷ ಮೊದಲು ಮನೆ ಬಿಡಬೇಕು. ಶಾಲೆ ಮುಗಿದ ಗಂಟೆಯಾಗಿ

ಹತ್ತು ನಿಮಿಷದಲ್ಲಿ ಮನೆಯಲ್ಲಿರಬೇಕು. ಶಾಲೆಯಲ್ಲಿ ಆಟ–ಪಾಟ ಒಂದೂ ಇಲ್ಲ. ಹೆಣ್ಣು ಮಕ್ಕಳಿಗೆ ಹನ್ನೆರಡು ಆಣೆ ಮಾತ್ರ ಶುಲ್ಕವಿತ್ತು : ಹತ್ತು ಆಣೆ ಶಾಲಾಶುಲ್ಕ ; ಎರಡು ಆಣೆ ಆಟಕ್ಕಾಗಿ, 'ಗೇಮ್ಸ್ ಫೀ' ಎಂದು. ಆಟಕ್ಕಾಗಿ ದುಡ್ಡೇಕೆ ಕೊಡಬೇಕು ? ಮನೆಗೆ ಬಂದು ಆಟ ಆಡಿ ಎನ್ನುತ್ತಿದ್ದರು. ಈ ಮಾತಿಗೂ ನಮ್ಮಣ್ಣನ ಮಧ್ಯಸ್ಥಿಕೆ ಆಗಬೇಕು ! ಆಟ ಆಡದೇ ಇದ್ದರೂ ಎರಡಾಣೆ ಕೊಡಲೇಬೇಕು ಎಂದು ತಿಳಿದಾಗ ಹಣ ಸಿಕ್ಕರೂ ಆಟ ಮಾತ್ರ ಇಲ್ಲ. ಆಗ ನಾವು ಸ್ಕೂಲಿನಲ್ಲಿ ಆಡುವ ಆಟಗಳು ನಾಲ್ಕು. ಒಂದು ಕಬಡ್ಡಿ, ಇನ್ನೊಂದು ಖೊಖ್ಖೊ. ಇನ್ನೆರಡು ಬ್ಯಾಡ್‌ಮಿಂಟನ್ ಮತ್ತು ವಾಲಿಬಾಲ್. ನಮ್ಮ ತಾಯಿಯ ಪ್ರಕಾರ ಇವೆಲ್ಲ ಗಂಡು ಮಕ್ಕಳ ಆಟ. ಹೆಣ್ಣು ಮಕ್ಕಳು ಆಡಿದರೆ 'ಗಂಡ್ರಾಮಿ'ಗಳು ! ಶಾಲೆಯ ಸಮಯದಲ್ಲಿ ಮನೆಯಲ್ಲಿ ಗೊತ್ತಾಗದೇ ನಾವು ಕಳ್ಳವಾಗಿ ಆಡುತ್ತಿದ್ದೆವು. ಆ ಮಾತು ಬೇರೆ !

ಹೀಗೆ ನನ್ನ ಶಾಲಾ ಶಿಕ್ಷಣ ನಡೆದು ಆರೆಂಟು ತಿಂಗಳು ಅಥವಾ ವರ್ಷ ಕಳೆದಿರ ಬಹುದು. ನಮ್ಮ ಹೆಡ್‌ಮಿಸ್ಟ್ರೆಸ್‌ಗೆ ಧಾರವಾಡಕ್ಕೆ ವರ್ಗವಾಯಿತು. ಅವರು ಹೊರಡುವ ಮೊದಲ ದಿನ ಅವರಿಗೆ ಶಾಲೆಯ ಮಕ್ಕಳು ಹಾಗೂ ಶಿಕ್ಷಕರು ಸೇರಿ 'ಪಾರ್ಟಿ' ಕೊಟ್ಟಾಯಿತು. ಪಾರ್ಟಿ ಎಂದರೇನು – ಎಲ್ಲರೂ ಮನೆಯಿಂದ ಸ್ವಲ್ಪ ಅವಲಕ್ಕಿ ಚೂಡಾ, ಎರಡು ಬಾಳೆಹಣ್ಣು ತೆಗೆದುಕೊಂಡು ಹೋಗುವುದು. ಕೆಲವರು ಟೀ ಸೊಪ್ಪು , ಸಕ್ಕರೆ, ಹಾಲು ಹೀಗೆ ತಂದು ಎಲ್ಲರೂ ಸೇರಿ ತಂದಿದ್ದನ್ನು ಒಟ್ಟು ಕೂಡಿಸಿ ಚಹಾ ಚೂಡಾ ಬಾಳೆಹಣ್ಣು ತಿಂದು ಪಾರ್ಟಿ ಆಯಿತು. ಅದಕ್ಕೇನೂ ಮನೆಯಲ್ಲಿ ತಕರಾರು ಇರಲಿಲ್ಲ. ಆದರೆ ಮರುದಿನ ಬೆಳಿಗ್ಗೆ ಅವರನ್ನು ಬೀಳ್ಕೊಡಲು ಎಲ್ಲರೂ ಸ್ಟೇಶನ್ನಿಗೆ ಹೋಗುವವ ರಿದ್ದರು. ನಾನು ಮನೆಯಲ್ಲಿ ಕೇಳಿದ್ದರೆ ನಮ್ಮ ತಾಯಿ ಖಂಡಿತ ಒಪ್ಪುತ್ತಿರಲಿಲ್ಲ. ಹೋಗದೇ ಇದ್ದರೆ – ಇಡೀ ಶಾಲೆಯ ಹುಡುಗಿಯರೆಲ್ಲರೂ ಹೋಗುತ್ತಿದ್ದಾರೆ, ನಾನೊಬ್ಬಳು ಮಾತ್ರ ಹೋಗದೆ ಇದ್ದರೆ ಎಲ್ಲರೂ ಏನೆಂದುಕೊಂಡಾರು ? ಈಕೆಗೆ 'ಬಾಯಿಯವರ' ಮೇಲೆ ಪ್ರೀತಿಯೇ ಇಲ್ಲ ಎಂದರೆ ? ಹಾಗೆ ನೋಡಿದರೆ ಆ ಹೆಡ್ ಮಿಸ್ಟ್ರೆಸ್ ಜೊತೆ ಒಂದು ದಿನ ಮಾತನಾಡುವ ಅವಕಾಶವೂ ನಮಗಿರಲಿಲ್ಲ!

ಅಂದು ಶನಿವಾರವಿತ್ತು. ಬೆಳಗಿನ ಶಾಲೆ. ರೈಲು ಬಿಡುವುದು ಹತ್ತು ಗಂಟೆಗೆ. ನಾನೆಂದುಕೊಂಡೆ : ಎಲ್ಲರೊಡನೆ ಹೊರಟುಬಿಡುವುದು, ಹತ್ತು ಗಂಟೆಗೆ ರೈಲು ಬಿಟ್ಟ ತಕ್ಷಣ ಓಡುತ್ತ ಬಂದುಬಿಡುವುದು ! ಸರಿಯಾದ ಸಮಯಕ್ಕೆ ಮನೆ ತಲುಪಬಹುದು. ಹೆಚ್ಚೆಂದರೆ ಐದು ಹತ್ತು ನಿಮಿಷ ತಡವಾಗಬಹುದು, ಏನಾದರೂ ಹೇಳಿದರೆ ಸರಿ — ಎಂದು ಯೋಚಿಸಿದ್ದೆ ! ರೈಲುನಿಲ್ದಾಣದಿಂದ ಸುಮಾರು ಮೂರು ಮೂರೂವರೆ ಮೈಲಿ ನಡೆಯಲು ಎಷ್ಟು ಹೊತ್ತು ಬೇಕಾದೀತು ಎಂಬ ಕಲ್ಪನೆಯೂ ಇಲ್ಲ. ಇಬ್ಬಿಬ್ಬರು ಹುಡುಗಿ ಯರನ್ನು ಸಾಲುಸಾಲಾಗಿ ನಿಲ್ಲಿಸಿ ಬಾತುಕೋಳಿಗಳನ್ನು ನಡೆಸಿಕೊಂಡು ಹೋಗುವಂತೆ

ಮಧ್ಯೆ ಒಂದಿಬ್ಬರು ಶಿಕ್ಷಕ ಶಿಕ್ಷಕಿಯರು ನಡೆದು ಬರುತ್ತಿದ್ದರು. ಅಲ್ಲದೆ, ಅಂದು ರೈಲು ಒಂದು ಗಂಟೆ ತಡವಾಗಿ ಬೇರೆ ಬಂತು. ನನಗೆ ದಿಕ್ಕು ತೋರದಾಗಿತ್ತು. ಆದರೆ ಉಪಾಯವಿರಲಿಲ್ಲ.

ಹನ್ನೊಂದು ಗಂಟೆಯಾದರೂ ನಾನು ಮನೆಗೆ ಬಾರದೇ ಇದ್ದಾಗ ನಮ್ಮ ತಾಯಿಗೆ ಚಿಂತೆಯೋ ಕೋಪವೊ — ಅಂತೂ ವೆಂಕಣ್ಣನಿಗೆ ಬಂದಿತು ಗ್ರಹಚಾರ! ‘‘ಹೋಗು — ಇಂಗ್ರೇಜೀ ಶಾಲೆಗೆ ಕಳಿಸಿದೀರಲ್ಲ, ಎಲ್ಲಿ ಹೋದಳು ನೋಡಿ'' ಎಂದು ಗಲಾಟೆ ಮಾಡಿದಾಗ, ಆಗ ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ ನಮ್ಮಣ್ಣ ಕಚೇರಿಗೆ ಹೊತ್ತಾಗಿದ್ದರೂ ತನ್ನ ಕೆಲಸ ಬಿಟ್ಟು ನಮ್ಮ ಶಾಲೆಗೆ ಹೋದ. ‘ಎಲ್ಲಿಗೆ ಹೋದಾಳು, ಬರುತ್ತಾಳೆ' ಎಂದು ಹೇಳುವ ಧೈರ್ಯವಾದರೂ ಇತ್ತೊ ಇಲ್ಲವೊ ! ಎಲ್ಲ ಹುಡುಗಿಯರೂ ಸ್ಟೇಶನ್ನಿಗೆ ಹೋಗಿದ್ದಾರೆ ಎಂದು ನಮ್ಮ ಶಾಲೆಯಲ್ಲಿ ಗೊತ್ತಾಯಿತು. ನಮ್ಮಣ್ಣ ಸ್ಟೇಶನ್ ರೋಡ್‌ಗೆ ಸೈಕಲ್ ತಿರುಗಿಸಿದ. ಹನ್ನೆರಡು ಗಂಟೆಯ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಹಸಿವೆ ಬಾಯಾರಿಕೆ ಗಳಿಂದ ಮುಖ ಒಣಗಿಸಿಕೊಂಡು ಸುಸ್ತಾಗಿ ನಡೆದು ಬರುತ್ತಿದ್ದ ಹುಡುಗಿಯರ ಗುಂಪಿನಲ್ಲಿ ನನ್ನನ್ನು ನೋಡಿದ ವೆಂಕಣ್ಣನ ಮುಖದಲ್ಲಿ ಒಂದು ಸಣ್ಣ ನಗುವಿನ ಛಾಯೆ ಮೂಡಿ ಮಾಯವಾಯಿತು. ಒಂದು ಮಾತೂ ಹೇಳದೆ ಆತ ಸೈಕಲ್ ತಿರುಗಿಸಿಕೊಂಡು ಕೆಲಸಕ್ಕೆ ಹೊರಟುಹೋದ.

ಅಣ್ಣ ಏನೂ ಹೇಳದೇ ಇದ್ದರೂ ಆ ನಗುವಿನ ರೇಖೆ ನನ್ನನ್ನು ನಡುಗಿಸಿಬಿಟ್ಟಿತು. ‘ಹೋಗು ಮನೆಗೆ, ಚೆನ್ನಾಗಿ ಕಾದಿದೆ ಅಲ್ಲಿ' ಎಂಬ ಮಾತು ಸ್ಪಷ್ಟವಾಗಿ ಮೂಡಿತ್ತು ಆ ನಗುವಿನ ರೇಖೆಯಲ್ಲಿ!

ಹಾಗೆಯೇ ಆಯಿತು ! ಮನೆ ತಲುಪುವುದಕ್ಕೆ ಬಾಗಿಲಿನಲ್ಲಿಯೇ ಕಾದಿದ್ದ ನಮ್ಮ ತಾಯಿ ಚೆನ್ನಾಗಿ ನಾಲ್ಕು ‘ಬಾರಿಸಿ' ಮನೆಯಲ್ಲಿ ಒಳಗಡೆ ಕರೆದುಕೊಳ್ಳದೆ ಹೊರಗಡೆಯೇ ನಿಲ್ಲಿಸಿದರು. ‘‘ಇನ್ನೂ ಇಂಗ್ರೇಜಿ ಶಾಲೆಯಲ್ಲಿ ಕಾಲಿಡುವುದಕ್ಕಿಲ್ಲ, ಹೀಗೆ ! ಇನ್ನೂ ಹೆಚ್ಚು ಕಲಿತರೆ ಯಾರ ಜೊತೆಯಾದರೂ ಓಡಿಹೋಗುತ್ತೀಯಾ. ನಾಳೆಯಿಂದ ಶಾಲೆ ಬಂದ್.'' ಊಟವಿಲ್ಲದೆ ನೀರಿಲ್ಲದೆ ಮನೆಯ ಕಾಂಪೌಂಡಿನಲ್ಲಿದ್ದ ಪಾರಿಜಾತದ ಗಿಡದ ಕೆಳಗೆ ನಿಂತು ಕೊಂಡಿದ್ದೆ. ನಮ್ಮ ತಂದೆ ಸಂಜೆ ಮನೆಗೆ ಬಂದ ನಂತರ ಮನೆಯಲ್ಲಿ ಸೇರಿಸಿಕೊಂಡರು.

ಆದರೆ ಮರುದಿನದಿಂದ ಶಾಲೆ ಮಾತ್ರ ಇಲ್ಲ. ಒಂದು ವಾರ ಹೇಗೋ ಕಳೆಯಿತು. ನನಗಾದ ಶಿಕ್ಷೆಯನ್ನು ರದ್ದುಪಡಿಸುವುದು ಯಾರಿಂದಲೂ ಸಾಧ್ಯವಿರಲಿಲ್ಲ. ವೆಂಕಣ್ಣನಿಗೆ ನನ್ನನ್ನು ಕಂಡು ಕನಿಕರ. ಆತ ನಮ್ಮ ತಾಯಿಯೊಂದಿಗೆ ಸಂಧಾನ ನಡೆಸಿದ. ನನ್ನ ಪರವಾಗಿ ಕ್ಷಮೆ ಕೋರಿದ. ಅದರಿಂದ ವಿಶೇಷ ಪರಿಣಾಮವಾಗಲಿಲ್ಲ, ಕೊನೆಗೆ ಆತ ‘‘ಆಕೆಗೇನು ತಿಳಿಯುತ್ತದೆ ? ಇನ್ನೂ ಚಿಕ್ಕವಳು. ಮನೆಯಲ್ಲಿದ್ದುಕೊಂಡು ಏನು ಮಾಡುತ್ತಾಳೆ ?'' ಎಂದರೆ ‘‘ಕೆಲಸ ಕಲಿತುಕೊಂಡಿರಲಿ'' ಎಂದರು ತಾಯಿ.

ಆದಕ್ಕೆ ನಮ್ಮಣ್ಣ— ''ಆದರೆ 'ನೋಡಲು ಬಂದಾಗ' ಹುಡುಗಿ ಏನು ಓದಿದ್ದಾಳೆ ? ಅಂದರೆ ಕಷ್ಟ.. ಈಗಿನ ಕಾಲದಲ್ಲಿ.'' ಸರಿ. ಈ ಅಸ್ತ್ರ ಚೆನ್ನಾಗಿ ನಾಟಿತು ! ವೆಂಕಣ್ಣ ಯಾರ ಜೊತೆಯೂ ಜೋರಾಗಿ ವಾದವಿವಾದ ಮಾಡುವುದಿಲ್ಲ. ಆದರೆ ಮೆತ್ತಗೆ ನಿಧಾನವಾಗಿ ಹೇಳಿದ್ದು ಸರಿಯಾಗಿ ಕೆಲಸ ಮಾಡುತ್ತದೆ ! ಬಹುಶಃ ಆದರಿಂದಲೇ ನಮ್ಮಣ್ಣನ ಮಾತಿಗೆ ನಮ್ಮ ಮನೆಯಲ್ಲಿ ತುಂಬ ಬೆಲೆ ಇದೆ.

ಹೇಗೋ ನಮ್ಮಣ್ಣನ ಕೃಪೆಯಿಂದ ನನಗೆ ಶಾಲೆಗೆ ಹೋಗುವುದಕ್ಕೆ ಸಿಕ್ಕಿತು. ಆದರೆ ನನಗೆ ಒಂದೇ ಚಿಂತೆ — ''ಎಂಟು ದಿನ ಶಾಲೆಗೆ ಯಾಕೆ ಬರಲಿಲ್ಲ ?'' ಎಂದು ಕೇಳಿದವರಿಗೆಲ್ಲ ಏನು ಹೇಳುವುದು ? ಆದರೆ ನಮ್ಮ ಪಕ್ಕದ ಮನೆ ಅರುಂಧತಿ ಮೊದಲೇ ಈ ಸುದ್ದಿ ಶಾಲೆಯಲ್ಲಿ ಎಲ್ಲರಿಗೂ ಹೇಳಿಬಿಟ್ಟಿದ್ದಳು. ಆಕೆಯು ನನ್ನ ಜೊತೆ ಸ್ಟೇಶನ್ನಿಗೆ ಬಂದಿದ್ದಳು. ಆದರೆ ಆಕೆಗೆ ಶಿಕ್ಷೆ ಆಗಿರಲಿಲ್ಲ.

ಇನ್ನೊಂದು ಪ್ರಸಂಗದಲ್ಲಿ ನಮ್ಮ ತಾಯಿ ನನಗಾಗಿ ಒಬ್ಬ ಶ್ರೀಮಂತ ಇಂಜನಿಯರ್ 'ವರ' ಹುಡುಕಿದ್ದರು. ಆದರೆ ಆತನಿಗೆ 'ಸ್ವಲ್ಪ' ವಯಸ್ಸು ಜಾಸ್ತಿಯಂತೆ. ನನಗೆ ಆಗ ಹದಿನಾಲ್ಕು ವರ್ಷ ಕೂಡ ಆಗಿರಲಿಲ್ಲ. ಹದಿನಾಲ್ಕಕ್ಕೆ ಮುಂಚೆ ಮದುವೆ ಮಾಡುವ ಆತುರ. ಆ 'ವರ'ನಿಗೆ ಮೂರು ಜನ ಮಕ್ಕಳು. ಹಿರಿ ಮಗಳು ನನ್ನ ವಯಸ್ಸಿನವಳು ! ನನಗೆ ಆ ಮೂರು ಮಕ್ಕಳು ಅಥವಾ ವಯಸ್ಸಾದ ಗಂಡ ಎನ್ನುವ ಯೋಚನೆಗಿಂತ ಆತನ ಸತ್ತು ಹೋದ ಹೆಂಡತಿ ದೆವ್ವವಾಗಿ ನನ್ನ ಕುತ್ತಿಗೆ ಹಿಸುಕಿದರೆ ?— ಎಂಬುದೇ ಭಯ ! ಆಗಲೂ ವೆಂಕಣ್ಣನೇ ನನ್ನನ್ನು ರಕ್ಷಿಸಿದ್ದು. ನಮ್ಮ ತಾಯಿ ಶ್ರೀಮಂತ ಅಳಿಯನ ಖುಷಿಯಲ್ಲಿದ್ದರು.

ವೆಂಕಣ್ಣ ತಾಯಿಗೆ ಹೇಳಿದ — ಆ 'ವರ' ತುಂಬ ವಯಸ್ಸಾದವ, ನಮ್ಮ ಪಿ.ವಿ. ಜೋಶಿಯವರ ಊರಿನವರು ಎಂದು ಎಲ್ಲ ಮಾಹಿತಿ ಒದಗಿಸಿದ. ಶ್ರೀ ಪಿ.ವಿ. ಜೋಶಿ ಈಗ ನಿವೃತ್ತ ಸರಕಾರಿ ಅಧಿಕಾರಿ. ನಮ್ಮಣ್ಣನಿಗೆ ಅತ್ಯಂತ ಸಮೀಪದ ಆತ್ಮೀಯ ಮಿತ್ರರು.

ನಮ್ಮ ತಾಯಿಗೆ ಸ್ವಲ್ಪ ಭಯವಾಯಿತು. ''ಹಾಗಿದ್ದರೆ ನೀನೇನು 'ವರ' ಹುಡುಕಿ ತರುತ್ತೀಯಾ ?'' ಎಂದರು ಸ್ವಲ್ಪ ಜೋರಾಗಿ.

''ಖಂಡಿತ ತರುತ್ತೇವೆ'' ಎಂದರು ಈ ಇಬ್ಬರು ಸ್ನೇಹಿತರು ಸೇರಿ.

''ಸರಿ, ನಿಮ್ಮ ಜವಾಬ್ದಾರಿ— ಯಾರನ್ನು ತರುತ್ತೀರೋ'' ಎಂದರು ನಮ್ಮ ತಾಯಿ.

ಈ ಇಬ್ಬರೂ ಸ್ನೇಹಿತರು ಸೇರಿ ತಮ್ಮ 'ಖಾಸ್' ಸ್ನೇಹಿತನಾದ ಇನ್ನೊಬ್ಬ ಮಿತ್ರನಿಗೆ ಮುಂಬಯಿಗೆ ಕಾಗದ ಬರೆದು ಆರು ತಿಂಗಳಲ್ಲಿ ಮದುವೆ ಮುಗಿಸಿಬಿಟ್ಟರು. ಹೊಂದಲಾರದ ಜಾತಕ ಕೂಡ ಸರಿಯಾಗಿ ಹೊಂದಿಸಿದ್ದರು !

ವೆಂಕಣ್ಣನಿಗೆ ತೀರ ಆತ್ಮೀಯ ಸ್ನೇಹಿತರೆಂದರೆ ಈ ನನ್ನ ಪತಿ ಎ.ಜಿ. ಕೊಪ್ಪರ್ ಹಾಗೂ ಪಿ.ವಿ. ಜೋಶಿ. ಈ ಮೂವರನ್ನೂ ಒಟ್ಟಿಗೆ ಸೇರಿಸುತ್ತಿದ್ದ ವಿಷಯವೆಂದರೆ

ಪುಸ್ತಕಗಳು. ಆ ಕುರಿತು ಚರ್ಚೆಗಳು ! ನಾನು ಚಿಕ್ಕವಳಿದ್ದಾಗ ಈ ಇಬ್ಬರನ್ನು ಬಿಟ್ಟರೆ ನಮ್ಮಣ್ಣನಿಗೆ ಬೇರೆ ಸ್ನೇಹಿತರನ್ನೇ ನಾನು ನೋಡಿಲ್ಲ.

ಈ ಮೂವರು ಬಾಗಿಲು ಮುಚ್ಚಿಕೊಂಡು ವೆಂಕಣ್ಣನ ರೂಮಿನಲ್ಲಿ ಕಳ್ಳವಾಗಿ ಸಿಗರೇಟು ಸೇದುತ್ತಿದ್ದರು. ನಮ್ಮ ತಾಯಿಗೆ ಎಲ್ಲಿಯೊ ಸಿಕ್ಕ ತುಂಡು ಸಿಗರೇಟು ಇಲ್ಲವೆ ಗಾಳಿಯಲ್ಲಿ ತೇಲಿದ ಆ ವಾಸನೆಯಿಂದ ಗೊತ್ತಾಗುತ್ತಿತ್ತು. ಆ ಕಾಲದಲ್ಲಿ ಹಿರಿಯರ ಎದುರಿಗೆ ಸಿಗರೇಟು ಸೇದುವಂತಿರಲಿಲ್ಲ. ಆದರೆ ನಮ್ಮ ತಾಯಿ ತನ್ನ ಮಗನ 'ಚಟ'ಕ್ಕೆ ಸ್ನೇಹಿತರನ್ನೇ ದೂಷಿಸುತ್ತಿದ್ದರು !

ಅಂದಿನ ಇವರ ಒಂದು ವಿಶಿಷ್ಟ ಭಾಷೆಯೂ ತಮಾಷೆಯದೆ. ಕನ್ನಡದ ಮಾತನ್ನು ಇಂಗ್ಲಿಷ್ ಸ್ಪೆಲಿಂಗ್‌ನಲ್ಲಿ ತುಂಡುಮಾಡಿ ಮಾತಾಡುವುದು, ಅಂದರೆ ನಮ್ಮ ತಾಯಿಗೆ ತಿಳಿಯುವಂತಿಲ್ಲ. ಅಲ್ಪಸ್ವಲ್ಪ ಇಂಗ್ಲಿಷಾದರೆ ಆಕೆ ಅರ್ಥಮಾಡಿಕೊಳ್ಳುತ್ತಿದ್ದರು. ಉದಾಹರಣೆಗೆ ಎ.ಬಿ.ಸಿ. ಎಲ್ಲಿ ? ಅಂದರೆ ಅಬಚಿ ಎಲ್ಲಿ ? ಎಂದು. ಸಿಗರೇಟು ಸೇದುವಾಗ ಬಾಗಿಲು ಮುಂದೆ ಎಳೆದುಕೊ ಎನ್ನಲು "ಬಿ.ಜಿ.ಎಲ್., ಎಂ.ಎನ್.ಡಿ. ಮಾಡು" ಮುಂತಾಗಿ. ಕೆಲದಿನಗಳಲ್ಲಿ ನಮ್ಮ ತಾಯಿಗೂ ಈ ಮಾತುಗಳು ಅರ್ಥವಾಗತೊಡಗಿದವು!

ಒಂದು ಬಾರಿ ಈ ಸ್ನೇಹಿತರು ಬಹು ಸ್ವಾರಸ್ಯವಾದ ವಿಷಯ ಚರ್ಚಿಸುತ್ತಿದ್ದರು. ಆಕೆ ತುಂಬಾ ಚೆಲುವೆ. ಆತ ತುಂಬ ಸ್ವಾರ್ಥಿ. ಹೆಂಡತಿ ಕೂಡ ಆತನಿಗೆ ಆಸ್ತಿಯೇ ಮುಂತಾಗಿ ಹೇಳಿ ನಗುವುದನ್ನು ನಾನು ಕೇಳಿದೆ. ಅವರು ಚರ್ಚಿಸುತ್ತಿದ್ದ ಆ ಚೆಲುವೆ ಗಾಲ್ಸ್‌ವರ್ದಿಯ ಐರಿನ್ ಮತ್ತು ಆ ಸ್ವಾರ್ಥಿ ಆಕೆಯ ಪತಿ ಸೋಮ್ಸ್ ಎಂದು ಅನಂತರ ಗೊತ್ತಾಗಿ ಆ ಪುಸ್ತಕ ಓದುವ ಹಂಬಲವಾಯಿತು ನನಗೆ. ಅದು ಕೈಗೂಡಿದ್ದು ಅನೇಕ ವರ್ಷಗಳ ನಂತರವಾದರೂ ಸಾಹಿತ್ಯದಲ್ಲಿ ಅಭಿರುಚಿ ಉಂಟಾಗಲು ಇದೂ ಒಂದು ಘಟನೆ ಕಾರಣ. ನಮ್ಮ ತಾಯಿಯೊಂದಿಗೆ 'ಪುರಾಣ' ಕೇಳುವುದಕ್ಕೆ ಹೋಗುತ್ತಿದ್ದೆ. ಆ ಪುರಾಣಿಕರು ತುಂಬಾ ಸ್ವಾರಸ್ಯವಾಗಿ ಓದುತ್ತಿದ್ದರು. ಆ ಕೇಳಿದ್ದನ್ನೆಲ್ಲ ಮನೆಗೆ ಬಂದ ನಂತರ ಸಂಜೆ ನಮ್ಮಣ್ಣನ ಮುಂದೆ ಆ ಪುರಾಣಿಕ ಆಚಾರ್ಯನಂತೆಯೇ ಹೇಳುತ್ತ ಗ್ರಾಮಾಫೋನ್ ರಿಕಾರ್ಡ್ ಹಾಕಲಾ ? ಎಂದು ವೆಂಕಣ್ಣನನ್ನು ಕೇಳುತ್ತಿದ್ದೆ. ಇಂಥ ಅನೇಕ 'ರಿಕಾರ್ಡ್' ಗಳಿದ್ದವು ನನ್ನ ಬಳಿ. ಅದರಲ್ಲಿ ಆತನ ಮಿತ್ರರು, ಅವರ ತಂದೆತಾಯಿಗಳು ಎಲ್ಲರೂ ಸೇರಿರುತ್ತಿದ್ದರು. ನಮ್ಮಣ್ಣ ಆ ನಿನ್ನ 'ನಳರಾಜ'ನ ರಿಕಾರ್ಡ್ ಆಗಲಿ ಎಂದು ಹೇಳಿದರೆ ನಾನು 'ಕಿರ್' ಎಂದು ಮೊಳೆ ತಿರುಗುವ ಶಬ್ದದಿಂದ ಪ್ರಾರಂಭಿಸುತ್ತಿದ್ದೆ. ನಳರಾಜ ವೆಂಕಣ್ಣನ ಒಬ್ಬ ಶ್ರೀಮಂತ ಸ್ನೇಹಿತ. ಇಂಥ ಚಿಕ್ಕಪುಟ್ಟ ವಿಷಯಗಳಲ್ಲಿಯೇ ಎಲ್ಲರನ್ನೂ ನಗಿಸಿ ತಾನೂ ನಗುವ ಸ್ವಭಾವ ವೆಂಕಣ್ಣನದು. ಮೊಮ್ಮಕ್ಕಳಿಗೆ ಕೂಡ ನಾನಾತರದ ಭಾಷಣ, ತಾವೇ ಕಟ್ಟಿದ ಮಾತಿನ ಮಂಟಪಗಳನ್ನು ಹೇಳಿಸಿ, ಅವರದೇ ತಂದೆತಾಯಿ, ಬಂಧುಬಳಗದವರ ಟೀಕೆಗಳಿಂದ ಮಕ್ಕಳ ಮುದ್ದು ಮಾತಿನಲ್ಲಿ ಅನ್ನಿಸುವುದು ನಮ್ಮಣ್ಣನಿಗೆ ತುಂಬಾ ಇಷ್ಟ.

ಅವರ ಮಗಳು ಜಾನಕಿ — ಈಗ ಮೀನಾಕ್ಷಿ ವಾಂಗೀಕರ್. ಆಕೆ ಎರಡು ಮೂರು ವರ್ಷದವಳಿದ್ದಾಗ ಆಕೆಗೊಂದು ಭಾಷಣ ಕಲಿಸಿದ್ದ ನಮ್ಮಣ್ಣ. ಅದು ಸಾಹಿತ್ಯ ಸಮ್ಮೇಳನ ಕುರಿತು. ಆಕೆಯೂ ತುಂಬಾ ಜೋರಾಗಿ ಚೆನ್ನಾಗಿ ಹೇಳುತ್ತಿದ್ದಳು.

''ಇಲ್ಲಿ ನಾವೆಲ್ಲರೂ ಏತಕ್ಕಾಗಿ ಸೇರಿದ್ದೇವೆ ಎನ್ನುವುದು ನಿಮಗೂ ಗೊತ್ತು ನಮಗೂ ಗೊತ್ತು ಇಲ್ಲಿದ್ದ ಎಲ್ಲರಿಗೂ ಗೊತ್ತು . ಆದ್ದರಿಂದ ಹೆಚ್ಚು ಹೇಳುವ ಅಗತ್ಯ ಇಲ್ಲ. ನಾಳೆ ಮಧ್ಯಾಹ್ನ ಒಂದು ವ್ಯಾಗನ್ ಬಾಳೆಹಣ್ಣು , ಒಂದು ಕೊಳಗ ಹುಳಿ, ಹಂಡೆ ತುಂಬ ಅನ್ನ ಊಟ ಮಾಡಿ ಮತ್ತೆ ಇಲ್ಲಿಯೇ ಸೇರೋಣ.''

ಇಂಥ ಅನೇಕ ಭಾಷಣಗಳನ್ನು ಮನೆಯಲ್ಲಿಯ ಎಲ್ಲ ಬಂಧುಬಳಗದ ಮಕ್ಕಳಿಗೆ ಕಲಿಸುವುದು ನಮ್ಮಣ್ಣನಿಗೆ ತುಂಬ ತಮಾಷೆಯ ವಿಷಯ. ನನ್ನ ಮೊಮ್ಮಗ ನಾಲ್ಕು ವರ್ಷದವನಿದ್ದಾಗ ಆತನಿಗೆ ಉಪ್ಪಿಟ್ಟು ಬಹಳ ಇಷ್ಟವಾಗಿತ್ತು. ಈ ಹುಡುಗನಿಗೆ ಕನ್ನಡ ಬಾರದು. ಆತನಿಗೆ ಮರಾಠಿಯಲ್ಲಿಯೇ ನಮ್ಮಣ್ಣ ''ಬಾ, ನಿನಗೆ ಉಪ್ಪಿಟ್ಟು ಮಾಡುವುದನ್ನು ಹೇಳಿಕೊಡುತ್ತೇನೆ. ಅದನ್ನು ನಿಮ್ಮ ಅಜ್ಜ ಅಜ್ಜಿಗೆ ಹೇಳು'' ಎನ್ನುತ್ತಿದ್ದ.

''ಒಂದು ಕಿಲೊ ಒಳ್ಳೆಯ ರವೆ ಕಡಾಯಿಯಲ್ಲಿ ಹಾಕಬೇಕು. ಅನಂತರ ಅದಕ್ಕೆ ಒಂದು ಕಾಲು ಕಿಲೊ ಸಿಂಬಳ ಹಾಕಿ ಚೆನ್ನಾಗಿ ಕೆಂಪಗಾಗುವವರೆಗೆ ಹುರಿಯಬೇಕು.'' ಇಷ್ಟು ಹೇಳಿದಾಕ್ಷಣ ಆ ಮಗು ಕೂಡ ತುಂಬಾ ನಗುತ್ತಿತ್ತು. ''ಹೇಳು ನೋಡೋಣ'' ಎಂದು ಮಗುವಿನ ಬಾಯಿಂದ ''ಏಕ ಕಿಲೊ ರವಾ, ಪಾವ ಕಿಲೊ....'' ಎಂದು ಹೇಳಿಸಿ ನಗುವುದು. ಆ ಮಗುವಿಗೆ ಇದು ತುಂಬಾ ತಮಾಷೆಯಾಗಿತ್ತು. ಆತ ದೊಡ್ಡವನಾದ ಮೇಲೆ ಕೂಡ ''ಮಾವಯ್ಯ, ಉಪ್ಪಿಟ್ಟು ಹೇಗೆ ಮಾಡುವುದು ನಿಮಗೆ ನೆನಪಿದೆಯೆ ?'' ಎಂದು ಮರು ಹಾಸ್ಯ ಮಾಡುತ್ತಿದ್ದ. ನನಗೆ ಭಯವಾಗುತ್ತಿತ್ತು, ಈ ಮಗು ನನ್ನ ಮಗಳ ಮಗ. ಎಲ್ಲಿಯಾದರೂ ಮುಂಬಯಿಗೆ ಹೋದನಂತರ ತಮ್ಮ ಅಜ್ಜನಿಗೆ ಹೇಳಿದರೆ ? ಎಂದು ! ಆದರೆ ಈ ಮರಾಠಿ ಮಕ್ಕಳು ತುಂಬಾ ಚಲಾಕು. ಈ ಉಪ್ಪಿಟ್ಟಿನ ಸುದ್ದಿ ಬೆಂಗಳೂರಿನಲ್ಲಿ ಮಾತ್ರ ಹೇಳಿ ನಗುತ್ತಿದ್ದವು !

ಮಕ್ಕಳನ್ನು ಆಟ ಆಡಿಸುವುಕ್ಕಿಂತ ಅವುಗಳನ್ನು ಚುಡಾಯಿಸುವುದು ಅಣ್ಣನಿಗೆ ಬಹಳ ಖುಷಿ ! ಮಕ್ಕಳು ತುಂಟ ಕೆಲಸ ಮಾಡಿದರೆ ಗಲಾಟೆ ಮಾಡಿದರೆ ''ಇವೆಲ್ಲ ಗ್ರಾಂಡಸನ್ಸ್ ಅಲ್ಲ — ಗ್ರಾಂಡ್ ಸಿನ್ಸ್!'' ಎಂದು ಹೇಳುವುದೂ ಉಂಟು !

ಅವರ ಮಕ್ಕಳು ಚಿಕ್ಕವರಿದ್ದಾಗ ನಮ್ಮಣ್ಣನ ಓದುವ ಕೋಣೆಗೆ ಹೋಗಿ ಏನನ್ನೂ ಮುಟ್ಟುವ ಧೈರ್ಯ ಅವರಿಗಿರಲಿಲ್ಲ . ಆದರೆ ಈಗ ನಮ್ಮೆಲ್ಲರ ಮೊಮ್ಮಕ್ಕಳು ಅಣ್ಣನ ಕೋಣೆಗೆ ಹೋಗಿ ''ಇದು ಕೊಡಿ ಅದು ಕೊಡಿ'' ಎಂದು ಕೇಳಿದಾಕ್ಷಣ ಕೊಟ್ಟು ಬಿಡುತ್ತಾನೆ. ಆದರೆ ಕೊಡುವುದಕ್ಕೆ ಮೊದಲು, ಅದನ್ನು ಏನು ಮಾಡುತ್ತೀಯಾ ?

ಯಾತಕ್ಕಾಗಿ ಬೇಕು ? ಎಂದು ಕೇಳಿದಾಗ ಅವು ಸರಿಯಾದ ಉತ್ತರ ಹೇಳಬೇಕು. ಒಮ್ಮೊಮ್ಮೆ ಈ ಮಕ್ಕಳು, 'ಮಾವಯ್ಯ ನಿಮಗೇಕೆ ಬೇಕು ?!' ಎಂದೂ ಕೇಳುತ್ತವೆ !

ಒಂದು ತರದ ಹಳೆಯ 'ಸಂಪ್ರದಾಯ'ದಲ್ಲಿ ಬೆಳೆದ ನಮಗೆ ದೊಡ್ಡವರಾಗುತ್ತ ಹೋದಂತೆ ನಮ್ಮನಮ್ಮಲ್ಲಿ ಮಾತು ಬಹಳ ಕಡಿಮೆ, ತೀರ ಅಪರೂಪ ಎಂದರೂ ಸರಿ. ನಮಗಾಗಲಿ ನಮ್ಮಣ್ಣನಿಗಾಗಲಿ ಭಾವನೆಗಳನ್ನು ಪ್ರಕಟಿಸಲು ಅವಕಾಶಗಳೇ ಕಡಿಮೆ. ಅದೇ ಕಾರಣವಿರಬೇಕು, ನಮ್ಮಣ್ಣನ ಮಾತು ಬಲು ಮಿತ. ಈ ಕಾರಣದಿಂದ ಅನೇಕರು ಆತ 'ಗರ್ವಿಷ್ಠ' ಎಂದು ತಪ್ಪು ಭಾವಿಸುತ್ತಾರೆ.

ನಮ್ಮಣ್ಣ ಮಾತು ಕಡಿಮೆ ಆಡಲು ಇನ್ನೂ ಒಂದು ಕಾರಣವೂ ಇರಬಹುದು. ಅದೆಂದರೆ ಆತ ಯಾವಾಗಲೂ ಕೆಲಸದಲ್ಲಿಯೇ ಇರುವುದು. ಕೆಲಸವಿಲ್ಲದೆ ಆತನನ್ನು ಕಾಣುವುದು ತೀರಾ ಅಪರೂಪ. ಬಹುಶಃ ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಅನಂತರ ಅರ್ಧ ಗಂಟೆ ಕಾಲ ಮಾತ್ರ ನಿದ್ರೆ — ಇಷ್ಟು ಸಮಯ ಬಿಟ್ಟರೆ ಮನೆಯಲ್ಲಿ ಓದುವ ಕೋಣೆ ಬಿಟ್ಟು ವೆಂಕಣ್ಣ ಹೊರಬರುವುದೇ ಅಪರೂಪ. ತೋಟ ಮಾಡುವುದರಿಂದ ಕಾಗದದ ಲಕೋಟೆಗಳನ್ನು ತಯಾರಿಸುವವರೆಗೆ ಆತನಿಗೆ ಹಲವು ಹವ್ಯಾಸಗಳು. ಸಾಬರಮತಿಯ ಚಿಕ್ಕ ನುಣುಪಾದ ಕಲ್ಲಿನಿಂದ ನ್ಯೂಯಾರ್ಕ್‌ನ ಕಟ್ಟಡಗಳ ಚಿತ್ರದವರೆಗೂ ಏನೇನೋ ಸಂಗ್ರಹ. ಸೂಜಿ, ಡಬ್ಬಣ, ದಾರ, ಪ್ಯಾಕಿಂಗ್ ಪೇಪರ್, ಚಿಕ್ಕ ಕತ್ತರಿ, ದೊಡ್ಡ ಚೂರಿ, ಮೊಳೆಗಳು, ಏನೆಲ್ಲ ಗುಜರಿ ಸಾಮಾನು ಬೇಕು ಎಂದ ತಕ್ಷಣ ಕೈಗೆ ಸಿಕ್ಕುವ ಹಾಗೆ 'ಸೇಫ್' ಆಗಿ ತಮ್ಮ ತಮ್ಮ ಸ್ಥಳಗಳಲ್ಲಿದ್ದುಕೊಂಡು ನಮಗ್ಯಾರಿಗೂ ಸಿಕ್ಕದೆ ತಮ್ಮ ಒಡೆಯನಿಗೆ ಮಾತ್ರ ಸಿಗುವ ಈ ಪುಟ್ಟ ಮ್ಯೂಸಿಯಂ ನಮ್ಮ ಅಣ್ಣನ ಆಸ್ತಿಯ ಒಂದು ಭಾಗ ಮಾತ್ರ !

ಇನ್ನು ಪುಸ್ತಕಗಳ ವಿಷಯ ಹೇಳಬೇಕೆ ? ಅವೇ ಆತನ ಆತ್ಮ– ಪ್ರಾಣ. ಮೇಜು, ಷೆಲ್ಫು, ಕಪಾಟು, ಮಾಳಿಗೆ, ಹಳೆಪೆಟ್ಟಿಗೆಗಳು, ಎಲ್ಲೆಲ್ಲೂ ಅವಕ್ಕೆ ಪ್ರಾಧಾನ್ಯ. ಮೇಲ್ನೋಟಕ್ಕೆ ಇಟ್ಟ ರೀತಿ ಕಲಸುಮೇಲೋಗರ. ಆತನಿಲ್ಲದಾಗ ಯಾರಾದರೂ ಒಂದನ್ನು ಎತ್ತಿ ನೋಡಿ ಇದ್ದಲ್ಲಿಯೇ ಪುನಃ ಇಟ್ಟರೂ ರೂಮಿಗೆ ಬಂದ ತಕ್ಷಣ, ಯಾರು ಇಲ್ಲಿಗೆ ಬಂದಿದ್ದರು ? ಪುಸ್ತಕಗಳಿಗೆ ಕೈಹಚ್ಚಿದವರ್‍ಯಾರು ? — ಅಣ್ಣ ಕೇಳುವ ಮೊದಲ ಪ್ರಶ್ನೆ!

ನಾವೆಲ್ಲರೂ ನಮ್ಮಣ್ಣನ ವಸ್ತು ಏನಿದ್ದರೂ ಕೇಳಿಯೇ ತೆಗೆದುಕೊಳ್ಳುತ್ತೇವೆ. ನಮ್ಮ ಕೆಲಸ ಮುಗಿದ ತಕ್ಷಣ ವಾಪಸು ಕೊಡುತ್ತೇವೆ. ಕಾರ್ಡುಗಳು, ಲಕೋಟೆ, ಸ್ಟ್ಯಾಂಪುಗಳು ಮುಂತಾದ ಅಂಚೆಗೆ ಸಂಬಂಧಪಟ್ಟದ್ದೆಲ್ಲ ನಮಗೆ ಬೇಕಿದ್ದಾಗ ಬಿಸಿಲಿನಲ್ಲಿ ಅಂಚೆ ಕಚೇರಿಗೆ ಹೋಗದೆ ಆತನಿಂದ ನಮಗೆ ಸಿಕ್ಕುತ್ತವೆ. ನಾವೆಲ್ಲಾದರೂ ಮರೆತೇವೆಂದು ವಿಳಾಸ ಕೂಡ ವೆಂಕಣ್ಣನೇ ಬರೆದು ಮರುದಿನ ವಾಕಿಂಗ್ ಹೋದಾಗ ಅಂಚೆಗೂ ಹಾಕುವ ಕೆಲಸ ಆತನದೆ ! ಹೀಗೆ ನಮಗೆ ಕೊಟ್ಟು ಬಿಡುವುದರಿಂದಲೋ ಏನೋ ಆಗಾಗ ಮುಖ್ಯ ಅಂಚೆ

ಕಚೇರಿಯಿಂದ ಒಳ್ಳೊಳ್ಳೆಯ ಸ್ಟ್ಯಾಂಪ್‌ಗಳನ್ನು ಕೊಂಡುಕೊಂಡು ಸಂಗ್ರಹಿಸಿಡುತ್ತಾನೆ. ತನ್ನ ಯಾವ ಕೆಲಸಕ್ಕೂ ಯಾರನ್ನೂ ಅವಲಂಬಿಸುವುದಿಲ್ಲ. ನಮ್ಮ ತಾಯಿಯ 'ಶಿಷ್ಯವೃತ್ತಿ'ಯಲ್ಲಿ ಅಚ್ಚುಕಟ್ಟಾಗಿ ಕೆಲಸ ಮಾಡುವ ರೂಢಿಯಾದ ನಮ್ಮಣ್ಣನಿಗೆ ಅಡಿಗೆ ಮಾಡುವುದಕ್ಕೂ ತುಂಬ ಚೆನ್ನಾಗಿ ಬರುತ್ತದೆ. ಅಡಿಗೆ ಮುಗಿದ ನಂತರ ಅಲ್ಲಿ ಅಡಿಗೆ ಮಾಡಿದ ಯಾವ ಸುಳಿವೂ ಇರುವುದಿಲ್ಲ. ಅಷ್ಟು ನೀಟಾಗಿರುತ್ತದೆ.

''ನೀನಿಲ್ಲದಾಗ ನನಗೆ ಇಂಥ ವಿಷಯದಲ್ಲಿ ತುಂಬ ತೊಂದರೆಯಾಯಿತು'' ಎಂದು ಹೇಳಿದರೆ ಯಾವ ಹೆಂಡತಿಗಾದರೂ ''ನಾನಿದ್ದಾಗ ಇವರು ಸುಖವಾಗಿರುತ್ತಾರೆ'' ಎನಿಸುತ್ತದೆ. ಆದರೆ ನಮ್ಮತ್ತಿಗೆ ಯಾವುದಾದರೂ ಊರಿಗೆ ಹೋಗಿ ಬಂದಾಗ ನಮ್ಮಣ್ಣ ''ನೀನಿಲ್ಲದಾಗ ಏನೂ ತೊಂದರೆ ಆಗಲಿಲ್ಲ! ಬೆಳಿಗ್ಗೆ ಒಮ್ಮೊಮ್ಮೆ ಒಳ್ಳೆಯ ತರಕಾರಿಯನ್ನೇ ಬ್ರೇಕ್ ಫಾಸ್ಟ್‌ಗಾಗಿ ತಿನ್ನುತ್ತಿದ್ದೆ. ಕುಕ್ಕರ್ ಇಟ್ಟು ಬರೆಯುವುದಕ್ಕೆ ಕುಳಿತರೆ, ಸ್ವಲ್ಪ ವೇಳೆಯಲ್ಲಿ ಅದು ರೆಡಿಯಾಗುತ್ತಿತ್ತು. ಚಹಾ ಕುಡಿದು ಸ್ನಾನ ಮಾಡಿ ಹುಳಿ ಮಾಡಿಬಿಡುತ್ತಿದ್ದೆ'' — ಮುಂತಾಗಿ ಸಲೀಸಾಗಿ ಹೇಳಿದರೆ ನಮ್ಮತ್ತಿಗೆಗೆ ಒಂದು ಕಾಲಕ್ಕೆ ಬೇಜಾರಾಗುತ್ತಿತ್ತು. ಈಗ ಅವರಿಗೆ ನಗು ಬರುತ್ತದೆ — ಅಭಿಮಾನವೂ ಎನಿಸುತ್ತದೆ — ಆತನ ಸ್ವಾವಲಂಬಿತನ ಹಾಗೂ ಶಿಸ್ತು ನೋಡಿ.

ಕೆಲವೊಮ್ಮೆ ನಮ್ಮತ್ತಿಗೆಗೆ ಧರ್ಮಸಂಕಟ. ಯಾರೋ ಗೆಳತಿಯೋ ಪರಿಚಿತರೋ ಬಂಧುಗಳೋ ಮನೆ ನೋಡಲೆಂದು ಮನೆಯಲ್ಲಿ ಒಂದು ಸುತ್ತು ಹಾಕಿದಾಗ ನಮ್ಮಣ್ಣನ ಸ್ವಭಾವ ಗೊತ್ತಿರದೇ ಇದ್ದವರು ಆಸೆಯಿಂದ ಯಾವುದೋ ಒಂದು ಕತೆ ಪುಸ್ತಕ ಇಲ್ಲವೆ ಕಾದಂಬರಿ ಅಥವಾ ವಾರಪತ್ರಿಕೆ ಓದುವುದಕ್ಕೆ ಕೇಳುತ್ತಾರೆ. ನಮ್ಮತ್ತಿಗೆ ಅಣ್ಣನನ್ನು ಕೇಳದೆ ಕೊಡಲಾರರು. ತಮಗೆ ಆ ಸ್ವಾತಂತ್ರ್ಯ ಇಲ್ಲ ಎಂತಲೂ ಹೇಳಲಾರರು. ''ಆ ಪುಸ್ತಕ ವಿಮರ್ಶೆಗೆ ಬಂದದ್ದು, ನಮ್ಮ ಕಾಪಿ ಇವರು ಎಲ್ಲಿಟ್ಟಿದ್ದಾರೆ ಗೊತ್ತಿಲ್ಲ. ಈ ವಾರಪತ್ರಿಕೆ ಇವರೇ ಇನ್ನೂ ನೋಡಿಲ್ಲ'' ಮುಂತಾಗಿ ಹೇಳಿ, ಆಮೇಲೆ ''ಇನ್ನೊಮ್ಮೆ ಬಂದಾಗ ತೆಗೆದುಕೊಂಡು ಹೋಗಿ'' ಎಂದು ಆಗಿನ ಸಮಯ ದಾಟಿಸುತ್ತಾರೆ ! ಅನಂತರ ಹೀಗಾಯಿತು ಎಂದು ನಮ್ಮಣ್ಣನಿಗೆ ಹೇಳಿದಾಗ 'ಕೆಲಸಕ್ಕೆ ಬಾರದ' ಕೆಲವು ಕತೆ ಕಾದಂಬರಿಗಳನ್ನು ನಮ್ಮಣ್ಣ 'ಉದಾರವಾಗಿ' ಕೊಡುವುದೂ ಉಂಟು. ಆದರೆ ಎಲ್ಲರಿಗೂ ಹಾಗೆ ಮಾಡುವುದಿಲ್ಲ. ಕೆಲವರಿಗೆ ಒಳ್ಳೊಳ್ಳೆಯ ಪುಸ್ತಕಗಳನ್ನು ಕೊಡುವುದೂ ಉಂಟು. ಆದರೆ ಅದನ್ನು ಕೇಳಿದವರು ನಿಜವಾಗಿ ಪುಸ್ತಕಗಳಲ್ಲಿ ಆಸಕ್ತಿ ಇದ್ದ ಬುದ್ಧಿವಂತರೆ ? ತೆಗೆದುಕೊಂಡು ಹೋದ ಪುಸ್ತಕವನ್ನು ಓದಿ ಸರಿಯಾಗಿ ಇದ್ದ ಸ್ಥಿತಿಯಲ್ಲಿಯೇ ಅವುಗಳನ್ನು ವಾಪಸು ಮಾಡುತ್ತಾರೆಯೆ ? ಎಂಬ ನಂಬಿಕೆ ಮಾತ್ರ ನಮ್ಮ ಅಣ್ಣನಿಗೆ ಇರಬೇಕು !

ನಮ್ಮಣ್ಣನ 'ಸಂಗ್ರಹ ವೃತ್ತಿ'ಯನ್ನು ಕಂಡು ನಮ್ಮ ಬಂಧುಬಳಗದವರನ್ನೊಳ

ಗೊಂಡು ಅನೇಕರು ಆತನನ್ನು 'ಜಿಪುಣ' ಎಂದು ಭಾವಿಸುತ್ತಾರೆ. ಆದರೆ ಅದು ತೀರಾ ತಪ್ಪು. ಯಾವುದೇ ಒಂದು ವಸ್ತು ನಿರರ್ಥಕವಾಗುವುದು ಆತನಿಗೆ ಇಷ್ಟವಿಲ್ಲ. ಪ್ರತಿಯೊಂದು ವಸ್ತುವಿನದೂ ಸದುಪಯೋಗವಾಗಬೇಕು. ಏನೂ ಹಾಳಾಗಬಾರದು. ಅದು ಹಣವಾಗಿರಬಹುದು ಇಲ್ಲವೆ ಒಂದು ಕಟ್ಟಿಗೆಯ ತುಂಡು ಅಥವಾ ಕೋಲಾಗಿರ ಬಹುದು. ಆ ವಸ್ತುವನ್ನು ಬಳಸುವ ಬುದ್ಧಿವಂತಿಕೆಯನ್ನು ತಮ್ಮ ಶಕ್ತಿಗನುಸಾರವಾಗಿ ಪ್ರತಿಯೊಬ್ಬರೂ ಪಡೆಯಬೇಕೆಂಬುದೇ ಆತನ ಬಯಕೆ.

ಇಷ್ಟು ಆಸಕ್ತಿ ಹೊಂದಿದ ಈತ ಒಂದೊಂದು ಸಲ ನಮ್ಮನ್ನು ಚಕಿತಗೊಳಿಸುತ್ತಾನೆ. ಒಂದು ವಸ್ತು ಕಳೆದುಹೋದರೆ ನಾವು ಮನೆಯವರೆಲ್ಲ ಚಡಪಡಿಸುತ್ತೇವೆ. ಆದರೆ ವೆಂಕಣ್ಣ ಹಾಗಲ್ಲ — ಹೋದದ್ದು ಹೋಯಿತು ! ಮತ್ತೊಮ್ಮೆ ಆ ವಿಷಯ ಕೂಡ ಎತ್ತುವುದಿಲ್ಲ. ಒಂದು ಬಾರಿ ಅವರ ಹಿರಿಮಗಳು ಪ್ರಿಯಂವದಾ — ಈಗ ಪ್ರಮಿಳಾ ಬೈಚವಾಳ — ಎಂಟು ವರ್ಷದವಳಿದ್ದಾಗ ನಮ್ಮ ತಾಯಿ ನಾಲ್ಕು ತೊಲೆಯ ಚಿನ್ನದ ಸರ ಆಕೆಗೆ ಹಬ್ಬದ ದಿನ ಹಾಕಿದ್ದರು. ಆಡುವುದಕ್ಕೆ ಹೋಗಿ ಆಕೆ ಅದನ್ನು ಕಳೆದು ಬಂದಳು. ನಾವೆಲ್ಲ ಅದೆಷ್ಟು ಹುಡುಕಿ ಬೇಜಾರು ಪಟ್ಟುಕೊಂಡೆವು. ಆದರೆ ನಮ್ಮಣ್ಣ "ಯಾರಿಗೋ ಸಿಕ್ಕ ಬೇಕಾಗಿತ್ತು ಕಳೆದುಹೋಯಿತು" ಎಂದು ಹೇಳಿದ ನಂತರ ಆ ವಿಷಯ ಎಂದಿಗೂ ಮಾತಾಡಿಲ್ಲ.

ಹಾಗೆಯೇ ಒಂದು ಬಾರಿ 1941-42ರ ಸಮಯ, ಚಲೇ ಜಾವ್ ಚಳವಳಿ ಜೋರಾಗಿತ್ತು. ನಮ್ಮ ತೀರ ಸಮೀಪದ ಬಂಧು ಒಬ್ಬರು ಅಚ್ಚ ಕಾಂಗ್ರೆಸ್ಸಿಗರು. ಹಲವು ಬಾರಿ ಜೈಲು ಕಂಡಿದ್ದರು. ಅವರು ನಮ್ಮ ತಾಯಿಯ ಬಳಿ ಬಂದು "ನಾವು ಅಗತ್ಯದ ಒಂದು ಮದುವೆಗೆ ಹೋಗಬೇಕಾಗಿದೆ. ಅವರು ತುಂಬ ಸಿರಿವಂತರು. ನನ್ನ ಹೆಂಡತಿಯ ಕೈಯಲ್ಲಿ ಚಿನ್ನದ ಬಳೆಗಳಿಲ್ಲ ಅದು ನಿನಗೆ ಗೊತ್ತಲ್ಲ. ನಿನ್ನ ಸೊಸೆಯ ಬಳೆಗಳನ್ನು ಒಂದು ದಿನ ಮಾತ್ರ ಕೊಟ್ಟರೆ ನನ್ನ ಹೆಂಡತಿಯೊಡನೆ ಮದುವೆಗೆ ಹೋಗಿಬರುತ್ತೇನೆ" ಎಂದರು. ನಮ್ಮ ತಾಯಿ ನಮ್ಮ ಅತ್ತಿಗೆಯ ಕೈಯಲ್ಲಿಯ ಎಂಟು ತೊಲಗಳ ದಪ್ಪ ಬಳೆಗಳನ್ನು ಅವರಿಗೆ ತೆಗೆಸಿಕೊಟ್ಟರು. ಎಂಟು ದಿನ ಕಾದರೂ ಯಾರ ಸುಳಿವಿಲ್ಲ. ಮುಂದೆ ಅವರ ಮನೆಯಲ್ಲಿ ಗೊತ್ತಾಯಿತು — ಯಾರ ಮದುವೆಯೂ ಇರಲಿಲ್ಲ. ಬಳೆಗಳನ್ನು ತೆಗೆದುಕೊಂಡ ಆಸಾಮಿ ಭೂಗತರಾದರು. ನಮ್ಮ ತಾಯಿ ತುಂಬ ಕಷ್ಟದಿಂದ ಕಲೆಹಾಕಿ ತನ್ನದಾದದ್ದನ್ನು ಸೊಸೆಗೆ ತೊಡಿಸಿದ್ದರು. ನಮ್ಮಣ್ಣ ಹೇಗಾದರೂ ಮಾಡಿ ಆ ಬಳೆಗಳನ್ನು ಪಡೆಯಬೇಕೆಂದು ಆಕೆಯ ಹಂಬಲ. ಆಕೆ ತುಂಬ ಕೊರಗಿದರು. ನಮ್ಮಣ್ಣ ಒಂದು ದಿನ ಕೂಡ ಆ ಬಳೆಗಳನ್ನು ಕುರಿತು ಚಿಂತಿಸಿದ್ದನ್ನು ನಾವು ಕಂಡಿಲ್ಲ.

ಸ್ವಾತಂತ್ರ್ಯ ದೊರಕುವ ಸ್ವಲ್ಪ ಮುಂದೆ ಈ ಕಾಂಗ್ರೆಸ್ ಬಂಧು ತೀರಿಕೊಂಡರು. ಅವರು ಮೃತ್ಯುಶಯ್ಯೆಯಲ್ಲಿದ್ದಾಗ ನಮ್ಮಣ್ಣನನ್ನು ಕರೆಸಿಕೊಂಡು ಹೇಳಿದರು : "ದೇಶಕ್ಕೆ

ಸ್ವಾತಂತ್ರ್ಯ ಸಿಕ್ಕುವುದನ್ನು ನೋಡುವ ಭಾಗ್ಯ ನನಗೆ ಸಿಕ್ಕಲಿಲ್ಲ. ಭೂಗತ ಕೆಲಸಕ್ಕಾಗಿ ಎಲ್ಲಿಯೂ ಹಣ ಸಿಕ್ಕಲಿಲ್ಲ. ಮೋಸದಿಂದ ನಿನ್ನ ಹೆಂಡತಿಯ ಕೈಯಲ್ಲಿಯ ಬಳೆಗಳನ್ನು ತೆಗೆದುಕೊಂಡು ಹೋದೆ. ಅವನ್ನು ವಾಪಸ್ಸು ಕೊಡುವುದಾಗಲಿಲ್ಲ'' ಎಂದು ಕಣ್ಣೀರು ಸುರಿಸಿದರಂತೆ. ನಾಲ್ಕು ವರ್ಷಗಳ ನಂತರ ಆ ಬಳೆಗಳ ವಿಷಯ ನಮ್ಮಣ್ಣ ಮಾತಾಡಿದ್ದು ಅಷ್ಟೆ. ಅದಕ್ಕೆ ಮೊದಲಾಯಿತು, ಅನಂತರವಾಯಿತು ಆ ಕುರಿತು ಮಾತನ್ನೆ ಆಡಿಲ್ಲ, ಮತ್ತೆ ಬಳೆ ಮಾಡಿಸುವುದು ಆ ಕಾಲದಲ್ಲಿ ಸಾಧ್ಯವೂ ಇರಲಿಲ್ಲ.

ಹಾಗೆಯೇ ರೈಲಿನಲ್ಲಿ ಒಂದು ಬಾರಿ ಕಾದಂಬರಿಯ ಕರಡು, ಕೆಮರಾ, ಹಣ ಏನೇನೊ ಕಳೆದರೂ ಎಂದೂ ವಿಚಲಿತನಾಗಿ ಆ ಕುರಿತು ಅನಂತರ ಚಿಂತಿಸಿದ್ದು ಇಲ್ಲ. ತುಂಬ ಸ್ಥಿಮಿತವಾದ ಮನಸ್ಸು. ಕಳೆದದ್ದು ಹೋಯಿತು, ಇದ್ದುದನ್ನು ನೋಡಿಕೊಳ್ಳುವುದು! ನಿಜವಾಗಿಯೂ ಆತ ಒಂದು ಥರ ಯೋಗಿ. ಅರ್ಧ ಜೀವವನ್ನು ಕಷ್ಟಗಳ ಪರಂಪರೆಯ ಲ್ಲಿಯೇ ಕಳೆಯುತ್ತಿದ್ದಾಗಲೂ ಆತ ಕುಗ್ಗಿದ್ದನ್ನು ನಾವು ಕಂಡಿಲ್ಲ. ಅದರಂತೆಯೇ ಅನುಕೂಲ ಸುಖ ಸಂಪತ್ತು, ಮಾನ ಸನ್ಮಾನಗಳು ಸಿಕ್ಕಾಗ ಹಿಗ್ಗಿದ್ದನ್ನೂ ನೋಡಿಲ್ಲ. ಸುಖ ದುಃಖಗಳನ್ನು ಅವು ಬಂದಹಾಗೆ ಎದುರುಗೊಳ್ಳುವ ಆತನ ಅಪರೂಪದ ವ್ಯಕ್ತಿತ್ವದ ಮುಂದೆ ಒಂದೊಂದು ಪ್ರಸಂಗದಲ್ಲಿ ಅಡ್ಡ ಬೀಳೋಣ ಎನ್ನಿಸುತ್ತದೆ. ಆದರೆ ಇಂಥ 'ಪ್ರದರ್ಶನ' ಆತನಂತೆಯೇ ನಮಗೂ ರೂಢಿ ಇಲ್ಲ!

ನಮ್ಮ ಮೌನದ ಗೌರವವನ್ನು ಆತನೂ ಮೌನವಾಗಿಯೇ ಸ್ವೀಕರಿಸುತ್ತಾನೆ ಎಂದು ನಮ್ಮ ಭಾವನೆ. ನಾನಂತೂ ಖಂಡಿತವಾಗಿ ಹಾಗೆಯೇ ಭಾವಿಸಿದ್ದೇನೆ!

ಸಾಹಿತಿಯ ಕೃತಿಯಲ್ಲಿ ಆತನ ಪ್ರತಿಬಿಂಬ ಕಾಣಿಸುತ್ತದೆ ಎಂದು ಹೇಳುವುದು ಸತ್ಯವಿದ್ದರೆ ನಮ್ಮಣ್ಣನ ಕಾದಂಬರಿಗಳಲ್ಲಿಯ ವಸ್ತುವಿನಲ್ಲಿ ಮಾನವೀಯತೆಯ ಆಳವಡಿಕೆ ನಿರೂಪಣೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅದರಲ್ಲಿ ಅನೇಕ ವೇಳೆ ಆತನ ಜೀವನ ದೃಷ್ಟಿ ಚಿತ್ರಿತವಾಗಿದೆ. ಮನುಷ್ಯನ ಪ್ರಯತ್ನಕ್ಕೂ ಒಂದು ಮಿತಿ ಇರುವುದನ್ನು ಅವನ ನಾಲ್ಕಾರು ಕಾದಂಬರಿಗಳಲ್ಲಿ ನೋಡಬಹುದು. ಇದು ಅತ್ಯಂತವಾಗಿ ಎದ್ದು ಕಾಣುವುದು 'ಮಂಜು ಮುಸುಕಿದ ದಾರಿ'ಯಲ್ಲಿ. ಇದೊಂದು ಅಪರೂಪದ ಕೃತಿ ಎಂದು ನನ್ನ ಭಾವನೆ.

ಹಿಂದೊಮ್ಮೆ ನಾನು ದುಃಖದಲ್ಲಿದ್ದಾಗ ನಮ್ಮಣ್ಣನನ್ನು ಕೇಳಿದ್ದೆ: ''ಯಾವ ಪಾಪಕ್ಕೆ ನನಗೀ ಶಿಕ್ಷೆ? ನನಗೆ ತಿಳಿದಂತೆ ನಾನು ಯಾರಿಗೂ ಕೇಡು ಬಯಸಿಲ್ಲ. ಕೆಟ್ಟದ್ದನ್ನು ಮಾಡಿಲ್ಲ'' ಎಂದಾಗ ಆತ ಹೇಳಿದ್ದ–

''ನಾವೆಲ್ಲ ಬೀದಿಯಲ್ಲಿ ನಡೆಯುತ್ತಿರುತ್ತೇವೆ. ಪಕ್ಕಕ್ಕೆ ದನಕರುಗಳ ಕಾಲು ಧೂಳಿ ಆಗಿರಬಹುದು — ಕಾರು ಹಾದು ಹೋಗಬಹುದು — ಬಿರುಗಾಳಿ ಬೀಸಬಹುದು. ನಮ್ಮ ಗುಂಪಿನಲ್ಲಿ ಯಾರದೊ ಕಣ್ಣಿನಲ್ಲಿ ಧೂಳು ಬಿದ್ದು ನೋವಾಗಬಹುದು.

ಉಳಿದವರಿಗೆ ಏನೂ ಆಗಿರುವುದಿಲ್ಲ. ಈ ಧೂಳು ನನ್ನ ಕಣ್ಣಿನಲ್ಲಿಯೇ ಏಕೆ ಬಿತ್ತು ? ಎಂದರೆ ಅದಕ್ಕೆ ಯಾವ ಉತ್ತರವಿದೆ ?'' ಎಂದು ಹೇಳಿದ ಸಮಾಧಾನ ನಾನು ಅನೇಕ ಕಷ್ಟಗಳನ್ನು ಎದುರಿಸುವ ಶಕ್ತಿ ನೀಡಿದೆ. ಆತ ಹೇಳುವ ಆ ಸಮಾಧಾನದಲ್ಲಿ ಕೂಡ ಎಷ್ಟೊಂದು ನೋವಿತ್ತು, ಕರುಣೆ ಪ್ರೀತಿ ತುಂಬಿತ್ತು. ಬಹುಶಃ ಅದಕ್ಕಾಗಿಯೇ ಇರಬಹುದು ಜೀವನ 'ಮಂಜು ಮುಸುಕಿದ ದಾರಿ' ಎಂದು ನನಗೆ ಮನದಟ್ಟಾಗಿರಬಹುದು. ಇದರಿಂದಾಗಿಯೇ ಇರಬಹುದು ಈ ಕಾದಂಬರಿಯನ್ನು ನಾನು ಹೆಚ್ಚಾಗಿ ಮೆಚ್ಚಿಕೊಂಡಿದ್ದೇನೆ!

ನಮ್ಮಣ್ಣನ ಸಾಹಿತ್ಯ ಕೃತಿಗಳ ಬಗೆಗೆ ಆತನೆದುರಿಗೆ ನಾವು ಅನೇಕ ಸಲ ಆ ಪಾತ್ರಗಳನ್ನು ಕುರಿತು 'ಒಳ್ಳೆಯದು ಕೆಟ್ಟದ್ದು' ಚರ್ಚಿಸುತ್ತೇವೆ. 'ಕನಸಿನ ಮನೆ' 'ಕಟ್ಟಿದ ಮನೆ' ವಿಷಯವಾಗಿ ಹೀಗೆಯೇ ಒಂದು ಸಲ ಮಾತು ಬಂದಾಗ ನಮ್ಮಲ್ಲಿಯ ಒಬ್ಬರು ಮೋಹಿನಿಯನ್ನು 'ಹು. ಮುಂ' ಎಂದು ಬೈಯಲು ಪ್ರಾರಂಭಿಸಿದರು. ಆಗ ಇನ್ನೊಬ್ಬರು ಆಕೆಯನ್ನು ವಹಿಸಿಕೊಂಡು ಆನಂದನನ್ನು ತೆಗಳಲಾರಂಭಿಸಿದರು — ಆತ ಆಕೆಯನ್ನು ಸರಿಯಾಗಿ ನೋಡಿಕೊಂಡಿದ್ದರೆ ಆಕೆ ಹಾಗಾಗುತ್ತಿರಲಿಲ್ಲ ಎಂದು. 'ಬಾಡಿದ ಹೂ' ಎಂದು ಬರುವುದು ? ಬೇಗ ಬರೆದುಬಿಡಬಾರದೆ ? ಆನಂದನನ್ನು ಏನು ಮಾಡುತ್ತೀಯಾ? ವಸಂತನ ಭವಿಷ್ಯ ಏನು ?— ಆತ್ಮೀಯರೊಬ್ಬರ ವಿಷಯವಾಗಿ ಮಾತನಾಡುವಂತೆ ನಮ್ಮ ಮಾತು ಮುಂದುವರೆದಿತ್ತು.

ನಮ್ಮಣ್ಣ ''ಈಗ ಒಂದು ಪ್ರಾಬಲೆಮ್ ಅದೆ! ಆನಂದ – ವಸಂತ'' ಎಂದ.

''ಅದೇನು ಮಹಾ ಒಬ್ಬರನ್ನು ಕೊಂದುಹಾಕಿದರಾಯಿತು!''

''ಯಾರನ್ನು ಕೊಲ್ಲುವುದು?''

''ವಸಂತ ಸತ್ತರೂ ಆಕೆ ಏನೂ ಆನಂದನ ಬಳಿ ಹೋಗುವುದಿಲ್ಲ. ವಸಂತನನ್ನು ಕೊಂದು ಏನು ಲಾಭ? ಆನಂದನನ್ನೇ ಕೊಂದುಹಾಕಬೇಕು.''

ಅನಂತರ ಆತನನ್ನು ಹೇಗೆ ಕೊಲ್ಲುವುದು ? ಲೋಕಲ್ ಟ್ರೈನ್ ಕೆಳಗೆ ನೂಕುವುದೆ ? ವಿಷ ಕೊಡುವುದೆ ? ಅಥವಾ ಆತನೇ ಅವಮಾನ ಸಹಿಸದೆ ವಿಷ ತಿನ್ನುತ್ತಾನೆ, ಮುಂತಾಗಿ ಗಂಟೆಗಟ್ಲೆ ಹಾಸ್ಯವಾಗಿ, ಗಂಭೀರವಾಗಿ ಚರ್ಚೆ ನಡೆಯಿತು. ಮಧ್ಯರಾತ್ರಿ ಮೀರಿ ಹೋಗಿತ್ತು, ಈ ಕೊಲೆ ಚರ್ಚೆ ನಡೆದಾಗ ಹೊರಗಡೆ ಗಸ್ತು ತಿರುಗುವ ಪೋಲಿಸ್ ಕಟ್ಟೆಗೆ ಶಬ್ದ ಕೇಳಿಸಿತು ! ಕೃತಿ ಹೊರಗೆ ಬಂದಾಗ ನಮ್ಮಣ್ಣ ಆನಂದನನ್ನು ಉಪಾಯವಾಗಿ ರಾಜಕೋಟೆಗೆ ವರ್ಗ ಮಾಡಿಸಿಬಿಟ್ಟಿದ್ದಾನೆ ! ಯಾವ ಅಧಿಕಾರಿಯ ಸಹಾಯವೂ ಇಲ್ಲದೆ!

ಕೆಲವು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ಅಥವಾ ಸಾಹಿತ್ಯಾಭಿಮಾನಿಗಳಿಂದ

ನಮ್ಮಣ್ಣನ ಕಾದಂಬರಿಗಳ ಬಗೆಗೆ ವಿಮರ್ಶಾತ್ಮಕ ಕಾಗದಗಳು ಬರುತ್ತವೆ. ಬರೆದವರು ಉತ್ತರವನ್ನು ನಿರೀಕ್ಷಿಸುತ್ತಾರೆ. ಆದರೆ ಈ ವ್ಯಕ್ತಿ ಅವುಗಳನ್ನು ಆದರಪೂರ್ವಕವಾಗಿ ಓದಿ ಸಂತೋಷಗೊಂಡು ಉತ್ತರ ಬರೆಯುವ ಗೋಜಿಗೂ ಹೋಗದೆ ಆ ಕಾಗದಗಳನ್ನು ಅಚ್ಚುಕಟ್ಟಾಗಿ ಆಯಾ ವಿಷಯಗಳ ಫೈಲಿಗೆ ಹಾಕಿಡುತ್ತಾನೆ !

ಒಂದೊಂದು ಸಲ ಈ 'ಸಾಹಿತಿ'ಯ ಪರಿಚಯ ಮಾಡಿಕೊಳ್ಳಬೇಕು, ಅವರ ಅಥವಾ ತಮ್ಮ ಕೃತಿಯ ವಿಷಯವಾಗಿ ನಾಲ್ಕು ವಿಮರ್ಶಾತ್ಮಕ ಮಾತುಗಳನ್ನಾಡಬೇಕು — ಎಂದು ಅಪೇಕ್ಷಿಸಿ ಲೇಖಕಿಯರು ಅಥವಾ ಸಾಹಿತ್ಯಾಭಿಮಾನಿಗಳಾದ ನನ್ನ ಗೆಳತಿಯರು ನನ್ನನ್ನು ಕೇಳಿದಾಗ ನಾನು ಮೊದಲೇ ಅವರಿಗೆ ಹೇಳಿಡುತ್ತೇನೆ, "ನೋಡಿ, ನಾನೇನೊ ನಿಮ್ಮ ಪರಿಚಯ ಮಾಡಿಕೊಡುತ್ತೇನೆ. ಆದರೆ ಆತ ಹೆಚ್ಚಾಗಿ ಮಾತನಾಡುವ ಸ್ವಭಾವದವನಲ್ಲ. ನೀವು ಹೇಳಿದ್ದನ್ನು ಮಾತ್ರ ಕೇಳಿಸಿಕೊಳ್ಳುತ್ತಾನೆ. ದಯವಿಟ್ಟು ತಪ್ಪು ತಿಳಿಯಬಾರದು" ಎಂದು.

ಒಂದೊಂದು ಸಲ ಈ ಮಹಿಳಾಮಣಿಗಳು 'ನಮಸ್ಕಾರ ಸರ್' ಎಂದರೆ — ಈ 'ಸರ್' ಎತ್ತ ನೋಡುತ್ತಿರುತ್ತಾನೆಯೋ ಏನು ಯೋಚಿಸುತ್ತಿರುತ್ತಾನೆಯೋ ಏನು ನೋಡುವುದರಲ್ಲಿ ಮಗ್ನನಾಗಿರುತ್ತಾನೆಯೊ ! ತಿರುಗಿ ನಮಸ್ಕಾರ ಹೇಳಲು ಕೇಳಿಸಿಕೊಂಡಿದ್ದರೆ ತಾನೆ ?! ಆಗ ನನ್ನ ಗೆಳತಿಯರು "ನಿಮ್ಮಣ್ಣ ನಿಜವಾಗ್ಲೂ ಆಬ್ಸೆಂಟ್ ಮೈಂಡೆಡ್ ಪ್ರೊಫೆಸರ್" ಎಂದು ನಕ್ಕು ಹೇಳುತ್ತಾರೆ. ಅವರು ತಪ್ಪು ತಿಳಿಯಲಿಲ್ಲವಲ್ಲ ಎಂದು ನಾನೂ ಸಮಾಧಾನದ ನಿಟ್ಟುಸಿರು ಬಿಡುತ್ತೇನೆ !

ನನಗೆ ಇಂದಿಗೂ ಅತ್ಯಂತ ಆಶ್ಚರ್ಯವೆನಿಸುವ ವಿಷಯ ಎಂದರೆ ನಮ್ಮ ತಾಯಿಯ ಮೇಲೆ ನಮ್ಮಣ್ಣನಿಗೆ ಇರುವ ಅಪಾರ ಪ್ರೀತಿ ! ಅನೇಕ ಸಲ ಅದು ಪ್ರೀತಿಯೋ ಅಥವಾ ಕೃತಜ್ಞತೆಯೋ ಎಂದು ಯೋಚಿಸುತ್ತೇನೆ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿ ವೆಂಕಣ್ಣನ ಜೊತೆಯೇ ಇದ್ದರು, ಕೊನೆಯವರೆಗೆ. ಆದರೆ ಆ ಮನೆ ಅಣ್ಣ–ಅತ್ತಿಗೆಯದಾಗಿರಲೇ ಇಲ್ಲ! ನಮ್ಮ ತಾಯಿಯ ಮನೆಯಲ್ಲೇ 'ಮಗ' 'ಸೊಸೆ'ಯರಿದ್ದರು ! ಆದರೆ ನಮ್ಮಣ್ಣ ತಾಯಿಯ ವಿಷಯ ಆಗಾಗ ಮಾತಾಡುವಾಗಲೆಲ್ಲ ಆತನದು ಬರೀ ಕೃತಜ್ಞತೆ ಅಲ್ಲ ಅಪಾರ ಪ್ರೀತಿ, ಆದರ, ಗೌರವ ಎನ್ನುವುದು ಎಷ್ಟೋ ಬಾರಿ ಕಂಡುಬರುತ್ತದೆ.

ಯಾವುದೇ ಸಂತೋಷದ ಘಟನೆ ನಡೆದಾಗ "ಇದನ್ನು ನೋಡಲು ಅಬಚಿ ಇರಬೇಕಿತ್ತು" ಎಂದುಕೊಳ್ಳುತ್ತಾನೆ. ಮಂಗಳೂರು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಉಡುಪಿ ಪೂರ್ಣಪ್ರಜ್ಞ ಕಾಲೇಜಿಗೆ ಪ್ರಾಂಶುಪಾಲರಾಗಿ ಬರಲು ಅದಮಾರು ಮಠದ ಸ್ವಾಮಿಜಿಯವರು ಕೇಳಿದಂದು ನಮ್ಮಣ್ಣ ಮನೆಗೆ ಬಂದ ತಕ್ಷಣ ಅಡಿಗೆಮನೆಯತ್ತ ನೋಡಿ "ಇದನ್ನು ಹೇಳುವುದಕ್ಕೆ ಅಬಚಿ ಇಲ್ಲವಲ್ಲ. ಎಷ್ಟು ಸಂತೋಷಪಡುತ್ತಿದ್ದಳು"

ಎಂದು ಕಾಗದ ಬರೆದಿದ್ದ, ನಮ್ಮ ತಾಯಿ ತೀರಿಕೊಂಡು ವರ್ಷಗಳೇ ಕಳೆದು ಹೋಗಿದ್ದರೂ.

ಇತ್ತೀಚೆಗೆ ಉಡುಪಿಯಲ್ಲಿ ಅಣ್ಣನಿಗೆ ನಡೆದ ಸನ್ಮಾನ ಸಮಾರಂಭದ ದಿನವೂ ಅಷ್ಟೆ. ಈ ಸನ್ಮಾನವೆಲ್ಲ ನನ್ನ ಗುರುಗಳಿಗೆ, ನನ್ನ ತಂದೆ-ತಾಯಿಗಳಿಗೆ ಸಲ್ಲುತ್ತದೆ ಎಂದು ಹೇಳಿ ತಮ್ಮ ತಾಯಿ ತನ್ನನ್ನು ಕಾಲೇಜು ಓದಿಸುವಾಗ ತನ್ನ ಚಿನ್ನದ ಬಳೆಗಳನ್ನು ಅಡವಿಟ್ಟದ್ದನ್ನು ನೆನೆಸಿಕೊಂಡು ದುಃಖಪಟ್ಟ.

ಆದರೆ ನಾನು ? ಕೆಲವೊಮ್ಮೆ ನಮ್ಮ ತಾಯಿಯ ಸುದ್ದಿ ಬಂದಾಗಲೆಲ್ಲ ''ಆಕೆಗೆ ಬರೀ ಗಂಡುಮಕ್ಕಳದೇ ಸ್ವಾರ್ಥ ! ಅವರನ್ನು ಮಾತ್ರ ಓದಿಸಿ ನನಗೆ ಓದಿಸಲಿಲ್ಲ. ಬರೀ ಒಂದು ಜವಾಬ್ದಾರಿ ಕಳೆದುಕೊಳ್ಳುವವರಂತೆ ಚಿಕ್ಕ ವಯಸ್ಸಿನಲ್ಲಿ ಮದುವೆಮಾಡಿದರು'' ಎಂದು ನಮ್ಮತ್ತಿಗೆಯ ಎದುರಿಗೆ ದೂರುತ್ತೇನೆ ! 'ಡಿಸ್‌ಕ್ರಿಮಿನೇಶನ್' ಎಂಬ ಶಬ್ದ ಇಂದಿನಂತೆ ಆ ಕಾಲದಲ್ಲಿ ಪ್ರಚಲಿತವಾಗಿರಲಿಲ್ಲ ! ಇದ್ದರೂ ಅದನ್ನು ಹೇಳುವ ಧೈರ್ಯವಾದರೂ ಎಲ್ಲಿತ್ತು?!

ನಮ್ಮತ್ತಿಗೆ ನನ್ನ ಮಾತನ್ನು ಅಣ್ಣನಿಗೆ ತಲುಪಿಸುತ್ತಾರೆ. ಅದಕ್ಕೆ ನಮ್ಮಣ್ಣ ''ಆ ಕಾಲವೇ ಹಾಗಿತ್ತು. ಮಗ ದುಡಿದು ಸಂಪಾದಿಸಿ ಮನೆಯ ಜವಾಬ್ದಾರಿ ಹೊರುತ್ತಾನೆ ಎಂಬ ನಂಬಿಕೆಯಲ್ಲಿ ಬೆಳೆದವರು ಅವರು'' ಎನ್ನುತ್ತಾನೆ.

ಈ ಮಾತು ನಮ್ಮ ಅತ್ತಿಗೆಯಿಂದ ನನಗೆ ತಿರುಗಿ ತಲುಪಿದಾಗ ನಾನೆನ್ನುತ್ತೇನೆ : ''ಥೂ ನಮ್ಮಣ್ಣನಿಗೆ ನಮ್ಮ ತಾಯಿ ಮಾಡಿದ್ದೆಲ್ಲ ಸರಿಯೆ ! ಕಾಲವಂತೆ ಕಾಲ... ನೀವು ನಮ್ಮ ಕಾಲದವರು — ನಮ್ಮ ಗೆಳತಿಯರೆಲ್ಲ ನಮ್ಮದೇ ಕಾಲದವರು. ಅವರೆಲ್ಲ ಹೇಗೆ ಓದಿದರು ? ನಿಮ್ಮ ತಂದೆ ನಿಮ್ಮನ್ನು ಹೇಗೆ ಓದಿಸಿದರು ? ಇವರಿಗೆಲ್ಲ ಬೇರೆ ಕಾಲ ಇತ್ತೆ?'' ಎನ್ನುತ್ತೇನೆ.

ಮತ್ತೊಂದು ದಿನ ನಮ್ಮ ಅತ್ತಿಗೆಯಿಂದ ಉತ್ತರ ಬರುತ್ತದೆ : '''ಇವರೆ'ನ್ನುತ್ತಾರೆ : ಪ್ರತಿಯೊಬ್ಬರೂ ಬೆಳೆದುಬಂದ ಪರಿಸರ ಬೇರೆ ಇರುತ್ತದೆ. ನಮ್ಮ ತಾಯಿ ಬೆಳೆದುಬಂದ ಪರಿಸರ ಹಾಗಿತ್ತು.''

ಮನಸ್ಸಿನಲ್ಲಿ ನಮ್ಮಣ್ಣನ ಮಾತನ್ನು ನಾನು ಒಪ್ಪಿಕೊಂಡರೂ 'ಇವರು ಎನ್ನುತ್ತಾರೆ' ಎಂಬ ಅತ್ತಿಗೆಯನ್ನು ನಾನು ತುಂಬ ಚುಡಾಯಿಸುತ್ತೇನೆ. ''ಏನು ಇವರೆನ್ನುತ್ತಾರೆ – ಇವರೆನ್ನುತ್ತಾರೆ ಎಂದು ಹೇಳುತ್ತೀರಿ. ನಿಮಗೇನು ಬೇರೆ ವ್ಯಕ್ತಿತ್ವವೇ ಇಲ್ಲವೇನು ? ನೀವೇನು ಹೇಳುತ್ತೀರಿ — ಅದನ್ನು ಹೇಳಿ. ಸೆಕೆಂಡ್ ಫಿಡಲ್ ಬೇಡ'' ಎನುತ್ತೇನೆ ! ಆದರೆ ನಮ್ಮಣ್ಣ ಅತ್ತಿಗೆಯರ ಸಮರಸ ಜೀವನ ನನಗೆ ತುಂಬ ಖುಷಿ ಕೊಡುತ್ತದೆ. ಸಾಮಾನ್ಯವಾಗಿ ದೇವರಸೃಷ್ಟಿಯಲ್ಲಿ ವಿರೋಧಾಭಾಸಗಳೇ ಹೆಚ್ಚು. ಆದರೆ ನಮ್ಮ ಅಣ್ಣನ ವಿಷಯದಲ್ಲಿ ಆತ ಸ್ವಲ್ಪ ಉದಾರವಾಗಿದ್ದಾನೆ. ಆತನಿಗೆ ಎಲ್ಲ ದೃಷ್ಟಿಯಿಂದಲೂ ಸಮಭಾವವುಳ್ಳ ಮತ್ತು

ಅನುಕೂಲಕರ ಹಾಗೂ ಪೂರಕಶಕ್ತಿಯನ್ನು ನೀಡುವ ಪತ್ನಿಯನ್ನು ಕರುಣಿಸಿದ್ದಾನೆ. ನಮ್ಮ ಅತ್ತಿಗೆ ಹಿರಿಸೊಸೆ ಆಗಿದ್ದರೂ ಹಿತ್ತಿಲು ಬಾಗಿಲಾಗಿಲ್ಲ. ನನ್ನ ತವರು ದೇಗುಲಕ್ಕೆ ಮಂಗಲ ಕಲಶದಂತಿದ್ದಾರೆ. ಆಕೆಯ ಪಾಲಿಗೆ ನಮ್ಮಣ್ಣ ಮೌನಿಯಲ್ಲ ! ಅವರನ್ನು ತುಂಬ ಚುಡಾಯಿಸುತ್ತಾನೆ. ಆದರೆ ಆ ಮಾತುಗಳು ಕೂಡ ತನಗೆ ಸಮಯ ಇದ್ದಾಗ ಮಾತ್ರ !

ಇಂದಿನ ಕಾಲದಲ್ಲಿ ನಡೆಯುವ ಅನೇಕ ದುಂದುವೆಚ್ಚ, ಬೆಲೆ ಏರಿಕೆಗಳು ಮುಂತಾದ ವಿಷಯ ಬಂದಾಗಲೂ ನಮ್ಮಣ್ಣ ನಮ್ಮ ತಾಯಿಯ ಸಂಸಾರ ನಿರ್ವಹಣೆಯನ್ನು ಸ್ಮರಿಸುತ್ತಾನೆ. ಆಗ ನಾನೆಂದುಕೊಳ್ಳುತ್ತೇನೆ —

ನಮ್ಮ ತಾಯಿ ಬಹಳ ಬುದ್ಧಿವಂತಿಕೆಯಿಂದ ಕಷ್ಟಸಹಿಷ್ಣುತೆಯಿಂದ ಮಕ್ಕಳನ್ನು ಮುಂದಕ್ಕೆ ತಂದರು. ಅದು ನಿಜ. ಅನೇಕ ತಾಯಂದಿರು ಒಂದಿಲ್ಲೊಂದು ರೀತಿಯ ಕಷ್ಟವನ್ನು ತಮ್ಮ ಮಕ್ಕಳಿಗಾಗಿ ಮಾಡುತ್ತಲೇ ಇರುತ್ತಾರೆ. ಆ ಮಕ್ಕಳಿಗೆ ದೊರಕುವ ಶ್ರೇಯಸ್ಸು ಕೀರ್ತಿ ಅವರ ಗುರಿಯಾಗಿರುತ್ತದೆ. ಅದೇನೂ ಅಂಥ ನಿಷ್ಕಾಮಕರ್ಮವಲ್ಲ! ಆದರೆ ನಮ್ಮ ತಂದೆ-ತಾಯಿಗಳಿಗಾಗಿ ನಮ್ಮಣ್ಣ ಪಟ್ಟ ಕಷ್ಟ ಇನ್ನೂ ಒಂದು ತೂಕ ಜಾಸ್ತಿ ಎಂದು. ಇದು ನನ್ನ ಭಾವನೆ.

ಮಗನನ್ನು ಓದಿಸುವುದಕ್ಕೆ ನಮ್ಮ ತಾಯಿ ಚಿನ್ನದ ಬಳೆಗಳನ್ನು ಅಡವಿಟ್ಟದ್ದು ನನಗೆ ಗೊತ್ತಿದ್ದಂತೆಯೇ, ನಮ್ಮ ತಂದೆ ನಿವೃತ್ತಿ ಹೊಂದಿದ ನಂತರ ನಮ್ಮಣ್ಣ ಎಷ್ಟು ಕಷ್ಟದಿಂದ ಮನೆಗೆ ಹಣ ಕಳಿಸುತ್ತಿದ್ದ ಎನ್ನುವುದನ್ನು ಕೂಡ ಕಣ್ಣಾರೆ ಕಂಡಿದ್ದೇನೆ. ಎರಡನೆಯ ಮಹಾ ಯುದ್ಧದ ಕಾಲ. ಬರುವ ಸಂಬಳವೂ ಹೆಚ್ಚಾಗೇನಿರಲಿಲ್ಲ. ಅನಾರೋಗ್ಯದಿಂದ ಬಳಲುವ ಹೆಂಡತಿ. ಜೊತೆಗೆ ಎರಡು ಮಕ್ಕಳ ಸಂಸಾರ ನಿರ್ವಹಣೆ. ಅದೂ ಮುಂಬಯಿಯಂಥ ಮಹಾನಗರದಲ್ಲಿ. ಆದರೆ ಆತ ಕಳಿಸುತ್ತಿದ್ದ ಹಣದಲ್ಲಿ ಕಡಿತವಾಗಲಿ, ಒಂದೆರಡು ದಿನ ತಡವಾಗಲಿ ಎಂದೂ ಆಗಿರಲಿಲ್ಲ.

ನಾನು ಬರೆದದ್ದು ಓದಿದರೆ ನಮ್ಮ ಮನೆಯಲ್ಲಿ ನಮ್ಮ ತಾಯಿಯದೇ ಮುಖ್ಯ ಪಾತ್ರ – ಅಥವಾ 'ದರ್ಬಾರ್' ಎಂದು ಕಂಡುಬರುವುದು ತೀರ ಸಹಜ ! ಆದರೆ ಅದು ತೀರ ಅನಿವಾರ್ಯವೇ ಆಗಿತ್ತೆಂದು ಈಗ ಗೋಚರವಾಗುತ್ತದೆ.

ನಮ್ಮ ತಂದೆಗೆ ಇತಿಹಾಸ ಹಾಗೂ ಸಂಶೋಧನೆಗಳಲ್ಲಿ ವಿಶೇಷ ಆಸಕ್ತಿ. ಅವರ ಆರ್ಥಿಕ ಸ್ಥಿತಿ ಮತ್ತು ಕಚೇರಿಯ ಕೆಲಸದ ಒತ್ತಡಗಳಲ್ಲಿ ಅವರ ಹವ್ಯಾಸಗಳಿಗೆ ಅವಕಾಶಗಳೇ ಸಿಕ್ಕುತ್ತಿರಲಿಲ್ಲ. ಅವರಿಗೆ ತಮ್ಮ ಸಹೋದ್ಯೋಗಿಗಳಿಗಿಂತ ಅನೇಕ ಶಿಕ್ಷಕರ ಜೊತೆಯೇ ಸ್ನೇಹ. ಬಾದಾಮಿ, ಪಟ್ಟದಕಲ್ಲು, ಹೊಯ್ಸಳರು, ಮೈಸೂರು ಸಂಸ್ಥಾನ, ವಿಜಯಗರ ಸಾಮ್ರಾಜ್ಯ, ತಾಳಿಕೋಟೆ ಯುದ್ಧ, ಆದಿಲ್‌ಶಾಹಿ ಆಡಳಿತ ಮುಂತಾದ ಮಾತುಗಳಲ್ಲಿ ನಮ್ಮ ತಾಯಿಗೆ ಯಾವ ಆಸ್ಥೆ ಇರಲು ಸಾಧ್ಯ ?!

ಜೈಮಿನಿ ಭಾರತ, ದಾಸ ಸಾಹಿತ್ಯ ಮುಂತಾದ್ದರಲ್ಲಿಯೂ ನಮ್ಮ ತಂದೆಗೆ ತುಂಬ ಆಸ್ಥೆ. ರನ್ನ, ಪಂಪ, ಲಕ್ಷ್ಮೀಶ ಮುಂತಾಗಿ ಏನಾದರೂ ಹೇಳುತ್ತಿದ್ದರೆ ನನಗಂತೂ ಬೋರು ! ಅವರ ಸಮೀಪ ಹೋದರೆ ಏನಾದರೂ 'ಇತಿಹಾಸ' ಪ್ರಾರಂಭವಾದೀತೆಂದು ನಾಲ್ಕು ಮೊಳ ಆಚೆಯಿಂದ ಹೊರಗಡೆ ಓಡುತ್ತಿದ್ದೆ ! ಜೈಮಿನಿ ಭಾರತ, ಸಂಸ್ಕೃತ ಶ್ಲೋಕಗಳು, ಸಂಸ್ಕೃತ ಸುಭಾಷಿತಗಳನ್ನು ನಮ್ಮ ತಂದೆ ಸ್ವಾರಸ್ಯವಾಗಿ ಹೇಳುತ್ತಿದ್ದರು. ಈಗಲೂ ಅದು ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತದೆ. ಅಂಥದರಲ್ಲಿ ಕನ್ನಡ ಓದದೆ ನಾಲ್ಕು ಅಕ್ಷರ ಓದುಬರೆಯುವಷ್ಟು ಮರಾಠಿ ಕಲಿತ ನಮ್ಮ ತಾಯಿಗೆ ನಮ್ಮ ತಂದೆಯ ಹವ್ಯಾಸಗಳಲ್ಲಿ ಯಾವ ಆಸ್ಥೆ ಇದ್ದೀತು ?! ನಮ್ಮ ತಂದೆ ಓದುವುದೆಲ್ಲ ನಮ್ಮ ತಾಯಿಯ ಮಾತಿನಲ್ಲಿ 'ಮುಸಲರ ಇತಿಹಾಸ !'

ಮನೆಗೆ ಸಂಬಂಧವಾಗಿದ್ದಂತೆ ಕೌಟುಂಬಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ — ಏನಿದ್ದರೂ ಆ ಆಡಳಿತವೆಲ್ಲ ನಮ್ಮ ತಾಯಿಯದೆ. ನಮ್ಮ ತಂದೆ ಮನೆಗೆ ಅಗತ್ಯವಾದ ಸಾಮಾನುಗಳನ್ನು ತರಲು ಹೋದರೆ ಪೇಟೆಯಲ್ಲಿ ಒಳ್ಳೆಯದು ಕಂಡದ್ದನ್ನೆಲ್ಲ ತಂದು ಹಾಕುವ ಸ್ವಭಾವದವರು. ಲೆಕ್ಕಾಚಾರವಂತೂ ಇಲ್ಲವೇ ಇಲ್ಲ ! ಎಷ್ಟೋ ಬಾರಿ ಕಚೇರಿಯಲ್ಲಿ ಪೇಟೆಯಲ್ಲಿ ಹಣ ಕೂಡ ಕಳೆದುಕೊಳ್ಳುತ್ತಿದ್ದರು. ಕೆಲವು ಬಾರಿ ಮನೆಯ ಅಗತ್ಯದ ವಸ್ತುವನ್ನು ಬಿಟ್ಟು ಪುಸ್ತಕಗಳನ್ನು ತರುತ್ತಿದ್ದರು. ಬಹುಶಃ ನಮ್ಮಣ್ಣನಿಗೂ ಈ ಸ್ವಭಾವ ತಂದೆಯಿಂದ ಬಂದಿರಬಹುದು. ಸ್ಕಾಲರ್‌ಶಿಪ್ ಹಣದಲ್ಲಿ ತನಗಾಗಿ ಮತ್ತೇನನ್ನೂ ಕೊಂಡುಕೊಳ್ಳದೆ ಬರೀ ಪುಸ್ತಕಗಳಿಗೆ ಮಾತ್ರ ವೆಚ್ಚಮಾಡುತ್ತಿದ್ದ.

ನಮ್ಮ ತಂದೆಗೆ ಮಗನ ಮೇಲೆ ಅದೆಷ್ಟು ಅಭಿಮಾನವೆಂದರೆ ವೆಂಕಣ್ಣನಿಗೆ ದೊರೆತ ಎರಡೂ ಚಿನ್ನದ ಪದಕಗಳನ್ನು ಸದಾ ತಮ್ಮ ಬಳಿ ಇಟ್ಟುಕೊಂಡಿದ್ದರು, ಹೊಸಬರು ಯಾರಾದರೂ ಬಂದರೆ ತೋರಿಸುವುದಕ್ಕೆ ! ಅವು ಹೊರಗಿನ ಕೋಣೆಯ ಮೇಜಿನ ಡ್ರಾಯರಿನಲ್ಲಿ ಬಿದ್ದಿರುತ್ತಿದ್ದವು. ಅದಕ್ಕೆ ಚಿನ್ನ ಎಂಬ ಮಹತ್ವಕ್ಕಿಂತ ಪಾರಿತೋಷಕದ ಮಹತ್ವವಿತ್ತು . ಅದರಿಂದಾಗಿ ಯಾರು ಕದಿಯುತ್ತಾರೆ ಎಂದುಕೊಂಡಿದ್ದರು. ಆದರೆ ಸುಮಾರು ಎರಡು - ಎರಡೂವರೆ ತೊಲೆಯ ಚಿನ್ನದ ಒಂದು ಪದಕ ಕಳೆದುಹೋಯಿತು. ತನಗೆ ದೊರೆತ ಚಿನ್ನದ ಪದಕ ಕಳೆದುಹೋಯಿತೆಂಬ ಕಿರಿಕಿರಿ ಕೂಡ ನಮ್ಮಣ್ಣನಿಗೆ ಆದದ್ದು ನಾನು ನೋಡಿಲ್ಲ.

ನಮ್ಮ ತಂದೆ ಎರಡು ಬಾರಿ ಪ್ಲೇಗಕ್ಕೆ ತುತ್ತಾಗಿ ಬದುಕಿದವರು. ಅವರ ಆರೋಗ್ಯ ತುಂಬ ನಾಜೂಕಿನದಾಗಿತ್ತು. ನಮ್ಮ ತಾಯಿ ಅವರನ್ನು ಹೂವಿನಂತೆ ನೋಡಿಕೊಳ್ಳುತ್ತಿದ್ದ ರಿಂದಲೊ ದೇವರು ಆಯುಷ್ಯ ಕೊಟ್ಟಿದ್ದರಿಂದಲೊ ಅರವತ್ತೆಂಟು ವರ್ಷಕಾಲ ಬದುಕಿದ್ದರು. ಆದರೆ ಅವರು ತೀರಿಕೊಂಡದ್ದು ಒಂದು ದಿನದ ಕಾಯಿಲೆಯಿಂದ ಮಾತ್ರ. ಆಗ ನಮ್ಮ

ತಾಯಿ ವೆಂಕಣ್ಣನ ಬಳಿ ಮುಂಬಯಿಯಲ್ಲಿದ್ದರು. ವೆಂಕಣ್ಣನಿಗೆ ಫೋನ್ ಕರೆ ಹೋಗಿ ಆತ ಮನೆಗೆ ಬರುವವರೆಗೆ ಬಿಕ್ಕಳಿಸುತ್ತಲಾದರೂ ತಂದೆ ಪ್ರಾಣ ಹಿಡಿದುಕೊಂಡಿದ್ದರು. ನಮ್ಮ ತಾಯಿ, ತಂದೆಯವರಿಗೆ ನೀರು ಕುಡಿಸುವುದಕ್ಕೆ ವೆಂಕಣ್ಣನಿಗೆ ಹೇಳುತ್ತಿದ್ದರು. ಆದರೆ ಆತ ಚಮಚೆಯಿಂದ ನೀರು ಬಾಯಲ್ಲಿ ಹಾಕಲು ಹಿಂಜರಿಯುತ್ತಿದ್ದನಂತೆ. ಕೊನೆಗೆ ನಮ್ಮ ತಾಯಿ ಹೇಳಿದ ಈ ದೃಶ್ಯ ನಾನು ನೋಡಿರದಿದ್ದರೂ ಕಣ್ಣಿಗೆ ಕಟ್ಟುತ್ತದೆ. ಬೆಳಗಾಂವಿಯಲ್ಲಿ ವಾಸಿಸುತ್ತಿದ್ದ ನಮ್ಮ ತಂದೆ ತಾಯಿಗಳು ಮುಂಬಯಿಗೆ ಬಂದಾಗ ನಮ್ಮಣ್ಣನಿಗೆ ಸದಾಕಾಲ ಒಂದು ತರದ ಚಿಂತೆ, ಅನಿಶ್ಚಿತತೆ, ಮತ್ತೆ ಸುರಕ್ಷಿತವಾಗಿ ನಮ್ಮ ತಂದೆತಾಯಿಗಳು ಬೆಳಗಾಂವಿ ಮನೆಗೆ ಹೋಗಿ ಇರಬಹುದೆ ? ಆ ಮನೆಯ ಸೌಭಾಗ್ಯ ಮತ್ತೆ ತನಗೆ ಸಿಕ್ಕೀತೆ — ಎಂದು. ಇನ್ನು 'ಆ ಸೌಖ್ಯ ಇಲ್ಲ' ಎಂದು ಒಳ ಮನಸ್ಸು ಹೇಳುತ್ತಿತ್ತಂತೆ. ನಮ್ಮ ತಂದೆ ತೀರಿಕೊಂಡಾಗ ನಮ್ಮಣ್ಣ ಹೇಳಿದ ಮಾತಿದು.

ಆದರೆ ನಮ್ಮ ತಾಯಿ ಒಂದು ದಿನ ನಿದ್ರೆಯಲ್ಲಿಯೇ ಪ್ರಾಣ ಬಿಟ್ಟಿದ್ದರು. ನಿತ್ಯ ಮಗನ ಮುಖ ನೋಡುತ್ತ ತಾನೇ ನೀರು ಚಹಾ ಅಡಿಗೆ ಊಟ ಎಲ್ಲವನ್ನೂ ಎಲ್ಲರಿಗೂ ಕೊಡುವ ಆಕೆಗೆ ತುಂಬ ತೃಪ್ತಿ ಇತ್ತು. ಆಕೆಗೆ ಯಾವುದರ ಕೊರತೆ ಅಥವಾ ಚಿಂತೆ ಇರಲಿಲ್ಲ. ನೀರಿನ ಅಗತ್ಯವಾದರೂ ಏನು ಸಾಯುವಾಗ ಎಂದುಕೊಂಡಿರಬೇಕು ಆಕೆ ! ತಾನು ತುಂಬ ಕಷ್ಟಪಟ್ಟರೂ ಕೃಪಣತೆ ಮಾತ್ರ ನಮ್ಮ ತಾಯಿಯ ಬಳಿ ಎಂದೂ ಸುಳಿಯಲಿಲ್ಲ. ತುಂಬ ಧಾರಾಳವಾದ ಕೈ ಆಕೆಯದು. ನಮ್ಮಣ್ಣನಿಗೆ ನಮ್ಮ ತಾಯಿಯ ಕೈ ಅಡಿಗೆಯಂತೆ ಯಾರ ಕೈ ಅಡಿಗೆಯೂ ರುಚಿಸಿದ್ದಿಲ್ಲ!

ವೆಂಕಣ್ಣ ಮೊದಲ ಬಾರಿಗೆ ನನ್ನನ್ನು ಮುಂಬಯಿಗೆ ಕರೆದುಕೊಂಡು ಹೋಗಿ ಪತಿಯ ಮನೆ ಸೇರಿಸಿ ಅನೇಕ ಸಲಹೆ ಸೂಚನೆಗಳನ್ನು ಆಗ ಕೊಟ್ಟದ್ದು, ಮೊದಲ ದೀಪಾವಳಿ ಹಬ್ಬಕ್ಕೆ ಚಿನ್ನ ಕೊಳ್ಳುವುದಾಗಲಿಲ್ಲವೆಂದು ತನ್ನ ಬೆರಳಿನಲ್ಲಿಯ ಉಂಗುರವನ್ನು ತೆಗೆದು ಅಳಿಯನಿಗೆ ಕೊಡಲು ನಮ್ಮ ತಾಯಿಗೆ ಕೊಟ್ಟದ್ದು — ಮುಂತಾದ ಚಿಕ್ಕಂದಿನಲ್ಲಿಯ ನೆನಪುಗಳನ್ನೊಳಗೊಂಡು ಜೀವನದುದ್ದಕ್ಕೂ ಹಲವಾರು ಸುಖ-ದುಃಖಗಳ ಪ್ರಸಂಗಗಳು ಅಚ್ಚಳಿಯದೆ ನನ್ನ ಹೃದಯದಲ್ಲಿ ಹೂವಾಗಿ ಅರಳಿವೆ. ಆತ ಹೇಳಿಕೊಟ್ಟ ಒಂದು ಮಾತು ಇಂದಿಗೂ ನನಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಲು ತುಂಬ ಖುಷಿಯಾಗುತ್ತದೆ. ಆ ಪ್ರಸಂಗ ಈಗಲೂ ನಗು ಬರಿಸುತ್ತದೆ.

ನನ್ನ ಪತಿ ಆರು ದಿನಗಳ ಹಸುಳೆಯಾಗಿದ್ದಾಗ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಮನೆಯಲ್ಲಿ ಬೆಳೆದವರು. ಆ ಮನೆಗೆ ಒಂಬತ್ತು ಜನ ಗಂಡುಮಕ್ಕಳಲ್ಲಿ ನಮ್ಮತ್ತೆ ಒಬ್ಬಳೇ ಮಗಳು. ಆ ಮಗಳ ಈ 'ಅನಾಥ' ಶಿಶುವನ್ನು ಎಲ್ಲರೂ ತುಂಬ ಮುದ್ದು ಮಾಡಿದ್ದರು. ಈಗಿನ ಭಾಷೆಯಲ್ಲಿ 'spoilt child' ಎಂದು ಹೇಳಬಹುದು. ಅಲ್ಲದೆ

ಸ್ವತಂತ್ರವಾಗಿ ಬೆಳೆದು ತನ್ನ ಜೀವನವನ್ನು ತಾನೇ ರೂಪಿಸಿಕೊಂಡು ಒಂದು ಸುಸ್ಥಿತಿಗೆ ಬಂದು ತುಂಬ ಬುದ್ಧಿವಂತನೆಂದು ಹೆಸರು ಸಂಪಾದಿಸಿದ್ದರು. ಹೀಗಿದ್ದರೂ ಚಿಕ್ಕಂದಿನಲ್ಲಿಯ ಆ ಹಟಮಾರಿತನ ಮಾಯವಾಗಿರಲಿಲ್ಲ. ಇವರ ಇರುಸರಿಕೆ ಬ್ರಿಟಿಷ್ ಪದ್ಧತಿಯದು. ಅದರಿಂದಾಗಿ ನಮ್ಮಣ್ಣ ಇವರನ್ನು 'ಸಾಹೇಬ' ಎನ್ನುತ್ತಿದ್ದ.

ಕಟ್ಟುನಿಟ್ಟಿನ ಮನೆಯಲ್ಲಿ ಬೆಳೆದು ನಮ್ಮಣ್ಣನನ್ನೇ ಆದರ್ಶವಾಗಿಟ್ಟುಕೊಂಡ ನನಗೆ ಈ 'ಸಾಹೇಬರ' ನೀತಿ ನಡವಳಿಕೆಗಳ ಬಗೆಗೆ ಅಷ್ಟಾಗಿ ತಿಳಿವಳಿಕೆ ಇರಲಿಲ್ಲ. ಈ ನಮ್ಮ ಸಾಹೇಬರದು ಸೈನಿಕ ಶಿಸ್ತು. ಅವರ ಮನಸ್ಸಿನ ವಿರುದ್ಧ ಏನಾದರೂ ಹೇಳಿದರೆ ಅಥವಾ ಮಾಡಿದರೆ 'ತಪ್ಪಾಯಿತು ಕ್ಷಮಿಸಿ' ಎಂದು ಹೇಳಬೇಕು ! ಆ ವಯಸ್ಸಿನಲ್ಲಿ ನನ್ನ ತಪ್ಪುಗಳು ನನಗೆ ಎಂದೂ ಕಾಣಿಸುತ್ತಿರಲಿಲ್ಲ. 'ಜಪ್ಪಯ್ಯ' ಎಂದರೂ ನಾನು 'ತಪ್ಪಾಯಿತು ಕ್ಷಮಿಸು' ಎನ್ನುತ್ತಿರಲಿಲ್ಲ. ಒಂದು ದಿನ ಈ ಸಾಹೇಬರಿಗೆ ನಾನು ತಪ್ಪಾಯಿತು ಎಂದು ಹೇಳದೇ ಇದ್ದುದರಿಂದ ಕೋಪ ಬಂದು ಊಟ ಬಿಟ್ಟು ಹೋಗಿದ್ದರು. ನಮ್ಮ ಅಣ್ಣನೂ ಆಗ ಮುಂಬಯಿಯಲ್ಲಿಯೇ ಇರುತ್ತಿದ್ದುದರಿಂದ ನಿತ್ಯ ಸಂಜೆ ಸಾಹೇಬನ ಭೇಟಿಗೆ ಬರುತ್ತಿದ್ದ, ಇಲ್ಲವೆ ಈ ಸಾಹೇಬನೇ ಆತನನ್ನು ನೋಡಲು ಹೋಗುತ್ತಿದ್ದ. ನಮ್ಮಣ್ಣ ಆಗ 'ಮೂರಾಬಟ್ಟೆ' ಬರೆಯುತ್ತಿದ್ದ. ಅದನ್ನು ಓದುವುದು. ಆ ಕುರಿತು ಚರ್ಚೆ ನಡೆಯುತ್ತಿತ್ತು. ಅಂದು ವೆಂಕಣ್ಣ ಬಂದಾಗ 'ಸಾಹೇಬ' ಇರಲಿಲ್ಲ. ನನ್ನ ಕಣ್ಣಲ್ಲಿ ನೀರಿತ್ತು.

''ಏನಾಯಿತು ?'' ಎಂದು ಕೇಳಿದ ವೆಂಕಣ್ಣ. ನಾನು ಏನೂ ಹೇಳಲಿಲ್ಲ. ಇನ್ನಷ್ಟು ಅಳು ಬಂತು.

''ಸಾಹೇಬ ಜಗಳಾಡಿದ್ದಾನೆಯೆ ?'' ಎಂದ.

''ಎಲ್ಲದಕ್ಕೂ ತಪ್ಪಾಯಿತು ಅನ್ನು, ತಪ್ಪಾಯಿತು ಅನ್ನು, ಕ್ಷಮಿಸು ಅನ್ನು ಎಂದು ಹೇಳಿದರೆ ನಾನೇಕೆ ಅನ್ನಬೇಕು ? ನನ್ನ ತಪ್ಪಿದ್ದರೆ ಹೇಳುತ್ತಿದ್ದೆ. ಸುಮ್ಮಸುಮ್ಮನೆ ತಪ್ಪಾಯಿತು ಅನ್ನು ಎಂದರೆ ನಾನೇಕೆ ಹೇಳಬೇಕು — ತಪ್ಪು ತಮ್ಮದೇ ಇದ್ದರೂ...'' ಮುಂತಾಗಿ ನಡೆದ ಘಟನೆ ತಿಳಿಸಿದೆ. ಅದು ತುಂಬ ಕ್ಷುಲ್ಲಕವಾಗಿರಬೇಕು, ಅದರಿಂದಾಗಿ ಆ ಘಟನೆ ನನಗೆ ನೆನಪಿಲ್ಲ!

ವೆಂಕಣ್ಣನಿಗೆ ನಗು ಬಂದಿತು. ಆತ ಹೇಳಿದ — ''ತಪ್ಪಾಯಿತು ಎಂದು ಹೇಳಿಬಿಡು. ಆತ ಕೇಳುವುದಕ್ಕೆ ಮೊದಲೇ ತಪ್ಪಾಯಿತು ಎಂದು ಹೇಳು.''

ಸರಿ. ಅಂದಿನಿಂದ ನಾನು ಮಗು ಬಟ್ಟೆ ಕೊಳೆ ಮಾಡಿಕೊಂಡಿದ್ದರೂ ಸರಿ, ಹಾಲು ಕೆಟ್ಟು ಹೋಗಿದ್ದರೂ ಆಯಿತು — 'ತಪ್ಪಾಯಿತು ಕ್ಷಮಿಸಿ !' ಎಂದುಬಿಡುತ್ತಿದ್ದೆ. ಆದರೆ ಹೇಳುವಾಗ ನನಗೆ ತುಂಬಾ ನಗು ಬರುತ್ತಿತ್ತು!

'ತಥ್ ! ಸುಮ್ಮನಿರು ಸಾಕು !' ಎನ್ನಲಾರಂಭಿಸಿದರು. ಅನಂತರ ಈ ತಪ್ಪಾಯಿತು ಕ್ಷಮಿಸು ಪ್ರಕರಣ ನಿಂತುಹೋಯಿತು ! ಬಹುಶಃ ನಮ್ಮಿಬ್ಬರಿಗೂ ಬೆಳದಂತೆ ತಿಳಿವಳಿಕೆಯೂ ಬಂದಿರಬಹುದು. ಆದರೆ ಅಂದಿನ ಈ 'ತಪ್ಪಾಯಿತು ಕ್ಷಮಿಸಿ' ಎಂಬ ಎರಡು ಶಬ್ದಗಳು 'ಸಾರಿ' 'ಎಕ್ಸ್‌ಕ್ಯೂಸ್ ಮಿ' ಎಂಬುದಾಗಿ ಪರಿವರ್ತನೆಗೊಂಡು ಅನೇಕ ಸಂದರ್ಭಗಳಲ್ಲಿ ನನಗೆ ಸಹಾಯ ಸಹಕಾರ ನೀಡಿವೆ. ನಾನು ಈ ಮಾತುಗಳಿಂದಾಗಿ ಯಾರೊಡನೆಯೂ ಸ್ನೇಹವನ್ನು ಕಳೆದುಕೊಂಡಿಲ್ಲ.

ಹೀಗೆ ಒಂದೊ ಎರಡೊ ಮಾತುಗಳಲ್ಲಿ ವೆಂಕಣ್ಣ ಸಮಸ್ಯೆಗಳನ್ನು ಸಹಜವಾಗಿ ಬಿಡಿಸಿಬಿಡುತ್ತಾನೆ.

ಹಿಂದಿನ ಅನೇಕ ಘಟನೆಗಳನ್ನು ನೆನೆಸಿಕೊಂಡಾಗ ನಾವು ಹಾಗೆ ಮಾಡಿದ್ದರೆ ಚೆನ್ನಾಗಿತ್ತು; ಅದು ತಪ್ಪಾಯಿತು ; ಹೀಗೆ ಮಾಡಬಹುದಾಗಿತ್ತು— ಮುಂತಾಗಿ ಯೋಚಿಸಿ ನಮ್ಮಣ್ಣನಿಗೆ "ಆಗ ಹಾಗೆ ಮಾಡಬಾರದಿತ್ತು , ಹೀಗೆ ಮಾಡಬಹುದಿತ್ತು ಎಂದು ನಿನಗೆ ಎಂದೂ ಅನಿಸುವುದಿಲ್ಲವೆ ? ನನಗಂತೂ ಅಂದಿನ ಅಜ್ಞಾನದಿಂದಾಗಿ ಎಂಥೆಂಥವೊ ಅನಾಹುತಗಳಾದವು ಎನಿಸುತ್ತದೆ" ಎಂದು ಹೇಳಿದೆ. ಅದಕ್ಕೆ ಆತ "ಹಿಂದಿನದು ನೆನೆಯುತ್ತ ಹೋದರೆ ಇಂದು ಹುಚ್ಚು ಹಿಡಿಯುತ್ತದೆ" ಎಂದ.

ನಮ್ಮ ಹತ್ತು ಮಾತುಗಳಿಗೆ ಆತನ ಉತ್ತರ ಒಂದೇ ವಾಕ್ಯದಲ್ಲಿರುತ್ತದೆ. ಮಾತು ಕಡಿಮೆ ಆದರೂ ಆಡಿದ ಮಾತಿನಲ್ಲಿ ಆತ್ಮೀಯತೆಗೇನೂ ಕೊರತೆ ಇಲ್ಲ. ಕಷ್ಟದ ಸಮಯದಲ್ಲಿ ಹೇಳಿದ ಒಂದು ಮಾತಿನಲ್ಲಿ ಹೃದಯವನ್ನು ಅರಳಿಸುವ ಚೈತನ್ಯವಿದೆ. ಅದರಂತೆಯೇ ಆತನ ಮೌನದಲ್ಲಿಯೂ ನಮ್ಮ ತಪ್ಪನ್ನು ಕ್ಷಮಿಸುವ ಹಿರಿತನವಿದೆ, ಉದಾರತನವಿದೆ. ಈ ಹಿರಿ ನೆರಳಿನಲ್ಲಿ ನಾವು ತಂಪು ಕಾಣುತ್ತೇವೆ. ತಾಯಿ ಇಲ್ಲದ ತವರು ಎಂಬ ಕೊರಗು ನಮಗೆ ಎಂದೂ ಬಂದಿಲ್ಲ.

ಆರತಿಗೆ ಇಬ್ಬರು ಹೆಣ್ಣು ಮಕ್ಕಳು, ಕೀರ್ತಿಗೆ ಒಬ್ಬ ಮಗ ನಮ್ಮಣ್ಣನಿಗೆ. ಹೆಣ್ಣು ಮಕ್ಕಳು ನಂದಾದೀಪಗಳಾಗಿ ಇನ್ನೊಬ್ಬರ ಮನೆ ಬೆಳಗಲು ತೆರಳಿದ್ದಾರೆ. ನಮ್ಮಣ್ಣನದು "ಚಿಕ್ಕ ಸಂಸಾರ ಚೊಕ್ಕ ಸಂಸಾರ." ಅದನ್ನು ಕಂಡು "ಹೋಗಿ ಬರುವುದಕೆಲ್ಲ ತವರೂರು ಬಲು ಚೆಂದ. ಆರದಿರಲದರ ಬೆಳಕು"— ಎಂಬ ನರಸಿಂಹಸ್ವಾಮಿಯವರ ಕವನದ ಸಾಲನ್ನು ನನ್ನ ಹೃದಯ ಸದಾ ಮಿಡಿಯುತ್ತದೆ.

ಸ್ವಭಾವವಿಶೇಷದ ಮಾವಯ್ಯ

ಮಿೀನಾ ವಾಂಗೀಕರ

ನಮ್ಮ ತಂದೆಯವರನ್ನು ನಾವು ಮೂರೂ ಜನ ಮಕ್ಕಳು ಮಾವಯ್ಯನೆಂದೇ ಕರೆಯುತ್ತೇವೆ. ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ಮೂಡಿದ ಚಿತ್ರವನ್ನು ಬಣ್ಣಿಸಬೇಕಾದರೆ ನನ್ನ ಬಾಲ್ಯದಿಂದಲೇ ಪ್ರಾರಂಭಿಸಬೇಕು.

ಇಂದು ನನ್ನ ಬಾಲ್ಯದ ದಿನಗಳನ್ನು ಹಿಂತಿರುಗಿ ನೋಡಿದಾಗ ಮಾವಯ್ಯನವರ ಬಗ್ಗೆ ನನ್ನಲ್ಲಿ ಭೀತಿ ಪ್ರೀತಿ ಮತ್ತು ಆದರಗಳ ಮಿಶ್ರಭಾವನೆಗಳು ಇದ್ದುದೇ ನೆನಪಾಗುವುದು. ಅವರ ಕಟ್ಟುನಿಟ್ಟಿನ ಸ್ವಭಾವದಿಂದಾಗಿ ಅವರ ಹತ್ತಿರ ಹೋಗುವುದು ಸುಲಭ ಸಾಧ್ಯವೆನಿಸುತ್ತಿರಲಿಲ್ಲ. ಚಿಕ್ಕವಳಿದ್ದಾಗ ನಾನು ಅವರೊಂದಿಗೆ ನೇರವಾಗಿ ಮಾತನಾಡುತ್ತಲೇ ಇರಲಿಲ್ಲ. ಮಧ್ಯಸ್ಥೆಯಾಗಿ ನಮ್ಮ ವೈನಿ ಯಾವಾಗಲೂ ಇರಲೇಬೇಕು. ಅವಳ ಮುಖಾಂತರವೇ ನಮ್ಮ ಸಂಭಾಷಣೆ ನಡೆಯುತ್ತಿತ್ತು.

ಪುಸ್ತಕಗಳ ಕಪಾಟುಗಳಿಂದಲೇ ಕೂಡಿದ ಮತ್ತು ಸುಸಜ್ಜಿತವಾದ ಟೇಬಲ್ಲಿನ ಮೇಲೆ ಓರಣವಾಗಿಟ್ಟ ಪುಸ್ತಕಗಳಿಂದ ಯುಕ್ತವಾದ ಮಾವಯ್ಯನವರ ಕೋಣೆ ಎಂದರೆ ನನಗೆ ಒಂದು ಆದರಣೀಯ ಸ್ಥಳವಾಗಿತ್ತು. ಈ ಕೋಣೆಯನ್ನು ನಾನು ಮಾವಯ್ಯನವರನ್ನು ಊಟಕ್ಕೆ, ಚಹಾಕ್ಕೆ ಕರೆದುಬರುವುದರ ಹೊರತು ಪ್ರವೇಶಿಸುತ್ತಿರಲಿಲ್ಲ. ಅವರ ಪುಸ್ತಕ ಪೆನ್ನುಗಳಿಗೆ ಯಾರೂ ಕೈಹಚ್ಚುವಂತಿರಲಿಲ್ಲ.

'As charity, discipline also begins at self and at home' ಎಂಬುದು ಮಾವಯ್ಯನವರ ಸಿದ್ಧಾಂತ. ಅವರದು ಶಿಸ್ತುಬದ್ಧವಾದ ಜೀವನ. ಪ್ರತಿಯೊಂದು ಕೆಲಸ ಹೀಗೆಯೇ ಆಗಬೇಕು — ಅಂತೆಯೇ ನಡೆಯಬೇಕು ಎಂಬುದು ಅವರ ನಿಯಮ. ಅದಕ್ಕೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ ಅದನ್ನು ಅವರು ಸಹಿಸುತ್ತಿರಲಿಲ್ಲ. ತೀವ್ರವಾಗಿ ವಿರೋಧಿಸುತ್ತಿದ್ದರು ಮತ್ತು ಟೀಕಿಸುತ್ತಿದ್ದರು.

ನಮ್ಮ ಮನೆಯಲ್ಲಿ ಊಟದ ಸಮಯದಲ್ಲೂ ಒಂದು ಶಿಸ್ತನ್ನು ಪಾಲಿಸಬೇಕು ಎಂಬ ನಿಯಮವಿತ್ತು. ಮನೆಯಲ್ಲಿಯ ಎಲ್ಲರೂ ಒಟ್ಟಿಗೇ ಊಟಮಾಡಲು ಕುಳಿತುಕೊಳ್ಳುವ ಪರಿಪಾಠವಿತ್ತು. ತಟ್ಟೆಯಲ್ಲಿ ಒಮ್ಮೆ ಬಡಿಸಿದ್ದನ್ನು ತಿನ್ನಲೇಬೇಕು ಎಂಬ ಕಟ್ಟಳೆಯಿತ್ತು. ಅದು ಎಷ್ಟೇ ಇಷ್ಟವಾಗದೇ ಇರಲಿ, ಅದನ್ನು ಮುಗಿಸಲೇಬೇಕು. ಇದಕ್ಕಾಗಿ ನಾನು ಮತ್ತು ನನ್ನ ಅಣ್ಣ ಅನೇಕ ಸಲ ಶಿಕ್ಷೆಗೊಳಗಾಗಿರುವೆವು. ಬಡಿಸುವ ತನಕ ಕಾಯಬೇಕು, ಅದು ಬೇಕು ಇದು ಬೇಕು ಎಂದು ಗಲಾಟೆ ಮಾಡಬಾರದು ಎಂದು

ನಿಯಮವಿತ್ತು. ನಮ್ಮ ಬಟ್ಟೆಬರೆ ಪುಸ್ತಕಗಳನ್ನು ಓರಣವಾಗಿ ಇಟ್ಟುಕೊಳ್ಳದಿದ್ದರೆ ಮಾವಯ್ಯನವರಿಗೆ ಇಷ್ಟಬರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಒಂದು ಚಿಕ್ಕ ಪ್ರಸಂಗವನ್ನು ನೆನೆಯಬೇಕೆಂದರೆ — ಧಾರವಾಡದಲ್ಲಿ ನಾನು ಅದೇ ಶಾಲೆಗೆ ಹೋಗಲು ಪ್ರಾರಂಭಿಸಿದ್ದೆ. ಶಾಲೆಯಿಂದ ಬಂದ ನಂತರ ಪಾಟಿಯ ಚೀಲವನ್ನು ಅದರ ಜಾಗದಲ್ಲಿ ಇಡಬೇಕೆಂಬ ನಿಯಮವಿತ್ತು. ಆದರೆ ಶಾಲೆಯ ಮೇಲೆಯ ಕೋಪದಿಂದಲೋ, ಆಡಲು ಹೋಗುವ ಅವಸರದಿಂದಲೋ ಪಾಟಿಯ ಚೀಲವನ್ನು ಹೊರಗಿನ ಕೋಣೆಯಲ್ಲಿ ಬಿಸಾಕಿ ಆಡಲು ಓಡಿದ್ದೆ. ತಿರುಗಿ ಬಂದು ನೋಡಿದಾಗ ನನ್ನ ಚೀಲ ಅಲ್ಲಿ ಇರಲೇ ಇಲ್ಲ. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಆಮೇಲೆ ಕಾರಣ ಗೊತ್ತಾಯಿತು. 'ಪಾಟಿಯ ಚೀಲ ಇಡುವ ಜಾಗ ಇದೆ ? ಎಲ್ಲಿದೆಯೋ ಹುಡುಕಿ ತೆಗೆದುಕೋ' ಎಂದು ಮಾವಯ್ಯ ಹೇಳಿದರು. ತುಂಬಾ ಹೊತ್ತು ಹುಡುಕಿದ ನಂತರ ನನ್ನ ಚೀಲ ತೋಟದಲ್ಲಿ ಸಿಕ್ಕಿತು. ನನಗೆ ಪಾಠ ಕಲಿಸಬೇಕೆಂದು ಮಾವಯ್ಯ ಅದನ್ನೆತ್ತಿ ತೋಟದಲ್ಲಿ ಬಿಸಾಕಿದ್ದರೆಂದು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಚೀಲ ಹುಡುಕುವಷ್ಟರಲ್ಲಿ ನನಗಂತೂ ಅಳು ಬಂದಿತ್ತು. ಮುಂದೆ ನನ್ನ ಪಾಟಿಯ ಚೀಲ ಬೇರೆ ಯಾವ ಜಾಗದಲ್ಲಿಯೂ ಕಾಣಿಸಲಿಲ್ಲವೆಂದು ಬೇರೆ ಹೇಳಬೇಕೆ ? ಹೀಗೆ ಆಯಾ ವಸ್ತುಗಳನ್ನು ಅವುಗಳಿಗೆ ನಿಗದಿಯಾದ ಸ್ಥಳಗಳಲ್ಲಿಯೇ ಇಡಬೇಕೆಂಬ ಪಾಠ ನಾನು ಚಿಕ್ಕ ವಯಸ್ಸಿನಲ್ಲಿಯೇ ಕಲಿತೆ.

ಶಿಸ್ತುಪ್ರಿಯರಾದ ಮಾವಯ್ಯನವರು ನನ್ನ ಬಾಲ್ಯದಲ್ಲಿಯೇ ಸರಳ ಜೀವನದ ಮಹತ್ವವನ್ನು ನನ್ನ ಮನಸ್ಸಿನ ಮೇಲೆ ಬಿಂಬಿಸಿದರು. ಅವರಿಗೆ ಅತಿಯಾದ ಫ್ಯಾಶನ್ ಮಾಡುವುದು ಎಂದೂ ಇಷ್ಟವಾಗುತ್ತಿರಲಿಲ್ಲ. ಯಾವುದೇ ರೀತಿಯ ಆಕರ್ಷಣೆಗಳಿಗೆ ಮಾರುಹೋಗದೆ ಪಾಠ ಓದುವುದರಲ್ಲಿ ನಿರತರಾಗುವುದು ವಿದ್ಯಾರ್ಥಿಗಳ ಕರ್ತವ್ಯ ಎಂದು ಅವರು ಕಟ್ಟುನಿಟ್ಟಾಗಿ ಹೇಳುತ್ತಿದ್ದರು. ಬಟ್ಟೆಬರೆಗಳ ಆಯ್ಕೆಯಲ್ಲಿ ಷೇಕ್ಸ್‌ಪಿಯರ್‌ನ 'rich but not gaudy' ಎಂಬ ತತ್ವ ಅವರಿಗೆ ಪ್ರಿಯವಾದುದು. ಬೇಕಾದುದಕ್ಕಿಂತ ಹೆಚ್ಚು ಬಟ್ಟೆಬರೆಗಳ ಸಂಗ್ರಹಣೆ ಅವರಿಗೆ ರುಚಿಸುವುದಿಲ್ಲ. ಒಂದೇ ಕೆಲಸವನ್ನು ಏಕಾಗ್ರಚಿತ್ತ ದಿಂದ ಮಾಡುವುದನ್ನು ಅವರು ಹೆಚ್ಚಾಗಿ ಇಷ್ಟಪಡುತ್ತಾರೆ. Jack of all trades ಆಗುವುದಕ್ಕಿಂತ master of one ಆಗುವುದು ಒಳ್ಳೆಯದು ಎಂಬುದು ಅವರ ಖಚಿತ ಅಭಿಪ್ರಾಯ. ಆದುದರಿಂದಲೇ ಚಿಕ್ಕವಳಿದ್ದಾಗ ನಾನು ಹೊಲಿಗೆ, ನೃತ್ಯ ಇತ್ಯಾದಿ ಅನೇಕ ವಿದ್ಯೆಗಳನ್ನು ಕಲಿಯಬೇಕೆಂದು ಹಟಮಾಡಿದಾಗ ಈಗ ಪಾಠ ಒಂದನ್ನೇ ಸರಿಯಾಗಿ ಕಲಿತರೆ ಸಾಕು ಎಂದು ಖಂಡಿತವಾಗಿ ಹೇಳಿದ್ದರು. ಚಿಕ್ಕ ವಯಸ್ಸಿನಲ್ಲಿ ಸಂಗೀತ ಕಲಿತರೆ ಅದು ಜೀವನದುದ್ದಕ್ಕೂ ಸಂಗಾತಿಯಾಗಬಲ್ಲುದು ಎಂಬುದನ್ನು ಅರಿತಿದ್ದ ಮಾವಯ್ಯನವರು ಸಂಗೀತ ಕಲಿಯುವುದಾದರೆ ಕಲಿ ಎಂದಿದ್ದರು. ಆದರೆ ನಾನು ನನ್ನ ಹಟ ಬಿಡಲಾರದೆ ನೃತ್ಯ ಕಲಿಯಬೇಕೆಂದು ಇಷ್ಟಪಟ್ಟೆ. ತಮ್ಮ ಮನಸ್ಸಿನ ವಿರುದ್ಧವಾದರೂ

ನನ್ನ ಹಟಕ್ಕಾಗಿ ಕೆಲವೊಂದು ವರ್ಷ ನಾನು ನೃತ್ಯ ಕಲಿಯುವುದನ್ನು ಮಾವಯ್ಯ ಸಹಿಸಿದ್ದರು. ಆದರೆ ಇಂದು ನಾನು ಮಾವಯ್ಯನವರ ಇಷ್ಟದಂತೆ ಸಂಗೀತವನ್ನೇ ಕಲಿತಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು ಅನಿಸುವುದು. ಇನ್ನೊಬ್ಬರ ಅನುಭವದಿಂದ ಪಾಠ ಕಲಿಯುವವನೇ ಜಾಣ ಅಲ್ಲವೆ ?

ವಿಷಯ ಎಷ್ಟೇ ಚಿಕ್ಕದಾಗಲಿ ಅದನ್ನು ನೆನಪುಳಿಯದಂತೆ ಕಲಿಸುವುದು ಮಾವಯ್ಯನವರ ವೈಶಿಷ್ಟ್ಯ. ನನಗೆ ಬೀಗ ಹಾಕುವದು ಹೇಗೆ, ತೆಗೆಯುವುದು ಹೇಗೆ ಎನ್ನುವುದನ್ನು ಅವರೇ ಕಲಿಸಿದ ನೆನಪಿದೆ.

ಮಾವಿನ ಹಣ್ಣು ಎಂದರೆ ಎಲ್ಲರಿಗೂ ಪ್ರಿಯ. ಆದರೆ ಮಾವಿನ ಹಣ್ಣು ಎಂದೊಡನೆ ನನಗೆ ಧಾರವಾಡದ ನೆನಪು ಬಾರದೇ ಇರುವುದಿಲ್ಲ. ಮಾವಯ್ಯನವರು ಸ್ವತಃ ಆಯ್ಕೆ ಮಾಡಿ ಉತ್ತಮ ಮಾವಿನ ಹಣ್ಣುಗಳನ್ನು ತರುತ್ತಿದ್ದರು. ಮನೆಯಲ್ಲಿಯ ಎಲ್ಲರೂ ಒಂದೆಡೆ ಸೇರುತ್ತಿದ್ದೆವು. ಮಾವಯ್ಯನವರೇ ರಸವತ್ತಾದ ಹಣ್ಣುಗಳನ್ನು ಅಚ್ಚುಕಟ್ಟಾಗಿ ಚಾಕುವಿನಿಂದ ಹೆಚ್ಚಿ ಎಲ್ಲರಿಗೂ ಕೊಡುತ್ತಿದ್ದರು. ನಾವೆಲ್ಲರೂ ಎದುರು ನೋಡುತ್ತಿದ್ದ ಆನಂದದ ಒಂದು ಕಾರ್ಯಕ್ರಮವೇ ಅದಾಗಿರುತ್ತಿತ್ತು.

ಧಾರವಾಡದಲ್ಲಿರುವಾಗಿನ ಇನ್ನೊಂದು ಸವಿನೆನಪೆಂದರೆ ನಮ್ಮ ಮನೆಯ ಸುತ್ತಲಿನ ಹೂದೋಟ. ಮಾವಯ್ಯನವರಿಗೆ ತೋಟದಲ್ಲಿ ಕೆಲಸಮಾಡುವುದೆಂದರೆ ತುಂಬಾ ಪ್ರೀತಿ. ಅಲ್ಲಿ ಗಂಟೆಗಟ್ಟಲೆ ಕೆಲಸ ಮಾಡುತ್ತಿದ್ದ ಮಾವಯ್ಯ ನನ್ನ ನೆನಪಿನಲ್ಲಿ ಅಚ್ಚೊತ್ತಿದಂತೆ ಉಳಿದಿದ್ದಾರೆ. ಅವರೇ ಕಸಿಮಾಡಿ, ಕಷ್ಟಪಟ್ಟು ರಾಶಿರಾಶಿ ಮಲ್ಲಿಗೆ ಹೂ, ತರಕಾರಿಗಳನ್ನು ಬೆಳೆಯುತ್ತಿದ್ದರು. ಆ ಗಿಡಗಳಲ್ಲಿ ಬಿಟ್ಟ ಗುಲಾಬಿ ಹೂಗಳನ್ನು ಎಣಿಸುವುದೆಂದರೆ ನನಗೆ ಎಲ್ಲಿಲ್ಲದ ಆನಂದ. ಬೆಳಗ್ಗೆ ಎದ್ದು ಹೂ ಎಣಿಸ ಹೊರಟರೆ ಒಂದೊಂದು ಸಲ ಇನ್ನೂರರ ಮೇಲೂ ಗುಲಾಬಿ ಹೂ ಬಿಟ್ಟಿರುತ್ತಿದ್ದವು. ಆ ಹೂವು ಮತ್ತು ತರಕಾರಿಗಳ ರಾಶಿಗಳನ್ನು ನಾವು ಪರಿಚಿತರ ಮನೆಗೆ ಒಯ್ದು ಹಂಚುತ್ತಿದ್ದೆವು.

ಮಾವಯ್ಯನವರ ಸ್ವಭಾವದ ಇನ್ನೊಂದು ಮುಖವೆಂದರೆ ಅವರ ಹಾಸ್ಯಪ್ರಿಯತೆ. ಕಾಲೇಜಿನಲ್ಲಿ ನೋಡಿದಾಗ ಇವರಿಗೆ ನಗಲಾದರೂ ಬರುವುದೋ ಇಲ್ಲವೊ ಎಂದು ಸಂಶಯ ಬರುತ್ತದೆ ಎಂದು ಉಡುಪಿಯಲ್ಲಿಯ ಒಬ್ಬ ಪ್ರಾಧ್ಯಾಪಕರು ಅಂದ ನೆನಪು. ಅವರ ಧೀರ ಗಂಭೀರ ಸ್ವಭಾವದ ಇನ್ನೊಂದು ಮುಖ ತುಂಬಾ ನಿಕಟವರ್ತಿ ಮತ್ತು ಬಂಧುಬಳಗದವರಿಗೆ ಮಾತ್ರ ಪರಿಚಿತ. ಆದರೆ ವಿಷಯ ಯಾವುದೇ ಆಗಲಿ, ಎಷ್ಟೇ ಗಂಭೀರವಾಗಿರಲಿ ಅದನ್ನು ಹಗುರವಾಗಿ ತೆಗೆದುಕೊಂಡು ಚೇಷ್ಟೆ ಮಾಡಿ ಎಲ್ಲರನ್ನೂ ನಕ್ಕು ನಗಿಸುವುದು ಅವರ ಸ್ವಭಾವವಿಶೇಷ

ಉತ್ತಮ ವಿಮರ್ಶಕರಾದ ಮಾವಯ್ಯನವರ ನಾಲಗೆ ಹಾಸ್ಯವಿಡಂಬನ

ಮಾಡುವಾಗ ತುಂಬಾ ಮೊನಚನ್ನು ಪಡೆಯುತ್ತದೆ. ಅವರ ಟೀಕೆ ಮನಮುಟ್ಟುವಂತಿರುತ್ತದೆ. ನನ್ನ ಚಿಕ್ಕಂದಿನಲ್ಲಿ ಅವರ ಸ್ವಭಾವ ಅರ್ಥವಾಗುತ್ತಿರಲಿಲ್ಲ. ಇಷ್ಟು ಜೋರಾಗಿ ನಿಖರವಾಗಿ ಮಾತನಾಡುವವರು ಹಾಸ್ಯಮಾಡಲು ಪ್ರಾರಂಭಿಸಿದರೆ ಹೇಗೆ ಎಲ್ಲರನ್ನೂ ನಗಿಸುತ್ತಾರೆ ಎಂದು ನನಗೆ ತುಂಬಾ ಆಶ್ಚರ್ಯವಾಗುತ್ತಿತ್ತು. ಅವರ ಈ ಸ್ವಭಾವವಿಶೇಷದ ಒಂದು ಪರಿ ನನಗೆ ತುಂಬಾ ಚೆನ್ನಾಗಿ ನೆನಪಿದೆ. ನಾನು ಐದು-ಆರು ವರ್ಷದವಳಿದ್ದಾಗ ನನಗೆ ಮಾವಯ್ಯನವರು ಚಿಕ್ಕಚಿಕ್ಕ ಭಾಷಣಗಳನ್ನು ಕಲಿಸಿದ್ದರು. ಅವು ದೊಡ್ಡವರ ಭಾಷಣಗಳ ವಿಡಂಬನೆಗಳಾಗಿರುತ್ತಿದ್ದವು. 'ಯಾರೂ ಶಾಲೆಗೆ ಹೋಗಬಾರದು...' 'ನಾವೆಲ್ಲ ಇಲ್ಲಿ ಏಕೆ ಸೇರಿದ್ದೇವೆ ಎನ್ನುವುದು ನಮಗೂ ಗೊತ್ತಿದೆ ; ನಿಮಗೂ ಗೊತ್ತಿದೆ ; ಭಾರತಮಾತಾಳಿಗೂ ಗೊತ್ತಿದೆ...' ನನಗೆ ಬಾಯಿಪಾಠ ಬಹುಬೇಗ ಚೆನ್ನಾಗಿ ಬರುತ್ತಿತ್ತು. ಸ್ವಲ್ಪವೂ ಅಂಜದೆ ಎಲ್ಲರ ಮುಂದೆ ಭಾಷಣ ಮಾಡಿ ತೋರಿಸುತ್ತಿದ್ದೆ. ಆ ಭಾಷಣಗಳ ವಿಡಂಬನೆಯ ಅರ್ಥ ತಿಳಿದು ಕೇಳಿದವರು ನಗುತ್ತಿದ್ದರು.

ಮಾವಯ್ಯನವರು ಕಾಲೇಜಿನಲ್ಲಿಯ ಉತ್ತಮ ಪ್ರಾಧ್ಯಾಪಕರು, ಲೇಖಕರು ಎನ್ನುವುದು ತಿಳಿದಂತೆ ಅವರ ಬಗ್ಗೆಯ ನನ್ನ ಆದರ ಹೆಚ್ಚಾಗುತ್ತಾ ಹೋಯಿತು. ಮನೆಯಲ್ಲಿ ಯಾವಾಗಲೂ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕಾಳಿದಾಸ, ಭಾಸ, ಬಾಣ, ಇವರ ಬಗ್ಗೆ ನಡೆಯುತ್ತಿದ್ದ ಚರ್ಚೆ ನನ್ನ ಕಿವಿಯ ಮೇಲೆ ಬೀಳುತ್ತಿತ್ತು. ಹೀಗಾಗಿ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕಾಳಿದಾಸ ಇವರು ಯಾರೋ ನಮ್ಮವರೇ ಎನ್ನುವಷ್ಟು ನಮಗೆ ಪರಿಚಿತ ರಾಗಿದ್ದರು. ಬಾಲ್ಯದಿಂದಲೇ ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯದ ಅಭಿರುಚಿ ಬೆಳೆಯಿತು.

ಧಾರವಾಡದಲ್ಲಿಯ ನಮ್ಮ ಮನೆಗೆ ಮಾವಯ್ಯನವರ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪರಿಚಿತರು ಎಂದು ತುಂಬಾ ಜನ ಬಂದುಹೋಗುತ್ತಿದ್ದರು. ಅಂತೆಯೇ ಶ್ರೀರಂಗರ ನಾಟಕಗಳಲ್ಲಿ ಮಾವಯ್ಯ ಮತ್ತು ವೈನಿ ಭಾಗವಹಿಸುತ್ತಿದ್ದರು. ನಮ್ಮ ಮನೆಯಲ್ಲಿಯೇ ಆ ನಾಟಕಗಳ ರಂಗತಾಲೀಮುಗಳು ನಡೆಯುತ್ತಿದ್ದುವು. ಅವನ್ನೆಲ್ಲ ನಾನು ನೋಡುತ್ತಿದ್ದ ನೆನಪು ನನಗೆ ಚೆನ್ನಾಗಿ ಇದೆ. ರಾಯಚೂರಿನಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀರಂಗರ 'ಶೋಕಚಕ್ರ' ನಾಟಕವನ್ನು ಆಡಿದ್ದರು. ಅದರಲ್ಲಿಯ ಪ್ರಮುಖ ಪಾತ್ರಗಳನ್ನು ಮಾವಯ್ಯ ಮತ್ತು ವೈನಿ ವಹಿಸಿದ್ದರು. ರಾಯಚೂರಿಗೆ ಹೋದದ್ದು, ನಾಟಕ ನೋಡಿದ್ದು ನನ್ನ ಸ್ಮರಣೆಯಲ್ಲಿದೆ. ಹೀಗೆ ಸಾಹಿತ್ಯ ಮತ್ತು ನಾಟಕ ಕ್ಷೇತ್ರಗಳ ಪರಿಚಯ ನನಗೆ ತಿಳಿಯದಂತೆಯೇ ಆಯಿತು.

1958ರಲ್ಲಿ ಮಾವಯ್ಯನವರಿಗೆ ಮಂಗಳೂರಿಗೆ ವರ್ಗವಾಯಿತು. ಸಾಮಾನು ಗಳನ್ನು ಸಾಗಿಸುವಾಗ ನಮ್ಮ ಸಾಮಾನುಗಳಲ್ಲಿ ಪುಸ್ತಕಗಳೇ ಹೆಚ್ಚು ಎನ್ನುವುದು ನನ್ನ ಗಮನಕ್ಕೆ ಬಂದಿತು. ಆ ಪುಸ್ತಕಗಳ ರಾಶಿಗಳನ್ನು, ದೊಡ್ಡ ದೊಡ್ಡ ಕಪಾಟುಗಳನ್ನು

ಸಾಗಿಸುವಾಗ, ಸಾಮಾನು ಎತ್ತಿಡುವ ಕೆಲಸದವರು ತಮ್ಮಲ್ಲಿಯೇ ಮಾತಾನಾಡಿಕೊಂಡದ್ದು ನಾನು ಕೇಳಿದ್ದೆ. 'ಈ ಸ್ವಾಮಿಯವರದೇನು ಪುಸ್ತಕದ ಅಂಗಡಿ ಇದೆಯೋ ಏನೊ?!'

ಈ ಕೆಲಸದವರು ಅಂದಂತೆ ಸ್ವಾಮಿಯವರದು ಪುಸ್ತಕದ ಅಂಗಡಿ ಇಲ್ಲದಿದ್ದರೂ ಅವರು ಪುಸ್ತಕಪ್ರೇಮಿಗಳಂತೂ ನಿಜ. ಪುಸ್ತಕಗಳು ಮಾನವನ ನಿಜವಾದ ಮಿತ್ರರು ಎಂದು ಅವರು ತಿಳಿದಿದ್ದಾರೆ. ತಮಗೆ ಓದಬೇಕಾದ ಪುಸ್ತಕಗಳನ್ನು ಕ್ರಯ ಕೊಟ್ಟು ಕೊಳ್ಳುವ ಪರಿಪಾಠವನ್ನು ಅವರು ಮೊದಲಿನಿಂದ ಇಟ್ಟುಕೊಂಡಿದ್ದಾರೆ. ವರ್ಷಾನುವರ್ಷಗಳಿಂದ ಉತ್ತಮ ಪುಸ್ತಗಳನ್ನು ಸಂಗ್ರಹಿಸಿ ಒಂದು ದೊಡ್ಡ ಪುಸ್ತಕಸಂಗ್ರಹವೇ ಅವರದಾಗಿದೆ. ಅವರ ಈ ಪುಸ್ತಕ ಕೊಳ್ಳುವ ಅಭ್ಯಾಸದ ಬಗ್ಗೆ ವೈನಿ ಯಾವಾಗಲಾದರೂ ತಕರಾರು ಮಾಡಿದಾಗ ಅವರು 'ನನ್ನ ಪುಸ್ತಕಸಂಗ್ರಹಕ್ಕಿಂತ ನಿನ್ನ ಸೀರೆಗಳ ಪಾತ್ರೆಪರಡಿಗಳ ಸಂಗ್ರಹ ಏನು ಕಡಿಮೆ ಇದೆ ?' ಎಂದು ಮರುಸವಾಲು ಹಾಕುತ್ತಾರೆ. ಪುಸ್ತಕಗಳನ್ನು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳುವ ಅಭ್ಯಾಸವನ್ನು ಅವರು ಬೆಳೆಸಿಕೊಂಡಿದ್ದಾರೆ. ಪ್ರತಿಯೊಬ್ಬರೂ ತಮಗೆ ಬೇಕಾದ ಪುಸ್ತಕಗಳನ್ನು ಕೊಂಡು ಓದುವ ಅಭ್ಯಾಸವನ್ನು ಬೆಳೆಸಿಕೊಂಡರೆ ಕನ್ನಡ ಪುಸ್ತಕ ಪ್ರಪಂಚಕ್ಕೆ ಬಂದ ಕುತ್ತಿನ ನಿವಾರಣೆ ಸುಲಭವಾಗಿ ಆಗುವುದು ಎಂದು ಅವರು ಖಚಿತವಾಗಿ ಹೇಳುವರು. ಇನ್ನೊಬ್ಬರ ಹತ್ತಿರ ಬೇಡಿ ಪುಸ್ತಕ ಓದಲು ಒಯ್ಯುವುದನ್ನು ಅವರು ಹೆಚ್ಚಾಗಿ ಮೆಚ್ಚುವುದಿಲ್ಲ. ಓದಲು ಒಯ್ದ ಪುಸ್ತಕಗಳನ್ನು ಚೆನ್ನಾಗಿ ಇಟ್ಟುಕೊಳ್ಳದಿದ್ದರೆ, ಸಕಾಲದಲ್ಲಿ ಹಿಂತಿರುಗಿಸದಿದ್ದರೆ ಅವರು ಸಹಿಸಲಾರರು. ತಮ್ಮ ಪುಸ್ತಕ ಪ್ರಪಂಚದಲ್ಲಿ ವ್ಯವಹರಿಸುವಾಗ ಮಾವಯ್ಯ ಪರಮಸುಖಿ. ಯಾವುದಾದರೂ ಒಂದು ಪುಸ್ತಕ ಬೇಕು ಅಂದಕೂಡಲೇ ತಕ್ಷಣ ಅದು ಕಣ್ಮುಚ್ಚಿದಾಗಲೂ ಕೈಗೆ ಸಿಗುವಂತೆ ಅವರು ಇಟ್ಟಿರುತ್ತಾರೆ.

ಮಂಗಳೂರಿಗೆ ಬಂದ ನಂತರ ನಾನು ಯಾವ ಶಾಲೆಗೆ ಹೋಗಬೇಕೆಂಬ ಪ್ರಶ್ನೆ ಬಂದಾಗ 'ಇಂಗ್ಲೀಷು ಶಾಲೆಗಳು ಬೇಡವೇ ಬೇಡ ; ಮನೆಯ ಹತ್ತಿರವಿರುವ ಶಾಲೆಯೇ ಉತ್ತಮ ಶಾಲೆ' ಎಂದು ಮಾವಯ್ಯನವರು ಖಚಿತವಾಗಿ ಉತ್ತರಿಸಿದ್ದರು. ಕಾನ್ವೆಂಟ್ ಶಿಕ್ಷಣ ಪದ್ಧತಿಯನ್ನು ವಿರೋಧಿಸುತ್ತಿದ್ದ ಮಾವಯ್ಯ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣವಾಗ ಬೇಕೆಂದು ನಂಬಿದ್ದರು. ಆಗ ನನಗೆ ಈ ಉತ್ತರ ರುಚಿಸಿರಲಿಲ್ಲ. ದೂರದ ಇಂಗ್ಲೀಷು ಶಾಲೆಯಲ್ಲಿಯ ಸಮವಸ್ತ್ರಧರಿಸಿದ ಹುಡುಗಿಯರನ್ನು ನೋಡಿದಾಗ, 'ನಾನೂ ಅವರಂತೆ ಯಾಕಿರಬಾರದು ?' ಎಂದು ಅಂದುಕೊಳ್ಳುತ್ತಿದ್ದೆ. ಆದರೆ ನಾನು ಮಾವಯ್ಯನವರ ಮನಸ್ಸಿನಂತೆ ಹತ್ತಿರದ ಕನ್ನಡ ಶಾಲೆಗೆ ಹೋದೆ. ಆದರೆ ಕನ್ನಡದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವಾದುದರಿಂದ ಇಂದು ನನಗೆ ಏನೂ ನಷ್ಟವಾಗಿಲ್ಲ. ಈಗ ನನ್ನ ಮಕ್ಕಳನ್ನು ಶಾಲೆಗೆ ಕಳಿಸುವ ಸಂದರ್ಭದಲ್ಲಿ ಅವರ ವಿಚಾರಗಳು ಎಷ್ಟು ಯೋಗ್ಯವಾದುವು ಎನ್ನುವುದು ಮನದಟ್ಟಾಗುವುದು. ಶಾಲೆಯಲ್ಲಿ ಸಂಸ್ಕೃತ ಮತ್ತು ಇತರ ಭಾಷೆಗಳೇ ನನ್ನ

ಅಚ್ಚುಮೆಚ್ಚಿನ ವಿಷಯಗಳಾಗಿದ್ದುವು. ಮಾವಯ್ಯನವರು ನನ್ನಲ್ಲಿ ಬಿಂಬಿಸಿದ ಭಾಷಾಪ್ರೇಮ ಮುಂದೆ ನನಗೆ ಮರಾಠಿ ಭಾಷೆ ಕಲಿಯುವಾಗ ಪ್ರಯೋಜನಕ್ಕೆ ಬಂದಿತು.

ಮಾವಯ್ಯನವರು ತಮ್ಮ ವಾತ್ಸಲ್ಯದ ಪ್ರದರ್ಶನವನ್ನು ಎಂದೂ ಮಾಡಿದವರಲ್ಲ. ಚಿಕ್ಕಂದಿನಲ್ಲಿ ಏಕೆ ಇವರು ಚೇಷ್ಟೆಯಾದರೂ ಮಾಡುತ್ತಾರೆ, ಇಲ್ಲವೇ ಬೈಯ್ಯುತ್ತಾರೆ ಎಂದು ಅನಿಸುತ್ತಿತ್ತು. ಈ ಬಗ್ಗೆ ನಮ್ಮ ವೈನಿಯವರೊಂದಿಗೆ ತಕರಾರು ಮಾಡಿದಾಗ ಅವಳು 'ಅವರ ಸ್ವಭಾವವೇ ಹಾಗೆ ; ಅವರು ತೋರಿಸುವುದಿಲ್ಲವೆಂದ ಮಾತ್ರಕ್ಕೆ ಅವರಿಗೆ ನಿಮ್ಮ ಮೇಲೆ ಮಮತೆ ಇಲ್ಲವೆಂದಿಲ್ಲ ; ನಿಮ್ಮ ಒಳ್ಳೆಯದಕ್ಕೇ ಅವರು ನಿಮ್ಮನ್ನು ಶಿಕ್ಷಿಸುತ್ತಾರೆ' ಎಂದು ತಿಳಿಸಿ ಹೇಳುತ್ತಿದ್ದಳು. ಈ ಸಂದರ್ಭದಲ್ಲಿಯ ಒಂದು ನೆನಪೆಂದರೆ 'ನನ್ನ ಗೆಳತಿಯರ ತಂದೆಯವರು ಎಲ್ಲಿಯಾದರೂ ಊರಿಗೆ ಹೋದಾಗ ಅವರಿಗಾಗಿ ಏನಾದರೂ ತರುತ್ತಾರೆ ; ನಮ್ಮ ಮಾವಯ್ಯನವರೇಕೆ ಏನೂ ತರುವುದಿಲ್ಲ' ಎಂದು ವೈನಿಯನ್ನು ನಾನು ಒಂದೆರಡು ಸಲ ಕೇಳಿದ್ದೆ. ಮುಂದಿನ ಸಲ ಮಾವಯ್ಯ ಮುಂಬಯಿಗೆ ಹೋದಾಗ ಮರೆಯದೇ ನನಗಾಗಿ ಬಟ್ಟೆ ತಂದಿದ್ದರು. ಬಂದ ಕೂಡಲೇ ಅದನ್ನು ನನಗೆ ಕೊಟ್ಟಿದ್ದರು.

ಸ್ವಾವಲಂಬನಕ್ಕೆ ಮಾವಯ್ಯ ತುಂಬಾ ಮಹತ್ವ ಕೊಡುತ್ತಾರೆ. ತಮ್ಮ ಎಲ್ಲಾ ಕೆಲಸಗಳನ್ನು ತಾವೇ ಮಾಡುತ್ತಾರೆ. ಸಾಧ್ಯವಿದ್ದಷ್ಟು ಮಟ್ಟಿಗೆ ಇನ್ನೊಬ್ಬರಿಗೆ ತೊಂದರೆ ಕೊಡಬಾರದು ಎಂಬುದು ಅವರ ಧೋರಣೆ. ಸಣ್ಣವಳಿರುವಾಗ ನಾನು ಬಟ್ಟೆ ಬರೆ ಎತ್ತಿಡುವುದನ್ನು ಮರೆತಿದ್ದರೆ ಅಥವಾ ಕೋಣೆಯಿಂದ ಹೊರಗೆ ಬಂದಾಗ ದೀಪ ಫ್ಯಾನು ಆರಿಸುವುದನ್ನು ಮರೆತಿದ್ದರೆ ಚೇಷ್ಟೆಗೆಂದು 'ನಿಮ್ಮ ಕೆಲಸದವರಿಗಷ್ಟು ದೀಪ ಆರಿಸಲು, ಬಟ್ಟೆ ಎತ್ತಿಡಲು ಹೇಳಿರಿ' ಎನ್ನುತ್ತಿದ್ದರು. (ಕೆಲಸದವರೆಂದರೆ ನಾನೇ !)

ನನಗೆ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳು ಬಂದಾಗ 'ನೀನೇ ಮೊದಲನೆಯವ ಳಾದರೆ ಉಳಿದವರು ಹೇಗಿರುವರೋ !' ಎಂದು ಚೇಷ್ಟೆ ಮಾಡುತ್ತಿದ್ದರು. ಮಂಗಳೂರಿಗೆ ಬಂದ ಹೊಸದರಲ್ಲಿ ನನಗೆ ಯಾರೂ ಗೆಳತಿಯರಿರಲಿಲ್ಲ. ನನಗೆ ಬೇಸರವಾಗುತ್ತಿದೆ ಎಂದಾಗ ಮಾವಯ್ಯ ಅಂದಿದ್ದರು, "ನಿನ್ನಷ್ಟು ಹುಡುಗಿಗೆ ಬೇಸರವಾದರೆ ಜಗತ್ಪ್ರಳಯ ವಾದೀತು ?" ಅದರ ಅರ್ಥ ನನಗೆ ತಿಳಿಯಲಿಲ್ಲ. ಮುಂದೆ ಸ್ವಲ್ಪ ಹೊತ್ತಿನಲ್ಲಿ ಕುವೆಂಪು ಅವರ 'ರಾಮಾಯಣ ದರ್ಶನಂ' ಪುಸ್ತಕ ತಂದು ಓದಲು ಕೊಟ್ಟರು. 'ಇದೂ ಬೇಸರವಾದರೆ ಹೊರ ಜಗಲಿಯಲ್ಲಿ ಕುಳಿತು ರಸ್ತೆಯಲ್ಲಿ ಹೋಗುತ್ತಿರುವ ಸಾಯಿಕಲ್‌ಗಳನ್ನು ಎಣಿಸು' ಎಂದಿದ್ದರು.

ಓದುವಾಗ ಗಟ್ಟಿಯಾಗಿ ಓದುವುದಕ್ಕಿಂತ ಮನಸ್ಸಿನಲ್ಲಿಯೇ ಓದುವುದು ಒಳ್ಳೆಯದು ಎಂಬುದು ಮಾವಯ್ಯನವರ ಅಭಿಪ್ರಾಯ. ಮಲಗಿಕೊಂಡು ಓದುವುದು

ಅವರಿಗೆ ಸುತರಾಂ ಇಷ್ಟವಿಲ್ಲ. ಅವರಂತೂ ಯಾವಾಗಲೂ ನಿಂತು ಅಥವಾ ಕೂತುಕೊಂಡೇ ಓದುತ್ತಾರೆ. ಗೆಳತಿಯರೊಂದಿಗೆ ಸಾಮೂಹಿಕವಾಗಿ ಓದುವುದೆಂದರೆ ಓದಿಗಿಂತ ಹರಟೆಯೇ ಜಾಸ್ತಿಯಾಗುವುದೆಂದು ಅವರು ಅನ್ನುವರು. ಪರೀಕ್ಷೆಗಾಗಿಯೇ ಓದುವುದನ್ನು ಮಾವಯ್ಯ ಯಾವಾಗಲೂ ಟೀಕಿಸುತ್ತಾರೆ. 'ಓದಿದ್ದನ್ನು ತಿಳಿದುಕೊಂಡು ಮನನ ಮಾಡಿಕೊಳ್ಳಬೇಕೇ ಹೊರತು ಬರಿದೇ ಪರೀಕ್ಷೆಗಾಗಿ ಓದಬಾರದು. ಇಲ್ಲಿ ತುಂಬಿಸಿ, ಪೇಪರಿನಲ್ಲಿ ಹೊರಹಾಕಿ ಬಂದರೆ ನಿಮ್ಮ ತಲೆ ಖಾಲಿಯೇ ಉಳಿಯುವುದು' ಎನ್ನುತ್ತಾರೆ. ಮುಂದೆ ಕಾಲೇಜಿನಲ್ಲಿ ಐಚ್ಛಿಕವಾಗಿ ಯಾವ ವಿಷಯ ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಬಂದಾಗ ನನ್ನ ಅಭಿರುಚಿ ಮನಗಂಡು 'ಸಾಹಿತ್ಯ ಮತ್ತು ಸಂಸ್ಕೃತ ತೆಗೆದುಕೋ. ಕಲಾ ವಿಭಾಗವೇ ನಿನಗೆ ರುಚಿಸುವುದು' ಎಂದು ಮಾವಯ್ಯ ಹೇಳಿದ್ದರು. ನಾನು ಮತ್ತು ನನ್ನ ಅಣ್ಣ ಕೆಲವೊಮ್ಮೆ ನಾನು ವಿಜ್ಞಾನ ವಿಭಾಗಕ್ಕೆ ಸೇರಿದರೆ ಒಳ್ಳೆಯದಲ್ಲವೇ ಎಂದು ಚರ್ಚಿಸುತ್ತಿದ್ದೆವು. ಆದರೆ ಮಾವಯ್ಯನವರ ಅನುಭವದ ಮಾತುಗಳನ್ನು ಕೇಳಿ ನಾನು ಕಲಾವಿಭಾಗವನ್ನೇ ಸೇರಿಕೊಂಡದ್ದು ತುಂಬಾ ಯೋಗ್ಯವಾಯಿತು ಎಂದು ಇಂದಿಗೂ ನನಗೆ ಅನಿಸಿದೆ.

ಉಡುಪಿಯಲ್ಲಿ ಇದ್ದಾಗಿನ ಎಂಟು ವರ್ಷಗಳಂತೂ ನನ್ನ ಜೀವನದಲ್ಲಿಯ ಅತ್ಯುತ್ತಮ ಕಾಲ ಎನ್ನಬೇಕು. ಚಿಕ್ಕಂದಿನಿಂದಲೂ ಮಾವಯ್ಯ ಬಹಳ ಚೆನ್ನಾಗಿ ಪಾಠ ಮಾಡುತ್ತಾರೆ ಎಂದು ಕೇಳಿದ್ದೆ. ಆದರ ಪ್ರತ್ಯಕ್ಷ ಅನುಭವ ನನಗೆ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪಿ.ಯು.ಸಿ. ಕಲಿಯುವಾಗ ಬಂದಿತು. ಅವರು ಅಂದು ಕಲಿಸಿದ ಕೆಲವು ಕವಿತೆಗಳು ಇಂದಿಗೂ ನನ್ನ ಸ್ಮರಣೆಯಲ್ಲಿ ಉಳಿದಿವೆ.

ಉಡುಪಿಯಲ್ಲಿ ನಮ್ಮ ಮನೆಗೆ ಸಾಹಿತ್ಯ ಮತ್ತು ಇತರ ಕ್ಷೇತ್ರಗಳಿಂದ ಅನೇಕ ಜನರು ಬರುತ್ತಿದ್ದರು. ಡಾ. ಶಿವರಾಮ ಕಾರಂತ, ಶ್ರೀ ಕು.ಶಿ. ಹರಿದಾಸ ಭಟ್, ಪ್ರೊ. ಕೆ. ವೆಂಕಟ ರಾಮಪ್ಪ, ದಿವಂಗತ ಪ್ರೊ. ವಿ.ಸೀ., ಶ್ರೀ ಪರಮೇಶ್ವರಭಟ್ಟ, ಡಾ. ಎಚ್.ಕೆ. ರಂಗನಾಥ ಮುಂತಾದವರು ಬಂದಾಗ ನಡೆಯುತ್ತಿದ್ದ ಸಾಹಿತ್ಯ ಸಮಾಲೋಚನೆಗಳೆಂದರೆ ಸಾಹಿತ್ಯಾಸಕ್ತರಿಗೆ ರಸದೌತಣಗಳೇ ಎನ್ನಬಹುದು. ಆಗ ನಡೆಯುತ್ತಿದ್ದ ಸಂಭಾಷಣೆಗಳನ್ನು ನಾನು ಬಹು ಆಸಕ್ತಿಯಿಂದ ಕೇಳುತ್ತಿದ್ದೆ. ಅಂತೆಯೇ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಅನೇಕ ಸಂದರ್ಭಗಳಲ್ಲಿ ನಡೆಯುತ್ತಿದ್ದ ಭಾಷಣಗಳನ್ನು ಕೇಳಲು ಹೋಗುತ್ತಿದ್ದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯ ಮಹನೀಯರ ನಿಕಟ ಪರಿಚಯವಾಗಲು ಈ ವಾತಾವರಣ ಕಾರಣ ವಾಯಿತು. ಪೂರ್ಣಪ್ರಜ್ಞ ಕಾಲೇಜಿನಲ್ಲಿಯ ಶ್ರೀ ಎಂ. ರಾಜಗೋಪಾಲಾಚಾರ್ಯರು ನಮ್ಮ ಮನೆಗೆ ಬಂದು ಮಾವಯ್ಯನವರೊಂದಿಗೆ ಡಾ. ಗೋವಿಂದ ಪೈಗಳ ಕಾವ್ಯಗಳ ವಾಚನ ಮತ್ತು ಅದರ ಬಗ್ಗೆ ಚರ್ಚೆ ನಡೆಸುತ್ತಿದ್ದುದು ನನ್ನ ಸ್ಮರಣೆಯಲ್ಲಿದೆ. ಅಂತೆಯೇ ಧಾರವಾಡದ ಮನೋಹರ ಗ್ರಂಥ ಮಾಲೆಯ ಶ್ರೀ ಜಿ. ಬಿ. ಜೋಶಿಯವರು ನಮ್ಮಲ್ಲಿ

ಅನೇಕ ಸಲ ಬರುತ್ತಿದ್ದರು. 'ಮಂಜು ಮುಸುಕಿದ ದಾರಿ' ಕಾದಂಬರಿ ಮಾವಯ್ಯ ಬರೆಯುತ್ತಿರುವಾಗ ಆ ಬಗ್ಗೆ ಅನೇಕ ಸಲ ಚರ್ಚೆ ನಡೆಯುತ್ತಿತ್ತು. ಮಾವಯ್ಯನವರು ತಮ್ಮ ಸ್ನೇಹಿತರಾದ ಶ್ರೀ ಪಿ.ವಿ. ಜೋಶಿ ಅವರೊಂದಿಗೆ ಅನೇಕ ವಿಷಯಗಳ ಬಗ್ಗೆ ನಡೆಸಿದ ಚರ್ಚೆಗಳನ್ನು ಕೇಳಿದ್ದೇನೆ. ಅವುಗಳಿಂದ ಮಾವಯ್ಯನವರ ವೈಚಾರಿಕ ಹಿನ್ನೆಲೆ, ಅವರಿಗೆ ಮಹತ್ವಪೂರ್ಣ ಅನಿಸುತ್ತಿದ್ದ ಮೌಲ್ಯಗಳ ಕಲ್ಪನೆ ನನಗೆ ಮೂಡಿತು. ಕೆಲವೊಂದು ಸಲ ಮಾವಯ್ಯನವರು ನಮಗೆ ಜಿ.ಕೆ. ಚೆಸ್ಟರ್‌ಟನ್ ಮತ್ತು ಫ್ರಾನ್ಸಿಸ್ ಬೇಕನ್ ನಿಬಂಧಗಳನ್ನು, ಅಂತೆಯೇ ಟಿ.ಎಸ್. ಎಲಿಯಟ್ ನಾಟಕಗಳನ್ನು ಓದಿ ಅವುಗಳ ರಸಸ್ವಾದವನ್ನು ಹೇಗೆ ಮಾಡಬೇಕು ಎಂಬುದನ್ನು ತೋರಿಸಿಕೊಡುತ್ತಿದ್ದರು.

ಉಡುಪಿಯಲ್ಲಿ ಇದ್ದಾಗಿನ ಕಾಲದಲ್ಲಿಯ ಇನ್ನೊಂದು ವಿಶೇಷ ಅನುಭವವೆಂದರೆ ನಾವು ಕೈಗೊಂಡ ಪ್ರವಾಸಗಳು. ಮಾವಯ್ಯನವರಿಗೆ ಪ್ರವಾಸವೆಂದರೆ ತುಂಬಾ ಪ್ರೀತಿ. ಉಡುಪಿಯ ಅಕ್ಕಪಕ್ಕದ ಶಾಲೆ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಅವರನ್ನು ಮೇಲಿಂದ ಮೇಲೆ ಭಾಷಣಗಳಿಗೆ ಕರೆಯುತ್ತಿದ್ದರು. ನಾನೂ ಅನೇಕ ಸಲ ಅವರೊಂದಿಗೆ ಹೋಗುತ್ತಿದ್ದೆ. ಅಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲೆಂದು ಪ್ರವಾಸ ಕೈಗೊಳ್ಳುತ್ತಿದ್ದೆವು. ಬೆಂಗಳೂರು ಮೈಸೂರುಗಳಿಗೆ ತಾನೇ ನಡೆಸುತ್ತಿದ್ದ ಕಾರಿನಲ್ಲಿ ಮಾವಯ್ಯ ಹೊರಟರೆಂದರೆ ಸುಖಪ್ರಯಾಣವಾಗುವುದೆಂದು ನಮಗೆಲ್ಲರಿಗೂ ಖಂಡಿತ ಗೊತ್ತಿರುತ್ತಿತ್ತು . ಸೂರ್ಯೋದಯಕ್ಕಿಂತ ಮುಂಚೆ ಹೊರಟು ನಿಗದಿಯಾದ ಊರಿಗೆ ಸೂರ್ಯಾಸ್ತಕ್ಕಿಂತ ಮುಂಚೆ ಮುಟ್ಟುವುದು ವಾಡಿಕೆ. ಮಧ್ಯದಲ್ಲಿ ಯಾವ ಯಾವ ಊರುಗಳಲ್ಲಿ ಎಷ್ಟು ಹೊತ್ತು ತಂಗುವುದು, ಎಲ್ಲಿ ಯಾವ ಉಪಾಹಾರಗೃಹಗಳಲ್ಲಿ ಊಟ ತಿಂಡಿ ಮಾಡುವುದು — ಎಂದೆಲ್ಲ ಮೊದಲೇ ನಿಶ್ಚಯವಾಗಿರುತ್ತಿತ್ತು . ಅದರಂತೆಯೇ ನಡೆದುಕೊಂಡು ನಿರಾಯಾಸವಾಗಿ ಪ್ರವಾಸವನ್ನು ಮುಗಿಸುವುದು ಮಾವಯ್ಯನವರ ಕ್ರಮ. ಉತ್ತರ ಭಾರತ, ಮಣಿಪುರ, ಬರ್ಮಾದವರೆಗೆ ನಾನು ಅವರೊಂದಿಗೆ ಪ್ರವಾಸ ಮಾಡಿರುವೆನು. ಪ್ರವಾಸದ ಎಲ್ಲಾ ತಯಾರಿಯನ್ನು ವಿವರವಾಗಿ, ವ್ಯವಸ್ಥಿತವಾಗಿ ಮಾಡಿಕೊಂಡು, ಹೊರಡುವ ವೇಳೆ, ತಿರುಗಿ ಬರುವ ದಿನ ವೇಳೆಯನ್ನು ಮೊದಲು ಗೊಂಡು ಎಲ್ಲವನ್ನೂ ಚಾಚೂ ತಪ್ಪದೆ ನಿರ್ವಹಿಸುವುದು ಅವರ ವೈಶಿಷ್ಟ್ಯ. ಪ್ರವಾಸದ ಆಕರ್ಷಣೆ, ಸುಖಕರವಾದ ಪ್ರವಾಸವನ್ನು ಹೇಗೆ ಮಾಡಬೇಕು ಎಂಬುದರ ಸ್ಪಷ್ಟ ಕಲ್ಪನೆಯನ್ನು ಮಾವಯ್ಯ ನನ್ನ ಮನಸ್ಸಿನಲ್ಲಿ ಮೂಡಿಸಿದ್ದಾರೆ.

ಮಾವಯ್ಯ ಒಬ್ಬ ಜನಪ್ರಿಯ ಕಾದಂಬರಿಕಾರರು, ಉತ್ತಮ ಪ್ರಾಧ್ಯಾಪಕರು, ಆಡಳಿತಗಾರರು, ಒಳ್ಳೆಯ ವಾಗ್ಮಿಗಳು ಎಂಬುದು ವಿಶದವಾಗಿ ತಿಳಿಯುತ್ತಹೋದಂತೆ ಅವರ ಬಗ್ಗೆ ಒಂದು ವಿಶೇಷ ಅಭಿಮಾನ ಜಾಗೃತವಾಯಿತು. ಅವರು ಕಾದಂಬರಿ ಬರೆಯುವುದರಲ್ಲಿ ತಲ್ಲೀನರಾದ ಕೆಲವು ಸಂದರ್ಭಗಳು ನನಗೆ ನೆನಪಿವೆ. ಸಾಮಾನ್ಯವಾಗಿ

ಮಾವಯ್ಯ ತಮ್ಮ ಅಭ್ಯಾಸಿಕೆಯಲ್ಲಿ, ಓದು ಬರೆಯುವುದರಲ್ಲಿ ನಿರತರಾಗಿದ್ದರೆ ಅವರಿಗೆ ನಾವು ತೊಂದರೆ ಕೊಡುತ್ತಿರಲಿಲ್ಲ. ಅದರಲ್ಲಿಯೂ ಅವರು ಕಾದಂಬರಿ ಬರೆಯುತ್ತಿದ್ದಾರೆ ಎಂಬುದು ವೈನಿಯ ಕಡೆಯಿಂದ ತಿಳಿದಾಗ ನಾನು ವಿಶೇಷ ಆಸಕ್ತಿಯಿಂದ ಅವರ ಕೆಲಸ ಮುಗಿಯುವ ದಾರಿ ಕಾಯುತ್ತಿದ್ದೆ. ಅವರಿಗಾಗಿ ಚಹಾ ತೆಗೆದುಕೊಂಡು ಹೋದಾಗ ಬರೆಯುವುದರಲ್ಲಿ ತಲ್ಲೀನರಾದ ಅವರು ಬರಿಯ ಕೈಯಿಂದಲೇ 'ಅಲ್ಲೇ ಇಡು' ಎಂದು ಸೂಚಿಸುತ್ತಿದ್ದರು. ಅಲ್ಲಿಯೇ ಇಟ್ಟು ನಾನು ಹೊರಬರುತ್ತಿದ್ದೆ. ಮತ್ತೆ ಸ್ವಲ್ಪ ಹೊತ್ತು ಬಿಟ್ಟು ಖಾಲಿಕಪ್ಪನ್ನು ಎತ್ತಿಕೊಂಡು ಹೋಗುತ್ತಿದ್ದೆ. ಕಾದಂಬರಿ ಬರೆಯುವಾಗ ಮತ್ತು ಬರೆದು ಮುಗಿದ ನಂತರ ಅವರು ಅದರ ಬಗ್ಗೆ ವೈನಿಯ ಜತೆ ಚರ್ಚಿಸುತ್ತಿದ್ದರು.

ಮಾವಯ್ಯನವರು ತಮ್ಮ ಸ್ಥಾನಮಾನಗಳನ್ನು ತಮ್ಮ ಸ್ವಾರ್ಥಕ್ಕಾಗಿ ಎಂದೂ ಉಪಯೋಗಿಸಿಕೊಂಡವರಲ್ಲ. ನಮ್ಮ ಶಾಲೆ ಕಾಲೇಜುಗಳ ಪ್ರವೇಶ, ಪರೀಕ್ಷೆಗಳೆಲ್ಲ ನೇರ ಮಾರ್ಗಗಳಿಂದಲೇ ನಡೆದುವು. ಈ ಸಂದರ್ಭದಲ್ಲಿಯ ಒಂದು ವಿಶೇಷ ಘಟನೆಯೆಂದರೆ ಉಡುಪಿ ಬಿಟ್ಟ ನಂತರ 1967-68 ಒಂದು ವರ್ಷ ಮಾವಯ್ಯನವರು ಶಿವಮೊಗ್ಗೆಯ ಸರಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆಗ ನಾನು ಅಲ್ಲಿಯ ಒಂದು ಕಾಲೇಜಿನಲ್ಲಿ ಮೊದಲನೆಯ ವರ್ಷದ ಬಿ.ಎ. ಓದುತ್ತಿದ್ದೆ. ಮುಂದೆ 68ರಲ್ಲಿ ಮಾವಯ್ಯನವರು ಬೆಂಗಳೂರಿಗೆ ಹೋಗಿ ನೆಲೆಸುವುದನ್ನು ನಿಶ್ಚಯಿಸಿದರು. ಆಗಷ್ಟೇ ಬೆಂಗಳೂರು ವಿಶ್ವವಿದ್ಯಾನಿಲಯದ ಸ್ಥಾಪನೆಯಾಗಿತ್ತು. ಶಿವಮೊಗ್ಗೆಯಲ್ಲಿಯ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿತ್ತು. ವಿಶ್ವವಿದ್ಯಾನಿಲಯದ ಬದಲಾವಣೆಯಾಗಲು ಅನುಮತಿ ದೊರಕದೆ ಇದ್ದುದರಿಂದ ನಾನು ಮೊದಲನೆಯ ವರ್ಷದ ಬಿ.ಎ. ಪುನರಾವರ್ತನೆ ಮಾಡಬೇಕೆಂದು ನಿಶ್ಚಯವಾಯಿತು. ಮಾವಯ್ಯನವರು ತಮ್ಮ ಸ್ಥಾನಮಾನಗಳನ್ನು ಉಪಯೋಗಿಸಿ ಅನುಮತಿ ದೊರಕಿಸಿಕೊಳ್ಳುವ ಪ್ರಯತ್ನವನ್ನು ಮಾಡಲಿಲ್ಲ. ಒಂದು ವರ್ಷ ಮತ್ತೊಮ್ಮೆ ಓದಬೇಕಾದರೇನು ? ಓದು, ಎಂದು ನನಗೆ ಹೇಳಿದರು.

ನನ್ನದು ಪ್ರೇಮ ವಿವಾಹ. ನನ್ನ ಪ್ರೇಮದ ಗುಟ್ಟು ಮಾವಯ್ಯನವರಿಗೆ ತಿಳಿಯುವ ಮೊದಲು ಅವರನ್ನು ಹೇಗೆ ಎದುರಿಸಬೇಕು, ಅವರಿಗೆ ತಿಳಿದಾಗ ಅವರೇನು ಅಭಿಪ್ರಾಯ ಪಡಬಹುದು ಎಂಬುದರ ಬಗ್ಗೆ ಭಯ ಅನಿಸುತ್ತಿತ್ತು. ಆದರೆ ಒಮ್ಮೆ ವೈನಿಯ ಮುಖಾಂತರ ವಿಷಯ ಅವರಿಗೆ ತಿಳಿಯಿತು. ಈ ಮೊದಲು ತಿಳಿಸಲಿಲ್ಲವೇಕೆ ? ಎಂದು ಸ್ವಲ್ಪ ಕೋಪಗೊಂಡರು. 'ನೀವಿಬ್ಬರೂ ನಿಜವಾಗಿ ಮದುವೆಯ ಯೋಚನೆ ಮಾಡುತ್ತಿರುವಿರಾ?' ಎಂದು ಕೇಳಿದರು. ಇದ್ದ ಧೈರ್ಯವನ್ನೆಲ್ಲ ಒಟ್ಟು ಸೇರಿಸಿ 'ಹೌದು' ಎಂದು ನಾನು ಉತ್ತರಿಸಿದ ನೆನಪು. ಹಾಗಿದ್ದರೆ ಕೂಡಲೇ ಅವರಿಗೆ ನನಗೊಂದು ಕಾಗದ ಬರೆಯಲು ಹೇಳು ಎಂದರು. ಅವರ ಕಾಗದ ಬಂದು ಮಾವಯ್ಯನವರು ಒಪ್ಪಿಗೆ ಕೊಡುವ ತನಕ ನನ್ನ ಆತಂಕ ಹೇಳತೀರದು. ಒಮ್ಮೆ ನಮ್ಮ ಮದುವೆಗೆ ಒಪ್ಪಿಗೆ ಇತ್ತ ನಂತರ

ಮತ್ತೆ ಆ ಬಗ್ಗೆ ಎಂದೂ ಏನೂ ಮಾತನಾಡಲಿಲ್ಲ. ಅಂದಿನಿಂದ ಮಾವಯ್ಯನವರ ಸ್ವಭಾವದ ಇನ್ನೊಂದು ಮುಖದ ಪರಿಚಯ, ಅವರ ಕಠೋರ ಬಹಿರಂಗದ ಒಳಗಿನ ಹೂವಿನಂತಹ ಕೋಮಲ ಮನಸ್ಸಿನ ಅರಿವು ನನಗಾಯಿತು.

ನನ್ನ ಮದುವೆಯ ಸಮಯದಲ್ಲಿ ಎಲ್ಲಾ ಕೆಲಸಗಳನ್ನೂ ಗಡಿಬಿಡಿಯಿಂದ ಸುವ್ಯವಸ್ಥಿತವಾಗಿ ಮಾಡುತ್ತಿದ್ದ ಮಾವಯ್ಯನವರ ಮುಖ ನೋಡಿದಾಗ ಅದರ ಹಿಂದಿನ ಭಾವನೆಗಳನ್ನು ದುಃಖವನ್ನು ಗುರುತು ಹಚ್ಚಬಹುದಿತ್ತು. ನನ್ನನ್ನು ಪತಿಯ ಮನೆಗೆ ಕಳಿಸುವಾಗ 'ಅರ್ಥೋ ಹಿ ಕನ್ಯಾ ಪರಕೀಯ ಏವ' ಎಂಬ ಕಾಳಿದಾಸನ ಶಬ್ದಗಳಿಂದ ತಾವು ಸಮಾಧಾನಪಡುವ, ಅಂತೆಯೇ ವೈನಿಯವರನ್ನು ಸಮಾಧಾನಪಡಿಸುವ ಮಾವಯ್ಯ ನವರನ್ನು ನಾನು ಮರೆಯುವುದು ಸಾಧ್ಯವಿಲ್ಲ.

ಎರಡನೆಯ ವರ್ಷ ಬಿ.ಎ. ಕಲಿಯುತ್ತಿರುವಾಗಲೇ ನನ್ನ ಮದುವೆಯಾಯಿತು. ನನ್ನ ವಿದ್ಯಾಭ್ಯಾಸವನ್ನು ನಾನು ಮದುವೆಯಾದ ನಂತರ ಪೂರ್ಣ ಮಾಡಬೇಕೆಂದು ಮಾವಯ್ಯನವರ ಇಚ್ಛೆ ಇದ್ದಿತು. ಅದರಂತೆ ನಾನು ಪುಣೆಯಲ್ಲಿಯ ಫರ್ಗ್ಯುಸನ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಆನರ್ಸ್ ಮುಗಿಸಿದಾಗ ಅವರಿಗೆ ತುಂಬಾ ಸಂತೋಷವಾಗಿತ್ತು. ನಾನು ನನ್ನ ಅತ್ತೆ ಮಾವನವರ ಜತೆಯಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಇರುವುದು ಒಳ್ಳೆಯದು ; ಅವರ ಶಿಸ್ತುಬದ್ಧವಾದ ಜೀವನದಿಂದಲೇ ನನ್ನ ಜೀವನಕ್ಕೂ ಒಳ್ಳೆಯ ರೂಪರೇಖೆ ಬರುವುದು ಎಂಬುದು ಅವರ ಖಚಿತವಾದ ಅಭಿಪ್ರಾಯವಾಗಿತ್ತು. ಮದುವೆಯಾದ ನಂತರ ವರ್ಷಕ್ಕೆ ಒಂದು ಸಲವಾದರೂ ನಾನು ತವರಿಗೆ ಬಂದು ಕನಿಷ್ಠ ಪಕ್ಷ ಒಂದು ಹದಿನೈದು ದಿನಗಳಾದರೂ ಇರಲೇಬೇಕು ಎಂದು ಅವರು ಆಗ್ರಹಪಡಿಸುತ್ತಾರೆ. ಹಾಗೆ ತವರಿನಲ್ಲಿ ಇದ್ದ ದಿನಗಳನ್ನು ನಾನು ತುಂಬಾ ಆನಂದ ಮತ್ತು ಸಮಾಧಾನದಿಂದ ಕಳೆದಿದ್ದೇನೆ. ಆಗ ಮಾವಯ್ಯನವರ ನಡವಳಿಕೆಯಲ್ಲಿ ಮೃದುತ್ವವನ್ನು ನಾನು ಅನೇಕ ಸಲ ಅನುಭವಿಸಿದ್ದೇನೆ.

ಎಲ್ಲಾ ಅಜ್ಜಂದಿರಂತೆ ಮಾವಯ್ಯನವರಿಗೆ ಮೊಮ್ಮಕ್ಕಳ ಮೇಲೆ ಅಪಾರ ಪ್ರೀತಿ. ಚಿಕ್ಕ ಮಕ್ಕಳು ಅಳುವುದನ್ನು ಅವರು ಸಹಿಸಲಾರರು. ಮೊಮ್ಮಕ್ಕಳನ್ನು ಮುದ್ದು ಮಾಡಿ ಅವರೊಂದಿಗೆ ಆಟಪಾಟ ಆಡುವುದರಲ್ಲಿ ಮಾವಯ್ಯ ಸಂತೋಷಪಡುತ್ತಾರೆ. ಚಿಕ್ಕ ಮಕ್ಕಳೊಂದಿಗೆ ನಕ್ಕು ನಲಿಯುವ ಮಾವಯ್ಯನನ್ನು ನೋಡಿದಾಗ ನನಗಂತೂ ತುಂಬಾ ಆಶ್ಚರ್ಯವಾಗುತ್ತದೆ.

1978ರಲ್ಲಿ ಡಾ. ಶಿವರಾಮ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಾಗ ನಾನು ಅವರ ಬಗ್ಗೆ ಮರಾಠಿಯಲ್ಲಿ ಬರೆದ ಲೇಖನವನ್ನು ಮಾವಯ್ಯ ತುಂಬಾ ಇಷ್ಟಪಟ್ಟಿದ್ದರು. ಮುಂದೆ 'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಅನುವಾದಿಸಲು ಅವರೇ

ಪ್ರೋತ್ಸಾಹಿಸಿದ್ದರು. ಲೇಖನ ಅನುವಾದಕ್ಕೆ ಸಂಬಂಧಿಸಿದಂತೆ ನನಗೆ ಯಾವ ಪುಸ್ತಕ ಅಥವಾ ವಿಷಯ ಸಂಗ್ರಹ ಬೇಕಿದ್ದರೂ ಅದನ್ನು ಅವರು ತತ್ಪರತೆಯಿಂದ ದೊರಕಿಸಿ ಕೊಡುತ್ತಾರೆ. ಒಂದಕ್ಕಿಂತ ಹೆಚ್ಚು ಭಾಷೆ ಬಲ್ಲವರು ಆ ಭಾಷೆಗಳ ನಡುವಿನ ಉತ್ತಮ ಸೇತುವೆಯಾಗಬೇಕೆಂದು ಅವರು ಆಗಾಗ ಹೇಳುತ್ತಿರುತ್ತಾರೆ. 'ಇನ್ನೂ ನಿನ್ನ ವ್ಯಾಸಂಗವನ್ನು ಹೆಚ್ಚಿಸಿಕೊ ; ಮಾಡಬೇಕಾದ ಕೆಲಸವನ್ನು ಸಾಧ್ಯವಿದ್ದಷ್ಟು ವ್ಯವಸ್ಥಿತವಾಗಿ ಮಾಡು' ಎಂದು ಹೇಳುತ್ತಿರುತ್ತಾರೆ. ಕನ್ನಡದ ಉತ್ತಮ ಕೃತಿಗಳ ಅನುವಾದದ ಕಡೆಗೆ ಗಮನ ಕೊಡಬೇಕೇ ಹೊರತು ಕೇವಲ ಜನಪ್ರಿಯ ಬರವಣಿಗೆಯ ಕಡೆಗೆ ಮನಸ್ಸು ಹರಿಯಬಿಡಬಾರದು ಎಂದು ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿರುತ್ತಾರೆ.

ಹಿರಿಯರ ವಿಷಯದಲ್ಲಿ ಅವರಿಗೆ ತುಂಬಾ ಗೌರವವಿದೆ. 'ವಿದ್ಯಾ ವಿನಯೇನ ಶೋಭತೆ' ಎಂಬ ಮಾತನ್ನು ಅವರು ಆಚರಣೆಯಲ್ಲಿ ತಂದಿರುವರು ಎಂದರೆ ಅತಿಶಯೋಕ್ತಿಯಾಗಲಾರದು. 1984ರಲ್ಲಿ ಉಡುಪಿಯಲ್ಲಿ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಸತ್ಕಾರಕ್ಕೆ ಉತ್ತರ ಕೊಡುವಾಗ ಮಾಡಿದ ಭಾಷಣದಲ್ಲಿ ಮಾವಯ್ಯನವರು ತಮ್ಮ ಯಶಸ್ಸಿನ ಮೊದಲ ಶ್ರೇಯ ತಮ್ಮ ತಂದೆತಾಯಿಯವರಿಗೆ ಸಲ್ಲಬೇಕು ಎಂದು ಗದ್ಗದ ಕಂಠದಿಂದ ಸ್ಮರಿಸಿದರು. ಅಂತೆಯೇ ತಮಗೆ ಪಾಠ ಹೇಳಿದ ಗುರುಗಳಿಗೆ ಮತ್ತು ತಾವು ಓದಿದ ಪಠ್ಯಪುಸ್ತಕಗಳಿಗೆ ಶ್ರೇಯಸ್ಸು ಹೋಗಬೇಕು ಎಂದು ಹೇಳಿ 'ಅಹಂ ಕರೋಮಿ ಇತಿ ವೃಥಾಭಿಮಾನಃ' ಎಂದು ಸಾರಿದರು.

ಮಾವಯ್ಯನವರು ಜೀವನಶ್ರದ್ಧೆಗೆ ಎಲ್ಲಕ್ಕಿಂತ ಹೆಚ್ಚಿನ ಮಹತ್ವ ಕೊಡುತ್ತಾರೆ. ಅದಿಲ್ಲದೇ ಮನುಷ್ಯ ಏನನ್ನೂ ಸಾಧಿಸಲಾರ ಎಂಬುದು ಅವರ ದೃಢನಂಬಿಕೆ. ಅಂತೆಯೇ ಅವರು ಪ್ರಾಮಾಣಿಕತೆಗೆ ತುಂಬಾ ಬೆಲೆ ಕೊಡುತ್ತಾರೆ. ಮನುಷ್ಯ ತನ್ನ ಅಂತಃಸತ್ವಕ್ಕೆ ಪ್ರಾಮಾಣಿಕನಾಗಿರಬೇಕು ; ಅಂದರೆ ಸುಖ ಸಮಾಧಾನ ತಾನಾಗಿಯೇ ಬರುವುದು ಎನ್ನುತ್ತಾರೆ. ನಿತ್ಯಜೀವನದಲ್ಲಿ ನಡೆದುಕೊಳ್ಳುವ ರೀತಿನೀತಿಯ ಬಗ್ಗೆ ಮಾವಯ್ಯ ಯಾವಾಗಲೂ ಹೇಳುವುದು (ಅಂತೆಯೇ ಆಚರಿಸುವುದು ಕೂಡಾ) ಏನೆಂದರೆ 'ಅತಿ ಸರ್ವತ್ರ ವರ್ಜಯೇತ್'. ಅತಿಯಾಗಿ ಯಾವುದನ್ನೂ ಮಾಡದೆ ಮಿತವರಿತು ನಡೆದರೆ ಎಲ್ಲರಿಗೂ ಹಿತವೆಂಬುದನ್ನು ಅನೇಕ ಉದಾಹರಣೆಗಳಿಂದ ಅವರು ತೋರಿಸಿಕೊಟ್ಟಿದ್ದಾರೆ. ಸಮಯನಿಷ್ಠೆ ಮಾವಯ್ಯನವರ ಇನ್ನೊಂದು ಗುಣ. ಸಮಯಕ್ಕೆ ಸರಿಯಾಗಿ ಎಲ್ಲವೂ ನಡೆಯಬೇಕು ಎಂಬುದಕ್ಕಾಗಿ ಅವರು ಪರಿಶ್ರಮಿಸುವರು. ಕೊಟ್ಟ ಸಮಯವನ್ನು ಕಟ್ಟುನಿಟ್ಟಿನಿಂದ ಅವರು ಪಾಲಿಸುವರು. ನಿಯಮಿತ ಮತ್ತು ಕ್ರಮಬದ್ಧವಾದ ಜೀವನವೇ ಉತ್ತಮ ಆರೋಗ್ಯದ ಗುಟ್ಟು ಎಂದು ಅವರು ನಂಬಿದ್ದಾರೆ.

ಮಾವಯ್ಯನವರು ಎಲ್ಲರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ ಎಂಬುದು ನಿಜ. ಆದರೆ ಅದಕ್ಕೆ ಕಾರಣವೇನೆಂದರೆ ತಮಗೆ ವಿಶೇಷ ಆಸಕ್ತಿಯಿಲ್ಲದ ವಿಷಯಗಳಲ್ಲಿ

ಸುಮ್ಮನೆ ಹರಟೆಗೋಸ್ಕರ ಹರಟೆ ಎಂದು ಹರಟುವುದು ಅವರಿಗೆ ಇಷ್ಟವಿಲ್ಲ. ಆದರೆ ಸ್ವಭಾವ ಮತ್ತು ಪ್ರವೃತ್ತಿಯಿಂದ ಅವರೊಂದಿಗೆ ಸರಿಹೊಂದಿದ ಸ್ನೇಹಿತರು ಅವರಿಗೆ ಅನೇಕರಿದ್ದಾರೆ. ಅವರೊಂದಿಗೆ ಲೋಕಾಭಿರಾಮವಾಗಿ ಹರಟುವ ಮಾವಯ್ಯನವರನ್ನು ನಾನು ಕಂಡಿದ್ದೇನೆ. ಅವರ ಕೆಲವು ಸ್ನೇಹಿತರೆಂದರೆ ನಮಗೆ ಇಂದಿಗೂ ಬಂಧುಬಳಗದ ವರಷ್ಟೇ ಹತ್ತಿರದವರಾಗಿದ್ದಾರೆ.

ಅವರು ಬೆಳೆದುಬಂದ ಪರಿಸ್ಥಿತಿಯ ಮತ್ತು ಎದುರಿಸಬೇಕಾದ ಕಷ್ಟಗಳ ಪರಿಣಾಮವಾಗಿ ಮಾವಯ್ಯನವರಿಗೆ ಯಾವುದನ್ನೂ ಹಾಳುಮಾಡಬಾರದು ಎಂಬ ಅರಿವು ಇದೆ. ಮಿತವ್ಯಯ ಅವರಿಗೆ ಪ್ರಿಯ. ದುಂದುವೆಚ್ಚವನ್ನು ಅವರು ಸಹಿಸುವುದಿಲ್ಲ, ಮಾಡಿದ ಎಲ್ಲಾ ಖರ್ಚನ್ನು ವಿವರವಾಗಿ ವ್ಯವಸ್ಥಿತವಾಗಿ ಬರೆದಿಡುವುದು ಅವರ ಸ್ವಭಾವ. ‘ಎಷ್ಟಿದ್ದರೆ ಮನುಷ್ಯನಿಗೆ ಸಾಕಾದೀತು ; ಇಷ್ಟೇ ಸಾಕು ಎಂಬ ತೃಪ್ತಿಯೇ ಸಮಾಧಾನವನ್ನು ತಂದುಕೊಡುವುದು’ ಎನ್ನುತ್ತಾರೆ. ‘ಬೇಕು ಎಂದವ ಬಡವ ; ಸಾಕು ಎಂದವ ಶ್ರೀಮಂತ’ ಎಂಬುದು ಅವರ ಅಚ್ಚುಮೆಚ್ಚಿನ ತತ್ವ.

ಜೀವನದಲ್ಲಿ ಮಾವಯ್ಯನವರು ಅನೇಕ ಕಷ್ಟಗಳನ್ನು ಅನುಭವಿಸಿದ್ದಾರೆ. ಆದರೆ ಅದರಿಂದ ಅವರ ಜೀವನನಿಷ್ಠೆ ಅಲುಗಾಡಿಲ್ಲ, ಅವರು ಮನಸ್ಸನ್ನು ಕಹಿ ಮಾಡಿಕೊಂಡಿಲ್ಲ, ಮನುಷ್ಯನಕ್ಕಿಂತಲೂ ದೊಡ್ಡ ಶಕ್ತಿಯೊಂದಿದೆ. ಆ ಶಕ್ತಿಯ ಮೇಲೆ ಅವರು ಅಚಲ ವಿಶ್ವಾಸವನ್ನಿಟ್ಟಿದ್ದಾರೆ. "Do your duty that is best, leave unto the Lord the rest" ಎಂಬುದು ಅವರ ಶ್ರದ್ಧೆ. ಆದಹಾಗೆ ಆಯಿತು, ಹೋದರೆ ಹೋಯಿತು, ಹೇಗಾದರೂ ಆದೀತು ಎಂಬ ಪ್ರವೃತ್ತಿಯನ್ನು ಮಾವಯ್ಯ ತೀವ್ರವಾಗಿ ಖಂಡಿಸುತ್ತಾರೆ.

ಅವರ ಪರಿಶೀಲನಾಶಕ್ತಿ ತೀರಾ ಸೂಕ್ಷ್ಮವಾದುದು. ಎಷ್ಟೇ ಸಣ್ಣಪುಟ್ಟ ವಿಷಯದಲ್ಲೂ, ಪ್ರತಿಯೊಂದು ಚಿಕ್ಕಪುಟ್ಟ ಕೆಲಸದಲ್ಲಿಯೂ ತುಂಬಾ ಆಸ್ಥೆ ವಹಿಸುತ್ತಾರೆ. ‘ತಾಳಿದವ ಬಾಳಿಯಾನು’ ಎಂಬ ಗಾದೆಯನ್ನು ಅವರು ಸಂಪೂರ್ಣವಾಗಿ ಒಪ್ಪುತ್ತಾರೆ. ಚಿಕ್ಕಮಕ್ಕಳೇ ತಾಯಿತಂದೆಯರಿಗೆ ತಾಳ್ಮೆಯನ್ನು ಕಲಿಸುತ್ತಾರೆ ; Children are our best teachers ಎಂದೆನ್ನುತ್ತಾರೆ. ಇಂದಿಗೂ ಮಾವಯ್ಯ ತಾವು ವಿದ್ಯಾರ್ಥಿಯೆಂದೇ ತಿಳಿದುಕೊಂಡಿದ್ದಾರೆ. ವಿದ್ಯಾರ್ಥಿಗೆ ಇರಬೇಕಾದ ಕುತೂಹಲ ಮತ್ತು ಜಿಜ್ಞಾಸೆಯಿಂದಲೇ ತಮ್ಮ ಸಾಹಿತ್ಯಾಭ್ಯಾಸವನ್ನು ನಡೆಸಿರುತ್ತಾರೆ.

ಅವರು ವಿದೇಶ ಪ್ರವಾಸ ಕೈಗೊಂಡನಂತರ ಅಲ್ಲಿಯ ಅನುಭವಗಳ ಬಗ್ಗೆ ಮಾತನಾಡುವಾಗ ‘ನಾವು ಅಲ್ಲಿಯ ಉಡಿಗೆತೊಡಿಗೆಗಳನ್ನು, ಊಟತಿಂಡಿಗಳನ್ನು ಅನುಕರಿಸು ತ್ತೇವೆಯೇ ಹೊರತು ಅವರ ಪ್ರಾಮಾಣಿಕತೆ, ದುಡಿಯುವ ಸಾಮರ್ಥ್ಯವನ್ನಲ್ಲ’

ಎಂದಿದ್ದರು. ಪಾಶ್ಚಿಮಾತ್ಯ ನಾಗರಿಕತೆಯ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಆಗ್ರಹಪಡಿಸುತ್ತಾರೆ. ಅವರ ಅಂಧಾನುಕರಣೆಯನ್ನು ವಿರೋಧಿಸುತ್ತಾರೆ.

ನನ್ನ ಅಣ್ಣ ಕೆನಡಾದಲ್ಲಿ ನೆಲೆಸಿದಾಗ 'ನೀವೂ ಏಕೆ ಅವನ ಹತ್ತಿರವೇ ಹೋಗಿ ಇರುವುದಿಲ್ಲ?' ಎಂದು ಅನೇಕರು ಪ್ರಶ್ನಿಸಿದಾಗ 'ನಮ್ಮ ಸಂಸ್ಕಾರ, ಸಂಸ್ಕೃತಿ, ಬೆಳೆದುಬಂದ ವಾತಾವರಣ ಎಲ್ಲವನ್ನೂ ಬಿಟ್ಟು ಅಲ್ಲಿ ಹೋಗಿ ನೆಲೆಸಲು ಬಂದೀತೆ ? ಅದು ಒಂದು ಬೆಳೆದ ಮರವನ್ನು ಬೇರು ಸಹಿತ ಕಿತ್ತು ಇನ್ನೊಂದೆಡೆ ಹಚ್ಚುವ ವ್ಯರ್ಥ ಪ್ರಯತ್ನದಂತಾದೀತು !' ಎನ್ನುತ್ತಾರೆ. ವಿದೇಶದಲ್ಲಿಯ ವಾಸ್ತವ್ಯವೆಂದರೆ ನಾವೇ ನಿರ್ಮಿಸಿಕೊಂಡ ಚಿನ್ನದ ಪಂಜರ ಎಂಬುದು ಅವರ ಖಚಿತ ಅಭಿಪ್ರಾಯ.

ಇಂತಹ ಸ್ವಭಾವವಿಶೇಷವುಳ್ಳ ಮಾವಯ್ಯನವರೆಂದರೆ ನಮಗೆಲ್ಲರಿಗೂ ತುಂಬಾ ಅಭಿಮಾನ.

ಭಾಗ ಎರಡು

ಸಾರಸ್ವತ

ಪ್ರೊಫೆಸರ್ ಇನಾಂದಾರರ ವಾಙ್ಮಯ ಸಮೀಕ್ಷೆ
(ಪರಿಚಯಾತ್ಮಕ ವಿವೇಚನೆ)

ಪಿ. ವಿ. ಜೋಶಿ

ಪ್ರೊಫೆಸರ್ ಇನಾಮದಾರರು ವೃತ್ತಿಯಿಂದ ಮಾತ್ರವಲ್ಲ, ಪ್ರವೃತ್ತಿಯಿಂದಲೂ ಅಧ್ಯಾಪಕರೇ. ಆ ಪ್ರವೃತ್ತಿ ಅಷ್ಟು ಬಲವಾಗಿರದಿದ್ದರೆ ಅವರು ಈ ವೃತ್ತಿಯನ್ನು ಕೈಕೊಳ್ಳುವುದಕ್ಕೆ ಮಾಡಿದ ಸಾಹಸಗಳನ್ನು ಮಾಡುತ್ತಿರಲಿಲ್ಲ.

ಕಾಲೇಜಿನಲ್ಲಿರುವಾಗ ಸಾಮಾನ್ಯವಾಗಿ ಅಲ್ಪಸ್ವಲ್ಪ ಬರೆಯುವ ಹವ್ಯಾಸಗಳು ಎಲ್ಲ ಯುವಕರಿಗೂ ಇದ್ದೇ ಇರುತ್ತವೆ. ಅವರನ್ನು ಪ್ರೋತ್ಸಾಹಿಸುವುದಕ್ಕೆ ಕಾಲೇಜು ಪತ್ರಿಕೆಗಳಿರುತ್ತವೆ. ನಮ್ಮ ಕಾಲದಲ್ಲಿ — ಅಂದರೆ, 1930-35ರಲ್ಲಿ — ಬರಹಗಾರರಿಗೆ ಖ್ಯಾತಿ ಎಷ್ಟೇ ಆಕರ್ಷಕವೆನಿಸಿದ್ದರೂ ಅದರಿಂದ ಸಂಪಾದನೆಯಾಗಬಹುದೆಂದು ಯಾರೂ ತಿಳಿಯುತ್ತಿರಲಿಲ್ಲ. ಜೀವನೋಪಾಯಕ್ಕೆಂದು ಇನ್ನೊಂದು ವೃತ್ತಿಯನ್ನು ಹುಡುಕುವುದು ಅನಿವಾರ್ಯವಾಗಿದ್ದಿತು. ಆದರೆ ಆ ಅನ್ವೇಷಣೆ ಬಹು ಕಷ್ಟಕರವಾಗಿದ್ದಿತು. ಉದಾಹರಣೆಗಳೇ ಹೆಚ್ಚಾಗಿರುತ್ತಿದ್ದವು.

ಆದರೆ ಯೌವನದ ಆಕಾಂಕ್ಷೆಗ್ಗಳಿಗೆ ಕಡಿವಾಣ ಹಾಕಿದವರು ಯಾರು ? ಅಂದು ಕಾಲೇಜಿನಲ್ಲಿ ಬುದ್ಧಿವಂತನೆನಿಸಿದ ಪ್ರತಿಯೊಬ್ಬ ಯುವಕನಿಗೂ ಅತಿಶಯ ಸ್ಪೃಹಣೀಯವೆಂದು ತೋರುತ್ತಿದ್ದ ವೃತ್ತಿ ಪ್ರೊಫೆಸರರದು. ಪ್ರಶಾಂತವಾದ ವಾತಾವರಣದಲ್ಲಿ ವಿಶಾಲವಾದ ಕಾಂಪೌಂಡುಗಳಲ್ಲಿಯ ಅವರ ಬಂಗಲೆಗಳು, ಹೂದೋಟಗಳು, ದಿನಕ್ಕೆ ಎರಡೋ ಮೂರೋ ಗಂಟೆಗಳಷ್ಟು ಮಾತ್ರ ಕೆಲಸಕ್ಕೆ ಹಾಜರಿ, ಉಳಿದ ವೇಳೆಯಲ್ಲಿ ಓದು, ಕ್ಲಬ್ಬಿನಲ್ಲಿ ಹರಟೆ, ವಿದ್ಯಾರ್ಥಿಗಳೊಡನೆ ಮಾತುಕತೆ, ಅವರ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಸಮಾಜದ ಎಲ್ಲ ವರ್ಗಗಳಲ್ಲಿಯೂ ಅವರಿಗೆ ದೊರೆಯುತ್ತಿದ್ದ ಮರ್ಯಾದೆ, ಇಂತಹ ಪ್ರಲೋಭನಗಳು ಬುದ್ಧಿವಂತ ವಿದ್ಯಾರ್ಥಿಗಳ ಮನಸ್ಸೆಳೆಯುತ್ತಿದ್ದವು. ಆದರೆ ಅದರಲ್ಲಿ ಅವಕಾಶವನ್ನು ಪಡೆದ ಭಾಗ್ಯವಂತರು ನೂರರಲ್ಲಿ ಒಬ್ಬರೂ ಇರುತ್ತಿರಲಿಲ್ಲ.

ಮನೆಯ ಪರಿಸ್ಥಿತಿಯ ಒತ್ತಡಗಳು, ವೈಯಕ್ತಿಕ ಅವಶ್ಯಕತೆಗಳು, ಕಾಲೇಜಿನಿಂದ ಹೊರಬಿದ್ದ ಯುವಕರನ್ನು ಯಾವುದೋ ಒಂದು ಸಂಪಾದನೆಯ ಮಾರ್ಗ ಸಿಕ್ಕಿದರೆ ಸಾಕು ಎನ್ನುವ ಸ್ಥಿತಿಗೆ ಇಳಿಸುತ್ತಿದ್ದವು. ಇಂತಹದರಲ್ಲಿಯೇ ಕಾಲೇಜಿನಲ್ಲಿರುವಾಗಲೇ ಇನಾಮದಾರರಿಗೆ ಗೃಹಸ್ಥಾಶ್ರಮದ ಜವಾಬ್ದಾರಿಯೂ ಬಂದಿತ್ತು. ಸದ್ಯದ ಪರಿಸ್ಥಿತಿಯ ನಿರ್ವಹಣೆಗೆಂದು ಅವರು ಮೊಟ್ಟಮೊದಲು ಒಪ್ಪಿದ ಕೆಲಸ ವಿಜಾಪುರದ ಜಿಲ್ಲಾ

ನ್ಯಾಯಾಲಯದಲ್ಲಿ ಗುಮಾಸ್ತೆಯದು. ಹಾಗೆಂದು ಅದನ್ನು ಕೂಡ ಅವರು ತಾತ್ಸಾರದಿಂದ ಕಾಣಲಿಲ್ಲ. ದಿನನಿತ್ಯದ ಕಾರ್ಯನಿರ್ವಹಣೆಗೆ ಕೆಲವೇ ನಿಯಮಗಳ ಪರಿಚಯ ಸಾಕಾಗುವಂತಿದ್ದರೂ ಅವರು ಒಂದು ವಕೀಲಿಯ ವ್ಯವಸಾಯಕ್ಕೆ ಆಗುವಷ್ಟು ಕಾನೂನುಗಳನ್ನು ಆಳವಾಗಿ ಅಧ್ಯಯನ ಮಾಡಿ ಅಲ್ಲಿಯ ಪ್ರಗತಿಗೂ ಭದ್ರವಾದ ತಳಪಾಯವನ್ನು ಹಾಕಿದರು. ಅದರೊಡನೆಯೇ ಅವರ ಮೂಲಪ್ರವೃತ್ತಿಯಾದ ಸಾಹಿತ್ಯದಲ್ಲಿಯ ಅಧ್ಯವಸಾಯವನ್ನು ಮುಂದುವರೆಸಿ 'ಸಂಸ್ಕೃತನಾಟಕಗಳಲ್ಲಿ ನಾಯಿಕಾ ಪಾತ್ರಗಳು' ಎಂಬ ತಮ್ಮ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾನಿಲಯದ ಮಾಂಡಲೀಕ ಪಾರಿತೋಷಿಕವನ್ನು ಪಡೆದರು. ಅದರ ಅಂದಿನ ಬೆಲೆಯ ಸುಮಾರು ಸಾವಿರ ರೂಪಾಯಿಗಳ ಮೊತ್ತವನ್ನೆಲ್ಲ ಅವರು ಪುಸ್ತಕರೂಪದಲ್ಲಿಯೇ ಪಡೆದು, ತಮ್ಮ ಮುಂದಿನ ಜೀವನ ಕ್ರಮದ ಅಸ್ತಿಭಾರವನ್ನು ಹಾಕಿದರು. ಆ ಮೂಲದಿಂದ ಅವರು 45 ವರ್ಷ ಕಾಲ ಬೆಳೆಯಿಸಿದ ಅವರ ಖಾಸಗೀ ಪುಸ್ತಕ ಭಂಡಾರವು ಅವರ ಒಟ್ಟು ಸಂಪಾದನೆಯ ಕನಿಷ್ಠ ಅರ್ಧದಷ್ಟು ಬೆಲೆಯುಳ್ಳದ್ದಾದರೂ ಆದೀತು.

ತಮ್ಮ ಕಡ್ಡಾಯದ ಉದ್ಯೋಗವನ್ನು ತೊರೆದು ತಮ್ಮ ಒಲವಿಗನುಗುಣವಾದ ಪ್ರಾಧ್ಯಾಪಕರ ವೃತ್ತಿಯನ್ನು ಹುಡುಕಿಕೊಂಡು ಹೋಗುವ ಧೈರ್ಯ ಅವರಿಗೆ ಮಾಂಡಲೀಕ ಪಾರಿತೋಷಿಕದಿಂದ ಬಂದಿತೆಂದು ತೋರುತ್ತದೆ. ತಮ್ಮ ಕೋರ್ಟಿನ ಕೆಲಸದಿಂದ ಮೊದಲು ರಜೆಯನ್ನೂ ಆಮೇಲೆ ಬಿಡುಗಡೆಯನ್ನೂ ಪಡೆದು, ಎರಡು ವರ್ಷ ಪರಿಶ್ರಮದಿಂದ ಮುಂಬಯಿ ವಿಶ್ವವಿದ್ಯಾನಿಲಯದ ಎಂ.ಎ. ಪದವಿಯನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಪಡೆದರು. ಆದರೂ ಅವರು ಬೇಡಿದ ಕೆಲಸ ಬಾಗಿಲಿಗೆ ಬರಲಿಲ್ಲ. ಯಾವದಾದರೊಂದು ಕೆಲಸವಂತೂ ಬೇಕಾಗಿತ್ತು. ಈ ಕಾಲದಲ್ಲಿ 'ಆರ್ಯನ್ ಪಾತ್' ಮತ್ತು 'ಇಂಡಿಯನ್ ಪಿ.ಇ.ಎನ್.' ಪತ್ರಿಕೆಗಳ ಸಂಪಾದನೆಯಲ್ಲಿ ಅವರು ಮದಾಮ್ ಸೋಫಿಯಾ ವಾಡಿಯಾ ಅವರ ಸಹಾಯಕರಾಗಿ ದುಡಿದರು.

ಹೀಗೆ ಐದಾರು ವರ್ಷಗಳ ತಪಸ್ಸಿನ ತರುವಾಯ ಮುಂಬಯಿ ಸರಕಾರದ ವಿದ್ಯಾ ಇಲಾಖೆಯು ಇವರಿಗೊಂದು ಅಸಿಸ್ಟೆಂಟ್ ಲೆಕ್ಚರರ್ ಕೆಲಸವನ್ನು ಕೊಡಮಾಡಿತು. ಆ ವ್ಯವಸಾಯದಲ್ಲಿ ಅವರು ಅಹಮದಾಬಾದು, ಧಾರವಾಡ, ಮಂಗಳೂರು, ಉಡುಪಿ, ಶಿವಮೊಗ್ಗ ಬೆಂಗಳೂರುಗಳಲ್ಲಿ ವಿದ್ಯಾರ್ಥಿಗಳಿಂದ ಪಡೆದ ಪ್ರೀತ್ಯಾದರಗಳೂ ಸಾರ್ವಜನಿಕರಲ್ಲಿ ಪಡದ ಗೌರವವೂ ಅವರು ವೃತ್ತಿಯಿಂದ ಮಾತ್ರವಲ್ಲದೆ ಪ್ರವೃತ್ತಿಯಿಂದಲೂ ಶಿಕ್ಷಕರೆಂಬುದನ್ನು ಎಲ್ಲರೂ ಒಪ್ಪುವಂತೆ ಸಿದ್ಧಮಾಡಿದವು.

ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಅಧ್ಯಾಪನಗಳಲ್ಲಿ ವಿದ್ವತ್ಪೂರ್ಣವಾದ ವಿಮರ್ಶೆಯು ಅವರ ದಿನನಿತ್ಯದ ಕೆಲಸದ ಅಂಗವಾಗಿಯೇ ಇದ್ದಿತೆಂಬುದು ಸಹಜ.

ಸಾಮಾನ್ಯವಾಗಿ ಸಾಹಿತ್ಯಾಭ್ಯಾಸಿಗಳು ತಿಳಿದಿರುವಂತೆ ಉತ್ತಮವಾದ ಸೃಜನಶೀಲ ಸಾಹಿತ್ಯವನ್ನೋದಿದವರು, ವಿಮರ್ಶೆಯ ಪರಿಕರಗಳನ್ನು ದಿನನಿತ್ಯವೂ ಬಳಸುವವರು, ತಮ್ಮ ಸ್ವಂತ ಸಾಹಿತ್ಯ ನಿರ್ಮಿತಿಗೆ ಇಳಿಯುವದು ಅಪರೂಪ. ಒಂದು ವೇಳೆ ಇಳಿದರೂ ಅವರ ನಿರ್ಮಿತಿಗಳಲ್ಲಿ ಸಜೀವಸೌಂದರ್ಯಕ್ಕಿಂತಲೂ ಜಡವಾದ ನಿರ್ದುಷ್ಟವಾದ ಹಂದರವೇ ಎದ್ದು ಕಾಣುವಂತಿರುತ್ತದೆ. ಆದರೆ ಇನಾಮದಾರರು ವಿದ್ವತ್ಪೂರ್ಣವಾದ ವಿಮರ್ಶೆಯಲ್ಲಿ ಮಾಡಿದ ಕೆಲಸಕ್ಕೆ ಸಮಸಮನಾಗಿ ಜನಪ್ರಿಯವಾದ ಜೀವಕಳೆಯಿಂದ ತುಂಬಿದ ಸೃಜನಶೀಲ ಸಾಹಿತ್ಯವನ್ನು ನಿರ್ಮಿಸಿದ್ದು ಅವರ ಹೆಚ್ಚಿನ ಸಾಧನೆ.

ಸಾಮಾನ್ಯವಾಗಿ ಎಲ್ಲ ಸೃಜನಶೀಲ ಕೃತಿಗಳ ಮೂಲದಲ್ಲಿ ಲೇಖಕನ ಒಂದು ವೈಯಕ್ತಿಕ ಅನುಭವವಿರುತ್ತದೆ. ಕೇಳಿದ ಓದಿದ ಕತೆಗಳಿಂದ, ಇತಿಹಾಸದಿಂದಲೂ ಕೂಡ, ವಸ್ತುವನ್ನು ಆಯ್ದುಕೊಳ್ಳುವಾಗ ಆ ಆಯ್ಕೆಯನ್ನು ಅವನ ಅನುಭವ ಬೀಜವೇ ನಿರ್ಧರಿಸುತ್ತದೆ. ಅತಿಶ್ರೇಷ್ಠವೆನಿಸಿದ ಸಾಹಿತ್ಯಕೃತಿಗಳಲ್ಲಿ ಈ ಬೀಜವು ಆಲದಮರದ ಮೂಲದಲ್ಲಿಯ ಬೀಜದಂತೆ ಎಲ್ಲೋ ಮರೆಯಾಗಿ ಮರವು ತಾನೇತಾನಾಗಿ ಬೆಳೆದು ನಿಲ್ಲುತ್ತದೆ. ಆ ಅನುಭವ, ಅದರಿಂದಾಗುವ ಜೀವಸಂಸ್ಕಾರ ಮನುಷ್ಯಮಾತ್ರರಿಗೆಲ್ಲಾ ಉಪಕಾರಿಯಾಗಿ ಶಾಶ್ವತ ಸಾಹಿತ್ಯವೆನಿಸುತ್ತದೆ. ಇದರ ಇನ್ನೊಂದು ತುದಿಗೆ ಇಂದಿನಂತೆ ಅಕ್ಷರಸ್ಥರಾದವರೆಲ್ಲ ಸಾಹಿತಿಗಳಾಗಬೇಕೆಂಬ ಹವ್ಯಾಸದಿಂದ ತಮ್ಮ ಸ್ವಂತದ ಕತೆಯನ್ನೇ ಇದ್ದಕ್ಕಿದ್ದಂತೆ ಹಸಿಹಸಿಯಾಗಿ ಬರೆದುಬಿಡುತ್ತಾರೆ. ಅದಕ್ಕೂ ಓದುಗರು ದೊರೆಯುತ್ತಾರೆ. ಇವರಿಗಿಂತ ಸ್ವಲ್ಪ ಮುಂದೆ ಹೋದವರು ತಮಗೆ ತಿಳಿದವರಾರದೋ ಕತೆಯನ್ನು ಹೆಸರು ವಿಳಾಸಗಳನ್ನು ಬದಲಿಸಿ ಇದ್ದಕ್ಕಿದ್ದಂತೆ ಬರೆದು ' ಈ ಕೃತಿಯಲ್ಲಿಯ ವ್ಯಕ್ತಿಗಳೆಲ್ಲ ಸಂಪೂರ್ಣ ಕಾಲ್ಪನಿಕ ; ಯಾರಾದರೂ ವ್ಯಕ್ತಿಗಳ ಹೋಲಿಕೆ ಕಂಡುಬಂದರೂ ಅದು ಆಕಸ್ಮಿಕ' ಎಂಬ ಎಚ್ಚರಿಕೆಯ ಮರೆಯಲ್ಲಿ ನಿಲ್ಲುತ್ತಾರೆ. ಇದಕ್ಕೂ ಮುಂದೆ ಹೋದವರು ತಮ್ಮ ಕತೆಯನ್ನೊ ತಮಗೆ ತಿಳಿದವರ ಕತೆಯನ್ನೊ ಹಗಲುಗನಸುಗಳ ಮಾರ್ಗವಾಗಿ ಬೆಳೆಸಿ ಬರೆಯುತ್ತಾರೆ, ಇಲ್ಲವೆ ಲೋಕಾನುಭವದಿಂದ ವಿಸ್ತರಿಸುತ್ತಾರೆ. ಇಂತಹ ರಚನೆಗಳು ಕೂಡ ಉತ್ತಮ ಸಾಹಿತ್ಯಕ್ಕೆ ಹತ್ತಿರವಾಗಿ ಮನರಂಜನೆಯನ್ನೂ ಲೋಕಪರಿಜ್ಞಾನವನ್ನೂ ಒದಗಿಸಬಲ್ಲವು.

ಹೀಗಿರುವುದರಿಂದ ಕೃತಿಗಳನ್ನೋದಿ ಕವಿಯ ಜೀವನ ದೇಶಕಾಲಗಳ ಬಗ್ಗೆ ಕತೆಗಳನ್ನು ಕಟ್ಟಬಹುದು — ನಮ್ಮ ಹಳೆಯ ಕವಿಕತೆಗಳಂತೆ. ಇತ್ತೀಚಿನ ಲೇಖಕರ ವಿಷಯವಾಗಿ ತಿಳಿದ ವಿವರಗಳಿಂದ ತಿಳಿಯದ ವಿವರಗಳನ್ನೂ ಊಹಿಸಬಹುದು. ಇಂತಹ ಊಹೆಗಳನ್ನು ಎಲ್ಲೆಯಲ್ಲಿಡುವದಕ್ಕೆ ಇತ್ತೀಚಿನ ಸಾಹಿತ್ಯಕರೆಲ್ಲರೂ ತಮ್ಮ ಅಪರ ವಯಸ್ಸಿನಲ್ಲಿ ಆತ್ಮಚರಿತ್ರವನ್ನೋ ತೀರ್ಪುಗಳನ್ನೋ ಬರೆದಿಡುತ್ತಾರೆ. ಇನಾಮದಾರರಿಗೆ ಇದನ್ನು ಮಾಡುವ ವಿಚಾರವಿದೆಯೊ ಇಲ್ಲವೊ ಎಂಬುದರ ಸುಳಿವು ಅವರು ಇನ್ನೂ ಕೊಟ್ಟಿಲ್ಲ. ಆದ್ದರಿಂದ ಅವರ ಸೃಜನಶೀಲ ಕೃತಿಗಳನ್ನು ಕುರಿತು ಎಷ್ಟನ್ನು ಬರೆಯಬಹುದು ಎಂಬುದು ತೊಡಕಿನ ಪ್ರಶ್ನೆ.

ಇನಾಮದಾರರು ಸಾಹಿತ್ಯನಿರ್ಮಿತಿಗೆ ತೊಡಗುವ ಮೊದಲು ಬಹು ಆಸ್ಥೆಯಿಂದ ಓದುತ್ತಿದ್ದ ಲೇಖಕರೆಂದರೆ ಇಂಗ್ಲಿಷಿನಲ್ಲಿ ಗಾಲ್ಸವರ್ದಿ (ಫೊರ್ಸ್ಯಾಟ್ ಸಾಗಾ), ಮರಾಠಿಯಲ್ಲಿ ಖಾಂಡೇಕರ (ದೋನ್ ಧ್ರುವ), ಬಂಗಾಲಿಯಲ್ಲಿ (ಭಾಷಾಂತರದ್ವಾರಾ) ಶರಚ್ಚಂದ್ರ (ಪರಿಣೀತಾ ಮತ್ತು ಗೃಹದಾಹ). ಇವೆಲ್ಲವುಗಳಲ್ಲಿ ಅವರ ಮೇಲೆ ಪ್ರಭಾವಶಾಲಿಯಾದ ವಿಚಾರ ಗಾಲ್ಸವರ್ದಿಯ ಐರೀನ್ ಪಾತ್ರವನ್ನು ಕುರಿತು ಹೇಳಿದ ಒಂದು ಮಾತು — ದಿನನಿತ್ಯದ ಆಸಕ್ತಿಗಳಿಂದ ತೃಪ್ತರಾದ ಸಾಮಾನ್ಯ ಜನಗಳ ಜೀವನಕ್ರಮದಲ್ಲಿ ಸೌಂದರ್ಯದ ಪ್ರವೇಶದಿಂದುಂಟಾಗುವ ಕೋಲಾಹಲ (ಹೀಗೋ ಇಂಥದೋ ಒಂದು ಮಾತು). ಯಾವ ಐರೀನಳ ಸೌಂದರ್ಯ ಅವಳ ಇಳಿವಯಸ್ಸಿನ ಮಾವನ ಕೊನೆಯ ದಿನಗಳಲ್ಲಿ ಅಲೌಕಿಕ ಸುಖದ ದರ್ಶನ ಮಾಡಿಸಿತೋ ಅದು ಅವಳನ್ನು ಹೆಂಡತಿಯಾಗಿ ಒಪ್ಪಿದವರಲ್ಲಿ ಅಸುಖವನ್ನೂ ಕಾರ್ಪಣ್ಯವನ್ನೂ ತಂದಿತು. ವತ್ಸಲೆಯ ಸಾತ್ವಿಕತೆಯ ಚೆಲುವು, ಸುರಂಗೆಯ ಉನ್ಮಾದಕಾರಿಯಾದ ಚೆಲುವುಗಳ ನಡುವೆ ಗಾಸಿಪಟ್ಟ ರಸಿಕ ರಮಾಕಾಂತನಿಗೆ ಅವೆರಡರ ನಡುವೆ 'ಎರಡು ಧ್ರುವ'ಗಳ ಅಂತರವೇ ತೋರಿತು. 'ಪರಿಣೀತಾ'ದಲ್ಲಿ ಎಳೆವಯಸ್ಸಿನ ಚೆಲುವೆಯ ನಿಷ್ಕಲ್ಮಷವಾದ ಸ್ನೇಹದಂತಹದನ್ನು ಬಸವಣ್ಣನವರೇ ಜೀವದೇವರ ಸ್ನೇಹಕ್ಕೆ 'ಕನ್ನೆಯ ಸ್ನೇಹದಂತಿತ್ತು' ಎಂದು ಉಪಮೆಯಾಗಿ ಬಳಸಿದರು. ತದ್ವಿರುದ್ಧವಾಗಿ 'ಗೃಹದಾಹ'ದಲ್ಲಿ ಅಚಲಾನ ಚೆಲುವಿನ ಸೆಳೆತ ಎರಡು ಮನೆಗಳನ್ನು ಹಾಳುಮಾಡಿತು. ಈ ಕಾದಂಬರಿಗಳಲ್ಲಿ ಬರುವ ಎಲ್ಲಾ ಸನ್ನಿವೇಶಗಳೂ ಲೇಖಕರ ಪ್ರತಿಭೆಯ ಪ್ರಭಾವದಿಂದಾಗಿ ಸೃಷ್ಟಿಯ ಸ್ವಯಂಪೂರ್ಣವಾದ ಅಂಗಗಳೆಂದು ತೋರುತ್ತವೆ. ಅವುಗಳಿಗೆ ಪೂರ್ವಾಪರ ವಿವರಗಳನ್ನು ಓದುಗರು ತಿಳಿಯಬಯಸುವುದೇ ಇಲ್ಲ. ಅಂದಿನ ಕಾಲದಲ್ಲಿ 'Poetry on Celluloid' ಎಂದು ಸಾರಿ ತೆಗೆಯುತ್ತಿದ್ದ ಚಿತ್ರಗಳಲ್ಲಿರುವ ಸುಂದರವಾದ ಗೀತೆಗಳಲ್ಲಿ ಇನಾಮದಾರರಿಗೆ ಪ್ರಿಯವಾದದ್ದೊಂದು ಸುಮಾರಾಗಿ ಹೀಗಿತ್ತು : 'ಮಗು ಆಟದ ಬೊಂಬೆಗಳನ್ನು ತನ್ನ ಸಂಗಡಿಗರೆಂದು ಜತೆಕೂಡಿಸಿಕೊಂಡು ಉಣ್ಣಿಸಿ ಮುದ್ದುಮಾಡಿ ಆಟ ಸಾಕಾಗಲು ಅವನ್ನು ಕಾಲಲ್ಲಿ ತುಳಿದು ಎದ್ದು ಹೋಗುತ್ತದೆ. ಅವನೊಬ್ಬ ತಿಳಿಗೇಡಿ ಮಗುವಾಗಿರಬಹುದು. ಆದರೆ ಎಲೆ ದೈವವೇ, ನೀನು ಇಷ್ಟನ್ನೇ ಮಾಡುವದಾದರೆ ನಿನ್ನ ದೊಡ್ಡಸ್ತಿಕೆಯೇನು ಬಂತು ?'

ಸಾಹಿತ್ಯದಲ್ಲಿಯೂ ಜೀವನದಲ್ಲಿಯೂ ಬೆಳೆಸಿಕೊಂಡ ಈ ದೃಷ್ಟಿಯಿಂದಾಗಿ ಇನಾಮದಾರರಿಗೆ ತಾವು ಎದುರಿಸಬೇಕಾಗಿ ಬಂದ ಅನೇಕ ಸಂಕಟಗಳಲ್ಲಿ ಯಾವವೂ ಅವರನ್ನು ತಮ್ಮ ನಿರ್ಧಾರದಿಂದ, ಗುರಿಯಿಂದ ವಿಚಲಿತರನ್ನಾಗಿಸಲಿಲ್ಲ. ಮುಂದೆ ಇಪ್ಪತ್ತು ವರ್ಷಗಳಾದ ಮೇಲೆ ಅವರು ಬರೆದ 'Uttararamacharitam - A Preface ಎಂಬ ಪ್ರಬಂಧದಲ್ಲಿ ಈ ದೃಷ್ಟಿಯನ್ನು ಬಹು ಸಮರ್ಪಕವಾಗಿ ಪ್ರತಿಪಾದಿಸಿದ್ದಾರೆ. ರಾಮಚರಿತ —

ಯಾವ ರೂಪದಲ್ಲಾದರೂ ಯಾರ ಕೃತಿಯೇ ಆದರೂ ಅವರಿಗೆ ಎಂದೆಂದಿಗೂ ಬಹು ಪ್ರಿಯವಾದದ್ದು. ಈ ಮಾತನ್ನೇ ಅವರು 1980ರಲ್ಲಿ ಬರೆದ ಶ್ರೀನಿವಾಸರ 'ಶ್ರೀರಾಮ ಪಟ್ಟಾಭಿಷೇಕ — ಒಂದು ಸಮಾಲೋಕನ' ಎಂಬ ಪ್ರಬಂಧದಲ್ಲಿ ಹೇಳಿದ್ದಾರೆ. ಅವರ ಪ್ರತಿಪಾದನೆಗೆ ಅನಾದಿ ಪರಂಪರೆಯ ಸಮರ್ಥನೆಯಿದೆ.

2

ಸಾಹಿತ್ಯ ದೃಷ್ಟಿಯಲ್ಲಿ ಪರಿಣತಿಯನ್ನು ಬಯಸುವವರು ಸಾಮಾನ್ಯವಾಗಿ ಆರಂಭಿಸುವದು ಒಳ್ಳೆಯ ಕೃತಿಗಳ ಭಾಷಾಂತರದಿಂದ. ಇದಕ್ಕಾಗಿ ಇನಾಮದಾರರು ಆರಿಸಿಕೊಂಡ ಕೃತಿ ಖಾಂಡೇಕರರ 'ದೋನ್ ಧ್ರುವ'. ರಮಾಕಾಂತನೆಂಬ ಜನಪ್ರಿಯ ಸಾಹಿತಿಗೆ ವತ್ಸಲೆ ಹೆಂಡತಿ. ಅವಳು ರೂಪವತಿಯಲ್ಲವೆಂಬ ಅಸಂತೋಷದಿಂದ ಅವನು ದೂರದೂರವಾಗಿಯೇ ಇರುತ್ತಾನೆ. ಅವಳ ಮನಸ್ಸಿಗೆ ತನ್ನಿಂದ ಆಗುತ್ತಿದ್ದ ನೋವನ್ನು ಅವನು ಗಮನಿಸುವುದೇ ಇಲ್ಲ. ಅವನದೊಂದು ನಾಟಕವನ್ನಾಡುತ್ತಿದ್ದ ಕಂಪನಿಯಲ್ಲಿ ಸುರಂಗೆ ಎಂಬ ನಟಿಯ ಮೋಹಪಾಶದಲ್ಲಿ ಅವನು ಸಿಲುಕುತ್ತಾನೆ. ಅವನ ಮನಸೆಳೆದ ಇನ್ನೊಬ್ಬ ಯುವತಿ ಚಿತ್ರಕಲಾಪ್ರವೀಣೆ ಸುಲೋಚನೆ. ಆಕೆ ಯುವಕ ಎಂಜಿನಿಯರ್ ವಿದ್ಯಾಧರನೊಡನೆ ಬರುತ್ತಾಳೆ. ಅವನು ಸುರಂಗೆಯ ಭೇಟಿಗೆ ಹೊರಡುವ ಮುಂಚೆ ವತ್ಸಲೆಯೊಡನೆ ಬಿರುಸಾದ ಮಾತು ನಡೆದು ತನ್ನ ಮನೋಗತವನ್ನೆಲ್ಲ ಬರೆದ ಒಂದು ವಹಿಯನ್ನು ಅವಳ ಮೇಲೆಸೆದು ಹೊರಟುಹೋಗುತ್ತಾನೆ. ಅದನ್ನೋದಿ ಅವಳು ಆ ಮನೆಯಲ್ಲಿ ತನಗೆ ಯಾವ ಭವಿಷ್ಯವೂ ಇಲ್ಲವೆಂದು ತಿಳಿದು ಮನೆಯನ್ನು ಬಿಟ್ಟುಹೋಗುತ್ತಾಳೆ. ಕೃಷ್ಣಾ ಎಂಬ ಹೆಸರಿಟ್ಟುಕೊಂಡು ಕಾಮಾಪುರದಲ್ಲಿ ಗೇರುಹಣ್ಣಿನ ಕಾರ್ಖಾನೆಯಲ್ಲಿ ಕೂಲಿ ಮಾಡುತ್ತಾಳೆ. ಅದೇ ಹೆಸರಿನಿಂದ ಆಗಾಗ ಕತೆಗಳನ್ನೂ ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾಳೆ.

ಆ ಗೇರುಹಣ್ಣಿನ ಕಾರಖಾನದಾರ ದಾದಾಸಾಹೇಬನ ಮಗಳೇ ರಮಾಕಾಂತನ ಮನಸೆಳೆದ ಸುಲೋಚನೆ. ಈ ಕಾರಖಾನದಾರನು ಎರಡು ಜಾಹೀರಾತುಗಳನ್ನು ಪ್ರಕಟಿಸಿರುತ್ತಾನೆ : ಒಂದು, ಹೊಸ ಯಂತ್ರವನ್ನು ನಿರ್ಮಿಸಬಲ್ಲ ಎಂಜಿನಿಯರನಿಗಾಗಿ. ಸಾವಿರಾರು ಜನ ಹೆಂಗಸರು ಕೈಯಿಂದ ಸುಲಿಯುತ್ತಿದ್ದ ಗೇರುಹಣ್ಣನ್ನು ತಾನಾಗಿಯೇ ಸುಲಿಯಬಲ್ಲ ಯಂತ್ರವೇ ಅದು. ಇನ್ನೊಂದು ಆ ಕಾರ್ಖಾನೆಯ ಪರಿಚಯ ಮಾಡಿಕೊಡುವ ಒಂದು ಚಿಕ್ಕ ಪುಸ್ತಕ. ಆ ಯಂತ್ರದ ನಕ್ಷೆಯನ್ನು ತಯಾರಿಸುವುದಕ್ಕೆಂದು ವಿದ್ಯಾಧರನೂ, ಪುಸ್ತಿಕೆಯನ್ನು ಬರೆಯಲು ರಮಾಕಾಂತನೂ, ಅದಕ್ಕೊಂದು ಚಿತ್ರ ಬರೆಯಲೆಂದು ಸುಲೋಚನೆಯೂ ಕಾಮಾಪುರಕ್ಕೆ ಬರುತ್ತಾರೆ.

ಸುಲೋಚನೆಯ ಸೋದರಮಾವ ಬಾಪ್ಪಾ ಗಾಂಧೀ ಅನುಯಾಯಿಯಾಗಿ ಕಾರ್ಮಿಕರ ಉದ್ಧಾರ, ಖಾದಿ, ಅಹಿಂಸಾಕಾರ್ಯಗಳಲ್ಲಿ ತೊಡಗಿರುತ್ತಾನೆ. ಕಾಮಾಪುರದ ಕಾರ್ಖಾನೆಯನ್ನು ನಿಲ್ಲಿಸಿಬಿಡುವ ವಿಚಾರವಿದೆ ಎಂಬ ಸುದ್ದಿ ತಿಳಿದು ಅವನೂ ಕಾರ್ಮಿಕರ ಬೆಂಬಲಕ್ಕೆಂದು ಕಾಮಾಪುರಕ್ಕೆ ಬರುತ್ತಾನೆ.

ಹೀಗೆ ಮುಖ್ಯ ಪಾತ್ರಗಳೆಲ್ಲ ಅಲ್ಲಿ ಸೇರಿದಾಗ ಅನೇಕ ರಹಸ್ಯಗಳು ಬಯಲಾಗುತ್ತವೆ. ಸುರಂಗೆಯ ಮೊದಲಿನ ಹೆಸರು ತುಳಸಿ. ಅವಳು ದಾದಾಸಾಹೇಬನ ಕಾರ್ಖಾನೆಯಲ್ಲಿ ದುಡಿದು ಗಳಿಸಿದ್ದನ್ನೆಲ್ಲ ಅವಳ ಗಂಡ ಸಾವಳ ಕುಡಿತಕ್ಕೆ ಹಾಳುಮಾಡಿ ಅವಳಿಗೆ ಹಿಂಸೆ ಕೊಡುತ್ತಿದ್ದನು. ಅವಳ ರೂಪಕ್ಕೆ ಮನಸೋತ ದಾದಾ ಅವಳ ಮೇಲೆ ಬಲಾತ್ಕಾರ ಮಾಡಿದನು. ಗಂಡ ಕುಡಿತ ಜೂಜು ಕಳ್ಳತನ ದರೋಡೆಗಳ ಮಾರ್ಗದಿಂದ ಜೈಲು ಸೇರಿದ. ತುಳಸಿ ಅವನಿಂದ ಪಡೆದ ಒಂದು ಮಗನನ್ನು ಕಾಶಿಯೆಂಬ ಮುದುಕಿಗೊಪ್ಪಿಸಿ ನಾಟಕ ಕಂಪನಿ ಸೇರಿ ಸುರಂಗೆಯಾಗಿದ್ದಳು. ಅವಳು ಈಗ ಕಾಮಾಪುರಕ್ಕೆ ಬಂದಾಗ ಸಾವಳನೂ ತನ್ನ ಜೈಲುವಾಸ ಮುಗಿಸಿ ಅಲ್ಲಿಯೇ ಬಂದನು. ವತ್ಸಲೆಯೂ ಕೃಷ್ಣಾ ಎಂದು ಹೆಸರಿಟ್ಟುಕೊಂಡು ಕೂಲಿ ಮಾಡುತ್ತ ಇರುತ್ತಿದ್ದುದು ಈ ಕಾಶಿಯ ಮನೆಯಲ್ಲಿಯೇ. ವಿದ್ಯಾಧರನು ಇಲ್ಲಿ ಬಂದಾಗ ಅವನ ಮನೆಗೆಲಸಗಳನ್ನು ಮಾಡುತ್ತಾನೆ.

ಈ ಸಮಯದಲ್ಲಿಯೇ ಕಾಮಾಪುರದ ದೇವಿಜಾತ್ರೆ ಬರುತ್ತದೆ. ದೇವಿಗೆ ಬಲಿಕೊಡುವ ಕೋಣನನ್ನು ಉಳಿಸಲಿಕ್ಕೆ ಸರ್ವಪ್ರಯತ್ನವನ್ನೂ ಮಾಡಿ ಬಾಪ್ಪಾ ಯಶಸ್ವಿಯಾಗುತ್ತಾರೆ. ಆದರೆ ಊರಲ್ಲಿ ಮೈಲೀ ಬೇನೆ ಆರಂಭವಾಗಲು ಜನರೆಲ್ಲ ಬಾಪ್ಪಾನಿಗೆ ಎದುರು ಬೀಳುತ್ತಾರೆ. ಸುರಂಗೆಗೆ ಮೈಲೀ ಬೇನೆ ಬಂದಿರುವುದನ್ನೂ ಅವಳು ತನ್ನ ಮಗನನ್ನು ಬಿಡುವದಿಲ್ಲವೆಂಬುದನ್ನೂ ತಿಳಿದ ರಮಾಕಾಂತನು ಅವಳಿಂದ ದೂರವಾಗುತ್ತಾನೆ. ಅವನ ಕತೆಗಳನ್ನು ಓದಿ ಮೆಚ್ಚಿದ್ದ ಕೃಷ್ಣಾ ವತ್ಸಲೆಯೇ ಎಂದು ತಿಳಿದು ಅವಳನ್ನು ಮರಳಿ ಪಡೆಯಲು ಮಾಡಿದ ಯತ್ನ ವಿಫಲವಾಗುತ್ತದೆ. ಸುಲೋಚನ ತಂದೆಯ ಸಂಪತ್ತನ್ನು ಧಿಕ್ಕರಿಸಿ ವಿದ್ಯಾಧರನನ್ನು ಕೂಡಿ ಜನಸೇವೆಗೆ ನಿಲ್ಲುತ್ತಾಳೆ. ಬಾಪ್ಪ ತಾವು ಬದುಕಿಸಿದ ಕೋಣನ ರೋಷಕ್ಕೆ ಬಲಿಯಾಗಿ ಪ್ರಾಣ ನೀಗುತ್ತಾರೆ.

ಇಲ್ಲಿ ಮುಖ್ಯ ಪಾತ್ರವೆನ್ನುವುದೊಂದು ಇಲ್ಲದ್ದರಿಂದ ಬರಿಯ ಕತೆ ಹೇಳಿದರೆ ತೊಡಕು ತೊಡಕಾಗಿ ತೋರುತ್ತದೆ. ಆದರೆ ಅದರ ತಂತ್ರಕೌಶಲ್ಯವನ್ನೂ ವರ್ಣನೆಯ ಸೌಂದರ್ಯಗಳನ್ನೂ ಸಂಭಾಷಣೆಯ ಚಾತುರ್ಯವನ್ನೂ ಮೂಲವನ್ನು ಓದಿಯೇ ತಿಳಿಯಬೇಕು. ಕತೆಯಲ್ಲಿ ರಮಾಕಾಂತನಿಗೆ ವತ್ಸಲೆಯೊಂದು ಧ್ರುವ, ಸುರಂಗೆ ಇನ್ನೊಂದು ಧ್ರುವ ; ಎರಡನ್ನೂ ಕಳೆದುಕೊಂಡು ನೆಲೆಗೆಟ್ಟವನಾಗುತ್ತಾನೆ. ಲೇಖಕರಿಗೆ ಒಂದು ಧ್ರುವ ದುಡಿಮೆಯಿಂದ ಬದುಕುವ ಬಡವರದು ; ಇನ್ನೊಂದು ಬಡವರ ದುಡಿಮೆಯಿಂದ

ಕೊಬ್ಬಿದ ಬಲ್ಲಿದರದು. ಗಾಂಧೀಮಾರ್ಗ ಈ ಅಂತರವನ್ನು ಕಡಿಮೆ ಮಾಡಲಿಲ್ಲ. ಗ್ರಾಮೋದ್ಯೋಗ, ಪಾನನಿರೋಧ, ಅಹಿಂಸೆ ಮುಂತಾದ ಚಳವಳಿಗಳು – ನೀರಮೇಲೆ ಬರೆದ ಬರಹಗಳಂತೆ – ಹೇಗೆ ಮರೆಯಾದವೆನ್ನುವದನ್ನು ಬಾಪ್ಪಾ ಅವರ ಅನುಭವಗಳಿಂದ ತೋರಿಸುತ್ತಾರೆ. ಅಹಿಂಸಾವಾದದಿಂದ ತಾನು ಬದುಕಿಸಿದ ಕೋಣದ ಹಿಂಸೆಯಿಂದಲೇ ಅವರು ಪ್ರಾಣ ಕಳೆದುಕೊಂಡದ್ದು ಲೇಖಕರ ಆಶಯವನ್ನು ತೋರುತ್ತದೆ. ಇದು ಬರಿ ಚಮತ್ಕಾರವಲ್ಲ. ಕತೆಯ ಉದ್ದಕ್ಕೂ ವಾಚ್ಯಾರ್ಥ ವ್ಯಂಗ್ಯಾರ್ಥಗಳು ಸಮಸಮವಾಗಿ ನಡೆಯುವ ಚಮತ್ಕೃತಿ ಖಾಂಡೇಕರರ ಬರಹದಂತೆ ಇನ್ನೆಲ್ಲಿಯೂ ಸಿಕ್ಕಲಾರದು.

ಭಾಷಾಂತರದ ಕನ್ನಡವನ್ನು ಕುರಿತು ಇನಾಮದಾರರು ತಾವೇ ಎರಡನೆಯ ಮುದ್ರಣದ ಪ್ರಸ್ತಾವನೆಯಲ್ಲಿ 'ಕಲಸುಮೇಲೋಗರ'ವೆಂದಿದ್ದಾರೆ. ಅದಕ್ಕೆ ಕಾರಣಗಳನ್ನೂ ಹೇಳಿದ್ದಾರೆ. ಆದರೆ ಅದು ಅನಿರೀಕ್ಷಿತವಲ್ಲ. ಜೀವಂತವಾದ ಗ್ರಾಮೀಣ ಭಾಷೆ, ಕೃತಕವಾದ ಸುಸಂಸ್ಕೃತ ಭಾಷೆಗಳ ಎರಡು ಧ್ರುವಗಳ ನಡುವಿನ ಅಂತರದಲ್ಲಿ ಎಷ್ಟೆಲ್ಲಾ ರೀತಿಗಳಿರಬಹುದೋ ಅವನ್ನೆಲ್ಲ ಖಾಂಡೇಕರರು ಸಮರ್ಪಕವಾಗಿ ಬಳಸುವಂತೆ, ಅವರ ಕೃತಿಯನ್ನು ಭಾಷಾಂತರಿಸುವವರು (ಅದೂ ಇಷ್ಟು ವಿಸ್ತಾರವಾದ ಬರವಣಿಗೆಯನ್ನು, ಕೈಗೊಂಡ ಮೊದಲ ಯತ್ನದಲ್ಲಿಯೇ) ಕನ್ನಡವನ್ನು ಬಳಸಬಹುದೆಂದು ಯಾರೂ ನಿರೀಕ್ಷಿಸಲಾರರು. ಆದರೂ ಕ್ರಮೇಣ ಇನಾಮದಾರರ ಕೈಯಲ್ಲಿ ಪಳಗಿದ ಅವರ ಸುಂದರವಾದ ಸರ್ವಪ್ರಾದೇಶಿಕವಾದ ಕನ್ನಡಶೈಲಿಯ ಉಗಮವನ್ನಿಲ್ಲಿ ಕಾಣಬಹುದು. ಅವರ ಓದುಗರು ವಿಶೇಷವಾಗಿ ಮೆಚ್ಚಿದ ಸಂಭಾಷಣೆಗಳ ಚಮತ್ಕೃತಿಯನ್ನು ಅವರು ಖಾಂಡೇಕರರ ಮರಾಠಿಯಿಂದ ಎತ್ತಿಕೊಂಡು ಕನ್ನಡಕ್ಕೆ ಹೇಗೆ ಪಳಗಿಸಿದರೆಂಬುದನ್ನೂ ಕಾಣಬಹುದು. ಕಥಾಸರಣಿಯಲ್ಲಿಯೂ ವರ್ಣನೆಗಳಲ್ಲಿಯೂ ಸುಂದರ ಸಮರ್ಪಕ ಉಪಮೆ ರೂಪಕ ವಕ್ರೋಕ್ತಿಗಳು ಯತ್ನವಿಲ್ಲದೆಯೇ ಹರಿದುಬರುವ ಅವರ ಶೈಲಿಯ ಇನ್ನೊಂದು ವೈಶಿಷ್ಟ್ಯವೂ ಖಾಂಡೇಕರರ ಕಮ್ಮಟದಿಂದ ಬಂದದ್ದೇ.

3

ಈ ಪ್ರಥಮ ಪ್ರವೇಶದಿಂದ (1937) ಮುಂದೆ ಅವರ ಪ್ರಥಮ ಸ್ವತಂತ್ರ ಕಾದಂಬರಿ 'ಮೂರಾಬಟ್ಟೆ' ಪ್ರಕಟವಾಗುವ (1946)ವರೆಗಿನ ಒಂಬತ್ತು ವರ್ಷಗಳು ಅವರ ಧೈರ್ಯ ಸಾಹಸಗಳ ಪರಾಕಾಷ್ಠೆಯ ಕಾಲವಾಗಿತ್ತು. ಕೈಯಲ್ಲಿದ್ದ ಒಂದು ವೃತ್ತಿಯನ್ನು ಬಿಟ್ಟು ಇನ್ನೊಂದನ್ನು ಅರಸಿಕೊಂಡು ಹೋಗುವುದು ಆ ಕಾಲದಲ್ಲಿ ಎಂಥವರಿಗೂ ಈಗಿನಷ್ಟು ಸುಲಭವಾಗಿರಲಿಲ್ಲ. ದೊಡ್ಡ ಕುಟುಂಬಕ್ಕೆ ಹಿರಿಯ ಮಗನಾಗಿ, ತಂದೆಗೆ ಬಲಗೈಯಾಗಿ ಕುಟುಂಬ ನಿರ್ವಹಣೆಯಲ್ಲಿ ನೆರವಾಗುತ್ತಿದ್ದಂತೆಯೇ ದೈವದ

ಆಘಾತಗಳನ್ನು ಎದುರಿಸಬೇಕಾಗಿತ್ತು. ಇದಾವುದಕ್ಕೂ ಎದೆಗುಂದದೆ ತಮ್ಮ ಎಂ.ಎ. ಪರೀಕ್ಷೆಯನ್ನು ಮಾಡಿದ್ದಲ್ಲದೆ ಸಾಹಿತ್ಯದ ಮತ್ತು ಸಾಹಿತಿಗಳ ವಿಸ್ತಾರವಾದ ಪರಿಚಯವನ್ನು ಬೆಳೆಸಿಕೊಂಡರು. ಆಗ ಅವರ ವಯಸ್ಸು ಕೇವಲ 25 ರಿಂದ 34. ಈ ಕಾಲದಲ್ಲಿಯೇ ರೂಪುಗೊಳ್ಳುತ್ತಿದ್ದ ಅವರ ಮೊದಲ ಸ್ವತಂತ್ರ ಕೃತಿಯಲ್ಲಿ ಯೌವನಸಹಜವಾದ ಜೀವನೋಲ್ಲಾಸದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮತ್ತು ವೈಯಕ್ತಿಕ ಸಾವುನೋವುಗಳ ಗಂಭೀರವಾದ ಪ್ರಪಂಚವಿದೆ. ಈ ಅವಧಿಯಲ್ಲಿನ ಅವರ ಅನುಭವಗಳು ಇದೊಂದು ಕಾದಂಬರಿಗೆ ಮಾತ್ರವಲ್ಲದೆ ಮುಂದಿನ ಅನೇಕ ಕಾದಂಬರಿಗಳಿಗೆ ವಸ್ತುವನ್ನೊ ಸನ್ನಿವೇಶಗಳನ್ನೊ ಒದಗಿಸಿರುವುದನ್ನು ಕಾಣಬಹುದು.

'ಮೂರಾಬಟ್ಟೆ'ಯ ಮುಖ್ಯ ಪಾತ್ರಗಳಲ್ಲೊಬ್ಬನಾದ ವಕೀಲ ರಾಮಣ್ಣ ತನ್ನ ಬುದ್ಧಿ ಬಲದಿಂದಲೂ ಸತತ ಯತ್ನದಿಂದಲೂ ವಕೀಲಿಯ ಉಚ್ಚವರ್ಗದಲ್ಲಿ ಸೇರಿ, ನಿರ್ಮಲೆಯ ಪ್ರೀತಿಗೆ ಪಾತ್ರನಾಗುತ್ತಾನೆ. ಇವರ ಸಲಿಗೆಗೆ ನಿರ್ಮಲೆಯ ತಂದೆಯ ಪ್ರೋತ್ಸಾಹವೂ ಇಲ್ಲ, ವಿರೋಧವೂ ಇಲ್ಲ. ಶಾಮಣ್ಣ ರಾಮಣ್ಣನ ಬಾಲ್ಯಸ್ನೇಹಿತ, ಆದರೆ ಬಡವ. ಗಳಿಸುವ ಯೋಗ್ಯತೆ ಇದ್ದರೂ ದೇಶಸೇವೆಯ ಒಲವಿನಿಂದಾಗಿ ಗಳಿಕೆಯ ಆಶೆಯನ್ನು ಬಿಟ್ಟು ಬಡವನಾಗಿದ್ದಾನೆ. ಮೇಲೆ ತಂದೆ ಬಿಟ್ಟ ಸಾಲದ ಹೊರೆ. ವಿಧವೆ ತಾಯಿಯನ್ನು ಮುಪ್ಪಿನಲ್ಲಿ ಸಂತಯಿಸುವ ಭಾರ. ಬೆಳೆದು ನಿಂತ ತಂಗಿಯ ಮದುವೆಯ ಚಿಂತೆ. ಒಂದೆಡೆ ತನ್ನ ಕರುಳಿನ ಕೂಗು. ಇನ್ನೊಂದೆಡೆ ತನಗಿಂತ ದರಿದ್ರರಾಗಿರುವ ತನ್ನ ದೇಶಬಾಂಧವರ ಕರೆ. ಇವುಗಳ ನಡುವೆ ಹೊಯ್ದಾಡುತ್ತ ಶಾಮಣ್ಣನು ಮುಂಬಯಿಗೆ ಬಂದಾಗ 1942 ಆಗಸ್ಟ್‌ದ ಕೋಲಾಹಲವೆದ್ದು ಅವನನ್ನು ಕೊಚ್ಚಿಕೊಂಡು ಹೋಗುತ್ತದೆ. ರಾಮಣ್ಣ ತನಗೆ ಶ್ರೇಯವೆಂದು ಕಂಡ ಮಾರ್ಗದಲ್ಲಿಯೇ ನಡೆದು ಸರಕಾರೀ ವಕೀಲನಾಗಿ ನಿಂತು ಶಾಮಣ್ಣನನ್ನು ಜೇಲಿಗೆ ಕಳಿಸುತ್ತಾನೆ. ಆದರೆ ಇದು ಸರಿಯೇ ಎಂಬ ಪ್ರಶ್ನೆ ಅವನ ಅಂತಃಕರಣವನ್ನು ಕಲಕಿದಾಗ ತನ್ನ ಕೈಗೆ ಬಂದಿದ್ದ ನಿರ್ಮಲೆಯ ಪ್ರೇಮವನ್ನು ತನ್ನ ನೋವು ಮರೆಯಲಿಕ್ಕೊಂದು ಮಾದಕವಾಗಿ ಬಳಸುತ್ತಾನೆ. ಶಾಮಣ್ಣನ ಮುಪ್ಪಿನ ತಾಯಿ ಮಗನು ಸೆರೆಯಾದ್ದನ್ನು ಕೇಳಿ ಹೌಹಾರಿ ಮುಂಬಯಿಗೆ ಬಂದು ಮಗನ ಮೋರೆ ಕಾಣದೆ ಕೊರಗಿ ತೀರಿಹೋಗುತ್ತಾಳೆ. ನಿರ್ಮಲೆಯ ನೂತನ ಪ್ರಣಯವು ಮುಡಿದ ಹೂವಿನಂತೆ ಬಾಡಿ ಅನಿರೀಕ್ಷಿತ ಮಾತೃಪದದಲ್ಲಿ ಪರಿಣಮಿಸಿದಾಗ ಅವಳ ಬಾಳು ಕಹಿಯಾಗುತ್ತದೆ. ಇಲ್ಲಿ ಮುರಿದು ಮೂರಾಬಟ್ಟೆಯಾದ ಮೂರು ಆಶೆಗಳು : 1) ನಿರ್ಮಲೆಯ ಪ್ರಣಯ ಸ್ವಪ್ನದ್ದು; 2) ಅವಳಿಲ್ಲದೆ ರಾಮಣ್ಣನ ಲೌಕಿಕ ಯಶಸ್ಸಿನ ಉದ್ದೇಶಹೀನತೆಯದು ; 3) ಶಾಮಣ್ಣ ತನ್ನ ಪಣವನ್ನು ಮೀರಿ ಜೈಲಿನಿಂದ ಬಿಡುಗಡೆ ಪಡೆದರೂ ತಾಯಿಯ ಮೋರೆ ನೋಡಲಾಗದ್ದು.

ಇದರ ರಚನೆಯಲ್ಲಿ ಖಾಂಡೇಕರರ ರೀತಿಯ ಪ್ರಭಾವ ಸ್ಪಷ್ಟವಾಗಿದೆ. ಆದರೆ ಖಾಂಡೇಕರರ ಬರವಣಿಗೆಯಲ್ಲಿ ಒಂದು ವಾದದ ಸಮರ್ಥನೆಯ ಮೇಲಿದ್ದ ಒತ್ತು.

ಇನಾಮದಾರರ ಬರವಣಿಗೆಯಲ್ಲಿ ಪಾತ್ರಗಳ ಸುಖದುಃಖದ ಮೇಲಿರುತ್ತದೆ. ಖಾಂಡೇಕರರ ಪಾತ್ರಗಳು ಸೂತ್ರದ ಬೊಂಬೆಗಳೆಂದು ಹೇಳಲಾಗದಿದ್ದರೂ ನಾಟಕದಲ್ಲಿಯ ಪಾತ್ರಗಳೆಂದು ಹೇಳಬಹುದು. ನಟನೆಯನ್ನು ನಾವು ಮೆಚ್ಚಿದರೂ ಅವರು ಅತ್ತಾಗ ನಾವು ಅಳುವುದಿಲ್ಲ, ನಲಿದಾಗ ನಲಿಯುವುದಿಲ್ಲ. ಇನಾಮದಾರರ ಬರವಣಿಗೆಯಲ್ಲಿ ಸೂತ್ರಧಾರ 'ಅದೃಷ್ಟ'. ಅದೃಷ್ಟದ ಆಟವನ್ನು ಲೇಖಕರೇ ನಿಬ್ಬೆರಗಾಗಿ ವರ್ಣಿಸುತ್ತಾರೆ. ನಾವು ಕೇಳುತ್ತ (ಓದುತ್ತ) ಮೈಮರೆಯುತ್ತೇವೆ. ಇವರ ಕಾದಂಬರಿಗಳು ಯಾವ 'ಸಮಸ್ಯೆ'ಗಳನ್ನೂ ಮಂಡಿಸುವದಿಲ್ಲ. ಯಾರ ಯತ್ನಕ್ಕೂ ನಿಲುಕದ ಘಟನೆಗಳನ್ನು ನಿರೂಪಿಸುತ್ತವೆ. ಅವರ ಪ್ರಪಂಚದ ಆವರಣದ ಅರಿವಿದ್ದರೂ ನಾವು ಮುಖ್ಯವಾಗಿ ಕಾಣುವುದು ಆ ಆವರಣದಲ್ಲಿ ನಲಿದಾಡುವ, ಇಲ್ಲವೆ ತೊಳಲಾಡುವ ವ್ಯಕ್ತಿಗಳನ್ನು. ಅವರ ಒತ್ತು ಇರುವುದು On the heart of man.

❑ ❑ ❑

ಇವರ ಮುಂದಿನ ಕಾದಂಬರಿ 'ಕನಸಿನ ಮನೆ'ಗೆ ಮುನ್ನುಡಿಯನ್ನು ಬರೆಯುತ್ತ 'ಇಲ್ಲಿ ಹಿನ್ನೆಲೆಯ ವೈಶಾಲ್ಯವಿಲ್ಲ' ಎಂದು ಪ್ರೊ. ಮೂರ್ತಿರಾಯರು ಹೇಳಿರುವುದು ಇದನ್ನೇ ಎಂದು ತೋರುತ್ತದೆ. ಇನಾಮದಾರರ ಮೊದಲನೆಯ ಕಾದಂಬರಿಯನ್ನು ಕುರಿತು ನಾನೊಂದು ಮಾತು ಹೇಳಿದ್ದೆ : 'ನಿರ್ಮಲಗೆ ನೀವು ಮನಸೋತಿರುವ ಕಾರಣ ಅವಳನ್ನು ತುಚ್ಛಳೆಂದು ತೋರಿಸುವ ಯತ್ನ ಬೇಡ' ಎಂದು. ಹೀಗೆಯೇ ಎರಡನೆಯ ಕಾದಂಬರಿಯಲ್ಲಿ ಮತ್ತೆ ಅವರನ್ನು ಮೋಹಿಸಿರುವ ಪಾತ್ರ ಮೋಹಿನಿ. ಮೋಹಿನಿ ಮುಖ್ಯವಾಗಿ ಚೆಲುವೆ. ಅವಳ ತಂದೆ ತೀರಿದನಂತರ ತಾಯಿ ತನ್ನ ತಂದೆಯ ಮನೆಯಲ್ಲಿದ್ದು ಅವಳನ್ನು ಬೆಳೆಸಿದ್ದಾಳೆ. ಪುಣೆಯಂತಹ ಪಟ್ಟಣದಲ್ಲಿದ್ದ ಕಾರಣ ಕಾಲೇಜಿನ ಓದನ್ನೂ ಆರಂಭಿಸಿದ್ದಾಳೆ. ಆದರೆ ಅವಳ ಚೆಲುವು ಧನವಂತ ಕಾಮಿಗಳ ಮನ ಸೆಳೆಯುತ್ತದೆ. ಅವಳ ತಾಯಿ ಮತ್ತು ಅಜ್ಜ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ನೆನೆದು ತಮಗೆ ಅನುಕೂಲವೆಂದು ಕಂಡಲ್ಲಿ ಮದುವೆ ಏರ್ಪಾಡಿನಲ್ಲಿರುತ್ತಾರೆ. ಅವಳು ಒಪ್ಪುವುದಿಲ್ಲವೆಂದು ನೆರೆಹೊರೆಯವರ ಬಾಯಿಚಪಲಕ್ಕೆ ಈಡಾಗುತ್ತಾಳೆ. ಇದನ್ನು ತಪ್ಪಿಸಲಿಕ್ಕೆಂದು ಲಭ್ಯವಾದ ಅವಕಾಶಗಳಲ್ಲಿಯೇ ಉತ್ತಮವೆಂದು ಅವಳು ಕಾಲೇಜು ಅಭ್ಯಾಸ ನಿಲ್ಲಿಸಿ ಆನಂದನೊಡನೆ ಮದುವೆಯಾಗುತ್ತಾಳೆ. ಆನಂದ ತನ್ನ ಶಿಕ್ಷಣವನ್ನು ಪೂರಯಿಸಿ ಮುಂಬಯಿಯಲ್ಲಿ ಒಂದು ನೆಲೆಗಾಣುವುದಕ್ಕೆ ತನ್ನ ಅಕ್ಕ ಮತ್ತು ಭಾವಂದಿರಿಗೆ ಋಣಿಯಾಗಿರುತ್ತಾನೆ. ಮದುವೆಯಾದ ಕೂಡಲೆ ಅವನು ಸಹಜವಾಗಿಯೇ ಮೋಹಿನಿಯನ್ನು ಕರೆದುಕೊಂಡು ಅಕ್ಕನ ಮನೆಯಲ್ಲಿಯೇ ಇರುತ್ತಾನೆ. ಅಕ್ಕನಿಗೆ ತನ್ನ ಹಿರಿತನದ ಅಧಿಕಾರ ನಡೆಯಿಸಬೇಕೆಂಬ ಚಪಲ. ಆನಂದನ ಅಣ್ಣ ಭಾಸ್ಕರನಿಗೆ ಅವಳ ಚೆಲುವಿನ ಮೇಲೆ ಪಾಪದೃಷ್ಟಿ. ಆನಂದ ಒಳ್ಳೆಯವನೇ ಆದರೂ ನಿಷ್ಠೂರಕ್ಕೆ ಹೆದರುವವ. ಈ ಮನೆಯಲ್ಲಿ ಮೋಹಿನಿಗೆ

ಸುಖವಿಲ್ಲೆಂದು ತಿಳಿದಾಗ ತನ್ನ ಮನೆಯನ್ನು ಬೇರೆಯಾಗಿ ಮಾಡಬೇಕೆಂದು ಮತ್ತೆ ಮತ್ತೆ ನಿರ್ಧರಿಸಿದರೂ ಆ ನಿರ್ಧಾರವನ್ನು ಕೃತಿಯಲ್ಲಿ ಇಳಿಸದೇ ಹೋಗುತ್ತಾನೆ. ಪತಿಯಲ್ಲಿ ಕನಸಿನ ಪ್ರಿಯಕರನನ್ನು ಕಾಣಬಯಸಿದ್ದ ಮೋಹಿನಿಗೆ ನಿರಾಶೆಯಾಗುತ್ತದೆ. ಮನೆಯಲ್ಲಿಯ ಅಸುಖವನ್ನು ಮರೆಯಲಿಕ್ಕೆಂದೋ, ಅರ್ಧಕ್ಕೆ ನಿಲ್ಲಿಸಿದ ಓದನ್ನು ಮುಗಿಸಿದರಾಯಿತೆಂದೋ, ತನಗೆ ಸ್ವತಂತ್ರಳಾಗಿ ಬಾಳುವ ಯೋಗ್ಯತೆಯನ್ನು ಪಡೆಯಲೆಂದೋ, ಅವಳು ಅರ್ಧಕ್ಕೆ ನಿಲ್ಲಿಸಿದ ಕಾಲೇಜು ಓದನ್ನು ಮುಂದುವರಿಸುತ್ತಾಳೆ. ಅವಳು ರೈಲಿನಲ್ಲಿ ಹೋಗುವಾಗ ಬರುವಾಗ ಅವಳ ಚೆಲುವಿನಿಂದ ಆಕರ್ಷಿತನಾದ ವಸಂತನಿಗೆ ಅವಳ ಮುಖ ಆಗಾಗ ಮ್ಲಾನವಾಗಿರುವುದನ್ನು ಕಂಡು ಅವಳಲ್ಲಿ ಕುತೂಹಲವುಂಟಾಗುತ್ತದೆ. ಅವಳ ಚೆಲುವು ಅವನು ಕಾಲೇಜಿನಲ್ಲಿದ್ದಾಗಲೇ ಅವನ ಪ್ರೀತಿಪಾತ್ರಳಾಗಿದ್ದ ಮಾಲತಿಯ ಸ್ಮರಣೆಯನ್ನು ತರುತ್ತದೆ. ಅವನ ಕಾಲೇಜು ಮುಗಿಯುತ್ತಿದ್ದಂತೆಯೇ ಹಠಾತ್ತಾಗಿ ಅವನ ತಾಯಿಯೂ ಮಾಲತಿಯೂ ತೀರಿಹೋಗಿ ಅವನ ಪ್ರೀತಿ ನಿರ್ಗತಿಕವಾಗಿರುತ್ತದೆ. ಅವನ ಮತ್ತು ಮೋಹಿನಿಯ ನಡುವೆ ಕುತೂಹಲದಿಂದ ಆರಂಭವಾದ ಪರಿಚಯ ಪರಸ್ಪರ ಸಹಾನುಭೂತಿಯ ಮಾರ್ಗವಾಗಿ ಗಾಢವಾದ ಆಕರ್ಷಣೆಯಲ್ಲಿ ಪರ್ಯವಸಾನವಾಗುತ್ತದೆ. ಮೊದಲಿನಿಂದಲೂ ಅಷ್ಟಕ್ಕಷ್ಟೆ ಎಂಬಂತೆ ಆನಂದನೊಡನಿದ್ದ ವಿವಾಹಬಂಧನ ಇನ್ನೂ ಹೆಚ್ಚೆಚ್ಚು ಅಪ್ರಿಯವಾಗುತ್ತದೆ. ಆನಂದನ ಅಣ್ಣ ಭಾಸ್ಕರನು ತನ್ನ ದುಷ್ಟಸಂಕಲ್ಪವನ್ನು ಸಾಧಿಸಲಾಗದ ದ್ವೇಷದಿಂದ ಉರಿಯುತ್ತಿದ್ದಾಗ ವಸಂತ-ಮೋಹಿನಿಯರ ಸಲಿಗೆ ಅವನ ಕಣ್ಣಿಗೆ ಬೀಳುತ್ತದೆ. ಅದನ್ನೇ ಅವನು ದೊಡ್ಡದು ಮಾಡಿ ಆನಂದನಲ್ಲಿ ಅವಳ ಬಗ್ಗೆ ಸಂಶಯ ಬೀಜವನ್ನು ಬಿತ್ತುತ್ತಾನೆ. ಆನಂದನು ಕ್ರಮೇಣ ಮೋಹಿನಿಯು ತನ್ನನ್ನು ತಾತ್ಸಾರದಿಂದ ಕಾಣುವದು ಮಾತ್ರವಲ್ಲದೆ ತನ್ನ ಶರೀರಸಂಬಂಧವನ್ನೂ ವಿರೋಧಿಸುವುದನ್ನು ಕಂಡು ಭಾಸ್ಕರನ ಚಾಡಿಯ ಮಾತನ್ನು ಪೂರ್ತಿಯಾಗಿ ನಂಬುತ್ತಾನೆ. ಕೊನೆಗೆ ಒಂದು ದಿನ ಭಾಸ್ಕರನ ಎದುರಿನಲ್ಲಿಯೇ ಆನಂದ-ಮೋಹಿನಿ, ಆನಂದನ ಅಕ್ಕ-ಭಾವ ಎಲ್ಲರದೂ ಮುಖಾಮುಖಿ ಆಗಿ, ಮೋಹಿನಿ ತನ್ನ ಮಾಂಗಲ್ಯದ ಚಿಹ್ನೆಗಳನ್ನೆಲ್ಲ ಕಳಚಿ ಆನಂದನ ಮುಖಕ್ಕೆಸೆದು ಮನೆಬಿಟ್ಟು ಹೋಗುತ್ತಾಳೆ. ಅವಳನ್ನು ಹುಡುಕಿಕೊಂಡು ಭಾಸ್ಕರ ಆನಂದನನ್ನು ಕರೆದುಕೊಂಡು ವಸಂತನ ಮನೆಗೆ ಹೋಗುತ್ತಾನೆ. ಭಾಸ್ಕರನ ಊಹೆಯಂತೆ ಅಲ್ಲಿ ಮೋಹಿನಿ ಇಲ್ಲದಿರುವುದನ್ನು ಕಂಡು, ವಸಂತನ ಸ್ಪಷ್ಟ ಮಾತುಗಳನ್ನು ಕೇಳಿ ಆನಂದನ ಭ್ರಮನಿರಸನವಾಗುತ್ತದೆ. ಆದರೆ ಅವನ ಮನೆ ಮುರಿದದ್ದು ಮುರಿದೇಹೋಯಿತು. ಮೋಹಿನಿ ತನ್ನ ತಾಯಿಯ ಮನೆಗೆ ಹೋಗಿ ವಸಂತನಿಗೆ ಒಂದು ದೀರ್ಘವಾದ ಪತ್ರವನ್ನು ಬರೆದು ನಡೆದದ್ದನ್ನೆಲ್ಲ ವಿವರಿಸಿ ತಾನು ಮುಂದೆ ಆನಂದನೊಡನೆ ಬಾಳುವುದು ಸಾಧ್ಯವಿಲ್ಲೆಂದೂ, ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವೆನೆಂಬ ನಿಶ್ಚಯವನ್ನೂ ತಿಳಿಸುತ್ತಾಳೆ. ಲೇಖಕರ ಮೊದಲಿನ ಯೋಜನೆಯಂತೆ 'ಕನಸಿನ ಮನೆ' ಎಂಬ ಕಾದಂಬರಿಯ ಕತೆ ಇಲ್ಲಿಗೆ ಮುಗಿಯಿತು.

ಈ ಕತೆಯ ಬೀಜ ಜಾನ್ ಗಾಲ್ಸವರ್ದಿಯವರ ಕಾದಂಬರಿ 'ಮ್ಯಾನ್ ಆಫ್ ದಿ ಪ್ರಾಪರ್ಟಿ' ಎಂಬಲ್ಲಿಯದು. ಆದರೆ ಕತೆಯನ್ನು ಬೆಳೆಸುವುದಕ್ಕೆ ಅಲ್ಲಿದ್ದ ಅನುಕೂಲತೆಗಳು ಇಲ್ಲಿಲ್ಲ. ಅಲ್ಲಿ ಜೀವನದ ಪ್ರತಿಯೊಂದು ಅಂಶಕ್ಕೂ ಹಣದ ಬೆಲೆ ಕಟ್ಟಿ ಅದನ್ನು ಆಸ್ತಿಯೆಂದು ಗಳಿಸಿ ತನ್ನ ವಶದಲ್ಲಿಟ್ಟುಕೊಳ್ಳಬೇಕೆಂಬ ಮನುಷ್ಯ ತನ್ನ ದೃಷ್ಟಿಯಲ್ಲಿ ಯಶಸ್ವಿಯಾದರೂ 'ಮಲಯಾನಿಲ ಮನೋಜಕೌಮುದಿ'ಯಂತಹ ಬೆಲೆಗಟ್ಟಲಾಗದ ಸುಖಗಳಿಗೆ ಹೇಗೆ ಎರವಾಗುತ್ತಾನೆ ಎಂಬುದನ್ನು ತೋರಿಸುವಲ್ಲಿ ಕತೆಯು ಬಹು ವಿಸ್ತಾರವಾದ ಕೌಟುಂಬಿಕ - ಸಾಮಾಜಿಕ ಹಿನ್ನೆಲೆಯಲ್ಲಿ ಬೆಳೆಯುತ್ತದೆ. ಅಲ್ಲಿ ಸೋಮ್ಸನ ಚೆಲುವೆಯಾದ ಹೆಂಡತಿ ಐರೀನ್ ಏಕೆ ವಿತುಷ್ಟಳಾಗುತ್ತಾಳೆ, ಚೆಲುವೆಯಾದ ಹೆಂಗಸು ಗಂಡನಿಂದ ಏನನ್ನು ಬಯಸುತ್ತಾಳೆ ಎಂಬುದರ ವಿವರಣೆ ಆ ಕತೆಯ ದೊಡ್ಡ ಮರದ ಆಸರೆಯಲ್ಲಿ ಒಂದು ಚೆಲುವಿನ ಬಳ್ಳಿಯಾಗಿ ಬೆಳೆಯುತ್ತದೆ. ಆದರೆ ಇನಾಮದಾರರು ಈ ಕತೆಗೆ ಕೈಯಿಕ್ಕಿದಾಗ (1947) ಅವರ ವಯಸ್ಸಿನ ಮತ್ತು ಅನುಭವದ ಪರಿಮಿತಿಯಲ್ಲಿ ಇಷ್ಟು ದೊಡ್ಡ ಹಿನ್ನೆಲೆಯ ರಚನೆಯನ್ನು ನಿರೀಕ್ಷಿಸುವಂತಿರಲಿಲ್ಲ. ಆದ್ದರಿಂದ ಇಲ್ಲಿ ಮೋಹಿನಿಯ ಆಕರ್ಷಣೆಯೇ ಕತೆಯ ಮುಖ್ಯವಸ್ತುವಾಯಿತು. ಪ್ರಣಯ ಸನ್ನಿವೇಶಗಳ ವರ್ಣನೆಯಲ್ಲಿಯೂ ಸರಸಸಲ್ಲಾಪಗಳ ಜೋಡಣೆಯಲ್ಲಿಯೂ ಇನಾಮದಾರರಿಗೆ ಕರಗತವಾದ ಅದ್ಭುತ ಕೌಶಲವು ಈ ಕತೆಯನ್ನು 250 ಪುಟಗಳಷ್ಟು ಬೆಳೆಸಿದರೂ ಓದುಗರಿಗೆ ಸಾಲದೆನ್ನಿಸುತ್ತದೆ. ನಮ್ಮ ಸಮಕಾಲೀನ ಸಾಕ್ಷರತೆಯ ಪ್ರಸಾರದ ಸನ್ನಿವೇಶದಲ್ಲಿ ಓದುಗರೆಂದರೆ ಹೆಚ್ಚಾಗಿ ಯುವಾವಸ್ಥೆಯಲ್ಲಿದ್ದವರೇ. ಆಬರಲ್ಲಿಯೂ ಆ ವರ್ಗಕ್ಕೆ ಹೊಸತಾಗಿ ಪ್ರವೇಶ ಪಡೆದವರು ಯುವತಿಯರೇ. ಅವರಿಗೆಲ್ಲ ಹಗಲುಗನಸಿನ ಸಾಹಿತ್ಯದಂತೆ ಪ್ರಿಯವಾದ ಸಾಹಿತ್ಯ ಇನ್ನಾವುದೂ ಇಲ್ಲ. ಆದರೆ ಹಿರಿಯ ವಯಸ್ಸಿನ ಓದುಗರು ಕುತೂಹಲಕ್ಕೆಂದು ಎತ್ತಿಕೊಂಡರೆ ಅವರಿಗೆ ಇಲ್ಲಿ ಕಾಣುವುದು ಕಲ್ಪನಾ ವಿಲಾಸ ಮತ್ತು ಭಾಷೆಯ ಚಮತ್ಕಾರ ಮಾತ್ರ. ಪಾತ್ರಗಳಲ್ಲಿ ಅವರಿಗೆ ಆನಂದನೊಬ್ಬ ಬಡಪಾಯಿ, ವಸಂತನೊಬ್ಬ ಅಧಿಕಪ್ರಸಂಗಿ.

4

ಕಾದಂಬರಿಯ ಜನಪ್ರಿಯತೆ ಲೇಖಕ ಇನಾಮದಾರರಿಗೆ ಹಿಡಿಸಿತಾದರೂ ವಿಮರ್ಶಕ ಪ್ರೊಫೆಸರ್ ಇನಾಮದಾರರಿಗೆ ಈ ಜಾಡಿನಲ್ಲಿ ಹೆಚ್ಚಿನ ವಿಸ್ತಾರವಾಗಲಿ, ಆಳವಾಗಲಿ ನಿಲುಕಲಾಗ ದ್ದೆಂದು ತೋರಿರಬಹುದು. ಇಲ್ಲದಿದ್ದರೆ ಇಷ್ಟು ಜನಪ್ರಿಯವಾಗಿದ್ದ ವಸ್ತುವನ್ನು ಅಲ್ಲಿಯೇ ಕೈಬಿಟ್ಟು ಮುಂದಿನ ಐದು ವರ್ಷಗಳಲ್ಲಿ ಸ್ವಂತ ಪ್ರೇರಣೆಯಿಂದ ಎರಡು, ಪಂಥ ಕಟ್ಟಿದ್ದಕ್ಕೆ ಒಂದು — ಹೀಗೆ ಮೂರು ಬೇರೆ ಬೇರೆ ದಾರುಣ ಕಾದಂಬರಿಗಳನ್ನು ಬರೆಯಬೇಕಾಗಿರಲಿಲ್ಲ.

ಇವುಗಳಲ್ಲಿ ಮೊದಲು ಬರೆದ ಕಾದಂಬರಿ 'ಶಾಪ' ; ಆದರೆ ಮೊದಲು ಪ್ರಕಟವಾದದ್ದು 'ವಿಜಯಯಾತ್ರೆ'. ''ಓದುಗರಾಗಲಿ ವಿಮರ್ಶಕರಾಗಲಿ ಯಾವೊಂದು ಬಗೆಯ ಪ್ರತಿಕ್ರಿಯೆಯನ್ನೂ ಈ ಕಾದಂಬರಿಯ ಬಗೆಯಲ್ಲಿ ತರಲಿಲ್ಲ'' ಎಂದು ಸ್ವತಃ ಇನಾಮದಾರರೇ 'ವಿಜಯಯಾತ್ರೆ'ಯ ಮೂರನೆಯ ಮುದ್ರಣದ ಪ್ರಸ್ತಾವನೆಯಲ್ಲಿ ಬರೆದಿದ್ದಾರೆ. ಮೋಹಿನಿಗೆ ಮರುಳಾದ ಹೊಸ ಪೀಳಿಗೆಯ ಓದುಗರಿಗೆ ಈ ಕತೆಯಿಂದ ನಿರಾಶೆಯಾಗಿದ್ದರೆ ಸೋಜಿಗವಿಲ್ಲ!

'ವಿಜಯಯಾತ್ರೆ'ಯ ರಾಜಕೀಯ ಮತ್ತು ಸಾಮಾಜಿಕ ಹಿನ್ನೆಲೆ 'ಮೂರಾಬಟ್ಟೆ'ಯದರಷ್ಟೇ ವಿಸ್ತಾರವಾಗಿದ್ದರೂ ಇಲ್ಲಿ ಲೇಖಕರು ಕಲ್ಪಿಸಿದ ರಚನೆಯಿಂದಾಗಿ ಆ ವಿಸ್ತಾರ ಗೋಚರಿಸುವುದಿಲ್ಲ. ಆದರೆ ಅವರ ಸಂಕೋಚದಿಂದ ಕತೆಯ ದಾರುಣತೆ ಇನ್ನೂ ತೀವ್ರವಾಗುತ್ತದೆ. ಈ ಕತೆ ಪ್ರಾರಂಭವಾಗುವದು ಮೊದಲನೆ ಸ್ವಾತಂತ್ರ್ಯೋತ್ಸವದ ಮುಂಚಿನ ದಿನ. ಕಾಲೇಜಿಗೆ ಶರಣುಹೊಡೆದು ಸ್ವಾತಂತ್ರ್ಯ ಸಮರದ ಯೋಧನಾಗಿದ್ದ ವಿಜಯ ಮತ್ತೆ ಮತ್ತೆ ಜೈಲಿಗೆಹೋಗಿ ತನ್ನ ಆರೋಗ್ಯವನ್ನು ಪೂರ್ಣವಾಗಿ ಕಳೆದುಕೊಂಡು ಊರಿನ ದೊಡ್ಡಾಸ್ಪತ್ರೆಯಲ್ಲಿದ್ದಾನೆ. ಅವನ ಮನಸ್ಸು ವಿಷಣ್ಣವಾಗಿದೆ. ಒಂದು ಕಾಲಕ್ಕೆ ಘನವಾದ ಧ್ಯೇಯೋದ್ದೇಶಗಳನ್ನು ಘೋಷಿಸಿ ರಣಕ್ಕಿಳಿದವರೇ ವಿಜಯದ ದಿನ ಸಮೀಪಿಸಿದಂತೆ ಜಾತಿವ್ಯಕ್ತಿಗಳ ಸ್ವಾರ್ಥಕ್ಕೆ, ಒಣ ಪ್ರತಿಷ್ಠೆಗೆ ಪಕ್ಕಾಗಿ ದೇಶದ ಮುಂದಿರುವ ಭವ್ಯ ಭವಿಷ್ಯದ ಅವಕಾಶಗಳನ್ನು ಕಡೆಗಣಿಸುವಂತಾಗಿದ್ದಾರೆ. ಸಂಗ್ರಾಮದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದವರೇ ಇಂದು ನಾ ಮುಂದೆ ತಾ ಮುಂದೆ ಎಂದು ತಮ್ಮ ಸಂಗಡಿಗರನ್ನು ಹಿಂದೂಡಿ ಕಾಲಲ್ಲಿ ಮೆಟ್ಟಿ ಧನದೌಲತ್ತುಗಳಿಗೆ ಕೈ ಚಾಚುತ್ತಿದ್ದಾರೆ. ವಿಜಯನ ಸಹಪಾಠಿಯಾಗಿದ್ದ ಮನೋರಮೆ ಮುಂದೆ ವೈದ್ಯಶಾಸ್ತ್ರದ ವ್ಯಾಸಂಗ ಮುಗಿಸಿ ಇಂದು ಅವನಿದ್ದ ಆಸ್ಪತ್ರೆಯ RMO ಆಗಿದ್ದಾಳೆ. ಇಲ್ಲಿ ಅವರಿಬ್ಬರ ನಡುವೆ ಹಿಂದೆ ಕಾಲೇಜಿನಲ್ಲಿ ಚಿಗುರಿದ್ದ ಪ್ರೀತಿ ಮತ್ತೆ ಕಾಣಿಸಿಕೊಂಡರೂ ವಿಜಯನಿಗೆ ಜೀವನದಲ್ಲಿಯೇ ತೀವ್ರವಾದ ನಿರಾಶೆಯುಂಟಾಗಿದೆ. ಈ ನಿರಾಶೆಯ ಕತೆಯನ್ನು ಅವನು ತನ್ನ ದಿನಚರಿಯಲ್ಲಿ ಬರೆದು ಬಚ್ಚಿಟ್ಟುಕೊಂಡದ್ದನ್ನು ಕೊನೆಯ ದಿನ ಮನೋರಮೆಯ ಕೈಗೆ ಕೊಡುತ್ತಾನೆ. ವಿಜಯನಲ್ಲಿ ಬದುಕಬೇಕೆಂಬ ಆಸೆ ಕ್ಷೀಣವಾಗುತ್ತಿದ್ದಂತೆ ಮನೋರಮೆಯಲ್ಲಿ ಅವನನ್ನು ಬದುಕಿಸಿಕೊಳ್ಳಬೇಕೆಂಬ ಯತ್ನ ಬಲಪಡುತ್ತದೆ. ಕತೆಯಲ್ಲಿಯ ಮೊದಲನೆಯ ದಿನ ಅಂದೇ ರಾತ್ರಿ ನಡೆಯಲಿರುವ ವಿಜಯೋತ್ಸವದ ಸಿದ್ಧತೆ ನಡೆದಿರುತ್ತದೆ. ವಿಜಯನ ಮಟ್ಟಿಗೆ ಇಂದಿನವರೆಗೆ ತಾನು ಜೀವ ಹಿಡಿದುಕೊಂಡು ಇದ್ದದ್ದಕ್ಕೆ ಅಂದಿನ ಸಮಾರಂಭದಲ್ಲಿ ಆಳರಸರ ಧ್ವಜವನ್ನಿಳಿಸಿ ನಮ್ಮ ರಾಷ್ಟ್ರಧ್ವಜವನ್ನೇರಿಸುವುದನ್ನು ನೋಡಿದರೆ ಸಾಕು, ಮುಂದೆ ಬದುಕುವ ಆಶೆ ತನಗಿಲ್ಲ ಎಂದುಕೊಂಡಿರುತ್ತಾನೆ. ಮನೋರಮೆ ಅವನ ದೇಹಸ್ಥಿತಿಯನ್ನು ಸೂಕ್ಷ್ಮವಾಗಿ ಲಕ್ಷಿಸಿ ಅವನಿಗೆ ಸಮಾಧಾನ

ಹೇಳುತ್ತಿರುತ್ತಾಳೆ. ಅಂದು ಮಧ್ಯಾಹ್ನ ಕಳೆದ ಮೇಲೆ ಅನಿರೀಕ್ಷಿತವಾಗಿ ಗಾಳಿ ಗುಡುಗು ಮಳೆ ಪ್ರಾರಂಭವಾಗುತ್ತದೆ. ಅಂಗಳದಲ್ಲಿ ಧ್ವಜಸ್ತಂಭದ ಹತ್ತಿರ ಮಾಡಿದ ಏರ್ಪಾಟುಗಳು ಅಸ್ತವ್ಯಸ್ತವಾಗುತ್ತವೆ. ಕೊನೆಗೆ ಒಂದು ಹಾಲಿನಲ್ಲಿಯೇ ಆ ಸಮಾರಂಭವನ್ನು ನೆರವೇರಿಸುವುದೆಂದು ಅಲ್ಲಿ ಎಲ್ಲರೂ ಸೇರುತ್ತಾರೆ. ವಿಜಯನು ಅಸಹಾಯನಾಗಿ ಮಲಗಿದ್ದಲ್ಲಿಯೇ ಬ್ಯಾಂಡಿನ ಸಂಗೀತವನ್ನು ಕೇಳಿ ಚಕಿತನಾಗುತ್ತಾನೆ. 'ವಂದೇ ಮಾತರಂ' ಹಾಡು ಕೇಳಿಬಂದಾಗ ಅವನು ಆವೇಶದಿಂದ ಎದ್ದು ಮಳೆಯಲ್ಲಿಯೇ ತೆವಳಿಕೊಂಡು ಹೋಗಿ ಅಂಗಳದಲ್ಲಿ ಒಂಟಿಯಾಗಿದ್ದ ಧ್ವಜಸ್ತಂಭದ ಹತ್ತಿರ ತಲುಪಿ ಧ್ವಜದ ಹಗ್ಗವನ್ನೆಳೆದು ಎಚ್ಚರದಪ್ಪಿ ಅಲ್ಲೇ ಬಿದ್ದು ಅಸುವನ್ನು ನೀಗುತ್ತಾನೆ.

ಇನಾಮದಾರರು ಒಂದು ದೊಡ್ಡ ಕಾದಂಬರಿಯ ವಸ್ತುವನ್ನು ಒಂದೇ ದಿನದ ಒಂದೇ ಸ್ಥಳದ ಚೌಕಟ್ಟಿನಲ್ಲಿ ಸೇರಿಸಿ ಒಂದು ನೀಳ್ಗತೆಯ ಅಳತೆಗೆ ಇಳಿಸಿದ್ದಾರೆ. ಕಾದಂಬರಿಯಲ್ಲಿ ವಿಸ್ತಾರವಾಗಿ ಬೆಳೆದು ಬೇರೊಂದು ಪರಿಣಾಮವನ್ನು ಸಾಧಿಸುವ ವಿಷಾದ ಉಲ್ಲಾಸಗಳು ಇಲ್ಲಿಯ ಸಂಕೋಚದ ಪರಿಣಾಮವಾಗಿ ಒಂದು ದುರಂತ ಖಂಡಕಾವ್ಯದ ಶಕ್ತಿಯನ್ನು ಪಡೆಯುತ್ತವೆ.

❑ ❑ ❑

ಆದಾವ ಕಾರಣವೋ, ಈ ಅವಧಿಯಲ್ಲಿ ಇನಾಮದಾರರ ಮನಸ್ಸು ದುರಂತ ಕಥೆಗಳನ್ನೇ ನೆನೆಯುತ್ತಿದ್ದಂತೆ ತೋರುತ್ತದೆ. 'ವಿಜಯಯಾತ್ರೆ'ಗೆ ಮೊದಲೇ 'ಶಾಪ' ಬರೆದಾಗಿದ್ದಿತೆಂದು ಹೇಳಿತು. ಇಲ್ಲಿ ಕಥೆ ಆರಂಭವಾಗುವ ಮೊದಲೇ ಮಾಧವನ ತಂದೆ ತೀರಿ ಹೋಗಿದ್ದಾರೆ. ತಮ್ಮ ಜೀವಮಾನದಲ್ಲಿ ಅವರು ತುಂಬಾ ಹಣವಂತರಾಗಿ ಉದಾರಿಯೆಂದು ಹೆಸರು ಗಳಿಸಿ ಬಡವರನೇಕರಿಗೆ ನೆರವಾಗಿ ದೊಡ್ಡಸ್ತನದಲ್ಲಿ ಬಾಳಿದರು. ಅವರ ಮರಣದ ರಹಸ್ಯ ತಿಳಿದವರಿಗೆ ಅವರ ಸಿರಿವಂತಿಕೆಯ ಮೂಲ ತಮ್ಮ ಬ್ಯಾಂಕಿನ ಹಣದ ದುರುಪಯೋಗದಲ್ಲಿತ್ತೆಂಬುದು ತಿಳಿದಿದ್ದರೂ ಅದನ್ನು ಎತ್ತಿ ಆಡುತ್ತಿರಲಿಲ್ಲ. ಅವರ ಔದಾರ್ಯದ ಮುಂದೆ ಅದೊಂದು ಅಪರಾಧವೇ ಅಲ್ಲವೆಂಬಂತೆ ಮಾತನಾಡುತ್ತಿದ್ದರು. ಅವರ ಮರಣದ ಕಾಲಕ್ಕೆ ಮಾಧವ ಇನ್ನೂ ವಿದ್ಯಾರ್ಥಿದಶೆಯಲ್ಲಿದ್ದ ಕಾರಣ ಅವನೂ ಅವನ ತಾಯಿಯೂ ಚಿಕ್ಕಪ್ಪನ ಆಶ್ರಯದಲ್ಲಿಯೇ ಇರಬೇಕಾಯಿತು. ಈ ಚಿಕ್ಕಪ್ಪ ಅಣ್ಣನ ಆಸ್ತಿಯೆಲ್ಲ ತನ್ನದೇ ಎಂಬಂತೆ ವ್ಯವಹರಿಸುತ್ತ ಮಾಧವನೂ ಅವನ ತಾಯಿಯೂ ತನ್ನ ಆಶ್ರಯದಲ್ಲಿ ಅನ್ನಕ್ಕೆ ಸೇರಿದವರೆಂಬಂತೆ ವ್ಯವಹರಿಸುತ್ತಿದ್ದನು. ಆಸ್ತಿಯ ನಿಜವಾದ ಒಡೆತನದ ವಿಚಾರಗಳೆಲ್ಲ ಮಾಧವನ ಸೋದರಮಾವ ಭೀಮಣ್ಣನಿಗೆ ಗೊತ್ತಿದ್ದರೂ ಮಾಧವನಿಗೆ ಅದರ ಸುಳಿವಿದ್ದರೂ, ಅದನ್ನೆತ್ತಿದರೆ ತಂದೆಯ ಮರಣದ ರಹಸ್ಯವನ್ನು ಕೆದಕಬೇಕಾದೀತೆಂಬ ಸಂಕೋಚದಿಂದ ಮಾಧವನೂ ಅವನ ತಾಯಿಯೂ ಕಾಲಕಳೆಯುತ್ತಿದ್ದರು. ಮಾಧವನಿಗೆ ಅದೇ ಕಾಲೇಜಿನ ವಿದ್ಯಾರ್ಥಿನಿ ಸರೋಜಿನಿ ಎಂಬ

ಚೆಲುವೆಯ ಪರಿಚಯವಾಗುತ್ತದೆ. ಕಾಲೇಜಿನ ವಾರ್ಷಿಕೋತ್ಸವದಲ್ಲಿ ಸರೋಜಿನಿಯ ನೃತ್ಯದ ಕಾರ್ಯಕ್ರಮ ಅದ್ಭುತವಾದ ಯಶಸ್ಸು ಪಡೆದು, ಅದನ್ನು ಏರ್ಪಡಿಸಿ ತನ್ನನ್ನು ಪ್ರೋತ್ಸಾಹಿಸಿ ತನ್ನ ಯಶಸ್ಸಿಗೆ ಕಾರಣನಾದವನು ಮಾಧವನೇ ಎಂದು ಅವಳಿಗೂ ಅವನಲ್ಲಿ ಅಭಿಮಾನವುಂಟಾಗುತ್ತದೆ.

ಸರೋಜಿನಿಯ ತಾಯಿ ಇನ್ನೊಂದೂರಲ್ಲಿ ವೇಶ್ಯಾವೃತ್ತಿಯನ್ನು ನಡೆಸಿ ಅದರಿಂದ ಪಡೆದ ರೋಗಗಳಿಂದ ಅಕಾಲದಲ್ಲಿ ಮುಪ್ಪಾಗಿ ತನ್ನ ಹಳೆಯ ವೈಭವವನ್ನು ಸಾರುತ್ತಿದ್ದ ದೊಡ್ಡ ಮನೆಯಲ್ಲಿಯೇ ಏಕಾಕಿಯಾಗಿ ಕಷ್ಟಜೀವನ ನಡೆಸುತ್ತಿದ್ದಾಳೆ. ಸರೋಜಿನಿಯ ಸ್ಥಳೀಯ ಪಾಲಕನೆನಿಸಿದ ವಕೀಲ ಗೋವಿಂದಗೌಡನು ಅವಳನ್ನು ಇಂದಿಲ್ಲ ನಾಳೆ ತನ್ನ ವಶದಲ್ಲಿ ಪಡೆಯಬೇಕೆಂಬ ಆಶೆಯಿಂದ ಅವಳ ಖರ್ಚಿಗೂ ಅವಳ ತಾಯಿಯ ಔಷಧೋಪಚಾರಕ್ಕೂ ಹಣ ಒದಗಿಸುತ್ತಿದ್ದಾನೆ. ಸರೋಜಿನಿ ತನ್ನ ತಾಯಿಯ ವೃತ್ತಿಗೆ ಹೇಸಿ ಒಂದಿಲ್ಲೊಂದು ದಿನ ಆ ಭೂತಕಾಲವನ್ನು ಮರೆತು ತಾನು ಹೊಸ ಜೀವನವನ್ನು ಆರಂಭಿಸಬೇಕೆಂಬ ಆಶೆಯಿಂದ ತನ್ನ ಕಾಲೇಜು ಅಭ್ಯಾಸವನ್ನು ಮುಂದುವರಿಸುತ್ತಿರುತ್ತಾಳೆ. ಈ ಹೊಸ ಜೀವನದ ಆಶೆಯನ್ನು ಅವಳು ಮಾಧವನ ಪರಿಚಯದಲ್ಲಿ ಕಂಡಿದ್ದಾಳೆ. ಮಾಧವನಿಗೂ ಅವಳ ಹಿಂದಿನ ಪರಂಪರೆ ತಿಳಿಯದ್ದರಿಂದ ಅವಳನ್ನು ಪ್ರೋತ್ಸಾಹಿಸುತ್ತಾನೆ.

ಸರೋಜಿನಿ–ಮಾಧವರ ವ್ಯವಹಾರಗಳ ಸುಳಿವು ಗೋವಿಂದಗೌಡನಿಗೆ ತಿಳಿದಾಗ ಅವನು ತನಗೆ ತಿಳಿದದ್ದನ್ನೆಲ್ಲಾ ಮಾಧವನ ಚಿಕ್ಕಪ್ಪನಿಗೆ ತಿಳಿಸುತ್ತಾನೆ. ಮಾಧವನಿಗೂ ಚಿಕ್ಕಪ್ಪನಿಗೂ ಈ ಸಂದರ್ಭದಲ್ಲಿ ಮಾತು ನಡೆದು ''ಎಷ್ಟಾದರೂ ನೀನು ನಿಮ್ಮಪ್ಪನ ಮಗನೇ'' ಎಂದು ಚಿಕ್ಕಪ್ಪ ಹೇಳಿದ ಮಾತು ಮಾಧವನ ಎದೆಗೆ ಇರಿಯುತ್ತದೆ. ಪರಿಣಾಮವಾಗಿ ಮಾಧವ ಚಿಕ್ಕಪ್ಪನ ಮನೆಬಿಟ್ಟು ಸೋದರಮಾವನ ಊರಿಗೆ ಹೋಗಿ ಅಲ್ಲಿಯೇ ಓದಿ ಪರೀಕ್ಷೆ ಮುಗಿಸಿ ಮುಂಬಯಿಗೆ ಹೋಗಿ ಉದ್ಯೋಗವನ್ನು ಹುಡುಕುತ್ತಾನೆ. ತನ್ನ ತಂದೆಯ ಪಾಪದ ಆಸ್ತಿಯೇ ತನಗೆ ಬೇಡವೆಂದು ದೂರ ಹೋಗುತ್ತಾನೆ.

ಈ ನಡುವೆ ಸರೋಜಿನಿಯ ತಾಯಿಯ ರೋಗ ಉಲ್ಬಣಿಸಿ ಹೆಚ್ಚಿನ ಚಿಕಿತ್ಸೆಗಾಗಿ ಅವಳನ್ನೂ ಸರೋಜಿನಿಯನ್ನೂ ಕರೆದುಕೊಂಡು ಗೋವಿಂದಗೌಡ ಮುಂಬಯಿಗೆ ಬರುತ್ತಾನೆ. ಮುಂಬಯಿಯಲ್ಲಿ ಮಾಧವನ ವಿಳಾಸ ಸರೋಜಿನಿಗೆ ತಿಳಿದಿದ್ದರೂ ಆಕೆಯದು ಮಾಧವನಿಗೆ ತಿಳಿಯದು. ಅದನ್ನು ತಿಳಿಸಿ ಗೋವಿಂದಗೌಡನ ಕಣ್ಣು ತಪ್ಪಿಸಿ ಬರೆದ ಪತ್ರ ಗೌಡನ ಕೈಗೆ ಸಿಕ್ಕಿಬೀಳುತ್ತದೆ. ಸರೋಜಿನಿಯ ತಾಯಿ ಆಸ್ಪತ್ರೆ ಸೇರಿದ್ದರಿಂದ ವಸತಿಗೃಹದಲ್ಲಿ ಸರೋಜಿನಿ ಒಬ್ಬಳೇ ಆಗುತ್ತಾಳೆ. ಇಂತಹ ಅವಕಾಶಕ್ಕೆ ಕಾಯುತ್ತಿದ್ದ ಗೌಡ ಅವಳನ್ನು ಬಲಾತ್ಕರಿಸುತ್ತಾನೆ.

ಆಸ್ಪತ್ರೆಯಲ್ಲಿ ಅವಳ ತಾಯಿಯ ರೋಗನಿದಾನ ಮಾಡಿದ ಡಾಕ್ಟರುಗಳು

ಸರೋಜಿನಿಯ ರಕ್ತವನ್ನು ಪರೀಕ್ಷಿಸಿ ತಾಯಿಯ ರೋಗ ಆವಳಿಗೂ ರಕ್ತಗತವಾಗಿಯೇ ಬಂದಿದೆ ಎಂದು ಗೋವಿಂದಗೌಡನಿಗೆ ಹೇಳುತ್ತಾರೆ. ಅವನು ಗಾಬರಿಬಿದ್ದು ಈ ತಾಯಿ ಮಕ್ಕಳ ಸಂಬಂಧ ಕಡಿದುಕೊಂಡರೆ ಸಾಕೆಂದು ಅವರಿಬ್ಬರನ್ನೂ ಊರಿಗೆ ಮರಳಿಸಿಬಿಟ್ಟು ಹೊರಡುತ್ತಾನೆ. ಆ ಆಸ್ಪತ್ರೆಯಲ್ಲಿಯೇ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಶ್ರೀಧರನೆಂಬುವನು ಮಾಧವನ ಮಿತ್ರನಾಗಿದ್ದು ಅವನ ಕೋಣೆಯಲ್ಲಿಯೇ ಮಾಧವನಿದ್ದ ಕಾರಣ ಆಕಸ್ಮಿಕವೆಂಬಂತೆ ಈ ರಕ್ತಪರೀಕ್ಷೆಯ ಕತೆ ಮಾಧವನಿಗೆ ತಿಳಿಯುತ್ತದೆ.

ಮಾಧವನ ಚಿಕ್ಕಪ್ಪನೂ ಅವನ ಸಂಬಂಧ ಕಡಿದುಕೊಳ್ಳಲು ನಿರ್ಣಯಿಸಿ ತನ್ನಲ್ಲಿದ್ದ ಕಾಗದಪತ್ರಗಳನ್ನು ತೆಗೆದುಕೊಂಡು ಅವನ ಸೋದರಮಾವನಲ್ಲಿಗೆ ಬರುತ್ತಾನೆ. ಈ ಆಸ್ತಿಯ ವಿಭಜನೆಯ ಚರ್ಚೆ ನಡೆಯುತ್ತಿದ್ದಾಗ ಮಾಧವನ ತಂದೆಯು ಒಂದು ಘನವಾದ ತೋಟವನ್ನು ಸರೋಜಿನಿಯ ತಾಯಿಗೆ ಜೀವನಾಂಶವೆಂದು ಕೊಟ್ಟ ಸಂಗತಿ ಹೊರಬಿದ್ದು ಇದನ್ನು ತಿಳಿದ ಮಾಧವ ದಿಙ್ಮೂಢನಾಗುತ್ತಾನೆ. ಸರೋಜಿನಿಗೆ ತಾನಿನ್ನು ಏನನ್ನೂ ಮಾಡುವಂತಿರದಿದ್ದರೂ ಅವಳು ಹೊಟ್ಟೆಪಾಡಿಗಾದರೂ ನಿಶ್ಚಿಂತೆಯಿಂದಿರಲೆಂದು ಅದೇ ತೋಟವನ್ನು ಅವಳ ತಾಯಿ ಇನ್ನೇನು ಸಾಯುವ ನಿರೀಕ್ಷೆ ಇದ್ದದ್ದರಿಂದ ಸರೋಜಿನಿಯ ಜೀವಮಾನದವರೆಗೂ ಅವಳಿಗೇ ಬಿಟ್ಟುಬಿಡುವುದೆಂದು ನಿರ್ಣಯಿಸುತ್ತಾನೆ.

''ಜೂನ್ ತಿಂಗಳ ಮೂರನೆಯ ವಾರದಲ್ಲಿ ಸರೋಜಿನಿ ಮತ್ತೆ ಕಾಲೇಜು ಸೇರಿದಳು. ಆದರೆ ಮಾಧವನ ಯೋಚನೆ ಮಾತ್ರ ಯಾವ ನಿರ್ಧಾರವನ್ನೂ ಮುಟ್ಟಿರಲಿಲ್ಲ'' ಎಂಬಲ್ಲಿಗೆ ಕತೆ ಮುಗಿಯುತ್ತದೆ.

ಇನಾಮದಾರರ ಎಲ್ಲ ಕಾದಂಬರಿಗಳಂತೆಯೇ ಇಲ್ಲಿಯೂ ಮನುಷ್ಯನು ತನಗೆ ತಿಳಿಯದ ಅನಿವಾರ್ಯ ಶಕ್ತಿಗಳ ಕೈಗೊಂಬೆಯಾಗಿದ್ದಾನೆ ಎಂಬ ವಿಚಾರವೇ ಕೊನೆಯ ನಿರ್ಣಯವಾಗಿ ನಿಲ್ಲುತ್ತದೆ. ಸರೋಜಿನಿ ಬರಡು ಜೀವನವನ್ನು ಸಾಗಿಸಬೇಕಾದ್ದಕ್ಕೆ ಅವಳು ಮಾಡಿದ ತಪ್ಪೇನು ? ತನ್ನ ತಂದೆಯ ಆಸ್ತಿ ಪಾಪದ್ದೆಂದು ಅದರಿಂದ ದೂರವಾಗಬಯಸಿದ ಮಾಧವನೇ ಅದನ್ನು ತನ್ನದೆಂದು ಸ್ವೀಕರಿಸಿ ಅದನ್ನೊಬ್ಬ ಅನಾಥೆಯ ಜೀವನೋಪಾಯಕ್ಕೆ ಒದಗಿಸಿದ್ದನ್ನು ನೋಡಿದರೆ ಇದರಲ್ಲಿ ಪಾಪ ಯಾರದು ? ಪುಣ್ಯ ಯಾರದು ? ಜೀವನದ ಆಳದಲ್ಲಿ ದಾರುಣವಾದ ಸಮಸ್ಯೆಗಳಿದ್ದರೂ ಅದರ ಮೇಲ್ಮೈಯಲ್ಲಿ ನಲಿಯುವ ಸೌಂದರ್ಯೋಲ್ಲಾಸಗಳು ಉಪೇಕ್ಷಣೀಯವಲ್ಲ. ಅವುಗಳ ಆಕರ್ಷಣೆಯನ್ನು ಚಿತ್ರಿಸುವಾಗ ಲೇಖಕರು ತನ್ಮಯರಾದಂತೆ ಓದುಗರನ್ನು ಮೈಮರೆಸುತ್ತಾರೆ. ಧಾರವಾಡದ ಹಳೆಯ ಕರ್ನಾಟಕ ಕಾಲೇಜಿನ ಆವರಣ, ಅದರಲ್ಲಿಯ ರಸ್ತೆಗಳು, ವಸತಿ ಗೃಹಗಳು, ಗಿಡಮರಗಳು, ಬಿಸಿಲುಬೆಳದಿಂಗಳು, ಮಳೆಗಾಲದ ಆರ್ಭಟ – ಒಂದೊಂದೂ ವಿಸ್ತಾರವಾದ ವರ್ಣನೆಗೆ ಸೊಗಸಾದ ಸಾಮಗ್ರಿಯನ್ನು ಒದಗಿಸುತ್ತದೆ ; ಖಾಂಡೇಕರರ

ವರ್ಣನೆಗಳನ್ನು ನೆನಪಿಗೆ ತರುತ್ತವೆ. ಪ್ರಣಯಿಗಳ ಸರಸಸಲ್ಲಾಪಗಳ ವರ್ಣನೆಯಲ್ಲಿ ಇನಾಮದಾರರದು ಎತ್ತಿದ ಕೈಯಾಗಿದ್ದಂತೆಯೇ ಕಾಲೇಜು ವಿದ್ಯಾರ್ಥಿ – ವಿದ್ಯಾರ್ಥಿನಿಯರ ಹರಟೆಗಳಲ್ಲಿ ಅವರ ಬುದ್ಧಿಯ ಚಲ್ಲಾಟವನ್ನೂ ಜೀವನೋಲ್ಲಾಸವನ್ನೂ ಮನಸೆಳೆಯುವಂತೆ ಚಿತ್ರಿಸುತ್ತಾರೆ. ಆದ್ದರಿಂದ ಇಲ್ಲಿ ಕತೆಯ ಬೀಜ ಹುಲಗಲ ಬೀಜದಂತೆ ಕಹಿಯಾಗಿದ್ದರೂ ಆದರಿಂದ ಬೆಳೆದ ಮರದ ನೆರಳಿನ ತಂಪು ಎಲೆಹೂಗಳ ಸೊಂಪೇ ಓದುಗರ ಮನಸ್ಸನ್ನು ಹೆಚ್ಚು ವ್ಯಾಪಿಸುತ್ತವೆ.

❑ ❑ ❑

'ವಿಜಯಯಾತ್ರೆ'ಯಂತೆ ಉಲ್ಲಾಸದ ಸುಳಿವೇ ಇಲ್ಲದ ಇನ್ನೊಂದು ಕಾದಂಬರಿ 'ಸ್ವರ್ಗದ ಬಾಗಿಲು'. 'ವಿಜಯಯಾತ್ರೆ'ಯಲ್ಲಿದ್ದ ರಾಜಕೀಯ ಸಾಮಾಜಿಕ ಹಿನ್ನೆಲೆ ಇದಕ್ಕಿಲ್ಲ. ನನ್ನ ಮನೆ, ನನ್ನ ಮಕ್ಕಳು ಎನ್ನುವದಕ್ಕಿಂತ ಹೆಚ್ಚಿನ ಚಿಂತೆ ಇಲ್ಲಿ ಯಾವ ಪಾತ್ರಕ್ಕೂ ಇಲ್ಲ. ಅವರೆಲ್ಲ ಸಣ್ಣ ಪಟ್ಟಣಗಳಲ್ಲಿ ಸಣ್ಣಪುಟ್ಟ ಚಾಕರಿಗಳನ್ನು ಮಾಡಿಕೊಂಡಿರುವ ವರ್ಗಕ್ಕೆ ಸೇರಿದವರು. ವಿದ್ಯೆ ಕಲಿತವರಿಗೂ ಹೆಚ್ಚಿನ ಮಹತ್ವಾಕಾಂಕ್ಷೆ ಇಲ್ಲ. ಆದ್ದರಿಂದ ಇದಕ್ಕೆ 'ವಿಜಯಯಾತ್ರೆ'ಯ ಕಾವ್ಯಶಕ್ತಿಯೂ ಇಲ್ಲದೆ ಬೇಸತ್ತು ಮಲಗಿದವನಿಗೆ ಬಿದ್ದ ದೀರ್ಘವಾದ ದುಃಸ್ವಪ್ನದಂತಿದೆ.

ಈ ಕತೆಯ ವಸ್ತು ಸೂಚಿತವಾದದ್ದು ಒಂದು ಬಂಗಾಲೀ ಸಣ್ಣ ಕತೆಯಿಂದ ಎಂದು ಲೇಖಕರೇ ತಮ್ಮ ಹಿನ್ನುಡಿಯಲ್ಲಿ ಹೇಳಿದ್ದಾರೆ. ಶ್ರೀನಿವಾಸ–ಕಾವೇರಿಯರ ಮದುವೆಯಾಗಿ ಎಂಟು ವರ್ಷಗಳೇ ಕಳೆದಿದ್ದರೂ ಇನ್ನೂ ಮಕ್ಕಳಾಗಿಲ್ಲ. ತಾಯಿ ಭಾಗಮ್ಮನಿಗೆ ಸೊಸೆಯನ್ನು ಕಂಡರೆ ಅಷ್ಟಕ್ಕಷ್ಟೆ, ಸಹನೆಯಿಲ್ಲ : ಅದೃಷ್ಟವಿಲ್ಲದ ಬಂಜೆ, ಇವಳಿಂದ ತನ್ನ ವಂಶ ನಿಂತುಹೋಗುವಂತಾಗಿದೆ ಎಂದು ಯಾವಾಗಲೂ ಗೊಣಗುತ್ತಿರುತ್ತಾಳೆ. ಶ್ರೀನಿವಾಸನಿಗೆ ಕಾವೇರಿಯ ಕಷ್ಟ ತಿಳಿದಿದ್ದರೂ ಅದಕ್ಕೆ ಪರಿಹಾರ ಕಾಣದವನಾಗಿದ್ದಾನೆ. ತಾಯಿ ಅವನಿಗಾಗಿ ಇನ್ನೊಂದು ಮದುವೆಯ ವಿಚಾರದಲ್ಲಿಯೇ ಇರುತ್ತಾಳೆ. ಅವರ ನೆರೆಯ ಮನೆಯೊಂದ ರಲ್ಲಿಯೇ ಸುಮಿತ್ರೆ ಎಂಬ ಬೆಳೆದ ಹುಡುಗಿ ಇದ್ದಾಳೆ. ಸುಮಿತ್ರೆಯ ತಾಯಿ ಶ್ರೀನಿವಾಸನ ತಾಯಿ ಸೇರಿ ಅವಳನ್ನು ಶ್ರೀನಿವಾಸನಿಗೆ ಗಂಟುಹಾಕುವ ಎತ್ತುಗಡೆ ಮಾಡುತ್ತಾರೆ. ಇಷ್ಟರಲ್ಲಿ ಶ್ರೀನಿವಾಸನಿಗೆ ಮನೆ ಸಿಕ್ಕಿದ್ದರಿಂದ ತಾಯೊಡನಿದ್ದ ಕಾವೇರಿಯನ್ನು ತನ್ನ ಊರಿಗೆ ಕರೆದು ಕೊಂಡು ಹೋಗುತ್ತಾನೆ. ಕೆಲವು ದಿನ ಗಂಡ ಹೆಂಡಿರು ಸುಖವಾಗಿಯೇ ಇರುತ್ತಾರೆ.

ಗಂಡನ ಜೊತೆಗೆ ಇರಲಿಕ್ಕೆ ಬಂದ ಕಾವೇರಿಗೆ ಸಮವಯಸ್ಸಿನ ಗೆಳತಿಯರಿಲ್ಲ, ಮಕ್ಕಳಿಲ್ಲ. ಒಂದು ಬೊಂಬೆಯನ್ನು ತೆಗೆದುಕೊಂಡು ಅದನ್ನು ಮಗುವೆಂದು ಅಲಂಕರಿಸಿ ಅದರೊಡನೆಯೇ ಮಾತಾಡುತ್ತ ಆಡುತ್ತ ಹೊತ್ತುಗಳೆಯುತ್ತಾಳೆ. ಮೊದಮೊದಲು ಶ್ರೀನಿವಾಸನೂ ಅವಳೊಡನೆ ಈ ಆಟದಲ್ಲಿ ಸೇರುತ್ತಾನೆ. ಬರಬರುತ್ತ ಅವಳ ಭ್ರಾಂತಿ

ಅತಿಯಾಗಿ ಅವಳ ಮನಃಸ್ವಾಸ್ಥ್ಯದ ಬಗ್ಗೆಯೇ ಶ್ರೀನಿವಾಸನಿಗೆ ಸಂದೇಹವೆನಿಸುತ್ತದೆ. ಶ್ರೀನಿವಾಸನಿಗೆ ಅವಳ ಬಗ್ಗೆ ಕನಿಕರವೆನಿಸಿದರೂ ತನ್ನ ಸುಖದ ಭವಿಷ್ಯದ ಬಗ್ಗೆ ಸಾಶಂಕನಾಗುತ್ತಾನೆ. ತನ್ನ ತಾಯಿಯನ್ನು ನೋಡಿಕೊಂಡು ಬರಬೇಕೆಂದು ಊರಿಗೆ ಹೋದಾಗ ನೆರೆಮನೆಯ ಹುಡುಗಿ ಸುಮಿತ್ರೆಯ ಆಕರ್ಷಣೆಗೆ ಒಳಗಾಗುತ್ತಾನೆ. ಆದರೆ ಕಾವೇರಿಗೆ ಸವತಿಯನ್ನು ತರುವುದಕ್ಕೆ ಅವನ ಮನಸ್ಸಿನ್ನೂ ಸಿದ್ಧವಾಗಿರುವುದಿಲ್ಲ. ಆದರೂ ಸುಮಿತ್ರೆಯ ತಾಯಿ ಶ್ರೀನಿವಾಸನ ತಾಯಿ ಸೇರಿ ಎರಡನೆಯ ಮದುವೆ ನಿಶ್ಚಯವಾದಂತೆಯೇ ಎಂಬಂತೆ ನಡೆಯುತ್ತಾರೆ. ಈ ಸಮಾಚಾರವನ್ನು ಕಾವೇರಿಯ ಗೆಳತಿ ಕಾವೇರಿಗೆ ತಿಳಿಸುತ್ತಾಳೆ. ಇದರಿಂದ ಕಾವೇರಿ ಮೊದಲು ದಿಙ್ಮೂಢಳಾದರೂ, ದುಃಖಿಯಾದರೂ, ಶ್ರೀನಿವಾಸನೇ ಅವಳನ್ನು ಸಂತಯಿಸಿ ತನಗೆ ಎರಡನೆಯ ಮದುವೆಯ ವಿಚಾರವಿಲ್ಲವೆಂದು ಹೇಳಿದರೂ, ಅವಳು ದಿನೇ ದಿನೇ ತನ್ನಲ್ಲಿಯೇ ಚಿಂತಿಸಿ ತನ್ನ ನಿಲುವು ಬದಲಾಯಿಸುತ್ತಾಳೆ. ತಾನಾಗಿಯೇ ಶ್ರೀನಿವಾಸನನ್ನು ಸುಮಿತ್ರೆಯನ್ನು ವರಿಸುವುದಕ್ಕೆ ಒತ್ತಾಯಿಸತೊಡಗುತ್ತಾಳೆ. ಪತಿಯನ್ನು ಸಂತೋಷಗೊಳಿಸುವುದಕ್ಕಿಂತ ಹೆಚ್ಚಿನ ಸುಖಸಂತೋಷವಾಗಲಿ ಸದ್ಗತಿಯ ಮಾರ್ಗವಾಗಲಿ ತನಗಿಲ್ಲೆಂದುಕೊಂಡು ಅವನನ್ನು ಪರಿಪರಿಯಿಂದ ಉಪಚರಿಸುತ್ತಾಳೆ. ಒಂದು ದಿನ ಅವನು ಆಫೀಸಿನಿಂದ ಹಿಂತಿರುಗಿ ಬರುವಷ್ಟರಲ್ಲಿ ಕಾವೇರಿ ನಡುಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾಳೆ.

ಈ ಕತೆಯನ್ನು ಕುರಿತು ಲೇಖಕರೇ ಹಿನ್ನುಡಿಯಲ್ಲಿ ಹೀಗೆ ಹೇಳುತ್ತಾರೆ : ''ಒಂದು ಕಾಲಕ್ಕೆ ಇಂಥ ಸನ್ನಿವೇಶ ಸಾಮಾನ್ಯವಾಗಿತ್ತು. ಬಂಜೆಯಾದವಳು ತನ್ನ ದೈವವನ್ನು ಹಳಿಯುತ್ತ ಹಲ್ಲು ಕಚ್ಚಿಕೊಂಡು ಇರುತ್ತಿದ್ದಳು. ಬದುಕಿ ಇರುವುದೂ ಅಸಾಧ್ಯವಾದಾಗ ಆತ್ಮಹತ್ಯೆಯ ಬಾಗಿಲಿನಿಂದ ಸ್ವರ್ಗವನ್ನೋ ನರಕವನ್ನೋ ಸೇರುತ್ತಿದ್ದಳು.... ಕಾವೇರಿ ಸಾವನ್ನು ಬರಮಾಡಿಕೊಂಡಿದ್ದು ಸಂತಾಪದಿಂದಲ್ಲ ; ಸಂತೋಷದಿಂದ... ಉಳಿದವರು ಏನೆಂದರೂ ಆಕೆ ತಿಳಿದದ್ದು ಹಾಗೆ.... ಕಾವೇರಿಯ ದೃಷ್ಟಿ ಆಧುನಿಕವಲ್ಲ; ಒಂದು ವೇಳೆ ಇಂದಿನ ಪರಿಸ್ಥಿತಿಯಲ್ಲಿ ವಾಸ್ತವವೂ ಎನಿಸಲಿಕ್ಕಿಲ್ಲ. ಆದರೆ ಆ ದೃಷ್ಟಿಯಲ್ಲಿ ಯಾವುದೋ ಒಂದು ಭವ್ಯವಾದ ಪರಮೋದಾತ್ತವಾದ ಪ್ರೇರಣೆ ಇದೆ... ಇಲ್ಲಿ ಚಿತ್ರಿಸಿದ ಸನ್ನಿವೇಶವಾಗಲಿ ಅದನ್ನು ಸಾಧ್ಯವಾಗಿಸಿದ ಸ್ವಭಾವವಿಶೇಷಗಳಾಗಲಿ ಒಂದು ದೃಷ್ಟಿಯಿಂದ ಬಹುಮಟ್ಟಿಗೆ ಕಣ್ಮರೆಯಾಗುತ್ತಿರುವ ತಲೆಮಾರಿಗೆ ಸಂಬಂಧಪಟ್ಟವು....'' ಲೇಖಕರು ಏನೇ ಹೇಳಿದರೂ ಇಂಥ ಸಮರ್ಥನೆ ಎಷ್ಟರಮಟ್ಟಿಗೆ ಸಾಧ್ಯವೊ ? ಶೇಕ್ಸ್‌ಪಿಯರನ ಬೇರೆ ಬೇರೆ ದುರಂತ ನಾಟಕಗಳೊಡನೆ ಹೋಲಿಸಿದಾಗ ಒಥೆಲ್ಲೋ ನಾಟಕದ ಪರಿಣಾಮವನ್ನು ಕುರಿತು ವಿಮರ್ಶಕರೊಬ್ಬರು ಹೇಳಿದ್ದು ಸುಮಾರಾಗಿ ಇಲ್ಲಿಗೆ ಅನ್ವಯಿಸಬಹುದು : ''ಇಲ್ಲಿಯ ಕರುಣೆ ಭೀತಿಗಳು ಓದುಗರ ಎದೆಯನ್ನು ಅಪ್ಪಳಿಸಿ ನಡುಗಿಸುವುದಿಲ್ಲ, ಓದುಗನನ್ನು ಕತ್ತಲ ಕೋಣೆಯಲ್ಲಿ ನಿಧಾನವಾಗಿ ಉಸಿರು ಕಟ್ಟಿಸಿದಂತೆ ನೋಯಿಸುತ್ತವೆ.

ಯಾವ ಉದಾತ್ತ ಪರಿಣಾಮವೂ ಇಲ್ಲದ ಬರಿಯ ನೋವು.'' ಮೋಹಿನಿಯ ಕತೆಯಲ್ಲಿ ಯಾವ ಉದಾತ್ತ ಭಾವನೆಗೂ ಅವಕಾಶವಿಲ್ಲವೆಂದು ಕಂಡ ವಿಮರ್ಶಕ ಇನಾಮದಾರರು ಸ್ತ್ರೀ ಸ್ವಭಾವದ ಇನ್ನೊಂದು ತುದಿಯಲ್ಲಿ ಅದನ್ನಿರಿಸಲಿಕ್ಕೆ ಯತ್ನಿಸಿ ಈ ಕತೆಯನ್ನು ಆಯ್ದುಕೊಂಡರೆ ?

5

ಐದುವರ್ಷ ಕಾಲದಲ್ಲಿ ಮೂರು ಬೇರೆಬೇರೆ ವಸ್ತುಗಳನ್ನು ಕುರಿತು ಬರೆದರೂ 'ಓದುಗರ ಒಲುಮೆಯ ಒತ್ತಾಯ'ಕ್ಕೊ ಅಥವಾ 'ಮೋಹಿನಿಯ ಕತೆಗೆ ಏನಾದರೊಂದು ಅರ್ಥವಿದ್ದರೆ' ಅದರ ಅನ್ವೇಷಣೆಗೋ ಮತ್ತೆ ಅದೇ ಕತೆಯ ಜಾಡಿಗೆ ತಿರುಗಿದರು. 'ಕನಸಿನ ಮನೆ'ಯ ಹಗಲುಗನಸು 236 ಪುಟಗಳಷ್ಟಾಗಿದ್ದರೆ 'ಕಟ್ಟಿದ ಮನೆ'ಯ ವಿಸ್ತಾರ 432 ಪುಟಗಳಾಗುತ್ತವೆ. 'ಕನಸಿನ ಮನೆ'ಯನ್ನು ಮುಗಿಸಿ ಪ್ರಕಟಿಸಿದಾಗ ಅದರ ಕತೆಯನ್ನು ಮುಂದೆ ಬೆಳೆಯಿಸುವ ಯಾವ ಸೂಚನೆಯೂ ಇರಲಿಲ್ಲ. ಈ ಕತೆಗೆ 'ಏನಾದರೊಂದು ಅರ್ಥವಿದ್ದರೆ' ಎನ್ನುವುದು ಒಂದು ಮಾತಿನ ರೀತಿಯೋ ಅಥವಾ ಲೇಖಕರಿಗೆ ಅದರ ಬಗ್ಗೆ ನಿಜವಾಗಿಯೂ ಸಂಶಯವಿದೆಯೋ ? ಇದರ ಮುಂದಿನ ವಿಸ್ತಾರಗಳು ಇಪ್ಪತ್ತು ವರ್ಷ ಕಳೆದ ಮೇಲೆ ಬಂದುವಾದ್ದರಿಂದ ಆ ಚರ್ಚೆ ಇಲ್ಲಿ ಅನವಶ್ಯಕ. 'ಕನಸಿನ ಮನೆ'ಯ ಮುನ್ನುಡಿಯಲ್ಲಿ ಪ್ರೊ॥ ಮೂರ್ತಿರಾಯರು ಹೇಳಿದ ''ಇಲ್ಲಿ ಹಿನ್ನೆಲೆಯ ವೈಶಾಲ್ಯವಿಲ್ಲ... ಇಲ್ಲಿಯ ಪಾತ್ರಗಳು ಸರಳ ಜೀವಿಗಳಲ್ಲ'' ಎಂಬ ಮಾತು ಈ ಎರಡನೆಯ ಭಾಗಕ್ಕೆ ಇನ್ನೂ ಹೆಚ್ಚಾಗಿಯೇ ಅನ್ವಯಿಸುತ್ತದೆ.

ಒಂದು ದಿನ ''ನಾನು ನಿಮ್ಮ ಕೂಡ ಏಕವಚನದಲ್ಲಿ ಮಾತನಾಡಬಹುದೇ ?'' ಎಂದು ಮೋಹಿನಿಯ ಸಾನ್ನಿಧ್ಯವನ್ನು ಬಯಸಿದ ವಸಂತ ''ಕೇತಕಿಗೆ ಮನಸೋತು ಅದರ ಹತ್ತಿರ ಹೋದಾಗ ಅದರ ಮಡಿಲಲ್ಲಿ ಅಡಗಿದ್ದ ಭಯಾನಕವಾದ ನಾಗರಹಾವನ್ನು ನೋಡಿದವನಂತೆ'' ದೂರಸರಿದ. ವಸಂತನು ಹುಟ್ಟಿರದೆ ಇದ್ದರೂ ಆನಂದನ ಮನೆ ಮುರಿದೇ ಮುರಿಯುತ್ತಿತ್ತು ಎಂದು ಭಾವಿಸಿದರೂ ಅದರಲ್ಲಿ ವಸಂತನ ಪಾತ್ರವನ್ನು ಅಲ್ಲಗಳೆಯಲಾಗುವುದಿಲ್ಲ. ಹೀಗೆ ಮೋಹಿನಿಗೆ ಮನೆ ಇಲ್ಲದಂತಾದರೂ ವಸಂತ ತನ್ನ ಮನೆ ತುಂಬಿಸುವ ಏರ್ಪಾಡಿನಲ್ಲಿ ಮುಂದುವರಿದದ್ದು ಮಾತ್ರವಲ್ಲದೆ ಅವನು ನೋಡಿದ ''ಕನ್ಯೆಗೂ ಮೋಹಿನಿಗೂ ಬೆರಗುಗೊಳಿಸುವಂಥ ಸಾಮ್ಯ ತಕ್ಷಣ ಕಣ್ಣಿಗೆ ಹೊಳೆಯುವಂತಿತ್ತು.'' ಆನಂದನ ಮನೆ ಬಿಟ್ಟು ಹೋಗಿದ್ದ ಮೋಹಿನಿಗೆ ತಾಯಿಯ ಮನೆಯಲ್ಲಿ ಸ್ವಾಗತದ ಆಶೆಯಿರಲಿಲ್ಲ. ಪುನಃ ಮುಂಬಯಿಗೆ ಬಂದು ಒಂದು ಶಾಲೆಯಲ್ಲಿ ಅಧ್ಯಾಪಕಿಯಾಗುತ್ತಾಳೆ. ವಾಸ ಗೆಳತಿ ಅನುರಾಧೆಯ ಮನೆಯಲ್ಲಿ. ಮೋಹಿನಿಯನ್ನು

ಆನಂದನ ಮನೆಗೆ ಕಳುಹಿಸುವ ಯತ್ನದಲ್ಲಿ ವಿಫಲಳಾದ ಅವಳ ತಾಯಿ ಆನಂದನಿಗೇ ಅಂಗಲಾಚಿ ಒಂದು ಪತ್ರ ಬರೆಯಿಸುತ್ತಾಳೆ. ಆನಂದನ ಮನಸ್ಸು ಅದೇ ನಿಟ್ಟಿನಲ್ಲಿ ಹರಿಯುತ್ತಿದ್ದ ಕಾರಣ ಅವನು ತಾನಾಗಿಯೇ ಹೋಗಿ ಮೋಹಿನಿಯನ್ನು ಕರೆದರೂ ಅವಳು ಅವನ ಕರೆಯನ್ನು ಧಿಕ್ಕರಿಸುತ್ತಾಳೆ.

ಗೆಳತಿ ಅನುರಾಧೆಯ ಗಂಡ ಆಪಟೆ 'ಶಾರದಾ ಪಿಕ್ಚರ್ಸ್'ನಲ್ಲಿ ಅಸಿಸ್ಟೆಂಟ್ ಡೈರೆಕ್ಟರನಾಗಿರುತ್ತಾನೆ. ಸುಮ್ಮನೆ ಕುತೂಹಲದಿಂದೆಂಬಂತೆ ಯಾವುದೋ ಚಿತ್ರದ ಷೂಟಿಂಗ್ ನೋಡಲಿಕ್ಕೆ ಸ್ಟುಡಿಯೋಕ್ಕೆ ಅನುರಾಧೆಯೊಡನೆ ಹೋದಾಗ ಮೋಹಿನಿ ಅದರ ಮುಖ್ಯಸ್ಥ ಡೈರೆಕ್ಟರ ರಂಗನಾಥನ್ ಎಂಬವನ ಮನಸೆಳೆಯುತ್ತಾಳೆ. ಅವನಿಗೆ ಹೆಂಡತಿ ಮಕ್ಕಳಾರೂ ಇಲ್ಲ. ಅಲ್ಲಿ ರಂಗನಾಥನ್ ತೋರಿದ ಪ್ರಲೋಭನೆಗಳಿಂದಾಗಿ ಮೋಹಿನಿ ಸ್ಕೂಲಿನಲ್ಲಿಯೂ ಕೆಲಸದಲ್ಲಿ ಆಸ್ಥೆಯಿಲ್ಲದವಳಾಗಿ ಆ ಕೆಲಸ ಕಳೆದುಕೊಳ್ಳುತ್ತಾಳೆ. ರಂಗನಾಥನ್ ಅವಳಿಗೆ ತನ್ನ ಸೆಕ್ರೆಟರಿ ಎಂಬ ಕೆಲಸವನ್ನೂ, ಆಗ ನಿರ್ಮಾಣವಾಗಬೇಕಿದ್ದ 'ಶಕುಂತಲಾ' ಚಿತ್ರದಲ್ಲಿ ಅನಸೂಯೆಯ ಪಾತ್ರವನ್ನೂ ಕೊಡುತ್ತಾನೆ. ಇಂತಹದೊಂದು ಅವಕಾಶಕ್ಕೆ ಹಾತೊರೆಯುತ್ತಿದ್ದ ಅನುರಾಧೆಗೂ ಒಂದು ಪಾತ್ರ ದೊರೆಯುತ್ತದೆ. ಆಕೆ ಅದರಲ್ಲಿ ದುಷ್ಯಂತನ ಪಾತ್ರ ವಹಿಸಿದ ವರ್ಮಾ ಎಂಬವನೊಡನೆ ಸಲುಗೆ ಬೆಳೆಸಿಕೊಂಡು ಅವನ ಮನೆಯಲ್ಲಿಯೇ ಆಪಟೇನ ಕೈಗೆ ಸಿಕ್ಕಿಬಿದ್ದು ಅವಮಾನಿತಳಾಗಿ ಊರು ಬಿಟ್ಟು ಹೊರಟುಹೋಗುತ್ತಾಳೆ. ಆಪಟೇನೂ ಶಾರದಾ ಸ್ಟುಡಿಯೋನೊಡನಿದ್ದ ತನ್ನ ಸಂಬಂಧವನ್ನು ಕಡಿದುಕೊಳ್ಳುತ್ತಾನೆ. 'ಶಕುಂತಲಾ' ಚಿತ್ರದ ಕೊನೆಯ ಭಾಗ ನಿಂತೇ ಹೋಗುತ್ತದೆ. ಮನೆಯಲ್ಲಿ ಆಪಟೆ ಒಬ್ಬನೇ ಆದ್ದರಿಂದ ಅಲ್ಲಿಯೇ ಮೋಹಿನಿ ಇರುವುದು ಅವನಿಗೆ ಸರಿಬಾರದೆ ಮೋಹಿನಿಗೆ ಕೋಣೆಯನ್ನು ಬಿಡಹೇಳುತ್ತಾನೆ. ಮೋಹಿನಿಗಾಗಿ ರಂಗನಾಥನ್ ಬೇರೆ ಮನೆ ನೋಡಿದ್ದರೂ ಅದು ಸಿದ್ಧವಾಗುವುದಕ್ಕೆ ಅವಕಾಶ ಬೇಕೆಂಬ ನೆಪದಿಂದ ಮೋಹಿನಿ ರಂಗನಾಥನ್ ಮನೆಯಲ್ಲಿಯೇ ಇರುತ್ತಾಳೆ. ಮೋಹಿನಿ – ರಂಗನಾಥನ್‌ರ ವಿಹಾರ ನಾನಾರೀತಿಯಾಗಿ ನಡೆಯುತ್ತದೆ. ಇದೇ ಅವಳು 'ಕಟ್ಟಿದ ಮನೆ'.

ಪತ್ರಿಕೆಗಳಲ್ಲಿ ಅವಳ ಚಿತ್ರದ ಜಾಹೀರಾತುಗಳನ್ನೂ ಅವಳ ವಿಹಾರದ ಬಗ್ಗೆ ಹರಟೆಗಳನ್ನೂ ಓದಿ ಜುಗುಪ್ಸೆಪಟ್ಟು ಆನಂದ ಅವಳಿಂದ ಕಾಯದೇಶೀರ ಬಿಡುಗಡೆ ಪಡೆಯುವದಕ್ಕೆಂದು ವಕೀಲರ ದ್ವಾರಾ ಕೆಲಸ ನಡೆಸುತ್ತಾನೆ. ಕೋರ್ಟಿನ ಸಮನ್ಸ್ ಬಂದಾಗ ರಂಗನಾಥನ್ ತನ್ನ ಮಟ್ಟಿಗೆ ಪಾರಾಗುವ ಪ್ರಯತ್ನ ಮಾಡುವದನ್ನು ಕಂಡು ಮೋಹಿನಿಗೆ ಅವನಲ್ಲಿ ನಿರಾಶೆಯಾಗುತ್ತದೆ. ಕೋರ್ಟಿನ ವಿಚಾರಣೆ ಸಾರ್ವಜನಿಕವಾಗಿ ನಡೆಯದಂತೆ ಮಾಡುವಷ್ಟರಮಟ್ಟಿಗೆ ಅವನ ಯತ್ನ ಸಫಲವಾಗುತ್ತದೆ. ಕೋರ್ಟಿನಲ್ಲಿ ಎರಡೂ ಪಕ್ಷದ ವಕೀಲರು ತಮ್ಮ ವಾದವನ್ನು ಮಂಡಿಸಿಯಾದಮೇಲೆ ಕತೆಯ ಈ ಭಾಗ ಮುಗಿಯುತ್ತದೆ.

ಕತೆಯನ್ನು ಹೇಳುವಾಗ ಮೋಹಿನಿಯ ಗೃಹತ್ಯಾಗವನ್ನು ಇಬ್ಸೆನ್ನನ ಪ್ರಸಿದ್ಧ ಪಾತ್ರ ನೋರಾಳ ಗೃಹತ್ಯಾಗಕ್ಕೆ ಹೋಲಿಸಿರುವುದಲ್ಲದೆ ಅವಳಿಗಾಗಿ ರಂಗನಾಥನ್ 'ಸೂತ್ರದ ಬೊಂಬೆ' ಎಂಬ ಹೆಸರಿನಲ್ಲಿ ಅದೇ ಕತೆಯನ್ನು ಚಿತ್ರಿಸಿ, ಅದರಲ್ಲಿ ನೋರಾಳ ಪಾತ್ರವನ್ನು ಮೋಹಿನಿಯಿಂದ ಮಾಡಿಸುತ್ತಾನೆ. ಇದು ಇಬ್ಸೆನ್ನನಿಗೆ ಅನ್ಯಾಯ. ನೋರಾಗೆ ಮಾತ್ರವಲ್ಲದೆ ಸ್ತ್ರೀಯರ ಸ್ವಾಭಿಮಾನಕ್ಕಾಗಿ ಹೋರಾಡುವ ಎಲ್ಲ ಮಹಿಳೆಯರಿಗೂ ಅವಮಾನ. ನೋರಾ ಮನೆ ಬಿಡುವಾಗ ಅವಳಿಗೆ ಹೊರಗೆ ಯಾವ ವಸಂತನ ಆಕರ್ಷಣೆಯೂ ಇರಲಿಲ್ಲ ಎನ್ನುವುದು ಅವಳ ಪಾತ್ರಚಿತ್ರಣದಲ್ಲಿ ಬಹುಮುಖ್ಯವಾದ ಅಂಶ. ಮೋಹಿನಿಯ ವಿಹಾರಗಳನ್ನು 'ಓದುಗರು' ಮೆಚ್ಚಿ ಬಾಯಿಚಪ್ಪರಿಸುವಂತೆ ಸ್ವಾರಸ್ಯವಾಗಿ ಬಣ್ಣಿಸಿದ ಲೇಖಕರು ಅವಳು ಸ್ವಾತಂತ್ರ್ಯವನ್ನು ಬಯಸುವುದಕ್ಕೆ ಸ್ವಾಭಿಮಾನಕ್ಕಿಂತಲೂ ಹೆಚ್ಚಾಗಿ ಸುಖಲೋಲುಪತೆಯೇ ಕಾರಣವಾಗಿತ್ತೆಂಬುದನ್ನು ಮರೆಮಾಚುವಂತಿಲ್ಲ. ಈ ಬಗ್ಗೆ ಅವರ ಮನಸ್ಸಿನಲ್ಲಿಯೇ ಇಬ್ಬಂದಿಯಿರುವಂತಿದೆ. "ನನಗೆ ಸಿದ್ಧಿ ಮುಖ್ಯ, ಸಾಧನ ಯಾವುದಾದರೂ ಸರಿ," "ಮೋಹಿನಿ ಕಥೆಯುದ್ದಕ್ಕೂ ವಸಂತನಿಗಾಗಿ ಹಾತೊರೆಯುತ್ತಾಳೆ" ಇತ್ಯಾದಿ ನೋರಾಳ ಲೋಕದಿಂದ ಇವಳ ಲೋಕ ಕೋಟಿಯೋಜನ ದೂರವೆನಿಸುತ್ತದೆ. ಇಲ್ಲಿ ಸೌಂದರ್ಯೋಪಾಸಕ ಇನಾಮದಾರರಿಗೂ ಜನಪ್ರಿಯ ಕಾದಂಬರಿಕಾರ ಇನಾಮದಾರರಿಗೂ ಹೊಂದಾಣಿಕೆ ಇಲ್ಲದಿರುವುದು ಸುಸ್ಪಷ್ಟ. ಲೇಖಕನು ಸೃಷ್ಟಿಸಿದ ಪಾತ್ರವೊಂದು ಅವನ ಕೈಮೀರಿ ಅವನನ್ನೇ ತನ್ನಿಷ್ಟದಂತೆ ಎಳೆದುಕೊಂಡು ಹೋಗುತ್ತದೆಯೆ ಎಂಬ ಪ್ರಶ್ನೆಕ್ಕೆ ಇಲ್ಲಿ ಸರಿಯಾದ ಉತ್ತರವಿದೆ. ಈ ಕತೆಯನ್ನು ಇಲ್ಲಿಗೆ ನಿಲ್ಲಿಸಿದ ಲೇಖಕರು ಮುಂದೆ ಇಪ್ಪತ್ತು ವರ್ಷ ಇದರ ಜಾಡಿಗೆ ತಿರುಗಲಿಲ್ಲವೆಂಬುದೂ ಈ ಊಹೆಯನ್ನು ಸಮರ್ಥಿಸುವಂತೆ ತೋರುತ್ತದೆ.

6

ಮೋಹಿನಿಯ ತೊಡಕು ಬಿಡಿಸಿಕೊಂಡ ಲೇಖಕರು ಮತ್ತೆ ಬರೆದದ್ದು ಇನ್ನೊಂದು ಖಂಡಕಾವ್ಯ — 'ಈ ಪರಿಯ ಸೊಬಗು'. ಈ ಕತೆಯೂ ದುರಂತವೇ ಆದರೂ 'ವಿಜಯಯಾತ್ರೆ'ಯಂತಲ್ಲ. ಅಲ್ಲಿ ಸ್ಥಾಯೀಭಾವ ರೌದ್ರ ; ಇಲ್ಲಿ ಶೃಂಗಾರ.

ರಾಘವೇಂದ್ರರಾಯರು ದೇವನೂರಲ್ಲಿ ತಲಾಂತರಗಳಿಂದ ನೆಲೆಸಿದ ಆಸ್ತಿವಂತರು. ವಿಶ್ವನಾಥಶಾಸ್ತ್ರಿಗಳು ಅದೇ ಊರಲ್ಲಿ ತಮ್ಮ ವಿದ್ವತ್ತೆಯಿಂದಲೂ ಸದಾಚಾರದಿಂದಲೂ ನಿಸ್ಪೃಹತೆಯಿಂದಲೂ ಎಲ್ಲರ ಆದರಕ್ಕೆ ಪಾತ್ರರಾದ ವೈದಿಕರು. ರಾಯರ ಆಸ್ತಿಗಳಲ್ಲೊಂದು ಮಾರ್ಕಂಡೇಯ ನದಿಯ ಪಕ್ಕದಲ್ಲಿ ಬೆಟ್ಟದ ಬದಿಯಲ್ಲಿದ್ದ ರಂಗಧೂಳಿಯೆಂಬ ಸುಂದರವಾದ ತಾಣ. ರಾಯರು ತಮ್ಮ ತಾರುಣ್ಯದಲ್ಲಿ ಅಲ್ಲಿ ಒಂದು ಅಣೆಕಟ್ಟೆ

ಸರೋವರವನ್ನು ನಿರ್ಮಿಸಿ ಅದರ ಸೌಂದರ್ಯವನ್ನು ಹೆಚ್ಚಿಸಿ ಅಲ್ಲಿ ತಮ್ಮ ನವವಧುವಿನೊಡನೆ ವಿಹರಿಸಿದ್ದ ರಸಿಕರು. ಅವರ ಮಗನೇ ಗೋಪಿ. ಆತನಿಗೂ ಆ ಸ್ಥಳದ ಬಗ್ಗೆ ವಿಚಿತ್ರ ಆಕರ್ಷಣೆ.

ಗೋಪಿ ಚಿಕ್ಕಂದಿನಿಂದಲೂ ತನ್ನ ಸೋದರಮಾವನ ಮಗಳು ವತ್ಸಲೆಯ ಒಡನಾಟದಲ್ಲಿದ್ದು ಅವಳನ್ನೇ ಮದುವೆಯಾಗುವನೆಂದು ಎರಡೂ ಮನೆಯವರು ನಂಬಿಕೊಂಡಿದ್ದರು. ಗೋಪಿಯ ಒಲವು ತತ್ತ್ವಜ್ಞಾನದ ಕಡೆಗಿದ್ದ ಕಾರಣ ಅದನ್ನು ಕಾಲೇಜಿನಲ್ಲಿ ಓದಿದರೇನು, ಮನೆಯಲ್ಲಿ ಓದಿದರೇನು ಎಂದು ಮನೆಯಲ್ಲೇ ಉಳಿಯುತ್ತಾನೆ. ಈ ಸ್ವಾಧ್ಯಾಯದಲ್ಲಿ ಅವನು ವಿಶ್ವನಾಥ ಶಾಸ್ತ್ರಿಗಳ ಸಹಾಯ ಪಡೆಯುತ್ತಾನೆ. ಅವರ ಮನೆಗೆ ಹೋಗಿ ಬಂದು ನಡೆದಾಗ ಅವರ ಮಗಳು ಶಾಂತಾ ಅವನ ಕಣ್ಣಿಗೆ ಬೀಳುತ್ತಾಳೆ. ಮದುವೆಯಾಗುವದಾದರೆ ಇವಳನ್ನೇ ಎಂದು ನಿಶ್ಚಯಿಸುತ್ತಾನೆ. ಆದರೆ ಅದನ್ನು ತನ್ನ ತಾಯಿತಂದೆಗಳಿಗೆ ಹೇಗೆ ಹೇಳುವುದು ಎಂದು ಸಂಕೋಚಪಟ್ಟು ಸುಮ್ಮನಿರುತ್ತಾನೆ. ಮದುವೆಯ ಮಾತು ಬಂದಾಗೆಲ್ಲ ಈಗೇನವಸರ ಎನ್ನುವಂತೆ ಮಾತಾಡುತ್ತಾನೆ. ವತ್ಸಲೆಯನ್ನು ತಾನು ಮದುವೆಯಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾನೆ. ಯಾರನ್ನೇ ಆಗಲಿ, ಅವನೊಮ್ಮೆ ಮದುವೆಯಾಗಲಿಕ್ಕೆ ಒಪ್ಪಿದರೆ ಸಾಕು ಎನ್ನುವ ಸ್ಥಿತಿಗೆ ಬಂದಾಗ ಶಾಂತಾಳ ಹೆಸರು ಹೇಳುತ್ತಾನೆ. ಅವನ ತಾಯಿಗೆ ಶಾಂತಾ ಬಡವರ ಮಗಳೆಂದು ತೀರಾ ನಿರುತ್ಸಾಹವಾಗುತ್ತದೆ. ತಂದೆ ಅರೆಮನಸ್ಸಿನಲ್ಲಿಯೇ ಆದರೂ ಹೋಗಿ ಶಾಸ್ತ್ರಿಗಳ ಸಮ್ಮತಿಯನ್ನು ಕೇಳುತ್ತಾರೆ. ಶಾಸ್ತ್ರಿಗಳು ಸಂತೋಷದಿಂದ ಒಪ್ಪಬಹುದೆಂಬ ಅವರ ನಿರೀಕ್ಷೆ ಸುಳ್ಳಾಗುತ್ತದೆ. ಶಾಸ್ತ್ರಿಗಳು ಜ್ಯೋತಿಷ ಶಾಸ್ತ್ರ ತಿಳಿದಂತೆ ಈ ಸಂಬಂಧ ಸರಿಯಾಗಿಲ್ಲವೆಂದು ಗೊತ್ತಿದ್ದರೂ ಅದನ್ನು ರಾಯರಿಗೆ ಹೇಳಿದರೆ ಅವರು ಏನೆಂದುಕೊಳ್ಳುವರೋ ಎಂಬ ಸಂಕೋಚದಿಂದ ಏನೇನೊ ಹೇಳಿ ವಿಚಾರ ಮಾಡಬೇಕಾದದ್ದಿದೆ ಎಂದು ಯಾವ ನಿರ್ಧಾರವನ್ನೂ ಹೇಳುವುದಿಲ್ಲ. ಅವರ ತೊಳಲಾಟ ಅವರ ಹೆಂಡತಿಗಾಗಲಿ ರಾಯರಿಗಾಗಲಿ ಅರ್ಥವಾಗುವುದಿಲ್ಲ. ರಾಯರ ಹೆಂಡತಿಯಂತೂ ಇದು ತಮಗೆ ಅವಮಾನವೆಂದು ಹೇಳುತ್ತಾರೆ. ಶಾಸ್ತ್ರಿಗಳು ಶೃಂಗೇರಿಗೆ ಹೋಗಿ ತಮ್ಮ ಗುರುಗಳ ಹತ್ತಿರ ಚರ್ಚೆ ನಡೆಸಿ ತಿರುಗಿ ಬಂದು ಈ ಮದುವೆಗೆ ಒಪ್ಪಿಗೆ ಕೊಡುತ್ತಾರೆ. ಅದೇ ಚೈತ್ರದಲ್ಲಿ ಮದುವೆಯಾಗಿ ಮಳೆಗಾಲ ಬರುವವರೆಗೆ ಶಾಂತಾ – ಗೋಪಿಯರು ರಂಗಧೂಳಿಯಲ್ಲಿಯೇ ವಾಸವಾಗಿ ವಿಹರಿಸಿ ಮಳೆಗಾಲಕ್ಕೆ ಊರಿಗೆ ಬರುತ್ತಾರೆ.

ಜೂನ್ ತಿಂಗಳಲ್ಲಿ ವತ್ಸಲೆ ಊರಿಗೆ ಬಂದವಳು ಅವನನ್ನು ರಂಗಧೂಳಿಗೆ ಹೋಗುವದಕ್ಕೆ ಒತ್ತಾಯಿಸುತ್ತಾಳೆ. ಮೂರೂ ಕುಟುಂಬಗಳು ಸೇರಿ ರಂಗಧೂಳಿಗೆ ಚತುರ್ದಶಿಯ ದಿನವೇ ಹೋಗುತ್ತಾರೆ. ಮರುದಿನ ಬೆಳಿಗ್ಗೆ ಹಿರಿಯರೆಲ್ಲರೂ ಅಡಿಗೆ ಪೂಜೆಗಳ ಸಿದ್ಧತೆಯಲ್ಲಿರುವಾಗ ವತ್ಸಲೆ–ಶಾಂತಾ–ಗೋಪಿ ಸೇರಿ ಕೆರೆಯ ಹತ್ತಿರ

ಹೋಗುತ್ತಾರೆ. ವತ್ಸಲೆಗೆ ಕಮಲದ ಹೂಗಳನ್ನು ತಂದುಕೊಡುತ್ತೇನೆಂದು ಗೋಪಿ ಕೆರೆಯಲ್ಲಿ ಈಜು ಬೀಳುತ್ತಾನೆ. ವತ್ಸಲೆ ಶಾಂತಾ ಕಟ್ಟೆಯ ಮೇಲಿನಿಂದ ನೋಡುತ್ತಿದ್ದಂತೆಯೇ ಗೋಪಿ ಕಮಲದ ಬಳ್ಳಿಗಳಲ್ಲಿ ಕಾಲೊತ್ತಡಗಿ ಮುಳುಗಿದವನು ಮೇಲೆ ಬರಲೇ ಇಲ್ಲ.

ಈ ದುರಂತ ಕತೆಯ ವಿನ್ಯಾಸದಲ್ಲಿ ಲೇಖಕರು ಅಸಾಧಾರಣ ಚಮತ್ಕಾರವನ್ನೂ, ನಿರೂಪಣೆಯಲ್ಲಿ ಅಲೌಕಿಕ ರಸಸಿದ್ಧಿಯನ್ನೂ ಸಾಧಿಸಿದ್ದಾರೆ. ದುರಂತವೊಂದು ದುಃಸ್ವಪ್ನದಂತೆ ಎದೆ ನಡುಗಿಸಿ ಮರೆಯಾಗುತ್ತದೆ. ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವುದು ರಂಗಧೂಳಿಯ ಅನ್ಯಾದೃಶವಾದ ಸೊಬಗು ; ಇಬ್ಬರು ಎಳೆವಯಸ್ಸಿನ ಪ್ರೇಮಿಗಳು ಆ ಪರಿಸರದಲ್ಲಿ ಹಕ್ಕಿಗಳಂತೆ, ಕಿನ್ನರ ದಂಪತಿಗಳಂತೆ, ದೇವತೆಗಳಂತೆ ವಿಹರಿಸಿ ಅನುಭವಿಸಿದ ಆನಂದ — ಎಲ್ಲವೂ ಒಂದು ಸುಂದರ ಭಾವಗೀತದಂತೆ ಭಾಸವಾಗುತ್ತದೆ. ಇಲ್ಲಿ ನಿರೂಪಿತವಾದ ಜೀವನದರ್ಶನ ಲೇಖಕರ ಮೂಲಚಿಂತನಕ್ಕೆ ಸಂವಾದಿಯಾಗಿರುವುದರಿಂದಲೇ ಇದರಲ್ಲಿ ಬಂದ ಒಂದೆರಡು ಮಾತುಗಳು ಮುಂದೆ ಅವರ ಕಾದಂಬರಿಗಳಿಗೆ ಹೆಸರುಗಳಾಗಿವೆ — "ಭವಿಷ್ಯ ಒಂದು ಕತ್ತಲೆಯ ಕಡಲು... ಜೀವನ ಎರಡು ಹೆಜ್ಜೆಯ ಮಟ್ಟಿಗೆ ಬೆಳಕು ; ಬೆನ್ನ ಹಿಂದೆ ಗತಕಾಲದ ಕಡಲು ; ಎದುರು ಭವಿಷ್ಯತ್ತಿನ ಕಡಲು ; ಅದನ್ನು ಮುಸುಕಿದ ಮಂಜು."

❑ ❑ ❑

ಈ ಅವಧಿಯಲ್ಲಿ ಬರೆದ ಇನ್ನೊಂದು ಕಾದಂಬರಿ 'ಮುಗಿಯದ ಕತೆ' — ಒಂದು ವಿಸ್ತಾರವಾದ ಹರಟೆಯಂತಿದೆ. ಕಾದಂಬರಿ ಎನ್ನುವುದಕ್ಕೆ ಚಿಕ್ಕದು ; ಹರಟೆ ಎನ್ನುವುದಕ್ಕೆ ದೊಡ್ಡದು. ಇಲ್ಲಿ ಬಳಸಿದ ತಂತ್ರವನ್ನು ಇನಾಮದಾರರು ಬೇರೆ ಯಾವ ಕತೆಯಲ್ಲಿಯೂ ಬಳಸಿಲ್ಲ. ಮುಖ್ಯಪಾತ್ರನಾದ ಕಾದಂಬರಿಕಾರ ತನ್ನ ಬಾಯಿಂದಲೇ ತನ್ನ ಅನುಭವವೊಂದನ್ನು ಹೇಳುತ್ತಾನೆ. ತಾನು ಬರೆಯಬೇಕಾಗಿದ್ದ ಕಾದಂಬರಿಗೆ ವಸ್ತುವನ್ನು ಹುಡುಕುತ್ತಿದ್ದಾಗ ಅವನಿಗೆ ಗೋಕರ್ಣದಲ್ಲಿ ನಾಡಹಬ್ಬದ ಭಾಷಣಕ್ಕೆ ಆಮಂತ್ರಣ ಬರುತ್ತದೆ. ಅಲ್ಲಿ ಅವನ ಆತಿಥೇಯರಾದ ರಮಾನಂದರಾಯರು ಮುಂಬಯಿಯಲ್ಲಿಯ ತಮ್ಮ ಉದ್ದಿಮೆಯಿಂದ ನಿವೃತ್ತರಾಗಿದ್ದ ಸುಖವಸ್ತು. ಅವರ ಮನೆಗೆ ಬಂದುಹೋಗುವವರನ್ನು ನೋಡಿಕೊಳ್ಳುತ್ತಿದ್ದವಳೊಬ್ಬ ನಡುಹರಯದ ಚೆಲುವೆ. ಅವರ ಸಂಬಂಧವೇನು ಎಂದು ಕಾದಂಬರಿಕಾರ ತನ್ನ ಕಲ್ಪನೆಯನ್ನೋಡಿಸುತ್ತಿದ್ದಾಗಲೇ ಅವಳು ರಾಯರ ಅಕ್ಕನ ಮೊಮ್ಮಗಳೆಂದು ರಾಯರೇ ಹೇಳುತ್ತಾರೆ. ಅವಳ ಜೊತೆಗೆ ಓಡಾಡುತ್ತಿದ್ದ ಶಂಕರರಾಯನೂ ಅವಳ ಪತಿಯಲ್ಲ. ರಮಾನಂದರಾಯರ ದೂರದ ಸಂಬಂಧಿಕ ಇನ್ಶೂರೆನ್ಸ್ ಬಿಸಿನೆಸ್ ಮಾಡುತ್ತಾನೆ. ಆ ಚೆಲುವೆ ಸೀತಾಳ ಗಂಡ ಮಧುಕರ ಮುಂಬೈಯಲ್ಲಿ ಬ್ಯಾಂಕ್ ಮ್ಯಾನೇಜರ. ಸೀತಾ ಸಾಹಿತ್ಯಭಕ್ತೆ ; ತಾನೂ ಸಾಹಿತಿಯಾಗಬೇಕೆಂಬ ಹವ್ಯಾಸಿ. ಸಾಹಿತಿಯೊಬ್ಬನಲ್ಲಿ

ತೋರಿಸುವ ಆಸ್ಥೆಗಿಂತಲೂ ಹೆಚ್ಚಿನ ಆಸ್ಥೆಯನ್ನು ಈ ಕಾದಂಬರಿಕಾರನಲ್ಲಿ ತೋರಿಸುತ್ತಾಳೆ. ಇಷ್ಟು ಸನ್ನಿವೇಶದ ಮೇಲೆ ತನ್ನ ಕತೆಯನ್ನು ಕಟ್ಟುತ್ತಲೇ ಇದ್ದು ಕತೆಯನ್ನು ಹೇಗೆ ಮುಂದುವರಿಸುವುದು ಎಂದು ಪೇಚಾಟದಲ್ಲಿ ಕಾದಂಬರಿಕಾರನಿದ್ದಾಗ ತನ್ನ ನಾಡಹಬ್ಬದ ಪ್ರೋಗ್ರಾಂ ಪೂರೈಸಿ ಧಾರವಾಡಕ್ಕೆ ತಿರುಗಿಬಂದು ಕತೆಯನ್ನು ಬರೆಯತೊಡಗುತ್ತಾನೆ. ಮುಂಬಯಿಯಿಂದ ಕರೆಬಂದು ಅಲ್ಲಿಗೆ ಹೊರಟಾಗ ಅದೇ ರೈಲಲ್ಲಿ ಸೀತೆ – ಮಧುಕರ ರಾಯರೂ ಮುಂಬಯಿಗೆ ಹೊರಟಿರುತ್ತಾರೆ. ತಮ್ಮ ಮನೆಗೆ ಬರಬೇಕೆಂದು ಕೊಟ್ಟ ಆಗ್ರಹದ ಆಮಂತ್ರಣವನ್ನು ಇವನು ಒಪ್ಪುತ್ತಾನೆ. ತನ್ನ ಕತೆ ಮುಂದುವರಿಯುವುದಕ್ಕೆ ಏನಾದರೂ ಎಳೆ ಸಿಕ್ಕೀತೆಂಬ ಆಶೆಯಿಂದ ಹೋಗುತ್ತಾನೆ. ಮಧುಕರ ಮನೆಯಲ್ಲಿರು ವುದಿಲ್ಲ. ಮಾತುಮಾತಿನಲ್ಲಿ ಸೀತಾ ಗೋಕರ್ಣಕ್ಕೆ ಹೋಗಿದ್ದುದರ ಹಿನ್ನೆಲೆ ತಿಳಿದು ಕಾದಂಬರಿಕಾರ ಆರಂಭಿಸಿದ ಕತೆಯ ತಳಹದಿಯೇ ಕುಸಿಯುತ್ತದೆ.

ಸೀತಾ ಮಧುಕರರಾಯನ ಹಾದೀ ನೋಡಿ ಒಂಬತ್ತೂವರೆ ಗಂಟೆ ರಾತ್ರಿಯಾದಾಗ ಊಟ ಮಾಡಿಬಿಡುವ ಎಂದದ್ದಕ್ಕೆ ಊಟ ಮಾಡುತ್ತಾರೆ. ಇನ್ನು ಹೊರಡುತ್ತೇನೆನ್ನುವ ಕಾದಂಬರಿಕಾರನನ್ನು ಅವಳು ಮಾತಿನಲ್ಲಿ ತೊಡಕಿಸಿ ನಿಲ್ಲಿಸುತ್ತಿರುತ್ತಾಳೆ. ಕೊನೆಯ ಉಪಾಯವೆಂದು ಅವನು ನೀವು ಬರೆಯುತ್ತಿದ್ದ ಹಸ್ತಪ್ರತಿಯನ್ನು ಕೊಡುವುದಾಗಿ ಹೇಳಿದ್ದಿರಿ ಎಂದು ಜ್ಞಾಪಿಸಲು ಅದನ್ನು ಅವಳು ತಂದುಕೊಡುತ್ತಾಳೆ. ಪೂರ್ತಿ ಆಗಿದೆಯೆ ಎಂದರೆ, ಇಲ್ಲ, ಒಂದು ಸಮಸ್ಯೆ ಅಡ್ಡವಾಗಿದೆ ಎನ್ನುತ್ತಾಳೆ. ಏನು ?— ಎಂದರೆ ಸಾಹಿತ್ಯಭಕ್ತಳು ಕಾದಂಬರಿಕಾರನನ್ನು ಪ್ರೀತಿಸುತ್ತಾಳೆ, ಆಕೆಗೆ ಮದುವೆಯಾಗಿದೆ, ಅದೇ ಸಮಸ್ಯೆ ಎನ್ನುತ್ತಾಳೆ. ಇದು ಕಾದಂಬರಿಯೆ ?— ಎಂದರೆ ಅಲ್ಲ, ಆತ್ಮವೃತ್ತ ಎನ್ನುತ್ತಾಳೆ. ಆ ಇನ್ನೊಬ್ಬ ಯಾರು ಎಂದರೆ, ನೀವೆ ಎನ್ನುತ್ತಾಳೆ, ಸರಿ. ಮಧುಕರರಾಯ ಬರುವುದು ಯಾವಾಗ ಅಂದರೆ ಅವರು ಇಂದು ಬರುವದೇ ಇಲ್ಲ ಅನ್ನುತ್ತಾಳೆ. ಇದೇ ಮುಗಿಯದ ಕತೆ.

ಇಲ್ಲಿ ಕತೆ ಇದ್ದಷ್ಟೇ ಲೇಖಕರ, ಪ್ರಕಾಶಕರ ಸಮಸ್ಯೆಗಳು, ಭಾಷಣಕ್ಕೆ ಕರೆಯುವ ಮತ್ತು ಭಾಷಣ ಮಾಡುವವರ ಚಟುವಟಿಕೆಗಳು, ಗೋಕರ್ಣದ ಭಟ್ಟರು, ಇಂತಹ ಎಷ್ಟೋ ಆನುಷಂಗಿಕ ವಿಷಯಗಳನ್ನು ಕುರಿತು ಹರಟೆಯೂ ಇದೆ. ಈ ಹರಟೆಗಳ ಶೈಲಿ ಯಲ್ಲಿ ಕಾಣುವ ಲಾಘವವಾಗಲಿ ಅಣಕವಾಗಲಿ ಕತೆಯ ನಿರೂಪಣೆಯಲ್ಲಿ ಕಾಣುವುದಿಲ್ಲ. ಈ ವ್ಯತ್ಯಾಸ ಕುತೂಹಲಕಾರಿಯಾಗಿದೆ. ಮದುವೆಯಾದ ಹೆಂಗಸು ಅನ್ಯಪುರುಷನಲ್ಲಿ ಆಸಕ್ತಳಾಗಿರುವುದು ಎಲ್ಲ ಕಾದಂಬರಿಕಾರರಿಗೂ ಅಷ್ಟು ಸಹಜವಾಗಿಯೇ ಎಂಬಂತೆ ಹೊಳೆಯುವ ವಸ್ತುವಾಗಿರುವದೇಕೆ ?

7

ವಿಮರ್ಶಕ ಇನಾಮದಾರರ ಈ ಪ್ರಶ್ನೆಕ್ಕೆ ಕಾದಂಬರಿಕಾರ ಇನಾಮದಾರರಿಗೆ

ಉತ್ತರ ಕೊಡುವ ಇಚ್ಛೆ ಇರಲಿಲ್ಲವೋ ಏನೋ, ಮುಂದಿನ ಎಂಟು ವರ್ಷಗಳಲ್ಲಿ ಇನಾಮದಾರರು ಕಾದಂಬರಿಗಳನ್ನೆ ಬರೆಯಲಿಲ್ಲ. ಈ ಮಧ್ಯಂತರದಲ್ಲಿ ಅವರು ಬರೆದ ಕೃತಿಗಳಲ್ಲಿ ಒಂದು 'ಕಾಲಿದಾಸನ ಕಥಾನಕಗಳು', ಇನ್ನೊಂದು Uttararamacharitam - A Preface. ಕಾಲಿದಾಸನೆಂದರೆ ಸರಸ್ವತಿಯ ಮೂರ್ತಿಮಂತ ವಿಲಾಸವೇ ಎಂದು ಕವಿಪರಂಪರೆಯಲ್ಲಿ ಖ್ಯಾತಿಯಿದ್ದರೂ ಆ ವಿಲಾಸ ಎಲ್ಲಿಯೂ ಸಾಮಾಜಿಕ ವಿಧಿನಿಷೇಧಗಳ ಸೀಮೆಯನ್ನು ದಾಟುವದಿಲ್ಲ ಮಾತ್ರವಲ್ಲ, ಅವು ಬಂಧಕಗಳೆಂಬ ಸೂಚನೆ ಕೂಡ ಹೊಳೆಯುವುದಿಲ್ಲ. ಉತ್ತರರಾಮಚರಿತವಂತೂ ದಾಂಪತ್ಯದಲ್ಲಿ ನಿಷ್ಠೆಯಿಂದ ಸಾಧಿಸ ಬಹುದಾದ ಸುಖದ ಪರಮೋತ್ಕರ್ಷವನ್ನು ನಿರೂಪಿಸುವ ಕೃತಿ.

ಕಾಲಿದಾಸನ ಕಥಾನಕ ಮಕ್ಕಳಿಗಾಗಿ ಬರೆದುದೆಂದು ಲೇಖಕರು ಹೇಳಿದ್ದರೂ, ಕೇವಲ 128 ಪುಟಗಳಲ್ಲಿ ಅವನ ಎಲ್ಲ ಕಥೆಗಳ ಸಂಕ್ಷೇಪವಿದ್ದರೂ ಕಾಲಿದಾಸನ ಶೈಲಿಯ ಸ್ವಾರಸ್ಯವನ್ನು ಅಲ್ಲಲ್ಲಿ ಇದ್ದಕ್ಕಿದ್ದಂತೆ ಉಳಿಸಿಕೊಂಡಿರುವದು ಹೇಳಬೇಕಾದ ವೈಶಿಷ್ಟ್ಯ. ಕತೆಗಳ ಜೊತೆಗೆ ಬಹು ಸಮರ್ಪಕವಾದ ಕವಿ ಕಾವ್ಯ ಪರಿಚಯವೂ ಇದೆ.

ಇನಾಮದಾರರು ಇಂಗ್ಲಿಷಿನಲ್ಲಿ ಬರೆದ ಕೆಲವೇ ಕೃತಿಗಳಲ್ಲಿ ಉತ್ತರ ರಾಮಚರಿತ ವನ್ನು ಕುರಿತ ಪ್ರಬಂಧವೊಂದು. ಪ್ರವಚನಗಳಿಗೆಂದು ಸಿದ್ಧಪಡಿಸಿದ ಇದನ್ನು ಸ್ವತಂತ್ರವಾಗಿ ಪ್ರಕಟಿಸಲಾಗಿದೆ. ಈ ಪ್ರಬಂಧಕ್ಕೆ ಕೈಯಿಕ್ಕುವಲ್ಲಿ ತಮಗಿರುವ ಅಧಿಕಾರಕ್ಕಿಂತ ಸಂಸ್ಕೃತ ಸಾಹಿತ್ಯದಲ್ಲಿ ತಮಗಿರುವ ಪ್ರೀತಿಯೇ ಕಾರಣವೆಂಬ ವಿನಯೋಕ್ತಿಯನ್ನು ಲೇಖಕರು ಹೇಳಿದ್ದರೂ ಪ್ರಚಲಿತ ಅಭಿಪ್ರಾಯಗಳನ್ನೂ ಆಕ್ಷೇಪಗಳನ್ನೂ ನಿರಾಕರಿಸಿ ಹೊಸ ದೃಷ್ಟಿಯನ್ನು ಸ್ಥಾಪಿಸಿ ಭವಭೂತಿಯ ಕೃತಿರತ್ನವು ಇನ್ನೂ ಉಜ್ವಲವಾಗಿ ಬೆಳಗುವಂತೆ ಮಾಡಿದ್ದಾರೆ. ಭವಭೂತಿಯ ವಿದ್ವತ್ತನ್ನೂ ಪ್ರತಿಭೆಯನ್ನೂ ವಿವರವಾಗಿ ಚರ್ಚಿಸಿ ಕೊನೆಯಲ್ಲಿ ಹೇಳುತ್ತಾರೆ : "It is a rare case of a person whose scholarship and orthodox breeding, instead of blunting his sensibilities and blinding him to the graces and grandeurs of emotional experience, only enlarged the range of his sensitiveness."

8

ಇನಾಮದಾರರು ಬರೆದ ಒಂದೇ ಒಂದು ನಾಟಕ – 'ಬಿಡುಗಡೆ' – ರಚಿತವಾದದ್ದು ಎಂದು ಎನ್ನುವ ಸೂಚನೆ ಅದರ ಪ್ರಕಟಿತ ಪ್ರತಿಗಳಲ್ಲಿಲ್ಲ. ಸುಮಾರು ಇದೇ ಅವಧಿಯಲ್ಲಿ ಎಂದು ಊಹಿಸುವುದಕ್ಕೆ ಕಾರಣವೆಂದರೆ ಮೋಹಿನಿಯ 'ಬಿಡುಗಡೆ'ಯ

ಪ್ರಯತ್ನ ಕೋರ್ಟಿನಲ್ಲಿ ಅತಂತ್ರವಾಗಿ ನಿಂತದ್ದು ಲೇಖಕರ ಮನಸ್ಸಿನಲ್ಲಿ ಬೇರೆ ಬೇರೆ ವಿಚಾರಗಳನ್ನು ಪ್ರಚೋದಿಸಿರುವುದು ಸಹಜ ಎಂಬುದು.

ಕೇಶವರಾಯರಿಗೆ ಕಮಲಾ ಲಲಿತಾ ಇಬ್ಬರು ಮಕ್ಕಳು. ಕಮಲಾ ಗಂಡ ವಿಟ್ಠಲ ಮನೋರೋಗಿಗಳ ಆಸ್ಪತ್ರೆಯಲ್ಲಿದ್ದು ಎಂಟು ವರ್ಷ ಕಳೆದಿವೆ. ವಿವಾಹ ವಿಚ್ಛೇದನಕ್ಕೆ ಅವಳು ಸಲ್ಲಿಸಿದ ಅರ್ಜಿಯ ತೀರ್ಪು ಸದ್ಯ ಹೊರಬೀಳಲಿದೆ. ಹೊರಬೀಳುತ್ತಲೂ ಅವಳನ್ನು ಮದುವೆಯಾಗುವದಕ್ಕೆ ಡಾ. ಮೋಹನರಾಯ ಸಿದ್ಧವಾಗಿದ್ದು ಅದಕ್ಕೆ ಬೇಕಾಗಿದ್ದ ಮಾನಸಿಕ ಸಿದ್ಧತೆಯನ್ನು ಇಬ್ಬರೂ ಬೆಳೆಸಿಕೊಂಡಿದ್ದಾರೆ.

ಲಲಿತೆಯ ಕಾಲೇಜು ಗೆಳೆಯ ಕಿಟ್ಟಿ ಅವಳನ್ನು ಮದುವೆಯಾಗುವ ಭರವಸೆ ಹುಟ್ಟಿಸಿ ಅವಳೊಡನೆ ಚಲ್ಲಾಟವಾಡುತ್ತಿದ್ದಾನೆ. ಆದರೆ ತಂದೆತಾಯಿಗಳ ಮಾತಿಗೆ ಎದುರು ಹೇಳುವ ಧೈರ್ಯವಿಲ್ಲದೆ ಬೇರೆ ಹುಡುಗಿಯೊಡನೆ ಲಗ್ನ ನಿಶ್ಚಯವಾಗಿದೆ. ಇದನ್ನು ತಿಳಿದು ಲಲಿತೆ ಅವನನ್ನು ಧಿಕ್ಕರಿಸುತ್ತಾಳೆ.

ಇಷ್ಟರಲ್ಲಿ ಆಸ್ಪತ್ರೆಯಲ್ಲಿದ್ದ ವಿಟ್ಠಲನಿಗೆ ಹಿಂದಿನ ಸ್ಮೃತಿ ನಿಚ್ಚಳವಾಗಿ ಬರಲು ಅವನು ಯಾರಿಗೂ ಹೇಳದೆ ಆಸ್ಪತ್ರೆಯಿಂದ ಹೊರಬಿದ್ದು ಕಮಲೆಯನ್ನು ಹುಡುಕಿಕೊಂಡು ಬರುತ್ತಾನೆ. ಕಮಲೆಗೆ ಮೊದಲು ದಿಗ್‌ಭ್ರಾಂತಿಯಾದರೂ ಅವನಿಗೆ ನಿಜವಾಗಿಯೂ ಗುಣವಾಗಿದೆ ಎಂದು ವಿಶ್ವಾಸವಾಗಲು ಸಂತೋಷಪಡುತ್ತಾಳೆ. ಅವಳ ತಂದೆಗೂ ಸಂತೋಷವಾಗುತ್ತದೆ.

ಆದರೆ ಮೋಹನರಾಯ ನಂಬಲು ಸಿದ್ಧನಿಲ್ಲ. ಕಿಟ್ಟಿಯಂತೂ ಲಲಿತೆಯ ತಂದೆಯಿಂದ ಅನುಭವಿಸಿದ ಅವಮಾನದ ಸೇಡು ತೀರಿಸಲಿಕ್ಕೆ ಬಂದಿದ್ದಾನೆ. ವಿಟ್ಠಲನ ಎದುರಿನಲ್ಲಿಯೇ ಮೋಹನರಾಯನ ಮತ್ತು ವಿವಾಹ ವಿಚ್ಛೇದದ ಮಾತುಗಳನ್ನಾಡಿ ಇಂತಹ ಮನೆಯೊಡನೆ ವಿವಾಹ ಸಂಬಂಧವನ್ನು ಒಪ್ಪುವುದು ಹೇಗೆ ಎಂದು ಪ್ರತಿಭಟಿಸುತ್ತಾನೆ. ವಿಟ್ಠಲನ ಹುಚ್ಚು ಮರುಕಳಿಸುತ್ತದೆ. ಅವನನ್ನೇ ಹುಡುಕುತ್ತಿದ್ದ ಆಸ್ಪತ್ರೆಯ ಸಿಬ್ಬಂದಿ ಅವನನ್ನು ಎಳೆದುಕೊಂಡು ಹೋಗುತ್ತಾರೆ.

ಈ ಕತೆಯ ಯೋಗಾಯೋಗಗಳನ್ನು ಬಹು ಅಚ್ಚುಕಟ್ಟಾಗಿ ಹೊಂದಿಸಿರುವುದ ರಿಂದಲೂ, ಇನಾಮದಾರರ ಬರವಣಿಗೆಯ ವೈಶಿಷ್ಟ್ಯವಾದ ಚುರುಕಾದ ಸಂಭಾಷಣೆ ಯಿಂದಲೂ, ನಾಟಕವು ರಂಗಭೂಮಿಯಲ್ಲಿ ಬಹು ಯಶಸ್ವಿಯಾಗಿ ನಡೆಯುತ್ತದೆ. ಸಮಾಜದಲ್ಲಿ ಚಿಕ್ಕದೇ ಎಂದು ಹೇಳಬಹುದಾದರೂ ಒಂದು ವರ್ಗದಲ್ಲಿ ಇಲ್ಲಿಯ ಸಮಸ್ಯೆಗಳು ಇನ್ನೂ ಪರಿಹಾರವನ್ನು ಕಂಡಿಲ್ಲ. ತರುಣ ತರುಣಿಯರು ವಿವಾಹದ ವಿಷಯದಲ್ಲಿ ಸ್ವತಂತ್ರರಾಗಿರಬೇಕೆಂಬ ನೆಪದಿಂದ ತರುಣಿಯರೊಡನೆ ಚಲ್ಲಾಟವಾಡುವ ತರುಣರಿಗೆ ತಮ್ಮ ಹಿರಿಯರ ಬೆಂಬಲವನ್ನು ಕಳೆದುಕೊಳ್ಳುವುದಕ್ಕೆ ಸಿದ್ಧರಾಗುವಷ್ಟು

ಧೈರ್ಯವಿಲ್ಲ. ಅತಂತ್ರವಾದ ದಾಂಪತ್ಯಕ್ಕೆ ಕಾನೂನು ಪರಿಹಾರವನ್ನೊದಗಿಸಿದರೂ ಅದನ್ನು ಪಡೆಯುವುದಕ್ಕೆ ಸ್ತ್ರೀಯರ ಮಾನಸಿಕ ಸಿದ್ಧತೆ ಪೂರ್ಣವಾಗಿಲ್ಲ. ಹೀಗೆ ಇಬ್ಬಂದಿಯಲ್ಲಿರುವ ತಲೆಮಾರಿನವರು ಎದುರಿಸಬೇಕಾಗಬಹುದಾದ ದುಃಖದುರಂತಗಳ ನಿರೂಪಣೆ ಸಮರ್ಪಕವಾಗಿದೆ. ಈ ದುರಂತದ ಛಾಯೆಯಲ್ಲಿ ನಡೆಯುವ ಹಾಸ್ಯ ಸರಸಗಳು ದುರಂತದ ಕರಾಳತೆಯನ್ನು ಎತ್ತಿ ತೋರಿಸುತ್ತದೆ.

ಇದರಲ್ಲಿ 88 ಪುಟಗಳಲ್ಲಿ ಸಾಧಿಸಿದ ಪರಿಣಾಮವನ್ನು ಕಾದಂಬರೀ ರೂಪದಲ್ಲಿ ಸಾಧಿಸಬೇಕಾಗಿದ್ದರೆ ಕನಿಷ್ಠ ಇದರ ನಾಲ್ಕರಷ್ಟಾದರೂ ಬರೆಯಬೇಕಾಗುತ್ತಿತ್ತು. ಹಾಗಿದ್ದರೂ ಇನಾಮದಾರರು ಈ ಮಾಧ್ಯಮವನ್ನು ಆರಿಸಿಕೊಳ್ಳದೇ ಇರುವದಕ್ಕೆ ಕಾರಣವನ್ನು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. ನಾಟಕಕಾರ ಪರಾವಲಂಬಿ. ಅವನು ಎಷ್ಟು ಪರಿಣಾಮಕಾರಿಯಾಗಿ ಬರೆದರೂ ಅದನ್ನು ಪ್ರೇಕ್ಷಕರಿಗೆ ಮುಟ್ಟಿಸುವವರು ನಿರ್ದೇಶಕರು ಮತ್ತು ನಟರು. ಅದರಲ್ಲಿಯೂ ನಮ್ಮ ನಿರ್ದೇಶಕರ ವಿಪರೀತಗಳನ್ನು ನೋಡಿ ಇನಾಮದಾರರು ಹಿಂಜರಿಯುವುದರಲ್ಲಿ ಸೋಜಿಗವೇನೂ ಇಲ್ಲ. ಪ್ರಪಂಚದಲ್ಲಿ ಖ್ಯಾತನಾಮರಾದ ನಾಟಕಕಾರರೆಲ್ಲರೂ ತಮ್ಮದೇ ಒಂದು ವಿಶಿಷ್ಟ ನಟವರ್ಗಕ್ಕಾಗಿಯೇ ನಾಟಕಗಳನ್ನು ಬರೆದವರು. ನಮ್ಮ ಸಾಹಿತ್ಯಿಕ ನಾಟಕಗಳಲ್ಲಿ ಇಂತಹ ಸಂಬಂಧವೊಂದು ಸ್ಥಿರಪಟ್ಟಿಲ್ಲದಿರುವುದೇ ಈ ನಾಟಕಗಳ ಜನಪ್ರಿಯತೆಗೊಂದು ಅಡ್ಡಿಯಾಗಿದೆ.

9

'ಈ ಪರಿಯ ಸೊಬಗು' ಮತ್ತು 'ಮುಗಿಯದ ಕತೆ' ಪ್ರಕಟವಾದ ಎಂಟು ವರ್ಷಗಳ ತರುವಾಯ ಇನಾಮದಾರರು ಮತ್ತೆ ತಮ್ಮ ವಿಶಿಷ್ಟ ಮಾಧ್ಯಮವಾದ ಕಾದಂಬರೀ ಪ್ರಪಂಚಕ್ಕೆ ಮರಳಿಬಂದರು. ಈಗ ಪ್ರಕಟವಾದ ಕಾದಂಬರಿ 'ಚಿತ್ರಲೇಖಾ'.

'ಚಿತ್ರಲೇಖಾ' ಕತೆಯ ಕೇಂದ್ರವೂ ಮತ್ತೆ — ಪಾಶ್ಚಿಮಾತ್ಯರು ಹೇಳುವಂತೆ — ಚಿರಂತನ ತ್ರಿಕೋನ. ನಮ್ಮವರಿಗೂ ಅದು ಹೊಸದಲ್ಲ — "ಯಾಂ ಚಿಂತಯಾಮಿ ಸತತಂ ಮಯಿ ಸಾವಿರಕ್ತಾ ಸಾಪ್ಯನ್ಯಮಿಚ್ಛತಿ ಜನಂ." ಇಲ್ಲಿ ನಡುವೆ ಒಂದು ಕೊಂಡಿ "ಸ ಜನೋನ್ಯಸಕ್ತಃ" ಎಂಬುದಿಲ್ಲ. ಆದರೆ ಕೊನೆಯ 'ಅಸ್ಮತ್ ಕೃತೇ ಚ ಪರಿತಪ್ಯತಿ ಕಾಚಿದನ್ಯಾ' ಕೆಲಮಟ್ಟಿಗಿದೆ.

ಅಶೋಕ-ರಮೇಶ ಇಬ್ಬರೂ ಬಾಲ್ಯ ಸ್ನೇಹಿತರು. ಅಶೋಕನಿಗೆ ಹೊಸದರಲ್ಲಿಯೆ ಮದುವೆಯಾದ ಹೆಂಡತಿ ಕುಸುಮಾ ಮತ್ತು ಅವನನ್ನು ಸಾಕಿದ ಚಿಕ್ಕಮ್ಮ ಸರಸಮ್ಮ ಇದ್ದಾರೆ. ರಮೇಶನಿಗೆ ಯಾರೂ ಇಲ್ಲ. ಇಬ್ಬರೂ ರಸಿಕರು, ಭಾವಜೀವಿಗಳು. ಊರಿಂದ ಹೊರಗೆ

ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಅವರಿಗೆ ಇಷ್ಟವಾದದ್ದು ಅಲ್ಲಿಯ ಸೃಷ್ಟಿ ಸೌಂದರ್ಯ, ಬೆಳದಿಂಗಳು ಇತ್ಯಾದಿ. ಮನೆಯ ಹತ್ತಿರವೇ ದೊಡ್ಡದೊಂದು ಅಶ್ವತ್ಥದ ಮರವಿರುವುದು ಸರಸಮ್ಮನಿಗೆ ಅವ್ಯಕ್ತ ಭೀತಿಯ ಕಾರಣವಾಗಿದೆ. ಇವರ ಮನೆಗಳ ಎದುರುಗಡೆ ರಸ್ತೆಯ ಆಚೆಯಲ್ಲಿ ಒಬ್ಬ ನಿವೃತ್ತ ಅರಣ್ಯಖಾತೆಯ ಅಧಿಕಾರಿ ದಾಮೋದರರಾಯರು ಮನೆ ಕಟ್ಟಿಕೊಂಡಿದ್ದಾರೆ. ಅವರ ಮಗಳು ಪ್ರತಿಭಾ ಮುಂಬಯಿ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿದ್ದಾಳೆ. ಅವಳಿಗೆ ಮದುವೆಯ ವಯಸ್ಸು, ಇನ್ನೂ ಮದುವೆಯಾಗಿಲ್ಲ. ಅಶೋಕ-ರಮೇಶರ ಇನ್ನೊಬ್ಬ ಗೆಳೆಯ ಅನಂತ, ಅಹಮದಾಬಾದಿನಲ್ಲಿ ತತ್ವಜ್ಞಾನದ ಪ್ರಾಧ್ಯಾಪಕ. ಅಶೋಕನ ತಮ್ಮ ನರಹರಿ ಡಾಕ್ಟರು ; ಬೇರೆ ಜಾತಿಯವಳಾದ ಲೇಡಿ ಡಾಕ್ಟರ್ ಮಾಲತಿಯನ್ನು ಮದುವೆಯಾಗಿ ಮುಂಬೈನಲ್ಲಿದ್ದಾನೆ.

ಹೊಸ ಮನೆಗೆ ಬಂದಾಗ ರಮೇಶ – ಕುಸುಮಾ ಪುಣೆಯಲ್ಲಿ ಒಬ್ಬರನ್ನೊಬ್ಬರು ಪ್ರೀತಿಸಿದ್ದರೆಂದೂ ಕುಸುಮಾಳ ತಂದೆಯ ದರ್ಪದಿಂದ ಮದುವೆಯಾಗಲಿಲ್ಲ ಎಂದೂ ಹಳೆಯ ಕತೆ ಮರುಕಳಿಸುತ್ತದೆ. ಅಶೋಕನೊಡನೆ ಮದುವೆಯಾಗಿ ಐದು ವರ್ಷಗಳಾದರೂ ಕುಸುಮಾಗೆ ಮಕ್ಕಳಾಗಿರಲಿಲ್ಲವೆಂಬ ಮಾತನ್ನು ಸರಸಮ್ಮ ಮತ್ತೆ ಮತ್ತೆ ಹೇಳುವುದರಿಂದ ಕುಸುಮಾಗೆ ಕಿರಿಕಿರಿಯಾಗಿರುತ್ತದೆ. ಅಂತೂ ಕುಸುಮಾ-ರಮೇಶರ ಹಳೆಯ ಸೆಳೆತ ಮತ್ತೆ ತಲೆದೋರುತ್ತದೆ. ಆದರೆ ರಮೇಶ ಬರಹಗಾರ, ಪ್ರತಿಭಾ ಚಿತ್ರಗಾರ್ತಿ ಎಂಬ ಕಾರಣದಿಂದ ಪ್ರತಿಭಾ ರಮೇಶನಲ್ಲಿ ಆಶೆಯಿಟ್ಟುಕೊಂಡಿರುತ್ತಾಳೆ.

ಒಂದು ದಿನ 'ಕಗ್ಗಪ್ಪನ ಕಾಡು' ಎಂಬ ಒಂದು ನಿರ್ಜನವಾದ ಸೃಷ್ಟಿಸೌಂದರ್ಯದ ನೆಲೆಗೆ ಅಶೋಕ-ರಮೇಶ-ಅನಂತ ಮತ್ತು ಕುಸುಮಾ-ಪ್ರತಿಭಾ-ಮಾಲತಿ ವಿಹಾರಕ್ಕೆ ಹೋಗುತ್ತಾರೆ. ಅಲ್ಲೊಂದು ದೇಗುಲದ ಹತ್ತಿರ ಕುಳಿತಿರುವಾಗ ಮೊದಲು ರಮೇಶ, ಆಮೇಲೆ ಮೂವರೂ ಹೆಂಗಸರು ಕಾಡಿನಲ್ಲಿ ಹೊರಟುಹೋಗುತ್ತಾರೆ. ಕತ್ತಲಾದಂತೆ ಎಲ್ಲರೂ ಒಬ್ಬೊಬ್ಬರಾಗಿ ದೇಗುಲದ ಹತ್ತಿರ ಬರುತ್ತಾರೆ. ಕುಸುಮಾ ಕಾಣುವುದಿಲ್ಲ. ಎಲ್ಲರೂ ಗಾಬರಿಯಿಂದ ಅತ್ತಿತ್ತ ಹುಡುಕುವಾಗ ಕುಸುಮಾ ತತ್ತರಿಸುತ್ತ ಬರುತ್ತಿರುವುದು ಕಾಣಿಸುತ್ತದೆ. ಅಶೋಕ 'ಕುಸುಮಾ' ಎಂದು ಅರಚುತ್ತಿರುವಂತೆಯೇ ಅವಳು ಧೊಪ್ಪನೆ ಬಿದ್ದು ಎಚ್ಚರದಪ್ಪುತ್ತಾಳೆ. ಮಾಲತಿಯ ಉಪಚಾರದಿಂದ ಅವಳು ಕಾರಿನಲ್ಲಿ ಒರಗಿಕೊಂಡೇ ಮನೆಯವರೆಗೆ ಬರುವಂತಾದರೂ ಅವಳು ಮನೆಗೆ ಬಂದು ಹಾಸಿಗೆ ಹಿಡಿದವಳು ಏಳುವುದೇ ಇಲ್ಲ.

ಈ ಮೊದಲು ಪ್ರತಿಭಾ ತನ್ನ ಅಪೇಕ್ಷೆಯಂತೆ ರಮೇಶನಿಗೆ ಅವನದೇ ಒಂದು, ಮತ್ತು ಅವನ ಅಪೇಕ್ಷೆಯಂತೆ ಕುಸುಮಾಳದೊಂದು ಚಿತ್ರಗಳನ್ನು ಬರೆದು ಕೊಟ್ಟಿರುತ್ತಾಳೆ.

ಕಗ್ಗಪ್ಪನ ಕಾಡಿನಿಂದ ಬಂದ ಮೇಲೆ ರಮೇಶ ಕೆಲವು ದಿನ ಅಸ್ವಸ್ಥನಂತೆ ಹಾಗೂ ಹೀಗೂ ಕಾಲಕಳೆದು ಕೆಲವು ದಿನ ಮುಂಬೈ ಮುಂತಾದ ಕಡೆ ಸುತ್ತಾಡಿಕೊಂಡು

ಬರುತ್ತೇನೆಂದು ಹೊರಡುತ್ತಾನೆ. ಹೊರಡುವ ಮೊದಲು ತಾನು ಬರೆದ ರಮೇಶನ ಚಿತ್ರವನ್ನು ಪ್ರತಿಭಾ ಅವನಿಂದ ಕೇಳಿ ಪಡೆಯುತ್ತಾಳೆ.

ಕುಸುಮಾ ಜ್ವರದಿಂದ ಹಾಸಿಗೆ ಹಿಡಿದವಳು ಹದಿನಾರು ದಿನ ಬಳಲಿ ಯಾರ ಚಿಕಿತ್ಸೆಯಿಂದಲೂ ಗುಣವಾಗದೆ ತೀರಿಹೋಗುತ್ತಾಳೆ.

ಮುಂದಿನ ಸುಮಾರು ಒಂದೂವರೆ ವರ್ಷಗಳಲ್ಲಿ ಅಶೋಕ-ಪ್ರತಿಭಾ ನಡುವೆ ಸಲುಗೆ ಬೆಳೆಯುತ್ತದೆ. ಅವಳ ತಾಯಿತಂದೆಗೂ ಇದು ಒಪ್ಪಿತವಾದದ್ದೇ. ರಮೇಶ ಹೊರಟು ಹೋದ ಕೆಲವು ದಿನಗಳವರೆಗೆ ತನ್ನ ವಿಳಾಸ ತಿಳಿಸದೆಯೇ ಪತ್ರ ಬರೆಯುತ್ತಿರುತ್ತಾನೆ. ಮುಂದೆ ಅದೂ ಇಲ್ಲದೆ ಅವನು ಏನಾದನೆಂಬುದೇ ಯಾರಿಗೂ ತಿಳಿಯುವುದಿಲ್ಲ. ನೆನಪಾದಾಗ ಎಲ್ಲರೂ ಆಗಾಗ ಮರುಗುತ್ತಿರುತ್ತಾರೆ.

ಅಶೋಕನು ಕೇಳಿದಂತೆ ಪ್ರತಿಭಾ ಅವನಿಗೂ ಒಂದು ಕುಸುಮಾಳ ಚಿತ್ರವನ್ನು ಬರೆದುಕೊಡುತ್ತಾಳೆ. ಅದನ್ನವನು ಮನೆಯ ಹಾಲಿನಲ್ಲಿ ಎದ್ದು ಕಾಣುವಂತೆ ಹಾಕಿ ಗೌರವಿಸುತ್ತಾನೆ. ಅದಕ್ಕೆ ಪ್ರತಿಭಾಳದೇನೂ ಆಕ್ಷೇಪಣೆಯಿಲ್ಲ.

ಇಷ್ಟರಲ್ಲಿಯೇ ಅನಂತನೊಮ್ಮೆ ರಜೆಯಲ್ಲಿ ಬಂದಾಗ ಅವನು ಪ್ರತಿಭಾಳಲ್ಲಿ ಅನುರಕ್ತನೆಂದು ತೋರಿಸಿದ್ದಾನೆ. ಸ್ವಲ್ಪ ದಿನಗಳಲ್ಲಿಯೇ ಅವನಿಗೆ ಹೆಚ್ಚಿನ ಅಧ್ಯಯನಕ್ಕೆ ವಿದೇಶಕ್ಕೆ ಹೋಗುವ ಅವಕಾಶವೊಂದು ಬರುತ್ತದೆ. ಅವನು ಹೊರಡುವ ಸಿದ್ಧತೆಯಲ್ಲಿ ಇದ್ದಾಗ ಅವನ ಹೆಸರಿಗೆ ರಮೇಶನಿಂದ ಎರಡು ರಿಜಿಸ್ಟರ್ಡ್ ಪೆಕೆಟ್ಟುಗಳು ಬರುತ್ತವೆ. ಒಂದರಲ್ಲಿ 'ಚಿತ್ರಲೇಖ' ಎಂಬ ಒಂದು ಹಸ್ತಪ್ರತಿಯೂ ಇನ್ನೊಂದರಲ್ಲಿ ಒಂದು ಚೆಕ್ ಮತ್ತು ಅನಂತನ ಹೆಸರಿಗೆ ಅಧಿಕಾರಪತ್ರ ಇರುತ್ತದೆ. ತನ್ನದೆಲ್ಲವನ್ನೂ ರಮೇಶ ಬಿಟ್ಟಿದ್ದಾನೆ : ಚೆಕ್ಕಿನ ಹಣ ಅವನ ಸಮಗ್ರ ಉಳಿಕೆಯದು, ಅದನ್ನು ಪ್ರತಿಭಾ-ಕುಸುಮಾ-ಮಾಲತಿಯರಿಗೆ ಹಂಚಿ ಕೊಡಬೇಕು. ತನ್ನ ಮನೆಯನ್ನು ಅನಂತನಿಗೆ ಮತ್ತು ಅಶೋಕನ ಪಾಲುದಾರನಾಗಿ ಪ್ರೆಸ್ಸಿನಲ್ಲಿ ಹಾಕಿದ ಹಣವನ್ನು ಅಶೋಕನಿಗೆ ಕೊಡಬೇಕು.

ಮುಂಬಯಿಯಲ್ಲಿ ಅನಂತನಿಗೆ ಎರಡು ಪೆಕೆಟ್ಟುಗಳು ತಲುಪಿದ ದಿನವೇ ಧಾರವಾಡದಲ್ಲಿ ಪ್ರತಿಭಾಳ ಹೆಸರಿಗೂ ಎರಡು ಪೆಕೆಟ್ಟುಗಳು ಬರುತ್ತವೆ. ಅದು ಬಂದಾಗ ಅಶೋಕ ಅವರ ಮನೆಯಲ್ಲಿಯೇ ಊಟ ಮಾಡಿ, ಎಲ್ಲರೂ ಹರಟುತ್ತ ಕುಳಿತಿರುತ್ತಾರೆ. ಅಶೋಕ - ಪ್ರತಿಭಾರ ಮದುವೆ ನಿಶ್ಚಿತವಾದಂತೆಯೇ ಇದೆ. ಆಗಲೇ ಬಂದ ಪೆಕೆಟ್ಟಿನಲ್ಲಿ ಕುಸುಮಾಳ ಚಿತ್ರವಿರುವುದನ್ನು ಕಂಡು ಅಶೋಕ ಉದ್ವಿಗ್ನನಾಗಿ ಮನೆಗೆ ಹೋಗುತ್ತ ಪ್ರತಿಭಾಳಿಗೆ ಬರಹೇಳುತ್ತಾನೆ. ಅಲ್ಲಿ ಅವರ ನಡುವೆ ಬಿರುಸಾಗಿ ಮಾತುಕತೆ ನಡೆಯುತ್ತದೆ. ಕುಸುಮಾ ತನ್ನೊಡನೆ ಉದಾಸೀನಳಾಗಿರುತ್ತಿದ್ದ ಮತ್ತು ರಮೇಶನೊಡನೆ ಗೆಲುವಾಗಿರುತ್ತಿದ್ದ ಸನ್ನಿವೇಶಗಳನ್ನೆಲ್ಲ ನೆನೆದು ನೆನೆದು ಅಶೋಕನ ಮನಸ್ಸು ಅವರಿಬ್ಬರ

ಬಗೆಯಲ್ಲಿ ಕಹಿಯಾಗುತ್ತದೆ. ಅನಂತನು ಕಳಿಸಿದ ರಮೇಶನ ಪತ್ರವನ್ನೋದಿದರೂ ಅವನ ಮನಸ್ಸು ತಿಳಿಯಾಗುವುದಿಲ್ಲ.

ಇಲ್ಲಿ ನಡೆದ ಘಟನೆಗಳು ಅನಂತ-ನರಹರಿ-ಮಾಲತಿಯರಿಗೆ ಗೊತ್ತಿರುವುದಿಲ್ಲ. ಕುಸುಮಾಳ ಕತೆ ಒಂದು ರೀತಿ, ರಮೇಶನದು ಇನ್ನೊಂದು ರೀತಿ ಮುಗಿದುಹೋಗಿದ್ದರಿಂದ ಅಶೋಕ-ಪ್ರತಿಭಾಳ ಹೊಸ ಸಂಬಂಧಗಳನ್ನು ಕುರಿತು ಸುಖಮಯ ಚಿತ್ರಗಳನ್ನು ಹೆಣೆಯುತ್ತ ಅವರು ಮುಂಬಯಿಂದ ಧಾರವಾಡಕ್ಕೆ ಬರುತ್ತಾರೆ. ಇಲ್ಲಿಯ ಪರಿಸ್ಥಿತಿ ಅವರಿಗೆ ನಿರಾಶೆಯನ್ನುಂಟುಮಾಡುತ್ತದೆ. ಅಷ್ಟರಲ್ಲಿ 'ಚಿತ್ರಲೇಖ'ವನ್ನು ಅವರು ಮೂವರೂ ಓದಿರುತ್ತಾರೆ. 'ಚಿತ್ರಾ' ಯಾರು ಎಂಬ ಚರ್ಚೆ ನಡೆದಿರುತ್ತದೆ. ಅವಳೇ ಕುಸುಮಾ ಎಂದು ಮಾಲತಿ ಖಚಿತವಾಗಿ ಹೇಳಿ ಕುಸುಮಾಳ ಮುಖದಿಂದಲೇ ತಾನು ಕೇಳಿದಂತೆ ಪುಣೆಯಲ್ಲಿ ಕುಸುಮಾಳ ತಂದೆಯ ಮನೆಯಲ್ಲಿ ಕುಸುಮಾ-ರಮೇಶರ ನಡುವೆ ಬೆಳೆದ ಪ್ರೇಮದ ಕತೆಯನ್ನು, ಅದು ಮುಂದೆ ಸಾಗದೆ ಅಶೋಕನೊಡನೆ ಮದುವೆಯಾದದ್ದನ್ನು ಹೇಳುತ್ತಾಳೆ. ರಮೇಶ-ಅಶೋಕ ಇಬ್ಬರೂ ಕನಿಕರಕ್ಕೆ ಪಾತ್ರರೆಂದು ಅವರು ಮರುಗುತ್ತಾರೆ. ರಮೇಶ- ಕುಸುಮಾ ನಿರಪರಾಧಿಗಳೆಂದು ಅವರು ಎಷ್ಟು ವಾದಿಸಿದರೂ ಅಶೋಕನಿಗೆ ಮನವರಿಕೆಯಾಗುವುದಿಲ್ಲ. ಕೊನೆಗೆ ಮಾಲತಿ ಕುಸುಮಾ ಸಾಯುವ ಮುಂಚೆ ತನಗೆ ಕಗ್ಗಪ್ಪನ ಕಾಡಿನಲ್ಲಿ ನಡೆದದ್ದನ್ನು ಹೇಳಿದಂತೆಯೇ ಈಗ ಎಲ್ಲರಿಗೂ ಹೇಳುತ್ತಾಳೆ. ಆ ಕತೆಯನ್ನು ಕೇಳಿ ಅಶೋಕ ಶೋಕಮೂಕನಾದ. 'ಚಿತ್ರಲೇಖಾ' ಅವನ ಪಾಲಿಗೆ ಈಗ ಒಂದು 'ಪುಣ್ಯಗ್ರಂಥ'ವಾಗಿದೆ ; ಹಲವಾರು ಸಲ ಅದನ್ನು ಓದಿದ್ದಾನೆ.

ಸರಸಮ್ಮನ ಒತ್ತಾಯದಂತೆ ಕುಸುಮಳ ತಂಗಿ ಸುಧಾಳೊಡನೆ ಅವನ ಮದುವೆಯಾಗಿದೆ. ಸುಧಾ ಕುಸುಮಳ ಪ್ರತಿರೂಪವಾಗಿದ್ದಾಳೆ. ಅನಂತ ವಿದೇಶದಿಂದ ಮರಳಿದ್ದಾನೆ ; ಪ್ರತಿಭಾ ಅವನನ್ನು ಮದುವೆಯಾಗಿದ್ದಾಳೆ.

ಕತೆ ಇಲ್ಲಿಗೇ ಮುಗಿಯುವುದಿಲ್ಲ. ಒಂದು ಮಧ್ಯಾಹ್ನ ಬೈರಾಗಿಯೊಬ್ಬ ಬಂದು ಅಶೋಕನ ಮನೆಯ ಬಾಗಿಲು ತಟ್ಟುತ್ತಾನೆ. "ಅಶೋಕ ಇಲ್ಲವೆ ?" ಎಂದಾಗ ಅಶೋಕ ಬಾಗಿಲಿಗೆ ಬರುತ್ತಾನೆ. ಬೈರಾಗಿ ರಮೇಶ್. ಕುಸುಮಾ ತೀರಿಹೋದ ಸಂಗತಿ ತಿಳಿಯುತ್ತದೆ. "ತನ್ನನ್ನು ಉದ್ಧಾರಮಾಡಿದ ಮಹಾಮಾತೆ" ಎಂದು ಅವಳ ಚಿತ್ರಕ್ಕೆ ಅಡ್ಡ ಬೀಳುತ್ತಾನೆ. ಎರಡು ಮೂರು ದಿನ ಗೆಳೆಯರೆಲ್ಲರೂ ಮಾತಾಡಿಕೊಂಡು ಕಳೆಯುತ್ತಾರೆ. ತನ್ನ ಕೆಲಸವಾಯಿತೆಂದು ರಮೇಶ ಹೊರಡುತ್ತಾನೆ. "ನಾಳೆ ಕುಸುಮಾ ಹೋಗಿ ನಾಲ್ಕು ವರ್ಷವಾಗುತ್ತದೆ" ಎಂದದ್ದಕ್ಕೆ ಒಂದು ದಿನ ಇರಲು ಒಪ್ಪುತ್ತಾನೆ. ಮರುದಿನ ಬೆಳಿಗ್ಗೆ ಅಶೋಕ ಅನಂತರು ಅವನನ್ನು ಕಾಣಲು ಬಂದಾಗ ಮನೆಯ ಹಿಂದಿನ ಅಶ್ವತ್ಥಕಟ್ಟೆಯ ಮೇಲೆ ಮಲಗಿರುತ್ತಾನೆ. ಹತ್ತಿರ ಬಂದಾಗ "ಬಂದಿರಾ, ನಿಮಗಾಗಿಯೇ ಕಾಯುತ್ತಿದ್ದೇನೆ-"

ಎಂದು ಮಲಗಿದ್ದಲ್ಲಿಯೇ ಕರೆಯುತ್ತಾನೆ. ಅವರಿಬ್ಬರ ಕೈಗಳನ್ನು ತನ್ನ ಎರಡೂ ಕೈಗಳಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಎದೆಯ ಮೇಲಿರಿಸಿಕೊಂಡ. ಒಮ್ಮೆ ದೀರ್ಘವಾಗಿ ಉಸಿರನ್ನು ಎಳೆದ. ಮತ್ತೊಮ್ಮೆ ಉಸಿರನ್ನು ಹಾಗೆಯೇ ಎಳೆದ. ಗೆಳೆಯರಿಬ್ಬರಿಗೂ ಅರ್ಥವಾಯಿತು. ''ಹುಣ್ಣಿಮೆಯ ಚಂದ್ರಾಸ್ತ ಸಮಯದ ಪ್ರಕಾಶ ಆತನ ಮುಖದ ಮೇಲಿಂದ ಚಿರಪ್ರಶಾಂತ ಮೃತ್ಯುಮ್ಲಾನವಾಗಿ ಸೂಸುತ್ತಿತ್ತು.''

ಮುನ್ನೂರೈವತ್ತು ಪುಟಗಳಷ್ಟು ವಿಸ್ತಾರವಾಗಿರುವ ಈ ಕತೆಯಲ್ಲಿ ಇನಾಮದಾರರಿಗೆ ವಿಶೇಷವಾಗಿ ಸಿದ್ಧಿಸಿದ ಸೃಷ್ಟಿ ಸೌಂದರ್ಯದ ವರ್ಣನೆಗಳು, ಸ್ತ್ರೀಪುರುಷರ ಸರಸ ಸಲ್ಲಾಪಗಳು ವಿಪುಲವಾಗಿ ಹರಡಿವೆ. ಲೇಖಕರು ಹೇಳಿಕೊಂಡಿರುವಂತೆ ಬಹು ಸಂಖ್ಯಾತರಾದ ಓದುಗರ ಮೆಚ್ಚುಗೆಯ ಕಾಗದಗಳು ಅವರಿಗೆ ಸಂತೃಪ್ತಿಯನ್ನು ತಂದಿದ್ದರೂ ಕೆಲವೇ ಪ್ರತಿಕೂಲವಿಮರ್ಶೆಯ ಮಾತುಗಳನ್ನು ವಿಸ್ತಾರವಾಗಿಯೇ ಉತ್ತರಿಸಿದ್ದಾರೆ. ರಮೇಶನ ಪಾತ್ರ ಚಿತ್ರಣದಲ್ಲಿ ಮಾನಸಿಕ ಗೊಂದಲವಿದೆ ಎಂಬ ಟೀಕೆಯನ್ನು ಅವರು ಉತ್ತರಿಸುವಲ್ಲಿಯ ಕೆಲವು ಮಾತುಗಳು ಹೀಗಿವೆ : ''ಚಿತ್ರ, ಶಿಲ್ಪ, ನಾದದಾಚೆಯ ಪ್ರಪಂಚಕ್ಕೆ ಸೇರಿದ ಚೇತನ ಚಿತ್ರಾ.'' ''ಆ ಚೇತನದ ಸಂಪರ್ಕ ಸಾನ್ನಿಧ್ಯಗಳು ಒಂದು ದಿವ್ಯಾನುಭವ.'' ''ನನ್ನನ್ನು ಉದ್ಧಾರದ ಮಾರ್ಗದಲ್ಲಿ ಮುನ್ನಡೆಸುವ ಶಕ್ತಿ ಆಕೆ... ಈ ಬಾಳಿಗೆ ಒಂದು ಸ್ಫೂರ್ತಿಯಾಗಿ ಅನನ್ಯಸಾಧಾರಣವಾದ ಆನಂದಕ್ಕೆ ಕಾರಣಳಾಗಿ ಸ್ವರ್ಗಸೋಪಾನಗಳಾಚೆ ಹೋಗುವಂತೆ ನನ್ನನ್ನು ಯಾವಾಗಲೂ ಕೈಹಿಡಿದು ನಡೆಸಿದವಳು....''

ಇಂತಹ ಅಮೂರ್ತ ಅನುಭವಗಳಿಗೆ ಸ್ಪಂದಿಸಬಲ್ಲ ಸೂಕ್ಷ್ಮಸಂವೇದಿಯಾದ ಮನುಷ್ಯನಿಗೆ ತಮ್ಮಿಬ್ಬರ ನಡವಳಿಕೆಯಿಂದ ತನ್ನ ಜೀವದ ಗೆಳೆಯನ ಮನಸ್ಸಿಗೆ ಎಂತಹ ನೋವು ಆಗುತ್ತಿತ್ತೆಂಬುದು ಹೇಗೆ ತಿಳಿಯದೆಹೋಯಿತೊ ? ಯಾವ ಗಂಡಸೂ ಎಷ್ಟು ಸಮೀಪವಾಗಿದ್ದವರಿಗೂ ಹೇಳಲಿಕ್ಕೆ ಕಷ್ಟವಾಗುವಂತಹ ಮಾತುಗಳನ್ನು ಅಶೋಕ ಅನಂತನೆದುರು ಸ್ಪಷ್ಟವಾಗಿ ಹೇಳುತ್ತಾನೆ — ''ಕಷ್ಟವೇನೂ ಇಲ್ಲ. ಆದರೆ ಸುಖವಿಲ್ಲ.'' ''ಮನಶ್ಶಾಂತಿ ಇಲ್ಲದಾಗ ಯಾವ ಅನುಕೂಲ ಇದ್ದರೇನು?'' ''ನಾನು ತನ್ನನ್ನು ಸರಿಯಾಗಿ ಪ್ರೀತಿಸುತ್ತಿಲ್ಲ ಎಂದು ಕುಸುಮಳಿಗೆ ಎನಿಸುತ್ತಿದ್ದ ಹಾಗಿದೆ...'' ಈ ಅಸುಖದ ಸುಳಿವು ಅವನ ನೆರೆಯಲ್ಲಿಯೇ ವರ್ಷಗಟ್ಟಲೆ ಇದ್ದ ರಮೇಶನಿಗೆ ಏಕೆ ಹತ್ತಲಿಲ್ಲ ?

ಇಂತಹ ಅಮೂರ್ತ ಅನುಭವಗಳಿಂದ ಆನಂದಪಡೆಯಬಲ್ಲವನು ಕಗ್ಗಪ್ಪನ ಕಾಡಿನಲ್ಲಿ ಅಕಸ್ಮಾತ್ (!) ತನ್ನ ಗೆಳತಿಯರಿಂದ ಬೇರೆಯಾದ ಕುಸುಮಳನ್ನು ಸಂಧಿಸಿ ಏಕಾಂತದಲ್ಲಿ ಅವಳ ಹಸ್ತಸ್ಪರ್ಶವನ್ನು ಬಯಸಿದ್ದೇಕೆ ?

ರಮೇಶ-ಕುಸುಮ ಪ್ರೀತಿಸಿದರು, ಆದರೆ ಪಾಪ ಮಾಡಲಿಲ್ಲ ಎಂದು ಮಾಲತಿ ಹೇಳುತ್ತಾಳೆ. ಲೇಖಕರ ಅಭಿಪ್ರಾಯವೂ ಅದೇ. ಇವರ ಪಾಪದ ಕಲ್ಪನೆಯೇ ಬಹುವಿಚಿತ್ರ

ಎನಿಸುತ್ತದೆ. ಅಶೋಕ ಬೆಳದಿಂಗಳಲ್ಲಿ ತಿರುಗಾಟಕ್ಕೆ ಹೋಗೋಣವೆಂದರೆ ರಮೇಶ ನಾಟಕಕ್ಕೆ ಹೋಗೋಣ ಎನ್ನುತ್ತಾನೆ. ಕುಸುಮಾ ಒಪ್ಪುವುದು ರಮೇಶನ ಸೂಚನೆಯನ್ನು, ಅಶೋಕ ಮುಂಬಯಿಗೆ ಕರೆದರೆ ಕುಸುಮಾ ಹೋಗುವುದಿಲ್ಲ. ಪ್ರತಿಭಾಗೆ ತಿರುಗಾಡಲಿಕ್ಕೆ ಹೋಗುವದೆಂದು ಹೇಳಿದವರು ಕತ್ತಲಾಯಿತೆಂದು ರಮೇಶ - ಕುಸುಮಾ ತಾವಿಬ್ಬರೇ ಕೆರೆಯ ಅಂಚಿನಲ್ಲಿ ಹೋಗಿ ಕುಳಿತುಕೊಳ್ಳಬಲ್ಲರು. ಕಗ್ಗಪ್ಪನ ಕಾಡಿಗೆ ಅಶೋಕ ಕಾರಿನಲ್ಲಿ ಹೋಗೋಣವೆಂದರೆ ರಮೇಶ ನಡೆದುಕೊಂಡು ಹೋಗೋಣವೆನ್ನುತ್ತಾನೆ. ದಾರಿಯಲ್ಲಿ ಅಶೋಕನ ಕಾರು ಹಿಂದಿನಿಂದ ಪ್ರತಿಭಾ ಮಾಲತಿ ಕುಸುಮಾಸಹಿತ ಬರುತ್ತದೆ. ರಮೇಶ ಕಾರಿನಲ್ಲಿ ಬರುವುದಿಲ್ಲವೆನ್ನುತ್ತಾನೆ. ನಾವೂ ಇಳಿದು ನಡೆದುಕೊಂಡು ಹೋಗೋಣವೆ ಎನ್ನುತ್ತಾಳೆ ಕುಸುಮಾ. ಕಾಡಿನಲ್ಲಿ ಉಪಾಹಾರವಾದಮೇಲೆ ದೇಗುಲದ ಎದುರಿನಲ್ಲಿ ಹಾಯಾಗಿ ಕುಳಿತಿರುವಾ ಎಂದು ಅಶೋಕನೆಂದರೆ ಸೂರ್ಯಾಸ್ತವನ್ನು ನೋಡಲಿಕ್ಕೆ ಇದಕ್ಕೂ ಒಳ್ಳೆಯ ಜಾಗವಿದೆ ಎನ್ನುತ್ತ ರಮೇಶ ಹೊರಟುಹೋಗುತ್ತಾನೆ. ಹೆಂಗಸರು ಮೂವರೂ ಜತೆಯಾಗಿ ಹಣ್ಣು ಆರಿಸಲಿಕ್ಕೆ ಹೋದವರು ಬೇರೆಬೇರೆಯಾದರೂ ಕುಸುಮಾ ಒಬ್ಬಳೇ ಇರುವದನ್ನು ನೋಡಿ ರಮೇಶ ಅವಳನ್ನು ಸಂಧಿಸುತ್ತಾನೆ. ಹೀಗೇ ವಿಹಾರದ ಮಾತು ಬಂದಾಗ ಕುಸುಮಾ ಅಶೋಕನ ಮಾತನ್ನೊಪ್ಪಿದ ಒಂದು ಸಂದರ್ಭವೂ ನೆನಪಿಗೆ ಬರುವುದಿಲ್ಲ, ಅವಳ ಮತ ಯಾವಾಗಲೂ ರಮೇಶನ ಕಡೆಗೆಯೇ.

ಇದರ ಪರಿಣಾಮ ಅಶೋಕನ ಮೇಲೆ ಏನಾಗಿತ್ತೆಂಬುದನ್ನು ಹೇಳಿಯಾಗಿದೆ. ಸಾಮಾನ್ಯವಾಗಿ ಪಾಪವೆಂದರೆ ಪರಪೀಡನ ಎಂದು ಎಲ್ಲರೂ ತಿಳಿಯುವದು. ಹೀಗೆ ಮದುವೆಯಾದ ಗಂಡನಿಗೆ, ಜೀವದ ಗೆಳೆಯನಿಗೆ ಪೀಡೆಯನ್ನುಂಟುಮಾಡಿ ತಾವಿಬ್ಬರೇ ಸುಖಪಡುವದು ಪಾಪವಲ್ಲವೆ ? ಹೀಗೆ ಅವರು ನಾಟಕ ಸಿನೆಮಾಗಳಿಗೆ ಹೋದಾಗ, ತಿರುಗಾಡಲಿಕ್ಕೆ ಹೋದಾಗ ಒಬ್ಬರೊಬ್ಬರು ಮೈಕೈ ಮುಟ್ಟದೆ ದೂರವಾಗಿ ಇರುತ್ತಿದ್ದರೆ ? ಹೀಗಿರುತ್ತ ಒಂದು ದಿನ ಅವಳ ಮನಸ್ಸು ಉದ್ವಿಗ್ನವಾದಾಗ ಸಂತಯಿಸುವುದಕ್ಕೆಂದು ಕೈ ಮುಟ್ಟಿದರೆ ಅನಾಹುತವೇಕೆ ? ತನ್ನ ಸಮ್ಮತಿಯಿಲ್ಲದೆ ಒತ್ತಾಯದಿಂದ ರಾವಣನು ತನ್ನ ಮೈ ಮುಟ್ಟಿದರೆ ಆದರಿಂದ ತನ್ನ ಪಾವಿತ್ರ್ಯಕ್ಕೆ ಭಂಗವಿಲ್ಲೆಂದು ಸೀತೆಯೇ ನಂಬುವಾಗ ಇವಳ ನಿಷ್ಠೆ ಸೀತೆಗೂ ಮಿಗಿಲಾದದ್ದೆ?

ಹೀಗೆಂದಾಗ ಮನುಸ್ಮೃತಿಯನ್ನು ಮುಂದಿಟ್ಟುಕೊಂಡು ಕಾದಂಬರಿಗಳನ್ನು ಬರೆಯಬೇಕೆಂದು ಯಾವ ವಿಮರ್ಶಕನೂ ಹೇಳಲಾರ. ಆದರೆ ಲೇಖಕರು ಕಲ್ಪಿಸಿದ ಸಮಾಜದ ಆಚಾರದಲ್ಲಿಯೇ ಅಂತರ್‌ವಿರೋಧಗಳು ಕಂಡುಬಂದಾಗ ಕಾದಂಬರಿಯನ್ನು ಏಕಾಗ್ರತೆಯಿಂದ ಓದುವವರಿಗೆ ಹರಳು ಕಡಿದಂತಾಗುತ್ತದೆ. ಹಗಲುಗನಸುಗಳಿಗಾಗಿಯೇ ಓದುವವರ ಮಾತು ಬೇರೆ.

ಗೆಳೆಯನೆಂದರೆ ಸಂತೋಷದಲ್ಲಿ ಭಾಗಿಯಾಗುವವ. ಮಿತ್ರನೆಂದರೆ ಆಪತ್ತಿನಲ್ಲಿ ತಾನಾಗಿಯೇ ತಿಳಿದು ಸಹಾಯ ಮಾಡುವವ. ರಮೇಶನು ಅಶೋಕನ ಆನಂದದಲ್ಲಿ ಭರತಿ ಹಾಕಿದ, ಇಲ್ಲವೆ ಕಷ್ಟದಲ್ಲಿ ಸಹಾಯ ಮಾಡಿದ ಯಾವ ಘಟನೆಯೂ ಕಾಣುವುದಿಲ್ಲ. ಜೀವದ ಗೆಳೆಯನೆಂಬುದು ಬರಿಯ ಹೇಳಿಕೆಯಾಗಿಯೇ ಉಳಿಯುತ್ತದೆ. ಕುಸುಮಳ 'ಉಜ್ವಲ ವ್ಯಕ್ತಿತ್ವ'ದ ಮಾತೂ ಅಷ್ಟೇ.

ಕತೆಯನ್ನು ಸರ್ವಾತ್ಮನಾ ಮೆಚ್ಚಿದ ಓದುಗರ ತಿಳಿವಳಿಕೆಯೆ ಸರಿಯಾದದ್ದು ಎಂಬ ತೃಪ್ತಿ ಲೇಖಕರಿಗಿದ್ದರೆ ಅವರು ಕೆಲವೇ ಭಿನ್ನಾಭಿಪ್ರಾಯಗಳನ್ನು ಉಲ್ಲೇಖಿಸಿ ಅವಕ್ಕೆ ಉತ್ತರ ಕೊಡುವ ಯತ್ನ ಮಾಡುತ್ತಿರಲಿಲ್ಲ. "ಅಲ್ಪಾವಧಿಯಲ್ಲಿ ಎಂಥದಾದರೂ ಆಗಲಿ ಒಂದು ಕಾದಂಬರಿಯನ್ನು ಬರೆಯಲೇಬೇಕು" ಎಂಬ ಆಪ್ತಮಿತ್ರರ ಒತ್ತಾಯ, "ಒಳ ಒತ್ತಡ ಪ್ರಬಲವಾದಾಗ ಎಂಥ ವಿಷಮ ಪರಿಸ್ಥಿತಿಯೂ ಬರಹಗಾರನನ್ನು ತಡೆಯುವದಿಲ್ಲ" ಎಂದು ಲೇಖಕರೇ ಹೇಳಿರುವುದು ನಿಜವಾದ ಸಮರ್ಥನೆ. ಆಗ ವಿಮರ್ಶಕ ಇನಾಮದಾರರು ತೂಕಡಿಸಿದ್ದರೆ ಅಪರಾಧವೇನೂ ಅಲ್ಲ. ಲೇಖಕರ ಮನಸ್ಸು ಮೋಹಿನಿಯ ಜಾಡಿನಲ್ಲೇ ಇದ್ದರೂ ಒಂದು ಮಹತ್ವದ ಭೇದ ಇಲ್ಲಿದೆ. ಇನ್ನೊಬ್ಬರಿಗೆ ಅಸುಖವನ್ನು ಮಾಡುತ್ತ ತಮ್ಮ ಸುಖವನ್ನರಸಿದ ಸ್ತ್ರೀಪುರುಷರಿಗೆ ಸುಖಾಂತವಿಲ್ಲ ಎಂಬುದೇ ಆ ಭೇದ. ಅವರ ಆತ್ಮಸಮರ್ಥನೆಗಳು ಅವರವರ ಪಾತ್ರವೈಶಿಷ್ಟ್ಯವೆಂದು ಹೇಳಬಹುದಲ್ಲದೆ ಆ ಅಭಿಪ್ರಾಯಗಳಿಗೆ ಲೇಖಕರು ಹೊಣೆಯಾಗಬೇಕಿಲ್ಲ.

10

ಮುಂದಿನ ನಾಲ್ಕು ವರ್ಷಗಳಲ್ಲಿ ಇನಾಮದಾರರು ಯಾವ ಕಾದಂಬರಿಯನ್ನೂ ಬರೆಯಲಿಲ್ಲ. ಆಮೇಲೆ ಬರೆದ 'ಮಂಜು ಮುಸುಕಿದ ದಾರಿ'ಯಲ್ಲಿ ಆಲೋಚನೆ ಗಂಭೀರ ವಾಗಿದೆ, ದುರಂತ ಹೃದಯಸ್ಪರ್ಶಿಯಾಗಿದೆ. ಇದರಲ್ಲಿ ಹಾಸುಹೊಕ್ಕಾಗಿ ಎರಡು ಕತೆಗಳಿವೆ. ಮೊದಲಲ್ಲೂ ಕೊನೆಯಲ್ಲೂ ಬರುವದು ಶ್ರೀಧರನ ಕತೆ.

ಶ್ರೀಧರ ಸುಖವಸ್ತು. ಹಿರಿಯರು ಮಾಡಿದ ಮನೆ, ಜಮೀನು ಇವೆ. ಸಾಹಿತ್ಯಭಕ್ತನಾಗಿ ಮನೆಯಲ್ಲಿಯ ಪುಸ್ತಕಸಂಗ್ರಹದಲ್ಲಿಯೂ ಸಾರ್ವಜನಿಕ ವಾಚನಾಲಯದಲ್ಲಿಯೂ ಕ್ಲಬ್ಬುಗಳಲ್ಲಿಯೂ ಮಿತ್ರರೊಡನೆ ಮಾತುಕತೆಯಾಡುವುದರಲ್ಲಿ ದಿನ ಕಳೆದುಹೋಗುತ್ತದೆ. ಮನೆಯಲ್ಲಿ ಹೆಂಡತಿ ಲಕ್ಷ್ಮಿ ಮದುವೆಯಾಗಿ ಐದು ವರ್ಷ ಕಳೆದರೂ ಮಕ್ಕಳಾಗಲಿಲ್ಲ ವೆಂದು ಕೊರಗಿ ಈಗ ಗರ್ಭಿಣಿಯಾಗಿದ್ದಾಳೆ. ಅವಳ ಸಹಾಯಕ್ಕೆ ಅವಳ ಚಿಕ್ಕಮ್ಮ ಬಂದಿದ್ದಾಳೆ. ಶ್ರೀಧರನ ಪ್ರೀತಿಯ ನಾಯಿ ಜಿಮ್ಮಿ ; ಈಗ ಎಂಟು ದಿನಗಳಿಂದ ಹೊಟ್ಟೆಗೇನನ್ನೂ ತಿನ್ನದೆ ಕಾಯಿಲೆಯಿಂದ ಹಿತ್ತಿಲಲ್ಲಿ ಬಿದ್ದಿದೆ. ಅದಕ್ಕೆ ಹುಚ್ಚು ಮದ್ದು ಹಾಕಿ

ಮುಗಿಸಿಬಿಡೋಣ ಎಂದು ಮನೆಯ ಕೆಲಸದ ಬೂಬೂ ಅನ್ನುತ್ತಾಳೆ. ಆದರೆ ಲಕ್ಷ್ಮಿ ಗಡಗಡ ನಡುಗಿ ಬೇಡವೆನ್ನುತ್ತಾಳೆ. ಗರ್ಭಿಣಿಗೆ ಯಾವುದೇ ಚಿಂತೆ ಭೀತಿ ಆಗಬಾರದೆಂದು ಚಿಕ್ಕಮ್ಮ ಅವಳನ್ನು ಆದಷ್ಟು ದೂರವಿಡುತ್ತಾಳೆ. ಒಂದೆರಡು ದಿನಗಳಲ್ಲಿ ಜಿಮ್ಮಿ ಚೇತರಿಸಿ ಕೊಂಡು ಎದ್ದುನಿಂತಿರುತ್ತದೆ. ಆದರೆ ಲಕ್ಷ್ಮಿ ಅದನ್ನು ನೋಡಲಿಕ್ಕೆ ಹೋದಾಗ ಅದು ಕ್ರೂರವಾಗಿ ಬೊಗಳಿ ಅವಳ ಮೈಮೇಲೆ ಬರುತ್ತದೆ. ಅವಳು ಚಿಟ್ಟನೆ ಚೀರಿ ನಡುಗುತ್ತ ಒಳಗೆ ಬರುತ್ತಾಳೆ. ದರಿದ್ರ ನಾಯಿ ಸಾಯುವದೂ ಇಲ್ಲ, ಗುಣವಾಗುವದೂ ಇಲ್ಲ ಅನ್ನುತ್ತಾಳೆ. ಬೂಬೂ ಅದನ್ನು ಒಂದು ಸೂಚನೆಯೆಂದು ತಿಳಿದು ಮದ್ದು ತಂದು ಹಸಿದ ನಾಯಿಯ ಮುಂದೆ ಅನ್ನದಲ್ಲಿ ಬೆರೆಸಿ ಇಡುತ್ತಾಳೆ. ತಿಂದ ನಾಯಿ ಕಾಲು ಸೆಟೆಸಿ ಸತ್ತುಬಿದ್ದಿರುತ್ತದೆ. ಶ್ರೀಧರನಿಗೆ ಸಂಶಯ ಬರುತ್ತದೆ. ಹೀಗಾಗಬಾರದಿತ್ತು, ಹೀಗಾಗ ಬಾರದಿತ್ತು ಎಂದು ಅವನು ಮತ್ತೆ ಮತ್ತೆ ಅನ್ನುವದು ಮೊದಲೇ ಸಾಶಂಕಳಾಗಿದ್ದ ಲಕ್ಷ್ಮಿಯ ಮನಸ್ಸಿಗೆ ಆಘಾತವುಂಟುಮಾಡುತ್ತದೆ.

ಶ್ರೀಧರನ ಮಿತ್ರ ಗೋಪಾಲ, ಡಾಕ್ಟರು ; ಹೆರಿಗೆ ಆಸ್ಪತ್ರೆಯನ್ನಿಟ್ಟಿದ್ದಾನೆ. ತನ್ನ ಆಸ್ಪತ್ರೆಯಲ್ಲಿಯೇ ಲಕ್ಷ್ಮಿಗೆ ಹೆರಿಗೆ ಮಾಡಿಸುತ್ತಾನೆ. ಮುದ್ದಾದ ಒಂದು ಹೆಣ್ಣು ಮಗು ಹುಟ್ಟುತ್ತದೆ ; ಸುಮತಿ ಎಂದು ಹೆಸರಿಡುತ್ತಾರೆ. ತಾಯಿತಂದೆ ಅದನ್ನು ಬಹು ಅಕ್ಕರೆಯಿಂದ ಬೆಳೆಸುತ್ತಾರೆ. ಆದರೆ ಅದು ದೊಡ್ಡದಾದಂತೆ ಅದಕ್ಕೆ ಎಲ್ಲ ಮಕ್ಕಳಂತೆ ಓಡಾಡುವ, ಮಾತಾಡುವ ಶಕ್ತಿ ಬರುವದಿಲ್ಲವೆಂದು ತೋರುತ್ತದೆ. ತಾಯಿತಂದೆಗಳಿಗೆ ನಿರಾಶೆ ಯಾದರೂ ಮಗುವನ್ನು ಅಕ್ಕರೆಯಿಂದಲೇ ನೋಡುತ್ತಾರೆ. ಡಾ. ಗೋಪಾಲ ಅದು ಎಲ್ಲ ಮಕ್ಕಳಂತಾಗಬೇಕೆಂದು ವಿಶ್ವಪ್ರಯತ್ನಗಳನ್ನು ಮಾಡಿದರೂ ಪ್ರಯೋಜನವಾಗುವುದಿಲ್ಲ.

ಕಾಲಕ್ರಮದಲ್ಲಿ ಲಕ್ಷ್ಮಿಗೆ ಮತ್ತೆರಡು ಮಕ್ಕಳಾಗುತ್ತವೆ : ಒಂದು ಹೆಣ್ಣು, ಶಾರದೆ ; ಅವಳ ಹಿಂದೆ, ಮೋಹನ. ಈ ಮಕ್ಕಳಿಬ್ಬರೂ ಚೂಟಿಯಾಗಿದ್ದು ಚೆನ್ನಾಗಿ ಬೆಳೆಯುತ್ತಿದ್ದ ರಿಂದ ಲಕ್ಷ್ಮಿಗೆ ಇವರ ಕಡೆಗೆ ಲಕ್ಷ್ಯ ಹೆಚ್ಚಾಗಿ ಸುಮತಿಯ ಕಡೆಗೆ ಕಮ್ಮಿಯಾಗುವದು ಅನಿವಾರ್ಯವಾಗಿತ್ತು. ಇದರಿಂದ ಸುಮತಿ ಕೆರಳಿ ಅದನ್ನು ಹಿಂಸಿಸುವದು ಆರಂಭವಾಯಿತು. ಜೊತೆಗೆ ಆಗಾಗ ಅಪಸ್ಮಾರ ಬರತೊಡಗಿ, ಅವಳನ್ನು ಮನೋರೋಗಿಗಳ ಆಸ್ಪತ್ರೆಗೆ ಸೇರಿಸಬೇಕೆಂದಾಗ ಶ್ರೀಧರ ಒಪ್ಪಲೇಬೇಕಾಯಿತು. ಅಲ್ಲಿ ಸೇರಿದವರು ತಿರುಗಿ ಬರುವದಿಲ್ಲವೆಂದು ಅಳುತ್ತಲೇ ಅವಳನ್ನು ಸೇರಿಸಿದ್ದಾಯಿತು. ವಾರ ಕಳೆಯುವದರಲ್ಲಿ ಸುಮತಿ ತೀರಿದಳೆಂದು ತಂತಿವರ್ತಮಾನ ಬಂದಿತು. ಲಕ್ಷ್ಮಿ ಎಚ್ಚರ ತಪ್ಪಿದಳು ; ಆಗಾಗ ''ಏ ಬೂಬೂ, ಆ ಪುಡಿ ಹಾಕಬೇಡ, ಬೂಬೂ'' ಎಂದೂ, ''ಅಯ್ಯೋ, ನನ್ನ ಸುಮತಿಗೆ ಪುಡಿ ಹಾಕುತ್ತಿದ್ದಾರೆ'' ಎಂದೂ ಕೂಗುತ್ತಿದ್ದಳು. ಇದು ಶ್ರೀಧರನ ಕತೆ.

ಗೋಪಾಲ ಶ್ರೀಧರನ ಬಾಲ್ಯಸ್ನೇಹಿತ. ಡಾಕ್ಟರನಾಗಿ ತನ್ನದೇ ಹೆರಿಗೆ ಆಸ್ಪತ್ರೆ ನಡೆಸುತ್ತಿದ್ದಾನೆ. ಸಂಪಾದನೆ ಚೆನ್ನಾಗಿದೆ. ಆದರೆ ಮದುವೆಯ ಮಾತು ಬಂದಾಗ

ಹಿಂದೇಟು ಹಾಕುತ್ತಿರುತ್ತಾನೆ. ತನ್ನ ತಂದೆಯ ದುಂದುಗಾರಿಕೆಯ ಲಂಪಟಜೀವನವನ್ನು ಅವನು ತಿಳಿದಿದ್ದಾನೆ. ಅಂಥವರ ರೋಗಾಣುಗಳು ಅವರ ಸಂತಾನಪರಂಪರೆಯಲ್ಲಿ ನಿಷ್ಪಾಪಜೀವಿಗಳ ಬಲಿತೆಗೆದುಕೊಳ್ಳುವದನ್ನು ತಾನು ಓದಿದ ಶಾಸ್ತ್ರದಲ್ಲಿಯೂ ತನ್ನ ವೃತ್ತಿಯ ಅನುಭವದಲ್ಲೂ ಕಂಡಿದ್ದಾನೆ. ತಂದೆಯ ಅವ್ಯಾಪಾರದಿಂದ ತನ್ನಲ್ಲಿಯೂ ಅಂತಹ ವಿಷಬೀಜ ಬಂದಿದ್ದರೆ ಅದು ಅಲ್ಲಿಗೇ ಕೊನೆಯಾಗಲಿ ಎಂದು ಅವನು ಮದುವೆಯೆ ಬೇಡ ಎನ್ನುತ್ತಿದ್ದಾನೆ. ಶ್ರೀಧರನು ಅವನ ಮನವೊಲಿಸುವ ಯತ್ನವನ್ನು ಆಗಾಗ ಮಾಡುತ್ತಿರುವಾಗ ಒಂದು ಸಂದರ್ಭವೊದಗುತ್ತದೆ. ಶ್ರೀಧರನ ಮಧ್ಯಸ್ಥಿಕೆಯಿಂದ ಗೋಪಾಲನ ಮದುವೆಯಾಗುವದಲ್ಲದೆ ಅವನ ಆಸ್ತಿಯನ್ನೂ ಮಾವನೇ ನೋಡಿಕೊಳ್ಳುವಂತಾಗಿ ಆದರಿಂದಲೂ ಗೋಪಾಲನಿಗೆ ಹೆಚ್ಚಿನ ಆದಾಯ ಬರುವಂತಾಗುತ್ತದೆ.

ಸುಮಿತ್ರೆ-ಗೋಪಾಲರ ಸಂಸಾರ ತುಂಬು ಉತ್ಸಾಹದಿಂದ ಆರಂಭವಾಗುತ್ತದೆ. ಗೋಪಾಲನ ಜನಪ್ರಿಯತೆ ಆದಾಯಗಳು ಹೆಚ್ಚಿದಂತೆ ಅವನು ಊರಿನ ಗಣ್ಯ ವ್ಯಕ್ತಿಗಳ ಲ್ಲೊಬ್ಬನಾಗುತ್ತಾನೆ. ಅವನ ಅಂತಸ್ತಿನಲ್ಲಿ ಸಹಜವಾಗಿ ಬರುವ ಸಾಮಾಜಿಕ ಸಂಪರ್ಕಗಳಲ್ಲಿ ಗೋಪಾಲನಿಗಿಂತ ಸುಮಿತ್ರೆಯೇ ಮುಂದುಮುಂದಾಗಿ ಮಂದಿಯ ಕಣ್ಣುಸೆಳೆಯುತ್ತಾಳೆ. ಮಕ್ಕಳನ್ನು ಪಡೆಯುವದಕ್ಕೆ ಹಿಂಜರಿಯುತ್ತಿದ್ದ ಗೋಪಾಲ ಅವಳು ಈ ಸಾಮಾಜಿಕ ವ್ಯಾಪಾರಗಳಲ್ಲಿ ತೊಡಗಿರುವದು ಒಳ್ಳೆಯದೇ ಎಂದುಕೊಳ್ಳುತ್ತಾನೆ. ಆದರೂ ಅವಳು ಆಗೀಗ ಮಕ್ಕಳ ಹಂಬಲವನ್ನು ತೋರಿಸುವದನ್ನು ಕಂಡು ಗೋಪಾಲ ತನ್ನ ಭೀತಿಯನ್ನು ಒತ್ತಿಡುವಂತಾಗುತ್ತಾನೆ. ಸುಮಿತ್ರೆ ಗರ್ಭಿಣಿಯಾಗುತ್ತಾಳೆ.

ಈ ನಡುವೆ ಗೋಪಾಲ ತನ್ನ ವೃತ್ತಿಗಾಗಿ ಹೊಸದೊಂದು ಕಟ್ಟಡ ಕಟ್ಟಿಸುವ ವಿಚಾರ ಮಾಡುತ್ತಾನೆ. ಅದೇ ಊರಲ್ಲಿ ಸರಕಾರಿ ಕಟ್ಟಡಗಳನ್ನು ಕಟ್ಟುತ್ತಿದ್ದ ಒಂದು ಕಂಪನಿಯಲ್ಲಿ ಸುಬ್ರಾವ್ ಎಂಬ ಎಂಜಿನಿಯರನಿರುತ್ತಾನೆ. ಗೋಪಾಲನ ವೃತ್ತಿಯಲ್ಲಿ ಅವನ ಪರಿಚಯವಾಗಿರುತ್ತದೆ. ಇಬ್ಬರೂ ಸೇರಿ ಗೋಪಾಲನ ಹೊಸ ಕಟ್ಟಡದ ಕೆಲಸವನ್ನು ಆರಂಭಿಸಿಯೇಬಿಡುತ್ತಾರೆ. ಇದಕ್ಕೆ ಸಂಬಂಧಿಸಿದ ಚರ್ಚೆಗಳಲ್ಲಿ, ನಡೆಯುತ್ತಿದ್ದ ಕೆಲಸವನ್ನು ನೋಡಲಿಕ್ಕೆ ಆಗೀಗ ಹೋಗಿಬರುವಲ್ಲಿ, ಸುಮಿತ್ರೆಯೊಡನೆಯೂ ಸುಬ್ರಾಯನ ಪರಿಚಯ ಬೆಳೆಯುತ್ತದೆ.

ಹೊಸ ಕಟ್ಟಡ ಇನ್ನೇನು ಸಿದ್ಧವಾಗುವದರಲ್ಲಿದೆ ಎನ್ನುವಷ್ಟರಲ್ಲಿ ಸುಮಿತ್ರೆಯ ಹೆರಿಗೆಯ ದಿನಗಳು ಹತ್ತಿರವಾಗುತ್ತವೆ. ಅವಳಿಗೊಂದು ಗಂಡುಕೂಸು ಸತ್ತು ಹುಟ್ಟುತ್ತದೆ. ತನಗೂ ಸುಮಿತ್ರೆಗೂ ಆದ ಆಶಾಭಂಗಕ್ಕಾಗಿ ಗೋಪಾಲ ಎಷ್ಟು ಮರುಗಿದರೂ ಕೊನೆಗೆ ತಾನು ಮಕ್ಕಳನ್ನು ಬಯಸಬಾರದೆಂದು ಮಾಡಿದ್ದ ನಿರ್ಣಯವೇ ಸರಿಯಾಗಿತ್ತು ಅಂದುಕೊಳ್ಳುತ್ತಾನೆ. ಆದರೆ ಆ ನಿರ್ಣಯವನ್ನು ಸುಮಿತ್ರೆಗೆ ಹೇಳಲು ಹೆದರುತ್ತಾನೆ.

ಸುಮಿತ್ರೆ ತನಗೆ ಸರಿಯಾದ ಬೇಟೆ ಎಂದು ಮೊದಲಿನಿಂದಲೂ ಹೊಂಚುತ್ತಿದ್ದ ಸುಬ್ಬರಾಯನಿಗೆ ಈಗ ಸುಮಿತ್ರೆಗಾದ ನಿರಾಶೆ, ಗೋಪಾಲನ ನಿರುತ್ಸಾಹ ಆಯತ್ತವಾದ ಅವಕಾಶಗಳೆಂದು ತೋರುತ್ತವೆ. ಸುಮಿತ್ರೆ – ಸುಬ್ರಾಯರ ನಡುವೆ ಬೆಳೆಯುತ್ತಿದ್ದ ಒಡನಾಟ ಸುಮಿತ್ರೆಯ ಸ್ವಭಾವ ಎಂದುಕೊಂಡ ಗೋಪಾಲನಿಗೆ ಅದೇ ಒಡನಾಟವನ್ನು ಕುರಿತು ಬೇರೆಯವರು ಆಡುತ್ತಿದ್ದ ಮಾತುಗಳು ಅಶಾಂತಿಯ ಕಾರಣವಾಗುತ್ತವೆ. ಗೋಪಾಲನ ತಾಯಿಯೂ ಈ ಒಡನಾಟ ಸರಿಯಾಗಿಲ್ಲವೆಂಬ ಸಂಶಯವನ್ನು ಬಲಪಡಿಸುತ್ತಿದ್ದರು.

ಒಂದು ದಿನ ಗೋಪಾಲ ಹೊರಗೆ ಹೋಗುವ ಸಿದ್ಧತೆಯಲ್ಲಿದ್ದಾಗ ಸುಮಿತ್ರೆಯ ಡ್ರಾನಲ್ಲಿ ಹಿಂದೆ ತಾನು ಸುಬ್ರಾಯನಿಗೆ ಕೊಟ್ಟಿದ್ದ ಉಂಗುರವನ್ನು ಕಾಣುತ್ತಾನೆ. ಅದನ್ನು ತನ್ನ ಹತ್ತಿರ ಇಟ್ಟುಕೊಂಡು ಸುಮಿತ್ರೆಯನ್ನು ಎದುರಿಸುತ್ತಾನೆ. ಮೊದಲು ಹಾರಿಕೆಯ ಮಾತುಗಳನ್ನಾಡಿದರೂ ಗೋಪಾಲನಿಗೆ ದೃಢವಾದ ಪುರಾವೆ ಸಿಕ್ಕಿದ್ದನ್ನು ಕಂಡು ಅವಳು ನಿರುತ್ತರಳಾಗುತ್ತಾಳೆ. ಗೋಪಾಲನಿಗೆ ಕೋಪಕ್ಕಿಂತಲೂ ಅವಳ, ತನ್ನ ಪಾಡಿಗೆ ಮರುಕವೇ ಹೆಚ್ಚಾಗುತ್ತದೆ. ಈ ಮಧ್ಯೆ ಅವನು ಸುಮಿತ್ರೆಗೆ ಹೇಳದೆಯೇ ಸಂತಾನಹರಣಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದರಿಂದ ಅವರ ಬಾಳು ಬರಡಾಗುತ್ತದೆ.

ಸಂಕ್ಷೇಪದ ಅನುಕೂಲಕ್ಕಾಗಿ ಈ ಎರಡು ಕತೆಗಳನ್ನು ಬೇರೆಬೇರೆಯಾಗಿ ಹೇಳುವಂತಿದ್ದರೂ ಕಾದಂಬರಿಯಲ್ಲಿ ಅವೆರಡನ್ನೂ ತುಂಬಾ ವಿಚಕ್ಷಣೆಯಿಂದ ಲೇಖಕರು ಹೊಸೆದಿದ್ದಾರೆ. ಗೋಪಾಲ – ಶ್ರೀಧರ ಒಬ್ಬರೊಬ್ಬರ ಸುಖದುಃಖಗಳಲ್ಲಿ ಪಾಲುದಾರರಾಗಿದ್ದ ಘಟನೆಗಳನ್ನು ಉದ್ದಕ್ಕೂ ವಿವರಿಸುತ್ತ ಕೊನೆಯಲ್ಲಿ ಗೆಳೆತನವೆಂದರೆ ಹೀಗಿರಬೇಕು ಎನ್ನುವಂತೆ ಮಾಡುತ್ತಾರೆ. ಇದು ರಚನೆಯ ಭಾಗ. ಇದಕ್ಕೂ ಹೆಚ್ಚಾಗಿ ಓದುಗನನ್ನು ಹಿಡಿದುಕೊಳ್ಳುವದು ಇದರಲ್ಲಿಯ ಚಿಂತನೆಯ ಭಾಗ. ''ದುಃಖ ಎನ್ನುವುದು ಒಂದಿಲ್ಲೊಂದು ಬಗೆಯಲ್ಲಿ ಬದುಕಿಗೆ ಅನಿವಾರ್ಯವಾಗಿ ಅಂಟಿಕೊಂಡ ಅಂಶ'' ಎಂಬ ಮಾತನ್ನು ಲೇಖಕರು ಮುನ್ನುಡಿಯಲ್ಲಿಯೇ ಹೇಳಿದ್ದಾರೆ. ಸುಮತಿಯ ಬಗೆಗೆ ಚಿಂತಿಸುತ್ತಿದ್ದ ಗೋಪಾಲನನ್ನು ಕುರಿತು ಲೇಖಕರು ಹೇಳುತ್ತಾರೆ — ''ಬದುಕಿನ ದಾರಿ ಕುರುಡ ಕ್ರಮಿಸುವ ದಾರಿಯಾಗಿ ಕಾಣುತ್ತಿತ್ತು, ಮುಂದಿನ ದಾರಿ ಪೂರ್ತಿಯಾಗಿ ಕಾಣುವದಿಲ್ಲ ಎಂದು ನಿಂತಲ್ಲಿಯೇ ನಿಲ್ಲಲಾಗುವದಿಲ್ಲ, ಮುನ್ನಡೆಯಲೇಬೇಕು. ಹೆಜ್ಜೆ ಸರಿಯಾಗಿ ಬೀಳದಿರಬಹುದು. ಎಡವಲೂಬಹುದು. ಕ್ಷಣಕ್ಷಣದ ನಿರ್ಣಯಗಳೂ ಒಂದೊಂದು ಅನಿವಾರ್ಯವಾದ ತೆಗೆದುಕೊಳ್ಳಲೇಬೇಕಾದ ಹೆಜ್ಜೆಗಳಾಗಿ ಕಾಣುತ್ತಿದ್ದವು. ಯಾವ ನಿರ್ಣಯವನ್ನು ಕೈಗೊಳ್ಳುವಾಗಲೂ ಯೋಚನೆ ಅಗತ್ಯ. ಆ ಯೋಚನೆ ಎಷ್ಟು ತೀಕ್ಷ್ಣವಾಗಿದ್ದರೂ ಮುಂದಿನ ಒಂದೆರಡು ಹೆಜ್ಜೆಗಳಿಗಿಂತ ಹೆಚ್ಚಿನ ದಾರಿಯ ಮೇಲೆ ಬೆಳಕನ್ನು ಬೀರಲಾರದು. ಮನುಷ್ಯನಾದವ ಮುಂದರಿಯಬೇಕಾದದ್ದು ಮಂಜುಮುಸುಕಿದ ದಾರಿಯಲ್ಲಿಯೇ...''

ಇಂತಹ ಚಿಂತನೆ ಕತೆಯ ಪ್ರವಾಹದಲ್ಲಿ ಬಹುಸಹಜವಾಗೆಂಬಂತೆ ಬರುವದರಿಂದ ಓದುಗರ ಮನಸ್ಸಿನಲ್ಲಿ ಆಳವಾಗಿ ನಿಲ್ಲುತ್ತವೆ. ವ್ಯಕ್ತಿಗಳ ಜೀವನದಲ್ಲಿ ಇಂತಹ ಆಳವಾದ ಸಂಸ್ಕಾರವಿಲ್ಲದೆ ಸಾಮಾಜಿಕ ಸಂಸ್ಕೃತಿಯ ಮಾತು ಬರಿಯ ಗಾಳಿಗೋಪುರ. ಇಂತಹ ಕೆಲವೇ ಕಾದಂಬರಿಗಳನ್ನು ಇನಾಮದಾರರು ಬರೆಯುವಂತಾದರೂ ಸಾಕು ಎನಿಸಬಲ್ಲ ಕೃತಿಗಳಲ್ಲಿ ಇದೊಂದು.

11

ಸುಮಾರು ಇದೇ ಕಾಲದಲ್ಲಿ ಇನಾಮದಾರರ ಚಿಂತನರೀತಿ ಗೋವಿಂದ ಪೈಗಳ ಕಾವ್ಯಕ್ಕೆ ತೆರೆದು ನಿಂತಿದ್ದಂತೆ ಕಾಣುತ್ತದೆ. ಒಂದು ಸಾಂದರ್ಭಿಕ ಭಾಷಣವಾಗಿ ಪುಟ್ಟ ಪುಸ್ತಿಕೆಯಾಗಿ ಆರಂಭವಾದ ಇನಾಮದಾರರ ಪೈ-ಸಾಹಿತ್ಯದ ಅಧ್ಯಯನ ಮುಂದಿನ ಹದಿನೆಂಟು ವರ್ಷಕಾಲ ಅವರ ಪ್ರೀತಿಯ ವ್ಯಾಸಂಗವಾಗಿ, 1983ರಲ್ಲಿ ಪೈಗಳನ್ನು ಕುರಿತ ಒಂದು ಪೂರ್ಣಪ್ರಮಾಣಗ್ರಂಥವಾಗಿ ಹೊರಬರುವಂತಾಯಿತು.

ಮಾನವನ ಜೀವಿತ ದೈವ ನಡೆಯಿಸಿದಂತೆ ನಡೆಯುವದೇ ಹೊರತು ಮಾನವನ ಬಯಕೆಯಂತಲ್ಲ ಎನ್ನುವುದನ್ನು ಪೈಗಳಂತೆಯೇ ಇನಾಮದಾರರೂ ಅನುಭವದಿಂದ, ಆಳವಾದ ಚಿಂತನೆಯಿಂದ ಕಂಡವರು. ದುಃಖವು ಜೀವನಕ್ಕೇ ಅಂಟಿಕೊಂಡು ಬಂದ ಅಂಶವೆಂಬುದನ್ನು ಇಬ್ಬರೂ ಅನುಭವಿಸಿದವರಾದರೂ, "ಜೀವನದಲ್ಲಿಯ ಚೆಲುವಿಗೂ ನಲ್ಮೆಗೂ ಒಲಿದವರು, ಭಾಷೆಯ ಪರಿಷ್ಕಾರವನ್ನು ಭಕ್ತಿಯಿಂದೆಂಬಂತೆ ಸಾಧಿಸುವವರು, ಹೆಚ್ಚಾಗಿ ಗೋವಿಂದ ಪೈಗಳು ಸಂಶೋಧಕರೆಂದೇ ನಂಬಿದ್ದ ನನಗೆ ಈ ಲೇಖನವನ್ನು ಸಿದ್ಧಪಡಿಸುತ್ತಿದ್ದ ಹಾಗೆ ಅವರ ಕವಿತಾಸಾಮರ್ಥ್ಯದ ಬಗೆಯಲ್ಲಿ ಮುಚ್ಚಿಕೊಂಡ ಕಣ್ಣು ತೆರೆಯುವಂತಾಯಿತು" ಎಂದು ಇನಾಮದಾರರೇ ಹೇಳಿರುವುದು ಗಮನಾರ್ಹ.

ಸುಮಾರು ಕಾಲುಶತಮಾನಕಾಲ ವಿದ್ಯಾರ್ಥಿಗಳನ್ನು ರಂಜಿಸಿದ ಅವರ ಅಧ್ಯಾಪನ ಶೈಲಿ, ಹೊಸ ವಿಮರ್ಶೆಗೆ ಅವರು ರೂಪಿಸಿಕೊಂಡ ಪರಿಭಾಷೆಗಳು ಈ ಸಾಂದರ್ಭಿಕ ಭಾಷಣದಲ್ಲಿಯೂ ಎದ್ದು ಕಾಣುತ್ತವೆ — "ಸಮಗ್ರ ವಿಮರ್ಶೆ ಎನ್ನುವದು ಒಂದು ಆದರ್ಶವಾಗಿಯೇ ಉಳಿಯುತ್ತದೆ. ಪದಯೋಜನೆಯ ಮೂಲಕ ಗೋಚರಿಸಬಹುದಾದ ಭಾವ, ಆಶಯ ; ಅದನ್ನು ವ್ಯಕ್ತಗೊಳಿಸುವ ಕ್ರಮದಲ್ಲಿ ಎದ್ದು ಕಾಣಬಹುದಾದ ಮನಸ್ಸಿನ ಪರಿಪಾಕ, ಹದ, ಯೋಗ್ಯತೆ, ಸಾಮರ್ಥ್ಯ ; ಇವೆಲ್ಲವೂ ಒಟ್ಟುಗೂಡಿ ಓದುಗನ ಮನಸ್ಸಿನಲ್ಲಿ ಒಡಮೂಡಿ ನೆಲೆನಿಂತಾಗ ಉಂಟಾಗುವ ಸೊಗಸಿನ ಅನುಭವ ; ಇವನ್ನು ಕೆಲಮಟ್ಟಿಗೆ ವಿಮರ್ಶಕ ವಿವರಿಸಬಲ್ಲನೆ ಹೊರತು ಕವಿಯ ಒಂದು ಕೃತಿಯ ವಿಚಾರವಾಗಿ ಯಾವ ಕೊನೆಯ ಮಾತನ್ನೂ ಹೇಳಲಾರ ; ಆತನ ಅಂತರಂಗ ಮಿಡಿದ ಸೂಕ್ಷ್ಮಕ್ರಮವನ್ನು

ಆದರ ಆಳಲು ಸಂತೋಷಗಳ ಆಳ ಎತ್ತರಗಳನ್ನು ಆ ಮಿಡಿತ ಕೃತಿಯೊಂದಾಗಿ ನಿಲ್ಲುವಾಗಿನ ಆ ಚೇತನದ ಸ್ಥಿತ್ಯಂತರಗಳನ್ನು ವಿವರಿಸಲಾರ.''

'ಗೊಲ್ಗೋಥಾ' ಮತ್ತು 'ವೈಶಾಖಿ' ಕುರಿತು — ''ಈ ಎರಡು ಕಾವ್ಯಗಳಲ್ಲಿ ಸಾಕಷ್ಟು ಸಾಮ್ಯವಿದ್ದರೂ ಅವುಗಳಲ್ಲಿಯ ವ್ಯತ್ಯಾಸ ಅವುಗಳ ಗುಣವಿಶೇಷಗಳನ್ನು ಎತ್ತಿ ತೋರಿಸುತ್ತವೆ. ಒಂದು ಉತ್ಕಟ ; ಇನ್ನೊಂದು ಶಾಂತ. ಪರಿಣಾಮದಲ್ಲಿಯೂ ಹಾಗೆಯೇ. ಉದ್ವೇಗ ಮರುಕಗಳನ್ನು ಒಂದು ಮೂಡಿಸುತ್ತದಾದರೆ ಇನ್ನೊಂದರಿಂದ ಉಂಟಾಗುವದು ಮನಶ್ಶಾಂತಿ, ಸಮಾಧಾನ. ಕಡಿದ ಬಾಳಕಥೆ ಗೊಲ್ಗೋಥಾ, ಪರಿಪೂರ್ಣಗತಿಯನ್ನು ಪಡೆದ ಬಾಳಿನ ಕಥೆ ವೈಶಾಖಿ. ಒಂದರ ರಭಸ, ಸೆಳವು ಇನ್ನೊಂದರಲ್ಲಿ ಇಲ್ಲ. ಪ್ರಸನ್ನ ಗಂಭೀರವಾಗಿ ಏಳುನೂರ ಮೂವತ್ತೆರಡು ಪಂಕ್ತಿಗಳಲ್ಲಿ ಬುದ್ಧನ ಪರಿನಿರ್ವಾಣದ ಕತೆ, ಆತ ನೀಡಿದ ಧರ್ಮೋಪದೇಶದ ಅಮೃತಪ್ರವಾಹ ಹರಿಯುತ್ತದೆ.'' ಗೋವಿಂದ ಪೈಗಳನ್ನು ಕುರಿತು ಹೆಚ್ಚು ವಿಸ್ತಾರವಾಗಿ ಇನಾಮದಾರರು ಬರೆದ ಕೃತಿಯ ಪರಿಚಯ ಮುಂದಿದೆಯಾಗಿ ಇಲ್ಲಿ ಹೆಚ್ಚು ಹೇಳಬೇಕಿಲ್ಲ.

12

'ಮಂಜು ಮುಸುಕಿದ ದಾರಿ'ಯಂತೆ 'ಊರ್ವಶಿ'ಯಲ್ಲಿಯೂ ಇಬ್ಬರು ಗೆಳೆಯರ ಕತೆಯಿದೆ. ಆದರೆ ಈ ಗೆಳೆಯರು ಶ್ರೀಧರ-ಗೋಪಾಲರಂತಲ್ಲ. ಒಬ್ಬನು ಸಾತ್ವಿಕ ಪ್ರಕೃತಿಯ ಮೂರ್ತಿ, ಇನ್ನೊಬ್ಬ ರಾಜಸಪ್ರಕೃತಿಯವನು. ನಾರಾಯಣರಾಯ ಶಿವಮೊಗ್ಗೆಯಲ್ಲಿ ಸಂಸ್ಕೃತ ಪ್ರಾಧ್ಯಾಪಕ. ಸಂಸ್ಕೃತ ಅವನ ಅಂತಃಕರಣಕ್ಕೆ ಆಳವಾದ ಸಂಸ್ಕಾರವನ್ನೊದಗಿಸಿತ್ತು. ತನ್ನ ಸುಖಜೀವನಕ್ಕೆ ಇಷ್ಟು ಸಾಕು ಎನ್ನುವ ಅಲಂಬುದ್ಧಿಯನ್ನು ಬೆಳೆಸಿಕೊಂಡು ಯಾವ ಅತ್ಯಾಶೆದುಸ್ಸಾಹಸಗಳಿಗೂ ಕೈಹಾಕದೆ ಗೌರವಯುತ ಜೀವನವನ್ನು ನಡೆಸಿಕೊಂಡು ಬಂದು, ಸದ್ಯದಲ್ಲಿಯೇ ಕೆಲಸದಿಂದ ನಿವೃತ್ತಿ ಪಡೆಯಲಿದ್ದಾನೆ. ಅವನ ಹೆಂಡತಿ ಲಕ್ಷ್ಮೀ ; ಇವರಿಗೆ ಅಚ್ಚುಮೆಚ್ಚಾಗಿದ್ದ ಮಗಳು ಊರ್ವಶಿ. ಅವಳನ್ನು ಬೆಂಗಳೂರಲ್ಲಿ ರಾಜು ಎಂಬ ಚಾರ್ಟರ್ಡ್ ಅಕೌಂಟೆಂಟನಿಗೆ ಕೊಟ್ಟು ಮದುವೆಯಾಗಿದೆ. ರಾಜು ತರುಣನೇ ಆದರೂ ದಕ್ಷತೆಗೂ ಪ್ರಾಮಾಣಿಕತೆಗೂ ಒಳ್ಳೆಯ ಹೆಸರು ಗಳಿಸಿದ್ದಾನೆ.

ನಾರಾಯಣರಾಯನ ಗೆಳೆಯ ಶೇಷಗಿರಿ ಅವನಂತಲ್ಲ. ''ಇದಮದ್ಯ ಮಯಾ ಲಬ್ಧಂ ಇಮಂ ಪ್ರಾಪ್ಸ್ಯೇ ಮನೋರಥಂ । ಇದಮಸ್ತೀದಮಪಿ ಮೇ ಭವಿಷ್ಯತಿ ಪುನರ್ಧನಮ್'' ಎಂಬ ಸತತವಾದ ಹವಣಿಕೆಯಲ್ಲಿಯೇ ಸುಖಪಡೆಯುವವನು. ಅವನು ಕಾಲೇಜಿನಲ್ಲಿದ್ದಾಗಲೇ ''ನನಗೆ ಸಿದ್ಧಿ ಮುಖ್ಯ, ಸಾಧನೆಯ ಯೋಚನೆ ನನಗಿಲ್ಲ. ಯಾವುದಾದರೂ ಆದೀತು'' ಎಂದು ಹೇಳುತ್ತಿದ್ದನಂತೆ. ('ಕನಸಿನ ಮನೆ'ಯ ಮೋಹಿನಿ

ಹೇಳುತ್ತಿದ್ದದ್ದೂ ಇದನ್ನೇ.) ತನ್ನ ನಾನಾ ರೀತಿಯ ವ್ಯವಹಾರಗಳಿಗಾಗಿ ಬೇರೆ ಬೇರೆ ಕಂಪನಿಗಳನ್ನು ಕಟ್ಟಿಕೊಂಡು ಸದ್ಯ ಬೆಂಗಳೂರಲ್ಲೊಬ್ಬ ಪ್ರತಿಷ್ಠಿತ ಉದ್ಯಮಿಯಾಗಿದ್ದಾನೆ. ಇವನು ಮನೆಯಿಂದ ಆಫೀಸಿಗೆ ಹೋಗುವ ದಾರಿಯಲ್ಲೇ ರಾಜು-ಊರ್ವಶಿಯರ ಮನೆಯಿದೆ. ದಿನಾಲು ಬೆಳಗಿನಲ್ಲಿ ಇವನು ಹೋಗುವಾಗಲೇ ಇವನಂತೆಯೇ ಆಫೀಸಿಗೆ ಹೊರಟ ರಾಜುವನ್ನು ಊರ್ವಶಿ ಮನೆಯ ಬಾಗಿಲಲ್ಲಿ ನಿಂತು ಬೀಳ್ಕೊಡುವುದನ್ನು ನೋಡುತ್ತಾನೆ. ಊರ್ವಶಿಯ ಚೆಲುವಿನಿಂದ ಆಕರ್ಷಿತನಾಗುತ್ತಾನೆ. ತಡವಿಲ್ಲದೆಯೇ ಅವಳನ್ನು ವಶಪಡಿಸಿಕೊಳ್ಳುವದಕ್ಕೆ ಕಾರ್ಯಪ್ರವೃತ್ತನಾಗುತ್ತಾನೆ. ಮೊದಲನೆಯ ಹೆಜ್ಜೆಯೆಂದೇ ತನ್ನ ಕೆಲವು ಕಂಪನಿಗಳ ಆಡಿಟ್ ಕೆಲಸವನ್ನು ರಾಜುವಿಗೊಪ್ಪಿಸುತ್ತಾನೆ. ಆದರಿಂದ ಅವನ ಮನೆಗೂ ಆಫೀಸಿಗೂ ಹೋಗಿ ಬರುವ ಅವಕಾಶವಾಗುತ್ತದೆ. ಶಿಕ್ಷಿತಳೂ ರೂಪಸಿಯೂ ಶ್ರೀಮಂತ ಜೀವನಕ್ಕೆ ಒಗ್ಗಿಕೊಳ್ಳುತ್ತಿದ್ದವಳೂ ಆದ ಊರ್ವಶಿಯೂ ಅವನೊಡನೆ ನಿಸ್ಸಂಕೋಚವಾಗಿ ನಡೆದುಕೊಳ್ಳುತ್ತಾಳೆ. ವಯಸ್ಸಿನಿಂದ ಹಿರಿಯನೂ ನಾರಾಯಣರಾಯನ ಗೆಳೆಯನೂ ಆದ ಅವನೊಡನೆ ಸಲಿಗೆಯಿಂದಿರುವದು ಸಹಜವೆಂದೇ ಊರ್ವಶಿ ಭಾವಿಸಿದಂತೆ ರಾಜುವೂ ಭಾವಿಸುತ್ತಾನೆ. ಊರ್ವಶಿಯ ಸ್ವಭಾವ ವೈಶಿಷ್ಟ್ಯವೆಂದರೆ "ತನ್ನ ಚೆಲುವನ್ನು ನೋಡಿ ಇನ್ನೊಬ್ಬರು ತಮ್ಮ ಸಂತೋಷವನ್ನು ಹೇಳಿದಾಗ ಆಕೆಗಾದಷ್ಟು ಸಂತೋಷ ಇನ್ನಾವುದರಿಂದಲೂ ಆಗುತ್ತಿರಲಿಲ್ಲ." ಈ ದೌರ್ಬಲ್ಯ ಮತ್ತು ಆತ್ಮಪ್ರತ್ಯಯದ ಪೂರ್ಣಲಾಭವನ್ನು ಶೇಷಗಿರಿರಾಯ ಪಡೆಯುತ್ತಾನೆ. ಹಲವಾರು ಆಕರ್ಷಣೆಗಳನ್ನೊಡ್ಡಿ ಸ್ವತಂತ್ರವಾಗಿದ್ದ ರಾಜುವನ್ನು ತನ್ನ ನೌಕರಿಯಲ್ಲಿ ಸೇರಿಸಿಕೊಳ್ಳುವುದರಲ್ಲಿ ಅವನಿಗೆ ಊರ್ವಶಿಯಿಂದಲೂ ಸಹಕಾರ ದೊರೆಯುತ್ತದೆ. ಆದರೆ ನಾರಾಯಣರಾಯ ಮಾತ್ರ ಈ ಸಮೀಪಸಂಬಂಧಗಳಿಂದ ಒಳ್ಳೆಯದಾಗದೆಂದು ಎಚ್ಚರಿಸುತ್ತಲೇ ಇರುತ್ತಾನೆ."

ನಾರಾಯಣರಾಯ ನಿವೃತ್ತಿಯ ನಂತರ ಬೆಂಗಳೂರಲ್ಲಿಯೇ ನೆಲೆಸುವ ಯೋಚನೆಯಲ್ಲಿದ್ದಾನೆಂದು ತಿಳಿದಾಗ ಶೇಷಗಿರಿಯು ಇನ್ನೊಂದು ಹಿಡಿತದ ಅವಕಾಶ ಸಿಕ್ಕಿತೆನ್ನುತ್ತಾನೆ. ತನ್ನ ಕಂಪನಿಯೊಂದಕ್ಕೆ ಅಡವಾಗಿದ್ದ ಮನೆಯೊಂದನ್ನು ಕಮ್ಮಿ ಬೆಲೆಯಲ್ಲಿ ಕೊಡಿಸುವೆನೆನ್ನುತ್ತಾನೆ. ಇದರಲ್ಲಿ ನಾರಾಯಣರಾಯ ಅಂತಹ ಉತ್ಸಾಹವನ್ನು ತೋರಿಸುವುದಿಲ್ಲ. ನಿಜವಾಗಿಯೂ ಶೇಷಗಿರಿಗೆ ನಾರಾಯಣರಾಯನ ಬಗ್ಗೆ ಹಿತವಾದ ಭಾವನೆಯಿರುವದಿಲ್ಲ. ಅವನ ನಿಃಸ್ಪೃಹವೃತ್ತಿ ಇವನ ಲೋಭಕ್ಕೆ ಯಾವಾಗಲೂ ಒಂದು ಅವಮಾನವೆಂಬಂತೆ ತೋರುತ್ತಿತ್ತಲ್ಲದೆ ಅವನು ತನ್ನನ್ನು ಒಂದು ಸಂದರ್ಭದಲ್ಲಾದರೂ ಮೋಸಪಡಿಸಿದ್ದಾನೆಂದು ಶೇಷಗಿರಿ ತಿಳಿದಿರುತ್ತಾನೆ. ಹಿಂದೆ ಮುಂಬಯಿಯಲ್ಲಿ ಅವರಿಬ್ಬರೂ ಜೊತೆಯಾಗಿದ್ದಾಗ ಶೇಷಗಿರಿ ಒಪ್ಪಿದ ಕನ್ಯೆಯನ್ನು ಅವನ ತಂದೆ ಒಪ್ಪುವದಿಲ್ಲ. ಅವಳ ಜಾತಕದಂತೆ ಅವಳು ಬಂಜೆ ಎಂದು ಕಾರಣ ಹೇಳಿದಾಗ ಶೇಷಗಿರಿಯೂ ವಿಮುಖವಾಗುತ್ತಾನೆ. ಕನ್ಯೆಯ

ತಂದೆತಾಯಿಗಳಿಗೆ ಇದೊಂದು ಚಿಂತೆಯ ವಿಷಯವಾಗುತ್ತದೆ. ನಾರಾಯಣ ಸಹಜ ಪರೋಪಕಾರಬುದ್ಧಿಯಿಂದ ಆ ಕನ್ಯೆಯನ್ನು ಮದುವೆಯಾಗಲು ಒಪ್ಪಿದಾಗ, ಅವರು ಬಹಳ ಸಂತೋಷದಿಂದ ಮದುವೆ ಮಾಡಿಕೊಡುತ್ತಾರೆ. ಇದರಿಂದ ಚೆಲುವೆ ಕನ್ಯೆಯೊಬ್ಬಳನ್ನು ಕೈತಪ್ಪಿಸಿ ನಾರಾಯಣರಾಯ ಸ್ವಾರ್ಥಸಾಧಿಸಿಕೊಂಡನೆಂದು ಶೇಷಗಿರಿಗೆ ತೋರುತ್ತದೆ. ಮುಂದೊಮ್ಮೆ ಮುಂಬಯಿಗೆ ಶೇಷಗಿರಿ ಹೋದಾಗ ನಾರಾಯಣರಾಯನ ಮಗಳಾದ ಚಿಕ್ಕ ಊರ್ವಶಿಯನ್ನು ನೋಡಿ ನಾರಾಯಣ ಜಾತಕದ ವಿಷಯದಲ್ಲಿ ತನಗೆ ಮೋಸ ಮಾಡಿದನೆಂದೇ ಭಾವಿಸುತ್ತಾನೆ. ಆ ಕನ್ಯೆಯೇ ಈಗ ಅಂದಿನಿಂದಲೂ ನಾರಾಯಣನ ಸಹಧರ್ಮಿಣಿ ಲಕ್ಷ್ಮಿ.

ನಾರಾಯಣರಾಯ ನೌಕರಿಯ ಹೊಸತರಲ್ಲಿ ಅಹಮದಾಬಾದಿನಲ್ಲಿದ್ದಾಗ ಶೇಷಗಿರಿ ಅಲ್ಲಿ ಉದ್ಯೋಗವನ್ನು ಹುಡುಕಿಕೊಂಡು ಬಂದಿರುತ್ತಾನೆ. ನಾರಾಯಣರಾಯ ತನಗೆ ತಿಳಿದ ರಾಜಮನೆತನವೊಂದರಲ್ಲಿ ಶೇಷಗಿರಿಗೆ ಕೆಲಸವನ್ನು ಕೊಡಿಸುತ್ತಾನೆ. ಆ ಮನೆತನದಲ್ಲಿದ್ದವರು ಇಬ್ಬರೇ — ಗಂಡ ಬಿಟ್ಟ ರಾಜಕುಮಾರಿ 'ದೇವಿ' ; ಅವಳ ಬಳಗದವನೊಬ್ಬ ಹಿರಿಯ ವಯಸ್ಸಿನ 'ಸಿಂಘಜೀ' ; ದೇವಿಯ ಏಕಾಕಿತನದ ದುರ್ಲಾಭವನ್ನು ಪಡೆದು ಶೇಷಗಿರಿ ಅವಳೊಡನೆ ಕೆಲಕಾಲ ಸುಖಜೀವನವನ್ನು ನಡೆಸುತ್ತಾನೆ. ಆಗ ಜನಿಸಿದವಳೇ ಊರ್ವಶಿ. ದೇವಿಯ ಸಹಾಯದಿಂದಲೇ ಶೇಷಗಿರಿ ದೊಡ್ಡ ಮನುಷ್ಯನಾದದ್ದು. ಇವೆಲ್ಲ ನಾರಾಯಣರಾಯನಿಗೆ ದೇವಿಯ ಮುಖದಿಂದಲೇ ತಿಳಿದು, ಆಕೆಯ ಕೋರಿಕೆಯಂತೆ ಊರ್ವಶಿಯನ್ನು ಮಕ್ಕಳಿಲ್ಲದಿದ್ದ ಲಕ್ಷ್ಮೀ-ನಾರಾಯಣರಾಯರೇ ಸಾಕಿಕೊಳ್ಳುತ್ತಾರೆ. ಇದು ಬೇರಾರಿಗೂ ತಿಳಿಯದ ಸಂಗತಿ.

ಮೊದಲಿಂದ ಅವರ ಸಂಬಂಧಗಳು ಹಿತಕರವಾಗಿಲ್ಲವೆಂಬುದರ ವಿವರ ರಾಜು-ಊರ್ವಶಿಯರಿಗೆ ಗೊತ್ತಿಲ್ಲದಿದ್ದ ಕಾರಣ ಶೇಷಗಿರಿರಾಯನ ಬಗೆಗೆ ನಾರಾಯಣರಾಯ ತೋರಿಸುತ್ತಿದ್ದ ಸಂಶಯ, ನಿರುತ್ಸಾಹ ಅವರಿಗೆ ಅರ್ಥಹೀನವಾಗಿ ತೋರುತ್ತವೆ. ಹೀಗಾಗಿ ರಾಜು ನಾರಾಯಣರಾಯರ ಎಚ್ಚರಿಕೆಯನ್ನು ಕಡೆಗಣಿಸಿ ಅವನು ಒಡ್ಡುತ್ತಿದ್ದ ಪ್ರಲೋಭನಗಳಿಗೆ ಒಳಗಾಗುತ್ತಿರುತ್ತಾನೆ. ಈ ಎಲ್ಲ ವ್ಯವಹಾರಗಳಲ್ಲಿ ಶೇಷಗಿರಿ ಊರ್ವಶಿಯೊಡನೆ ಓಡಾಡುತ್ತ ರಾಜುವಿನ ಕಣ್ಣೆದುರಿನಲ್ಲಿಯೇ ತನ್ನ ಕಾರಸ್ಥಾನವನ್ನು ಮುಂದುವರಿಸುವದರಲ್ಲಿರುತ್ತಾನೆ.

ಏತನ್ಮಧ್ಯೆ ರಾಜು ಮದರಾಸಿನ ಶೇಷಗಿರಿಯ ಕಂಪನಿಯ ಶಾಖೆಯಲ್ಲಿನ ಕೆಲವು ಅಕ್ರಮಗಳನ್ನು ಕಂಡಿರುತ್ತಾನೆ. ಶೇಷಗಿರಿ ಅದನ್ನು ಮುಚ್ಚುವ ಪ್ರಯತ್ನದಲ್ಲಿರಬಹುದೆಂಬ ಸಂಶಯ ಅವನಿಗೆ ಬರುತ್ತದೆ. ಇತ್ತ ಶೇಷಗಿರಿ ಊರ್ವಶಿಯೊಡನೆ ತನ್ನ ಬಯಕೆಯನ್ನು ಮುಂದುವರಿಸಬೇಕೆಂದು ಆಲೋಚಿಸಿ, ರಾಜುವನ್ನು ಹೈದರಾಬಾದಿಗೆ ತಪಾಸಣೆಗೆ

ಕಳಿಸುತ್ತಾನೆ. ಆದರೆ ಈ ಹಂಚಿಕೆ ರಾಜುವಿನೊಡನೆ ಊರ್ವಶಿಯೂ ಹೈದರಾಬಾದಿಗೆ ಹೊರಟ ಕಾರಣ ವಿಫಲವಾಗುತ್ತದೆ. ಹೈದರಾಬಾದಿನ ಶಾಖೆಯ ಅವ್ಯವಸ್ಥೆಯನ್ನು ಕಂಡ ರಾಜುವಿಗೆ ಶೇಷಗಿರಿಯ ಅವ್ಯವಹಾರಗಳ ಬಗೆಗೆ ನಾರಾಯಣರಾಯರಿಗಿರುವ ಸಂದೇಹಗಳೂ ಅವರು ತನಗೆ ಹೇಳಿದ ಎಚ್ಚರಿಕೆಯೂ ನಿರಾಧಾರವಾಗಿರಲಿಕ್ಕಿಲ್ಲವೆಂದು ಅನ್ನಿಸತೊಡಗುತ್ತದೆ.

ಶೇಷಗಿರಿಯ ತಾಳ್ಮೆ ಕುಸಿಯುವುದರಲ್ಲಿರುತ್ತದೆ. ಹೈದರಾಬಾದಿನಿಂದ ರಾಜು – ಊರ್ವಶಿ ವಾಪಸಾದ ಕೂಡಲೇ ಅವನು ರಾಜು ಮನೆಯಲ್ಲಿಲ್ಲದಾಗ ಬಂದು ಊರ್ವಶಿಯನ್ನು ಸಂಧಿಸಿ ತನ್ನ ಆಶೆಯನ್ನು ಬಾಯಿಬಿಟ್ಟು ಹೇಳುತ್ತಾನೆ. ಊರ್ವಶಿ ಅವನನ್ನು ಧಿಕ್ಕರಿಸಿ ಅವಮಾನಿಸಿ ಕಳಿಸುತ್ತಾಳೆ. ಈಗ ಶೇಷಗಿರಿಯ ಬುದ್ಧಿ ಸೇಡಿಗೆ ತಿರುಗುತ್ತದೆ. ರಾಜುವಿನ ಮೇಲೆ ಇಲ್ಲದ ಮೋಸ ಪ್ರಕರಣವೊಂದರ ಆಪಾದನೆ ಹೊರಿಸುತ್ತಾನೆ. ಪ್ರತಿಭಟಿಸಿದ ರಾಜು ಆ ನೌಕರಿಯಲ್ಲಿ ಮುಂದುವರಿಯಲಿಚ್ಛಿಸದೆ ಬಿಡುಗಡೆ ಕೇಳುತ್ತಾನೆ. ಕೆಲಸ ಬಿಡುವುದಾದರೆ ತಾನು ಒದಗಿಸಿಕೊಟ್ಟ ಎಲ್ಲ ಸವಲತ್ತುಗಳಿಗೂ ಬೆಲೆ ಕಟ್ಟಿಕೊಟ್ಟು ಬಿಡುಗಡೆ ಪಡೆಯಬೇಕೆಂದು ಶೇಷಗಿರಿ ಬೆದರಿಸುತ್ತಾನೆ. ಬೆದರಿಕೆಗೆ ಬಗ್ಗದ ರಾಜು ನಾರಾಯಣರಾಯರಿಂದ ಆ ಹಣ ಪಡೆದು ಶೇಷಗಿರಿಗೊಪ್ಪಿಸುತ್ತಾನೆ. ಆಗ ಅವನ ಜೊತೆ ಹೋಗಿದ್ದ ಊರ್ವಶಿ ಧರಿಸಿದ್ದ ವಜ್ರದ ಪದಕದಿಂದ ಅವಳ ಜನ್ಮರಹಸ್ಯ ಬಯಲಾಗುತ್ತದೆ. ಆ ಪದಕವನ್ನು 'ದೇವಿ' ತನ್ನ ಮಗುವಿಗೆ ಹಾಕಿ ಲಕ್ಷ್ಮಿಗೆ ಕೊಟ್ಟಿರುತ್ತಾಳೆ.

ಇಷ್ಟುಕಾಲ ತಾನು ಅಕ್ಕರೆಯಿಂದ ಸಾಕಿ ಬೆಳೆಸಿದ್ದ ಮಗಳು ತನಗೆ ದಕ್ಕಲಿಲ್ಲವೆಂದು ಈಗ ಲಕ್ಷ್ಮಿಗಾದ ದುಃಖಕ್ಕೆ ಯಾವ ಸಮಾಧಾನವನ್ನೂ ಹೇಳುವಂತಿರಲಿಲ್ಲ. ತಾನು ತಾಯಿಯಿಲ್ಲದ ತಬ್ಬಲಿಯೆಂಬ ಅಳಲು ಊರ್ವಶಿಗಾಯಿತು. ಅದರ ಮೇಲೆ ರಾಜುವು ಇನ್ನು ತನ್ನನ್ನು ಹೇಗೆ ಕಾಣುವನೋ ಎಂಬ ವಿವಂಚನೆ ಬೇರೆ. ತನ್ನಿಂದ ನಡೆಯಲಿದ್ದ ಪಾಶವೀಕೃತ್ಯವನ್ನು ನೆನೆದು ಶೇಷಗಿರಿ ತನ್ನ ಜೀವನಕ್ಕೆ ತಾನೇ ಹೇಸಿಕೊಳ್ಳುವಂತಾಯಿತು. ರಾಜುವಿನ ಮನಃಸ್ಥಿತಿ ಅವನಿಗೇ ತಿಳಿಯದಂತಾಯಿತು. ನಾರಾಯಣರಾಯರು ಉಳಿದವರಿಗೆ ಸಮಾಧಾನ ಹೇಳುತ್ತಿದ್ದರೂ ತಮ್ಮ ಮಟ್ಟಿಗೆ ತಮ್ಮ ಜೀವನಶ್ರದ್ಧೆಯ ತಳಹದಿಯೇ ಕುಸಿದುಹೋದಂತಾಗಿತ್ತು.

ಈ ಕತೆಯ ರಚನೆಯ ಚಮತ್ಕಾರದಂತೆಯೇ ಪಾತ್ರಗಳ ಚಿತ್ರಣದ ಸ್ಫುಟತೆಯೂ ಎದ್ದು ಕಾಣುತ್ತದೆ. ''ಯಸ್ಮಾನ್ನೋದ್ವಿಜತೇ ಲೋಕಃ ಲೋಕಾನ್ನೋದ್ವಿಜತೇ ಯಃ'' ಎಂಬ ತತ್ತ್ವ ಆಚರಣೆಯಲ್ಲಿ ಸಾಧ್ಯ ಎಂದು ತೋರಿಸುವ ನಾರಾಯಣರಾಯರು, ಶೇಷಗಿರಿಯಂಥವರಿಗೆ ತಾವು ಏನು ಮಾಡಿದರೂ ಆ ಎತ್ತರ ನಿಲುಕದ್ದು ಎಂಬ ಹೀನಾಯ

ಭಾವನೆಯೇ ಅವರನ್ನು ಕಂಡರೆ ಸಹಿಸದಂತೆ ಮಾಡುತ್ತದೆ. ''ಮೃಗಮೀನ ಸಜ್ಜನಾನಾಂ ತೃಣಜಲಸಂತೋಷವಿಹಿತವೃತ್ತಿನಾಂ । ಲುಬ್ಧಕ ಧೀವರ ಪಿಶುನಾಃ ನಿಷ್ಕಾರಣವೈರಿಣೋ ಜಗತಿ'' ಎಂಬುದನ್ನು ಮನಗಾಣಬೇಕಾದರೆ ಶೇಷಗಿರಿಯನ್ನು ನೋಡಬೇಕು. ಯಾವ ಅತಿಯೂ ಇಲ್ಲದ ರಾಜುವಿನಂತಹ ಪಾತ್ರವನ್ನು ಕಣ್ಕಟ್ಟುವಂತೆ ಚಿತ್ರಿಸುವದು ಸುಲಭವಲ್ಲ. ಅದನ್ನಿಲ್ಲಿ ಇನಾಮದಾರರು ಸಾಧ್ಯಮಾಡಿ ತೋರಿಸಿದ್ದಾರೆ. ತರುಣ, ಚೆಲುವ, ನಿಷ್ಕಪಟ, ದಕ್ಷ, ಧೈರ್ಯಶಾಲಿ, ಉಲ್ಲಾಸಿ ; ನೆರಳುಗಳೇ ಇಲ್ಲದ ಬಣ್ಣಗಳಿಂದ ಇಂತಹ ಚಿತ್ರವನ್ನು ಬರೆದದ್ದೊಂದು ಅಪರೂಪ ಸಾಧನೆ. ಬಹುಶಃ ಅವನ ಜೊತೆಗಿರುವ ಪಾತ್ರಗಳು ಅಷ್ಟು ಸ್ಫುಟವಾಗಿರುವದರಿಂದಲೇ ಇದು ಸಾಧ್ಯವಾಗಿದೆ ಎಂದು ತೋರುತ್ತದೆ. ಲಕ್ಷ್ಮಿಯ ಒಂದು ಹೆಸರೇ ಆದ 'ಸೌಮ್ಯಾ' ಎಂಬ ವರ್ಣನೆ ಇವಳಿಗೆ ಬಹುಚೆನ್ನಾಗಿ ಒಪ್ಪುತ್ತದೆ. ಯಾರಿಗೂ ಕಣ್ಣೆಸರಾಗದ ಅವಳ ಸಂಸಾರದ ಸೌಭಾಗ್ಯವನ್ನು ಕಂಡು ಶೇಷಗಿರಿಯಂಥವನ ಹೊಟ್ಟೆ ಉರಿದದ್ದರಲ್ಲಿ ಸೋಜಿಗವಿಲ್ಲ. ಶೇಷಗಿರಿಯ ಹೆಂಡತಿ ಪದುಮಕ್ಕನ ವ್ಯಕ್ತಿತ್ವ ಲಕ್ಷ್ಮಿಗಿಂತಲೂ ಒಂದು ತೂಕ ಹೆಚ್ಚಿನದು. ಅವಳಿಗೆ ಲೌಕಿಕದಲ್ಲಿ ಯಾವ ಕೊರತೆಯೂ ಇಲ್ಲ. ಎಲ್ಲಕ್ಕೂ ದೊಡ್ಡ ಕೊರತೆ ಶೇಷಗಿರಿಯ ಪರಸ್ತ್ರೀವ್ಯಾಮೋಹ. ಅದನ್ನವಳು ಮೌನದಿಂದ ಸಹಿಸಿ ತನ್ನ ಗೌರವವನ್ನೂ ಅವನ ಗೌರವವನ್ನೂ ಮಕ್ಕಳ ಯೋಗಕ್ಷೇಮವನ್ನೂ ಕಾಪಾಡುತ್ತಾಳೆ. ಗೃಹಿಣಿ, ಮನೆಯೊಡತಿ ಎಂಬ ಪದವನ್ನು ಸಾರ್ಥಕವಾಗಿಸುತ್ತಾಳೆ.

ಊರ್ವಶಿಯ ಪಾತ್ರವೂ ಒಂದು ವಿಶಿಷ್ಟ ಸಾಧನೆಯೇ. ತರುಣಿ, ಚೆಲುವೆ, ವಿಲಾಸ ಪ್ರಿಯೆ ಮುಂತಾದ ಪದಗಳ ಹಿಂದೆಯೇ ಪಾಪದ ನೆರಳು ಸರಿದುಬರುವಂತೆ ತೋರುವದು ಸಾಹಿತ್ಯಪ್ರಪಂಚದಲ್ಲಿ ಸಾಮಾನ್ಯ. ಇಲ್ಲಿ ಅದರ ಸುಳಿವೇ ಇಲ್ಲ. ಹಾಗೆಂದರೆ ಊರ್ವಶಿ ಬುದ್ಧಿಪೂರ್ವಕವಾಗಿ ಶೇಷಗಿರಿಯನ್ನು ಅವನ ವ್ಯಾಮೋಹದ ಕಣ್ಣಿಯಿಂದ ಕಟ್ಟಿ ತನ್ನ ಕಾರ್ಯಸಾಧನೆಗಾಗಿ ಕುಣಿಸಿದಳೆ. ಅದೂ ಇಲ್ಲ. ಅವಳ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಲೇಖಕರ ಮಾತಿನಲ್ಲಿಯೇ ಹೇಳುವುದಾದರೆ ''ತನ್ನ ಚೆಲುವಿಗೆ ಉಳಿದವರಿಗಿಂತ ಹೆಚ್ಚಾಗಿ ತಾನೇ ಮನಸೋತವಳ ಮನಃಸ್ಥಿತಿ ಆಕೆಯದಾಗಿರುತ್ತಿತ್ತು...'' ''ತಾನು ಚೆಲುವೆ, ತಾನು ಚೆಲುವೆ ಎನ್ನುವುದನ್ನು ಇನ್ನೊಬ್ಬರು ತಿಳಿಯಬೇಕು ಎನ್ನುವ ಅಪೇಕ್ಷೆಯೇ ಥಳಕು ಬಾಳಿನೆಡೆಗೆ ಆಕೆಯನ್ನು ಸೆಳೆಯುತ್ತಿತ್ತು...'' ''ತನ್ನ ಚೆಲುವನ್ನು ನೋಡಿ ಇನ್ನೊಬ್ಬರು ತಮ್ಮ ಸಂತೋಷವನ್ನು ಹೇಳಿದಾಗ ಆಕೆಗಾದಷ್ಟು ಸಂತೋಷ ಇನ್ನಾವುದರಿಂದಲೂ ಆಗುತ್ತಿರಲಿಲ್ಲ...'' ಅವಳಿಗೆ ರಾಜುವಿನಂತಹ ಗಂಡನಿಲ್ಲದಿದ್ದರೆ ಅವಳು ಏನಾಗುತ್ತಿದ್ದಳೋ ಎನ್ನುವ ಪ್ರಶ್ನೆ ರಾಜುವಿನ ಪಾತ್ರವನ್ನು ಸ್ಫುಟಗೊಳಿಸುತ್ತದೆ. ಅವಳ ಈ ಕತೆಯಲ್ಲಿಯ ಪಾತ್ರದ ಮಟ್ಟಿಗೆ ಅದು ಅಪ್ರಸ್ತುತ. ಬಹುಶಃ ಬೇಂದ್ರೆಯವರು ಒಂದು ವಿಧದ ಪುರುಷ ಸ್ವಭಾವವನ್ನು ಕುರಿತು ''ಯಾರವ್ವ ಇವ ಚೆಲುವಾ‌ಽ ತನ್ನಷ್ಟಕ್ಕೆ ತಾನು ನೋಡಿ ನಲಿವಾ‌ಽ'' ಎಂದು ಹೇಳಿದ

ಮಾತನ್ನು ಊರ್ವಶಿಯ ಸ್ತ್ರೀಸ್ವಭಾವಕ್ಕೆ ಹೋಲಿಸಬಹುದು. ಎಷ್ಟೋಜನ ಸ್ತ್ರೀಯರಲ್ಲಿ ಕಿಶೋರಾವಸ್ಥೆಯಲ್ಲಿ ಅವರದಾಗಿದ್ದ ಮನಸ್ಸೇ ಮುಂದೆಯೂ ಉಳಿದುಬಿಡುತ್ತದೆ ಎಂಬುದಕ್ಕೆ ಮನಃಶಾಸ್ತ್ರದ ಸಮರ್ಥನೆ ಇದೆಯಂತೆ. ಅದೇನಿದ್ದರೂ ಈ ಪಾತ್ರ ಸುಭಾವ್ಯತೆಗೆ ಕುಂದಿಲ್ಲದಂತೆ ವಿಶಿಷ್ಟವಾದದ್ದು. ಆದರೆ ಅವಳ ಬಗೆಯಲ್ಲಿ ನಾರಾಯಣರಾಯರು ಚಿಂತನವೆಂದು ಹೇಳಿದ ಕೊನೆಯ ಮಾತುಗಳು ಕತೆಯ ಚೌಕಟ್ಟಿನಲ್ಲಿ ಎಲ್ಲಿಯೂ ಹೊಂದುವುದಿಲ್ಲ. ಅದು ಗಟ್ಟಿಯಾಗಿ ಓದುವದಕ್ಕೇನೊ ಚೆನ್ನಾಗಿದೆ ; ಆದರೆ ತಡೆದು ಚಿಂತಿಸಿದರೆ ಅಲ್ಲಿ ವಿಚಾರಗಳ ಗೊಂದಲ ಕಾಣುತ್ತದೆ.

13

'ಊರ್ವಶಿ'ಯ ಕೊನೆಯ ಪುಟದಲ್ಲಿನ ಅಮೂರ್ತ ಸೌಂದರ್ಯದ ಕಾವ್ಯಮಯ ಪ್ರಗಾಥಕ್ಕೆ ಆ ಕತೆಯ ಚೌಕಟ್ಟಿನಲ್ಲಿ ಸ್ಥಾನವಿಲ್ಲವೆಂದೇ ಅದು ಮುಂದೆ ಬರಲಿರುವ ಕಾದಂಬರಿಯ ವಸ್ತುವಿನ ಛಾಯೆ ಲೇಖಕರ ಮನಸ್ಸಿನಲ್ಲಿ ಮೂಡುತ್ತಿತ್ತೆಂಬ ಸೂಚನೆ ಯಾಗಿದೆ. ಏಕೆಂದರೆ 'ನವಿಲುನೌಕೆ' ಪುಸ್ತಕರೂಪದಲ್ಲಿ ಪ್ರಕಟವಾದದ್ದು 1971ರಲ್ಲಾದರೂ ಅದನ್ನು ಅವರು ಬರೆದು ಮುಗಿಸಿದ್ದು 1969ರಲ್ಲಿಯೇ. ಅನೇಕ ವಿಧದ ಆವಿಷ್ಕಾರಗಳಿಂದ ಮನುಷ್ಯನ ಜೀವವನ್ನು ಪ್ರಪಂಚದಲ್ಲಿ ತೊಡಕಿಸುವ ಚೆಲುವಿನ ಮೂಲತತ್ತ್ವ ಒಂದೇ ಎಂಬ ಚಿಂತನ ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಬರುತ್ತದೆ. ಅಂತಹ ತಲಸ್ಪರ್ಶಿ ಚಿಂತನಕ್ಕೆ ಮೂಲಪ್ರೇರಣೆ ಒಂದು ಜಾನಪದ ಕತೆ.

ಜಯವರ್ಧನನೆಂಬ ರಾಜ. ಚಂಪಕಮಾಲೆ ಎಂಬ ರಾಣಿ. ಅವರ ಕೋಟೆ ಅರಮನೆಗೆ ತಾಗಿದಂತಿದ್ದ ಸರೋವರದಲ್ಲಿ ನೌಕಾವಿಹಾರ ಅವರಿಬ್ಬರಿಗೂ ತುಂಬ ಪ್ರಿಯವಾದದ್ದು. ಆ ವಿಹಾರಕ್ಕೆ ನವಿಲಿನಾಕಾರದ ದೋಣಿಯೊಂದಿತ್ತು. ಅವರ ವಿಹಾರ ನಡೆದದ್ದು ಬಹು ಸ್ವಲ್ಪ ಕಾಲ. ತಾರುಣ್ಯದಲ್ಲಿಯೇ ನೆರೆಯ ಪಾಳೆಯಗಾರನೊಬ್ಬ ಮೋಸದಿಂದ ಕೋಟೆಯನ್ನು ವಶಪಡಿಸಿಕೊಂಡ. ರಾಜ ಕಾಳಗದಲ್ಲಿ ಮಡಿದ. ರಾಣಿ ತಮ್ಮ ವಿಹಾರನೌಕೆಯನ್ನೇರಿ ಬೆಳದಿಂಗಳಲ್ಲಿ ಅದನ್ನು ನಡುನೀರಿಗೆ ಒಯ್ದು ಮುಳುಗಿಸಿ ತಾನೂ ನೀರಪಾಲಾದಳು.

ಈ ಕತೆಯ ಸುತ್ತ ಹೆಣೆದ ಕಾದಂಬರಿಯ ಕತೆ ಹೀಗಿದೆ : ಅರವಿಂದ ಕಂದಾಯ ಇಲಾಖೆಯಲ್ಲಿ ತರುಣ ಸಬ್‌ಡಿವಿಜನಲ್ ಅಧಿಕಾರಿ. ತನ್ನ ಶಿಸ್ತು ದಕ್ಷತೆ ಸುಸ್ವಭಾವದಿಂದ ಹೋದಹೋದಲ್ಲೆಲ್ಲ ಜನಗಳ ಪ್ರೀತ್ಯಾದರಗಳನ್ನು ಗಳಿಸುತ್ತಾನೆ. ಅವನ ನಿರಹಂಕಾರಕ್ಕೆ ಆಧಾರ ಅವನ ರಸಿಕತೆ ಮತ್ತು ಭಾವಜೀವನ. ಅವನ ಭಾವುಕತೆಗೆ ಪುಟಕೊಡುವಂತೆ

ಅವನ ಕಾರ್ಯಕ್ಷೇತ್ರ ಚೆಲುವಿನ ಕೇಂದ್ರಗಳಲ್ಲಿಯೇ ಇದ್ದಿತು. ಅವನ ಶಿರಸ್ತೇದಾರ ವೆಂಕಟರಾಮಯ್ಯ ಅವನಿಗೆ ವಯಸ್ಸಿನಲ್ಲಿ ಹಿರಿಯನಾಗಿದ್ದರೂ ಕರ್ತವ್ಯನಿಷ್ಠೆ, ಸಜ್ಜನಿಕೆ, ಸೃಷ್ಟಿಸೌಂದರ್ಯ, ಜಾನಪದ ಸಾಹಿತ್ಯದಲ್ಲಿ ಆಸಕ್ತಿಗಳಿಂದ ಅವನಿಗೆ ಆಪ್ತಮಿತ್ರನಂತಾಗಿದ್ದ.

ಅವರಿಬ್ಬರಿಗೂ ಸಾಮಾನ್ಯವಾಗಿದ್ದ ಈ ಆಸಕ್ತಿಗಳಿಂದಾಗಿ ದಟ್ಟವಾದ ಕಾಡಿನ ಮೂಲೆಯಾಗಿದ್ದ ಬಾಗೂರು ಎಂಬಲ್ಲಿ ಅರವಿಂದ ಕ್ಯಾಂಪ್ ಮಾಡುವದೆಂದು ಗೊತ್ತು ಮಾಡುತ್ತಾರೆ. ಅಲ್ಲಿ ಹಾಳಾದ ಕೋಟೆ ಮತ್ತು ಕೆಸರುಕಂಟಿಗಳಿಂದ ತುಂಬಿ ದುರ್ಗಮವಾದ ಕೆರೆ ಇದೆ. ಅದೇ ಜಯವರ್ಧನ – ಚಂಪಕಮಾಲೆಯರ ವಿಲಾಸಸ್ಥಾನವಾಗಿತ್ತೆಂಬ ಐತಿಹ್ಯ ಆ ಭಾಗದಲ್ಲಿ ಪ್ರಚಲಿತವಾಗಿದೆ. ಅದನ್ನು ಕುರಿತ ಲಾವಣಿಗಳನ್ನು ಹಾಡುತ್ತಾರೆ. ಈಗಲೂ ಬೆಳದಿಂಗಳ ರಾತ್ರಿಗಳಲ್ಲಿ ಚಂಪಕಮಾಲೆಯ ದೋಣಿ ಆ ನೀರಮಧ್ಯದಲ್ಲಿ ತೇಲುವದೆಂದೂ ಅಲ್ಲಿ ಹೋದ ಜನಗಳಿಗೆ ಅಲ್ಲಿಂದ ಮರಳಿ ಬರುವದಕ್ಕೆ ಕಾಲೇ ಏಳುವದಿಲ್ಲವೆಂದೂ ಅಲ್ಲಿಯ ಜನಗಳು ಹೇಳುತ್ತಾರೆ. ಆ ಸ್ಥಳದ ಸ್ವಾಭಾವಿಕ ದುರ್ಗಮತೆಯಿಂದಲೋ ಅಲ್ಲಿ ನಡೆದಿತ್ತೆಂಬ ದುರಂತದ ಛಾಯೆಯಿಂದಲೋ ಊರವರಾರೂ ಅತ್ತ ಸುಳಿಯುವದಿಲ್ಲ. ಆ ಊರ ಶಾನುಭೋಗರಾದ ಗೋಪಾಲಯ್ಯ ವೆಂಕಟರಾಮಯ್ಯನ ಬಾಲ್ಯಸ್ನೇಹಿತ ಮತ್ತು ಅವನಂತೆಯೇ ಸಜ್ಜನಿಕೆ ಕರ್ತವ್ಯನಿಷ್ಠೆಯಿಂದ ಜನಪ್ರಿಯನಾಗಿದ್ದವ. ಆದ್ದರಿಂದ ಯಾವ ಅಧಿಕಾರಿಯೂ ಎಂದೂ ಕ್ಯಾಂಪ್ ಮಾಡದೇ ಇದ್ದ ಆ ಊರಲ್ಲಿ ಅರವಿಂದನ ಕ್ಯಾಂಪಿನ ಏರ್ಪಾಡು ಸುಲಭವಾಗುತ್ತದೆ. ಮತ್ತು ಇವನ ಇಚ್ಛೆಯಂತೆ ಸಾಧ್ಯವಿದ್ದಷ್ಟೂ ಕೆರೆಯ ಸಮೀಪದಲ್ಲಿಯೇ ಅವನ ಡೇರೆಯನ್ನು ಹೂಡುತ್ತಾರೆ. ಅಲ್ಲಿ ಅವನು ಬರುವದಕ್ಕೆ ಕಾರಣವನ್ನೊದಗಿಸಿದ್ದು ಅವನ ಆಫೀಸಿನಲ್ಲಿ ಬಹುಕಾಲದಿಂದ ತೀರ್ಮಾನವಾಗದೇ ನಿಂತಿದ್ದ ಒಂದು ವ್ಯವಹಾರ — ಆ ಕೆರೆಯ ಅಂಚಿನಲ್ಲಿದ್ದ ಕಾಡಿನ ಒಡೆತನಕ್ಕೆ ಸಂಬಂಧಿಸಿದ್ದು. ಶಂಕರನಾಯಕನೆಂಬುವನೊಬ್ಬ ತಾನು ಜಯವರ್ಧನನ ವಂಶಜನೆಂದು ಆ ಭೂಮಿಗೆ ತನ್ನ ಹಕ್ಕು ಸಾಧಿಸುತ್ತಿರುತ್ತಾನೆ. ಪರಿಸರದಲ್ಲಿದ್ದ 2-3 ದಿನಗಳಲ್ಲಿ ಅರವಿಂದ ಆ ಕೆರೆಯ ಸುತ್ತ ಬಿಸಿಲಿನಲ್ಲಿ ಬೆಳಗಿನಲ್ಲಿ ಬೈಗಿನಲ್ಲಿ ಬೆಳದಿಂಗಳಲ್ಲಿ ಸುತ್ತಾಡುತ್ತ ಅದರತ್ತ ವಿಚಿತ್ರ ರೀತಿಯಲ್ಲಿ ಆಕರ್ಷಿತನಾಗುತ್ತಾನೆ. ಅಲ್ಲಿಯ ಐತಿಹ್ಯವನ್ನು ಕುರಿತ ಒಂದು ಲಾವಣಿಯನ್ನು ಹೇಳುವ ಕಾರ್ಯಕ್ರಮವೊಂದು ವೆಂಕಟರಾಮಯ್ಯನ ಮಧ್ಯಸ್ಥಿಕೆಯಿಂದ ಏರ್ಪಾಡಾಗುತ್ತದೆ. ಆ ಸ್ಥಳವನ್ನು ನೋಡಿ, ಲಾವಣಿಯನ್ನು ಕೇಳಿ ಪ್ರಭಾವಿತನಾಗಿದ್ದ ಅರವಿಂದನಿಗೆ ಕೆಲವೇ ವರ್ಷಗಳ ಹಿಂದೆ ಗಾಜನೂರು ಕಟ್ಟೆಯಲ್ಲಿ ವಿಹಾರಕ್ಕೆಂದು ಹೋದಾಗ ಅಲ್ಲಿ ಮುಳುಗಿಹೋಗಿದ್ದ ತನ್ನ ಹೆಂಡತಿ ಶಾರದೆಯ ನೆನಪು ಬರುವದಲ್ಲದೇ ಕನಸಿನಲ್ಲಿ ಆ ನವಿಲುನೌಕೆ, ಅದರಲ್ಲಿ ಒಮ್ಮೆ ಚಂಪಕಮಾಲೆ, ಒಮ್ಮೆ ಶಾರದೆ ಕಾಣುವಂತಾಗುತ್ತದೆ. ಅಲ್ಲಿಂದ ಕ್ಯಾಂಪು ಕೀಳುವ ದಿನ ಗೋಪಾಲಯ್ಯನ ಆಗ್ರಹದ ಆಮಂತ್ರಣವನ್ನೊಪ್ಪಿ, ಅರವಿಂದ ಅವನ ಮನೆಗೆ

ಉಪಾಹಾರಕ್ಕೆ ಹೋಗುತ್ತಾನೆ. ಅಲ್ಲಿ ಅವನ ಮಗಳು ಕುಮುದಳನ್ನು ನೋಡಿದಾಗ ಶಾರದಯೇ ಬಂದಳೇನೋ ಎನ್ನುವಂತಿದ್ದ ಸಾಮ್ಯವನ್ನು ಕಂಡು ಸ್ತಂಭಿತನಾಗುತ್ತಾನೆ.

ಗೋಪಾಲಯ್ಯನ ಮಗ ಹಾಸನದಲ್ಲಿ ಅಧ್ಯಾಪಕ. ಆತ ಸೂಚಿಸಿದ ಒಬ್ಬ ವರನಿಗೆ ಮಗಳನ್ನು ತೋರಿಸುವದಕ್ಕಾಗಿ ಗೋಪಾಲಯ್ಯ ದಂಪತಿಗಳು ಹಾಸನಕ್ಕೆ ಬರುತ್ತಾರೆ. ಬರಬೇಕಾಗಿದ್ದ ವರ ಬರಲಿಲ್ಲ. ಹೆಂಗಸರ ಮಾತುಮಾತಿನಲ್ಲಿ 25 ವರ್ಷಗಳ ಹಿಂದೆ ಗೋಪಾಲಯ್ಯ ತಿರುಪತಿಯಲ್ಲಿ ಕಳೆದುಕೊಂಡ ಮಗುವೇ ನಾಗೇಶರಾಯರೆಂಬವರ ಮಗಳೆಂದು ಬೆಳೆದು ಅರವಿಂದನ ಮೆಚ್ಚಿನ ಮಡದಿಯಾಗಿ ಗಾಜನೂರು ಕಟ್ಟೆಯಲ್ಲಿ ತೀರಿ ಹೋದವಳೆಂದು ಗೊತ್ತಾಗುತ್ತದೆ. ಇದನ್ನು ಗೋಪಾಲಯ್ಯನಿಂದ ತಿಳಿದಾಗ ಅರವಿಂದ ಕೂಡಲೆ ಬಂದುಬಿಡುತ್ತಾನೆ. ಶಾರದೆಯ ತಂಗಿಯೇ ಕುಮುದಾ ಎಂದು ತಿಳಿದ ಅರವಿಂದನಿಗೆ ಶಾರದೆಯೇ ಮರಳಿ ಬಂದಂತಾಗುತ್ತದೆ. ಅವಳನ್ನು ಅರವಿಂದ ತಾನಾಗಿಯೇ ಬೇಡಿಪಡೆದು ಸುಖಿಯಾಗುತ್ತಾನೆ.

ಈ ಕಾದಂಬರಿಯಲ್ಲಿ ಕಥೆ ಮುಖ್ಯವಲ್ಲ. ಅದನ್ನಾಧರಿಸಿದ ಮಲೆನಾಡಿನ ಸೌಂದರ್ಯದ ವರ್ಣನೆಗಳು, ಚೆಲುವಿನ ಸಾರ್ವತ್ರಿಕತೆಯನ್ನೂ ಒಲವಿನ ಅಮರತೆಯನ್ನೂ, ಜನ್ಮಾಂತರ ಸೌಹೃದಗಳನ್ನೂ ಕುರಿತ ಚಿಂತನೆಗಳೇ ಈ ಕಾದಂಬರಿಯನ್ನು ಒಂದು ಸೌಂದರ್ಯಪ್ರಗಾಥವೆಂಬಂತೆ ಮಾಡಿದೆ. ಆದ್ದರಿಂದ ಈ ಕತೆಯ ರಚನೆಗೆ ಆಧಾರವಾಗಿದ್ದ ಅನೇಕ ಆಕಸ್ಮಿಕಗಳು ಸ್ವಾಭಾವಿಕವೆಂದೇ ತೋರುತ್ತವೆ. ಇದಕ್ಕೆ ಒಂದೇ ಒಂದು ಅಪವಾದ – ಗಾಜನೂರು ಕಟ್ಟೆಯಲ್ಲಿ ನಡೆದ ದುರ್ಘಟನೆ. ಆದರೆ ಒಟ್ಟು ಕಥೆಯ ಪರಿಣಾಮದಲ್ಲಿ ಇದರಿಂದ ಯಾವ ವ್ಯತ್ಯಾಸವೂ ಆಗುವದಿಲ್ಲ.

ಈ ಕಥೆಯ ಇನ್ನೊಂದು ವಿಶೇಷವೆಂದರೆ ಇದರಲ್ಲಿ ದುರ್ಜನರೆಂಬುವರು ಇಲ್ಲವೇ ಇಲ್ಲ. ಗೋಪಾಲಯ್ಯ, ವೆಂಕಟರಾಮಯ್ಯ, ಶ್ರೀನಿವಾಸರಾಯ, ನಾಗೇಶರಾಯರಲ್ಲಿ ಸಾಂಪತ್ತಿಕ ಸಾಮಾಜಿಕ ಅಂತರಗಳೇನೇ ಇದ್ದರೂ ಸದಭಿರುಚಿ, ಸತ್‌ಸಂಸ್ಕಾರ, ಸಜ್ಜನಿಕೆಯಲ್ಲಿ ಅವರೆಲ್ಲರೂ ಸಮಾನರೇ. ಗೋಪಾಲಯ್ಯನದು ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅಭಿಜಾತ ಸಂಸ್ಕೃತಿ ; ವೆಂಕಟರಾಮಯ್ಯನಲ್ಲಿ ಅದರ ಜತೆಗೆ ಪಟ್ಟಣವಾಸವೂ ಹೆಚ್ಚಿನ ಶಿಕ್ಷಣವೂ ತನ್ನ ಉದ್ಯೋಗದಲ್ಲಿ ಗಳಿಸಿದ ಪ್ರಪಂಚಪರಿಜ್ಞಾನವೂ ಸೇರಿವೆ. ನಾಗೇಶರಾಯರು ಇವರೆಲ್ಲರೊಳಗಿಂದ ಮೇಲೆದ್ದು ಜಿಲ್ಲಾ ನ್ಯಾಯಾಧೀಶರಾಗಿ ನಿವೃತ್ತರಾದ್ದರಿಂದ ಸ್ವಲ್ಪ ಬೇರೆ ಎನಿಸುತ್ತಾರೆ. ಎಲ್ಲರಿಗೂ ತಮ್ಮ ತಮ್ಮ ಕಷ್ಟಗಳಿದ್ದರೂ ಇನ್ನೊಬ್ಬರ ಕಷ್ಟಕಾಲಕ್ಕೆ ನೆರವಾಗುವುದಕ್ಕೆ ಮುಂದಾಗುತ್ತಾರೆ. ಎಲ್ಲರ ಹಿನ್ನೆಲೆಯಲ್ಲಿಯ ಸುಸಂಸ್ಕಾರ ಒಂದೇ ವಿಧವಾಗಿದ್ದರೂ ಪ್ರತಿಯೊಬ್ಬರೂ ತಮ್ಮ ವಿಶಿಷ್ಟ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಅರವಿಂದ ತಾರುಣ್ಯದಲ್ಲಿಯೇ ಈ ಎಲ್ಲ ಸದ್ಗುಣಗಳನ್ನು ಮೈಗೂಡಿಸಿಕೊಳ್ಳುವದಲ್ಲದೆ, ಅವನ ಸೌಂದರ್ಯಪ್ರೀತಿ, ಭಾವಜೀವನ, ಚಿಕ್ಕವಯಸ್ಸಿನಲ್ಲಿಯೇ

ಬಂದ ದೊಡ್ಡ ಅಧಿಕಾರದಂತೆಯೇ ದೊಡ್ಡ ದುಃಖದ ಆಘಾತಗಳೂ ಅವನ ವ್ಯಕ್ತಿತ್ವಕ್ಕೆ ಹೆಚ್ಚಿನ ಅರ್ಥವನ್ನಿತ್ತಿವೆ. ಹೀಗೆ ಅನೇಕ ವಿಧದ ಸುಂದರ ಪಾತ್ರಪರಿಕಲ್ಪನೆಯಿಂದಲೂ ತಲಸ್ಪರ್ಶಿಯಾದ ಚಿಂತನೆಯಿಂದಲೂ ಆಕರ್ಷಕವಾದ ಸೃಷ್ಟಿಸೌಂದರ್ಯದ ಚಿತ್ರಗಳಿಂದಲೂ ಇನಾಮದಾರರ ಕಾದಂಬರಿಗಳಲ್ಲಿಯೇ ಇದರ ಸ್ಥಾನವು ವಿಶಿಷ್ಟವಾದದ್ದು.

14

ಹದಿನೆಂಟು ವರ್ಷಗಳ ಹಿಂದೆ ಕೈಬಿಟ್ಟಿದ್ದ ಮೋಹಿನಿಯ ಕತೆಯಲ್ಲಿ ಇನಾಮದಾರರೇ ''ಒಂದು ಬಗೆಯ ನಿರಾಸಕ್ತಿಯನ್ನು ತಳೆದಿದ್ದರೂ'' ಈ ಅವಧಿಯಲ್ಲೆಲ್ಲ ''ಓದುಗರ ಒತ್ತಾಯ'' ನಡೆದೇ ಇದ್ದಿತು. ಎರಡು ದಶಕಗಳಲ್ಲಿ ತರುಣರಾಗಿದ್ದವರು ನಡುವಯಸ್ಸಿನವರಾದರೂ ನಡುವಯಸ್ಸಿನವರು ಮುಪ್ಪಾದರೂ ಆ ಓದುಗರ ಆಸಕ್ತಿ ಅಭಿರುಚಿಗಳು ಬದಲಾಗಿರಲಿಲ್ಲವೆಂಬುದು ಶಿಕ್ಷಣತಜ್ಞರಿಗೂ ಸಮಾಜವಿಜ್ಞಾನಿಗಳಿಗೂ ಕುತೂಹಲಕಾರಿಯಾಗಬೇಕಾಗಿದ್ದ ಪ್ರಶ್ನೆ. ಎರಡನೆಯ ಮೂರನೆಯ ಮುದ್ರಣಗಳಿಗೆ ಬೇಡಿಕೆ ಇದ್ದಿತೆಂದಮೇಲೆ ಹಳೆಯ ಓದುಗರ ಜೊತೆಗೆ ಹೊಸ ಓದುಗರೂ ಸೇರಿರಲಿಕ್ಕೆ ಸಾಕು. ಈ ಹೊಸಬರಿಗೆ ಐರೀನ್ ಯಾರೊ, ನೋರಾ ಯಾರೊ ! ಆದ್ದರಿಂದ ಈಗ ಬರುವ ಎರಡು ಭಾಗಗಳಲ್ಲಿ ಮೋಹಿನಿ ಮುಂಬಯಿ – ಮದ್ರಾಸ್ ಚಿತ್ರಪ್ರಪಂಚದ ತಾರಾಮಣಿ. ಕತೆಯ ಹಿನ್ನೆಲೆ ಚಿತ್ರಪ್ರಪಂಚ, ಅದರ ಕಾರಸ್ಥಾನಗಳು, ಪೈಪೋಟಿಗಳು, ಸ್ವೇಚ್ಛಾಚಾರಗಳು ಇತ್ಯಾದಿ. ನಡುನಡುವೆ ವಸಂತ-ಶಕುಂತಲೆಯರ ಸುಖೀಸಂಸಾರದ ಕಥೆ ಇದರ ವಿಪರ್ಯಾಸವನ್ನು ತೋರಿಸಲಿಕ್ಕೂ ಆಯಿತು, ನವದಂಪತಿಗಳ ಸರಸಸಲ್ಲಾಪಗಳನ್ನು ವಿಸ್ತರಿಸಲಿಕ್ಕೂ ಆಯಿತು !

ಕೋರ್ಟು ಆನಂದ ಬೇಡಿದ್ದ ಮತ್ತು ಮೋಹಿನಿ ಬಯಸಿದ್ದ ಬಿಡುಗಡೆಯನ್ನು ಕೊಡಲಾಗುವುದಿಲ್ಲ ಎನ್ನುತ್ತದೆ. ರಂಗನಾಥನ್ ಸ್ವಾರ್ಥಿ ಎಂದುಕೊಂಡ ಮೋಹಿನಿ ಮತ್ತೆ ವಸಂತನ ಕಡೆಗೆ ತಿರುಗುತ್ತಾಳೆ. ವಸಂತನ ಮನೆಯ ಬೀಗವನ್ನು ನೋಡಿ ಅಲ್ಲಿಯೂ ನಿರಾಶಳಾಗುತ್ತಾಳೆ. ಆದರೆ ರಂಗನಾಥನ್ ಮೋಹಿನಿಯ ಆಕರ್ಷಣೆಯ ಚಿತ್ರಗಳಿಂದಾಗಿ ಮದರಾಸಿನಲ್ಲಿ ಸಹಾಯವನ್ನು ಪಡೆಯುವ ಏರ್ಪಾಡಿನಲ್ಲಿರುತ್ತಾನೆ. ಮುಂಬಯಿ ಬಿಟ್ಟುಹೋಗಲು ಮೋಹಿನಿಗೆ ಮನಸ್ಸಿಲ್ಲದಿದ್ದರೂ ಬೇರೆ ದಾರಿ ಕಾಣದೆ ಕೇವಲ ಎಂಟು ಹತ್ತು ತಿಂಗಳಮಟ್ಟಿಗೆ ಎಂದ ರಂಗನಾಥನ ಆಶ್ವಾಸನೆಯನ್ನು ನಂಬಿ ಮದರಾಸಿಗೆ ಹೋಗಲು ಒಪ್ಪುತ್ತಾಳೆ.

ಅಲ್ಲಿಗೆ ಹೊರಡುವ ಮೊದಲು ಪುಣೆಗೆ ಹೋಗಿ ತನ್ನ ತಾಯಿ ಮತ್ತು ಅಜ್ಜನನ್ನು ನೋಡುತ್ತಾಳೆ. ಅವರಿಬ್ಬರೂ ಮುಪ್ಪಿನವರಾಗಿ ಬಡತನದ ಕಷ್ಟಜೀವನವನ್ನು ನಡೆಸುತ್ತಿದ್ದರೂ ಮೋಹಿನಿಯ ದೌಲತ್ತನ್ನು ತಾತ್ಸಾರದಿಂದಲೇ ಕಾಣುತ್ತಾರೆ. ಹೀಗಾಗಿ ಅಲ್ಲಿ

ಬೇಕಾಗಿಯೋ ಬೇಡವಾಗಿಯೋ ನಾಲ್ಕು ದಿನ ಇರುವಷ್ಟರಲ್ಲಿ ನವೋದಯ ಚಿತ್ರಸಂಸ್ಥೆಯ ಪುರುಷೋತ್ತಮರಾಯರೆಂಬವರು ಅವಳನ್ನು ಹುಡುಕಿಕೊಂಡು ಬರುತ್ತಾರೆ. ಅವರೊಡನೆ ಅವರ ಹೆಂಡತಿ ನಂದಿನಿಯ ಪರಿಚಯವೂ ಆಗುತ್ತದೆ. ನಂದಿನಿ ತರುಣಿಯೂ ಚೆಲುವೆಯೂ ಶಿಕ್ಷಣಪಡೆದವಳೂ ಒಂದು ಕಾಲಕ್ಕೆ ಹೆಸರಾಂತ ತಾರೆಯೂ ಆಗಿದ್ದರೂ ತನ್ನ ಗಂಡನ ಚಿತ್ರಪ್ರಪಂಚದ ಗೊಡವೆಗೂ ಹೋಗದೆ ತಾನಾಯಿತು, ತನ್ನ ಮನೆಯಾಯಿತು, ತನ್ನ ಮಕ್ಕಳಾಯಿತು ಎಂದು ಸಂತೃಪ್ತಜೀವನವನ್ನು ನಡೆಸುತ್ತಿದ್ದುದು ಮೋಹಿನಿಗೆ ತನ್ನ ವಿಪರ್ಯಾಸವನ್ನು ಎತ್ತಿ ತೋರಿಸುತ್ತದೆ.

ಮುಂಬಯಿಗೆ ಮರಳಿ ವಸಂತ-ಶಕುಂತಲೆಯರನ್ನು ತನ್ನ ಮುಂಬಯಿ ಮನೆಯಲ್ಲಿರುವಂತೆ ಒಪ್ಪಿಸಿ ರಂಗನಾಥನ್ ಜೊತೆ ಮೋಹಿನಿ ಮದರಾಸಿಗೆ ಹೋಗುತ್ತಾಳೆ. ಅಲ್ಲಿಯೂ ರಂಗನಾಥನ್ ಅವಳಿಗೊಂದು ಬೇರೆ ಮನೆ ಮಾಡಿ ಎಲ್ಲ ಸುಖಸೌಕರ್ಯಗಳಿಗೆ ಯಾವ ಕೊರತೆಯೂ ಇಲ್ಲದಂತೆ ಏರ್ಪಾಡು ಮಾಡಿರುತ್ತಾನೆ. ''ಬೊಂಬಾಯಿಯಲ್ಲಿಯ ಸರಸ ಸಂಬಂಧಗಳು ಬಹಿರಂಗವಾಗಿ ನಡೆಯಕೂಡದೆಂದು'' ಇಬ್ಬರಿಗೂ ಒಪ್ಪಿಕೆಯಾಗಿತ್ತಂತೆ ; ಆದರೂ ಇಬ್ಬರೂ ತಮ್ಮ ವಿಲಾಸಜೀವನವನ್ನು ನಡೆಯಿಸುತ್ತಿರುತ್ತಾರೆ. ಹೀಗಿರುವಾಗ ಪುಣೆಯಲ್ಲಿ ಅಜ್ಜನು ಅಂತ್ಯಾವಸ್ಥೆಯಲ್ಲಿರುವ ಸುದ್ದಿ ಬರುತ್ತದೆ. ರಂಗನಾಥನ್ ಅವಳ ಸುಖಪ್ರಯಾಣದ ಏರ್ಪಾಡುಮಾಡುತ್ತಾನೆ. ಪುಣೆಯಲ್ಲಿ ಮನೆಯ ಸ್ಥಿತಿ ಇನ್ನೂ ನಿಕೃಷ್ಟವಾಗಿದೆ. ಅಜ್ಜ ಇವಳ ಬರುವಿಕೆಗಾಗಿಯೇ ಜೀವ ಹಿಡಿದುಕೊಂಡಿದ್ದಾನೆ. ''ನೀನು ಸುಖವಾಗಿರು, ಮಗು... ನಿನ್ನ ತಾಯಿಯನ್ನು ಚೆನ್ನಾಗಿ ನೋಡಿಕೊ'' ಎಂದು ಹೇಳಿ ಕಣ್ಣುಮುಚ್ಚಿದ ಅಜ್ಜ ಕಣ್ಣು ತೆರೆಯುವುದೇ ಇಲ್ಲ. ಮೋಹಿನಿಯ ತಾಯಿ ಅವಳೊಡನೆ ಇರುವದಕ್ಕೆ ಸುತರಾಂ ಒಪ್ಪುವದಿಲ್ಲ, ಮುಂಬಯಿಗೆ ಮರಳಿ ಬಂದು ಬೇರೆಯಾಗಿ ಮನೆ ಮಾಡಿದರೆ ಎಂದರೂ 'ನೋಡುವಾ' ಎಂದೇ ಹೇಳುತ್ತಾಳೆ. ಅಷ್ಟನ್ನೇ ಹಿಡಿದುಕೊಂಡು ಮೋಹಿನಿ ಮುಂಬಯಿಯಲ್ಲಿ ಮನೆ ಮಾಡುವದೇ ಎಂದು ನಿಶ್ಚಯಿಸಿ ತನಗಾಗಿ ಒಂದು ಮನೆ ಖರೀದಿಮಾಡುವ ಏರ್ಪಾಡುಮಾಡುವಂತೆ ವಸಂತನನ್ನೊಪ್ಪಿಸಿ ಮದರಾಸಿಗೆ ಹೋಗುತ್ತಾಳೆ.

ಇಲ್ಲಿಗೆ 'ಬಾಡಿದ ಹೂ' ಎಂಬ ಭಾಗ ಮುಗಿಯುತ್ತದೆ. ಹೂವು ಬಾಡಲಿದೆ ಎಂಬ ಸೂಚನೆ ಒಂದೇ ಸಲ ಮೋಹಿನಿಗೆ ಮೇಕಪ್ ಮಾಡಿಕೊಳ್ಳುವಾಗ ಹೊಳೆದರೂ ಬೇರೆಯವರಿಗಾಗಲೀ, ಅವಳ ವ್ಯವಹಾರಗಳಲ್ಲಾಗಲೀ ಅದರ ಸುಳಿವೇ ಇಲ್ಲ, ಬಾಡಿದ್ದು ಎನ್ನುವ ಮಾತಂತೂ ದೂರೇ ಉಳಿಯಿತು. ಅದು ಬಾಡಿರಲಿಲ್ಲ ಎನ್ನುವದರಿಂದಲೇ ಕತೆ ಮುಂದೆ ಬೆಳೆಯಿತು.

ಮೋಹಿನಿ ಮದರಾಸಿಗೆ ಬರುತ್ತಲೇ ರಂಗನಾಥನ್ ಮುಂಬಯಿಗೆ ಹೋಗುವ

ವಿಚಾರವನ್ನು ಮುಂದೂಡುವದಕ್ಕೆ ಇನ್ನೊಂದು ಕಾರಣದ ಸುಳಿವು ಸಿಕ್ಕುತ್ತದೆ ; ಅದು ಇನ್ನೊಬ್ಬ ನಟಿ ಸೌಂದರವಲ್ಲಿಯಲ್ಲಿನ ಅವನ ಆಸಕ್ತಿ. ಅವಳು ತುಂಬುಪ್ರಾಯದವಳು, ನೃತ್ಯಗೀತಗಳನ್ನು ಬಲ್ಲವಳು. ರಂಗನಾಥನ್ ಮದರಾಸಿಗೆ ಕಟ್ಟುಬಿದ್ದದ್ದು ಅವಳಿಗಾಗಿ ಎಂಬುದು ಮೋಹಿನಿಗೆ ಮನದಟ್ಟಾಗುತ್ತದೆ. ಆದರೂ ರಂಗನಾಥನ್ ಬಹುಕೌಶಲ್ಯದಿಂದ ಅತ್ತ ಅವಳನ್ನೂ ಇತ್ತ ಇವಳನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡು ಎರಡು ಚಿತ್ರಗಳ ಸಿದ್ಧತೆಯಲ್ಲಿರುತ್ತಾನೆ. ಮೋಹಿನಿ ತಾನು ಎರಡು ವಾರಗಳ ಮಟ್ಟಿಗೆ ಪೂನಾ-ಮುಂಬಯಿ ವರೆಗೆ ಹೋಗಿಬರಬೇಕಾಗಿದೆ ಎಂದು ರಂಗನಾಥನ್ ಹಾಗೂ ಇವರಿಗೆ ಹೇರಳ ಹಣ ವ್ಯಯಿಸುತ್ತಿದ್ದ ಆರುಮುಗಂ ಇಬ್ಬರಿಗೂ ಹೇಳುತ್ತಾಳೆ. ಅಲ್ಲಿಗೆ ತಲುಪಿ ಅವಳೂ ವಸಂತನೂ ಪ್ರತಿದಿನವೂ ಏಜೆಂಟರು ತೋರಿಸಿದ ಮನೆಗಳನ್ನು ನೋಡುತ್ತ, ಬೀಚಿನಲ್ಲಿ ಕುಳಿತು ಹರಟುತ್ತ ಸುಖವಾಗಿ ಕಾಲಕಳೆಯುತ್ತಾರೆ. ''ಎರಡು ದಿನದ ಸಹವಾಸದಲ್ಲಿ ಆಕೆ ಸಲಿಗೆಯನ್ನು ಅಪೇಕ್ಷಿಸುತ್ತಿದ್ದಳು. ಬಹುಶಃ ಸಲಿಗೆಗಿಂತ ಹೆಚ್ಚಿನದನ್ನು ಅಪೇಕ್ಷಿಸುತ್ತಿದ್ದಳು—'' ಎಂದು ವಸಂತನಿಗೆ ಅನಿಸಿತಂತೆ. ಮನೆಯೊಂದನ್ನು ಗೊತ್ತುಮಾಡಿ ಅಡ್ವಾನ್ಸ್ ಕೊಟ್ಟು ಮುಂದಿನ ವ್ಯವಹಾರಗಳಿಗಾಗಿ ವಸಂತನಿಗೆ ಅಧಿಕಾರಪತ್ರ ಕೊಡುತ್ತೇನೆಂದರೆ ಅವನು ಬೇಡವೆನ್ನುತ್ತಾನೆ. ಎಲ್ಲ ಸಿದ್ಧವಾದ ಮೇಲೆ ತಾನು ತಿಳಿಸಿದಾಗ ಬಂದುಬಿಟ್ಟರೆ ಸಾಕು ಎನ್ನುತ್ತಾನೆ. ಪುಣೆಗೆ ಹೋಗಿ ತಾಯಿಯನ್ನು ಕಂಡರೆ ಇಬ್ಬರಿಗೂ ಸಂತೋಷವಿರಲಿಲ್ಲ. ಮುಂಬಯಿಗೆ ಬರಲೂ ಅವಳ ತಾಯಿ ಖಚಿತವಾದ ಒಪ್ಪಿಗೆಯ ಮಾತನ್ನು ಹೇಳಲೇ ಇಲ್ಲ.

ಆಕೆ ಮರಳಿ ಮದರಾಸಿಗೆ ಹೊರಡುವ ದಿನ ವಸಂತನು ಸ್ಪಷ್ಟವಾಗಿ ಹೇಳುತ್ತಾನೆ : ''ಇಂದು ನಾನು ಕಳ್ಳತನದಲ್ಲಿ ನಿನ್ನೊಡನೆ ನಿಕಟವಾಗಿ ನಡೆದುಕೊಳ್ಳಬಹುದು. ಆದರಿಂದಾಗುವದು ಒಂದೇ – ನಿನ್ನ ಮನೆ ಮುರಿದ ಹಾಗೆ ನನ್ನದೂ ಮುರಿದುಹೋಗುತ್ತದೆ.'' (ಬುದ್ಧಿವಂತ ! ದೂರವಿದ್ದೇ ಅವಳಿಂದ ದೊರೆಯುವಷ್ಟು ಸಂತೋಷವನ್ನು ಪಡೆದು ಅವಳ ಮನೆ ಮುರಿದು ತನ್ನ ಮನೆ ಉಳಿಸಿಕೊಂಡ!)

ಹೀಗೆ ಮುಂಬಯಿಯಿಂದ ನಿರಾಶಳಾಗಿ ಮದರಾಸಿಗೆ ಬಂದ ಮೋಹಿನಿಗೆ ಅಲ್ಲಿ ತಾನು ಒಪ್ಪಿಕೊಂಡಿದ್ದ ಕೆಲಸವನ್ನು ಮುಗಿಸುವ ಹೊರತು ಆಕರ್ಷಣೆ ಯಾವುದೂ ಇರಲಿಲ್ಲ. ''ದಿನವಿಡೀ ದುಡಿತ.... ನಡುರಾತ್ರಿಯವರೆಗೆ ಕುಡಿತ'' ಅವಳ ಜೀವನ ರೀತಿಯಾಯಿತು. ರಂಗನಾಥನ್-ಸೌಂದರವಲ್ಲಿಯ ಹಿಡಿತದಲ್ಲಿ ಸಿಕ್ಕು ತನ್ನಿಂದ ದೂರವಾದನೆಂಬುದು ತಿಳಿದಿದ್ದರಿಂದ ಮದರಾಸ್ ಬಿಡುವ ಅವಳ ನಿರ್ಧಾರ ಗಟ್ಟಿಯಾಗಿತ್ತು. ಈ ನಡುವೆ ರಂಗನಾಥನ್ - ಆರುಮ್ಗಂ ಇಬ್ಬರಿಗೂ ತಮ್ಮ ತಮ್ಮ ದಾರಿಗಳು ಬೇರೆಯಾದವೆಂದು ತಿಳಿದಿದ್ದರೂ ಮೋಹಿನಿಯನ್ನು ಉಳಿಸಿಕೊಳ್ಳುವುದು ಇಬ್ಬರಿಗೂ ಬೇಕಾಗಿದ್ದಿತು. ಅವಳು ಒಪ್ಪದೇ ಹೊರಡುವುದನ್ನು ನಿಶ್ಚಯಿಸಿದ್ದರಿಂದ ಮುನ್ನಾದಿನದ ಪಾರ್ಟಿಯೊಂದರಲ್ಲಿ

ಮೋಹಿನಿಯನ್ನು ಸಿಕ್ಕಾಪಟ್ಟೆ ಕುಡಿಸಿ, ಆರ್ಮುಗಂ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಖಿನ್ನಳಾದ ಮೋಹಿನಿ ಮುಂಬಯಿಗೆ ಹೋದರೂ ಎರಡು ದಿನ ಮಲಗಿಯೇ ಇರುತ್ತಾಳೆ. ಆಮೇಲೆ ಎದ್ದು ತನ್ನ ಮನೆಯ ಖರೀದಿ, ಸ್ಟುಡಿಯೋ ಖರೀದಿಯ ಮಾತಾಡುತ್ತಾಳೆ. ಮುಂಬಯಿಯಲ್ಲಿ ಎಲ್ಲ ಏರ್ಪಾಡುಗಳನ್ನು ಮಾಡಿ ಪುಣೆಗೆ ತಾಯಿಯನ್ನು ನೋಡಲು ಹೋಗುತ್ತಾಳೆ. ಅಲ್ಲಿರುವಾಗಲೇ ಒಂದು ಬೆಳಿಗ್ಗೆ ಅವಳ ತಾಯಿ ನೀರು ತರಲಿಕ್ಕೆ ಹೋದವಳು ಬಿದ್ದು ತಲೆಯೊಡೆದು ಎಚ್ಚರ ತಪ್ಪುತ್ತಾಳೆ. ಸರ್ವಪ್ರಯತ್ನ ಮಾಡಿದರೂ ಅವಳು ಉಳಿಯುವುದಿಲ್ಲ. ಅದರ ಆಘಾತದಿಂದ ಎಚ್ಚರದಪ್ಪಿದ ಮೋಹಿನಿಯನ್ನು ಗೆಳತಿ ಅನೂರಾಧೆ ಉಪಚರಿಸಿ, ಪ್ರಯೋಜನವಾಗದ್ದರಿಂದ ಒಂದು ಶುಶ್ರೂಷಾಲಯಕ್ಕೆ ಸೇರಿಸುತ್ತಾಳೆ. ಮಲಗಿದ್ದಲ್ಲಿಂದಲೇ ವಸಂತನ ಸಹಾಯದಿಂದ ಮನೆ, ಸ್ಟುಡಿಯೋ ಖರೀದಿ ಕೆಲಸ ಪೂರೈಸಿ, ಉಯಿಲೊಂದನ್ನು ಸಿದ್ಧಪಡಿಸುತ್ತಾಳೆ. ಈ ನಡುವೆ ಸ್ವಲ್ಪ ಚೇತರಿಸಿ ಕೊಂಡಿದ್ದ ಮೋಹಿನಿ ಹೆಚ್ಚಿನ ಪರೀಕ್ಷೆಗಾಗಿ ಸೇಂಟ್ ಜಾರ್ಜ್ ಆಸ್ಪತ್ರೆ ಸೇರುತ್ತಾಳೆ.

ಅತ್ತ ಆನಂದನ ಬಾಳೆಲ್ಲ ತನ್ನ ಅಕ್ಕ ಭಾವಂದಿರ ಸೇವೆಯಲ್ಲಿಯೇ ಕಳೆದಿರುತ್ತದೆ. ಭಾವನಿಗೆ ಹೃದಯರೋಗದ ಭಯವಿದ್ದರೂ ಅವನು ವಿಶ್ರಾಂತಿಯ ಸಲಹೆಯನ್ನೊಪ್ಪದೆ ಎರಡನೆಯ ಅಟ್ಯಾಕ್ ಬಂದದ್ದರಿಂದ ಅವನನ್ನೂ ಅದೇ ಆಸ್ಪತ್ರೆಗೆ ಸೇರಿಸುತ್ತಾರೆ. ಅಲ್ಲಿ ವಸಂತನನ್ನು ಕಂಡಾಗ ಮೋಹಿನಿ ಅಲ್ಲಿರುವುದು ತಿಳಿಯುತ್ತದೆ. ಅವನಿಗೆ ಅವಳನ್ನು ನೋಡುವ ಮನಸ್ಸಿಲ್ಲದಿದ್ದರೂ ವಸಂತನ ಒತ್ತಾಯಕ್ಕೆ ಬಂದು ಅವಳ ಮುಂದೆ ನಿಂತಾಗ ಅವಳು ಗುರುತಿಸಿ ಕಣ್ಣೀರು ಸುರಿಸುವುದನ್ನು ಕಂಡು ತಾನೂ ಕಣ್ಣೀರು ಸುರಿಸುತ್ತಲೇ ತಲೆತಗ್ಗಿಸಿ ಆನಂದ ಹೊರಟುಹೋಗುತ್ತಾನೆ.

ಇಲ್ಲಿಗೆ 'ಕತ್ತಲೆಯ ಕಡಲಿ'ನಲ್ಲಿ ಮೋಹಿನಿಯನ್ನು ಬಿಟ್ಟು ಲೇಖಕರು ತಮ್ಮ ಕಾದಂಬರಿಯನ್ನು ಮುಗಿಸುತ್ತಾರೆ. ಇದರಿಂದ 24 ವರ್ಷ ಆಸ್ಥೆಯಿಂದ ಮೋಹಿನಿಯನ್ನು ಹಿಂಬಾಲಿಸಿದ ಓದುಗರಿಗೆ ಎಂಥ ಪ್ರೀತಿಯಾಯಿತೆಂಬುದನ್ನು ಅವರಾರೂ ಹೇಳಿಲ್ಲವೆಂದು ತೋರುತ್ತದೆ. ''ನಾನು ಹೇಳಬೇಕೆಂದ ಕಥೆ ಒಂದು ರೀತಿಯ ಮುಕ್ತಾಯವನ್ನು ತಲುಪುತ್ತದೆ'' ಎಂದು ಲೇಖಕರೇ ಕೊನೆಯ ಭಾಗದ 'ಅರಿಕೆ'ಯಲ್ಲಿ ಹೇಳಿದ್ದಾರೆ. ಆದರೂ ಇಲ್ಲಿಯೇ ಆದರ್ಶದ ಮಾತು ಇನ್ನೂ ಇದೆ. ''ಆದರ್ಶದ ಬೆನ್ನ ಹಿಂದೆ ಓಡಿದಾಗ ಕಡೆಗಾಣಿಸಿದ ಜೀವನದ ವಾಸ್ತವಾಂಶಗಳು'' ಅವಳನ್ನು ಸೋಲಿಸುವದಾದರೆ ಆ ಆದರ್ಶವಾದರೂ ಎಂತಹುದು ? ಗಂಡಸರ ಆಳಾಗಿಯೇ ತಾವು ಬದುಕಬೇಕಾಗಿಲ್ಲ, ತಮ್ಮ ವ್ಯಕ್ತಿತ್ವವನ್ನೂ ಆತ್ಮವಿಕಾಸವನ್ನೂ ಸಾಧಿಸಬೇಕೆಂಬ ಸ್ವಾಭಿಮಾನಿ ಸ್ತ್ರೀಯರ ಪ್ರತಿನಿಧಿ ಯಾಗಿ ಹೊರಟ ಮೋಹಿನಿ, ಕಂಡಕಂಡ ಗಂಡಸರ ಕೈಗೊಂಬೆಯಾಗಿ ಕತ್ತಲೆಯ ಕಡಲಲ್ಲಿ ಕೊನೆಗಂಡದ್ದು ''ಮೊದಲಿನಿಂದಲೂ ಕೊನೆಯವರೆಗೂ ಮನಸ್ಸಿನ ಹಿನ್ನೆಲೆಯಲ್ಲಿದ್ದು ಕೊಂಡು ಕಥೆಯನ್ನು ರೂಪಿಸಿದ'' ಲೇಖಕರ ಆಲೋಚನೆಯಂತೆಯೇ ಎಂದು

ನಂಬುವದು ಕಷ್ಟ. ಮೋಹಿನಿಯು ಬೆನ್ನಟ್ಟಿದ್ದು ಯಾವ ಆದರ್ಶವೂ ಅಲ್ಲ, ಅದು ಅವಳದೊಂದು ಹಗಲುಗನಸು, ಪುರುಷ ಕುತೂಹಲ. ಹಾಗೆಂದೇ ಪಡೆದ ಪುರುಷರಲ್ಲಿ ನಿರುತ್ಸಾಹ, ಪಡೆಯಲಾಗದವನಲ್ಲಿ ಆಸಕ್ತಿ. ''ಯಾರ ಹಂಗು ಹೆದರಿಕೆಗಳಿಗೊಳಗಾಗದೆ ಬಾಳಬೇಕು ಎಂದುಕೊಂಡ ಮೋಹಿನಿ ಕಥೆಯುದ್ದಕ್ಕೂ ವಸಂತನಿಗಾಗಿ ಹಾತೊರೆಯುತ್ತಾಳೆ'' ಎಂದು ಲೇಖಕರೇ ತಮ್ಮ ಕೊನೆಯ ಮುದ್ರಣದ ಅರಿಕೆಯಲ್ಲಿ ಹೇಳುತ್ತಾರೆ. ಆದ್ದರಿಂದ ''ಮದುವೆಯಾಗಿ ಮನೆಗೆ ಬರುವ, ವಿದ್ಯಾವತಿಯರ ಇಂಥ ಮನೋವೃತ್ತಿಗಳು'' ಎನ್ನುವ ಸಾಧಾರಣೀಕರಣಕ್ಕೆ ಆಧಾರವುಳಿಯುವದಿಲ್ಲ. ''ಅಂಥವಳ ಪಾಲಿಗೆ ಬರುವುದು ಏಕಾಂತದ ವಿಕಾರವೈಭವ ಮಾತ್ರ... ಆಕೆಯ ಬದುಕು ಒಂದು ಅಪಾಯ ಸೂಚಿಕೆ'' ಎನ್ನುವ ನೀತಿಪಾಠ ಕಾಲುಶತಮಾನದಲ್ಲಿ ಲೇಖಕರ ಬದಲಾದ ವಯೋಮಾನ, ಮನೋವೃತ್ತಿಗಳ ಪರಿಣಾಮವೇ ಹೊರತು ''ಮೊದಲಿನಿಂದ ಕೊನೆಯವರೆಗೂ ಮನಸ್ಸಿನ ಹಿನ್ನೆಲೆಯಲ್ಲಿ'' ಇದ್ದದ್ದೆಂದು ಹೇಳಲಾಗುವುದಿಲ್ಲ.

ಆಶ್ಚರ್ಯದ ಮಾತೆಂದರೆ, ಈ ಕಥೆ ಸಾವಿರದಮುನ್ನೂರು ಪುಟಗಳನ್ನು ಮಿಕ್ಕಿ ಬೆಳೆದರೂ ಇದರಲ್ಲಿ ಒಂದು ಪಾತ್ರಕ್ಕೂ 'ಮಂಜು ಮುಸುಕಿದ ದಾರಿ', 'ಊರ್ವಶಿ', 'ನವಿಲುನೌಕೆ'ಗಳಲ್ಲಿಯ ಪಾತ್ರಗಳಿಗಿರುವಂತೆ ತನ್ನದೇ ಆದ ಸ್ಫುಟವಾದ ವ್ಯಕ್ತಿತ್ವ ಮೂಡುವದಿಲ್ಲ. ಮೋಹಿನಿಯಂಥವರ ಬಾಳು, ಒಂದು ರಾಕೆಟ್ ಇದ್ದಂತೆ ; ಬೆಂಕಿಯ ಬಾಲ ಉರಿಯುತ್ತಿರುವವರೆಗೆ ಮೇಲೇರುತ್ತ ಪ್ರೇಕ್ಷಣೀಯವಾಗಿರುತ್ತದೆ. ಬೆಳಕು ಆರಿದ ಮೇಲೆ ಅದು ಹೇಗೆ ಇಳಿಯುತ್ತದೆ, ಎಲ್ಲಿ ಬೀಳುತ್ತದೆ ಎನ್ನುವದನ್ನು ಯಾರು ನೋಡುತ್ತಾರೆ? ಈ ಕತೆಯನ್ನು 'ಕಟ್ಟಿದ ಮನೆ'ಯ ಕೊನೆಯಲ್ಲಿಯೇ ನಿಲ್ಲಿಸಿದ್ದರೆ ಆನಂದನ ಜೀವನದಲ್ಲಾಗಲಿ, ವಸಂತನ ಜೀವನದಲ್ಲಾಗಲಿ ಈಗಿದ್ದ ಸ್ಥಿತಿಯೇ ಇರುತ್ತಿತ್ತು. ಮೋಹಿನಿಯ ಆಕರ್ಷಣೆ ಓದುಗರ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುತ್ತಿತ್ತು. ಅಂತಹ ಪಾತ್ರಗಳಲ್ಲಿ ಆಸಕ್ತರಾದವರಿಗೆ ಆ ಪಾತ್ರಗಳ ಕೊನೆಗಾಲವನ್ನು ತಿಳಿಯುವುದರಲ್ಲಿ ಆಸಕ್ತಿಯಿರಲಾರದು..

15

ಇನಾಮದಾರರಿಗೆ ನಮ್ಮ ಸಮಾಜದ ಒಂದು ಸಣ್ಣವರ್ಗದ ಸುಖದುಃಖಗಳನ್ನು ಕುರಿತೇ ಬರೆದರೆ ಸಾಲದು, ಇದಕ್ಕಿಂತ ವಿಸ್ತಾರವಾದ ವಸ್ತುವೊಂದನ್ನು ಆಳವಡಿಸುವ ಯತ್ನ ಮಾಡಬೇಕು ಎಂದು ತೋರಿದ್ದರೆ ಸೋಜಿಗವಿಲ್ಲ. ಇಂತಹ ಯತ್ನವೊಂದು ಅನೇಕ ವರ್ಷಗಳಿಂದ ನಡೆಯುತ್ತಿತ್ತೆಂಬುದು ಅವರ 'ಯಾತ್ರಿಕರು' ಕಾದಂಬರಿಯ ಅರಿಕೆಯಿಂದ ಗೊತ್ತಾಗುತ್ತದೆ.

ಈ ಕಾದಂಬರಿಯ ಮೂಲಪ್ರೇರಣೆ ಒಂದು ಸ್ವೀಡನ್ ದೇಶದ ಕಾದಂಬರಿ. ಇದರ ಕೇಂದ್ರವಸ್ತು ಮನಸ್ಸಿನ ಪರಿತಾಪ. ದೈವಾನುಗ್ರಹ ಸನ್ನಿಹಿತವಾಗಿದ್ದಾಗ

ದೈವದ್ರೋಹವನ್ನಾಚರಿಸಿ ಕಳೆದುಕೊಂಡ ಶಾಂತಿಗಾಗಿ ಹಂಬಲ. ಇಂತಹ ಒಬ್ಬ 'ಚಿರಸಂಚಾರಿ ಯೆಹೂದಿ'ಯ ಕತೆ — ಕ್ರಿಶ್ಚಿಯನ್ ಚರಿತ್ರಗಳಲ್ಲಿ ಅನೇಕ ರೂಪಗಳಲ್ಲಿ ಪ್ರಚಲಿತವಿದೆ. ಈ ವಸ್ತು ಇನಾಮದಾರರ ಮನಸ್ಸನ್ನು ವರ್ಷಾನುಗಟ್ಟಲೆ ಹೇಗೆ ಹಿಡಿದುಕೊಂಡಿತ್ತು ಎನ್ನುವದೊಂದು ಸೋಜಿಗವೇ. ಏಕೆಂದರೆ ಇಂತಹ ಪರಿತಾಪ ಕ್ರಿಶ್ಚಿಯನ್ ಮತದಲ್ಲಿ ಆಳವಾದ ಶ್ರದ್ಧೆಯಿದ್ದರೆ ಮಾತ್ರ ಸಾಧ್ಯ. ಪರಿತಪ್ತನ ಚಿರಂತನ ಸಂಚಾರ ನಮ್ಮ ಸಂಸ್ಕೃತಿಗೆ ನಿಲುಕಲಾರದ ಕಲ್ಪನೆ. ಇಲ್ಲಿ ಸತ್ಯಾಸತ್ಯಗಳ ವಿಚಾರ ಏನೇ ಇದ್ದರೂ ಇನ್ನೊಂದು ಸಂಸ್ಕೃತಿಯ ಆಳವಾದ ಅಭ್ಯಾಸ ರಕ್ತಗತವಾದ ಶ್ರದ್ಧೆಗಳನ್ನೂ ಹೇಗೆ ಅಲುಗಿಸಬಹುದು ಎನ್ನುವುದಕ್ಕೆ ಮಾತ್ರ ಅದೊಂದು ನಿದರ್ಶನವಾಗಬಹುದು.

ಇದೊಂದು ವಿಚಿತ್ರ ಕಾದಂಬರಿ. ಇಲ್ಲಿ ದೇಶಕಾಲಗಳ ನಿರ್ದೇಶವಿಲ್ಲ. ಯಾವ ವ್ಯಕ್ತಿಗೂ ಹೆಸರಿಲ್ಲ. ಬಹುಶಃ ಚಿರಸಂಚಾರಿಯ ಮನಸ್ಸು ಆ ನಿರ್ದೇಶವನ್ನು ತಲುಪಬಹುದು. ಇದರಲ್ಲಿ ಹುಡುಕಿನೋಡಿದರೆ ಸಿಕ್ಕುವ ಒಂದೇ ಒಂದು ಸೂಚನೆಯಂತೆ ಈ ಕಥೆ ನಡೆದ ಕಾಲ ಕ್ರಿಸ್ತನಿರ್ಯಾಣಾನಂತರ ಐದನೆಯ ಶತಮಾನದ್ದೆಂದು ತೋರುತ್ತದೆ ; ಬಹುಶಃ ಆಫ್ರಿಕದ ಉತ್ತರ ಭಾಗದಲ್ಲಿ ನೈಲ್ ಪ್ರದೇಶದಿಂದ ದೂರವಾಗಿ ಎಲ್ಲಿಯೋ ನಡೆದದ್ದು. ದಸ್ಯುಗಳ ಹಾವಳಿಗಳನ್ನೂ ಹಾಳುಬಿದ್ದ ವಸತಿಗಳನ್ನೂ ನೋಡಿದರೆ ಥಿಯೋಡೋಸಿಯಸ್ ದಿ ಗ್ರೇಟ್ ಚಕ್ರವರ್ತಿಯ ನಂತರ ಜಸ್ಟಿನಿಯನ್ ಚಕ್ರವರ್ತಿ ಯಾಗುವವರೆಗಿನ ಮಧ್ಯಂತರದ ಶತಮಾನದಲ್ಲೆಂದು ಊಹಿಸಬಹುದು. ಇದರಲ್ಲಿ ನಿರ್ದಿಷ್ಟರಾದ ವ್ಯಕ್ತಿಗಳು 1. ಕತೆ ಹೇಳುವವ 2. ಆತ 3. ಆತನ ಹೆಂಗುಸು 4. ಅಪರಿಚಿತ 5. ಒಬ್ಬ ಹುಡುಗಿ. ಉಳಿದ ಅಸಂಖ್ಯ ಯಾತ್ರಿಕರು ಒಂದು ತಂಗುಮನೆಯ ಕತ್ತಲಲ್ಲಿ ಮಲಗಿರುತ್ತಾರೆ, ಮುಂದೆ ಮುಂದೆ ಹೋಗುತ್ತಾರೆ ; ಈ ಐವರಂತೆ ಅವರ ಬಗ್ಗೆ ಯಾವ ನಿರ್ದಿಷ್ಟ ಹೇಳಿಕೆಯೂ ಇಲ್ಲ.

ಒಂದು ಕತ್ತಲ ರಾತ್ರಿಯಲ್ಲಿ ಬಿರುಮಳೆ ಹೊಡೆಯುತ್ತಿರುವಾಗ ಅಪರಿಚಿತ ತಂಗು ಮನೆಯ ಬಾಗಿಲನ್ನು ತಳ್ಳಿ ಒಳಸೇರಿದಾಗ ಆತನನ್ನು ಕಾಣುತ್ತಾನೆ. ಹೆಂಗುಸು, ಹುಡುಗಿ ದೂರ ಇನ್ನೊಂದು ಜನರ ಗುಂಪಿನಲ್ಲಿ ಕುಳಿತು ಕುಡಿಯುತ್ತಿರುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಆ ಹೆಂಗಸು ಆತನ ಹತ್ತಿರ ಬರುತ್ತಾಳೆ. ಅವರಿಬ್ಬರ ಕಿತ್ತಾಟದಲ್ಲಿ ಅಪರಿಚಿತನಿಗೆ ಅವರ ಕತೆ ಗೊತ್ತಾಗುತ್ತದೆ. ಅವರು ಎಂದೋ ಒಂದು ಕಾಡಿನಲ್ಲಿ ಅಕಸ್ಮಾತ್ ಆಗಿ ಸಂಧಿಸಿದವರು. ಮೃಗಗಳಂತೆ ಸುಖವಾಗಿ ಬಾಳಿ ಒಂದು ದಿನ ಆತನು ಆ ಮಾರ್ಗವಾಗಿ ಬಂದ ಯಾತ್ರಿಕರ ತಂಡದೊಡನೆ ಹೊರಟು ನಡೆಯುತ್ತಾನೆ. ಹೆಂಗಸು ಅವನನ್ನು ಹುಡುಕಿಕೊಂಡು ಬರುತ್ತಾಳೆ. ಹುಡುಗಿ ಆ ತಂಡದವರೊಡನಿದ್ದು ಅವರಿಗೆ ತನ್ನ ಮೈಮಾರಿ ದುಡ್ಡುಗಳಿಸಿ ಯಾತ್ರೆಗೆ ಹಣ ಗಳಿಸುತ್ತಾಳೆ. ತಂಡದವರು ಮುಂದೆ ನಡೆದಂತೆ ಹಿಂದೆ ಹಿಂದೆ ಆತ, ಅವಳು, ಅಪರಿಚಿತ ಮೂವರೂ ನಡೆಯುತ್ತಾರೆ.

ಎರಡನೆಯ ರಾತ್ರಿಯನ್ನು ಅವರು ಭಯಂಕರವಾದ ಹಿಮಪಾತದಲ್ಲಿ ಒಂದು ಪೆಟ್ಟಿಗೆಯಂತಹ ಆಸರೆಯಲ್ಲಿ ಕಳೆದು ಮೂರನೆಯ ಸಂಜೆಗೆ ಹಡಗು ಕಟ್ಟೆಗೆ ತಲುಪುವಷ್ಟರಲ್ಲಿ ಯಾತ್ರಿಕರ ಹಡಗು ಹೊರಟುಹೋಗಿರುತ್ತದೆ. ಆಮೇಲೆ ಯಾರೊ ನಾಲ್ವರು ಕೇಡಿಗಳಂತೆ ಕಾಣುವ ಜನಗಳು ಆತನನ್ನು ಜೇರೂಸಲೇಮಿಗೆ ಕರೆದೊಯ್ಯುತ್ತೇವೆಂದು ನಂಬಿಸಿ ಅವನ ದುಡ್ಡನ್ನೆಲ್ಲ ಕಿತ್ತುಕೊಂಡು ಒಂದು ಸಣ್ಣ ದೋಣಿಯಲ್ಲಿ ಹತ್ತಿಸಿಕೊಂಡು ಹೋಗಿಬಿಡುತ್ತಾರೆ. ಆ ಅಪರಿಚಿತರಿಂದ ಹೇಗೊ ತಪ್ಪಿಸಿಕೊಂಡ ಅವನು ಎಚ್ಚರ ತಪ್ಪಿ ಒಂದು ಮಠದಲ್ಲಿ ಒಬ್ಬ ಯುವಶಿಷ್ಯಭಿಕ್ಷುವಿನ ಆರೈಕೆಯಲ್ಲಿ ಮಲಗಿ ಕೆಲವು ದಿನಗಳಾನಂತರ ಅಲ್ಲಿಯೇ ಅಸುನೀಗುತ್ತಾನೆ. ''ಆತನ ಮುಖದಲ್ಲಿ ನೆಲಸಿದ ಸಮಾಧಾನ ಅದ್ವಿತೀಯವಾಗಿತ್ತು.'' ಏಕೆ ಎನ್ನುವುದು ಸ್ಪಷ್ಟವಿಲ್ಲ. ಈ ಹಾಸುಗೆಯಲ್ಲಿ ಬಿದ್ದುಕೊಂಡಂದಿನಿಂದ ಅವನ ಮನಸ್ಸಿನಲ್ಲಿ ನಡೆದದ್ದೆಂಬ ಹೇಳಿಕೆಗಳಿಂದ ಗೊತ್ತಾಗುವುದು ಅವನು ಆಹುಸ್ಯುರಸ್ ಎಂಬ ಮೋಚಿಯೆಂದು. ಏಸುವು ಶಿಲುಬೆ ಹೊತ್ತುಕೊಂಡು ನಡೆಯುತ್ತಿದ್ದಾಗ ಆಯಾಸದಿಂದ ಅವನ ಮನೆಯ ಗೋಡೆಗೊರಗಿ ವಿಶ್ರಮಿಸಲು ನಿಂತಾಗ ಅವನನ್ನು ನಿಲ್ಲಗೊಡದೆ ''ಸಾಗು ಸಾಗು'' ಎಂದು ಹೊರಡಿಸಿದವನಂತೆ ಈ ಮೋಚಿ. ಇದು ಅವನ ಪಶ್ಚಾತ್ತಾಪದ ಕತೆ.

ಮರಣಪೂರ್ವದಲ್ಲಿ ಅವನ ಮನಸ್ಸು ಸಮಾಧಾನ ಹೊಂದಿತ್ತು ಎಂದರೆ ಅವನ ಶಾಪ ಮುಗಿದಿತ್ತು ಅಥವಾ ಅವನದೇ ಆದ ಪರಿತಾಪ ಶಾಂತವಾಗಿತ್ತು ಎಂದಾಯಿತು. ಅದು ಹೇಗಾಯಿತು ? ಸತ್‌ಸಂಗದಿಂದ ಸತ್ಪ್ರೇರಣೆಯಾಗಿ ಸತ್‌ಪ್ರೇರಣೆಯಿಂದ ಸದಾಚಾರವುಳ್ಳವನಾದರೆ ಮಾತ್ರ ಇಂತಹ ಕೊನೆ ಸಾಧ್ಯ. ಆದರೆ ಇಲ್ಲಿ ಅಂತಹ ಯಾವುದೂ ಇಲ್ಲ. ಅಪರಿಚಿತನು ಯಾತ್ರಿಕರ ಜತೆ ಸೇರಲಿಲ್ಲ. ಅದಕ್ಕೆ ಅವನಿಗಿದ್ದ ಶಾಪ ಕಾರಣವಾಗಿತ್ತೆಂದರೆ ಅವನ ಜತೆ ಇದ್ದ ಆ ಒಬ್ಬ ಗಂಡಸು ಹೆಂಗಸು ಏಕೆ ಯಾತ್ರಿಕರ ಜತೆ ಸೇರಲಿಲ್ಲ? ಇನ್ನು ಆ ಯಾತ್ರಿಕರೂ ಎಷ್ಟು ಜನ ಸಜ್ಜನರೆಂಬ ವರ್ಣನೆಗೆ ಯೋಗ್ಯರೆಂಬು ದನ್ನು ಹೇಳುವುದು ಕಷ್ಟ. ಅವರು ತಂಗಿದಲ್ಲಿ ಕೆಲವರು ಪ್ರಾರ್ಥನೆಯಲ್ಲಿ ತೊಡಗಿದ್ದರೂ ಇನ್ನೆಷ್ಟೋ ಜನ ಕುಡಿತ ಜೂಜುಗಳಲ್ಲಿ ತೊಡಗಿದವರು. ಅವರಲ್ಲಿ ವೇಶ್ಯೆಯರೂ ಇದ್ದರಂತೆ. ಇನ್ನು ಆ ಹುಡುಗಿ ಯಾತ್ರೆಗೆ ಹಣ ಗಳಿಸುವದಕ್ಕೆ ಮೈಮಾರುವದು ವಿನಾ ಬೇರೆ ಮಾರ್ಗವಿರಲಿಲ್ಲವೆ ? ಎಷ್ಟೋ ಜನ ಶ್ರೀಮಂತರು ತಮ್ಮ ಸೇವೆಗೆ ಅನೇಕ ಸೇವಕರನ್ನು ಕರೆದುಕೊಂಡು ಹೋಗುತ್ತಿದ್ದರೆಂಬುದೂ ಕತೆಯಲ್ಲೇ ಇದೆ. ಇವಳಿಗೂ ಅಂತಹದೊಂದು ಚಾಕರಿಯನ್ನು ಮಾಡಿಕೊಂಡಿದ್ದರಾಗುತ್ತಿರಲಿಲ್ಲವೆ ? ಹಾಗೇ ಆ ಅಪರಿಚಿತ ಮರಣಶಯ್ಯೆ ಯಲ್ಲಿದ್ದಾಗ ಅವನ ಚಿಂತನೆಗಳು ಇನ್ನೂ ವಿಚಿತ್ರವಾಗಿವೆ. ಅವನು ತಿಳಿದಿದ್ದಂತೆ, ನಿಷ್ಕರುಣೆ ಎನ್ನುವದೇ ಪಾಪವೆಂದಲ್ಲ, ಆ ನಿಷ್ಕರುಣೆಯ ಪಾತ್ರ ದೇವರ ಮಗನಾಗಿದ್ದ ಕಾರಣ ಪಾಪ ಘಟಿಸಿತು : ಇದು ಖಂಡಿತವಾಗಯೂ ಕ್ರಿಶ್ಚಿಯನ್ ಚಿಂತನೆಯಲ್ಲ. ಹಾಗೇ ಸಾವಿನಿಂದಲೇ ದುಃಖವಿಮೋಚನೆಯೆಂದು ತಿಳಿದವರು ನೇರವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಅದಕ್ಕೆ ಇಷ್ಟೊಂದು ತಿಪ್ಪರಲಾಗವೇಕೆ ? ಕ್ರೈಸ್ತಮತಶ್ರದ್ಧೆಯನ್ನು ಧಿಕ್ಕರಿಸಿ ಚಿರಸಂಚಾರಿಯು ತನ್ನ ಶಾಪದಿಂದ ಮುಕ್ತನಾದನೆಂಬುದು ಲೇಖಕರ ಮತವೆ ?

"ಕೈಗೆ ನಿಲುಕದ ಬುದ್ಧಿಗೂ ಗೋಚರಿಸದ ಒಂದು ಸತ್ವ, ಒಂದು ತತ್ವ ಇರಲೇಬೇಕು." ಅಂಥದೊಂದು ಇದ್ದರೆಷ್ಟು ಬಿಟ್ಟರೆಷ್ಟು ?– ಎನ್ನುವದೇ ಈ ಭ್ರಾಂತಿಗೆ ಉತ್ತರ. ಉಪನಿಷತ್ತುಗಳು ಇಂಥದೇನನ್ನೂ ಹೇಳುತ್ತವೆಂಬುದು ಕೆಲವು ಪಾಶ್ಚಿಮಾತ್ಯ ಬುದ್ಧಿ ಜೀವಿಗಳ ಭ್ರಾಂತಿ. ಅದಕ್ಕೆ ಕಾರಣ ಮನುಷ್ಯನ ಅಹಂಕಾರಕ್ಕೆ ಸಹಜವಾಗಿ ಬರುವ ಆತ್ಮಸಮರ್ಥನೆ.

16

ಇಲ್ಲಿಯವರೆಗೆ ಇನಾಮದಾರರ ಎಲ್ಲ ಕೃತಿಗಳನ್ನೂ ಒಂದು ಕಾಲಾನುಕ್ರಮದಲ್ಲಿ ಪರಿಶೀಲಿಸಿದ್ದಾಯಿತು. ಏಕೆಂದರೆ ಎಲ್ಲ ಕೃತಿಗಳನ್ನೂ ಒಟ್ಟಾಗಿ ನೋಡಿದಾಗ ಆ ಕ್ರಮದಲ್ಲಿ ಒಂದು ಅಂತಃಕರಣದ ಪರಿವರ್ತನೆಯ ಸಾತತ್ಯ ಕಾಣುತ್ತದೆ. ಮತ್ತು ಅದರಿಂದ ಒಂದೊಂದು ಕೃತಿಯ ಅರ್ಥವೂ ಹೆಚ್ಚು ಸ್ಫುಟವಾಗುತ್ತದೆ. ಮುಂದಿನ ಕಾಲದಲ್ಲಿ ಅವರು ತಮ್ಮ ಸ್ವಾಂತಃಸುಖಾಯ ನಡೆಸಿದ ಸ್ವಾಧ್ಯಾಯವನ್ನೂ, ತಾವು ಪ್ರೀತಿಯಿಂದ ಆಯ್ದುಕೊಂಡ ವಸ್ತುಗಳನ್ನು ಕುರಿತ ಸೃಜನಶೀಲ ಬರವಣಿಗೆಯನ್ನೂ, ಹಾಗೆಯೇ ಆಯ್ದುಕೊಂಡ ಕೃತಿಗಳ ಆನ್ವಯಿಕ ವಿಮರ್ಶೆಯನ್ನೂ, ತಮ್ಮ ವಿಶಿಷ್ಟ ಸಾಧನೆಯೆಂದು ಮುಂದುವರೆಸಿದ ಸಾಹಿತ್ಯಮೀಮಾಂಸೆಯನ್ನೂ, ತಾತ್ಕಾಲಿಕ ರಂಜನೆಗೆಂದು ಬರೆದ ಬಿಡಿಬರಹಗಳನ್ನೂ ಏಕಕಾಲದಲ್ಲಿ ನಡೆಯಿಸಿರುವದು ಕಂಡುಬರುತ್ತದೆ. ಆದ್ದರಿಂದ ಇನ್ನು ಮುಂದಿನ ಕೃತಿಗಳನ್ನು ಕಾಲಾನುಕ್ರಮದಲ್ಲಿ ಪರಿಶೀಲಿಸದೆ ಒಂದೊಂದು ವರ್ಗಕ್ಕೆ ಸೇರಿದ ಗುಂಪುಗಳಾಗಿ ಪರಿಶೀಲಿಸುವದು ಅನುಕೂಲವೆಂದು ತೋರುತ್ತದೆ. ಇದರಲ್ಲಿ ಚಿಕ್ಕದಾದ ವಿಭಾಗ ಮೂರೇ — ಯಾತ್ರಿಕ, ಯಯಾತಿ, ತ್ರಿಶಂಕು ಕಾದಂಬರಿಗಳದಾದ್ದರಿಂದ ಮೊದಲಿಗೆ ಅವನ್ನು ಗಮನಿಸಬಹುದು.

'ಯಾತ್ರಿಕ'ನು ಎದುರಿಸಿದ ಪ್ರಶ್ನೆಯನ್ನು ಈಗಾಗಲೇ ಪರಿಶೀಲಿಸಿತು. ಅದನ್ನು ಸಾಮಾನ್ಯ ವಾಗಿ ಎಲ್ಲರೂ ತಮ್ಮ ಜೀವನದ ಒಂದಲ್ಲೊಂದು ಅವಸ್ಥೆಯಲ್ಲಿ ಎದುರಿಸಬೇಕಾದದ್ದೇ : ಪಾಪಪ್ರಜ್ಞೆ ಮಾನಸಿಕ ಕ್ಲೇಶವಾದ ಕಾರಣ ಬುದ್ಧಿಪ್ರಣೀತವಾದ ಮನಃಸಮಾಧಾನದಿಂದ ಪಾಪವಿಮೋಚನೆ ಆಗಲಾರದೆ ? ತಾವು ಬುದ್ಧಿವಂತರೆಂಬ ಅಹಂಕಾರವುಳ್ಳವರ ಉತ್ತರ ಖಂಡಿತವಾಗಿ ಆಗುತ್ತದೆ ಎಂಬುದೇ. ಹಾಗಿದ್ದರೆ ಆ ಪ್ರಶ್ನೆ ತೀರ್ಮಾನವಾಗಿಹೋದದ್ದು, ಇನ್ನು ಕೇಳಬೇಕಾಗಿಲ್ಲ ಎಂಬ ಅಭಿಪ್ರಾಯ ಏಕೆ ಸಾರ್ವತ್ರಿಕವಾಗಿಲ್ಲ? ಅಂತಹ ಅಭಿಪ್ರಾಯ ಸಾರ್ವತ್ರಿಕವಾದರೆ ಪಾಪಕರ್ಮದ ನಿಯಂತ್ರಣದಲ್ಲಿ ಸಮಾಜಕ್ಕೆ ಯಾವ ಪಾತ್ರವೂ

ಉಳಿಯುವುದಿಲ್ಲ. ಆದ್ದರಿಂದ ಸಮಾಜ ಅದನ್ನು ಒಪ್ಪುವದಿಲ್ಲ. ಅಪರಿಚಿತನಂತೆ ಸಮಾಜದಿಂದ ಪರಿತ್ಯಕ್ತನಾದರೂ ತನ್ನ ಪಾಪ ಪರಿಹಾರವಾಯಿತು ಎಂದುಕೊಂಡವರಿಂದ ಸಮಾಜಕ್ಕೆ ತೊಂದರೆಯಿಲ್ಲ. ಏಕೆಂದರೆ ಅಂಥವರ ಸಂಖ್ಯೆ ಬಹು ಕಡಿಮೆ.

ಅವನ ಸಮಾಧಾನ ಕೇವಲ ಬೌದ್ಧಿಕವಲ್ಲ; ಅದಕ್ಕಾಗಿ ಅವನು ಅನೇಕ ವರ್ಷಕಾಲ ದೈಹಿಕ ಮಾನಸಿಕ ಕಷ್ಟವನ್ನು ಅನುಭವಿಸಿದ್ದಾನೆ ಎಂಬ ಉತ್ತರದಲ್ಲಿ ಹುರುಳಿಲ್ಲ. ಅವನು ಕಷ್ಟಪಟ್ಟಿದ್ದು ನಿಜವಾದರೂ ಆದರಿಂದ ಇನ್ನೊಬ್ಬರಿಗೆ ಆದ ಉಪಕಾರವೇನು ? ಕೇವಲ ಕಷ್ಟಪಡುವದರಿಂದಲೇ ಪಾಪವಿಮೋಚನೆ ಎಂದಾದರೆ ಎಲ್ಲ ಲೋಭಿಗಳಿಗೂ ಪಾಪವಿಮೋಚನೆಯಾಗಬೇಕು. ಏಕೆಂದರೆ ಅವನು ತನ್ನ ಗಳಿಕೆಯನ್ನು ಕಷ್ಟದಿಂದ ಗಳಿಸುತ್ತಾನೆ, ಕಷ್ಟದಿಂದ ಕಾಯುತ್ತಾನೆ, ಬಿಟ್ಟು ಹೋಗುವಾಗಲೂ ಕಷ್ಟದಿಂದಲೇ ಬಿಡುತ್ತಾನೆ. ಅಂತಹ ಕಷ್ಟಾರ್ಜಿತದ ತ್ಯಾಗಕ್ಕಿಂತಲೂ ಕಷ್ಟತರವಾದದ್ದು ಬೌದ್ಧಿಕ ಅಹಂಕಾರದ ತ್ಯಾಗ.

ಈ ಪ್ರಶ್ನದಷ್ಟೇ ಅಥವಾ ಅದಕ್ಕೂ ಹೆಚ್ಚು ಸಾರ್ವತ್ರಿಕವಾದ ಇನ್ನೊಂದು ಪ್ರಶ್ನೆ : ಸುಖೋಪಭೋಗ ಎಷ್ಟಾದರೆ ಸಾಕು ? ಯಾವ ವಯಸ್ಸಿಗೆ ಸಾಕು ? ಈ ಪ್ರಶ್ನಕ್ಕೆ ಉತ್ತರ 'ಯಯಾತಿ'ಯ ಕತೆಯಲ್ಲಿದೆ ಎಂದು ಇನಾಮದಾರರ ಮನಸ್ಸು ಅತ್ತ ತಿರುಗಿರಬಹುದು. ಮತ್ತು ಖಾಂಡೇಕರರ ಬರವಣಿಗೆ ಮೊದಲಿನಿಂದಲೂ ಅವರಿಗೆ ಪ್ರಿಯವಾದದ್ದಾಗಿದ್ದ ರಿಂದಲೂ ಆ ಕಾದಂಬರಿಯನ್ನು ಅನುವಾದಿಸುವ ವಿಚಾರ ಅವರಿಗೆ ಹೊಳೆದಿರಬಹುದು. ಅದೇ ಖಾಂಡೇಕರರ ಇಚ್ಛೆಯೂ ಆಗಿತ್ತೆಂಬುದನ್ನು ಇನಾಮದಾರರು ತಮ್ಮ ಅರಿಕೆಯಲ್ಲಿ ಹೇಳಿದ್ದಾರೆ. ಹೀಗೆ ಖಾಂಡೇಕರರ ಆಯ್ಕೆ ಬಹುಯುಕ್ತವಾದದ್ದು. ಅವರ ಶೈಲಿಯ ವೈಶಿಷ್ಟ್ಯವೂ ಇನಾಮದಾರರಿಗೆ ಕರಗತವಾದುದೇ. ಅಂತಹ ಉಪಮೆ ರೂಪಕ ಉತ್ಪ್ರೇಕ್ಷೆಗಳಿಂದ ಜಡಿತವಾದ ಗದ್ಯವನ್ನು ಭಾಷಾಂತರಿಸುವುದಕ್ಕೆ ಇನಾಮದಾರರಂತೆ ಸಂಸ್ಕೃತ ಪದರಚನೆಯನ್ನು ಕನ್ನಡ ಗದ್ಯದಲ್ಲಿ ಪಳಗಿಸಿದವರೇ ಆಗಬೇಕು. ಇನಾಮದಾರರ ಸ್ವಂತದ ಗದ್ಯ ತಾನಾಗಿಯೇ ಹರಿದು ಬರುತ್ತದೆಯಾದರೂ ಅದರ ಸೌಂದರ್ಯ ಔಚಿತ್ಯದಿಂದ ಎದ್ದುಕಾಣುವದೇ ಹೊರತು ಅಲಂಕಾರಗಳ ಹೊಳಪಿನಿಂದಲ್ಲ. ಆ ಮಟ್ಟಿಗೆ ಇನಾಮದಾರರ ಔಚಿತ್ಯಪ್ರಜ್ಞೆ ಖಾಂಡೇಕರರಿಗಿಂತಲೂ ಹೆಚ್ಚಿನದೆಂದೇ ಹೇಳಬಹುದು. ವಿಸ್ತಾರವಾದ ಈ ಅನುವಾದ ಕಾರ್ಯವನ್ನು ಕೇವಲ ಎರಡು ತಿಂಗಳ ಅವಧಿಯಲ್ಲಿ ಇಷ್ಟು ನಿರ್ದುಷ್ಟವಾಗಿ ನಿರ್ವಹಿಸಿದ್ದೂ ಖಾಂಡೇಕರರ ಬಗೆಗೆ ಇವರಿಗಿದ್ದ ಪ್ರೀತಿಗೌರವಗಳ ದ್ಯೋತಕವಾಗಿದೆ. ಖಾಂಡೇಕರರ ಪ್ರಾಮಾಣಿಕತೆಯನ್ನೂ ಸಾಮಾಜಿಕ ಪ್ರಜ್ಞೆಯನ್ನೂ ಇನಾಮದಾರರಂತೆಯೇ ನಾನೂ ಮೆಚ್ಚಿದವನೇ. ಯಯಾತಿಯ ಕತೆ ಎಲ್ಲರಿಗೂ ತಿಳಿದದ್ದೇ. ಆದರೂ ಇದರಲ್ಲಿ ಎಲ್ಲಿಯೋ ದಾರಿ ತಪ್ಪಿದೆ ಎಂಬುದು ನನ್ನ ಅನಿಸಿಕೆ. ಅದನ್ನು ಓದುಗರ ಮುಂದೆ ಸಕಾರಣವಾಗಿ ಇಡದಿದ್ದರೆ ವಿಮರ್ಶೆಯಲ್ಲಿ ಪ್ರಾಮಾಣಿಕತೆ ಉಳಿಯಲಾರದಾದರೂ ಇನಾಮದಾರರ ಈ ಕೃತಿ ಕೇವಲ ಅನುವಾದವಾದ್ದರಿಂದ

ಮೂಲಕೃತಿಯನ್ನು ಈ ಸಂದರ್ಭದಲ್ಲಿ ವಿಮರ್ಶಿಸಹೋಗುವುದು ಸೂಕ್ತವೆನಿಸದು. ಅಲ್ಲದೆ ವಿಸ್ತಾರಭಯವೂ ಸದ್ಯಃ ಆ ಕಾರ್ಯಕ್ಕೆಳಸುವುದಕ್ಕೆ ಅಡ್ಡಿಯಾಗುತ್ತಿದೆ. ಭಾರತೀಯ ಪರಂಪರೆಯಲ್ಲಿ ಜ್ಞಾನಿಗಳೂ ಧಾರ್ಮಿಕರೂ ಎಂದೂ ವಿಖ್ಯಾತರಾದ ರಾಜರ ಶ್ರೇಣಿಯಲ್ಲಿರುವ ಯಯಾತಿಯನ್ನು ಒಬ್ಬ ಲಂಪಟನಾದ ಸ್ವಾರ್ಥಿಯಾದ ಮುದಿಯನೆಂದು ಚಿತ್ರಿಸಿರುವುದರ ಔಚಿತ್ಯವನ್ನೋ ಪ್ರಯೋಜನವನ್ನೋ ಈ ಹೊತ್ತಿಗೆಗೆ ಜ್ಞಾನಪೀಠದ ಬಹುಮಾನವನ್ನು ಕೊಡಿಸಿದ ಮಹನೀಯರೇ ಹೇಳಬೇಕು.

ಮೇಲಿನ ಎರಡು ಕಾದಂಬರಿಗಳು ಹೆಚ್ಚು ಕಡಿಮೆ ಸಾರ್ವತ್ರಿಕವಾಗಿದ್ದಂತೆ ಮೂರನೆಯದು ವೈಯಕ್ತಿಕವಾಗಿ ಅವರದಾಗಿದ್ದಂತೆ ಇನ್ನೂ ಕೆಲವರದಾಗಿರಲೂಬಹುದು. ಪಾಶ್ಚಾತ್ಯ ದೇಶಗಳಲ್ಲಿ ಸುಲಭವಾದ ಇಂದ್ರಿಯೋಪಭೋಗಗಳಿಗೆ ಮರುಳಾಗಿ ಸ್ವದೇಶವನ್ನು ಬಿಟ್ಟವರ ಸ್ಥಿತಿ ಏನಾಗುತ್ತದೆ ? ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಎಂಬ ಅನುಭವ ಅವರದಾಗುತ್ತದೆ — ಎನ್ನುವ ದೃಢವಾದ ಅಭಿಪ್ರಾಯವನ್ನು ಇಲ್ಲಿ ಸೂಚಿಸಿದ್ದಾರೆ. ಭೂಲೋಕವನ್ನು ಒಲ್ಲದ, ಸ್ವರ್ಗಲೋಕದಲ್ಲಿ ಸಲ್ಲದ ತ್ರಿಶಂಕುವಿನ ಹೆಸರು ಆ ಪ್ರವೃತ್ತಿಯವರಿಗೆ ಒಂದು ವಿಧದ ರೂಢನಾಮವೇ ಆಗಿದೆ. ಹೆಸರಿನ ಆಯ್ಕೆಯಲ್ಲಿ ಖಾಂಡೇಕರರದೇ ಪ್ರಭಾವವಿದ್ದರೂ ಹಳೆಯ ಕತೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ತುರುಕುವ ಯತ್ನ ಇಲ್ಲಿಲ್ಲ. ಇಲ್ಲಿಯ ತ್ರಿಶಂಕು ನಾಗರಾಜನೆಂಬ ಒಬ್ಬ ಯುವಕ. ಲೇಖಕರು ಅವನ ಬಾಯಿಂದಲೇ ಅವನ ಕತೆಯನ್ನು ಹೇಳಿಸುತ್ತಾರೆ. ಕಾಲಾವಧಿ ಲಾಸೆಂಜಲಿಸ್ ವಿಮಾನನಿಲ್ದಾಣದಲ್ಲಿ ಆರಂಭವಾದ ಒಂದು ರಾತ್ರಿಯಿಂದ ಆ ವಿಮಾನ ಮುಂಬೈನಲ್ಲಿ ಕಾಣಬೇಕಾಗಿದ್ದ ರಾತ್ರಿಯನ್ನು ಬಾಂಕೋಕನಲ್ಲಿ ಕಾಣುವವರೆಗೆ.

ಈ ನಾಗರಾಜ, ಒಬ್ಬ ಸಾಮಾನ್ಯ ಸಾಂಪತ್ತಿಕ ಸ್ಥಿತಿಯವನೇ ಆದರೂ ತಮ್ಮ ಅಧ್ಯಾಪಕ ವೃತ್ತಿಯಲ್ಲಿ ವಿದ್ವತ್ತಿಗೂ ಸಾತ್ತ್ವಿಕತೆಗೂ ಹೆಸರುಗಳಿಸಿದವರ ಮಗ. ಕೆಲವು ಗೆಳೆಯರ ಸಹವಾಸದಲ್ಲಿ ಅವನಿಗೆ ತಾನೂ ಅಮೆರಿಕಕ್ಕೆ ಹೋಗಬೇಕೆಂಬ ವ್ಯಾಮೋಹ ಬೆಳೆಯುತ್ತದೆ. ಆದರೆ ಅವನ ಯೋಗ್ಯತೆ ಅಲ್ಲಿ ಹೆಸರು ಗಳಿಸುವ ಮಟ್ಟದ್ದಲ್ಲವೆಂದು ತಿಳಿದ ಅವರ ತಂದೆಗೆ ಉತ್ಸಾಹವಿಲ್ಲ. ತಾಯಿಯ ಒತ್ತಾಯಕ್ಕೆ ಮದುವೆಯಾದ ಹುಡುಗಿ ಚೆಲುವೆಯೇ ಆಗಿದ್ದರೂ ಪತಿಯ ಮನಸ್ಸನ್ನು ಹಿಡಿದವಳಾಗಿ ನೀರಲ್ಲಿ ಮುಳುಗಿ ಜೀವಕೊಡುತ್ತಾಳೆ — ಅದು ಅವನು ಅಮೆರಿಕಕ್ಕೆ ಹೋದಮೇಲೆ. ಅವಳ ಹಿಂದೆಯೇ ಕೆಲವೇ ದಿನಗಳಲ್ಲಿ ತಾಯಿಯೂ ತೀರಿ ಹೋಗುತ್ತಾಳೆ. ಆಮೇಲೆ ತಂದೆಯೂ ಹೆಚ್ಚು ದಿನ ಉಳಿಯುವದಿಲ್ಲ. ಅಮೆರಿಕದಲ್ಲಿ ನೆಲೆಸಿದ ಒಬ್ಬರು ಪ್ರಭಾವಶಾಲಿ ಅಧ್ಯಾಪಕರು ನಾಗರಾಜನ ತಂದೆಯ ಶಿಷ್ಯ ಆಶ್ರಿತರೂ ಆಗಿದ್ದರಿಂದ ನಾಗರಾಜನಿಗೆ ಅಲ್ಲೊಂದು ವೃತ್ತಿಯನ್ನು ಕಲ್ಪಿಸುವದು ಅವರಿಗೆ ಸುಲಭವಾಗುತ್ತದೆ. ಅದಕ್ಕೆ ಬೇಕಾಗುವ ಮೊದಲನೆ ವರ್ಗದ ಎಂ.ಎ. ಪದವಿ ನಾಗರಾಜನಿಗೆ ಬರದೇ ಹೋಗಿದ್ದರೂ ತನ್ನ ಗೆಳೆಯನೊಬ್ಬನ

ಪ್ರಭಾವದಿಂದ ಒಂದು ಮಾರ್ಕ್ಸ್‌ಕಾರ್ಡನ್ನು ಸೃಷ್ಟಿಸಿ ಅದನ್ನು ಬಳಸಿಕೊಳ್ಳುತ್ತಾನೆ. ಅಲ್ಲಿ ನಾಲ್ಕು ವರ್ಷಕಾಲ ಡ್ರಿಂಕಿಂಗ್, ಡೇಟಿಂಗ್ ಮುಂತಾದ ಅಮೆರಿಕನ್ ಸುಖಗಳಲ್ಲಿ ನಿರತನಾಗಿದ್ದಾಗ ಅವನು ಕೈಕೊಂಡಿದ್ದ ಕೆಲಸ ತ್ವರಿತವಾಗಿ ಸಾಗುತ್ತಿಲ್ಲ, ಅವನು ಒಂದು ವಿಧದ ನಿರ್ಲಕ್ಷ್ಯದಿಂದಿದ್ದಾನೆಂದು ಅವನ ಮುಖ್ಯಸ್ಥರಿಗೆ, ಅವನನ್ನು ಕರೆಸಿಕೊಂಡಿದ್ದವರಿಗೆ ಭಾಸವಾಗುತ್ತಿದೆ. ಇದೇ ಸಂಧಿಯಲ್ಲಿ ಅವನಿಗಾಗದವರು ಯಾರೋ ಅವನ ಮಾರ್ಕ್ಸ್ ಕಾರ್ಡಿನ ರಹಸ್ಯವನ್ನು ಅವನ ಮುಖ್ಯಸ್ಥರಿಗೆ ತಿಳಿಸುತ್ತಾರೆ. ಆ ಕಾರಣ ಅವನು ನಿರೀಕ್ಷಿಸಿದ ಕಾಲಾವಧಿಯ ವಿಸ್ತರಣೆ ಸಿಗದೆಹೋಗುತ್ತದೆ. ಇಂಡಿಯಾದಲ್ಲಿ ತನ್ನವರೆನ್ನುವವರು ಯಾರೂ ಉಳಿದಿರದಿದ್ದರೂ ಅಲ್ಲಿ ಹೋಗಿ ತಾನು ಜೀವನೋಪಾಯಕ್ಕೆ ಏನು ಮಾಡಬೇಕೆನ್ನುವದು ನಿಶ್ಚಿತವಲ್ಲದಿದ್ದರೂ, ಅವನು ಇಂಡಿಯಾಕ್ಕೆ ಮರಳಿ ಹೋಗಲೇ ಬೇಕಾಗುತ್ತದೆ. ಅವನ ಮಿತ್ರರಿಬ್ಬರು ಅವನನ್ನು ವಿಮಾನನಿಲ್ದಾಣದಲ್ಲಿ ಇಳಿಸಿಹೋದಾಗಿ ನಿಂದ ಅವನ ಗತಜೀವನದ ಕನವರಿಕೆ ಪ್ರಾರಂಭವಾಗುತ್ತದೆ. ತನಗೆ ಸುಖ ಕೊಟ್ಟ ಹುಡುಗಿಯರು, ಬೇರೆಬೇರೆ ಜನಾಂಗಗಳಿಗೆ ಸೇರಿದ ಮಿತ್ರರು ಮತ್ತು ಸಹೋದ್ಯೋಗಿಗಳು, ಭಾರತೀಯರೇ ತಮ್ಮತಮ್ಮೊಳಗೆ ಬೆಳೆಸಿಕೊಂಡಿದ್ದ ಈರ್ಷ್ಯಾಸೂಯೆಗಳು, ಸಜ್ಜನರು, ದುರ್ಜನರು, ಉಪಕಾರಿಗಳು, ಅಪಕಾರಿಗಳು, ಅಮೆರಿಕದಲ್ಲಿಯ ಸುಖಸಾಧನಗಳು, ಇಂತಹ ಅನೇಕ ವಿಷಯಗಳನ್ನು ಮೆಲುಕು ಹಾಕುತ್ತಿರುವಾಗ ಹರಳು ಕಡಿದಂತೆ ಬರುವ ತಂದೆತಾಯಿ ಹೆಂಡತಿಯ ನೆನಪುಗಳು, ತನ್ನ ದುಷ್ಕೃತ್ಯಗಳ ನೆನಪುಗಳು — ಇವುಗಳಲ್ಲಿಯೇ ತೇಲಾಡುತ್ತಿದ್ದಾಗ, ಮುಂಬಯಿಯನ್ನು ಸಮೀಪಿಸಿದ ವಿಮಾನ ಪ್ರತಿಕೂಲ ಹವಾಮಾನದ ಕಾರಣ ಅಲ್ಲಿಳಿಯದೆ ಬಾಂಕೋಕಿಗೆ ಸಾಗಿ, ಅಲ್ಲಿ ಅಪಘಾತಕ್ಕೀಡಾಗುತ್ತದೆ. ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಮಲಗಿದ್ದ ನಾಗರಾಜನನ್ನು ಸಣ್ಣಪುಟ್ಟ ಗಾಯ ಗಳೊಡನೆ ಪಾರಾಗಿದ್ದ ಅವನ ಸಹಪ್ರವಾಸಿಗಳು ಮಾತನಾಡಿಸಿ ಹೊರಟುಹೋದಾಗ ಕತೆ ಮುಗಿಯುತ್ತದೆ. ಮುಂದೆ ನಾಗರಾಜ ಇಂಡಿಯಾಕ್ಕೆ ಬಂದನೆ ? ಎಂದು ಬಂದ ? ಏನು ಮಾಡಿದ ?— ಈ ಪ್ರಶ್ನೆಗಳು ಹುಟ್ಟುವದಿಲ್ಲ. ಅದೇ ಅವನ ತ್ರಿಶಂಕುಸ್ಥಿತಿ.

ಇಲ್ಲಿಯ ಕಥಾನಕದಲ್ಲಿ ಕುತೂಹಲಕ್ಕಿಂತ ಹೆಚ್ಚಾಗಿ ಕಥಾನಾಯಕನ ಮತ್ತು ಅವನು ಕಂಡಂತೆ ಬೇರೆಯವರ ಅನುಭವ ಕಥನದ ಕುಂದಣದಲ್ಲಿ ಉದ್ದಕ್ಕೂ ಕಟ್ಟಲಾಗಿದ್ದ ವಾಕ್ಯರತ್ನಗಳು ಓದುಗನ ಮನಸ್ಸನ್ನು ಜಗ್ಗಿ ಹಿಡಿದು ನಿಲ್ಲಿಸುತ್ತವೆ : "ನಿನಗೆ ಭಾರತೀಯ ಜೀವನವಾತ್ಸಲ್ಯಗಳ ವಿಷಯದಲ್ಲಿ ಅಸಹನೆಯಿದೆ. ಭಾರತೀಯನಾಗಿ ಬಾಳುವುದು ಬೇಡ ವಾಗಿದೆ. ಇದಕ್ಕೆ ವಿರುದ್ಧವಾಗಿ ಅಮೆರಿಕದ ಜೀವನಕ್ರಮ ಒಳ್ಳೆಯದು ಎಂದು ಕಾಣುತ್ತಿರ ಬೇಕು. ಆದರೆ ಒಂದು ಹೇಳಬಲ್ಲೆ : ಏನೂ ಮಾಡಿದರೂ ನಾನು ಇಂಗ್ಲಿಷ್‌ಮನ್ ಹೇಗೋ ಹಾಗೆ ಏನು ಮಾಡಿದರೂ ನೀನು ಭಾರತೀಯ." "ನಿಮ್ಮ ದೇಶದ ವಿಷಯದಲ್ಲಿ ಪ್ರೀತಿ ಅಭಿಮಾನ ಇರುವುದು ಬೇಡ ಎನ್ನುವುದಿಲ್ಲ . ಅವು ಇರಬೇಕಾದದ್ದೇ. ನಾನು

ಕೇಳುವುದು ಒಂದೇ : ಅಷ್ಟು ಪ್ರೀತಿ ಅಭಿಮಾನ ನಿಮ್ಮದಾಗಿದ್ದರೆ ಇಲ್ಲಿಗೇಕೆ ಬಂದಿರಿ ?'' – ಇತ್ಯಾದಿ.

ಮತ್ತು ಖಾಂಡೇಕರರ ಕತೆಯಲ್ಲಿ ಮನಗಾಣಿಸಬೇಕಾಗಿದ್ದ ಪಾಠ ಯಯಾತಿಯ ವಿಷಯೋಪಭೋಗವರ್ಣನೆಯ ವಿಸ್ತಾರದಲ್ಲಿ ಮುಳುಗಿ ಮರೆಯಾಗುವಂತೆ ಇಲ್ಲಿ ಮರೆಯಾಗುವುದಿಲ್ಲ. ನಾಗರಾಜನು ಹುಡುಗಿಯರೊಡನೆ ಸುಖಿಸುತ್ತಿರುವಾಗಲೂ ಗೆಳೆಯ ರೊಡನೆಯೋ ಏಕಾಂಗಿಯಾಗಿಯೋ ವಿಸ್ಕಿ ಕುಡಿಯುತ್ತಿರುವಾಗಲೂ, ಅದರಲ್ಲಿ ಓದುಗನಿಗೆ ಯಾವ ರಮ್ಯತೆಯ ಭಾವನೆಯೂ ಬರುವುದಿಲ್ಲ. ಯಾವ ಕಲಾಕೃತಿಯಲ್ಲಿಯೇ ಆದರೂ ಅದರ ಆಕಾರ ಮತ್ತು ಅರ್ಥಗಳಲ್ಲಿ ಅವಿನಾಭಾವವಿರುತ್ತದೆ. ಇನಾಮದಾರರ ಬರವಣಿಗೆಯಲ್ಲಿ ಸಹಜವಾಗಿ ಬರುವ ಔಚಿತ್ಯಪ್ರಜ್ಞೆಯೇ ಇದಕ್ಕೆ ಕಾರಣವೆಂದು ಹೇಳಬಹುದು.

17

ಸ್ವಸ್ಥಚಿತ್ತರಾಗಿ ತಮಗೆ ಎಂದಿಗೂ ಪ್ರಿಯವಾಗಿದ್ದ ಸಾಹಿತ್ಯದ ಅಧ್ಯಯನ, ಮಿಾಮಾಂಸೆ ವಿಮರ್ಶೆಗಳನ್ನು ಇನಾಮದಾರರು ಸಾರ್ವಕಾಲಿಕ ವ್ಯವಸಾಯವನ್ನಾಗಿ ಮಾಡಿಕೊಂಡಾಗ ಪ್ರಬಂಧಗಳನ್ನು ಬರೆದರು ; ಅಲ್ಲಲ್ಲಿ ಸಾಂದರ್ಭಿಕ ವ್ಯಾಖ್ಯಾನಗಳನ್ನು ಮಾಡಿದರು. ಅವುಗಳಲ್ಲಿ 'ಮಂಗಲ್ಯಾಂಡಿನಲ್ಲಿ ಮೂರುವಾರಗಳು' ಎಂಬ ಪ್ರಬಂಧಗಳು ಮತ್ತು ಕೆಲವು ಆನ್ವಯಿಕ ವಿಮರ್ಶೆಯನ್ನೊಳಗೊಂಡ ಬರಹಗಳೂ ವ್ಯಾಖ್ಯಾನಗಳೂ 'ಆಲೋಕ' ಎಂಬ ಹೆಸರಿನಿಂದ ಪುಸ್ತಕರೂಪದಲ್ಲಿ ಪ್ರಕಟವಾಗಿದೆ.

'ಮಂಗಲ್ಯಾಂಡಿನಲ್ಲಿ ಮೂರುವಾರಗಳು' ಜೊನಾದನ್ ಸ್ವಿಫ್ಟ್‌ನ 'ಗಲಿವರನ ಪ್ರವಾಸಗಳು' ಪ್ರಬಂಧಗಳ ರೀತಿಯಲ್ಲಿದೆ. ಆ ರೀತಿ ನಮ್ಮ ಸಮಕಾಲೀನ ಶೈಕ್ಷಣಿಕ ಸಾಮಾಜಿಕ, ರಾಜಕೀಯ ಪ್ರವೃತ್ತಿಗಳನ್ನು ಅಣಕಿಸುವುದಕ್ಕೆ ಹೇಳಿಮಾಡಿಸಿದಂತಿರುವದನ್ನು ನೋಡಿದರೆ ಅದು ಸ್ವಿಫ್ಟನ ಪ್ರತಿಭೆಯೋ ಇನಾಮದಾರರ ಆಂಗ್ಲ ಸಾಹಿತ್ಯಾಭ್ಯಾಸದ ಫಲವೊ ಎಂದು ಸೋಜಿಗವಾಗುತ್ತದೆ. ಆಂಗ್ಲ ಸಂಸ್ಕೃತಿಯಿಂದಲೇ ನಾವು ನಮ್ಮ ಶೈಕ್ಷಣಿಕ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಎರವಲು ಪಡೆದಿರುವದೂ ಅದಕ್ಕೊಂದು ಕಾರಣವಾಗಿರಬಹುದು. ಮಂಗಲ್ಯಾಂಡಿನಲ್ಲಿ ಒಂದು ವಿಶ್ವವಿದ್ಯಾನಿಲಯದ ನಮೂನೆ ಹೀಗಿದೆ ; ಅಲ್ಲಿಯ ವಿಡಂಬನೆಯನ್ನೂ ಎತ್ತಿ ಕಾಣಿಸುತ್ತದೆ : ''ಈ ಪ್ರಯೋಗಾಲಯದಲ್ಲಿ ನಾವು ರಸಾಯನಶಾಸ್ತ್ರದ ಈ ಚುಚ್ಚುಮದ್ದಿನ ಟ್ಯೂಬುಗಳನ್ನು ತಯಾರಿಸುತ್ತೇವೆ. ಯಾವ ಯಾವ ಮಟ್ಟಕ್ಕೆ ಎಷ್ಟು ರಸಾಯನಜ್ಞಾನವಿರಬೇಕೆಂಬುದನ್ನು ನಿರ್ಧರಿಸಿ ಅದಕ್ಕೆ ಬೇಕಾದ ಎಲ್ಲ ಲೋಕವಿಖ್ಯಾತ ಗ್ರಂಥಗಳನ್ನು ತಂದು ನಿರ್ದಿಷ್ಟ ಭಾಗಗಳನ್ನು ಅರೆದು, ಅದರ

ಸಾರವನ್ನು ತೆಗೆದು ಪಾಠಪಟ್ಟಿಗಳ ಅಗತ್ಯದ ಪ್ರಮಾಣದಲ್ಲಿ ಈ ಟ್ಯೂಬುಗಳಲ್ಲಿ ತುಂಬುತ್ತೇವೆ. ಒಬ್ಬ ವಿದ್ಯಾರ್ಥಿ ಒಂದು ಟರ್ಮಿನ ಮೂರು ತಿಂಗಳಲ್ಲಿ ತಿಂಗಳಿಗೊಂದರಂತೆ ಈ ಇಂಜೆಕ್ಷನ್ ತೆಗೆದುಕೊಂಡರಾಯಿತು. ಬೇರೆ ಏನೂ ಮಾಡಬೇಕಾದದ್ದಿಲ್ಲ. ಆಯಾಯ ಮಟ್ಟದ ರಸಾಯನಜ್ಞಾನ ಆತನಿಗೆ ರಕ್ತಗತವಾಗಿಬಿಡುತ್ತದೆ.''

ಈ ಸಾಹಿತ್ಯ ಪ್ರಕಾರದಲ್ಲಿ ಇನಾಮದಾರರು ಬರೆದದ್ದು ಇದೊಂದೇ ಕೃತಿ. ಇದರಂತೆ ಇನ್ನೊಂದು ಪ್ರಕಾರ — ಜೀವನಚರಿತ್ರೆಯಲ್ಲಿಯೂ ಅವರ ಒಂದೇ ಕೃತಿ 'ಡಾ. ಅಂಬೇಡ್ಕರ್.' ಅಂಬೇಡ್ಕರರ ಜೀವನದಲ್ಲಿ ಇನಾಮದಾರರಿಗೆ ಆಕರ್ಷಕವಾಗಿ ತೋರಿದ್ದು ''ಅವರ ರಾಜಕೀಯ ಧೋರಣೆಗಳಿಗಿಂತ ಅವರ ಧ್ಯೇಯನಿಷ್ಠೆ...'' ಅವರು ಜಾತಿಯಿಂದ ಮಹಾರರಾಗಿದ್ದರೂ ಅವರ ವಿದ್ಯಾಭ್ಯಾಸಕ್ಕೆ ದೊರೆತ ಅನುಕೂಲಗಳು ಅಂದು (1891) ಆ ಜಾತಿಯಲ್ಲಿ ಲಕ್ಷದಲ್ಲೊಬ್ಬನಿಗೂ ದೊರೆಯುವಂತಿರಲಿಲ್ಲ. ಅಂದೇಕೆ ? ಇಂದೂ ಇಲ್ಲ. ಇಷ್ಟಲ್ಲದೆ ಅವರಿಗೆ ಮೊದಲಿನಿಂದಲೂ ಉಚ್ಚ ಜಾತಿಯವರ ಸಹಾನುಭೂತಿಯೂ ದೊರೆತಿತ್ತು. ಅದರ ಉಲ್ಲೇಖ ಇನಾಮದಾರರ ಕೃತಿಯಲ್ಲಿ ವಿಸ್ತಾರವಾಗಿದೆ. ಆದರೂ ಕೆಲವೇ ಜನ ತಿಳಿಗೇಡಿಗಳಾದವರ ಕೈಯಲ್ಲಿ ಅವಮಾನವನ್ನುಂಡರೂ ಅದರಿಂದ ಅವರ ಉತ್ಕರ್ಷಕ್ಕೆ ಯಾವ ಬಾಧೆಯೂ ಇರಲಿಲ್ಲವಾದರೂ ಅದನ್ನೇ ನೆಪಮಾಡಿ ತಾವು ಹೆಜ್ಜೆಹೆಜ್ಜೆಗೂ ಉಚ್ಚವರ್ಣೀಯರಿಂದ ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಪಡೆದ ಸಹಾಯ-ಸಹಾನುಭೂತಿಗಳನ್ನು ಹೇಗೆ ಮರೆತರು ? ತನ್ನಂತೆಯೇ ಯತ್ನಶೀಲನಾದ ವಿದ್ಯಾಪ್ರೇಮಿಯಾದ ಯಾವ ಅಸ್ಪೃಶ್ಯನೂ ಅವುಗಳನ್ನು ಪಡೆಯಬಹುದಾಗಿತ್ತು ಎಂಬುದು ವಿದ್ಯಾವಂತರಾದಮೇಲೂ ಅಂಬೇಡಕರರಿಗೆ ಏಕೆ ಹೊಳೆಯಲಿಲ್ಲ? ಗಾಂಧೀಜಿಯವರೂ ಅವರ ಅನುಯಾಯಿಗಳೂ ಈ ಕ್ರಮವನ್ನು ಪದೇಪದೇ ಒತ್ತಿ ಹೇಳುತ್ತಿದ್ದರೂ, ಸರ್ಕಾರಗಳನ್ನು ರಚಿಸುತ್ತಿದ್ದರೂ ವಿದ್ಯಾವಂತರಾಗಿದ್ದ ಅಂಬೇಡ್ಕರರು ಉಚ್ಚವರ್ಣೀಯರನ್ನು ಸಾರಸಗಟಾಗಿ ದ್ವೇಷಿಸುವ, ಅಜ್ಞರನ್ನು ಸಂಘಟಿಸಿ ಉತ್ತೇಜನ ಕೊಡುವ, ಒಪ್ಪಂದದಿಂದ ಮುನ್ನಡೆಯುತ್ತಿದ್ದ ಸೌಹಾರ್ದವನ್ನು ದ್ವೇಷದಿಂದ ಚಿವುಟಿ ಹಾಕುವ ದಾರಿಗಳಿಗೇ ಏಕೆ ಒಲಿದರು ?

ಇಂತಹ ಪ್ರಶ್ನೆಗಳನ್ನು ಉತ್ತರಿಸುವ ಯತ್ನವನ್ನು ಇನಾಮದಾರರು ಇಲ್ಲಿ ಮಾಡಿಲ್ಲ. ಈ ಪ್ರಬಂಧವನ್ನು ಬರೆಯುವುದಕ್ಕೆ ಅವರು ಓದಿಕೊಂಡ ಸಾಹಿತ್ಯದಲ್ಲಿ ಅಂತಹ ಯತ್ನವನ್ನು ಬೇರೆಯವರು ಮಾಡಿದ್ದೂ ಇಲ್ಲದಿರಬಹುದು. ಅದನ್ನು ತಾವೇ ಮೊದಲಿಗರೆಂಬಂತೆ ಮಾಡಿದ್ದರೂ ಆಗುತ್ತಿತ್ತು. ಅಂಥ ಜೀವನಚರಿತ್ರೆಯನ್ನು ಬರೆಯುವ ಕೆಲಸ ಸಾರ್ಥಕವಾಗಿರುತ್ತಿತ್ತು . ಆದರೆ ಈಗಿರುವಂತೆ ಈ ಪ್ರಬಂಧ ಅಂಬೇಡಕರರ ಗ್ರಂಥಗಳ, ಭಾಷಣಗಳ, ಸಾಂದರ್ಭಿಕ ಲೇಖನಗಳ, ಪತ್ರಿಕಾವರದಿಗಳ ಟಿಪ್ಪಣಿಗಳನ್ನು ಸಂಗ್ರಹಿಸಿದಂತಿದೆ. ಅವಸರದಲ್ಲಿ ಸಂಗ್ರಹಿಸಿದ ಟಿಪ್ಪಣಿಗಳಂತಹ ಹೇಳಿಕೆಗಳನ್ನು

ನೋಡಿದರೂ ಅಂಬೇಡಕರರ ಜೀವನ ಒಂದು ಶ್ರೇಷ್ಠ ಸಾಹಿತ್ಯಕೃತಿ ಎನಿಸಬಲ್ಲ ಚರಿತ್ರೆಗೆ ವಸ್ತುವಾಗಬಹುದೆನ್ನುವುದು ಕಾಣುತ್ತದೆ. ನವಭಾರತದ ಮನುವೆಂದು ಅವರ ಹೆಸರು ಭಾರತದ ಇತಿಹಾಸದಲ್ಲಿ ಶಾಶ್ವತವಾದರೂ ಅವರ ಸಾಧನೆ ದೊಡ್ಡದಾಗಬಹುದಿತ್ತು. ಅವರ ಜೀವನ ಇನ್ನೂ ಸುಖಿಯಾಗಬಹುದಿತ್ತು. ಅಂತಹ ಮೇಧಾವಿಯೂ ಪ್ರಯತ್ನ ಶೀಲನೂ ಆದ ವ್ಯಕ್ತಿ ಜೀವನದ ಉದ್ದಕ್ಕೂ ಭಂಗ, ನಿರಾಶೆ, ದುಃಖಗಳನ್ನು ಅನುಭವಿಸಿದ್ದನ್ನು ನೋಡಿದರೆ ಅಯ್ಯೋ ಎನಿಸುತ್ತದೆ. ಅವರ ವಿದ್ಯೆ ಸಂಸ್ಕಾರಗಳು ಒತ್ತಟ್ಟಿಗೆ ಎಳೆದರೆ ಅಭಿಮಾನ ಮಹತ್ವಾಕಾಂಕ್ಷೆಗಳು ಇನ್ನೊತ್ತಟ್ಟಿಗೆ ಎಳೆಯುತ್ತಿದ್ದವು. ಸೈಮನ್ ಕಮಿಷನ್ನಿಗೆ ವರದಿ ಸಲ್ಲಿಸುವಾಗ, ದುಂಡುಮೇಜಿನ ಪರಿಷತ್ತಿನ ಅಧಿವೇಶನಕ್ಕೆ ಹೋಗುತ್ತಿರುವಾಗ ಅಸ್ಪೃಶ್ಯತಾನಿವಾರಣ ಸಂಘದ ಅಧ್ಯಕ್ಷರಿಗೆ ಕಾಗದ ಬರೆದಾಗ, ದೇವಾಲಯ ಪ್ರವೇಶದ ವಿಷಯದಲ್ಲಿ ಗಾಂಧೀಜಿಯವರ ಧೋರಣೆಗಳನ್ನು ಒಪ್ಪದೆ ನುಡಿದಾಗ, ಮೊದಲನೆಯ ಹೆಂಡತಿ ಅವರ ತೊಡೆಯ ಮೇಲೆ ತಲೆಯಿಟ್ಟು ಅಸುನೀಗಿದಾಗ. ಪುಣೆಯಲ್ಲಿ ನಿಮ್ನ ವರ್ಗದ ಯುವಕ ಸಮ್ಮೇಳನದಲ್ಲಿ ಅಧ್ಯಕ್ಷರ ಹೇಳಿಕೆಯನ್ನು ವಿರೋಧಿಸಿ ನುಡಿದಾಗ, ಎಲ್ಲಕ್ಕಿಂತ ಹೆಚ್ಚಾಗಿ ರಾಜ್ಯಾಂಗ ಸಭೆಯ ಮೊದಲ ಅಧಿವೇಶನದಲ್ಲಿ ಉಜ್ವಲವಾದ ಭಾಷಣ ಮಾಡಿದಾಗ ಅವರ ಮಹತ್ವದ ಮಾತುಗಳನ್ನು ಗಮನಿಸುವಾಗ ಇಂತಹ ಅಂಬೇಡಕರರು ಉದ್ದಕ್ಕೂ ಗಾಂಧೀ ನೆಹರೂ ಅವರನ್ನು ಕಂಡರೆ ಏಕೆ ಅಷ್ಟು ಅಸಹನೆಯನ್ನು ತೋರಿದರು ? ಸ್ಪೃಶ್ಯಾಸ್ಪೃಶ್ಯರನ್ನು ಹೋಗಲಿ, ಅಸ್ಪೃಶ್ಯರಲ್ಲಿಯ ಅನೇಕ ಪಂಗಡಗಳನ್ನೇ ಒಂದುಗೂಡಿಸುವಲ್ಲಿ ಏಕೆ ವಿಫಲರಾದರು ? ಕೊನೆಗೆ ಧರ್ಮತ್ಯಾಗವನ್ನು ಮಾಡಿ ಅಸ್ಪೃಶ್ಯರ ಮತ್ತೊಂದು ಪಂಗಡವನ್ನು ನಿರ್ಮಿಸಿ ಏನು ಸಾಧಿಸಿದರು ? ಇಂತಹ ವೈಫಲ್ಯಕ್ಕೆ ಅವರೆಷ್ಟು ಕಾರಣರು, ಬೇರೆಯವರೆಷ್ಟು ಕಾರಣರು ? - ಇದನ್ನೆಲ್ಲ ಇನಾಮದಾರರು ಉತ್ತರಿಸಿಲ್ಲ. ಆದರೂ ಅಂಬೇಡಕರರ ಜೀವನ ಮಹಾಸತ್ವದ್ದು. ಅದನ್ನು ಎತ್ತಿ ತೋರಿಸುವಂಥ ಚರಿತ್ರವನ್ನು ಬರೆಯುವ ಅವಕಾಶವನ್ನು ಇನಾಮದಾರರು ಏಕೊ ಬಳಸಿಕೊಳ್ಳಲಿಲ್ಲ. ಅಂಬೇಡಕರರ ಜೀವನದ ಮಟ್ಟದ ದುರಂತಕ್ಕೆ ಸ್ಪಂದಿಸಬಲ್ಲ ಹೃದಯ ಸಂಸ್ಕಾರ ಅವರಿಗಿತ್ತು. ಅದನ್ನು ಸಮರ್ಥವಾಗಿ ನಿರೂಪಿಸಬಲ್ಲ ಭಾಷಾಪ್ರಭುತ್ವ ಅವರ ಲೇಖನಿಗಿತ್ತು.

18

ಕಳೆದ ಒಂದು ದಶಕದಲ್ಲಿ ಇನಾಮದಾರರ ಇನ್ನುಳಿದ ಬರಹವೆಲ್ಲ ಸಾಹಿತ್ಯ ಮೀಮಾಂಸೆ ಮತ್ತು ಆನ್ವಯಿಕ ವಿಮರ್ಶೆಗಳಿಗೇ ಸೇರಿದ್ದು. ಇದು ಅವರಿಗೆ ತುಂಬ ಪ್ರಿಯವಾದ ಅಧ್ಯವಸಾಯವೆಂದು ಪ್ರಾರಂಭದಲ್ಲಿಯೇ ಹೇಳಿದೆ. ಇನ್ನಾವ ಒಳಹೊರ ಒತ್ತಡಗಳಿಲ್ಲದೆ ಸ್ವಾಂತಸ್ಸುಖಾಯ ಎಂಬಂತೆ ಇದರಲ್ಲಿ ನಿರತರಾಗಿದ್ದರು. ಅದರಲ್ಲಿ ಅವರು ಪಡೆದ ಸಂತೋಷವು ಆ ಬರವಣಿಗೆಯಲ್ಲಿ ಪ್ರಸಾದಗುಣವಾಗಿ ಉದ್ದಕ್ಕೂ ಎದ್ದು ಕಾಣುತ್ತದೆ. ನಾಲ್ಕು ದಶಕಗಳ ಅವರ ಸಾಹಿತ್ಯ ಸೇವೆಯಲ್ಲಿ ಶೃಂಗಪ್ರಾಯವಾದ ಕೃತಿ 'ಪಾಶ್ಚಾತ್ಯ

ಕಾವ್ಯಮೀಮಾಂಸೆ' ಎರಡು ಮೂರು ವರ್ಷಗಳ ಅಂತರದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ನೀಡಿದ ಪ್ರವಚನಗಳ ರೂಪದಲ್ಲಿ ಬೆಳೆದು ಪಾಶ್ಚಾತ್ಯ ವಿಮರ್ಶೆಯ 'ಪ್ರಾಚೀನ ಪರಂಪರೆ' 'ಮಧ್ಯಯುಗ', 'ಸಂಪ್ರದಾಯಯುಗ', 'ರೊಮ್ಯಾಂಟಿಕ್ ಯುಗ', 'ಆಧುನಿಕ ಯುಗ' ಎಂಬ ಹೆಸರುಗಳಿಂದ ಐದು ಬೇರೆ ಬೇರೆ ಪುಸ್ತಕಗಳಾಗಿ ಪ್ರಕಟಿತವಾಗಿವೆ. ಇನಾಮದಾರರು ಅರ್ಧಶತಮಾನಕಾಲ ಅವ್ಯಾಹತವಾಗಿ ನಡೆಸಿದ ಸಾಹಿತ್ಯ ಅಧ್ಯಯನ-ಅಧ್ಯಾಪನದ ಸಾರವನ್ನೊಳಗೊಂಡಿದೆ, ಈ ಬೃಹದ್ ಹೊತ್ತಿಗೆ.

ಇನಾಮದಾರರೇ ಅರಿಕೆಯಲ್ಲಿ ಹೇಳಿದಂತೆ ''ಪಾಶ್ಚಾತ್ಯಸಾಹಿತ್ಯಸಂಪರ್ಕದಿಂದಲೇ ಹೊಸರೂಪ ಆವಿಷ್ಕಾರಗಳನ್ನು ಆಧುನಿಕ ಕನ್ನಡ ಸಾಹಿತ್ಯ ಪಡೆದಿರುವಾಗ ಅದರ ಸರಿಯಾದ ಗುಣಗ್ರಹಣಕ್ಕೆ ಅಂತೆಯೇ ಅದರ ಬೆಳವಣಿಗೆಗೆ ಪಾಶ್ಚಾತ್ಯರ ಸಾಹಿತ್ಯ ತತ್ವದ ಪರಿಚಯ ಅಗತ್ಯ''ವಾಗಿತ್ತು . ಅಷ್ಟು ಮಾತ್ರವಲ್ಲ, ಪ್ಲೇಟೊ, ಅರಿಸ್ಟಾಟಲ್, ಹೊರೇಸ್, ಕ್ವಿಂಟೀಲಿಯನ್ನರು ಗ್ರೀಕ್‌ಲ್ಯಾಟಿನಲ್ಲಿ ಬರೆದದ್ದನ್ನು ಇಂಗ್ಲಿಷಿನಲ್ಲಿ ಓದಿ ಲಾಭ ಪಡೆಯಬಹುದಾದರೆ ಅರ್ನೋಲ್ಡ್, ಎಲಿಯಟ್ಟರು ಇಂಗ್ಲಿಷಿನಲ್ಲಿ ಬರೆದದ್ದನ್ನು ಕನ್ನಡದಲ್ಲೇಕೆ ಓದಬಾರದು ? ಇಂದು ಸಂಸ್ಕೃತ ಸಾಹಿತ್ಯವನ್ನು ಇಂಗ್ಲಿಷ್-ಕನ್ನಡ ಮಾಧ್ಯಮಗಳಲ್ಲಿ ಓದುವಂತೆ ನಾಳೆ ಇಂಗ್ಲಿಷ್ ಸಾಹಿತ್ಯವನ್ನು ಕನ್ನಡ ಮಾಧ್ಯಮದಲ್ಲಿಯೇ ಓದುವಂತಾಗಬಹುದು. ಯಾವುದೇ ಭಾಷೆಯ ಅಭಿವ್ಯಕ್ತಿ ಸಂಪತ್ತಿ ಬೆಳೆಯುವದೇ ಹೀಗೆ. ಇದೇ ಕ್ರಮದಲ್ಲಿ ಈಗಾಗಲೇ ಕನ್ನಡದಲ್ಲಿ ಆನ್ವಯಿಕವಿಮರ್ಶೆ ಸಾಕಷ್ಟು ಬೆಳೆದಿದ್ದರೂ ಅದರ ಹಿನ್ನೆಲೆಯಾದ ತತ್ತ್ವ ಮೀಮಾಂಸೆಯ ಸಮಗ್ರವಾದ ಸಂಗ್ರಹ ಲಭ್ಯವಿರಲಿಲ್ಲ . ಕನ್ನಡದಲ್ಲಿ ಮಾತ್ರವಲ್ಲ , (ನನಗೆ ತಿಳಿದ) ಇನ್ನಾವ ಭಾರತೀಯ ಭಾಷೆಯಲ್ಲಿಯೂ ಇಂತಹ ಸಂಗ್ರಹ ಬಹುಶಃ ಲಭ್ಯವಿಲ್ಲ.

ವಿಷಯ ಸಂಗ್ರಹಕ್ಕಿಂತಲೂ ಹೆಚ್ಚು ವಿಶಿಷ್ಟವಾದ ಸಾಧನೆ ಅದಕ್ಕೊಂದು ಪರಿಭಾಷೆಯನ್ನು ರೂಪಿಸಿರುವದು. ಇಂಗ್ಲಿಷ್ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಅರ್ಧ ಶತಮಾನ ಕಾಲ ಅಧ್ಯಯನ ಪ್ರವಚನ ಲೇಖನಗಳಲ್ಲಿ ಇನಾಮದಾರರಂತೆ ಪರಿಣತರಾದವರು ಮಾತ್ರ ಮಾಡಬಹುದಾದ ಕಾರ್ಯದಲ್ಲಿ ಇದಕ್ಕಿಂತ ಹೆಚ್ಚಿನ ಪ್ರಯೋಜನವುಳ್ಳದ್ದಾವುದೂ ಇಲ್ಲ. ಅದರಲ್ಲಿಯೂ ಆ ಸುಗಮವಾದ ಶ್ರುತಿಸುಭಗವಾದ ಸಂಸ್ಕೃತ ಕನ್ನಡಗಳ ಮಿಶ್ರಣ ಇನಾಮದಾರರಿಗೇ ವಿಶಿಷ್ಟವಾದ್ದು.

ಈ ಇಡಿಯ ಗ್ರಂಥವೇ ಎರಡುಸಾವಿರದ ಐನೂರು ವರ್ಷಗಳಷ್ಟು ವಿಸ್ತಾರವಾದ ಅವಧಿಯಲ್ಲಿ ಪ್ರಕಟವಾದ ಅನೇಕ ಗ್ರಂಥಗಳ ಸಂಗ್ರಹವಾಗಿರುವದರಿಂದ ಇದರಲ್ಲೇನಿದೆ ಎನ್ನುವುದನ್ನು ಸಂಗ್ರಹವಾಗಿ ಹೇಳುವದು ಅಸಾಧ್ಯ. ಕೆಲವು ವಾಕ್ಯಗಳನ್ನು ಉದ್ಧರಿಸಿ ಅವನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು, ಅಷ್ಟೆ. ಗ್ರೀಕರನ್ನು ಕುರಿತು ''ಪುರಾತನ ಕಾಲದಿಂದ ಅವರ ಧಾರ್ಮಿಕ ಶ್ರದ್ಧೆಗಳಿಗೂ ಕಲಾಜೀವನಕ್ಕೂ ನಿಕಟವಾದ ಸಂಬಂಧ ಏರ್ಪಟ್ಟು ಬಂದಿದ್ದರಿಂದ ಕಲೆಗಳ ವಿಷಯದಲ್ಲಿಯ ಅವರ ಧೋರಣೆ ನೈತಿಕ ಪಕ್ಷಪಾತ

ವುಳ್ಳದ್ದಾಗಿರುವದು ಅನಿವಾರ್ಯವೇ ಆಗಿದ್ದಿತು'' ಎಂಬ ಮಾತು ಭಾರತೀಯರಿಗೆ ಹೊಸದಲ್ಲ. ಅದೇ ಮಾತನ್ನು ಯಾವ ಪ್ರಾಚೀನ ಸಂಸ್ಕೃತಿಯ ಬಗೆಗಾದರೂ ಹೇಳಬಹುದೆಂದು ತೋರುತ್ತದೆ. ಲೌಕಿಕಸಾಹಿತ್ಯ ಎನ್ನುವದು ತೀರ ಇತ್ತೀಚಿನದು. ಸಮಸಮವಾದ ಪ್ರಭಾವವುಳ್ಳ ಅನೇಕ ಜನಾಂಗಗಳು ಒತ್ತಟ್ಟಿಗೆ ಬಾಳಬೇಕಾದ ಪರಿಸ್ಥಿತಿಗಳುಂಟಾದ ಮೇಲೆ ಮಾತ್ರ ಈ ಲೌಕಿಕಸಾಹಿತ್ಯದ ಕಲ್ಪನೆ ಉದಿಸಿದ್ದು. ಆದರೆ ಗ್ರೀಕ್ ಜನಾಂಗದ ಒಂದು ವೈಶಿಷ್ಟ್ಯವೆಂದರೆ ಅದು ಬಾಳಿದ ಕೆಲವೇ ದ್ವೀಪಗಳ ಪ್ರದೇಶದಲ್ಲಿ ಕೆಲವೇ ಶತಮಾನಗಳ ಕಾಲದಲ್ಲಿಯೇ ಅದು ಸಾಧಿಸಿದ ನಾನಾ ವಿಧದ ಪರಿಪಕ್ವತೆಯ ಲಕ್ಷಣಗಳು. ಅದಕ್ಕೊಂದು ನಿದರ್ಶನ ಅರಿಸ್ಟೊಫೆನಿಸನ 'ಫ್ರಾಗ್ಸ್' ನಾಟಕ. ''ಸಾಹಿತ್ಯ ವಿಮರ್ಶೆಯನ್ನೇ ಮುಖ್ಯ ವಿಷಯವನ್ನಾಗಿಸಿಕೊಂಡು ಬರೆದ ಅಪೂರ್ವ ನಾಟಕಗಳಲ್ಲಿ ಇದು ಮೊದಲನೆಯದು'' ಎಂದು ಇನಾಮದಾರರು ಎತ್ತಿ ತೋರಿಸಿದ್ದಾರೆ. ತರುವಾಯದ ಕಾಲದಲ್ಲಿ ಕೂಡ ಎಲ್ಲ ಸಾಹಿತ್ಯಗಳಲ್ಲಿ ನೋಡಿದರೂ ಈ ಪ್ರಕಾರದ ನಾಟಕಗಳು ಅಪರೂಪವಾದುವೇ. ಅದು ಬಹುಶಃ ಗ್ರೀಕ್ ಸಂಸ್ಕೃತಿಯಲ್ಲಿ ನಾಟಕ ಪ್ರಕಾರಕ್ಕಿದ್ದ ಪ್ರಾಮುಖ್ಯವನ್ನೂ ಕಲಾಪ್ರಜ್ಞೆಯ ಜೊತೆಯಲ್ಲಿಯೇ ಸಮಸಮನಾಗಿ ಬೆಳೆಯುತ್ತಿದ್ದ ವಿಮರ್ಶಾಪ್ರಜ್ಞೆಯನ್ನೂ ತೋರಿಸುತ್ತದೆ.

ವಾದೇ ವಾದೇ ಜಾಯತೇ ತತ್ತ್ವಬೋಧಃ ಎಂಬ ಮಾತನ್ನು ಗ್ರೀಕರು ವ್ಯವಹಾರ ದಲ್ಲಿಳಿಸಿದಂತೆ ಬೇರೆ ಯಾವ ಜನಾಂಗದವರೂ ಮಾಡಿರುವ ಉಳಿಕೆಗಳು ಸಾಹಿತ್ಯ ಪ್ರಪಂಚದಲ್ಲಿ ಬಂದಿಲ್ಲ. ಸೋಕ್ರೆಟೀಸನವೆಂದು ಪ್ಲೇಟೊ ಬರೆದಿಟ್ಟಿರುವ ಸಂವಾದಗಳಿಗಿದ್ದ ಪ್ರಾಮುಖ್ಯ ಇದನ್ನೇ ತೋರಿಸುತ್ತದೆ. ಅವುಗಳನ್ನು ನೋಡಿದರೆ ಗ್ರೀಕ್ ಸಾಹಿತ್ಯ ಅದಕ್ಕೆ ಮೊದಲೇ ಆಕಾರ ಪ್ರಕಾರಗಳಲ್ಲಿ ವಿಪುಲವಾಗಿ ಬೆಳೆದಿದ್ದು ಅದು ಗಳಿಸಿದ್ದ ಪ್ರಭಾವಕ್ಕೆ ಇತಿಮಿತಿಗಳನ್ನು ತೋರಿಸುವ ಅವಶ್ಯಕತೆ ಕಂಡಿತ್ತು ಎನ್ನಿಸುತ್ತದೆ. ''ನಡೆ ನೀತಿಗಳನ್ನು ನಿರ್ದೇಶಿಸಬಲ್ಲ ಅಧಿಕಾರ, ಯೋಗ್ಯತೆ ಮತ್ತು ಸಾಮರ್ಥ್ಯ ತತ್ತ್ವಕ್ಕಲ್ಲದೆ ಕಾವ್ಯಕ್ಕಲ್ಲ ಎಂಬ ನಂಬಿಕೆ ಆತನಲ್ಲಿ ಸ್ವಭಾವಗತವಾಗಿ ವ್ಯಾಸಂಗದ ಫಲವಾಗಿ ರೂಢಮೂಲವಾಗಿತ್ತು. ಆದ್ದರಿಂದ ತತ್ತ್ವದರ್ಶನಕ್ಕೆ ಅಗ್ರಪಟ್ಟವನ್ನು ಒದಗಿಸುವದೇ ಆದರೆ ತತ್ತ್ವದ ಪರವಾಗಿ ಮತ್ತು ಕಾವ್ಯಕ್ಕೆ ಇದಿರಾಗಿ ವಾದಿಸುವದು ಆತನಿಗೆ ಅನಿವಾರ್ಯವಾಗಿದ್ದಿತು.''

ಆದರೆ ಸರ್ವಜ್ಞತೆಯಲ್ಲಿಯೂ ಸಮತೂಕವಾದ ನಿರೂಪಣೆಯಲ್ಲಿಯೂ ಅರಿಸ್ಟೋಟಲನ್ನು ಸರಿಗಟ್ಟಿದವರಿಲ್ಲ. ಪಾಶ್ಚಾತ್ಯ ಪರಂಪರೆಯಲ್ಲಿ ಅವನ ತರುವಾಯದ ತತ್ತ್ವಮೀಮಾಂಸೆಯಲ್ಲಿ ಪ್ರತಿಪಾದಿಸಲಾದ ಯಾವ ವಾದಕ್ಕೂ ಬೀಜವನ್ನು ಅವನ ಕೃತಿಗಳಲ್ಲಿ ಕಾಣಬಹುದು. ಅವನ ಅಭಿಪ್ರಾಯಗಳ ಸಂಗ್ರಹವನ್ನು ನೋಡಿದರೆ ನಮ್ಮ ''ನಿಯತಿ ಕೃತನಿಯಮರಹಿತಾಂ ಹ್ಲಾದೈಕಮಯೀಂ ಅನನ್ಯ ಪರತಂತ್ರಾಂ'' ಎಂಬ ಕವಿ ಪ್ರತಿಭೆಯ ವರ್ಣನೆಯ ವ್ಯಾಖ್ಯಾನದಂತೆಯೇ ತೋರುತ್ತದೆ. ಪ್ಲೇಟೋ-

ಅರಿಸ್ಟಾಟಲರಂತೆ ಪ್ರಸಿದ್ಧರಾಗಿಲ್ಲದ ಅವರ ಸಮಕಾಲೀನರು ಕೂಡ ಪರಂಪರೆಯಲ್ಲಿ ತಮ್ಮ ಪ್ರಭಾವವನ್ನು ಹೇಗೆ ಒಂದುಗೂಡಿಸಿದರೆಂಬುದನ್ನು ಇನಾಮದಾರರು ವಿವರಿಸಿದ್ದಾರೆ.

ಗ್ರೀಕ್ ಪರಂಪರೆಯಲ್ಲಿ ಅರಿಸ್ಟಾಟಲನಿಗಿದ್ದ ಪ್ರತಿಷ್ಠೆ ರೋಮನ್ ಪರಂಪರೆಯಲ್ಲಿ ಹೊರೇಸನದು. ಹೊರೇಸನು ಕವಿಯೂ ಅಹುದು, ವಿಮರ್ಶಕನೂ ಅಹುದು. ಅವನ ಬರಹಗಳ ಸಮಗ್ರ ಸಮೀಕ್ಷೆಯನ್ನು ಮಾಡುತ್ತಿದ್ದಂತೆಯೇ ಅವನ ವಿಶೇಷಗಳನ್ನೂ ಎತ್ತಿ ಹೇಳುತ್ತಾರೆ. ''ಕಾವ್ಯಪ್ರಪಂಚದಲ್ಲಿಯ ಕೀರ್ತಿಕಾಂಕ್ಷಿಗಳ ಅಪ್ರಾಮಾಣಿಕವಾದ ಪರಸ್ಪರ ಪ್ರಶಂಸೆಯಿಂದ ಕುಲಗೆಟ್ಟ ವಾತಾವರಣ ಕಾವ್ಯದ ನಿರ್ಮಿತಿಗೆ ಮಾತ್ರವಲ್ಲದೆ ವಿಮರ್ಶೆಗೂ ಮಾರಕವಾಗಿದೆ'' ಎನ್ನುತ್ತಾನೆ. ಇಂತಹ ಮಾತುಗಳನ್ನು ಹೇಳುವ ಕವಿ-ವಿಮರ್ಶಕರು ಇಂದಿಗೂ ಇರುವದು ಸೋಜಿಗವಲ್ಲವೆ !

ಆ ಕಾಲದ ಇನ್ನೊಂದು ಸ್ವಾರಸ್ಯವಾದ ಅಭಿಪ್ರಾಯ ಚರಿತ್ರಕಾರ ಟಾಸಿಟಸನದು. ಸಿಸೆರೋನ ಅಭಿಪ್ರಾಯವನ್ನು ಆತ ಒಪ್ಪುವುದಿಲ್ಲ. ''ವಾಗ್ಮಿತೆ ಶಾಂತಿ ಸುವ್ಯವಸ್ಥೆಗಳ ಕೂಸಲ್ಲ; ಮೂರ್ಖರು ಸ್ವಾತಂತ್ರ್ಯವೆನ್ನುವ ಸ್ವೇಚ್ಛಾಚಾರದ ಸಾಕುಮಗು ಅದು'' ಎನ್ನುತ್ತಾನೆ. ಇವನ ತರುವಾಯ ಕಾವ್ಯಮೀಮಾಂಸೆಗೆ ಹೊಸ ಆಯಾಮವನ್ನು ಒದಗಿಸಿದವನು ಲಾಂಗೈನಸ್. ''ಉಕ್ತಿಯ ಉದಾತ್ತ ಸ್ವರೂಪ ಅಂತರಂಗದ ಉನ್ನತಿಯ ಪ್ರತಿಧ್ವನಿ'' ಎಂದವನು ಅವನು. ಇಂಥ ''ಅಂತರಂಗದ ಉನ್ನತಿ'' ಹೆಚ್ಚಾಗಿ ಸ್ವಭಾವಸಿದ್ಧವಾದ ದ್ದಾದರೂ ಉದಾತ್ತವಿಚಾರಗಳ ಸಂಕೇತವಾದ ಚಿಂತನೆಯಿಂದ, ಅವುಗಳ ಪ್ರಭಾವಕ್ಕೆ ನಿರಂತರವಾಗಿ ಒಳಪಡುವದರಿಂದ, ಕೆಲಮಟ್ಟಿಗಾದರೂ ರೂಢಿಸಿಕೊಳ್ಳಬಹುದಾದ್ದು''

ಡಾಂಟೇ ಮುಖ್ಯವಾಗಿ ಮಹಾಕವಿಯೆಂದೂ ''ಡಿವೈನ್ ಕಾಮೆಡಿ'ಯ ಕರ್ತೃವೆಂದೂ ಪ್ರಸಿದ್ಧಿಯಿದ್ದರೂ ಇನಾಮದಾರರಿಗೆ ಪ್ರಿಯವಾದ್ದು ಅವನ ''ಡಿ ವಲ್ಗಾರಿ ಇಲೋಕ್ವೆನ್ಶಿಯ.'' ''ಕಾವ್ಯಕ್ಕಾಗಿ ಬೇಕಾದ ಭಾಷೆ ಎಲ್ಲ ಕಡೆಯಲ್ಲಿದೆ ಎಂದರೂ ಇಂಥ ಒಂದು ಕಡೆಯಲ್ಲಿದೆ ಎಂದು ಹೇಳಲಾಗುವುದಿಲ್ಲ. ನಾಡಿನಗಲ ಅದರ ಸುಗಂಧ ಹರಡಿಕೊಂಡಿದ್ದರೂ ಅದು ಇಂಥಲ್ಲಿಂದ ಹೊರಡುತ್ತಿದೆ ಎಂದು ಹೇಳಲಾಗುವುದಿಲ್ಲ. ದೇಶೀಯ ಭಾಷೆಯೇ ಆಗಿದ್ದು ಓಜಸ್ವಿಯಾಗಿರಬೇಕು (ಇಲಸ್ಟ್ರಿಯಸ್) ; ಮೂಲಾಧಾರ ಸ್ವರೂಪದ್ದಾಗಿರಬೇಕು (ಕಾರ್ಡಿನಲ್) ; ಆಸ್ಥಾನೋಚಿತವಾಗಿರಬೇಕು (ಕೋರ್ಟ್ಲಿ) ; ನ್ಯಾಯಾಸ್ಥಾನದಲ್ಲಿಯಂತೆ ಸಮತೂಕದ್ದಾಗಿರಬೇಕು. ಈ ಎಲ್ಲ ಗುಣಗಳಿಂದ ಕೂಡಿದ ಭಾಷೆ ಒಂದೇ ಕಡೆಯಲ್ಲಿ ಸಿಕ್ಕಲಾರದು. ಆದರೆ ಬೇರೆ ಬೇರೆ ಕಡೆಯಲ್ಲಿ ಸಿಗುವಂಥವುಗಳ ಯೋಗ್ಯಾಯೋಗ್ಯತೆಯನ್ನು ನಿರ್ಧರಿಸುವದಕ್ಕೆ ಇಂಥ ಭಾಷೆಯೊಂದೇ ಅಳತೆಗೋಲಾಗ ಬಹುದಲ್ಲದೆ ಬೇರೊಂದಲ್ಲ''

ಕಾವ್ಯ ಪ್ರಪಂಚದಲ್ಲಿ ಹೊಸ ಬೆಳವಣಿಗೆಗಳಿಗೆ ಪ್ರೇರಕವಾದ ಐತಿಹಾಸಿಕ

ಹಿನ್ನೆಲೆಯನ್ನೂ ಅಲ್ಲಲ್ಲಿ ಸ್ವಾರಸ್ಯವಾಗಿ ಸಂಗ್ರಹಿಸುತ್ತಾರೆ. ವಿಸ್ತಾರವಾಗಿ ಉದ್ಧರಿಸಿದಲ್ಲದೆ ಅದನ್ನು ಕಾಣಿಸಲಾಗುವದಿಲ್ಲ. ಆಮೇಲೆ ಇಟಾಲಿಯನ್ ಮತ್ತು ಫ್ರೆಂಚ್ ವಿಮರ್ಶಕರ ಕಾರ್ಯವನ್ನು ಸಂಗ್ರಹವಾಗಿ ಹೇಳಿ, ಇಂಗ್ಲೆಂಡಿನ ಫಿಲಿಪ್ ಸಿಡ್ನಿಯ ಕೃತಿ ''ಕಾವ್ಯ ಸಮರ್ಥನೆ''ಯ ಬಗೆಗೆ ವಿಸ್ತಾರವಾದ ಚರ್ಚೆಯನ್ನು ಮಾಡಿದ್ದಾರೆ. ಕವಿಯ ಸೃಷ್ಟಿ ಕರ್ಮದಲ್ಲಿ ಪ್ಲೇಟೋನ ವಿಚಾರಗಳನ್ನೂ ಕಾವ್ಯಸಮರ್ಥನೆಯಲ್ಲಿ ಅರಿಸ್ಟಾಟಲನ ವಿಚಾರಗಳನ್ನೂ ಸಿಡ್ನಿ ಹೇಗೆ ಸಮನ್ವಯಮಾಡಿದ್ದಾನೆಂದು ತೋರಿಸಿದ್ದಾರೆ. ಮೂರೂ ದೇಶಗಳಲ್ಲಿಯ ಪ್ರಮುಖ ಚಿಂತಕರ ಕಾರ್ಯವನ್ನು ವಿವರಿಸಿ ಒಟ್ಟಿನಲ್ಲಿ ''ಕಾವ್ಯತತ್ವಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಅರಿಸ್ಟಾಟಲನ ಪ್ರತಿಪಾದನೆಗಳು ಮಾರ್ಗದರ್ಶಕವಾಗಿದ್ದವು. ಆದರೆ ಆತನ ಪ್ರತಿಪಾದನೆಗಳಲ್ಲಿಯ ಸಂದಿಗ್ಧಾಂಶಗಳನ್ನು ತಮತಮಗೆ ತಿಳಿದ ಹಾಗೆ ವ್ಯಾಖ್ಯಾನಿಸಿ ಪೋಷಕವಾಗಿದೆಯೆಂದು ಅದನ್ನು ವಿಸ್ತರಿಸುವ ಪ್ರಯತ್ನಗಳೂ ನಡೆದಿದ್ದವು'' ಎಂದು ಹೇಳಿದ್ದಾರೆ. ಆದರೆ ಇಂಗ್ಲೆಂಡಿನಲ್ಲಿಯ ವಿಶೇಷವೆಂದರೆ ''ಸಮಕಾಲೀನ ಸನ್ನಿವೇಶವನ್ನು ಹಾಗೂ ತಮ್ಮಲ್ಲಿ ಚಾರಿತ್ರಕವಾಗಿ ಬೆಳೆದ ವಿಚಾರಪರಂಪರೆಯನ್ನು ಮೂಲ ಬಂಡವಾಳವನ್ನಾಗಿಸಿಕೊಂಡು ಇಂಗ್ಲಿಷ್ ವಿಮರ್ಶೆ ಮಾತ್ರ ತೀರ ಬೇರೆಯಾಗಿ ಪ್ರಗತಿಪರವಾಗಿ ಬೆಳೆಯುವಂತಾಯಿತು.'' ಶೇಕ್ಸ್‌ಪಿಯರ್ ಹಾಗೂ ಅವನ ಸಮಕಾಲೀನರ ಕೈಯಲ್ಲಿ ನಾಟಕ ಬೆಳೆದ ಬಗೆಯನ್ನು ವಿವರಿಸಿ, ಆ ಕಲೆಗೆ ಸಂಬಂಧಿಸಿದ ವಿಮರ್ಶೆಯ ಮಾತುಗಳೂ ಆ ನಾಟಕಗಳಲ್ಲಿಯೇ ಬರುವುದೆಂದು ತೋರಿಸಿದ್ದಾರೆ.

ಬೆನ್ ಜಾನ್ಸನ್ ತನ್ನ ನಾಟಕಗಳಲ್ಲಿ, ಪ್ರಸ್ತಾವನೆಗಳಲ್ಲಿ, ಸಾಂದರ್ಭಿಕ ಕವನಗಳಲ್ಲಿ, ಮಾತುಕತೆಗಳಲ್ಲಿ, ಟಿಪ್ಪಣಿಗಳಲ್ಲಿ, ನಾನಾ ರೀತಿಯಾಗಿ ಪ್ರಸ್ತಾಪಿಸಿದ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಳ್ಳುವ ಕಷ್ಟವಾದ ಕಾರ್ಯವನ್ನು ಇನಾಮದಾರರು ಸಮರ್ಥವಾಗಿ ನಿರ್ವಹಿಸಿದ್ದಾರೆ. ಕಾವ್ಯಮೀಮಾಂಸೆ ಪರಂಪರೆಯ ಜಾಡಿನಲ್ಲಿ ನಡೆಯುತ್ತಲೇ ಹೊಸ ದಾರಿಗಳಲ್ಲಿ ಹೇಗೆ ತಿರುಗಬಹುದೆಂಬುದನ್ನು ಡಾ. ಜಾನ್ಸನ್ ಶೇಕ್ಸ್‌ಪಿಯರ್ ನಾಟಕಗಳ ವಿಮರ್ಶೆಯಲ್ಲಿ ತೋರಿಸಿದ್ದ. ಅವನ ಮುಂದಿನ ಕಾಲದಲ್ಲಿ ''ಲಾಂಗೈನಸ್ಸನ ಪ್ರಭಾವದಿಂದಾಗಿ ಅನುಕರಿಸಬೇಕಾದದ್ದು ಪುರಾತನರ ಪ್ರೇರಣೆಯನ್ನು, ಅವರ ಕೃತಿಗಳ ರೂಪರಚನೆಗಳ ಬಾಹ್ಯಾಂಗಗಳನ್ನಲ್ಲ ಎಂಬ ವಿಚಾರ ; ಇನ್ನೊಬ್ಬನನ್ನು ಅನುಕರಿಸಿ ಯಾವನೂ ದೊಡ್ಡವನಾಗಲಿಲ್ಲ ಎಂಬ ಜಾನ್ಸನ್‌ನ ವಿಚಾರ ; ಕಾವ್ಯ ಅನುಕರಣೆಯಾಗಿರದೆ ಮೌಲಿಕವಾಗಿರಬೇಕು ಎಂಬ ಟೆಂಪಲ್‌ನಿಂದ ಕೌಲೆಯವರೆಗಿನ ಕವಿಗಳ ವಿಚಾರ ಕ್ರಮವಾಗಿ ಬಲಗೊಳ್ಳುತ್ತಿದ್ದವು. ಯಾವ ಒಂದು ಸಾಹಿತ್ಯಪ್ರಕಾರವೂ ತಾನೇ ತಾನಾಗಿ ಉಳಿಯದೆ ಒಂದರ ಅಂಶ ಇನ್ನೊಂದರಲ್ಲಿ ಸೇರಿರಬಹುದು ಎನ್ನುವುದು ಅನುಭವದ ವಿಷಯವಾಗಿತ್ತು. ಅಲ್ಲದೆ ಅದೇ ತಲೆಯೆತ್ತಿ ಜನಪ್ರಿಯವಾಗುತ್ತಿದ್ದ ಕಾದಂಬರಿ ಹಾಗೂ ಲಘು ಪ್ರಬಂಧದಂಥ ಹೊಸ ಪ್ರಕಾರಗಳು ರೂಢವಾಗಿದ್ದ ಯಾವ ಪ್ರಕಾರಗಳಿಗೂ ಹೊಂದುತ್ತಿರಲಿಲ್ಲ.''

18-19ನೆಯ ಶತಮಾನಗಳ ಸಂಧಿಕಾಲದಲ್ಲಿ ರೊಮ್ಯಾಂಟಿಕ್ ಪಂಥ ಇಂಗ್ಲೆಂಡಿನಲ್ಲಿಯೇ ಏಕೆ ಉಗಮವಾಯಿತು, ಹಾಗಿದ್ದರೂ ಅದು ಜರ್ಮನ್ ಮತ್ತು ಫ್ರೆಂಚ್ ತತ್ತ್ವ ಚಿಂತಕರ ಪ್ರಭಾವವನ್ನು ಹೇಗೆ ಅಡಗಿಸಿಕೊಂಡಿತ್ತು ಎಂಬುದನ್ನು ಬೇಕನ್ ಕಾಲದಿಂದ ಬರ್ಕ್ಲೀ-ಹ್ಯೂಮ್ ಕಾಲದವರೆಗೆ ಸಂಗ್ರಹವಾಗಿ ಹೇಳಿ, ವರ್ಡ್ಸ್‌ವರ್ಥ್ ಮತ್ತು ಕೋಲ್‌ರಿಜ್‌ರ ವಿಚಾರಗಳನ್ನು ವಿವರಿಸುತ್ತಾರೆ. ಅಂದಿನವರೆಗೆ ಸಾಹಿತ್ಯ ಮೀಮಾಂಸೆ ಸಾಹಿತ್ಯದ ಬಾಹ್ಯ ಲಕ್ಷಣಗಳನ್ನೂ ಅವು ಓದುಗನ ಮೇಲೆ ಮಾಡುವ ಪರಿಣಾಮಗಳನ್ನೂ ಮಾತ್ರ ವರ್ಣಿಸುತ್ತಿತ್ತು. ಇನ್ನು ಮುಂದಿನ ಕಾಲದಲ್ಲಿ ಕವಿಯ ಮನಸ್ಸಿನಲ್ಲಿ ಏನು ನಡೆಯುತ್ತದೆ ಎನ್ನುವದನ್ನು ವಿವರಿಸುವ ಯತ್ನಗಳಲ್ಲದೆ ಪ್ರಪಂಚ ವ್ಯಾಪಾರದಲ್ಲಿ ಅದರ ಸ್ಥಾನವನ್ನು ನಿರ್ಧರಿಸುವ ಯತ್ನಗಳೂ ನಡೆಯುತ್ತವೆ. ಆ ವಿಚಾರಗಳು ಅವುಗಳ ಪ್ರವರ್ತಕರಿಗೇ ಎಷ್ಟರಮಟ್ಟಿಗೆ ಸ್ಪಷ್ಟವಾಗಿದ್ದುವೆಂದು ಹೇಳುವದು ಕಷ್ಟ. ಅವುಗಳ ಅನುವಾದ ಇನ್ನೂ ಕಷ್ಟ. ''ಪ್ರಕೃತಿಸತ್ತ್ವ ಇಂದ್ರಿಯಾತೀತವಾದದ್ದು'' ''ಗ್ರಹಿಸುವ ಮನಸ್ಸು ಮತ್ತು ಗ್ರಹಿಸಬೇಕಾದ ವಿಷಯ ಎಂದೂ ಬೇರೆಬೇರೆಯಾಗಿರದೆ ಒಂದೇ ಸತ್ತ್ವದ ಎರಡು ಬೇರೆಬೇರೆಯಾದ ಆವಿಷ್ಕಾರಗಳಾಗಿರುತ್ತವೆ'' ''ಕವಿ ಮನುಷ್ಯಸ್ವಭಾವಕ್ಕೆ ಅಖಂಡ ರಕ್ಷಣೆಯಾಗಿ ನಿಲ್ಲುತ್ತಾನೆ''— ಇಂತಹ ಮುಂಡಿಗೆಗಳನ್ನು ಬಿಡಿಸುವ ಯತ್ನಗಳು ಕಾವ್ಯಾಸ್ವಾದನೆಗೆ ಯಾವ ರೀತಿಯಲ್ಲಿ ಸಹಕಾರಿಗಳೆಂದು ಕೇಳುವಂತಾಗುತ್ತದೆ. ''ಯತ್ರ ವಾ ಅಸ್ಯ ಸರ್ವಮಾತ್ಮೈವಾಭೂತ್... ತತ್ಕೇನ ಕಂ ವಿಜಾನೀಯಾತ್ ? ವಿಜ್ಞಾತಾರಮರೇ ಕೇನ ವಿಜಾನೀಯಾತ್ ?'' ಎಂಬ ಚರ್ಚೆ ಸಾಹಿತ್ಯಮೀಮಾಂಸೆಯ ಕ್ಷೇತ್ರಕ್ಕೆ ಹೊರತಾದ್ದು. ಅದೇ ವರ್ಡ್ಸ್‌ವರ್ಥ್–ಕೋಲ್‌ರಿಜರ ಕಾವ್ಯದ ಭಾಷೆ ಶೈಲಿ ವಸ್ತುಗಳನ್ನು ಕುರಿತ ಚರ್ಚೆಗಳು ಹಿಂದಿನ ಪರಂಪರೆಯನ್ನು ವಿಸ್ತರಿಸುತ್ತವೆ. ಓದುಗರ ವರ್ಗ ವಿಸ್ತಾರವಾದ್ದರಿಂದ ಮತ್ತು ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿದ್ದರಿಂದ ಇಂಥ ವಿಸ್ತರಣ ಅನಿವಾರ್ಯವಾಗಿತ್ತು. ''ವರ್ಡ್ಸ್‌ವರ್ಥ್‌ನ ಕವನಗಳು ಸಾಮಾನ್ಯವಾದುದರ ಅಸಾಮಾನ್ಯತೆಯನ್ನು ತೋರಿಸಬೇಕು. ಕೋಲ್‌ರಿಜ್ ಅಸಾಮಾನ್ಯವಾದುದನ್ನು ನಂಬಲರ್ಹವಾಗಿ ಮಾಡಬೇಕು'' ಎನ್ನುವಲ್ಲಿ 'ಅಸಾಮಾನ್ಯತೆ' ಎರಡೂ ಪಕ್ಷಗಳಲ್ಲಿ ಸಮಾನವಾಗಿರುವದನ್ನು ನೋಡಿದರೆ ಅವರಾದರೂ ಪರಂಪರೆಯಿಂದ ಬೇರೆಯಾಗಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕೋಲ್‌ರಿಜ್‌ನ ವಿಶಿಷ್ಟ ಕಾಣಿಕೆ ಎಂದೆಣಿಸಿದ ಕಲ್ಪನಾಶಕ್ತಿಯನ್ನು ವಿವರಿಸುವಾಗ ಅವನಿಗೆ ನಮ್ಮವರ ಪ್ರತಿಭಾ–ಭಾವಯಿತ್ರೀ–ಕಾರಯಿತ್ರೀ ಪ್ರಕಾರಗಳು ತಿಳಿದಿದ್ದರೆ, ಅವನ ವಿವರಣೆ ಅಷ್ಟು ಕ್ಲಿಷ್ಟವಾಗುತ್ತಿರಲಿಲ್ಲವೆಂದು ಹೇಳಬಹುದು.

ಇವರಿಬ್ಬರಿಗೆ ಸಮಸಮನಾಗಿ ಶೆಲ್ಲಿಯ ಬರಹಗಳನ್ನು ವಿವರಿಸಿದ್ದರೂ ಅವನ ಬರಹಗಳಲ್ಲಿ ವಿಚಾರಗಳ ನವೀನತೆ ಅಥವಾ ವಿಶದತೆಗಳಿಗಿಂತ ವಾಗ್ವೈಭವವೇ ಹೆಚ್ಚಾಗಿರುತ್ತಿದ್ದ ಕಾರಣ ಅವುಗಳನ್ನು ಸಂಗ್ರಹವಾಗಿ ಹೇಳಿದಲ್ಲಿ ಮೂಲದ ಸ್ವಾರಸ್ಯವುಳಿಯುವದಿಲ್ಲ.

ಇಂಗ್ಲೆಂಡಿನಲ್ಲಿ ಬೆಳೆದ ರೊಮ್ಯಾಂಟಿಕ್ ಪಂಥದ ವ್ಯಕ್ತಿಕೇಂದ್ರಿತ ನಿಲುವಿಗೆ ಪ್ರತಿಯಾಗಿ ಫ್ರಾನ್ಸಿನಲ್ಲಿ ಸೆನ್‌ಬೋ ಮತ್ತು ಟೇನ್ ಎಂಬವರು ಐತಿಹಾಸಿಕ ಮತ್ತು ಸಮಕಾಲೀನ ಪರಿಸರಗಳ ಪ್ರಭಾವವನ್ನು ಮುಖ್ಯವಾಗಿ ಗಣಿಸಿದ್ದನ್ನು ವಿವರಿಸಿ, ಈ ಎಲ್ಲರ ಪ್ರಭಾವ ಆರ್ನೊಲ್ಡಲ್ಲಿ ಹೇಗೆ ಒಂದುಗೂಡಿತೆಂಬುದನ್ನು ವಿವರಿಸುತ್ತಾರೆ. 19ನೇ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡಿನವರಿಗೆ ಪ್ರಪಂಚದ ಎಲ್ಲ ದೇಶಗಳ ಎರಡೂವರೆ ಸಾವಿರ ವರ್ಷಗಳ ಸಾಹಿತ್ಯವಿಮರ್ಶೆ, ತತ್ತ್ವಜ್ಞಾನ, ಇತಿಹಾಸಗಳು ಲಭ್ಯವಾಗಿದ್ದವು. ಆ ವಿಸ್ತಾರದಲ್ಲಿ ಒಂದು ಸನ್ನಿವೇಶದಲ್ಲಿ ಧರ್ಮಕ್ಕೆ, ಇನ್ನೊಂದರಲ್ಲಿ ನೀತಿಗೆ, ಮತ್ತೊಂದರಲ್ಲಿ ಆನಂದಕ್ಕೆ, ಮಗದೊಂದರಲ್ಲಿ ಪ್ರಚಾರಕ್ಕೆ ಪ್ರಾಮುಖ್ಯವಿದ್ದದ್ದು ಸಹಜವೇ ಆಗಿತ್ತು. ಇಷ್ಟೆಲ್ಲವನ್ನೂ ಒಂದೇ ಎಡೆಯಲ್ಲಿ ಬಿಡಿಸಿಕೊಂಡು, ಇವುಗಳಲ್ಲಿ ಯಾವುದು ಮುಖ್ಯ ಎಂಬ ಚರ್ಚೆಯಲ್ಲಿ ಆಂದಿನವರು ತೊಡಗಿದ್ದುದು ವಿಚಿತ್ರವಾಗಿ ಕಾಣುತ್ತದೆ. ಅವರಲ್ಲಿ ಕೆಲವರ ಉತ್ಸಾಹ ದ್ವೇಷ ಅತಿರೇಕಗಳು ಇನ್ನೂ ವಿಚಿತ್ರವಾಗಿವೆ.

ಅಪಕ್ವ ವಯಸ್ಸಿನಲ್ಲಿಯೇ ದೊಡ್ಡ ಆಶೆಗಳನ್ನು ತೋರಿಸಿ ಕಣ್ಮರೆಯಾದ ಸೌಂದರ್ಯ ಲೋಲುಪನಾದ ಕೀಟ್ಸ್ ಕವಿ ಒಂದು ಸಂದರ್ಭದ ಉತ್ಸಾಹದಲ್ಲಿ "ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ. ನಮಗೆ ತಿಳಿದಿರುವದೇ ಅಷ್ಟು, ಹೆಚ್ಚಿನದನ್ನು ತಿಳಿಯಬೇಕಾಗಿಯೂ ಇಲ್ಲ"— ಎಂದು ಹೇಳಿದ್ದರಲ್ಲಿ ಎರಡು ಸಲ ಹೇಳಿದ ಎರಡೇ ಶಬ್ದಗಳನ್ನೆತ್ತಿಕೊಂಡು ಅದನ್ನೊಂದು ಸಿದ್ಧಾಂತವೆಂಬಂತೆ ವ್ಯಾಖ್ಯಾನಿಸಿ, ವಿಸ್ತರಿಸಿ "ಕಲೆಗಾಗಿಯೇ ಕಲೆ" ಎಂಬ ಅತಿರೇಕಕ್ಕೆ ಒಯ್ದವರದೊಂದು ನಿದರ್ಶನ. ಆ ಕಾಲದ ಚರ್ಚೆಗಳ ತೊಡಕುಗಳನ್ನೆಲ್ಲ ಎಳೆಎಳೆಯಾಗಿ ಬಿಡಿಸಿ ವಿವರಿಸಿರುವದು ಇನಾಮದಾರರ ಸಾಧನೆ. ಕ್ರೋಚೆಯ ಅಭಿವ್ಯಕ್ತಿ ವಾದವನ್ನು ಕೋಲ್‌ರಿಜ್ ವಿಚಾರಗಳೊಡನೆ ಹೋಲಿಸಿ ಇಂದ್ರಿಯಗಳು ಕಾಣುವದೇನು, ಮಾತಿನಲ್ಲಿ ಹೊರಬರುವದೇನು ಎಂಬುದನ್ನು ವಿವರಿಸುವಲ್ಲಿ ನಮ್ಮ ತತ್ತ್ವಮೀಮಾಂಸೆಯ ಪಂಚೇಂದ್ರಿಯ, ಪಂಚಮಹಾಭೂತಗಳ ನಡುವೆ ಪಂಚತನ್ಮಾತ್ರೆಗಳ ಕಲ್ಪನೆಯ ಸಹಾಯ ಪಡೆದರೆ ವಿವರಣೆ ಇನ್ನೂ ತಿಳಿಯಾದೀತೆಂದು ತೋರುತ್ತದೆ. "ಒಳಗಡೆಯಲ್ಲಿ ಮೊದಲು ನಡೆದುಹೋದ ಮನೋವ್ಯಾಪಾರವನ್ನು ಮತ್ತೆ ನೆನೆದುಕೊಳ್ಳುವುದು" ಎನ್ನುವುದು ವರ್ಡ್ಸ್‌ವರ್ಥ್‌ನ 'Emotion recollected in tranquility' ಅಲ್ಲವಾದರೆ ಇನ್ನೇನು ? "ಭಾವಗೀತೆ ಎಂದರೆ... ವಸ್ತುನಿಷ್ಠವಾಗಿ ತನ್ನನ್ನು ತಾನೇ ರಂಗಸ್ಥಳದ ಮೇಲಿನ ಒಂದು ಪಾತ್ರವಾಗಿಸಿ ತನ್ನ ವಿಷಯ ಹೇಳಿಕೊಳ್ಳುತ್ತಿರುವಂತೆ ಕಾಣುವ ಬಗೆ" ಎಂಬುದು ಡನ್-ಬ್ರೌನಿಂಗ್-ಎಲಿಯಟ್ ಪರಂಪರೆಯ ರೀತಿಯೇ ! ಹೀಗೆ ಮಾತುಗಳು ಹೊಸವಾದರೂ ವಿಚಾರಗಳು ಹಳೆಯವೇ ಎಂಬುದನ್ನು ಇನಾಮದಾರರೂ ಕೆಲವು ಸಂದರ್ಭಗಳಲ್ಲಿ ಎತ್ತಿ ತೋರಿಸಿದ್ದಾರೆ.

ಅಮೂರ್ತವಾದುದನ್ನು ಭಾಷೆ ಹೇಗೆ ಮೂರ್ತೀಕರಿಸುತ್ತದೆ ಎಂಬ ಚರ್ಚೆ ಸ್ವಾರಸ್ಯವಾಗಿದೆ. ಇಲ್ಲಿಯೂ ನಮ್ಮ ಪರಂಪರೆಯ ಕೆಲವು ವಿಚಾರಗಳ ನೆರವು ಪಡೆಯಬಹುದಿತ್ತು. ರಿಚರ್ಡ್ಸ್ ಹೇಳುವ 'ಸೂಕ್ಷ್ಮ ಸಮತೂಕದ ಮನಃಸ್ಥಿತಿ' ಬರುವದು ಅರಿಸ್ಟಾಟಲನ 'ಕೆಥಾರ್ಸಿಸ್'ನಿಂದ ಅಲ್ಲವೆ ? ''ಸರಿಯಾಗಿ ಓದಿ ಅರ್ಥಮಾಡಿಕೊಳ್ಳ ಬಹುದಾದಾಗ'' ಎಂಬ ಮಾತು ಮಹತ್ವದ್ದೆಂದು ರಿಚರ್ಡ್ಸ್ ಹೇಳುವದನ್ನು ನಮ್ಮ ಆಲಂಕಾರಿಕರು ರಸಸಿದ್ಧಿಯಾಗುವದು ಕವಿಕರ್ಮದಲ್ಲಿ ಎಂದರು. 'ಕೆಥಾರ್ಸಿಸ್' ಚರ್ಚೆಯಲ್ಲಿ ಇದು ಗ್ರಹೀತವಾಗಿದ್ದರೂ ಸ್ಪಷ್ಟವಾಗಿರಲಿಲ್ಲವೆಂದು ತೋರುತ್ತದೆ. ''ಯಾವುದೋ ಒಂದು ಆಸಕ್ತಿ ಕ್ಷೋಭೆಗೆ ಒಳಗಾಗಿ ಮನಸ್ಸು ಸಮಸ್ಥಿತಿಗಾಗಿ ಹಾತೊರೆಯುತ್ತಿರುತ್ತದೆ. ಅಂಥ ಸಮಸ್ಥಿತಿಯನ್ನು ಸಾಧಿಸುವದಕ್ಕೆಂದೇ ನಾವು ಕಾವ್ಯವನ್ನು ಓದುತ್ತಿರುವುದರಿಂದ ನಮ್ಮ ಒಳಗಡೆಯಲ್ಲಿ ಹರಿದು ಬರುತ್ತಿರುವ ಕಾವ್ಯಾನುಭವದ ಪ್ರವಾಹವಾದರೂ ಅಂಥ ಸಮಸ್ಥಿತಿಯತ್ತ ಹಾತೊರೆಯುವದೇ ಆಗಿರುತ್ತದೆ.'' ಅದರಿಂದಲೇ ಅಲ್ಲವೆ ನಮ್ಮವರು ಕಾವ್ಯಾನಂದವು ಬ್ರಹ್ಮಾನಂದಸೋದರನೆಂದದ್ದು. ''ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾತ್ ಬ್ರಹ್ಮಣಿ ತೇ ಸ್ಥಿತಾಃ'' ಪದಗಳ ಅರ್ಥ ವಿವರಣೆಯಲ್ಲಿ ರಿಚರ್ಡ್ಸ್ ವಿವರಣೆಯೂ ನಮಗೆ ಹೊಸದಲ್ಲ. ನಮ್ಮಲ್ಲಿ ವರ್ಣ, ಪದ ಗಳು ಸ್ವತಂತ್ರವಾದುವಲ್ಲ ಎಂದರು. ''ವರ್ಣೇಶಾನಿ ಪದಾನ್ಯಾಹುಃ ಪಾದಾಶ್ಚ ತದಧೀಶ್ವರಾಃ। ಪಾದಾಶ್ಚಾರ್ಧ ಋಚಾಧೀನಾಃ'' ಇತ್ಯಾದಿ. ಕಾವ್ಯಾನಂದದಿಂದ ಸಿದ್ಧಿಸುವ ಸಮಸ್ಥಿತಿ ಬೇರೆಯಾದ ಅನುಭವದಿಂದ ಸಾಧ್ಯವಾಗಲಾರದೆ ಎಂದು ರಿಚರ್ಡ್ಸ್‌ನ ವಿಮರ್ಶಕರು ಕೇಳುವ ಪ್ರಶ್ನೆ ಪ್ರಸ್ತುತವಾದದ್ದೇ ಅಲ್ಲ. ಆ ಸಮಸ್ಥಿತಿಯೇ ಸೌಂದರ್ಯಾನುಭೂತಿ ಯಾದ್ದರಿಂದ ಸೌಂದರ್ಯವೊಂದು ಬೇರೆ ಮೌಲ್ಯವೆಂದು ಎಣಿಸಬೇಕಾಗಿಯೇ ಇಲ್ಲ.

ಎಲಿಯಟ್‌ನ ವಿಚಾರಗಳು ನಮ್ಮ ಪರಂಪರೆಗೆ ತುಂಬಾ ಹೊಂದಿಕೊಳ್ಳುತ್ತವೆ. ''ಆಯಾ ಕಾಲದ ಸಾಹಿತ್ಯ ಆಯಾಯ ಕಾಲಕ್ಕೆ ಸೇರಿದ್ದಾದರೂ ಅದು ಕಾಲಾತೀತ ವಾಗಿಯೂ ಇರುತ್ತದೆ ಎಂಬ ಚಾರಿತ್ರಿಕ ಪ್ರಜ್ಞೆಯೂ ಲೇಖಕನಲ್ಲಿರಬೇಕಾಗುತ್ತದೆ. ಇಂಥವರ ಮೂಲಕವೇ ಒಬ್ಬ ಲೇಖಕ ತಾನು ಸಮಕಾಲೀನನಾಗಿದ್ದಂತೆ ಇನ್ನೊಂದು ಕಾಲಕ್ಕೂ ಸೇರಿದವ ಎಂಬ ಅರಿವು ಆತನಲ್ಲಿ ಮೂಡುತ್ತದೆ...'' ''ನಿಜವಾಗಿಯೂ ಹೊಸದಾದ ಒಂದು ಕೃತಿ ಹೊರಬಂದಾಗ ಅದಕ್ಕೆ ಹಿಂದಿನವಾದ ಎಲ್ಲಾ ಕಲಾಕೃತಿಗಳನ್ನು ನೋಡುವ ನಮ್ಮ ದೃಷ್ಟಿ ವ್ಯತ್ಯಾಸಗೊಳ್ಳುತ್ತದೆ...'' ''ಕಾಲ ಗತಿಸಿಹೋದರೂ ಗತಕಾಲದಲ್ಲಿಯ ಯಾವುದೂ ನಶಿಸಿಹೋಗುವದಿಲ್ಲ. ಒಂದಿಲ್ಲೊಂದು ರೂಪದಲ್ಲಿ ಗತಕಾಲ ವರ್ತಮಾನವನ್ನು ರೂಪಿಸುತ್ತದೆ ಮಾತ್ರವಲ್ಲ, ಅದು ವರ್ತಮಾನದಲ್ಲಿ ಅಂತರ್ಗತವಾಗಿ ಮುಂದುವರಿಯುತ್ತಲೇ ಇರುತ್ತದೆ... ಕಾಲಕ್ರಮದಲ್ಲಿ ಹೊಸಹೊಸ ಕೃತಿಗಳು ಸೇರಿಕೊಳ್ಳುತ್ತಲೇ ಇರುವದರಿಂದ ತನ್ನ ದಾರಿಯಲ್ಲಿ ಯಾವುದನ್ನೂ ಅದು

ತಿರಸ್ಕರಿಸುವದಿಲ್ಲವಾದ್ದರಿಂದ, ಆ ಮನೋಧರ್ಮ ಕಾಲಕ್ರಮದಲ್ಲಿ ಬದಲಾಗುತ್ತ ಶ್ರೀಮಂತವಾಗುತ್ತಲೇ ಇರುತ್ತದೆ....''

ಎಲಿಯಟ್ಟನ ತರುವಾಯವೂ ಅನೇಕರು ಬೇರೆಬೇರೆಯಾಗಿ ವ್ಯಕ್ತಪಡಿಸಿದ ವಿಚಾರಗಳನ್ನು ವಿವರಿಸಿ, ''.... ಇದುವರೆಗಿನ ವಿವರಣೆಯಿಂದ ನವ್ಯವಿಮರ್ಶೆಯ ಪಂಥ ಕಾವ್ಯದ ಸ್ವತಂತ್ರ ಅಸ್ತಿತ್ವದ ಕಲ್ಪನೆಯನ್ನು ಅತಿರೇಕದತ್ತ ನಡೆಸಿ ಕಾವ್ಯದ ಅನುಭವವನ್ನು ಪೂರ್ತಿಯಾಗಿ ಪಡೆಯುವದಕ್ಕೆ ಅಗತ್ಯವಾದ ಅನೇಕ ಅಂಶಗಳತ್ತ ತನ್ನ ಬೆನ್ನು ತಿರುವಿತು ಎನ್ನುವದು ಸ್ಪಷ್ಟವಾಗಬೇಕು'' ಎಂದು ಹೇಳುತ್ತಾರೆ.

ಇದಕ್ಕೆ ಪ್ರತಿಯಾಗಿ ಮತ್ತೆ ''ಶಿಕಾಗೊ ಪಂಥದವರು ಅರಿಸ್ಟಾಟಲನ ಕಾವ್ಯ ಮೀಮಾಂಸೆಯನ್ನು ಆಧಾರಗ್ರಂಥವನ್ನಾಗಿಸಿಕೊಳ್ಳುತ್ತಾರಾದ್ದರಿಂದ ಅವರನ್ನು 'ಅರಿಸ್ಟಾಟೇಲಿಯನ್ಸ್' ಎಂದು ಕರೆಯುವುದೂ ಇದೆ.''

ಆದ್ದರಿಂದ ಉಪಸಂಹಾರದಲ್ಲಿ ಇನಾಮದಾರರು ಹೇಳುವಂತೆ ''ಈ ಕ್ಷೇತ್ರದಲ್ಲಿ ಕೊನೆಯ ಸತ್ಯ ಎನ್ನುವದಿಲ್ಲ'' ಎಂದು ಹೇಳದೆ ''ಭೂತ ಭವಿಷ್ಯತ್ತಾಗಿ ಪರಿವರ್ತನೆ ಯಾಗುವ ಕ್ರಮವೇ ನಿಜವಾದ ಚರಿತ್ರೆ'' ಎಂಬ ಕ್ರೋಚೆಯ ಅಭಿಪ್ರಾಯವನ್ನು ಹೇಳುವದು ಉಚಿತವೆಂದೇ ತೋರುತ್ತದೆ. ಇದನ್ನು ಕೇವಲ ಒಂದು ಅಭಿಪ್ರಾಯವೆಂದು ನೋಡದೆ ಆ ಪ್ರಕ್ರಿಯೆ ಎರಡೂವರೆ ಸಾವಿರ ವರ್ಷಗಳಲ್ಲಿ ನಡೆದಿರುವದನ್ನು ಇನಾಮದಾರರ ಆರುನೂರು ಪುಟಗಳಲ್ಲಿ ಓದುವ ಅನುಭವ ವಿಶಿಷ್ಟವಾದದ್ದು. ಅಂತಹ ಒಂದು ಕೃತಿ ಕೇವಲ ಪರಿಶ್ರಮದಿಂದಾಗುವಂತಹದಲ್ಲ. ಸಂತತ ಅನುಶೀಲನದಿಂದ ಸಾಕ್ಷಾತ್ತಾಗಿರುವವರಿಗೆ ಮಾತ್ರ ಅಂತಹ ಸಮಗ್ರವಾದ, ಪ್ರಮಾಣಬದ್ಧವಾದ ನಿರೂಪಣ ಸಾಧ್ಯ. ಆ ಪರಂಪರೆಯಲ್ಲಿನ ಅಭಿಪ್ರಾಯಗಳನ್ನು ಹೋಲುವ ನಮ್ಮಲ್ಲಿಯ ಅಭಿಪ್ರಾಯ ಗಳನ್ನು ಕೆಲವೇ ಕಡೆಗಳಲ್ಲಿ ಉಲ್ಲೇಖಿಸಿದ್ದಾರೆ. ಇದನ್ನು ಇನ್ನೂ ವಿಸ್ತಾರವಾಗಿ ಮಾಡಬಹುದಿತ್ತು ಎಂದು ನಾನು ಸೂಚಿಸಿರುವದು ಇದರಲ್ಲೊಂದು ಕೊರತೆ ಎಂದಲ್ಲ; ಅದನ್ನು ಮಾಡುವ ಶಕ್ತಿ ಇನಾಮದಾರರಿಗಿದೆ ಎಂದು ಹೇಳುವುದಕ್ಕಷ್ಟೆ.

ಇಂತಹದೊಂದು ಕೃತಿ ಕತೆ ಕಾದಂಬರಿಗಳಂತೆ ಎಲ್ಲರೂ ಓದಿಕೊಳ್ಳಬಹು ದಾದದ್ದಲ್ಲ. ಅದರಲ್ಲಿ ರೂಪಿಸಿದ ಒಂದೊಂದು ಅಭಿಪ್ರಾಯಕ್ಕೂ ವಿಸ್ತಾರವಾಗಿ ನಿದರ್ಶನಗಳನ್ನು ಓದಿ ತೋರಿಸಿ ಚರ್ಚೆಯನ್ನು ಬೆಳೆಸಿದರೆ ಮಾತ್ರ ಇಂತಹ ಪುರೋಗಾಮಿ ಕೃತಿಯ ಪ್ರಜನನ ಶಕ್ತಿ ಮನದಟ್ಟಾದೀತು. ಇಂಥ ನಿರೀಕ್ಷೆ ಅವಾಸ್ತವವಾಗದು.

19

ಇನಾಮದಾರರ ಇನ್ನುಳಿದ ಕೃತಿಗಳೆಲ್ಲ ಆನ್ವಯಿಕ ವಿಮರ್ಶೆಗಳು ; ತಮ್ಮ ವಿಸ್ತಾರವಾದ ಅಧ್ಯಯನ ಕಾಲದಲ್ಲಿ ಅವರು ಮೌಲಿಕವೆಂದುಕೊಂಡ ಕೃತಿಗಳನ್ನೋದಿ ಅವುಗಳ ಆಸ್ವಾದನೆಗೆ ಮಾರ್ಗದರ್ಶನ ಮಾಡುವಂಥವು. ಅವರು ಇನ್ನೇನನ್ನೂ ಬರೆಯದೆ ಇವನ್ನೇ ನಿರ್ಮಿಸಿದ್ದರೂ ಸಾಹಿತ್ಯಾಭ್ಯಾಸಕ್ಕೆ ಅವರ ಕಾಣ್ಕೆ ಅನ್ಯಾದೃಶವಾಗುತ್ತಿತ್ತು.

ಈ ಮಾರ್ಗದಲ್ಲಿ ಅವರು ಅಗ್ರಪೂಜೆ ಸಲ್ಲಿಸಿದ್ದು ಕಾರಂತರಿಗೇ ಎನ್ನುವುದು ಸಹಜ. ಏಕೆಂದರೆ ಇನಾಮದಾರರಿಗೆ ಪ್ರಿಯವಾದ ಕಾದಂಬರಿ ಸಾಹಿತ್ಯದಲ್ಲಿ ಕಾರಂತರ ಜೊತೆ ನಿಲ್ಲುವದಿರಲಿ, ಅವರ ಸಮೀಪಕ್ಕೆ ನಿಲುಕುವಂಥದೂ ನಮ್ಮಲ್ಲಿಲ್ಲ . ಮತ್ತು ಕಾರಂತರ ಬಹುಮುಖ ವ್ಯಕ್ತಿತ್ವ ಇನಾಮದಾರರಿಗಂತಿರಲಿ ಯಾರಿಗಾದರೂ ಆಶ್ಚರ್ಯಪಡಿಸು ವಂತಹದೇ. ಅಂಥವರು ಸಮಕಾಲೀನರಲ್ಲಂತೂ ಇಲ್ಲ. ಆದರೆ ಇದರ ನಿರೂಪಣೆಗೆ ದೊರೆತ ಅವಕಾಶ ಮಾತ್ರ ಏನೇನೂ ಸಾಲದು. ಇದರಲ್ಲಿ ಮೊದಲನೆಯದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗಾಗಿ ಇಂಗ್ಲಿಷಲ್ಲಿ ಬರೆದದ್ದು. ಅವರು ವಿಧಿ ಸಿದ ಪುಟಮಿತಿ ಸಾಲದ್ದು. ಇಂಗ್ಲಿಷ್ ಸಾಹಿತಿಗಳನ್ನು ಕುರಿತು ಇಂಗ್ಲಿಷ್ ಓದುಗರಿಗಾಗಿಯೇ ಇಂಗ್ಲಿಷಲ್ಲಿ ಬರೆಯಿಸಿದ EML ಮಾಲೆಯಲ್ಲಿ ಬರೆವವರಿಗೆ ವಿಧಿಸಿದ ಮಿತಿ ಸುಮಾರು ಇದರ ಮೂರರಷ್ಟಿರುವದು ಕಾಣುತ್ತದೆ. ಹೀಗಿರುವಾಗ ಕನ್ನಡವನ್ನು ತಿಳಿಯದವರಿಗೆ ಕನ್ನಡ ಸಾಹಿತಿಗಳ ಬಗ್ಗೆ ಇಂಗ್ಲಿಷಿನಲ್ಲಿ ಇಷ್ಟು ಚಿಕ್ಕದಾದ ಪ್ರಬಂಧ ಏನು ಹೇಳಬಲ್ಲುದು ? ಸ್ವಲ್ಪದರಲ್ಲಿ ಬಹಳ ಹೇಳಬೇಕೆಂಬ ಆತುರವೋ ಅಥವಾ ಅತಿ ಸಂಕ್ಷೇಪದ ಅವಶ್ಯಕತೆಯೋ ಈ ಬರವಣಿಗೆಯಲ್ಲಿ ಇನಾಮದಾರರ ವೈಶಿಷ್ಟ್ಯವಾದ ಪ್ರಸಾದ ಗುಣವಂತಿರಲಿ, ಇದೇನು ಹೀಗೆ ಬರೆಯುವದಕ್ಕೆ ಇವರಿಗೆ ಏನಾದರೂ ಆಗಿದೆ !– ಎನ್ನುವಂತಾಗುತ್ತದೆ. ಇದರದೇ ಕನ್ನಡ ರೂಪಾಂತರ – ಗೋವಿಂದ ಪೈ ಸಂಶೋಧನ ಕೇಂದ್ರದವರಿಗಾಗಿ ಮಾಡಿದ್ದು — ಇಲ್ಲಿಯ ಮುಖ್ಯ ಆಕ್ಷೇಪವನ್ನು ತಪ್ಪಿಸಿಕೊಳ್ಳುತ್ತದೆ. ಕನ್ನಡ ಬಲ್ಲವರೆಲ್ಲರೂ ಓದಿ ತಿಳಿಯುವಂತಿರದಿದ್ದರೂ ಕಾರಂತರ ಕಾದಂಬರಿಗಳನ್ನು ಓದಿದವರಿಗೆ ಒಂದು ಸಮಗ್ರ ನೋಟವನ್ನು ಒದಗಿಸಿಕೊಡುವದರಲ್ಲಿ ಸಾರ್ಥಕವಾಗಿದೆ. ಒಮ್ಮೆ ಹೇಗೋ ಮಾಡಿದ ಕೆಲಸವನ್ನು ಇನ್ನೊಮ್ಮೆ ಚೆನ್ನಾಗಿ ಮಾಡುತ್ತೇನೆನ್ನುವದು ಯಾರಿಗಾದರೂ ಕಷ್ಟದ್ದೇ. ಇನಾಮದಾರರ ಕಾರ್ಯಪದ್ಧತಿಯನ್ನು ನೋಡಿದರೆ ಅದು ಅವರಂಥವರಿಗೆ ಇನ್ನೂ ಕಷ್ಟದ್ದೆನ್ನುವದು ತಿಳಿದೀತು. ಅವರ ಯಾವ ಬರವಣಿಗೆಯನ್ನು ನೋಡಿದರೂ ಮನದಲ್ಲಿಯೇ ಪೂರ್ಣ ಆಕಾರವನ್ನು ಪಡೆದು ಒಂದೇ ಎರಕದಲ್ಲಿ ತೆಗೆದಂತೆ ಹೊರಬಂದಿರುತ್ತದೆ — ಜ್ಯೂಸ ದೇವತೆಯ ತಲೆಯಿಂದ ಅಥೇನಾ ಬಂದಂತೆ. ಆಮೇಲೆ ತಿದ್ದಲಿಕ್ಕೆ ಯತ್ನಿಸಿದರೆ ತೇಪೆ ಕೆಲಸ ಎದ್ದು ಕಾಣುತ್ತದೆ. ಕಾರಂತರ ಅಪ್ರಕಟಿತ

ಮತ್ತು ಬಿಡಿಬರಹಗಳ ಪರಿಚಯ ಉಪಯುಕ್ತವಾಗಿದೆ. ನೃತ್ಯದ ಭಾಷೆಯ ವಿಚಾರ ಗೊಂದಲಮಯವಾಗಿದೆ. ಕಥಕ್ಕಳಿ, ಒಟ್ಟಂತುಳ್ಳಲ್, ಕಥಕ್ ಮತ್ತು ಭರತನಾಟ್ಯಗಳು ಶಾಬ್ದಿಕ ಭಾಷೆಯ ಅನುವಾದ ಮಾತ್ರಗಳೆಂದು ವರ್ಜಿಸಿದರೂ ಭಾವಗಳ ಮಾತು ಬಂದಾಗ ಅವುಗಳಲ್ಲಿ ವ್ಯಕ್ತಪಡಿಸಲಿಕ್ಕಾಗದ ''ಹೊಸಭಾವಗಳು ಅಥವಾ ಭಾವಗಳ ಹೊಸ ಮಿಶ್ರಣಗಳು'' ಎಂಬ ಮಾತುಗಳು ನಿದರ್ಶನಗಳಿಲ್ಲದೆ ಸ್ಪಷ್ಟವಾಗುವಂತಿಲ್ಲ.

'ಚೋಮನದುಡಿ'ಯಂತಹ ಏಕಮುಖವಾದ ಕಥೆಯನ್ನು ಸಂಗ್ರಹವಾಗಿ ಹೇಳಿದರೂ ಅದರ ಮೂಲಸತ್ತ್ವದ ಕಲ್ಪನೆ ಬರುವಂತಿದೆ. ಅದೇ ಮಾತನ್ನು ಹೆಚ್ಚು ಸಂಕೀರ್ಣವಾದ ಕಥೆಗಳ ಬಗ್ಗೆ ಹೇಳಲಾಗುವದಿಲ್ಲ. ಆದರೂ 'ಮರಳಿ ಮಣ್ಣಿಗೆ'ಯ ಸಂಗ್ರಹ ಮತ್ತು ರಸಗ್ರಹಣ ತುಂಬ ಚೆನ್ನಾಗಿ ಬಂದಿವೆ. ಹೀಗಿದ್ದೂ ಕಾರಂತರ ಬಹುಮುಖ ಪ್ರತಿಭೆಗೆ ತಕ್ಕುದಾದ, ಮತ್ತು ಅವರಲ್ಲಿ ಇನಾಮದಾರರಿಗೆ ಇರುವ ಗೌರವಾದರಗಳಿಗೆ ತಕ್ಕುದಾದ, ಗಾತ್ರ-ಗುಣಗಳಲ್ಲಿಯೂ ಹಿರಿದಾದ ಕೃತಿಯೊಂದು ಇನ್ನೂ ಬರಬೇಕಿದೆ.

ಈ ನಡುವೆ ಅವರು ಶರಚ್ಚಂದ್ರರ ಕೃತಿಗಳನ್ನೂ ಅವುಗಳನ್ನು ಕುರಿತ ವಿಮರ್ಶೆಗಳನ್ನೂ ಓದಿದರೆಂದು ಕಾಣುತ್ತದೆ. ಅವುಗಳಲ್ಲೊಂದಾದ ಸುಬೋಧಚಂದ್ರ ಸೇನ್‌ಗುಪ್ತರ ಕೃತಿಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಕಾರಂತರ ಕೃತಿಗಳ ವೈವಿಧ್ಯ ಮತ್ತು ವಿಸ್ತಾರಗಳನ್ನು ನೆನೆದರೆ ಶರಚ್ಚಂದ್ರರ ಕೃತಿಗಳ ಮೊತ್ತ ಅಡಕವಾದದ್ದೆನ್ನಬಹುದು. ಆದರೂ ಕೆಲವೇ ಕೃತಿಗಳನ್ನು ಸಮರ್ಪಕವಾಗಿ ಆಯ್ದು ವಿಸ್ತಾರವಾಗಿ ಚರ್ಚಿಸಿ ಒಬ್ಬ ಲೇಖಕನ ಬದುಕು ಬರಹಗಳ ಸಮಗ್ರ ಚಿತ್ರವನ್ನು ಹೇಗೆ ರಚಿಸಬಹುದೆಂಬುದಕ್ಕೆ ಈ ನೂರು ಚಿಲ್ಲರೆ ಪುಟಗಳ ಕೃತಿ ಒಂದು ಮಾದರಿಯೆಂಬಂತಿದೆ. ಪ್ರಾಸ್ತಾವಿಕವಾಗಿ ಶರಚ್ಚಂದ್ರರ ಕಾರ್ಯವನ್ನು ಅವರ ಸಮಕಾಲೀನರೂ ಹೆಚ್ಚಿನ ಕೀರ್ತಿ ಐಶ್ವರ್ಯಗಳನ್ನು ಪಡೆದವರೂ ಆದ ರವೀಂದ್ರನಾಥರ ಕಾರ್ಯದೊಡನೆ ಹೋಲಿಸುತ್ತಾರೆ. ಅನಂತರ ಅವರ ಜೀವನದ ಮುಖ್ಯ ಘಟನೆಗಳನ್ನು ವಿವರಿಸಿ ಅವುಗಳ ಛಾಯೆ ಅವರ ಯಾವ ಯಾವ ಕೃತಿಗಳಲ್ಲಿ ಕಾಣುತ್ತದೆಂಬುದನ್ನು ಹೇಳುತ್ತಾರೆ. ತರುವಾಯ ಕೆಲವೇ ಕತೆಗಳನ್ನು ರಚನೆ, ಪಾತ್ರಪೋಷಣೆ, ಕಲಾಸಿದ್ಧಿಗಳ ದೃಷ್ಟಿಯಿಂದ ವಿವರವಾಗಿ ವಿಮರ್ಶಿಸುತ್ತಾರೆ. ಮುಂದಿನ ಎರಡು ಅಧ್ಯಾಯಗಳಲ್ಲಿ ಕೆಲವೇ ಆಯ್ದ ಕಾದಂಬರಿಗಳನ್ನು 'ಸ್ತ್ರೀಹೃದಯ' 'ಬದುಕು ಮತ್ತು ಪ್ರೀತಿಯ ಸಮಸ್ಯೆಗಳು' ಎಂದು ವಿಂಗಡಿಸಿ ವಿಸ್ತಾರವಾಗಿ ವರ್ಣಿಸುತ್ತಾರೆ. ಶರಚ್ಚಂದ್ರರ ಕತೆಯ ಅತ್ಯಂತ ಗಮನಾರ್ಹವಾದ ಲಕ್ಷಣಗಳನ್ನು – ಹೇಳಬೇಕಾದುದನ್ನು ನೇರವಾಗಿ ಹೇಳುವ ಮತ್ತು ಹೇಳಿದ್ದರ ತೀರ ನಿಕಟವಾದ ಪರಿಚಯವನ್ನು ಒದಗಿಸುವ – ನಿದರ್ಶನಗಳನ್ನಿತ್ತು ಸಮರ್ಥಿಸುತ್ತಾರೆ. ಇದರಿಂದಾಗಿ ಓದುಗರಲ್ಲಿ ಒಂದು ಸ್ಫುಟವಾದ ಮತ್ತು ಆಕರ್ಷಕವಾದ ವ್ಯಕ್ತಿಚಿತ್ರ ಮೂಡಿನಿಲ್ಲುತ್ತದೆ. ಕಾರಂತರನ್ನು ಕುರಿತಂತೆಯೂ ಇಂಥದೊಂದು ಕೃತಿ ಶಕ್ಯವಾಗುವಂತಿದ್ದರೆ ಚೆನ್ನಾಗಿತ್ತು. ಇದೇ ಶರಚ್ಚಂದ್ರರ ಜನ್ಮಶತಾಬ್ದಿಯ

ಸಂದರ್ಭದಲ್ಲಿ ಇನಾಮದಾರರು ಕೊಟ್ಟ ಭಾಷಣವೊಂದು ಪರಿಷ್ಕೃತರೂಪದಲ್ಲಿ ಮುಂದೆ 'ಆಲೋಕ' ಎಂಬ ಸಂಕಲನದಲ್ಲಿ ಅಚ್ಚಾಗಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನದರ್ಶನ'ವನ್ನು ಕುರಿತು ಇನಾಮದಾರರು ಕೊಟ್ಟ ಉಪನ್ಯಾಸಗಳು ಅಚ್ಚಾಗಿವೆ. ಪರಿಶೀಲಿಸಬೇಕಾಗಿದ್ದ ಕಾದಂಬರಿಗಳು ನಾಲ್ಕೇ ಎಂದೊ ಪರಿಶೀಲನೆಯ ಕ್ಷೇತ್ರವನ್ನು 'ಜೀವನದರ್ಶನ' ಎಂದು ಸೀಮಿತಗೊಳಿಸಿದ್ದರಿಂದಲೋ, ಎಂಬತ್ತೇ ಪುಟಗಳ ಈ ಕೃತಿ ತುಂಬ ಅಚ್ಚುಕಟ್ಟಾಗಿ ಹೃದ್ಯವಾಗಿ ಮೂಡಿಬಂದಿದೆ. ಇನಾಮದಾರರ ಶೈಲಿಯ ಮುಖ್ಯ ವೈಶಿಷ್ಟ್ಯವಾದ ಪ್ರಸಾದಗುಣ ಪ್ರತಿಯೊಂದು ವಾಕ್ಯದಲ್ಲಿಯೂ ಎದ್ದು ಕಾಣುತ್ತದೆ.

ಪ್ರಾಸ್ತಾವಿಕ ಖಂಡಗಳಾದ ಮೇಲೆ 'ಸುಬ್ಬಣ್ಣ' ಮತ್ತು 'ಶೇಷಮ್ಮ' ಎರಡನ್ನೂ ಕಾದಂಬರಿಗಳೆಂದಿರುವುದೇಕೆನ್ನುವುದನ್ನು ವಿವರಿಸಿ ''ಘಟನೆಗಳಲ್ಲಿಯ ವೈವಿಧ್ಯ ಮತ್ತು ಅದರ ಪರಿಣಾಮವಾಗಿ ನಾವು ಅನುಭವಿಸುವ ಭಾವವಿಸ್ತಾರ ಕಥೆಯೊಂದನ್ನು ಕಾದಂಬರಿಯನ್ನಾಗಿಸುತ್ತವೆ ಎಂದು ನನ್ನ ಭಾವನೆ'' ಎಂದಿರುವುದನ್ನು ಎಲ್ಲರೂ ಒಪ್ಪಬೇಕಾದ್ದೇ. ಸುಬ್ಬಣ್ಣನ ಕತೆಯ ಬೆಳವಣಿಗೆಯನ್ನು ವಿವರಿಸುತ್ತ ''ಸಂಗೀತ ಆತನ ಬದುಕಿನ ಒಂದು ಅವಿಭಾಜ್ಯ ಅಂಶವಾಗಿದ್ದ ಹಾಗೆ ಆತನ ಪಾಲಿಗೆ ಬಂದ ದೌರ್ಭಾಗ್ಯಗಳೂ ಆತನ ಬೆಳವಣಿಗೆಯ ಅವಿಭಾಜ್ಯ ಅಂಶಗಳಾಗಿ ನಿಲ್ಲುತ್ತವೆ'' ಎನ್ನುತ್ತಾರೆ. ಅದು ಹೇಗೆಂದು ತೋರಿಸುವ ಕ್ರಮವೂ ಅಷ್ಟೇ ಸಮರ್ಪಕವಾಗಿದೆ. ಶೇಷಮ್ಮನ ಕತೆಯೂ ಒಂದು ಒಳ್ಳೆಯ ಜೀವ ಕಷ್ಟಗಳನ್ನು ಮೀರಿ ಸಂಸ್ಕಾರ ಪಡೆದ ಕತೆಯೇ. ಆದರೆ ವಿಸ್ತಾರ ಸುಬ್ಬಣ್ಣನ ಕತೆಯ ಮೂರರಷ್ಟಾಗಿ, ಪರಿಣಾಮ ತುಸು ತೆಳುವಾದಂತೆನಿಸುತ್ತದೆ. ಸುಬ್ಬಣ್ಣ ಸಂಗೀತ ಕಲಾವಿದ ; ಶೇಷಮ್ಮ ಎಲ್ಲರಂತಹ ಒಬ್ಬ ವ್ಯಕ್ತಿ. ಆದ್ದರಿಂದ ಅವರಲ್ಲಿ ಸಹಜವೆನಿಸುವ ಮಾತು ಇವರಲ್ಲಿ ಅತಿಭಾವುಕತನದ್ದೆನಿಸುತ್ತದೆ. ಆಕೆಯ ಸಚ್ಚಾರಿತ್ರ್ಯದ ಪರಿಣಾಮವಾಗಿ ಬೆಳೆದ ಅವರ ಪ್ರಭಾವದ ನಿರೂಪಣ ಸ್ವಲ್ಪ ಅತಿಶಯವೆಂದೇ ತೋರುತ್ತದೆ. ಒಬ್ಬ ವ್ಯಕ್ತಿಯ ಸ್ವಭಾವದಲ್ಲಿ ಆನುವಂಶಿಕತೆಯ ಪ್ರಭಾವವನ್ನು ಕುರಿತು ಮತ್ತು ''ಸನ್ನಿಧಿಯಿಂದ ಮಗುವಾಗಿ ಹೊರಟ ಜೀವ'' ಬೆಳೆದಂತೆ ದೂರದೂರವಾಗಿ ಮತ್ತೆ ತಿರುಗಿ ಬಂದು ದೇವನನ್ನು ಕಾಣುವದನ್ನು ವರ್ಣಿಸುವಲ್ಲಿ, ಶೇಷಮ್ಮನವರೆಂದ ಮಾತುಗಳು ಮಾಸ್ತಿಯವರ ಮಾತುಗಳಂತೇ ಭಾಸವಾಗುತ್ತವೆ. ಮೂಲಕೃತಿಗಳ ಪರಿಣಾಮ ಇನ್ನೂ ಸ್ಫುಟವಾಗುವಂತೆ ಮಾಡಿದ ಅವುಗಳ ವಿಮರ್ಶೆ ಆ ಎರಡೂ ಕೃತಿ ಇನಾಮದಾರರ ಮೇಲೆ ಬೀರಿದ ಪ್ರಭಾವಕ್ಕೆ ಸಾಕ್ಷಿಯಾಗಿದೆ.

'ರಾಜ್ಯಗಳ ಅವನತಿ' ಎಂಬ ಉಪನ್ಯಾಸ ಚೆನ್ನಬಸವನಾಯಕನ ಕಾಲದಲ್ಲಾದ ಬಿದನೂರು ರಾಜ್ಯದ ಅವನತಿಯನ್ನೂ ಚಿಕ್ಕವೀರರಾಜೇಂದ್ರನ ಕಾಲದಲ್ಲಾದ ಕೊಡಗು ರಾಜ್ಯದ ಅವನತಿಯನ್ನೂ ಚಿತ್ರಿಸುವ ಅವೇ ಹೆಸರಿನ ಎರಡು ವಿಸ್ತಾರವಾದ ಕಾದಂಬರಿಗಳನ್ನು ಕುರಿತದ್ದಾಗಿದೆ. ''ಚರಿತ್ರೆ ಒದಗಿಸುವ ವಾಸ್ತವಾಂಶಗಳಿಗೆ ಮನುಷ್ಯ

ಸಹಜವಾದ ಕುತೂಹಲಕ್ಕೆ ಉತ್ತರಗಳನ್ನು ಸೂಚಿಸಬಲ್ಲ ಅಂಶಗಳನ್ನು ಸೇರಿಸುವುದೇ ಚಾರಿತ್ರಿಕ ಕಾದಂಬರಿಗಳನ್ನು ಬರೆಯುವವ ಮಾಡಬೇಕಾದ ಕೆಲಸ'' ಎಂಬ ವ್ಯಾಖ್ಯೆ ಸೊಗಸಾಗಿದೆ. ''ಪ್ರಜೆಗಳ ನಿಷ್ಠೆ-ವಿಶ್ವಾಸಗಳಿಗೆ ಪ್ರತಿಯಾಗಿ ಪ್ರಭು ತನ್ನ ಹೊಣೆಗಾರಿಕೆಯನ್ನು ಅರಿತು ನಡೆಯುತ್ತಿದ್ದ. ಊಳಿಗಮಾನ್ಯ (ಫ್ಯೂಡಲ್) ಜೀವನ ಕ್ರಮದಲ್ಲಿ ಇಂಥ ಸಂಬಂಧ, ಇಂಥ ರಾಜ್ಯವ್ಯವಸ್ಥೆ, ಧರ್ಮದೃಷ್ಟಿಯ ಸಂಪ್ರದಾಯವನ್ನು ಅನುಸರಿಸಿ ಸುಸಂಘಟಿತವಾಗಿ ಕೆಲಸ ಮಾಡುತ್ತಿದ್ದವು'' ಎನ್ನುವ ವಿವರಣೆ ಸಮಾಜಗಳಲ್ಲಿ ಅಷ್ಟು ದೀರ್ಘಕಾಲ ಹೇಗೆ ಬಾಳಿತೆಂಬುದನ್ನು ಸಮರ್ಪಕವಾಗಿ ವಿವರಿಸುತ್ತದೆ. ''ಪರಸ್ಪರ ವಿಶ್ವಾಸವನ್ನು ಆಶ್ರಯಿಸಿ ನಿಲ್ಲಬೇಕಾಗಿದ್ದ ಇಂಥ ವ್ಯವಸ್ಥೆಯಲ್ಲಿ ಪ್ರಭುತ್ವದ ಅಧಿಕಾರ ಕೇಂದ್ರವಾದ ರಾಜನೋ ರಾಣಿಯೋ ಸ್ವಾರ್ಥದಿಂದ ದೂಷಿತವಾದಾಗ, ರಾಜ್ಯಾಧಿಕಾರದ ಮೂಲವೇ ಮರೆತುಹೋಗುತ್ತದೆ'' ಎನ್ನುವದು ಆ ವ್ಯವಸ್ಥೆಯ ಅವಸಾನದ ಕಾರಣವನ್ನು ಸರಿಯಾಗಿ ಗುರುತಿಸುತ್ತದೆ.

''ಚನ್ನಬಸವನಾಯಕನ ಪಾತ್ರದ ಕಲ್ಪನೆ ತೊಡಕಿನದಾಗಿ ಕಾಣುತ್ತದೆ'' ಎನ್ನುವದೇಕೆಂದು ತಿಳಿಯುವದಿಲ್ಲ . ಹ್ಯಾಮ್ಲೆಟ್ ರಾಜಕುಮಾರನ ಸ್ವಭಾವದಲ್ಲಿ ಕಾಣುವ ಅಂತರ್ಮುಖತೆ, ನ್ಯಾಯಪ್ರಿಯತೆ, ಆತ್ಮಗೂಹನ ಕೆಲವೊಮ್ಮೆ ಅತಿಪ್ರತಿಕ್ರಿಯೆಗಳೇ ಚೆನ್ನಬಸವನಾಯಕನಲ್ಲಿಯೂ ಕಾಣುವುದಕ್ಕೆ ಅಲ್ಲಿದ್ದ ಕಾರಣಗಳೇ ಇಲ್ಲಿಯೂ ಇವೆ. ಚಿಕ್ಕವೀರರಾಜೇಂದ್ರನ ಮನೋವಿಕಲತೆಯಲ್ಲಿ ಮ್ಯಾಕ್‌ಬೆಥ್ ಸನ್ನಿವೇಶದ ಸಾದೃಶ್ಯವನ್ನು ಪ್ರೊ. ಮೂರ್ತಿರಾಯರು ತೋರಿಸಿದ್ದಾರೆ ಎಂದು ಮುಂದೆ ಇನಾಮದಾರರೇ ಉಲ್ಲೇಖಿಸಿದ್ದಾರೆ. ಹೈದರನ ಕುಟಿಲ ತರ್ಕವನ್ನು ''ಒಂದು ರೀತಿಯ ಧರ್ಮದೃಷ್ಟಿ'' ಎಂದು ಏಕೆ ಕರೆಯುತ್ತಾರೊ ತಿಳಿಯದು. ಏಕೆಂದರೆ ಅಲ್ಲಿಯೇ ''ಸಂಶಯವನ್ನು ನಟಿಸಿ'', ''ನೆಪವನ್ನು ಮುಂದೆ ಮಾಡಿ'' ಎಂಬ ಪದಪ್ರಯೋಗಗಳಿವೆ. ಚಿಕವೀರರಾಜೇಂದ್ರನ ಕತೆಯನ್ನು ವಿವರವಾಗಿ ವಿಮರ್ಶಿಸಿ ಕೊನೆಯಲ್ಲಿ ''ಅಸಂತ್ಯಾಗಾತ್ ಪಾಪಕೃತಾಂ ಅಪಾಪಾನ್ ತುಲ್ಯೋ ದಂಡಃ ಸ್ಪೃಶತೇ ಮಿಶ್ರ ಭಾವಾತ್'' ಎಂದು ಮಹಾಭಾರತ ವಾಕ್ಯವನ್ನು ಉದ್ಧರಿಸಿರುವದಂತೂ ಆ ಕತೆಯ ಬಗ್ಗೆ ಹೇಳಬೇಕಾದದ್ದನ್ನೆಲ್ಲವನ್ನೂ ಹೇಳುತ್ತದೆ. ಅದರ ನಿರೂಪಣೆಯಲ್ಲಿ ಧರ್ಮ, ಶ್ರದ್ಧೆ ಉಪಾಸನೆ, ಇತ್ಯಾದಿಗಳ ಬಗೆಯಲ್ಲಿ ಆನುಷಂಗಿಕವಾಗಿ ಬಂದಿರುವ ಮಾಸ್ತಿಯವರ ವಿಚಾರಗಳು ಸಂದರ್ಭೋಚಿತವಾಗಿದ್ದಂತೆ ಮನನೀಯವಾದುವೂ ಆಗಿದೆ. ಒಟ್ಟಿನಲ್ಲಿ ಈ ಎರಡು ವ್ಯಾಖ್ಯಾನಗಳು ಅನ್ವಯಿಕ ವಿಮರ್ಶೆಯ ಉತ್ತಮ ನಿದರ್ಶನಗಳಾಗಿವೆ.

ಇಂತಹದೇ ಇನ್ನೊಂದು ಉತ್ತಮ ಕೃತಿ 'ಕುವೆಂಪು ಕಾದಂಬರಿಗಳು'. ಕುವೆಂಪು ಅವರು ಬರೆದ ಕಾದಂಬರಿಗಳು ಎರಡೇ ಆಗಿದ್ದರೂ ಅವು ಗಾತ್ರದಲ್ಲಿ ವಿಸ್ತಾರವಾಗಿದ್ದಂತೆ ಪಾತ್ರಗಳ ವೈವಿಧ್ಯದಲ್ಲೂ ಅನುಭವಗಳ ಸಂಕೀರ್ಣತೆಯಲ್ಲೂ ಹೆಚ್ಚಿನ ವ್ಯಾಪ್ತಿಯನ್ನು

ಪಡೆದುವಾದುದರಿಂದ, ಅವುಗಳ ಸಾರವನ್ನು ನೂರು ಚಿಲ್ಲರೆ ಪುಟಗಳಲ್ಲಿ ನಿರೂಪಿಸಿ ವಿಮರ್ಶಿಸುವ ಕಠಿಣ ಕೆಲಸವನ್ನು ಇನಾಮದಾರರು ಬಹುಸಮರ್ಥವಾಗಿ ನಿರ್ವಹಿಸಿದ್ದಾರೆ. ಇಲ್ಲಿಯ ವಿಶೇಷವೆಂದರೆ ಈ ಕಾದಂಬರಿಗಳನ್ನು ಕುರಿತು ಈ ಮೊದಲೇ ವ್ಯಕ್ತಪಡಿಸಲಾಗಿದ್ದ ಬೇರೆಯವರ ಅಭಿಪ್ರಾಯಗಳನ್ನು ಉಲ್ಲೇಖಿಸಿ, ಅಲ್ಲಗಳೆದು, ತಮ್ಮ ಹೊಸ ಅಭಿಪ್ರಾಯಗಳನ್ನು ಸಯುಕ್ತಿಕವಾಗಿ ಮಂಡಿಸಿರುವುದು. ಆದ್ದರಿಂದ ಆನುಷಂಗಿಕವಾಗಿ ಕಾದಂಬರೀ ಸಾಹಿತ್ಯ ಪ್ರಕಾರವನ್ನು ಕುರಿತು ಮತ್ತು ವಿಮರ್ಶೆಯ ರೀತಿಗಳನ್ನು ಕುರಿತು ಮನನೀಯವಾದ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶವಾಗಿದೆ.

ಕಾನೂರು ಹೆಗ್ಗಡಿತಿಯ ಕಥೆ ''ಕೆಲವೊಂದು ಪಾತ್ರಗಳ ಕಥೆ ಮಾತ್ರವಾಗಿರದೆ ಇಡೀ ಒಂದು ಜೀವನಕ್ರಮದ ಕಥೆಯೂ ಆಗಿದೆ. ಆದ್ದರಿಂದ ವಿಸ್ತಾರ ಅನಿವಾರ್ಯ ಅಗತ್ಯ'' ಎನ್ನುತ್ತಾರೆ. ಆ ವಿಸ್ತಾರವನ್ನು ಓದುಗರು ಸುಲಭವಾಗಿ ಗ್ರಹಿಸುವಂತೆ ಅದನ್ನು ನಾಲ್ಕು ಕತೆಗಳೆಂದು ವಿಂಗಡಿಸಿ ಕೇಂದ್ರಪಾತ್ರ ಚಂದ್ರಯ್ಯಗೌಡರದೆಂದು ತೋರಿಸಿದ್ದಾರೆ. ''ಅನೇಕ ಮಹತ್ವದ ಘಟನೆಗಳಿಗೆ ಸನ್ನಿವೇಶಗಳಿಗೆ ಚಂದ್ರಯ್ಯಗೌಡರ ಸ್ವಭಾವವೇ ಕಾರಣ'' ''ಇಲ್ಲಿಯ ಪ್ರಕೃತಿಯನ್ನು ಕಾದಂಬರಿಯಲ್ಲಿಯ ಅತ್ಯಂತ ಮಹತ್ವದ ಪಾತ್ರ ಎಂದು ನಿಸ್ಸಂಕೋಚವಾಗಿ ಹೇಳಬೇಕು'' ಏಕೆಂದರೆ ''ಇಲ್ಲಿ ಚಿತ್ರಿತವಾದ ಜೀವನಕ್ರಮ ಈ ಆವರಣದಲ್ಲಿಯಲ್ಲದೆ ಬೇರೆಡೆಯಲ್ಲಿ ನಡೆಯಲಾರದು'' ''ಕಾಡಿನಲ್ಲಿ ನೆಲೆಸಿರುವ ಪಶುಗಳ ಮಧ್ಯದಲ್ಲಿ ಮನುಷ್ಯನು ಬಾಳಬೇಕಾದರೆ'' ಅವರಿಬ್ಬರ ನಡುವೆ ''ನಿತ್ಯವೈರದ ನಿಕಟ ಸಂಬಂಧವೇರ್ಪಟ್ಟಿರುತ್ತದೆ...'' ಹೀಗೆ ''ಕಾಡುಗಳ ಮಧ್ಯದಲ್ಲಿಯ ಬಾಳಿಗೆ ಧೈರ್ಯ ಸಾಹಸಗಳು, ಕ್ರೌರ್ಯಕಾಠಿಣ್ಯಗಳು, ಈರ್ಷ್ಯೆ ಹಟಗಳು, ಅನ್ನಪಾನಾದಿಗಳ ಬಗೆಯಲ್ಲಿ ತೀವ್ರವಾದ ಆಸಕ್ತಿಗಳು ಅಂಟಿಕೊಂಡೇ ಬೆಳೆಯುತ್ತವೆ.'' ಇದಕ್ಕೆ ಬೇರೆ ಬೇರೆ ಪಾತ್ರಗಳ ಬೇರೆಬೇರೆ ಘಟನೆಗಳ ನಿದರ್ಶನಗಳನ್ನು ತೋರಿಸುತ್ತಾರೆ.

ಇನ್ನೊಂದು ರೀತಿಯಲ್ಲಿ ಈ ಕಾದಂಬರಿ 'ಎರಡು ಮದುವೆಗಳ ಕತೆ'. ''ನಡೆಯಬಾರದ್ದಾದರೂ ನಡೆದು ದುರಂತದಲ್ಲಿ ಕೊನೆಗೊಂಡ ಮದುವೆ ಒಂದು. ನಡೆಯಬೇಕಿದ್ದರೂ, ನಡೆಯಬಹುದಾಗಿ, ನಡೆಯದೇ ಹೋಗಿ, ದುರಂತದ ಬದಲು ಒಂದು ಬಗೆಯ ಸಿದ್ಧಿಯಲ್ಲಿ ಕೊನೆಗೊಳ್ಳುವುದು ಇನ್ನೊಂದು.'' ''ಒಂದು ಮನೆಯ ಬಾಳು ಒಡೆಯುತ್ತದೆ ; ಅದು ಮತ್ತೆ ಒಂದುಗೂಡುವಂತಾಗುತ್ತದೆ ಎನ್ನುವುದು ಇಡೀ ಕಾದಂಬರಿಯಲ್ಲಿಯ ಘಟನಾವಳಿಯ ಸಾರಾಂಶ. ಮನೆತನವನ್ನು ಒಡೆದ ದುಷ್ಟಶಕ್ತಿಗಳು ತಮ್ಮ ದುಷ್ಟತನಕ್ಕೆ ತಾವೇ ಬಲಿಯಾಗಿ ಇಲ್ಲದಾಗುತ್ತವೆ....'' ''ಇಷ್ಟು ವಿಸ್ತಾರವಾದ ಕಾದಂಬರಿ ಇಷ್ಟೊಂದು ಮಟ್ಟಿಗಿನ ಅಚ್ಚುಕಟ್ಟಾದ ಬಂಧವನ್ನು ಪಡೆದಿರುವುದು ತಂತ್ರದ ದೃಷ್ಟಿಯಿಂದ ಒಂದು ಅಪೂರ್ವಸಾಧನೆ ಎಂದೇ ಹೇಳಬೇಕು'' ಎಂಬ ಪ್ರಶಂಸೆಯ ಮಾತನ್ನೇ ಇನಾಮದಾರರ ವಿಮರ್ಶೆಯ ತಂತ್ರವನ್ನು ಕುರಿತೂ ಹೇಳಬಹುದು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಸಾರಸಂಗ್ರಹ ಇನ್ನೂ ಕಷ್ಟವಾದದ್ದು : "ಬೃಹತ್ಕಾದಂಬರಿಯ ವಿಪುಲವೈವಿಧ್ಯ ಓದುಗರಲ್ಲಿ ಅಗತ್ಯವಾಗಿ ನಡೆಯಬೇಕಾದ ಪುನಃ ಸೃಷ್ಟಿಕಾರ್ಯಕ್ಕೆ ಮಹದಾತಂಕವಾಗುತ್ತದೆ." ಆದರೆ ಅದರಲ್ಲಿಯೂ ಸುಖಾನುಭವವಿಲ್ಲದೆ ಇಲ್ಲ; "ಅದರಲ್ಲಿಯ ವಿಸ್ತಾರ ಮತ್ತು ವೈವಿಧ್ಯ ಇವೆರಡೂ ಸೇರಿ ಉಂಟುಮಾಡುವ ಒಂದು ಬಗೆಯ ಸಮೃದ್ಧ ಜೀವನಾನುಭವದ ಭಾವನೆ"ಯೇ ಆ ಸುಖಾನುಭವ. "ಕಥೆಯ ತಂತ್ರ ಅರ್ಥವಂತಿಕೆಯ ಸಾಧನ" ಎಂದು ಹೇಳಿ ಅದರ ರಚನೆಯನ್ನು ಹತ್ತು ಎಳೆಗಳಾಗಿ ಬಿಡಿಸುತ್ತಾರೆ. "ಐದು ಕಥೆಗಳಲ್ಲಿ ಮದುವೆಯ ಅಪೇಕ್ಷೆ, ಪ್ರಯತ್ನ ಮತ್ತು ಸಫಲತೆಗಳು ಮುಖ್ಯ ವಿಷಯಗಳಾಗಿವೆ. ಉಳಿದ ಐದರಲ್ಲಿ ವೈವಾಹಿಕ ಹಾಗೂ ವಿವಾಹ ಬಾಹಿರವಾದ ಸಂಬಂಧಗಳನ್ನೊಳಗೊಂಡ ಇತರ ವಿಷಯಗಳು ಆಸಕ್ತಿಯ ಕೇಂದ್ರಗಳಾಗುತ್ತವೆ." ಈ ಹತ್ತು ಕಥೆಗಳಲ್ಲಿ ಮೂರನ್ನು ಪ್ರಮುಖವಾದುವೆಂದು ಗುರುತಿಸಿ ಹತ್ತು ಕತೆಗಳ ನಡುವಿನ ಸಂಬಂಧಗಳನ್ನು ವಿವರಿಸುತ್ತಾರೆ.

ಆಮೇಲೆ ಕಾನೂರು ಕಥೆ ಮಾಡಿದ್ದನ್ನೇ ಇನ್ನಷ್ಟು ವಿಸ್ತಾರವಾಗಿ ಮಾಡುತ್ತದೆ ಎನ್ನುವ, "ಒಂದಿಲ್ಲೊಂದು ಬಗೆಯಲ್ಲಿ ಹೆಣ್ಣು ಗಂಡುಗಳ ಸಂಬಂಧ"ದ ಚಿತ್ರಣವನ್ನು ಕಾಣುವ, "ಸಾಮಾಜಿಕ ಜೀವನದಲ್ಲಿಯ ಸ್ತರಗಳನ್ನು ಮನುಷ್ಯ ಮೇಲೆಮೇಲೇರಿದಂತೆ ಆತನ ಬದುಕು... ಕೃತಕ ಮೌಲ್ಯಗಳಿಗೆ ಬಲಿಯಾಗುತ್ತದೆ" ಎಂದು ಪ್ರತಿಪಾದಿಸುವ ಮೂರು ವಿಧದ ವಿಮರ್ಶೆಗಳನ್ನು ಸಯುಕ್ತಿಕವಾಗಿ ನಿರಾಕರಿಸಿ, "ಮನುಷ್ಯ ಜೀವನದ ವಿಸ್ತಾರವನ್ನು, ವೈಚಿತ್ರ್ಯವನ್ನು, ವೈವಿಧ್ಯವನ್ನು ಚಿತ್ರಿಸುವುದು ಕಾದಂಬರಿಯ ಉದ್ದೇಶವನ್ನು ರೂಪಿಸುವ ದೃಷ್ಟಿ" ಎಂದು ವಿಸ್ತಾರವಾಗಿ ಪ್ರತಿಪಾದಿಸುತ್ತಾರೆ. ಕುವೆಂಪುರವರೇ ಹೇಳಿದ "ಯಾವುದಕ್ಕೂ ಮೊದಲಿಲ್ಲ, ಯಾವುದಕ್ಕೂ ತುದಿಯಿಲ್ಲ, ಯಾವುದೂ ಎಲ್ಲಿಯೂ ನಿಲ್ಲುವದೂ ಇಲ್ಲ" ಎಂಬ ಮಾತನ್ನೇ ಸೂತ್ರವಾಗಿಟ್ಟುಕೊಂಡು ಅದನ್ನೊಂದು ಕಲಾಕೃತಿಯಲ್ಲಿ ನಿರೂಪಿಸಿದ ಕುಶಲಕರ್ಮವನ್ನು ವರ್ಣಿಸಿದ್ದಾರೆ.

ಹೀಗೆ ಎರಡು ಕಾದಂಬರಿಗಳನ್ನೂ ಬೇರೆಬೇರೆಯಾಗಿ ನೋಡಿ ಮೂರನೆಯ ಉಪನ್ಯಾಸದಲ್ಲಿ ಎರಡನ್ನೂ ಒಟ್ಟಾಗಿ ನೋಡಿದ್ದಾರೆ. "ಕಾನೂರಿನಲ್ಲಿಯ ಕಾಡುಗಳು ಅದರಲ್ಲಿಯ ಪಾತ್ರಗಳಿಗೆ ಕ್ರಿಯಾರಂಗ ಮಾತ್ರವಾಗಿರದೆ ಒಂದು ಪ್ರಭಾವಕಾರಿಯಾದ ಶಕ್ತಿಯಾಗಿ ಕಾದಂಬರಿಯ ಕ್ರಿಯೆಯಲ್ಲಿ ಒಂದು ಜೀವಂತ ಪಾತ್ರವಾಗಿ ಕೆಲಸ ಮಾಡುತ್ತದೆ." ಅದೇ 'ಮಲೆಗಳಲ್ಲಿ'ಯ ಉದ್ದೇಶ, ದೃಷ್ಟಿ, ಹೆಚ್ಚು ಆಳವಾದದ್ದೂ, ವಿಸ್ತಾರವಾದದ್ದೂ ಆಗಿದ್ದರಿಂದ "ಪ್ರಕೃತಿಯ ಪ್ರತಿರೂಪವಾದ ಸಹ್ಯಾದ್ರಿ ಕಾನನಶ್ರೇಣಿ ಮನುಷ್ಯನ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿತ್ತು" ಎಂಬ ಕಾದಂಬರಿಯ ವಾಕ್ಯವನ್ನೇ ಉದ್ಧರಿಸುತ್ತಾರೆ. ಎರಡನೆಯ ಕಾದಂಬರಿಯಲ್ಲಿ "ವಿಕೇಂದ್ರಿತವಾದ ತಂತ್ರವನ್ನು ಅಳವಡಿಸಿಕೊಂಡಿದ್ದರಿಂದ ಪರಿಣಾಮ ಏಕಾಗ್ರವಾಗಿ ಒತ್ತರಿಸಿ ಬರುವದಿಲ್ಲ"

ಎಂದೂ, ''ಕೊನೆಯ ಅಧ್ಯಾಯಗಳಲ್ಲಿ ಓದುಗರ ಆಸಕ್ತಿ ಇಳಿಮುಖವಾಗುತ್ತ ನಡೆಯುತ್ತದೆ. ಇಳಿಮುಖವಾದ ಗತಿಯಲ್ಲಿಯೇ ಮುಕ್ತಾಯವಾಗುತ್ತದೆ'' ಎಂದೂ ತಿಳಿಸಿದ್ದಾರೆ. ಕಾದಂಬರಿಯಲ್ಲಿ ವಿವೇಕಾನಂದರ ಬಗೆಯಲ್ಲಿ ಬರುವ ವಿಚಾರಗಳು, ಜನಗಳ ಮೂಢತನದ ದುರ್ಲಾಭ ಪಡೆಯುವ ಪುರೋಹಿತವರ್ಗ, ಪಾದ್ರಿಗಳಂಥವರು, ಮೋಸದ ಸಾಹುಕಾರಿಕೆಯನ್ನು ಮಾಡಿ ಸಿರಿವಂತರಾಗುತ್ತಿದ್ದ ಘಟ್ಟದ ಕೆಳಗಿನವರು ಮುಂತಾದವರನ್ನು ಕುರಿತ ಕಟುವಿಮರ್ಶೆಯ ಮಾತುಗಳು, ಅತೀಂದ್ರಿಯ ಪ್ರಜ್ಞೆಗೆ ಸಂಬಂಧಿಸಿದಂತೆ ಬರುವ ಅನೇಕ ಮಾತುಗಳು, ಕಥಾನಕದ ಬೆಳವಣಿಗೆಗೆ ಹೊರತಾಗಿ ನಿಂತು ಕಾದಂಬರಿಕಾರರ ಮಾತುಗಳಾಗಿಯೇ ಉಳಿಯುತ್ತವೆ'' ಎಂದು ತೋರಿಸುತ್ತಾರೆ.

ಎರಡೂ ಕಾದಂಬರಿಗಳಲ್ಲಿ ಒಟ್ಟು ನಿರೂಪಿತವಾಗುವ ಕಾಲ ''ಕಳೆದ ಶತಮಾನದ ಕೊನೆಯ ಎರಡು ದಶಕಗಳು ಮತ್ತು ಈ ಶತಮಾನದ ಮೊದಲ ಎರಡು ದಶಕಗಳು ನಮ್ಮ ನಾಡಿನ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳನ್ನುಂಟುಮಾಡಿದ ಕಾಲಾವಧಿ'' ಎಂದು ಕಾದಂಬರಿಗಳ ಐತಿಹಾಸಿಕ ಮಹತ್ವವನ್ನೂ ''ಮನುಷ್ಯ ಜೀವನದ ಒಂದು ವಿಸ್ತಾರವಾದ ದರ್ಶನ ಅಂಥವರ ಮೂಲಕ ಒಡಮೂಡಿ ನಿಲ್ಲುವ ಒಂದು ಜೀವನ ದೃಷ್ಟಿ'' ಗಳಿಂದಾಗಿ ಅವುಗಳ ಸಾರ್ವಕಾಲಿಕ ಮಹತ್ವವನ್ನೂ ಎತ್ತಿಹಿಡಿಯುತ್ತಾರೆ.

ಆನ್ವಯಿಕ ವಿಮರ್ಶೆಯ ಇನ್ನೆರಡು ಉತ್ತಮ ಕೃತಿಗಳು ಎರಡು ಮುನ್ನುಡಿಗಳು : ಕೆರೂರು ವಾಸುದೇವಾಚಾರ್ಯರ 'ಇಂದಿರಾ' ಮತ್ತು 'ಯದುಮಹಾರಾಜ' ಎಂಬುವದರ ಪುನರ್ಮುದ್ರಣಗಳಿಗೆ ಬರೆದವು. 'ಇಂದಿರಾ' ಕಾದಂಬರಿಯ ಮುನ್ನುಡಿಯ ನಲವತ್ತ ಮೂರು ಪುಟಗಳಲ್ಲಿ ಗಿಡಿದು ತುಂಬಿದ ಇತಿಹಾಸ ಮೀಮಾಂಸೆ ವಿಮರ್ಶೆಗಳ ವಿಸ್ತಾರವನ್ನು ನೋಡಿದಾಗ 'ಸಿದ್ಧಹಸ್ತವೆಂದರೆ ಇದು' ಎನ್ನಬೇಕಾಗುತ್ತದೆ. ಇದರಲ್ಲಿ 19ನೆಯ ಶತಮಾನದಲ್ಲಿಯ ಕನ್ನಡ ಕಾದಂಬರಿಗಳ ಇತಿಹಾಸವಿದೆ, ಭಾಷೆಯ ನಿರೂಪಣವಿದೆ, ವಾಸುದೇವಾಚಾರ್ಯರ ಎಲ್ಲ ಕಾದಂಬರಿ ನೀಳ್ಗತೆ ಪತ್ರಿಕಾಲೇಖನಗಳ ಪರಿಚಯವಿದೆ, ಅಂದಿನ ರಾಜಕೀಯ ಸಾಮಾಜಿಕ ಪರಿಸ್ಥಿತಿಗಳ ವಿವರಗಳಿವೆ ; ಅವರ ಜೀವನ, ಸಾಂಸ್ಕೃತಿಕ ಹಿನ್ನೆಲೆಗಳ ವಿವರಗಳಿವೆ ; ಆಮೇಲೆ 'ಇಂದಿರಾ' ಕಾದಂಬರಿಯ ಕತೆ, ಪಾತ್ರಕಲ್ಪನೆ, ರಚನಾವಿಧಾನಗಳ ಸಮಗ್ರ ವಿಮರ್ಶೆಯಂತೂ ಇದ್ದೇ ಇದೆ. ಈ ವಿಷಯಗಳನ್ನೆಲ್ಲ ಸ್ವತಂತ್ರವಾಗಿ ಓದಿಕೊಂಡವರಿಗೂ ಕೂಡ ಇದೊಂದು ಅಡಕವಾದ ಜ್ಞಾಪಕ ಟಿಪ್ಪಣಿಗಳಂತೆ ಉಪಯುಕ್ತವಾಗಬಲ್ಲದು. ಹಾಗೆಯೇ 'ಯದುಮಹಾರಾಜ'ದ ಮುನ್ನುಡಿಯಲ್ಲಿ ವಾಸುದೇವಾಚಾರ್ಯರಿಗೆ ಲಭ್ಯವಿದ್ದ ಐತಿಹಾಸಿಕ ದಾಖಲೆ ಮತ್ತು ವದಂತಿಗಳು, ಇಂದು ಲಭ್ಯವಿರುವ ದಾಖಲೆಗಳು ಎಲ್ಲವನ್ನೂ ವಿವರಿಸಿ, ಲಭ್ಯವಿದ್ದ ಮೂರೇ ಅಂಶಗಳಿಂದ ವಿಸ್ತಾರವಾದ 22 ಅಂಶಗಳ ಕತೆಯನ್ನು ಕಟ್ಟಿದ ವಾಸುದೇವಾಚಾರ್ಯರ ಭಾವಯಿತ್ರೀ ಕಾರಯಿತ್ರೀ ಪ್ರತಿಭೆಗಳ ವೈಭವವನ್ನು ಮಂದಟ್ಟಾಗಿಸುತ್ತಾರೆ.

ಶ್ರೀನಿವಾಸರ 'ಶ್ರೀರಾಮಪಟ್ಟಾಭಿಷೇಕ'ವನ್ನು ಕುರಿತ ಸಮಾಲೋಕನ ಆ ಕೃತಿಯ ವೈಶಿಷ್ಟ್ಯವನ್ನು ಎತ್ತಿತ್ತಾಣಿಸುವ ರಚನೆ. ''ರಾಮಾಯಣದ ಕಥೆಯನ್ನು ತುಣುಕು ತುಣುಕಾಗಿ ಬೇರೆಬೇರೆಯವರಿಂದ ಹೇಳಿಸುವದು ಕೇವಲ ರೀತಿಯ ನಾವೀನ್ಯಕ್ಕಾಗಿಯಲ್ಲ ಎನ್ನುವದು ನೆನೆಯಬೇಕಾದ ಸಂಗತಿ'' ಎಂದು ಹೇಳಿ, ಅದರಿಂದ ಸಾಧಿಸಲಾದ ವಿಶಿಷ್ಟ ಪರಿಣಾಮವನ್ನು ಅವತರಣಿಕೆಗಳನ್ನು ಕೊಟ್ಟು ಬಣ್ಣಿಸಿದ್ದಾರೆ. ಇದರಿಂದ ಓದುಗರಿಗೆ ಒಟ್ಟು ಕೃತಿಯ ವಸ್ತು, ರಚನೆ, ಶೈಲಿಗಳ ಒಪ್ಪವಾದ ಕಲ್ಪನೆ ಬರುವಂತಿದೆ. ''ಅತಿಮಾನುಷವೆನ್ನ ಬಹುದಾದ ಎಲ್ಲ ಸಂದರ್ಭಗಳನ್ನೂ ದೂರವಿರಿಸಿ ಸಹಜವೆನಿಸಬಹುದಾದ ರೀತಿಯಲ್ಲಿ ಇಡೀ ರಾಮಾಯಣದ ಕಥೆಯನ್ನು ಹೇಳುವ ಕನ್ನಡ ಕಾವ್ಯ ಇದೊಂದೇ. ಆ ದೃಷ್ಟಿಯಿಂದ ಇದು ಒಂದು ಅತ್ಯಂತ ವಿಶಿಷ್ಟವಾದ ಕಾವ್ಯರಚನೆ'' ಎಂಬ ಹೆಗ್ಗಳಿಕೆಯನ್ನು ಇನಾಮದಾರರ ನಿರೂಪಣೆ ಸಂಪೂರ್ಣವಾಗಿ ಸಮರ್ಥಿಸುತ್ತದೆ. ಆದರೂ ಇದನ್ನು ಓದುಗರೂ ವಿಮರ್ಶಕರೂ ಗಮನಿಸಿಯೇ ಇಲ್ಲವೆಂಬ ಆಶ್ಚರ್ಯ(ವಿಷಾದ)ವನ್ನು ಇನಾಮದಾರರೂ, ಹಾಮಾ ನಾಯಕರೂ, ಸ್ವತಃ ಶ್ರೀನಿವಾಸರೂ ಸಹ ವ್ಯಕ್ತಪಡಿಸಿದ್ದಾರೆಂಬುದನ್ನು ನೆನೆಯ ಬೇಕು. ಅದಕ್ಕೆ ಕಾರಣಗಳಿಲ್ಲದೆ ಇಲ್ಲ. ಆದರೆ ಆ ಕಾರಣಗಳನ್ನು ವಿವರಿಸುವುದಕ್ಕೆ ಇಲ್ಲಿ ಸ್ಥಳಾವಕಾಶ ಸಾಲದು. ತನ್ನದೇ ಆದ ರಚನಾಕೌಶಲದಿಂದಲೂ, ಪಾತ್ರಪರಿಕಲ್ಪನೆ ಯಿಂದಲೂ, ಸುಲಲಿತನಡೆಯ ಸರಳ ರಗಳೆಯಿಂದಲೂ ಈ ಕಾವ್ಯಕ್ಕೆ ಕನ್ನಡಸಾಹಿತ್ಯದಲ್ಲಿ ಶಾಶ್ವತವಾದ ಸ್ಥಾನವಿದೆಯೆಂದರೆ ಸಾಕು.

ಇನ್ನುಳಿದ 'ಆಲೋಕ' ಸಂಕಲನದಲ್ಲಿ ಏಳು ಪ್ರಬಂಧಗಳಿವೆ. ''ಕೊನೆಯದೊಂದನ್ನು ಉಳಿದು ಎಲ್ಲವೂ ಕಾದಂಬರೀ ಸಾಹಿತ್ಯಪ್ರಕಾರಕ್ಕೇ ಸಂಬಂಧಿಸಿದುವಾಗಿವೆ..... ಹಾಗೆ ಆಯ್ಕೆಯನ್ನು ಬುದ್ಧಿಪೂರ್ವಕವಾಗಿಯೇ ಮಾಡಲಾಗಿದೆ.'' ಯೋಜನೆ ತುಂಬ ಚೆನ್ನಾಗಿದೆ. ಆದರೆ ಅದರಲ್ಲಿ 'ರಾಜ್ಯಗಳ ಅವನತಿ'ಯ ಎರಡು ಕಾದಂಬರಿಗಳನ್ನು ಸೇರಿಸಿ ''ಜೀವನ ಸಂಸ್ಕಾರ''ದ ಎರಡನ್ನು ಬಿಟ್ಟಿದ್ದೇಕೆ ? ಅವನ್ನೂ ವಾಸುದೇವಾಚಾರ್ಯರ ಕಾದಂಬರಿಗಳ ಮುನ್ನುಡಿಗಳನ್ನೂ ಕಾರಂತರ 'ಚೋಮನದುಡಿ', 'ಮರಳಿ ಮಣ್ಣಿಗೆ' ಮತ್ತು 'ಅಳಿದ ಮೇಲೆ' ಇವುಗಳ ಸಮೀಕ್ಷೆಗಳನ್ನೂ ಸೇರಿಸಿದ್ದರೆ ಈ ಸಂಕಲನ ಕಾದಂಬರಿ ಸಾಹಿತ್ಯ ಪ್ರಕಾರದ ಅಧ್ಯಯನಕ್ಕೆ ಸ್ವಯಂಪೂರ್ಣವಾದ ಒಂದು ಕೈಪಿಡಿಯಾಗುತ್ತಿತ್ತು. ಅವಿಲ್ಲದೆ ಈ ಸಂಕಲನ ಅಪೂರ್ಣವೆನಿಸುತ್ತದೆ.

ಇನಾಮದಾರರ ಈಚಿನ ಪ್ರಕಟಿತ ಕೃತಿಗಳು ಎರಡು : 1. ''ಗೋವಿಂದ ಪೈ''- ಇಂಗ್ಲಿಷಲ್ಲಿದೆ ; 2. ''ಬಿ.ಎಂ.ಶ್ರೀ. ಬದುಕು ಬರೆಹ''- ಕನ್ನಡದಲ್ಲಿದೆ. (ರಾಜ್ಯ ಸಾಹಿತ್ಯ ಅಕಾಡೆಮಿಗೆ ಬಿ.ಎಂ.ಶ್ರೀ. ಶತಮಾನೋತ್ಸವಕ್ಕಾಗಿ ಬರೆದುಕೊಟ್ಟಿದ್ದು ಇದರದೇ ಸಂಕ್ಷೇಪವೆಂದು ಹೇಳುವದರಿಂದ ಅದನ್ನಿಲ್ಲಿ ಪ್ರತ್ಯೇಕವಾಗಿ ಗಣಿಸಿಲ್ಲ.) ಹಿಂದೆ ''ಗೋವಿಂದ ಪೈಗಳ ಕಾವ್ಯ'' ಎಂಬ ಪ್ರಬಂಧವನ್ನು ಬರೆದ ಇನಾಮದಾರರಿಗೆ ಇಲ್ಲಿಯ

120 ಪುಟಗಳ ಅವಕಾಶದಲ್ಲಿ ಅಡಚಣೆ ಎನಿಸಬೇಕಿರಲಿಲ್ಲ. ಏಕೆಂದರೆ ಕಾವ್ಯವನ್ನು ಬಿಟ್ಟು ಪೈಗಳ ಇನ್ನಿತರ ಬರಹಗಳ ಪರಿಚಯವನ್ನು ವಿಸ್ತಾರವಾಗಿ ಮಾಡುವದು ಸಾಧ್ಯವಿಲ್ಲ. ಸಂಕ್ಷೇಪವಾಗಿ ಮಾಡಲು ಕೆಲವೇ ಪುಟಗಳು ಸಾಕು. ಆದರೆ ಇಲ್ಲಿ ಕಾವ್ಯದ ಪರಿಚಯಕ್ಕೆ ವಿನಿಯೋಗಿಸಿರುವಷ್ಟು ಪುಟಗಳನ್ನು ಇತರ ಬರಹಗಳ ಪರಿಚಯಕ್ಕೆ ವಿನಿಯೋಗಿಸ ಲಾಗಿದೆ. ಇದರ ಪ್ರಯೋಜನವೇನೆಂಬುದು ತಿಳಿಯುವದಿಲ್ಲ. 'ನೋಹ' ನಾಟಕ ಗಳೆಂದರೇನೆಂಬುದನ್ನು ಹೇಳಿ ಅವುಗಳ ಕತೆಯನ್ನು ಹೇಳಿದರೆ ಅಲ್ಲಿ ಪೈ ಅವರ ವಿಶಿಷ್ಟ ಕಾರ್ಯದ ಯಾವ ಕಲ್ಪನೆಯೂ ಬರುವದಿಲ್ಲ. ಸಂಶೋಧನೆಯಲ್ಲಿ ಅವರ ಕಾರ್ಯದ ಮೌಲಿಕತೆ ಬಾಹುಳ್ಯ ವಿಸ್ತಾರಗಳನ್ನು ತಿಳಿಯುವುದಕ್ಕೆ ಅವನ್ನು ಸುಮ್ಮನೆ ಪಟ್ಟಿ ಮಾಡಿದರೂ ಸಾಕು. ಅದನ್ನು ವಿಸ್ತಾರವಾಗಿ ವರ್ಣಿಸಿದರೆ ಹೆಚ್ಚಿನ ಸಾಧನೆಯೇನೂ ಆಗುವುದಿಲ್ಲ. ಕೊನೆಯ ಐದು ವಾಕ್ಯಗಳಲ್ಲಿ ಹೇಳಿರುವುದನ್ನೇ ಮತ್ತೆ ಮತ್ತೆ ನೂರಿಪ್ಪತ್ತು ಪುಟಗಳಲ್ಲಿ ಹೇಳಿದಂತೆ ಭಾಸವಾಗುತ್ತದೆ ; ಏಕೆಂದರೆ ಅಲ್ಲಿಯ ಯಾವ ಹೇಳಿಕೆಗಳನ್ನು ಸಮರ್ಥಿಸುವುದಕ್ಕೂ ನಿದರ್ಶನಗಳನ್ನು ಕೊಟ್ಟಿಲ್ಲ. ಪೈ ಪದ್ಯರಚನೆಯ ಲಯಗತಿಗಳ ಕಲ್ಪನೆಯನ್ನು ಭಾಷಾಂತರಿಸುವದು ಸಾಧ್ಯವಿಲ್ಲದಿದ್ದರೂ ಅವುಗಳ ಅರ್ಥಗೌರವ ಮತ್ತು ಕಲ್ಪನಾವೈಖರಿಗಳನ್ನು ಭಾಷಾಂತರದಲ್ಲಿ ತೋರಿಸುವದು ಸಾಧ್ಯವಿದ್ದಿತ್ತು. ಆದರ ಬದಲಿಗೆ "Loads every line and puts his stamp on it." "Such emotional overemphasis in incident or characterization only collects taxes. It pays no dividends" ಎಂಬಂತಹ ವಾಕ್ಯಗಳು ಸಾರ್ಥಕವೆನಿಸದೆ ವಿಚಿತ್ರವೆನಿಸುತ್ತವೆ.

ಅದೇ 'ಬಿ.ಎಂ.ಶ್ರೀ. ಬದುಕು-ಬರೆಹ' ಶ್ರೀಯವರ ಸ್ಮೃತಿಗೆ ಸಲ್ಲಿಸಿದ ಕಾಣಿಕೆ ಎಂದು ಹೇಳುವದಕ್ಕೆ ಯೋಗ್ಯವಾದ ಕೃತಿ. ವೈಯಕ್ತಿಕ ಸಂಪರ್ಕಕ್ಕೆ ಇನಾಮದಾರರಿಗೆ ದೊರೆತ ಅವಕಾಶಗಳು ಒಂದೆರಡೇ ಆಗಿದ್ದರೂ 'ಶ್ರೀ' ಅವರ ವ್ಯಕ್ತಿತ್ವದ ಘನತೆಯನ್ನು ಬಹುಚೆನ್ನಾಗಿ ಸಂಗ್ರಹಿಸಿದ್ದಾರೆ. ಪ್ರಾರಂಭದ ಪುಟಗಳಲ್ಲಿ ಭಾಷೆ ಕುಂಟುತ್ತ ಸಾಗಿದಂತೆ ಭಾಸವಾಗುತ್ತದೆಯಾದರೂ ಮುಂದೆ ಬರವಣಿಗೆಗೆ ಕಾವೇರಿದಂತೆ ಮೊದಲು ಕಾಣುವ ದುರ್ಬಲ ಪ್ರಯೋಗಗಳು ವಿರಳವಾಗುತ್ತವೆ. ಕೃತಿಯ ಪರಮೋತ್ಕರ್ಷ ಹತ್ತನೆಯ ಖಂಡ ದಲ್ಲಿದೆ ; ಅದು ಇಂಗ್ಲಿಷ್ ಗೀತಗಳನ್ನು ಕುರಿತದ್ದು. 'ಶ್ರೀ'ಯವರ ಆ ಕೃತಿ "ಕನ್ನಡದಲ್ಲಿ ಮಹಾಕಾವ್ಯಗಳ ಬಡಬಂಧುವಿನಂತಿದ್ದ ಭಾವಗೀತೆಗೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಅದು ತನ್ನಷ್ಟಕ್ಕೆಯೇ ಒಂದು ಸ್ವತಂತ್ರವಾದ, ಹೃದ್ಯವಾದ, ಜನಪ್ರಿಯವಾದ ಕಾವ್ಯ ಪ್ರಕಾರವಾಗಿ ಬೆಳೆಯುವಂತೆ ಮಾಡಿತು" ಎಂಬ ಅಭಿಪ್ರಾಯವನ್ನು ಬಹು ಚೆನ್ನಾಗಿ ಸಮರ್ಥಿಸಿದ್ದಾರೆ. ಆ ಸಂಗ್ರಹದಲ್ಲಿಯ 60 ಗೀತಗಳಲ್ಲಿರುವ ವಿಷಯವೈವಿಧ್ಯವನ್ನೂ ಬೇರೆಬೇರೆ ಪ್ರಕಾರಗಳ ವಿಂಗಡಣೆಯನ್ನೂ, ಆಯಾ ಭಾವಗಳಿಗೆ ಸಮರ್ಪಕವಾದ ಹೊಸಹೊಸ ಛಂದೋರೂಪಗಳನ್ನೂ ಸಮರ್ಥವಾಗಿ ವಿವರಿಸಲಾಗಿದೆ. ಹಾಗೇ

ಶ್ರೀಯವರ ಗದಾಯುದ್ಧ , ಅಶ್ವತ್ಥಾಮನ್, ಪಾರಸಿಕರು ರುದ್ರನಾಟಕಗಳನ್ನು ಕುರಿತ ವಿಮರ್ಶೆಯೂ ಇನಾಮದಾರರ ಪಾಂಡಿತ್ಯಕ್ಕೆ ಪೂರಕವಾದುದೇ. ಅದರಲ್ಲಿನ ಮುಖ್ಯವಾದ ಒಂದು ಮಾತು — ''ನಮ್ಮ ಕವಿಗಳು ದುರಂತ ಕಾವ್ಯರಚನೆಗೆ ಮನಸ್ಸು ಮಾಡಲಿಲ್ಲ. ಇದರಿಂದ ಭಾರತೀಯ ಸಾಹಿತ್ಯ ಪರಂಪರೆ ಒಂದು ಮಹತ್ತರವಾದ ಉದಾತ್ತವಾದ ರಸಾನುಭವದ ಬಗೆಗೆ ಎರವಾಗಿದೆ'' ಎನ್ನುವದು. ಇದನ್ನು ಅವರವರ ಜೀವನಾನುಭವಕ್ಕೆ ಸಂಬಂಧಿಸಿದ ಅಭಿಪ್ರಾಯ ಮಾತ್ರವೆಂದು ಹೇಳಬಹುದೇ ಹೊರತು, ತಾತ್ತ್ವಿಕವಾಗಿ ಅದನ್ನೊಂದು ಕೊರತೆ ಎಂದು ಹೇಳಲಾಗುವುದಿಲ್ಲ. ಕರುಣ ರೌದ್ರ ಬೀಭತ್ಸ ಭಯಾನಕ ಎಂಬ ರಸಗಳ ಚರ್ಚೆ ಬೆಳೆದಿರುವದನ್ನು ಗಮನಿಸಿದರೆ ಅಂತಹ ಅನುಭವಕ್ಕೆ ನಮ್ಮ ಪರಂಪರೆ 'ಎರವಾಗಿದೆ' ಎನ್ನುವ ಮಾತು ಅಸಮರ್ಪಕವೆನಿಸುತ್ತದೆ. ಅಂತಹ ರಸಾನುಭವಗಳಿದ್ದರೂ ಕೊನೆಯ ಮಾತು ಅದೇ ಅಲ್ಲ ಎನ್ನುವದು ನಮ್ಮ ಜೀವನ ರೀತಿಯ ವೈಶಿಷ್ಟ್ಯವೆನ್ನಬಹುದು. ''ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನಸ್ಯಾತ್'' ಎಂಬ ಚಿಂತನ ಆರ್ಷೇಯವಾದ್ದು ; ನಿತ್ಯ ವ್ಯವಹಾರದಲ್ಲಿ ಕಂಡುಬರುವಂಥದು. ದುರಂತವೇ ಕೊನೆ ಎನ್ನುವ ದೃಷ್ಟಿ ಶ್ರೀಯವರ ಜೀವನಾನುಭವಕ್ಕೆ ಸಹಜವಾದ ವೈಯಕ್ತಿಕ ಅಭಿಪ್ರಾಯವೆಂದಷ್ಟೇ ಹೇಳಬಹುದು. ಹೀಗೆ ಹೇಳುವುದು ಯಾವ ರೀತಿಯಿಂದಲೂ ಅವರ ಘನತೆಗೆ ಊನವಲ್ಲ. ಅವರು ಸೃಷ್ಟಿಸಿದ ಸಮರ್ಥ ಶಿಷ್ಯಪರಂಪರೆ, ಕರ್ನಾಟಕದ ಏಕೀಕರಣಕ್ಕಾಗಿ ಮಾಡಿದ ಕಾರ್ಯ, ಪ್ರಾಚೀನ ಸಾಹಿತ್ಯವನ್ನು ಜನಪ್ರಿಯವಾಗುವಂತೆ ಮಾಡಿದ ಯತ್ನ, ಸಾಹಿತ್ಯ ಮತ್ತು ಛಂದಸ್ಸಿನಲ್ಲಿ ಮಾಡಿದ ತಲಸ್ಪರ್ಶಿ ಸಂಶೋಧನೆ, ಇಂಗ್ಲಿಷ್ ಗೀತಗಳಿಂದ ಭಾವಗೀತೆಯೆಂಬ ಹೊಸ ಸಾಹಿತ್ಯರೂಪಕ್ಕೆ ಒದಗಿಸಿದ ಮೂಲಧನ — ಇಷ್ಟು ಕಾರ್ಯಗಳೂ ಅವರನ್ನು ಕನ್ನಡ ನವೋದಯ ಸಾಹಿತ್ಯಕ್ಕೆ ಪಿತಾಮಹರೆನ್ನಿಸುವದಕ್ಕೆ ಸಾಕು. ಈ ಘನವಾದ ಕಾರ್ಯಗಳನ್ನು ಇನಾಮದಾರರ ಕೃತಿ ಮನಮುಟ್ಟುವಂತೆ ಚಿತ್ರಿಸುತ್ತದೆ.

20

ಇನಾಮದಾರರ ಬರವಣಿಗೆಯ ವಿಷಯ ಯಾವುದಾಗಿದ್ದರೂ ಆ ಬರವಣಿಗೆ ಓದುವದಕ್ಕೆ ಸುಲಭವೂ ಹೃದ್ಯವೂ ಆಗಿರುತ್ತದೆ. ಆದ್ದರಿಂದ ಅವನ್ನು ಕುರಿತು ಬರೆಯುವವರ ಕೆಲಸ ಹಗುರಾಗುತ್ತದೆ. ಕೃತಿಗಳನ್ನು ಓದದೆ ಇರುವವರಿಗೆ ಎಷ್ಟನ್ನು ಹೇಳುವದು ಎಂಬ ಸಮಸ್ಯೆ ಇರುವದೇ ಇಲ್ಲ. ಒಂದೇ ಸಂಕಲನದಲ್ಲಿ ಲಭ್ಯವಾಗದೇ ಉಳಿದ ಅವರ ಸಣ್ಣ ಪ್ರಬಂಧಗಳನ್ನು ಕುರಿತು ನಾಲ್ಕು ಮಾತು ಬರೆಯುವದಕ್ಕಾಗಿದ್ದರೆ

ಚೆನ್ನಾಗಿತ್ತು; ಅಷ್ಟರಮಟ್ಟಿಗೆ ಇದು ಅಪೂರ್ಣ. ಏಕೆಂದರೆ ಇನಾಮದಾರರ ಬೇರೆ ಯಾವ ಬರಹಗಳಲ್ಲಿಯೂ ಕಾಣದಾದ, ಅವರ ಸ್ವಭಾವದಲ್ಲಿಯ ಒಂದು ಸ್ನಿಗ್ಧವಾದ, ಲಘುವಾದ ಪ್ರವೃತ್ತಿ ಅಲ್ಲಿ ಎದ್ದು ಕಾಣುತ್ತದೆ. ಅವರ ವ್ಯಕ್ತಿತ್ವದ ಬೆಳವಣಿಗೆಯ ದೃಷ್ಟಿಯಿಂದಲೂ ಅದು ಮಹತ್ವದ್ದು. ಆ ಮಾರ್ದವ, ಆ ನಯಗಾರಿಕೆ, ಆ ಉದ್ + ಆಸೀನತೆ (ಎತ್ತರದಲ್ಲಿ ಕುಳಿತು ನೋಡುವ ನಿರ್ಲಿಪ್ತ ದೃಷ್ಟಿ) ಸುಲಭದಲ್ಲಿ ಬಂದುವಲ್ಲ. ಯಾವುದರಿಂದಲೂ ವಿಚಲಿತವಾಗದ ಯಾವುದೊ ಒಂದು ಕೇಂದ್ರ ಅವರ ಅಂತರ್ಯದಲ್ಲಿದೆ ಎಂದು ಕಾಣಬೇಕಾದರೆ ಅವರ ಕೈಬರಹವನ್ನು ನೋಡಬೇಕು. ಅದು ಕಣ್ಣಿಗೆ ಆಪ್ಯಾಯಮಾನ ವಾಗುವಂತೆ ಅದರ ಅರ್ಥವೂ ಮನಸ್ಸಿಗೆ ಆಪ್ಯಾಯಮಾನವಾಗಿದೆ. ಬರವಣಿಗೆ ಅವರ ಬಾಳಿನ ಒಂದು ಯೋಗವೆಂದೇ ಹೇಳಬೇಕು. ''ಸ್ವಕರ್ಮಣಾ ತಮಭ್ಯಚ್ಯಸಿದ್ಧಿಂ ವಿಂದತಿ ಮಾನವಃ'' ಇನಾಮದಾರರ ಜೀವನೋಪಾಯಕ್ಕೆ ಇಷ್ಟವಾದ ವೃತ್ತಿಯೇ ಇದ್ದ ಕಾರಣದಿಂದಲೂ ಅವರ ಸಂತೃಪ್ತ ಸ್ವಭಾವದಿಂದಲೂ, ಸಂತೆಯ ಹೊತ್ತಿಗೆ ಮೂರು ಮೊಳ ನೇಯುವಂತಹ ಬರವಣಿಗೆಯನ್ನು ಅವರು ಎಂದೂ ಮಾಡಲೇ ಇಲ್ಲ. ಬರವಣಿಗೆಯನ್ನು ಆರಂಭಿಸಿದಾಗ ಅದರಿಂದ ಗಣ್ಯವಾದ ಸಂಪಾದನೆ ಸಾಧ್ಯವೆಂದು ಅವರಿಗೆ ಅನ್ನಿಸಿರುವದು ಅಶಕ್ಯ. ಒಂದು ವಿಶಿಷ್ಟ ವಿದ್ವತ್ ವರ್ಗದಲ್ಲಿ ತಮ್ಮ ಗಣನೆಯಾಗಬೇಕು, ಅಲ್ಲಿಯವರ ಪರಿಚಯ ಸಂಪರ್ಕ ಸಾಹಚರ್ಯ ಬೆಳೆಯಬೇಕು, ತಾನು ಕಲಿತ ಮತ್ತು ಕಲಿಸುತ್ತಿದ್ದ ವಿಮರ್ಶೆಯ ಮಾನದಂಡಗಳಿಗೆ ನಿಲ್ಲಬಲ್ಲ ಕೃತಿಗಳನ್ನು ಬರೆಯಬೇಕು ಎಂಬ ಹಂಬಲ, ಪ್ರಯೋಗಬುದ್ಧಿಗಳೂ ಇದ್ದಿರಬಹುದು. ಒಮ್ಮೆ ಆ ಪ್ರಪಂಚದಲ್ಲಿ ಯಶಸ್ವಿಯಾಗಿ ಪ್ರವೇಶಿಸಿದ ಮೇಲೆ ಜನಪ್ರಿಯತೆಯೇ ಒಂದು ಒತ್ತಾಯವಾಗಿ ಬರೆಯಿಸಿತೆಂಬುದನ್ನು ತಮ್ಮ 'ಅರಿಕೆ'ಗಳಲ್ಲಿ ಅನೇಕ ಸಲ ಹೇಳಿದ್ದಾರೆ. ಸೃಜನಶೀಲ ಲೇಖಕರು ತಮ್ಮ ಮನಸ್ಸಿನ ಸ್ಥಿಮಿತವನ್ನು ಕಾಯ್ದುಕೊಳ್ಳುವುದಕ್ಕೆ ಇಂತಹ 'ಒಳಒತ್ತಡ'ಗಳನ್ನು ಪರಿಹರಿಸಿಕೊಳ್ಳಲಿಕ್ಕೆ ಬರೆಯುತ್ತಾರೆಂಬುದು ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧವಾದ ಸತ್ಯ. ಇದು ಇನಾಮದಾರರ ಕೃತಿಗಳ ಕಾಲಾನುಕ್ರಮಕ್ಕೆ ಹೇಗೆ ಹೊಂದುತ್ತದೆಂಬುದನ್ನು ಅಲ್ಲಲ್ಲಿ ಸೂಚಿಸಿದ್ದೇನೆ.

ಪ್ಲೇಟೋನ 'ರಿಪಬ್ಲಿಕ್' ಸಂವಾದದ ಪ್ರಾರಂಭ ಹೀಗಿದೆ :

''ಸೋಕ್ರಟೀಸ್ ಕೇಳುತ್ತಾನೆ : ಸೆಫಾಲಸ್, ನನಗೆ ವಯಸ್ಸಾದವರೊಡನೆ ಮಾತನಾಡುವದು ಬಹು ಇಷ್ಟವಾದದ್ದು. ನಮ್ಮ ಮುಂದೆ ನಡೆದು ಹೋಗಿರುವವರನ್ನು ಅವರು ಕ್ರಮಿಸಿದ ಮಾರ್ಗ ಎಂಥದು ಎಂದು ತಿಳಿಯಬೇಕೆನ್ನುವದು ಸಹಜವಲ್ಲವೆ ?... ಆದರೆ ನಾನು ಕಂಡಂತೆ ಅಂಥವರು ಸೇರಿದಲ್ಲಿ ಅವರು ತಮ್ಮ ಸ್ಥಿತಿಗೆ ಮರುಗುತ್ತಾರೆ. ತಾರುಣ್ಯದಲ್ಲಿ ತಾವು ಅನುಭವಿಸುತ್ತಿದ್ದ ಸುಖಗಳು ಇಂದು ತಮಗೆ ಇಲ್ಲವಾದುವಲ್ಲ ಎಂದು ಕೊರಗುತ್ತಾರೆ. ನಿನ್ನ ಅಭಿಪ್ರಾಯವೇನು ?

ಸೆಫಾಲಸ್ : ನನ್ನ ಅಭಿಪ್ರಾಯ ಸೊಫೋಕ್ಲೀಸನದು. ಅವನನ್ನೊಬ್ಬರು ಕೇಳಿದಾಗ ಅವನೆಂದ — 'ಅಯ್ಯಾ, ಆ ಸುಖೋಪಭೋಗಗಳ ಮಾತು ಬೇಡ. ಅವುಗಳ ದುರ್ದಮ್ಯ ಒತ್ತಡದೊಳಗಿಂದ ಒಮ್ಮೆ ಪಾರಾದೆನಲ್ಲ ಎಂದು ಈಗ ಹಾಯಾಗಿದ್ದೇನೆ.' ಅವನೆಂದದ್ದು ನಿಜವೆಂದು ನನಗೆ ತೋರುತ್ತದೆ. ಈ ಸುಖಾಪೇಕ್ಷೆಗಳ ಒತ್ತಡದಿಂದ ಪಾರಾದ ಮೇಲೆ ನಾವೆಷ್ಟು ಸ್ವತಂತ್ರರು, ನಾವೆಷ್ಟು ಸುಖಿಗಳು ಎಂಬ ಶಾಂತಭಾವ ಸಣ್ಣ ಲಾಭವಲ್ಲ.

ಸೋಕ್ರಟೀಸ್ : ನೀನನ್ನುವದು ನಿಜ. ಆದರೆ ಅದಕ್ಕೆ ಬೇರೆಯವರೇನೆನ್ನುತ್ತಾರೆ ಗೊತ್ತೆ ? ನೀನು ಸುಖಿಯಾಗಿರುವದಕ್ಕೆ ಕಾರಣ ನೀನು ಗಳಿಸಿದ ವಿಪುಲವಾದ ಸಂಪತ್ತು; ಅದಿಲ್ಲದವರು ಅಂತಹ ಶಾಂತಿಯ ಮಾತನ್ನಾಡರು.

ಸೆಫಾಲಸ್ : ಅದು ನನಗೆ ಗೊತ್ತು : ಅವರೆನ್ನುವದು ಪೂರ್ಣ ಸತ್ಯವಲ್ಲ. ಒಬ್ಬ ಮನುಷ್ಯನು ಎಷ್ಟೇ ಯೋಗ್ಯನಾದರೂ ದರಿದ್ರನಾಗಿದ್ದರೆ ಸುಖಿಯಾಗಲಾರನೆಂಬುದು ನಿಜ. ಆದರೆ ಹಣವಿದ್ದವರೆಲ್ಲರೂ ಸುಖಿಗಳಾಗಿರುವದಿಲ್ಲವಲ್ಲ ! ಆದ್ದರಿಂದ ಹಣವೂ ಬೇಕು, ಗುಣವೂ ಬೇಕು.

ಸೋಕ್ರಟೀಸ್ : ನಿಜ. ಈಗ ಹೇಳು, ಕೈತುಂಬ ಹಣವಿರುವದರಿಂದ ಆಗುವ ಎಲ್ಲಕ್ಕೂ ಹೆಚ್ಚಿನ ಪ್ರಯೋಜನ ಯಾವುದು ?

ಸೆಫಾಲಸ್ : ಇಲ್ಲಿ ನನ್ನ ಮಾತು ಎಲ್ಲರಿಗೂ ಒಪ್ಪಿಗೆಯಾಗಲಿಕ್ಕಿಲ್ಲ. ಕೆಲವರಿಗೆ ಅಂತ್ಯ ಸಮೀಪಿಸಿದಂತೆ ಮರಣಾಂತರದ ಜನ್ಮಾಂತರದ ಚಿಂತೆ ಆರಂಭವಾಗುತ್ತದೆ. ಈ ಹಣವನ್ನು ಗಳಿಸುವಾಗ ಯಾರಿಗೆ ಏನು ಅನ್ಯಾಯ ಮಾಡಿದೆ, ಕಷ್ಟಕೊಟ್ಟೆ ಅದಕ್ಕೆ ನಾನು ಯಾವ ಶಿಕ್ಷೆ ಎದುರಿಸಬೇಕಾದೀತು ಎಂದೆಲ್ಲ ಗಾಬರಿಯಾಗುತ್ತದೆ. ಅದೇ ತನ್ನ ಸಂಪಾದನೆಯೆಲ್ಲ ಧರ್ಮದಿಂದ ಮಾಡಿದ್ದು ಎಂಬ ವಿಶ್ವಾಸವಿರುವವನಿಗೆ ಇಂತಹ ಚಿಂತೆಗಳಿರುವುದಿಲ್ಲ. ಅಂಥವನಿಗೆ ತನ್ನ ಸಂಪತ್ತಿನಿಂದ ಒಂದು ವಿಧದ ಸ್ವಾತಂತ್ರ್ಯ ಸಮಾಧಾನಗಳಿರುತ್ತವೆ. ತಾನು ಯಾರನ್ನೂ ವಂಚಿಸಬೇಕಿಲ್ಲ, ಸುಳ್ಳು ಹೇಳಬೇಕಿಲ್ಲ, ಕೊಟ್ಟವರನ್ನು ತಪ್ಪಿಸಿ ಓಡಬೇಕಿಲ್ಲ, ದೇವತೆಗಳಿಗೆ ಸಲ್ಲಿಸಬೇಕಾದದ್ದನ್ನು ನಿಲ್ಲಿಸಿಕೊಂಡೆನೆಂಬ ಭೀತಿಯಿಲ್ಲ ಎಂದುಕೊಂಡು ಸುಖಿಯಾಗಿರುತ್ತಾನೆ.''

ಸೆಫಾಲಸನ ಈ ಯೋಗವನ್ನು ಇನಾಮದಾರರು ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದ ಅವರ ಬರವಣಿಗೆಯಲ್ಲಿ ಯಾವ ರಾಗದ್ವೇಷಗಳಾಗಲಿ, 'ಸಾತ್ವಿಕ' ಸಂತಾಪವಾಗಲಿ, 'ಇಜಂ'ಗಳಾಗಲಿ, 'ಕಮಿಟ್‌ಮೆಂಟ್'ಗಳಾಗಲಿ ಎಲ್ಲಿಯೂ ಕಂಡುಬರುವದಿಲ್ಲ. ಅವರ ಸಾಹಿತ್ಯದ ವಿಷಯ ಎಂದೆಂದಿಗೂ ಎಲ್ಲ ಮಹಾಕವಿಗಳಿಗೂ ವಿಷಯವಾದದ್ದೇ – ಮಾನವನ ಅಂತರಂಗ : ಅದು ಯಾವ ಪದ್ಧತಿಯಲ್ಲಿ ಯಾವ ಪ್ರಚೋದನೆಗಳಿಗೆ ಹೇಗೆ

ಸ್ಪಂದಿಸುತ್ತದೆ ಎನ್ನುವುದು. ಈ ವಿಷಯ ಹಳೆಯದೆಂದಿಗೂ ಆಗುವುದಿಲ್ಲ ; ಏಕೆಂದರೆ ಪರಿಸ್ಥಿತಿಗಳೂ ಪ್ರಚೋದನೆಗಳೂ ಒಂದೇ ಸಮನೆ ಬದಲಾಯಿಸುತ್ತಲೇ ಇರುತ್ತವೆ. ಹೀಗೆ ಸಾಹಿತ್ಯದ ರಾಜಮಾರ್ಗದಲ್ಲಿ ಮಹಾಜನಗಳೊಡನೆ ಹೆಜ್ಜೆಹಾಕುತ್ತ, ತಮ್ಮದೇ ಕೃತಿಗಳನ್ನು ರಚಿಸುತ್ತಿದ್ದರೂ ಸರಿ, ಬೇರೆಯವರ ಕೃತಿಗಳ ರಸಾಸ್ವಾದನೆಯನ್ನು ಮಾಡಿಸುತ್ತಿದ್ದರೂ ಸರಿ, ಅವರ ಬರವಣಿಗೆ ಹೀಗೇ ಸಾಗುತ್ತಿರಲಿ ಎಂದು ಹಾರೈಸಿ, ಈ ಸಮೀಕ್ಷೆಯನ್ನು ಮುಗಿಸಬಹುದು.

ಭಾಗ ಮೂರು
ವಿಶ್ವ ಕಾದಂಬರಿ

ಸರ್ವಾಂಟೆಸ್ : 'ಡಾನ್ ಕ್ವಿಕ್ಸೋಟ್'*

ಪ್ರೊ. ಎ. ರಾಮರಾವ್

> ... all tales' tis the saddest - and more sad
> Because it makes us smile........
> ....
> ....'tis his virtue makes him mad
> But his adventures form a sorry sight —
> A sorrier still is the great moral taught
> By that real epic unto all who have thought.
> ....
> Alas! must noblest views, like an old song
> Be for mere fancy's sport, a theme creative,
> A jest, a riddle ; Fame through thick and thin
> And Socrates himself but wisdom's Quixote.
>
> -BYRON

ಡಾನ್ ಕ್ವಿಕ್ಸೋಟ್ — ಆ ಹೆಸರಿನ ಕಾದಂಬರಿಯ ನಾಯಕ – ಜೋಲು ಮೋರೆಯ ವಿಚಿತ್ರ ವರ್ತನೆಯ ವೀರ ; ಅವನ ಅನುಚರ ಸ್ಯಾಂಕೊಪಾನ್ಸ್, ಜೋಲುಹೊಟ್ಟೆಯ ಹೊಟ್ಟೆಬಾಕ. ಸಂದು ಶತಮಾನಗಳೇ ಕಳೆದರೂ ವಿಶ್ವಸಾಹಿತ್ಯದಲ್ಲಿ ಅವರು ಅಳಿಯದೆ ಅಮರರಾಗಿ ಉಳಿದಿದ್ದಾರೆ. ಇವರೊಡನೆ ಒಬ್ಬನ ಕುದುರೆ, ಇನ್ನೊಬ್ಬನ ಕತ್ತೆ. ಇವು ಈಗಲೂ ಜೀವಂತ ಪ್ರಾಣಿಗಳು. ಇವರು ನಮ್ಮನ್ನು ನಗಿಸುತ್ತಾರೆ ; ಕಣ್ಣು ಹನಿದುಂಬುವಂತೆ ಮಾಡುತ್ತಾರೆ. ಅರ್ಥಮಾಡಿಕೊಳ್ಳಲಾಗದ ನಿರ್ಲಕ್ಷ್ಯ ಕ್ರೂರಪ್ರಪಂಚದಿಂದ ಅವರಿಗೆ ಸಿಗುವುದು ಏಟು, ಒದೆತ ಅಷ್ಟೇ. ಆದರೂ ಇವರು ಸಾಹಿತ್ಯ ಪ್ರಪಂಚದ ಕಾಲ್ಪನಿಕ ವ್ಯಕ್ತಿಗಳ ಸಾಲಿನಲ್ಲಿ ನಮ್ಮ ಆಳವಾದ ಪ್ರಜ್ಞೆಗಿಳಿದು ಮಾನವೀಯ ಸನ್ನಿವೇಶಗಳ ಸರ್ವವ್ಯಾಪಿ ಸತ್ಯದ ಸಂಕೇತಗಳಾಗಿ ನಿಲ್ಲುತ್ತಾರೆ.

ಡಾನ್ ಕ್ವಿಕ್ಸೋಟ್ ಕಾವ್ಯವನ್ನು ಸೃಷ್ಟಿಸಿದ ಸರ್ವಾಂಟೆಸ್ ಯುವಕನಲ್ಲ. ಜೀವನದ ಎಲ್ಲ ತರಹದ ಕಷ್ಟಕಾರ್ಪಣ್ಯಗಳನ್ನೂ ಅನುಭವಿಸಿದ ಆಲೋಚನಾಪರ ಮನುಷ್ಯ. ತನ್ನನ್ನು ಮತ್ತು ಪ್ರಪಂಚವನ್ನು ವಾಸ್ತವಿಕ ದೃಷ್ಟಿಯಿಂದ, ವಿವೇಚನಾ ದೃಷ್ಟಿಯಿಂದ ನೋಡಿದ ಬುದ್ಧಿವಂತ. ನಗುತ್ತ ನೋವು ತಿನ್ನುವುದನ್ನು ಕಲಿತಿದ್ದವನು. ಸ್ವತಃ ಧೀರ, ಸಾಹಸಿ ; ನಿರಾಸೆಗೊಂಡ ಭಾವುಕ ಕನಸಿಗ. ತನ್ನ ಆತ್ಮವನ್ನು, ಭಾವನಾಶಕ್ತಿಯನ್ನು ಕಲ್ಪನೆಯ

* 'ಡಾನ್ ಕಿ ಹೋತೆ', 'ಡಾನ್ ಕಿಯೊಟೆ' ಎಂಬ ಉಚ್ಚಾರಣೆಯೂ ಇದೆ ; ಹೆಚ್ಚು ಬಳಕೆಯಲ್ಲಿರುವ ರೂಪವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ.

ಪರಿಹಾಸ್ಯದ ವೀರನಿಗೆ ಧಾರೆಯೆರೆದು ಸ್ಪೆಯಿನ್ ದೇಶದ ಸಂಧಿಕಾಲದ ಅವನತಿಯನ್ನೂ ಯೂರೋಪಿನ ಪುನರುಜ್ಜೀವನ ಕಾಲದ ಮಾನವ ಹಿತನಿಷ್ಠೆಯನ್ನೂ ಈಗಿನ ಕಾಲದ ಧಾರ್ಮಿಕ ಅವ್ಯವಸ್ಥೆಯನ್ನೂ ಒಟ್ಟಾಗಿ ತನ್ನ ಕಥಾನಕದಲ್ಲಿ ಪ್ರತಿಬಿಂಬಿಸುವಂತೆ ಮಾಡಿದ್ದಾನೆ.

ಮಿಗ್ಯುಯೆಲ್ ಡಿ ಸರ್ವಾಂಟೆಸ್ 1547ನೇ ಸೆಪ್ಟೆಂಬರ್ 29 ರಂದು ಜನಿಸಿದ. ತಂದೆ ಒಬ್ಬ ಸಂಚಾರೀ ವೈದ್ಯ. ಸರ್ವಾಂಟೆಸ್ ಮನೆಯವರೊಡನೆ ಊರೂರು ಸುತ್ತುತ್ತ ಸಮಾಜದ ವಿವಿಧ ವರ್ಗಗಳ ಜನರನ್ನು ನೋಡುತ್ತ ಸ್ಪೆಯಿನ್ ದೇಶದ ಚೇತನವನ್ನು ತನ್ನಲ್ಲಿ ಹುದುಗಿಸಿಕೊಳ್ಳುತ್ತ, ಪ್ರತಿ ಅನುಭವದಿಂದಲೂ ತನ್ನ ವ್ಯಕ್ತಿತ್ವವನ್ನು ವಿಶಾಲಗೊಳಿಸುತ್ತ ವಿಕಾಸಗೊಳಿಸುತ್ತ ವಿಲಾಸಗೊಳಿಸುತ್ತ ಹೋದ. 1568ರಲ್ಲಿ ಕಾರ್ಡಿನಲ್ ಅಕ್ವವೀವರ ಸೇವೆಯಲ್ಲಿ ಇಟಲಿ ದೇಶಕ್ಕೆ ತೆರಳಿದ. ಇಟಲಿಯ ಜೀವನ ಮತ್ತು ಇರಾಸ್‌ಮಸ್ ಗ್ರಂಥಗಳ ಅಭ್ಯಾಸದಿಂದ ಸ್ವಾತಂತ್ರ್ಯಾಸಕ್ತಿ ಮತ್ತು ಮಾನವಹಿತನಿಷ್ಠೆ ಅವನನ್ನು ಹುರುಪುಗೊಳಿಸಿದುವು. 1571ರ 'ಲೆಪಾಂಟೊ' ಕದನದಲ್ಲಿ ಹೋರಾಡಿ ತಾನು ರಾಷ್ಟ್ರಕ್ಕೆ, ರಾಜನಿಗೆ ಸಲ್ಲಿಸಿದ ಸೇವೆಗೆ ಪ್ರತಿಫಲ ನಿರೀಕ್ಷಿಸಿ 1575ರಲ್ಲಿ ಸ್ವದೇಶಕ್ಕೆ ಹಿಂದಿರುಗಲು ಹಡಗು ಹತ್ತಿದ. ಆದರೆ ಮಧ್ಯ ದಾರಿಯಲ್ಲಿ ಕಡಲ್ಗಳ್ಳರು ಹಡಗನ್ನು ವಶಪಡಿಸಿಕೊಂಡರು. ಸರ್ವಾಂಟೆಸ್ ಆಲ್ಜಿಯರ್ಸ್‌ಗೆ ಒಯ್ಯಲ್ಪಟ್ಟ ಹಡಗಿನ ಗುಲಾಮನಾಗಿದ್ದ ಅವನನ್ನು 1580ರಲ್ಲಿ ವಿನಾಯಿತಿ ದಂಡ ತೆತ್ತು ನಂಟರು, ಸ್ನೇಹಿತರು ಬಿಡಿಸಿದ ಮೇಲೆ, ಸ್ಪೆಯಿನ್ ದೇಶಕ್ಕೆ ಹಿಂದಿರುಗಿದ. ದುರದೃಷ್ಟವೆಂದರೆ ದೇಶವು ಸರ್ವಾಂಟೆಸ್‌ನನ್ನು ಗುರುತಿಸಲಿಲ್ಲ. ಮನ್ನಣೆ ಕೊಡಲಿಲ್ಲ. ಬಡತನದಲ್ಲಿ ಜೀವನ ನೀಗಬೇಕಾಯಿತು. ಮದುವೆ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಮತ್ತೆ ನೆಲೆಯಿಲ್ಲದ ಜೀವನವನ್ನು ಆರಂಭಿಸಿ ಆರ್ಮುಡಾ ಪಡೆ ಸೇರಿದ. ದೊಡ್ಡವರು ಚಿಕ್ಕವರು, ಮಾನವಂತರು ಅಲ್ಲದವರು, ಪರೋಪಕಾರಿಗಳು ದಗಾಕೋರರು, ಸೂಳೆಯರು ಇತ್ಯಾದಿ ಎಲ್ಲ ವರ್ಗದ ಎಲ್ಲ ತರಹದ ಜನವರ್ಗವನ್ನೂ ಬಹಳ ಹತ್ತಿರದಿಂದ ನೋಡಿ ಅವರ ಜೀವನಕ್ರಮವನ್ನು ಪರಿಚಯಮಾಡಿಕೊಂಡ.

ಈ ವೇಳೆಗೆ ಸರ್ವಾಂಟೆಸ್ ಒಂದು ಗ್ರಾಮೀಣ ಕಾದಂಬರಿ (Pastoral Novel), ಕೆಲವು ಪದ್ಯ, ವಿನೋದ ನಾಟಕ, ಗಂಭೀರ ನಾಟಕ ಇತ್ಯಾದಿ ಬರೆದಿದ್ದ. ಉದಾತ್ತ ಧ್ಯೇಯವಾದ, ಸೌಂದರ್ಯೋಪಾಸನೆ, ವೀರಚಾರಿತ್ರ್ಯ, ಕಲೆ ಒಂದೆಡೆ ಅವನ ಕಥಾವಸ್ತುವಾದವು. ಇನ್ನೊಂದೆಡೆ ಹರಿತವಾದ, ವ್ಯಂಗ್ಯವಾದ ಯಥಾರ್ಥನಿರೂಪಣೆ ಅವನ ಆಕರ್ಷಕ ಶೈಲಿಯಾಯಿತು. ಇವೆರಡರ ಸಂಗಮ 'ಡಾನ್ ಕ್ವಿಕ್ಸೋಟ್' ಕಾದಂಬರಿಯಲ್ಲಿ ಆಗಿದೆ. 1605ರಲ್ಲಿ ಮೊದಲ ಬಾರಿಗೆ ಪ್ರಕಟವಾದ ಅದನ್ನು ಜನತೆ ಆದರದಿಂದ ಸ್ವಾಗತಿಸಿತು. ಸಾಕಷ್ಟು ಹೆಸರು ಬಂದರೂ ಹಣ ಬರಲಿಲ್ಲ. ಸಾಹಿತ್ಯ

ಪ್ರಪಂಚದಲ್ಲಿನ ವಕ್ತಾರರು, ಮುಖಂಡರು ಕಾದಂಬರಿಯ ವಿರುದ್ಧ ಮುಖ ತಿರುಗಿಸಿದರು. ಅವರಿಗೆ ಕೃತಿಯಲ್ಲಿ ಯಾವ ಸತ್ವವೂ ಕಾಣಲಿಲ್ಲ. 1613ರಲ್ಲಿ 'ಎಕ್ಸೆಂಪ್‌ಲರಿ ನಾವೆಲ್ಸ್' ಪ್ರಕಟವಾಯಿತು. 1605 ರಿಂದ 1613ರವರೆಗೆ ಎಂಟು ವರ್ಷಗಳ ಅವಧಿಯಲ್ಲಿ ಡಾನ್ ಕ್ವಿಕ್ಸೋಟ್ ಕಾದಂಬರಿಯ ಎರಡನೆಯ ಭಾಗದ ಚಿಂತನ ನಿರಂತರವಾಗಿ ನಡೆದಿರಬೇಕು. ಆಗ 'ಅವ್‌ಲೆಂಡ' ಎಂಬ ಅಂಕಿತದಲ್ಲಿ ಯಾರೋ 'ಡಾನ್ ಕ್ವಿಕ್ಸೋಟ್'ನ ಖೋಟಾ ಪ್ರಕಟಣೆ ಒಂದನ್ನು ಹೊರತಂದರು. ಇದರಿಂದ ಸರ್ವಾಂಟೆಸ್ ಎರಡನೇ ಭಾಗವನ್ನು ಬೇಗ ಬರೆದು ಮುಗಿಸಿ 1615ರಲ್ಲಿ ಮುದ್ರಿಸಿದ. 1616ರ ಏಪ್ರಿಲ್ 23 ರಂದು ಸಾವು ಸಾಹಿತ್ಯ ಪ್ರಪಂಚದ ಇಬ್ಬರು ಪ್ರತಿಭಾವಂತ ಬರಹಗಾರರನ್ನು ಅಪ್ಪಿಕೊಂಡಿತು. ಸ್ಪೈನಿನ ಸರ್ವಾಂಟೆಸ್ ಮತ್ತು ಇಂಗ್ಲೆಂಡಿನ ಖ್ಯಾತ ನಾಟಕಕಾರ ಷೇಕ್ಸ್‌ಪಿಯರ್. ಆದರೆ ಇಬ್ಬರೂ ತಮ್ಮ ಅಮೂಲ್ಯ ಕೃತಿಗಳಿಂದ ಅಮರರಾಗಿದ್ದಾರೆ.

ಮಧ್ಯಯುಗದ ಅದ್ಭುತ ಘಟನೆಗಳನ್ನೊಳಗೊಂಡ ವೀರರ ಕಥೆಗಳನ್ನು ಓದಿಓದಿ ತಲೆಕೆಡಿಸಿಕೊಂಡ ಕನಸಿಗನ ಸಾಹಸಗಳು 'ಡಾನ್ ಕ್ವಿಕ್ಸೋಟ್' ಕಾದಂಬರಿಯ ಕಥೆ. ಶಕ್ತಿ ಆಧಾರಗಳು, ಪ್ರಜ್ಞೆ ಪ್ರಬಲೇಚ್ಛೆಗಳು ಇಲ್ಲದ ಒಬ್ಬ ರಂಜಕವೀರನ ಕಥೆಯನ್ನು ವಿಡಂಬನಾತ್ಮಕವಾಗಿ ಬರೆವ ಉದ್ದೇಶದಿಂದ ಹೊರಟ ಸರ್ವಾಂಟೆಸ್ ಒಂದು ವಿಶಾಲಸಂಕೇತಾರ್ಥವುಳ್ಳ ಕಾದಂಬರಿಯನ್ನು ರಚಿಸಿದ. ಈ ಕಾದಂಬರಿ ಪ್ರಸಕ್ತ ಕಾಲಕ್ಕೂ ಸಂಗತವಾಗಿದೆ. ಪ್ರಬಲೇಚ್ಛೆ ಒಂದು ಬಿಟ್ಟು ಶಕ್ತಿ, ಮುಂದಾಲೋಚನೆ, ಪ್ರಜ್ಞೆ, ಯೋಗ್ಯ ಹಿನ್ನೆಲೆಗಳಿಲ್ಲದೆ ಸುವರ್ಣಯುಗ ಸ್ಥಾಪಿಸಹೊರಟವರನ್ನು ಇಂದೂ ನಾವು ನೋಡುತ್ತಿಲ್ಲವೆ? ಆದರೆ ಸರ್ವಾಂಟೆಸ್‌ನ ಕಾದಂಬರಿ ಇದೊಂದೇ ವಿಷಯಕ್ಕೆ ಸೀಮಿತವಲ್ಲ. ಅದನ್ನು ಅವಲೋಕಿಸುವ ಮುನ್ನ ಆಗಿನ ಸಾಹಿತ್ಯಕ ಮತ್ತು ಜನಜೀವನದ ಹಿನ್ನೆಲೆಯನ್ನು ಗಮನಿಸೋಣ.

2

ಹದಿನಾರನೆಯ ಶತಮಾನದ ಆದಿಯಲ್ಲಿ ಸ್ಪೈನ್ ಮತ್ತು ಪೋರ್ಚುಗಲ್ ದೇಶದ ಜನರು ಪ್ರಪಂಚದ ನಾನಾ ಪ್ರದೇಶಗಳಿಗೆ ವಲಸೆ ಹೋಗಿ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದರು. ಮಧ್ಯಯುಗದ ಕಲ್ಪನಾಪ್ರಪಂಚ ಕ್ಷಯಿಸುತ್ತಿದ್ದರೂ ನಿಜ ಯಾವುದು, ಕಲ್ಪನೆ ಯಾವುದು ಎಂದು ತಿಳಿಯದೆ, ಅದ್ಭುತ ಮತ್ತು ವಿಚಿತ್ರಕ್ಕೆ ಜನ ಇನ್ನೂ ಹೆಚ್ಚು ಮಾರು ಹೋಗುತ್ತಿದ್ದರು. ಸಮುದ್ರದಾಚೆ ಹೋಗಿ ಬಂದ ನಾವಿಕರ ಕಟ್ಟುಕಥೆಗಳನ್ನು ನಂಬುತ್ತಿದ್ದರು. ಕಿಂಪುರುಷರು, ಜಲಕನ್ಯೆಯರು, ತಲೆಯಿಲ್ಲದ ಮನುಷ್ಯರು, ಬಾಲ ಇದ್ದ ಮನುಜರು — ಎಲ್ಲವನ್ನೂ ನಿಜವೆಂದು ನಂಬುತ್ತಿದ್ದರು.

ಸಾಹಸಚಾರಿತ್ರ್ಯದ ಕಥೆಗಳೂ ಹೇರಳವಾಗಿ ಜನಮನವನ್ನು ಆಕರ್ಷಿಸುತ್ತಿದ್ದವು. ಅದ್ಭುತಗಳು ಸ್ವಾಭಾವಿಕವೆಂಬ ನಂಬಿಕೆ ಪ್ರಚಲಿತವಾಗಿತ್ತು. ನೇಪಲ್ಸ್ ಪಟ್ಟಣ ಮತ್ತು ಫ್ಲಾರೆನ್ಸ್ ನಗರದಲ್ಲಿ ಹೆಂಗಸರು ಪ್ರಾಣಿಗಳನ್ನು ಹೆರುತ್ತಿದ್ದರೆಂಬ ನಂಬಿಕೆ ಕೂಡ ಇತ್ತು! ನಿಜ ಮತ್ತು ನಿಜವಲ್ಲದ್ದು ಎರಡೂ ಬೆರೆತು ಚರಿತ್ರೆಯ ವೇಷದಲ್ಲಿ ಕಲ್ಪನೆ, ಕಲ್ಪನೆಯ ವೇಷದಲ್ಲಿ ಚರಿತ್ರೆ ಮೆರೆಯುತ್ತಿದ್ದವು. ರಾಜನ ಅನುಮತಿಯಿಂದ ಮುದ್ರಿತವಾದ ಪುಸ್ತಕದಲ್ಲಿ ಸುಳ್ಳಿರುವುದಿಲ್ಲವೆಂಬ ನಂಬಿಕೆ ಬಹಳವಾಗಿತ್ತು.

ಕಾನ್‌ಸ್ಟಂಟಿನೋಪಲ್ ತುರುಷ್ಕರ ವಶವಾದಮೇಲೆ (1453) ಅಲ್ಲಿನ ಗ್ರೀಕ್ ವಿದ್ವಾಂಸರು ರೋಮಿಗೆ, ಇಟಲಿ ದೇಶಕ್ಕೆ ಓಡಿಹೋದರು. ಅವರ ಕಲೆ, ಸಾಹಿತ್ಯತತ್ವ, ವಿಮರ್ಶೆ ರೋಮಿನಲ್ಲಿ ಪುರಸ್ಕೃತವಾದವು. ಮಾನವಹಿತ ಸಿದ್ಧಾಂತ ಮತ್ತು ಕಾವ್ಯ ಕಲೆ ಸಂಸ್ಕೃತಿಗಳ ಪುನರುಜ್ಜೀವನ ಪ್ರಾರಂಭವಾಯಿತು. ಇದನ್ನು ಒಂದು ಸಾಂಸ್ಕೃತಿಕ ಅಥವಾ ಬೌದ್ಧಿಕ ಕ್ರಾಂತಿ ಎಂದೂ ಹೇಳುತ್ತಾರೆ. ಸುಧಾರಣೆಯ ವಿರುದ್ಧ ಪ್ರತಿಸುಧಾರಣೆಯ ಕಾಲವೂ ಆಗಲೇ ನಡೆಯಿತು. ಇಡೀ ಯೂರೋಪಿನಲ್ಲೇ ಒಂದು ನವಜಾಗೃತಿ ಆರಂಭವಾಯಿತು. ಅರಿಸ್ಟೋಟಲಿನ ಕಾವ್ಯಮೀಮಾಂಸೆ ಕಲ್ಪನೆಗೂ ಚರಿತ್ರೆಗೂ ಇರುವ ವ್ಯತ್ಯಾಸವನ್ನು ಪ್ರಚುರಪಡಿಸುತ್ತಿತ್ತು. ಸರ್ವಾಂಟೆಸ್ ಕಾಲದಲ್ಲಿನ ಬೌದ್ಧಿಕ ವಾತಾವರಣ ಹಳೆಯ ಕುರುಡು ನಂಬಿಕೆ ಮತ್ತು ಇನ್ನೂ ಬಲಿತಿಲ್ಲದ ಅನುಭವಜ್ಞಾನ ಒಟ್ಟುಗೂಡಿ ಯಾವುದು ನಿಜ, ಯಾವುದು ನಿಜವಲ್ಲ ಎಂದು ಗೊತ್ತಾಗದೆ ಎರಡರ ಕಲಸುಮೇಲೋಗರವಾಗಿ ಕಾವ್ಯಸ್ಥಿತಿ ಗೊಂದಲಮಯವಾಗಿತ್ತು.

ವೀರೋಚಿತ ಸಾಹಸಕಾರ್ಯಗಳ ಸಾಹಿತ್ಯವನ್ನು ಓದಿದ್ದು ಡಾನ್ ಕ್ವಿಕ್ಸೋಟನ ಜೀವನವನ್ನು ಬದಲಾಯಿಸಿತು ಎಂದು ಪ್ರಸ್ತುತಗ್ರಂಥ ಹೇಳುತ್ತದೆ. ಕ್ವಿಕ್ಸೋಟನ ಸೋದರ ಮಗಳು ಮತ್ತು ಪಾದ್ರಿ ಇಬ್ಬರೂ ಸೇರಿ ಕ್ವಿಕ್ಸೋಟನ ತಲೆಯನ್ನು ಕೆಡಿಸಿದ ಪುಸ್ತಕಗಳನ್ನು ಸುಡುತ್ತಾರೆ. ಗ್ರಾಮೀಣ ಕಾದಂಬರಿಗಳನ್ನೂ ಸುಡುವ ಪ್ರಯತ್ನ ಮಾಡುತ್ತಾರೆ. ಪುಸ್ತಕಗಳು ಮನುಷ್ಯ ಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆಂಬುದು ಸ್ಪಷ್ಟವಾಗಿತ್ತು. ಕ್ವಿಕ್ಸೋಟ್ ಪುಸ್ತಕಗಳಿಂದ ವ್ಯಕ್ತವಾದ ರೀತಿಯಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳಲು ಹೊರಡುತ್ತಾನೆ. ಆಗ ಎರಡು ಪ್ರಪಂಚಗಳು ಎದುರು ನಿಲ್ಲುತ್ತವೆ : ಒಂದು ನೈಜ ಪ್ರಪಂಚ, ಇನ್ನೊಂದು ಸಾಹಿತ್ಯಕಲ್ಪಿತ. ಇವೆರಡೂ ಒಂದಕ್ಕೊಂದು ಭಿನ್ನವಾಗಿ ತೋರುತ್ತವೆ. ಉದಾಹರಣೆಗೆ, ಹೋಟೇಲ್ ದುರ್ಗವಾಗಿ, ಗುಡಿಸೆಟ್ಟಿ ಹೆಂಗಸು ಶ್ರೀಮಂತ ಕನ್ಯೆಯಾಗಿ, ಹಜಾಮನ ಬೋಗುಣಿ ಸೈನಿಕನ ತಲೆಕಾಪಾಗಿ ಕ್ವಿಕ್ಸೋಟನಿಗೆ ಕಾಣುತ್ತವೆ. ಅದೇ ರೀತಿಯಲ್ಲಿ ಅಪ್ರಕೃತವಾಗಿ ತಲೆಹಾಕುವುದು, ತಪ್ಪನ್ನು ಒಪ್ಪು ಮಾಡಲು ಹೋಗುವ ಹವ್ಯಾಸ, ಧೋರಣೆ ಸಾಹಿತ್ಯಕ್ಕೂ ಜೀವನಕ್ಕೂ ಇರುವ ಭೇದವನ್ನು

ತೋರಿಸಲು ಪ್ರಯೋಗಿಸಿದಂತಿದೆ. ಹೀಗೆ ಸರ್ವಾಂಟೆಸ್‌ನ ಕಾವ್ಯಪ್ರಪಂಚದ ತಳಹದಿ ಜೀವನಕ್ಕೂ ಸಾಹಿತ್ಯಕ್ಕೂ ಇರುವ ಭಿನ್ನತೆಯನ್ನು ಎತ್ತಿತೋರುವುದಾಗಿದೆ.

ಸಹಜತೆಯ ನಿಜಸ್ವಭಾವವೇನು ಎಂದೂ ಸರ್ವಾಂಟೆಸ್ ಕಂಡುಹಿಡಿಯಲು ಹೊರಟಿದ್ದಾನೆ ಎಂಬುದು ಕೆಲವರ ಮತ. ಇದು ಹೇಗಾದರೂ ಇರಲಿ, ಸಹಜತೆಗೂ ಮಾನವನ ಅನುಭವಕ್ಕೂ ಇರುವ ಸಂಬಂಧವೇನು ಎಂದು ತೋರಲು ಸಾಹಿತ್ಯವನ್ನು ಜನಜೀವನದ ಎದುರಿಟ್ಟಿದ್ದಾನೆ ಎನ್ನುವುದು ಇಲ್ಲಿ ಖಚಿತ. ಹೀಗೆ ಮಾಡಿ ಒಂದು ಕಲಾತ್ಮಕ ಭ್ರಾಂತಿಯನ್ನು ಸೃಷ್ಟಿಸಿರುವುದೂ ಅಷ್ಟೇ ಖಚಿತ.

3

ಕ್ವಿಕ್ಸಾನೊ — ಇದು ಕಾದಂಬರಿಯ ನಾಯಕ ಕ್ವಿಕ್ಸೋಟನ ಮೊದಲ ಹೆಸರು — ತಿಳಿವಳಿಕೆಯಿಲ್ಲದ ಮನುಷ್ಯನಲ್ಲ. ಸರಳವಾದ ಸಂಸಾರಜೀವನಕ್ಕೆ ಸಾಕಷ್ಟು ಜೀವನಾಧಾರವಿದ್ದ ಮನುಷ್ಯ. ಎಲ್ಲರಂತೆ ಜೀವನ ನಡೆಸುವುದನ್ನು ಬಿಟ್ಟು ಈತ ಬಿಡುವಾದಾಗಲೆಲ್ಲ ಮಧ್ಯಯುಗದ ವೀರರ ಕಥೆಗಳನ್ನು ಓದುತ್ತಿದ್ದ. ಈ ಹವ್ಯಾಸ ಉಲ್ಬಣವಾಗಿ ರಾತ್ರಿಯೆಲ್ಲ ಹಗಲೆಲ್ಲ ಓದಲು ತೊಡಗಿದ. ಜಮೀನನ್ನು ಮಾರಿ ಪುಸ್ತಕಗಳನ್ನು ಕೊಂಡು ಓದಿದ. ಓದಿ ಓದಿ ನಿದ್ರೆ ಕೆಟ್ಟು ತಲೆಯಲ್ಲಿದ್ದ ಸತ್ಯವೆಲ್ಲ ಉಡುಗಿ ವಿವೇಚನೆ ತಪ್ಪಿತು. ತಲೆಯ ತುಂಬ ಜಗಳ, ಕದನ, ಹಿಂಸೆ, ಮಾಟ, ಮಂತ್ರ, ಪ್ರತಿಭಟನೆ, ದೂರು, ರಹಸ್ಯ ಪ್ರಣಯ, ಅಸಾಧ್ಯ ಕಾರ್ಯಕ್ಷಮತೆ, ಅವಿವೇಕ, ಅಧ್ವಾನ, ಇವೇ ತುಂಬಿದವು. ತನ್ನ ಗೌರವವನ್ನೂ ಕೀರ್ತಿಯನ್ನೂ ಹೆಚ್ಚಿಸಿಕೊಳ್ಳಬೇಕೆಂಬ ಭ್ರಮೆಯಲ್ಲಿ ಪ್ರಪಂಚದ ದೀನದಲಿತರ ಸೇವೆಗಾಗಿ ವೀರೋಚಿತ ಕಾರ್ಯಗಳನ್ನು ಹುಡುಕಿಕೊಂಡು ಕಾಪುಕಲಿಯಾಗಿ ದೇಶಪರ್ಯಟನ ಮಾಡಬೇಕೆಂದು ಅವನು ನಿಶ್ಚಯಿಸಿದ. ಕಾರ್ಯನಿರತನಾಗಲು ಅಜ್ಜನ ಕಾಲದ ತುಕ್ಕುಹಿಡಿದ ಉಕ್ಕಿನ ಕವಚವನ್ನು ಮಸೆದ. ಅವನಲ್ಲಿ ಉಕ್ಕಿನ ಟೋಪಿ ಇರಲಿಲ್ಲವಾಗಿ ರಟ್ಟಿನಿಂದ ಒಂದು ಟೋಪಿ ಮಾಡಿ ಗಟ್ಟಿಯಾಗಿದೆಯೊ ಇಲ್ಲವೊ ಪರೀಕ್ಷಿಸಲು ಕತ್ತಿಯಿಂದ ಹೊಡೆದ. ಚೂರುಚೂರಾದ ಅದನ್ನೇ ಕಬ್ಬಿಣದ ಕಂಬಿಗಳಿಂದ ಬಲಪಡಿಸಿದ. ಭಲ್ಲೆ ಖಡ್ಗ ಸಿದ್ಧವಾದವು. ಇನ್ನು ಕುದುರೆ : ಅವನಂತೆಯೇ ಮೂಳೆಬಿಟ್ಟುಕೊಂಡಿದ್ದು, ಅಲೆಕ್ಸಾಂಡರನ ಸಮರಾಶ್ವಕ್ಕಿಂತ ಉತ್ತಮವಾಗಿ ಕಂಡಿತು. ನಾಲ್ಕು ದಿನ ಯೋಚನೆ ಮಾಡಿ ಅದಕ್ಕೆ 'ರೊಸಿನಾಂತೆ'' ಎಂದು ಹೆಸರಿಟ್ಟ. ತನ್ನ ಹೆಸರೂ ವೀರೋಚಿತವಾಗಿರಬೇಕೆಂದು 'ಡಾನ್ ಕ್ವಿಕ್ಸೋಟ್ ಡಿ ಲಾ ಮಾಂಚ್' ಎಂದು ದೀರ್ಘ ಮಾಡಿಕೊಂಡ. ಪ್ರತಿಯೊಬ್ಬ ವೀರನಿಗೂ ಒಬ್ಬಳು ಪ್ರೇಯಸಿ ಇದ್ದು, ಯಾವುದೇ ಸಾಹಸಕಾರ್ಯಕ್ಕೆ ಹೊರಡುವ ಮೊದಲು ದೇವರಿಗೆ ಮೊರೆಯಿಡುವಂತೆ ಅವಳ

ಪ್ರೀತಿಗೂ ಗೋಗರೆದು, ಅವಳ ಸುಂದರ ಮುಖಾರವಿಂದವನ್ನು ಮನಸ್ಸಿನಲ್ಲಿ ಆವಿರ್ಭವಿಸಿಕೊಂಡು ಅದರಿಂದ ಸ್ಫೂರ್ತಿ ಪ್ರೇರಣೆ ಪಡೆಯಬೇಕಷ್ಟೆ! ಅದಕ್ಕಾಗಿ ಒಬ್ಬ ಪ್ರೇಯಸಿಯನ್ನು ಗೊತ್ತು ಮಾಡಿಕೊಂಡ. ಯುವಕನಾಗಿದ್ದಾಗ ನೆರೆಹಳ್ಳಿಯ ಹುಡುಗಿ ಅಲ್ದೋನಾ ಲೋರೆನ್ಸೊ ಎಂಬುವಳನ್ನು ಹೌದೊ ಅಲ್ಲವೊ ಎನ್ನುವ ಹಾಗೆ ಯಾವಾಗಲೊ ಪ್ರೀತಿಯ ಕಂಗಳಿಂದ ಅವಳಿಗೆ ಗೊತ್ತಿಲ್ಲದಂತೆ ನೋಡಿದ್ದನಂತೆ : ಈಗ ಅವಳಿಗೆ 'ಡಲ್‌ಸಿನಿ ಯಾಡಲ್ ಟೊಬೂಸೋ' ಎಂದು ನಾಮಕರಣ ಮಾಡಿದ. ಅವಳಿಗೆ ಇವನಾರೆಂದು ತಿಳಿಯಬೇಕಾದ ಪ್ರಮೇಯವಿರಲಿಲ್ಲ ; ಏಕೆಂದರೆ ನಮ್ಮ ವೀರನದು ಕಾರ್ಯ ಪರಿಣಾಮವಿಲ್ಲದ ಆಧ್ಯಾತ್ಮಿಕ ಪ್ರೇಮ.

ಇನ್ನು ದೀನಶರಣರಕ್ಷಾವೀರನಾಗಿರಬೇಕಾದರೆ ಯಾರಾದರೂ ದೀಕ್ಷೆ ಕೊಡಬೇಕು. ಒಬ್ಬ ಹೊಟೇಲು ಮಾಲೀಕನಿಂದ ಈ ಸಂಸ್ಕಾರವೂ ಆಯಿತು. ಸಾಹಸ ಕಾರ್ಯಗಳನ್ನು ಮಾಡುವ ಹಂಬಲ ಮೇರೆ ಮೀರಿ ಭ್ರಾಂತಿತತ್ವ ಕಾರ್ಯರಂಗಕ್ಕೆ ಇಳಿಯಿತು.

❑ ❑ ❑

ಮನುಷ್ಯ ಭ್ರಾಂತಿಗೆ ವಶನಾದರೆ ನಿಜತ್ವದ ಕರೆಕರೆಯಿಲ್ಲದೆ ವಿಚಿತ್ರವರ್ತನೆಗೆ ಶುರುಮಾಡುತ್ತಾನೆ. ಕ್ವಿಕ್ಸೋಟ್ ಕೂಡ ಇಂಥ ಭ್ರಾಂತಿಯಿಂದ ತುಂಬಿ ತುಳುಕುತ್ತಿದ್ದಾನೆ. ಒಂದು ಕ್ಷಣ ಕ್ವಿಕ್ಸೋಟನನ್ನು ಬಿಟ್ಟು ಸ್ಯಾಂಕೋನನ್ನು ತೆಗೆದುಕೊಳ್ಳೋಣ. ''ನನ್ನ ಯಜಮಾನ ಕ್ವಿಕ್ಸೋಟ್ ಚಕ್ರವರ್ತಿಯಾದರೆ ನನಗೊಂದು ಗವರ್ನರ್ ಪದವಿ ಸಿದ್ಧ. ನನ್ನ ಹೆಂಡತಿ ಸತ್ತರೆ ಅರಮನೆಯಲ್ಲಿರುವ ರಾಣಿವಾಸದ ಗೆಳತಿಯೊಬ್ಬಳನ್ನು ಮದುವೆ ಮಾಡಿಕೊಳ್ಳುತ್ತೇನೆ. ಡೊರೋಥಿಯಾಗೆ ಅವಳ ರಾಜ್ಯ ಸಿಕ್ಕಿದರೆ ಡಾನ್ ಕ್ವಿಕ್ಸೋಟ್ ರಾಜ'' — ಇದು ಅವನ ನಂಬಿಕೆ. ಈ ಭ್ರಾಂತಿಗೆ ಕಾರಣ ಕ್ವಿಕ್ಸೋಟ್ ಗವರ್ನರ್ ಪದವಿಯ ಆಸೆಯನ್ನು ಸ್ಯಾಂಕೊ ಮನಸ್ಸಲ್ಲಿ ನೆಟ್ಟು ಬೆಳೆಸಿದ್ದು. ಲೌಕಿಕ ಸಾಧ್ಯಾಸಾಧ್ಯತೆಗಳನ್ನು ಎಣಿಸದ ಇಂಥ ತೀವ್ರ ಆಸೆ ಮನುಷ್ಯನನ್ನು ಭ್ರಾಂತನನ್ನಾಗಿಸುತ್ತದೆ. ಕ್ವಿಕ್ಸೋಟನ ಜೊತೆಯಲ್ಲಿದ್ದೂ ವ್ಯವಹಾರ ಪ್ರಪಂಚವನ್ನು ಹೇಗೆ ಕಾಣುತ್ತದೋ ಹಾಗೇ ನೋಡುತ್ತಿದ್ದ ಸ್ಯಾಂಕೊ ಆಸೆಯ ಅಮಲಿಂದ ಭ್ರಾಂತನಾಗಿ ಸಾರಾಯಿಚೀಲದ ತುದಿಗಟ್ಟನ್ನು ದೈತ್ಯನ ತಲೆಯೆಂದು ಭಾವಿಸುತ್ತಾನೆ ; ತನ್ನ ಮಗಳಿಗೆ ರಾಜಕುಮಾರನನ್ನು ತಂದು ಮದುವೆ ಮಾಡುವ ಗೀಳಿಟ್ಟುಕೊಂಡು ತನ್ನ ಹೆಂಡತಿಯೊಡನೆ ವ್ಯಾಜ್ಯ ಹೂಡುತ್ತಾನೆ. ಪದವಿಯೊಂದಲ್ಲದೆ ಖ್ಯಾತಿಯ ಹಂಬಲ ಕೂಡ ಸ್ಯಾಂಕೋನನ್ನು ತನ್ನ ಹುಚ್ಚ ಯಜಮಾನನನ್ನು ಹಿಂಬಾಲಿಸುವಂತೆ ಪ್ರೇರೇಪಿಸುತ್ತದೆ. ಈ ಭ್ರಾಂತಿ ಇಲ್ಲದಿದ್ದರೆ ಎಷ್ಟು ಪೆಟ್ಟು ಬಿದ್ದರೂ ಏಕೆ ಸ್ಯಾಂಕೊ ತನ್ನ ಯಜಮಾನನ ಬೆನ್ನು ಬಿಡಲಿಲ್ಲ? ಅವನು ಕೊಡುವ ಇನ್ನೊಂದು ಕಾರಣ ಇದು (ಸ್ಯಾಂಕೊ ಡಚೆಸ್‌ಗೆ ಹೇಳುತ್ತಾನೆ) : ''ಕ್ವಿಕ್ಸೋಟ್ ನನ್ನ ಯಜಮಾನ. ನಾನು ಅವನ ಉಪ್ಪು ತಿಂದಿದ್ದೇನೆ. ನನಗೆ ಅವನನ್ನು ಕಂಡರೆ ಪ್ರೀತಿಯಿದೆ. ಅವನಿಗೆ ನಾನು ಕೃತಜ್ಞ. ನನಗೆ ಅವನು ಮೂರು ಕತ್ತೆಗಳನ್ನು ಕೊಟ್ಟಿದ್ದಾನೆ.

ನಾನು ಅವನಿಗೆ ವಿಧೇಯ. ನಾವಿಬ್ಬರೂ ಒಂದೇ ಹಳ್ಳಿಯವರು. ಈ ಜೀವನ ನನ್ನ ಹಣೆಬರಹ.'' ಇಂತಹ ತೀವ್ರ ಭಾವೋದ್ರೇಕವೂ ಒಂದು ಭ್ರಾಂತಿಯೇ.

ಭಾವೋದ್ರೇಕವಾದರೆ ಮನುಷ್ಯ ಸಹಜತೆಗೆ ಕುರುಡಾಗುತ್ತಾನೆ. ರೋಷ ಸೇಡು ಪ್ರೀತಿ ವ್ಯಾಮೋಹ ಇವೆಲ್ಲ ಅಲೌಕಿಕ ವರ್ತನೆಗೆ ಕಾರಣಗಳಾಗುತ್ತವೆ. ಇವೆಲ್ಲಕ್ಕಿಂತ ಪ್ರತಿಭೆಯಿಂದ ಬರುವ ಭ್ರಾಂತಿ ಬಹಳ ಉತ್ಕಟವಾದ್ದು. ಸರ್ವಾಂಟೆಸ್ ಈ ಸಂದರ್ಭದಲ್ಲಿ 'ಊಹೆ' ಎಂಬ ಶಬ್ದವನ್ನು ಉಪಯೋಗಿಸುತ್ತಾನೆ. ಕ್ರಮವಿಲ್ಲದ ಊಹೆ, ಹುಚ್ಚು ಊಹೆ, ಗೊಂದಲಮಯ ಊಹೆ — ಹೀಗೆ ನಾನಾ ತರಹದ ಊಹೆ ಕಲ್ಪನೆಗಳಿಗೆ ಆಶ್ರಯವಿತ್ತಿದ್ದಾನೆ ಸ್ಯಾಂಕೊ. ತನ್ನ ಯಜಮಾನ ನೀಗ್ರೋ ದೇಶಕ್ಕೆ ರಾಜನಾಗುತ್ತಾನೆ, ಆದ್ದರಿಂದ ಅವನು ಗುಲಾಮರನ್ನು ಮಾರಿ ಐಶ್ವರ್ಯ ಸಂಪಾದಿಸುತ್ತಾನೆ ; ಬುಡವಿಲ್ಲದ ಹೆದರಿಕೆಯಿಂದ ಪ್ರೇಯಸಿಗಾಗಿ ಪರ್ವತ ಪ್ರದೇಶದಲ್ಲಿ ತಿರುಗಾಡುತ್ತಾನೆ ; ಕಾರ್ಡಿನೊ ಡೊರೋಥಿಯಾ ತನ್ನ ಸೇವಕರೊಡನೆ ಏನೇನೊ ಊಹಿಸಿ ಮನೆ ಬಿಟ್ಟು ಹೊರಡುತ್ತಾಳೆ — ಹೀಗೆ ತಳಬುಡವಿಲ್ಲದ ಊಹೆ, ಕ್ರಮವಿಲ್ಲದ ಆಲೋಚನೆ ಮನುಷ್ಯನನ್ನು ತಾನೇ ಸೃಜಿಸಿಕೊಂಡ ಕಲ್ಪನಾ ಪ್ರಪಂಚದಲ್ಲಿ ಓಲಾಡುವಂತೆ ಮಾಡುತ್ತದೆ. ಇಂತಹವರು ತಮ್ಮ ವರ್ತನೆಗೆ ಇಲ್ಲಸಲ್ಲದ ಕಾರಣಗಳನ್ನು ಹುಡುಕಿ ತೆಗೆಯುತ್ತಾರೆ. ಪ್ರಣಯಿಗಳು ಯಾವಾಗಲೂ ಇಂತಹ ಕಾರಣಗಳಿಂದ ತಮಗೆ, ಜೀವಕ್ಕೆ ತೊಂದರೆ ಕೊಟ್ಟುಕೊಳ್ಳುತ್ತಾರೆ. ಇವರಿಗೆ ಬುದ್ಧಿ ಹೇಳುವುದಕ್ಕೆ ಆಗುವುದಿಲ್ಲ . ''ನನಗೆ ಲುಸಿಂಡಾ ಇಲ್ಲದ ಆರೋಗ್ಯ ಬೇಡ''— ಆನ್‌ಸೆಲ್ಮೊ ಹೇಳುತ್ತಾನೆ : ''ನಾನು ಸರಿಯಾದ ರಸ್ತೆಯನ್ನು ಬಿಟ್ಟು ಓಡಿ ತೊಂದರೆಗೆ ಒಳಗಾಗುತ್ತೇನೆ.'' ದರೋಡೆಕೋರ ರೊಖೆ ಹೇಳುತ್ತಾನೆ : ''ನಾನು ಸಮಾಜ ಬಹಿಷ್ಕರಿಸಿದ ದಾರಿಯಲ್ಲಿ ನಡೆಯುತ್ತಿದ್ದೇನೆಂದು ಗೊತ್ತು. ಆದರೂ ಅದನ್ನು ಬಿಡುವುದಿಲ್ಲ. ಈ ವರ್ತನೆಗಳನ್ನು ಕುರಿತು ಸರ್ವಾಂಟೆಸ್ (ಕ್ವಿಕ್ಸೋಟ್) ''ಇದು ಅಂತಃಸಾಕ್ಷಿಯ ಕಾಯಿಲೆ'' ಎನ್ನುತ್ತಾನೆ. ಒಟ್ಟಿನಲ್ಲಿ ಡಾನ್ ಕ್ವಿಕ್ಸೋಟ್ ಪ್ರಪಂಚದಲ್ಲಿ ಬೇಕುಬೇಕೆಂದೇ ಇರುವ ಪ್ರಜ್ಞಾಹೀನ ವರ್ತನೆ 'ಹುಚ್ಚು' ಎಂದು ಕರೆಯಲ್ಪಟ್ಟಿದೆ.

❑ ❑ ❑

ಈಗ ಕ್ವಿಕ್ಸೋಟನ ಹುಚ್ಚನ್ನು ಪರೀಕ್ಷಿಸೋಣ. ಇದು ಮೊದಲಿಂದ ರೂಢಿಸಿಕೊಂಡು ಬಂದದ್ದು . ''ತನ್ನ ಗೌರವಕ್ಕೆ, ಸಮಾಜ ಕಲ್ಯಾಣಕ್ಕೆ ತಾನು ವೀರದೀಕ್ಷೆಯನ್ನು ವಹಿಸಬೇಕು. ಅದಕ್ಕಾಗಿ ತನಗೊಬ್ಬಳು ಪ್ರೇಯಸಿ ಬೇಕು. ಅವಳ ಸೌಂದರ್ಯದ ಕಣ್ಣಿನ ಹೊಳಪಿಂದ ತಾನು ಪ್ರಭಾವಿತನಾಗುತ್ತೇನೆ. ಅದು ತನ್ನ ತಲೆಗೆ ಬುದ್ಧಿ ಮತ್ತು ತೋಳುಗಳಿಗೆ ಶಕ್ತಿ ಕೊಡುತ್ತದೆ, ಹೃದಯದಲ್ಲಿ ಧೈರ್ಯ ತುಂಬುತ್ತದೆ. ತಾನೇನು ಸಾಧಿಸುವೆನೊ ಅವೆಲ್ಲವೂ ಅವಳ ಪ್ರಸಾದ. ಅವಳ ಪ್ರಿಯನಾಗಿರುವುದೆ ತನ್ನ ಕೃತಾರ್ಥತೆ. ತಾನು ಒಬ್ಬ ಶ್ರೀಮಂತ ಹೆಂಗಸಿನ ಸೇವೆಯಲ್ಲಿ ನಿರತನಾಗಿರಬೇಕು. ಒಳ್ಳೆಯ ಖ್ಯಾತಿ ಗಳಿಸಬೇಕು.

ದೀನದಲಿತರಿಗೆ, ನಿಸ್ಸಹಾಯಕರಿಗೆ ಸಹಾಯ ಮಾಡಬೇಕು. ಸೇವೆಯೊಂದು ವಿನಾ ಇನ್ಯಾವ ಫಲವನ್ನೂ ಅಪೇಕ್ಷಿಸಬಾರದು. ಇವು ವೀರದೀಕ್ಷಾಧರ್ಮತತ್ವ ; ಇವನ್ನು ಪಾಲಿಸಬೇಕು'' — ಇದು ಕ್ವಿಕ್ಸೋಟನ ವಿಚಾರಧಾರೆ. ಇದನ್ನು ಕೇಳಿ ಸ್ಯಾಂಕೊ ಹೇಳುತ್ತಾನೆ : ''ಸ್ವಾಮಿ, ದೇವರ ವಿಷಯದಲ್ಲಿ ಹೀಗೆ ಹೇಳುವುದನ್ನು ಕೇಳಿದ್ದೇನೆ. ಫಲದ ಆಶೆಯಿಲ್ಲದೆ, ಶಿಕ್ಷೆಯ ಬೆದರಿಕೆಯಿಲ್ಲದೆ ದೇವನೊಬ್ಬನನ್ನು ಸೇವಿಸಬೇಕು.'' ಈ ಮಾತು ನಮಗೆ chivalry – ದೀನರಕ್ಷಣ ವೀರಧರ್ಮ – ಒಂದು ಮತಧರ್ಮದಂತೆ, ಕ್ವಿಕ್ಸೋಟ್ ಇದನ್ನು ಮತಾಂತರ ಹೊಂದಿದವರ ತೀವ್ರ ಶ್ರದ್ಧೆಯಿಂದ ಅನುಸರಿಸುತ್ತಾನೆ ಎಂಬುದನ್ನು ತಿಳಿಸುತ್ತದೆ.

ಸ್ಯಾಂಕೋಗೆ ಕ್ವಿಕ್ಸೋಟ್ ಮತ್ತೆ ಮತ್ತೆ ಹೇಳುತ್ತಾನೆ : ''ನಮ್ಮ ಕೆಲಸಗಳು ಕ್ರೈಸ್ತ ಮತದ ಆಣತಿಯಂತೆ ನಡೆಯಬೇಕು. ಅದನ್ನು ಮೀರಬಾರದು. ನಾವು ಸೊಕ್ಕನ್ನು ದೈತ್ಯರನ್ನು ಕೊಲ್ಲುವುದರ ಮೂಲಕ ಕೊಲ್ಲಬೇಕು. ಹೊಟ್ಟೆಕಿಚ್ಚನ್ನು ಧಾರಾಳತೆ ಮತ್ತು ಒಳ್ಳೆಯ ಹೃದಯದಿಂದ ಗೆಲ್ಲಬೇಕು. ಸಿಟ್ಟನ್ನು ತಾಳ್ಮೆಯಿಂದ ಕೊಲ್ಲಬೇಕು. ಕಾಮವನ್ನು ಇಂದ್ರಿಯಲೋಲುಪತೆಯನ್ನು ನಮ್ಮ ಮನೆದೇವತೆಯ, ಪ್ರೇಯಸಿಯ ನೆನಪಿನಿಂದ ಗೆಲ್ಲಬೇಕು. ವೀರರು ಮತ್ತು ಕ್ರಿಶ್ಚಿಯನ್ನರು ಮಾಡಬೇಕಾದ ಕೆಲಸವನ್ನು ಹುಡುಕಿಕೊಂಡು ಪ್ರಪಂಚಪರ್ಯಟನ ಮಾಡಿ ಸೋಮಾರಿತನವನ್ನು ಕೊಲ್ಲಬೇಕು. ಆಗ ನೋಡು ಸ್ಯಾಂಕೊ, ಖ್ಯಾತಿ ತಾನೇತಾನಾಗಿ ಬರುವುದು.''

ಕ್ವಿಕ್ಸೋಟನ ನಂಬಿಕೆಯ ಪ್ರಕಾರ ವೀರದೀಕ್ಷಿತರೆಲ್ಲ ದೇವದೂತರು, ಭೂಮಿಯ ಮೇಲೆ ದೇವರ ಕೆಲಸ ನಿರ್ವಾಹಕರು, ದೇವನ ನ್ಯಾಯವನ್ನು ಎತ್ತಿಹಿಡಿಯುವವರು. ''ನಾನು ದೇವರ ಸಂಕಲ್ಪದಿಂದ ಈ ಕಬ್ಬಿಣದ ಯುಗವನ್ನು ಸ್ವರ್ಣಯುಗವನ್ನಾಗಿ ಮಾಡಲು ಹುಟ್ಟಿದವನು. ನನ್ನ ಕರ್ತವ್ಯ ದೈವಸಂಕಲ್ಪ, ದೇವರಿಗಾಗಿ ಮಾಡುವುದು. ನಾನು ಈ ವೀರದೀಕ್ಷೆ ವಹಿಸಿದ ಮೇಲೆ ಧೈರ್ಯ ವಿನಯ ಉದಾರತೆ ತಾಳ್ಮೆ ಸಹನೆ ಕಷ್ಟಸಹಿಷ್ಣುತೆ ಎಲ್ಲವನ್ನೂ ನನ್ನಲ್ಲಿ ಅಳವಡಿಸಿಕೊಂಡಿದ್ದೇನೆ. ದೈವಧರ್ಮದ ಜೊತೆಗೆ ಕ್ಷಾತ್ರಧರ್ಮವನ್ನೂ ಪಾಲಿಸಿಕೊಂಡು ಬಂದಿದ್ದೇನೆ'' ಎನ್ನುತ್ತಾನೆ. ಈ ಮನೋಭಾವ ಕ್ವಿಕ್ಸೋಟನಿಗೆ ಬಂದದ್ದು ವೀರಯುಗದಲ್ಲಿ ಧರ್ಮಗಳಿಗೆ ಮರ್ಯಾದೆ ಇಲ್ಲದಿದ್ದಾಗ, ಆದ್ದರಿಂದಲೇ ಮತಾಂಧರಂತೆ ತನ್ನ ಮತಧರ್ಮವನ್ನು ಅಲೌಕಿಕವಾಗಿ ಎತ್ತಿ ಹಿಡಿಯುವುದಕ್ಕೆ ಕ್ವಿಕ್ಸೋಟ್ ಪ್ರಯತ್ನ ಪಡುವುದು. ಕ್ವಿಕ್ಸೋಟನ ಮನೆಯವರು ಎಷ್ಟೇ ಹೇಳಲಿ, ಅವನ ಉತ್ತರ ಇಷ್ಟೇ : ''ದೈವಸಂಕಲ್ಪ ನನ್ನ ವಿಧಿ, ನನ್ನ ತರ್ಕ, ನನ್ನ ನಿರ್ಧಾರ ; ನಾನು ವೀರದೀಕ್ಷಿತನಾಗಿ ಎಷ್ಟೇ ಕಷ್ಟ ಬಂದರೂ ಎದುರಿಸಿ, ಅದರಿಂದ ಪ್ರಪಂಚಕ್ಕಾಗುವ ಒಳ್ಳೆಯದನ್ನು ಮನಸ್ಸಿನಲ್ಲಿಟ್ಟುಕೊಂಡಿರುವುದರಿಂದ ನೀವು ಯಾರು ಎಷ್ಟು ಹೇಳಿದರೂ ಕೇಳುವುದಿಲ್ಲ. ಒಳ್ಳೆಯದರ ದಾರಿ ಇಕ್ಕಟ್ಟು ; ಕೆಟ್ಟುದರ ದಾರಿ ವಿಶಾಲ. ಅವು ನಮ್ಮನ್ನು

ಎಲ್ಲಿಗೆ ಒಯ್ಯುತ್ತದೆ ಎನ್ನುವುದು ನನಗೆ ಗೊತ್ತು. ನನ್ನ ಜೀವ ಅಮರವಾಗಬೇಕೆನ್ನುವುದು ನನ್ನ ಇಷ್ಟ''

ಕ್ವಿಕ್ಸೋಟ್ ಡ್ಯೂಕ್‌ಗೆ ಹೇಳುವ ಮಾತುಗಳಿವು : ''ನನಗೆ ಆಸ್ತಿ ಅಂತಸ್ತುಗಳಲ್ಲಿ ವಿಶ್ವಾಸವಿಲ್ಲ, ನನಗೆ ಘನತೆ ಮುಖ್ಯ. ನ್ಯಾಯವಾದಲ್ಲಿ ನ್ಯಾಯಮಾಡುವುದು ; ದರ್ಪವನ್ನು ಅಡಗಿಸುವುದು ; ದೈತ್ಯರನ್ನು ಗೆಲ್ಲುವುದು ; ಲೈಂಗಿಕ ಭಾವನೆಗಳಿಲ್ಲದೆ ನನ್ನ ಪ್ರೇಯಸಿಯಲ್ಲಿ ನಿರ್ಮಲ ಪ್ರೇಮವನ್ನಿಡುವುದು ; ಎಲ್ಲರಿಗೂ ಒಳ್ಳೆಯದನ್ನು ಮಾಡುವುದು ; ಯಾರಿಗೂ ಕೆಡುಕುಂಟುಮಾಡದಿರುವುದು'' — ಇದನ್ನು ದಡ್ಡ ಕೆಲಸಗಳೆಂದು ಯಾರು ಹೇಳಬಲ್ಲರು ?

❑ ❑ ❑

ಡಲ್ಸೀನಿಯ ಸ್ಯಾಂಕೊ ಮಾಡಿದ ಸುಳ್ಳು ಮಂತ್ರಬಂಧನದಿಂದ ಕುರೂಪಿಯಾದಳು. ಈಗ ಅವಳನ್ನು ಅವಳ ಕುರೂಪದಿಂದ ಬಿಡಿಸಬೇಕು. ಅದಕ್ಕೆ ಮೆರ್ಲಿನ್ ಹೇಳಿದ ಪ್ರಕಾರ ಸ್ಯಾಂಕೊ ಮೂರು ಸಾವಿರದ ಮುನ್ನೂರು ಏಟು ತಿನ್ನಬೇಕು. ಸ್ಯಾಂಕೊ ಏಟು ತಿನ್ನುವುದಕ್ಕೂ ಡಲ್ಸೀನಿಯ ಕುರೂಪಕ್ಕೂ ಏನು ಸಂಬಂಧ ಎಂಬ ಪ್ರಶ್ನೆಯೇ ಬರುವುದಿಲ್ಲ. ಡ್ಯೂಕ್ ಏರ್ಪಡಿಸಿದ ಭೂತ ಮತ್ತು ಮೆರ್ಲಿನ್ ಇವರ ಮಧ್ಯರಾತ್ರಿಯ ನಾಟಕ, ಯಕ್ಷಿಣಿ ಮಾಯಾಮಂತ್ರಗಳಲ್ಲಿರುವ ನಂಬಿಕೆ ಇನ್ನೂ ಗಾಢವಾಗುವಂತೆ ಆದುದೇ ಮುಖ್ಯ. ಡಲ್ಸೀನಿಯ ಸೇವೆಯೇ ಕಾರಣವಾಗಿ ಮಾಡಿದ ಸಾಹಸಕಾರ್ಯಗಳಲ್ಲೆಲ್ಲ ಮಗ್ಗಲು ಮುರಿಯುವಂತೆ ಏಟು ತಿಂದು ಚೇತರಿಸಿಕೊಂಡು ಎದ್ದು ತನ್ನ ಸೋಲಿಗೆ ಮಂತ್ರಬಂಧನವೇ ಕಾರಣ ಎಂದು ಸಮಾಧಾನ ಹೊಂದಿ ಮತ್ತೆ ಸಾಹಸ ಕಾರ್ಯಗಳಿಗೆ ನುಗ್ಗುವುದು ಕ್ವಿಕ್ಸೋಟನ ದಿನಚರಿಯಾಯಿತು. ಡ್ಯೂಕ್ ಮತ್ತು ಡಚೆಸ್ ಮಾಡಿದ ಚೇಷ್ಟೆಗಳನ್ನೆಲ್ಲ ಅನುಮಾನವಿಲ್ಲದೆ ಸಹಿಸಿಕೊಂಡು ತನ್ನ ವ್ರತದ ಉತ್ಸಾಹದಿಂದ ತನ್ನನ್ನೇ ಹೀನಸ್ಥಿತಿಗೆ ತಂದುಕೊಂಡು ಇನ್ನು ಹೆಚ್ಚುದಿನ ಡ್ಯೂಕನ ಆತಿಥ್ಯದಲ್ಲಿದ್ದರೆ ವ್ರತಭಂಗವಾಗುವುದೆಂದು ತಿಳಿದು ಕ್ವಿಕ್ಸೋಟ್ ಮತ್ತು ಸ್ಯಾಂಕೊ ಅಲ್ಲಿಂದ ಹೊರಡುತ್ತಾರೆ. ಪ್ರತಿಯೊಂದು ಸಾಹಸಕ್ಕೂ ಮೊದಲು ಭ್ರಾಂತಿಪ್ರೇರಕವಾಗುವುದು ; ಸೋತಮೇಲೆ ಮಾತ್ರ ಬಂಧನ ಕಾರಣ. ಹೀಗೆ ವ್ರತದ ಹುಚ್ಚಿಗೆ ಇವು ಒಂದಕ್ಕೊಂದು ನೆರವು. ಇದರಿಂದ ದಿನದಿನಕ್ಕೆ ಕ್ವಿಕ್ಸೋಟನ ದೈವ — ಧರ್ಮಶ್ರದ್ಧೆ, ಕ್ಷಾತ್ರಧರ್ಮಶ್ರದ್ಧೆ ಹೆಚ್ಚಿತು. ಸುಸಂಗತವಾದ ಶಕ್ತಿಯಿದ್ದರೆ ಅಂಧಶ್ರದ್ಧೆ ಸ್ವಾಗತವಾದದ್ದೂ ಹೌದು, ಅನಿವಾರ್ಯವಾದ್ದೂ ಹೌದು. ಆದರೆ ಕಾಲ, ಜನ, ಅವರ ನಡುವಳಿಕೆ ಎಲ್ಲ ಬದಲಾದಾಗ ಸುಸಂಗತವಾಗಬೇಕಾದ್ದು ಅಸಂಗತವಾಗುತ್ತದೆನ್ನಬೇಕು.

ಹೀಗೆ ಗ್ರಂಥದ ಮೊದಲನೆ ಭಾಗದ ಸಾಹಸಕಾರ್ಯ ತಾನೇ ಸೃಷ್ಟಿಸಿಕೊಂಡ

ಭ್ರಾಂತ ಮನಸ್ಸಿನ ವಿಪರೀತ ಪರಿಣಾಮ. ಎರಡನೇ ಭಾಗದ ಸಾಹಸಕಾರ್ಯ ಬೇರೆಯವರಿಂದ ವಿನೋದಕ್ಕಾಗಿ ಏರ್ಪಾಡಾದವು. ಮೊದಲನೆ ಭಾಗದ ಹಾಸ್ಯನಾಯಕ ಎರಡನೇ ಭಾಗದಲ್ಲಿ ದುರಂತನಾಯಕನಾಗುತ್ತಾನೆ. ನಾವು ನಗಬಹುದು. ಆದರೂ ಅವನ ಸ್ಥಿತಿ ಕಂಡು ಕಣ್ಣು ತೇವವಾಗದಿರಬಹುದು. ದೇಹದಲ್ಲಿ, ಆತ್ಮದಲ್ಲಿ ಸಹಿಸಲಾಗದ ನೋವು ತಿಂದು ಅಲ್ಪಮತಿಗಳ ಹಾಸ್ಯಕ್ಕೆ ಗುರಿಯಾಗಿ ಕೊನೆಯ ಸೋಲಿನಿಂದ ದಿಗ್ಭ್ರಮೆಗೊಂಡು, ಯಾವ ವ್ರತಕ್ಕಾಗಿ ಜೀವನವನ್ನು ಮುಡಿಪಿಟ್ಟುಕೊಂಡಿದ್ದನೊ ಅದೇ ಮಾಯವಾಗಿ ಜೀವನವೇ ನಿಷ್ಪ್ರಯೋಜಕವಾಗಿ ಕ್ವಿಕ್ಸೋಟ್ ಪುನಃ ಕ್ವಿಕ್ಸಾನೊ ಆಗುತ್ತಾನೆ. ಅವನ ಹುಚ್ಚು ತೊಲಗುತ್ತದೆ. ಹುಚ್ಚೇ ಜೀವವಾಗಿದ್ದಾಗ ಅದು ಹೋದಮೇಲೆ ಬದುಕಿರಲು ಸಾಧ್ಯವೆ ?

ಹುಚ್ಚು ಡಾನ್ ಕ್ವಿಕ್ಸೋಟನ ತಪ್ಪು, ಸರಿಯೆ. ಆದರೆ ಸಾಹಿತ್ಯದಲ್ಲಿ ಅದು ಒಂದು ಸಂಕೇತ, ಸತ್ಯದ ವಾಹಕ. ಈ ಸತ್ಯವನ್ನು ಕ್ರಮಬದ್ಧರಿಗೆ ತಿಳಿಯಲು, ತಿಳಿಸಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಕ್ವಿಕ್ಸೋಟ್ ''ಮನುಷ್ಯ ತನ್ನ ಧ್ಯೇಯಗಳಿಂದ ಜೀವನವನ್ನು ರೂಪಿಸಿ ಕೊಳ್ಳಬಲ್ಲ'' ಎಂದು ನಂಬಿದ ದುರಂತನಾಯಕ. ಮಧ್ಯಯುಗದ ವೀರಚರಿತ್ರೆಗಳಿಂದ ತನ್ನ ಧ್ಯೇಯಗಳನ್ನು ಆರಿಸಿಕೊಂಡ ಅವನು ಬದುಕಿದ್ದುದು ಯೂರೋಪಿನ ಸಾಂಸ್ಕೃತಿಕ ಮತ್ತು ಧಾರ್ಮಿಕ ಪುನರುಜ್ಜೀವನ ಕಾಲದಲ್ಲಿ. ಅವನ ಉಗ್ರ ಆಶಾವಾದ, ಅವನ ಮಾನವಹಿತ ಸಾಧನೆಯ ಹಂಬಲ, ಮನುಷ್ಯ ಮನಸ್ಸು ಮಾಡಿದರೆ ಬೇಕಾದ್ದು ಮಾಡಬಲ್ಲ ಎಂಬ ದೃಢನಂಬಿಕೆ — ಇವೆಲ್ಲವೂ ಮಧ್ಯಯುಗದ ಧ್ಯೇಯಗಳಿಗೆ ತುಸು ದೂರವಾದವು. ಡಾನ್ ಕ್ವಿಕ್ಸೋಟ್ ಒಬ್ಬ ಮನುಷ್ಯನಲ್ಲ, ಮನುಷ್ಯ ಕುಲ ಸಂಕೇತ ; ಬಂಧನದಿಂದ ಬಿಡುಗಡೆಯಾಗಲು ಕಾತರಿಸುತ್ತಿರುವ ಮಾನವ. ಅವನು ಯಾವ ಒಂದು ಕಾಲಕ್ಕೂ ಸೇರಿದವನಲ್ಲ.

ಕ್ವಿಕ್ಸೋಟ್ ತನ್ನ ಸಂಕಲ್ಪವನ್ನು ಪ್ರಪಂಚದ ವಿರುದ್ಧವಾಗಿಟ್ಟು ತನ್ನ ಸೋಲಿನಿಂದ ಭ್ರಾಂತಿಗೀಡಾಗುತ್ತಾನೆ. ವಿಚಾರವಾದಿಯಾಗಿ ತರ್ಕಿಸಿ ತನ್ನ ಸೋಲನ್ನು ತತ್ಕಾಲಕ್ಕೆ ಸೀಮಿತ ಗೊಳಿಸಿಕೊಂಡರೂ ಕ್ರಮಕ್ರಮವಾಗಿ ತನ್ನ ಭ್ರಾಂತಿಯಿಂದ ಬಿಡುಗಡೆ ಹೊಂದುತ್ತಾನೆ. ಯಾವ ನಂಬಿಕೆಯಿಂದ ಸಾಹಸಕಾರ್ಯಗಳಿಗೆ ತೊಡಗಿದನೊ ಆ ನಂಬಿಕೆಯಿಂದ ದೂರವಾಗುತ್ತಾನೆ. ಇವನ ಕಥೆ ಸಹಜತೆಯ ಮತ್ತು ಜ್ಞಾನದ ಸ್ವಭಾವಗಳನ್ನು ಒಳಗೊಳ್ಳುತ್ತದೆ. ಭ್ರಾಂತಿ ಮೋಸ ಛದ್ಮತೆಗಳ ಯಥಾದೃಷ್ಟ ನಿರೂಪಣೆ ಇಲ್ಲಿ ಹಾಸು ಹೊಕ್ಕಾಗಿ ಬೆರೆತಿವೆ. ಸಹಜತೆಗೆ ಯಾವ ನ್ಯೂನತೆಯೂ ಬಂದಿಲ್ಲ. ಏಟು ತಿಂದು ತಿಂದು ಒಂದು ಗಾಢಸತ್ಯ ಕ್ವಿಕ್ಸೋಟನಿಗೆ ತಿಳಿಯಿತು : ''ಮನುಷ್ಯ ತನ್ನನ್ನು ಬದಲಾಯಿಸಿ ಕೊಳ್ಳಲಾರ. ಅವನನ್ನು ಸುತ್ತುಗಟ್ಟಿದ ಬಂದೀಖಾನೆಯ ಗೋಡೆಗಳಿಂದ ಪಾರಾಗಲಾರ. ಕನಸು ನನಸಾಗಬೇಕಾದರೆ ತಾನು ಬದಲಾಗಬೇಕು.''

ಡಾನ್ ಕ್ವಿಕ್ಸೋಟ್ ತನ್ನದೇ ಪ್ರಪಂಚವನ್ನು ಸೃಜಿಸಲು ಹೊರಟು ನಿರಾಶನಾದ ವ್ಯಕ್ತಿ. ತನ್ನ ಮನಃಕಲ್ಪಿತ ಸೃಷ್ಟಿ ವ್ಯವಹಾರಿಕ ದೃಷ್ಟಿಯಿಂದ ನಿರರ್ಥಕ. ಅವನು ಎದುರಿಸುವ ರಾಕ್ಷಸರು, ಅನ್ಯಾಯಗಳು ಇವುಗಳಿಗೆ ಅಸ್ತಿತ್ವವಿಲ್ಲ. ಅವನ ಸಾಹಸಗಳಿಂದ ಯಾರಿಗೂ ಉಪಯೋಗವಿಲ್ಲ. ಬುದ್ಧಿವಂತರು, ವ್ಯವಹಾರಜ್ಞರು ಕ್ವಿಕ್ಸೋಟನ ಧರ್ಮಯುದ್ಧಕ್ಕೆ ಗಾಬರಿಗೊಂಡರು ; ಅವನ ಸಂಕಲ್ಪವನ್ನು ವಿಫಲಗೊಳಿಸಲೆತ್ನಿಸಿದರು ; ಅವನನ್ನು ವಿವೇಕದ ಮಾರ್ಗಕ್ಕೆ ಹಚ್ಚಲು ಪ್ರಯತ್ನಿಸಿದರು. ಅವನ ಮನಃಸಂಕಲ್ಪ, ನೈತಿಕ ಭಾವನೆ, ಸ್ವಾತಂತ್ರ್ಯಪ್ರಿಯತೆ, ನಿಷ್ಠೆ ಯಾವುದನ್ನೂ ಅವರು ಒಪ್ಪಲಿಲ್ಲ. 'ಕ್ವಿಕ್ಸೋಟಿಸಂ' ಎಂದರೆ ಅಸಂಗತವಾದ್ದು ; ಅವಹೇಳನೆಗೆ, ದಂಡನೆಗೆ ಗುರಿಯಾಗುವ ತತ್ವ, ಅದೂ ನಮಗಿಂತ ಕೀಳಾದವರಿಂದ. ನಾವು ಸಹಜವೆಂದು ತಿಳಿದುಕೊಂಡಿರುವ ದೃಷ್ಟಿಯಿಂದ ನಾಯಕನ ತಪ್ಪು ಪ್ರಪಂಚ ಸರಿ. ಇದಕ್ಕೆ ಸಾಕ್ಷಿ ನಾಯಕನ ಸೋಲು ; ಅವನಿಗಾಗುವ ಶಿಕ್ಷೆ. ಇನ್ನೂ ಆಳವಾಗಿ ನೋಡಿದಲ್ಲಿ ಅದು ಮಾನವನ ಹೆಗ್ಗುರಿಯ ಅಪಜಯದ ಗುರುತು. ಕ್ವಿಕ್ಸೋಟ್ ಏಕೆ ಸಾಯುತ್ತಾನೆಂದರೆ ಹುಚ್ಚನಾಗಲು ಅವಕಾಶಗಳಿಲ್ಲದ್ದರಿಂದ ಎನ್ನಬೇಕಾಗುತ್ತದೆ.

❑ ❑ ❑

ಕೊನೆಯ ದಿನಗಳಲ್ಲಿ ಕ್ವಿಕ್ಸೋಟ್ ಬುದ್ಧಿಸ್ವಾಸ್ಥ್ಯದಿಂದ ತನ್ನ ಅಭಿಪ್ರಾಯಗಳನ್ನು ಮರೆಯುವುದಕ್ಕೆ ಪ್ರಯತ್ನಪಡುತ್ತಾನೆ. ಆದರೆ ಅದು ಕ್ವಿಕ್ಸೋಟ್ ಆಗಿ ಅಲ್ಲ ; ಕ್ವಿಕ್ಸಾನೊ ಆಗಿ. ತನ್ನ ಯತ್ನದಲ್ಲಿ ಸೋತ ಕ್ವಿಕ್ಸೋಟ್ ವಿವೇಕಿಯಾದಮೇಲೆ ಕ್ವಿಕ್ಸಾನೊ ಆದ. ಇದೇ ವಿವೇಕ ! ''ಸ್ವರ್ಗವನ್ನು ಗೆಲ್ಲಬಹುದು ; ಆದರೆ ಮನುಷ್ಯ ಪ್ರಪಂಚವನ್ನು ಗೆಲ್ಲುವುದು ಸಾಧ್ಯವಿಲ್ಲ''— ಎಂಬುದು ಕ್ವಿಕ್ಸೋಟ್ ಕೊನೆಯ ಗಳಿಗೆಯಲ್ಲಿ ಆಡಿದ ಮಾತು. ಯಾವ ಭರವಸೆಯ ಬಲದಿಂದ ಮನುಷ್ಯ ಬದುಕಬೇಕು ? ಧ್ಯೇಯನಿಷ್ಠನು ಬದಲಾಗದ ಮಾನವಸ್ವಭಾವದಿಂದ ಸೋಲುತ್ತಾನೆ. ಉತ್ಕಟಾಕಾಂಕ್ಷೆಯಿಲ್ಲದ ಮಾನವಜೀವನವೇ ನಮ್ಮ ತತ್ವ ; ಸಾಮಾನ್ಯಯೋಗ್ಯತೆಯ ಸ್ವಾರ್ಥ ಜೀವಿಗಳ ಮನಶ್ಶಾಂತಿ. ಇದು ನಮ್ಮ ವಿಧಿ. ಇದನ್ನು ನಾವು ಒಪ್ಪಬೇಕು. ಸರ್ವಾಂಟೆಸ್ ಡಾನ್ ಕ್ವಿಕ್ಸೋಟನಿಗೆ ಮರುಗಿದರೂ ಅವನನ್ನು ಅಣಕಿಸುತ್ತಾನೆ, ತಿರಸ್ಕರಿಸುತ್ತಾನೆ. ಸಾಹಿತ್ಯ ಮತ್ತು ಭ್ರಾಂತಿಯಿಂದ ಮೊರೆಯಿಟ್ಟರೆ ಪ್ರಯೋಜನವಾಗದು. ನಮ್ಮ ಮೇಲ್ಮೆಯೇನೆಂದರೆ ನಮ್ಮ ಸೋಲನ್ನು ತಿಳಿಯುವುದು, ನಮ್ಮನ್ನು ನಾವು ಅರಿತುಕೊಳ್ಳುವುದು, ಅರಿತು ನಗುವುದು.

ಮನುಷ್ಯ ಒಂದು ಮಿತವಾದ ವಾಸ್ತವಿಕತೆಯನ್ನು ಹೊಂದಿದಾಗ ಗಂಭೀರತತ್ವ ಮತ್ತು ವಿರೋಧತತ್ವ ಇವೆರಡೂ ದೃಷ್ಟಿಗಳಿಂದಲೂ ತನ್ನನ್ನೇ ನೋಡಿಕೊಳ್ಳುತ್ತಾನೆ. ಇವೆರಡೂ ದೃಷ್ಟಿ ಒಂದೇ ಕ್ಷೇತ್ರದ ಮೇಲೆ ಒಟ್ಟಿಗೆ ಬಿದ್ದ ಬೆಳಕುಗಳು. ಕ್ವಿಕ್ಸೋಟನ ಸೋಲು ನಮ್ಮೆಲ್ಲರ ದುರಂತವಾದರೂ ನಾವು ಅವನನ್ನು ನೋಡಿ ನಗುತ್ತೇವೆ. ನಮ್ಮ ಸ್ವಭಾವ ಕೊನೆಯಿಲ್ಲದ ಉತ್ಕಟ ಆಕಾಂಕ್ಷೆಗಳಿಗೆ ನಮ್ಮನ್ನು ಈಡುಮಾಡುತ್ತದೆ.

ಅತಿಮಾನವರಾಗ ಬೇಕು, ಸ್ವರ್ಗದ ಬಾಗಿಲನ್ನು ಕುಟ್ಟಿ ತೆಗೆಯಬೇಕು, ದೇವತೆಗಳ ಎದುರಾಗಬೇಕು ಎಂಬುದು ನಮ್ಮ ಆಸೆ. ನಮ್ಮ ದುರಂತ ನಮ್ಮ ಸೋಲಿಗಿಂತ ಹೆಚ್ಚಾಗಿ ನಮ್ಮ ಘನವಾದ ಧ್ಯೇಯ ಈರ್ಷ್ಯೆಗಳೇ ನಮ್ಮನ್ನು ಜನರ ಕಣ್ಣಿನಲ್ಲಿ ನಗೆಪಾಟಲು ಮಾಡುವುದರಲ್ಲಿದೆ. ಇಲ್ಲಿ ನಾವು ರುದ್ರಹರ್ಷಗಳ ಮಿಲನದ ಕಲ್ಪನಾಕೃತಿ ಕಲಾತ್ಮಕ ದೃಷ್ಟಿಯಿಂದ ಆಕರ್ಷಕವಾಗಿ ರುವುದನ್ನು ಕಾಣಬಹುದು.

ಕ್ವಿಕ್ಸೋಟ್ ತಾನೊಬ್ಬನೇ ನಿಜಸ್ಥಿತಿಯನ್ನು ತಿಳಿದವನಂತೆ ಕಾರ್ಯತತ್ಪರನಾಗಿ, ಕೆಲವು ಕಾಲದ ಮೇಲೆ ತಾನೂ ಇತರರಂತೆ ತೋರಿಕೆಯಿಂದ ಮೂರ್ಖನಾಗುತ್ತೇನೆಂಬ ಅಂಶವನ್ನು ಅರಿತನು. ಹುಚ್ಚನಾದ ಕ್ವಿಕ್ಸೋಟ್ ಇನ್ನೊಂದು ಮಾತು ಹೇಳುತ್ತಾನೆ : ''ಜನರು ಕಂಡಹಾಗೆ ಕಾಣುವುದಿಲ್ಲ. ಜನಗಳನ್ನು ತಿಳಿಯಬೇಕಾದರೆ ಯುಕ್ತಾಯುಕ್ತ ಪರಿಜ್ಞಾನ ಇರಬೇಕು'' ಎಂದು. ಅಂದರೆ ಕಣ್ಣಿಗೆ ಕಾಣಿಸುವುದು ಎಷ್ಟು ಗೊಂದಲವನ್ನೆಬ್ಬಿಸ ಬಹುದು ಎಂದು ತಿಳಿಯಬಹುದು. ''ಹಾಗೆ ಕಾಣುತ್ತೆ'' ''ಹೀಗಿರಬಹುದು'' ಎಂಬ ತೋರಿಕೆ ಮತ್ತು ಊಹಾಪ್ರಪಂಚವೇ ಡಾನ್ ಕ್ವಿಕ್ಸೋಟ್ ಪ್ರಪಂಚ. ಈ ಪ್ರಪಂಚದಲ್ಲಿ ಜನ ಅಸ್ತಿತ್ವವನ್ನು ಎಷ್ಟರಮಟ್ಟಿಗೆ ಕಾಣುತ್ತಾರೊ, ಸಾಧಿಸುತ್ತಾರೊ ಅದನ್ನು ಕಥೆಯ ಸನ್ನಿವೇಶಗಳಲ್ಲಿ ಘಟನೆಗಳಲ್ಲಿ ಪಾತ್ರಗಳಲ್ಲಿ ಕಾಣಬಹುದು. ಅಸ್ತಿತ್ವವನ್ನು ಸೊಟ್ಟಮಾಡಿ ಭ್ರಾಂತಿಯ ಕನ್ನಡಿಯ ಮುಖಾಂತರ ಅಸ್ತಿತ್ವವನ್ನೇ ಅಪಾರ್ಥ ಮಾಡಿಕೊಳ್ಳುತ್ತಾರೆ. ಅಲ್ಲದೆ, ಅಪಾರ್ಥ ಮಾಡಿಕೊಳ್ಳುವದಕ್ಕಾಗಿಯೇ ಅಸ್ತಿತ್ವವನ್ನು ಸೊಟ್ಟಮಾಡುವ ಪ್ರಸಂಗಗಳೂ ಕಡಿಮೆಯವಲ್ಲ. ಸ್ಯಾಂಕೋಗೆ ಗೌರ್‍ನರ್ ಪದವಿಯನ್ನು ಪ್ರಾಯೋಗಿಕ ವಿನೋದವೆಂದು ತಿಳಿದು ಕೊಟ್ಟಿದ್ದು. ಆದರೆ ಸ್ಯಾಂಕೊ ನಡೆಸಿದ ಗೌರ್ನರ್ ಅಧಿಕಾರ ಪರಿಣತರನ್ನು ಬೆರಗಾಗುವಂತೆ ಮಾಡಿತು. ಸಾಧಾರಣ ಜನಜಂಗುಳಿಯಲ್ಲಿರುವ ಬುದ್ಧಿವಂತಿಕೆ, ವಿವೇಕ ಮತ್ತು ಅಧಿಕಾರ ಐಶ್ವರ್ಯದ ಅಮಲಿರುವವರಿಗೆ ಇರುವುದಿಲ್ಲವೆಂದು ವ್ಯಕ್ತವಾಯಿತು. ಸ್ಯಾಂಕೋನಲ್ಲಿ ಜನ ಕಂಡದ್ದೇನು ? ಡಾನ್ ಕ್ವಿಕ್ಸೋಟ್‌ನಲ್ಲಿ ಜನ ಕಂಡಿದ್ದು ಅವನ ಹುಚ್ಚನ್ನು ಮಾತ್ರ ! ಅವನ ಉದಾತ್ತ ಧ್ಯೇಯ ಮಾತ್ರ ಯಾರಿಗೂ ಕಾಣಲೇ ಇಲ್ಲ.

ಡಾನ್ ಕ್ವಿಕ್ಸೋಟ್ ತನ್ನ ಕುದುರೆ ಲಗಾಮನ್ನು ತನ್ನ ಕೈಯಲ್ಲಿ ಹಿಡಿದಿಟ್ಟುಕೊಳ್ಳದೆ ಅದರ ಕತ್ತಿನ ಮೇಲೆ ಹಾಕಿ ಅದು ಹೋದ ಕಡೆ ತನ್ನ ಪ್ರವಾಸ ಎಂಬಂತೆ ವರ್ತಿಸುತ್ತಾನೆ. ಕೆಲವು ಸಾರಿ ಹಿಡಿಯಬೇಕಾದ ಹಾದಿ ಬಿಟ್ಟು ಸ್ವಲ್ಪ ಅತ್ತಿತ್ತ ಹೋದಾಗ ಗಮನಿಸದೆ, ಕ್ವಿಕ್ಸೋಟ್ ತನ್ನನ್ನೇ ಮರೆತು ಕುದುರೆಯ ಮೇಲೆ ಕೂತಿರುತ್ತಾನೆ. ಸ್ವಲ್ಪ ಹೊತ್ತಾದ ಮೇಲೆ ಸುತ್ತಮುತ್ತ ನೋಡಿ ವಿಷಯ ತಿಳಿದ ಮೇಲೆ ಕುದುರೆಯ ಲಗಾಮು ಹಿಡಿದು ತನ್ನ ದಾರಿಗೆ ಎಳೆಯುತ್ತಾನೆ. ಸರ್ವಾಂಟೆಸ್ ಪ್ರತಿಭೆಯೂ ಹಾಗೇ ಹೊರಟಹಾಗೆ ಕಾಣುತ್ತದೆ. ''ಕ್ವಿಕ್ಸೋಟ್ ಹೋರಾಟಕ್ಕೆ ಸಿದ್ಧವಾಗುತ್ತ ಹೊರಡಲಿ, ಸ್ಯಾಂಕೊ ಮಾತಾಡುತ್ತ ಇರಲಿ. ಒಂದನ್ನು ನೋಡೋಣ ; ಇನ್ನೊಂದನ್ನು ಕೇಳೋಣ. ಯಾರೂ ನಡುವೆ ತಲೆಹಾಕದಿರಲಿ'' ಎನ್ನುವ

ಓದುಗರಿಗೆ ಗ್ರಂಥದಲ್ಲಿ ಬರುವ ಪ್ರಣಯಕಥೆಗಳು ಸ್ವಲ್ಪಮಟ್ಟಿಗೆ ಬೇಸರವನ್ನು ತರುತ್ತವೆ. ಆದರೆ ಆ ಕಥೆಯ ಪಾತ್ರಗಳು ಕ್ವಿಕ್ಸೋಟನ ವ್ರತನಿಯಮಕ್ಕೆ ಸ್ವಲ್ಪಮಟ್ಟಿಗೆ ಒಳಪಟ್ಟಿರುವುದರಿಂದ ಅವರ ಜೀವನಕಥೆಗಳಲ್ಲಿ ಕ್ವಿಕ್ಸೋಟಿನ ಪ್ರವೇಶವಾಗಿ ಅವನ್ನು ಸಹ್ಯಗೊಳಿಸುತ್ತದೆ.

ಆತ್ಮದ ಗಂಭೀರತೆಯಿಂದ, ಮಾನವ ಸ್ವಭಾವದ ಒಳಪದರದಲ್ಲಿನ ವಿಶೇಷ ಸಮೃದ್ಧಿಯಿಂದ ಡಾನ್ ಕ್ವಿಕ್ಸೋಟ್ ಮತ್ತು ಸ್ಯಾಂಕೋಪಾನ್ಸ ಭಾವನೆ – ವ್ಯಾಖ್ಯಾನ–ಸಂಕೇತಗಳ ಸುಗ್ಗಿಯನ್ನೇ ತಂದಿಡುತ್ತಾರೆ. ಸರ್ವಾಂಟೆಸ್‌ನ ಈ ಎರಡು ವ್ಯಕ್ತಿಗಳಲ್ಲಿರುವ ಗಂಭೀರತೆಯನ್ನು ಸಮೃದ್ಧಿಯನ್ನು ಕಂಡ ನಮ್ಮ ಭಾವನೆ ಅವುಗಳ ಹಿಡಿತಕ್ಕೆ ಸಿಕ್ಕಿ ಕಾಲಕಾಲಕ್ಕೆ ಬದಲಾಗುತ್ತದೆ.

4

ಈ ಗ್ರಂಥದಲ್ಲಿ ಕ್ವಿಕ್ಸೋಟನ ಪಕ್ಕದಲ್ಲಿ ಯಾವಾಗಲೂ ಇರುವ ವ್ಯಕ್ತಿ ಸ್ಯಾಂಕೊ. ಇವನ ವ್ಯಕ್ತಿತ್ವವನ್ನೂ ಸೂಕ್ಷ್ಮವಾಗಿ ಚರ್ಚಿಸುವುದು ಅವಶ್ಯಕ. ಓದುಗರಲ್ಲಿ ಬಹಳ ಬೇಗ ಕಾಲ್ಪನಿಕಕ್ಕೆ ವಿರುದ್ಧವಾಗಿ ವ್ಯವಹಾರಿಕ ಎನ್ನುವಂತೆ ಡಾನ್ ಕ್ವಿಕ್ಸೋಟ್ ವಿರುದ್ಧ ಸ್ಯಾಂಕೊ ಎಂಬ ಭಾವನೆ ಬರುತ್ತದೆ. ಹಾಗೆಯೇ ಡಾನ್ ಕ್ವಿಕ್ಸೋಟ್ ತೋರಿಕೆಗೂ ಸ್ಯಾಂಕೊ ಅಸ್ತಿತ್ವಕ್ಕೂ ಸಂಕೇತವಾಗಿ ನಿಲ್ಲುತ್ತಾರೆ ಎಂಬ ಭಾವನೆಯೂ ಇದೆ. ಆದರೆ ಇವರಿಬ್ಬರಲ್ಲಿ ವೈದೃಶ್ಯವಿಲ್ಲ, ಸಾದೃಶ್ಯವಿದೆ ; ಸತ್ವಸಮೃದ್ಧಿಯಿದೆ. ಒಬ್ಬನಿಗೆ ಬೌದ್ಧಿಕವಾಗಿ, ಇನ್ನೊಬ್ಬನಿಗೆ ಅನುಭಾವಿಕವಾಗಿ. ಕ್ವಿಕ್ಸೋಟನಿಗೆ ಖ್ಯಾತಿ ಡಲ್ಸಿನೀಯ ಸೇವೆಯಲ್ಲಿ ; ಸ್ಯಾಂಕೊಗೆ ಗೌರ್ನರ್ ಪದವಿಯ ಅಧಿಕಾರ ಸಂಪತ್ತಿನ ಕನಸಿನಲ್ಲಿ. ಇಬ್ಬರೂ ಒಂದು ವಿಧದಲ್ಲಿ ಸಹೋದರರು. ಕೆಲವರು ಸ್ಯಾಂಕೊ ಹೇಡಿ, ಅಂಜುಬುರುಕ ಎನ್ನುತ್ತಾರೆ. ಡಾನ್ ಕ್ವಿಕ್ಸೋಟ್ ಸ್ಯಾಂಕೋನನ್ನು ಹಾಗೆ ಬಯ್ಯುವದರಿಂದ ಬಹುಶಃ ಹಾಗೆ ತಿಳಿಯುತ್ತಾರೆ. ಅವನು ''ವಿವೇಕದ ವ್ಯಾಜ್ಯಕ್ಕೆ ನಿಲ್ಲಬೇಡ'' ಎಂದಾಗ ಸ್ಯಾಂಕೊ ದೂರವಾದ. ಆದರೆ ಆಡು ಕಾಯುವವನ ಜೊತೆ ಹೋರಾಡಿದಾಗ, ಗೌರ್ನರ್ ಪದವಿಯನ್ನು ಒಂದು ವಾರ ಕಾಲ ನಡೆಸಿದಾಗ, ಕ್ವಿಕ್ಸೋಟನನ್ನೇ ಕೆಡವಿ ಮಲಗಿಸಿ ಮೈಮೇಲೆರಗಿದಾಗ, ತನ್ನ ಮಾತಿನಂತೆ ನಡೆದುಕೊಳ್ಳುವಲ್ಲಿ ಸಫಲನಾದಾಗ ಸ್ಯಾಂಕೋನನ್ನು ಯಾರೂ ಹೇಡಿ ಅನ್ನುವ ಹಾಗಿಲ್ಲ. ಆದರೆ ಇದು ದೊಡ್ಡ ವಿಷಯವಲ್ಲ.

ಸ್ಯಾಂಕೊ ಮುಖ್ಯ ಗುಣ, ಅವನ ವ್ಯಕ್ತಿತ್ವದ ತಳಹದಿ. ಅವನ ಅನುಭವ ಸಿದ್ಧವಾದ ವ್ಯವಹಾರಪ್ರಜ್ಞೆ ; ತನಗೆ ತಾನೇ ಬಂದ ಬುದ್ಧಿವಿಶೇಷ. ನಿತ್ಯ ಜೀವನದಲ್ಲಿ ಬುದ್ಧಿವಿಶೇಷ ಬಹಳ ಸೌಕರ್ಯಗಳನ್ನು ಒದಗಿಸುತ್ತವೆ. ಗೌರ್ನರ್ ಪದವಿಯನ್ನು ಕೊಟ್ಟು ಹಾಸ್ಯ ಮಾಡಬೇಕೆಂದಿದ್ದವರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡು ತಲೆದೂಗುವಂತೆ

ಆಯಿತು. ಆದರೆ ಪ್ರತ್ಯಕ್ಷವಾದ್ದನ್ನು, ವಾಸ್ತವಿಕವಾದ್ದನ್ನು ಬಿಟ್ಟು ಭಾವನಾರೂಪದ ಪ್ರಜ್ಞೆಯಿಲ್ಲದ ಸ್ಯಾಂಕೋವಿಗೆ ತನ್ನ ಅನುಭವಪ್ರಜ್ಞೆ ಏನೂ ಸಹಾಯ ಮಾಡುವುದಿಲ್ಲ. ಅದೇ ಆಗ ಹೊರೆಯಾಗುವುದು. ಕಣ್ಣಿಗೆ ಕಾಣುವ ವಸ್ತುಗಳಲ್ಲಿ ಸಂದರ್ಭಗಳಲ್ಲಿ ಅವನ ನಿಶ್ಚಯ ಮತ್ತು ವಿವೇಕ ಅವನಿಗೆ ಬಲ ಕೊಡುತ್ತದೆ. ಆದರೆ ಬಾಹ್ಯರೂಪ ಕಾಣದ ಮನೋಜಾತ ವಿಷಯಗಳಲ್ಲಿ ಅವನು ಮಗುವಂತೆ ಬಲಹೀನನಾಗುತ್ತಾನೆ. ಕೇವಲ ಭಾವನೆಗಳ ಮಂತ್ರವಾದ, ಮನಸ್ಸಿಗೆ ಭೀತಿ ಕೊಡುವ ವಸ್ತುಗಳ ಮುಂದೆ ಅವನ ತಲೆ ಓಡುವುದಿಲ್ಲ. ತಲೆ ಓಡದಿದ್ದಾಗ ಅವನಿಗೆ ದಿಗಿಲು, ಗೊಂದಲ. ಇಂತಹ ಸಮಯದಲ್ಲಿ ಯಾರು ಏನು ಹೇಳಿದರೂ ಪ್ರತಿ ಹೇಳುವ ಸಾಹಸ ತಾತ್ಕಾಲಿಕವಾಗಿ ಅವನಿಗಿಲ್ಲ. ಡಾನ್ ಕ್ವಿಕ್ಸೋಟನನ್ನು ಕಂಡರೆ ಅವನಿಗೆ ತುಂಬಾ ಆತ್ಮೀಯತೆ. ಅವನ ಹುಚ್ಚು ಸಾಹಸಗಳನ್ನೆಲ್ಲಾ ಕಂಡರೂ ಮಮತೆಯ ಬಂಧನ ಅವನನ್ನು ಅನುಸರಿಸುವಂತೆ ಮಾಡುತ್ತದೆ. ಕ್ವಿಕ್ಸೋಟನಲ್ಲಿ ಕೃತ್ರಿಮತೆ ಇಲ್ಲದಿರುವುದರಿಂದ, ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕೆಂಬ ಆಸೆ ಇದ್ದುದರಿಂದ, ಅವನು ಏನೇ ಮಾಡಲು ಅವನನ್ನು ಬಿಡಲಾರೆ ಎಂದು ಸ್ಯಾಂಕೊ ಖಚಿತವಾಗಿ ಹೇಳುತ್ತಾನೆ.

ದುಡ್ಡು ದೊಡ್ಡಪ್ಪ ; ನೂರು ನಾಣ್ಯಗಳಿದ್ದ ಚೀಲ ಇವನಿಗಾಗಲೆ ಸಿಕ್ಕಿದೆ. ಕ್ವಿಕ್ಸೋಟನ ಜೊತೆಯಲ್ಲಿ ಹೋದಲ್ಲಿ ಹಣ ಸಿಕ್ಕಬಹುದು. ಹಾಗೂ ಅವನು ಮಾತು ಕೊಟ್ಟಂತೆ ಗೌರ್ನರ್ ಪದವಿಯೂ ಸಿಗಬಹುದು. ಇಲ್ಲಿ ನಾವು ಸ್ಯಾಂಕೊ ಕ್ವಿಕ್ಸೋಟನಂತೆ ಸಂಭ್ರಾಂತನಾಗಿರುವುದನ್ನು ಕಾಣುತ್ತೇವೆ. ಅವನೇ ಹೇಳುವಂತೆ : ''ನನಗೆ ನಾಣ್ಯಗಳು ಸಿಕ್ಕಿದಮೇಲೆ ನಾನು ಅಲ್ಲಿ ಇಲ್ಲಿ ಎಲ್ಲ ಕಡೆಯಲ್ಲಿಯೂ ಚಿನ್ನದ ಗಟ್ಟಿಗಳು ಬಿದ್ದಿವೆಯೊ ಎನ್ನಿಸಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತೇನೆ. ಅವುಗಳನ್ನು ಮಾರಿ ಜಮೀನು ಕೊಂಡಂತೆ ಭ್ರಮೆಗೊಳ್ಳುತ್ತೇನೆ.'' ಹೀಗೆ ಖ್ಯಾತಿಯ ಹಂಬಲ, ಪ್ರೀತಿಯ ವ್ಯಾಮೋಹದಿಂದ ನಾಯಕ ಹೊರಟರೆ, ಹಣಸಂಪಾದನೆ, ಪದವಿಯ ಆಕಾಂಕ್ಷೆಯಿಂದ ಅನುಚರ ಸ್ಯಾಂಕೊ ಹೊರಡುತ್ತಾನೆ.

ಇದೂ ಅಷ್ಟು ಮುಖ್ಯವೆನಿಸುವುದಿಲ್ಲ ; ಏಕೆಂದರೆ ಸ್ಯಾಂಕೊ ಕ್ವಿಕ್ಸೋಟನನ್ನು ನಂಬದಿದ್ದರೆ ಅವನ ಪದವಿಯ ಹೊಂಗನಸೇ ಮಾಯವಾಗುತ್ತದೆ. ಅದೂ ಅಲ್ಲದೆ ಕ್ವಿಕ್ಸೋಟನ ಧೈರ್ಯ, ಅವನ ಜ್ಞಾನಸಂಪತ್ತು, ವಾಗ್ಝರಿ ಎಲ್ಲವೂ ಸ್ಯಾಂಕೋನನ್ನು ಮರುಳುಗೊಳಿಸುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಕ್ವಿಕ್ಸೋಟನ ಮುಗ್ಧಮನಸ್ಸಿಗೆ ಸ್ಯಾಂಕೊ ಮಾರುಹೋಗಿದ್ದಾನೆ. ಹಗಲು ಹನ್ನೆರಡು ಗಂಟೆಯಾಗಿದ್ದರೆ ಅದನ್ನು ರಾತ್ರಿ ಎಂದು ಕ್ವಿಕ್ಸೋಟನನ್ನು ನಂಬಿಸಬಹುದು ಎನ್ನುತ್ತಾನೆ ಸ್ಯಾಂಕೊ. ಇದು ಹೃದಯದ ಮಾತು, ಬುದ್ಧಿಯ ಮಾತಲ್ಲ.

ಸ್ಯಾಂಕೊ ಮಾತನಾಡುತ್ತಿದ್ದರೆ ಗಾದೆಗಳ ಸುರಿಮಳೆ, ನಗೆಯ ಹೊನಲು. ತನ್ನದೇ ಆದ ಆಡಂಬರವಿಲ್ಲದ ಶೈಲಿಯಲ್ಲಿ ಪ್ರಕೃತಿಯೇ ಮೈವೆತ್ತು ಮಾತಾಡಿದಂತೆ

ಮಾತಾಡುತ್ತಾನೆ. ಕ್ವಿಕ್ಸೋಟನ ಮಾತಿನ ಗೊಬ್ಬರ ಸ್ಯಾಂಕೊ ಮೇಲೆ ಬಿದ್ದು ಬಿದ್ದು ಅವನೂ ಒಂದು ಡಾಂಭಿಕ ಶೈಲಿಯಲ್ಲಿ ಮಾತಾಡುವುದು ಬಹಳ ಸೋಜಿಗ!

ನಿದ್ದೆ ಮಾಡುತ್ತಿದ್ದ ಸ್ಯಾಂಕೊ ಕುರಿತು ಕ್ವಿಕ್ಸೋಟ್ ಹೇಳುವ ಮಾತುಗಳಲ್ಲಿ ಬಹಳ ಅರ್ಥವಿದೆ : "ನಿನಗೆ ಹೊಟ್ಟೆಕಿಚ್ಚಿಲ್ಲ. ನಿನ್ನನ್ನು ಕಂಡರೆ ಯಾರೂ ಹೊಟ್ಟೆ ಕಿವುಚಿಕೊಳ್ಳು ವುದಿಲ್ಲ. ಶಾಂತಿಯಿಂದ ನಿದ್ರೆ ಮಾಡು. ಮಾಂತ್ರಿಕರು ನಿನ್ನನ್ನು ಹಿಂಸಿಸುವುದಿಲ್ಲ. ನಿನ್ನ ಹೆಂಡತಿಯನ್ನು ಕುರಿತು ಆಲೋಚನೆಗಳು ನಿನ್ನನ್ನು ಬಾಧಿಸುವುದಿಲ್ಲ. ಸಾಲದ ತೊಂದರೆ ಇಲ್ಲ, ನಾಳೆಯ ಯೋಚನೆ ಇಲ್ಲ, ಹೆಬ್ಬಯಕೆಯ ಬಾಧೆಯಿಲ್ಲ. ಪ್ರಪಂಚದ ಒಣಪ್ರತಿಷ್ಠೆಗೆ ನಿನ್ನಲ್ಲಿ ತಾವಿಲ್ಲ. ನಿನ್ನ ಹೆಂಡತಿ, ಮಗಳು, ನಿನ್ನ ಕತ್ತೆ, ಇಷ್ಟಕ್ಕೇ ಸೀಮಿತವಾದ್ದು ನಿನ್ನ ಜೀವನವ್ಯವಹಾರ. ನಿದ್ರಿಸು ಸ್ಯಾಂಕೊ, ಸುಖವಾಗಿ ನಿದ್ದೆಮಾಡು." ಹಾಗೇ ಸ್ಯಾಂಕೊ ಕೂಡ ಒಂದು ಸಾರಿ ಹೇಳುತ್ತಾನೆ : "ದೇವರು ನಿದ್ರೆಯನ್ನು ಕಂಡುಹಿಡಿದವನನ್ನು ಅನುಗ್ರಹಿಸಲಿ" ಎಂದು. ಎಷ್ಟು ಅರ್ಥಗರ್ಭಿತವಾಗಿದೆ ಮಾತು!

ಕ್ವಿಕ್ಸೋಟ್ ಮತ್ತು ಸ್ಯಾಂಕೋರ ನಡುವಣ ಈ ಸಂಭಾಷಣೆಯನ್ನು ಭ್ರಾಂತಿ ಕಲ್ಪನೆಯೆಂದೊ ಭ್ರಮಾಜನ್ಯವೆಂದೊ ಹೇಳುವುದು ಹೇಗೆ ? ಸ್ಯಾಂಕೋಗೆ ಗೌರ್ನರ್ ಪದವಿ ದೊರೆತಾಗ ಕ್ವಿಕ್ಸೋಟ್ ಹೇಳುತ್ತಾನೆ : "ಮತ್ತೆ ಕೇಳು. ನೀನು ತಿಳಿದಿರುವುದೇ ಸರಿ ಎಂದು ಯಾವಾಗಲೂ ಭಾವಿಸಬೇಡ. ಯಾವ ಅಧಿಕಾರಿಯೂ ಸರ್ವಜ್ಞನಲ್ಲ. ಹಾಗೆಂದು ತಿಳಿದರೆ ಅದೊಂದು ಮೂರ್ಖತನ ಅಷ್ಟೆ. ಬಡವರ ಕಣ್ಣೀರು ನಿನ್ನನ್ನು ಮರುಕ ಗೊಳಿಸಲಿ. ಆದರೆ ನ್ಯಾಯವನ್ನು ಬಿಡಬೇಡ. ದುಡ್ಡಿದ್ದವರು ನ್ಯಾಯವನ್ನು ತಮ್ಮಂತೆ ಮಾಡಿಕೊಳ್ಳಲು ಅವಕಾಶ ಕೊಡಬೇಡ. ಕಾನೂನಿನ ಪ್ರಕಾರ ತೀರ್ಪು ಕೊಡುವಲ್ಲಿ ದಯೆಗೆ ಅವಕಾಶವಿರಲಿ. ದಯೆಯೇ ಧರ್ಮದ ಮೂಲ. ನಿನ್ನ ಶತ್ರುಗಳು ಒಂದು ವೇಳೆ ನಿನ್ನೆದುರು ನ್ಯಾಯಕ್ಕೆ ಬಂದರೆ, ನಿನ್ನ ಹಳೆಯ ಸೇಡನ್ನು ತೀರಿಸಿಕೊಳ್ಳಲು ಮನಸ್ಸು ಮಾಡಬೇಡ. ಅಧಿಕಾರಿಗೆ ಸೇಡಿರಬಾರದು. ಸುಂದರಿಯೊಬ್ಬಳು ನಿನ್ನ ಬಳಿ ನ್ಯಾಯಕ್ಕಾಗಿ ಬಂದರೆ ಅವಳ ಮುಖ ಮತ್ತು ಕಣ್ಣೀರು ನಿನ್ನ ಮನಸ್ಸನ್ನು ಕದಡದಿರಲಿ. ನೀನು ತಪ್ಪು ಮಾಡಿದವನಿಗೆ ಕೊಡುವ ಶಿಕ್ಷೆಯ ಜೊತೆಗೆ ಅವನನ್ನು ಬಯ್ಯಬೇಡ. ಶಿಕ್ಷೆಯ ನೋವೇ ಸಾಕು. ಈ ಕೆಲವು ಮಾತುಗಳನ್ನು ನೆನಪಲ್ಲಿಟ್ಟುಕೊಂಡು ನಿನ್ನ ಅಧಿಕಾರದಲ್ಲಿ ಕೃತಕೃತ್ಯನಾಗು. ಆಗ ನಿನ್ನ ಸುಖಶಾಂತಿ ಖ್ಯಾತಿ ನಿರಂತರ. ಎಲ್ಲರಿಂದ ಹೊಗಳಿಸಿಕೊಂಡು ನೀನು ಬಾಳುತ್ತಿ. ನಿನ್ನ ಮೊಮ್ಮಕ್ಕಳಿಗೆ ನಿನಗಿಲ್ಲದ ಹುಟ್ಟಿನ ಘನತೆ ತಾನಾಗಿಯೇ ಬರುತ್ತದೆ. ಇನ್ನು ನಿನ್ನ ನಡೆನುಡಿ, ಬಟ್ಟಬರೆ, ದಿನಚರಿ ಹೇಗಿರಬೇಕೆಂಬುದನ್ನು ಹೇಳುತ್ತೇನೆ"— ಎಂದನು. ಇದಕ್ಕೆ ಸ್ಯಾಂಕೊ ಕೊಟ್ಟ ಉತ್ತರ ವಿಶಿಷ್ಟವಾದದ್ದು : "ಸ್ವಾಮಿ, ನೀವು ಇಷ್ಟೊಂದೆಲ್ಲವನ್ನೂ ಒಟ್ಟಿಗೆ ಹೇಳಿದರೆ ನನಗೆ ಮರೆತುಹೋಗುತ್ತದೆ. ಅಲ್ಲದೆ ನಾನು ಗೌರ್ನರ್ ಪದವಿಗೆ ಯೋಗ್ಯನಲ್ಲದಿದ್ದರೆ ಈಗಲೇ ಬೇಡವೆಂದು ತಿಳಿಸಿಬಿಡುತ್ತೇನೆ.

ಗೌರ್ನರ್ ಪದವಿಗಿಂತ ನನ್ನ ಹೃದಯ ನೈರ್ಮಲ್ಯ ನನಗೆ ಮುಖ್ಯ. ಅರಮನೆಯ ಹಬ್ಬದೂಟ, ಎಲೆಮನೆಯ ಗಂಜಿ, ಎರಡೂ ಒಂದೇ ನನಗೆ. ಹಸಿದಾಗ ನಿದ್ರೆ ಬಂದರೆ ಬಡವ-ಶ್ರೀಮಂತ, ಸೇವಕ-ಪ್ರಭು ಎಲ್ಲರೂ ಒಂದೇ. ನನಗೆ ರಾಜ್ಯವಾಳುವ ಶಕ್ತಿ ಇಲ್ಲ, ಗೊತ್ತು. ಆದರೆ ತಾವೇ ಅಲ್ಲವೆ ಈ ಗೌವರ್ನರ್ ಪದವಿಯ ವ್ಯಾಮೋಹವನ್ನು ನನ್ನಲ್ಲಿ ಹುಟ್ಟಿಸಿದ್ದು. ಈ ಗೌರ್ನರ್ ಪದವಿಯಿಂದ ನಾನು ಆತ್ಮಘಾತುಕನಾದೆನೆಂದು ನಿಮಗೆ ಸಂಶಯ ಬಂದರೆ ನಾನು ಹೇಳುವುದಿಷ್ಟೇ : ನಾನು ಬಡ ಸ್ಯಾಂಕೋ ಆಗಿ ಸ್ವರ್ಗಕ್ಕೆ ಮನಸ್ಸು ಮಾಡುತ್ತೇನೆಯೇ ಹೊರತು ಪಿಶಾಚಿಗೆ ನನ್ನನ್ನು ಮಾರಿಕೊಳ್ಳುವುದಿಲ್ಲ. ಅಧಿಕಾರದಾಹ ನನ್ನಲ್ಲಿಲ್ಲ. ನಾನು ಧನಪಿಶಾಚಿಯೂ ಅಲ್ಲ.''

''ಈ ಒಂದು ಮಾತಿನಿಂದ ನೀನು ಒಂದಲ್ಲ, ಸಾವಿರ ದ್ವೀಪಗಳ ಗೌರ್ನರ್ ಆಗಲು ಅರ್ಹನಾಗಿದ್ದೀ'' ಎಂದು ಆಗ ಕ್ವಿಕ್ಸೋಟ್ ಹೇಳಿದ್ದರಲ್ಲಿ ತುಂಬ ಔಚಿತ್ಯವಿದೆ.

5

ಸರ್ವಾಂಟೆಸ್ ಮಾಡಿದ ಕೆಲಸವನ್ನು ಕಾವ್ಯಪ್ರಪಂಚದ ರೀತಿಯಲ್ಲಿ ವಿಮರ್ಶಿಸಬೇಕು. ಸಲ್ಲದ ವಿಪರೀತಾರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಬರಹಗಾರನ ಉದ್ದೇಶವನ್ನು ಬಿಟ್ಟು ಕಾವ್ಯದಲ್ಲಿರುವ ವಸ್ತುವನ್ನು ಹಿಗ್ಗಿಸಿ ಬಗ್ಗಿಸಿ ಬಡಿದು ನಮ್ಮ ಆಲೋಚನಗೆ ತಕ್ಕಂತೆ ಪರಿವರ್ತಿಸಬಾರದು. ಮೊದಲ ಪುಟದಿಂದ ಕೊನೆಯ ಪುಟದವರೆಗೂ ನಗೆ ಚಿಮ್ಮಿಸುವ ಕಾವ್ಯ 'ಡಾನ್ ಕ್ವಿಕ್ಸೋಟ್' ಕಾದಂಬರಿ. ತಮಾಷೆ, ಒರಟು ಹಾಸ್ಯ, ಮೃದುಹಾಸ್ಯ, ವ್ಯಕ್ತಿಶೀಲದಿಂದ ಬರುವ ಹಾಸ್ಯ, ಶ್ಲೇಷೆಯಿಂದ ಸೃಜಿಸುವ ಹಾಸ್ಯ, ಅರ್ಥಗಂಭೀರತೆಯುಳ್ಳ ಹಾಸ್ಯ — ಹೀಗೆ ನಾನಾ ವಿಧದ ನಗೆಯನ್ನು ಒದಗಿಸುವ ಅಪೂರ್ವಗ್ರಂಥ ಇದು.

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳವರೆಗೂ ಪಾಶ್ಚಾತ್ಯ ಸಾಹಿತ್ಯದಲ್ಲಿ 'ಡಾನ್ ಕ್ವಿಕ್ಸೋಟ್'ನಂತಹ ನಿಷ್ಠೆಯಿಂದ ಕೂಡಿದ ಕಾದಂಬರಿ ಇರಲಿಲ್ಲ. ಈ ಶತಮಾನದ ಕಾದಂಬರಿಗಳು ಕೇವಲ ಮನಸ್ಸಿಗೆ ಗೋಚರವಾಗುವ ಬೌದ್ಧಿಕ ವಿಷಯಗಳ ಪ್ರತಿಪಾದನೆಯನ್ನು ಸೂಚಿಸಿಕೊಂಡು ಬೆಳೆಯುತ್ತದೆ. ಆದರೆ 'ಡಾನ್ ಕ್ವಿಕ್ಸೋಟ್' ಕಾದಂಬರಿಯಲ್ಲಿ ಎಲ್ಲ ಅರ್ಥಗಳೂ ಸಂದರ್ಭಗಳಲ್ಲಿ ಪಾತ್ರಗಳ ಶೀಲ, ಅಸ್ತಿತ್ವದಲ್ಲಿ ರೂಪುಗೊಂಡು ನಮ್ಮ ಕಣ್ಣೆದುರಿಗೆ ನಿಲ್ಲುತ್ತವೆ. ಇದು ಒಂದು ಶುದ್ಧ ಕಲಾವಿಶೇಷ . ಸರ್ವಾಂಟೆಸ್ ಸಾಯುವ ಸ್ವಲ್ಪದಿನ ಮುಂಚೆ ತನ್ನ ಮಡಿವಂತ ಓದುಗರಿಗೆ ''ಎಲುಬನ್ನು ಕಡಿದು ಒಳಮಜ್ಜೆಯನ್ನು ಹೀರಿ'' (Crack the bone and suck the marrow) ಎಂದು ಹೇಳಿದನೆಂದು ಪ್ರತೀತಿ. ಇದು ಅವನ ಕಾದಂಬರಿಯ ಓದುಗರೆಲ್ಲ ನೆನಪಿನಲ್ಲಿಡಬೇಕಾದ ಎಚ್ಚರಿಕೆಯ ಮಾತು.

ವಾಲ್ಟೇರ್ : 'ಕ್ಯಾಂಡೀಡ್'

ಡಿ. ಎ. ಶಂಕರ್

1755ರ ನವೆಂಬರ್‌ನಲ್ಲಿ ಪೋರ್ಚುಗಲ್ಲಿನ ರಾಜಧಾನಿ, ಲಿಸ್ಬನ್, ತೀವ್ರ ಪ್ರಮಾಣದ ಭೂಕಂಪಕ್ಕೆ ಒಳಗಾಯಿತು. ಸಾವಿರಾರು ಮನೆಗಳು ಬಿದ್ದುಹೋದವು. ಹದಿನೈದು ಸಾವಿರಕ್ಕೂ ಹೆಚ್ಚು ಜನ ಸತ್ತರು. ಅಂಗವಿಹೀನರಾದವರು, ಗಾಯ ಗೊಂಡವರು, ನಿರ್ಗತಿಕರಾದವರುಗಳ ಸಂಖ್ಯೆ ಅಪಾರವಾಗಿತ್ತು. ಈ ದೈಹಿಕ, ಮಾನಸಿಕ ಯಾತನೆ ಸಾಲದು ಎನ್ನುವಂತೆ ಉತ್ತರ ಯೂರೋಪಿನಲ್ಲಿ ಪ್ರಬಲವಾಗಿದ್ದ ಪ್ರಾಟೆಸ್ಟೆಂಟ್ ಚರ್ಚ್ 'ದೇವರು ರೋಮನ್ ಕ್ಯಾಥೊಲಿಕ್‌ರನ್ನು ಶಿಕ್ಷಿಸಲು ಈ ಕ್ರಮ ತೆಗೆದುಕೊಂಡಿದ್ದಾನೆ' ಎಂದು ಪ್ರಚಾರ ಮಾಡಲಾರಂಭಿಸಿತು. ಇದಕ್ಕೆ ತದ್ವಿರುದ್ಧವಾಗಿ, 'ಪಾಷಂಡಿಗಳಾದ ಕೆಲವು ಪ್ರಾಟೆಸ್ಟೆಂಟರು ಲಿಸ್ಬನ್‌ಗೆ ಹೇಗೋ ನುಸುಳಿಕೊಂಡು ಬಂದಿದ್ದಾರೆ. ಆದ್ದರಿಂದಲೇ ದೇವರು ತನ್ನ ಅಸಮಾಧಾನವನ್ನು ಹೀಗೆ ವ್ಯಕ್ತಪಡಿಸಿದ್ದಾನೆ' ಎಂದು ಕ್ಯಾಥೊಲಿಕ್ ಚರ್ಚ್ ವ್ಯಾಖ್ಯಾನಿಸಿತು ; ಅದರೊಟ್ಟಿಗೆ ದೈವದ ಕೋಪಶಮನಾರ್ಥವಾಗಿ, ವಿಧ್ಯುಕ್ತ ರೀತಿಯಲ್ಲಿ, ಹಲವಾರು ಪ್ರಾಟೆಸ್ಟೆಂಟರನ್ನು ಸಜೀವ ದಹನಕ್ಕೆ ಗುರಿಮಾಡಿತು. ಈ ಸಜೀವ ದಹನ ಕಾರ್ಯ ಸಂಭ್ರಮದಿಂದ ನಡೆಯಿತು ; ಲಿಸ್ಬನ್‌ದ ಕ್ಯಾಥೊಲಿಕ್ ಜನಸಮುದಾಯ ಇನ್ನು ಭೂಕಂಪಗಳು ಸಂಭವಿಸುವುದಿಲ್ಲ ಎಂದು ನಂಬಿತು ! ಫ್ರೆಂಚ್ ಕ್ರಾಂತಿಗೆ ಮೊದಲು ಯೂರೋಪಿನಲ್ಲಿ ವ್ಯಾಪಕವಾಗಿದ್ದ ಮತೀಯ ಅಸಹನೆಗೆ, ಮೌಢ್ಯಕ್ಕೆ ಈ ಸಂಗತಿ ಒಂದು ಸಮರ್ಪಕ ಉದಾಹರಣೆಯಾಗಬಲ್ಲದು.

ಇದೇ ಸುಮಾರಿನಲ್ಲಿ ರೊಮಾಂಟಿಕ್ ಮನೋಧರ್ಮಕ್ಕೆ ಯೂರೋಪಿನಲ್ಲಿ ಪ್ರಪ್ರಥಮವಾಗಿ ಅತಿ ಸಮರ್ಥ ಚಾಲನೆ ಕೊಟ್ಟ ರೂಸ್ಸೋ ಈ ನೈಸರ್ಗಿಕ ದುರಂತಕ್ಕೆ ಬೇರೆಯೇ ಆದ ವಿಶ್ಲೇಷಣೆ ಒದಗಿಸಿದ : ಮನುಷ್ಯ ಪ್ರಕೃತಿಯಿಂದ, ಪ್ರಕೃತಿಯ ನಿಯಮ ಗಳಿಂದ ದೂರ ಸರಿದುಹೋಗಿದ್ದಾನೆ ; ಪೂರ್ವದ ಸಮತೋಲನೆಯನ್ನು ಪಡೆಯ ಬೇಕಾದರೆ ಮನುಷ್ಯ ಮತ್ತೆ ಪ್ರಕೃತಿಯ ಮಡಿಲಿಗೆ ಹಿಂತಿರುಗಿ 'ಉದಾತ್ತ ವನ್ಯಜೀವಿ' ಯಾಗಬೇಕು. ಇಲ್ಲದಿದ್ದರೆ ಅವನ ಅವಸಾನ ಖಂಡಿತ. ಆರುಏಳು ಅಂತಸ್ತಿನ ಮನೆಗಳನ್ನು ಕಟ್ಟಿಕೊಂಡು ಲಕ್ಷಾಂತರ ಜನ ಒಟ್ಟಿಗೆ ಒಂದೇ ಸ್ಥಳದಲ್ಲಿ ವಾಸಿಸಬೇಕು ಎನ್ನುವುದು ಪ್ರಕೃತಿಯ ನಿಯಮಕ್ಕೆ ವಿರುದ್ಧವಾದದ್ದು. ಈ ಬಗೆಯ ನಗರೀಕರಣ ಇಲ್ಲದಿದ್ದರೆ ಒಂದಿಷ್ಟು ಅಪಘಾತಗಳಾಗುತ್ತಿದ್ದುವು ಅಷ್ಟೆ. ಮತ್ತೆ, ಮನುಷ್ಯ ಮೂಲದಲ್ಲಿ, ಸ್ವಭಾವತಃ ಒಳ್ಳೆಯವನು ; ಅವನನ್ನು ಕೆಡಿಸುವುದು ನಾಗರಿಕತೆ. ಅಲ್ಲಿ ಕೃತಕವಾಗಿ ಹುಟ್ಟಿ ಬರುವ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಟ್ಟುಕಟ್ಟಳೆಗಳು, ನಡಾವಳಿಗಳು, ಮನುಷ್ಯನನ್ನು

ನೈತಿಕವಾಗಿ ಭ್ರಷ್ಟನನ್ನಾಗಿಸಿವೆ. ಪ್ರಪಂಚ ಅದು ಇರುವ ರೀತಿಯಲ್ಲಿ ಸಮರ್ಪಕವಾಗಿಯೇ ಇದೆ ; ನಾವು ಅದನ್ನು ಹಾಗೆ ಉಳಿಯಗೊಟ್ಟಿಲ್ಲ. ಆದ್ದರಿಂದ ಈ ದುರಂತಗಳು ಸಂಭವಿಸುತ್ತವೆ ಎಂದು ವಾದಿಸಿದ.

ರೂಸ್ಸೋವಿಗೂ ಮೊದಲು ಲೈಬ್‌ನಿಜ್ 'ಸಾಧ್ಯ ಪ್ರಪಂಚ'ಗಳ ಬಗ್ಗೆ ಇನ್ನೊಂದು ಬಗೆಯ ಸಿದ್ಧಾಂತ ಮಂಡಿಸಿದ್ದ. ತಾರ್ಕಿಕ ವಿರೋಧಾಭಾಸವಿಲ್ಲದ ಪ್ರಪಂಚವೇ 'ಸಾಧ್ಯ ಪ್ರಪಂಚ'. ಇಂಥವು ಅನೇಕವಿವೆ. ಈಗಿರುವ ಪ್ರಪಂಚವನ್ನು ಸೃಷ್ಟಿ ಮಾಡುವ ಮೊದಲು ದೇವರು ಇಂಥ ಅನೇಕ ಬಗೆಯ 'ಸಾಧ್ಯ ಪ್ರಪಂಚ'ಗಳನ್ನು ಕುರಿತು ಯೋಚನೆ ಮಾಡಿದ. ಯೋಚನೆ ಮಾಡಿದನಷ್ಟೇ ಅಲ್ಲ, ತಾನು ಸ್ವಭಾವತಃ ಸದ್ಗುಣ ಸಾಕಾರವಾದ್ದರಿಂದ ಅತ್ಯಂತ ಒಳ್ಳೆಯ, ಅತ್ಯಂತ ಸಮರ್ಪಕ ಪ್ರಪಂಚವನ್ನು ಸೃಷ್ಟಿಮಾಡಲು ನಿರ್ಧರಿಸಿದ. ಈ ಪ್ರಪಂಚದಲ್ಲಿ ಅಮಂಗಳಕರ ಅಂಶಗಳಿಗಿಂತ ಮಂಗಳಕರ ಅಂಶಗಳು ಹೆಚ್ಚಾಗಿದ್ದುವು. ನಿಜ, ಅಮಂಗಳಕರ ಅಥವಾ ಕೆಡುಕಿನ ಅಂಶವೇ ಇಲ್ಲದ ಪ್ರಪಂಚವನ್ನು ದೇವರು ಸೃಷ್ಟಿ ಮಾಡಬಹುದಾಗಿತ್ತು. ಆದರೆ ಆ 'ಸಾಧ್ಯ ಪ್ರಪಂಚ' ಈಗಿರುವ ಪ್ರಪಂಚದಷ್ಟು ಸಮರ್ಪಕ ವಾಗುತ್ತಿರಲಿಲ್ಲ. ಏಕೆಂದರೆ ಕೆಲವು ಮಂಗಳಗುಣಗಳು ಅಮಂಗಳ ಗುಣಗಳೊಂದಿಗೆ ಅವಿಭಾಜ್ಯವಾಗಿ ಬೆರೆತುಹೋಗಿರುತ್ತವೆ. ಉದಾಹರಣೆಗೆ, ತುಂಬ ಬಾಯಾರಿಕೆ ಯಾದಾಗಷ್ಟೇ ನೀರು ರುಚಿ ಎನಿಸುವುದು. ಬಾಯಾರಿಕೆ ಇಲ್ಲದಿದ್ದರೆ ನೀರು ರುಚಿ ಎನಿಸುತ್ತಲೇ ಇರಲಿಲ್ಲ. ಹೀಗೆಯೇ ಮನುಷ್ಯನಿಗೆ ಸ್ವತಂತ್ರ ಸಂಕಲ್ಪಶಕ್ತಿ ಕೊಟ್ಟ. ಪಾಪಾಂಶವೇ ಇಲ್ಲದಂಥ ಪ್ರಪಂಚವನ್ನು ಸೃಷ್ಟಿಸುವುದು ತಾರ್ಕಿಕವಾಗಿ ತಪ್ಪಾಗುತ್ತದೆ. ಆದ್ದರಿಂದಲೇ ದೇವರು ಮನುಷ್ಯನಿಗೆ ಸ್ವತಂತ್ರ ಸಂಕಲ್ಪಶಕ್ತಿ ನೀಡಿದ ; ಹಾಗೆಯೇ ಒಳಿತು ಕೆಡಕುಗಳ ನಡುವೆ ಆಯುವ ಶಕ್ತಿಯನ್ನೂ ಕೊಟ್ಟ. ಅಲ್ಲದೆ ಈ ಪ್ರಪಂಚದಲ್ಲಿ ಕೆಡುಕಿನ ಅಮಂಗಳಕರ ಅಂಶಗಳಿಗಿಂತ ಹತ್ತುಪಟ್ಟು ಹೆಚ್ಚು ಒಳ್ಳೆಯ, ಮಂಗಳಕರ ಅಂಶಗಳಿವೆ. ಆದ್ದರಿಂದ ಈಗ ಸೃಷ್ಟಿತವಾಗಿರುವ, ನಾವು ಇರುವ ಈ ಪ್ರಪಂಚ ಅತ್ಯಂತ ಸಮರ್ಪಕವಾದದ್ದು ಎಂದು ಲೈಬ್‌ನಿಜ್ ವಾದಿಸಿದ. ಕಾರಣ, ದೇವರು ಎನ್ನುವವನು ಇದ್ದರೆ ಅವನು ಪರಿಪೂರ್ಣರೂಪಿ ; ಪರಿಪೂರ್ಣರೂಪಿಯಾದ್ದರಿಂದ ಪರಮಜ್ಞಾನಿ ; ಸರ್ವಶಕ್ತ ಹಾಗೂ ನ್ಯಾಯಮೂರ್ತಿ. ದೇವರು ಇದೆಲ್ಲವೂ ಆಗಿರುವುದರಿಂದ ಅವನು ಸೃಷ್ಟಿಸಿದ್ದೆಲ್ಲವೂ ಸರಿಯಾಗಿಯೇ ಇದೆ. ಪ್ರಾಸಂಗಿಕವಾಗಿ ಬರುವ ಕೆಡುಕಿನ ಅಮಂಗಳದ ಅಂಶಗಳೂ ಅವಶ್ಯಕವೇ ಆಗಿರಬೇಕು. ಏಕೆಂದರೆ ಈ ಅಮಂಗಳಕರ ಅಂಶಗಳು ದೇವರ ಒಳ್ಳೆಯತನಕ್ಕಾಗಲೀ ಅವನ ಸದುದ್ದೇಶಕ್ಕಾಗಲೀ ಬಾಧಕವಲ್ಲ. ಭೂಕಂಪಗಳು ನಮ್ಮ ಸೀಮಿತ ದೃಷ್ಟಿಯಲ್ಲಿ ಕೆಡುಕಾಗಿಯೇ ಕಾಣಬಹುದು ; ಆದರೆ ದೇವರ ವಿಶಾಲದೃಷ್ಟಿಯಲ್ಲಿ ಅದು ಅವಶ್ಯವಷ್ಟೇ ಅಲ್ಲ, ಒಳ್ಳೆಯದೇ.

ಇಂಥ ವಾದ ರಾಜರಿಗೆ ಶ್ರೀಮಂತರಿಗೆ ಪ್ರಿಯವಾದದ್ದು ಆಶ್ಚರ್ಯವೇನಿಲ್ಲ.

ಅಮಂಗಳಕರವಾದದ್ದೆಲ್ಲ ಅವರ ಸೇವಕರ ಪಾಲಿಗೂ ಮಂಗಳಕರವಾದದ್ದೆಲ್ಲ ಅವರ ಪಾಲಿಗೂ ಬಂದಿತು. ಈ ಆಶಾವಾದ ಇಡೀ ಯೂರೋಪಿನಲ್ಲಿ ಅಲ್ಲದೆ ಇಂಗ್ಲೆಂಡಿನಲ್ಲೂ ಷಾಫ್ಟ್ಸ್‌ಬೆರಿ ಅಂಥವರ ಮುಖಾಂತರ ವ್ಯಾಪಕವಾಗಿ ಹಬ್ಬಿತು. ಅಲೆಕ್ಸಾಂಡರ್ ಪೋಪ್‌ನ 'ದಿ ಎಸ್ಸೆ ಆನ್ ಮ್ಯಾನ್' "All that is, is right" ಎಂದು ಈ ಸಿದ್ಧಾಂತಕ್ಕೆ ಪುಷ್ಟಿ ಕೊಟ್ಟಿತು.

ಒಂದು ಕಡೆ ಮತೀಯ ಅಸಹನೆ, ಮೌಢ್ಯ, ಕುರುಡು ನಂಬಿಕೆಗಳು ; ಇನ್ನೊಂದು ಕಡೆ ಬದುಕಿನಲ್ಲಿಯ ಕೇಡು, ಕೆಟ್ಟತನ, ಅಮಂಗಳಕರವಾದುದನ್ನು ತಾರ್ಕಿಕವಾಗಿ ಗೌಣವಾಗಿಸಿ ಭೋಳೆ ಆದರ್ಶ ಹಾಗೂ ಪೊಳ್ಳು ಆಶಾವಾದವನ್ನು ಬೆಳೆಸುವ ಪ್ರಕೃತಿ — ಕ್ರಾಂತಿಪೂರ್ವ ಯೂರೋಪಿನ ಬೌದ್ಧಿಕ ವಾತಾವರಣ ಇದ್ದದ್ದು ಹಾಗೆ.

ಕ್ಯಾಂಡೀಡ್ ಬರೆಯುವ ಹೊತ್ತಿಗೆ ವಾಲ್ಟೇರ್‌ನಿಗೆ ಅರವತ್ತು ವರ್ಷ ದಾಟಿತ್ತು. ವೈಯಕ್ತಿಕವಾಗಿ ಅವನು ತುಂಬ ನೋವು ಅನುಭವಿಸಿದ್ದ. ಫ್ರಾನ್ಸ್‌ನ ರೀಜೆಂಟ್‌ನನ್ನು ಗೇಲಿ ಮಾಡುವಂಥ ಕವನ ಬರೆದನೆಂಬ ಅನುಮಾನದ ಮೇಲೆ ಸರ್ಕಾರ ಅವನನ್ನು ಬ್ಯಾಸ್ಟಿಲ್‌ನಲ್ಲಿ ಬಂಧನದಲ್ಲಿರಿಸಿತ್ತು. ಚಕ್ರವರ್ತಿಯ ಆಸ್ಥಾನದಲ್ಲಿ ಪ್ರಬಲನಾಗಿದ್ದ. ಸಂತೋಷಗಳನ್ನು ನೀಡಿದ್ದ ತನ್ನ ಪ್ರೇಯಸಿಯನ್ನು ಕಳೆದುಕೊಂಡು ಅವಳ ದೇಹವನ್ನು ಮಣ್ಣುಮಾಡಿ ಬಂದಿದ್ದ. ಸರ್ಕಾರದ-ಒತ್ತಡ, ಅಪಪ್ರಚಾರ, ಬಂಧನದ ಬೆದರಿಕೆ, ಎದುರಿಸಲಾಗದಂಥ ಕಷ್ಟಗಳು ಬಂದಾಗಲೆಲ್ಲಾ ಸಮೀಪದ ಇಂಗ್ಲೆಂಡಿಗೆ ಸ್ವೀಡನ್‌ಗೆ ಓಡಿಹೋಗಿ ಆಶ್ರಯ ಪಡೆದು, ದುಸ್ಸಹ ಯಾತನೆ ಅನುಭವಿಸಿದ್ದ. ಇವುಗಳ ಜೊತೆಜೊತೆಗೆ ರಾಜ-ಮಹಾರಾಜರುಗಳ ಅರಮನೆಯಲ್ಲಿ , ಶ್ರೀಮಂತರ ಭವ್ಯ ನಿವಾಸಗಳಲ್ಲಿ ವೈಭವೋಪೇತ ಜೀವನ ನಡೆಸಿದ್ದ. ಕವಿಯಾಗಿ, ನಾಟಕಕಾರನಾಗಿ, ಚರಿತ್ರಕಾರನಾಗಿ, ಈ ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ಬಗೆಯ ಅನ್ಯಾಯಗಳನ್ನು ಅತ್ಯಂತ ಮಾರ್ಮಿಕವಾಗಿ, ಸುಭಗ ಪದ್ಯಗದ್ಯಗಳಲ್ಲಿ ವಿಡಂಬನೆ ಮಾಡಿ, ಗೇಲಿ ಮಾಡಿ, ಅಣಕವಾಡಿ ಇಡೀ ಯೂರೋಪಿನಲ್ಲಿ ವಾಲ್ಟೇರ್ ಜನಮನದ ಅಂತಃಸಾಕ್ಷಿಯಾಗಿದ್ದ ; ಎಲ್ಲ ಮತಗಳ, ವರ್ಗಗಳ ನ್ಯಾಯಯುತ ಪ್ರತಿಭಟನೆಗೆ ಇನ್ನೊಂದು ಹೆಸರಾಗಿದ್ದ. ಯಾವ ಚಕ್ರವರ್ತಿಯ ಅಧಿಕಾರದಂಡದಲ್ಲೂ ಇಲ್ಲದಂಥ ಅಧಿಕಾರ ಅವನ ಲೇಖನಿಯಲ್ಲಿತ್ತು.

ಜೀವನದ ಹಲವು ಮುಖಗಳನ್ನು ಹತ್ತಿರದಿಂದ ಕಂಡಿದ್ದ ವಾಲ್ಟೇರ್‌ನಿಗೆ ರೂಸೋ ವೈಭವೀಕರಿಸಿದ ಮನುಷ್ಯನ ಒಳ್ಳೆಯತನ, ಮನುಷ್ಯ-ಪ್ರಕೃತಿಗಳ ಸಂಬಂಧ, ಲೈಬ್‌ನಿಜ್‌ನ ಆಶಾವಾದಗಳು ಸಹಜವಾಗಿಯೇ ಒಪ್ಪಿಗೆಯಾಗಲಿಲ್ಲ.

ಲಿಸ್ಬನ್ ಭೂಕಂಪ ತಂದ ಸಾವುನೋವುಗಳನ್ನು ನೋಡಿ ಅದೇ ಡಿಸೆಂಬರ್ 28 ರಂದು ಹೀಗೆ ಬರೆದ : ''ಈಗ ಲಿಸ್ಬನ್ ಹಾಗೂ ಇತರ ಇಪ್ಪತ್ತು ಊರುಗಳಲ್ಲಿ ಸಂಭವಿಸಿದ ದುರಂತದ ವಾರ್ತೆ ಖಚಿತವಾಗಿ ತಿಳಿದುಬಂದಿದೆ. ಇದು ತುಂಬ ಗಂಭೀರವಾದ ವಿಷಯ.

ಪೋಪ್ ಏನಾದರೂ ಲಿಸ್ಬನ್‌ನಲ್ಲಿ ಇದ್ದಿದ್ದರೆ "All that is, is right" ಎಂದು ಹೇಳುವ ಎದೆಗಾರಿಕೆ ತೋರುತ್ತಿದ್ದನೆ?'' ಎರಡು ದಿನಗಳ ನಂತರ ಮತ್ತೊಂದು ಪತ್ರದಲ್ಲಿ ಲಿಸ್ಬನ್ ಭೂಕಂಪ ''ಆಶಾವಾದಗಳ ವಿರುದ್ಧವಾಗಿ ಬಂದ ಅತ್ಯಂತ ಮಾರ್ಮಿಕ ಉತ್ತರ'' ಎಂದು ವರ್ಣಿಸಿದ.

ವಾಲ್ಟೇರ್‌ನ ಬಹುಜನಪ್ರಿಯವಾದ ಕ್ಯಾಂಡೀಡ್ ವ್ಯಂಗ್ಯ, ಹಾಸ್ಯಪ್ರಧಾನವಾದ ವಿಡಂಬನ ಕೃತಿ ಎನ್ನುವುದರಲ್ಲಿ ಅನುಮಾನವಿಲ್ಲ . ಇಲ್ಲಿ ಬರುವ ಡಾ॥ ಪಾನ್‌ಗ್ಲಾಸ್ ರೂಸ್ಸೊ ಹಾಗೂ ಲೈಬ್‌ನಿಜ್‌ರ ವಿಚಾರಗಳನ್ನು ಹಾಸ್ಯಾಸ್ಪದವಾಗಿ ಕಾಣುವಂತೆ ಮಾಡಿ ವಿಕಟವಿನೋದ ಪಾತ್ರ ಸೃಷ್ಟಿಸುತ್ತಾನೆ ಎನ್ನುವುದು ನಿಜ. ಇದು ಒಂದು ಮುಖ. ಇನ್ನೊಂದು ಮಟ್ಟದಲ್ಲಿ ಕ್ಯಾಂಡೀಡ್ ರಂಜಕವಾದ ಒಂದು ಸಾಹಸದ ಕಥೆ. ಯಾವ ಬಗೆಯ ಕುಂದುಕೊರತೆಗಳೂ ಇಲ್ಲದ, ಸಮೃದ್ಧವಾದ, ಸುಖಮಯವಾದ, ಅತ್ಯಂತ ಸುಸಂಸ್ಕೃತ ಸ್ವಪ್ನ ಪ್ರಪಂಚವನ್ನು ಚಿತ್ರಿಸುವ ಪ್ರವಾಸದ ನಿರೂಪಣೆ. ಮತ್ತೆ ಇಲ್ಲಿ ಬರುವ ಅನೇಕ ವ್ಯಕ್ತಿಗಳು ವಾಲ್ಟೇರ್ ನಿಜಜೀವನದಲ್ಲಿ ಬಂದು ಹೋದಂಥವರು. ಲಿಸ್ಬನ್ ಭೂಕಂಪ, ಫ್ರಾನ್ಸ್-ಇಂಗ್ಲೆಂಡ್‌ಗಳ ನಡುವೆ ಯಃಕಶ್ಚಿತ್ ಕಾರಣಗಳಿಗಾಗಿ ನಡೆದ ಘೋರ ಯುದ್ಧಗಳು, ಫ್ರೆಂಚ್ ಸೈನ್ಯವನ್ನು ಸರಿಯಾಗಿ ಎದುರಿಸಲಿಲ್ಲ ಎನ್ನುವ ಕಾರಣಕ್ಕೆ ಮರಣ ದಂಡನೆಗೆ ಗುರಿಯಾದ ಇಂಗ್ಲಿಷ್ ನೌಕಾಧಿಪತಿ — ಇವೆಲ್ಲ ಚಾರಿತ್ರಿಕ ಸಂಗತಿಗಳು. ವಿಡಂಬನೆ, ಸ್ವಪ್ನಲೋಕ, ಚಾರಿತ್ರಿಕ ಘಟನೆ — ಈ ಮೂರೂ ಇಲ್ಲಿ ಹಾಸು ಹೊಕ್ಕಾಗಿ ಬಂದಿದೆ.

ಆದರೆ ಈ ಎಲ್ಲಕ್ಕಿಂತ ಮುಖ್ಯವಾಗಿ ಕ್ಯಾಂಡೀಡ್ ಮನುಷ್ಯನ ಸಣ್ಣತನ, ಅಸಹನೆ, ಕ್ರೌರ್ಯ, ಮೋಸ, ಪ್ರಾಮಾಣಿಕತೆ ಇಂಥವುಗಳ ಮುಸುಕನ್ನು ನಿರ್ದಯವಾಗಿ ಕಿತ್ತು ಹಾಕುವುದರ ಜೊತೆಗೆ ಪ್ರೇಕ್ಷಣೀಯ ಆಸೆ, ಸುಖಗಳ ವಿಶ್ಲೇಷಣೆಯನ್ನು ನಡೆಸುತ್ತದೆ. ಕ್ಯಾಂಡೀಡ್ ಬದುಕುವುದೇ ಆಸೆ, ಭರವಸೆಗಳ ಮೇಲೆ. ತನ್ನ ಪ್ರೇಯಸಿ ಕ್ಯುನುಗೊಂಡ್ ತನಗೆ ದೊರಕುತ್ತಾಳೆ, ದೊರಕಿದ ನಂತರ ತಾನು ಸುಖವಾಗಿರುತ್ತೇನೆ ಎನ್ನುವ ಕಲ್ಪನೆಯೇ ಅವನ ಜೀವನದ ಆಸರೆ. ಕಾದಂಬರಿಯ ಕೊನೆಯಲ್ಲಿ ಬರುವ ಟರ್ಕಿಷ್ ಜ್ಞಾನಿ ಎಲ್ಲ ಅಧ್ಯಾತ್ಮ ಚರ್ಚೆಗಳ ನಿರುಪಯುಕ್ತತೆಯನ್ನು ಅವನಿಗೆ ಮನದಟ್ಟು ಮಾಡಿಕೊಡುತ್ತಾನೆ ; ಇನ್ನೊಬ್ಬ ಜ್ಞಾನಿ ಕಾಯಕದ ಬೆಲೆಯನ್ನು ಅವನಿಗೆ ತಿಳಿಸಿ ಹೇಳುತ್ತಾನೆ : ''ಜೀವನ ಸುಖಮಯವಾದುದಲ್ಲ. ನಮ್ಮ ಅಪೇಕ್ಷೆ, ಬಯಕೆಗಳು ಇಲ್ಲಿ ಈಡೇರುವಂಥವಲ್ಲ. ಬದುಕು ಕಷ್ಟಕರವಾದದ್ದೇ ದಿಟ. ಆದರೆ ಇದರಿಂದಾಗಿ ಹತಾಶರಾಗಬೇಕಾದ ಪ್ರಮೇಯವಿಲ್ಲ. ಪ್ರತಿಯೊಬ್ಬನೂ ತನ್ನ ತೋಟವನ್ನು ಕೃಷಿಮಾಡಬೇಕು. ಈ ಕೃಷಿಯೊಂದೇ ಜೀವನವನ್ನು ಸಹನೀಯವಾಗಿ ಮಾಡಬಲ್ಲದು'' — ಎನ್ನುತ್ತಾನೆ ವಾಲ್ಟೇರ್.

''ನಿನ್ನ ವಾದ ನನಗೆ ಸುತರಾಂ ಒಪ್ಪಿಗೆ ಇಲ್ಲ. ಆದರೆ ಅಂಥ ವಾದವನ್ನು

ಮಂಡಿಸಲು ನಿನಗೆ ನೈತಿಕವಾದ ಹಕ್ಕು ಇದೆ, ಅದನ್ನು ರಕ್ಷಿಸಲು ನನ್ನ ಪ್ರಾಣವನ್ನು ಒತ್ತೆಯಿಟ್ಟು ಹೋರಾಡುತ್ತೇನೆ'' ಎಂದ ವಾಲ್ಟೇರ್, ಮಧ್ಯಕಾಲೀನ ಯೂರೋಪಿನ ಪಳೆಯುಳಿಕೆಗಳು ಇನ್ನೂ ಪ್ರಬಲವಾಗಿದ್ದು, ಧಾರ್ಮಿಕ ರಾಜಕೀಯ ಶಕ್ತಿಗಳು ವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿದ್ದ ಕಾಲದಲ್ಲಿ ಹೊಸ ಬೆಳಕಿನ ತಿಳಿವಳಿಕೆಯ ಪ್ರತೀಕವಾಗಿದ್ದ. ಎಲ್ಲ ಬಗೆಯ ನೋವು ಅವಮಾನಗಳ ವಿರುದ್ಧ ಪ್ರತಿಭಟನೆಯ ದನಿ ಎತ್ತಿ, ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯಗಳ ಅತ್ಯಂತ ಪರಿಣಾಮಕಾರಿ ಹಾಗೂ ಯಶಸ್ವಿ ಪ್ರತಿಪಾದಕನಾಗಿದ್ದ.

ವಾಲ್ಟೇರ್ ಫ್ರೆಂಚ್ ಸಂಸ್ಕೃತಿಯ ಮತ್ತು ಅದರ ಮುಖಾಂತರ ಯೂರೋಪಿನ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಆರ್ಥಿಕ, ಸಾಮಾಜಿಕ, ರಾಜಕೀಯ, ಮತೀಯ ಅಭಿಪ್ರಾಯಭೇದಗಳನ್ನು ಹತ್ತಿಕ್ಕುವುದು, ಬರ್ಬರರಂತೆ ನಡೆದುಕೊಳ್ಳುವುದು ನಾಗರಿಕ ವ್ಯಕ್ತಿಗೆ ಸಲ್ಲದ್ದು, ಅದು ಅನಾಗರಿಕ ಪ್ರವೃತ್ತಿ . ಮನುಷ್ಯನಿಗೆ ಬದುಕಲು ಬೇಕಾದದ್ದು ಸಹನೆ, ಸಹಿಷ್ಣುತೆ ; ಹೆಚ್ಚು ಹೆಚ್ಚು ಸಹನೆ, ಹೆಚ್ಚು ಹೆಚ್ಚು ಸಹಿಷ್ಣುತೆ. ಇವು ಮಾತ್ರ ವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಿ, ವಿಚಾರಸ್ವಾತಂತ್ರ್ಯವನ್ನು ಬೆಳೆಸಿ, ಬದುಕನ್ನು ಸುಸಂಸ್ಕೃತವಾಗಿಸಿ ಸಹನೀಯವಾಗಿಸಬಲ್ಲದು ಎಂದ ವಾಲ್ಟೇರ್ ನಮಗೆ ಇಂದು ತುಂಬ ಅಗತ್ಯವಾದ ಬರಹಗಾರ, ಹೋರಾಟಗಾರ.

ಜೇನ್ ಆಸ್ಟಿನ್ : 'ಪ್ರೈಡ್ ಎಂಡ್ ಪ್ರೆಜುಡಿಸ್'

ಎಸ್. ಎಸ್. ರಾಘವನ್

ಜೀವನ ಮತ್ತು ಕಲೆಯ ನಡುವೆ ಓದುಗನಿಗೆ ಅತ್ಯಂತ ತೃಪ್ತಿ ತರುವಂತಹ ನಿಕಟ ಸಂಪರ್ಕ ಸಾಧಿಸುವುದರಲ್ಲಿ ಕಾದಂಬರಿಯಷ್ಟು ಯಶಸ್ಸು ಬೇರೆ ಯಾವ ಸಾಹಿತ್ಯ ಪ್ರಕಾರಕ್ಕೂ ಲಭಿಸಿರಲಾರದು. ಬದುಕಿನೊಡನೆ, ಅದರ ವಿವರಗಳಲ್ಲಿ ಏರ್ಪಡುವ ಈ ಸಂಪರ್ಕ ಕಾದಂಬರಿಯ ನಿರೂಪಣಾಕ್ರಮಕ್ಕೆ ಕಾವ್ಯ, ನಾಟಕಗಳಿಗಿಂತ ಹೆಚ್ಚಿನ ಜನಪ್ರಿಯತೆ ತಂದುಕೊಟ್ಟಿತು ; ಅಲ್ಲದೆ ಅದರ ವಿಶಿಷ್ಟ ಸಾಹಿತ್ಯಕ ಗುಣಗಳನ್ನೂ ನಿರ್ಧರಿಸಿತು. ಈ ಸ್ವತಃಸಿದ್ಧ ಸಂವಹನಾಶೀಲತೆಯಿಂದಲೇ– ಒಂದು ಸಾಹಿತ್ಯಪ್ರಕಾರವಾಗಿ ಕಲೆಯ ದೃಷ್ಟಿಯಿಂದಾಗಲೀ, ನೈತಿಕವಾಗಿಯಾಗಲೀ ಒಂದು ಪರಿಪೂರ್ಣರೂಪವನ್ನು ತಳೆಯದಿದ್ದಾಗಲೂ – ಕಾದಂಬರಿ ಓದುಗನನ್ನು ತನ್ನೊಳಗಿನ ನೈತಿಕಜೀವನಕ್ಕೆ ಭಾಗಿಯಾಗಿಸುತ್ತ, ಅವನ ಸ್ವಂತ ಸ್ವಭಾವ–ಆಸಕ್ತಿ–ಗ್ರಹಿಕೆಗಳನ್ನು ಪರೀಕ್ಷೆಗೆ ಗುರಿಪಡಿಸುತ್ತ, ಜೀವನದ ವಾಸ್ತವತೆಯ, ಸಾಧ್ಯತೆಗಳ ಅರಿವನ್ನು ಹಿಗ್ಗಿಸುವ ನೈತಿಕ ಶಕ್ತಿಯನ್ನು ಪಡೆಯಿತು ; ಹಾಗೆಯೇ ರಮ್ಯತೆ-ಜನಪ್ರಿಯತೆಯ ಸಾಧ್ಯತೆಗಳನ್ನಷ್ಟೇ ಬಂಡವಾಳ ಮಾಡಿಕೊಂಡ ಲೇಖಕರ ಕೈಯಲ್ಲಿ ಬೆಳೆಯುತ್ತಲೇ ಇರುವ ಓದುಗ ವರ್ಗಕ್ಕೆ ಒದಗಿಸುವ ಸುಲಭ ರಂಜನೆಯ ಮಾಧ್ಯಮವೂ ಆಯಿತು.

ಕಾದಂಬರಿ ಪ್ರಕಾರ ಒಂದು ಸ್ಥಾಯೀರೂಪವನ್ನು ಪಡೆದುಕೊಂಡದ್ದು 18ನೆಯ ಶತಮಾನದ ಇಂಗ್ಲೆಂಡಿನಲ್ಲಿ. ಅದೇ ಶತಮಾನದ ಕೊನೆಯಲ್ಲಿ ಕೆಲವು ಅಪವಾದಗಳ ಹೊರತು, ಇಂಗ್ಲಿಷ್ ಕಾದಂಬರಿ – ಡೀಫೊ, ರಿಚರ್ಡ್‌ಸನ್, ಫೀಲ್ಡಿಂಗ್‌ರಂತಹ ಮೇಧಾವಿಗಳ ಕೃತಿಗಳ ಬಳಿಕವೂ – ಭಾವಾತಿರೇಕದ ರಮ್ಯಕಾದಂಬರಿ (Sentimental novel)ಗಳ ಹುಚ್ಚು ಹೊಳೆಯಾಗತೊಡಗಿತ್ತು. ಜೇನ್ ಆಸ್ಟಿನ್ ಬರೆಯತೊಡಗಿದ್ದು ಇಂಥ ಪರಿಸ್ಥಿತಿಯಲ್ಲಿ. ತನ್ನ ಕಾಲದ 'ಜನಪ್ರಿಯ' ಕಾದಂಬರಿಗಳನ್ನು, ಅದರಲ್ಲೂ ನಿಜಜೀವನದ ಕಹಿ ಸತ್ಯಗಳನ್ನು ಹೆಣ್ಣು ಓದುಗರಿಗಾಗಿ ಮಧುರಗೊಳಿಸಿ ಭ್ರಮೆಗೀಡು ಮಾಡುವ ಬಗೆಯನ್ನು ಲೇವಡಿಮಾಡುವ ಮತ್ತು ಗಂಭೀರ ಅರ್ಥದಲ್ಲಿ ತಿರಸ್ಕರಿಸುವ ಅವಳ ಪ್ರಬುದ್ಧತೆಯಲ್ಲಿ ಕಾದಂಬರಿಯ ಅಸಲಿ ಕಲೆ ಪಲ್ಲವಿಸಿತು. ಕಾದಂಬರಿಕಲೆಯ ಮೂಲಭೂತ ಮತ್ತು ಮೌಲಿಕ ಆಸಕ್ತಿಗಳ ಸೆಲೆಯನ್ನು ಗುರುತಿಸುವ ಮೂಲಕ ಜೇನ್ ಆಸ್ಟಿನ್ 'ಆಧುನಿಕ ಕಾದಂಬರಿ'ಯ (Modern Novel) ಪ್ರಮುಖ ಪರಂಪರೆಗೆ ಬುನಾದಿ ಹಾಕಿದಳು.

ಇಂಗ್ಲಿಷ್ ಕಾದಂಬರಿಯ ಚರಿತ್ರೆಯಲ್ಲಿ 'ಶ್ರೇಷ್ಠ' ಪರಂಪರೆಯೊಂದನ್ನು ಗುರುತಿಸುತ್ತ ಎಫ್.ಆರ್.ಲೀವಿಸ್ ಜೇನ್ ಆಸ್ಟಿನ್‌ಳನ್ನು ಆಧುನಿಕ ಕಾದಂಬರಿಯ

ಪ್ರವರ್ತಕಳೆನ್ನುತ್ತಾನೆ. ಈ ಶ್ರೇಷ್ಠತೆಯ ಕಲ್ಪನೆ ಎಷ್ಟು ಬೆಲೆಯುಳ್ಳದ್ದೆಂಬುದನ್ನು ಅವನ ಈ ಮಾತುಗಳು ಸ್ಪಷ್ಟಪಡಿಸುತ್ತವೆ : "The principle of organization, and the principle of development, in her work is an intense moral interest of her own in life that is in the first place a preoccupation with certain problems that life compels on her as personal ones. She is intelligent and serious enough to be able to impersonalize her moral tensions as she strives, in her art, to become more fully conscious of them, and to learn what, in the interests of life, she ought to do with them" (The Great Tradition). ಅಂದರೆ, ಜೇನ್ ಆಸ್ಟಿನ್‌ಳ ಕಲೆ ವ್ಯಕ್ತಿ-ಸಮಾಜಗಳ ನೈತಿಕತೆಯ, ಜೀವನ ಪರತೆಯ ತುಂಬು ಅರಿವಿನ ಕಡೆಗೆ ತುಯ್ಯುವ ಅರ್ಥವಂತಿಕೆಯ ಪ್ರಕ್ರಿಯೆ. ಇಂಗ್ಲಿಷ್ ಕಾದಂಬರಿಯ ದೃಷ್ಟಿಕೋನಕ್ಕೆ (point of view) ಒಂದು ಇಡೀ ಸಮಾಜದ ಅರಿವನ್ನು ಪ್ರತ್ಯಯಿಸುವ impersonalityಯನ್ನು ತರುವ ಮೂಲಕ ಕಾದಂಬರೀ ಪ್ರಕಾರಕ್ಕೆ ಜೀವನದ ಸಾಧ್ಯತೆಗಳ ಅರಿವನ್ನು ಹೆಚ್ಚಿಸುವ ಪ್ರಬುದ್ಧತೆಯ ಪ್ರಾಶನ ಮಾಡಿಸಿದಳು. ಚಾರಿತ್ರಿಕವಾಗಿ ತನಗೆ ಒದಗಿದ ಸಾಮಾಜಿಕ ಸಂದರ್ಭದಲ್ಲಿ, ಹೆಣ್ಣಾಗಿ ತನ್ನ ವಿಶಿಷ್ಟ ಸಂವೇದನಾಶೀಲತೆಯಲ್ಲಿ ಆಳವಾದ Common-senseನ್ನೂ ನಾಟ್ಯೀಕರಿಸುವ ಕಲೆಗಾರಿಕೆಯನ್ನೂ ಸಾಧಿಸಿದಳು ; ವ್ಯಕ್ತಿಜೀವನದ ನೈತಿಕತೆಯಲ್ಲಿ ಸಮಾಜ ಅಥವಾ ಸರ್ವ ಸಾಮಾನ್ಯ ಸಂಸ್ಕೃತಿ ಎಂಥ ಸಂಕೀರ್ಣ ಪಾತ್ರವಹಿಸುತ್ತದೆಂಬುದನ್ನು ಮೊಟ್ಟಮೊದಲಿಗೆ ತೋರಿಸಿದಳು.

2

ಜೇನ್ ಆಸ್ಟಿನ್ (1775-1817) ಹುಟ್ಟಿದ್ದು ದಕ್ಷಿಣ ಇಂಗ್ಲೆಂಡಿನ ಸ್ಟಿವೆಂಟನ್ ಹಳ್ಳಿಯಲ್ಲಿ. ತಂದೆ ಜಾರ್ಜ್ ಆಸ್ಟಿನ್ ಹಳ್ಳಿಯ ಪಾದ್ರಿ. ಎಂಟು ಮಕ್ಕಳಿದ್ದ ಕುಟುಂಬದಲ್ಲಿ ಜೇನ್ ಮತ್ತು ಕೆಸಾಂಡ್ರ ಇಬ್ಬರೇ ಹುಡುಗಿಯರು. ಅಕ್ಕ ಕೆಸಾಂಡ್ರ ಅವಳಿಗೆ ಅತ್ಯಂತ ಆಪ್ತಳು. ಸದ್ದು-ಗದ್ದಲ-ವಿಶೇಷಗಳಿಲ್ಲದ ಹಳ್ಳಿಯಲ್ಲಿ, ಚರ್ಚಿಗೆ ಸೇರಿದ ಮನೆಯಲ್ಲಿ ಜೇನ್ ತನ್ನ ಜೀವಿತದ 25 ವರ್ಷಗಳನ್ನು ಕಳೆದಳು. ಒಮ್ಮೊಮ್ಮೆ ಲಂಡನ್, ಬಾಥ್ ಅಥವಾ ಕೆಂಟ್ ಪಟ್ಟಣಗಳಿಗೆ ಹೋಗಿಬರುವುದನ್ನು ಬಿಟ್ಟರೆ, ಒಡಹುಟ್ಟಿದವರ, ತಾಯಿತಂದೆಯ ಜೊತೆಗಿನ ಪ್ರೀತಿಸ್ನೇಹಗಳ ಹಿತವಾದ ಜೀವನ ಅವಳದು. 1800ರಲ್ಲಿ ಅವರ ಕುಟುಂಬ ಬಾಥ್‌ನಲ್ಲಿ ನೆಲೆಸಿತು ; ಮತ್ತು 1806ರಲ್ಲಿ ತಂದೆಯ ಮರಣದ ನಂತರ ಸೌತಂಪ್ಟನ್‌ನಲ್ಲಿ ಮತ್ತು 1809ರಿಂದ ತನ್ನ ಸಾವಿನವರಗೆ ಜೇನ್ ತಾಯಿ ಮತ್ತು ಅಕ್ಕನೊಂದಿಗೆ ಶಾಟನ್‌ನಲ್ಲಿ ನೆಲೆಸಿದ್ದಳು. ಜೇನ್ ಆಸ್ಟಿನ್ ಮದುವೆಯಾಗಲಿಲ್ಲ. ತನ್ನ 42ನೆಯ ವಯಸ್ಸಿನಲ್ಲಿ, ತನ್ನ ಯಶಸ್ಸಿನ ತುಟ್ಟತುದಿಯಲ್ಲಿ, ತೀವ್ರ ಅನಾರೋಗ್ಯದಿಂದ ತೀರಿಕೊಂಡಳು.

ಅವಳ ಆರು ಕಾದಂಬರಿಗಳು Sense and Sensibility (1811), Pride and Prejudice (1813), Mansfield Park (1814). Emma (1815). Northanger Abbey ಮತ್ತು Persuasion ಒಟ್ಟಿಗೆ (1817) ಅವಳ ಮರಣಾನಂತರ – ಅವಳ ಜೀವನದ ಕೊನೆಯ ಏಳು ವರ್ಷಗಳ ಅಂತರದೊಳಗೆ – ಪ್ರಕಟವಾದವು. ಆದರೆ Northanger Abbey, Sense and Sensibility ಮತ್ತು Pride and Prejudice 1800ಕ್ಕೂ ಮುಂಚೆಯೇ ಮೊದಲ ಹಸ್ತಪ್ರತಿಗಳ ರೂಪದಲ್ಲಿ ಸಿದ್ಧವಾಗಿದ್ದು ಅನೇಕ ವರ್ಷಗಳ ಪುನಃಪರಿಷ್ಕರಣದ ನಂತರ ಪ್ರಕಟವಾದವು.

ತನಗೆ ಲಭಿಸಿದ ಅತ್ಯಂತ ಸಂಪ್ರದಾಯನಿಷ್ಠ ಬದುಕಿನೊಳಗಿಂದ ತನ್ನ ಮಿತ ಪರಿಸರದ, ಗ್ರಾಮೀಣ ಮಧ್ಯಮವರ್ಗ ಸಮಾಜದ ಬದುಕಿನ ಅನುಭವವನ್ನು ಗ್ರಹಿಸುತ್ತ– ಚಾರಿತ್ರಿಕವಾಗಿ ಸಮಕಾಲೀನವಾದ ನೆಪೋಲಿಯನ್ ಯುದ್ಧಗಳನ್ನಾಗಲೀ, ಯಾವುದೇ ಬೌದ್ಧಿಕ ಅಥವಾ ಆರ್ಥಿಕ ಬದಲಾವಣೆಗಳನ್ನಾಗಲೀ ತನ್ನ ಕಾದಂಬರಿಗಳೊಳಗಿನ ಬದುಕಿಗೆ ಅನಿವಾರ್ಯವಾಗಿಸದೆ – ಜೇನ್ ಆಸ್ಟಿನ್ ಬದುಕಿನ ವಾಸ್ತವತೆಯನ್ನು ಚಿತ್ರಿಸಿದಳೆಂಬುದು, ಶ್ರೇಷ್ಠಕಲೆಯಾಗಿಸಿದಳೆಂಬುದು ಬಹಳ ಮಹತ್ವದ ವಿಚಾರ. ಅವಳ ಅರಿವು ಮತ್ತು ಸೃಜನಶೀಲತೆ ಮುಖ್ಯವಾಗಿ ಅವಳ ಓದಿನಿಂದಲೇ ರೂಪಿತವಾಗಿದ್ದು ತನ್ನ ಕಾಲದ, ಸಮಾಜದ ಮೂಲಭೂತ ನಂಬಿಕೆಗಳು–ವಿಚಾರ– ಕಲಾಭಿರುಚಿಗಳ ಸತ್ವವನ್ನು ಬೌದ್ಧಿಕವಾಗಿ ಅರಗಿಸಿಕೊಂಡು, ಅವಳ ಅಸಾಧಾರಣ ಮತ್ತು ಸ್ವತಂತ್ರ ಆಕೃತಿನಿಷ್ಠ ಕಸಬಿಗೆ ಒಗ್ಗಿಸಿಕೊಂಡವು ಎನ್ನಬೇಕು. ಹಾಗಾಗಿ ಜೇನ್ ಆಸ್ಟಿನ್‌ಳ ಕಾದಂಬರಿಯ ಭಾಷೆ–ತಂತ್ರ– ಆಕೃತಿ ಎಲ್ಲವೂ ಅವಳ ವಸ್ತುವಿನೊಡನೆ ಅವಿನಾಸಂಬಂಧ ಪಡೆದಿವೆ, ಒಂದು ಅಸದೃಶ ಬಂಧವನ್ನು ಆಗಿಸಿವೆ.

3

Pride and Prejudice (1813) ಅಂದಿನಿಂದ ಇಂದಿನವರೆಗೂ ಜೇನ್ ಆಸ್ಟಿನ್‌ಳ ಅತ್ಯಂತ ಜನಪ್ರಿಯ ಕಾದಂಬರಿ. Emma ಅವಳ ಅತ್ಯಂತ ಶ್ರೇಷ್ಠ ಕೃತಿ ಎಂದೆನಿಸಿಕೊಂಡರೂ, ಜೇನ್ ಆಸ್ಟಿನ್‌ಳಿಗೆ ಅಪೂರ್ವ ಯಶಸ್ಸು ತಂದ ಕೃತಿ Pride and Prejudice. ಜೇನ್ ಆಸ್ಟಿನ್ ಕಾದಂಬರಿಗಳ ಮೌಲಿಕಚರ್ಚೆ ಮತ್ತು ಅವಳ ಒಂದೊಂದೇ ಕಾದಂಬರಿಯ ದೀರ್ಘವಿಶ್ಲೇಷಣೆ–ವಿಮರ್ಶೆ ಕಳೆದ ಐವತ್ತು-ಅರವತ್ತು ವರ್ಷಗಳಿಂದಲೂ ನಡೆದುಬಂದಿದೆ. ಪ್ರಸ್ತುತ ಲೇಖನ ಕೆಲವು ಮಹತ್ವದ ವಿಮರ್ಶಕರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ Pride and Prejudiceನ ಕಲಾವಂತಿಕೆಯ, ಸಾಮಾಜಿಕ - ನೈತಿಕ ಸತ್ವದ ಸ್ಥೂಲ ವಿವೇಚನೆಯ ಪ್ರಯತ್ನ ಮಾತ್ರ.

Pride and Prejudiceನಷ್ಟು ಪಾರದರ್ಶಕ ಗಮ್ಯತೆ ಮತ್ತು ವಿನ್ಯಾಸ ಸೂಕ್ಷ್ಮತೆಗಳನ್ನು ಒಟ್ಟಿಗೇ ಆವಿರ್ಭವಿಸುವ ಮತ್ತೊಂದು ಇಂಗ್ಲಿಷ್ ಕಾದಂಬರಿ ಅದಕ್ಕೆ ಮುಂಚೆ ಸೃಷ್ಟಿಯಾಗಿರಲಿಕ್ಕಿಲ್ಲ ಎನ್ನುತ್ತಾನೆ ಮಾರ್ಕ್ ಸ್ಕೋರರ್. ತೀಕ್ಷ್ಣಮತಿತ್ವದ, ಚುರುಕು ಜೀವಂತಿಕೆಯ, ಆಕರ್ಷಕ ವ್ಯಕ್ತಿತ್ವದ ಯುವತಿ ಎಲಿಜಬೆತ್ ಬೆನೆಟ್ ಈ ಕಾದಂಬರಿಯ ನಾಯಕಿ, ಗ್ರಾಮೀಣ ಮಧ್ಯಮವರ್ಗ ಕುಟುಂಬದ ಹುಡುಗಿ. ಶ್ರೀಮಂತ ಮನೆತನದ ಸುಂದರ-ಸುಸಂಸ್ಕೃತ ಯುವಕ ಡಾರ್ಸಿಯ ಸ್ವಯಂಪ್ರತಿಷ್ಠೆ ಅವಳಲ್ಲಿ ಪೂರ್ವಗ್ರಹ ಹುಟ್ಟಿಸುತ್ತದೆ. ಇವರ ನಡುವಿನ ಮನೋಭಾವ-ಮನಃಸ್ಥಿತಿಗಳು ಪರಸ್ಪರ ಗೌರವ-ಪ್ರೇಮಗಳಾಗಿ ಮಾರ್ಪಟ್ಟು ಮದುವೆಯಲ್ಲಿ ಮುಗಿಯುವ ಬೆಳವಣಿಗೆ ಕಾದಂಬರಿಯ ಸ್ಥೂಲ ಹಂದರ. ಎಲಿಜಬೆತ್-ಡಾರ್ಸಿ ನಡುವಿನ ಎಲ್ಲ ಬಗೆಯ – ಸಾಮಾಜಿಕ ವರ್ಗ, ವೈಯಕ್ತಿಕ ಸ್ವಭಾವ, ಪೂರ್ವಗ್ರಹ–ಅಹಂಕಾರ–ಪ್ರತಿಷ್ಠೆಗಳು, ಸುತ್ತಲಿನ ಜನರ ಅಭಿಪ್ರಾಯ ಇತ್ಯಾದಿ–ವಿರೋಧಗಳನ್ನೂ ಬೆಳೆಸಿ ಕೊನೆಗೆ ಅವರವರೇ ತಮ್ಮ ಮೂರ್ಖತನವನ್ನು ಅರಿಯುವ ಮೂಲಕ ಪ್ರೀತಿಸುವಲ್ಲಿಗೆ ಕೊಂಡೊಯ್ಯುವುದೇ ಮುಖ್ಯಕ್ರಿಯೆ. ಕೇವಲ ಮೆಲೊಡ್ರಾಮಾ ಆಗಿಬಿಡಬಹುದಾದ ಈ ಕ್ರಿಯೆ ಜೇನ್ ಆಸ್ಟಿನ್‌ಳ ಕುಶಲಕಲೆಗಾರಿಕೆ–ನಿಯಂತ್ರಿತ ಅನೇಕಾರ್ಥತೆ, ಸಂಕೀರ್ಣತೆಗಳ ಧ್ವನಿಯ ಸಂಭಾಷಣೆ, ನಾಟಕೀಯತೆಗೆ ಸಮರ್ಥವಾಗಿ ಒದಗುವ ವ್ಯಂಗ್ಯ ಮತ್ತು ಯಾವ ಪಾತ್ರಸನ್ನಿವೇಶವನ್ನೂ sentimentalise ಮಾಡಲೊಪ್ಪದ ಅವಳ ಶಿಸ್ತು– ಮತ್ತು ಒಟ್ಟಾರೆ ಕಾಮಿಡಿಗೆ ಬದ್ಧವಾದ ನಿರೂಪಕ ದೃಷ್ಟಿಯಿಂದಾಗಿ ಒಂದು ದಟ್ಟವಾದ ಜೀವಂತ ಹೊಳಪಿನ ವಾತಾವರಣವನ್ನು ನಿರ್ಮಿಸುತ್ತದೆ ; ಮದುವೆಯಂಥ ಸಂಪ್ರದಾಯ(convention)ವನ್ನು ಅನ್ವೇಷಿಸುವ ಮೂಲಕ ಒಂದು ಸಾಮಾಜಿಕ-ನೈತಿಕ ಮಹತ್ವದ ಪ್ರಕ್ರಿಯೆಯೂ ಆಗುತ್ತದೆ.

ಲಾಂಗ್‌ಬರ್ಗ್ ಹಳ್ಳಿಯ ಬೆನೆಟ್ ಕುಟುಂಬ (ಮಿ. ಮತ್ತು ಮಿಸೆಸ್ ಬೆನೆಟ್ ಮತ್ತು ಅವರ ಐವರು ಹೆಣ್ಣುಮಕ್ಕಳಾದ ಜೇನ್, ಎಲಿಜಬೆತ್, ಮೇರಿ, ಕೆಥರೀನ್ ಮತ್ತು ಲಿಡಿಯಾ), ಅವರ ನೆರೆಯ ಲೂಕಸ್ ಕುಟುಂಬ, ಮಿಸೆಸ್ ಲಾಂಗ್‌ಳ ಕುಟುಂಬ, ಒಂದು ಮೈಲಿ ದೂರದ ಮೆರಿಟನ್‌ನಲ್ಲಿರುವ ಆಂಟ್‌ಫಿಲಿಪ್ಸ್ ಮನೆ ಮತ್ತು ಮೆರಿಟನ್‌ನಲ್ಲಿ ತಂಗಿರುವ ಮಿಲಿಟರಿ ರೆಜಿಮೆಂಟ್ ; ಮೂರು ಮೈಲಿ ದೂರದ 'ನೆದರ್‌ಫೀಲ್ಡ್ ಪಾರ್ಕ್' ಬಂಗಲೆಗೆ ವಾಸಕ್ಕೆಂದು ಬರುವ ಉತ್ತರ ಇಂಗ್ಲೆಂಡಿನ ಬಿಂಗ್ಲೆ ಮತ್ತು ಸೋದರಿಯರು ಮತ್ತು ಅವರೊಡನೆ ಬರುವ ದೂರದ ಡರ್ಬಿಷೈರ್‌ನ ಶ್ರೀಮಂತ ಯುವಕ ಡಾರ್ಸಿ— ಇಂಥ ಪರಿಸರ ಸೃಷ್ಟಿಸುವ ಸಾಮಾಜಿಕತೆ ಜೇನ್ ಆಸ್ಟಿನ್‌ಳ ದೃಷ್ಟಿಯ ಮತ್ತು ವಸ್ತುವ್ಯಾಪ್ತಿಯ ಹೊರ ಆಕರ ಎನ್ನಬಹುದು. ಈ ವ್ಯಾಪ್ತಿಯ ಒಳಗೇ ಅವಳ ಕಾದಂಬರಿ ಸಾಮಾಜಿಕ ಮತ್ತು ನೈತಿಕ ಅನುಭವದ ಆಳ ಮತ್ತು ವೈಯಕ್ತಿಕ ವೈವಿಧ್ಯತೆಯನ್ನು ಹಿಡಿಯುವ ಶಕ್ತಿಯನ್ನು ಪಡೆಯುತ್ತದೆ ; ಒಬ್ಬ ಅತ್ಯುತ್ತಮ ನಾಟಕಕಾರನ ಕಾಮಿಡಿಯು

ಒಳಗೊಳ್ಳುವ ಎಲ್ಲ ಚಲನಸಮೂಹಗಳ ಬಂಧದಲ್ಲಿ (ಜೇನ್ ಆಸ್ಟಿನ್ ಕಾದಂಬರಿಯ ಕೇಂದ್ರವಿನ್ಯಾಸವನ್ನು ಮೊಲಿಯೇರ್‌ನ ಕಾಮಿಡಿಗೆ ಸಿ. ಎಸ್. ಲೂವಿಸ್ ಎಂಬ ವಿಮರ್ಶಕ ಹೋಲಿಸಿದ್ದಾನೆ) ತನ್ನ ದೃಷ್ಟಿಗೆ ಅತ್ಯಗತ್ಯ ಸಂಗತಿ – ವಿವರಗಳನ್ನಷ್ಟೇ ದೃಶ್ಯನಿರ್ಮಿತಿಗೆ ಬಳಸುತ್ತ ಟ್ರಿಲಿಂಗ್ ಹೇಳುವ ಬಗೆಯ 'moral realism'ನ್ನು ಸಾಧಿಸುತ್ತದೆ.

ಹೆಚ್ಚು ವಿರಾಮವುಳ್ಳ ಗ್ರಾಮೀಣ ಮಧ್ಯಮವರ್ಗದ ದೈನಂದಿನ ಬದುಕಿನ ಅವಿಭಾಜ್ಯ ಅಂಗಗಳೆನಿಸಿದ ನೃತ್ಯಕೂಟಗಳು, ಔತಣಗಳು, ಭೇಟಿಗಳು, ಓದು, ಮಾಮೂಲಿ ಸಂಭಾಷಣೆ-ಹರಟೆ, ಅಷ್ಟು ದೂರದವರೆಗೆ ತಿರುಗಾಟ, ಯಾವಾಗಲಾದರೊಮ್ಮೆ ದೂರದ ನೆಂಟರ ಅಥವಾ ಮಿತ್ರರ ಮನೆಯಲ್ಲಿ ಕೆಲದಿನ ತಂಗುವುದು ಅಥವಾ ಕೆಲವು ಮೈಲುಗಳಷ್ಟು ದೂರದ ಬಂಗಲೆ - ಎಸ್ಟೇಟಿಗೆ ವಿಹಾರಾರ್ಥವಾಗಿ ಹೋಗುವುದು– ಇತ್ಯಾದಿ ಸಾಧಾರಣ ಸಂದರ್ಭಗಳೇ ಕಾದಂಬರಿಯಲ್ಲಿ ಸಾಂಪ್ರದಾಯಿಕ ಸಂದರ್ಭಗಳಾಗಿ ಮುಖ್ಯ ಸನ್ನಿವೇಶಗಳನ್ನು ಸೃಷ್ಟಿಸುತ್ತವೆ ; ಕಾದಂಬರಿಯ ಕೇಂದ್ರ ವ್ಯಕ್ತಿಗಳಾದ ಎಲಿಜಬೆತ್ - ಡಾರ್ಸಿ ಮಾತ್ರವಲ್ಲದೆ, ಜೇನ್-ಬಿಂಗ್ಲೆ, ಶಾರ್ಲಟ್-ಕಾಲಿನ್ಸ್ ಮತ್ತು ಲಿಡಿಯಾ-ವಿಕಮ್‌ರಂತಹ ಜೋಡಿಗಳನ್ನು ಆಗಿಸುತ್ತವೆ. ಎಲ್ಲಿಯೂ ಸಭ್ಯತೆಯ ಎಲ್ಲೆ ಮೀರಲಾರದ ನಾಜೂಕು ಸಂಭಾಷಣೆ-ಪ್ರತಿಕ್ರಿಯೆಗಳು ಸಾಮಾಜಿಕ ವ್ಯವಹಾರದ ನಿಶ್ಚಿತ, ಶೈಲೀಕೃತ ಬಗೆಗಳಾಗಿ ವ್ಯಕ್ತಿಗಳ ಸಂಸ್ಕೃತಿ-ಸಂಸ್ಕಾರ-ಮನೋವೃತ್ತಿಗಳನ್ನು ಪ್ರಕಟಿಸುವುದರ ಜೊತೆಗೇ ಆರ್ಥಿಕ-ಸಾಮಾಜಿಕ ಸುರಕ್ಷೆ, ಸ್ಥಾನಮಾನಗಳಿಗಾಗಿ 'ಸುಸಂಸ್ಕೃತ' ಸಮಾಜ ನಿರಂತರವಾಗಿ ಹಾತೊರೆಯುವ ಪರಿಯನ್ನೂ ಬಯಲುಮಾಡುತ್ತವೆ. ವಿವಾಹಯೋಗ್ಯ ಶ್ರೀಮಂತ ಯುವಕರಾದ ಬಿಂಗ್ಲೆ ಮತ್ತು ಡಾರ್ಸಿಗಳನ್ನು ಹೇಗೆ ಒಳಗೆ ಹಾಕಿಕೊಳ್ಳಬೇಕೆಂದೇ ಚಿಂತಿಸುವ, ಚಿಂತಿಸಬೇಕಾಗಿರುವ ಮಿಸೆಸ್ ಬೆನೆಟ್ ಮತ್ತು ಸರ್ ವಿಲಿಯಂ ಲೂಕಸ್ ದಂಪತಿಗಳಂತಹ ತಂದೆತಾಯಿಯರಿಗೆ ಸಂಪ್ರದಾಯಸ್ಥ ಸಮಾಜ ಒದಗಿಸುವ ಕೂಟಗಳು, ಮಾತುಕತೆಯ, ಔಪಚಾರಿಕತೆಯ ಸಂದರ್ಭಗಳು ತಮ್ಮ ಕೌಟುಂಬಿಕ–ಸಾಮಾಜಿಕ ಜವಾಬ್ದಾರಿಯಲ್ಲಿ ಕೃತಕೃತ್ಯರಾಗುವ ಒಳದಾರಿಗಳನ್ನು ತೆರೆಯುತ್ತವೆ. ವಿಶೇಷವಾಗಿ ಹೆಣ್ಣುಮಕ್ಕಳು ಈ ಪೂರ್ವಸಿದ್ಧ ಪ್ರಕಾರದ ಆಟದಲ್ಲಿ – ಅವರಿಗೆ ಮದುವೆಯ ವಿಷಯದಲ್ಲಿ ಮಾತ್ರ 'ಆಯ್ಕೆ'ಯ ಸ್ವಾತಂತ್ರ್ಯ – ಗಂಡುಗಳನ್ನು ಆಕರ್ಷಿಸಿ ತಮ್ಮ ಮತ್ತು ತಮ್ಮ ಕುಟುಂಬಗಳ ಭವಿತವ್ಯವನ್ನು ಕಾಯ್ದುಕೊಳ್ಳಬೇಕು. ಪರಸ್ಪರರನ್ನು ನಿಜವಾಗಿ ಪ್ರೇಮಿಸಬೇಕಾದರೂ ಮೂಲಭೂತವಾಗಿ vulgar ಎನ್ನಿಸುವ ಈ ವಸ್ತುಸ್ಥಿತಿಯ ವಾಣಿಜ್ಯವನ್ನು ಹಾದುಹೋಗಬೇಕು : ಸರಳಮನಸ್ಕರಾದ ಜೇನ್ ಮತ್ತು ಬಿಂಗ್ಲೆ ಸಹಜ ಪ್ರೇಮದ ಹಾದಿಗೇ ಬರುತ್ತಾರೆ ; ಶಾರ್ಲಟ್ ಲೂಕಸ್ ಮೂರ್ಖಪಾದ್ರಿ ಕಾಲಿನ್ಸ್‌ನ 'ವಿವಾಹಯೋಗ್ಯತೆ'ಗೆ ಮಣಿಯುತ್ತಾಳೆ ; ಲಿಡಿಯಾ ಮಿಲಿಟರಿಯ ವಿಕಮ್‌ನೊಡನೆ ಓಡಿಹೋಗುತ್ತಾಳೆ ; ಕೆಥರೀನ್ ತನಗೆ ಮಾತ್ರ ಅವಕಾಶ ಸಿಕ್ಕದೆ ಕಳವಳಿಸಿದಂತೆ

ತೋರುತ್ತಾಳೆ ; ಮೇರಿಗೆ ತನ್ನ ಪುಸ್ತಕದ ಬದನೇಕಾಯನ್ನು ತಿಂದೇ ಮುಗಿಯಲಿಲ್ಲ. ಆದರೆ, ಇವರೆಲ್ಲರಿಗಿಂತ ಭಿನ್ನಳಾಗಿ ಕಾದಂಬರಿಯಿಡೀ ತನ್ನ ವಿಶಿಷ್ಟ ಲವಲವಿಕೆ-ಕುತೂಹಲ-ಪೂರ್ವಗ್ರಹಗಳಿಂದ ಅಕ್ಕ ಜೇನ್‌ಗಿಂತ ಆಕರ್ಷಕಳಾಗಿ, ಗೆಳತಿ ಶಾರ್ಲಟ್‌ಗಿಂತ ಗಟ್ಟಿ ಮನಸ್ಸಿನ ಆದರ್ಶಪರಳಾಗಿ, ಎಲ್ಲರಿಗಿಂತ ಹೆಚ್ಚು ಪ್ರಬುದ್ಧಳೂ ಆದ ಎಲಿಜಬೆತ್ ಮಾತ್ರ ತನಗೆ ಗೊತ್ತಿಲ್ಲದೆಯೇ ಪ್ರತಿಷ್ಠಿತ ಡಾರ್ಸಿಯ ಮನಸ್ಸನ್ನು ಸೂರೆಗೊಳ್ಳುತ್ತಾಳೆ. ಎಲಿಜಬೆತ್ ಪ್ರಜ್ಞಾಪೂರ್ವಕವಾಗಿ ಡಾರ್ಸಿಯನ್ನು ಗೌರವಿಸುವ, ಮೆಚ್ಚುವ ಕ್ರಿಯೆ ಮಾತ್ರ ಉಳಿದೆಲ್ಲಕ್ಕಿಂತ ಸಂಕೀರ್ಣವಾಗಿ, ಹಂತಹಂತವಾಗಿ ಅವಳ ನೈತಿಕ ಪ್ರಬುದ್ಧತೆಯ ಬೆಳವಣಿಗೆಯಾಗಿ ಕಾದಂಬರಿಯ ಪ್ರಧಾನ ದೃಷ್ಟಿ ಮತ್ತು ಆಶಯಗಳನ್ನು ಒಳಗೊಳ್ಳುತ್ತದೆ. ಅದರಲ್ಲೇ ಜೇನ್ ಆಸ್ಟಿನ್‌ಳ ಕಲೆಯ ವಿಚಕ್ಷಣತೆಯೆಲ್ಲ ಕೆಲಸ ಮಾಡುತ್ತದೆ.

ಕಾದಂಬರಿಯಲ್ಲಿನ ಪರಿಸರದ ನಿಶ್ಚಿತ ಪೂರ್ವವೃತ್ತಿಗಳು (Preoccupations) ಮತ್ತು ವ್ಯಕ್ತಿ ವೈವಿಧ್ಯತೆಗಳು ಎಲಿಜಬೆತ್–ಡಾರ್ಸಿ ಸಂಬಂಧದ, ಸಾಮಾಜಿಕ-ನೈತಿಕ ಅರಿವಿನ ಬೆಳವಣಿಗೆಯ, ಪ್ರಕ್ರಿಯೆಗೆ ಹೆಚ್ಚು ಕಡಿಮೆ ಸ್ಥಿರ ಹಿನ್ನೆಲೆಯನ್ನು ಒದಗಿಸುತ್ತವೆ. ಉಳಿದ ಎಲ್ಲ ವ್ಯಕ್ತಿಗಳೂ – ಮಿ. ಬೆನೆಟ್ ಮಾತ್ರ ಎಲಿಜಬೆತ್ ಬಗೆಯ ವಿಶಿಷ್ಟತೆಗೆ ಪ್ರಜ್ಞಾಪೂರ್ವಕ ಅನುಕಂಪ ತೋರುತ್ತಾನೆ, ಆದರೆ ಇಡೀ ಕಾದಂಬರಿಯಲ್ಲಿ ಒಬ್ಬ ಅಸಹಾಯಕ ವ್ಯಕ್ತಿಯಾಗಿ moral non-entity ಆಗಿಯೇ ಉಳಿಯುತ್ತಾನೆ — ಸ್ಥಿರ ವ್ಯವಸ್ಥೆಯನ್ನೇ ಪ್ರತಿನಿಧಿಸುತ್ತಾರೆ ; ಅವರೆಲ್ಲರ ಅರಿವು – ಜಾಣತನ ವ್ಯವಸ್ಥೆಯ ಪ್ರಯೋಜನ ಪಡೆಯುವದಷ್ಟಕ್ಕೇ ಸೀಮಿತವಾಗಿರುತ್ತದೆ. ಒಂದು 'ಸ್ಥಿತಿ'ಯಿಂದ ಇನ್ನೊಂದು 'ಪೂರ್ವ ನಿಶ್ಚಿತ ಸ್ಥಿತಿಗೆ' ಧಾವಿಸುವುದಷ್ಟೇ ಅವರ ಕೆಲಸ : ಮದುವೆ ಮತ್ತು ತತ್ಸಂಬಂಧವಾದ ವಸ್ತುವಾದಿ ಚಿಂತೆಗಳು ಮಾತ್ರ ಅವರ ಮನಸ್ಸು-ಬುದ್ಧಿಗಳನ್ನು ಆಳುತ್ತಿರುತ್ತವೆ. ಅವರ ನೈತಿಕತೆ ಕೇವಲ ಸಾಂಪ್ರದಾಯಿಕ, ವ್ಯಾವಹಾರಿಕ ಮಟ್ಟದ್ದು ಅಥವಾ ಸ್ಥಿರವ್ಯವಸ್ಥೆಯನ್ನೇ ಫ್ಯಾಂಟಸಿಯಲ್ಲಿ ವೈಭವೀಕರಿಸುವಂಥದು – ಮೂಲಭೂತವಾಗಿ 'ಬೂರ್ಜ್ವಾ' ಆತಂಕ ಮಾತ್ರ. ಆದರೆ ಎಲಿಜಬೆತ್‌ಳಿಗೆ ಮಾತ್ರ – ಅವಳಲ್ಲೂ ತನ್ನ ವರ್ಗದ, ಹಿನ್ನೆಲೆಯ ಪ್ರಾತಿನಿಧಿಕ ಕಲ್ಪನೆಗಳು ಇವೆ – 'ಸ್ಥಿತಿ'ಗಿಂತ ಸ್ಥಿತಿಗಳ ನಡುವಿನ ಪ್ರಕ್ರಿಯೆಯಲ್ಲಿ ಆಸಕ್ತಿ. ಸ್ಥಿತಿಯೊಳಗೆ ನಿರಂತರ ಕಾಣಬಹುದಾದ ವೈಯಕ್ತಿಕ ವೈವಿಧ್ಯತೆಯ ಸೂಕ್ಷ್ಮಗಳು ಮತ್ತು ಪರಿವರ್ತನೆಯ ಸಾಧ್ಯತೆಗಳು ("But people themselves alter so much, that there is something new to be observed in them for ever.") ಅವಳ ಕುತೂಹಲ-ಸೋಜಿಗಗಳಿಗೆ ವಸ್ತು. ಅಂತೆಯೇ ಅವಳ ಮನಸ್ಸು ಮತ್ತು ಪ್ರವೃತ್ತಿ ಸಹಜವಾಗಿಯೇ ಈ ಪ್ರಕ್ರಿಯೆಯನ್ನು ಗ್ರಹಿಸಲು ಬೇಕಾದ ಸಿದ್ಧತೆಗಳನ್ನು ಪಡೆದಿವೆ. ತನ್ನೆದುರು ಬಂದ ವ್ಯಕ್ತಿಗಳ ವ್ಯಕ್ತಿತ್ವವನ್ನು ಅಳೆಯುವ, ಎಲ್ಲರ ಸ್ವಭಾವ-ಅಭಿರುಚಿ-ಯೋಗ್ಯತೆಗಳನ್ನು ನಿಷ್ಕರ್ಷಿಸುವ ಅವಳ ಮಾನಸಿಕ ಹವ್ಯಾಸದ ಕುತೂಹಲವೇ

ಕಾದಂಬರಿಯ ಗತಿಗೆ ಚಾಲನೆ ನೀಡುವ ಮುಖ್ಯ ಆಸಕ್ತಿಯಾಗುತ್ತದೆ. ಎಲಿಜಬೆತ್ ಒಬ್ಬ ironic ಪ್ರೇಕ್ಷಕಿ ಆಗುತ್ತಾಳೆ (ಡಾರ್ಸಿ ಬಗ್ಗೆ ವ್ಯಂಗ್ಯದಲ್ಲಿ ಎಲಿಜಬೆತ್ ಹೇಳುವ "....intricate characters are the most amusing" ಮಾತಿನ ಸಂದರ್ಭ ನೋಡಿ). ಆದ್ದರಿಂದಲೇ ಎಲಿಜಬೆತ್‌ಳದು ಕಾದಂಬರಿಯ ದೃಷ್ಟಿಗೆ ಅತ್ಯಂತ ನಿಕಟವಾದ ದೃಷ್ಟಿಕೋನ ; ಎಲ್ಲ ಮುಖ್ಯ ಪಾತ್ರಗಳು, ಸನ್ನಿವೇಶಗಳು ಅವಳ ದೃಷ್ಟಿಯಲ್ಲೇ ಮತ್ತು ಅವಳ ನಿರ್ಣಯ ಪ್ರಾಮಾಣ್ಯದ ನೆಲೆಯೊಳಗೇ ನಿರೂಪಿತವಾಗುತ್ತವೆ, ಬೆಲೆ ಪಡೆಯುತ್ತವೆ. ಅವಳನ್ನು ಸ್ವಲ್ಪಮಟ್ಟಿಗಾದರೂ ದಿಗ್ಭ್ರಮೆಪಡಿಸುವ ಅಥವಾ ಅವಳ ಕುತೂಹಲಕ್ಕೆ ನಿಜವಾದ ಸವಾಲಾಗುವ – ಶಾರ್ಲಟ್, ವಿಕಮ್, ಡಾರ್ಸಿ–ಪಾತ್ರಗಳೇ ಕಾದಂಬರಿಯ ಮುಖ್ಯ ಚಲನೆಯನ್ನು, ಎಲಿಜಬೆತ್‌ಳ ಅರಿವಿನ ಪಯಣದ ಬಗೆಯನ್ನು ನಿರ್ಧರಿಸುತ್ತವೆ. ಎಲಿಜಬೆತ್‌ಳ ದೃಷ್ಟಿಯ ವ್ಯಂಗ್ಯ ಮತ್ತು ನಿರೂಪಣೆಯಲ್ಲಿ ಸೂಕ್ಷ್ಮವಾಗಿ ಅಡಗಿದ್ದು ಅಲ್ಲಲ್ಲಿ ಮಿಂಚುತ್ತ ಎಲಿಜಬೆತ್‌ಳನ್ನೂ ಒಳಗೊಳ್ಳುವ ಜೇನ್ ಆಸ್ಟಿನ್‌ಳ ವ್ಯಂಗ್ಯ ಕಾದಂಬರಿಯ ಅರಿವಿನ – ಗ್ರಹಿಕೆಯ ಮೂಲಭೂತ ಕಾಮಿಕ್ ಸಾಧನವಾಗುತ್ತದೆ.

ಮುಖ್ಯವಾಗಿ ಸಂಭಾಷಣೆ ಮತ್ತು ನಿರೂಪಕ ವ್ಯಾಖ್ಯಾನದ ಬಲದಿಂದ ತೊಡಗುವ – ಕೆಲವು ಕಡೆ ಪತ್ರಗಳ ಮೂಲಕ ಪರೋಕ್ಷ ನಿರೂಪಣೆ ಇದ್ದರೂ – ಕಾದಂಬರಿಯ ನಿರೂಪಣೆಗೆ ಜೇನ್ ಆಸ್ಟಿನ್‌ಳ ಸಂಭಾಷಣೆಯೇ ಜೀವಾಳ. ವ್ಯಂಗ್ಯದ ನಾಟಕೀಯತೆ ಎಲಿಜಬೆತ್-ಡಾರ್ಸಿ ಸಂಬಂಧ ಆಕೃತಿ ಪಡೆಯುತ್ತ ಹೋಗುವ ಬಗೆಯನ್ನು ನಿರ್ಧರಿಸುವುದಲ್ಲದೆ ತನ್ನ ಅರಿವಿನ ಪಯಣದ ಹಾದಿಯಲ್ಲಿ ಎಲಿಜಬೆತ್‌ಳ ಸ್ವಭಾವ ಸಹಜ ಲವಲವಿಕೆಯನ್ನು, ಹಾಸ್ಯಪ್ರಿಯತೆಯನ್ನು, ಸ್ವಾಭಿಮಾನ-ಆತ್ಮವಿಶ್ವಾಸಗಳನ್ನು ಮತ್ತು ಪ್ರಶ್ನೆ-ಅನುಮಾನ-ನಂಬಿಕೆಗಳನ್ನು ಬಿಚ್ಚಿ ತೋರುವ ಸಂಭಾಷಣೆಗಳು ಕಾದಂಬರಿಯ ಕೇಂದ್ರ ಗಮನದಲ್ಲಿ ಓದುಗನ ಪ್ರಜ್ಞೆಗೆ ಅವಳ ಜೀವಂತಿಕೆಯನ್ನು, ನಿಷ್ಕಪಟತೆಯನ್ನು ಮತ್ತು ಮೂಲಭೂತವಾಗಿ ತನ್ನ ಪ್ರಕೃತಿಯಿಂದಲೇ ತೆರೆದ ದೃಷ್ಟಿಯವಳಾದ ಅವಳ ಪೂರ್ವಗ್ರಹದ ವ್ಯಂಗ್ಯವನ್ನು ಆಪ್ಯಾಯಮಾನವಾಗಿಸುತ್ತವೆ. ಉದಾಹರಣೆಗೆ, ನೆದರ್ ಫೀಲ್ಡ್ ಪಾರ್ಕ್‌ನಲ್ಲಿ ನಡೆಯುವ ಎಲಿಜಬೆತ್-ಡಾರ್ಸಿ ಸಂವಾದ ಮತ್ತು ನಿರೂಪಣೆಯನ್ನು ನೋಡಬಹುದು :

Mr. Darcy, drawing near Elizabeth, said to her -

"Do not you feel a great inclination, Miss Bennet, to seize such an opportunity of dancing a reel?"

She smiled, but made no answer. He repeated the question, with some surprise at her silence.

"Oh !" said she, "I heard you before ; but I could not immediately

determine what to say in reply. You wanted me, I know, to say 'yes', that you might have the pleasure of despising my taste ; but I always delight in overthrowing those kind of schemes, and cheating a person of their premeditated contempt. I have therefore made up my mind to tell you, that I do not want to dance a reel at all - and now despise me if you dare."

"Indeed I do not dare."

Elizabeth, having rather expected to affront him, was amazed at his gallantry ; but there was a mixture of sweetness and archness in her manner which made it difficult for her to affront anybody ; and Darcy had never been so bewitched by any woman as he was by her. He really believed, that were it not for the inferiority of her connections, he should be in some danger.

ನಿಖರ ಅರ್ಥವ್ಯತ್ಯಾಸಗಳ ಅರಿವಿನ ಪ್ರಬುದ್ಧ ಮನಸ್ಸುಗಳ ಮುಖಾಮುಖಿಯಾಗುತ್ತ–ಹಾಸ್ಯದ ಧಾಟಿಯನ್ನು ಬಿಟ್ಟುಕೊಡದೆಯೇ–trivial ಎನ್ನಿಸುವ ಮಾತುಕತೆ ಕೂಡ ಮನುಷ್ಯ ವ್ಯಕ್ತಿತ್ವದ ಸಂಕೀರ್ಣತೆ–ವೈವಿಧ್ಯತೆಯ ಮೇಲೆ ಬೆಳಕು ಚೆಲ್ಲುತ್ತ, ಆದರೆ ಶುದ್ಧವಾದ ಮತ್ತು ನಿಷ್ಪಕ್ಷಪಾತದ ನಿರ್ಣಯಗಳ ಸಾಧ್ಯತೆಯಲ್ಲಿ ನಂಬಿಕೆಯನ್ನು ದೃಢಪಡಿಸುತ್ತ ಹೋಗುವ ಬಗೆಯಿದು.

ತನ್ನ ಗೆಳತಿ ಶಾರ್ಲಟ್ ಕಾಲಿನ್ಸ್‌ನನ್ನು ಮದುವೆಯಾದಾಗ ಎಲಿಜಬೆತ್‌ಗೆ ಆಗುವ ದಿಗ್ಭ್ರಮೆ ಅನುಮಾನ-ನಂಬಿಕೆಗಳ ಮಿಶ್ರಣವಾಗಿ ವ್ಯಕ್ತವಾಗುತ್ತದೆ. ಸಾಮಾಜಿಕ ಪರಿಸರದೊಳಗೆ ಪ್ರಾಪಂಚಿಕತೆಯ ಲಾಭಕ್ಕಾಗಿ ವ್ಯಕ್ತಿ ಸಂಬಂಧಗಳ ಬಗ್ಗೆ ಬೇಕೆಂದೇ ಉದಾಸೀನಳಾಗಬಲ್ಲ ಶಾರ್ಲಟ್ ಬಗ್ಗೆ ಎಲಿಜಬೆತ್ ಚಿಂತಿಸುವ ಮತ್ತು ಮಾತಾಡುವ ರೀತಿಯನ್ನು ನೋಡಿ :

She had always felt that Charlotte's opinion of matrimony was not exactly like her own, but she could not have supposed it possible that, when called into action, she would have sacrificed every better feeling to worldly advantage.

"My dear Jane, Mr. Collins is a conceited, pompous, narrow-minded silly man ; you know he is, as well as I do ; and you must feel, as well as I do, that the woman who marries him cannot have a proper way of thinking. You shall not defend her though it is Charlotte Lucas. You shall not, for the sake of one individual, change the meaning of principle and integrity, nor endeavour to persuade yourself or me, that selfishness is prudence, and insensibility of danger, security for happiness."

ಹಾಗೆಯೇ ವಿಕ್ರಮ್‌ನ ಬಗ್ಗೆ, ಅವನು ಬೇರೊಬ್ಬ ಹುಡುಗಿಯ ಹಿಂದೆ ಹೋದ ಬಗ್ಗೆ ಮಿಸೆಸ್ ಗಾರ್ಡಿನರ್ ಅವಳನ್ನು ವಿಚಾರಿಸಿದಾಗ ಎಲಿಜಬೆತ್ ಕೇಳುವ ಪ್ರಶ್ನೆ ಇನ್ನಾರಿಗೂ ಅರ್ಥವಾಗದಷ್ಟು ತಲಸ್ಪರ್ಶಿಯಾಗಿರುವುದನ್ನು ನೋಡಬಹುದು :

"Pray my dear aunt, what is the difference in matrimonial affairs, between the mercenary and the prudent motive ? where does discretion end, and avarice begin ? Last Christmas you were afraid of his marrying me, because it would be imprudent; and now because he is trying to get a girl wih only ten thousand pounds, you want to find out that he is mercenary."

ಎಲಿಜಬೆತ್‌ಳ ಇಂಥ ದಿಟ್ಟತನದ ಮಾತುಗಳು ಕಥೆಯ ಸಂದರ್ಭದಲ್ಲಿ ಅವಳ ಮೇಲಿನ ವ್ಯಂಗ್ಯವನ್ನು ನಮಗೆ ಮುಟ್ಟಿಸುವುದರ ಜೊತೆಗೇ ತನ್ನ ಪರಿಸರದ ಸಿದ್ಧಗ್ರಹಿಕೆಗಳ ನೈತಿಕತೆಯನ್ನು ಪ್ರಶ್ನಿಸುತ್ತವೆ ; ಅಲ್ಲದೆ, ತನ್ನ ಆದರ್ಶದಲ್ಲಿ, ತನಗೆ ದಕ್ಕುವ ಒಂದೇ ಸಾಮಾಜಿಕ ಜಗತ್ತಿನ ವಾಸ್ತವತೆಯಿಂದ ತಪ್ಪಿಸಿಕೊಳ್ಳಲಾರದ ಅವಳ ಅರಿವಿನ ದಾರಿಯಲ್ಲಿ ಅವಳ ಮನಃಸ್ಥಿತಿಯ ತಳಮಳವನ್ನೂ ಗುರುತಿಸುತ್ತದೆ.

ಡಿ. ಡಬ್ಲ್ಯು. ಹಾರ್ಡಿಂಗ್ ಹೇಳುವಂತೆ, ಎಲಿಜಬೆತ್ ತನ್ನ ಗೆಳತಿ ಶಾರ್ಲಟ್‌ಳ ಸಂಪರ್ಕವನ್ನು ಕಡಿದುಕೊಳ್ಳದೇ ಉಳಿಯುವುದು – ಕತೆಯ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಾಗುವ ಜೊತೆಗೇ – ಲೇಖಕಿಯಾಗಿ ಜೇನ್ ಆಸ್ಟಿನ್‌ಳ ಸ್ವಂತ ಅಗತ್ಯವನ್ನೂ ಧ್ವನಿಸುತ್ತದೆ : ಮೊದಲಿನಿಂದಲೂ ಎಲಿಜಬೆತ್ ಮಾಡುವ ತಪ್ಪೆಂದರೆ ಸಾಮಾಜಿಕ ಸಂದರ್ಭವನ್ನು – ಆದ್ದರಿಂದ ವ್ಯಕ್ತಿಯ ಮೇಲೆ ಅದರ ಹಿಡಿತವನ್ನು – ಕಡೆಗಣಿಸುವುದು. ತನ್ನ ಸ್ವಾತಂತ್ರ್ಯಕ್ಕೂ ಮಿತಿಯಿದೆ ; ಇದು ಕೇವಲ ಪ್ರೇಮ ಅಥವಾ ವಿವಾಹದ ಶುದ್ಧ ವೈಯಕ್ತಿಕ ಪ್ರಶ್ನೆ ಅಲ್ಲ ; ಇದು ಮೂಲತಃ ವಸ್ತುವಾದಿ ಜಗತ್ತು , ಇಲ್ಲಿ ಆಸ್ತಿ ಮತ್ತು ವರ್ಗಪ್ರತಿಷ್ಠೆ ವ್ಯಕ್ತಿತ್ವದಷ್ಟೇ ಮುಖ್ಯ ; ತನ್ನ ಹಮ್ಮಿನ ನಿಲುವು ತನ್ನನ್ನು ಅವಾಸ್ತವಿಕ ಮತ್ತು ತಪ್ಪು ನಿರ್ಣಯದ ದಾರಿಗಳಿಗೆ ಒಯ್ದಿತು – ಎಂದು ಎಲಿಜಬೆತ್‌ಗೆ ಮನದಟ್ಟಾಗಬೇಕಾಗಿದೆ, ವಾಸ್ತವಜೀವನದ ಮಿತಿಯೊಳಗೆ ವ್ಯಕ್ತಿ ಸಂಬಂಧಗಳನ್ನು ಪರಿಭಾವಿಸುವ ಸ್ಪಷ್ಟ ವಿವೇಚನೆ ಅವಳದಾಗಬೇಕಾಗಿದೆ. ಅವಳ ಸಹಜಪ್ರವೃತ್ತಿಯೇ ಅವಳ ಅನುಭವದೊಳಗೆ – ಕಾದಂಬರಿಯ ಮುಖ್ಯ ನೆಲೆಗಟ್ಟಿನೊಳಗೆ – ನೈತಿಕ ಪ್ರಕ್ರಿಯೆಯನ್ನು ಹಾದು, ಅವಳ ಹಮ್ಮಿನ ಸೋಲಾಗಿ, ವ್ಯಂಗ್ಯವನ್ನು ಕೊನೆಗಾಣಿಸುವ ನಿರ್ದಿಷ್ಟಗತಿಯ ಮನಃಸ್ಥಿತಿಗೆ ಅವಳನ್ನು ತಂದು ಮುಟ್ಟಿಸುತ್ತದೆ. ಹೀಗೆ ಎಲಿಜಬೆತ್ ಡಾರ್ಸಿಯ ವ್ಯಕ್ತಿತ್ವದ ಹೊಸ ಅರಿವನ್ನು ಪಡೆದುಕೊಳ್ಳುವುದರೊಟ್ಟಿಗೇ ಒಂದು ಉದಾತ್ತ ನೈತಿಕಸ್ಥಿತಿಯನ್ನು ಮುಟ್ಟುತ್ತಾಳೆ :

"Had I been in love, I could not have been more wretchedly blind. But vanity, not love, has been my folly - pleased with the preference of

one, and offended by the neglect of the other, on the very beginning of our acquaintance. I have courted prepossession and ignorance, and driven reason away, where either were concerned. Till this moment, I never knew myself."

ಆದರೆ ಇನ್ನೊಂದು ಉತ್ಕಂಠತೆಯ ಆವೇಶಕ್ಕೆ ಅಥವಾ ಭಾವಾತಿರೇಕಕ್ಕೆ ಎಡೆ ಮಾಡದೆ ಎಲಿಜಬೆತ್‌ಳ ಅರಿವಿಗೆ ಬಂದ ತರ್ಕಬದ್ಧ ತಿಳಿವಳಿಕೆಯ ಆರ್ದ್ರತೆಯಾಗುತ್ತದೆ ; ತನ್ನ ಸುತ್ತಲಿನ ವಾತಾವರಣದ ಸರಳ ಮತ್ತು ವಸ್ತುವಾದಿ ತರ್ಕವನ್ನು vulgarityಯನ್ನು ಮೀರುವುದರ ಜೊತೆಗೇ ಎಲಿಜಬೆತ್ ತನ್ನ ಚೈತನ್ಯಕ್ಕೊಂದು ಬದುಕನ್ನು ಕಂಡುಕೊಳ್ಳುವ ಕ್ಷಣವಾಗುತ್ತದೆ ; ಮಾರ್ಕ್ ಸ್ಕೋರರ್ ಹೇಳುವಂತೆ ಕಾದಂಬರಿಯ ಕೇಂದ್ರ ಚಲನೆಯ ದಿಕ್ಕನ್ನು ತೋರುತ್ತದೆ ; '.... a condition of humanity that is not formed by the motivations of social class but by a generous candour that transcends it.' ಡಾರ್ಸಿ ಎಲಿಜಬೆತ್‌ಳ ನಿಷ್ಕಪಟ ಸ್ಥೈರ್ಯಕ್ಕೆ, ಸಹಜ ಜೀವಂತಿಕೆಯ ಸೌಂದರ್ಯಕ್ಕೆ ಬಾಗಿದರೆ ಎಲಿಜಬೆತ್ ಕ್ರಮೇಣ ಡಾರ್ಸಿಯ ಪ್ರಾಮಾಣಿಕ ಔದಾರ್ಯ, ದಕ್ಷತೆ, ಅನುಭವಗಳ ಬಗ್ಗೆ ಗೌರವ ಬೆಳೆಸಿಕೊಳ್ಳುತ್ತಾಳೆ, ಅವನ ಪ್ರೀತಿಯನ್ನು ತನ್ನ ಹಮ್ಮಿನಲ್ಲಿ ಕಡೆಗಣಿಸಿದ್ದಕ್ಕೆ ಪಶ್ಚಾತ್ತಾಪಪಡುತ್ತಾಳೆ. ಅವರ ಸಂಬಂಧ, ಸ್ಥಿರವ್ಯವಸ್ಥೆಯ ಒಳಗಿನಿಂದಲೇ, ಅವರ ಸ್ವಂತ ವ್ಯಕ್ತಿತ್ವಗಳ ನಿಷ್ಕಪಟತೆಯಿಂದ ಶಕ್ತಿ ಪಡೆದು ಜಡವಾದ ವಸ್ತುಸ್ಥಿತಿಯನ್ನು – ಸಾಮಾಜಿಕವಾಗಿ ಮಹತ್ವದ ನೆಲೆಯಲ್ಲಿ – ಅವರು ಮೀರುತ್ತಾರೆ.

ಆದರೆ ಎಲಿಜಬೆತ್ ಮತ್ತು ಡಾರ್ಸಿ ಸಾಂಪ್ರದಾಯಿಕ ರಮ್ಯ ಕಾದಂಬರಿಗಳಲ್ಲಿಯ ನಾಯಕ-ನಾಯಕಿಯರಂತೆ ಎಲ್ಲ ಮಿತಿಗಳನ್ನೂ ಮೀರಿದ ಮಹಾ ಆದರ್ಶ ವ್ಯಕ್ತಿಗಳಾಗುವುದಿಲ್ಲ , ಜೀವನಕ್ಕಿಂತ ದೊಡ್ಡವರಾಗುವುದಿಲ್ಲ ಅಥವಾ ಕೇವಲ ಅಲಿಗರಿ (allegory)ಗಳಾಗುವುದಿಲ್ಲ ; ಉದಾತ್ತತೆಯ ಅಂಶಗಳನ್ನು ಪಡೆದೂ, ವಸ್ತುತಃ ಮತ್ತು ಮೌಲ್ಯತಃ ಸಾಧಾರಣ ಜಗತ್ತಿನ ಅನುಭವದ ಸಾಧ್ಯತೆಗಳೊಳಗಿಂದಲೇ – ಜೇನ್ ಆಸ್ಟಿನ್‌ಳ ಕಿರಿದಾದ ರಂಗದ ಮೇಲೆಯೇ – ಬೆಳೆಯಬೇಕಾದ ಸಾವಿರದಲ್ಲೊಂದು ಗಟ್ಟಿ ಬೆಳವಣಿಗೆಯ ಪ್ರತೀಕಗಳಾಗುತ್ತಾರೆ. ಮಾಮೂಲಿ ಸನ್ನಿವೇಶ – ಮಾತುಕತೆಗಳ ಮಿತಿಗಳೊಳಗೇ ಅವರ ನೈತಿಕ ನಾಟಕ ನಡೆಯುತ್ತದೆ. ಇದನ್ನು ಜೀವಂತಿಕೆಯ ಸಂಭಾಷಣೆ ಮತ್ತು ಸೂಕ್ಷ್ಮ ವಿವೇಚಕ ಧ್ವನಿಯ ನಿರೂಪಣೆಯ ಸಹಾಯದಿಂದ ಒಂದು ಅಪ್ರತಿಮ ಜೀವಾಳವುಳ್ಳ ಶೋಭೆಯ ಮತ್ತು ಎಂಥ ನೀತಿವಾದಿಯನ್ನೂ (moralist) ರಂಜಿಸಬಲ್ಲ ಕಾದಂಬರಿಯಾಗಿ ಕಟ್ಟಿದ್ದಾಳೆ ಜೇನ್ ಆಸ್ಟಿನ್. ಸಾಂಪ್ರದಾಯಿಕ ಸಮಾಜದ ನೈತಿಕ ವಾತಾವರಣ(moral climates)ಗಳನ್ನು ಒಳಗೊಳ್ಳುತ್ತ ತನ್ನ ಸನ್ನಿವೇಶಗಳ ಸ್ಥಾನೀಯ ಮತ್ತು ವ್ಯಾಪಕ ವ್ಯಂಗ್ಯಗಳ ಮೂಲಕ ಸಾಮಾಜಿಕ-ನೈತಿಕ ಸಿದ್ಧಗ್ರಹಿಕೆಗಳನ್ನು ವಿಶ್ಲೇಷಿಸುತ್ತ, ಒಳಗಿಂದಲೇ ಸ್ವತಂತ್ರ ವ್ಯಕ್ತಿತ್ವವನ್ನು ಎತ್ತಿಹಿಡಿಯುವ ಮತ್ತು ಮುಖ್ಯವಾಗಿ

ಈ ಸ್ವಾತಂತ್ರ್ಯದ – ವಾಸ್ತವಿಕತೆ, ಜೀವನಪರತೆಯ ದೃಷ್ಟಿಯಿಂದ ಅಗತ್ಯವಾದ – ಮಿತಿಗಳನ್ನೂ ಸೂಚಿಸುವ, ಒಂದು ನೈತಿಕ ಅಭಿರುಚಿಯನ್ನು ಸ್ಥಾಪಿಸುವ ಶಕ್ತಿ ಅವಳ ಕಾದಂಬರಿಗಿದೆ.

ಇಷ್ಟು ಗಂಭೀರ ಎನ್ನಿಸುವ ದೃಷ್ಟಿ ಕಾಮಿಡಿಗೆ ಬದ್ಧವಾಗಿರುವುದರಿಂದ ಜೀವಂತಿಕೆಯ ಉತ್ಸಾಹ–ವಿನೋದ–ಹಾಸ್ಯಗಳನ್ನು ಚಿಮ್ಮುವ ಯಾವ ಸಹಜ ಕ್ಷಣಗಳನ್ನೂ ತನ್ನ ಉದ್ದೇಶಕ್ಕಾಗಿ ಚಿವುಟುವುದಿಲ್ಲ ; ಉದ್ವೇಗ, ಭಾವಪರವಶತೆಗಳನ್ನು ಹೊರತು ಮಾಡುತ್ತ ಅಥವಾ ಟೀಕಿಸುತ್ತ , ಅತ್ಯಂತ ಸೂಕ್ಷ್ಮ ನಿಯಂತ್ರಣದ ಕಾಮಿಡಿಯ ಕಠಿಣ ಕಲೆಯ ನಾಟಕೀಯತೆಯಲ್ಲಿ ಗಟ್ಟಿ ಮೌಲ್ಯಗಳನ್ನು ವ್ಯಂಜಿಸುವ ಸೂಕ್ಷ್ಮ ಆಕೃತಿಯನ್ನು ನಿರ್ಮಿಸುತ್ತದೆ. ಗ್ರಾಮೀಣ ಮಧ್ಯಮವರ್ಗದ ಮಿತಪರಿಸರದ ಆಗುಹೋಗುಗಳಲ್ಲಿ ವಿಶಿಷ್ಟ ಪೂರ್ವ ವೃತ್ತಿಗಳಲ್ಲಿ , ಸಂಭಾಷಣೆಗಳ ತೀರ ಸಾಧಾರಣ ಸಂದರ್ಭಗಳಲ್ಲೇ ಮಾತಿನ ಎಲ್ಲ ಅರ್ಥಪೂರ್ಣತೆಯ ಸಾಧ್ಯತೆಗಳನ್ನು ದುಡಿಸಿಕೊಳ್ಳುವ ಜೇನ್ ಆಸ್ಟಿನ್ ಕಲೆ ಅದಕ್ಕೆ ಸರಿದೂಗುವ ಮತ್ತೊಂದು ಇರಲಾರದೆನಿಸುವಷ್ಟು ಅಪರೂಪವಾದದ್ದು . ಒಬ್ಬ ಶ್ರೇಷ್ಠ ನಾಟಕಕಾರನಿಗೆ ಇರಬಹುದಾದ ವ್ಯಕ್ತಿ – ಸಂದರ್ಭ–ಸಂಬಂಧಗಳ, ಕ್ರಿಯೆಗಳ, ಚಲನೆಯ, ಮಾತಿನ, ಮೌನದ, ದೃಶ್ಯದ ನಿಖರ ಕಲಾವಂತಿಕೆಯ ಅರಿವು ಕಾದಂಬರಿ ಯಿಡೀ ಎಚ್ಚರವಾಗಿದೆ. ಈ ಬಗೆಯ ಕಲೆ ಲೀವಿಸ್ ಶೇಕ್ಸ್‌ಪಿಯರ್‌ನ ಬಗ್ಗೆ ಹೇಳುವ 'focussed sharpness of illuminating intelligence'ನ್ನು ಮನಸ್ಸಿಗೆ ತರುತ್ತದೆ.

ಎಲಿಜಬೆತ್–ಡಾರ್ಸಿ 'ಸಮಾಗಮ'ವನ್ನು ಕೇಂದ್ರವಾಗಿಟ್ಟುಕೊಂಡ ಈ ಕಾದಂಬರಿಯನ್ನು ಮಾರ್ಕ್ ಸ್ಕೋರರ್ 'It is a veritable wedding dance' ಎನ್ನುತ್ತ, ಮುಂದುವರೆದು ಹೀಗೆ ಹೇಳುತ್ತಾನೆ : 'But the dance itself is intricate and closely woven; Elizabeth and Darcy are only its leaders. They step out, announcing the theme, and behind them follow, in precise step, a whole group of other characters who demonstrate all the modulations of the theme, a whole variety of prides and prejudices, or of the social traits that result from the basic class conflict that encourages prides and prejudices....' ಈ ಮಾತುಗಳು Pride and Prejudiceನ ಕಲಾವಂತಿಕೆಯ, ಅನ್ಯೋಕ್ತಿ ವಾದದ ಬಗೆಯ (allegorical argument) ಕಡೆಗೆ ನಮ್ಮ ಗಮನ ಸೆಳೆಯುವಂತೆಯೇ ಅದರ ಆಕೃತಿಪೂರ್ಣತೆ (formal perfection) ಮತ್ತು ನಾಟಕೀಯ ಶಕ್ತಿಯನ್ನು ಎತ್ತಿ ತೋರುತ್ತವೆ ; ವಸ್ತು ಮತ್ತು ನಿರ್ವಹಣೆಯ ಸಾಮಾಜಿಕ - ನೈತಿಕ ಸತ್ವವನ್ನು ವ್ಯಾಖ್ಯಾನಿಸುತ್ತವೆ.

ಹಾಗೆಯೇ, ಒಂದು ಗಂಭೀರ 'ಸಾಂಸ್ಕೃತಿಕ' ನೆಲೆಗಟ್ಟಿನೊಳಗೆ ವಿಚಾರಿಸುವ ಟ್ರಿಲಿಂಗ್‌ನ ಈ ಮಾತುಗಳ ಅಭಿಪ್ರಾಯವನ್ನು ನೋಡಿ : 'The great charm, the

charming greatness, of Pride and Prejudice is that it permits us to conceive of morality as style. The relation of Elizabeth Bennet to Darcy is real, is intense, but it expresses itself as a conflict and reconciliation of styles ; a formal rhetoric, traditional and rigorous, must find a way to accommodate a female vivacity, which in turn must recognize the principled demands of the strict male syntax. The high moral import of the novel lies in the fact that the union of styles is accomplished without injury to either lover' ನೈತಿಕ ಜೀವನ ಮತ್ತು ನಾಗರಿಕತೆಯ ಮೌಲ್ಯಗಳ ನಡುವಿನ ಕೆಲವು ಗಂಭೀರ ಸಂಘರ್ಷಗಳ ಹಿನ್ನೆಲೆಯಲ್ಲಿ ವಿವೇಚಿಸುವ ಟ್ರಿಲಿಂಗ್ ಜೇನ್ ಆಸ್ಟಿನ್‌ಳ 'ಶೈಲಿ' (ಈ ಪರಿಕಲ್ಪನೆ ಎಷ್ಟು ಗಾಢವಾದ್ದೆಂದು ವಿವರಿಸುವ ಅಗತ್ಯವಿಲ್ಲ) ಹೇಗೆ ಪರಂಪರೆ- ಸಂಸ್ಕೃತಿಯ ತುಂಬು ತಿಳುವಳಿಕೆಯಿಂದ ಮತ್ತು ಮೂಲಭೂತವಾದ ಕ್ಷಮೆಯಂತಹ ಉದಾತ್ತ ಮನೋವೃತ್ತಿಯಿಂದ ಹೊಮ್ಮಿದ, ವ್ಯಕ್ತಿ ಜೀವಂತಿಕೆಯನ್ನು ಎಲ್ಲಿಯೂ ಚಿವುಟದ, ಸ್ವತಂತ್ರ ಚೈತನ್ಯದ ಶಕ್ತಿಯನ್ನು ಜರಿಯದ ಸಂಕೀರ್ಣ ನೈತಿಕತೆ ಆಗುತ್ತದೆ ಎಂದು ತೋರಿಸುತ್ತಾನೆ.

ಭಿನ್ನ ನೆಲೆಗಳಿಂದ ವಿಶ್ಲೇಷಿಸುವ ಮೇಲಿನ ಇಬ್ಬರು ವಿಮರ್ಶಕರೂ ಜೇನ್ ಆಸ್ಟಿನ್‌ಳ ಅದ್ಭುತ ಆಕೃತಿನಿಷ್ಠ ಕಲಾವಂತಿಕೆಯನ್ನು ಶ್ಲಾಘಿಸುತ್ತಾರೆ ; ಅವಳ ಕಾದಂಬರಿಯ, ಕಲೆಯ ವ್ಯಾಪಕ ಪ್ರಸ್ತುತತೆಯನ್ನು, ಜೇನ್ ಆಸ್ಟಿನ್‌ಳ ಮೂಲಭೂತ 'ಆಧುನಿಕತೆ'ಯನ್ನು ಗುರುತಿಸುತ್ತಾರೆ.

ಸ್ವತಃ ಜೇನ್ ಆಸ್ಟಿನ್‌ಳಿಗೇ ತನ್ನ ಅತ್ಯಂತ ಯಶಸ್ವಿ ಕಾದಂಬರಿಯ ಬಗ್ಗೆ ಒಂದು ಅತೃಪ್ತಿ ಇತ್ತು, ಅದರ 'ಪರಿಪೂರ್ಣ, ಶುದ್ಧ, ವಿಶಿಷ್ಟಶೈಲಿ'ಯ ಬಗ್ಗೆ – 'The work is rather too light, and bright, and sparkling : it wants to be stretched out here and there with a long chapter of sense, if it could be had ; if not of solemn specious nonsense... or anything that would form a contrast, and bring the reader with increased delight to the playfulness and epigrammaticism of the general style.' ಜೇನ್ ಆಸ್ಟಿನ್‌ಳ ಅಭಿಪ್ರಾಯ ಅವಳು ಓದಿದ ಗಿಲ್ಪಿನ್‌ರಂತಹ ಚಿತ್ರಕಲಾಭಿಜ್ಞರ ತತ್ವಗಳಿಂದ ರೂಪಿತವಾಗಿರಬಹುದು. ಆದರೆ ಕಾದಂಬರಿಕಲೆಗೆ ಅನ್ವಯಿಸಿದಾಗ, ಅದು ಇನ್ನೂ ಗಂಭೀರವಾದ ಕಾಳಜಿಯನ್ನು ಒಳಗೊಂಡಿದ್ದಂತೆ ಕಾಣುತ್ತದೆ ; ಕಾದಂಬರಿಯ ರೂಪ ಮತ್ತು ಪ್ರಕ್ರಿಯೆ (process)ಗಳ ಬಗ್ಗೆ ಅವಳ ವಿಚಾರಗಳನ್ನು ಕೂಡ ಹೇಳುತ್ತದೆ. Pride and Prejudice ಬಗ್ಗೆ ಜೇನ್ ಆಸ್ಟಿನ್‌ಳ ಅಭಿಪ್ರಾಯವನ್ನೇ ಕುರಿತು ಮತ್ತೆ ಟ್ರಿಲಿಂಗ್‌ನನ್ನು ಉಲ್ಲೇಖಿಸಬಹುದು : 'But she has in mind something beyond technical improvement - her sense that the novel is a genre that must not try for the shining outward perfection of style ; that it must maintain a degree of roughness of

texture, a certain hard literalness ; that for the sake of its moral life, it must violate its own beauty by incorporating some of the irreducible prosy actuality of the world.'

ಒಟ್ಟಾರೆ ಶ್ರೇಷ್ಠ ಕಲಾವಿದ-ಕಲಾಕೃತಿಗಳ ಉಗಮದ, ಆಕೃತಿಯ ಹಿಂದೆ ಕೆಲಸ ಮಾಡುವ ದೃಷ್ಟಿಯ, ಮನಸ್ಸಿನ ಸಾಮಾಜಿಕ-ನೈತಿಕ ಸತ್ವದ, ನಿಷ್ಠೆಯ, ಮೌಲ್ಯಗಳ ಮಾನವೀಯ ಮಿತಿಗಳ ಅರಿವಿನ ಕ್ಲಾಸಿಕ್ ಸಮತೋಲನ ಸಾಧಿಸುವ ಜೇನ್ ಆಸ್ಟಿನ್ ಕಲೆ ತನ್ನ ಪ್ರಕ್ರಿಯೆಯಲ್ಲಿ ಒಂದು ಬಗೆಯ moral dialecticನ್ನು ಒಳಗೊಳ್ಳುತ್ತದೆ ಎನಿಸುತ್ತದೆ. ನಿಷ್ಠುರ ಹೊಳಪಿನ, ರಂಜನೆಯ, ನಾಜೂಕಿನ ಹೊರ ಮೈಯ ಹಿಂದೆ ಅತ್ಯಂತ ಚೈತನ್ಯಪೂರ್ಣ ಜೀವಂತಿಕೆಯಿದೆ : 'ನೀತಿ'ಯ ಬಗ್ಗೆ ಎಲ್ಲಿಯೂ ನಿಸ್ಸಂದಿಗ್ಧ ಗಮನ ಕೊಡದೆಯೇ, ಯಾವುದೇ ಭವ್ಯತೆ – ವೈಪರೀತ್ಯಗಳನ್ನು ಒಳಗೆ ಬಿಡದೆ, ಅವಳ ಕಾದಂಬರಿ ಒಂದು ಸಮಾಜದ ಆರ್ಥಿಕ-ಸಾಂಸ್ಕೃತಿಕ-ಬೌದ್ಧಿಕ-ನೈತಿಕ ಚಲನೆಗಳ ಮೌಲಿಕತೆಯನ್ನು ಸಮರ್ಥವಾಗಿ ತನ್ನ 'ಶೈಲಿ'ಯಲ್ಲಿ ಅಭಿವ್ಯಕ್ತಿಸುತ್ತದೆ ; ಕಾದಂಬರಿ ಪ್ರಕಾರದ ಅತ್ಯುತ್ತಮ ಸಾಧ್ಯತೆಯೊಂದನ್ನು ತನ್ನ ಹಿಡಿತದಲ್ಲಿ ಪಡೆದು ಮಹತ್ವದ ಕಲೆಯಾಗಿಸುತ್ತದೆ.

ಸ್ಟೆಂಡಲ್ : 'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್'

ಟಿ. ಪಿ. ಅಶೋಕ

ಸ್ಟೆಂಡಲ್‌ನನ್ನು ಓರ್ವ ಕಾದಂಬರಿಕಾರನೆಂದು ಕರೆದರೇ ಫ್ಲಾಬೆ ಸಿಟ್ಟಿಗೇಳುತ್ತಿದ್ದನಂತೆ. ಕಾವ್ಯದ ಬಿಗಿಯಲ್ಲಿ ಬರೆಯುವ ಅಪ್ರತಿಮ ಕಲಾವಿದ ಫ್ಲಾಬೆಗೆ ಸ್ಟೆಂಡಲ್ ತುಂಬ ತೆಳುವಾಗಿ, ಜಾಳುಜಾಳಾಗಿ ಬರೆಯುತ್ತಿದ್ದ ಎನಿಸಿದ್ದರೆ ತಪ್ಪಲ್ಲ. ಆದರೆ, ಮಹತ್ವದ ಮಾತು ಎಂದರೆ ಸ್ಟೆಂಡಲ್ ಫ್ಲಾಬೆಯನ್ನು ಒಳಗೊಂಡೇ ಬರೆಯುತ್ತಿದ್ದ. ಫ್ರೆಂಚ್ ಕಾದಂಬರಿಯನ್ನು ಕ್ಲಾಸಿಕಲ್ ಕಟ್ಟುಪಾಡು ಮತ್ತು ರೊಮ್ಯಾಂಟಿಕ್ ಹುಚ್ಚಿನಿಂದ ಪಾರುಮಾಡಿದ. ಹೊಸ ಕಾದಂಬರಿಯ ಪ್ರವರ್ತಕನಾದ. ಇವನು ಹಾಕಿಕೊಟ್ಟ ದಾರಿಯಲ್ಲೇ ಮುಂದಿನ ಮಹತ್ತ್ವದ ಕಾದಂಬರಿಕಾರರಾದ ಬಾಲ್ಜಾಕ್, ಫ್ಲಾಬೆ, ಜೋಲಾನಂಥ ವಾಸ್ತವ ಪಂಥೀಯರು ಬಂದದ್ದು. ಆಲ್ಬರ್ಟ್ ಕಾಮೂನಂಥ ಕಡುನವ್ಯರ ಬೇರುಗಳನ್ನು ಸ್ಟೆಂಡಲ್‌ನಲ್ಲಿ ಗುರುತಿಸಬಹುದು. ಆದ್ದರಿಂದಲೇ ಸ್ಟೆಂಡಲ್ ಮುಖ್ಯ. ಮೂಲತಃ ಅವನೊಬ್ಬ ವಿಶ್ಲೇಷಕ ; ಅನ್ವೇಷಕ.

ಸ್ಟೆಂಡಲ್ ನಿಜವಾದ ಹೆಸರು ಹೆನ್ರಿ ಬೆಯಿಲ್. ಹುಟ್ಟಿದ್ದು 1783ರಲ್ಲಿ, 1789ರ ಫ್ರೆಂಚ್ ಮಹಾಕ್ರಾಂತಿಗೆ ಆರು ವರ್ಷಗಳ ಮೊದಲು. ಇವನ ತಂದೆ ಗ್ರೆನೋಬಲ್ ಎಂಬ ಊರಿನಲ್ಲಿ ವಕೀಲನಾಗಿದ್ದ. ಏಳನೆಯ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಸ್ಟೆಂಡಲ್ 1799ರವರೆಗೆ ಖಾಸಗಿ ಟ್ಯೂಟರುಗಳಿಂದ ವಿದ್ಯಾರ್ಜನೆ ಮಾಡಿದ. ಹದಿನಾರನೇ ವಯಸ್ಸಿಗೇ ಕೆಲಸಕ್ಕೆ ಸೇರಿದ. 1800 ರಿಂದ 1814ರವರೆಗೆ ನೆಪೋಲಿಯನ್ನನ ಸೇವೆಯಲ್ಲಿದ್ದ. ಬೇರೆಬೇರೆ ಯುದ್ಧದ ಕ್ಯಾಂಪ್‌ಗಳಲ್ಲಿದ್ದ. ಯುದ್ಧಗಳ ನಡುವಣ ವಿರಾಮ ಕಾಲವನ್ನು ಪ್ಯಾರಿಸ್ಸಿನ ಮೇಲ್ವರ್ಗದ ಸಂಪರ್ಕದಲ್ಲಿ ಕಳೆದ. ನೆಪೋಲಿಯನ್ನನ ಪತನದ ನಂತರ ಇಟಲಿಗೆ ಹೋಗಿ ಬರವಣಿಗೆಯನ್ನು ಪ್ರಾರಂಭಿಸಿದ. ಇಟಾಲಿಯನ್ ಚಿತ್ರಕಲೆಯ ಬಗ್ಗೆ ವಿವರವಾಗಿ ಬರೆಯಲಾರಂಭಿಸಿದ. ಮುಂದೆ ಪ್ರವಾಸಕಥನಗಳನ್ನು ಬರೆದ. 'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಪ್ರಕಟವಾದದ್ದು 1830ರ ಸುಮಾರಿಗೆ. ಅದೇ ವೇಳೆಯಲ್ಲೇ ಫ್ರಾನ್ಸಿನಲ್ಲಿ ಮತ್ತೊಂದು ಮಹಾಕ್ರಾಂತಿ ನಡೆದದ್ದು.

1841ರಲ್ಲಿ ಮೃತಪಟ್ಟ ಸ್ಟೆಂಡಲ್ ತನ್ನ ಬೆನ್ನ ಹಿಂದೆ ಬಿಟ್ಟುಹೋದ ಅಪ್ರಕಟಿತ ಬರಹಗಳು ಅಪಾರ. ಇವೆಲ್ಲ ಇವನ ಬಾಲ್ಯದ ಅನುಭವಗಳು, ಆತ್ಮವೃತ್ತಾಂತಗಳು, ಕಲೆ, ರಾಜಕೀಯ ಕುರಿತ ಲೇಖನಗಳು, ತಾನು ಕಂಡ ಸ್ಥಳ, ಜನರ ಬಗ್ಗೆ ಟಿಪ್ಪಣಿಗಳು. ಒಂದು ನಿಟ್ಟಿನಲ್ಲಿ ಸ್ಟೆಂಡಲ್‌ನ ವೈಯಕ್ತಿಕ ಬದುಕು, ಆಸೆ-ಆಕಾಂಕ್ಷೆ, ನಿರಾಶೆಗಳು, ಬಹುಮುಖ ಅಭಿರುಚಿ, ಸೂಕ್ಷ್ಮತೆಗಳನ್ನು ದಾಖಲಿಸುತ್ತಂತೆ ತುಂಬ ವೇಗವಾಗಿ ಚಲಿಸುತ್ತಿದ್ದ ಫ್ರೆಂಚ್ ಇತಿಹಾಸವನ್ನು ಅದರ ಮಗ್ಗುಲುಗಳಲ್ಲಿ ಇವು ಪರಿಚಯ ಮಾಡಿಸುತ್ತವೆ.

ಸ್ಟೆಂಡಲ್ ಹುಟ್ಟಿ ಬೆಳೆದದ್ದು ಫ್ರಾನ್ಸಿನ ಸ್ಥಿತ್ಯಂತರ ಕಾಲದಲ್ಲಿ. ಹಾಗಾಗಿ ಅವನು ಎದುರಿಸಬೇಕಾಗಿದ್ದ ಸಮಸ್ಯೆ, ಸವಾಲುಗಳು ಹಲವು. ಸಹಜವಾಗಿಯೇ ಅವನು ಎಲ್ಲರ ಟೀಕೆಗಳಿಗೆ ಒಳಗಾದ ; ರೊಮ್ಯಾಂಟಿಸಿಸ್ಟ್ ಪ್ರಭಾವ ತೀವ್ರವಾಗಿದ್ದ ಕಾಲದಲ್ಲಿ ಅದರ ಪ್ರವಾಹಕ್ಕೆ ಇದಿರಾಗಿ ಈಜಲು ಪ್ರಾರಂಭಿಸಿದ ಸಾಹಸಿ ಇವನು. ರೊಮ್ಯಾಂಟಿಕ್ ಯುಗದ ವಾಸ್ತವವಾದಿ ಲೇಖಕ ಸ್ಟೆಂಡಲ್ ಸಾಹಿತ್ಯ ವಿಮರ್ಶಕರಿಗೆ ತಲೆನೋವಾದ. 1855ರಿಂದ ಈಚೆಗೆ ಅವನ ಅಪ್ರಕಟಿತ ಬರಹಗಳೆಲ್ಲ ಮುದ್ರಣ ಕಾಣಲಾರಂಭಿಸಿದ ಮೇಲೆ ಇವನ ಬರವಣಿಗೆಯ ಹಿಂದಿನ ಪ್ರೇರಣೆಗಳು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಸ್ಟೆಂಡಲ್ ಮುಖ್ಯನಾಗಿ ಉಳಿದುಕೊಂಡಿದ್ದಾನೆ. ಕ್ಲಾಸಿಸಿಸ್ಟರು ಇವನು ಅಶ್ಲೀಲವಾದದ್ದನ್ನು ಸೃಷ್ಟಿಸುತ್ತಾನೆಂದು ಆಕ್ಷೇಪಿಸಿದರೆ ರೊಮ್ಯಾಂಟಿಕ್ಕರು ಇವನ ಬರವಣಿಗೆಯಲ್ಲಿ ಕಾವ್ಯವೇ ಇಲ್ಲವೆಂದು ಜರಿದರು. ಸ್ವತಃ ಸ್ಟೆಂಡಲ್ ಇವೆರಡರ ಅತ್ಯುತ್ತಮ ಅಂಶಗಳನ್ನು ಮೈಗೂಡಿಸಿಕೊಂಡಿದ್ದೂ ಆ ಎರಡೂ ಮಾರ್ಗಗಳಿಗಿಂತ ಭಿನ್ನನಾಗಿದ್ದ. ಒಬ್ಬ ಬರಹಗಾರನು ವಿಚಾರಗಳಲ್ಲಿ ರೊಮ್ಯಾಂಟಿಕ್ ಆಗಿರಬೇಕೆಂದೂ ಶೈಲಿಯಲ್ಲಿ ಕ್ಲಾಸಿಕಲ್ ಆಗಿರಬೇಕೆಂದೂ ಅವನು ಹೇಳುತ್ತಿದ್ದ.

ಲೇಖಕನ ಮನೋಧರ್ಮ ಕುರಿತ ಸ್ಟೆಂಡಲ್‌ನ ಮಾತುಗಳ ಮಹತ್ವ ಸಾಹಿತ್ಯ ವಿಮರ್ಶೆಯ ಆಸಕ್ತಿಗಳನ್ನು ಮೀರಿ ನಿಲ್ಲುತ್ತದೆ. ರೊಮ್ಯಾಂಟಿಕ್ಕರು ಮಾನವ ಸ್ವಾತಂತ್ರ್ಯದ ಅತ್ಯುನ್ನತ ಪ್ರತಿಪಾದಕರು. ಆದರೆ ಅದನ್ನು ಕನಸಿನಲ್ಲಿ, ಭ್ರಮೆಯಲ್ಲಿ, ಭಾಷೆಯ ಆಡಂಬರದಲ್ಲಿ ಹುಸಿಗೊಳಿಸಿಕೊಂಡಿದ್ದರು. ಸುಂದರವಾಗಿ ಭಾವಗೀತಾತ್ಮಕವಾಗಿ ಭಾವುಕವಾಗಿ ಬರೆಯುತ್ತ ಮಾನವ ಸ್ವಾತಂತ್ರ್ಯ ವಾಸ್ತವಿಕ ನೆಲೆಗಟ್ಟಿನಲ್ಲಿ ಸಹಜವಾಗಿ, ನಿಷ್ಠುರವಾಗಿ ಅರಳುವ ಬಗೆಯನ್ನು, ಅದರ ಹಿಂದಿನ ಪ್ರೇರಣೆಗಳನ್ನು , ಅದನ್ನು ದಮನಗೊಳಿಸುವ ಕ್ರೂರವಾದ ಐತಿಹಾಸಿಕ ಶಕ್ತಿಗಳನ್ನು ಕಾಣಲಾರದೆ ಹೋಗಿದ್ದರು. ಮಾನವ ಸ್ವಾತಂತ್ರ್ಯ ಅವರಿಗೆ ಕೇವಲ ಒಂದು ಹಂಬಲವಾಗಿತ್ತು. ಕ್ಲಾಸಿಸಿಸ್ಟರ ಬರವಣಿಗೆಯಲ್ಲಿ ಒಂದು ತರ್ಕ, ವ್ಯವಸ್ಥೆ ಇರುತ್ತಿತ್ತು . ಆದರೆ ಮನುಷ್ಯನ ಅದಮ್ಯವಾದ ಭಾವನೆಗಳೂ, ಅಪೇಕ್ಷೆಗಳೂ ಒಂದು ನೈತಿಕ ಕಟ್ಟುಪಾಡಿಗೆ ಸಿಲುಕಿಕೊಳ್ಳುವ ಅನಿವಾರ್ಯತೆಯನ್ನು ಗಟ್ಟಿಗೊಳಿಸುತ್ತಿದ್ದ ಕ್ಲಾಸಿಸಿಸ್ಟರು ಮಾನವ ಸ್ವಾತಂತ್ರ್ಯದ ಹಂಬಲವನ್ನೂ, ಅದನ್ನು ಸಾಧ್ಯಗೊಳಿಸಿಕೊಳ್ಳಲು ಮನುಷ್ಯ ಕಾಣುವ ಕನಸುಗಳನ್ನೂ ಗುರುತಿಸಲಾರದೇ ಹೋಗಿದ್ದರು. ಮನುಷ್ಯನ ಸ್ವಾತಂತ್ರ್ಯದ ಬಯಕೆ, ಅದನ್ನು ನಿಜಗೊಳಿಸಿಕೊಳ್ಳಲು ಅವನು ತುಳಿಯಬೇಕಾದ ಕಷ್ಟದ ಹಾದಿ — ಇವೆರಡನ್ನೂ ಒಟ್ಟಿಗೇ ಸಮಗ್ರವಾಗಿ ಹಿಡಿಯುವ ಸಾಹಸವನ್ನು ಸ್ಟೆಂಡಲ್‌ನಲ್ಲಿ ಕಾಣುತ್ತೇವೆ. ತನ್ನ ಅಪೇಕ್ಷೆಗಳನ್ನು ಈಡೇರಿಸಿಕೊಳ್ಳಲು ಮನುಷ್ಯ ತನಗೆ ತಾನೇ ಶೋಧಿಸಿ ಕೊಳ್ಳುವ ಹಲವು ಮಾರ್ಗಗಳು, ಈ ಮಾರ್ಗಗಳ ನೈತಿಕ ಪರೀಕ್ಷೆ ಸ್ಟೆಂಡಲ್‌ನ ಬರವಣಿಗೆಯಲ್ಲಿ ಗೋಚರಿಸುತ್ತ ವಾಸ್ತವ ಪಂಥದ ಪ್ರಾರಂಭಾವಸ್ಥೆಯನ್ನು ಸೂಚಿಸುತ್ತದೆ.

ಶೇಕ್ಸ್‌ಪಿಯರ್ ಬಗ್ಗೆ ರೋಮ್ಯಾಂಟಿಕ್ಕರು ಮಾಡಿದ ಟೀಕೆಗಳನ್ನು ವಿರೋಧಿಸಿ ಶೇಕ್ಸ್‌ಪಿಯರ್‌ನನ್ನು ಬಲವಾಗಿ ಸಮರ್ಥಿಸಿದ ಸ್ಟೆಂಡಲ್ ವೈಯಕ್ತಿಕವಾಗಿಯೂ ತನ್ನ ವ್ಯಕ್ತಿತ್ವದ ವೈರುಧ್ಯಗಳನ್ನು ಗೆಲ್ಲಲು ಅನಿವಾರ್ಯವೆಂಬಂತೆ ಹೊಸ ಮಾರ್ಗದಲ್ಲಿ ಬರೆಯಲು ಪ್ರಾರಂಭಿಸಬೇಕಾಯಿತು.

ಗ್ರೆನೋಬಲ್‌ನಂಥ ಸಣ್ಣ ಊರಿನಲ್ಲಿ ಹುಟ್ಟಿ ಏಳನೇ ವಯಸ್ಸಿಗೇ ತಾಯಿಯನ್ನು ಕಳೆದುಕೊಂಡು ಅನಾಥಪ್ರಜ್ಞೆಯನ್ನು ಅನುಭವಿಸಿದ್ದ ಈ ಸಂಕೀರ್ಣ ವ್ಯಕ್ತಿತ್ವ ತನ್ನ ಪದರಗಳಲ್ಲಿ ಇವನ ಭಗ್ನಪ್ರೇಮ, ಸಿನಿಕತೆ, ರಾಜಕೀಯದ ಪಟ್ಟುಗಳನ್ನು ಒಳಗಿನಿಂದ ಬಲ್ಲ ಕುಶಾಗ್ರಮತಿ, ಏನೇ ಆದರೂ ಮೇಲೇರಬೇಕೆಂಬ ಛಲ — ಎಲ್ಲವನ್ನೂ ಒಳಗೊಂಡಿದೆ. ಆ ಕಾಲವಾದರೂ ಅಂಥದೇ. ಎರಡು ಮಹಾಕ್ರಾಂತಿಗಳ ನಡುವೆ ನೆಪೋಲಿಯನ್ನನ ಆಡಳಿತ, ಫ್ರಾನ್ಸಿನ ಮಹತ್ವದ ರಾಜಕೀಯ ವಿದ್ಯಮಾನಗಳನ್ನು ಹತ್ತಿರದಿಂದ ಬೆರಗುಗಣ್ಣು ಗಳಲ್ಲಿ ನೋಡಿದ ಸ್ಟೆಂಡಲ್ ಅವುಗಳಿಗೆ ಅತಿ ಸರಳವಾಗಿ ಪ್ರತಿಕ್ರಿಯಿಸುವಂತಿರಲಿಲ್ಲ. ಪ್ಯಾರಿಸ್ಸಿನ ಮೇಲ್ವರ್ಗಗಳ ರಂಗುರಂಗಿನ ಪಾರ್ಟಿಗಳಲ್ಲಿ, ಆಡಂಬರದ ಚರ್ಚೆಗಳಲ್ಲಿ, ಯುದ್ಧದ ಕ್ಯಾಂಪು, ಸರಕಾರಿ ಕಾರಸ್ಥಾನಗಳು, ಚರ್ಚುಗಳಲ್ಲಿ ಆತ ಫ್ರೆಂಚ್ ಚರಿತ್ರೆ ಅತ್ಯಂತ ಸಂಕೀರ್ಣವಾಗಿ, ವಿಚಿತ್ರವಾಗಿ ನಿಷ್ಠುರವಾಗಿ ಬದಲಾಗುತ್ತಿದ್ದುದನ್ನು ಕಂಡ. ಅದೆಷ್ಟು ಬಗೆಯ ಜನರು ! ಅದೆಷ್ಟು ಬಗೆಯ ಐಡಿಯಾಲಜಿಗಳು ! ವೈಯಕ್ತಿಕ ಸ್ವಾರ್ಥವೋ ರಾಜಕೀಯವಾಗಿ ತುಂಬ ಪ್ರಬುದ್ಧವಾದ ವಿಚಾರವೋ ಎಂದು ಗೆರೆಕೊಯ್ದು ಹೇಳಲಾಗದಷ್ಟು fluid ಆಗಿದ್ದ ಫ್ರೆಂಚ್ ಸಮಾಜವನ್ನು ಅದರೆಲ್ಲ ಸಮಕಾಲೀನ ವೈಚಿತ್ರ್ಯಗಳಲ್ಲಿ, ಐತಿಹಾಸಿಕ ಒತ್ತಡಗಳಲ್ಲಿ ಸ್ಟೆಂಡಲ್ ಸೆರೆಹಿಡಿಯಬೇಕಾಗಿತ್ತು. ತನ್ನ ವ್ಯಕ್ತಿತ್ವದ ನಿಜವನ್ನು ಮರೆಮಾಚಿ ಮುಖವಾಡ ಹಾಕಿಕೊಂಡೇ ಜೀವನವನ್ನು ಎದುರಿಸಬೇಕೆಂದು ಸ್ಟೆಂಡಲ್ಲಿಗೆ ಅನ್ನಿಸಿದ್ದರೆ ಅದಕ್ಕೆ ವೈಯಕ್ತಿಕ ವಾದ, ಸಾಮಾಜಿಕವಾದ ಕಾರಣಗಳಿದ್ದವು. ಸ್ಟೆಂಡಲ್ ಕಾದಂಬರಿ ರಾಜಕೀಯವಾಗಿ ಮುಖ್ಯವಾಗುವಂತೆ ಮನೋವೈಜ್ಞಾನಿಕವಾಗಿಯೂ ಮುಖ್ಯವಾಗುವುದು ಇದೇ ಕಾರಣದಿಂದ. ಒಳಗಿನ ಶೋಧನೆ ಮತ್ತು ಹೊರಗಿನ ವೀಕ್ಷಣೆ ಎರಡೂ ಸ್ಟೆಂಡಲ್‌ಗೆ ಮುಖ್ಯವಾಗಿತ್ತು. ಆದ್ದರಿಂದಲೇ ಸ್ಟೆಂಡಲ್‌ನ ಬರವಣಿಗೆಯ ಬಹುಪಾಲು ಒಂದರ್ಥದಲ್ಲಿ ಅವನ ಆತ್ಮವೃತ್ತಾಂತವೇ ಆಗಿದೆ. ಈ ವೃತ್ತಾಂತ ಸಮಕಾಲೀನ ಫ್ರೆಂಚ್ ವೃತ್ತಾಂತವೂ ಆಗಿರುವುದು ಮಾತ್ರ ತುಂಬ ಮಹತ್ವಪೂರ್ಣ. ತನ್ನ ಬರವಣಿಗೆಯನ್ನು ತನ್ನ ಸಮಕಾಲೀನರು ಕಟುವಾಗಿ ಟೀಕಿಸುತ್ತಿದ್ದುದಕ್ಕೆ ಸ್ಟೆಂಡಲ್‌ಗೆ ವ್ಯಥೆಯೇನೂ ಇರಲಿಲ್ಲ. 1880ರಲ್ಲಿ ಜನ ಅದನ್ನು ಓದಿ ಅರ್ಥ ಮಾಡಿಕೊಳ್ಳುತ್ತಾರೆಂದು ಅವನು ಹೇಳುತ್ತಿದ್ದ. ಸ್ಟೆಂಡಲ್ ತನ್ನ ಯೋಚನೆಯಲ್ಲಿ ತನ್ನ ಸಮಕಾಲೀನರಿಗಿಂತ ಮುಂದೆ ಇದ್ದ ಎಂಬುದೇ ಅವನನ್ನು ಅರ್ಥೈಸುವಲ್ಲಿ ಪ್ರಮುಖ ತೊಡಕಾಗಿತ್ತು. ಸ್ಟೆಂಡಲ್‌ನ ಬರವಣಿಗೆ ಪೂರ್ವಗ್ರಹ ಪೀಡಿತವೆಂದು ಟೀಕಿಸುತ್ತಿದ್ದವರು ಹಿಂದಿನ ಯೋಚನಾಕ್ರಮದಿಂದ

ಹೊರಬರಲು ಸಿದ್ಧವಾಗಿರಲಿಲ್ಲ ಅಷ್ಟೆ. ಸ್ಟೆಂಡಲ್ ಪ್ರಾಯಶಃ ಫ್ರಾನ್ಸಿನ ಮೊಟ್ಟಮೊದಲ ಲಿಬರಲ್ ಕಾದಂಬರಿಕಾರ. ಆದ್ದರಿಂದ ಎಲ್ಲವನ್ನೂ, ಎಲ್ಲರನ್ನೂ ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆದ್ದರಿಂದ ಯಾವ ಒಂದು ಪಕ್ಷದವರಿಗೂ ಸ್ಟೆಂಡಲ್‌ನನ್ನು ಇಡಿಯಾಗಿ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.

ಸ್ಟೆಂಡಲ್‌ನ ಪ್ರಕಾರ ಕಾದಂಬರಿ ಎಂದರೆ ರಸ್ತೆಯ ಮೇಲಿನ ಕನ್ನಡಿ. 'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಕಾದಂಬರಿಯನ್ನು ಅವನು "ಹತ್ತೊಂಭತ್ತನೇ ಶತಮಾನದ ಇತಿಹಾಸ" (A Chronicle of the Nineteenth Century) ಎಂದೇ ಕರೆದಿದ್ದಾನೆ. ಆ ಕಾಲದ ಇತಿಹಾಸವನ್ನು ಈ ಕಾದಂಬರಿಗಿಂತ ಸೂಕ್ಷ್ಮವಾಗಿ ದಾಖಲಿಸುವ ಕೃತಿ ಇನ್ನೊಂದಿಲ್ಲ. ಆದರೆ ಕಾದಂಬರಿ ಕೇವಲ ಒಂದು ಕಾಲದ ದಾಖಲೆ ಮಾತ್ರವಾಗಿದ್ದಿದ್ದರೆ ಅದು ಅತ್ಯುತ್ತಮ ವರದಿಯ ಮಟ್ಟಕ್ಕಿಂತ ಮೇಲೇರುತ್ತಿರಲಿಲ್ಲ. ಅಲ್ಲದೆ ಇತಿಹಾಸವೆನ್ನುವುದು ಒಂದು ಪ್ರಕ್ರಿಯೆಯಾದ್ದರಿಂದ ಇಂಥ ಪ್ರಕ್ರಿಯೆಯನ್ನು ಪ್ರೇರೇಪಿಸುವ ಅಂಶಗಳ ಒಳಸುಳಿಗಳಿಗೂ, ಆಂತರಿಕ ಒತ್ತಡಗಳಿಗೂ, ತೆರೆದುಕೊಂಡೇ ಬರೆಯುವ ಸ್ಟೆಂಡಲ್ ತನ್ಮೂಲಕ ವ್ಯಕ್ತವಾಗುವ ಮನುಷ್ಯ ಸ್ವಭಾವವನ್ನು ಆಳವಾಗಿ ವಿಶ್ಲೇಷಿಸುತ್ತಾನೆ, ಗಟ್ಟಿಮುಟ್ಟಾದ ಪಾತ್ರಗಳನ್ನು ಸೃಷ್ಟಿಸುತ್ತಾನೆ. ಸ್ಟೆಂಡಲ್‌ನ ಕಾದಂಬರಿಯ ಮಹತ್ವವಿರುವುದು ಇಲ್ಲಿಯೇ. ಇದು ಕೆಲ ಪಾತ್ರಗಳ ವೈಯಕ್ತಿಕ ವೃತ್ತಾಂತವೂ ಹೌದು. ಹಲವು ಪಾತ್ರಗಳನ್ನು ಮುಖಾಮುಖಿಯಾಗಿಸಿ ಅವುಗಳ ಘರ್ಷಣೆಯಲ್ಲಿ ಒಂದು ಕಾಲದ ದನಿಯನ್ನು ಹಿಡಿದುಕೊಡುವ ಸ್ಟೆಂಡಲ್ ಒಂದು ಕಾಲದ ಸಾಮುದಾಯಿಕ ಬದುಕಿನ ಹಿನ್ನೆಲೆಯಲ್ಲಿ ವ್ಯಕ್ತಿಯ ಒಳಮನಸ್ಸಿನ ಆಳ ಪಾತಾಳಗಳನ್ನೂ ಇಳಿದು ನೋಡುತ್ತಾನೆ. ಹಾಗಾಗಿ ಸ್ಟೆಂಡಲ್‌ನ ಕಾದಂಬರಿ ವರದಿಯೂ ಆಗದೆ, ಪಾತ್ರಪ್ರಧಾನವೂ ಆಗದೆ ಒಂದು ಸಂಕೀರ್ಣ ಕಲಾಕೃತಿಯಾಗುತ್ತದೆ. ಒಂದು ಕಾಲದ ವಿದ್ಯಮಾನಗಳನ್ನು ಹಿಡಿಯುವುದೇ ಸ್ಟೆಂಡಲ್‌ನ ಉದ್ದೇಶವಾಗಿದ್ದರೂ ಒಟ್ಟಾರೆ ಮನುಷ್ಯನ ಅವಸ್ಥೆಯ ಬಗ್ಗೆಯೇ ಸ್ಟೆಂಡಲ್ ಕೆಲ ಮಹತ್ವಪೂರ್ಣ ಹೇಳಿಕೆಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ.

'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಕಾದಂಬರಿಗೆ ಮೂಲ ಒಂದು ಪತ್ರಿಕಾವರದಿ ಎಂಬುದನ್ನು ಗಮನಿಸಿದಾಗ ಮೇಲಿನ ಮಾತುಗಳು ಇನ್ನಷ್ಟು ಸ್ಪಷ್ಟವಾಗುತ್ತದೆ. 1827ರಲ್ಲಿ ಈ ವರದಿ ಪ್ರಕಟವಾಗಿತ್ತು : ಅದೊಂದು ಕ್ರಿಮಿನಲ್ ಪ್ರಕರಣವನ್ನು ಕುರಿತ ವರದಿ : ಆ್ಯಂಟೊನಿ ಬರ್ಥೆಟ್ ಅಕ್ಕಸಾಲಿಗನೊಬ್ಬನ ಮಗ. ಬುದ್ಧಿವಂತ ; ಸ್ಫುರದ್ರೂಪಿ ; ಮಹತ್ವಾಕಾಂಕ್ಷಿ. ಹೇಗಾದರೂ ಮೇಲಕ್ಕೆ ಏರಬೇಕೆಂದು ತವಕಿಸುತ್ತಿದ್ದವ. ಪಾದ್ರಿಯೊಬ್ಬನ ಸಹಾಯದಿಂದ ಒಬ್ಬ ಶ್ರೀಮಂತನ ಮನೆಯಲ್ಲಿ ಟ್ಯೂಟರ್ ಕೆಲಸ ದೊರೆಯುತ್ತದೆ. ಗ್ರೆನೋಬಲ್‌ನ ಈ ಕುಟುಂಬದಿಂದ ವರ್ಷ ಕಳೆಯುವ ಮೊದಲೇ ಉಚ್ಚಾಟಿತನಾಗುತ್ತಾನೆ. ಬೆಲ್ಲಿ ಎಂಬ ಹಳ್ಳಿಯಲ್ಲಿ ಸೆಮಿನರಿಯೊಂದಕ್ಕೆ ಸೇರುತ್ತಾನೆ.

ಎರಡು ವರ್ಷಗಳ ನಂತರ ಆ ಸೆಮಿನರಿಯನ್ನು ಬಿಡಬೇಕಾಗುತ್ತದೆ. ಗ್ರೆನೋಬಲ್‌ನ ಸೆಮಿನರಿಯಲ್ಲಿ ಪ್ರವೇಶ ಪಡೆಯುತ್ತಾನೆ. ತಿಂಗಳು ಕಳೆಯುವಷ್ಟರಲ್ಲಿ ಆತ ಪಾದ್ರಿಯಾಗಲು ಅನರ್ಹನೆಂದು ಹೇಳಿ ಹೊರದೂಡಲಾಗುತ್ತದೆ. ಕೈಯಲ್ಲಿ ಹಣವಿಲ್ಲದೆ, ಹತಾಶೆಯಿಂದ ತಾನು ಮೊದಲು ಟ್ಯೂಟರ್ ಆಗಿ ಕೆಲಸ ಮಾಡುತ್ತಿದ್ದ ಮನೆಯ ಯಜಮಾನನ ಹೆಂಡತಿ ಮದಾಮ್ ಮಿಖೌಡ್‌ಗೆ ಬಯ್ಗುಳಗಳಿಂದ ಕೂಡಿದ ಪತ್ರಗಳನ್ನು ಬರೆಯಲಾರಂಭಿಸುತ್ತಾನೆ. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ತಪ್ಪಿಸಲೆಂದು ಅವಳ ಗಂಡ ಇವನಿಗೆ ಕಾರ್ಡೊನ್ ಎಂಬುವವನ ಮನೆಯಲ್ಲಿ ಕೆಲಸ ಕೊಡಿಸುತ್ತಾನೆ. ಆದರೆ ಬಹುಬೇಗ ಅಲ್ಲಿಂದಲೂ ಉಚ್ಚಾಟಿತನಾಗುತ್ತಾನೆ. ಮತ್ತೆ ಕಾಗದ ಬರೆದು ಮದಾಮ್ ಮಿಖೌಡ್‌ಳನ್ನು ಕೊಲ್ಲುವ ಬೆದರಿಕೆ ಹಾಕುತ್ತಾನೆ. ಮತ್ತೊಂದು ಮನೆಯಲ್ಲಿ ಅವನಿಗೆ ಕೆಲಸ ಕೊಡಿಸಲಾಗುತ್ತದೆ. ಕೆಲವಾರಗಳ ನಂತರ ಬರ್ಥೆಟ್ ಅನಿರೀಕ್ಷಿತವಾಗಿ ಬರುತ್ತಾನೆ. ಪ್ರಾರ್ಥನೆ ಸಲ್ಲಿಸುತ್ತ ಚರ್ಚಿನಲ್ಲಿ ಕುಳಿತಿದ್ದ ಮದಾಮ್ ಮಿಖೌಡ್‌ಳತ್ತ ಎರಡು ಗುಂಡುಗಳನ್ನು ಹಾರಿಸುತ್ತಾನೆ. ವಿಚಾರಣೆಯ ಸಂದರ್ಭದಲ್ಲಿ ತಾನು ಉದ್ರೇಕಗೊಂಡಿದ್ದಾಗಿ ತಿಳಿಸುತ್ತಾನೆ. ತನ್ನ ತಪ್ಪನ್ನೆಲ್ಲ ಒಪ್ಪಿಕೊಂಡು ಸದ್ವಿವೇಕಪೂರ್ಣ ಪಾದ್ರಿಯಾಗಬಯಸಿದ್ದೆನೆಂದೂ ಆದರೆ ಅವನ ತಪ್ಪೊಪ್ಪಿಗೆಯೇ ತಾನು ಸೆಮಿನರಿಯಿಂದ ಉಚ್ಚಾಟಿತನಾಗಲು ಕಾರಣವಾಯಿತೆಂದೂ ಅವನು ವಿವರಿಸುತ್ತಾನೆ. ಕಾರ್ಡೊನ್ ಮನೆಯಲ್ಲೂ ಗಾಂಭೀರ್ಯದಿಂದ ವರ್ತಿಸಲು ಪ್ರಯತ್ನಿಸಿದ್ದ . ಆದರೆ ಮದಾಮ್ ಮಿಖೌಡ್‌ಳ ಕಾಗದದಿಂದ ಪ್ರೇರಿತನಾಗಿ ಕಾರ್ಡೊನ್ ತನ್ನನ್ನು ಹೊರದೂಡಿದ ಎಂದು ಅವನು ಆಪಾದಿಸುತ್ತಾನೆ. ಕಾರ್ಡೊನ್‌ಳ ಮಗಳು ತನ್ನೊಡನೆ ಸ್ನೇಹದಿಂದ ವರ್ತಿಸುತ್ತಿದ್ದುದನ್ನು ಸಹಿಸದೆ ಮದಾಂ ಮಿಖೌಡ್ ತನ್ನ ವಿರುದ್ಧ ಆ ಪತ್ರ ಬರೆದಳೆಂದು ತಿಳಿಸುತ್ತಾನೆ. ತನ್ನೆಲ್ಲ ಸೋಲು, ನಿರಾಶೆ, ಹತಾಶೆಗಳಿಗೆ ಮೂಲ ಕಾರಣಳಾದ ಅವಳನ್ನು ಕೊಲ್ಲಲು ತತ್ಕಾಲೀನ ಉದ್ರೇಕವೇ ಕಾರಣವೆಂದು ಅವನು ವಾದಿಸುತ್ತಾನೆ. ಕೇವಲ ಪ್ರತೀಕಾರ ಮನೋಭಾವ ತನ್ನ ಕ್ರಿಯೆಯ ಹಿಂದಿನ ಪ್ರೇರಣೆಯೆಂದು ಹೇಳುತ್ತಾನೆ. ಬಹಳ ಜನ ಇವನ ಮಾತುಗಳಿಂದ ಕರಗಿ ಹೋದರು. ಇಂಥ ಮುಗ್ಧ ಅದೃಷ್ಟಹೀನ ತರುಣನನ್ನು ಉಳಿಸಬೇಕೆಂದು ಪ್ರಯತ್ನಪಟ್ಟರು. ಆ ಪ್ರಯತ್ನಗಳು ನಿಷ್ಫಲಗೊಂಡು ಬರ್ಥೆಟ್ ಮರಣದಂಡನೆಯನ್ನು ಅನುಭವಿಸಬೇಕಾಯಿತು.

'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಕಾದಂಬರಿಯ ನಾಯಕ ಜೂಲಿಯನ್ ಸಾರೆಲ್‌ನ ಕಥೆಗೂ ಬರ್ಥೆಟ್‌ನ ಕಥೆಗೂ ತುಂಬ ಸಾಮ್ಯ ಕಂಡುಬರುತ್ತದೆ. ಜೂಲಿಯನ್ ಬಡಗಿಯೊಬ್ಬನ ಕಿರಿಯ ಮಗ. ಬಡವ, ಹಣವಿರುವವರನ್ನು ಕಂಡರೆ ಒಂದು ಬಗೆಯ ಸಿಟ್ಟು, ದ್ವೇಷ. ಅವರ ಸಾಮಾಜಿಕ ಸ್ಥಾನಮಾನಗಳು, ಆಡಂಬರದ ಜೀವನ ಕಂಡು ಹೊಟ್ಟೆಕಿಚ್ಚು. ತುಂಬ ಬುದ್ಧಿವಂತ. ಇವನ ಜ್ಞಾಪಕಶಕ್ತಿ ಅಸಾಧಾರಣ. ಇಡೀ ಬೈಬಲನ್ನು ಬಾಯಿನಲ್ಲೆ

ಇಟ್ಟುಕೊಂಡಿರುವವ. ಇವನ ಜ್ಞಾಪಕಶಕ್ತಿ ಮಧ್ಯಮವರ್ಗದ ಕುಟುಂಬಗಳವರಿಗೆ ಒಂದು ವಿಸ್ಮಯ. ಇವನನ್ನು ಟ್ಯೂಟರ್ ಆಗಿ ಇಟ್ಟುಕೊಂಡು ತಮ್ಮ ತಮ್ಮ ಶ್ರೀಮಂತಿಕೆಯನ್ನು ಮೆರೆಸುವ ಚಪಲ. ಇವನಿಗಾದರೂ ಅವರ ಸಂಪರ್ಕದಿಂದ ತನ್ನ ವರ್ಗದಿಂದ ಮೇಲೇರುವ ಹಂಬಲ. ಆ ಊರಿನ ಮೇಯರ್‌ನ ಮನೆಯಲ್ಲಿ ಟ್ಯೂಟರ್‌ನ ಕೆಲಸ ಸಿಗುತ್ತದೆ. ಬಹುಬೇಗ ಮೇಯರ್‌ನ ಹೆಂಡತಿ ಮದಾಮ್ ದೆ ರೆನಾಲ್ ಮತ್ತು ಮಕ್ಕಳ ವಿಶ್ವಾಸ ಸಂಪಾದಿಸಿಕೊಳ್ಳುತ್ತಾನೆ. ಮೊದಮೊದಲು ಇವನ ಬಗ್ಗೆ ಅಷ್ಟೇನೂ ಆಸಕ್ತಿ ತೋರದ ಮದಾಂ ದೆ ರೆನಾಲ್ ಕ್ರಮೇಣ ಇವನಿಂದ ಆಕರ್ಷಿತಳಾಗುತ್ತಾಳೆ. ಇವನಿಗೂ ಅವಳ ಮೇಲೆ ಮೋಹ ಬೆಳೆಯುತ್ತದೆ. ಮುಂದೊಂದು ದಿನ ಇವರಿಬ್ಬರೂ ಕೂಡುತ್ತಾರೆ. ಪ್ರೀತಿ-ದ್ವೇಷಗಳ ಸಂಬಂಧ ಬೆಳೆಯುತ್ತದೆ. ಕೆಲವೊಮ್ಮೆ ಅವಳನ್ನು ಪಾಪಪ್ರಜ್ಞೆ ಕಾಡುತ್ತದೆ. ಇವನಿಗೂ ಹಲವು ಬಗೆಯ ವಿಕಾರಗಳು. ಆದರೆ ಬಡ ಬಡಗಿಯ ಮಗನಾದ ತಾನು ಆ ಶ್ರೀಮಂತ ಹೆಣ್ಣಿನ ಮೇಲೆ ಈ ರೀತಿಯಲ್ಲಿ ಪ್ರಭುತ್ವ ಸ್ಥಾಪಿಸಿದ್ದಕ್ಕಾಗಿ ಒಂದು ಬಗೆಯ ಹೆಮ್ಮೆ, ಸಂತೋಷ. ಇವನ ಕೀಳ್ತನದ ವಿಕಾರ ಈ ರೀತಿಯಲ್ಲಿ ಆಗಾಗ ಇಂಥ ಪ್ರಚೋದನೆಗಳನ್ನು ಕೊಡುತ್ತ ತನ್ನ ವರ್ಗದವರಿಗೆ ಸಾಮಾನ್ಯವಾಗಿ ಏನು ಮಾಡಲು ಸಾಧ್ಯವಿಲ್ಲವೋ ಅದನ್ನು ಮಾಡಿಸುತ್ತಿರುತ್ತದೆ. ಮದಾಮ್ ದೆ ರೆನಾಲ್‌ಳ ಸೇವಕಿಯನ್ನು ಮದುವೆಯಾಗಲು ತಾನು ಒಪ್ಪದಿದ್ದುದು, ಮೇಯರ್‌ನ ಜೊತೆ ತುಂಬ ಕಟುವಾಗಿ ವರ್ತಿಸಿ ಸವಲತ್ತುಗಳನ್ನು ಪಡೆಯುವುದು, ಇದರಿಂದ ತಾನು ಬಲವಾಗುತ್ತಿದ್ದೇನೆಂದು ಹಿಗ್ಗುವುದು, ತನ್ನ ವಿದ್ಯೆ, ಜ್ಞಾಪಕಶಕ್ತಿಗಳ ಬಗ್ಗೆ ವಿಶೇಷವಾದ ಹೆಮ್ಮೆ, ಅಭಿಮಾನ ತಾಳುವುದು, ಬೇರೆಯವರೊಂದಿಗೆ ವರ್ತಿಸುವಾಗ ತಾನು ತೋರುವ ನಿಷ್ಠುರತೆ ಗಾಂಭೀರ್ಯ ಇವೆಲ್ಲವುಗಳನ್ನೂ ಜೂಲಿಯನ್‌ನ ಈ ಸಂಕೀರ್ಣ ಮನಃಸ್ಥಿತಿಯ ಹಿನ್ನೆಲೆಯಲ್ಲೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಮೇಯರ್ ಮತ್ತು ಆತನ ಹೆಂಡತಿ ಹಣ ಕೊಟ್ಟು ತನ್ನನ್ನು ಟ್ಯೂಟರನನ್ನಾಗಿ ನೇಮಿಸಿಕೊಂಡಿರಬಹುದು. ಆದರೆ ಅವರಿಗೆ ತನ್ನ ಹಣ, ಅಂತಸ್ತುಗಳು ಗೌರವ ತಂದುಕೊಟ್ಟಿರುವಂತೆ ತನ್ನ ವಿದ್ಯೆ, ಬುದ್ಧಿ ಆಕರ್ಷಣೆಗಳೂ ತನಗೆ ಇವೆಲ್ಲವನ್ನೂ ತಂದುಕೊಡಬೇಕೆಂದು ಜೂಲಿಯನ್ ಬಯಸುತ್ತಾನೆ ; ಅದಕ್ಕಾಗಿ ಶ್ರಮಿಸುತ್ತಾನೆ. ಇವನಿಗೆ ಅವರ ಹಣದ ಅಗತ್ಯವಿರುವಂತೆ ಅವರಿಗೆ ಇವನ ವಿದ್ಯೆಯ ಅಗತ್ಯವಿದೆಯಲ್ಲ ! ಒಂದು ರೀತಿಯಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ಉಪಯೋಗಿಸಿ ಕೊಳ್ಳುತ್ತ ತಮ್ಮ ತಮ್ಮ ಸ್ಥಾನಮಾನಗಳನ್ನು ಎತ್ತರಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಮಧ್ಯಮವರ್ಗದವರ ವಿದ್ಯಾರ್ಜನೆಯ ಈ ಹುಸಿ ಹಂಬಲ, ಕೆಳವರ್ಗದವರಿಗೆ ತಮ್ಮ ಸ್ಥಿತಿಯ ಅರಿವು ಮತ್ತು ತಮ್ಮ ಕೀಳ್ತನದ ವಿಕಾರಗಳನ್ನು ಹೇಗಾದರೂ ಶಮನಗೊಳಿಸಿ ಕೊಳ್ಳುವ ಆತುರ — ಹೀಗೆ ವೈಯಕ್ತಿಕ ಅಂತರಂಗಗಳನ್ನು ಬಿಗಿಯುತ್ತಲೇ ಆ ಕಾಲದ ಫ್ರೆಂಚ್ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತದೆ. ಆದ್ದರಿಂದಲೇ ಸ್ಟೆಂಡಲ್‌ನ ಬರಹ ಏಕಪಕ್ಷೀಯವಾಗುವುದಿಲ್ಲ.

ಒಂದು ನಿಟ್ಟಿನಲ್ಲಿ ಎರಡು ವರ್ಗಗಳ ಮುಖಾಮುಖಿ ಮತ್ತೊಂದು ನಿಟ್ಟಿನಲ್ಲಿ ಒಂದು ಸಂಕೀರ್ಣ ಪ್ರೇಮಪ್ರಕರಣವಾಗಿ ಬೆಳೆಯುತ್ತ 'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಒಂದು ನಾಟಕೀಯ ತಿರುವನ್ನು ಪಡೆದುಕೊಳ್ಳುವುದು ಜೂಲಿಯನ್ – ಮದಾಂ ದೆ ರೆನಾಲ್‌ರ ಪ್ರಕರಣ ಕ್ರಮೇಣ ಬೀದಿ ಸುದ್ದಿಯಾಗತೊಡಗಿದಾಗ. ಕೆಲಕಾಲ ಈ ಕುಟುಂಬದಿಂದ ದೂರವಿದ್ದು ಬೆಸಾಂಕನ್ ಎಂಬ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿನ ಸೆಮಿನರಿಯಲ್ಲಿ ಪ್ರವೇಶ ದೊರಕುತ್ತದೆ. ತನ್ನ ಹಿಂದಿನ ಊರಾದ ವೆರಿಯೆರ್ಸ್‌ನಲ್ಲಿ ಫಾದರ್ ಚೆಲಾನ್ ಮಾಡುತ್ತಿದ್ದ ಸಹಾಯ, ಅವನಿಗೆ ಜೂಲಿಯನ್ ಮೇಲಿದ್ದ ಅಭಿಮಾನ ಇಲ್ಲಿಯೂ ಕೆಲಸ ಮಾಡುತ್ತದೆ. ಜೂಲಿಯನ್‌ನ ನಿಷ್ಠುರ ಗಾಂಭೀರ್ಯ, ಜ್ಞಾಪಕಶಕ್ತಿಗಳು ಕ್ರಮೇಣ ಅವನನ್ನು ಹಂತಹಂತವಾಗಿ ಮೇಲಕ್ಕೆ ಒಯ್ಯುತ್ತದೆ. ಇವನಿಗೂ ಅಲ್ಲಿಯ ಫಾದರ್ ಪಿರಾರ್ಡ್‌ಗೂ ಒಂದು ರೀತಿಯ ಬಾಂಧವ್ಯ ಬೆಳೆಯುತ್ತದೆ. ಫಾದರ್ ಪಿರಾರ್ಡ್ ಜೂಲಿಯನ್‌ನನ್ನು ಮಾರ್ಕ್ವಿಸ್ ದೆ ಲಾ ಮೋಲ್‌ನ ಬಳಿಗೆ ಕರೆದೊಯ್ಯುತ್ತಾನೆ. ಜೂಲಿಯನ್ ಮಾರ್ಕ್ವಿಸ್‌ನ ಆಪ್ತ ಕಾರ್ಯದರ್ಶಿಯಾಗಿ ನಿಧಾನವಾಗಿ ಅವನ ಅಂತರಂಗದ ಗೆಳೆಯನಾಗುತ್ತಾನೆ. ಅಂದರೆ ಮಾರ್ಕ್ವಿಸ್ ತನ್ನ ಗುಟ್ಟುಗಳನ್ನು ಇವನ ಬಳಿ ಹೇಳಿಕೊಳ್ಳುವಷ್ಟು ಸಲಿಗೆ ಬೆಳೆಯುತ್ತದೆ. ಮೇಲ್ವರ್ಗದ ಮಾರ್ಕ್ವಿಸ್ ದಿನದಲ್ಲಿ ಕೆಲವು ನಿಮಿಷಗಳು ಮಾತ್ರ ಜೂಲಿಯನ್‌ನನ್ನು ಸಮಾನವಾಗಿ ಕಾಣುತ್ತಾನೆ. ಫ್ರೆಂಚ್ ಮೇಲ್ವರ್ಗದ ಹಲವು ಮುಖಗಳನ್ನೂ, ರಾಜಕೀಯದ ಒಳ ಸುಳಿಗಳನ್ನೂ ಮಾರ್ಕ್ವಿಸ್‌ನ ಡ್ರಾಯಿಂಗ್ ರೂಮಿನ ಪ್ರತಿದಿನದ ಪಾರ್ಟಿಗಳಲ್ಲಿ ಜೂಲಿಯನ್ ಕಂಡುಕೊಳ್ಳುತ್ತಾನೆ. ಮಾರ್ಕ್ವಿಸ್‌ನ ಮಗಳು ಮಥಿಲ್ಡಾ ಮತ್ತು ಜೂಲಿಯನ್ ಅತ್ಯಂತ ತೀವ್ರವಾದ ಪ್ರೇಮ-ದ್ವೇಷ-ತಿರಸ್ಕಾರಗಳ ಸಂಕೀರ್ಣ ಸಂಬಂಧಕ್ಕೆ ಸಿಲುಕಿಕೊಳ್ಳುತ್ತಾರೆ. ಪ್ರೇಮ ಹಲವು ಸಾರಿ ಒಡೆಯುತ್ತದೆ. ಆದರೂ ಆಕರ್ಷಣೆ ತಪ್ಪುವುದಿಲ್ಲ. ಮಥಿಲ್ಡಾಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಜೂಲಿಯನ್ ಹಲವು ತಂತ್ರಗಳನ್ನು ಬಳಸುತ್ತಾನೆ. ಮಥಿಲ್ಡಾ ಕೊನೆಗೆ ಇವನನ್ನು ಮನಃಪೂರ್ವಕ ಪ್ರೀತಿಸುವ ಸ್ಥಿತಿ ತಲುಪುತ್ತಾಳೆ. ಸಹಜವಾಗಿಯೇ ಮಾರ್ಕ್ವಿಸ್ ಇವರ ಮದುವೆಗೆ ಒಪ್ಪಲಾರ. ತನ್ನ ಮಗಳು ದೊಡ್ಡದೊಂದು ಪದವಿ ಪಡೆಯಬೇಕೆಂಬುದು ಇವನ ಇಷ್ಟ ಹಾಗೆಯೇ ಅವನು ಈ ಮದುವೆಯನ್ನು ತಪ್ಪಿಸಲೂ ಆರ. ತನ್ನ ಮಗಳಿಗೆ ಹಣಸಹಾಯ ಮಾಡಲು ಒಪ್ಪುತ್ತಾನೆ. ಮಥಿಲ್ಡಾ-ಜೂಲಿಯನ್‌ರ ಮುಂದಿನ ಬದುಕಿನ ಬಗ್ಗೆ ಹಲವು ಆಲೋಚನೆಗಳನ್ನೂ ಮಾಡಲಾಗುತ್ತದೆ.

ಜೂಲಿಯನ್‌ನ ಬದುಕಿನ ಏಳುಬೀಳುಗಳು ಒಂದು ತಾರ್ಕಿಕ ಅಂತ್ಯವನ್ನು ಮುಟ್ಟುವುದು ಮದಾಮ್ ದೆ ರೆನಾಲ್‌ಳ ಪತ್ರದಿಂದ. ಮಾರ್ಕ್ವಿಸ್ ಜೂಲಿಯನ್‌ಗೆ ಒಂದು ಹುದ್ದೆಯನ್ನು ದೊರಕಿಸಿಕೊಡುವ ಮುನ್ನ ಬಂದ ಈ ಪತ್ರ ಜೂಲಿಯನ್‌ನ ಬದುಕಿನ ಗತಿಯನ್ನೇ ಬದಲಿಸಿಬಿಡುತ್ತದೆ. ತನ್ನ ಹಿಂದಿನ ಕೃತ್ಯಗಳಿಂದ ಮನನೊಂದು

ತಪ್ಪೊಪ್ಪಿಗೆಯ ಧಾರ್ಮಿಕ ವಿಧಿಗಳಿಂದ ತನ್ನ ಮನಸ್ಸನ್ನು ವ್ರತದ ನಿಷ್ಠುರತೆಗೆ ಈಗಾಗಲೇ ಒಗ್ಗಿಸಿಕೊಂಡಿದ್ದ ಮದಾಮ್ ದೆ ರೆನಾಲ್ ಜೂಲಿಯನ್ ಬಗ್ಗೆ ತನ್ನ ತುಂಬ ಪ್ರಾಮಾಣಿಕವಾದ ಅಭಿಪ್ರಾಯ ಕೊಡುತ್ತಾಳೆ : ''ಸ್ವಾಮಿ ಧರ್ಮ ಮತ್ತು ನೈತಿಕತೆಗಳಿಗೆ ನನ್ನನ್ನು ಒಪ್ಪಿಸಿಕೊಂಡಿದ್ದು ನಿಮಗೆ ಈ ರೀತಿ ಬರೆಯುವಲ್ಲಿ ಮನಸ್ಸಿಗೆ ತುಂಬ ನೋವಾಗುತ್ತಿದೆ. ಇದರಿಂದ ನನ್ನ ನೆರೆಹೊರೆಯ ಒಬ್ಬ ಮನುಷ್ಯನಿಗೆ ತೊಂದರೆಯಾಗುವಂತಿದ್ದರೂ ಅದಕ್ಕಿಂತ ಹೆಚ್ಚಿನ ಪಾಪ ಸಂಭವಿಸಬಾರದೆಂಬ ಕಾರಣಕ್ಕಾಗಿ ನನಗೆ ಹೀಗೆ ಮಾಡುವುದು ಅನಿವಾರ್ಯವೆನಿಸಿದೆ. ಕರ್ತವ್ಯದ ಕರೆಗೆ ಓಗೊಟ್ಟು ನನ್ನ ದುಃಖವನ್ನು ಅದುಮಿಟ್ಟುಕೊಳ್ಳಬೇಕಾಗಿದೆ. ತಾವು ಯಾವ ವ್ಯಕ್ತಿಯ ಬಗ್ಗೆ ನನ್ನ ಅಭಿಪ್ರಾಯ ಕೇಳಿದ್ದೀರೋ ಆತನ ಬಗ್ಗೆ ಪೂರ್ಣ ಸತ್ಯವನ್ನು ಹೇಳದಿರಲು ನನಗೆ ಕಾರಣಗಳೇನೋ ಇದ್ದಾವೆ. ಅವನ ಬಗ್ಗೆ ಸತ್ಯವನ್ನು ನಾನು ಬಚ್ಚಿಡಬಹುದಿತ್ತು, ಇಲ್ಲವೆ ಮರೆಮಾಚಬಹುದಿತ್ತು. ಆದರೆ ಹಾಗೆ ಮಾಡಲು ನನ್ನ ಆತ್ಮ ಒಪ್ಪುತ್ತಿಲ್ಲ. ಆತನ ನಡೆನುಡಿಗಳು ನಾನು ಹೇಳಬಹುದಾದ್ದಕ್ಕಿಂತ ಹೆಚ್ಚು ಅಸಹ್ಯಕರ ಎಂದಷ್ಟೇ ಹೇಳಬಹುದು. ಪಾಪ, ಬಡಪ್ರಾಣಿ, ತನ್ನ ಡಾಂಭಿಕತೆಯಿಂದ, ದುರ್ಬಲ ಮನಸ್ಸಿನ ಅಸುಖಿ ಹೆಣ್ಣೊಬ್ಬಳನ್ನು ಕೆಡಿಸುವುದರಿಂದ, ತಾನು ಸಾಮಾಜಿಕ ಸ್ಥಾನಮಾನ ಗಳಿಸಲು ಪ್ರಯತ್ನಪಟ್ಟ. ಅವನಿಗೆ ಧರ್ಮ-ಕರ್ಮ ಏನೂ ಇಲ್ಲವೆಂದು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಯಾವುದೇ ಕುಟುಂಬದಲ್ಲಿ ತಾನು ಸಫಲನಾಗಲು ಅವನು ಅನುಸರಿಸುವ ಏಕೈಕ ಮಾರ್ಗವೆಂದರೆ ಆ ಕುಟುಂಬದ ಅತ್ಯಂತ ಪ್ರಭಾವಶಾಲಿ ಹೆಣ್ಣನ್ನು ಕೆಡಿಸುವುದು ಎಂದು ನನ್ನ ಅಂತರಾತ್ಮ ಹೇಳುತ್ತಿದೆ. ತೋರಿಕೆಯ ನಿರಾಸಕ್ತಿ ಮತ್ತು ನಿರ್ಲಿಪ್ತತೆಗಳಿಂದಲೂ, ಕಾದಂಬರಿಯ ನುಡಿಗಟ್ಟುಗಳಿಂದಲೂ ಆತ ಮನೆಯ ಯಜಮಾನನನ್ನು ವಂಚಿಸಿ ನಿಧನಿಧಾನವಾಗಿ ಅವನ ಕುಟುಂಬದ ಮೇಲೂ, ಆಸ್ತಿಯ ಮೇಲೂ ತನ್ನ ಪ್ರಭಾವ ಸಾಧಿಸುತ್ತ ಹೋಗುತ್ತಾನೆ. ತನ್ನ ಹಿಂದೆ ಅವನು ಬಿಟ್ಟು ಹೋಗುವುದು ಬರೇ ಪಶ್ಚಾತ್ತಾಪ, ನಿರಾಶೆ ಮತ್ತು ನಿಟ್ಟುಸಿರು.''

ಇಡೀ ಕಾದಂಬರಿಯಲ್ಲಿ ಜೂಲಿಯನ್‌ನನ್ನು ಹೆಚ್ಚು ಹತ್ತಿರದಿಂದ ಬಲ್ಲವಳೆಂದರೆ ಮದಾಂ ದೆ ರೆನಾಲ್. ಜೂಲಿಯನ್‌ನ ಪಾತ್ರವನ್ನು ಅರ್ಥ ಮಾಡಿಕೊಳ್ಳಲು ಈ ಪತ್ರ ತುಂಬ ಪ್ರಭಾವಶಾಲಿ ಸೂಚನೆಯಾಗಿದೆ. ಅಲ್ಲದೆ ಕಾದಂಬರಿಯ ಬಹಳಷ್ಟು ಘಟನೆಗಳು, ವಿವರಗಳು ಜೂಲಿಯನ್‌ನ ದೃಷ್ಟಿಕೋನದ ಮುಖಾಂತರ ನೋಡಲಾಗಿದೆ ಎಂದು ನಮಗನ್ನಿಸುವುದರಿಂದ ಆ ದೃಷ್ಟಿಕೋನವೇ ಪರಮವಾಗದಂತೆ ತಡೆಯುವಲ್ಲಿ ಮತ್ತು ಜೂಲಿಯನ್‌ನ ಚಿಂತನೆ, ಕ್ರಿಯೆಗಳನ್ನು ಬೇರೊಂದು ದೃಷ್ಟಿಕೋನದಿಂದಲೂ ನೋಡಲು ಸಾಧ್ಯ ಎಂಬ ಅಂಶವನ್ನು ಸ್ಟೆಂಡಲ್ ಹೊಳೆಯಿಸುತ್ತಿರುವಂತೆ ಕಂಡು ಬರುತ್ತದೆ. ಮಥಿಲ್ಡಾಳೂ ತನ್ನ ತಂದೆಗೆ ಬರೆದ ಕಾಗದದಲ್ಲಿ ''ಸಾಮಾಜಿಕ ಸ್ಥಾನಮಾನಗಳ

ವ್ಯತ್ಯಾಸಗಳ ಬಗ್ಗೆ ಅವನಿಗೆ ತುಂಬ ತೀವ್ರವಾದ ಸೂಕ್ಷ್ಮವಾದ ಅರಿವಿದೆ'' ಎಂದು ಹೇಳಿರುತ್ತಾಳೆ.

'ಸ್ಕಾರ್ಲೆಟ್ ಅಂಡ್ ಬ್ಲ್ಯಾಕ್' ಕಾದಂಬರಿಯಲ್ಲಿ ಒಟ್ಟಾರೆ ಮನುಷ್ಯಸಂಬಂಧಗಳು ಆ ಕಾಲದಲ್ಲಿ ಬದಲಾಗುತ್ತಿದ್ದ ವರ್ಗಾಸಕ್ತಿಗಳು ಮತ್ತು ವರ್ಗಸಂಬಂಧಗಳ ಸ್ವರೂಪವನ್ನೇ ಧ್ವನಿಸುವಂತಿದ್ದರೂ ಇವುಗಳನ್ನೂ ಮೀರಿದಂತೆ ಮನುಷ್ಯನ ತರ್ಕದ ತೆಕ್ಕೆಗೆ ಸಿಕ್ಕದೆ ಉಳಿದುಬಿಡುವ ಮನುಷ್ಯನ ಅದಮ್ಯವಾದ ಮೂಲಪ್ರವೃತ್ತಿಗಳ ಬಗ್ಗೆಯೂ ವಿಸ್ಮಯವನ್ನು ಕಾಯ್ದುಕೊಳ್ಳುತ್ತದೆ. ಕಾದಂಬರಿಯ ಅಂತ್ಯ ಮನುಷ್ಯನ ನಿಗೂಢ ಭಾವಸಂಕುಲಕ್ಕೇ ಹಿಡಿದ ಕನ್ನಡಿಯಂತಿದೆ. ಮದಾಮ್ ದೆ ರೆನಾಲ್-ಜೂಲಿಯನ್, ಮಥಿಲ್ಡಾ-ಜೂಲಿಯನ್ ಸಂಬಂಧಗಳ ಪ್ರೇಮ-ದ್ವೇಷಗಳ ಅದ್ಭುತ ಲೋಕ ತನ್ನ ವಿಸ್ಮಯತೆಯ ಗರಿಷ್ಠತೆಯನ್ನು ಮುಟ್ಟುವುದು ಜೂಲಿಯನ್ ಕ್ರೋಧತಪ್ತನಾಗಿ ಮದಾಂ ದೆ ರೆನಾಲ್‌ಳನ್ನು ಕೊಲ್ಲುವ ಪ್ರಯತ್ನ ಮಾಡಿದ ನಂತರ. ಪ್ರಾರ್ಥನೆ ಸಲ್ಲಿಸಲೆಂದು ಚರ್ಚಿಗೆ ಬಂದಿದ್ದ ಮದಾಮ್ ದೆ ರೆನಾಲ್‌ಳ ಮೇಲೆ ಜೂಲಿಯನ್ ಗುಂಡು ಹಾರಿಸಿದರೂ ಸಣ್ಣಪುಟ್ಟ ಗಾಯಗಳೊಂದಿಗೆ ಅವಳು ಉಳಿದುಕೊಳ್ಳುತ್ತಾಳೆ. ಜೂಲಿಯನ್‌ನ ಬಂಧನ, ವಿಚಾರಣೆ ಮತ್ತು ವಿಚಾರಣೆಯ ನಂತರ ಜೂಲಿಯನ್ ಮರಣದಂಡನೆಯನ್ನು ನಿರೀಕ್ಷಿಸುತ್ತ ಜೈಲಿನಲ್ಲಿ ಕಾಯುತ್ತಿದ್ದ ಸಂದರ್ಭಗಳಲ್ಲಿ ಮದಾಂ ದೆ ರೆನಾಲ್ ಮತ್ತು ಮಥಿಲ್ಡಾ ಜೂಲಿಯನ್ ಬಗ್ಗೆ ತಾಳುವ ಅನುಕಂಪ, ಕಳಕಳಿ, ಪ್ರೇಮ ಬೆರಗು ಹುಟ್ಟಿಸುವಂತಿದೆ. ಜೂಲಿಯನ್ ಮರಣವನ್ನಪ್ಪುವ ಹೊತ್ತಿಗೆ ಮದಾಂ ದೆ ರೆನಾಲ್ ಮತ್ತೊಮ್ಮೆ ಅವನ ಉತ್ಕಟ ಪ್ರೇಮಿಯಾಗಿರುತ್ತಾಳೆ. ಮಥಿಲ್ಡಾ ತನ್ನೆಲ್ಲಾ ಹೊಟ್ಟೆಕಿಚ್ಚನ್ನು ಅದುಮಿಟ್ಟುಕೊಂಡು ಜೂಲಿಯನ್ ಬಗ್ಗೆ ತನ್ನ ಪ್ರೇಮವನ್ನು ಕಾಯ್ದಿಟ್ಟುಕೊಳ್ಳುತ್ತಾಳೆ. ಇವೆಲ್ಲ ಜೂಲಿಯನ್‌ನ ಸಂಕೀರ್ಣ ವ್ಯಕ್ತಿತ್ವಕ್ಕೆ ಅರ್ಥಪೂರ್ಣ ಆಯಾಮವನ್ನು ಜೋಡಿಸುತ್ತವೆ. ಜೂಲಿಯನ್‌ನ ಎಲ್ಲ ಕೊಳಕುತನ, ಡಾಂಭಿಕತೆ, ಸಣ್ಣತನಗಳ ನಡುವೆಯೂ ಮದಾಂ ದೆ ರೆನಾಲ್‌ಳಂಥ ಮಧ್ಯಮವರ್ಗದ ವಿವಾಹಿತ ಮಹಿಳೆ ಮತ್ತು ಮೇಲ್ವರ್ಗದ ಮಾರ್ಕ್ವಿಸ್‌ನ ಪ್ರಭಾವಶಾಲಿ ಪುತ್ರಿ ಮಥಿಲ್ಡಾ ಅವನನ್ನು ಅಷ್ಟೊಂದು ಉತ್ಕಟವಾಗಿ ಪ್ರೀತಿಸುವುದು ಮುಖ್ಯವಾಗಿದೆ. ಸ್ಟೆಂಡಲ್‌ನ ಅನುಭವದ ಆಳಗಳು, ಕಲ್ಪನೆಯ ವಿಸ್ತಾರಗಳು, ಅತ್ಯಂತ ಭಾವಪೂರ್ಣವಾದ ಸನ್ನಿವೇಶಗಳನ್ನು ಭಾವುಕವಾಗದಂತೆ ನಿರೂಪಿಸುವ ಅಪ್ರತಿಮ ಕಲಾಕೌಶಲ, ಕೂದಲು ಸೀಳುವಷ್ಟು ಸೂಕ್ಷ್ಮವಾದ ಗ್ರಹಿಕೆಗಳು ಓದುಗನನ್ನು ಅನುಭವದ ಎತ್ತರಗಳಿಗೆ ಕರೆದೊಯ್ಯುತ್ತದೆ. ಕಾದಂಬರಿಯ ಅಂತ್ಯ ತುಂಬ ಧ್ವನಿಪೂರ್ಣವಾಗಿದೆ : ತನ್ನ ಸಾವಿನಿಂದ ಧೃತಿಗೆಡದೆ ಮಥಿಲ್ಡಾಗೆ ತನ್ನಿಂದ ಹುಟ್ಟುವ ಮಗುವನ್ನು ಬೆಳೆಸಲು ಬದುಕಿ ಉಳಿಯಬೇಕೆಂದು ಜೂಲಿಯನ್ ಮದಾಂ ದೆ ರೆನಾಲ್‌ಳಿಂದ ವಚನ ಪಡೆಯುತ್ತಾನೆ.

ಜೂಲಿಯನ್‌ನ ತಲೆಯನ್ನು ತನ್ನ ಕೈಗಳಿಂದಲೇ ಹೂಳುವುದಾಗಿ ಮಥಿಲ್ಡಾ ಹಠ ಹಿಡಿಯುತ್ತಾಳೆ. ಮದಾಂ ದೆ ರೆನಾಲ್ ತನ್ನ ಮಾತನ್ನು ಉಳಿಸಿಕೊಳ್ಳುತ್ತಾಳೆ ; ಆತ್ಮಹತ್ಯೆಯನ್ನೇನೂ ಮಾಡಿಕೊಳ್ಳುವುದಿಲ್ಲ . ಆದರೆ ಜೂಲಿಯನ್ ಸತ್ತ ಮೂರು ದಿನಗಳ ನಂತರ ತನ್ನ ಮಕ್ಕಳನ್ನು ಕೊನೆಯ ಬಾರಿಗೆ ಅಪ್ಪಿಕೊಂಡು ತಾನೂ ಸಾಯುತ್ತಾಳೆ.

ಕಾದಂಬರಿಯ ಅಂತ್ಯ ಸಾಕಷ್ಟು ವಾದ ವಿವಾದಗಳಿಗೆ ಎಡೆ ಕೊಟ್ಟಿದೆ. ಕೆಲವು ವಿಮರ್ಶಕರು ಇದನ್ನು ತುಂಬಾ ಹೊಗಳಿದ್ದರೆ ಮತ್ತೆ ಕೆಲವರು ಭೀಭತ್ಸವೆಂದು ಜಿಗುಪ್ಸೆ ಪಟ್ಟುಕೊಂಡಿದ್ದಾರೆ. ಮತ್ತೂ ಕೆಲವರು ಸ್ಟೆಂಡಲ್ ಹಾದರವನ್ನು ಎತ್ತಿ ಹಿಡಿದಿದ್ದಾನೆಂದು ಮೂಗು ಮುರಿದಿದ್ದಾರೆ. ಏನೇ ಆದರೂ ಸ್ಟೆಂಡಲ್ ವರ್ಗಸಂಬಂಧಗಳನ್ನೂ ಪ್ರೇಮ ಸಂಬಂಧಗಳನ್ನೂ ಅವುಗಳ ಅತ್ಯಂತ ಸಂಕೀರ್ಣ ಸ್ತರಗಳಲ್ಲಿ ಹಿಡಿದಿಟ್ಟಿರುವುದು ಮಾತ್ರ ಸತ್ಯ. ಈ ಸಂಬಂಧಗಳ ಬೌದ್ಧಿಕ ಮತ್ತು ಭಾವನಾತ್ಮಕ ಸತ್ಯಗಳನ್ನು ಒಟ್ಟೊಟ್ಟಿಗೆ ದುಡಿಸಿ ಕೊಳ್ಳುವ ಸ್ಟೆಂಡಲ್ ತೀರ ವೈಯಕ್ತಿಕವಾಗಿ ಬರೆದೂ ಸಾಮಾಜಿಕವಾಗಿ ಮಹತ್ವಪೂರ್ಣ ನಾಗುತ್ತಾನೆ. ಐದುನೂರು ಪುಟಗಳ ಈ ಬೃಹತ್ ಕಾದಂಬರಿಯಲ್ಲಿ ಬರುವ ಪಾತ್ರಗಳು ಅಸಂಖ್ಯ. ಅವುಗಳನ್ನು ಮಾದರಿಗಳನ್ನಾಗಿ ಮಾಡದೆ ಸ್ವತಂತ್ರ ಅಸ್ತಿತ್ವವುಳ್ಳ ಮನುಷ್ಯರನ್ನಾಗೇ ನೋಡಿರಲು ಸ್ಟೆಂಡಲ್ ಫ್ರೆಂಚ್ ಕಾದಂಬರಿಗೆ ಮೊಟ್ಟಮೊದಲ ಬಾರಿಗೆ ಆಳ-ವಿಸ್ತಾರ ಎರಡನ್ನೂ ಒಟ್ಟಿಗೆ ತಂದುಕೊಟ್ಟಿದ್ದಾನೆ. ಆಗಿನ ಕಾಲದ ರಾಜಕೀಯ ಇತಿಹಾಸವನ್ನು ಅಭ್ಯಸಿಸ ಬಯಸುವವರಿಗೆ ಇದಕ್ಕಿಂತ ಸೂಕ್ಷ್ಮವಾದ ಆಕರ ಸಿಕ್ಕಲಾರದು. ಇಲ್ಲಿ ಕ್ರಾಂತಿಯ ಪರವಾದವರು, ವಿರೋಧವಾದವರು, ನೆಪೋಲಿಯನ್‌ನ ಸಮರ್ಥಕರು, ವಿರೋಧಿ ಗಳು, ರಾಯಲಿಸ್ಟರು, ಲಿಬರಲ್ ಮನೋಧರ್ಮದವರು, ಚರ್ಚೆ ಶ್ರೇಷ್ಠವೆನ್ನುವವರು, ಬಗೆಬಗೆಯ ಪಾದ್ರಿಗಳು, ವಿವಿಧ ವರ್ಗದ, ವಿವಿಧ ಮನೋಧರ್ಮ-ಮಹತ್ವಾಕಾಂಕ್ಷೆಗಳ ಹಲವಾರು ಪಾತ್ರಗಳು ಬರುತ್ತವೆ. ನವ್ಯತೆ, ಸಾಂಪ್ರದಾಯಿಕತೆ, ಯಥಾಸ್ಥಿತಿವಾದ ಪುಟಪುಟಗಳಲ್ಲಿ ಡಿಕ್ಕಿ ಹೊಡೆಯುತ್ತ ಓದುಗರ ಬೌದ್ಧಿಕತೆಗೂ ಸವಾಲಾಗುತ್ತವೆ. ಹಲವು ಸೆಳೆತಗಳಿಗೆ ಸಿಕ್ಕು ಹಲವು ಬಗೆಯ ದ್ವಂದ್ವಗಳಿಗೆ ಮುಖಾಮುಖಿಯಾಗುವ ಜೂಲಿಯನ್‌ನನ್ನು ಹಲವು ವಿಮರ್ಶಕರು ಯೂರೋಪಿಯನ್ ಕಾದಂಬರಿಯ ಮೊದಲ ನವ್ಯನಾಯಕನೆಂದೂ ಮತ್ತೆ ಕೆಲವು ವಿಮರ್ಶಕರು ಮೊಟ್ಟಮೊದಲ anti-hero ಎಂದೂ ಅಭಿಪ್ರಾಯಪಟ್ಟಿದ್ದಾರೆ. ಕಾದಂಬರಿಯ ಹೆಸರೇ ನಾಯಕನ ದ್ವಂದ್ವ ಮನಸ್ಥಿತಿಗೆ ಸಂಕೇತವೆಂಬಂತಿದೆ. ಸ್ಕಾರ್ಲೆಟ್ ಬಣ್ಣ ತೊಟ್ಟು ನೆಪೋಲಿಯನ್ನನ ಅನುಯಾಯಿಯಾಗ ಬಯಸಿದ್ದ ಜೂಲಿಯನ್ ಅನಿವಾರ್ಯವೆಂಬಂತೆ ಕಪ್ಪು ತೊಟ್ಟು ಚರ್ಚು ಸೇರುವ ವ್ಯಂಗ್ಯ, ಇವೆರಡರ ಮೋಹಗಳಿಂದಲೂ ತಪ್ಪಿಸಿಕೊಳ್ಳಲಾಗದೆ, ಏಕಮುಖವಾಗಿ ಒಪ್ಪಿಸಿಕೊಳ್ಳಲಿ ಕ್ಕಾಗದೆ, ಆದರೆ ಎಲ್ಲವನ್ನೂ ಮೀರುವ ಹಂಬಲದಲ್ಲಿ ಜೂಲಿಯನ್ ತನಗೆ ತಾನು ಪರಕೀಯನಾಗಿಯೇ ಉಳಿದರೂ ಮತ್ತೊಬ್ಬರ ಆಕರ್ಷಣೆಯ ಕೇಂದ್ರವೂ ಆಗಿರುತ್ತಾನೆ.

ಹೀಗಾಗಿ ಯಾವುದೇ ಚೌಕಟ್ಟಿನಲ್ಲಿ ಜೂಲಿಯನ್‌ನನ್ನು ಬಂಧಿಸಿಡುವುದು ಕಷ್ಟವಾಗುತ್ತದೆ. ಇಲ್ಲಿ ಮನುಷ್ಯನ ಅಸ್ತಿತ್ವದ, ಆಯ್ಕೆಯ, ಸ್ವಾತಂತ್ರ್ಯದ ಪ್ರಶ್ನೆಗಳೆಲ್ಲ ಒಟ್ಟಿಗೇ ಎದುರಾಗುತ್ತವೆ. ಒಂದು ದೃಷ್ಟಿಯಿಂದ ಆ ಕಾಲದಲ್ಲಿ ಇಡೀ ಫ್ರಾನ್ಸ್ ಎದುರಿಸುತ್ತಿದ್ದ confusion, ತಳಮಳ, ಉದ್ವೇಗ ಜೂಲಿಯನ್ ಪಾತ್ರದಲ್ಲಿ ಮಡುಗಟ್ಟಿ ನಿಂತ ಹಾಗೆ ಕಾಣುತ್ತದೆ. ಕೆಂಪು-ಕಪ್ಪುಗಳ ನಡುವೆ ಸಿಕ್ಕ ಜೂಲಿಯನ್ ಪೂರ್ಣಸ್ವಾತಂತ್ರ್ಯಕ್ಕಾಗಿ-declass ಆಗುವುದಕ್ಕಾಗಿ – ನಡೆಸಿದ ಗೊಂದಲಮಯ, ಅಸ್ಪಷ್ಟ, ಉದ್ವೇಗಭರಿತ ಹೋರಾಟಗಳು ತಮ್ಮ ಅಂತಃಸ್ಸತ್ವದಲ್ಲಿ ಆ ಕಾಲದ ರಾಜಕೀಯ–ಧಾರ್ಮಿಕ ಮತ್ತು ಇವನ್ನೂ ಮೀರಿದ ಮಾನವೀಯ ಹೋರಾಟಗಳ ತಾತ್ವಿಕ ಸಂಕಷ್ಟಗಳನ್ನೂ ದ್ವಂದ್ವಗಳನ್ನೂ ಸಾಂಕೇತಿಸುತ್ತವೆ. ಸ್ಟೆಂಡಲ್‌ನಂತೆ ಜೂಲಿಯನ್ ಕೂಡ ತನ್ನ ಕಾಲದಿಂದ ಮುಂದೆ ಇರುವಂತೆ ಕಂಡುಬರುತ್ತಾನೆ. ಬಹಳಷ್ಟು ವಿಮರ್ಶಕರು ಸ್ಟೆಂಡಲ್ಲೇ ಜೂಲಿಯನ್ ಇರಬಹುದೆಂಬ ಅನುಮಾನವನ್ನೂ ವ್ಯಕ್ತಪಡಿಸಿದ್ದಾರೆ.

ಬಾಲ್ಜಾಕ್ : 'ಪೇರ್ ಗೋರಿಯೊ'

ಎಚ್.ಕೆ. ರಾಮಚಂದ್ರಮೂರ್ತಿ

ಹತ್ತೊಂಬತ್ತನೆ ಶತಮಾನದ ಪ್ರಸಿದ್ಧ ಫ್ರೆಂಚ್ ಕಾದಂಬರಿಕಾರ ಓನೊರೆಡ ಬಾಲ್ಜಾಕ್‌ನ (1799-1850) 'ಪೇರ್ ಗೋರಿಯೊ' (Pere Goriot) ಲೋಕವಿಖ್ಯಾತ ಕಾದಂಬರಿ. ಖಾಸಗಿ ಜೀವನದಲ್ಲಿ ಒದಗಿದ ಆರ್ಥಿಕ ಒತ್ತಡದಿಂದಾಗಿ ಹಣ ಗಳಿಸುವ ಸಲುವಾಗಿಯೇ ಬಾಲ್ಜಾಕ್ ಸಾಹಿತ್ಯರಚನೆಗೆ ಕೈಹಾಕಿದ. 1829ರಲ್ಲಿ Comedie Humaine ಎಂಬ ಶೀರ್ಷಿಕೆಯ ಅಡಿಯಲ್ಲಿ ಅವನು ಬರೆಯಲುಪಕ್ರಮಿಸಿದ ಕೃತಿಗಳಲ್ಲಿ ಹಲವು ಕಥೆ-ಕಾದಂಬರಿಗಳು ಸೇರಿವೆ. ಈ ಕಥಾಚಕ್ರವನ್ನು ಅವನು ಮೂರು ಘಟ್ಟಗಳಾಗಿ ವಿಭಜಿಸಿ ರಚಿಸುವ ಯೋಜನೆ ಹಾಕಿಕೊಂಡ. ಮೊದಲನೆಯ ಗುಂಪಿನ ಕಥೆಗಳು Studies in Manners- ಅಂದಿನ ಫ್ರೆಂಚ್ ಸಮಾಜದ ಗತಿಸ್ಥಿತಿಗಳ ಚಿತ್ರಣಗಳು. ಎರಡನೆಯ ಗುಂಪಿನವು Philosophical Studies – ಸಮಾಜದ ಒಂದು ವಿಶಿಷ್ಟ ಸ್ಥಿತಿಗೆ ಕಾರಣವಾದ ವಿಚಾರಗಳ ಚರ್ಚೆಗಳಾಗಿದ್ದು , ಮೂರನೆಯವು Analytical Studies – ಈ ಎಲ್ಲ ತಾತ್ವಿಕ ಚಿಂತನೆಗಳ ವಿಶ್ಲೇಷಣೆ ನೀಡಲು ಉದ್ದೇಶಿಸಿದುವು. ಮೊದಲನೆಯ ಭಾಗದಲ್ಲಿ 24 ಸಂಪುಟಗಳನ್ನು, ಎರಡನೆಯ ಭಾಗದಲ್ಲಿ 15 ಸಂಪುಟಗಳನ್ನು, ಮೂರನೆಯದಾಗಿ 9 ಸಂಪುಟಗಳನ್ನು ರಚಿಸಬೇಕೆನ್ನುವುದು ಬಾಲ್ಜಾಕ್‌ನ ಆಶಯವಾಗಿದ್ದರೂ ಅವನ ಈ ಬೃಹದ್ ಯೋಜನೆ ಕೈಗೂಡುವ ಮೊದಲೇ – ಅಂದರೆ ಅವನಿಗಿನ್ನೂ 50 ವರ್ಷವಾಗಿದ್ದಾಗಲೇ – ಬಾಲ್ಜಾಕ್ ತೀರಿಕೊಂಡ. ಆ ಹೊತ್ತಿಗೆ ಅವನು ಬರೆದು ಮುಗಿಸಿದ್ದ Comedie Humaine ಎನ್ನಲಾದ 80 ಕಥೆ - ಕಾದಂಬರಿಗಳು ಫ್ರೆಂಚ್ ಸಮಾಜದ ವಿಸ್ತೃತ ಇತಿಹಾಸವನ್ನೇ ನಮ್ಮ ಮುಂದೆ ಇಟ್ಟಿವೆ. ಈ ಕಥೆಗಳಲ್ಲಿ ಪ್ರಸ್ತಾಪವಾಗದ ವಿಚಾರಪರಂಪರೆಯಾಗಲಿ, ಚಿತ್ರಿತವಾಗದ ಸಾಮಾಜಿಕ ವರ್ಗವಾಗಲಿ ವಿರಳ.

ಮೊದಲ ಹಂತದಲ್ಲಿ ಅವನು ಬರೆದ Eugenie Grandet (1833) ಮತ್ತು Pere Goriot (1835) ಕಾದಂಬರಿಗಳನ್ನು ಅವನ ಪ್ರಾತಿನಿಧಿಕ ಕೃತಿಗಳೆನ್ನಬಹುದು. ವಿಮರ್ಶಕರಂತೂ 'ಪೇರ್ ಗೋರಿಯೊ' ಕಾದಂಬರಿಯನ್ನು ಮೇರುಕೃತಿ ಎಂದೇ ಕರೆದು ಕಿರೀಟ ವಿಟ್ಟಿದ್ದಾರೆ. ಇದರಲ್ಲಿ ಬಾಲ್ಜಾಕ್ ತನ್ನ ಕಾಲದ ಇಡೀ ಜನಾಂಗದ ಸಂಸ್ಕೃತಿಯ ಅವನತಿಯ ವಾಸ್ತವಿಕ ಚಿತ್ರವನ್ನು ಕೊಟ್ಟಿದ್ದಾನೆ — ಆ ಮೂಲಕ ಸಾಹಿತ್ಯ ಕಲೆಗಳ ಕ್ಷೇತ್ರದಲ್ಲಿ ಪ್ರಾರಂಭವಾದ ವಾಸ್ತವಿಕತೆಯ ಚಳುವಳಿಯ ಆದ್ಯಪ್ರವರ್ತಕನಾಗಿದ್ದಾನೆ. ಫ್ರೆಂಚ್ ಮಹಾಕ್ರಾಂತಿಯ ತರುವಾಯ ಅಸ್ತಿತ್ವಕ್ಕೆ ಬಂದ ಬಂಡವಾಳಶಾಹಿ ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಯ ನಡುವಣ ಆರ್ಥಿಕ ಸಂಬಂಧಗಳು ಹೇಗೆ ಜಟಿಲಗೊಂಡು ಮಾನವತ್ವದ

ಅಪಮೌಲ್ಯಕ್ಕೂ ನೈತಿಕ ಪತನಕ್ಕೂ ಕಾರಣವಾದುವು ಎಂಬುದನ್ನು ಬಾಲ್ಜಾಕ್ ಮತ್ತೆಮತ್ತೆ ಎತ್ತಿ ತೋರಿಸುವ ಕಾರಣದಿಂದಾಗಿ, ಅವನ ತಾತ್ವಿಕ ಚಿಂತನೆಗಳು ಕಾರ್ಲ್ ಮಾರ್ಕ್ಸ್ - ಏಂಗಲ್ಸ್ ಮುಂತಾದವರಿಗೂ ಮೂಲಪ್ರೇರಣೆ ಒದಗಿಸುವಂತಾದುವು ಎನ್ನುತ್ತಾರೆ. ಆರ್ಥಿಕ ಉತ್ಕರ್ಷದಿಂದಾಗಿ ಪ್ರಗತಿಯತ್ತ ಸಾಗುತ್ತಿರುವ ಬಂಡವಾಳ ಯುಗದಲ್ಲಿ ಮಾನವನು ಹೊಸ ಹೊಸ ಚೈತನ್ಯವನ್ನು, ಶಕ್ತಿಸಾಮರ್ಥ್ಯಗಳನ್ನು ಸಾಧಿಸಿ ನಾನಾರೀತಿಯ ಸಂಪನ್ಮೂಲಗಳನ್ನು ಕಂಡುಹಿಡಿಯುತ್ತಾನೆ. ಇದರ ಫಲವಾಗಿ ಅವನ ಐಹಿಕ ಹಾಗೂ ಪಾರಮಾರ್ಥಿಕ ಜೀವನದ ಸುಖಸಂತೋಷಗಳು ಹೆಚ್ಚುವ ಸಾಧ್ಯತೆ ಉಂಟಾಗುತ್ತದೆ ; ಆದರೆ ಈ ಆರ್ಥಿಕ ಉತ್ಕರ್ಷದ ಜೊತೆಯಲ್ಲೇ ಮನುಷ್ಯನ ಮೂಲಭೂತವಾದ ಸಂಬಂಧಗಳು ಕಳಚಿ ಬೀಳುತ್ತವೆ ; ವ್ಯಕ್ತಿ ವ್ಯಕ್ತಿಯನ್ನು ಕೇವಲ ಸ್ವಾರ್ಥ ಹಿತಕ್ಕಾಗಿ ದೋಚುವಂತಾಗುತ್ತದೆ — ಇದು ಬಾಲ್ಜಾಕನ ಕಾದಂಬರಿಯಲ್ಲಿ ರೂಪುಗೊಂಡಿರುವ ವಿಚಾರಗಳ ನೆಲಗಟ್ಟು.

ಆದ್ದರಿಂದ ಸಹಜವಾಗಿಯೇ 'ಪೇರ್ ಗೋರಿಯೊ' ಕಥಾವಸ್ತುವಿನಲ್ಲಿ ದಟ್ಟವಾದ ಗಂಭೀರ ವಿಚಾರಗಳು ಹೆಣೆದುಕೊಂಡಿವೆ. ಕಥೆಯ ಚೌಕಟ್ಟು ಅಚ್ಚುಕಟ್ಟಾಗಿದೆ. ಫ್ರಾನ್ಸಿನ ಒಳನಾಡಿನಿಂದ ನ್ಯಾಯಶಾಸ್ತ್ರ ಶಿಕ್ಷಣಕ್ಕೆಂದು ಪ್ಯಾರಿಸ್‌ಗೆ ಬಂದ ಅಮಾಯಕ ತರುಣ ಯುಜಿನ್ ರಾಸ್ತಿನ್ಯಾಕ್ ಪ್ಯಾರಿಸ್‌ನ ಆತಿಶಿಷ್ಟ ಜೀವನದ ಬೇಗುದಿಯಲ್ಲಿ ಬೆಂದು ಮಹತ್ವವಾದ ಅನುಭವ ಪಡೆಯುವುದು ಮತ್ತು ವ್ಯಾಪಾರದಿಂದ ಶ್ರೀಮಂತನಾಗಿದ್ದ ಗೋರಿಯೊ ತನ್ನ ಇಬ್ಬರು ಹೆಣ್ಣುಮಕ್ಕಳ ಮೇಲಿನ ಹುಚ್ಚು ವ್ಯಾಮೋಹದಿಂದ ಸರ್ವಸ್ವವನ್ನೂ ಕಳೆದುಕೊಂಡು ನಿರ್ಗತಿಕನಾಗಿ ಸಾಯುವುದು — ಈ ಎರಡು ಕಥೆಗಳನ್ನು ಹೆಣೆವ ಗಟ್ಟಿಭದ್ರವಾದ ವಸ್ತುವನ್ನು ನಾವು ಇಲ್ಲಿ ಕಾಣಬಹುದು. ಬದುಕಿನ ನಾನಾ ಮುಖಗಳನ್ನು ಪ್ರತೀಕಿಸುವಂಥ ಹಲವೆಂಟು ವ್ಯಕ್ತಿಗಳಿಂದ ತುಂಬಿ ತುಳುಕುವ ಈ ಕಾದಂಬರಿಯಲ್ಲಿ ಪ್ರಮುಖವಾದ ಕೆಲವೇ ಪಾತ್ರಗಳು ಸರ್ವಾಂಗ ಸುಂದರವಾಗಿ ರೂಪ ತಾಳಿವೆ. ಕಥೆಗೆ ವಾಸ್ತವಿಕತೆಯನ್ನು ತಂದುಕೊಡಲು ಪ್ರತಿಪಾತ್ರವನ್ನೂ ಮನೆ, ಬೀದಿ, ಅಷ್ಟೇಕೆ ಶ್ರೀಮಂತ ಗೃಹಗಳೊಳಗಿನ ಪೀಠೋಪಕರಣ — ಎಲ್ಲವನ್ನೂ ಕಾದಂಬರಿಕಾರ ಚಿತ್ತಾರದಂತೆ ಬಿಡಿಸಿ ತೋರಿಸುತ್ತಾನೆ. ಕಥೆಗೆ ಕೇಂದ್ರವಾದ ಮದಾಂ ವಾಕೇರ್‌ಳ ವಸತಿಗೃಹವಾದ 'ಮೈಸೋ ವಾಕೇರ್', ಅದರಲ್ಲಿ ದಟ್ಟದರಿದ್ರರಂತೆ ಬಾಳುತ್ತಿರುವ ಏಳುಜನ ನಿವಾಸಿಗಳು, ಅವನತಿಯ ಹಾದಿ ಹಿಡಿದ ಶ್ರೀಮಂತವರ್ಗದವರ ಆಡಂಬರದ 'ಸೆಲೂನ್'ಗಳು, 'ದಿಢೀರ್' ಶ್ರೀಮಂತರು, ಕೇವಲ ಹಣದಾಸೆಯಿಂದ ಮಾಡಿಕೊಂಡ ಸೌಕರ್ಯದ ಮದುವೆಗಳು, ಕಾಮುಕರು, ಲಫಂಗರು, ಇನ್ನೊಬ್ಬರ ಹಣ ದೋಚುವ ಕೈವಾಡಗಳು, ಗಿರವಿ ಅಂಗಡಿಗಳು, ಪಕ್ಕಾ ಕೇಡಿಗಳು, ಸಟ್ಟಾ ವ್ಯಾಪಾರಿಗಳು, ಜೂಜಿನ ಕಟ್ಟೆಗಳು, ವೈದ್ಯಕೀಯ ವಿದ್ಯಾರ್ಥಿಗಳು — ಇಂಥ ನೂರಾರು ಸ್ವಾರಸ್ಯಕರ ಅಂಶಗಳಿಂದ ಕಿಕ್ಕಿರಿದ ಈ ಕಾದಂಬರಿಯಲ್ಲಿ ಒಂದು ಹೊಸ ಲೋಕವೇ ಬಾಯ್ದೆರೆದು ನಿಂತಿದೆ.

ಕಥೆಯ ಪ್ರಾರಂಭದಲ್ಲೇ ಮದಾಂ ವಾಕೇರ್‌ಳ ವಸತಿಗೃಹದ ವರ್ಣನೆ ಬರುತ್ತದೆ. ಇಲ್ಲಿನ ನಿವಾಸಿಗಳು ತಮ್ಮ ತಮ್ಮ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ವಸತಿಗೃಹದ ಒಂದು, ಎರಡು ಮತ್ತು ಮೂರನೆಯ ಮಹಡಿಗಳಲ್ಲಿ ವಾಸಿಸುತ್ತಿದ್ದರು. ಮದಾಂ ಕೊತ್ಯೂರ್ (Mme. Couture) ಮತ್ತು ವಿಕ್ತೋರಿನ್ ತೈಫೇರ್ ಇವರಿಬ್ಬರ ವಾಸ ಮೊದಲನೆಯ ಅಂತಸ್ತಿನಲ್ಲಿ. ಅವರು ಸುಮಾರಾಗಿ ಸ್ಥಿತಿವಂತರಂತೆ ಕಾಣುತ್ತಿದ್ದು ವರ್ಷಕ್ಕೆ 1800 ಫ್ರಾಂಕ್ ಬಾಡಿಗೆ ತೆರುತ್ತಿದ್ದರು. ಮುದುಕ ಪ್ವಾರೇ (Poiret) ಮತ್ತು ನಲ್ವತ್ತು ವರ್ಷ ಪ್ರಾಯದ ಮದಾಂ ವಾತ್ರೀನ್ ಎರಡನೆಯ ಮಹಡಿಯಲ್ಲಿದ್ದರು. ಮೂರನೆಯ ಮಹಡಿಯಲ್ಲಿ ಅತ್ಯಂತ ಕಡಿಮೆ ಬಾಡಿಗೆ ಕೊಡುತ್ತಿದ್ದ ಮ್ಯಾದ್‌ಮೊಸೆಲ್ ಮಿಷೆನೋ (Michonneau) ಮತ್ತು ವೃದ್ಧ ಗೋರಿಯೊ ಇದ್ದರು. ಇವರ ಜೊತೆಯಲ್ಲಿ ಯೂಜಿನ್ ರಾಸ್ತಿನ್ಯಾಕ್ (Rastignac) ಎಂಬ ನ್ಯಾಯಶಾಸ್ತ್ರದ ವಿದ್ಯಾರ್ಥಿಯೂ ವಾಸವಾಗಿದ್ದ.

ವೃದ್ಧ ಗೋರಿಯೊ ಬಗ್ಗೆ (ಮೈಸೋ ವಾಕೇರ್) ವಸತಿಗೃಹದಲ್ಲಿ ನಾನಾ ಊಹಾಪೋಹಗಳೆದ್ದಿದ್ದವು. ಅವನು ಅಲ್ಲಿ ವಾಸಿಸಲು ಬಂದ ತರುಣರಲ್ಲಿ ಹೆಚ್ಚು ಹಣ ತೆತ್ತು ಮೊದಲ ಅಂತಸ್ತಿನ ಅತ್ಯಂತ ಪರಿಷ್ಕಾರವಾದ ಕೋಣೆಯನ್ನು ಬಾಡಿಗೆಗೆ ಹಿಡಿದ. ವಸತಿಗೃಹದ ಮಾಲೀಕಳಾದ ಮದಾಂ ವಾಕೇರ್ ತಾನು ಈ ಶ್ರೀಮಂತ ವೃದ್ಧನನ್ನೇಕೆ ಮದುವೆಯಾಗಬಾರದೆಂದು ಮನಸ್ಸಿನಲ್ಲೆ ಮಂಡಿಗೆ ತಿನ್ನುತ್ತಿದ್ದಳು. ಅವನು ಆಗತಾನೆ ಪ್ಯಾರಿಸ್ ಮಾರುಕಟ್ಟೆಯಲ್ಲಿ ಸೇವಿಗೆ ವ್ಯಾಪಾರದಲ್ಲಿ ವಿಪುಲವಾಗಿ ಹಣ ಗಳಿಸಿ ಉದ್ಯಮದಿಂದ ನಿವೃತ್ತನಾಗಿ ವಿಶ್ರಾಂತಿ ಜೀವನ ನಡೆಸುತ್ತಿದ್ದ . ಕ್ರಮೇಣ ಅವನ ಸ್ಥಿತಿಗತಿಗಳಲ್ಲಿ ಮಾರ್ಪಾಡಾಗುತ್ತ ಬಂದ ಹಾಗೆ ಅವನು ಇತ್ತೀಚೆಗೆ ತೀರಾ ಕಡಿಮೆ ಬಾಡಿಗೆಯ ಮೂರನೆಯ ಮಹಡಿಯ ಕೊಳಕಲು ಕೋಣೆಗೆ ಬದಲಾಯಿಸಿದ್ದ. ಅವನ ರಹಸ್ಯ ಚಲನವಲನಗಳು, ಆಗಾಗ ಅವನ ಕೋಣೆಗೆ ಬಂದು ಹೋಗುತ್ತಿದ್ದ (ಅವನು 'ಇಟ್ಟು' ಕೊಂಡಿದ್ದನೆಂದು ಹೇಳಲಾದ) ಇಬ್ಬರು ನೀಟುಗಾತಿ ಹೆಣ್ಣುಗಳು — ಇವುಗಳ ಕುರಿತು ಅವನ ಸಹನಿವಾಸಿಗಳು ಮನಸ್ವಿ ಮಾತನಾಡಿಕೊಳ್ಳುತ್ತಿದ್ದರು. ಆ ಇಬ್ಬರು ಹುಡುಗಿಯರು ತನ್ನ ಮಕ್ಕಳೆಂದು ಗೋರಿಯೊ ಆಣೆಯಿಟ್ಟು ಹೇಳಿದರೂ ಯಾರೂ ನಂಬುತ್ತಿರಲಿಲ್ಲ. ಅಷ್ಟೇ ಅಲ್ಲ, ಅವನು ಪ್ರತಿಯೊಬ್ಬರ ಅಪಹಾಸ್ಯಕ್ಕೂ ಗುರಿಯಾಗಿದ್ದ.

ಒಂದು ಸಂಜೆ ಮೈಸೋ ವಾಕೇರ್ ನಿವಾಸಿಗಳಲ್ಲೊಬ್ಬನಾದ ಬಡಹುಡುಗ, ಕಾನೂನು ವಿದ್ಯಾರ್ಥಿ ಯೂಜಿನ್ ರಾಸ್ತಿನ್ಯಾಕ್ ತನ್ನ ಶ್ರೀಮಂತ ಬಂಧು ಮದಾಂ ಡಿ ಬೋಸಿಯಾನ್‌ಳು (Beauseant) ಅವಳ ಮನೆಯಲ್ಲಿ ಏರ್ಪಡಿಸಿದ್ದ ನೃತ್ಯಕೂಟದಿಂದ ಹಿಂತಿರುಗಿದಾಗ ಒಂದು ವಿಚಿತ್ರವನ್ನು ಕಂಡ. ವೃದ್ಧ ಗೋರಿಯೊ ತನ್ನ ಕೋಣೆಯಲ್ಲಿ ಕುಳಿತು ಅತ್ಯಮೂಲ್ಯ ಬೆಳ್ಳಿ ತಟ್ಟೆಬಟ್ಟಲುಗಳನ್ನು ಜಜ್ಜಿ ಬೆಳ್ಳಿಗಟ್ಟಿಗಳನ್ನಾಗಿ ಮಾಡುತ್ತಿದ್ದುದನ್ನು ಬಾಗಿಲಿನ ಕೀಲಿಕೈ ಕಂಡಿಯೊಳಗಿನಿಂದ ನೋಡಿದ. ಮಾರನೆಯ ದಿನ ಅವನ

ಸಹನಿವಾಸಿ ಮಿ. ವಾತ್ರೀನ್ ಹೇಳಿದ, ವೃದ್ಧ ಗೋರಿಯೊ ಆ ಬೆಳ್ಳಿಗಟ್ಟಿಗಳನ್ನು ಗಿರವಿ ಅಂಗಡಿಯಲ್ಲಿ ಮಾರುತ್ತಿದ್ದುದನ್ನು ತಾನು ನೋಡಿದೆ ಎಂದು. ಆದರೆ ಗೋರಿಯೊ ಬೆಳ್ಳಿ ಗಟ್ಟಿಗಳನ್ನು ಮಾರಿದ್ದು ಅವನ ಪ್ರೇಮದ ಪುತ್ರಿ – ಹಿಂದಿನ ದಿನ ನೃತ್ಯಕೂಟದಲ್ಲಿ ರಾಸ್ತಿನ್ಯಾಕ್ ನೋಡಿದ್ದ– ಕೌಂಟೆಸ್ ಅನಾಸ್ತಸೀ ಡಿ ರೆಸ್ಟೋ (Countess Anastasie de Restaud)ಗೋಸ್ಕರ ಎಂಬುದು ಯಾರಿಗೂ ಗೊತ್ತಿರಲಿಲ್ಲ.

ಅವತ್ತು ಮಧ್ಯಾಹ್ನ ರಾಸ್ತಿನ್ಯಾಕ್ ಆ ಹೊತ್ತಿಗೆ ತನಗೆ ಪರಿಚಯವಾಗಿದ್ದ ಕೌಂಟೆಸ್ ಅನಾಸ್ತಸಿಯ ಮನೆಗೆ ಭೇಟಿ ಇತ್ತಾಗ ಅವನಿಗೆ ಅಭೂತಪೂರ್ವ ಗೌರವದ ಸ್ವಾಗತ ಸಿಕ್ಕಿತು – ಅವನು ಮದಾಂ ಡಿ ಬೋಸಿಯಾನ್‌ಳ ಬಂಧು ಎಂಬ ಕಾರಣದಿಂದ. ಆದರೆ ಅವನು ಮಾತನಾಡುತ್ತಿದ್ದಾಗ ತನಗೆ ವೃದ್ಧ ಗೋರಿಯೊ ಪರಿಚಯವಿದೆ ಎಂದು ಹೇಳಿದ ಕೂಡಲೇ ಆ ಲಲನಾಮಣಿ ಮತ್ತು ಅವಳ ಪತಿ ಇಬ್ಬರೂ ಸೇರಿ ರಾಸ್ತಿನ್ಯಾಕ್‌ನನ್ನು ಮನೆಯಿಂದಾಚೆಗೆ ಹಾಕಿದರು. ಅವನನ್ನು ಮುಂದೆ ಎಂದೂ ಮನೆಗೆ ಸೇರಿಸಬಾರದೆಂದೂ ಸೇವಕರಿಗೆ ಆಜ್ಞಾಪಿಸಿದರು.

ಹೀಗೆ ಮುಖಭಂಗವಾದ ಮೇಲೆ ರಾಸ್ತಿನ್ಯಾಕ್ ತನ್ನ ಬಂಧು ಮದಾಂ ಬೋಸಿಯಾನ್‌ಳ ಬಳಿಗೆ ಹೋಗಿ ಅನಾಸ್ತಸಿಯಳ ಈ ರಹಸ್ಯ ನಡವಳಿಕೆ ಬಗ್ಗೆ ವಿಚಾರಿಸಿದ. ಆಗ ಅವನಿಗೆ ಅವಳಿಂದ ನಿಜಾಂಶ ತಿಳಿಯಿತು. ಗೋರಿಯೊ ತನ್ನ ಸರ್ವಸ್ವವನ್ನೂ ತನ್ನ ಇಬ್ಬರೂ ಹೆಣ್ಣುಮಕ್ಕಳಿಗೆ ವರದಕ್ಷಿಣೆಯಾಗಿ ಕೊಟ್ಟಮೇಲೆ ತಾನು ಅತ್ಯಂತ ಬಡತನದಲ್ಲಿ ಕೊಳಕು ಜೀವನ ಸಾಗಿಸುತ್ತಿದ್ದ. ಅತ್ಯಂತ ಶ್ರೀಮಂತಿಕೆಗೆ ಏರಿ ಆಡಂಬರದ ಭೋಗ ಜೀವನದಲ್ಲಿ ಓಲಾಡುತ್ತಿದ್ದ ಅವನ ಇಬ್ಬರು ಹೆಣ್ಣು ಮಕ್ಕಳು ಮತ್ತು ಅವರ ಗಂಡಂದಿರಿಗೆ ದರಿದ್ರ ಗೋರಿಯೊ ಹಣ ಬೇಕಾಗಿತ್ತು, ಅವನ ಸಂಪರ್ಕ ಬೇಕಾಗಿರಲಿಲ್ಲ. ಅಷ್ಟೇ ಅಲ್ಲ ; ಅವನು ತಮಗೆ ಹತ್ತಿರದ ಸಂಬಂಧಿ ಎಂದು ಹೇಳಿಕೊಳ್ಳುವುದೂ ಅವಮಾನವೆಂದುಕೊಂಡು ಅವನಿಂದ ದೂರ ಇರುತ್ತಿದ್ದರು. ಹಾಗೆಯೇ ಅವನ ಪರಿಚಯವಿದೆ ಎನ್ನುವವರನ್ನೂ ಸಹ ದೂರದಲ್ಲಿಡುತ್ತಿದ್ದರು. ಇಷ್ಟನ್ನೂ ಬೋಸಿಯಾನ್ ರಾಸ್ತಿನ್ಯಾಕ್‌ಗೆ ತಿಳಿಸಿ ಅವನು ಗೋರಿಯೊ ಮೂಲಕ ಗೋರಿಯೊವಿನ ಇನ್ನೊಬ್ಬ ಮಗಳು ಕೌಂಟೆಸ್ ಡೆಲ್ಫೀನ್ ನ್ಯುಸಿಂಜೇನ್ (Contess Delphine Nucingen)ಗೆ ಒಂದು ಸುದ್ದಿ ಕಳುಹಿಸಬೇಕೆಂದಳು. ಡೆಲ್ಫೀನ್‌ಳು ತನ್ನ ಮನೆಗೆ ಬಂದರೆ ಅವಳಿಗೆ ಸ್ವಾಗತ ದೊರಕುವುದಾಗಿ ಮೇಡಂ ಬೋಸಿಯಾನ್ ಹೇಳಿ ಕಳುಹಿಸಿದಳು. ಯಾಕೆಂದರೆ ಅವಳಿಗೆ ರ್‍ಯಾಸ್ತಿ ನ್ಯಾಕ್ ಶ್ರೀಮಂತಳಾದ ಬೋಸಿಯಾನ್‌ಳ ಬಂಧುವೆಂದು ತಿಳಿದು ಅವನಿಗೆ ಅವಳು ಒಲಿಯುವುದು ಖಂಡಿತವೆಂದು ಬೋಸಿಯಾನ್ ಊಹಿಸಿದಳು.

ಅದೇ ವಸತಿಗೃಹದಲ್ಲಿ ವಾಸವಾಗಿದ್ದ ಚಾಣಾಕ್ಷ ಮೆಸ್ಯೂವಾತ್ರೀನ್ ರಾಸ್ತಿನ್ಯಾಕ್‌ಗೆ ಇನ್ನೊಂದು ಸಲಹೆ ಕೊಟ್ಟ. ಮೊದಲನೆಯ ಮಹಡಿಯಲ್ಲಿದ್ದ ಸುಂದರ ತರುಣಿ

ವಿಕ್ಟೋರಿನ್ ತೈಫೇರ್ ಒಬ್ಬ ಆಗರ್ಭ ಶ್ರೀಮಂತನ ಮಗಳೆಂದೂ, ಆದರೆ ಅವಳ ತಂದೆಯು ಆಸ್ತಿಪಾಸ್ತಿಯೆಲ್ಲಕ್ಕೂ ತನ್ನ ಮಗನನ್ನು ವಾರಸುದಾರನನ್ನಾಗಿ ಮಾಡಿ ಮಗಳನ್ನು ಬೀದಿಪಾಲು ಮಾಡಲು ಉದ್ದೇಶಿಸಿರುವನೆಂದೂ ಹೇಳಿದ. ತೈಫೇರಳ ಪ್ರೇಮ ಕಟಾಕ್ಷಕ್ಕೆ ರಾಸ್ತಿನ್ಯಾಕ್ ಅವಳನ್ನು ಮದುವೆಯಾದರೆ ಅವಳ ಆಸ್ತಿಪಾಸ್ತಿ ಎಲ್ಲವನ್ನೂ ಅವನೇ ದೋಚಬಹುದೆಂದೂ ವಾತ್ರೀನ್ ಸಲಹೆ ಮಾಡಿ, ರಾಸ್ತಿನ್ಯಾಕ್ ಆ ವಿಷಯವಾಗಿ ಪರ್ಯಾಲೋಚಿಸಲು ಎರಡು ವಾರದ ಅವಕಾಶವನ್ನಿತ್ತ.

ಮದಾಂ ಬೋಸಿಯಾನ್‌ಳನ್ನು ರಾಸ್ತಿನ್ಯಾಕ್ ಮಾರನೆಯ ಸಂಜೆ ಥಿಯೇಟರಿಗೆ ಕರೆದೊಯ್ದಾಗ ಅವನಿಗೆ ಡೆಲ್ಫೀನಳ ಪರಿಚಯವಾಗಿ ಅವಳು ಅವನ ಬಗ್ಗೆ ಪ್ರಸನ್ನಳಾದಳು. ಮಾರನೆಯ ದಿನವೇ ತನ್ನ ಮನೆಗೆ ಔತಣಕ್ಕೆ ಬಂದು ತನ್ನನ್ನು ಥಿಯೇಟರಿಗೆ ಒಯ್ಯುವಂತೆ ಆಹ್ವಾನವಿತ್ತಳು. ಔತಣಕ್ಕೆ ಮುಂಚೆ ಡೆಲ್ಫೀನ್‌ಳು ರಾಸ್ತಿನ್ಯಾಕ್‌ನನ್ನು ಜೂಜಿನ ಮನೆಗೆ ಕರೆದೊಯ್ದು ಅವನಿಗೆ ನೂರು ಫ್ರಾಂಕ್ ಕೊಟ್ಟು ಜೂಜು ಆಟದಲ್ಲಿ ಹಣ ತೊಡಗಿಸುವಂತೆ ಪ್ರೇರಿಸಿದಳು. ರಾಸ್ತಿನ್ಯಾಕ್ ಅದೃಷ್ಟವಶಾತ್ ಆರು ಸಾವಿರ ಫ್ರಾಂಕ್ ಗೆದ್ದ. ತನ್ನ ಗಂಡ ತನಗೆ ಒಂದಿಷ್ಟು ಹಣ ಕೊಡದೆ ಸತಾಯಿಸುತ್ತಿರುವುದಾಗಿಯೂ ತಾನು ಹಳೆಯ ಪ್ರೇಮಿಯೊಬ್ಬನಿಗೆ ದೊಡ್ಡ ಮೊತ್ತದ ಸಾಲ ಕೊಡಬೇಕಾಗಿರುವುದಾಗಿಯೂ ತಿಳಿಸಿ ಡೆಲ್ಫೀನ್ ಹಣವೆಲ್ಲವನ್ನೂ ಉಪಾಯವಾಗಿ ರಾಸ್ತಿನ್ಯಾಕ್ ಕೈಯಿಂದ ಕಿತ್ತುಕೊಂಡಳು. ಈ ಶ್ರೀಮಂತರ ಸಹವಾಸದಲ್ಲಿ ತನ್ನ ಹಣವೆಲ್ಲ ಕರಗಿಹೋದಾಗ ರಾಸ್ತಿನ್ಯಾಕ್ ಪೇಚಿಗೆ ಸಿಕ್ಕಿದ. ಮತ್ತೆ ಹಣದ ಮುಗ್ಗಟ್ಟು ಪ್ರಬಲವಾಗಿ ವಾತ್ರೀನ್ ಕೊಟ್ಟಿದ್ದ ಅಪಾಯಕರ ಸಲಹೆಗೆ ಒಪ್ಪಲು ತಯಾರಾದ. ತೈಫೇರ್‌ಳ ಸೋದರನನ್ನು ಕೊಲ್ಲಿಸಲು ತಾನು ಹೂಡಿರುವ ಸಂಚನ್ನು ವಾತ್ರೀನ್ ರಾಸ್ತಿನ್ಯಾಕ್‌ಗೆ ತಿಳಿಸುತ್ತಿದ್ದಾಗ ಗೋರಿಯೊ ಬಂದು ತನ್ನ ಮಗಳು ಡೆಲ್ಫೀನ್ ರಾಸ್ತಿನ್ಯಾಕ್‌ಗೆ ಒಲಿದಿರುವುದಾಗಿಯೂ, ಅವಳು ಅವನಿಗೋಸ್ಕರ ಬೇರೊಂದು ಬಿಡಾರ ಖರೀದಿಸಿರುವುದಾಗಿಯೂ ತಿಳಿಸಿದ. ತೈಫೇರ್‌ಳ ಸೋದರನ ಕೊಲೆ ಮಾಡಿಸಲು ಇನ್ನೂ ಹಿಂಜರಿಯುತ್ತಿದ್ದ ರಾಸ್ತಿನ್ಯಾಕ್ ಮತ್ತು ವೃದ್ಧ ಗೋರಿಯೊ ತನ್ನ ಕೆಲಸಕ್ಕೆ ಅಡ್ಡಿಯಾಗಬಾರದೆಂದು ವಾತ್ರೀನ್ ಅವರಿಬ್ಬರಿಗೂ ಮದ್ದು ಬೆರೆಸಿದ ಪಾನೀಯ ಕೊಟ್ಟು ಅವರಿಬ್ಬರೂ ಗಾಢವಾಗಿ ನಿದ್ರಿಸುವಂತೆ ಮಾಡಿದ.

ಮಾರನೆಯ ಬೆಳಿಗ್ಗೆ ವಿಕ್ಟೋರಿನ್ ತೈಫೇರ್‌ಳ ಸೋದರ ಕತ್ತಿಕಾಳಗದಲ್ಲಿ ಪ್ರಬಲವಾಗಿ ಗಾಯಗೊಂಡಿರುವನೆಂಬ ಸುದ್ದಿ ಬಂತು — ಅವನನ್ನು ನೋಡಲು ಅವಳು ಧಾವಿಸಿದಾಗ, ವಾತ್ರೀನ್ ಮೂರ್ಛೆಹೋಗಿ ನೆಲಕ್ಕೆ ಬಿದ್ದ. ಅವನಿಗೆ ಪಾರ್ಶ್ವವಾಯು ತಗಲಿತೆಂದೇ ಎಲ್ಲರೂ ಭಾವಿಸಿದರು. ಅವನನ್ನು ಮಲಗಿಸಿ ಶುಶ್ರೂಷೆ ಮಾಡಲು ಅವನ ಬಟ್ಟೆಗಳನ್ನು ಕಳಚಿದಾಗ ಅವನ ಬೆನ್ನಿನ ಮೇಲೆ ಹಾಕಿದ್ದ (ಆ ಕಾಲದಲ್ಲಿ ಕಾರಾಗೃಹದ ಕೇಡಿಗಳಿಗೆ ಹಾಕುತ್ತಿದ್ದ) ಬರೆಗಳು ಕಂಡುಬಂದವು. ಆಗ ಅವನು ಕುಪ್ರಸಿದ್ಧ ಕೇಡಿ

ತ್ರೋಪ್ ಲಾಮೊರ್ತ್ ಎಂದು ತಿಳಿಯಿತು. ಪೋಲಿಸರಿಗೆ ನೆರವಾಗಿದ್ದ ವಸತಿಗೃಹದ ಮದಾಂ ಮಿಷೆನೊ ಎಂಬುವಳು ಬೇಕೆಂದೇ ಅವನ ಕಾಫಿಗೆ ಮದ್ದು ಸೇರಿಸಿ ಅವನು ಪ್ರಜ್ಞೆ ತಪ್ಪುವಂತೆ ಮಾಡಿದ್ದಳು. ಕೇಡಿಯನ್ನು ಪೋಲಿಸರು ಹಿಡಿದು ಒಯ್ದರು.

ರಾಸ್ತಿನ್ಯಾಕ್ ಮತ್ತು ಗೋರಿಯೊ ಇಬ್ಬರೂ ಡೆಲ್ಫೀನ್ ನಿಯೋಜಿಸಿರುವಳೆನ್ನಲಾದ ಹೊಸ ಬಿಡಾರಕ್ಕೆ ಹೋಗಲು ಗಂಟುಮೂಟೆ ಕಟ್ಟುತ್ತಿರುವಾಗ ಡೆಲ್ಫೀನ್ ಹೊಸದೊಂದು ಹೂಟ ಹೂಡಿದಳು. ಆ ಮೊದಲು ಜೀವನಾಂಶ ಕೊಟ್ಟು ತನ್ನ ವಿವಾಹ ವಿಚ್ಛೇದನ ಮಾಡಿ ತನಗೆ ಸ್ವಾತಂತ್ರ್ಯ ಕೊಡಲು ಒಪ್ಪಿದ್ದ ಗಂಡ ಈಗ ಹಣ ಕೊಡುವ ಸ್ಥಿತಿಯಲ್ಲಿಲ್ಲವೆಂದು ರಂಪ ಮಾಡಿದಳು. ಅಷ್ಟುಹೊತ್ತಿಗೆ ಸರಿಯಾಗಿ ಗೋರಿಯೋನ ಇನ್ನೊಬ್ಬ ಮಗಳು ಅನಾಸ್ತಸಿಯೂ ಬಂದು ತನ್ನ ವಜ್ರವೈಢೂರ್ಯದ ಆಭರಣಗಳನ್ನು ಮಾರಬೇಕಾಗಿ ಬಂದಿದೆಯೆಂದೂ, ತನ್ನ ಗಂಡ ಅವನ ವರದಕ್ಷಿಣೆಗಾಗಿ ಒತ್ತಾಯಿಸುತ್ತಿದ್ದಾನೆಂದೂ ತಿಳಿಸಿದಳು. ಇದೆಲ್ಲವನ್ನೂ ಕೇಳಿ ಮರುಗಿದ ಬೋಳೇತನದ ರಾಸ್ತಿನ್ಯಾಕ್ ವಾತ್ರೀನ್‌ನ ಬಾಂಡ್ ಒಂದಕ್ಕೆ ಸುಳ್ಳು ರುಜು ಹಾಕಿ 12,000 ಫ್ರಾಂಕ್ ತಂದು ಅದನ್ನು ಗೋರಿಯೊ ಕೋಣೆಯೊಳಕ್ಕೆ ತೆಗೆದುಕೊಂಡು ಹೋದ. ಅವನ ಶ್ರಮಕ್ಕೆ ದೊರೆತ ಪ್ರತಿಫಲ — ಅವಳು ರಾಸ್ತಿನ್ಯಾಕ್ ಹೊಂಚು ಕೇಳಿಸಿಕೊಂಡನೆಂದು ಅವನನ್ನು ಮೂದಲಿಸಿದಳು.

ತನ್ನ ಹೆಣ್ಣು ಮಕ್ಕಳ ಹಣಕಾಸಿನ ಪರದಾಟ, ಅವರು ತಂದೆಯ ಬಗ್ಗೆ ತೋರಿಸಿದ ದ್ವೇಷಾಸೂಯೆಗಳು ವೃದ್ಧ ಗೋರಿಯೊನನ್ನು ತೀವ್ರ ವೇದನೆಗೆ ಗುರಿಮಾಡಿದವು. ಅವನಿಗೆ ಮೆದುಳಿನಲ್ಲಿ ರಕ್ತಸ್ರಾವ ಉಂಟಾಯಿತು. ರಾಸ್ತಿನ್ಯಾಕ್ ಅಂದು ಮಧ್ಯಾಹ್ನ ತನ್ನ ಪ್ರೇಯಸಿ ಡೆಲ್ಫೀನಳ ಜೊತೆ ವಿಹರಿಸಿ ಮನೆಗೆ ಹಿಂತಿರುಗಿದಾಗ ಮುದುಕ ಗೋರಿಯೋನ ರೋಗ ಅಪಾಯದ ತುದಿಯನ್ನು ಮುಟ್ಟಿತ್ತು. ಅವತ್ತು ಬೆಳಿಗ್ಗೆ ತಾನೇ ಅವನು ತನ್ನ ಬಳಿ ಉಳಿದಿದ್ದ ಚೂರುಪಾರು ಬೆಲೆಬಾಳುವ ವಸ್ತುಗಳನ್ನೆಲ್ಲ ಮಾರಿ ತನ್ನ ಮಗಳು ತನ್ನ ಹೊಸ ಗೌನು ಹೊಲೆದ ದರ್ಜಿಗೆ ಕೊಡಬೇಕಾಗಿದ್ದ ಹಣವನ್ನು ಕೂಡಿಸಿಕೊಟ್ಟಿದ್ದ.

ತಂದೆ ಘೋರವಾಗಿ ನರಳುತ್ತ ಮಲಗಿದ್ದರೂ ಲೆಕ್ಕಿಸದೆ ಆ ಇಬ್ಬರು ಹೆಣ್ಣು ಮಕ್ಕಳೂ ಮದಾಂ ಬೋಸಿಯಾನ್‌ಳು ತನ್ನ ಮಹಲಿನಲ್ಲಿ ಏರ್ಪಡಿಸಿದ್ದ ನೃತ್ಯಕೂಟಕ್ಕೆ ಹೊರಟರು – ತನ್ನ ಪ್ರೇಯಸಿಯ ಸಲುವಾಗಿ ರಾಸ್ತಿನ್ಯಾಕ್ ಸಹ ಅಲ್ಲಿಗೆ ಹೋದ. ಮಾರನೆಯ ದಿನ ಗೋರಿಯೊ ಮರಣೋನ್ಮುಖ ಸ್ಥಿತಿಯಲ್ಲಿದ್ದ. ರಾಸ್ತಿನ್ಯಾಕ್ ಗೋರಿಯೋನ ಮಕ್ಕಳನ್ನು ಕರೆತರಲು ಹೊರಟ. ಆಗ ಡೆಲ್ಫೀನ್ ಇನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ತಾನು ಎದ್ದು ಸಿಂಗರಿಸಿಕೊಂಡು ಬರಬೇಕಾಗಿರುವುದರಿಂದ ಇನ್ನೂ ತಡವಾಗ ಬಹುದೆಂದು ನೆಪ ಹೇಳಿ ಕಳುಹಿಸಿದಳು. ಅನಾಸ್ತಸಿ ತಂದೆಯನ್ನು ನೋಡಲು ಬರುವ ಹೊತ್ತಿಗೆ ಅವನಿಗೆ ಸನ್ನಿ ಮರುಕಳಿಸಿ ಪ್ರಜ್ಞಾಶೂನ್ಯನಾಗಿದ್ದ.

ವೃದ್ಧ ಗೋರಿಯೋನ ಬಳಿ ಶವಸಂಸ್ಕಾರಕ್ಕಾಗಿಯೂ ಒಂದು ಕುರುಡು ಕಾಸು ಹಣವಿಲ್ಲದ್ದರಿಂದ ಅವನಿಗೆ ಭಿಕಾರಿಯ ಗತಿ ಕಾಣಿಸಿ ಹೂತರು. ತಂದೆಯ ಸಂಸ್ಕಾರಕ್ಕೆಂದು ಹೆಣ್ಣು ಮಕ್ಕಳ ಬಳಿ ಸಾಲ ಕೇಳಲು ಹೋದ ರಾಸ್ತಿನ್ಯಾಕ್ ಬರಿಕೈಯಲ್ಲಿ ಹಿಂತಿರುಗಿದ್ದ. ಗೋರಿಯೊ ಸಂಸ್ಕಾರದ ಸಮಯದಲ್ಲಿ ಶೋಕ ಸೂಚಿಸಲು ಒಬ್ಬ ಬಡವೈದ್ಯಕೀಯ ವಿದ್ಯಾರ್ಥಿ ಮತ್ತು ರಾಸ್ತಿನ್ಯಾಕ್ ಇಬ್ಬರು ಮಾತ್ರ ಹಾಜರಿದ್ದರು. ಅನಾಸ್ತಸಿ ಮತ್ತು ಡೆಲ್ಫೀನ್ ಕೇವಲ ತಮ್ಮ ಕುದುರೆಗಾಡಿಗಳನ್ನು ಶವದ ಮೆರವಣಿಗೆಯ ಹಿಂದೆ ಹೋಗಲು ಕಳುಹಿಸಿ, ತಮಗಾಗಿ ಸರ್ವಸ್ವವನ್ನೂ ತ್ಯಾಗಮಾಡಿ ಸತ್ತ ಭಿಕಾರಿ ತಂದೆಗೆ ಆ ಮೂಲಕ 'ಅಂತಿಮ ಕಾಣಿಕೆ' ಅರ್ಪಿಸಿದರು!

ಈ ಕಾದಂಬರಿಯ ಹೆಸರೇ ಸೂಚಿಸುವಂತೆ ಗೋರಿಯೊ ಇಲ್ಲಿನ ಕಥಾನಾಯಕ. ಕಥೆಯ ಜೀವಾಳ ಯೂಜಿನ್ ರಾಸ್ತಿನ್ಯಾಕ್. ಕಾದಂಬರಿಕಾರನ ಜೀವನದರ್ಶನಕ್ಕೆ ಇವನ ಪಾತ್ರ ಕಣ್ಣೆಲೆ ಒದಗಿಸುತ್ತದೆ. ದೂರದ ಒಳನಾಡಿನಿಂದ ಬಂದ ಭೋಳೇತನದ ವ್ಯಕ್ತಿ ಪ್ಯಾರಿಸ್ ನಗರದ ಭೋಗಲೋಲುಪತೆ, ಕ್ರೌರ್ಯ, ನೈತಿಕ ಪತನಗಳ ನಡುವೆ ಹೋರಾಡುತ್ತ ಬದುಕಿನ ಮುಖಾಮುಖಿ ಅನುಭವಗಳನ್ನು ಗಳಿಸುವ ಚಿತ್ರ ಮಾರ್ಮಿಕವಾಗಿದೆ. ಇವನ ಪಾತ್ರವನ್ನು ವಿನ್ಯಾಸಗೊಳಿಸುವ ರೀತಿಯಂತೂ ಅನ್ಯಾದೃಶ. ಬಾಲ್ಜಾಕ್ ಕೆಲವೊಮ್ಮೆ ನೇರವಾಗಿ ಬಿಡಿಬಿಡಿ ವಿವರಗಳುಳ್ಳ ಸುದೀರ್ಘ ವರ್ಣನೆಗಳನ್ನು ಕೊಟ್ಟು ಪಾತ್ರವಿಶ್ಲೇಷಣೆ ಮಾಡುವುದೂ ಉಂಟು. ಆದರೆ ರಾಸ್ತಿನ್ಯಾಕ್ ಪಾತ್ರವನ್ನು ಅವನು ಎದುರಿಸುವ ಘಟನೆಗಳ ಸನ್ನಿವೇಶಗಳ ಮೂಲಕ ಬಿಡಿಸಿ ತೋರಿಸುತ್ತಾನೆ. ರಾಸ್ತಿ ನ್ಯಾಕ್ ದೂರದ ಒಳನಾಡು ಪ್ರಾಂತದವನು, ಮಧ್ಯಮವರ್ಗದ ಸಾಮಾನ್ಯ ಮನುಷ್ಯ. ತನ್ನ ಮನೆ, ಕುಟುಂಬ, ನೆಮ್ಮದಿಯಾದ ವೃತ್ತಿ, ಗೋಜಿಲ್ಲದೆ ಮದುವೆ ಇವಿಷ್ಟರಿಂದ ತೃಪ್ತನಾಗಿದ್ದರೆ ಅವನೂ ಗೌರವಸ್ಥನೆನಿಸಿಕೊಂಡು ಹತ್ತು ಜನರಲ್ಲಿ ಒಬ್ಬನಾಗಿ ಬಾಳಬಹುದಾಗಿತ್ತು. ಆದರೆ ಯೌವನದ ಲವಲವಿಕೆಯಿಂದ ಜೀವನೋತ್ಸಾಹದಿಂದ ತುಂಬಿ ತುಳುಕುವ ಯಾವ ತರುಣನಿಗೆ ತಾನೇ ಇಂಥ ನಿರ್ವ್ಯಾಪಾರದ, ಜಡ್ಡು ಹಿಡಿದ ಜೀವನ ಮಾರ್ಗ ತೃಪ್ತಿ ತಂದೀತು ? ಕಡುಬಡತನದಲ್ಲೂ ಶ್ರೀಮಂತಿಕೆಯ ಸೋಗು ಹಾಕಿ ಮೆರೆಯುವ ಪ್ಯಾರಿಸ್ ನಗರದ 'ಕೊರಳು ಕೊಯ್ಯುವ' ಪೈಪೋಟಿ ಜೀವನದಲ್ಲಿ ತಾನು ಹೇಗಾದರೂ ಬದುಕಬೇಕು, ಯಶಸ್ಸು ಗಳಿಸಬೇಕು ಎನ್ನುವ ಛಲ ಅವನಲ್ಲಿ ಅದಮ್ಯವಾಗುತ್ತದೆ. (ಈ ಕಾದಂಬರಿಯ ಮುಂದಿನ ಭಾಗ Lost Illusionsನಲ್ಲಿ ಅವನು ಈ ಛಲ ಸಾಧಿಸಿ ಯಶಸ್ವಿಯಾಗಿಯೇ ತೀರುತ್ತಾನೆ.) ಹಳ್ಳಿಗಾಡಿನ ಆದರ್ಶ ಜೀವನದ ಕುರಿತು ಅವನಲ್ಲಿದ್ದ ಅಲ್ಪಸ್ವಲ್ಪ ಭ್ರಾಂತಿ, ಕಲ್ಪನೆ, ಸದ್ಭಾವನೆಗಳು ವಾತ್ರೀನ್‌ನಂಥವನ ಸಹವಾಸದಲ್ಲಿ ಮಣ್ಣು ಪಾಲಾಗುತ್ತವೆ. ಸಹಜವಾಗಿಯೇ ಅವನು ನಾಗರಿಕ ಜೀವನದ ಹೊರನೋಟದ ಬೆಡಗು, ಆಡಂಬರ - ಭೋಗಸಮೃದ್ಧಿಗಳ ಬಿಸಿಲ್ಗುದುರೆ ಏರಲು

ಹೊರಡುತ್ತಾನೆ. ಇವನ ಪಾತ್ರವನ್ನು ಕಡೆಯುವಾಗ ಬಾಲ್ಜಾಕ್ ನೀತಿ–ನೇತಿಗಳ ವಿಚಾರವಾಗಿ ತಡಕಾಡುವುದಿಲ್ಲ. ಅವನ ಏಳುಬೀಳುಗಳು, ಅವನ ಪರಿಸರ, ಅವನ ಸ್ವಭಾವ – ಇವುಗಳನ್ನು ನಿರ್ಲಿಪ್ತತೆಯಿಂದ ನಿವೇದಿಸುತ್ತಾನೆ.

ಅಮಾಯಕವಾದ 'ಪ್ರಾಂತನಿವಾಸಿ' ರಾಸ್ತಿನ್ಯಾಕ್ ಹೇಗೆ ಪ್ಯಾರಿಸ್ ಜೀವನದ ಪ್ರಲೋಭಕ್ಕೆ ತುತ್ತಾಗುತ್ತಾನೆಂಬುದನ್ನು ಸೂಚಿಸುವ ಎರಡು ಘಟನೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮೊದಲನೆಯದು — ವಿಲಾಸವತಿ ಮದಾಂ ಬೋಸಿಯಾನ್‌ಳ ದಿವಾನಖಾನೆಯಲ್ಲಿ ನೆರೆದ ಶ್ರೀಮಂತ ಸ್ತ್ರೀಯರ ಸಭೆಯಲ್ಲಿ ಪಿಳಿಪಿಳಿ ಕಣ್ಣುಬಿಡುತ್ತನಿಂತ ರಾಸ್ತಿನ್ಯಾಕ್‌ನ ಚಿತ್ರ. ವೃದ್ಧ ಗೋರಿಯೋನ ದಟ್ಟದಾರಿದ್ರ್ಯದ ಜೀವನವನ್ನು ನೋಡಿದ್ದ ಇವನಿಗೆ ಆಡಂಬರದ ಭೋಗಲೋಲುಪತೆಯಲ್ಲಿದ್ದ ಮದಾಂ ಡಿ ರೆಸ್ತೊ ವೃದ್ಧ ಗೋರಿಯೋನ ಮಗಳೆಂದು ಗೊತ್ತಾದಾಗ 'ಯೂಜಿನೊವಿನ ಕಣ್ಣುಗಳಲ್ಲಿ ನೀರು ತುಂಬಿತು. ತನ್ನ ಊರಿನಿಂದ ಹೊರಟಾಗ ಅವನಿನ್ನೂ ಯೌವನದ ಉನ್ನತ ಆದರ್ಶಗಳಿಂದ ಮಂತ್ರಮುಗ್ಧನಾಗಿದ್ದ. ಈಗಲೂ ಅವನ ಅಂತರಂಗದಲ್ಲಿ ಪವಿತ್ರ ಪರಿಶುದ್ಧ ಭಾವನೆಗಳು ಉಸಿರಾಡುತ್ತಿದ್ದವು. ಆದರೆ ಪ್ಯಾರಿಸ್ ನಾಗರಿಕತೆಯ ರಣರಂಗದಲ್ಲಿ ಇದು ಅವನು ಕಾಲಿಟ್ಟ ಮೊದಲನೆಯ ದಿನದ ಅನುಭವ.' ಪ್ರಾರಂಭದಲ್ಲಿ ಅವನ ಈ ಬೆಚ್ಚನೆಯ ಭಾವುಕತೆಯಿಂದ ಅವನೊಬ್ಬ ವಿಶಿಷ್ಟ ವ್ಯಕ್ತಿ ಎಂದು ತೋರುತ್ತದೆಯಾದರೂ ಅವನು ಮದಾಂ ಬೋಸಿಯಾನ್‌ಳ ಹೃದಯವಿಹೀನ, ಸಿನಿಕತನದ ಮೋಡಿಗೆ ಸಿಕ್ಕಿ ಮಾರ್ಪಾಡಾಗುವ ಸನ್ನಿವೇಶ ನಮ್ಮ ಕರುಳು ಕಿವುಚುತ್ತದೆ. ಈ ಸುಂದರಾಂಗಿಯ ಪ್ರಭಾವದಿಂದ, ಯಶಸ್ಸು ಸಾಧಿಸ ಹೊರಟ ತರುಣ ಕ್ರಮೇಣ ಮಾನವತ್ವದಿಂದ ವಂಚಿತನಾಗುವುದಂತೂ ಮರ್ಮಭೇದಕವಾಗಿದೆ : 'ನೀನು ನಿನ್ನ ಲೆಕ್ಕಾಚಾರಗಳಲ್ಲಿ ಕಠಿಣಹೃದಯಿಯಾದಷ್ಟೂ ಬೇಗ ನೀನು ಯಶೋವಂತನಾಗಬಲ್ಲೆ... ಏಳಿಗೆಗೆ ಬರಬಲ್ಲೆ... ನೀನು ಎಲ್ಲೇ ಹೋಗಲಿ, ಎಲ್ಲೇ ಬರಲಿ... ಮುಂದೆ ನಿನಗೇ ಅನುಭವವಾಗುತ್ತದೆ ಈ ಪ್ರಪಂಚವೆಂಬುದು ಮೂರ್ಖರ, ನೀಚರ ಕೂಟ ಎಂದು....' ಈ ಬೋಧನೆ ಫಲದಾಯಕವಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿ ರಾಸ್ತಿನ್ಯಾಕ್ ತಕ್ಷಣ ಹಳ್ಳಿಗಾಡಿನಲ್ಲಿರುವ ತನ್ನ ಕಡುಬಡವ ತಂಗಿಯರಿಗೆ ಕಾಗದ ಬರೆದು ಅವರು ಆ ಕೂಡಲೇ ಹೇಗಾದರೂ ಮಾಡಿ ತನಗೆ ದೊಡ್ಡ ಮೊತ್ತದ ಹಣ ಕಳುಹಿಸುವಂತೆ ಒತ್ತಾಯ ಮಾಡುತ್ತಾನೆ. ಇಲ್ಲಿ ಸೂಚ್ಯವಾಗಿರುವ 'ಕಟಕಿ' ಮನಮಿಡಿಯುವಂತಿದೆ.

ಬಂದರಿನಲ್ಲಿ ರಾಸ್ತಿನ್ಯಾಕ್‌ನನ್ನು ವಾತ್ರೀನ್ ಚಿತಾಯಿಸಿ ಅವನಿಗೆ ಸವಾಲು ಹಾಕುವ ಸನ್ನಿವೇಶ ಪ್ಯಾರಿಸ್ ನಗರಜೀವನದ ಇನ್ನೊಂದು ಮುಖವನ್ನು ತೋರಿಸುವಂತಿದೆ. 'ಈ ಕಾಲದಲ್ಲಿ ಯೋಗ್ಯವಾದ ಮನುಷ್ಯ ಸಿಕ್ಕುವುದು ಅಪರೂಪ – ಎಲ್ಲೆಲ್ಲೂ ಪೈಪೋಟಿಯೇ ಜಾಸ್ತಿ.' ಆದ್ದರಿಂದ ವಾತ್ರೀನ್ ರಾಸ್ತಿನ್ಯಾಕ್‌ಗೆ ಬೋಧಿಸುತ್ತಾನೆ : 'ಸದ್ಗುಣ-ದುರ್ಗುಣ,

ಒಳಿತು-ಕೆಡಕುಗಳೆಂಬ ನಿನ್ನ ರೊಮ್ಯಾಂಟಿಕ್ ಭಾವನೆಗಳನ್ನು ಬಿಟ್ಟುಬಿಡು. ಸಾಂಪ್ರದಾಯಿಕವಾದ ನೀತಿ-ನೇಮಗಳ ವಿರುದ್ಧ ನೀನು ದಂಗೆ ಏಳಬೇಕು.' ಈ ಹಿಂದೆ ಮದಾಂ ಬೋಸಿಯಾನ್‌ಳು ತನಗೆ ಉಪದೇಶ ನೀಡಿದಾಗ ಯಾವ ಶಬ್ದಗಳನ್ನು ಬಳಸಿದ್ದಳೋ ಅದೇ ಶಬ್ದಗಳನ್ನು ಈ ಕೇಡಿಗ ವಾತ್ರೀನ್ ಸಹ ಬಳಸುವುದನ್ನು ಕೇಳಿದಾಗ ತರುಣ ರಾಸ್ತಿನ್ಯಾಕ್‌ಗೆ ಪರಮಾಶ್ಚರ್ಯವಾಗುತ್ತದೆ : 'ಪ್ರಾಮಾಣಿಕ ಮನುಷ್ಯನನ್ನು ಕಂಡರೆ ಯಾರಿಗೂ ಆಗುವುದಿಲ್ಲ ; ಆದ್ದರಿಂದ ನಿಜವಾಗಿ ಈ ಪ್ರಪಂಚದಲ್ಲಿ ಏಳಿಗೆಗೆ ಬರಬೇಕಾದರೆ ಬಲು ಜಾಣತನದಿಂದ ಭ್ರಷ್ಟಾಚಾರ ನಡೆಸಬೇಕು' ಎನ್ನುತ್ತಾನೆ ವಾತ್ರೀನ್. 'ನೋಡಯ್ಯ, ಈ ಪ್ರಪಂಚ ಎಂದಿನಿಂದಲೂ ಹೀಗೆಯೇ ಇದೆ. ನೀತಿಶಾಸ್ತ್ರಜ್ಞನ ಖಂಡನೆಗಳಿಂದ ಯಾವುದೂ ಬದಲಾಯಿಸುವುದಿಲ್ಲ. ಮನುಷ್ಯ ಪರಿಪೂರ್ಣನಲ್ಲ. ಒಂದು ಕಾಲದ ಜನರಿಗಿಂತ ಇನ್ನೊಂದು ಕಾಲದ ಜನರಲ್ಲಿ ಹೆಚ್ಚು ಕಡಿಮೆ ಠಕ್ಕು-ಬೂಟಾಟಿಕೆ ಇದ್ದೇ ಇರುತ್ತದೆ... ಕೇವಲ ಕೆಲವು ಬೆಪ್ಪರು ಮಾತ್ರ, ಆ ಕಾಲದಲ್ಲಿ ನೀತಿಮಟ್ಟ ಹೆಚ್ಚಾಗಿತ್ತು, ಈ ಕಾಲದಲ್ಲಿ ಕಡಿಮೆಯಾಗಿತ್ತು – ಅಂತ ಹೇಳುತ್ತಾರೆ. ಬಡವರಿಗಿಂತ ಶ್ರೀಮಂತರು ಹೆಚ್ಚು ಕೆಟ್ಟವರು ಅಂತ ನನಗೆ ಅನಿಸುವುದಿಲ್ಲ. ಮನುಷ್ಯ ಹೇಗೇ ಇರಲಿ, ಬಡವನಾಗಿರಲಿ, ಸ್ಥಿತಿವಂತನಾಗಿರಲಿ – ಅವನಲ್ಲಿ ಏನೂ ಬದಲಾವಣೆ ಆಗುವುದಿಲ್ಲ. ಈ ಲಕ್ಷಾಂತರ ಮಂದಿ, ಮಾನವಪಶುಗಳಲ್ಲಿ ಎಲ್ಲೋ ಒಂದು ಹತ್ತು ಜನ ಧೀಮಂತರು ಮಾತ್ರ ಎಲ್ಲರನ್ನೂ ಮೀರಿಸಿ, ನೀತಿ-ನೇಮಗಳನ್ನು ಮುರಿದು ಮೇಲಕ್ಕೆ ಏರುತ್ತಾರೆ. ಅಂಥವರಲ್ಲಿ ನಾನೂ ಒಬ್ಬ ಕಣಯ್ಯ'– ಇದು ವಾತ್ರೀನ್ ಉವಾಚ. ಅವನೊಬ್ಬ ನಾಗರಿಕ ನೇಮಗಳನ್ನು ಮುರಿದ ಪಕ್ಕಾ ಕೇಡಿ ಎಂಬುದು ಆಗಿನ್ನೂ ನಮಗೆ ತಿಳಿದಿರುವುದಿಲ್ಲ. ಆದರೆ ಅವನು ದೈವಿಕವಾದ ನೀತಿ-ನೇಮಗಳನ್ನು ಹೇಗೆ ಮುರಿಯಬಲ್ಲ ಎಂಬುದು ತಕ್ಷಣ ತಿಳಿಯುತ್ತದೆ. ಗತಿ ಇಲ್ಲದವನು ಬೇಗ ಸ್ಥಿತಿವಂತನಾಗಬೇಕಾದರೆ ಅವನು ಸೂಚಿಸುವ ಸುಲಭ ಮಾರ್ಗ : 'ವಿಕ್ಟೋರಿನ್ ತೈಫೇರ್‌ಳ ಸೋದರನನ್ನು ಕೊಲ್ಲು, ಅವಳನ್ನು ಮದುವೆಯಾಗಿ ಅವಳ ಹಣದಿಂದ ಶ್ರೀಮಂತನಾಗು'– ಇದೇ ಅವನ ಉಪದೇಶದ ಸಾರಾಂಶ. ಖೂನಿ ಮಾಡುವಷ್ಟು ಕೆಟ್ಟ ಧೈರ್ಯ ರಾಸ್ತಿನ್ಯಾಕ್‌ಗೆ ಇಲ್ಲವಾದರೂ, ಅವನ ಬುದ್ಧಿ ಪಲ್ಲಟವಾಗಿ ಆ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಾನೆ. ರಾಷ್ಟ್ರಗಳು ನಿರ್ಭಯವಾಗಿ ಘೋರ ಅಪರಾಧಗಳನ್ನೆಸಗಬಹುದಾದರೆ, ಕೊಲೆಗಡುಕ ವ್ಯಕ್ತಿಗಳು ಬೆಣ್ಣೆಯಂಥ ಮಾತುಗಳನ್ನಾಡುತ್ತಾ ತಮ್ಮ ಉದ್ದೇಶ ಸಾಧಿಸಿಕೊಳ್ಳಬಹುದಾದರೆ, ಆ ಮೂಲಕ ಏಳಿಗೆಗೆ ಬರುವುದು ಸಾಧ್ಯವಾಗುವುದಾದರೆ, ದೇಶದ ಕಾನೂನು ಈ ಎಲ್ಲ ಅಪರಾಧಗಳನ್ನು ಕಂಡುಹಿಡಿದು ಶಿಕ್ಷೆ ವಿಧಿಸುವಷ್ಟು ಶಕ್ತಿಯುತವಾಗಿಲ್ಲವಾದರೆ ಅಥವಾ ಬೇಕೆಂದೇ ನಿರ್ವೀರ್ಯವಾಗುವುದಾದರೆ — ಈ ಹುಡುಗ ಮಾತ್ರ 'ಸದುದ್ದೇಶ-ಸನ್ಮಾರ್ಗ' ಎಂದೆಲ್ಲಾ ಏಕೆ ತಲೆ ಕೆಡಿಸಿಕೊಳ್ಳಬೇಕು ?

ಮುಂದೆ ಇನ್ನೊಮ್ಮೆ ರಾಸ್ತಿನ್ಯಾಕ್‌ನ ಆತ್ಮಸಾಕ್ಷಿ ಎಚ್ಚರಗೊಂಡು ಅವನನ್ನು ತಳಮಳಗೊಳಿಸುತ್ತದೆ. ತನ್ನ ಆರಾಧ್ಯದೇವತೆ ಡೆಲ್ಫೀನ್‌ಳಂಥವಳು ಅವಳ ನಿಸ್ಸಹಾಯಕ ತಂದೆ ಸಾಯುತ್ತಿದ್ದರೂ ಅವನನ್ನು ಕೊನೆಯ ಬಾರಿಗೆ ನೋಡಲೂ ಬರುವುದಿಲ್ಲವೆಂಬುದನ್ನು ಅವನು ನಂಬಲಾರ. ಆದರೆ ತಂದೆಯ ಮರಣಾಸನ್ನ ಸ್ಥಿತಿಯಲ್ಲೂ ಅವಳು ಕಣ್ಣೆತ್ತಿ ನೋಡದೆ, ನೃತ್ಯಕೂಟಕ್ಕೆ ತಾನು ಹೋಗಲೇಬೇಕೆಂದೂ ರಾಸ್ತಿನ್ಯಾಕ್ ತನ್ನನ್ನು ಅಲ್ಲಿಗೆ ಕರೆದೊಯ್ಯಬೇಕೆಂದೂ ಒತ್ತಾಯ ಮಾಡಿದಾಗ ಅವನು ಚಕಾರವೆತ್ತದೆ ನಾಯಿಯಂತೆ ಅವಳನ್ನು ಹಿಂಬಾಲಿಸುತ್ತಾನೆ. ಈ ಕ್ಷುದ್ರ ವ್ಯಕ್ತಿಗಳ ನೀಚತನದ ಕಥೆಯನ್ನು ಮುಕ್ತಾಯಗೊಳಿಸುತ್ತಾ ಬಾಲ್ಜಾಕ್ ಒಂದು ನಿರ್ಣಾಯಕವಾದ ಮಾತನ್ನು ಹೇಳುತ್ತಾನೆ : 'ವೃದ್ಧ ದರಿದ್ರ ಗೋರಿಯೊವಿನ ನಿರಲಂಕೃತ, ಬೋಳು ಸಮಾಧಿಯ ಮೇಲೆ ರಾಸ್ತಿನ್ಯಾಕ್ ಕಣ್ಣೀರು ಸುರಿಸುವಾಗ ಅದರೊಂದಿಗೆ ಅವನ ಯೌವನವೂ ಮುಕ್ತಾಯವಾಯಿತು.' ಅಂಥ ಸಮಾಜದೊಂದಿಗೆ ಅವನು ಈಗ ರಾಜಿ ಮಾಡಿಕೊಂಡಿರುವುದರ ದ್ಯೋತಕವಾಗಿಯೋ ಎನ್ನುವಂತೆ ಅವನು ಡೆಲ್ಫೀನ್‌ಳ ಜೊತೆ ಪುಷ್ಕಳವಾಗಿ ಭೋಜನ ಮಾಡಲು ಹೋದ. 'ಜೀವನದ ಪ್ರತಿ ಸಂದರ್ಭವನ್ನೂ ಸ್ವಂತ ಹಿತಕ್ಕಾಗಿ ದುಡಿಸಿಕೊಂಡು ಯಶಸ್ಸು ಗಳಿಸಲೇಬೇಕೆಂದು ಹೊರಟ ; ಯಶಸ್ಸು ಗಳಿಸಿದ.'

ಕೆಡುಕನಾದ ವಾತ್ರೀನ್‌ನ ಪಾತ್ರ ಅವಾಸ್ತವಿಕವೆನ್ನುವಂತಿದ್ದು, ಮದಾಂ ಮಿಷೆನೊ (Michanneau)ಳು ಅವನ ಮೇಲೆ ಸಂಚು ನಡೆಸಿ ಪೋಲೀಸರಿಗೆ ಅವನನ್ನು ಒಪ್ಪಿಸುವ ಘಟನೆ ತೀರಾ ರೊಮ್ಯಾಂಟಿಕ್ ಆದ ಕಲ್ಪನೆಯೆಂದು ವಿಮರ್ಶಕರು ಆಕ್ಷೇಪಿಸಿರುವುದುಂಟು. ಕಥೆಯಲ್ಲಿ ಅದರ ಚೌಕಟ್ಟನ್ನು ಮೀರಿ ಹರಿಯುವಷ್ಟು ಸಾರಭೂತ ಅಂಶಗಳಿರುವುದರಿಂದ ವಾತ್ರೀನ್ 'ಫ್ಯಾಂಟಸಿ'ಯ ಪಾತ್ರದಂತೆ ತೋರುತ್ತಾನೆ. 'ಫೌಸ್ಟ್' ಕಥೆಯ ಮೆಫಿಸ್ಟೊಫೆಲ್‌ನಂತೆ ವಾತ್ರೀನ್ ಸಹ ಕಥಾನಾಯಕ ರಾಸ್ತಿನ್ಯಾಕ್ 'ಸಿನಿಕ' ದೃಷ್ಟಿಯನ್ನು ತಳೆದು ಪ್ರಲೋಭನಕ್ಕೆ ಸಿಕ್ಕಿಬೀಳುವಂತೆ ಮಾಡುತ್ತಾನೆ. 'ಈಗ ನೀನೊಬ್ಬ ಭಿಕಾರಿ — ನಿನ್ನ ಬಳಿ ಏನೂ ಇಲ್ಲ. ಅವರವರ ಬದುಕಿನ ಪ್ರಾರಂಭದಲ್ಲಿ ಮೆಡಿಚಿಗಳು, ನೆಪೋಲಿಯನ್‌ಗಳು, ರಿಷಲ್ಯೂಗಳಂಥವರೂ ಸಹ ನಿನ್ನ ಹಾಗೆಯೇ ಇದ್ದರು. ಕೃತಘ್ನತೆ, ಕಪಟ, ವಂಚನೆಗಳಿಂದಲೇ ಅವರು ಮಹೋನ್ನತಿಗೆ ಏರಿದ್ದು. ಈ ಲೋಕದಲ್ಲಿ ಸರ್ವಸ್ವವನ್ನೂ ಗೆಲ್ಲಬೇಕೆನ್ನುವವರು ಸರ್ವಸ್ವವನ್ನು ಸೋಲಲೂ ಸಹ ತಯಾರಾಗಿರಬೇಕು' ಎಂದು ವಾತ್ರೀನ್ ಬೋಧಿಸುವಾಗ ಅವನು 'ಮೊರಾಲಿಟಿ' ನಾಟಕಗಳಲ್ಲಿ ಬರುವ ಖಳಪಾತ್ರದಂತೆ ಕಂಡರೆ ಆಶ್ಚರ್ಯವಿಲ್ಲ. ಅಂತಿಮವಾಗಿ ಗೋರಿಯೊವಿನ ದುರಂತವನ್ನು ಪರಿಣಾಮಕಾರಿಯಾಗಿ ಚಿತ್ರಿಸಲು, 'ಇನ್ನು ವಾತ್ರೀನ್‌ನ ಕೆಲಸ ಮುಗಿಯಿತು' ಎಂದು ಕಾದಂಬರಿಕಾರ ಸೂಚಿಸಬೇಕಿದೆ. ಆದ್ದರಿಂದ ಪೋಲೀಸರು ಬಂದು ವಾತ್ರೀನ್ ಒಬ್ಬ ಹಳೆಯ ಕೇಡಿ ಎಂದು ಗಮನಿಸಿ ಅವನನ್ನು ದಸ್ತಗಿರಿ ಮಾಡುವ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಮದಾಂ

ಮಿಷೆನೊಳು ವಾತ್ರೀನ್ ರಹಸ್ಯವನ್ನು ಬಯಲು ಮಾಡುವುದು ಸಹ ಅವಾಸ್ತವಿಕವೇನಲ್ಲ. ಯಾಕೆಂದರೆ ಅವಳಿಗೆ ವಾತ್ರೀನ್ ಬಗ್ಗೆ ಅಸಮಾಧಾನವಿದ್ದು, ಅವಳು ಹಿಂಸೆ ಕ್ರೌರ್ಯಗಳನ್ನು ಒಳಗೊಳಗೇ ಅದುಮಿಟ್ಟುಕೊಂಡಿದ್ದಾಳೆಂಬುದು ಮೊದಲೇ ಸೂಚಿತವಾಗಿರುತ್ತದೆ. ಅದೇನೇ ಇರಲಿ, ಈ ಕಾದಂಬರಿಯ ಪ್ರಪಂಚದಲ್ಲಿ ದುಷ್ಟರು, ಕೇಡಿಗಳು, ಶಿಷ್ಟಾಚಾರದ ಸೋಗು ಹಾಕುವ ಶ್ರೀಮಂತರು, ಎಲ್ಲರೂ ಒಂದೇ ಎನ್ನುವುದನ್ನು ಒತ್ತಿ ಹೇಳಲು ಬಾಲ್ಜಾಕ್ ವಾತ್ರೀನ್ ಪ್ರಸಂಗವನ್ನು ಸೊಗಸಾಗಿ ಬಳಸಿಕೊಳ್ಳುತ್ತಾನೆ.

ಹಿಂದೆ ಸೂಚಿಸಿರುವಂತೆ 'ಪೇರ್ ಗೋರಿಯೊ'ನಲ್ಲಿ ಅತ್ಯಂತ ಕಲಾತ್ಮಕವಾಗಿ ವಿನ್ಯಾಸಗೊಳಿಸಿದ ಕಥಾವಸ್ತುವಿದೆ. ತರುಣ ರಾಸ್ತಿನ್ಯಾಕ್‌ನ ಉನ್ನತಿ, ವೃದ್ಧ ಗೋರಿಯೋವಿನ ಅವನತಿ — ಈ ಎರಡು ಕಥೆಗಳನ್ನೂ ಸುಲಲಿತವಾಗಿ ಹೆಣೆಯಲಾಗಿದೆ. ಕಾದಂಬರಿಕಾರ ಎರಡು ಪಾತ್ರಗಳನ್ನೂ ಒಟ್ಟಿಗೆ ತರಲು ಮದಾಂ ವಾಕೇರ್‌ಳ 'ಮೈಸೋ ವಾಕೇರ್' ವಸತಿಗೃಹದ ಹಿನ್ನೆಲೆಯನ್ನು ಬಳಸಿಕೊಳ್ಳುತ್ತಾನೆ. ತರುಣ ಮಹತ್ವಾಕಾಂಕ್ಷಿ ರಾಸ್ತಿನ್ಯಾಕ್ ಗೋರಿಯೊವಿನ ಮಗಳು, ಶ್ರೀಮಂತ ಸುಂದರಿ, 'ಬಣ್ಣದ ಚಿಟ್ಟೆ' ಡೆಲ್ಫೀನ್‌ಳನ್ನು ಪ್ರೀತಿಸುವುದು ಸಹಜವಾಗಿಯೇ ತೋರುತ್ತದೆ. ಗೋರಿಯೊ ಮತ್ತು ಅವನ ಇಬ್ಬರು ಸಿರಿವಂತ ಹೆಣ್ಣು ಮಕ್ಕಳ ನಡುವಣ ಸಂಬಂಧ ರಾಸ್ತಿನ್ಯಾಕಿನ ಪಾಲಿಗೆ ರಹಸ್ಯವಾಗಿಯೇ ಉಳಿದಿದ್ದು ಅದರ ಗುಟ್ಟು ರಟ್ಟಾಗುವ ಸನ್ನಿವೇಶ ರಾಸ್ತಿನ್ಯಾಕಿನ ಬದುಕಿನ ಒಂದು ಸಂಕ್ರಮಣಘಟ್ಟವೂ ಆಗುತ್ತದೆ. ಬಾಲ್ಜಾಕ್ ವೃದ್ಧ ಗೋರಿಯೊನನ್ನು ಏಕೆ ಅಷ್ಟು ಮೂರ್ಖನನ್ನಾಗಿ ಚಿತ್ರಿಸಿದ್ದಾನೆ ಎನ್ನುವ ಇನ್ನೊಂದು ಪ್ರಶ್ನೆ ಏಳುತ್ತದೆ. ಸಹಜವಾಗಿ ಅದಕ್ಕೆ ಬಾಲ್ಜಾಕ್ ಕೊಡುವ ಉತ್ತರ ಹೀಗಿದೆ : 'ಬಹುಶಃ ಈತ (ಗೋರಿಯೊ) ಬಹಳ ಶಕ್ತಿಯುತವಾದ ಪ್ರಾಣಿ. ಈ ಮೃಗದ ಮೆದುಳಿಗೆ ತುಂಬಾ ಗಾಢವಾಗಿ ಪ್ರೀತಿಸಬಲ್ಲ ಶಕ್ತಿಯೊಂದೇ ಸಾಧ್ಯ' ? ಗೋರಿಯೊ ಸೂಕ್ಷ್ಮಬುದ್ಧಿಯ ವಿಚಾರವಂತನಾಗಿದ್ದು ತನ್ನ ಮಕ್ಕಳ ಕ್ರೌರ್ಯ ಕಪಟಗಳನ್ನು ಅರ್ಥಮಾಡಿಕೊಳ್ಳಬಲ್ಲವನಾಗಿದ್ದರೆ ಅವನ ನಿಸ್ಸಹಾಯಕತೆ ಮತ್ತು ಮೃಗೀಯವಾದ ಪುತ್ರ ವಾಂಛಲ್ಯಗಳ ಬಗ್ಗೆ ನಮ್ಮ ಹೃದಯದಲ್ಲಿ ಯಾವ ಕರುಣಾ ಭಾವನೆಯೂ ಹುಟ್ಟುತ್ತಿರಲಿಲ್ಲ, ಆಗ ಅವನ ದುರಂತತೆ ನಮ್ಮನ್ನು ಕೆರಳಿಸುತ್ತಿರಲಿಲ್ಲ. ಅದಲ್ಲದೆ ಕಾದಂಬರಿಯ ಮೊದಲ ಭಾಗದ ಉದ್ದಕ್ಕೂ ನಾವು ಅವನನ್ನು ಕಾಣುವುದು ಮದಾಂ ವಾಕೇರ್‌ಳ ಕಿಡಿಗೇಡಿತನದ ಕಣ್ಣುಗಳ ಮೂಲಕವೇ. ಉಳಿದ ವಸತಿಗೃಹ ನಿವಾಸಿಗಳ ದೃಷ್ಟಿಯಲ್ಲಿ ಗೋರಿಯೊ ಕೇವಲ ಹಾಸ್ಯಾಸ್ಪದ, ವಿಕಟ ವ್ಯಕ್ತಿ. ರಾಸ್ತಿನ್ಯಾಕ್ ತನ್ನ ಹುಡುಗಬುದ್ಧಿಗೆ ಸಹಜವಾದ ಔದಾಸೀನ್ಯದ ಕಾರಣವಾಗಿ ವೃದ್ಧ ಗೋರಿಯೊವಿನ ಅಂತರಂಗದ ಅಳಲನ್ನು, ಅವನ ನೀರಸ ನಿರರ್ಥಕ ಬದುಕನ್ನು ಅರ್ಥಮಾಡಿಕೊಳ್ಳಲಾರದೆ ಹೋಗುತ್ತಾನೆ.

ಏನೊಂದೂ ಉತ್ಪ್ರೇಕ್ಷೆಯಿಲ್ಲದೆ, ಅತಿಭಾವುಕತೆಯ ಸೋಂಕಿಲ್ಲದೆ ಬಾಲ್ಜಾಕ್

ಗೋರಿಯೊವಿನ ದುರಂತತೆಯನ್ನು ನಿರೂಪಿಸುತ್ತಾನೆ. ಅವನು ಯಾರಿಗೂ ತಿಳಿಯದಂತೆ ಕೋಣೆಯಲ್ಲಿ ಬೆಳ್ಳಿ ತಟ್ಟೆಗಳನ್ನು ಜಜ್ಜಿ ಆ ಬೆಳ್ಳಿ ಗಟ್ಟಿಗಳನ್ನು ಗುಟ್ಟಾಗಿ ಮಾರಲು ಕೊಂಡೊಯ್ಯುವ ದೃಶ್ಯವನ್ನು ಮತ್ತೆ ಇಲ್ಲಿ ನೆನಪಿಸಿಕೊಳ್ಳಬಹುದು. ಅವನ ದುಃಖ ದುಮ್ಮಾನಗಳಿಗೆ ಅಂದಿನ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳೂ ಸಹ ಕಾರಣ ವೆಂಬುದನ್ನು ಸೂಚಿಸುತ್ತಾ ಬಾಲ್ಜಾಕ್ ಗೋರಿಯೊವಿನ ಅಳಲಿನ ಆಳವನ್ನು ಚಿತ್ರಿಸುತ್ತಾನೆ. ಫ್ರಾನ್ಸಿನಲ್ಲಿನ ರಾಜಕೀಯ ವಿಪ್ಲವಗಳ ದೆಸೆಯಿಂದ ಆಹಾರದ ಬೆಲೆ ಗಗನಕ್ಕೇರಿತ್ತು. ಪ್ರಾರಂಭದಲ್ಲಿ ಗೋರಿಯೊ ಕಾಳಿನ ಮಾರುಕಟ್ಟೆಯ ಕಾಳಸಂತೆಯಲ್ಲಿ ಲಕ್ಷಗಟ್ಟಲೆ ಸಂಪಾದಿಸಿ ಹಣವಂತನಾಗಿದ್ದ. ತನ್ನ ಹೆಣ್ಣು ಮಕ್ಕಳು ಪ್ರತಿಷ್ಠಿತ ವರ್ಗದವರೊಂದಿಗೆ ವಿವಾಹವಾಗಲೆಂದು ಕೂಡಿಟ್ಟ ಹಣವೆಲ್ಲವನ್ನೂ ಅವರಿಗೆ ಬಳುವಳಿ ಕೊಟ್ಟು ನಿರ್ಗತಿಕನಾದ. ಅವನತಿಯ ದಾರಿ ಹಿಡಿದಿದ್ದ ಅಂದಿನ ಶ್ರೀಮಂತವರ್ಗಕ್ಕೆ ಮಧ್ಯಮವರ್ಗದ ಗೋರಿಯೊ ನಂಥವರ ಹಣ ಬೇಕಾಗಿತ್ತು, ಅವರ ಜೊತೆ ಸಾಮಾಜಿಕ ಸಂಪರ್ಕ ಬೇಕಿರಲಿಲ್ಲ. ಆದ್ದರಿಂದ ಅಂದಿನ ವಿವಾಹಗಳು 'ಅನುಕೂಲ ಸಿಂಧು' ವ್ಯವಸ್ಥೆಗಳಾಗಿದ್ದು ಶ್ರೀಮಂತ ಹೆಣ್ಣು-ಗಂಡುಗಳು ಬಹಿರಂಗವಾಗಿ ವಿವಾಹೇತರ ಸಂಬಂಧಗಳನ್ನು ಕಟ್ಟಿಕೊಳ್ಳುವುದು ಅನಿವಾರ್ಯವಾಗಿತ್ತು. ಹೀಗೆ ಶ್ರೀಮಂತರ ಸಹವಾಸಕ್ಕಾಗಿ ಸಂಬಂಧಕ್ಕಾಗಿ ಹಾತೊರೆಯುವ ಗೋರಿಯೊವಿನಂಥವರ ಬದುಕು ದುರಂತವಾಗುವುದು ಸಹ ಅನಿವಾರ್ಯವಾಯಿತು. ಗೋರಿಯೊವಿನ ಹೆಣ್ಣು ಮಕ್ಕಳು ಅತಿ ನಾಜೂಕಿನ ವಿಲಾಸವತಿಯರ ಮನೆಯ ನೃತ್ಯಕೂಟಗಳಿಗೆ ಹೋಗಲು ತೋರಿಸುವ ಹಂಬಲವೇ ಅವರ ಹಣದ ಪರದಾಟಕ್ಕೂ, ಅವನ ಎಲ್ಲಾ ಸಂಕಟಕ್ಕೂ ಮೂಲವಾಗುತ್ತದೆ. ಬಂಡವಾಳಶಾಹಿ ಸಮಾಜ ರೂಪು ಗೊಳ್ಳುತ್ತಿದ್ದ ಆ ಕಾಲದಲ್ಲಿ ಹಣವೇ ಸಕಲ ಮೌಲ್ಯಗಳ ಪ್ರತೀಕವಾಗಿದ್ದುದರಿಂದ 'ಹಣವಿಲ್ಲದವನ ಬದುಕು ಅರ್ಥವಿಹೀನ'ವಾಗುವುದು ಸಹ ಅನಿವಾರ್ಯವಾದ ಐತಿಹಾಸಿಕ ಸತ್ಯವಾಗಿತ್ತು.

ಇಲ್ಲಿಯೂ ಸಹ ಬಾಲ್ಜಾಕ್ ನಿರ್ಣಾಯಕವಾದ ಸತ್ಯ-ಮೌಲ್ಯಗಳನ್ನು ಪೃಥಕ್ಕರಿಸುತ್ತಾನೆ. ಘಟನೆಗಳೇ ಸೂಚ್ಯವಾದ ಸತ್ಯಸಂಗತಿಗಳಾಗುತ್ತವೆ. ವಾತ್ರೀನ್ ಮತ್ತು ರಾಸ್ತಿನ್ಯಾಕ್ ಮುಖಾಮುಖಿಯಾಗಿ ನಿಲ್ಲುವ ಸಂದರ್ಭವನ್ನು ಮತ್ತೆ ನೋಡೋಣ. ರಾಸ್ತಿ ನ್ಯಾಕ್ ಗೋರಿಯೊವಿನ ಪರ ವಹಿಸಿದ್ದರಿಂದಲೇ ವಾತ್ರೀನ್ ಅವನನ್ನು ವಿರೋಧಿಸುತ್ತಾನೆ. ಕ್ರಮೇಣ ರಾಸ್ತಿನ್ಯಾಕ್‌ಗೆ ಗೋರಿಯೊವಿನ ದುರಂತತೆಯ ಅರಿವಾದಾಗ ಅವನ ತಾರುಣ್ಯ ಸಹಜವಾದ ನ್ಯಾಯಶೀಲತೆ ಪುಟಿದೆದ್ದು, ಅವನು ಮುದುಕನ ಉನ್ನತ ಹೃದಯವಂತಿಕೆಯನ್ನು ಮೆಚ್ಚಿಕೊಳ್ಳುತ್ತಾನೆ. ಹೀಗೆ ರಾಸ್ತಿನ್ಯಾಕ್‌ನಲ್ಲಿ ಪಾರಮಾರ್ಥಿಕವಾದ ಅಂತಃಕರಣಶುದ್ಧಿ ಉಂಟಾಗಲೂ ಸಹ ಗೋರಿಯೊ ಕಾರಣನಾಗುತ್ತಾನೆ. ರಾಸ್ತಿನ್ಯಾಕ್ ಅವನನ್ನು ಮಗನಂತೆ ನೋಡಿಕೊಂಡು ತನ್ನಲ್ಲಿದ್ದ ಪುಡಿಗಾಸುಗಳನ್ನು ಅವನ

ಶುಶ್ರೂಷೆಗೋಸ್ಕರ ಖರ್ಚು ಮಾಡುತ್ತಾನೆ. ತನ್ನ ಅತ್ಯಮೂಲ್ಯವಾದ ಗಡಿಯಾರವನ್ನೂ ಸಹ ಗಿರವಿ ಇಟ್ಟು ಹಣ ಹೊಂದಿಸುತ್ತಾನೆ. ಈ ಮುದುಕ ಸತ್ತು ಮಣ್ಣಾದ ನಂತರವೇ ಇವನ ಹೃದಯವಂತಿಕೆ ಪುನಃ ಜಡವಾಗುತ್ತದೆ ಎಂಬುದು ಈ ಕಥೆಯಲ್ಲಿನ ಇನ್ನೊಂದು 'ದುರಂತ ಕಟಕಿ'.

'ಪೇರ್ ಗೋರಿಯೊ' ಕೇವಲ ತಂದೆ ಮಕ್ಕಳ ಸಂಬಂಧದ ಘೋರ ದುರಂತದ ಕಥೆಯಲ್ಲ. ಬಾಲ್ಜಾಕ್ ಹೇಳುವಂತೆ ಅದು 'ವ್ಯಗ್ರವಾದ ವ್ಯಸನ-ವ್ಯಥೆಗಳಿಂದ ತುಂಬಿ ತುಳುಕುವ ಒಂದು ಸಮಾಜದ ನೈತಿಕ ರೋಗರುಜಿನಗಳ ಚಾರಿತ್ರಿಕ ದಾಖಲೆ'ಯೂ ಹೌದು.

ವಿಕ್ಟರ್ ಹ್ಯೂಗೊ : 'ಲೇ ಮಿಸೆರಾಬ್ಲೆ'

ಪ್ರಶಾಂತ್ ಮಾಡ್ತ

ಬಲಿತರೂ ದಲಿತರೂ ಅಕ್ಕಪಕ್ಕದಲ್ಲಿರುವ ಕೊಳಕು ವ್ಯವಸ್ಥೆಯನ್ನು ಸರ್ವಮಾನ್ಯ ಸ್ಥಿತಿಯೆಂದು ಇಂದು ಯಾರೂ ಒಪ್ಪಿಕೊಳ್ಳಲಾರರು. ಇಂತಹ ವ್ಯವಸ್ಥಿತ ಅನ್ಯಾಯವನ್ನು ಹೋಗಲಾಡಿಸುವುದೇ ತನ್ನ ಮುಖ್ಯ ಕಾಳಜಿಯನ್ನಾಗಿ ಇತ್ತೀಚಿಗಿನ ಸಾಹಿತ್ಯ ಒಪ್ಪಿಕೊಂಡಿದೆ. ಕೇವಲ ಉದ್ಗಾರಗಳನ್ನು ಹುಟ್ಟಿಸುವ ರಸಭರಿತ ಕಾವ್ಯ ಸಾಕಾಗದು, ಸಾಹಿತ್ಯ ಮಾನವನ ಕಣ್ಣೀರಿನ ಕಥೆಯನ್ನು ಕಲಾತ್ಮಕಗೊಳಿಸಬೇಕು, ಅವನ ಅತ್ಯಂತ ಕಾಳಜಿಗಳಿಗೆ ಪ್ರತಿಸ್ಪಂದಿಸಬೇಕು ಎನ್ನುವುದು ಇಂದಿನ ಸಾಹಿತ್ಯಿಕ ಧೋರಣೆ. ಶೋಷಿತ ಬದುಕಿನ ಹಾಗೂ ಪ್ರಚಲಿತ ದೀನ-ದಲಿತರ ಸಮಸ್ಯೆಗಳ ಕುರಿತು ಬರಹಗಾರ ಗಂಭೀರವಾಗಿ ಯೋಚಿಸುವುದು ಅತ್ಯಗತ್ಯ. ನಿರ್ಮಮ ನಿಲವು ಇಂದಿಗಂತೂ ತಕ್ಕುದಲ್ಲ.

ಹತ್ತೊಂಬತ್ತನೇ ಶತಮಾನದ ಫ್ರೆಂಚ್ ಲೇಖಕ ವಿಕ್ಟರ್ ಹ್ಯೂಗೊ ಇಂತಹ ಸಾಮಾಜಿಕ ಪ್ರಜ್ಞೆಯನ್ನು ಅಂದೇ ಪ್ರದರ್ಶಿಸಿದ್ದ. ಅವನ ಅಮರ ಕಾದಂಬರಿ 'ಅಭ್ಯಾಗತರು' ('ಲೇ ಮಿಸೆರಾಬ್ಲೆ' Les Miserables) ದಲಿತರ ಬಗ್ಗೆ ಅವನಿಗಿದ್ದ ಕಾಳಜಿಯನ್ನು ದಟ್ಟವಾಗಿ ಪ್ರದರ್ಶಿಸುತ್ತದೆ. ಒಂದು ಜನಾಂಗದ ಚರಿತ್ರೆಯ ಏರಿಳಿತಗಳನ್ನೇ ಹ್ಯೂಗೊ ಚಿಂತನೆಯಾಗಿ ಮಾರ್ಪಡಿಸಿದ್ದಾನೆ.

ಸಾಹಿತ್ಯ ಹಾಗೂ ಕಲೆಗಳ ಪುನರುಜ್ಜೀವನ, ಪರಿಷ್ಕರಣ, ರಾಜಕೀಯ ಕ್ರಾಂತಿಯೊಂದಿಗೆ ಬೆರೆತುಬಂದ ಸಾಮಾಜಿಕ ಕ್ರಾಂತಿ– ಇವು ಯೂರೋಪಿನ ಚರಿತ್ರೆಯ ಮೂರು ಮಹತ್ವದ ಹಂತಗಳು. 1789ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿ ನಡೆಯಿತು. ರಾಜತ್ವದ ಭದ್ರಗೋಡೆ ಕುಸಿದುಬಿದ್ದು, ಅದು ಒಳಗೊಂಡಿದ್ದ ಕೊಳಕು ವ್ಯವಸ್ಥೆಯನ್ನು ಕ್ರಾಂತಿ ಬಯಲುಗೊಳಿಸಿತು. ರಾಜಪ್ರಭುತ್ವವನ್ನು ತಳ್ಳಿ ಆ ಸ್ಥಾನವನ್ನು ಆಕ್ರಮಿಸಿದ್ದ ಪ್ರಜಾಪ್ರಭುತ್ವದಲ್ಲಿ ಇರಬಹುದಾದ ಹುಳುಕುಗಳನ್ನೂ ಬೊಟ್ಟಿಟ್ಟು ತೋರಿಸಿತು. ಪ್ರಜಾಪ್ರಭುತ್ವದ ಹೆಸರಿನ ತೆರೆಮರೆಯಲ್ಲೇ ಕೆಲವರು ಪ್ರಭುಗಳಾಗುವ ಸಾಧ್ಯತೆ ಇಲ್ಲದಿಲ್ಲ. ಯಾವುದೇ ಕ್ರಾಂತಿಯೂ ತನ್ನ ಪ್ರಭಾವದಲ್ಲಿ ಪರಿಮಿತವಾದುದಲ್ಲ. ಫ್ರೆಂಚ್ ಕ್ರಾಂತಿಯೊಂದಿಗೆ ಆ ಸಮಾಜದ ಸಂಪ್ರದಾಯಬದ್ಧ ಮೌಲ್ಯಗಳೆಲ್ಲಾ ರಾಜತ್ವದೊಂದಿಗೆ ಕುಸಿದುಬಿದ್ದು, ಸಮಾಜದ ಗಟ್ಟಿ ನೆಲವೇ ಅದುರಿತು. ಊಳಿಗಮಾನ್ಯ ಪದ್ಧತಿ, ಧರ್ಮ ಇರಗೊಳಿಸಿದ ಸ್ಥಿರವ್ಯವಸ್ಥೆ, ಆಸ್ಥಾನ ಸಂಸ್ಕೃತಿ ಕಾಲಕ್ರಮೇಣ ಅವನತಿಯನ್ನೈದಿತು. ಈತನಕ ಸಮಾಜ ಕಣ್ಣುಮುಚ್ಚಿ ಒಪ್ಪಿಕೊಂಡ ವರ್ಗ ಪ್ರತಿಷ್ಠೆಯ ವ್ಯವಸ್ಥೆ ಸರ್ವಸಮಾನತೆಯತ್ತ ಹೊರಳುತ್ತಿತ್ತು. ಇವೆಲ್ಲಾ ಹಠಾತ್ ಕ್ರಾಂತಿಕಾರಕ ಬದಲಾವಣೆಗಳಾದ ಕಾರಣವಾಗಿ,

ವ್ಯಕ್ತಿ-ಸಮಾಜ ಸಂಬಂಧಗಳೂ ಏರುಪೇರಾದುವು. ವ್ಯಕ್ತಿ ಏಕಾಂಗಿಯಾದ, ವೈಯಕ್ತಿಕತೆಯ ಮೇಲೆ ಒತ್ತುಬಿದ್ದ ಕಾರಣ ಅನ್ಯಭಾವದ ನೆರಳೂ ಬಿತ್ತು, ಅಹಂನಿಷ್ಠೆಯ ಅತಿರೇಕತೆ ಸಮಾಜಕ್ಕೆ ಶಾಪವಾಗಿ ವ್ಯವಸ್ಥೆ ಶಿಥಿಲಗೊಂಡಿತು. ಸಮಾಜದ ಹಠಾತ್ ಬದಲಾವಣೆಯ ಪ್ರಭಾವವಲಯದಿಂದ ದೂರ ಸರಿದು ಹೊರನಿಲ್ಲುವ ಅನನ್ಯತೆ ಸಾಹಿತ್ಯಕ್ಕಿಲ್ಲವಾದುದರಿಂದಾಗಿ, ಅದೂ ಅಹಂನಿಷ್ಠವಾಗಲೇಬೇಕಾಯಿತು. ಸಾಹಿತ್ಯದ ರೂಪರೇಷೆಗಳನ್ನೂ ಮಾನದಂಡಗಳನ್ನೂ ನಿರ್ಧರಿಸುವ ಜನರ ಅಧಿಕಾರವೂ ಕಡಿಮೆಯಾದ ಕಾರಣ, ಸಾವಿರಾರು ಸ್ವತಂತ್ರ ನಿಲವುಗಳು ತಲೆದೋರಿದುವು. ಗಟ್ಟಿ ನೆಲವೆಂದು ಭ್ರಮಿಸಿದ ಸಂಪ್ರದಾಯಬದ್ಧತೆಯೇ ಕುಸಿದಾಗ, ಧರ್ಮಕ್ಕೂ ನೈತಿಕತೆಗೂ, ಇವೆರಡೂ ಇರಗೊಳಿಸುವ ಸಾಮರಸ್ಯಕ್ಕೂ ಸಂಬಂಧವಿದೆ ಎಂದು ತಿಳಿಯುವಂತಾಯಿತು. ಯೂರೋಪಿನಲ್ಲಿ ಸಂಭವಿಸಿದ ಈ ಸಂದಿಗ್ಧಯುಗದ ಅಮೂಲ್ಯ ಚಿಂತನೆಯೆಂದರೆ – 'ಕ್ರಾಂತಿಯನ್ನು ಒತ್ತಾಯಿಸುವ, ಕ್ರಾಂತಿಯ ಮೂಲಕಾರಣವಾದ ಅನ್ಯಾಯ ವ್ಯವಸ್ಥೆ, ಕೊಳಕು ಸ್ಥಿತಿಯೇ ಅನೈತಿಕ ಬದುಕಿಗೂ ಮೂಲಕಾರಣವಾಗಿರುತ್ತದೆ' ಈ ಚಿಂತನೆಯ ಫಲವಾಗಿ ಫ್ರಾನ್ಸಿನಲ್ಲಿ ಧಾರ್ಮಿಕ ಜಾಗೃತಿ ಪುನಃ ಮೂಡಿತು. ಈ ರೀತಿಯ ನೈತಿಕ, ಧಾರ್ಮಿಕ ಪುನಶ್ಚೇತನವೇ ಫ್ರೆಂಚ್ ರೊಮ್ಯಾಂಟಿಕ್ ಚಳುವಳಿಯ ಮುಖ್ಯ ಲಕ್ಷಣ. ಇಂತಹ ಚಿಂತನೆಗಳು ಹ್ಯೂಗೊ ಬರೆದ 'ಅಭ್ಯಾಗತರು' (ಲೇ ಮಿಸೆರಾಬ್ಲೆ) ಕಾದಂಬರಿಯಲ್ಲಿ ಗಾಢವಾಗಿ ಮೂಡಿಬಂದಿದೆ.

ಹ್ಯೂಗೋ ಫ್ರೆಂಚ್ ರೊಮ್ಯಾಂಟಿಕ್ ಸಂಪ್ರದಾಯದ ಮುಂಚೂಣಿಯಲ್ಲಿದ್ದವನು. ಹದಿನೇಳನೇ ಶತಮಾನದ ಕ್ಲಾಸಿಕಲ್ ಮನೋಭಾವ ಬದುಕನ್ನು ಆವರಿಸಿದ್ದಾಗ, ಅದೇ ಬದುಕಿನ ಕಲ್ಪನೆಯನ್ನು ಪುನರ್‌ವಿಮರ್ಶೆಗೆ ತೊಡಗಿಸಿದವರಲ್ಲಿ ಅವನೂ ಒಬ್ಬ. ಆ ಕಾಲದ ಸಾಹಿತ್ಯದ ಸಂಪ್ರದಾಯನಿಷ್ಠೆ ಮೂರು ರೀತಿಗಳಲ್ಲಿ ಕಂಡುಬರುತ್ತಿತ್ತು : ಮೊದಲನೆಯದಾಗಿ, ಸೌಂದರ್ಯದ ಮಾನದಂಡ ಕೆಲವೇ ಪಂಡಿತರು ರೂಪಿಸಿದ್ದ ತರ್ಕ ಸಿದ್ಧಾಂತವನ್ನು ಅವಲಂಬಿಸಿತ್ತು. ರಾಮಣೀಯಕವೆಂದು ಬಿಸುಸುಯ್ದ ಮಾತ್ರಕ್ಕೆ ಕಾವ್ಯ ಘಟಿಸುತ್ತಿರಲಿಲ್ಲ, ಬದಲಾಗಿ ಈಗಾಗಲೇ ವಿಧಿಸಿದ್ದ ಲಕ್ಷಣಗಳಿಗೆ ಹೊಂದಿಕೊಂಡಿರಬೇಕಾಗಿತ್ತು. ಮಹಾಕಾವ್ಯ, ನಾಟಕಗಳಿಗೆ ಇರುವಷ್ಟು ಮಹತ್ತು ಭಾವಗೀತೆಗಳಿಗಿರಲಿಲ್ಲ. ಎರಡನೆಯದಾಗಿ, ಇಂತಹ ಸಾಹಿತ್ಯ ಸಂಪ್ರದಾಯಗಳಲ್ಲಿ ಬಳಸುವ ಪದಗಳಿಗೂ ಮಡಿ ಮೈಲಿಗೆಗಳನ್ನು ಅಂಟಿಸಿದ್ದರು. ಜಾನಪದ ಪದಗಳನ್ನು ಮಹಾಕಾವ್ಯಗಳಲ್ಲಿ ಬಳಸುವುದು ತಕ್ಕುದಾಗಿರಲಿಲ್ಲ. ಇದೇ ಕಾರಣವಾಗಿ ಸಾಹಿತ್ಯ ಕೃತಿಗಳು ಉತ್ಸವಮೂರ್ತಿಗಳಾದುವೇ ವಿನಾ ಜನಮನವನ್ನು ತಟ್ಟಲಿಲ್ಲ. ಮೂರನೆಯದಾಗಿ, ಕೃತಕವಾಗಿದ್ದ ಕಾರಣ ಸಾಹಿತ್ಯ ಕೃತಿಗಳು ಆದರ್ಶವಲಯದಲ್ಲೇ ಉಳಿದು, ಧರ್ಮವನ್ನೂ ಅದೇ ವಲಯದಲ್ಲಿ

ಉಳಿಸಿದುವು. ಇದರಿಂದಲೇ ಧಾರ್ಮಿಕ ಮನೋಭಾವ ಅಳಿಯಿತು. ರೊಮ್ಯಾಂಟಿಕ್ ಚಳುವಳಿ ಈ ಮೂರೂ ಅವಗುಣಗಳನ್ನು ಪ್ರಬಲವಾಗಿ ವಿರೋಧಿಸಿ, ತದ್ವಿರುದ್ಧಲಕ್ಷಣಗಳನ್ನು ಮೈಗೂಡಿಸಿಕೊಂಡು ಬೆಳೆಯಿತು ಎನ್ನಬಹುದು. ಅಧಿಕಾರಶಾಹಿ ಮನೋಭಾವದ ಬದಲು ಅಹಂನಿಷ್ಠತೆ ತಲೆದೋರಿ, ''ರೊಮ್ಯಾಂಟಿಕ್ ಚಳುವಳಿಯೆಂದರೆ ಕಲಾ ಸ್ವಾತಂತ್ರ್ಯ'' ಎಂದು ಹ್ಯೂಗೊ ಅನ್ನುವಂತಾಯಿತು. ಅಹಂನಿಷ್ಠತೆಯೊಂದಿಗೆ ಹೃದಯವನ್ನು ತಟ್ಟುವ ಭಾಷಾಬಳಕೆ ಬಂತು. ಪೌರಾಣಿಕ ಕಥಾವಸ್ತುಗಳನ್ನು ಪಕ್ಕಕ್ಕೆ ತಳ್ಳಿ , ಕ್ರೈಸ್ತ ಧರ್ಮದ ಮೂಲಭೂತ ಧೋರಣೆಯಾದ ಮಾನವೀಯತೆಯ ವಿನ್ಯಾಸವನ್ನು ಕಥಾನಕಗಳಲ್ಲಿ ರೂಪಿಸಿದರು. ಒಟ್ಟಿನಲ್ಲಿ ಜೀವನಾನುಭವದ ವಿಶಿಷ್ಟ ದೃಷ್ಟಿಕೋನವೇ ಸಾಹಿತ್ಯ ಚಳುವಳಿಯಾಯಿತು. ಪ್ರೇಮ, ಧರ್ಮ, ಸಾಹಸಗಳು ಸಾಹಿತ್ಯಚೇತನವಾದುವು. ಸಾಮಾನ್ಯ ಜೀವನದ ಸರಳ, ಸಾಧಾರಣ ಸಂಗತಿಗಳತ್ತ ಕೊಟ್ಟ ಗಮನವೇ ರೊಮ್ಯಾಂಟಿಕ್ ಸಾಹಿತ್ಯದ ಮುಖ್ಯ ಸಾಧನೆ.

2

ವಿಕ್ಟರ್ ಮಾರಿ ಹ್ಯೂಗೊ (1802-1885) ಫ್ರೆಂಚ್ ಸಾಹಿತ್ಯದಲ್ಲಿ ಮೈಲುಗಲ್ಲೊಂದನ್ನು ಸ್ಥಾಪಿಸಿದ ಹಲವು ಆಯಾಮಗಳ ಪ್ರತಿಭಾವಂತ ಸಾಹಸಿ. ಕವಿಯಾಗಿ, ನಾಟಕಕಾರನಾಗಿ, ಕಾದಂಬರಿಗಳನ್ನು ಬರೆದು, ಪ್ರಬಂಧಕಾರ, ವಿಮರ್ಶಕನಾಗಿ ಒಂದು ಯುಗದ ಸಾಹಿತ್ಯ ಸಂಪ್ರದಾಯದಲ್ಲಿ ಕೈಯಾಡಿಸಿದ ವ್ಯಕ್ತಿ. ಪರಿಮಾಣ, ಗುಣ, ವೈವಿಧ್ಯತೆಯಲ್ಲಿ ಅವನ ಪ್ರಭಾವ ಅತ್ಯಂತ. ಸಮಕಾಲೀನ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಏರಿಳಿತ, ಆಗುಹೋಗುಗಳ ಬಗ್ಗೆ ಜಾಗೃತಪ್ರಜ್ಞೆಯನ್ನು ಇರಿಸಿಕೊಂಡಿದ್ದ ಅವನ ನಿಲುವುಗಳು ಅವನ ಬರಹದಲ್ಲಿ ಪ್ರತಿಫಲಿತವಾಗಿವೆ. ಬಾಲ್ಯದಲ್ಲಿ ರಾಜತ್ವದ ಹಿರಿಮೆಯನ್ನು ಕಣ್ಣುಮುಚ್ಚಿ ಒಪ್ಪಿದವನು, ಕೊನೆಗೆ ಪ್ರಜಾಪ್ರಭುತ್ವಕ್ಕೆ ನಿಷ್ಠನಾಗಿ, ಉದಾರ ಮಾನವತಾವಾದಿಯಾದ. ಹ್ಯೂಗೊ ಹುಟ್ಟಿದ್ದು ಫ್ರಾನ್ಸಿನ ಬೆಸಂಸ್ವಾಂ ಎಂಬಲ್ಲಿ, 1802ರ ಫೆಬ್ರವರಿ 26ರಂದು. ಅವನ ತಂದೆ, ನೆಪೋಲಿಯನ್ ಚಕ್ರವರ್ತಿಯ ನಿಷ್ಠ ಸೇನಾಧಿಪತಿ. ತಾಯಿ, ರಾಜತ್ವಕ್ಕೆ ಅಂಟಿಕೊಂಡವಳು. ತದ್ವಿರುದ್ಧ ರಾಜಕೀಯ ಧೋರಣೆಗಳನ್ನು ನಂಬಿದ ಇವರ ವೈವಾಹಿಕ ಜೀವನ ಸುಲಭವಾಗಿ ವಿಘಟಿತವಾಯಿತು. ಹ್ಯೂಗೊ ಜೀವನದಲ್ಲಿ ಅವನ ತಾಯಿಯ ಪ್ರಭಾವ ಅಪಾರ. ಆದುದರಿಂದಲೇ ಮೊದಮೊದಲು ರಾಜತ್ವವನ್ನೇ ಒಪ್ಪಿಕೊಂಡು, ಬೆಳೆದಂತೆ ಪ್ರಜಾಪ್ರಭುತ್ವದ ಒಳಿತುಗಳನ್ನು ಅರಿತುಕೊಂಡ. 1885ರಲ್ಲಿ ನಿಧನಹೊಂದಿದ ಹ್ಯೂಗೊ ಶವವನ್ನು, ಅವನು ಬದುಕಿದ್ದಾಗ ಪ್ರಕಟಿಸಿದ ಕೋರಿಕೆಯಂತೆ, ಬಡವರಿಗಿರುವ ಶವಪೆಟ್ಟಿಗೆಯಲ್ಲೇ ಸಾಗಿಸಲಾಯಿತು. ಬದುಕಿನಲ್ಲೂ, ಸಾವಿನಲ್ಲೂ

ಲೋಕದ ಅಭ್ಯಾಗತ ಜನತೆಯೊಂದಿಗೆ ತನ್ನನ್ನೇ ಸಮೀಕರಿಸಿಕೊಂಡ ಹ್ಯೂಗೊ, ದಲಿತಸಾಹಿತ್ಯ ಕ್ಷೇತ್ರದಲ್ಲಿ ಚಿರಂಜೀವಿ.

ತನ್ನ ಹದಿವಯಸ್ಸಿನಲ್ಲೇ ಕವನಗಳನ್ನು ಬರೆಯಲು ಪ್ರಾರಂಭಿಸಿದ ಹ್ಯೂಗೊ, 'ಫ್ರಾನ್ಸಿನ ಮಹಾಕವಿ' ಎನಿಸಿದ. ಪ್ರಕೃತಿ, ಸಾವು, ದುಮ್ಮಾನ, ಬದುಕು, ಬಾಲ್ಯ, ಜೀವನ – ಇವು ಅವನ ಕವನಗಳಲ್ಲಿ ಪುನಃ ಪುನಃ ಮೂಡಿಬರುವ ವಿಚಾರಗಳು. 'ಶರತ್ ಕಾಲದ ಎಲೆಗಳಲ್ಲಿ' (1831) ದುಮ್ಮಾನವೇ ಮುಖ್ಯ ಆಶಯ. 'ಸಂಧ್ಯಾ ಹಾಡುಗಳು' ಕವನಗಳಲ್ಲಿ ಮಾನಸಿಕ ಆತಂಕ, ಆಕಾಂಕ್ಷೆಗಳು ಸಾಂದ್ರವಾಗಿ ಮೂಡಿಬಂದಿವೆ. 'ಕವಿಯ ಗುರಿ' (1840) ಯಲ್ಲಿ ಕವಿಯ ಸ್ಥಾನಮಾನಗಳನ್ನು ಗುರುತಿಸಿ, ''ಕವಿ ತಾರೆಯಂತೆ, ಮಾನವಚರಿತ್ರೆಯನ್ನು ಮಹತ್ತಿನತ್ತ ಸೆಳೆದೊಯ್ಯುವವನು'' ಎಂದಿದ್ದಾನೆ. ಸಮಾಜದಲ್ಲಿ ಕವಿಗಳಿಗೆ ಅಗ್ರಪಟ್ಟ ಕಟ್ಟಿ ಅವನು ಪ್ರವಾದಿಯೂ ಹೌದು, ಋಷಿಯೂ ಹೌದು, ಯುಗದ ಪ್ರತಿನಿಧಿಯಾಗಿ ಕವಿ ಸಮಾಜವನ್ನು ಪ್ರತಿಬಿಂಬಿಸುತ್ತಾನೆ ಎಂಬ ದೃಷ್ಟಿಕೋನವನ್ನಿಟ್ಟುಕೊಂಡಿದ್ದ. ಮಾನವಚರಿತ್ರೆ ಅಸತ್ ಅನ್ಯಾಯಗಳಿಂದ ಮುಕ್ತಿಯತ್ತ ಸಾಗುತ್ತಿದೆ ಎಂಬ ಕಾವ್ಯವಸ್ತುವನ್ನಿಟ್ಟುಕೊಂಡು 'ಶತಮಾನಗಳ ಕಥೆ' ಎಂಬ ಮಹಾಕಾವ್ಯವನ್ನು ರಚಿಸಿದ. ಬಾಲ್ಯಬದುಕಿನ ಬಗ್ಗೆ ಹಳಹಳಿಕೆ, ಕೌಟುಂಬಿಕ ಜೀವನದ ಮಾಧುರ್ಯಗಳು — ಇವುಗಳ ಬಗ್ಗೆ ಹ್ಯೂಗೊ ಬರೆದಷ್ಟು ಚೆನ್ನಾಗಿ ಇನ್ನಾವ ಫ್ರೆಂಚ್ ಕವಿಯೂ ಬರೆದಿಲ್ಲ. ಅವನು ರೂಪಕಗಳ ರಾಜ.

ಹ್ಯೂಗೋನ 'ಹೆರ್ನಾನಿ' (1830) ಮತ್ತು 'ಕ್ರಾಮ್‌ವೆಲ್' (1827) ಫ್ರೆಂಚ್ ಸಾಹಿತ್ಯದ ಚಿರಸ್ಥಾಯಿ ಗ್ರಂಥಗಳು. 'ಹೆರ್ನಾನಿ' ಹೊಸ ಕಾವ್ಯ ಸಂಪ್ರದಾಯವನ್ನು ಸೃಜಿಸಿತು ಮಾತ್ರವಲ್ಲ, ಫ್ರೆಂಚ್ ಸಾಹಿತ್ಯದಲ್ಲಿ ಹುಮ್ಮಸ್ಸನ್ನು ತುಂಬಿತು. ಅವನು ಬರೆದ ನಾಟಕಗಳಿಗೆ ಚಾರಿತ್ರಿಕ ಘಟನೆಗಳನ್ನು ಆಧಾರವಾಗಿಟ್ಟುಕೊಂಡರೂ, ಅವುಗಳಿಗೆ ಪೂರ್ಣನಿಷ್ಠನಾಗಿರಲಿಲ್ಲ, ಕಾಲ್ಪನಿಕ, ಭಾವತೀವ್ರತೆಯ, ಸಾತ್ವಿಕಗುಣಗಳಿಗೆ ಚರಮ ಜಯವನ್ನು ಒದಗಿಸಿಕೊಡುವ, ವಾಸ್ತವಿಕತೆಯಿಂದ ಆದರ್ಶದತ್ತ ಪದೇಪದೇ ಹೊರಳುವ ಕಥಾಗತಿ, ಹ್ಯೂಗೊ ಕೃತಿಗಳಲ್ಲಿ ಎದ್ದು ಕಾಣುವ ಅಂಶ.

ಕಾದಂಬರಿ ಕ್ಷೇತ್ರದಲ್ಲಂತೂ ಹ್ಯೂಗೊ ಸಫಲನಾದ ಸಾಹಿತಿ. 'ಖೈದಿಯ ಕೊನೆಯ ದಿನ' (1829) ಎಂಬ ಕಾದಂಬರಿಯ ಮೂಲಕ ಗಲ್ಲುಶಿಕ್ಷೆಯನ್ನು ತೀವ್ರವಾಗಿ ವಿರೋಧಿಸಿದ. 'ನಗಾಡುವ ವ್ಯಕ್ತಿ', 'ತೊಂಬತ್ಮೂರು' ಎಂಬವು ಅವನ ಇತರ ಕಾದಂಬರಿಗಳು. ಆದರೆ ಹ್ಯೂಗೊ ಜೀವನದೃಷ್ಟಿಯನ್ನು ಶೋಧಿಸಲು ಮೂರು ಕಾದಂಬರಿಗಳು ಸಹಾಯಕವಾಗಿವೆ. 'ಪ್ಯಾರಿಸ್ಸಿನಲ್ಲಿ ನೋತ್ರೆದಾಮ್', 'ಸಮುದ್ರದಲ್ಲಿ ಸಂಕಷ್ಟಗಳು' ಹಾಗೂ 'ಅಭ್ಯಾಗತರು' (1862) ಕಾದಂಬರಿಗಳಲ್ಲಿ ಲೇಖಕನ ಒಟ್ಟು ದೃಷ್ಟಿಯನ್ನು

ಗುರುತಿಸಬಹುದಾಗಿದೆ. ಹ್ಯೂಗೊ ಅಭಿಮತದಂತೆ ಧರ್ಮ, ಸಮಾಜ, ಪ್ರಕೃತಿಗಳು ಮಾನವನ ಮೂರು ಮೂಲಭೂತ ಆವಶ್ಯಕತೆಗಳು. ಮಾನವನಿಗೆ ನಂಬಿಕೆ ಬೇಕು, ಆದುದರಿಂದ ಧರ್ಮವ್ಯವಸ್ಥೆಯ ಆವಶ್ಯಕತೆ ; ಅವನು ಸೃಜಿಸಬೇಕು, ಆದುದರಿಂದ ಸಮಾಜ, ಸಂಸ್ಕೃತಿಗಳು ; ಮಾನವ ಬಾಳಬೇಕು, ಈ ಕಾರಣವಾಗಿ ಕೃಷಿ, ವಾಣಿಜ್ಯಗಳೊಂದಿಗೆ ಪ್ರಕೃತಿ ಸಂಬಂಧ. ಈ ಮೂರು ಮೂಲಭೂತ ಆವಶ್ಯಕತೆಗಳನ್ನು ತೃಪ್ತಿಪಡಿಸುವ ಪ್ರಕ್ರಿಯೆಯೇ ಅವನು ಎದುರಿಸಬೇಕಾದ ಮೂರು ಸಂಘರ್ಷಗಳಿಗೂ ಕಾರಣವಾಗುತ್ತವೆ. ಮಾನವನಿಗೂ ಸಂಪ್ರದಾಯಬದ್ಧ ಸಿದ್ಧಾಂತಗಳಿಗೂ ಕಾನೂನುಗಳಿಗೂ ವಸ್ತುವಿಷಯಗಳಿಗೂ ಸದಾ ತಿಕ್ಕಾಟ ನಡೆಯುತ್ತಿರುತ್ತದೆ. 'ಪ್ಯಾರಿಸ್ಸಿನಲ್ಲಿ ನೋತ್ರೆದಾಮ್' ಕಾದಂಬರಿಯಲ್ಲಿ ಕುರುಡು ನಂಬಿಕೆಗಳನ್ನು ಖಂಡಿಸಿದರೆ, 'ಸಮುದ್ರದಲ್ಲಿ ಸಂಕಷ್ಟಗಳು' ಕೃತಿಯಲ್ಲಿ ಪ್ರಕೃತಿಯ ವಿರುದ್ಧ ಮಾನವನ ಹೋರಾಟವನ್ನು ಗುರುತಿಸಿದ. 'ಅಭ್ಯಾಗತರು' ಕಾದಂಬರಿಯಲ್ಲಿ ಸಮಾಜದಲ್ಲಿ ಅಡಕವಾಗಿರುವ ಕಾನೂನು ವ್ಯವಸ್ಥೆಯ ಅಸ್ತವ್ಯಸ್ತತೆಯನ್ನೇ ಹೀಗಳೆದ.

3

'ಲೇ ಮಿಸೆರಾಬ್ಲೆ' ಅಥವಾ 'ಅಭ್ಯಾಗತರು' ಕಾದಂಬರಿ ಅತ್ತ ಚಾರಿತ್ರಿಕವೂ ಅಲ್ಲ, ಬರೇ ಕಾಲ್ಪನಿಕ ಎನ್ನುವಂತೆಯೂ ಇಲ್ಲ. ಅದೊಂದು ಮಿಶ್ರತಳಿಯ ಕೃತಿ. ಚಾರಿತ್ರಿಕ ಘಟನೆಗಳಿಗೆ ಕಾಲ್ಪನಿಕ ಅಂಶಗಳ ರಂಗನ್ನು ಏರಿಸಿ ಬರೆದ ಚಾರಿತ್ರಿಕ-ಸಾಮಾಜಿಕ ಕಾದಂಬರಿ. ಪೂರ್ಣ ಚಾರಿತ್ರಿಕವಾದರೆ ಅದು ಕಾದಂಬರಿಯಲ್ಲ. ಆದುದರಿಂದ ಸಾಮಾನ್ಯ ವ್ಯಕ್ತಿಗಳನ್ನೇ ಮುಖ್ಯಪಾತ್ರಗಳನ್ನಾಗಿ ಸೃಜಿಸಿ, ಯಾವುದೋ ಚಾರಿತ್ರಿಕ ಸಂದರ್ಭದ ಚೌಕಟ್ಟಿನಲ್ಲಿರಿಸುವ ಚಾಕಚಕ್ಯತೆಯನ್ನು ಹ್ಯೂಗೋ ರೂಢಿಸಿಕೊಂಡಿದ್ದಾನೆ. 'ಅಭ್ಯಾಗತರು' ಕಾದಂಬರಿ, ಇತರ ಸಾಮಾಜಿಕ ಕಾದಂಬರಿಗಳಂತೆ ಲಂಬಿತವಾಗಿದ್ದು, ತನ್ನ ವ್ಯಾಪಕ ಹರವಿನಿಂದಾಗಿ ಸಮಾಜದ ವಿವಿಧ ಮುಖಗಳನ್ನು ಗರ್ಭೀಕರಿಸುತ್ತಾ ಹೋದಂತೆ, ನಾಟಕೀಯ ಕಾದಂಬರಿಯ ಸಾಂದ್ರತೆಯೂ ಇದೆ. ಪಾತ್ರಗಳು ಜೀವಂತಿಕೆಯಿಂದ ಕೂಡಿವೆ, ತಿಕ್ಕಾಟಗಳ ತೀವ್ರತೆ ಇದೆ. ಒಂದು ಪ್ರಮುಖ ಘರ್ಷಣೆಯೊಳಗೆ, ಹಲವು ಹೋರಾಟಗಳ ಸರಪಣಿ. ರೊಮ್ಯಾಂಟಿಕ್ ಯುಗದ ಕಾದಂಬರಿಯಾಗಿ 'ಅಭ್ಯಾಗತರು' ಚಾರಿತ್ರಿಕ–ಕಾಲ್ಪನಿಕ ಅಂಶಗಳಿಂದ ಕೂಡಿದೆ. ತನ್ನ ಜನಪ್ರಿಯತೆಯ ತುತ್ತ ತುದಿಯಲ್ಲಿ ಬರೆದು ಮುಗಿಸಿದ ಈ ಕಾದಂಬರಿಯಲ್ಲಿ ಚಾರಿತ್ರಿಕ ಘಟನೆಗಳನ್ನು ಗುರುತಿಸಬಹುದು. ರಾಜತ್ವವನ್ನು ಕೊನೆಗೊಳಿಸುವುದಾಗಿ ವಾಗ್ದಾನವಿತ್ತು ತಾನೇ ಸಿಂಹಾಸನಾರೂಢನಾಗಿ, ಪ್ರಜಾಪ್ರಭುತ್ವದ ಮೂಲಕವೇ ಪ್ರಭುವಾಗಲು

ಹವಣಿಸಿದ ನೆಪೋಲಿಯನನ್ನು ಖಂಡಿಸಿ, ದೇಶಬಾಹಿರನಾದಾಗ ಬರೆದ ಕಾದಂಬರಿ ಇದು. 'ಲೇ ಮಿಸೆರಾಬ್ಲೆ' ಎಂದರೆ ದಲಿತರು, ಶೋಷಿತರು, ಅಭ್ಯಾಗತರು. ಈ ಶಿರೋನಾಮೆ ನಾಮಪದವೂ ಹೌದು, ಗುಣವಾಚಕವೂ ಹೌದು. ಅಭ್ಯಾಗತ ಮಂದಿಯ ಬಗ್ಗೆ ಕಳಕಳಿ, ಬೆವರು, ಕಣ್ಣೀರು, ಶೋಷಣೆಗಳ ಮೇಲೆ ಕಟ್ಟಿದ ಅಮಾನುಷ ವ್ಯವಸ್ಥೆಯ ಖಂಡನೆಗಳೇ ಕವಿ ಮುಖವಾಣಿಯಾಗಿ ಈ ಕಾದಂಬರಿ ಮೂಡಿಬಂದಿದೆ.

'ಅಭ್ಯಾಗತರು' ಕಾದಂಬರಿಯ ಕಥಾನಾಯಕ ಜೀನ್ ವಾಲ್ಜೀನ್. ಇಡೀ ಕಥೆಯೇ ಇವನ ಬೆಳವಣಿಗೆಯ ಸುತ್ತ ಹೆಣೆದಿದೆ. ಜೀನ್ ವಾಲ್ಜೀನ್ ಬಡಒಕ್ಕಲಿಗ ಕುಟುಂಬದಲ್ಲಿ ಹುಟ್ಟಿ, ಬಡತನದ ಶೂಲಕ್ಕೆ ಬಲಿಯಾದವನು. ಬಾಲಕನಾಗಿರುವಾಗಲೇ ಬಂಧುಗಳನ್ನು ಕಳೆದುಕೊಂಡು, ವಿಧವೆ ಸೋದರಿ ಹಾಗೂ ಅವಳ ಎಂಟು ಮಕ್ಕಳಿಗಾಗಿ ದುಡಿದ. ಒಂಬತ್ತು ಮಂದಿಯ ಪಾಲನೆ ಪೋಷಣೆ ಎಳೆವಯಸ್ಸಿನಲ್ಲೇ ಇವನ ಹೊಣೆಗಾರಿಕೆ ಆಯಿತು. ಅವರ ಹಸಿವನ್ನು ಹೋಗಲಾಡಿಸಲು ರೊಟ್ಟಿಯನ್ನು ಕದಿಯಲು ಪ್ರಯತ್ನಿಸಿದ ಫಲವಾಗಿ ಐದು ವರ್ಷಗಳ ಕಠಿಣಸಜೆಯಾಗಿ ಸೆರೆಮನೆಯನ್ನು ಸೇರಿದ. ಸೆರೆಮನೆಯ ವಾಸ ಅವನ ವ್ಯಕ್ತಿತ್ವದ ವಿನಾಶಕ್ಕೆ ನಾಂದಿಯಾಯಿತು. ಜೀನ್ ವಾಲ್ಜೀನ್ ತನ್ನ ಹೆಸರನ್ನೂ ಕಳಕೊಂಡು ಕೈದಿ ನಂಬರ್ 24601 ಆದನು. ಸೆರೆಮನೆಯಿಂದ ಪಲಾಯನ ಮಾಡಲು ನಾಲ್ಕು ಬಾರಿ ಪ್ರಯತ್ನಿಸಿದ ಕಾರಣ, ಐದು ವರ್ಷಗಳ ಜೈಲುವಾಸ ಹತ್ತೊಂಬತ್ತಕ್ಕೇರಿತು. ಬಿಡುಗಡೆಯಾದರೂ ಬಂಧನಮುಕ್ತನಾಗಲಿಲ್ಲ. ಕಳ್ಳನೆಂಬ ಬಿರುದನ್ನು ಅಂಟಿಸಿಕೊಂಡೇ ಸೆರಮನೆಯ ಕ್ರೂರಜಗತ್ತಿನಿಂದ ಕಹಿಸಮಾಜಕ್ಕೆ ಕಾಲಿರಿಸಿದ. ತೀವ್ರಭಾವುಕನಾಗಿದ್ದ ಜೀನ್ ವಾಲ್ಜೀನ್ ಪರಾಜಿತ ಮನೋಭಾವವನ್ನೂ, ಮುಂಗೋಪಿತನವನ್ನೂ ಮೈಗೂಡಿಸಿ ಕೊಂಡು ಜೈಲುವಾಸದಿಂದ ಹೊರಬಂದ. ಕಲ್ಲಿನ ಗೋಡೆಗಳ ಸೆರೆಮನೆಗೂ, ಬಡತನ ಶೋಷಣೆಗಳ ಸಮಾಜದ ಸೆರೆಗೂ ಹೆಚ್ಚೇನೂ ವ್ಯತ್ಯಾಸವಿಲ್ಲ. ''ಆ ಕೆಂಪು ಅಂಗಿ, ಆ ಸರಪಣಿ, ಆ ಮಲಗುವ ಹಲಗೆ, ಆ ಶೀತ, ಉಷ್ಣ ಚಾಟಿಯೇಟುಗಳು, ಕತ್ತಲೆಕೋಣೆ, ಆಯ್ಯೋ ! ನಾಯಿಗಳಾದರೂ ಸಂತೋಷದಲ್ಲಿವೆ'' ಎಂಬುದು ಕಥಾನಾಯಕನ ಮಾತೂ ಹೌದು, ಸಮಾಜಕ್ಕೆ ಸ್ಪಂದಿಸುವ ಲೇಖಕನು ಖಂಡಿಸುವ ಬಿರುನುಡಿಗಳೂ ಹೌದು.

ಸೆರೆಮನೆಯಿಂದ ಹೊರಬಂದರೂ, ಸಮಾಜದ ಹೊಂಚು ದೃಷ್ಟಿಯಲ್ಲಿ ಜೀನ್ ವಾಲ್ಜೀನ್ ಇನ್ನೂ ಮಾಜಿ ಕೈದಿ. ಸಮಾಜ ಕೆತ್ತುವ ಮಾಸಲಾಗದ ಮಚ್ಚೆಯನ್ನು ಅವನು ಮುಚ್ಚಿಡಲಾರ. ಅವನು ಅಸ್ಪೃಶ್ಯನಾದ. ಸೆರೆಮನೆವಾಸವೇ ಮೇಲೆಂದು ಅತ್ತ ಹೋದಾಗಲೂ ಅಲ್ಲಿಯೂ ಪ್ರವೇಶ ನಿಷಿದ್ಧವಾಯಿತು. ಕಂಗಾಲಾದ ಜೀನ್ ವಾಲ್ಜೀನ್ ಡಿಗ್ನಿಯ ಧರ್ಮಗುರು ಮಿರಿಯೆಲ್ ಅವರ ಭವನವನ್ನು ಪ್ರವೇಶಿಸಿ, ಮಾನವೀಯತೆಯನ್ನು ಅನುಭವಿಸಿದ. ಅಂತಹ ಸಮಾಜದಲ್ಲಿ ಮಾನವೀಯತೆ ಮರುಭೂಮಿಯ ಒರತೆ. ಈ ಪವಾಡಮಯ ಸೌಹಾರ್ದತೆಯನ್ನು ಸುಲಭವಾಗಿ

ಸ್ವೀಕರಿಸದಷ್ಟೂ ತುಕ್ಕು ಹಿಡಿದಿತ್ತು ಅವನ ವ್ಯಕ್ತಿತ್ವ. "ನೀವಿಂದು ನನ್ನನ್ನು ಶ್ರೀಮಾನ್ ಎಂದು ಸಂಬೋಧಿಸಿ ಗೌರವಿಸಿದಿರಿ. ನಾನೊಬ್ಬ ಕೈದಿಯೆಂದು ಜ್ಞಾಪಕವಿರಲಿ. ಎಲ್ಲೆಲ್ಲೂ ನನ್ನನ್ನು ನಾಯಿ ಎಂದು ಹೊರಗಟ್ಟುವವರೇ. ನೀವೇಕೆ ನನ್ನನ್ನು ಹೊರದೂಡಲಿಲ್ಲ?"

ತನ್ನನ್ನು 'ಅತಿಥಿ ದೇವೋ ಭವ' ಮನೋಭಾವದಲ್ಲಿ ಸ್ವಾಗತಿಸಿ, ಅಭಿಮಾನದಿಂದ ನೋಡಿಕೊಂಡ ಧರ್ಮಗುರುವಿನ ಮನೆಯಿಂದಲೇ ಬೆಳ್ಳಿಯ ದೀಪಸ್ಥಾಪಕಗಳನ್ನು ಜೀನ್ ವಾಲ್ಜೀನ್ ಕದಿಯುತ್ತಾನೆ. ಪೋಲಿಸರು ತನ್ನನ್ನು ಬಂಧಿಸಿ, ವಿಚಾರಣೆಗಾಗಿ ಧರ್ಮ ಗುರುವಿನ ಸನ್ನಿಧಿಗೆ ಬಂದಾಗ, ಜೀನ್ ವಾಲ್ಜೀನ್ ಎದುರುಗೊಳ್ಳುವುದು ಹೀಯಾಳಿಕೆ ನಿಂದೆಗಳಲ್ಲ, ಅಪರಿಮಿತ ಕ್ಷಮೆ. ಧರ್ಮಗುರುವಿನ ಕ್ಷಮಾಪೂರ್ಣತೆಯೇ ಜೀನ್ ವಾಲ್ಜೀನನ ಹೃದಯಪರಿವರ್ತನೆಗೆ ನಾಂದಿಯಾಗುತ್ತದೆ. ಧರ್ಮಗುರು ಅವನಲ್ಲಿ ಎಬ್ಬಿಸಿದ ದಯೆಯ ಅಲೆ, ಅವನ ಬದುಕಿನುದ್ದಕ್ಕೂ ಹಬ್ಬಿ, ಇತರರ ಬದುಕಿನುದ್ದಕ್ಕೂ ಪಸರಿಸುತ್ತದೆ. ಪರಾಜಿತ ಮನೋಭಾವದ ವ್ಯಕ್ತಿಯಲ್ಲಿ ಮೂಲಭೂತ ಪರಿವರ್ತನೆ ಉಂಟಾಗಿ, ಸಾಚಾ ವ್ಯಕ್ತಿತ್ವದ ಬೆಳವಣಿಗೆಯ ಪ್ರಾರಂಭವಾಗುತ್ತದೆ. ಹೆಸರನ್ನೂ ಬದಲಾಯಿಸಿ ಹೊಸ ವ್ಯಕ್ತಿಯಾಗುತ್ತಾನೆ. ಮುಗ್ಧ ವ್ಯಕ್ತಿಯೊಬ್ಬನನ್ನು ತಾನೆಂದು ಭ್ರಮಿಸಿ ನ್ಯಾಯಾಧೀಶರು ಶಿಕ್ಷೆಗೆ ಒಳಪಡಿಸುವ ಸಂದರ್ಭದಲ್ಲಿ ಜೀನ್ ವಾಲ್ಜೀನನಲ್ಲಿ ಸಾತ್ವಿಕ ಶಕ್ತಿಯ ಅಗ್ನಿಪರೀಕ್ಷೆ. ಆಗಲೂ ತನ್ನ ನಿಜರೂಪವನ್ನು ಅರುಹಿ, ಹಡಗಿನಲ್ಲಿ ಪುನಃ ಕೈದಿಯಾಗಿ ಸೇರಿದರೂ, ಕೆಲಕಾಲದಲ್ಲೇ ಅಲ್ಲಿಂದಲೂ ತಪ್ಪಿಸಿಕೊಳ್ಳುತ್ತಾನೆ. ಈ ಸಂದರ್ಭ ದಲ್ಲೇ ಅವನ ಬಾಳಿಗೆ ಅರ್ಥವನ್ನು ಕೊಡುವ ಕೊಸೆಟ್ಟೆಯ ಆಗಮನ. ಕೊಸೆಟ್ಟೆ ಓರ್ವ ಅನಾಥಬಾಲೆ. ಜೀನ್ ವಾಲ್ಜೀನ್ ಅವಳನ್ನು ತನ್ನ ಮಗಳಂತೆ ಸಾಕುತ್ತಾನೆ, ಅವಳ ಬದುಕಿಗೂ ಅರ್ಥವನ್ನು ಒಪ್ಪಿಸುವ ಮೂಲಕವೇ ತನ್ನ ಬಾಳಿನ ಅರ್ಥವಂತಿಕೆಯನ್ನು ಸಾಧಿಸುತ್ತಾನೆ.

ಈ ಕಾದಂಬರಿಯ ಮುಖ್ಯ ಪ್ರತಿನಾಯಕ ಇನ್‌ಸ್ಪೆಕ್ಟರ್ ಜವರ್ಟ. ಕ್ರೂರ ಸಮಾಜದ, ಹೊಂಚುಹಾಕಿ ಕೊಲ್ಲುವ ಬುದ್ಧಿಯ ಪ್ರತಿನಿಧಿ ಅವನು. ಜೀನ್ ವಾಲ್ಜೀನನ ಮುಂದಿನ ಬದುಕೆಲ್ಲವೂ ಕಾನೂನುವ್ಯವಸ್ಥೆಯ ಪರಿಪಾಲಕನಾದ ಈ ಜವರ್ಟನಿಂದ ತಪ್ಪಿಸಿಕೊಳ್ಳುವುದರಲ್ಲೇ ಕಳೆಯುತ್ತದೆ. ಕೊನೆಗೂ ಅವನಿಗೆ ಸಿಕ್ಕಿದ ಆಸರೆ, ಕಾನ್ವೆಂಟಿನ ನಾಲ್ಕು ಗೋಡೆಗಳ ಮಧ್ಯವೇ ವಿನಾ, ಸಮಾಜದ ಮುಕ್ತವಾತಾವರಣದಲ್ಲಲ್ಲ. ಸಮಾಜದಿಂದ ವಂಚಿತನಾದ ವ್ಯಕ್ತಿ ಜೀನ್ ವಾಲ್ಜೀನ್.

ಇತ್ತ ಹದಿಹರೆಯದ ಕೊಸೆಟ್ಟೆ ಅರಳಿದ ಹೂವಾಗಿ, ಜೀನ್ ವಾಲ್ಜೀನನ ವ್ಯಕ್ತಿತ್ವದ ಬೆಳವಣಿಗೆಗೂ ಕಾರಣವಾದಳು. ಮೋರಿಸ್ ಎಂಬ ಶ್ರೀಮಂತ ಯುವಕನೊಡನೆ ಅವಳ ಪ್ರೇಮಪ್ರಕರಣವನ್ನೂ ಹ್ಯೂಗೊ ರಮ್ಯವಾಗಿ ಚಿತ್ರಿಸಿದ್ದಾನೆ. ಮೋರಿಸನ ಪಾತ್ರದ ಮೂಲಕ ತನ್ನ ಯೌವ್ವನದ ಬದುಕನ್ನು ಹ್ಯೂಗೊ ನಿರೂಪಿಸಿರುವನು ಎಂದು

ವಿಮರ್ಶಕರ ಅಭಿಮತ. ಆದರೆ ಇವರ ಪ್ರೇಮವೂ ನಿರಾತಂಕವಾಗಿರುವುದಿಲ್ಲ. ಮೋರಿಸ್ ಹೊಸ ಸಂಬಂಧಗಳನ್ನು ಕುದುರಿಸಲು ಹಳೆಯ ಸಂಬಂಧಗಳನ್ನು ಮುರಿದು ಬೆಳೆಯಬೇಕಾಗುತ್ತದೆ. ಕ್ರಾಂತಿಯ ಅನರ್ಥಗಳಿಗೆ ಸಿಲುಕಿ ಸಾವಿನ ದವಡೆಯಲ್ಲಿ ಸಿಕ್ಕಿಬಿದ್ದ ಮೋರಿಸನನ್ನು ಜೀನ್ ವಾಲ್ಜೀನ್ ರಕ್ಷಿಸುವುದು ಈ ಕಾದಂಬರಿಯ ಅವಿಸ್ಮರಣೀಯ ಭಾಗ. ತಾನು ಮೆಚ್ಚಿ ಸಾಕಿದ ಕೊಸೆಟ್ಟೆಯನ್ನು ಮೋರಿಸನಿಗೆ ಒಪ್ಪಿಸಿಕೊಡುವ ಸಂದರ್ಭದ ಮಾನಸಿಕ ತಾಕಲಾಟಗಳನ್ನೂ ಜೀನ್ ವಾಲ್ಜೀನ್ ಎದುರಿಸಬೇಕಾಗುತ್ತದೆ. ಮೆಚ್ಚಿದ ವ್ಯಕ್ತಿಯ ಒಳಿತನ್ನು ಮನಗಂಡು ಆ ವ್ಯಕ್ತಿಯಿಂದ ದೂರ ಸರಿವ ನೋವೂ ಜೀನ್ ವಾಲ್ಜೀನನ ಬೆಳವಣಿಗೆಯ ಒಂದು ಹಂತ.

ತನ್ನ ವಿನಾಶವನ್ನೇ ಗುರಿಯಾಗಿರಿಸಿಕೊಂಡ ಇನ್‌ಸ್ಪೆಕ್ಟರ್ ಜವರ್ಟನ ತಲೆ ಬಡಿದು ಮಿದುಳು ಹೊರತೆಗೆಯುವ ಅವಕಾಶ ಒದಗಿಬಂದಾಗ, ಜೀನ್ ವಾಲ್ಜೀನನ ಹೊಸ ವ್ಯಕ್ತಿತ್ವದ ಅಗ್ನಿಪರೀಕ್ಷೆಯಾಗುತ್ತದೆ. ಆದರೆ ಪ್ರತೀಕಾರದ ಬದಲು ಜೀವದಾನವನ್ನೀಯು ತ್ತಾನೆ ಜೀನ್ ವಾಲ್ಜೀನ್. ವೈರಿಯೂ ಸಹಿಸಲಾರದಷ್ಟು ಕ್ಷಮೆಯನ್ನು ನೀಡುತ್ತಾನೆ. ತನ್ನನ್ನು ಕೊಲ್ಲು ಎಂದು ಗೋಗರೆವ ಶತ್ರುವನ್ನೂ ಜೀನ್ ವಾಲ್ಜೀನ್ ಕೊಲ್ಲಲಾರ.

ಹೀಗೆ 'ಅಭ್ಯಾಗತರು' ಕಾದಂಬರಿಯಲ್ಲಿ, ಬಡತನವೇ ಕಾರಣವಾಗಿ, ಕುರುಡು ಕಾನೂನಿಗೆ ಬಲಿಯಾಗಿ ವಿಘಟಿತವಾದ ಅಭ್ಯಾಗತನೊಬ್ಬ ಸಂಘಟಿತನಾಗುತ್ತಾ ಹೋಗು ವುದನ್ನು ಗುರುತಿಸಬಹುದಾಗಿದೆ. ದಲಿತರಿಗಾಗಿ, ಸಮಾಜದ ಬಲಿಪಶುಗಳಿಗಾಗಿ ಲೇಖಕನ ಮಿಡಿಯುವ ಹೃದಯವನ್ನು ಈ ಕಾದಂಬರಿಯಲ್ಲಿ ನೋಡಬಹುದು.

'ಅಭ್ಯಾಗತರು' ಕಾದಂಬರಿ 'ಸದುರಂತ' ಕಥೆಗಳ ಸಾಲಿಗೆ ಸೇರುತ್ತದೆ. ದುರಂತ ವಸ್ತು ವಿನ್ಯಾಸ ಕಥೆಯುದ್ದಕ್ಕೂ ಹರಿಯುತ್ತಿದ್ದರೂ, ಅಂತ್ಯವೂ ಸ್ವಲ್ಪ ಮಟ್ಟಿಗಾದರೂ ದುರಂತದ ರಂಗನ್ನು ಪಡೆದಿದ್ದರೂ, ಅಲ್ಲಲ್ಲಿ ಹಠಾತ್ತನೆ ಸುಖದ ತಿರುವುಗಳೂ ಅನುಗ್ರಹ ಘಟನೆಗಳೂ ಏಕಾಏಕಿ ಒದಗಿಬಂದಾಗ ಆ ಕತೆ ಸದುರಂತವಾಗುತ್ತದೆ.

4

ಪ್ಲೇಟೊ ಹೇಳಿದಂತೆ ಕಲೆಗಾರ ಒಂದು ಮೇಜನ್ನು ಬಡಗಿಗಿಂತಲೂ ಚೆನ್ನಾಗಿ ವಿವರಿಸಬಲ್ಲ. ತನ್ನ ಭಾವತೀವ್ರತೆಯಿಂದ ಸ್ಪಂದಿಸಿ, ಬದುಕಿನ ಪ್ರಚ್ಛನ್ನ ಆಯಾಮಗಳನ್ನು ಗುರುತಿಸುವ ವಿಶೇಷ ಪ್ರತಿಭೆ ಅವನಲ್ಲಿ ಮನೆಮಾಡಿಕೊಂಡಿರುತ್ತದೆ. ಯಾವುದೇ ಸೃಜನಾತ್ಮಕ ಲೇಖಕನೂ ಚರಿತ್ರೆಯ ಮೇಲ್ತೋರಿಕೆಯ ಮಾದರಿಗಳನ್ನು ಮುರಿದು ಒಂದು ಯುಗದ ಹಣೆಬರಹವನ್ನು ಬರೆದು, ಬಗಿದು ತೋರಿಸಬಲ್ಲ. ಹ್ಯೂಗೊ ಇಂತಹ

ಸಾಮರ್ಥ್ಯವನ್ನು ಮೈಗೂಡಿಸಿಕೊಂಡವನು. ನಿರ್ದಿಷ್ಟ ಕ್ರೌರ್ಯ ಹಿಂಸೆಗಳು, ವ್ಯವಸ್ಥಿತ ಹಾಗೂ ಪ್ರಚ್ಛನ್ನವಾದ ಹಿಂಸೆ ಕ್ರೌರ್ಯಗಳ ಫಲರೂಪಿಗಳು ಎನ್ನುವುದೇ ಅವನ ಮತ. ಒಂದು ಸಮಾಜದ ಕಾನೂನು ವ್ಯವಸ್ಥೆಯೂ ಈ ವ್ಯವಸ್ಥಿತ ಹಿಂಸೆ ಕ್ರೌರ್ಯಗಳಿಗೆ ಸುಭದ್ರತೆಯ ಬಣ್ಣವನ್ನು ಬಳಿದುಬಿಡುತ್ತದೆ ಹಾಗೂ ತಾನೂ ಶೋಷಣೆಯ ಮಾಧ್ಯಮವಾಗುತ್ತದೆ. ''ಜನ್ಮತಃ ಕಳ್ಳರಾಗಲಿ, ದರೋಡೆಗಾರರಾಗಲಿ ಇರಲಾರರು. ಬಹುತೇಕ ಮಂದಿ ತಮ್ಮ ಸಾಮಾಜಿಕ ಸ್ಥಿತಿಗತಿಗಳಿಂದಾಗಿ ಕಳ್ಳರಾಗುತ್ತಾರೆ'' ಎಂಬ ಮಾತು ವಿಶ್ವಾಸನೀಯ. ವ್ಯಕ್ತಿ ಸಂಪೂರ್ಣವಾಗಿ ಪಾಪಿಯಲ್ಲ, ತನ್ನ ಪಾಪಕೃತ್ಯಗಳಿಗೆ ಪರಿಪೂರ್ಣ ಹೊಣೆಗಾರನಲ್ಲ ; ವ್ಯವಸ್ಥೆಯಲ್ಲಿ ಹುದುಗಿಕೊಂಡಿರುವ ಅನ್ಯಾಯದ ಬಲಿಪಶುವೂ ಹೌದು. ನೈತಿಕ, ಸಾಮಾಜಿಕ ನಿಯಮಾವಳಿಗಳನ್ನು ಯಾವುದೇ ವ್ಯಕ್ತಿ ಉದ್ದೇಶ ಪೂರ್ವಕವಾಗಿ ಅಥವಾ ಅನುದ್ದೇಶದಿಂದ ಮುರಿಯಬಹುದು. ಆದರೆ ಈ ಉದ್ದೇಶದ ಹಿನ್ನೆಲೆಗೆ ಅವನು ಜವಾಬ್ದಾರನೇ ಎಂಬ ಪ್ರಶ್ನೆ ಇದ್ದೇ ಇದೆ. ಕೆಲವೊಮ್ಮೆ ಕೊಳಕು ವ್ಯವಸ್ಥೆಯೊಂದು ತನ್ನ ಸರ್ವಾಧಿಕಾರದಿಂದಾಗಿ ವ್ಯಕ್ತಿಯ ಸ್ವಾಭಿಮಾನವನ್ನು ಹುಡಿಗೈಯುವುದರಿಂದಾಗಿ, ಅವನು ಬಲಿಪಶುವಾಗುತ್ತಾನೆ. ಈ ಕಾರಣದಿಂದಾಗಿ ವ್ಯವಸ್ಥೆ-ವ್ಯಕ್ತಿಗಳ ಸಂಘರ್ಷದ ವಿಷವರ್ತುಲದ ಉಗಮ. ಈ ಸ್ಥಿತಿಯಲ್ಲಿ ಪ್ರತಿಯೊಬ್ಬನೂ ಶೋಷಕನೂ ಹೌದು, ಶೋಷಿತನೂ ಹೌದು. ಆರ್ಥಿಕ ಅಸಮಾನತೆಯ ಕೊಳಕು ಸ್ಥಿತಿಯೊಂದು ಜೀನ್ ವಾಲ್ಜೀನನನ್ನು ಕಳ್ಳತನಕ್ಕೆ ತಳ್ಳುತ್ತದೆ. ಹಸಿದ ಬಂಧುಗಳನ್ನು ಉಳಿಸಲು ಅವನು ಕಾನೂನನ್ನು ಮುರಿಯಬೇಕಾಗುತ್ತದೆ. ಕಾನೂನನ್ನು ಮೀರಿಹೋದವನನ್ನು ಬಂಧನದಲ್ಲಿರಿಸಿದಾಗ, ಅವನ ವ್ಯಕ್ತಿತ್ವ ವಿಘಟನೆಯಾಗಲೇಬೇಕು. ಬಡತನ ಬರೇ ಆರ್ಥಿಕ ಪ್ರಶ್ನೆಯಲ್ಲ, ಬದಲಾಗಿ ಮಾನವನ ಸ್ವಾಭಿಮಾನದ ಪ್ರಶ್ನೆ. ಆರ್ಥಿಕ ಅಸಮಾನತೆಗೂ ಬಾಳಿನ ನಿರರ್ಥಕತೆಗೂ ಏನೋ ಸಂಬಂಧವಿದೆ. ನಿರರ್ಥಕ ಜೀವಿ, ಹಿಂಸೆ ಕ್ರೌರ್ಯಗಳಿಗೆ ಕೈಹಾಕುವುದು ಅನಿವಾರ್ಯವಾಗುತ್ತದೆ. ಅನ್ಯಾಯದ ವಿರುದ್ಧ ಬಡಿದೇಳುವ ಸಿಟ್ಟು ರಟ್ಟೆಗೂ ಬರಬಹುದು, ಹೊಟ್ಟೆಯಲ್ಲೇ ಉಳಿಯಬಹುದು. ಸಿಟ್ಟು ರಟ್ಟೆಗೆ ಬಂದರೆ ಕ್ರಾಂತಿ, ಕ್ರೌರ್ಯಗಳು.

ಜೀನ್ ವಾಲ್ಜೀನನಲ್ಲಿ ಉಂಟಾದ ವಿಷಮವರ್ತುಲವನ್ನು ಚೌಕಗೊಳಿಸಿದವನು ಧರ್ಮಗುರು. ಎಲ್ಲರೂ ಜೀನ್ ವಾಲ್ಜೀನನನ್ನು ಪಾಪಿಯೆಂದು ದೂರವಿರಿಸಿದಾಗ, ಅವನೂ ವ್ಯಕ್ತಿಯೆಂದು ಗುರುತಿಸಿ ಗೌರವಿಸಿದವನು ಈ ಧರ್ಮಗುರು. ಈ ಕಾರಣವಾಗಿಯೇ ಜೀನ್ ವಾಲ್ಜೀನ್ ಧರ್ಮಗುರುವಿನ ಆದರ, ಕ್ಷಮೆಗಳಿಗೆ ಅರ್ಹನಾಗುತ್ತಾನೆ. ವಿಷವರ್ತುಲವನ್ನು ಕೊನೆಗಾಣಿಸುವ ಶಕ್ತಿ ಕರುಣೆಗಿದೆ, ಕ್ಷಮೆಗಿದೆ, ಧರ್ಮಕ್ಕಿದೆ. ಯಾವುದೇ ಧರ್ಮವ್ಯವಸ್ಥೆಯೊಳಗಿನ ಹುಳುಕನ್ನು ನಿರ್ನಾಮಗೊಳಿಸಲು ಸಾಧ್ಯ ; ಆದುದರಿಂದ ಧಾರ್ಮಿಕ ಮನೋಭಾವಕ್ಕೂ, ಸಾಮಾಜಿಕ ಸುಭದ್ರತೆಗೂ

ಸಂಬಂಧವಿದೆ ಎಂಬುದು ಹ್ಯೂಗೊ ಅಭಿಮತ. ಧರ್ಮಗುರುವಿನಿಂದಾಗಿ ಪ್ರಭಾವಿತನಾದ ಜೀನ್ ವಾಲ್ಜೀನ್ ಅವನ ಧಾರ್ಮಿಕ ಗುಣಗಳನ್ನೇ ಧ್ವನಿಸುತ್ತಾ ಹೋಗುತ್ತಾನೆ. ತನ್ನನ್ನು ಹಿಂಬಾಲಿಸಿ ಗೋಳುಹೊಯ್ದ ತೋಳಗುಣದ ಇನ್‌ಸ್ಪೆಕ್ಟರ್ ಜವರ್ಟನೂ ತನ್ನ ಕ್ಷಮೆಗೆ ಅರ್ಹ, ಯಾಕೆಂದರೆ ಕಾನೂನು ರಕ್ಷಕನಾದ ಅವನೂ ಕಾನೂನಿಗೆ ಬಲಿಪಶು ಎಂಬುದನ್ನು ಗುರುತಿಸಿಕೊಳ್ಳುವಷ್ಟು ಬೆಳೆದಿದ್ದಾನೆ ಜೀನ್ ವಾಲ್ಜೀನ್. ಅನಾಥೆ ಕೊಸೆಟ್ಟೆಯೂ ಸುಂದರ ಬದುಕಿಗೆ ಅರ್ಹಳು.

ಧಾರ್ಮಿಕಪ್ರಜ್ಞೆಯ ಅಂಗವಾಗಿ ಸಹಾನುಭೂತಿ ಗುಣ ಈ ಕಾದಂಬರಿಯಲ್ಲಿ ಮೂಡಿದೆ. ಅನ್ಯಾಯಕ್ಕೆ ಬಲಿಯಾದ ವ್ಯಕ್ತಿಯ ಬಗ್ಗೆ ಇರಬೇಕಾದ, ಹಾಗೂ ಅವನ ಪರಿವರ್ತನೆಯನ್ನು ಸಾಧ್ಯಗೊಳಿಸಬಹುದಾದ ಮನೋಭಾವವೇ ಸಹಾನುಭೂತಿ. ಮಾನವೀಯ ಪ್ರೀತಿ ಸಂಬಂಧ ಸಹಾನುಭೂತಿಗಳು ಎಲ್ಲಾ ಪಂಥಗಳೂ ಪ್ರತಿನಿಧಿಸುವ ಕಾಳಜಿಗಳು. ಇಂತಹ ಗುಣಗಳು ಪ್ರಾಮಾಣಿಕತೆ, ಜೀವನದ ಬಗ್ಗೆ ನಿಷ್ಠೆ ಮೌಲ್ಯಗಳನ್ನು ಉಜ್ಜೀವಿಸುತ್ತವೆ. ಜೀನ್ ವಾಲ್ಜೀನನಂತಹ ವ್ಯಕ್ತಿಯ ನಾಡಿಮಿಡಿತವನ್ನು ಅರ್ಥಮಾಡಿ ಕೊಳ್ಳಬೇಕಾದರೆ ಸಹಾನುಭೂತಿಯಂತಹ ಕ್ರಿಯಾತ್ಮಕ ಅನುಭೂತಿ ಇರಲೇಬೇಕು ಎಂದು ಹ್ಯೂಗೊ ಅಭಿಮತವಾಗಿದೆ. ಕಹಿಯುಂಡ ಜೀವಿಗೆ ನೋವಿನ ಪ್ರಖರತೆ ತಿಳಿದಿದೆ. ಪ್ರಾಯಶಃ ಜಗತ್ತಿನ ಮೂಲಭೂತ ಸಂಕಟಸ್ಥಿತಿಯಿಂದಾಗಿಯೇ ಮಹಾನ್ ಸಾಹಿತ್ಯದ ಉದ್ಭವವಾಗುತ್ತದೆ. ಬರವಣಿಗೆ ಈ ಸಂಕಟಗಳನ್ನು ಸ್ಪರ್ಶಿಸಿ ಅದಕ್ಕೆ ಸ್ಪಂದಿಸಿದಾಗ ಸಂಕಟವೂ ಅರ್ಥಪೂರ್ಣತೆಯನ್ನು ಪಡೆಯುತ್ತದೆ.

ಸಂಕಟದ ವಿಷವರ್ತುಲವನ್ನು ಕೊನೆಗಾಣಿಸುವಲ್ಲಿ ಧರ್ಮವು ಮಹತ್ತರವಾದ ಪಾತ್ರವನ್ನು ವಹಿಸುತ್ತದೆ ಎಂಬುದು ಹ್ಯೂಗೊ ಅಭಿಮತ. ಬದುಕಿನಲ್ಲಿ ಸಾವಯವ ಸಂಬಂಧವಿಲ್ಲದೆ ಬಿರುಕುಗಳು ತುಂಬಿವೆ ಎಂಬ ಹ್ಯಾಮ್ಲೆಟ್ ಅಭಿಪ್ರಾಯಕ್ಕೆ, ಹ್ಯೂಗೊ ಉತ್ತರವೇ ಧರ್ಮ. ಧರ್ಮ ಬದುಕಿನಲ್ಲಿ ಸಾಮರಸ್ಯವನ್ನುಂಟು ಮಾಡುತ್ತದೆ, ಅದಕ್ಕೊಂದು ಅರ್ಥಸಂಯೋಜನೆಯನ್ನು ಕೊಡುತ್ತದೆ. ರಿಚರ್ಡ್ ನೇಬುಹ್ರ್ ಎಂಬುವನು ಹೇಳುವಂತೆ, "ಮಾನವನ ಬದುಕು ಮೂಲಭೂತವಾಗಿ ಎರಡು ವಲಯಗಳಲ್ಲಿ ಸಾಧಿತವಾಗುತ್ತದೆ. ಅವನು ತನ್ನ ಬದುಕನ್ನು ಒಂದೇ ವಲಯಕ್ಕೆ ಸೀಮಿತಗೊಳಿಸಿದರೆ, ಬದುಕು ವಿಘಟಿತವಾಗಿ ಸ್ಥಾಯಿಯಾಗುತ್ತದೆ. ಮಾನವಜನಾಂಗ ವಲಸೆ ಹೋಗುವ ಹಕ್ಕಿಗಳ ಗುಂಪಿನಂತೆ. ಅವೆಂದೂ ಒಂದೇ ಹವಾಮಾನದಲ್ಲಿ ಹೆಚ್ಚುಕಾಲ ಬಾಳುವಂತಿಲ್ಲ. ಆಗಾಗ್ಗೆ ಅವು ಇನ್ನೊಂದು ವಲಯಕ್ಕೆ ಹಾರಿಹೋಗುತ್ತಲೇ ಇರಬೇಕು. ವಲಸೆ ಜೀವಿಯಾದ ಮಾನವನೂ ಕಾಲಕ್ಕನುಗುಣವಾಗಿ ವಲಸೆ ಹೋಗುವುದನ್ನು ತನ್ನ ಬದುಕಿನಲ್ಲಿ ರೂಢಿಸಿಕೊಳ್ಳಬೇಕು. ಹಾಗಿರದಿದ್ದರೆ ಬದುಕು ಕುಂಠಿತವಾಗುತ್ತದೆ, ಕ್ಷೋಭೆಗೆ ಕಾರಣವಾಗುತ್ತದೆ. ಅದು ಲೌಕಿಕವಲಯವೇ ಆಗಿರಲಿ ಅಥವಾ ಪಾರಮಾರ್ಥಿಕ

ವಲಯವೇ ಇರಲಿ, ಬದುಕು ಬದಲಾಗುತ್ತಿರಬೇಕು.'' ಸಾಹಿತ್ಯದಿಂದ ಧರ್ಮವನ್ನು ದಿವ್ಯವನ್ನು ಮಾರುದೂರವಿರಿಸುವ ಪ್ರಯತ್ನ ಭ್ರಮೆಯೇ ಎನಿಸುತ್ತದೆ. ಎಲ್ಲಾ ಸೃಜನಾತ್ಮಕ ಸಾಹಿತ್ಯಕೃತಿಗಳೂ, ಪ್ರತ್ಯಕ್ಷವಾಗಿ ನಿರೀಶ್ವರತೆಯನ್ನು ಆರೋಪಿಸಿಕೊಂಡವುಗಳೂ ಪರೋಕ್ಷವಾಗಿಯಾದರೂ ಯಾವುದೇ ಅರ್ಥಸಂಹಿತೆಯನ್ನು ಇರಗೊಳಿಸುತ್ತವೆ. ಪ್ರಚಲಿತ ಧರ್ಮಕಲ್ಪನೆಯ ಕೊಂಕನ್ನು ನೇರ್ಪುಗೊಳಿಸುವ ಹವಣಿಕೆಯಲ್ಲೇ, ಸಾಚಾ ಧರ್ಮಪ್ರವೃತ್ತಿಯ ರೂಪುರೇಷೆಗಳು ನಿಚ್ಚಳವಾಗಿ ಮೂಡಿಸುತ್ತವೆ ಎಂಬ ವಿಚಾರವನ್ನು ಸುಲಭವಾಗಿ ಅಲ್ಲಗಳೆಯಲಾಗದು. ದಿವ್ಯ, ಧರ್ಮಗಳು ಹಿಂಬಾಗಿಲಿನ ಮೂಲಕ ವಾದರೂ ಸಾಹಿತ್ಯವನ್ನು ಪ್ರವೇಶಿಸುತ್ತವೆ. ಮನೆಯೊಳಗೆ ಮನೆಯೊಡೆಯನನ್ನು ಕಾಣಲು ಕಾತರಿಸುವ ಅರ್ಥಪೂರ್ಣತೆಯ ಆಕಾಂಕ್ಷೆಯೇ ಸಾಹಿತ್ಯಕೃತಿಗಳ ಮೂಲ ಆಶಯ ವೆಂಬುದನ್ನು ಅಲ್ಲಗಳೆಯಲಾದೀತೇ ? ಹ್ಯೂಗೊ ಈ ಮನೋಧರ್ಮದವನು. ವ್ಯವಸ್ಥಿತ ಧರ್ಮ, ಆಡಳಿತಗಳಿಲ್ಲದಿದ್ದಲ್ಲಿ ನಾಡೂ ಕಾಡಾಗುತ್ತದೆ ಎಂಬುದನ್ನು ಅರಿತವನು. ಧರ್ಮ ಬದುಕಿಗೊಂದು ಶಸ್ತ್ರಕ್ರಿಯೆಯೇ ಹೊರತು, ಅದನ್ನು ಹೂಳುವ ಹವಣಿಕೆಯಲ್ಲ ಎಂದು ನಂಬಿದವನು. ಲಯನಲ್ ಟ್ರಿಲ್ಲಿಂಗ್ ಹೇಳುವಂತೆ, ಸಾಹಸಿಯಾದವನು 'ನೈತಿಕ ವಾಸ್ತವತೆ'ಯನ್ನು ಗುರುತಿಸಲೇಬೇಕು.

ವ್ಯವಸ್ಥೆಯ ಅವನತಿಯ ಅವಸ್ಥೆಯನ್ನು ಸರಿಪಡಿಸಲು ಧರ್ಮ ಬೇಕು ಎಂಬುದು ಹ್ಯೂಗೊ ಮತವಾಗಿದ್ದರೂ, ಈ ಉದ್ದೇಶವನ್ನು ಸಾಧಿಸುವುದರಲ್ಲಿ 'ಅಭ್ಯಾಗತರು' ಸಫಲವಾಗಿದೆಯೇ ? ಬಹುಶಃ ಇಲ್ಲ. ಜೀನ್ ವಾಲ್ಜೀನನ ಬದುಕಿನ ದುರಂತಕ್ಕೆ ರಾಜಕೀಯ ಅಸ್ತವ್ಯಸ್ತತೆ, ಆರ್ಥಿಕ ಏರುಪೇರುಗಳೇ ಕಾರಣವಾಗಿದ್ದರೂ, ಅವನು ತನ್ನ ಬದುಕಿನಲ್ಲಿ ಪುನಃ ಅರ್ಥವನ್ನು ಪಡೆದುಕೊಳ್ಳುವುದು ವೈಯಕ್ತಿಕ ನೆಲೆಯಲ್ಲಿ ಮಾತ್ರ ಎಂಬುದನ್ನು ಮರೆಯಬಾರದು. ಅವನು ಬೆಳೆದರೂ, ಅವನ ಸುತ್ತಮುತ್ತಣ ಸಮಾಜ ಅನ್ಯಾಯದಲ್ಲೇ ಮುಂದುವರಿಯುತ್ತದೆ. ಪರಿವರ್ತನೆ, ಅರ್ಥಶೋಧನೆಗಳು ವೈಯಕ್ತಿಕ ವಲಯದಲ್ಲಿ, ಹೆಚ್ಚೆಂದರೆ ಕೆಲವೇ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗುತ್ತದೆ. ಜೀನ್ ವಾಲ್ಜೀನನಲ್ಲಿ ನೋವಿನ ಆಕ್ರೋಶವಿಲ್ಲ. ಅವನ ಹಾಗೂ ಧರ್ಮಗುರುವಿನ ಉದಾತ್ತ ಕಾರ್ಯಗಳು ಕ್ರಿಯಾತ್ಮಕವಾಗುವುದು ನಾಲ್ಕು ಗೋಡೆಗಳ ಸೀಮಿತವಲಯದಲ್ಲೇ ಹೊರತು, ಸಮಾಜದಲ್ಲಿ ಏನೂ ಸಂಭವಿಸಲಿಲ್ಲ. ಕಾನ್ವೆಂಟಿನ ಎತ್ತರಗೋಡೆಗಳು ಇಂತಹ ವೈಯಕ್ತಿಕ, ಸೀಮಿತ ಧರ್ಮಪ್ರಜ್ಞೆಯ ಸಂಕೇತಗಳಾಗಿ ನಿಲ್ಲುತ್ತವೆ. ಬಹುಶಃ ಸಾಮಾಜಿಕ ವಲಯದಲ್ಲಿ ನ್ಯಾಯವನ್ನು ಇರಗೊಳಿಸುವುದು ಹೆಬ್ಬಂಡೆಯನ್ನು ಸಾರಿಸುವ ಪ್ರಯತ್ನದಂತೆ ನಿಷ್ಫಲ ವೆನಿಸಿರಬೇಕು. ಜೀನ್ ವಾಲ್ಜೀನ್ ತನ್ನ ಸೀಮಿತ ವಲಯದಲ್ಲಿ ಅರ್ಥವಂತಿಕೆಯನ್ನು ಸಂಪಾದಿಸಿದರೂ, ಸಾಮಾಜಿಕ ವಲಯದಲ್ಲಿ ಅವನ ಬದುಕು ಹಿಂದಿನಂತೆಯೇ ಕ್ರೂರ ಕುರುಕ್ಷೇತ್ರ. ಆದರೆ ಬದುಕನ್ನು ಒಪ್ಪಿಕೊಳ್ಳಲು ಕಥಾನಾಯಕನು ಕಲಿತಿದ್ದಾನೆ. ಆದರೆ ಈ

ರೀತಿಯಲ್ಲಿ ಕಣ್ಣುಮುಚ್ಚಿ ಒಪ್ಪಿಕೊಳ್ಳುವುದೇ ಮಾನವನ ಅಸಹಾಯಕತನದ ಸೂಚನೆಯಾಗಿದೆ. ಧರ್ಮ ಪ್ರೇಮ ಕ್ಷಮೆಗಳ ಮೂಲಕ ವೈಯಕ್ತಿಕ ವಲಯದಲ್ಲಿ ಮಾತ್ರ ಕ್ರಿಯಾತ್ಮಕವೇ ? ಅದು ವ್ಯಕ್ತಿಗೆ ಷಂಡತನವನ್ನು ಕೊಡುತ್ತದೆಯೇ ? ಈ ದೃಷ್ಟಿಕೋನ ಸಾರವತ್ತಾದುದೇ ? ಜೀನ್ ವಾಲ್ಜೀನ್ ಸುತ್ತು ಮುತ್ತಲಿನ ದುರಂತ ಸ್ಥಿತಿಯ ಸಂಕ್ಷೇಪಾಕೃತಿಯೇನೋ ಹೌದು. ಅವನ ದುರಂತ ಸಮಾಜದುರಂತದ ಸೂಕ್ಷ್ಮರೂಪವೇ ಸರಿ. ಆದರೆ ಸಮಾಜದ ಬೆಳವಣಿಗೆಗೆ ಅವನ ಪ್ರಯತ್ನಗಳೇನು ?– ಎಂಬವೆಲ್ಲ ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಒಟ್ಟಿನಲ್ಲಿ ಜೀನ್ ವಾಲ್ಜೀನ್ ಮಾನವನ ಸ್ಥಿತಿ ಹಾಗೂ ಸಾಧ್ಯತೆಗಳ ಮಾದರಿಯಾಗಿದ್ದಾನೆ. ಅವನು ಒಂದು 'ಆರೋಹ ಪ್ರತಿಮೆ' (ascending symbol). ಇಂತಹ ಮಾದರಿ ಪಾತ್ರವನ್ನು ಒದಗಿಸಿಕೊಟ್ಟಿರುವುದರಿಂದ 'ಅಭ್ಯಾಗತರು' ಕಾದಂಬರಿಗೆ ಉದ್ದೀಪನ ಸಾಮರ್ಥ್ಯವಿದೆ. ಈ ಮೂಲಕ ಹ್ಯೂಗೊ, ಈ ಜಗತ್ತಿನ ದಲಿತರ, ಬಡವರ, ಅಭ್ಯಾಗತರ ಪುನರ್‌ಪರಿಚಯವನ್ನು ಮಾಡಿಕೊಡುತ್ತಿದ್ದಾನೆ ಎಂಬುದರಷ್ಟರ ಮಟ್ಟಿಗೆ ಕೃತಿ ಸಫಲವಾಗಿದೆ. ವ್ಯಕ್ತಿಯೊಬ್ಬನ ಆರೋಹಣದ ಕಥೆಯನ್ನು, ಮಾನವ ಪರಿವರ್ತನೆಯ ವಿವರಣಾತ್ಮಕ ಕಾರ್ಯವನ್ನು ಕಲಾಮಾಧ್ಯಮದ ಮೂಲಕ ಹ್ಯೂಗೊ ನಿವೇದಿಸಿದ್ದಾನೆ. ಕಾದಂಬರಿಯ ವಾಗಾಡಂಬರದ ನಡುವೆ ಮಾನವಮುಕ್ತಿ ಯೋಜನೆಯ ಪದವಿನ್ಯಾಸವಿದೆ. ಸಾಮಾಜಿಕ ಪ್ರಜ್ಞೆಯನ್ನೇ ಕಾಳಜಿಯನ್ನಾಗಿ ಇಟ್ಟುಕೊಂಡ ಓದುಗರಿಗೆ 'ಅಭ್ಯಾಗತರು' ಕಾದಂಬರಿ ಪ್ರಸ್ತುತ.

ಟರ್ಜನಿವ್ : 'ಫಾದರ್ಸ್ ಎಂಡ್ ಸನ್ಸ್'

ಗೌರೀಶ ಕಾಯ್ಕಿಣಿ

ಇವಾನ್ ಟರ್ಜನಿವ್ ಹುಟ್ಟಿದ್ದು 1818ರ ಅಕ್ಟೋಬರ್ 28ಕ್ಕೆ. ಅವನ ಕುಲಸ್ಥಳ ಸ್ಪಾಸ್‌ಕೊಯೆ–ಲುಟೋವಿನೊವ್, ಮಾದರಿಯ ಮಧ್ಯರಶಿಯಾದ ಬೇಸಾಯಗಾರಿಕೆಯ ಪ್ರಕೃತಿರಮ್ಯ ಒರೆಲ್ (Orel) ಪರಗಣೆಯಲ್ಲಿ. ಅಲ್ಲಿ ಜಮೀನುದಾರಿಕೆಯ ಪರಿಸರದಲ್ಲಿ ಹೊಲಗದ್ದೆ, ಸಾಲುಮರಗಳ ಅಡ್ಡದಾರಿಗಳು, ತೋಪುಗಳು, ಜೀತದಾಳುಗಳು — ಇವರ ನಡುವೆ ಬಾಲ್ಯ ಕಳೆದು ಮಾಸ್ಕೊ ವಿಶ್ವವಿದ್ಯಾನಿಲಯದಲ್ಲಿಯೂ ಸೆಂಟ್ ಪೀಟರ್ಸ್‌ಬರ್ಗ್ ವಿದ್ಯಾಪೀಠದಲ್ಲಿ ಮುಂದೆ ಬರ್ಲಿನ್‌ದಲ್ಲಿಯೂ ಶಿಕ್ಷಣವನ್ನು ಪಡೆದನು. ತತ್ವಶಾಸ್ತ್ರ, ಇತಿಹಾಸ, ಪ್ರಾಚೀನ ಭಾಷಾಭ್ಯಾಸಗಳಲ್ಲಿ ಪದವೀಧರನಾದನು.

ಜೀತಪದ್ಧತಿಯ ವಿಷಮತೆ, ಅನ್ಯಾಯ ಕಣ್ಣಾರೆ ಕಂಡ. ಈತನ ತಾಯಿ ನಿಷ್ಠುರ ಯಜಮಾನಿ. ಒಮ್ಮೆ ತೋಟದ ಹೂ ಯಾರೋ ಕದ್ದರೆಂದು ತೋಟಿಗರನ್ನು ಸಾಲಾಗಿ ನಿಲ್ಲಿಸಿ ಚಾಟಿ ಏಟು ಕೊಟ್ಟವಳು. ಆದರೆ ಆಕೆಯಿಂದಲೇ ತರುಣ ಟರ್ಜನಿವನಿಗೆ ಸಾಹಿತ್ಯಾಭಿರುಚಿಯ ಸಂಸ್ಕಾರ, ಲೇಖನಕ್ಕೆ ಪ್ರೋತ್ಸಾಹ. ಅವನ ಪ್ರಥಮ ಕವನ 'ಪರಶಾ' ('Parasha') ಆಕೆ ಮೆಚ್ಚಿ ಅದರಲ್ಲಿ ಸ್ಟ್ರಾಬೆರಿ ಹಣ್ಣುಗಳ ಕಂಪು ಸವಿದಳು. ಅಂದಿನಿಂದಲೇ ಟರ್ಜನಿವನ ಲೇಖನದಲ್ಲಿ ನೈಜತೆ, ನಿಸರ್ಗದ ನಳನಳಿಕೆ, ಅಕೃತ್ರಿಮ ಸ್ವಾದಗುಣ ಅರಳಿ ಬಂದವು.

ಬರ್ಲಿನ್‌ದಲ್ಲಿ ಕಲಿಯುವಾಗ ಆತನ ಸಹಪಾಠಿಗಳು ಬಕ್ಕುನಿನ್‌ನಂಥ ಅರಾಜಕವಾದಿ ಕ್ರಾಂತಿಕಾರಿ, ಗ್ರಾಮೊವಸ್ಕಿಯಂಥ ಇತಿಹಾಸಕಾರ, ಸ್ಟಾಂಕೊವಿಚ್‌ನಂಥ ಮಾಸ್ಕೊ ವಲಯದ ದಾರ್ಶನಿಕ. ರಶಿಯಾದ ಅಂದಿನ ವೈಚಾರಿಕ ಅಧ್ಯಾತ್ಮಿಕ ಜೀವನದ ಪರಿಜ್ಞಾನ ಅವರಿಂದಲೇ ಟರ್ಜನಿವನಿಗೆ ಉಂಟಾಯಿತು. ಜೊತೆಗೆ ಸ್ವದೇಶದಲ್ಲಿಯ ಪಾಳೆಯಗಾರಿಕೆ, ನಿರ್ದಯ ಜೀತಪದ್ಧತಿಯ ವಾತಾವರಣ ಅವನಿಗೆ ಉಸಿರುಗಟ್ಟಿಸಿತು. ಸ್ವಯಂ ನಿರ್ವಾಸಿತನಾಗಿ ಆತ ಪಶ್ಚಿಮ ಯೂರೋಪದಲ್ಲಿಯೇ ಬಾಳಿದನು — ಹೆಚ್ಚಾಗಿ ಪ್ಯಾರೀಸಿನಲ್ಲಿ; ಅಲ್ಲಿಂದ ಆಗಾಗ್ಗೆ ತಾಯ್ನಾಡಿಗೆ, ಹೊಲಮನೆಗೆ ಬಂದು.

1840ರಲ್ಲಿ ಟರ್ಜನಿವ್ ಹಲವಾರು ಕವನಗಳನ್ನು ಪ್ರಕಟಿಸಿದನು. ಆಗಲೇ ಪ್ರತಿಭಾಶಾಲಿಯೆಂದು ಬೆಳಕಿಗೆ ಬಂದನು. ಆದರೆ ನಿಜವಾದ ಕೀರ್ತಿ ಅವನಿಗೆ ಮಾಲೆ ಹಾಕಿದ್ದು ಅವನ ಕಥಾಸಂಕಲನ 'ಎ ಹಂಟರ್ಸ್ ಸ್ಕೆಚಸ್' ('ಬೇಟೆಗಾರನ ರೇಖಾಚಿತ್ರಗಳು') ಪ್ರಕಟವಾದಾಗ (1852). ಹೆಗಲಿಗೆ ಬಂದೂಕು, ಒಟ್ಟಿಗೆ ನಾಯಿ ತೆಗೆದುಕೊಂಡು ಆತ ಮಧ್ಯರಶಿಯಾದ ಗ್ರಾಮಾಂತರ ಪ್ರದೇಶವೆಲ್ಲವನ್ನೂ ಸುತ್ತುಹಾಕಿ, ವಿವಿಧ ವ್ಯಕ್ತಿಗಳನ್ನು,

ದೀನದರಿದ್ರ ಕೃಷಿಕ ಕೂಲಿಕಾರ ಜೀವಿಗಳನ್ನು ಕಂಡು ಒಡನಾಡಿ ಈ ರೇಖಾಚಿತ್ರಗಳನ್ನು ಜೀವಂತವಾಗಿ ಜ್ವಾಜ್ವಲ್ಯವಾಗಿ ರೇಖಿಸಿದನು. ಈ ಕಥಾಸಂಗ್ರಹ ಅಂದಿನ ಝಾರ ದೊರೆಯ ಸರಕಾರದ ಅವಕೃಪೆಗೆ ಪಾತ್ರವಾಯಿತು. ಪರಿಣಾಮವಾಗಿ ಟರ್ಜನಿವ್ ಇಪ್ಪತ್ತೆಂಟು ತಿಂಗಳು ಮಾಸ್ಕೊದಿಂದ ಮಧ್ಯರಶಿಯಾದ ಸ್ವಗ್ರಾಮಕ್ಕೆ ಸ್ಥಾನಬದ್ಧನಾಗಿ ಅಟ್ಟಲ್ಪಟ್ಟ. ಅಲ್ಲಿಂದ ಮರಳಿದೊಡನೆ ಸೆಂಟ್ ಪೀಟರ್ಸ್‌ಬರ್ಗ್‌ದ ಸಾಹಿತ್ಯಕ ವಲಯಗಳು ಅವನನ್ನು ತಲೆಗೆತ್ತಿಕೊಂಡು ಮೆರೆಯಿಸಿದವು.

1850ರಲ್ಲಿ ಆತ ಕೆಲವು ನಾಟಕಗಳನ್ನು ಬರೆದ : 'ದ ಬ್ಯಾಚಲರ್' (The Bachelor), 'ಎ ಮಂತ್ ಇನ್ ದ ಕಂಟ್ರಿ' (A month in the Country), 'ಹ್ಯಾಂಗರ್' (Hanger) ಮುಂತಾದವು. ಇವುಗಳ ವಸ್ತುಸಂವಿಧಾನ ಸರಳ ; ವ್ಯಕ್ತನೆ ಮನೋವೈಜ್ಞಾನಿಕ ; ಸಂಭಾಷಣೆ ನೇರ ; ಶೈಲಿ ಆಳವಾಗಿ ಕಾವ್ಯಮಯ.

1852ರಲ್ಲಿ ಮೇಲೆ ಹೇಳಿದ 'ಎ ಹಂಟರ್ಸ್ ಸ್ಕೆಚಸ್' ಮೊದಲು ಬೇರೆಬೇರೆ ನಿಯತಕಾಲಿಕೆಗಳಲ್ಲಿ ಬಂದವು ; ಸಂಕಲನದಲ್ಲಿ ಪ್ರಕಟಗೊಂಡವು. ಅನಂತರ ಆತ ಒಂದರ ಹಿಂದೊಂದು ಕಾದಂಬರಿಗಳನ್ನು ಬರೆದ : 'ರುಡಿನ್' (Rudin, 1856), 'ಎ ನೆಸ್ಟ್ ಆಫ್ ದ ಜಂಟ್ರಿ' (A Nest of the Gentry, 1859), 'ಓನ್ ದ ಈವ್' (On the Eve, 1860), 'ಫಾದರ್ಸ್ ಎಂಡ್ ಸನ್ಸ್' (Fathers and Sons, 1862) ಮತ್ತು ರಶಿಯಾದಿಂದ ಹೊರಗೆ ನಿರ್ವಾಸಿತನಾಗಿ ಉಳಿದ ಇಪ್ಪತ್ತು ವರ್ಷಗಳಲ್ಲಿ 'ಸ್ಮೋಕ್' (Smoke, 1867), ಮತ್ತು 'ವರ್ಜಿನ್ ಸಾಯ್ಲ್' (Virgin Soil, 1877). ಇವುಗಳಲ್ಲಿ 'ಎ ನೆಸ್ಟ್ ಆಫ್ ದ ಜಂಟ್ರಿ' ಮತ್ತು 'ಫಾದರ್ಸ್ ಎಂಡ್ ಸನ್ಸ್' ಅವನ ಮೇರುಕೃತಿಗಳು. ಅವುಗಳ ನಡುವೆ ಪ್ರಕಟವಾದ 'ಓನ್ ದ ಈವ್' ಒಬ್ಬ ಬಲ್ಗೇರಿಯನ್ ಸ್ವಾತಂತ್ರ್ಯವೀರನ ಕಥೆಯನ್ನು ಆದರಿಸಿತ್ತು. ಆದರೆ ಅದರ ಮುಂದಿನ 'ಫಾದರ್ಸ್ ಎಂಡ್ ಸನ್ಸ್' ಪ್ರಕಟವಾದಾಗ ಅಂಥ ಯಾವ ಕ್ರಾಂತಿಯ ಕರೆಯನ್ನೂ ನೀಡಲಿಲ್ಲ. ತಾತ್ಕಾಲಿಕವಾಗಿ ಅದು ವಿಮರ್ಶಕರ ಟೀಕೆಗೆ ಗುರಿ ಆಯಿತು. ಆಗಲೇ ಟರ್ಜನಿವ್ ದೇಶ ಬಿಟ್ಟು ಪಶ್ಚಿಮ ಯೂರೋಪಕ್ಕೆ ಹೋಗಿ ನೆಲೆಸಿದ್ದು. ಆದರೆ ಕ್ರಮೇಣ ಈ ಕೃತಿಯ ಅಸ್ಖಲಿತ ಕಲಾಪ್ರಜ್ಞೆ ಹಾಗೂ ಪ್ರೌಢಿಮೆ ರಶಿಯಾದ ಒಳಗೂ ಹೊರಗೂ ಪ್ರಶಂಸೆ ಪ್ರಖ್ಯಾತಿ ಪಡೆಯಿತು. ಫ್ಲಾಬಾರ್ಟ್, ಮೊಪಾಸಾ (ಫ್ರಾನ್ಸಿನಲ್ಲಿ), ಜಾರ್ಜ್ ಮೂರ್, ಗಾಲ್ಸವರ್ದಿ, ಆರ್ನಲ್ಡ್ ಬೆನೆಟ್ ಇತ್ಯಾದಿ (ಇಂಗ್ಲೆಂಡಿನಲ್ಲಿ), ಹೆನ್ರಿ ಜೇಮ್ಸ್ (ಅಮೆರಿಕೆಯಲ್ಲಿ) ಈ ಕೃತಿಯನ್ನು ತುಂಬಾ ಕೊಂಡಾಡಿದರು.

ಈ ಕೃತಿಗಳಿಂದ ಟರ್ಜನಿವ್ ಮುಂಬರುವ ತರುಣ ತಲೆಮಾರುಗಳ ಅಭೀಪ್ಸೆಗಳಿಗೆ ದನಿ ಕೊಡುವ ಅಗ್ರದೂತನೆನಿಸಿದನು. ಹೊಸ ಯುಗಮಾನದ

ಕಥನಶೈಲಿಯನ್ನು ರೂಪಿಸಿದ. ಯುವ ರಶಿಯಾದ ಆಂತರಿಕ ಯಾತನೆ, ಮನಃಕಲಹಗಳಿಗೆ ಧ್ವನಿಯಾದ. ಅಲ್ಲದೆ ರಶಿಯಾದ ಸಾಹಿತ್ಯಕ ಪ್ರತಿಭೆಯನ್ನು ಪಾಶ್ಚಾತ್ಯ ಜಗತ್ತಿಗೆ ಜಾಹೀರುಗೊಳಿಸಿದ ಪ್ರಥಮ ಸಾಹಿತಿಯಾದ.

ನೂರು ವರ್ಷಗಳ ಹಿಂದೆ ಹೇಗೋ ಇಂದಿಗೂ ಓದುಗರಿಗೆ ಟರ್ಜನಿವ್ ಕೃತಿಗಳಿಂದ ಅಪ್ರತಿಮ ಆನಂದ. ಅಲ್ಲಿಯೂ ಅವನ ಸಂವೇದನೆ, ಸಮಕಾಲೀನ ಸಮಸ್ಯೆಗಳಿಗೆ ಅವನ ಸ್ಪಂದನೆ ಕಂಡಾಗ ಅಷ್ಟೇ ಆಶ್ಚರ್ಯ. ಇನ್ನೊಂದು ಸೋಜಿಗವೆಂದರೆ, ತನ್ನ ಓದುಗರನ್ನು ಉನ್ನತವಾದ ಒಂದು ನೈತಿಕ ಪಾತಳಿಗೆ ಎತ್ತುವ ಅವನ ಸಾಮರ್ಥ್ಯ. ಅವನ ಕೃತಿಗಳನ್ನು ಓದಿದ ಮೇಲೆ ನಾವು ಹೆಚ್ಚು ಹಾಯಾಗಿ ಉಸಿರೆಳೆಯುತ್ತೇವೆ, ಹೆಚ್ಚು ಸಲೀಸಾಗಿ ಶ್ರದ್ಧೆ ತಾಳುತ್ತೇವೆ. ನಮ್ಮ ನೈತಿಕ ಮಾನದಂಡಗಳು ಎತ್ತರಿಸಿದ್ದು ನಮಗೆ ಅನಿಸುತ್ತದೆ. ಅವನದು ಪ್ರಕೃತಿ ಸಂಪ್ರದಾಯ, ಪ್ರಜಾಪ್ರಭುತ್ವವಾದಿ ದೃಷ್ಟಿ, ದೈನಂದಿನ ಜೀವನದ ವಾಸ್ತವವಾದಿ ಅತುಚ್ಚೀಕರಣ. ಇದೆಲ್ಲ ಆಧುನಿಕತೆಯ ಪ್ರವಾದಿಯ ಲಕ್ಷಣ.

2

ಕಾದಂಬರಿಯ ಹೆಸರೇ ಸೂಚಿಸುವಂತೆ ಇದು 'ತಂದೆ–ಮಗಂದಿರ' ಅನ್ಯೋನ್ಯ ಸಂಬಂಧಗಳ ಜೀವಾಳದ ಚಿತ್ರಣವಾಗಿರಬೇಕು. ಆದರೆ ವಸ್ತುತಃ ಈ ಸಂಬಂಧಗಳ ಸಮಸ್ಯೆ ಈ ಕಥೆಯ ಹಿನ್ನೆಲೆಯ ಹಂದರ. ಇಬ್ಬರು ತರುಣಮಿತ್ರರು ಬಹುಕಾಲದ ನಂತರ ತಮ್ಮ ಮನೆಯೂರಿಗೆ ಬರುತ್ತಾರೆ. ಅಲ್ಲಿ ಅವರ ತಂದೆ-ತಾಯಿ ಅವರೊಂದಿಗೆ ನಡೆದುಕೊಂಡ ವಾತ್ಸಲ್ಯದ ಒಡನಾಟ, ಅವರ ನಡುವಿನ ತಲೆಮಾರಿನ ಮಾರುದ್ದದ ಅಂತರ, ಹಳೆ- ಹೊಸತರ ನಡುವಿನ ದಾಟಲಾರದ ಕಂದರ, ಆದರಿಂದ ಏಳುವ ಮುಜುಗರ-ಮುಗ್ಗಟ್ಟು ಇಲ್ಲಿ ಸೂಚ್ಯವಾಗಿ ಬಂದಿವೆ.

ಆದರೂ ಇದು ಮುಖ್ಯತಃ ಆರ್ಕೇಡಿ ಮತ್ತು ಅವನ ಹಿರಿಯ ಗೆಳೆಯ ಬಝರೊವ್ ಇವರು ತೊಡಕಿಸಿಕೊಂಡ ಭಾವನಾಮಯ ಹಾಗೂ ವಿಕಾರವಶ ಪಾಶಾಂಕುಶಗಳ ಪೇಚಾಟದ ನಿಚ್ಚಳ ನಿರೂಪಣೆ. ಬಝರೊವ್ ಕಥಾನಾಯಕ. ಒಬ್ಬ ಅಸಾಮಾನ್ಯ ಅಹಮನ್ಯಾ ವಿಲಕ್ಷಣ ಬುದ್ಧಿಮತ್ತೆಯ ವಿಕ್ಷಿಪ್ತ ಉಚ್ಚೃಂಖಲ ಯುವಕ. ಯಾವ ತತ್ವಾದರ್ಶಗಳನ್ನೂ ನಂಬುವವನಲ್ಲ. 'ನಿಹಿಲಿಸ್ಟ್' (ಶೂನ್ಯನಾಸ್ತಿಕವಾದಿ). ಆದರೆ ತನ್ನ ಈ ಬೌದ್ಧಿಕ ನಿಲುಮೆಯ ಮಟ್ಟಕ್ಕೆ ಬಾಳಲಾರದೆ, ಹೆಣ್ಣಿನ ಮೋಹಕ್ಕೆ ಸಿಲುಕಿ, ತೊಳಲಿ, ಬಾಳನ್ನು ದುರಂತ ವೈಫಲ್ಯಕ್ಕೆ ಒಡ್ಡಿಕೊಳ್ಳುತ್ತಾನೆ. ಕಿರಿಯ ಆರ್ಕೇಡಿ ಅವನ ಆರಾಧಕ ಮಿತ್ರ, ಅನುಯಾಯಿ. ಸಾಧಾರಣ ಸುಧಾರಕ ಮಟ್ಟದವರಿಗಿಂತ ಮೇಲ್ಮಟ್ಟದವ. ತಂದೆ ಚಿಗಪ್ಪರ ತಲೆಮಾರಿಗೆ ತಲೆಬೇನೆ ತರಬಲ್ಲ ಆಧುನಿಕ ತರುಣ. ಆದರೆ ತನ್ನ ನಾಯಕಮಿತ್ರ

ಬಝುರೊವ್‌ನಂತೆ ಹುಟ್ಟಾ ಸ್ವಚ್ಛಂದ ಸ್ವಯಂಭೂ ವೃತ್ತಿಯವನಲ್ಲ. ಈಗ ಶಿಕ್ಷಣ ಮುಗಿಸಿ ತಂದೆಯ ಹೊಲಮನೆ ಜಮೀನುದಾರಿಯ ಜವಾಬುದಾರಿ ಹೊರಲು ಬಯಸಿ ಬಂದವ. ಗೆಳೆಯ ಬಝುರೊವ್ ಪ್ರಕೃತಿವಿಜ್ಞಾನದ ವ್ಯಾಸಂಗಿ. ಸ್ವತಃ ಡಾಕ್ಟರನಾಗಲು ಹೊರಟ ಪ್ರಯೋಗಶೀಲ.

ಇಬ್ಬರ ತಂದೆಯಂದಿರೂ ಸ್ವಭಾವತಃ ಜಮೀನುದಾರರು. ಜೀತದಾಳುಗಳ ದುಡಿಮೆಯಿಂದ ಸಂಪನ್ನರು. ಆರ್ಕೇಡಿಯ ತಂದೆ ನಿಕೊಲಾಯಿ ಪೆಟ್ರೊವ್ವಿಚ್ ಯುಗ ಧರ್ಮವನ್ನು ಅರಿತು ನವಯುವಕ ಮಗನೊಂದಿಗೆ "ಪುತ್ರೇ ಮಿತ್ರವತ್ ಆಚರೇತ್" ಎಂಬ ಸೂತ್ರದಂತೆ ನಡೆಯಲು ಯತ್ನಿಸುವವ. ಚಿಗಪ್ಪ ಪಾವೆಲ್ ಒಳ್ಳೇ ಷೋಕಿ, ಪೋಷಾಕಿ ಗೃಹಸ್ಥ. ಓರಣದ ಒಣ ಉಪಚಾರದ ಆಂಗ್ಲ ಸಂಸ್ಕೃತಿಯ ಭಕ್ತ, ನಿವೃತ್ತ ಸೇನಾಧಿಕಾರಿ. ಹಿಂದೊಮ್ಮೆ ಪ್ರಣಯಭಂಗಗೊಂಡ ಸಂಭಾವಿತೆ. ಬಝುರೊವ್‌ನ ತಂದೆ ನಿವೃತ್ತ ಲಷ್ಕರಿ ವೈದ್ಯ. ತಂದೆ ತಾಯಿ ಇಬ್ಬರೂ ಮಗನ ಬಗೆಗೆ ಕರುಳುಹರಕ ವಾತ್ಸಲ್ಯ ವ್ಯಾಕುಲರು. ತಾಯಿ ಅರಿಶಾ ಮಗನಿಗಾಗಿ ಸದಾ ಕಣ್ಣೀರು ಬಿಡುವ ಕಳವಳದ ವೃದ್ಧೆ.

ಕಾದಂಬರಿಯ ಆರಂಭ ಆರ್ಕೇಡಿ-ಬಝುರೊವ್ ಇಬ್ಬರನ್ನು ನಿಕೊಲಾಯಿ ಪೆಟ್ರೊವ್ವಿಚ್ ಮನೆಗೆ ಕರೆದು ತರುವುದರಿಂದ. ನಿಕೊಲಾಯಿ ಆರ್ಕೇಡಿಯ ತಾಯಿ ತೀರಿಕೊಂಡನಂತರ ಮನೆವಾಳ್ತೆಯ ಮುದುಕಿಯ ಚೆಲುವೆ ಮಗಳು ಫೆನಿಚ್ಕಾಳೊಂದಿಗೆ ಸಂಬಂಧವಿಟ್ಟುಕೊಂಡು ಒಂದು ಶಿಶುವನ್ನು ಪಡೆದಿದ್ದಾನೆ. ಇದನ್ನು ಮಗನಿಗೆ ಅರಿಕೆ ಮಾಡಿಕೊಂಡು ಮನೆಯ ಆಸ್ತಿವ್ಯವಸ್ಥೆಯ ಸ್ಥಿತಿಗತಿ ತೋಡಿಕೊಳ್ಳುತ್ತಾನೆ. ಆದರೆ ಮಗ ತಂದೆಗೆ ತೀರ್ಪುಗಾರನಾಗಲಾರ.

ಮನೆಗೆ ಬಂದಮೇಲೆ ಚಿಗಪ್ಪ ಪಾವೆಲ್ ಪೆಟ್ರೊವ್ವಿಚ್‌ನೊಂದಿಗೆ ಬಝುರೊವ್‌ನ ಪರಿಚಯ. ಇಬ್ಬರೂ ಒಬ್ಬರನ್ನೊಬ್ಬರು ಆರಂಭದಿಂದಲೇ ಹೊಂದಿಕೊಳ್ಳುವುದಿಲ್ಲ. ಪಾವೆಲ್ ಬಝುರೊವ್‌ನಿಗೆ 'ಅತಿರಿಕ್ತ', ಟೊಳ್ಳು ಡಂಭಾಚಾರದ ಮನುಷ್ಯ. ಪಾವೆಲ್‌ನಿಗೆ ಬಝುರೊವ್ ಉಡಾಳ, ಉದ್ಧಟ, ಪುಂಡ ! ಬಝುರೊವ್ ಅವನೊಂದಿಗೆ ತಾತ್ವಿಕ ರಾಜಕೀಯ ವಾದವಿವಾದಗಳನ್ನು ತೊಡಗಿ ಟೀಕಿಸುತ್ತಾನೆ. ಹಗಲೆಲ್ಲ ಹೊಲಗದ್ದೆ ಸುತ್ತಾಡಿ ಕಪ್ಪೆಗಳನ್ನು ಕಲೆಹಾಕಿ ಕೊಯ್ದು ಪ್ರಯೋಗ ನಡೆಯಿಸುತ್ತಾನೆ !

ಹದಿನೈದು ದಿನ ಆ ತರುಣಮಿತ್ರರು ಹೇಗೊ ಈ ಮೆರಿನೋ ಹಳ್ಳಿಯಲ್ಲಿ ಕಳೆದು ನಗರಕ್ಕೆ ಹೋಗುತ್ತಾರೆ —ಗವ್ವರ್ನರನ ಭೆಟ್ಟಿಯ ಆಮಂತ್ರಣ ಸ್ವೀಕರಿಸಿ. ಅಲ್ಲಿ ಬಝುರೊವ್‌ನ ಇನ್ನೊಬ್ಬ ಪ್ರಶಂಸಕ ಸಿಟ್ನಿಕೊವ್ ಅವರನ್ನು ಕುಕ್ಷಿನಾಳಲ್ಲಿ ಒಯ್ಯುತ್ತಾನೆ. ಆಕೆ ಸ್ವತಂತ್ರ 'ವಿಮೋಚಿತ ' ಆಧುನಿಕ ತರುಣಿ — ಮೇಲ್ತೇಲುವ 'ಅತಿರಿಕ್ತ' ವ್ಯಕ್ತಿಗಳ ಬಳಗದವರೇ ಅವರಿಬ್ಬರು. ತಾರ್ಕಿಕ, ನಿರುಪಯೋಗಿ, ಮೈಗಳ್ಳ ವೃತ್ತಿಯ ವಿಲಾಸಿಗಳು.

ಮುಂದೆ ಗವರ್ನರ ಏರ್ಪಡಿಸಿದ ನೃತ್ಯಕೂಟದಲ್ಲಿ ಈ ಗೆಳೆಯರ ಪರಿಚಯ ಅನ್ನಾ ಒಡಿನ್‌ಟ್ಸೋವಾ ಎಂಬ ಶ್ರೀಮಂತ ಪ್ರೌಢ ಸುಂದರಿಯೊಂದಿಗೆ ಆಗುತ್ತದೆ. ಅವಳು ಅವರನ್ನು ತಮ್ಮ ಮನೆಗೆ ಕರೆಯಿಸಿಕೊಳ್ಳುತ್ತಾಳೆ.

ಕಥೆಗೆ ಹೊಸ ತಿರುವು ಸಿಗುತ್ತದೆ. ಬಝರೊವ್ ಅಲ್ಲಿ ಹೋದಾಗ ಅನ್ನಾಳ ಕುರಿತು ಒಂದು ಒರಟು ಸಾಶಂಕ ತಾರ್ಕಿಕ ವೃತ್ತಿಯನ್ನು ಇಟ್ಟುಕೊಂಡಿದ್ದರೂ ಬಲುಬೇಗ ಅವಳ ಆಕರ್ಷಣೆಗೆ ಒಳಪಟ್ಟು ಅಸ್ವಸ್ಥನಾಗುತ್ತಾನೆ. ಅರ್ಕೇಡಿಯನಂತೂ ಅವಳ ಮುಗ್ಧ ತಂಗಿ ಚೆಲುವೆ ತಾಲ್ಯಾಳ ಮೋಹಕ್ಕೆ ಸಿಲುಕುತ್ತಾನೆ. ಆ ಸಂಮೋಹಕ ಉನ್ಮಾದಕ ವಲಯದಿಂದ ದೂರಾಗಲು ಬಝರೊವ್ ಮನಸ್ಸಿಲ್ಲದ ಮನಸ್ಸಿನಿಂದ ಬಯಸುತ್ತಾನೆ. ಅಲ್ಲಿಂದೆದ್ದು ತಮ್ಮ ತಾಯ್ತಂದೆಯರನ್ನು ಕಾಣಲು ಹೊರಡಬೇಕೆನ್ನುತ್ತಾನೆ — ಅವರ ಜಮೀನ್ದಾರಿ ಮೇಲ್ವಿಚಾರಕ ಅಕಸ್ಮಾತ್ ಬಂದು ಅವನನ್ನು ಅನ್ನಾಳ ಮನೆಯಲ್ಲಿಯೇ ಭೇಟಿಯಾದಾಗ. ಆದರೆ ಹೋಗುವ ಮುಂಚೆ ಆತ ಅನ್ನಾಳಿಗೆ ಕೆಲವು ರಾಸಾಯನಿಕ ಪ್ರಯೋಗಗಳ ಪಾಠ ಹೇಳಲಿದ್ದ. ಆದರೂ ಆತ ಅವಳನ್ನು ಕಂಡು ಪ್ರಣಯವನ್ನು ಪ್ರಕಟಿಸಿ ಅವಳನ್ನು ತಬ್ಬಿಕೊಂಡಾಗ ಆಕೆ ಪ್ರತಿಕೂಲಳಾಗಲಿಲ್ಲ. ಆದರೂ ಪ್ರತಿಸ್ಪಂದಿಸಲಿಲ್ಲ. ಆಗ ಆತ ಭಂಗಿತನಂತಾಗಿ ಒಮ್ಮೆಲೇ ಅರ್ಕೇಡಿಯ ಮನೆಗೆ ಹೋಗುತ್ತಾನೆ.

ಅಲ್ಲಿರುವಾಗ ಅರ್ಕೇಡಿಗೆ ತನ್ನ ತಾಯಿಗೆ ಅನ್ನಾಳ ತಾಯಿ ಬರೆದ ಹಳೆಯ ಪತ್ರಗಳ ಕಡ್ತ ಸಿಗುತ್ತದೆ. ಅದನ್ನು ಕೊಡಲು ಆತ ಅನ್ನಾಳ ಮನೆಗೆ ಹೋಗುತ್ತಾನೆ. ಅಲ್ಲಿ ಈ ಸಲ ತಾಲ್ಯಾಳನ್ನು ಭೆಟ್ಟಿಯಾಗಿ ಅವಳಲ್ಲಿ ಪ್ರಣಯಯಾಚನೆ ಮಾಡಿ ಕೃತಾರ್ಥನಾಗುತ್ತಾನೆ. ಇದೇ ಸಮಯ ಇಲ್ಲಿ ಮೆರೀನೊದಲ್ಲಿ ಒಂದು ಅಚಾತುರ್ಯ ಬಝರೊವ್‌ನಿಂದ ಘಟಿಸುತ್ತದೆ. ಆತ ಹೂದೋಟದಲ್ಲಿ ನಿಕೋಲಾಯಿಯ ಪ್ರೇಯಸಿ ಫೆನಿಚ್ಕಾಳನ್ನು ಸಂಧಿಸಿ ಚುಂಬಿಸುತ್ತಾನೆ. ಈ ಭೆಟ್ಟಿಯಲ್ಲಿ ಆಕೆ ಅವನೊಂದಿಗೆ ಹೆಚ್ಚು ಸಲಿಗೆಯಿಂದ ನಡೆಯುತ್ತಿದ್ದಳು — ತನ್ನ ಕೂಸಿಗೆ ಮದ್ದು ಕೊಟ್ಟ ವೈದ್ಯನೆಂದು. ಈ ಪ್ರಸಂಗವನ್ನು ಪಾವೆಲ್ ಪೆಟ್ರೊವ್ಹಿಚ್ ಕದ್ದು ನೋಡಿ ಮತ್ಸರದಿಂದ ರೊಚ್ಚಿಗೆದ್ದು ಬಝರೊವ್‌ನನ್ನು ಮರುದಿನ ದ್ವಂದ್ವ ಯುದ್ಧಕ್ಕೆ ಆಹ್ವಾನಿಸುತ್ತಾನೆ. (ಪಾವೆಲ್ ಅಂತರಂಗದಲ್ಲಿ ಅಣ್ಣನ ಪ್ರೇಮಿಕೆಯನ್ನು ಪ್ರೀತಿಸುತ್ತಿದ್ದ ಆದರೆ ಆಕೆ ಪ್ರತಿಕೂಲಳಿದ್ದಳು !) ದ್ವಂದ್ವದಲ್ಲಿ ಈ ಹಳೆ ಸೇನಾಧಿಕಾರಿ ಗುರಿ ತಪ್ಪುತ್ತಾನೆ. ಗುರಿಗಾರನಲ್ಲದ ಬಝರೊವ್ ಅವನ ತೊಡೆಗೆ ಗುಂಡಿಕ್ಕಿ ಕೆಡಹುತ್ತಾನೆ. ಮರುದಿನ ಪಾವೆಲ್ ಪಶ್ಚಾತ್ತಾಪ ಪಡುತ್ತಾನೆ. ಅಣ್ಣನಿಗೆ ಫೆನಿಚ್ಕಾಳನ್ನು ವಿಧಿಯಂತೆ ಮದುವೆ ಯಾಗಲು ಪ್ರೇರಿಸುತ್ತಾನೆ. ಬಝರೊವ್ ಉದ್ವಿಗ್ನನಾಗಿ ಹೊರಟೆದ್ದು ಹೋಗುತ್ತಾನೆ – ತಾಯ್ತಂದೆಗಳಿದ್ದಲ್ಲಿ.

ಆರು ವಾರ ತಂಗುವೆನೆಂದು ಹೇಳಿಬಂದ ಈ ವಿಕ್ಷಿಪ್ತ ವಿಕಾರವಶ ಮಗ ಟೈಫಸ್ (ವಿಷಮ) ಜ್ವರಕ್ಕೆ ಬಲಿಯಾಗುತ್ತಾನೆ. ಟೈಫಸ್ ರೋಗಿಯ ಶವಚ್ಛೇದ ಮಾಡುವಾಗ ಕೈಗೆ

ಗಾಯವಾಗಿ ಅವನಿಗೆ ಆ ವಿಷ ರಕ್ತದಲ್ಲಿ ಸೇರುತ್ತದೆ. ಆ ರೋಗ ಉಲ್ಬಣಿಸಿ ಆತ ತಂದೆ ತಾಯಂದಿರನ್ನು ಅಪಾರ ಶೋಕದಲ್ಲಿ ನೂಕಿ ಪ್ರಾಣ ಬಿಡುತ್ತಾನೆ. ಸಾಯುವ ಮುಂಚೆ ಅನ್ನಾ ಸರ್ಗೆವೆನ್ನಾ (ಒಡಿನ್‌ಟ್ಸೋವಾ) ಅವನ ಭೆಟ್ಟಿಗೆ ಬರುತ್ತಾಳೆ. ಅವನ ಹಣೆಗೆ ಪ್ರೀತಿಯಿಂದ ಮುತ್ತಿಡುತ್ತಾಳೆ.

ಹೀಗೆ ಸ್ವತಂತ್ರ ಪ್ರತಿಭಟಪಟುವಾಗಲು ಹೊರಟ ಈ ಇಬ್ಬರು ಮಿತ್ರರಲ್ಲಿ ಗುರುವು ತನ್ನ ಪಂಥದ ಎತ್ತರಕ್ಕೆ ತಾನೇ ನಿಲುಕಲಾರದೆ ಪ್ರಣಯಮೋಹಿತನಾಗಿ ಹುತಾತ್ಮನಾದರೆ ಅವನ ಶಿಷ್ಯ ಇತರ ಸುಧಾರಣಾವಾದಿ ಉದಾರಮತಿ ಯುವಕರಂತೆ ಪ್ರೀತಿ ವಿವಾಹದಲ್ಲಿ ಸುಖಿಯಾಗುತ್ತಾನೆ.

3

'ತಂದೆ ಮಗಂದಿರು' ('ಫಾದರ್ಸ್ ಎಂಡ್ ಸನ್ಸ್') ಟರ್ಜನಿವ್‌ನ ಶ್ರೇಷ್ಠ ಕೃತಿ. ಇಲ್ಲಿಯ ನಾಯಕ ಬಝುರೊವ್‌ನ ಪಾತ್ರಚಿತ್ರಣ ಅಪ್ರತಿಮ, ಅದ್ಭುತ. ಹಾಗೆ ವಸ್ತು ವಿನ್ಯಾಸದ ದೃಷ್ಟಿಯಿಂದ ಇಲ್ಲಿ ವಿಶೇಷವೇನೂ ಘಟಿಸುವುದಿಲ್ಲ. ಒಂದು ಉತ್ಕಟ ಶಿಖರ ಪ್ರಸಂಗಕ್ಕೆ ಒಯ್ಯುವ ವಸ್ತುಸಂವಿಧಾನ ಇಲ್ಲಿ ಹೆಣೆದುಕೊಂಡಿಲ್ಲ. ಒಂದೇ ಆಶಯದ ಬೇರೆ ಬೇರೆ ಮುಖಗಳನ್ನು ಎತ್ತಿ ತೋರಿಸುವ, ಸಂಭಾವ್ಯವೆನಿಸುವ ಕೆಲವು ಪ್ರಸಂಗ ಸನ್ನಿವೇಶಗಳು ಇಲ್ಲಿ ಸರಣಿಗೊಂಡಿವೆ. ಲೇಖಕ ಇಲ್ಲಿಯ ಯಾವ ಪಾತ್ರದ ಪರವಾಗಿಯೂ ಪಕ್ಷಪಾತಿಯಾಗಿಲ್ಲ. ಒಂದು ಸೂಕ್ಷ್ಮವಾದ ವ್ಯಂಗ್ಯ ಸಹಾನುಭೂತಿಯಿಂದ ಪಾತ್ರಗಳನ್ನು ಚಿತ್ರಿಸಿದ್ದಾನೆ.

ಇಲ್ಲಿ ಈ ಚರಿತ್ರ ಚಿತ್ರಣವೇ ಮುಖ್ಯ. ಟರ್ಜನಿವ್ ತನ್ನ ಪ್ರತಿಭೆಯ ನಿಡಿಬೆಳಕನ್ನು ಪ್ರಖರವಾಗಿ ಇಲ್ಲಿಯ 3-4 ಪ್ರಮುಖ ಪಾತ್ರಗಳ ಮೇಲೆ ಬೀರಿದ್ದಾನೆ. ನಿಜವಾಗಿಯೂ ತಂದೆ ಮಗಂದಿರ ಸಂಬಂಧಗಳಿಗಿಂತ ಇಲ್ಲಿ ಆ ಹಿನ್ನೆಲೆಯಲ್ಲಿ ಅಂದಿನ ರಶಿಯನ್ ತರುಣರಲ್ಲಿಯ ನವ್ಯಪ್ರಜ್ಞೆಯ ಬಂಡುಗಾರ ಪ್ರವೃತ್ತಿಯ ಇಬ್ಬರು ಮಿತ್ರರ ಬಾಳಿನ ವ್ಯಕ್ತಿಗತ ತುಮುಲಗಳೇ ಪ್ರಾಶಸ್ತ್ಯ ಪಡೆದಿವೆ. ಸಾಮಾಜಿಕ, ರಾಜಕೀಯ, ಸೈದ್ಧಾಂತಿಕ ತತ್ವ-ತಥ್ಯಗಳ ಚರ್ಚೆ, ಚರ್ವಣ ಸಾಕಷ್ಟು ಬಂದರೂ ಇಲ್ಲಿಯ ಪಾತ್ರಗಳು ಸೋತು ಗೆಲ್ಲುವದೂ ಗೆದ್ದು ಸೋಲುವದೂ ಈ ವೈಯಕ್ತಿಕ ಸಂಬಂಧಗಳ ಆತ್ಮಾನ್ವೇಷಣೆಯಲ್ಲಿ. ಸೂಕ್ಷ್ಮ ಮನೋ ವಿಶ್ಲೇಷಣೆಗೆ ಇಳಿಯದೆ ಟರ್ಜನಿವ್ ನಡೆ-ನುಡಿಗಳ ಸನ್ನಿವೇಶಗಳ ಕ್ರಿಯೆ-ಪ್ರತಿಕ್ರಿಯೆ ಗಳೊಳಗಿಂದಲೇ ತನ್ನ ನಾಯಕ-ನಾಯಿಕೆ, ಉಪನಾಯಕ-ಉಪನಾಯಿಕೆಯರ ಚರಿತ್ರವನ್ನು ಕಲಾತ್ಮಕವಾಗಿ ಚಿತ್ರಿಸುತ್ತಾನೆ.

ಈ ಕಾದಂಬರಿಯಷ್ಟೇ ಪ್ರಸಿದ್ಧವಾದ ಲೇಖಕನ ಇನ್ನೊಂದು ಉತ್ಕೃಷ್ಟ ಕೃತಿ 'ಎ ನೆಸ್ಟ್ ಆಫ್ ದ ಜಂಟ್ರಿ' ('ಸಭ್ಯಗೃಹಸ್ಥರ ಒಂದು ಗೂಡು'). ಅದರ ಸಂವಿಧಾನ ಹೆಚ್ಚು ಸಂಕೀರ್ಣ, ಪಾತ್ರಸೃಷ್ಟಿ ಹೆಚ್ಚು ವಿಶಾಲ. ಕಥೆಯ ಹರಹು ದೊಡ್ಡದು. ಆದರೆ ಆ ಕಥೆಯೇ ಹೆಚ್ಚು ರಮ್ಯ – 'ರೊಮ್ಯಾಂಟಿಕ್'. ಅಲ್ಲಿಯ ನಾಯಕ ಲೆವ್‌ರೆಟಸ್ಕಿ, ಉಪನಾಯಕ ಪಾನಶಿನ್‌ರಿಗೆ ಪ್ರತಿಯಾಗಿ ಇಲ್ಲಿ ಬಝುರೊವ್, ಪಾವೆಲ್ ನಿಲ್ಲುತ್ತಾರೆ. ಆದರೆ ಇಲ್ಲಿಯ ನಾಯಿಕೆ ಅನ್ನಾ ಒಡಿನ್‌ಟ್ಸೋವಾ ಪ್ರಗಲ್ಭೆ, ಮನೋನಿಗ್ರಹಿ. ವಿಚಿತ್ರ ಬರ್ಬರ ಬಝುರೊವ್‌ನಲ್ಲಿ ಪ್ರಚಂಡ ತುಮುಲ ಕೆರಳಿಸಿಯೂ ಆತನನ್ನು ದೂರವಿಟ್ಟು ಶಾಂತಳಾಗಿಯೇ ವರ್ತಿಸಬಲ್ಲಳು. ಅವಳ ತಂಗಿ ಕಾಟ್ಯಾ ಮುಗ್ಧೆ. ಬಝುರೊವ್‌ನ ಗೆಳೆಯ ಆರ್ಕಡಿಯನ್ನು ಗೆದ್ದ ಸ್ನಿಗ್ಧೆ.

ಈ ಕಾದಂಬರಿಯ ಉದ್ದಕ್ಕೂ ತನ್ನ ದಟ್ಟ ನೆಳಲು ಚಾಚಿ ಎದ್ದುನಿಲ್ಲುವ ವ್ಯಕ್ತಿತ್ವ ಬಝುರೊವ್‌ನದು. ಆತನು ಮಿತ್ರ ಆರ್ಕೇಡಿ ಹಾಗೂ ಟರ್ಜನಿವ್‌ನ ಇತರ ಅನೇಕ ನಾಯಕರ ಒಂದು ವಿಶಿಷ್ಟ ಮಾದರಿ. ಆದರೂ ಈತ ಅವರಿಂದ ಭಿನ್ನ. ಈ ಕಾದಂಬರಿಯಲ್ಲಿಯೇ ಬರುವ ಆರ್ಕೇಡಿಯ ತಂದೆ ಚಿಗಪ್ಪ ಕಾರ್ಸನೊವ ಸೋದರರು. ಸಿಟ್ನಿಕೊವ್-ಕುಕ್ಷಿನಾ ಇವರೆಲ್ಲ ಅದೇ ಮಾಲೆಯ ದೊಡ್ಡ ಸಣ್ಣ ಮಣಿಗಳು. ಆದರೆ ಬಝುರೊವ್ ತನ್ನ ಪರಿಸ್ಥಿತಿಯ ಇತಿಮಿತಿಗಳನ್ನು ಮೀರಿ ಖಿನ್ನನಾಗಿ ಭಿನ್ನವಾಗಿ ನಿಂತು ಕಾದಂಬರಿಯನ್ನು ಒಮ್ಮೆಲೆ ಬೇರೊಂದು ತಾತ್ವಿಕ ಪಾತಳಿಗೆ ಎತ್ತುತ್ತಾನೆ.

ಟರ್ಜನಿವ್‌ನ ಕಾದಂಬರಿಗಳಲ್ಲಿ ಪ್ರಮುಖ ಪಾತ್ರಗಳು ಮಡುವುಗಟ್ಟಿದ, ಮಲೆತು ನಿಂತ ಬದುಕಿನಲ್ಲಿ, ಆತ್ಮಿಕ ಜಾಡ್ಯದಲ್ಲಿ, ಕೃತಕ ಜೀವನವ್ಯಾಪಾರದಲ್ಲಿ ಬಳಲುತ್ತ ತೊಳಲುತ್ತವೆ. ಈ ಕಾದಂಬರಿಯ ಕಿರ್ಸನೊವ್ ಪರಿವಾರದ ಚಿತ್ರಣ ಇದಕ್ಕೆ ಮಾದರಿ. ವಾಸ್ತವತೆಯ ಸ್ವಾಭಾವಿಕ ಚಿತ್ರಣದಲ್ಲಿ ಟರ್ಜನಿವ್ ಸಿದ್ಧಹಸ್ತ. ಕಾದಂಬರಿಯ ಕೊನೆಗೆ ಬರುವ ಬಝುರೊವ್‌ನ ಕಾಯಿಲೆಯುಲ್ಬಣ ಹಾಗೂ ಸಾವಿನ ಚಿತ್ರಣಕ್ಕೆ ಚೆಕೊವ್‌ನಂಥ ಶ್ರೇಷ್ಠ ಕತೆಗಾರ ಮೂರ್ಛಿತನಾದನಂತೆ. ಈ ಕಾದಂಬರಿಯ ಕಲಾ ವೈಭವಕ್ಕೆ ಚೆಕೊವ್ ಆನಂದಚಕಿತನಾದ. ಬಝುರೊವ್‌ನ ಚಿತ್ರಣದಲ್ಲಿ ಟರ್ಜನಿವ್‌ನ ಪರಮಪ್ರಭುತ್ವ ಪ್ರಕಟವಾಗಿದೆ. ಆತ ಶ್ರದ್ಧಾಶೂನ್ಯ, ಆದರ್ಶ ತತ್ವಹೀನ, ಆತ್ಮಕೇಂದ್ರಿತ, ಪ್ರಖರ ಬುದ್ಧಿಶಾಲಿ, ಅಷ್ಟೇ ವಿಕಾರವಶ. ಶುಷ್ಕ ತಾರ್ಕಿಕ ಕವಚದಡಿಗೆ ಪ್ರಚಂಡ ಭಾವಾವೇಶದ ಹುತ್ತ. ಕ್ರಾಂತಿಯ ಕನಸಿಗನಾದರೂ ನಿಷ್ಕ್ರಿಯ, ಆಲಸಿಕೆಯ ಉದಾಸೀನ. ಅಂದಿನ ರಶಿಯಾದ ಕ್ರಾಂತಿಪೂರ್ವದ ಯುವಜನರ ಅಸ್ವಸ್ಥ ಆತ್ಮದ ಅದ್ವಿತೀಯ ಪ್ರತೀಕ.

ಟರ್ಜನಿವ್ ವಾಸ್ತವವಾದಿ ಸ್ವಭಾವ ಲೇಖನ ಸಂಪ್ರದಾಯದವನು. ಈ 'ತಂದೆ-ಮಗಂದಿರು' ಕಾದಂಬರಿಯನ್ನು ಕುರಿತು ಆತ ಬರೆಯುತ್ತ ತನ್ನ ಪಾತ್ರಸೃಷ್ಟಿಯ ತಂತ್ರವನ್ನು

ಅರುಹಿದ್ದಾನೆ. ಒಬ್ಬ ಪ್ರತ್ಯಕ್ಷ ಜೀವಂತ ವ್ಯಕ್ತಿಯ ಮಾದರಿ ಕಣ್ಣ ಮುಂದೆ ಇಲ್ಲದೆ ಆತ ಪಾತ್ರಸೃಷ್ಟಿಯ ಮೋಹಕ್ಕೆ ಬೀಳುವವನಲ್ಲ. ಅಂಥ ಒಂದು ಮಾದರಿಗೆ ಮುಂದೆ ಕಾಲ್ಪನಿಕವಾಗಿ ಅನುಭವ ಆಲೋಕನೆಯ ಕೋಶದಿಂದ ವಿವರಗಳನ್ನು ತುಂಬಿ ಆತ ಹೊಸ ಪಾತ್ರ ಶಿಲ್ಪಿಸಬಹುದು. ಆದರೆ ಮೂಲದಲ್ಲಿ ಕಂಡ ಒಬ್ಬ ವ್ಯಕ್ತಿ ಬೇಕೇಬೇಕು. ಈ ಕಾದಂಬರಿಯ ಬಝುರೊವ್‌ನ ಪಾತ್ರಕ್ಕೆ ತಳಹದಿ ಆತ ಕಂಡ ಒಬ್ಬ ಗ್ರಾಮಾಂತರ ತರುಣ ಡಾಕ್ಟರ್. ಆತನ ಅಸಾಮಾನ್ಯ ವ್ಯಕ್ತಿತ್ವ ಟರ್ಜನಿವ್‌ನಲ್ಲಿ ಅಚ್ಚೊತ್ತಿತ್ತು. ಆತ 1890ರ ಮುಂಚೆಯೇ ತೀರಿಕೊಂಡ. ಆದರೆ ಬಝುರೊವ್‌ನಲ್ಲಿ ಅವತಾರ ತಾಳಿದ. ಬಝುರೊವ್‌ನ ವೈಚಾರಿಕ ನಿಲುಮೆ 'ನಿಹಿಲಿಝುಂ' – ಈ ಡಾಕ್ಟರನ ನಿಲುಮೆಯೂ ಆಗಿತ್ತು. ಮೊದಲು ಕೆಲವು ಅಧ್ಯಾಯಗಳನ್ನು ಬರೆದು ಬಿಟ್ಟು ಪೂರ್ತಿ ನಿಲ್ಲಿಸಿ ಅನಂತರ ಕಥೆ ಮನಸ್ಸಿನಲ್ಲಿ ರೂಪಗೊಂಡಂತೆ 1862ರಲ್ಲಿ ಟರ್ಜನಿವ್ ಆ ಚಳಿಗಾಲದ ಕೊನೆಗೆ ಬರೆದು ಮುಗಿಸಿದನು.

4

'Superfluous Men' – ಇವಾನ್ ಟರ್ಜನಿವ್‌ನ ಈ ಮನುಷ್ಯ ಮಾದರಿಯ ಒಂದು ಚಿತ್ರಶಾಲೆಯನ್ನೇ ತೆರೆದು ಇಟ್ಟಿದ್ದಾನೆ – ಪ್ರಪಂಚದ ಬೆರಗುಗಣ್ಣಿಗೆ. ಆತನ ಪ್ರಥಮ ಕಥಾ ಸಂಕಲನ 'ಎ ಹಂಟರ್ಸ್ ಸ್ಕೆಚಸ್' ('ಬೇಟೆಗಾರನ ರೇಖಾಚಿತ್ರಗಳು') 1852ರಲ್ಲಿ ಪ್ರಕಟವಾಯಿತು. ಅದರಲ್ಲಿಯ ಒಂದು ಕತೆ 'ಅತಿರಿಕ್ತ ಮನುಷ್ಯನ ದಿನಚರಿ'. ಇವನಾವ ಮನುಷ್ಯ ?

ಉತ್ಪಾದನೆಯಲ್ಲಿ ಯಾವದೇ ಉಪಯುಕ್ತ ಚಟುವಟಿಕೆಯಲ್ಲಿ ತೊಡಗದ 'ಉಪರಿಚರ' ವೃತ್ತಿಯ ಉಂಡಾಡಿ ಭೋಗವಿಲಾಸಿ. ಆರಾಮ ತಲಬಿನ ತೇಲಾಡುವ ಬದುಕಿನ ಬಿಡಿಜೀವಿ. ಈ ವರ್ಗದ ವ್ಯಕ್ತಿಗಳ ಮನೋಧರ್ಮದ ವಿಶೇಷಗಳು ವಿಭಿನ್ನ. ಆದರೂ ಅವರಲ್ಲಿ ಈ ಕೆಲವು ಗುಣಲಕ್ಷಣಗಳು ಕಂಡುಬರುತ್ತವೆ :

ಇವರು ಬುದ್ಧಿಜೀವಿಗಳು. ಸಾಮಾನ್ಯ ವ್ಯಾವಹಾರಿಕರ ವರ್ಗಕ್ಕಿಂತ ತಾವು ಮೇಲಿನವರು ಎಂದು ನಂಬಿ ಹೆಮ್ಮೆಯಿಂದ ಇತರರ ಬಗೆಗೆ ಉದಾಸೀನದಿಂದ ನಡೆಯುವವರು. ಅಂದಿನ ರಶಿಯಾದ ಆಡಳಿತವರ್ಗದ ಸಾರ್ವಜನಿಕರ ಬದುಕಿನಿಂದ ಪ್ರತ್ಯೇಕತೆ, ಹೊಂದಿಕೆ ಇಟ್ಟುಕೊಳ್ಳುವ ಅಂತರ ಇವರದು. ಸರದಾರಿಕೆ, ಇನಾಮದಾರಿಕೆ, ವತನ ಜಮೀನುದಾರಿಕೆಯ ಪ್ರಪಂಚಕ್ಕೆ ಮಿಗಿಲು. ವೈಯಕ್ತಿಕವಾಗಿ ಅಸಾಮಾನ್ಯ ಸಾಮರ್ಥ್ಯ, ಬುದ್ಧಿವಿಚಕ್ಷಣತೆ, ಉನ್ನತ ಆದರ್ಶ ಉಳ್ಳವರು. ಆ ನಿಟ್ಟಿನಲ್ಲಿ ಹೆಣಗಾಡುವವರು. ಆದರೆ ಇದರ ಜತೆಗೆ ಆಳವಾದ ಅಶ್ರದ್ಧೆ, ಸಂಶಯಾತ್ಮಕತೆ, ಆಲಸಿಕೆ,

ಉದ್ದಿಮೆಯಲ್ಲಿ ಅನಾಸ್ಥೆ, ಪ್ರಯೋಜನದ ಯಾವ ಚಟುವಟಿಕೆಯ ಬಗೆಗೂ ನಿರುತ್ಸಾಹ, ವಿಲಾಸೀ ಉದಾಸೀ ಜೀವನ, ಬಾಳಸೆಳವಿನಲ್ಲಿ ತೇಲಿ ಹರಿಯುವ ಪ್ರವೃತ್ತಿ, ನಡೆನುಡಿಯಲ್ಲಿ ನಿತ್ಯದ ತಾಕಲಾಟ, ಮಾತಿನಲ್ಲಿ ತತ್ವ, ಕೃತಿಯಲ್ಲಿ ತವಡು ಕುಟ್ಟುವ ನಿಷ್ಪ್ರಯೋಜಕತೆ, ಸಂಕಲ್ಪಶಕ್ತಿಯ ರಕ್ತಕ್ಷಯ, — ಇದು ಈ ಅತಿರಿಕ್ತ ಅನಗತ್ಯ ಮನುಷ್ಯರ ಜಾಯಮಾನ. ಈ ವರ್ಗದ ಉತ್ತಮ ಉದಾಹರಣೆ ಬಝುರೊವ್, ಪ್ರಾಗತಿಕ ವಿಚಾರವಾದಿ. ಏನನ್ನೂ ಒಪ್ಪದ ಅತಿಮಾನದಂಡಗಳನ್ನು ಇಟ್ಟುಕೊಂಡು ಆ ಮಟ್ಟಕ್ಕೆ ಬಾಳುವುದರಲ್ಲಿ ತಾನೇ ಸೋಲುವ 'ಅನುತ್ಪನ್ನ ಕಾರ್ಯಪಂಡಿತ', ಲಿಬರಲ್ ಸುಧಾರಣಾವಾದಿ. ಸಾಮಾಜಿಕ ದೃಷ್ಟಿಯನ್ನು ತಿರಸ್ಕರಿಸುತ್ತ ಕ್ರಾಂತಿಯ ಉಗ್ರಘೋಷಣೆಗಳನ್ನು ಮಾತಿನಲ್ಲಿಯೇ ಮುಗಿಸುತ್ತ, ಅನಪೇಕ್ಷಿತವಾಗಿ ತಾನೂ ಈ Superfluous ವರ್ಗಕ್ಕೆ ಸೇರಿದವನೆಂದು ಸಾಬೀತು ಮಾಡಿಕೊಡುತ್ತಾನೆ. ಈ ಮಾನವ ವರ್ಗಕ್ಕೆ ಇವನ ಪಾತ್ರ ಕನ್ನಡಿಹಿಡಿದಂತೆ. ವೈಚಾರಿಕ, ಶ್ರದ್ಧಾಹೀನ, ಶುಷ್ಕ ತಾರ್ಕಿಕ ನೇತಿವಾದಿ ಸಂಶಯಾತ್ಮ. 'ಹೆಮ್ಲೆಟ' ಮಾದರಿ ಆತ್ಮಕೇಂದ್ರಿತ. ಆತ್ಮಸಂಮೋಹಿತ. ದೀನದಲಿತ ಜನರಲ್ಲಿ ಆಳದ ಅನುಕಂಪೆ, ಆದರೆ ಕ್ರಾಂತಿಯ ಕಾರ್ಯಕ್ಕೆ ವಿಮುಖ. ಈ ಬಝುರೊವ್, ಅವನ ಗೆಳೆಯ ಅರ್ಕೇಡಿ, ಪ್ರತಿದ್ವಂದ್ವಿ ಪಾವೆಲ್, ನಗರದ ಗೆಳೆಯ ಗೆಳತಿಯರು – ಎಲ್ಲ ಹೆಚ್ಚು ಕಡಿಮೆ ಇದೇ ಗೋತ್ರದವರೇ. ಆದರೆ ಬಝುರೊವ್ ಆರಂಭದಲ್ಲಿ ಹೀಗೆ ಚೆಲ್ಲಾಡುವ, ದೂಷಕ ಚಂಚಲ ಅಸಹನೆಯ ಅಹಂಕಾರಿ ವ್ಯಕ್ತಿಯಾಗಿ ಕಂಡರೂ ಕೊನೆಗೆ – ಪ್ರಣಯದ ಮಾನವೀಯ ಅನುಭವದ ಅಗ್ನಿಸ್ಪರ್ಶದಿಂದ – ಗಂಭೀರನಾಗಿ ವಿಷಣ್ಣಜೀವಿಯಾಗಿ ಪರಿಣಮಿಸುತ್ತಾನೆ.

ಟರ್ಜನಿವ್‌ನ ಮೊತ್ತಮೊದಲಿನ ಆಸಕ್ತಿ ವ್ಯಕ್ತಿಯ ಆಂತರಿಕ ರಚನೆ ಪರಿವರ್ತನೆಗಳಲ್ಲಿ; ವ್ಯಕ್ತಿಯ ಚಾರಿತ್ರ್ಯ ಹಾಗೂ ಅದನ್ನು ತನ್ನ ಪ್ರಭಾವಕ್ಕೆ ಒಳಪಡಿಸುವ ಪರಿಸರ ಪ್ರಪಂಚದ ಅನ್ಯೋನ್ಯ ಸಂಬಂಧಗಳಲ್ಲಿ. ವ್ಯಕ್ತಿಯ ಈ ಆಂತರಿಕ ರೂಹು ರೂಪಣದಲ್ಲಿ ಅವನ ಸಂಗೋಪನೆ ಸಂವರ್ಧನೆ, ಅವನ ಯೌವನದ ವರ್ತನೆ, ಜೀವನ ನಿರ್ವಹಣೆಯ ರೀತಿ – ಇವು ವಹಿಸುವ ವಿಶಾಲವಾದ ಭೂಮಿಕೆಯ ಬಗೆಗೇ ಟರ್ಜನಿವ್‌ನಿಗೆ ಕಾಳಜಿ. ಆದ್ದರಿಂದ ಹೆಚ್ಚುಕಡಮೆ ಅವನ ಸಮಕಾಲೀನರಾದ ಟಾಲಸ್ಟಾಯಿ-ದೊಸ್ತೊಯೆವ್‌ಸ್ಕಿಯರಂಥ ಹಿರಿಯ ಕಾದಂಬರಿಕಾರರು ಪ್ರಕಟಿಸುವ ವ್ಯಕ್ತಿಯ ಮನೋಧರ್ಮದ ಬಗೆಗಿನ ಅನ್ವೇಷಣೆ-ವಿಶ್ಲೇಷಣೆಗಳ ಆಳವಾದ ನಿಲುಕು, ಗಹನ ಮನೋವೈಜ್ಞಾನಿಕ ನಿಲುಮೆ ಟರ್ಜನಿವ್‌ನ ತಂತ್ರವಲ್ಲ.

ಈ ದೃಷ್ಟಿಯಿಂದ ಆತ ಅಲೆಕ್ಸಾಂಡರ್ ಪುಷ್ಕಿನ್‌ನ ಸಂಪ್ರದಾಯದವನೆನ್ನಬಹುದು. ಅವನ ವರ್ಣನಾವೈಖರಿಯ ಮೇಲೆ ಗೊಗಲನ ಪ್ರಭಾವ ನಿಖರವಾಗಿದೆ. ಮಾನವ ಮನೋಧರ್ಮದ ಚಾರಿತ್ರಿಕ ಸ್ವಭಾವದ ಸಮಗ್ರ ಹಾಗೂ ಯಥಾರ್ಥ ಚಿತ್ರಣದಲ್ಲಿ ಪಾತ್ರ ಪ್ರಸಂಗಗಳ ಚಿತ್ರಮಯವಾದ ಮಾರ್ಮಿಕ ವರ್ಣನೆಯಲ್ಲಿ ಇದು ವ್ಯಕ್ತವಾಗುತ್ತದೆ.

ಆತ ತನ್ನ ನಾಯಕಪಾತ್ರವು ತಲುಪಿದ ತೀರ್ಮಾನವನ್ನಷ್ಟೇ ತೋರಿಸುತ್ತಾನೆ. ಅವನ ಬಹಿರಂಗ ಕ್ರಿಯೆಗಳನ್ನಷ್ಟೇ ಕಾಣಿಸುತ್ತಾನೆ. ಅವನ ಅಂತರ್ಮುಖ ಮನೋಯಾತನೆ ಆಂತರಿಕ ಕ್ರಿಯಾನಿರೂಪಣೆ ಕೊಡುವುದಿಲ್ಲ. ಅವನ ಮನೋಭೂಮಿಕೆಯ ಒಂದು ಸಂಯುಕ್ತ ಸಮೀಕ್ಷೆ ನೀಡುತ್ತಾನೆ. ಆದರ ಹಿಂದಿನ ಮನೋವ್ಯಾಪಾರಗಳನ್ನೆಲ್ಲ ನಾವೇ ಊಹಿಸಬೇಕಾಗುತ್ತದೆ. ಈ ಕುರಿತು ಟರ್ಜನಿವ್ ಅಂದಿದ್ದಾನೆ – ''ಕವಿಯು ಮನೋವಿಜ್ಞಾನಿಯಾಗಿರಬೇಕು. ಆದರೆ ಅದು ಗುಪ್ತವಾಗಿ. ಸಂಗತಿಗಳ ಬೇರುಗಳನ್ನು ಆತ ತಿಳಿದಿರಬೇಕು, ಗ್ರಹಿಸಬೇಕು, ಭಾವಿಸಬೇಕು. ಆದರೆ ಅವನ್ನೇ ಕಾಣಿಸದೆ, ಆ ಸಂಗತಿ ಆ ವಸ್ತು ಅರಳುವದನ್ನೋ ಬಾಡುವದನ್ನೋ ಕಾಣಿಸಬೇಕು.''

ಟಾಲ್‌ಸ್ಟಾಯಿಗೆ ಮಾನವನ ನೈತಿಕ (ಧಾರ್ಮಿಕ) ವಿಕಾಸದಲ್ಲಿ, ಅದರ ಉಗಮಗಳಲ್ಲಿ ಆಸಕ್ತಿ. ಆದರೆ ಟರ್ಜನಿವನಿಗೆ ಇಡಿಯ ಮಾನವನ ವ್ಯಕ್ತಿತ್ವದ ಆಕರ್ಷಣೆ, ಆದರ ಪರಿಸರದ ಸಾಮಾಜಿಕ, ಬದುಕಿನ ಅಭೀಪ್ಸೆಗಳ ಉಕ್ಕುಬಿಕ್ಕುಗಳ ನಿರೂಪಣೆಯಲ್ಲಿ. ಅಂದಿನ ರಶಿಯನ್ ಜಮೀನುದಾರಿ ಪದ್ಧತಿಯ ಜೀತದಾಳುಗಳ ಬದುಕಿನ ಬವಣೆ ಕಂಡು, ಕರಗಿ, ಸಾಮಾನ್ಯ ವ್ಯಕ್ತಿಯ ಅಸಾಮಾನ್ಯ ಮೌಲ್ಯವನ್ನು ಆತ ಎತ್ತಿ ಹಿಡಿದ. ಸಾಮಾನ್ಯ ವ್ಯಕ್ತಿಯಲ್ಲಿ ಸ್ಫೋಟಕ ದ್ರವ್ಯವನ್ನು ತುಂಬಿದ.

ಟಾಲ್‌ಸ್ಟಾಯಿ, ದೊಸ್ತೊಯೆವ್‌ಸ್ಕಿ ತಮ್ಮ ವಸ್ತು-ಪ್ರಸ್ತುತಗಳೊಂದಿಗೇ ಮಾನವೀಯ ಅಸ್ತಿತ್ವದ ಪ್ರಮೇಯಗಳ ಪರಿಶೀಲನೆಯಲ್ಲಿ ತೊಡಗಿರುತ್ತಾರೆ. ಆದರೆ ಟರ್ಜನಿವ್ ಅವರಿಂದ ಮೂಲತಃ ಕಲಾತ್ಮಕ ಸಾಮಾನ್ಯೀಕರಣದ ಮರ್ಮ-ಮಾರ್ಗಗಳಲ್ಲಿ ಭಿನ್ನ. ಈತ ತನ್ನ ಕಾಲದ ತಾತ್ಪರ್ಯದ ಪ್ರಶ್ನೆಗಳಲ್ಲಿ ಪೂರ್ತಿ ತೊಡಗಿರುತ್ತಾನೆ. ಅವನ ಸ್ವಂತದ ರಾಜಕೀಯ ಅಭಿಪ್ರಾಯ ಬೇರೆ, ಕಲಾತ್ಮಕ ಅಭಿವ್ಯಕ್ತಿಯ ಆಶಯ ಬೇರೆ. ಇವನ ಪ್ರಮುಖ ಪಾತ್ರಗಳು ಸಮಾಜದ ಘಟಕವಾಗಿಯೇ ಅದರಿಂದ ಸಿಡಿದು ನಿಲ್ಲದೆ ಹೋರಾಡುತ್ತವೆ. ಆತನೇ ಅಂದಂತೆ, "I am above all a realist and chiefly interested in the living truth of the human race. I don't believe in any absolute systems. I love freedom better than anything. Everything human is dear to me."

ಹೀಗಾಗಿ ಟರ್ಜನಿವ್‌ನ ಕಥೆಗಳಲ್ಲಿ ದೊಡ್ಡ ಅಪರಾಧಗಳಿಲ್ಲ, ದುರಂತಗಳಿಲ್ಲ ; ಘೋರ ಆಘಾತ, ಅಪಘಾತಗಳಿಗೆ ಕಾರಣವಾಗುವ ವಿಪ್ಲವ ಕೋಲಾಹಲಗಳಿಲ್ಲ. ಆದರೆ ವ್ಯಕ್ತಿ-ವ್ಯಕ್ತಿ ಸಂಬಂಧಗಳ ಪ್ರಕ್ಷೋಭವಿದೆ. ಪ್ರಚಂಡ ಮನಃಸಂಘರ್ಷವಿದೆ. ಗೊಗಲನ ಪ್ರಭಾವ ಸೂಚಿಸುವ , ನವಿರಾದ ವ್ಯಂಗ್ಯವನ್ನು ಸೂಸುವ ಜೀವನದ ವಿವರ ವರ್ಣನೆಗಳಿವೆ. ಆಳವೂ ವಿಶಾಲವೂ ಆದ ಸಹಾನುಭೂತಿ ಇದೆ. ಅವನೇ ಒತ್ತಿ ಹೇಳುವ 'ಸ್ವಂತಿಕೆಯ ಧ್ವನಿ' ಇದೆ. ತನ್ನದೇ ಆದ ಜೀವಸ್ವರಗಳ ರಾಗಾಲಾಪನೆ ಅಲ್ಲಿ ಮಿಡಿಯುತ್ತದೆ.

ಗುಸ್ತಾವ್ ಫ್ಲಾಬರ್ಟ್ : 'ಮಡಾಂ ಬಾವರಿ'

ಓ. ಎಲ್. ನಾಗಭೂಷಣ ಸ್ವಾಮಿ

ಗುಸ್ತಾವ್ ಫ್ಲಾಬರ್ಟ್ ಹುಟ್ಟಿದ್ದು 1821ರಲ್ಲಿ. ಅವನ ತಂದೆ ಒಬ್ಬ ವೈದ್ಯ, ಸಾಕಷ್ಟು ಶ್ರೀಮಂತ, ಜನರ ಗೌರವಕ್ಕೆ ಪಾತ್ರನಾಗಿದ್ದ. ಫ್ಲಾಬರ್ಟ್‌ದು ಅ-ಸಾಮಾನ್ಯ, ವಿಚಿತ್ರ ಎನಿಸುವಂಥ ಸ್ವಭಾವ. ಆತ ಭಾವುಕ, ಕಲ್ಪನಾಜೀವಿ, ಟೀಕೆಯನ್ನು ಸಹಿಸದ 'ಅಹಂ'ಕಾರಿ, ಮೂರ್ಛೆಯ ರೋಗಪೀಡಿತ, ನಿರಾಶಾವಾದಿ ಮತ್ತು ಮನುಷ್ಯದ್ವೇಷಿ. ''ನಾನು ಹತ್ತನೆಯ ವಯಸ್ಸಿಗೆ ಶಾಲೆಗೆ ಹೋದೆ. ಆದರೆ ಆಗಲೇ ನನಗೆ ಮನುಷ್ಯ ಕುಲದ ಬಗ್ಗೆ ಅಗಾಧ ಅಸಹ್ಯ, ತಿರಸ್ಕಾರ ಹುಟ್ಟಿತು'' ಎಂದು ಹೇಳಿಕೊಂಡಿದ್ದಾನೆ. ಜನರನ್ನು ಸಹಿಸದೆ, ಅವರೊಡನೆ ಬೆರೆಯದೆ ''ಅಂತರಂಗದ ಏಕಾಂಗಿತನ''ದಲ್ಲಿ ಬದುಕನ್ನೆಲ್ಲ ಕಳೆದನಾದರೂ ಅವನು ತುಂಬ ಮೃದು ಮನಸ್ಸಿನವನೂ ಹೌದು. ಅವನಿಗೆ ತನ್ನ ಸೋದರಿ ಕೆರೊಲಿನ್‌ಳ ಮೇಲೆ ತುಂಬ ಪ್ರೀತಿ ಇತ್ತು. ಆಕೆ ಸತ್ತ ನಂತರ ಅವಳ ಮಗಳ ಬದುಕಿನ ಜವಾಬ್ದಾರಿಯನ್ನು ಫ್ಲಾಬರ್ಟ್‌ನೇ ಹೊತ್ತುಕೊಂಡ. ತನ್ನ ಬದುಕಿನ ಕೊನೆಯ ವರ್ಷಗಳಲ್ಲಿ, ಆ ಹುಡುಗಿಯ ಗಂಡ ದಿವಾಳಿಯಾಗುವುದನ್ನು ತಪ್ಪಿಸಲು, ತನ್ನ ಎಲ್ಲ ಆಸ್ತಿಯನ್ನೂ ಆ ಹೆಣ್ಣು ಮಗಳಿಗೆ ಬಿಟ್ಟುಕೊಟ್ಟು ತಾನು ಸ್ವಂತ ಜೀವನಕ್ಕೆ ಹಣ ಸಂಪಾದಿಸಲು ಕೆಲಸ ಹುಡಕಿಕೊಂಡು ಅಲೆದ.

ಫ್ಲಾಬರ್ಟ್ ನೋಡುವುದಕ್ಕೂ ತುಂಬ ಚೆನ್ನಾಗಿದ್ದನಂತೆ. ''ಅಗಲವಾದ ಭುಜಗಳು, ಎತ್ತರವಾದ ನಿಲವು, ತೆಳ್ಳನೆ ಮೈಕಟ್ಟು, ನೀಳವಾದ ಕೇಶರಾಶಿ, ಗ್ರೀಕ್ ದೇವರ ಶಿಲ್ಪದಂತೆ ಇದ್ದ'' ಎಂಬುದು ಅವನ ವರ್ಣನೆ, ಅವನ ಪರಿಚಯದ ಹೆಂಗಸೊಬ್ಬಳ ಮಾತಿನಲ್ಲಿ. ಫ್ಲಾಬರ್ಟನಿಗೆ ಹಲವು ಗೆಳತಿಯರಿದ್ದರು. ಕೆಲವರಂತೂ ಆತನ ಬಗ್ಗೆ ಪ್ರೀತಿಯಿಂದ ಹುಚ್ಚರಾಗಿದ್ದರು. ಆದರೆ ಆತ ನಿಜವಾಗಿ ಹೃತ್ಪೂರ್ವಕವಾಗಿ ಪ್ರೀತಿಸಿದ್ದು ಎಲಿಸಾ ಶ್ಲಿಸಿಂಗರ್ ಎಂಬಾಕೆಯನ್ನು. ಆತ ಎಲಿಸಾಳನ್ನು ಮೊದಲು ಕಂಡಾಗ ಅವನಿಗೆ ಹದಿನೈದು ವರ್ಷ, ಆಕೆಗೆ ಇಪ್ಪತ್ತಾರು ವರ್ಷ ವಯಸ್ಸಾಗಿತ್ತು. ಆಕೆ ಮಾರಿಸ್ ಎಂಬ ಪ್ರಕಾಶಕನ 'ಮಡದಿ'. ಒಂದು ಮಗು ಇತ್ತು. ಆದರೆ ಆಕೆ ಮಾರಿಸ್‌ನ ವಿವಾಹಿತ ಪತ್ನಿ ಅಲ್ಲ. ಅವಳ ಗಂಡ ನೀಚ ; ಜೈಲಿಗೆ ಹೋಗುವ ಸಂದರ್ಭ ಬಂದಾಗ ಮಾರಿಸ್, ಆ ಮನುಷ್ಯ ದೇಶಾಂತರ ಹೋಗಲು ಸಹಾಯ ಮಾಡಿ ಎಲಿಸಾಳಿಗೂ ಅವಳ ಮಗುವಿಗೂ ಆಶ್ರಯ ಕೊಟ್ಟಿದ್ದ. ಎಲಿಸಾ ಮಾರಿಸ್‌ನಿಗೆ ಪ್ರಾಮಾಣಿಕವಾಗಿ ನಡೆದುಕೊಂಡಳು. ಫ್ಲಾಬರ್ಟ್‌ನ ಕರೆಯನ್ನು ತಿರಸ್ಕರಿಸಿದಳು. ಫ್ಲಾಬರ್ಟ್ ಮಾತ್ರ ಅವಳ ಬಗ್ಗೆ ಅಗಾಧ ಪ್ರೀತಿ ಇಟ್ಟುಕೊಂಡೇ ಇದ್ದ. ಅವಳಿಗೆ ಅವನು ಮೊಟ್ಟಮೊದಲ ಪ್ರಣಯಪತ್ರ ಬರೆದದ್ದು

ಮೂವತ್ತೈದು ವರ್ಷಗಳ ನಂತರ, ಬದುಕಿನ ಅನುಭವಗಳಿಂದ ಸಾಕಷ್ಟು ಹಣ್ಣಾದ ಮೇಲೆ. ಕೊನೆಗಾಲದಲ್ಲಿ ಒಮ್ಮೆ ಅವರಿಬ್ಬರ ಭೇಟಿ ನಡೆಯಿತು. ತನ್ನ ಈ ಗುಪ್ತ ವ್ಯರ್ಥ ಪ್ರೀತಿಯನ್ನೇ ಫ್ಲಾಬರ್ಟ್ ತನ್ನ ಎರಡು ಕೃತಿಗಳ ಮೂಲದ್ರವ್ಯವಾಗಿ ಬಳಸಿಕೊಂಡಿದ್ದಾನೆ. Les Memoires d'un Fou ಎಲಿಸಾಳನ್ನು ಭೇಟಿಯಾದ ಮೊದಲ ದಿನಗಳ ಕಥೆಯನ್ನು ಹೇಳಿದರೆ, 'Education Sentimentale ಕತೆಯಲ್ಲಿ ಬರುವ ಆರ್ನ್ ಮತ್ತು ಫ್ರೆಡಿಕ್‌ರ ಕೊನೆಯ ಭೇಟಿಯ ವರ್ಣನೆ ಎಲಿಸಾ ಮತ್ತು ಫ್ಲಾಬರ್ಟ್‌ರ ಕೊನೆಯ ಭೇಟಿಯ ಅನುಭವದಿಂದ ಮೂಡಿದ್ದು. ಲೂಯಿ ಕೋಲ್ ಎಂಬ ಕವಯತ್ರಿ ಕೂಡ ಫ್ಲಾಬರ್ಟ್‌ನ ಬಗ್ಗೆ ಹುಚ್ಚಳಾಗಿ ಅವನ ಬದುಕಿನಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದಳು. ಫ್ಲಾಬರ್ಟ್‌ನ ಬದುಕಿನಲ್ಲಿ ಯಾವ ಸಂಬಂಧವೂ ಗಟ್ಟಿಯಾಗಿ ನೆಮ್ಮದಿ ಕೊಡುವಂಥದಾಗಲಿಲ್ಲ. ಎಲಿಸಾ ಕೂಡ ಕೊನೆಗಾಲದಲ್ಲಿ ಮನೋವಿಕಲತೆಗೆ ಗುರಿಯಾದಳೆಂದು ಹೇಳುತ್ತಾರೆ.

ಫ್ಲಾಬರ್ಟ್ ಶಾಲೆಯ ವಿದ್ಯಾಭ್ಯಾಸ ಮುಗಿಸಿದಮೇಲೆ ಕುಟುಂಬದ ವೈದ್ಯಮಿತ್ರ ನೊಡನೆ ವಿದೇಶಗಳಲ್ಲಿ ಪ್ರವಾಸ ಮಾಡಿ ಬಂದ. ಆಮೇಲೆ ಸ್ವಲ್ಪ ಕಾಲ ಪ್ಯಾರಿಸಿನಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದ. ಆದರೆ ಅವನಿಗೆ ಕಾನೂನು ಆಸಕ್ತಿಯ ವಿಷಯ ಆಗಲಿಲ್ಲ. ಪ್ಯಾರಿಸ್ ನಗರ ಕೂಡ ಅವನಿಗೆ ಪ್ರಿಯವಾಗಲಿಲ್ಲ. ಅಲ್ಲಿನ ವಿದ್ಯಾರ್ಥಿಗಳು, ಅವರ ಅತಿಸಾಮಾನ್ಯತೆ, ಮಧ್ಯಮವರ್ಗದ ಆಸಕ್ತಿಗಳು ಅವನನ್ನು ಕೆರಳಿಸಿದವು. 1844ರಲ್ಲಿ ಫ್ಲಾಬರ್ಟ್‌ನಿಗೆ ಬಹುಶಃ ಚಿಕ್ಕಂದಿನಿಂದಲೂ ಕಾಡುತ್ತಿದ್ದ ಮೂರ್ಛೆರೋಗ ಪ್ರಕಟಗೊಂಡಿತು. ಮರುವರ್ಷವೆ ಫ್ಲಾಬರ್ಟನ ತಂದೆ ತೀರಿಕೊಂಡ. ಮತ್ತೆ ಸ್ವಲ್ಪ ಕಾಲದಲ್ಲೇ ಸೋದರಿ ಕೆರೊಲಿನ್ ಕೂಡ ಸತ್ತಳು. ತಾಯಿ ಮತ್ತು ಸೋದರಿಯ ಮಗಳೊಡನೆ ಫ್ಲಾಬರ್ಟ್ ಬದುಕಿನ ಉಳಿದ ಕಾಲವನ್ನೆಲ್ಲ ಕ್ರೊಸಿಯೆಟ್ ಎಂಬಲ್ಲಿ, ಆತನ ತಂದೆ ಕೊಂಡಿದ್ದ ಹಳೆಯ ಕಲ್ಲುಮನೆಯೊಂದರಲ್ಲಿ, ಕಳೆದ. ಹುಡುಗನಾಗಿದ್ದಾಗಿ ನಿಂದಲೂ ಆಗೀಗ ಬರೆಯುತ್ತಿದ್ದ ಫ್ಲಾಬರ್ಟ್ ಇಡೀ ಬದುಕನ್ನು ಈಗ ಬರೆಯುವ ಕಲೆಗಾಗಿ ಮೀಸಲಿಟ್ಟ. 1880 ಮೇ 8 ರಂದು ಆತ ತೀರಿಕೊಂಡ.

ಫ್ಲಾಬರ್ಟ್ ವಿಚಿತ್ರ ಮನುಷ್ಯ ಈ ಕಾರಣಕ್ಕೆ. ಬದುಕಿನ ಉದ್ದಕ್ಕೂ ಆಂತರಿಕ ಒಂಟಿತನವನ್ನು ಅನುಭವಿಸಿದ. ಮಧ್ಯಮವರ್ಗದ ಜನ, ಅವರ ಅತಿ ಸಾಮಾನ್ಯ ಬದುಕು, ಕ್ಷುಲ್ಲಕತನ, ಢಾಂಬಿಕತೆ ಇವುಗಳ ಬಗ್ಗೆ ಅವನಿಗೆ ಅಸಹ್ಯ. ಅವನು ತನ್ನ ಹತ್ತಿರದ ಗೆಳೆಯರೆಂದು ನಂಬಿದ್ದು ಆಲ್ಫ್ರೆಡ್ ಪಾಯ್ಟೆವಿನ್, ಮಾಕ್ಸಿಂ ಡು ಕಾಂಪ್ ಮತ್ತು ಲೂಯಿ ಬೋಲ್ಹ್ ಇವರನ್ನು ಮಾತ್ರ. ಈ ಗೆಳೆಯರ ಬಗ್ಗೆ ಅವನಿಗೆ ತುಂಬ ವಿಶ್ವಾಸವಿದ್ದರೂ, ತನ್ನ ಎಲ್ಲ ಕೃತಿಗಳನ್ನೂ ಅವರಿಗೆ ಓದಿ ಹೇಳಿ ಅವರ ಅಭಿಪ್ರಾಯ ಕೇಳಿ ಅದಕ್ಕೆ ಗೌರವ ಕೊಡುತ್ತಿದ್ದರೂ, ಫ್ಲಾಬರ್ಟ್ ಈ ಮಿತ್ರರೊಡನೆಯೂ ಆಗಾಗ ಅಹಂಕಾರದಿಂದ, ಕಾರಣವಿಲ್ಲದ ಕೋಪದಿಂದ ವರ್ತಿಸುತ್ತಿದ್ದನಂತೆ. ಫ್ಲಾಬರ್ಟ್‌ನ ಬದುಕಿನ ವಿವರಗಳೆಲ್ಲ

ನಮಗೆ ಈಗ ದೊರೆತಿರುವುದು ಮಾಕ್ಸಿಂ ಡು ಕಾಂಪ್‌ನ Souvenirs Litteraires ಪುಸ್ತಕದಿಂದ.

ಫ್ಲಾಬರ್ಟ್ ಬರವಣಿಗೆಯನ್ನು ಒಂದು ತಪಸ್ಸಿನಂತೆ ಕೈಗೊಂಡ. ಬಹುಶಃ ಇನ್ನು ಯಾವ ಲೇಖಕನೂ ಇಷ್ಟು ಸಂಪೂರ್ಣವಾಗಿ, ಇಷ್ಟು ತೀವ್ರವಾಗಿ, ಇಷ್ಟು ಉದ್ದೇಶ ಪೂರ್ವಕವಾಗಿ ಬರವಣಿಗೆಯ ಕಲೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ಫ್ಲಾಬರ್ಟ್ ಸ್ಫೂರ್ತಿತತ್ತ್ವದಲ್ಲಿ ನಂಬಿಕೆಯಿದ್ದವನಲ್ಲ. ಯಾವುದೇ ವಸ್ತು ಅಥವಾ ಸಂಗತಿಯನ್ನು 'ಒಂದು' ನಿರ್ದಿಷ್ಟ ರೀತಿಯಲ್ಲಿ ಮಾತ್ರ ಅಭಿವ್ಯಕ್ತಿಸಲು ಸಾಧ್ಯ ಎಂದು ನಂಬಿದ್ದ ರೂಪನಿಷ್ಠ ಲೇಖಕ ಅವನು. 'ಸರಿಯಾಗಿ' ಬರೆಯುವುದಕ್ಕೆ ಹೆಣಗುತ್ತಿದ್ದ. ವಾಕ್ಯ, ವಾಕ್ಯದ ನುಡಿಗಟ್ಟು, ನುಡಿಗಟ್ಟಿನ ಪದಗಳು, ಪದಗಳ ಶಬ್ದ ಮತ್ತು ಇವೆಲ್ಲದರ ಲಯ ತೃಪ್ತಿಕರವಾಗಿರಬೇಕೆಂದು ಬಯಸುತ್ತಿದ್ದ. ದಿನವೂ ಬರೆದಿದ್ದನ್ನು ಸಂಜೆ ಮನೆಯ ಮಾಳಿಗೆ ಏರಿ ಗಟ್ಟಿಯಾಗಿ ಓದಿ ಹೇಗೆ 'ಕೇಳು'ತ್ತದೆಂದು ಪ್ರಯೋಗ ಮಾಡುತ್ತಿದ್ದ. ಹೀಗಾಗಿ ಮತ್ತೆ ಮತ್ತೆ ಬರೆದು, ಮತ್ತೆ ಮತ್ತೆ ತಿದ್ದಿ, ಬರೆದದ್ದನ್ನೆ ಮತ್ತೆ ಹೊಸದಾಗಿ ತನಗೆ ತೃಪ್ತಿ ಎನಿಸುವವರೆಗೆ ಬರೆಯುತ್ತಲೇ ಇದ್ದ. 'ಮಡಂ ಬಾವರಿ' ಬರೆಯಲು ಐದು ವರ್ಷ ತೆಗೆದುಕೊಂಡ. ಕೆಲವು ಬಾರಿ ಇಡೀ ಒಂದು ವಾರದ ಶ್ರಮದಿಂದ ಕೇವಲ ಎರಡೇ ಎರಡು ಸಮಾಧಾನಕರ ಸಾಲುಗಳು ಸಿದ್ಧವಾಗುತ್ತಿದ್ದದ್ದೂ ಉಂಟು. ಫ್ರೆಂಚ್ ಭಾಷೆ ಬಲ್ಲವರು ಫ್ಲಾಬರ್ಟ್‌ನ ಶೈಲಿಯ 'ಸಂಗೀತ', ಖಚಿತತೆ, ಲಯ, ಸೂಕ್ಷ್ಮ ಬಾಗು-ಬಳುಕುಗಳನ್ನು ಅಪ್ರತಿಮ ಎಂದು ಮೆಚ್ಚುತ್ತಾರೆ. ಹಾಗೆಯೇ ಅವನ ಬರವಣಿಗೆಯ ಶೈಲಿ ಸಹಜ-ಸ್ವಚ್ಛಂದ ಅಲ್ಲ ಎಂದು ಟೀಕಿಸುವವರೂ ಇದ್ದಾರೆ. ಫ್ಲಾಬರ್ಟನಿಗೆ ಬರವಣಿಗೆ ಬದುಕಿನ ಗುರಿಯಾಗಿತ್ತು, ಕಠಿಣ ತಪಸ್ಸಾಗಿತ್ತು.

ಫ್ಲಾಬರ್ಟನ ಮುಖ್ಯ ಕೃತಿಗಳು ಇವು : (1) Memoires d' un Fou (1838-40) ಎಲಿಸಾ ಶ್ಲೆಸಿಂಗರ್‌ಳನ್ನು ಮೊದಲ ಬಾರಿ ಭೇಟಿ ಮಾಡಿದ ಕತೆ. (2) Madame Bovary (1857) ಬೋಲ್ಹ್ ಹೇಳಿದ ವೈದ್ಯನೊಬ್ಬನ ಕತೆಯನ್ನು ಆಧರಿಸಿದ್ದು. (3) Salammbo (1862) ಕ್ರಿ. ಪೂ. 3ನೆಯ ಶತಮಾನದ ಘಟನೆಗಳನ್ನು ಆಧರಿಸಿದ ಚಾರಿತ್ರಿಕ ಕಾದಂಬರಿ. (4) L'Education Sentimentale (1869) ಎಮ್ಮಾ ತರಹದ್ದೇ ಆದರೆ ಪುರುಷ ಪ್ರಧಾನ ಕತೆ. 1848ರ ಕ್ರಾಂತಿಕಾಲದಲ್ಲಿ ಘಟನೆಗಳು ನಡೆಯುತ್ತವೆ. ಇದು ಫ್ಲಾಬರ್ಟನ ಅತ್ಯುತ್ತಮ ಕೃತಿ ಎಂದು ಕೆಲವು ಫ್ರೆಂಚ್ ವಿಮರ್ಶಕರ ಅಭಿಪ್ರಾಯ. (5) La Tentation de St Antoine (1874) ಧಾರ್ಮಿಕ ವಿಷಯಗಳಲ್ಲಿ ಇದ್ದ ಆಸಕ್ತಿಯ ಫಲವಾಗಿ ಹುಟ್ಟಿದ ಕಾದಂಬರಿ (6) Trois Contes (1877) ಮೂರು ಕತೆಗಳು. ಇವುಗಳಲ್ಲೆಲ್ಲ ಮುಖ್ಯವಾಗಿ 'ಮಡಾಂ ಬಾವರಿ' ಕಾದಂಬರಿಯಿಂದಾಗಿ ಫ್ಲಾಬರ್ಟ್ ವಿಶ್ವವಿಖ್ಯಾತನಾಗಿದ್ದಾನೆ.

2

'ಮಡಾಂ ಬಾವರಿ'ಯ ಕತೆಯ ಮೂಲ ಫ್ಲಾಬರ್ಟ್‌ನಿಗೆ ದೊರೆತಿದ್ದು ಅವನ ಗೆಳೆಯ ಬೋಲ್ಸ್‌ನಿಂದ. ರೂವೆನ್ ಎಂಬ ಊರಿನಲ್ಲಿದ್ದ ಡೆಲಾಮೇರ್ ಎಂಬ ವೈದ್ಯ, ತನಗಿಂತ ವಯಸ್ಸಾಗಿದ್ದ ವಿಧವೆಯೊಬ್ಬಳನ್ನು ಮದುವೆಯಾಗಿ, ಆಕೆ ಸತ್ತಮೇಲೆ, ನೆರೆಯ ರೈತನೊಬ್ಬನ ಸುಂದರ ಮಗಳ ಕೈಹಿಡಿದು, ಸೊಕ್ಕಿನ ಥಂಬಾಚಾರದ ಥಳುಕಿನ ದುಂದು ವೆಚ್ಚದ ಆ ಹುಡುಗಿ ಗಂಡನಲ್ಲಿ ಬೇಸರಗೊಂಡು, ಇತರ ಪ್ರಿಯಕರರನ್ನು ಸಂಪಾದಿಸಿಕೊಂಡು, ಮಾಡಿದ ಸಾಲ ತೀರಿಸಲಾರದೆ ವಿಷ ತಿಂದು ಸತ್ತದ್ದು, ಆನಂತರ ಡೆಲಾಮೇರ್ ಕೂಡ ಆತ್ಮಹತ್ಯೆ ಮಾಡಿಕೊಂಡದ್ದು ಫ್ಲಾಬರ್ಟ್ ಕೇಳಿದ ಕತೆ. ಆತ ಈ ಘಟನೆಯನ್ನು ಕಾದಂಬರಿಯಾಗಿಸಿದ್ದಾನೆ.

ಎಮ್ಮಾ ಬಾವರಿ ನಾರ್ಮಂಡಿಯ ರೈತನೊಬ್ಬನ ಮಗಳು. ಅವಳಿಗೆ ಅತ್ಯುತ್ತಮ ಶಿಕ್ಷಣ ಸಿಗಲಿ ಎಂದು ತಂದೆ ಆಕೆಯನ್ನು ಕಾನ್ವೆಂಟಿಗೆ ಸೇರಿಸಿದ. ಎಮ್ಮಾ ಬುದ್ಧಿವಂತೆ. ಅದರಲ್ಲೂ ಧಾರ್ಮಿಕ ಬೋಧನೆಯ ತರಗತಿಯಲ್ಲಿ ತುಂಬ ಚುರುಕಾಗಿ ಉತ್ತರಗಳನ್ನು ಹೇಳುತ್ತಿದ್ದಳು. ಆದರೂ ಅವಳ ಧಾರ್ಮಿಕ 'ಆಸ್ತಿ' ವಿಚಿತ್ರವಾದದ್ದು. ಕ್ರೈಸ್ತ ಧರ್ಮದಲ್ಲಿ ಸಂಕೇತಗಳಾಗಿರುವ 'ರೋಗಗ್ರಸ್ತ' ಮೇಕೆ ಮರಿ, ಗಾಯವಾಗಿ ರಕ್ತ ಸುರಿಯುತ್ತಿರುವ ಹೃದಯ, 'ಸಿಲುಬೆಯ ಭಾರಕ್ಕೆ ಕುಗ್ಗಿರುವ' ಕ್ರಿಸ್ತ - ಈ ಪ್ರತಿಮೆಗಳ ಬಗ್ಗೆ ಅವಳಿಗೆ ತುಂಬ ಪ್ರೀತಿ ಇತ್ತು. ಆದರೆ ಅವಳು ಪ್ರಾರ್ಥನಾ ಸಭೆಗಳಿಗೆ ಹೋಗುತ್ತಿರಲಿಲ್ಲ. ಕ್ರೈಸ್ತರಲ್ಲಿ 'ಪಾಪ ನಿವೇದನೆ' ಒಂದು ಧಾರ್ಮಿಕ ವಿಧಿ. ಎಮ್ಮಾಳಿಗೆ ಮಸುಕು ಕತ್ತಲಲ್ಲಿ ಬಹಳ ಹೊತ್ತು ಮೊಳಕಾಲೂರಿ ಕುಳಿತುಕೊಳ್ಳುವ ಆಸೆ – ಇಂಥ ಭಂಗಿಯ, ಸ್ಪರ್ಶದ, ಶಬ್ದದ ಸುಖ ಸಾಧ್ಯವಾದಷ್ಟೂ ಹೆಚ್ಚು ಹೊತ್ತು ಸಿಗಲಿ ಎಂಬ ಆಸೆಯಿಂದ ಅವಳು ಪಾಪ ನಿವೇದನೆಯ ಸಂದರ್ಭದಲ್ಲಿ ತಾನು ಮಾಡಿಲ್ಲದ ಪಾಪಗಳನ್ನೆಲ್ಲ ಸೃಷ್ಟಿಸಿ, ಕಲ್ಪಿಸಿ ಹೇಳುತ್ತಿದ್ದಳು.

ಕಾನ್ವೆಂಟಿಗೆ ಒಬ್ಬ ವಯಸ್ಸಾದ ಕೆಲಸದಾಕೆ ಬರುತ್ತಿದ್ದಳು. ಅವಳಿಗೆ ನೂರು ವರ್ಷಗಳಷ್ಟು ಹಳೆಯ ಹಾಡುಗಳು ಬರುತ್ತಿದ್ದವು. ಹುಡುಗಿಯರಿಗೆ ಅದ್ಭುತ ಪ್ರಣಯ ಕತೆಗಳನ್ನು ಹೇಳುತ್ತಿದ್ದಳು. ಪ್ರೇಮದ ಕತೆ ಕಾದಂಬರಿಗಳನ್ನು ಓದಲು ತಂದುಕೊಡುತ್ತಿದ್ದಳು. ನಿರ್ಜನ ಅರಮನೆಗಳಲ್ಲಿ ಮೂರ್ಛೆ ಹೋಗುವ ಲಲನೆಯರ, ಕುದುರೆಗಳು ಸಾಯು ವುದನ್ನೂ ಲೆಕ್ಕಿಸದೆ ದೌಡಾಯಿಸಿ ಬರುವ ಮತ್ತ ಪ್ರಣಯಿಗಳ, ಆಣೆ ಪ್ರಮಾಣ ಕಂಬನಿಗಳ, ವಸಂತದ ಅಡವಿಗಳ, ತಣ್ಣನೆ ನೆರಳಲ್ಲಿ ಕುಳಿತು ಹಾಡುವ ಕೋಗಿಲೆಗಳ, ಸಿಂಹ ಪೌರುಷದ ಕುಸುಮಕೋಮಲತೆಯ ಪುರುಷಶ್ರೇಷ್ಠರ ವರ್ಣನೆಗಳು ಆ ಕಾದಂಬರಿಗಳಲ್ಲಿ ತುಂಬಿರುತ್ತಿದ್ದವು. ಈ ಕತೆಗಳನ್ನೆಲ್ಲ ಓದಿ ಓದಿ ಎಮ್ಮಾಳ ಮನಸ್ಸು ಒಂದು ಆಕಾರ ಪಡೆಯುತ್ತಿತ್ತು. ಕಾನ್ವೆಂಟಿಗೆ ಬಂದಾಗ 'ಮಾದರಿ ಮಗು'ವಾಗಿದ್ದ ಎಮ್ಮಾ ಶಾಲೆ ಬಿಟ್ಟು

ಹೋಗುವಾಗ ಕಾನ್ವೆಂಟಿನ ಸನ್ಯಾಸಿನಿಯರಿಗೆಲ್ಲ ಸದ್ಯ ಆಕೆ ಹೋಗುತ್ತಾಳೆಂದು ಸಂತೋಷವೇ ಆಗಿತ್ತು. ಫ್ಲಾಬರ್ಟ್ ಕಾದಂಬರಿಯಲ್ಲಿ ಹೀಗೆ ಹೇಳುತ್ತಾನೆ : "ಈ ಸ್ವಭಾವ ಚರ್ಚನ್ನು ಅಲ್ಲಿಯ ಸುಂದರ ಹೂವುಗಳಿಗಾಗಿ, ಸಂಗೀತವನ್ನು ಹಾಡಿನ ಪದಗಳಿಗಾಗಿ, ಸಾಹಿತ್ಯವನ್ನು ಮನಸ್ಸನ್ನು ಉದ್ರೇಕಿಸುವ ಅದರ ಗುಣಕ್ಕಾಗಿ ಪ್ರೀತಿಸುವ ಸ್ವಭಾವ. ಶಿಸ್ತು ಅವಳಿಗೆ ಕಿರಿಕಿರಿಯಾಗುತ್ತಿತ್ತು. ಶಿಸ್ತಿನಿಂದಾಗಿ ಅವಳ ಮನಸ್ಸು ಧಾರ್ಮಿಕ ನಂಬಿಕೆಯ ವಿರುದ್ಧ ಬಂಡೆದ್ದಿತು. ಧಾರ್ಮಿಕ ಶ್ರದ್ಧೆ ಮತ್ತು ಶಿಸ್ತು ಎರಡೂ ಅವಳ ಸ್ವಭಾವಕ್ಕೆ ಅಸಹ್ಯವಾಗಿದ್ದವು." ಕಾನ್ವೆಂಟಿನಿಂದ ಹೊರ ಬಂದಾಗ ಎಮ್ಮಾ 'ರೊಮಾಂಟಿಕ್' ಭಾವನೆ ಕಲ್ಪನೆ ಕನಸುಗಳಲ್ಲಿ ಬದುಕುವ, ನಿಜದ ಬದುಕಿನಲ್ಲೂ ಕಾದಂಬರಿಯ ರಮ್ಯಲೋಕದ ಅನುಭವವನ್ನೇ ಬಯಸುವ ಹುಡುಗಿಯಾಗಿಬಿಟ್ಟಿದ್ದಳು.

ಚಾರ್ಲ್ಸ್ ಬಾವರಿ ಒಬ್ಬ ವೈದ್ಯ. ಹಳ್ಳಿಯಲ್ಲಿ ನೆಲೆಸಿದ್ದ. ಅವನನ್ನು ಮದುವೆಯಾಗುವುದು ಎಮ್ಮಾಳ ಪಾಲಿಗೆ ಬಂದ ವಿಧಿ. ಚಾರ್ಲ್ಸ್ ಕಲ್ಪನಾಶಕ್ತಿ ಇಲ್ಲದ, ದುರ್ಬಲ ಸ್ವಭಾವದ ಮನುಷ್ಯ. ತನ್ನ ತಾಯಿ ನೋಡಿದ ಹುಡುಗಿಯನ್ನು ಮರುಮಾತಾಡದೆ ಮದುವೆಯಾಗಿದ್ದ. ಆಕೆ ಸತ್ತಮೇಲೆ ಎಮ್ಮಾಳನ್ನು ಎರಡನೆಯ ಹೆಂಡತಿಯಾಗಿ ಕೈ ಹಿಡಿದಿದ್ದ. ಕಾದಂಬರಿಗಳ ನಾಯಕಿಯರು ನಾಯಕರನ್ನು ಆರಾಧಿಸುವಂತೆ ತಾನೂ ಚಾರ್ಲ್ಸ್‌ನನ್ನು ಆರಾಧಿಸಬೇಕೆಂದು ಎಮ್ಮಾಳ ಆಸೆ. ಆದರೆ ಅವನು ಆಕರ್ಷಕ ವ್ಯಕ್ತಿತ್ವದವನಲ್ಲ. 'ಗೌರವಾನ್ವಿತ' ಆಗುವುದೂ ಸಾಧ್ಯವಿರಲಿಲ್ಲ. ಒಂದೆರಡು ಬಾರಿ ಸಹಾಯಕ್ಕೆಂದು ಕರೆದ ಜೊತೆಯ ವೈದ್ಯರಿಂದ ಅವಮಾನಿತನಾದದ್ದೂ ಉಂಟು. ಎಮ್ಮಾಳ ಉತ್ಪ್ರೇಕ್ಷಿತ 'ರಮ್ಯ' ಭಾವನೆಗಳ ಅತಿರೇಕವನ್ನು ತಿದ್ದುವುದು ಅವನಿಗೆ ಸಾಧ್ಯವಾಗಲಿಲ್ಲ. ನಿಜವೆಂದರೆ ತನ್ನ ಹೆಂಡತಿಯಲ್ಲಿ ಇಂಥ ಭ್ರಮೆಗಳು ಇವೆ ಎಂದೇ ಅವನಿಗೆ ಗೊತ್ತಿರಲಿಲ್ಲ.

ಒಮ್ಮೆ ಬಾವರಿ ದಂಪತಿಗಳಿಗೆ ಸ್ಥಳೀಯ ಶ್ರೀಮಂತನೊಬ್ಬನ ಔತಣಕೂಟಕ್ಕೆ ಆಹ್ವಾನ ಬಂದಿತು. ಅಲ್ಲಿ ಎಮ್ಮಾಳಿಗೆ ಶ್ರೀಮಂತರ ವೈಭವೋಪೇತ ಬದುಕಿನ ದರ್ಶನವಾಯಿತು. ಈ ಅನುಭವದಿಂದ ಅವಳ ಬದುಕಿನಲ್ಲಿ ಕೊರತೆಯ ಕಂದರವೊಂದು ಬಾಯ್ದೆರೆದು ವಿಕಾರವಾಗಿ ಆಕಳಿಸತೊಡಗಿತು – ಬಿರುಗಾಳಿ ಮಳೆ ಬಂದಾಗ – ಒಂದೇ ಇರುಳಲ್ಲಿ – ಪರ್ವತದ ಒಂದು ಭಾಗದ ಮಣ್ಣು ಜರಿದು ದೊಡ್ಡ ಕಂದರವೊಂದು ಬಾಯ್ದೆರೆಯುವಂತೆ. ಅಪಘಾತಕ್ಕೆ ಈಡಾದ ನಾವಿಕ ದ್ವೀಪವೊಂದರ ಏಕಾಂತದಲ್ಲಿ ಹತಾಶನಾಗಿ, ಹಡಗಿನ ಸುಳಿವು ಕಂಡೀತೇ ಎಂದು ದಿಗಂತವನ್ನು ದಿಟ್ಟಿಸುವಂತೆ ಎಮ್ಮಾ ಏನನ್ನೋ ನಿರೀಕ್ಷಿಸುತ್ತಿದ್ದಳು. ಏನೋ ಆಗಬೇಕು, ಆಗಲಿ ಎಂಬ ಅವ್ಯಕ್ತ ಆಸೆ. ಏನೂ ಆಗುತ್ತಿಲ್ಲವಲ್ಲ ಎಂಬ ಬೇಸರ. ಸಂಗೀತ ಕಲಿಯುವುದನ್ನು ಬಿಟ್ಟಳು, ಚಿತ್ರ ಬರೆಯುವುದನ್ನು ಬಿಟ್ಟಳು, ಇಡೀ ದಿನ ಪ್ಯಾರಿಸ್ ನಗರದ ಭೂಪಟ ನೋಡುತ್ತ ಕಾಲ

ಕಳೆಯತೊಡಗಿದಳು. ಮನೆಯ ಬಗ್ಗೆ, ಕೊನೆಗೆ ತನ್ನ ಬಗ್ಗೆಯೂ ಆಸಕ್ತಿ ಕಡಿಮೆ ಆಯಿತು. ಮಸಕು ಹತ್ತಿ ಬಟ್ಟೆ ತೊಡಲು, ಕಡಿಮೆ ಬೆಲೆಯ ಹಳದಿ ಮೇಣದ ಬತ್ತಿ ಉರಿಸಲು ತೊಡಗಿದಳು.

ಎಮ್ಮಾಳಿಗೆ ಮೂವತ್ತು ವರ್ಷ ವಯಸ್ಸಾಗಿತ್ತು, ಒಬ್ಬ ಮಗಳು ಹುಟ್ಟಿದ್ದಳು. ಆದರೂ ಅವಳ ರೊಮಾಂಟಿಕ್ ಅಪೇಕ್ಷೆಗಳು ಹಾಗೇ ಇದ್ದವು. ಆ ಸಮಯದಲ್ಲಿ ಆಕೆಗೆ ರೊಡಾಲ್ಫ್‌ನ ಪರಿಚಯವಾಯಿತು. ರೊಡಾಲ್ಫ್ ಒಬ್ಬ ಜಮೀನುದಾರ. ಸಾಕಷ್ಟು ಹೆಣ್ಣುಗಳನ್ನು ಅನುಭವಿಸಿದ್ದ ಲಂಪಟ. ಮದುವೆಯಾಗಿ ಒಬ್ಬ ಮಗಳಿರುವ ಹೆಂಗಸಾದರೂ, ಜನ ಆಡಿಕೊಂಡಾರೆಂಬ ಅಂಜಿಕೆಯಿದ್ದರೂ, ಹೊಳಪು ಕಣ್ಣಿನ ಎಮ್ಮಾಳನ್ನು ಅನುಭವಿಸುವ ಆಸೆ ಅವನಿಗಿತ್ತು. ಎಮ್ಮಾಳಿಗೂ ಕೊನೆಗಾದರೂ ತನಗೊಬ್ಬ ಪ್ರೇಮಿ ದೊರೆತನೆಂಬ ಸಂತೋಷ. ''ಆಗ ಅವಳ ಮನಸ್ಸಿನಲ್ಲಿ ವ್ಯಭಿಚಾರಿಣಿಯರ ಸಮೂಹದ ಮರುಳು ಮಾಡುವ ಸುಮಧುರ ಸಂಗೀತ ಕೇಳತೊಡಗಿತು. ಅವಳು ತನ್ನ ನಿಜದ ಬದುಕಿನಲ್ಲೇ ಕಾದಂಬರಿಯ ಒಂದು ಪಾತ್ರವಾಗತೊಡಗಿದ್ದಳು. ಅವಳು ಇದನ್ನು ಕಳವಳವಿಲ್ಲದೆ, ಅಳುಕಿಲ್ಲದೆ, ದುಃಖವಿಲ್ಲದೆ ಅನುಭವಿಸಿದಳು'' ಎಂದು ಫ್ಲಾಬರ್ಟ್ ವರ್ಣಿಸಿದ್ದಾನೆ.

ರೊಡಾಲ್ಫ್ ಚತುರ. ಎಮ್ಮಾಳ ರೊಮಾಂಟಿಕ್ ಕನಸುಗಳನ್ನು ಪ್ರಚೋದಿಸಿದ. ಅವಳ ಕಲ್ಪನೆಯ ಪ್ರೇಮಿಯಂತೆಯೇ ನಟಿಸಿದ. ತನ್ನ ಆಸೆ ಈಡೇರಿಸಿಕೊಂಡ. ಅವನಿಗೆ ಎಮ್ಮಾಳಲ್ಲಿ ಕ್ರಮೇಣ ಬೇಸರ ಹುಟ್ಟಿದಂತೆ ಅವಳಿಗೆ ಅವನ ಮೇಲೆ ಮೋಹ ಹೆಚ್ಚುತ್ತಾ ಹೋಯಿತು. ಗಂಡನನ್ನು ಬಿಟ್ಟು ಅವನೊಡನೆ ಪರಾರಿಯಾಗುವ ಆಸೆ ತೋಡಿಕೊಂಡಳು. ರೊಡಾಲ್ಫ್ ಅವಳ ಬಲವಂತಕ್ಕೆ ಒಪ್ಪಿಕೊಂಡ. ಆದರೆ ಕೊನೆಗಳಿಗೆಯಲ್ಲಿ ತಾನು ಅವಳನ್ನು ತೊರೆಯುವುದಾಗಿ ಕಾಗದ ಬರೆದುಬಿಟ್ಟ. ಎಮ್ಮಾಳಿಗೆ ದೊಡ್ಡ ಆಘಾತವಾಯಿತು. ತೀವ್ರವಾದ ಕಾಯಿಲೆಯಿಂದ ನರಳಿದಳು. ರೊಡಾಲ್ಫ್‌ನಲ್ಲಿ ಆಕೆ ತೃಪ್ತಿ ಕಂಡಿದ್ದಳು. ಅಸಾಮಾನ್ಯ ಪ್ರೇಮಿ ಬೇಕೆಂಬ ಅವಳ ಹಂಬಲಕ್ಕೆ ತಕ್ಕಂತೆ ವರ್ತಿಸಿ ನಟಿಸಿದ್ದ. ಅವನ ಮೃಗೀಯತೆ ಪ್ರೇಮಮತ್ತನ ವರ್ತನೆಯಂತೆ, ಅವನ ಬೇಸರ ಕವಿಯ ದಿವ್ಯ ನಿರ್ಲಕ್ಷ್ಯದಂತೆ ಅವಳಿಗೆ ಕಂಡಿತ್ತು. ಆದ್ದರಿಂದಲೇ ರೊಡಾಲ್ಫ್ ಸಂಬಂಧ ಕಡಿದುಹೋದದ್ದು ಎಮ್ಮಾಳ ಮನಸ್ಸಿಗೆ ಆಳವಾದ ಗಾಯ ಮಾಡಿದಂತಾಯಿತು. ಎಮ್ಮಾ ಕಾಯಿಲೆಯಿಂದ ನಿಧಾನವಾಗಿ ಸುಧಾರಿಸಿಕೊಂಡಳು. ಅವಳ ಅತೃಪ್ತ ರೊಮಾಂಟಿಕ್ ಆಸೆಗಳು ಧಾರ್ಮಿಕ ರೂಪ ಪಡೆಯತೊಡಗಿದವು. ಹೆಚ್ಚು ಪ್ರಾರ್ಥನೆ, ಹೆಚ್ಚು ಗಾನ, ಹೆಚ್ಚು ಭಗವದ್ಭಕ್ತಿಯಲ್ಲಿ ಮುಳುಗಿದಳು.

ಆದರೆ ಎಮ್ಮಾಳ ಧಾರ್ಮಿಕ ಆಸಕ್ತಿ ತುಂಬ ದಿನ ಮುಂದುವರೆಯಲಿಲ್ಲ. ಲಿಯಾನ್ ಪರೀಕ್ಷೆ ಮುಗಿಸಿ ಯಾನ್‌ವಿಲ್ ಹಳ್ಳಿಯ ಪಕ್ಕದ ರೊಯೆನ್ ಎಂಬ ಊರಿನಲ್ಲಿ

ನೆಲಸಿ ವಕೀಲಿ ಆರಂಭಿಸಿದ. ಎಮ್ಮಾ ಮತ್ತು ಲಿಯಾನ್‌ರ ಸಂಬಂಧ ಮತ್ತೆ ಬೆಳೆಯಿತು. ಈ ಹೊಸ ಸಂಬಂಧದಲ್ಲಿ ಅವಳೇ ಯಜಮಾನಿಯಾದಳು. ಪ್ರಣಯ ಬೆಳೆದಂತೆ ತನ್ನ ಮೂರ್ಖ ಗಂಡನಿಂದ ವಾರಕ್ಕೊಮ್ಮೆ ರೊಯೆನ್‌ಗೆ ಸಂಗೀತಪಾಠಕ್ಕೆ ಹೋಗಲು ಅನುಮತಿ ಗಿಟ್ಟಿಸಿಕೊಂಡಳು. ಲಿಯಾನ್ ಮತ್ತು ಎಮ್ಮಾ ರೊಯೆನ್‌ನಲ್ಲಿ ನೃತ್ಯ ಮಂದಿರಗಳು, ಪಾನಗೃಹಗಳು ಮತ್ತೆ ವೇಶ್ಯೆಯರೇ ಹೆಚ್ಚಾಗಿರುವ ಭಾಗದ ಒಂದು ಹೋಟೆಲಿನಲ್ಲಿ ಉಳಿದುಕೊಂಡು ತಮ್ಮದೇ ಜಗತ್ತಿನಲ್ಲಿ ವಿಹರಿಸಿದರು. ಎಮ್ಮಾ ಗಂಡನನ್ನು ಒಲಿಸಿ ಹಕ್ಕುಪತ್ರದ ಮೂಲಕ ಆಸ್ತಿ ವ್ಯವಹಾರದ ಹಕ್ಕನ್ನೆಲ್ಲ ತಾನೇ ಪಡೆದುಕೊಂಡಳು. ವೈಭವದಿಂದ ಬದುಕಬೇಕೆಂಬ ತನ್ನ ಆಸೆ ತೀರಿಸಿಕೊಳ್ಳಲು ದುಂದುವೆಚ್ಚ ಮಾಡತೊಡಗಿದಳು. ಮನೆಯ ಕಿಟಕಿಗೆ ಸುಂದರ ಪರದೆಗಳು, ನೆಲಕ್ಕೆ ಬೆಲೆ ಬಾಳುವ ರತ್ನಗಂಬಳಿಗಳು ಬಂದವು.

ಹ್ಯೆರೋ ಎಂಬ ವ್ಯಾಪಾರಿ ಎಮ್ಮಾಳ ದುಂದುವೆಚ್ಚಕ್ಕೆ ಕುಮ್ಮಕ್ಕು ಕೊಟ್ಟ. ಆ ಧೂರ್ತ ಎಮ್ಮಾ ಕೇಳಿದಂತೆಲ್ಲ ಸಾಲ ಕೊಡುತ್ತ ಬಂದ. ಅವಳ ಆಸ್ತಿಯನ್ನೆಲ್ಲ ಲಪಟಾಯಿಸುವ ಆಸೆ ಅವನದು. ಕಾಲ ಕಳೆದಂತೆ ಎಮ್ಮಾಳ ಪ್ರಣಯ ವ್ಯವಹಾರದ ಬಿಸಿ ತಗ್ಗಿತ್ತು. ಅವಳಿಗೆ ವ್ಯಭಿಚಾರದಿಂದ ಪಡೆದ ಅನುಭವವೂ ಮದುವೆಯ ಸಹಜ ಮಾಮೂಲು ಅನುಭವದಂತೆಯೇ ಅನ್ನಿಸತೊಡಗಿತ್ತು. ಆದರೆ ಈ ವೇಳೆಗೆ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದ್ದು ಮನೆ ಹರಾಜಿಗೆ ಬಂದಿತ್ತು. ಎಮ್ಮಾಳಿಗೆ ಯಾವ ಗೆಳೆಯರಿಂದಲೂ ಸಹಾಯ ಸಿಗಲಿಲ್ಲ. ಅವಳು ಅವಮಾನ ಎದುರಿಸಲಾರದೆ ವಿಷ ತಿಂದು ಆತ್ಮಹತ್ಯೆ ಮಾಡಿಕೊಂಡಳು. ಫ್ಲಾಬರ್ಟ್ ಅವಳ ಕೊನೆಯ ಕ್ಷಣಗಳನ್ನು ದೀರ್ಘವಾಗಿ ಸೂಕ್ಷ್ಮ ವಿವರಗಳೊಂದಿಗೆ ವರ್ಣಿಸಿದ್ದಾನೆ. ಎಮ್ಮಾ ಸತ್ತ ನಂತರ ಚಾರ್ಲ್ಸ್ ಬಾವರಿ ಕೂಡ ಬಹಳ ಕಾಲ ಬದುಕಲಿಲ್ಲ. ಅವನ ಮನಸ್ಸು ಕೆಟ್ಟಿತು. ಜಗಳಗಂಟ ಅಹಂಕಾರಿ ಮೊಂಡು ಮನುಷ್ಯನಾಗಿಬಿಟ್ಟ. ವೃತ್ತಿಯ ಆಸಕ್ತಿಯೂ ಹೋಗಿಬಿಟ್ಟಿತು. ಬೇಸತ್ತ ವ್ಯರ್ಥ ಬದುಕು ಸ್ವಲ್ಪ ಕಾಲ ನಡೆಸಿ ಆತನೂ ತೀರಿಕೊಂಡ.

ಇದು ಸುಮಾರು ಐದು ನೂರು ಪುಟಗಳಷ್ಟು ದೀರ್ಘವಾದ ಕಾದಂಬರಿಯ ಸುಲಭವಾದ ಕಥಾಹಂದರ.

3

'ಮಡಾಂ ಬಾವರಿ' ಫ್ರೆಂಚ್ ಸಾಹಿತ್ಯದ, ಮತ್ತು ವಿಶ್ವ ಕಾದಂಬರಿ ಸಾಹಿತ್ಯದ ಮೊಟ್ಟ ಮೊದಲ ಪ್ರಮುಖ ವಾಸ್ತವವಾದಿ ಮಾರ್ಗದ ಕಾದಂಬರಿ. ಬಹುಶಃ ಇದರ

'ವಾಸ್ತವ ವಾದ' ಬರವಣಿಗೆಯ ಕಾರಣದಿಂದಲೇ ಇದು ಪ್ರಕಟವಾದ ಕೂಡಲೇ 'ಅಶ್ಲೀಲ ಕೃತಿ' ಎಂಬ ಆಪಾದನೆಯನ್ನು ಹೊತ್ತು ನ್ಯಾಯಾಲಯದ ಮೊಕದ್ದಮೆಯನ್ನು ಎದುರಿಸ ಬೇಕಾಯಿತು. ಏಕೆಂದರೆ ಫ್ಲಾಬರ್ಟ್ ಅವ್ಯೆಯಕ್ತಿಕತೆಯ, ಕಲಾವಿದನ ವ್ಯಕ್ತಿತ್ವನಿರಸನದ ಪ್ರತಿಪಾದಕನಾಗಿದ್ದ. ''ಕಲಾವಿದ ಹೇಗೆ ಸೃಷ್ಟಿಸಬೇಕೆಂದರೆ ಮುಂದಿನ ತಲೆಮಾರುಗಳಿಗೆ ಆತ ಒಬ್ಬ ವ್ಯಕ್ತಿಯಾಗಿ ಬದುಕಿದ್ದ ಎಂಬುದನ್ನು ನಂಬುವುದಕ್ಕೆ ಆಗದಂತೆ ಸೃಷ್ಟಿಸಬೇಕು'' ಎಂದು ಆತ ಒಂದು ಕಡೆ ಹೇಳಿದ್ದಾನೆ. ಅದರಂತೆಯೇ ಕಾದಂಬರಿಕಾರನ ಸ್ವಂತ ಅಭಿಪ್ರಾಯಗಳು, ತೀರ್ಮಾನಗಳು 'ಮಡಾಂ ಬಾವರಿ'ಯಲ್ಲಿ ಎಲ್ಲೂ ಕಾಣುವುದಿಲ್ಲ. ಘಟನೆಗಳು ಮತ್ತು ಭಾವನೆಗಳನ್ನು ವೈದ್ಯನಂತೆ, ವಿಜ್ಞಾನಿಯಂತೆ, ಅವ್ಯೆಯಕ್ತಿಕವಾಗಿ ಆತ ಮಂಡಿಸುತ್ತಾನೆಯೇ ಹೊರತು ನೀತಿನಿಷ್ಠನ ಧೋರಣೆ ಅವನಲ್ಲಿಲ್ಲ. ಎಮ್ಮಾಳ ವರ್ತನೆಯನ್ನು ಅವನು ಅನುಮೋದಿಸುವುದೂ ಇಲ್ಲ, ತಪ್ಪೆಂದು ಟೀಕಿಸುವುದೂ ಇಲ್ಲ. ಈ ಕಾರಣದಿಂದಲೇ 'ಮಡಾಂ ಬಾವರಿ' ಅಶ್ಲೀಲ ಕೃತಿ ಎಂಬ ಆಪಾದನೆಯನ್ನು ಎದುರಿಸಬೇಕಾಗಿ ಬಂದಿತು.

ವಾಸ್ತವವಾದಿ ಮಾರ್ಗದ ಹಲವು ಕೃತಿಗಳು ಫ್ರೆಂಚ್ ಭಾಷೆಯಲ್ಲಿ ಬಂದಿದ್ದರೂ ಫ್ಲಾಬರ್ಟ್‌ನ ವಾಸ್ತವವಾದ ಸ್ವಲ್ಪ ಭಿನ್ನವಾದದ್ದು. ಉದಾಹರಣೆಗೆ ಬಾಲ್‌ಜಾಕ್ (1799-1850 : 'ದಿ ಹ್ಯೂಮನ್ ಕಾಮಿಡಿ'ಯ ಲೇಖಕ) ಸೂಕ್ಷ್ಮವಾಗಿ ಬದುಕನ್ನು ಗಮನಿಸುವ, ಗಮನಿಸಿದ್ದನ್ನು ಪ್ರಾಮಾಣಿಕವಾಗಿ ದಾಖಲಿಸುವ ಲೇಖಕ. ಅವನ ಬರವಣಿಗೆಯಲ್ಲಿ ಎಷ್ಟೊಂದೆಲ್ಲ ವಿವರಗಳಿರುತ್ತವೆಯೆಂದರೆ ''ಇದು ಬದುಕಿನ ಒಂದು ತುಣುಕು'' ಎನಿಸುವಂತೆ ಇರುತ್ತದೆ. ಆದರೆ ಬಾಲ್‌ಜಾಕ್ ವ್ಯಕ್ತಿಗಿಂತ ಪರಿಸರಕ್ಕೆ ಪ್ರಾಮುಖ್ಯ ಕೊಡುವ ಲೇಖಕ. ಪರಿಸರ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ನಂಬಿದ್ದವನು. ಆದ್ದರಿಂದಲೇ ಅವನ ಬರವಣಿಗೆಯಲ್ಲಿ ಭಿನ್ನ ಪರಿಸರದಿಂದ ರೂಪಿತವಾದ 'ಮಾದರಿ' ಪಾತ್ರಗಳು ಇವೆಯೇ ಹೊರತು, 'ಜೀವಂತ ಪಾತ್ರಗಳಾಗಲಿ, ಮನುಷ್ಯವರ್ತನೆಯ ರಹಸ್ಯಗಳನ್ನು ಅನ್ವೇಷಿಸುವ ಉದ್ದೇಶವಾಗಲಿ ಕಾಣುವುದಿಲ್ಲ. ಆದರೆ ಫ್ಲಾಬರ್ಟ್ ಮಾದರಿಯನ್ನಲ್ಲ, ವ್ಯಕ್ತಿಯನ್ನು ಸೃಷ್ಟಿಸಲು ಬಯಸಿದ. ಎಮ್ಮಾಳ 'ಪತನ'ವನ್ನು ಕಾಣುವಾಗ ಓದುಗನಿಗೆ ಆಕೆ ನಿಜವಾದ ವ್ಯಕ್ತಿಯಂತೆಯೇ ಕಂಡಾಳು. ಬಾಲ್‌ಜಾಕ್‌ನಲ್ಲಿಲ್ಲದ ಸೂಕ್ಷ್ಮತೆ ಫ್ಲಾಬರ್ಟ್‌ನಲ್ಲಿದೆ.

ಫ್ಲಾಬರ್ಟ್‌ನ ಇನ್ನೊಂದು ಲಕ್ಷಣ ಅವನ ಅಪ್ರತಿಮ ರೂಪನಿಷ್ಠೆ. ''ಸುಂದರ ರೂಪ ವಿಲ್ಲದೆ ಆಲೋಚನೆಗಳು ಇರುವುದು ಸಾಧ್ಯವಿಲ್ಲ.'' ''ತನ್ನ ರೂಪದ ಕಾರಣದಿಂದಲೇ ವಿಚಾರವೊಂದರ ಅಸ್ತಿತ್ವ ಸಾಬೀತಾಗುವುದು'' ಎಂಬುದು ಅವನ ನಂಬಿಕೆ. ಪರಿಪೂರ್ಣ ಸೌಂದರ್ಯದ ಅನ್ವೇಷಕ ಫ್ಲಾಬರ್ಟ್. ವಸ್ತು ಯಾವಾಗಲೂ ರೂಪದ ಜೊತೆ ಘರ್ಷಿಸುತ್ತದೆ ಎಂದು ಭಾವಿಸಿದ್ದ ಫ್ಲಾಬರ್ಟ್ 'ವಸ್ತುರಹಿತ' ಕೃತಿಯೊಂದನ್ನು ರಚಿಸುವ,

ಆ ಮೂಲಕ ಪರಿಪೂರ್ಣ ರೂಪದ ಸೃಷ್ಟಿಯೊಂದನ್ನು ಮಾಡುವ ಆಸೆ ಇಟ್ಟುಕೊಂಡಿದ್ದ! ಫ್ಲಾಬರ್ಟ್‌ನ ರೂಪನಿಷ್ಠೆ ಪಾತ್ರಗಳ ವಿಶ್ಲೇಷಣೆ, ವಾಸ್ತವತೆ — ಇವು ಮುಂದಿನ ಯೂರೋಪಿಯನ್ ಕಾದಂಬರಿಕಾರರ ಮೇಲೆ ತುಂಬ ಪ್ರಭಾವ ಬೀರಿವೆ. ಮುಖ್ಯವಾಗಿ ಮೊಪಾಸಾ, ಜೋಲಾ, ಹೆನ್ರಿ ಜೇಮ್ಸ್ ಮತ್ತು ಟರ್ಗೆನೀವ್‌ರ ಮೇಲೆ ಫ್ಲಾಬರ್ಟ್‌ನ ಪ್ರಭಾವ ಇದೆ. ಫ್ಲಾಬರ್ಟ್‌ನ ತಂತ್ರಗಳು ಮತ್ತು ಕಾದಂಬರಿ ಕೇವಲ ಒಂದು ಕಲಾಕೃತಿ ಎಂಬ ನಿಲುವು ಇವರ ರಚನೆಗಳಿಗೆ ಮಾದರಿಯಾಗಿವೆ ಎಂಬುದನ್ನು ವಿಮರ್ಶಕರು ಗುರುತಿಸಿದ್ದಾರೆ.

ಇವೆಲ್ಲ ಫ್ಲಾಬರ್ಟ್‌ನಿಗಿರುವ ಐತಿಹಾಸಿಕ ಮಹತ್ವ ಕುರಿತ ಮಾತುಗಳಾದವು. 'ಮಡಾಂ ಬಾವರಿ' ಕಾದಂಬರಿ ಎರಡು ಬಗೆಯ ಭಿನ್ನ ಪ್ರತಿಕ್ರಿಯೆಗಳನ್ನು ಹುಟ್ಟಿಸುವಂಥ ಕೃತಿ. ಇದರ ತಾಂತ್ರಿಕ ನೈಪುಣ್ಯ, ಶೈಲಿಯ ಅಚ್ಚುಕಟ್ಟು ಮೆಚ್ಚುಗೆ ಗಳಿಸುತ್ತವೆ, ಹಾಗೆಯೇ 'ತಣ್ಣನೆ'ಯ ಬರವಣಿಗೆ, ಸಿನಿಕತೆ– ಇವು ಟೀಕೆಗೂ ಒಳಗಾಗುವಂತಾಗುತ್ತವೆ.

ಕಾದಂಬರಿಯ ಸ್ವರೂಪವನ್ನು ಗಮನಿಸುವುದಾದರೆ – ಇದರಲ್ಲಿ ಮೂರು ಭಾಗಗಳಿವೆ. ಕಾದಂಬರಿ ಆರಂಭವಾಗುವುದು ಅನಾಮಧೇಯ ನಿರೂಪಕನೊಬ್ಬ ಚಾರ್ಲ್ಸ್ ಬಾವರಿಯ ಶಾಲಾದಿನಗಳನ್ನು ವರ್ಣಿಸುವ ಮೂಲಕ. ಈ ಭಾಗವು ಎಮ್ಮಾ ಮತ್ತು ಬಾವರಿ ಯಾನ್‌ವಿಲ್‌ಗೆ ಬಂದು ನೆಲಸುವವರೆಗಿನ ಕತೆ ಹೇಳುತ್ತದೆ. ಎರಡನೆಯ ಭಾಗವು ಲಿಯಾನ್‌ನ ಪರಿಚಯ, ನಿರ್ಗಮನ, ಎಮ್ಮಾ ರೊಡಾಲ್ಫ್‌ನೊಡನೆ ನಡೆವ ಪ್ರಣಯದ ಕತೆ, ರೊಡಾಲ್ಫ್ ತಿರಸ್ಕಾರದವರೆಗಿನ ಭಾಗ. ಮೂರನೆಯದು ಲಿಯಾನ್‌ನೊಡನೆ ಎರಡನೆಯ ಭೇಟಿ ಮತ್ತು ಎಮ್ಮಾಳ ಪತನವನ್ನು ವಿವರಿಸುತ್ತದೆ. ಎಮ್ಮಾಳ ಸಾವಿನ ನಂತರ ಚಾರ್ಲ್ಸ್‌ನ ವ್ಯಕ್ತಿತ್ವ ಛಿದ್ರವಾಗುವುದನ್ನು ಚಿತ್ರಿಸುತ್ತದೆ. ಈ ವಿನ್ಯಾಸವನ್ನು ಗಮನಿಸಿದಾಗ ಕಥಾನಾಯಕಿ ಎಮ್ಮಾಳ ಬದುಕಿನ ಚಿತ್ರಣವನ್ನು ಅವಳ ಗಂಡ ಚಾರ್ಲ್ಸ್ ಬಾವರಿಯ ಬದುಕಿನ ಕತೆಯ ಚೌಕಟ್ಟಿನೊಳಗೆ ಇಟ್ಟು ನೋಡುವುದು ಫ್ಲಾಬರ್ಟ್‌ನ ಉದ್ದೇಶವಾಗಿರುವಂತೆ ತೋರುತ್ತದೆ. ಶೈಲಿ ಮತ್ತು ತಾಂತ್ರಿಕ ನೈಪುಣ್ಯವನ್ನು ಕಾದಂಬರಿಯ ಉದ್ದಕ್ಕೂ ಗಮನಿಸಬಹುದಾದರೂ, ಉದಾಹರಣೆಗಾಗಿ ಎಮ್ಮಾಳ ವೈವಾಹಿಕ ಬದುಕಿನ ಮೊದಲ ನಾಲ್ಕು ವರ್ಷಗಳನ್ನು ವರ್ಣಿಸುವ ಭಾಗವನ್ನು ಗಮನಿಸಿ. ಫ್ಲಾಬರ್ಟ್ ಎಲ್ಲ ವಿವರಗಳನ್ನೂ ಖಚಿತವಾಗಿ ಸಾವಧಾನವಾಗಿ ಕಟ್ಟಿಕೊಡುವ ಲೇಖಕ. ಎಮ್ಮಾ ಹಳ್ಳಿಯಲ್ಲಿ ನಾಲ್ಕು ವರ್ಷಗಳನ್ನು ಅತೀವ ಬೇಸರದಿಂದ ಕಳೆದಳೆಂದು ಆತ ತಿಳಿಸಬೇಕಾಗಿದೆ. ಬೇಸರದ ಸಮಯದ ಸಾವಧಾನ ವರ್ಣನೆ ಓದುಗನಿಗೂ ಬೇಸರ ಹುಟ್ಟಿಸಬಹುದು. ಫ್ಲಾಬರ್ಟ್ ಇದನ್ನು ಚತುರತೆಯಿಂದ ನಿರ್ವಹಿಸಿದ್ದಾನೆ. ಫ್ಲಾಬರ್ಟ್ ಹಲವಾರು ಕ್ಷುಲ್ಲಕ ಘಟನೆಗಳನ್ನು ಚಿತ್ರಿಸಿದ್ದಾನೆ – ತೋಟದಲ್ಲಿ ಅಲೆಯುವುದು, ಅರ್ಥಹೀನ ಸಂಭಾಷಣೆ, ಇತ್ಯಾದಿ. ಆದರೆ ಅವೆಲ್ಲವನ್ನೂ ಎಮ್ಮಾ ನೋಡಿದಂತೆ, ಅನುಭವಿಸಿದಂತೆ, ಅಥವಾ ಕ್ರಿಯೆಯಲ್ಲಿ ತೊಡಗಿಕೊಂಡಿರುವಂತೆ ಚಿತ್ರಿಸಿದ್ದಾನೆ. ಅವನು ಗ್ರಹಿಸಿ ವಿವರಿಸುವ

ಕ್ರಮದಲ್ಲೆ ಇವೆಲ್ಲ ಎಷ್ಟು ಸಾಮಾನ್ಯ, ಎಷ್ಟು ಕ್ಷುಲ್ಲಕ ಎಂಬುದು ಓದುಗನಿಗೆ 'ಹೊಚ್ಚ ಹೊಸದಾಗಿ' ಅನುಭವಕ್ಕೆ ಬಂದು ಎಮ್ಮಾಳ ಬೇಸರದ ಭಾವ ತೀವ್ರವಾಗಿ ತಟ್ಟಿಬಿಡುತ್ತದೆ. ಅಲ್ಲದೆ ಫ್ಲಾಬರ್ಟ್ ಪಾತ್ರಗಳನ್ನು ಪರಿಚಯಿಸುವಾಗ ಪಾತ್ರಗಳು ಕ್ರಿಯೆಯಲ್ಲಿ ತೊಡಗಿರುವ ಘಟ್ಟವನ್ನು ಆಯ್ದುಕೊಳ್ಳುತ್ತಾನೆ. ಅವರ ಕ್ರಿಯೆಯ ಮೂಲಕವೇ ಅವರ ದೈಹಿಕ ಆಕಾರ-ತೋರಿಕೆ, ಬದುಕುವ ವಿಧಾನ, ಧೋರಣೆ — ಇವುಗಳನ್ನು ''ಚಲನಶೀಲ ಗತಿ''ಯಲ್ಲಿ ಹಿಡಿದಿಡುತ್ತಾನೆ. ಉದಾಹರಣೆಗೆ, ಎಮ್ಮಾ ಭಾಗವಹಿಸುವ ಔತಣಕೂಟವನ್ನು ವಿವರಿಸುವ ಅಧ್ಯಾಯವನ್ನು ಗಮನಿಸಿ. ಅನೇಕ ಬಾರಿ ಫ್ಲಾಬರ್ಟ್ ಕಾದಂಬರಿಯ ಕ್ರಿಯೆಗೆ ಸಹಜವಾಗಿಯೇ ಸಾಂಕೇತಿಕ ಅರ್ಥಗಳು ಹೊಳೆಯುವಂತೆ ಮಾಡಿಬಿಡುತ್ತಾನೆ. ನಿದರ್ಶನಕ್ಕೆ ಲಿಯಾನ್ ಮತ್ತು ಎಮ್ಮಾ ಕಾದಂಬರಿಯ ಮೂರನೆ ಭಾಗದಲ್ಲಿ ಮಾಡುವ ಗಾಡಿಯ ಪ್ರಯಾಣ. ತಮ್ಮಲ್ಲೇ ಮಗ್ನರಾದ ಪ್ರೇಮಿಗಳು ಗಾಡಿಯನ್ನು ಮನಸ್ಸಿಗೆ ಬಂದತ್ತ ಕೊಂಡೊಯ್ಯುವಂತೆ ಆಜ್ಞೆ ಮಾಡಿ ಮೈಮರೆತುಬಿಡುತ್ತಾರೆ. ಗಾಡಿ ನಗರವನ್ನೆಲ್ಲ ಸುತ್ತುತ್ತದೆ. ಎಮ್ಮಾಳ ಗೊತ್ತುಗುರಿ ಇಲ್ಲದ ಬದುಕಿನ ಸಂಕೇತವಾಗಿಬಿಡುತ್ತದೆ ಈ ಪ್ರಯಾಣ.

ಫ್ಲಾಬರ್ಟ್ ಎಷ್ಟೇ 'ಅವ್ಯೆಯಕ್ತಿಕತೆ'ಯನ್ನು ಬಯಸಿದರೂ ಅವನ ಸಿನಿಕತೆ ಮತ್ತು ರೊಮಾಂಟಿಕ್ ಮನೋಧರ್ಮದ ಅತಿಭಾವುಕತೆಯ ವಿರುದ್ಧದ ತನ್ನ ಧೋರಣೆಗಳನ್ನು ಅಡಗಿಸಿಡಲು ಆಗಿಲ್ಲ. ಹಾಗೆಯೇ ಬೂರ್ಜ್ವಾ ಜನರ ಬದುಕಿನ ರೀತಿಯ ವಿರುದ್ಧ ತನ್ನ ಅಸಹನೆಯನ್ನೂ ಆತ ಪರೋಕ್ಷವಾಗಿ ಸೂಚಿಸುತ್ತಾನೆ. ಆದರೆ ಯಾವುದೇ ಘಟನೆ ಅಥವಾ ಸಂಗತಿ ಅಥವಾ ವ್ಯಕ್ತಿಯ ಬಗ್ಗೆ ತನ್ನ ಧೋರಣೆ ತೀರ್ಮಾನಗಳನ್ನು ವ್ಯಕ್ತವಾಗಿ ಆತ ಭಾಷೆಯಲ್ಲಿ ವ್ಯಕ್ತಮಾಡುವುದಿಲ್ಲ. ಅಷ್ಟುಮಟ್ಟಿಗೆ ಆತ ತನ್ನ ವ್ಯಕ್ತಿತ್ವವನ್ನು ಕಾದಂಬರಿಯಿಂದ ಹೊರಗಿಡುವುದರಲ್ಲಿ ಯಶಸ್ವಿಯಾಗಿದ್ದಾನೆ. ಇಡೀ ಕಾದಂಬರಿಯಲ್ಲಿ ಕೆಡುಕರಲ್ಲದಿದ್ದರೂ ನೀರಸವಾದ, ಒಳನೋಟವಿಲ್ಲದ, ಸಂವೇದನೆ ಇಲ್ಲದ ಪಾತ್ರಗಳೇ ಎಮ್ಮಾಳನ್ನು ಸುತ್ತುವರೆದಿವೆ. ಸ್ವಾರ್ಥಿಗಳು, ಕೀಳು ಮನುಷ್ಯರು, ಆಸೆಬುರುಕರು ಇದ್ದಾರೆ. ಎಮ್ಮಾಳನ್ನು ಅರ್ಥಮಾಡಿಕೊಳ್ಳುವವರು, ಸಹಾನುಭೂತಿ ತೋರುವವರು ಒಬ್ಬರೂ ಇಲ್ಲ. ಈ ರೀತಿಯ ಪಾತ್ರಗಳ ಸೃಷ್ಟಿಯ ಮೂಲಕ ಬೂರ್ಜ್ವಾ ಜನರ ಬದುಕಿನ ಬಗೆಗಿನ ತನ್ನ ಆಕ್ರೋಶವನ್ನು ಫ್ಲಾಬರ್ಟ್ ಹೊರಹಾಕಿದ್ದಾನೆ. ಇದು ಉತ್ಪ್ರೇಕ್ಷಿತ ಸಿನಿಕತೆ ಎಂಬ ಟೀಕೆ ಹಲವು ವಿಮರ್ಶಕರಿಂದ ಬಂದಿದೆ.

ಎಮ್ಮಾಳ ಬದುಕನ್ನು 'ದುರಂತ', ಟ್ರಾಜಿಕ್ ಎನ್ನಬಹುದೆ ಅಥವಾ ಫ್ಲಾಬರ್ಟ್ ವ್ಯಕ್ತಪಡಿಸಲು ಬಯಸುವ ಜೀವನ ದೃಷ್ಟಿ ಎಂಥದ್ದು ಎಂಬ ಬಗ್ಗೆಯೂ ಚರ್ಚೆ ನಡೆದಿದೆ. ಎಮ್ಮಾಳ ಬದುಕು ''ದುರದೃಷ್ಟ''ದ ಕತೆಯೆ ಹೊರತು ದುರಂತದ ಕತೆಯಲ್ಲ ಎಂಬುದು ಸೂಕ್ತವೆನಿಸುತ್ತದೆ. ಯಾಕೆಂದರೆ ಎಮ್ಮಾಳ ಬದುಕಿನ ಪ್ರತಿಯೊಂದು ಮುಖ್ಯ

ಘಟನೆಯಲ್ಲೂ ಆಕಸ್ಮಿಕಗಳು ಪ್ರಧಾನ ಪಾತ್ರವಹಿಸುತ್ತದೆ. ದುರಂತ ಅಥವಾ ಟ್ರಾಜಿಡಿ ಪಾತ್ರಗಳ ವರ್ತನೆಯ ಆಂತರಿಕ ತರ್ಕವನ್ನು ಅನುಭವಿಸಿ ಅನಿವಾರ್ಯ ಮುಕ್ತಾಯದತ್ತ ಸಾಗುತ್ತದೆ. ಎಮ್ಮಾ ಚಾರ್ಲ್ಸ್‌ನಂತಹ ವ್ಯಕ್ತಿಯನ್ನು ಮದುವೆಯಾದದ್ದು, ಮದುವೆಯ ಭ್ರಮನಿರಸನವನ್ನು ತಪ್ಪಿಸಿಕೊಳ್ಳಲು ಗಂಡುಮಗುವಾಗಲಿ ಎಂದು ಬಯಸುತ್ತಿದ್ದಾಗ ಹೆಣ್ಣುಮಗುವಾದದ್ದು, ಅವಳಿಗೆ ದೊರೆತ ಪ್ರೇಮಿಗಳು, ಅವಳು ಸಾಲಕ್ಕೆ ಗುರಿಯಾದಾಗ ಸಕಾಲದಲ್ಲಿ ಹಣ ದೊರೆಯದೆ ಹೋದದ್ದು — ಇಂಥಲ್ಲೆಲ್ಲ ಅದೃಷ್ಟ ಮುಖ್ಯವಾಗಿ ಬಿಡುತ್ತದೆಯೆ ಹೊರತು ಪಾತ್ರಗಳ ಸ್ವಭಾವದಿಂದ ನಡೆದ ಕ್ರಿಯೆಯ ಪರಿಣಾಮಗಳಲ್ಲ.

ಆದ್ದರಿಂದಲೆ 'ಮಡಾಂ ಬಾವರಿ'ಯನ್ನು ಓದಿದಾಗ, 'ತಣ್ಣನೆ'ಯ ಆತ್ಮೀಯತೆ ರಹಿತವಾದ ಕೃತಿಯನ್ನು ಓದಿದ ಅನುಭವ ಉಂಟಾಗುತ್ತದೆ. ಬೆಚ್ಚನೆ ಆತ್ಮೀಯತೆ ಟಾಲ್‌ಸ್ಟಾಯ್‌ನ ''ಅನ್ನಾ ಕರೆನೀನ''ದಲ್ಲಿ ನಮಗೆ ಸಿಗುವಂತೆ– ಅದೂ ವ್ಯಭಿಚಾರಿಣಿಯೊಬ್ಬಳ ಕತೆ – ಇಲ್ಲಿ ನಮಗೆ ಸಿಗುವುದಿಲ್ಲ. ಫ್ಲಾಬರ್ಟ್‌ನಿಗೆ ವಿಶ್ಲೇಷಣೆ ಮುಖ್ಯವಾಗುತ್ತದೆ, ಬೌದ್ಧಿಕ ಚಿಂತನೆಯಿಂದ ರೂಪಿಸಿದ ವ್ಯಂಗ್ಯ ಮುಖ್ಯವಾಗುತ್ತದೆ, ಬದುಕಿನ ಬಗ್ಗೆ ನಿರಾಶೆಯ ಭಾವನೆಯನ್ನು ವ್ಯಕ್ತಮಾಡುವುದು ಮುಖ್ಯವಾಗುತ್ತದೆ, ಬದುಕಿನ ಕ್ಷುಲ್ಲಕತೆಯನ್ನು, ಸಾಮಾನ್ಯ ನೀರಸತೆಯನ್ನು ವಿವರಿಸುವುದು ಮುಖ್ಯವಾಗುತ್ತದೆ. ಮತ್ತು ಈ ಭಾವಗಳನ್ನೆಲ್ಲ ಆತ ಯಶಸ್ವಿಯಾಗಿ ಓದುಗನಲ್ಲಿ ಹುಟ್ಟಿಸುತ್ತಾನೆಂಬುದು ಅವನ ಮಹತ್ವಕ್ಕೆ ಕಾರಣ. ಐತಿಹಾಸಿಕವಾಗಿ ವಾಸ್ತವ ಮಾರ್ಗದ ಕಾದಂಬರಿಗೆ ಹೊಸ ದಿಕ್ಕನ್ನು ತೋರಿಸಿದ ಲೇಖಕ ಎಂಬುದು ಅವನ ಇನ್ನೊಂದು ಹಿರಿಮೆ. ಆದರೆ ಡಾಸ್ಟಾವ್‌ಸ್ಕಿಯಲ್ಲಿ ಕಾಣುವ ಮನುಷ್ಯನ ಮನಸ್ಸಿನ ಅಂತರಾಳಗಳನ್ನು, ಅಲ್ಲಿನ ರಹಸ್ಯಗಳನ್ನು ಭಾಷೆಯಲ್ಲಿ ಹಿಡಿದಿಡುವ ಸಾಮರ್ಥ್ಯವಾಗಲಿ, ಟಾಲ್‌ಸ್ಟಾಯ್‌ಗೆ ಇರುವ ಜೀವನಪ್ರೀತಿ ಮತ್ತು ಅಪಾರ ಸಹಾನುಭೂತಿಯಾಗಲಿ ಫ್ಲಾಬರ್ಟ್‌ನಿಗೆ ಇಲ್ಲವೆಂದೇ ತೋರುತ್ತದೆ.

ದಸ್ತೊಯೆವ್‌ಸ್ಕಿ : 'ದಿ ಬ್ರದರ್ಸ್ ಕರಮಜೊವ್'

ಕೆ. ಎಲ್. ಗೋಪಾಲಕೃಷ್ಣಯ್ಯ

''ಸತ್ಯವಾಗಿ ಹೇಳುತ್ತಿದ್ದೇನೆ ; ಧಾನ್ಯದ ಕಾಳೊಂದು ಭೂಮಿಗೆ ಬಿದ್ದು ಸಾಯದಿದ್ದರೆ ಅದು ಒಂಟಿಯಾಗಿಯೇ ಉಳಿಯುತ್ತದೆ ; ಭೂಮಿಗೆ ಬಿದ್ದು ಸತ್ತದ್ದೇ ಆದರೆ, ಅದು ಸಮೃದ್ಧ ಬೆಳೆ ಕೊಡಬಲ್ಲುದು.''

- The Gospel according to 'St. John', Chapter XII, Verse 24

ಈ ಪ್ರಾಚೀನ ಭಾಷಿತದ ಅರ್ಥವತ್ತತೆಯನ್ನು ಕುರಿತು ದಸ್ತೊಯೆವ್‌ಸ್ಕಿಯು ಬಹುಕಾಲ ಧೇನಿಸಿದ್ದಿರಬೇಕು. ಆತನ ಅಂತಿಮ ಕಾದಂಬರಿ 'ಕರಮಜೊವ್ ಸೋದರರು'ಗೆ ಇದೇ ಶಾಸನವಾಕ್ಯವಾಗಿದೆ. ಮಾತ್ರವಲ್ಲ ; ದಸ್ತೊಯೆವ್‌ಸ್ಕಿಯ ಸಮಾಧಿ ಶಿಲೆಯ ಮೇಲೆ ಈ ಮಾತನ್ನೇ ಚರಮವಾಕ್ಯವಾಗಿ ಕೆತ್ತಲಾಗಿದೆಯಂತೆ.

ರಷ್ಯಾ ದೇಶದ ಮಹಾನ್ ಕಾದಂಬರಿಕಾರನು ತನ್ನ ಕೃತಿಗಳ ಮೂಲಕ ಓದುಗರ ಅಂತಃಕರಣವನ್ನು ಕರಗಿಸುತ್ತಾನೆ ; ಹೃದಯವನ್ನು ಕಂಪಿಸುತ್ತಾನೆ ; ನರಕವೆನ್ನುವುದು ಪರಲೋಕದಲ್ಲೆಲ್ಲೋ ಇಲ್ಲ, ಇಲ್ಲೇ ನಮ್ಮ ಕಣ್ಣ ಮುಂದೆಯೇ ಇದೆ ಎಂದು ನಂಬಿಸಿ ಬಿಡುತ್ತಾನೆ. ಮಾನವನ ನೋವು, ಪುರುಷಪ್ರಯತ್ನ, ವಿಧಿಪ್ರಾಬಲ್ಯ ಮತ್ತು ನ್ಯಾಯ ಅನ್ಯಾಯಗಳ ಬಗೆಗೆ ಎಂದೆಂದೂ ಬಗೆಹರಿಯದ ಸಮಸ್ಯೆಗಳನ್ನು ಓದುಗರ ಅಂತರಂಗದಲ್ಲಿ ಪಡಿಮೂಡಿಸುತ್ತಾನೆ. ಇವೆಲ್ಲದರ ಪರಿಣಾಮವಾಗಿ, 'ದಸ್ತೊಯೆವ್‌ಸ್ಕಿಯ ಪ್ರಪಂಚ' ಎಂಬೊಂದು ಸಂಕೀರ್ಣ ಪರಿಕಲ್ಪನೆಯೇ ಸಾಹಿತ್ಯ ವಿಮರ್ಶಕರ ಕಣ್ಮನಗಳ ಮುಂದೆ ಸುಳಿದಾಡುವಂತಾಗಿದೆ. ದಸ್ತೊಯೆವ್‌ಸ್ಕಿಯ ದೈತ್ಯಪ್ರತಿಭೆಗೆ ಹೋಲಿಕೆಯನ್ನು ಕಾಣಲೇ ಬೇಕೆಂದರೆ, ಆತನಿಗೆ ಹೆಗಲೆಣೆಯಾಗಬಲ್ಲವನು ಶೇಕ್ಸ್‌ಪಿಯರ್ ಮಾತ್ರ ಎಂದಿದ್ದಾನೆ, ರಷ್ಯಾ ದೇಶದ ಮತ್ತೊಬ್ಬ ಉದ್ದಾಮಸಾಹಿತಿ ಮ್ಯಾಕ್ಸಿಂ ಗಾರ್ಕಿ.

ಈ ಅಸಾಧಾರಣ ಪ್ರತಿಭಾಶಾಲಿಯ ಲೇಖನಿಯಿಂದ Address on Pushkin, The Hobbledehoy, The Possessed, The Idiot, Crime and Punishment, Notes from the Dead House —ಇವೇ ಮೊದಲಾದ ಶ್ರೇಷ್ಠ ಕೃತಿಗಳು ಹೊರಬಿದ್ದು, ಮಾನವಹೃದಯದ ಅನೇಕ ನಿಗೂಢಗಳನ್ನೂ ಅದ್ಭುತಗಳನ್ನೂ ಪರಿಚಯ ಮಾಡಿಕೊಟ್ಟ ಬಹು ದಿನಗಳ ಮೇಲೆ The Brothers Karamazov ರಚನೆಯಾಯಿತು.

ಫಿಯೊದರ್ ದಸ್ತೊಯೆವ್‌ಸ್ಕಿಯ ಸಾಹಿತ್ಯ ಸಾಧನೆಯ ಮಾತು ಹಾಗಿರಲಿ, ಆತನ ಬದುಕೇ ಅನನ್ಯ ಸಾಧಾರಣವೂ, ಹೃದಯವಿದ್ರಾವಕವೂ ಆದ ಒಂದು ಮಹಾ ಪ್ರಗಾಥ. ತನ್ನ ಬಾಳಿನ 'ಗೊಲ್ಗೊಥಾ'ಕ್ಕೆ ತಲೆಯೊಡ್ಡಿ ಹಿಂತಿರುಗಿದವನು ಅವನು.

ಫಿಯೊದರ್ ದಸ್ತೋಯೆವ್‌ಸ್ಕಿ ಹುಟ್ಟಿದ್ದು 1821ನೆ ನವೆಂಬರ್ 11 ರಂದು ಮಾಸ್ಕೊ ನಗರದ ಒಂದು ಸಾಮಾನ್ಯ ಕುಟುಂಬದಲ್ಲಿ. ಆತನ ತಂದೆ, ಬಡವರಿಗಾಗಿಯೇ ಮೀಸಲಾಗಿದ್ದ ಆಸ್ಪತ್ರೆಯೊಂದರ ಸಣ್ಣ ವೈದ್ಯ. ಎಳೆತನದಲ್ಲಿಯೇ ವಾತ್ಸಲ್ಯಮಯಿಯಾದ ತಾಯಿಯ ಸಾವು. ಉತ್ಸಾಹಸಂಭ್ರಮಗಳೇನೂ ಇಲ್ಲದ ನೀರಸ ಬಾಲ್ಯ ; ಯೌವನದ ರಮ್ಯಾದ್ಭುತ ಕನಸುಗಾರಿಕೆಗೂ ವಾಸ್ತವ ಪ್ರಪಂಚದ ಕಠೋರ ಹಾಗೂ ವಿಲಕ್ಷಣ ಸಂಗತಿಗಳಿಗೂ ಉಂಟಾಗುತ್ತಿದ್ದ ಸಂಘರ್ಷದ ಆತಂಕ ; ಬೌದ್ಧಿಕ ಹಾಗೂ ನೈತಿಕ ಪರಿಣತಿಯನ್ನು ಸಾಧಿಸಿ ಉದ್ದಾಮ ಲೇಖಕನಾಗುವ ಕಾಳಜಿ ; ದುಷ್ಪಸಂಚಿನ ನಗರವೆಂದೂ ಭ್ರಮಾಲೋಕವೆಂದೂ ಹೆಸರಾದ ಸೈಂಟ್ ಪೀಟರ್ಸ್‌ಬರ್ಗ್‌ನ ಮಿಲಿಟರಿ ಶಾಲೆಯಲ್ಲಿ ಯುದ್ಧ ಸಿಪಾಯಿಯ ಕಠಿಣ ಶಿಸ್ತಿನ ತರಬೇತಿ ; ತಂದೆಯ ಅನಿರೀಕ್ಷಿತ ಹಾಗೂ ನಿಗೂಢ ಸಾವು (ಹಳೆಯ ಊಳಿಗದವ (serf)ನೊಬ್ಬನು ಈತನನ್ನು ಕೊಂದನೆಂದು ಪ್ರತೀತಿ) ; 'ಬಡಜನರು' (Poor Folk) ಎಂಬ ಕಿರುಕಾದಂಬರಿಯನ್ನು ಮುಗಿಸುವುದಕ್ಕಾಗಿ ನಡುರಾತ್ರಿಯವರೆಗೆ ಶ್ರಮವರಿಯದ ದುಡಿಮೆ ; ಈ ಚಿಕ್ಕ ಕೃತಿಯನ್ನು ಬೆಲಿನ್ಸ್ಕಿಯೇ ಮೊದಲಾದ ಪ್ರಮುಖ ಚಿಂತಕರು ತುಂಬ ಮೆಚ್ಚಿಕೊಂಡಾಡಿದ್ದರ ಫಲವಾಗಿ, ಅಜ್ಞಾತವಾಸದಿಂದ ಒಮ್ಮೆಲೇ ಸಾಹಿತ್ಯರಂಗದ ಪ್ರಭಾವಲಯಕ್ಕೆ ಜಿಗಿತ — ಇವು ದಸ್ತೋಯೆವ್‌ಸ್ಕಿಯ ಜೀವನಾರಂಭದ ಪ್ರಮುಖ ಘಟ್ಟಗಳು.

ಬೆಲಿನ್ಸ್ಕಿ ಮಂಡಲದ ಸದಸ್ಯನಾಗಿ ನಿರೀಶ್ವರವಾದ ಮತ್ತು ಸಮಾಜವಾದಗಳನ್ನು ಪರಿಚಯಮಾಡಿಕೊಂಡುದು; ಬೆಲಿನ್ಸ್ಕಿಯೊಡನೆ ಚಿಗುರೊಡೆಯುತ್ತಿದ್ದ ಸ್ನೇಹ ಕಾರಣಾಂತರಗಳಿಂದ ಇದ್ದಕ್ಕಿದ್ದಂತೆ ಮುರುಟಿಹೋದಾಗ ಉಂಟಾದ ಮನಃಕ್ಲೇಶ ; ಗರಿಗೆದರಿ ಆಗತಾನೇ ಹಾರಲು ಕಲಿಯುತ್ತಿದ್ದ ತರುಣ ಸಾಹಿತಿಯನ್ನು ವಿಮರ್ಶಕ ಪ್ರಪಂಚ ಲೆಕ್ಕಕ್ಕೇ ತಾರದಂತೆ ಕಡೆಗಣಿಸಿದ್ದು – ಇವೆಲ್ಲ ಪ್ರೌಢ ದಸ್ತೋಯೆವ್‌ಸ್ಕಿಯ ದ್ವಂದ್ವಗಳು.

ಸ್ಪೆಷ್ನೆವ್ ಎಂಬ ವಿಚಿತ್ರ ಸ್ವಭಾವದ ಉಗ್ರಗಾಮಿಯೊಬ್ಬನು ಫೌರೀರ್ ಮತ್ತು ಪೆಟ್ರೋಶೆವ್‌ಸ್ಕಿಯರ ಅನುಯಾಯಿಯಾಗಿ ಸಶಸ್ತ್ರ ಬಂಡಾಯದ ಮೂಲಕ ಅಧಿಕಾರ ಗ್ರಹಣದ ಸನ್ನಾಹ ನಡೆಸಿದ್ದ. 'ಪೆಟ್ರೋಶೆವ್‌ಸ್ಕಿ ಪಂಥ'ವೆಂದೇ ಹೆಸರಾಗಿದ್ದ ಈ ಗುಂಪಿಗೆ ದಸ್ತೋಯೆವ್‌ಸ್ಕಿಯೂ ಸದಸ್ಯನಾಗಿ ಸಕ್ರಿಯ ಚಳವಳಿಯಲ್ಲಿ ಆದೇ ತಾನೆ ಭಾಗವಹಿಸತೊಡಗಿದ್ದ. ಆದರೆ ಎಲ್ಲ ಬಗೆಯ ಕ್ರಾಂತಿಕಾರೀ ಚಟುವಟಿಕೆಗಳನ್ನೂ ಅತ್ಯಂತ ನಿರ್ದಯದಿಂದ ಹತ್ತಿಕ್ಕಲು ಕೃತನಿಶ್ಚಯ ಮಾಡಿದ್ದ ಝಾರ್ ಸರಕಾರವು ನಮ್ಮ ತರುಣ ಲೇಖಕನೂ ಸೇರಿದಂತೆ ಇಪ್ಪತ್ತೊಂದು ಜನರನ್ನು ಬಂಧಿಸಿ ಒಂದು ವರ್ಷ ಕಠಿಣಶ್ರಮದ ಸೆರೆವಾಸಕ್ಕೆ ದೂಡಿತು. ಈ ಬಂಧನದಲ್ಲಿರುವಾಗಲೇ ದಸ್ತೋಯೆವ್‌ಸ್ಕಿಯನ್ನು ಮುಂದೆ ಎಂದೂ ಬಿಡದಂತೆ ಅಂಟಿಕೊಂಡ ಮೂರ್ಛೆರೋಗದ ಮೊದಲ ಚಿನ್ಹೆಗಳು ಕಾಣಿಸಿಕೊಂಡವು. ವಿಧಿಸಿದ್ದ ಮರಣದಂಡನೆಯ ಶಿಕ್ಷೆ ಕಡೆಗಳಿಗೆಯಲ್ಲಿ ರದ್ದಾಗಿ, ಸೆರೆಯಾಳುಗಳು ಸೈಬೀರಿಯಾಕ್ಕೆ ಗಡೀಪಾರಾದರು.

ಇದರಿಂದ ಪ್ರಾಣವೇನೋ ಉಳಿಯಿತು ; ಆದರೆ ಕಠಿಣ ಸೆರೆವಾಸದ ದೀರ್ಘಾವಧಿಯಲ್ಲಿ ಅವನ ಸುಂದರ ಕನಸು, ಆಸೆ ಆಕಾಂಕ್ಷೆ, ನೆಮ್ಮದಿಯ ಬಾಳಿನ ಭರವಸೆ, ಅದಮ್ಯ ಆಶಾವಾದ – ಎಲ್ಲವೂ ನಲುಗಿ ತೊಳಲಿ ಬಳಲಿ ಬೆಂಡಾಗಿ ಬಸವಳಿದು ಸಾವನ್ನಪ್ಪಿದವು. ಸೈಂಟ್ ಪೀಟರ್ಸ್‌ಬರ್ಗ್‌ನಿಂದ ಸೈಬೀರಿಯದವರೆಗೆ ಹಲವು ದಿನಗಳು, ಸರಪಳಿ ಕೈ ಕೋಳ ತೊಡಿಸಿಕೊಂಡು ಮೈಲುಗಟ್ಟಲೆ ಮೆರವಣಿಗೆ ! ನಿರ್ಮಾನುಷ ಪರಿಸರದಲ್ಲಿ ಹತ್ತು ವರ್ಷಗಳಷ್ಟು ದೀರ್ಘಕಾಲ ಅತ್ಯಂತ ಕಠಿಣ ದೇಹಶ್ರಮದ ಸೆರೆವಾಸ ! ದಸ್ತೊಯೆವ್‌ಸ್ಕಿ ಹೇಳಿಕೊಂಡಿದ್ದಾನೆ, 'ನನ್ನನ್ನು ಜೀವಸಹಿತ ಶವಪೆಟ್ಟಿಗೆಯಲ್ಲಿ ತುರುಕಿ ಮೊಳೆ ಹೊಡೆಯಲಾಗಿತ್ತು' ಎಂದು.

The Idiot ಕಾದಂಬರಿಯ ನಾಯಕ ರಾಜಕುಮಾರ ಮಿಷ್ಕಿನ್ ಕೇಳುತ್ತಾನೆ : "ಮಾನವಪ್ರಜ್ಞೆಯು ವಿಭ್ರಾಂತಿಗೊಳ್ಳದೆ ಇಷ್ಟನ್ನೆಲ್ಲ ತಾಳಿಕೊಳ್ಳಬಲ್ಲುದೆಂದರೆ ಯಾರು ತಾನೆ ನಂಬಿಯಾರು ?"

ಬಹುಶಃ ಇಂಥ ಪ್ರಶ್ನೆಗಳನ್ನು ಕೇಳಲೆಂದು ಮತ್ತು ತನ್ನ ಓದುಗರಿಂದ ಕೇಳಿಸಲೆಂದು ಇರಬೇಕು, ದಸ್ತೊಯೆವ್‌ಸ್ಕಿಯು ಆ ಸೆರೆಮನೆಯ ನರಕವಾಸದಲ್ಲಿಯೂ ಹುಚ್ಚನಾಗದೆ, ಅಥವಾ ನಿರ್ನಾಮವಾಗದೆ ಬದುಕಿ ಉಳಿದುದು. ಆತ ಪುನರ್ಜನ್ಮವನ್ನೇ ತಾಳಿ ಹೊರ ಬಂದುದು ಮಾತ್ರವಲ್ಲದೆ ರಷ್ಯಾ ದೇಶದ ಮಹತ್ವದ ಸೃಜನಶೀಲ ಲೇಖಕನೂ ಆದುದು ಒಂದು ಪವಾಡವೇ ಸರಿ. ಅತ್ಯಂತ ಅಪರೂಪದ ಈ ದಾರುಣ ಅನುಭವಗಳು ಲೇಖಕನ ಜೀವನದೃಷ್ಟಿಯನ್ನು ರೂಪಿಸಿ, ಆತನ ಕೃತಿಗಳ ಮೇಲೆ ನಿರ್ಣಾಯಕ ಪ್ರಭಾವ ಬೀರಿದವೆಂಬುದು ನಿರ್ವಿವಾದದ ಸಂಗತಿ.

ಮಾನವೀಯ ಭಾವನೆಗಳನ್ನೆಲ್ಲ ತೊತ್ತಳದುಳಿದ, ನರಕಯಾತನೆಯ ಆ ಹತ್ತು ವರ್ಷಗಳು ಮೊದಲೇ ಸೂಕ್ಷ್ಮಸಂವೇದನಾಶಾಲಿಯೂ, ಅಸ್ವಸ್ಥಚಿತ್ತನೂ ಆಗಿದ್ದ ಲೇಖಕನ ಮೇಲೆ ಅಳಿಸಲಾರದ ವಿಷಣ್ಣತೆಯ ಮುದ್ರೆಯೊಂದನ್ನು ಅಚ್ಚೊತ್ತಿದ್ದವು. ಈ ಅವಧಿಯಲ್ಲಿ ಅವನನ್ನು ಕಾಡುತ್ತಿದ್ದ ಮೂರ್ಛೆರೋಗ ಮತ್ತಷ್ಟು ಉಲ್ಬಣಗೊಂಡಿತು. ಮತ್ತೊಮ್ಮೆ ಸಾಮಾಜಿಕ ಜೀವನಕ್ಕೆ ಹಿಂತಿರುಗುವಾಗ ಅವನು ತೀರಾ ಅನ್ಯ ಮನುಷ್ಯನೇ ಆಗಿಬಿಟ್ಟಿದ್ದ.

ಯಾವುದೇ ಬಗೆಯ ಬಂಡಾಯ ಅಥವಾ ಕ್ರಾಂತಿಯ ಮೂಲಕ ಸ್ಥಾಪಿತ ಪ್ರಭುತ್ವವನ್ನಾಗಲಿ, ಪ್ರತಿಷ್ಠಿತ ವ್ಯವಸ್ಥೆಯನ್ನಾಗಲಿ ಉಚ್ಚಾಟಿಸುವುದು ಅಸಾಧ್ಯ ; ಅಪ್ರತಿಹತ ವಿಧಿಶಕ್ತಿಯ ವಿರುದ್ಧ ಹೋರಾಡಿ ಗೆಲ್ಲುತ್ತೇನೆಂಬ ಪುರುಷಸಾಹಸವೆಲ್ಲ ಕೇವಲ ಭ್ರಮೆ – ಇವು ಸೆರೆವಾಸಕಾಲದಲ್ಲಿ ದಸ್ತೊಯೆವ್‌ಸ್ಕಿಯ ಅಂತರಂಗದ ಆಳದಲ್ಲಿ ಅಚಲವಾಗಿ ಬೇರು ಬಿಟ್ಟು ಬೆಳೆದ ಕೆಲವು ಆಲೋಚನೆಗಳು. ಮಾನವಸ್ವಭಾವದ ಪುರೋಗಮನದಲ್ಲೇ

ನಂಬಿಕೆಯನ್ನು ಕಳೆದುಕೊಂಡ ಹತಾಶೆಯ ಹಿನ್ನೆಲೆಯಲ್ಲಿ ಭರವಸೆ, ಜೀವನಶ್ರದ್ಧೆಗಳನ್ನು ಅರಸಿ ಮತಧರ್ಮದ ಕಡೆಗೆ ಕೈಚಾಚಿದರೆ ಕೋಪ ಹಾಗೂ ಪ್ರತಿರೋಧವನ್ನು ಮೈಗೂಡಿಸಿಕೊಂಡಿದ್ದ ಮನಸ್ಸಿಗೆ ಅಲ್ಲಿಯೂ ಶಾಂತಿ ಲಭ್ಯವಾಗಲಿಲ್ಲ.

1854ರ ಫೆಬ್ರವರಿಯಲ್ಲಿ ವಾನ್-ವಿಜಿನಾಗೆ ಬರೆದ ಒಂದು ಪತ್ರದಲ್ಲಿ ಹೇಳಿರುವುದು ಹೀಗೆ : ''ಈವರೆಗೂ ನಾನು ಕಾಲಪ್ರವಾಹದಲ್ಲಿ ಅಪನಂಬಿಕೆ, ಸಂಶಯಗಳ ಶಿಶುವಾಗಿ ತೇಲುತ್ತಲೇ ಇದ್ದೇನೆ ; ಸಮಾಧಿಯವರೆಗೂ ಹೀಗೆಯೇ ಇರುತ್ತೇನೆಯೊ ಏನೊ ! ಏನನ್ನಾದರೂ ನಂಬಲೇಬೇಕೆನ್ನುವ ಒತ್ತಾಯಕ್ಕೆ ಅದೆಷ್ಟು ದೊಡ್ಡ ಬೆಲೆ ತೆರಬೇಕಾಗುತ್ತದೆ ! ಪ್ರಬಲ ಇಚ್ಛೆಯಿಂದ ಏನನ್ನಾದರೂ ನಂಬಲೇಬೇಕೆಂದುಕೊಂಡರೆ ನನ್ನ ಹೃದಯದಲ್ಲಿ ತದ್ವಿರುದ್ಧವಾದ ವಿವಾದಗಳು ಇನ್ನೂ ಪ್ರಬಲವಾಗಿಯೇ ತಲೆಯೆತ್ತಿ ಬಿಡುತ್ತವೆ...''

ಸೆರೆವಾಸದಲ್ಲಿ ದಸ್ತೊಯೆವ್‌ಸ್ಕಿಯನ್ನು ಎಲ್ಲಕ್ಕಿಂತ ಹೆಚ್ಚಾಗಿ ಬಾಧಿಸಿದ ಅಂಶವೆಂದರೆ ಅಸಹನೀಯ ಪ್ರತ್ಯೇಕತೆ. ಜೈಲಿನಲ್ಲಿ ಬುದ್ಧಿಜೀವಿಗಳ ಒಂದು ಸಣ್ಣ ಗುಂಪನ್ನು ಇತರ ಸಾಮಾನ್ಯ ಕೈದಿಗಳಿಂದ ಬೇರೆಯಾಗಿಯೇ ಇರಿಸಲಾಗಿತ್ತು. ವಿವಿಧ ಬಗೆಯ ಅಪರಾಧಗಳಿಗಾಗಿ ಶಿಕ್ಷೆಯನ್ನನುಭವಿಸುತ್ತಿದ್ದ ಸಾಮಾನ್ಯ ಕೈದಿಗಳು ರಾಜಕೀಯ ಸೆರೆಯಾಳುಗಳಾದ ಈ ಬುದ್ಧಿಜೀವಿಗಳನ್ನು ದ್ವೇಷಿಸುತ್ತಿದ್ದರು. ಎರಡು ಗುಂಪುಗಳ ನಡುವೆ ಆಗಾಗ ನಡೆಯುತ್ತಿದ್ದ ಘರ್ಷಣೆಯು ಲೇಖಕನ ಮನಸ್ಸನ್ನು ಕಲಕುತ್ತಿತ್ತು. ಅದರ ಪರಿಣಾಮವಾಗಿ — ದೇಶ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ರಾಜಕೀಯ ಸಾಮಾಜಿಕ ಕ್ರಾಂತಿ ಎಂದೆಲ್ಲ ಹಳಹಳಿಸುತ್ತಿದ್ದ ಅಲ್ಪಸಂಖ್ಯಾತ ಬುದ್ಧಿಜೀವಿಗಳಿಗೂ ಸಾಮಾನ್ಯ ಜನರಿಗೂ ನಡುವೆ ಕಂದಕವೇರ್ಪಡುವುದು ಅತೀ ಅನಿವಾರ್ಯ ; ಈ ಎರಡು ವರ್ಗಗಳಲ್ಲಿ ಪರಸ್ಪರ ದ್ವೇಷಾಸೂಯೆ ನಿಸರ್ಗಸಹಜವಾದುದು ; ಅಲ್ಪಸಂಖ್ಯಾತ ಬುದ್ಧಿಜೀವಿಗಳ ಚಡಪಡಿಕೆಯೆಲ್ಲವೂ ವ್ಯರ್ಥಸಾಹಸ ; ಇಂಥ ಚಳವಳಿಗಳ ಮುಂದಾಳುಗಳಾದ ಸಂಭಾವಿತರ (gentle folk) ವಿಚಾರಗಳು, ಅವರು ಪ್ರತಿಪಾದಿಸುವ ನಿರೀಶ್ವರ ಭೌತವಾದ, ಅವರ ಮುಕ್ತಚಿಂತನೆ ಮೊದಲಾದುವನ್ನು ಜನಸಾಮಾನ್ಯರು ವಿರೋಧಿಸಿಯೇ ತೀರುತ್ತಾರೆ. ಆದ್ದರಿಂದ ಸಾಮಾನ್ಯ ಜನರೊಂದಿಗೆ ಮಿಳಿತವಾಗಿ, ಸಂವೇದನಾಶಾಲಿಯಾಗಿ ಬದುಕಬೇಕೆಂದಿದ್ದರೆ ಜನಪ್ರಿಯವಲ್ಲದ ಬೌದ್ಧಿಕ ಜಿಜ್ಞಾಸೆಗಳನ್ನೆಲ್ಲ ದೂರೀಕರಿಸುವುದೇ ಉತ್ತಮ ಮಾರ್ಗ — ಎಂಬ ತೀರ್ಮಾನಗಳಿಗೆ ಈ ಲೇಖಕನು ತಲುಪಿದ ಹಾಗೆ ತೋರುತ್ತದೆ. Notes from the Dead House, The Brothers Karamazov ಮೊದಲಾದ ಕೃತಿಗಳಲ್ಲಿ ಅಂಥ ಅನಿಸಿಕೆಗಳ ಛಾಯೆಯನ್ನು ನಿಚ್ಚಳವಾಗಿಯೇ ಗುರುತಿಸಬಹುದು.

ಹೀಗೆ ಅಲ್ಪವಾದ ಅಪರಾಧವು ತಂದೊಡ್ಡಿದ ಅಳತೆ ಮೀರಿದ ದಂಡನೆಯಿಂದ ಮೃದು ಸ್ವಭಾವದ ಬಂಡಾಯಗಾರನು ತತ್ತರಿಸಿಹೋಗಿದ್ದ. ಅಲ್ಲದೆ, ದುರ್ದಮ್ಯವಾದ

ಪ್ರಭುಶಕ್ತಿಯ ಸಿಂಹಗರ್ಜನೆಯು ಸದಾ ಅವನ ಕಿವಿಗಳಲ್ಲಿ ಮಾರ್ಮೊಳಗುತ್ತಿತ್ತು. ಮೊದಲನೇ ನಿಕೊಲಸ್ ಆಳ್ವಿಕೆಯ ಅಂತ್ಯದಿನಗಳು ಸಮೀಪಿಸುತ್ತಿದ್ದಂತೆ ರಾಜಕೀಯ ಮತ್ತು ಧಾರ್ಮಿಕ ಪ್ರಭುತ್ವದ ಬಗೆಗೆ ಒಂದು ರೀತಿಯ ಭಯಮೂಲವಾದ ಭಕ್ತಿಯು ತಂತಾನೆ ದಸ್ತೊಯೆವ್‌ಸ್ಕಿಯ ಹೃದಯವನ್ನು ಆಕ್ರಮಿಸಿಬಿಟ್ಟಿತ್ತು. ಅಧಿಕಾರ ದರ್ಪದ ಎದುರಿಗೆ ಸಾಹಿತಿ ಶರಣಾಗಿಹೋಗಿದ್ದ.

ಕೆಲವು ಕಾಲ ಕಡ್ಡಾಯ ಸೈನಿಕಸೇವೆ, ಬಂಡಾಯದಲ್ಲಿ ಮುಖಭಂಗ, ಅಪಮಾನದ ಸೆರೆವಾಸಗಳ ಅನಂತರ ಜೀವನದಲ್ಲಿ ಆಸಕ್ತಿಯನ್ನುಳಿಸಿಕೊಂಡು ಬದುಕಲು ಆತನಿಗೆ ಉಳಿದಿದ್ದುದು ಎರಡೇ ದಾರಿಗಳು. ತನ್ನನ್ನು ಇಂಥ ಸಂಕಷ್ಟಕ್ಕೆ ಸಿಕ್ಕಿಸಿದರೂ ಕ್ರಾಂತಿಯ ಬಗೆಗೆ ಹೆಮ್ಮೆಪಟ್ಟು, ನಿಷ್ಠೆಯನ್ನು ಬೆಳೆಸಿಕೊಂಡು ಮತ್ತಷ್ಟು ತೀವ್ರವಾಗಿ ಹೋರಾಟದಲ್ಲಿ ತೊಡಗಿರುವುದು, ಒಂದು ; ತನಗೊದಗಿದ ದಂಡನೆಯು 'ವಿಧಿಸಂಕಲ್ಪ'ವೆಂದೂ, ಪ್ರಚ್ಛನ್ನ ದೈವೀಕರುಣೆಯೆಂದೂ ಗ್ರಹಿಸಿ ಅಧಿಕಾರಕ್ಕೂ ಮತಧರ್ಮಕ್ಕೂ ಶರಣಾಗುವುದು, ಎರಡು. ಇವುಗಳ ಪೈಕಿ ದಸ್ತೊಯೆವ್‌ಸ್ಕಿಯು ಆರಿಸಿಕೊಂಡುದು ಎರಡನೆಯ ಮಾರ್ಗವನ್ನು. ಸಹಜವಾಗಿ ಸ್ವಾಭಿಮಾನಭಂಗದಿಂದ ವಿದೀರ್ಣವಾಗಿದ್ದ ಹೃದಯಕ್ಕೆ ಕ್ರೈಸ್ತಧರ್ಮದ ಶರಣಾಗತಿಭಾವ, ದೈನ್ಯ, ವಿನಮ್ರತೆಗಳು ಕೆಲಮಟ್ಟಿಗಾದರೂ ತಂಪೆರೆದಿರಬೇಕು; ಅಂತೆಯೇ ಆತನ ಕೃತಿಗಳಲ್ಲಿ ಸ್ವಾಭಿಮಾನಕ್ಕಿಂತಲೂ ಹೆಚ್ಚಾಗಿ ನಮ್ರಶರಣಾಗತಿಯನ್ನು ಎತ್ತರದ ಧ್ವನಿಯಲ್ಲಿ ಪ್ರತಿಪಾದಿಸಲಾಗಿದೆಯೆಂಬುದು ನಿಜ. ಆದರೆ ಹೊರನೋಟಕ್ಕೆ ತೋರುವ ಈ ಎಲ್ಲ ವಿಧೇಯತೆ, ವಿನಮ್ರತೆಗಳ ಅಂತರಾಳದಲ್ಲಿ ಲಾವಾರಸದಂತೆ ಮಡುಗಟ್ಟಿ ನಿಂತಿರುವ ಕ್ರೋಧ, ಬಂಡಾಯಪ್ರವೃತ್ತಿ, ಮೃಗೀಯ ಛಲಗಳ ಭವ್ಯತೆಯನ್ನು ಮನಗಾಣುವುದು ದಸ್ತೊಯೆವ್‌ಸ್ಕಿಯ ಸಹೃದಯರು ಎದುರಿಸಬೇಕಾಗಿ ಬರುವ ಸವಾಲು.

2

ಫಿಯೊದರ್ ದಸ್ತೊಯೆವ್‌ಸ್ಕಿಯ ಪ್ರಮುಖ ಕೃತಿಗಳು ಸೃಜನೆಯಾದುದು ಸ್ವಾಮಿ-ಭೃತ್ಯಸಂಬಂಧವನ್ನಾಧರಿಸಿದ ರಷ್ಯಾದೇಶದ ಊಳಿಗಮಾನ್ಯ ಪದ್ಧತಿಯು ನಲುಗಿ ಹೋಗಿ ಬಂಡವಾಳಶಾಹಿ ವ್ಯವಸ್ಥೆಗೆ ಎಡೆಮಾಡಿಕೊಡುತ್ತಿದ್ದ ಸಂಕ್ರಮಣ ಕಾಲದಲ್ಲಿ. ಕುಲ ವೃದ್ಧರೂ, ವಯೋವೃದ್ಧರೂ ಆದವರ ಅಧಿಕಾರ ಹಾಗೂ ಸ್ಥಾನಮಾನಗಳಿಗಿದ್ದ ವಿಶೇಷ ಮನ್ನಣೆಯು ಕ್ರಮಕ್ರಮವಾಗಿ ನಶಿಸಿಹೋಗುತ್ತಿರುವುದನ್ನು ಲೇಖಕನು ಕಣ್ಣಾರೆ ಕಂಡಿದ್ದ. ಕಂಡು ಕಸಿವಿಸಿಗೊಂಡಿದ್ದ. ಪೆಟ್ರೊಶೆವ್‌ಸ್ಕಿ ಪಂಥದ ಕ್ರಾಂತಿಯ ವೈಫಲ್ಯದಿಂದ ವಿಷಣ್ಣನಾಗಿದ್ದ ಲೇಖಕನ ದೃಷ್ಟಿಗೆ ಹೊಸ ಕಾಲವು ಉತ್ಸಾಹ ಭರವಸೆಗಳಿಗಿಂತ ಹೆಚ್ಚಾಗಿ ಅವ್ಯವಸ್ಥೆ

ವಿನಾಶಗಳ ಮುನ್ಸೂಚನೆಯಾಗಿಯೇ ಕಂಡಿತು. ಲೇಖಕನ ಮನೋದೌರ್ಬಲ್ಯವನ್ನೂ ಸಂದಿಗ್ಧವನ್ನೂ ಅರಿತಿದ್ದ ಅಂದಿನ ಪ್ರತಿಷ್ಠಿತರು ಅವನನ್ನು ತಮ್ಮ ಪರವಾಗಿ ದುಡಿಸಿ ಕೊಳ್ಳುವ ಅವಕಾಶವನ್ನು ಇಷ್ಟಿಷ್ಟೂ ಕಳೆದುಕೊಳ್ಳಲಿಲ್ಲ. ದಸ್ತೊಯೆವ್‌ಸ್ಕಿಯನ್ನು ಝಾರ್ ದೊರೆಗಳ ಆಸ್ಥಾನಕ್ಕೆ ಸ್ವಾಗತಿಸಿ ಸನ್ಮಾನಿಸಲಾಯಿತು. ಚಕ್ರವರ್ತಿಗಳ ಮಕ್ಕಳು (Grand Dukes)- ಅವರಲ್ಲಿ ಮುಂದಿನ ಮೂರನೆ ಅಲೆಗ್ಸಾಂಡರನೂ ಸೇರಿದ್ದ – ಸಾಹಿತಿಗೆ ರಾಜಾಶ್ರಯವನ್ನು ನೀಡಿದರು. ಅಲ್ಲದೆ ಪ್ರತಿಗಾಮೀ ಪ್ರತಿಷ್ಠಿತರ ಅಧ್ವರ್ಯುವೂ, ಸಿನೋಡನ ಪ್ರಧಾನ ಅಭಿಯೋಕ್ತನೂ (Prosecuter) ಪ್ರಪಂಚದ ಎಲ್ಲ ಪುರೋಗಾಮೀ ಚಿಂತನೆಗಳ ಕಟ್ಟಾವಿರೋಧಿಯೂ ಆಗಿದ್ದ ಕೆ. ಪೊಬೆದೊನೊಸ್ತಿವ್ ದಸ್ತೊಯೆವ್‌ಸ್ಕಿಯ ನಿಕಟವರ್ತಿಯಾದನು. 'ಕರಮಜೊವ್ ಸೋದರರು' ಕಾದಂಬರಿ ರಚನೆಗೆ ಈತನೇ ಪ್ರೇರಕನಾದನೆಂದು ಕೂಡ ತಿಳಿದುಬರುತ್ತದೆ. ಈ ಕಾದಂಬರಿಯಲ್ಲಿ ಬರುವ ಜೋಷಿಮಾ ಪಾದ್ರಿಯ ಪಾತ್ರವು ತನ್ನ ಸಲಹೆಯಂತೆಯೇ ರೂಪುಗೊಂಡಿತೆಂದು ವರದಿಗಾರ ನೊಬ್ಬನಿಗೆ ಬರೆದ ಪತ್ರದಲ್ಲಿ ಈತ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ದೈವಪ್ರಾಬಲ್ಯವನ್ನು ನಂಬದ ಮಹಾಪಾಪಿಗಳನ್ನು (19ನೇ ಶತಮಾನದ ರಷ್ಯಾದಲ್ಲಿ ತಲೆಯೆತ್ತಿದ್ದ ನಿರೀಶ್ವರವಾದೀ ಉಗ್ರಗಾಮಿ ಪಂಥವನ್ನು ಪ್ರತಿಗಾಮಿಗಳು Nihilism ಎಂದು ಕರೆದು ಗೇಲಿ ಮಾಡುತ್ತಿದ್ದರು) ಖಂಡಿಸುವುದೇ ಕಾದಂಬರಿಯ ಪ್ರಮುಖ ಉದ್ದೇಶವೆಂಬುದು ಈತನ ಅಭಿಪ್ರಾಯ.

ಕೃತಿಯಲ್ಲಿನ ತತ್ವಜಿಜ್ಞಾಸೆ, ವಸ್ತುವಿನ್ಯಾಸಗಳ ವಿಶ್ಲೇಷಣೆಗೆ ತೊಡಗದೆ 'ಕಥೆಗಾಗಿ ಕಥೆ'ಯನ್ನು ಓದುವ ಸಂದರ್ಭದಲ್ಲಿ ಕೂಡ 'ಕರಮಜೊವ್ ಸೋದರರು' ಕುತೂಹಲ ವನ್ನು ಕೆರಳಿಸುವ ರೋಚಕ ಕಾದಂಬರಿಯಾಗಿದೆ. ಇಳಿವಯಸ್ಸಾದರೂ ಕಾಮಚಾಪಲ್ಯವನ್ನು ಬಿಡದ ಮಾಜಿ ಜಮೀನ್ದಾರ, ಜಿಪುಣಾಗ್ರೇಸರ, ಕಚ್ಚೆಹರುಕ ಫಿಯೊದರ್ ಪಾವ್‌ಲೊವಿಚ್ ಕರಮಜೊವ್. ಅವನು ಮದುವೆಯಾಗಿದ್ದ ಇಬ್ಬರು ಹೆಂಡತಿಯರಿಂದ ಹುಟ್ಟಿದ ಮೂವರು ಗಂಡುಮಕ್ಕಳು – ಡ್ಮಿತ್ರಿ ಫಿಯೊದರೋವಿಚ್ ಕರಮಜೊವ್ (ಹಿರಿಯ ಹೆಂಡತಿಯ ಮಗ), ಇವಾನ್ ಫಿಯೊದರೋವಿಚ್ ಕರಮಜೊವ್ ಮತ್ತು ಅಲೆಕ್ಸೀ ಫಿಯೊದರೋವಿಚ್ ಕರಮಜೊವ್ (ಎರಡನೆ ಹೆಂಡತಿಯ ಮಕ್ಕಳು) – ಇವರ ಜೊತೆಗೆ ಸ್ಮೆಲ್ಲಿ ಲಿಜ್ವಾ ಎಂಬುವಳಿಂದ ಹಾದರಕ್ಕೆ ಹುಟ್ಟಿದ ಇನ್ನೊಬ್ಬ ಮಗ ಸ್ಮೆರ್‌ಡ್ಯಕೊವ್. ಈ ಅಣ್ಣತಮ್ಮಂದಿರು ತಮ್ಮತಮ್ಮಲ್ಲೆ ಸದಾ ವಾದವಿವಾದದಲ್ಲಿ ತೊಡಗುತ್ತಾರೆ, ಜಗಳ ಕಾಯುತ್ತಾರೆ. ಒಬ್ಬನ ಹೆಣ್ಣು ಹೊನ್ನುಗಳಿಗಾಗಿ ಮತ್ತೊಬ್ಬ ಆಸೆಪಡುತ್ತಾನೆ. ಗ್ರುಷೆಂಕಾ ಎಂಬುವಳನ್ನು ಓಲೈಸಿ ಗೆದ್ದುಕೊಳ್ಳಲು ಅಪ್ಪ ಫಿಯೊದರ್ ಮತ್ತು ಹಿರಿಯ ಮಗ ಡ್ಮಿತ್ರಿ ಇಬ್ಬರೂ ಶತಪ್ರಯತ್ನ ಮಾಡುತ್ತಾರೆ. ತಾನು ಹಿಂದೆ ಪ್ರೀತಿಸಿದ್ದ ಕೆಟೆರಿನಾಳಿಂದ ಪಡೆದ ಸಾಲವನ್ನು ಹಿಂತಿರುಗಿಸುವುದಕ್ಕೂ, ಗ್ರುಷೆಂಕಾಳನ್ನು ಒಲಿಸಿಕೊಳ್ಳುವುದಕ್ಕೂ ಡ್ಮಿತ್ರಿಗೆ

ಹಣದ ಅಗತ್ಯ ಬೀಳುತ್ತದೆ. ಅದಕ್ಕಾಗಿ, ಗ್ರುಷೆಂಕಾಳ ಪ್ರೇಮಕ್ಕೆ ಪ್ರತಿಸ್ಪರ್ಧಿಯೂ ಆಗಿದ್ದ ಅಪ್ಪನನ್ನು ಕೊಲೆ ಮಾಡಲೂ ಡ್ಮಿತ್ರಿ ಸನ್ನದ್ಧನಾಗುತ್ತಾನೆ. ಆದರೆ ಅದೃಷ್ಟವಶಾತ್ 'ಕಾಣದ ಕೈ' ಪ್ರಭಾವದಿಂದ ಅವನು ಪಿತೃಹತ್ಯೆಯ ಪಾಪವೆಸಗುವುದಿಲ್ಲ. ವಾಸ್ತವವಾಗಿ ಮುದುಕನ ಕೊಲೆಯಾದದ್ದು ಸ್ಮೆಲ್ಲಿ ಲಿಜ್ವಳಿಂದ ಹಾದರಕ್ಕೆ ಹುಟ್ಟಿದ ಮಗ ಸ್ಮೆರ್‌ಡ್ಯಕೊವ್‌ನಿಂದ. ಈ ಕೊಲೆಗೆಲಸಕ್ಕೆ, ಎರಡನೆಯ ಮಗನೂ ಚತುರೋಪಾಯ ನಿಪುಣನೂ ಆದ ಇವಾನ್ ಕರಮಜೊವನ ಮೌನಸಮ್ಮತಿಯೂ, ಪರೋಕ್ಷ ಪ್ರೋತ್ಸಾಹವೂ ಇದ್ದೇ ಇದೆ. ಕಿರಿಯ ಮಗ ಅಲ್ಯೋಷಾ ಮಾತ್ರ ಅತ್ಯಂತ ಸಂಭಾವಿತ. ಕೃತಿಕಾರನ ದೃಷ್ಟಿಯಲ್ಲಿ ಈತನೇ ಕಾದಂಬರಿ ನಾಯಕ. ಕ್ರೈಸ್ತಮಠವನ್ನು ಸೇರಿ, ಪಾದ್ರಿಗಳ ಜೊತೆ ವಾಸಿಸಿ, ತಾನೂ ಸಂನ್ಯಾಸಿಯಾಗಲು ಬಯಸುವವನು. ಕಾದಂಬರಿಯ ಎಲ್ಲ ಪಾತ್ರಗಳನ್ನೂ ಸಂಪರ್ಕಿಸಿ, ಸಹಾನುಭೂತಿಯಿಂದ ಎಲ್ಲರ ಅಂತರಂಗವನ್ನೂ ಅರ್ಥಮಾಡಿಕೊಳ್ಳಲೆತ್ನಿಸುವವನು. ಆದರೆ ಇಬ್ಬಗೆಯ ಸೆಳೆತಗಳಿಗೆ ಸಿಕ್ಕಿ ತೊಳಲಾಡುವ ಈತ ವಸ್ತುತಃ ಏನನ್ನೂ ಸಾಧಿಸಲಾರದ ಅಸಹಾಯಕ.

ಮುದುಕನ ಕೊಲೆಯ ಆರೋಪವು ಡ್ಮಿತ್ರಿಯ ಮೇಲೆಯೇ ಬಂದು ನ್ಯಾಯಾಲಯದಲ್ಲಿ ಕೂಲಂಕಷ ವಿಚಾರಣೆ ನಡೆಯುತ್ತದೆ. ವಿಚಾರಣೆ ನಡೆಯುತ್ತಿರುವಾಗಲೇ ನಿಜವಾದ ಕೊಲೆಗಾರ ಸ್ಮೆರ್‌ಡ್ಯಕೊವ್ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ; ಸಾಕ್ಷ್ಯ ಹೇಳಲು ಬಂದ ಇವಾನ್‌ಗೆ ನಡುವೆಯೇ ಬುದ್ಧಿಭ್ರಮಣೆಯಾಗುತ್ತದೆ. ಡ್ಮಿತ್ರಿಯಿಂದ ಪರಿತ್ಯಕ್ತಳಾಗಿದ್ದ ಕೆಟೆರಿನಾ, ಡ್ಮಿತ್ರಿಯ ಮೇಲೂ ಗ್ರುಷೆಂಕಳ ಮೇಲೂ ದ್ವೇಷ ಸಾಧಿಸಿ ಸುಳ್ಳು ಸಾಕ್ಷ್ಯ ಹೇಳುತ್ತಾಳೆ. ಒಟ್ಟಿನಲ್ಲಿ ಸಾಂದರ್ಭಿಕ ಸಾಕ್ಷ್ಯಗಳನ್ನೇ ಆಧರಿಸಿದ ತೀರ್ಮಾನದಿಂದ 'ನ್ಯಾಯದ ಅಪವಿತರಣೆ'(miscarriage of justice)ಯಾಗುತ್ತದೆ. ಡ್ಮಿತ್ರಿಯು ಸೈಬೀರಿಯಾದಲ್ಲಿ ಸಶ್ರಮ ಸೆರೆವಾಸವನ್ನನುಭವಿಸಬೇಕೆಂಬ 'ಜ್ಯೂರಿ'ಗಳ ತೀರ್ಪು ಹೊರಬೀಳುತ್ತದೆ.

ನಿರಪರಾಧಿಯೂ, ದೈವಭೀರುವೂ ಆದ ತನಗೆ ಇಂಥ ಘೋರಶಿಕ್ಷೆಯೊದಗ ಬೇಕಾದರೆ ತಾನು ಎಂದೋ, ಏನೋ ಪಾಪ ಮಾಡಿರಲೇಬೇಕೆಂದು ಡ್ಮಿತ್ರಿ ಹೇಗೋ ಸಮಾಧಾನ ತಂದುಕೊಳ್ಳುತ್ತಾನೆ ; ತನ್ನ ಕನಸಿನಲ್ಲಿ ಹಸುಳೆಯೊಂದರ ಆಕ್ರಂದನವನ್ನು ಕೇಳಿ ಕಸಿವಿಸಿಗೊಳ್ಳುತ್ತಾನೆ ; ತನ್ನ ಪಾಲಿಗೆ ಬಂದ ದಂಡನೆಯು ಪ್ರಾಯಶ್ಚಿತ್ತರೂಪವಾದು ದೆಂದೂ, ದೈವೀಕರುಣೆಯ ಪ್ರಚ್ಛನ್ನಲೀಲೆಯೆಂದೂ ನಂಬಿ ಮನಶ್ಶಾಂತಿಯಿಂದ ಅನುಭವಿಸಲು ಸಿದ್ಧನಾಗುತ್ತಾನೆ.

ಹಲವು ತಲೆಮಾರುಗಳ ಜೀವಿತವೃತ್ತಾಂತವನ್ನು ಒಳಗೊಳ್ಳುವಷ್ಟು ವಿಸ್ತಾರವಾದ ಈ ಬೃಹತ್ ಕಾದಂಬರಿಯ ಸರಿಸುಮಾರು ಅರ್ಧಭಾಗವು, ಇಲ್ಲಿನ ಪ್ರಮುಖ ಪಾತ್ರಗಳ ಬದುಕಿನಲ್ಲಿ ನಿರ್ಣಾಯಕವಾದ ಎರಡು ದಿನಗಳ ಕಥೆಯನ್ನು ಮಾತ್ರ ವರ್ಣಿಸುತ್ತದೆ !

ವಿವರಣೆಗಳ ಸಹಾಯವಿಲ್ಲದೆ ಭಾಷಾಂತರದ ಮೂಲಕ ಗ್ರಂಥವನ್ನು

ಓದುವವರು ಇಲ್ಲಿನ ಪ್ರತಿಮಾ-ಪ್ರತೀಕಗಳ ಔಚಿತ್ಯವನ್ನು ಗ್ರಹಿಸುವುದು ಸುಲಭವಲ್ಲ. ಉದಾಹರಣೆಗೆ, ಅಲೆಕ್ಸಿಸ್ ಅಥವಾ ಅಲ್ಯೋಷಾ ಎಂಬ ಪಾತ್ರದಲ್ಲಿ ಆ ತರುಣನ ಆಧ್ಯಾತ್ಮ ಜೋಡಿಯಾಗಿ, ರಷ್ಯಾದೇಶದ ಜಾನಪದ ಪುರಾಣಗಳ Man of God ಸಂತ ಅಲೆಕ್ಸಿಯ ಪಾತ್ರವೂ ಅಂತರ್ಗತವಾಗಿದೆಯಂತೆ. 'ಸ್ಮೆರ್‌ಡ್ಯಕೊವ್' ಎಂಬ ಶಬ್ದಕ್ಕೆ ದುರ್ನಾತ ಎಂಬ ಅರ್ಥವಿದ್ದು ಕಾದಂಬರಿಯ ಪರಮನೀಚ ಪಾತ್ರಕ್ಕೆ ಇದು ಅನ್ವರ್ಥವಾಗಿದೆ. ಡ್ಮಿತ್ರಿ ಎಂಬ ಹೆಸರಿನಲ್ಲಿ ಭೂಮಿಯ ಪ್ರಭವಶಕ್ತಿಸ್ವರೂಪಳಾದ ಡಿಮಿತ್ರಿಯಸ್ಸಳ ಸೂಚನೆಯಿದ್ದು ಈ ಪಾತ್ರವು ಸುಪ್ತಚಿತ್ತದ ಪುನರುತ್ಥಾನದ ಪ್ರತೀಕವಾಗುತ್ತದೆ. ಮಗು ಎಂಬ ಅರ್ಥದಲ್ಲಿ ಸಾಮಾನ್ಯವಾಗಿ ಪ್ರಚಲಿತವಿರುವ ಶಬ್ದಗಳಾವುವನ್ನೂ ಬಳಸದೆ bairn (–ಕಂದಮ್ಮ) ಎಂಬ ಶುದ್ಧ ಗ್ರಾಮ್ಯ ಶಬ್ದವನ್ನು ತಂದು, ಈ ಸಂದರ್ಭವನ್ನು ಗ್ರಾಮೀಣ ಭಾವಕೋಶದೊಡನೆ ಗ್ರಹಿಸುವಂತೆ ಮಾಡುತ್ತಾನೆ. ಹೀಗೆ, ವಿಶಿಷ್ಟ ಬಗೆಯ ಶಬ್ದ, ಪದ, ಪರಿಕಲ್ಪನೆಗಳ ಬಳಕೆಯೇ ದಸ್ತೊಯೆವ್‌ಸ್ಕಿಯ ಭಾಷಾಶೈಲಿಯ ವಿಶೇಷಗಳಲ್ಲೊಂದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ದಸ್ತೊಯೆವ್‌ಸ್ಕಿಯ ಪರಿಭಾಷೆಯು ಒಳಗೊಳ್ಳುವ ಅನುಭವದ ವಿವಿಧ ಸ್ತರಗಳನ್ನೂ, ಕಾದಂಬರಿಯ ನೈತಿಕ ಹಾಗೂ ತಾತ್ವಿಕ ನೆಲೆಗಟ್ಟನ್ನೂ ಸಂಪೂರ್ಣವಾಗಿ ಅರಿಯಬೇಕಾದರೆ ರಷ್ಯಾ ದೇಶದ ಜಾನಪದ ಜೀವನ, ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಕೂಲಂಕಷ ಅಧ್ಯಯನ ಮಾಡಬೇಕಾಗುತ್ತದೆ.

3

ಈ ಹಿಂದೆ ಉಲ್ಲೇಖಿಸಿದ ಕಾದಂಬರಿಯ ಸ್ಥೂಲರೇಖೆಗಳನ್ನಷ್ಟೇ ನೋಡಿದರೆ ಮುಖ್ಯ ಪಾತ್ರಗಳ ಸ್ವೇಚ್ಛಾಪ್ರವೃತ್ತಿ, ವ್ಯಭಿಚಾರ, ಕುಟುಂಬ ಕಲಹದ ದುರಂತ ಮೊದಲಾದ ಅಂಶಗಳೇ ಎದ್ದು ಕಾಣುತ್ತವೆಯೆಂಬುದು ನಿಜ. ಆದರೂ 'ಕರಮಜೊವ್ ಸೋದರ'ರನ್ನು ಕೇವಲ 'ಜಾರಚೋರರ ಕಥೆ'ಯಾಗಿಸದೆ, ಜಗತ್ತಿನ ಮಹತ್ಕೃತಿಗಳಲ್ಲಿ ಒಂದಾಗಿ ಎತ್ತಿಹಿಡಿಯಲು ಕಾರಣವಾಗಿರುವುದು ಕೃತಿಸಂದರ್ಭದಲ್ಲೇ ಮೈದಾಳುವ ಧರ್ಮಾಧರ್ಮಗಳ, ನ್ಯಾಯಾನ್ಯಾಯಗಳ, ಅಪರಾಧ ಮತ್ತು ಶಿಕ್ಷೆಯ ಜಿಜ್ಞಾಸೆ. ಅಂತರಂಗದಲ್ಲಿ ನಡೆಯುವ ಸತ್ಯ-ಅಸತ್ಯಗಳ ಸಂಘರ್ಷವು ಮೃಣ್ಮಯಸ್ತರದಲ್ಲಿ, ಬಹಿರ್ಘಟನೆಗಳ ಮೂಲಕ ಪ್ರೇಮ, ತ್ಯಾಗ ಹಾಗೂ ಲೋಭ, ಸ್ವಾರ್ಥಗಳ ಚಿತ್ರಣವಾದರೆ, ಚಿನ್ಮಯ ಸ್ತರಕ್ಕೆ ಏರಿದಾಗ ಅನಾದಿಯಿಂದ ನಿರಂತರವಾಗಿ ನಡೆದು ಬಂದಿರುವ ದೇವ-ದಾನವ ಸಂಘರ್ಷವಾಗಿಬಿಡುತ್ತದೆ ! ಅನಾದಿ-ಅನಂತವಾದ ಈ ದ್ವಂದ್ವವನ್ನು ಕೇವಲ ಭೌತ ಮಾನವನ ಭಾವಾನುಭವಗಳಿಂದ, ಮರ್ತ್ಯಪ್ರಜ್ಞೆಯ ಸಾಮರ್ಥ್ಯದಿಂದ ಅರ್ಥೈಸುವುದಾಗಲಿ, ಪರಿಹರಿಸುವುದಾಗಲಿ ಅಸಾಧ್ಯ ಎನ್ನುವುದೇ

ಕಾದಂಬರಿಕಾರನ ಕಾಣ್ಕೆಯಾಗಿರುವಂತಿದೆ. ಅನುಲ್ಲಂಘನೀಯವೂ, ಅಂತಿಮವೂ ಆದ ವಿರುದ್ಧ ಶಕ್ತಿಗಳ ನಡುವೆ ಸಿಕ್ಕಿ ತೊಳಲಾಡುವ ಮಾನವನ ಹಣೆಯಬರಹವನ್ನು, 'ವಿಷಾದಯೋಗ'ವನ್ನು 'ಕರಮಜೊವ್ ಚಿಂತನ' (Karamazov Contemplation) ಎಂದು ನಿರ್ವಚಿಸಲಾಗಿದೆ.

ಕಾದಂಬರಿಯ ಸಂಕೀರ್ಣಪ್ರಸಂಗಗಳು, ಜಟಿಲಕಥಾನಕ ಮೊದಲಾದವು ಲೇಖಕನ ಬೌದ್ಧಿಕ ಜಿಜ್ಞಾಸೆಯಿಂದಾಗಲಿ, ಅವನು ಅಳವಡಿಸುವ ಗಂಟುಗಂಟಾದ ವಸ್ತು ವಿನ್ಯಾಸದಿಂದಾಗಲಿ ಉಂಟಾದುವಲ್ಲ; ಭೌತಜಗತ್ತಿನ ಅಸ್ತಿತ್ವವನ್ನು, ಮಾನವವ್ಯವಹಾರದ ಅಸಂಬದ್ಧತೆಯನ್ನು ಲೇಖಕ ಗ್ರಹಿಸುವ ರೀತಿಯೇ ಸಂಕೀರ್ಣವಾಗಿದೆ. ಆದರೆ, ಜಗತ್ತಿನ ಗೊಂದಲ, ಅಸಾಂಗತ್ಯಗಳನ್ನು ಚಿತ್ರಿಸುವುದೇ ಕಾದಂಬರಿಕಾರನ ಅಂತಿಮ ಗುರಿಯಲ್ಲ. ಎಷ್ಟೇ ವಿಚಿತ್ರವೆನಿಸಿದರೂ, ಗಂಟುಗಳಿಂದಲೂ, ತೊಡಕು ನಾರುಗಳಿಂದಲೂ ನಿರ್ಮಿತವಾದ ಹೊರಚಿಪ್ಪನ್ನು ಒಡೆದು, ತಿರುಳಿಗೆ ಹೊಕ್ಕು ಕಾದಂಬರಿಯ ಆಂತರಿಕ ಚಲನೆಯ ದಿಕ್ಕನ್ನು ಅನುಸರಿಸಲು ಕಲಿತೊಡನೆಯೇ ಸರಳವೂ, ಸುಸಂಬದ್ಧವೂ ಆದ ದಸ್ತೊಯೆವ್‌ಸ್ಕಿಯ ಜಗತ್ತು ಪ್ರತ್ಯಕ್ಷವಾಗುತ್ತದೆ. ಈ ಹಿನ್ನೆಲೆಯಲ್ಲಿ ಲೇಖಕನ ದರ್ಶನ, ಸಂದೇಶಗಳನ್ನು ವಿವರಿಸುವ ಸಲುವಾಗಿ ಸ್ವತಃ ದಸ್ತೊಯೆವ್‌ಸ್ಕಿ ಬರೆದದ್ದರ ನೂರು ಪಟ್ಟು ವಿಮರ್ಶೆ, ವ್ಯಾಖ್ಯಾನ, ವಿವರಣೆಗಳು ನಿರ್ಮಾಣಗೊಂಡಿವೆ.

ದಸ್ತೊಯೆವ್‌ಸ್ಕಿಯ ವ್ಯಕ್ತಿತ್ವ ಹಾಗೂ ಆತನ ಸೃಜನಶೀಲತೆಯ ಬೇರುಗಳನ್ನು ಮತಧಾರ್ಮಿಕ ಪ್ರಜ್ಞೆಯಲ್ಲಿ ಗುರುತಿಸುವ ವಿಮರ್ಶಕರು ಅದೇ ಕಾರಣಕ್ಕಾಗಿ 'ಕರಮ-ಜೊವ್ ಸೋದರರು' ಅನ್ನು ವಿಶೇಷವಾಗಿ ಕೊಂಡಾಡಿ ಮುಕ್ತಕಂಠದಿಂದ ಪ್ರಶಂಸಿಸುತ್ತಾರೆ. ಪಾತ್ರಗಳ ಅಂತರಂಗದ ತಳಮಳ, ಅನಿರೀಕ್ಷಿತ ಪರಿತರ್ವನೆ ಹಾಗೂ ಪರಿಣಾಮದಲ್ಲಿ ಪಡೆಯುವ ಮನಶ್ಶಾಂತಿಗಳಲ್ಲಿ ಇವರಿಗೆ ವಿಶೇಷ ಆಕರ್ಷಣೆ.

ಕಾದಂಬರಿಯ ಪ್ರಧಾನಪಾತ್ರವಾದ ಡ್ಮಿತ್ರಿ ಕರಮಜೊವ್, ಕಂಡಹಾಗೆಯೇ ಒಬ್ಬ ಸ್ತ್ರೀಲೋಲುಪ, ಮದ್ಯಪಾಯಿ, ಜೂಜುಕೋರ. ಹೆಣ್ಣುಹೊನ್ನುಗಳಿಗಾಗಿ ಜನ್ಮ ಕೊಟ್ಟ ಅಪ್ಪನನ್ನೇ ಕೊಲೆಮಾಡಲು ತಯಾರಿದ್ದವನು. ಆದರೂ ಅವನಲ್ಲಿ ಆತ್ಮಸತ್ವವಿದೆ. ಹೊರ ನೋಟಕ್ಕೆ ಪರಪೀಡಿತನೂ, ಧನದಾಹಿಯೂ ಆದ ಬಾಯಿಬಡುಕ ಸೇನಾಧಿಕಾರಿಯಾಗಿ ಕಂಡರೂ ಅದಿಷ್ಟೇ ಅವನ ವ್ಯಕ್ತಿತ್ವವಲ್ಲ. ಈ ಎಲ್ಲ ಬಾಹ್ಯ ಚಟುವಟಿಕೆಗಳನ್ನೂ ಮೀರಿದ ಬೇರಾವುದೋ ನಿಗೂಢ ರಹಸ್ಯ ಅವನ ಅಂತರಂಗವನ್ನು ಬಾಧಿಸುತ್ತಿದ್ದಿರಬೇಕು. ತನ್ನ ತಮ್ಮನಾದ ಅಲ್ಯೋಷಾನೊಡನೆ ಅವನ ಸಂಭಾಷಣೆಯ ಒಂದೆರಡು ತುಣುಕುಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಬೇಕು —

''ಮನುಷ್ಯನು ಈ ಭೂಮಿಯ ಮೇಲೆ ಅದೆಷ್ಟು ನೋವನ್ನು ಅನುಭವಿಸಬೇಕು !

ಎಂಥೆಂಥ ಘೋರ ಪರೀಕ್ಷೆಗಳನ್ನು ಎದುರಿಸಬೇಕು ! ನಾನು ಸದಾ ಮದ್ಯದ ಅಮಲಿನಲ್ಲಿ ಇರುವ ವ್ಯಭಿಚಾರಿ, ಸಂಸ್ಕಾರಹೀನ ಎಂದು ತಿಳಿಯಬೇಡ... ಪಾಪಿಯೂ ನೀಚನೂ ನಿಕೃಷ್ಟನೂ ಆಗಿದ್ದರೂ ಸಹ ಆ ದೇವದೇವನ ಹೊಂದೊಡಿಗೆಯ ಅಂಚನ್ನಾದರೂ ಚುಂಬಿಸಬಲ್ಲೆ... ಈ ಕ್ಷಣದಲ್ಲಿ ಸೈತಾನನ ತೋಳ್ಸೆರೆಯಲ್ಲಿದ್ದರೂ, ನಾನು ನಿನ್ನ ಮಗನೇ ಸರಿ, ಓ ಭಗವಂತಾ ಎನ್ನಬಲ್ಲೆ... ಯಾವುದರ ಹೊರತಾಗಿ ಈ ಜಗತ್ತು ಸೃಷ್ಟಿಯಾಗದೋ, ಅಸ್ತಿತ್ವದಲ್ಲಿರದೋ ಅಂಥ ಆನಂದಸ್ವರೂಪಿಯಾದ ಸತ್‌ಶಕ್ತಿಯನ್ನು ಅಂತರಂಗದಲ್ಲೇ ಪರಿಭಾವಿಸಬಲ್ಲೆ...

''ಸೌಂದರ್ಯವೆನ್ನುವುದು ಘೋರಭೀಷಣವಾದುದೂ ಹೌದು ; ದುಸ್ಸಾಧ್ಯ ವಾದುದೂ ಹೌದು. ಅದನ್ನು ಲಕ್ಷಣಿಸುವುದೇ ಸಲ್ಲ. ಏಕೆಂದರೆ ದೇವರು ನಮಗೆ ಒಗಟುಗಳನ್ನು ಮಾತ್ರ ಒಡ್ಡಿದ್ದಾನೆ... ಪರಸ್ಪರ ವಿರುದ್ಧವಾದ ದಡಗಳು ಈ ಲೋಕದಲ್ಲಿ ಒಂದುಗೂಡುತ್ತವೆ ; ವಿರುದ್ಧ ತತ್ವಗಳು ಕೈಕೈ ಹಿಡಿದು ಸಾಗುತ್ತವೆ. ಅಲ್ಯೋಷಾ ! ನಾನೊಬ್ಬ ಅಜ್ಞಾನಿ ; ಆದರೂ ಈ ವಿಚಾರವನ್ನು ಕುರಿತು ಸಾಕಷ್ಟು ಧೇನಿಸಿದ್ದೇನೆ. ಈ ಲೋಕದಲ್ಲಿ ಅಸಂಖ್ಯಾತ ನಿಗೂಢ ರಹಸ್ಯಗಳಿವೆ ; ಸೌಂದರ್ಯವೂ ಅಂತಹದೊಂದು ರಹಸ್ಯ... ಮಾನವನ ಹೃದಯರಂಗದಲ್ಲಿ ದೇವರಾಕ್ಷಸ ಸಮರವು ನಿರಂತರವಾಗಿ ನಡೆದಿದೆ...''

ಇವೇ ಮಾತುಗಳು ಕೇವಲ ಒಬ್ಬ ಮದಾಂಧ ಸೇನಾಧಿಕಾರಿಯ ಬಾಯಿಂದ ಬಂದಿದ್ದರೆ ಅವನು ಬಡಾಯಿ ಕೊಚ್ಚುತ್ತಿದ್ದಾನೆ ಎನ್ನಬಹುದಿತ್ತು. ಅಪ್ರಾಮಾಣಿಕ ವಾಗ್ವೈಖರಿ ಯಾಗುತ್ತಿತ್ತು. ಆದರೆ ಡ್ಮಿತ್ರಿಯ ಬಾಯಿಂದ ಬಂದಾಗ ಹಾಗೆನಿಸುವುದಿಲ್ಲ. ಇದೇಕೆ ?

ಕಾದಂಬರಿಯ ಪೂರ್ವಾರ್ಧದಲ್ಲಿ ಡ್ಮಿತ್ರಿ ಅತ್ಯಂತ ಉದ್ಧಟನಾಗಿ ವರ್ತಿಸುತ್ತಾನೆಂಬುದು ನಿಜ. ಕೇವಲ ಆಕಸ್ಮಿಕ ಸಂಯೋಜನೆಯಿಂದ ತಪ್ಪದಿದ್ದರೆ ಅವನು ತನ್ನ ಅಪ್ಪನನ್ನೇ ಕೊಲೆ ಮಾಡಿಬಿಡುತ್ತಿದ್ದ. ಆ ಅಪ್ಪನಾದರೋ ಮಕ್ಕಳನ್ನು ಬೀದಿಪಾಲು ಮಾಡಿದ ಬೇಜವಾಬ್ದಾರ ; ಲೋಭಿ, ತುಚ್ಛ. ಮೇಲಾಗಿ ಗ್ರುಷೆಂಕ ಎಂಬ ಹೆಣ್ಣಿಗಾಗಿ ಮಗನೊಡನೆ ಸ್ಪರ್ಧಿಸಿ ವಿರೋಧ ಕಟ್ಟಿಕೊಂಡಿದ್ದವನು. ಆದ್ದರಿಂದ ಕೊಲೆಯನ್ನು ಡ್ಮಿತ್ರಿ ಒಂದು ರೀತಿ ಸಮರ್ಥಿಸಿಕೊಳ್ಳಲೂಬಹುದಿತ್ತು. ಆದರೆ ಅದೇ ಡ್ಮಿತ್ರಿಯು (ಅದೇ ಡ್ಮಿತ್ರಿ ಎನ್ನಬಹುದೆ ? ಅವನು ತೀರ ಬೇರೆಯೇ ಮನುಷ್ಯನಾಗಿರಲಿಲ್ಲವೆ ?) ಅಪರಾಧಿಯಾದ ತನ್ನ ಮೇಲೆ ಎರಗಿದ ದಂಡನೆಯನ್ನು ವಿನಮ್ರವಾಗಿ ಒಪ್ಪಿಕೊಳ್ಳುವಾಗ ಹೇಳುತ್ತಾನೆ : ''ನಾನು ಅವನನ್ನು ಕೊಲ್ಲಲಿಲ್ಲ, ಆದರೂ ನಾನು ಅಪರಾಧಿ, ಶಿಕ್ಷಾರ್ಹ, ಏಕೆಂದರೆ ಕೊಲೆ ಮಾಡಲು ನಿಶ್ಚಯಿಸಿದ್ದೆ. ಆಕಸ್ಮಿಕವಾಗಿ ತಪ್ಪದಿದ್ದರೆ ಹಾಗೆ ಮಾಡಿಯೂ ಬಿಡುತ್ತಿದ್ದೆ.'' ಪ್ರಜ್ಞೆಯ ಈ ಎರಡು ದಡಗಳ ನಡುವೆ ಅನಂತಸಾಗರವೇ ಪವಡಿಸಿದೆ. ಆದರೆ, ಕಾದಂಬರಿಯಲ್ಲಿ ವಿರುದ್ಧ ಧ್ರುವಗಳನ್ನು ಪ್ರತ್ಯೇಕಿಸುವುದು ಎರಡೇ ದಿನಗಳ ಅಂತರ. ಈ

ಅಲ್ಪ ಅವಧಿಯಲ್ಲೇ ಅವನ ಅಂತರಾತ್ಮವು ಸಾವಿರ ಸಾವಿರ ವರ್ಷಗಳ ಸಂಘರ್ಷವನ್ನು ಅನುಭವಿಸಿ ಕಾಲದೇಶಗಳ ಪರಿಧಿಯನ್ನು ಅತಿಕ್ರಮಿಸಿಬಿಟ್ಟಿದೆಯೆಂದರೆ ಆಶ್ಚರ್ಯವೇನು ? ಕಾದಂಬರಿಯ ಅತ್ಯಂತ ನೀಚಪಾತ್ರವಾದ ಸ್ಮೆರ್ಡ್ಯಕೊವ್ ಕೂಡ – ತನ್ನ ಗುಟ್ಟು ಬಯಲಾದೀತೆಂಬ ಭಯವು ಕಿಂಚಿತ್ತು ಇಲ್ಲದಿದ್ದರೂ ಸಹ – ನೇಣು ಹಾಕಿಕೊಂಡು ಸಾಯುತ್ತಾನೆ. ಅವನ ಅಂತರಂಗದಲ್ಲಿ ಕೂಡ, ವಿವರಣೆಗೆ ಮೀರಿದ ಪರಿವರ್ತನೆ ಜರುಗಿ, ಪಶ್ಚಾತ್ತಾಪದಿಂದ ಅವನ 'ಸ್ಮೆರ್ಡ್ಯಕೊವ್ ಆತ್ಮ'ವು ವಿಚ್ಛಿದ್ರಗೊಂಡಿರಬೇಕು. ಇಂಥ ಪಾತ್ರಸೃಷ್ಟಿಯ ಮೂಲವನ್ನು ನಾವು ಗುರುತಿಸಬೇಕಾದದ್ದು ಲೇಖಕನ ಮತಧಾರ್ಮಿಕ ಪ್ರಜ್ಞೆಯಲ್ಲಿ – ಎನ್ನುವುದು ಒಂದು ನಿಲುವು.

ಈ ಲೇಖಕನ ಸೃಜನಶೀಲತೆಯ ಬೇರುಗಳನ್ನು ಆತನ ಸಾಮಾಜಿಕ ಪ್ರಜ್ಞೆಯ ಸ್ಥಿತ್ಯಂತರದಲ್ಲಿ ಗುರುತಿಸುವ ಇನ್ನೊಂದು ಪಂಥದ ವಿಮರ್ಶಕರು 'ಕರಮಜೊವ್ ಸೋದರರು' ಒಟ್ಟಿನ ಮೇಲೆ ದಸ್ತೊಯೆವ್‌ಸ್ಕಿಯ ಕ್ರತುಶಕ್ತಿಯ ಅವನತಿಯನ್ನು ಸೂಚಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರೊ॥ ಗ್ರಾಸ್‌ಮನ್ ಹೇಳುತ್ತಾರೆ : "ದಸ್ತೊಯೆವ್‌ಸ್ಕಿಯ ಸೃಜನಶೀಲತೆಯು ಇಲ್ಲಿಯೂ ಪ್ರಖರವಾಗಿದೆ ಎಂಬುದು ಮಾತ್ರವಲ್ಲ; ಕಾದಂಬರಿಯ ಉತ್ಕೃಷ್ಟ ಭಾಗಗಳಲ್ಲಿ ಅದು ಶಿಖರಸ್ಥಾನದಲ್ಲೇ ವಿಹರಿಸುತ್ತದೆಯೆಂಬುದು ಕೂಡ ನಿಜ. ಆದರೆ ಈ ಮಾತು ಅನ್ವಯಿಸುವುದು ಆರಿಸಿದ ಉತ್ಕೃಷ್ಟ ಸಂದರ್ಭಗಳಿಗೆ ಮಾತ್ರ ಎಂಬುದನ್ನು ಗಮನಿಸಬೇಕು. ಉಳಿದಂತೆ, ಸಹಜ ಕಥನಕೌಶಲ ಹಾಗೂ ಮನಂಬುಗುವ ಸಮೃದ್ಧ ವಿವರಗಳು ತುಂಬಿದ್ದರೂ ಒಟ್ಟಿನ ಬಂಧವು ಶಿಥಿಲವಾಗಿದೆ. ವಸ್ತುವಿನ್ಯಾಸವು ವಿಕೃತವಾಗಿದ್ದು ಪ್ರಬಂಧ ಧ್ವನಿಯು ಅಸಮಂಜಸವಾಗಿದೆ." ಮ್ಯಾಕ್ಸಿಂ ಗಾರ್ಕಿಯ ಅಭಿಪ್ರಾಯವೂ ಇದೇ ಆಗಿದೆ.

ಹೀಗೆ ಲೇಖಕನ ಸೃಜನಸಾಮರ್ಥ್ಯದ ಅವನತಿಯನ್ನು ಕುರಿತು ಮಾತನಾಡುವಾಗ ದಸ್ತೊಯೆವ್‌ಸ್ಕಿಯು ತನ್ನ ಅಪರವಯಸ್ಸಿನಲ್ಲಿ ಪ್ರತಿಗಾಮೀ ಪ್ರತಿಷ್ಠಿತರ ಬಗ್ಗೆ ಬೆಳೆಸಿಕೊಂಡ ವ್ಯಕ್ತಿನಿಷ್ಠೆ, ಕ್ರೈಸ್ತ ಪುರೋಹಿತಶಾಹಿಯ ಪ್ರಭಾವಕ್ಕೆ ಒಳಗಾದುದು, ಜೀವನ ಧೋರಣೆಯಲ್ಲಿ ಆದ ವ್ಯತ್ಯಯ ಮೊದಲಾದ ಅಂಶಗಳನ್ನು ಎತ್ತಿ ಹೇಳಲಾಗಿದೆ ! 'ಕರಮಜೊವ್ ಸೋದರರ' ರಚನೆಗೆ, ಅದರಲ್ಲೂ ಜೋಷಿಮಾ ಪಾದ್ರಿಯ ಪಾತ್ರ ಕಲ್ಪನೆಗೆ ಒದಗಿಬಂದ ಪ್ರೇರಣೆ ಪ್ರೋತ್ಸಾಹಗಳನ್ನು ಈ ಹಿಂದೆ ಪ್ರಸ್ತಾಪಿಸಿದ ಹಾಗೇ ದಸ್ತೊಯೆವ್‌ಸ್ಕಿಯು ತಪ್ಪದೆ ಭಾಗವಹಿಸುತ್ತಿದ್ದ 'ಶನಿವಾರ ಸಂಜೆಯ ಪ್ರವಚನಗಳಲ್ಲಿ' ಪಾದ್ರಿಗಳು ಮತ್ತು ಪ್ರತಿಷ್ಠಿತರೂ ಸೇರಿ ತತ್ಕಾಲೀನ ಸಮಾಜದ ನೈತಿಕ ಅಧಃಪತನವನ್ನು ಅತಿ ರಂಜಿತವಾಗಿ ವರ್ಣಿಸಿ, ಕಾದಂಬರಿಯು ಉಪದೇಶಾತ್ಮಕವಾಗುವಂತೆ ಮಾಡಿರಬೇಕು ಎಂದು ಕೂಡ ಅಭಿಪ್ರಾಯ ಪಡಲಾಗಿದೆ.

ದಸ್ತೊಯೆವ್‌ಸ್ಕಿಯ ಪ್ರಮುಖ ಕೃತಿಗಳಲ್ಲೆಲ್ಲ ಸಾಮಾನ್ಯವಾಗಿರುವಂತೆ ಲೋಕ ನ್ಯಾಯ ಹಾಗೂ ದೈವನ್ಯಾಯಗಳ ತಾರತಮ್ಯ ಮತ್ತು ಅಪರಾಧ ಹಾಗೂ ದಂಡನೆಯ ಅಸಮಂಜಸತೆ – ಇವುಗಳೇ 'ಕರಮಜೊವ್' ಕಾದಂಬರಿಯಲ್ಲೂ ಪ್ರಧಾನವಾಗಿವೆ. ಫಿಯೊದರ್ ಕರಮಜೊವ್‌ನನ್ನು ಕೊಲೆಮಾಡಿದ ಆರೋಪವು ಅವನ ಹಿರಿಯ ಮಗ ಡ್ಮಿತ್ರಿಯ ಮೇಲೆ ಎರಗಿದಾಗ ಅಪರಾಧದ ತನಿಖೆ, ವಿಚಾರಣೆ, ನ್ಯಾಯಾಲಯದ ಕಾರ್ಯಕ್ರಮ, ವಾದ-ಪ್ರತಿವಾದ ಮತ್ತು ತೀರ್ಪು – ಇವು ಗ್ರಂಥದ ಎರಡನೆಯ ಸಂಪುಟ ವನ್ನೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಇಡಿಯಾಗಿ ತುಂಬಿವೆ. ನಿರಪರಾಧಿಯಾದ ಡ್ಮಿತ್ರಿಯ ಮೇಲೆ ಕವಿದ ಸಂಕಷ್ಟವನ್ನು ಮನಮುಟ್ಟುವಂತೆ ಬಣ್ಣಿಸಲಾಗಿದೆ. ನ್ಯಾಯಾಲಯದ ಕಾರ್ಯ ಕಲಾಪಗಳನ್ನು ಅನುಸಂಧಾನ ಮಾಡುತ್ತ ಸಾಂದರ್ಭಿಕ ಸಾಕ್ಷ್ಯಗಳಿಗೆ ಬಲಿಪಶುವಾಗುವ ಮುಗ್ಧನ ಬಗೆಗೆ ಓದುಗರು ಅನುಕಂಪಗೊಳ್ಳುವಂತೆ ಮಾಡುವುದೇ ಕಾದಂಬರಿಕಾರನ ಆಶಯ.

ಲೌಕಿಕ ಸತ್ಯ ಮತ್ತು ದೈವಿಕ ಸತ್ಯಗಳನ್ನು ಪೃಥಕ್ಕರಿಸಿ ಸಮತೂಕದಿಂದ ಮಾಡಿಸುವ, ಆಯಾಕ್ಷಣದಲ್ಲಿ ಅದೊಂದನ್ನೇ ಪರಿಭಾವಿಸುವಂತೆ ಮಾಡುವ ದಸ್ತೊಯೆವ್‌ಸ್ಕಿಯ ಜಾಣ್ಮೆ ಅದ್ಭುತವಾದುದು. ಅವನ ಕಥನಕೌಶಲ, ಲೋಕಾನುಭವ, ಮಾನವ ಸ್ವಭಾವದ ಪರಿಜ್ಞಾನಗಳನ್ನು ಕಂಡು ಓದುಗರು ಮಾರುಹೋಗುತ್ತಾರೆಂದರೂ ಆಶ್ಚರ್ಯವಿಲ್ಲ.

ಸದಾ ಉದ್ವಿಗ್ನನಾಗಿರುವ, ದುರ್ಭರ ಕಾಮನೆಗಳಿಂದ ಆಗಾಗ ಹುಚ್ಚೇಳುವ ಡ್ಮಿತ್ರಿ ತನ್ನ ದಾರಿಗೆ ಅಡ್ಡ ಬಂದ ಯಾರನ್ನಾದರೂ ಕೊಲೆಮಾಡುವಂಥವನು ; ಕಾದಂಬರಿಯ ಪೂರ್ವಾರ್ಧದ ತುಂಬ ಕಂಡಕಂಡವರ ಮೇಲೆ ಹರಿಹಾಯುತ್ತ, ಜಿಪುಣನಾದ ಮುದಿ ಅಪ್ಪನನ್ನೋ ಮತ್ಯಾರನ್ನೋ ಕೊಂದುಬಿಡುವುದಾಗಿ ಬೆದರಿಸುತ್ತ ಚಡಪಡಿಸುತ್ತಾನೆ. ಅವನ ಜಬರ್ದಸ್ತು, ಬಡಾಯಿ, ಮಾತುಮಾತಿನಲ್ಲಿ ವ್ಯಕ್ತವಾಗುವ ಕ್ರೌರ್ಯ, ಹಿಂಸೆಗಳನ್ನು ಕಂಡ ಓದುಗರು ವ್ಯಗ್ರರಾಗುವುದು ಸಹಜ. ಆದರೆ ಉತ್ತರಾರ್ಧದಲ್ಲಿ ತನಿಖಾಧಿಕಾರಿ ಗಳು, ಸಾರ್ವಜನಿಕ ಅಭಿಯೋಕ್ತರು (Public Prosecuter), ನ್ಯಾಯಮಂಡಲದ ಸದಸ್ಯರು, (Jurors) ಮೊದಲಾದವರ ಕಿರುಕುಳ, ಅವರ ಪ್ರತಿಷ್ಠೆ, ದರ್ಪ, ಸಣ್ಣತನಗಳ ಎದುರಿಗೆ ಡ್ಮಿತ್ರಿ 'ಪಾಪದ ಪ್ರಾಣಿ'ಯಾಗಿ ಬಿಡುತ್ತಾನೆ ; ಓದುಗರ ಅನುಕಂಪಕ್ಕೆ ಪಾತ್ರನಾಗುತ್ತಾನೆ. ಏನೋ, ತನ್ನ ಹಿಡಿತಕ್ಕೆ ಮೀರಿದ ಉದ್ವೇಗದಲ್ಲಿ ಹಾಗೆಲ್ಲ ಹಾರಾಡಿದ ; ಇಂಥ ಕಷ್ಟ ಬರಬಾರದು, ಅಯ್ಯೋ ಪಾಪ ! ಎನಿಸಿದರೆ ಕವಿಯ ಶ್ರಮ ಸಾರ್ಥಕ.

ಓದುಗರ ಅಂತರಂಗವನ್ನು ಗೆದ್ದ ಲೇಖಕ ಮುಂದೆ ಕಾನೂನಿನ ಸತ್ಯ (judicial truth) ಮತ್ತು ಅಂತಃಕರಣ ಸತ್ಯ(human truth)ಗಳನ್ನು ಪೃಥಕ್ಕರಿಸುವುದರಲ್ಲೂ ಇವುಗಳ ಪೈಕಿ ಮೊದಲಿನದರ, ಅಂದರೆ ಕಾನೂನಿನ ಸತ್ಯದ, ಪೊಳ್ಳುತನವನ್ನು

ಮನಗಾಣುವುದರಲ್ಲೂ ತೊಡಗುತ್ತಾನೆ. ಡ್ಮಿತ್ರಿಯ ಅಪರಾಧವನ್ನು ಆಶ್ಚರ್ಯಕರವಾದ ಸೂಕ್ಷ್ಮತೆ ಹಾಗೂ ಪ್ರಗಲ್ಭತೆಯಿಂದ ದೃಢಪಡಿಸುತ್ತಾನೆ : ಸ್ವತಃ ಡ್ಮಿತ್ರಿಯ ಹೇಳಿಕೆ, ಅಲ್ಯೋಷಾ, ಗ್ರುಷೆಂಕರ ಹೇಳಿಕೆಗಳು ಒಂದೊಂದೂ ಅವನ ಮೇಲಿನ ಆರೋಪವನ್ನು ಸಮರ್ಥಿಸುತ್ತವೆ. ಅಪರಾಧದ ತನಿಖೆ, ತಪಾಸಣೆ, ಶೋಧನೆ, ವಿಚಾರಣೆ, ಸಾಕ್ಷ್ಯ, ಪುರಾವೆಗಳೆಲ್ಲ ಎಷ್ಟು ಖಚಿತವೂ, ನಿರ್ದುಷ್ಟವೂ, ಪ್ರಬಲವೂ ಆಗಿವೆಯೆಂದರೆ, ಯಾವ ಪ್ರಗಲ್ಭ ಕಾನೂನು ಪಂಡಿತನೂ ಸಹ ಈ ಬಗ್ಗೆ ತಕರಾರು ಎತ್ತುವಂತೆಯೇ ಇಲ್ಲ. ಲೇಖಕನು ಉದ್ದೇಶಪೂರ್ವಕವಾಗಿಯೇ ಹೀಗೆ ಮಾಡಿದ್ದಾನೆನ್ನಬೇಕು. ಏಕೆಂದರೆ ಎಷ್ಟೇ ಸುಸೂಕ್ಷ್ಮವೂ ನಿರ್ದುಷ್ಟವೂ ಆಗಿದ್ದರೂ ಸಹ ಕಾನೂನಿನ ಕಣ್ಣಿಗೆ ಕಾಣುವ ಸತ್ಯವು ಅರ್ಥಾತ್ ಭೌತಿಕ ಸತ್ಯವು ನಿಜವಾದ, ಪರಮಸತ್ಯವಲ್ಲ ಎಂದು ತೋರಿಸಿಕೊಡುವುದೇ ಕಾದಂಬರಿಕಾರನ ಅಂತಿಮ ಉದ್ದೇಶ. ಈ ಸತ್ಯವು ಗೋಚರವಾಗುವುದು ಮತಧಾರ್ಮಿಕ ಪ್ರಜ್ಞೆಯಿಂದ ಸ್ಪಂದನಗೊಂಡ ಮಾನವಹೃದಯಕ್ಕೆ ಮಾತ್ರ ಎನ್ನುವುದು ಕೃತಿಕಾರನ ನಂಬಿಕೆ. ಕಾನೂನಿನ ದೃಷ್ಟಿಯಿಂದ ಮಹತ್ವದ್ದಾಗುವ ಸಾಕ್ಷ್ಯ ಪುರಾವೆಗಳೆಲ್ಲವೂ ಅಂತಃಕರಣ ದಿಂದ ಸ್ಫೂರ್ತವಾದ ದೃಷ್ಟಿಗೆ ತೀರಾಗೌಣವಾಗಬಹುದು. ಆದ್ದರಿಂದ ಕಾನೂನನ್ನು ಆಧರಿಸಿದ ನ್ಯಾಯಾಲಯಗಳಿಂದ ನಿಜವಾಗಿಯೂ ನ್ಯಾಯ ದೊರೆಯಲಾರದು ; ಅಂಥ ನ್ಯಾಯ ದೊರೆಯುವುದಿದ್ದರೆ ಅದು ಸಂಪ್ರದಾಯನಿಷ್ಠ ಧರ್ಮಪ್ರಭುಗಳಿಂದ, 'ಚರ್ಚು'ಗಳಿಂದ ಮಾತ್ರ – ಎಂದು ದಸ್ತೊಯೆವ್‌ಸ್ಕಿ ಸ್ಪಷ್ಟವಾಗಿಯೇ ನುಡಿದಿದ್ದಾನೆ.

ಹೀಗೆ, ಕೃತಿಕಾರನ ಉದ್ದೇಶವನ್ನೂ, ಕಥನಕ್ರಮವನ್ನೂ ವಿಶ್ಲೇಷಿಸಿದ ಮೇಲೂ ಸಹೃದಯರನ್ನು ಡ್ಮಿತ್ರಿಯ ಪರವಾಗಿ ಒಲಿಸುವುದರಲ್ಲಿ ಆತ ಎಷ್ಟರ ಮಟ್ಟಿಗೆ ಸಫಲನಾಗಿದ್ದಾನೆ ಎಂಬ ಪ್ರಶ್ನೆ ಎತ್ತಬೇಕಾಗುತ್ತದೆ. ಈ ಹಿಂದೆಯೇ ಪ್ರಸ್ತಾಪಿಸಿದ ಹಾಗೆ, ಡ್ಮಿತ್ರಿ ತುಂಬ ಉದ್ಧಟ ಸ್ವಭಾವದವನು ; ಮುಂಗೋಪಿ, ಕ್ರೂರಿ. 'The Sensualists' ಎಂಬ ಒಂಬತ್ತನೇ ಅಧ್ಯಾಯದಲ್ಲಿ ಬರುವಂತೆ ಆತ, ವೃದ್ಧ ತಂದೆಯ ಮೇಲೆ ದಾಳಿ ಮಾಡಿ, ಅವನ ಜುಟ್ಟು ಹಿಡಿದು ಎಳೆದಾಡುವುದು ; ಗ್ರಿಗೊರಿ ಎಂಬ ನಿಷ್ಠ ಸೇವಕನ ಎದುರಿಗೆ ಸಮಯ ಸಾಧಿಸಿ ಆ ಮುದಿಗೂಬೆಯನ್ನು (ಅಪ್ಪ ಫಿಯೊದರ್‌ನನ್ನು) ಕೊಲೆ ಮಾಡುತ್ತೇನೆಂದು ಶಪಥಗೈಯುವುದು ; ಮದ್ಯದ ಅಂಗಡಿಯಲ್ಲಿ ನಿವೃತ್ತ ಸೈನಿಕನೊಬ್ಬನನ್ನು ಬೀದಿಗೆ ಎಳೆದು ಥಳಿಸಿ ಅವನ ಗಡ್ಡ ಕೀಳುವುದು ; ಆ ಬಡಪಾಯಿಯ ಜೀವನ ಸರ್ವಸ್ವವಾಗಿದ್ದ ಏಕಮಾತ್ರ ಪುತ್ರನ ಸಾವಿಗೆ ಪರೋಕ್ಷವಾಗಿಯಾದರೂ ಕಾರಣನಾಗುವುದು– ಇದನ್ನೆಲ್ಲ ಎಚ್ಚರದ ಓದುಗರು ಸುಲಭವಾಗಿ ಮರೆಯುವುದು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಡ್ಮಿತ್ರಿಗೆ ಆದ ದಂಡನೆಯು ಅತಿಯಾಯಿತು ಎನ್ನಬಹುದಾದರೂ, ಸಂಪೂರ್ಣವಾಗಿ ಅನ್ಯಾಯವಲ್ಲ ಎಂದು ಭಾವಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಡ್ಮಿತ್ರಿ ಕೆಲಮಟ್ಟಿಗಾದರೂ ಶಿಕ್ಷಾರ್ಹನೆನ್ನುವುದು ಕಾವ್ಯನ್ಯಾಯ.

ಇಷ್ಟರಮೇಲೂ, ಕೊಲೆಯ ಆರೋಪದಿಂದ ಡ್ಮಿತ್ರಿಯನ್ನು ವಿಮುಕ್ತಿಗೊಳಿಸಬೇಕಾಗಿದ್ದರೆ ಅದಕ್ಕಾಗಿ ಪುನಃ ಕಾನೂನಿನ ಸೂಕ್ಷ್ಮ ನಿರ್ವಚನವನ್ನೇ ಅವಲಂಬಿಸಬೇಕಾಗುತ್ತದೆ. ಡ್ಮಿತ್ರಿಯ ಮೇಲಿನ ಆರೋಪವನ್ನು ರುಜುವಾತುಪಡಿಸಲು ದಂಡಾಧಿಕರಣವು (Prosecution) ಒದಗಿಸುವುದೆಲ್ಲ, ಸಂದಿಗ್ಧಮಯವಾದ ಸಾಂದರ್ಭಿಕ ಸಾಕ್ಷ್ಯಗಳೇ ಹೊರತು ಸಂದೇಹಾತೀತವಾದ ನಿದರ್ಶನವೆಂಬುದು ಯಾವುದೂ ಇಲ್ಲ, ಆದ್ದರಿಂದ ಸಂಶಯದ ಲಾಭವು ಆರೋಪಿಗೆ ದೊರೆಯಬೇಕು (benefit of doubt to the accused) ಎಂದು ವಾದಿಸಬಹುದು. ಲೋಕ ನ್ಯಾಯ ಮತ್ತು ಆಧ್ಯಾತ್ಮ ನ್ಯಾಯಗಳ ಬಗೆಗೆ ದಸ್ತೋಯೆವ್‌ಸ್ಕಿಯು ಏನೇ ಹೇಳಲಿ, ನ್ಯಾಯಾಲಯದ ವಿಚಾರಣೆಯ ಸಂದರ್ಭದಲ್ಲಿ ಕಣ್ಣ ಮುಂದಿರುವುದು ಸಾಂದರ್ಭಿಕ ಸಾಕ್ಷ್ಯಗಳನ್ನವಲಂಬಿಸಿ ಡ್ಮಿತ್ರಿಯನ್ನು ಶಿಕ್ಷಿಸಬೇಕೆ ಅಥವಾ ಸಂಶಯದ ಲಾಭ ಕೊಟ್ಟು ಅವನನ್ನು ಆರೋಪಮುಕ್ತನಾಗಿಸಬೇಕೇ – the more just legal ಮತ್ತು – the less just legal ಎಂಬ ಕಾನೂನಿನ ಸೂಕ್ಷ್ಮ ವ್ಯತ್ಯಾಸ ಮಾತ್ರ. ಅಂದಿನ ರಷ್ಯಾ ದೇಶದ ಕಾನೂನು ರಚನೆಯಲ್ಲಿನ ದೋಷದಿಂದಲೋ ಅಥವಾ ಪೂರ್ವಾಗ್ರಹಪೀಡಿತವಾದ ಧರ್ಮಾಧಿಕರಣದ (the Jury) ದೋಷದಿಂದಲೋ (ಡ್ಮಿತ್ರಿಯಂತಹವನನ್ನು ಕ್ಷಮಿಸುವುದರಿಂದ ಸಮಾಜದ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆ ವಿಸ್ತಾರಚರ್ಚೆ ನಡೆಯುತ್ತದೆ, ನ್ಯಾಯಾಲಯದಲ್ಲಿ !) ಅಂತೂ ಡ್ಮಿತ್ರಿಗೆ ಶಿಕ್ಷೆಯಾಗುತ್ತದೆ.* ಅಂದರೆ ಇಲ್ಲಿ ನ್ಯಾಯದ ಅಪವಿತರಣೆಯಾಗುವುದು (miscarriage of justice) ಕಾನೂನಿನ ವ್ಯಾಖ್ಯಾನದಲ್ಲಿ ಉಂಟಾಗುವ ದೋಷದಿಂದಲೇ ಹೊರತು ಮತಧಾರ್ಮಿಕಪ್ರಜ್ಞೆಯ ಅಭಾವದಿಂದಲ್ಲ. ಈ ಹಿನ್ನೆಲೆಯಲ್ಲಿ ದಸ್ತೋಯೆವ್‌ಸ್ಕಿಯು ಅಷ್ಟೊಂದು ಶ್ರದ್ಧಾಭಕ್ತಿಗಳಿಂದ ಪ್ರತಿಪಾದಿಸುವ ಎರಡು ಸತ್ಯಗಳ ವೈದೃಶ್ಯ ಜಿಜ್ಞಾಸೆಯೆಲ್ಲವೂ ಬೆಳಗಿನ ಮಂಜಿನಂತೆ ಕರಗಿಬಿಡುತ್ತದೆ. 'ಕರಮಜೊವ್ ಸೋದರರು' ಕಾದಂಬರಿಯಲ್ಲಿ ಅಪರಾಧ ಮತ್ತು ದಂಡನೆಯ ಆಶಯವು, ನ್ಯಾಯಾನ್ಯಾಯಗಳ ವಿಮರ್ಶೆಯು ರಷ್ಯಾ ದೇಶದ ಒಬ್ಬ ಮಹಾನ್ ಲೇಖಕನಿಗೆ ಕೀರ್ತಿ ತರುವ ರೀತಿಯಲ್ಲಿ ಪ್ರತಿಪಾದನೆಯಾಗಿಲ್ಲ ಎಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯ. ಅಲ್ಲದೆ, ಡ್ಮಿತ್ರಿಗೆ ಒದಗಿದ ಶಿಕ್ಷೆಯನ್ನು 'ಮನುಕುಲದ ಮೂಲಪಾಪಕ್ಕಾಗಿ ಪ್ರಾಯಶ್ಚಿತ್ತವನ್ನನುಭವಿಸುವ ಏಸುವಿನ ಪುರಾಣಕತೆಗೆ ತಳುಕು' ಹಾಕುವುದು, ಡ್ಮಿತ್ರಿಯನ್ನು ಹುತಾತ್ಮನನ್ನಾಗಿಸುವುದು ಅಷ್ಟೇನೂ ಸಮಂಜಸವೆನಿಸುವುದಿಲ್ಲ.

---

* ಟಾಲ್‌ಸ್ಟಾಯ್ ಅವರ ಸಣ್ಣಕತೆಯೊಂದರಲ್ಲಿ ಆಕ್ಸಿನೊವ್ ಎಂಬ ತರುಣ ವ್ಯಾಪಾರಿಯ ಮೇಲೆ ಒಂದು ಕೊಲೆಯ ಆರೋಪ ಬಂದು, ಕೇವಲ ಸಾಂದರ್ಭಿಕ ಸಾಕ್ಷ್ಯಗಳನ್ನವಲಂಬಿಸಿ ಅವನಿಗೆ ಕಠಿಣ ಶಿಕ್ಷೆಯಾದ ಸಂಗತಿಯನ್ನಿಲ್ಲಿ ನೆನೆಯಬಹುದು. ಆಕ್ಸಿನೊವ್ ಸೈಬೀರಿಯಾದಲ್ಲಿ ಸುಮಾರು ನಲವತ್ತು ವರ್ಷಗಳ ದೀರ್ಘಾವಧಿ ಶಿಕ್ಷೆಯನ್ನನುಭವಿಸಿದಮೇಲೆ ನಿಜವಾದ ಕೊಲೆಗಾರನ ಪತ್ತೆಯಾಗಿ ಸತ್ಯ ಹೊರಬೀಳುತ್ತದೆ. ಆದರೆ, ತನ್ನ ಬಾಳಿನ ಅಮೂಲ್ಯ ದಿನಗಳೆಲ್ಲವೂ ವ್ಯರ್ಥವಾಗಿದ್ದು ಮುಂದೆ ಬದುಕುವುದರಲ್ಲಿ ಯಾವ ಸಾರ್ಥಕತೆಯನ್ನೂ ಕಾಣದ ಆಕ್ಸಿನೊವ್ ಅಲ್ಲೇ ಸತ್ತುಹೋಗುತ್ತಾನೆ. ಈ ಹಿನ್ನೆಲೆಯಲ್ಲಿ 'God sees the Truth But Waits' ಎಂಬ ಕಥೆಯ ಶೀರ್ಷಿಕೆ ಒಂದು ದೊಡ್ಡ ವಿಡಂಬನೆಯಾಗುತ್ತದೆ.

ವಿಶೇಷತಃ ಮತಧರ್ಮದಲ್ಲಿ ಆಸಕ್ತರಾದ ವಿಮರ್ಶಕರಿಂದ ಅಪಾಢವ್ಯ ಪ್ರಶಂಸೆಗೆ ಪಾತ್ರವಾಗಿದ್ದ ಕೆಲವೊಂದು ಭಾಗಗಳು ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಅಸಮಂಜಸವೆನಿಸುತ್ತ ವೆಂಬುದು ಗೊತ್ತಾದ ಮೇಲೆ 'ಕರಮಜೊವ್ ಸೋದರರು' ಅನ್ನು ಪುನರ್‌ಅವಲೋಕನ ಮಾಡಬೇಕು. ಮೊದಲು ಕಣ್ಣುತಪ್ಪಿಸಿಕೊಂಡಿದ್ದ ಹಲಕೆಲವು ಉತ್ತಮೋತ್ತಮ ಸನ್ನಿವೇಶಗಳು ಅಲ್ಲಿರುವುದು ದೃಗ್ಗೋಚರವಾಗುತ್ತದೆ. ಈ ದೃಷ್ಟಿಯಿಂದ 'ಬಂಡಾಯ' ('Rebellion') ಎಂಬ ಅಧ್ಯಾಯ ವಿಶೇಷ ಗಮನಾರ್ಹವಾದುದು. ದೀನದಲಿತರು ಹಾಗೂ ಅಮಾಯಕ ಮುಗ್ಧರ ಬಗೆಗೆ ಲೇಖಕನಲ್ಲಿ ಅಂತರ್ನಿಹಿತವಾಗಿದ್ದ ಸಹಾನುಭೂತಿ ; ದಬ್ಬಾಳಿಕೆಗಾರರ ಮೇಲಿನ ರೋಷ ; ಸಾಮಾಜಿಕ ತಾರತಮ್ಯಗಳನ್ನು ಕಂಡು ಉಂಟಾಗಿದ್ದ ತಳಮಳ – ಇವೆಲ್ಲವೂ ಹರಳುಗಟ್ಟಿವೆ, ಈ ಒಂದು ಅಧ್ಯಾಯದಲ್ಲಿ. ಕಾದಂಬರಿಯ ರಚನೆಗೆ ಪ್ರೇರಕವಾದ ಕ್ರೈಸ್ತ ಪುರೋಹಿತಶಾಹಿಯ ಪ್ರಭಾವ ಏನೇ ಇರಲಿ ; ಈ ಅಧ್ಯಾಯದಲ್ಲಿ ಮಾತ್ರ ಲೇಖಕನು ಹೊರಗಿನ ಎಲ್ಲ ಒತ್ತಾಯಗಳನ್ನೂ ಕಿತ್ತೊಗೆದು, ನಾಸ್ತಿಕನಾದ ಎರಡನೆಯ ಮಗ ಇವಾನ್ ಕರಮಜೊವ್‌ನೊಡನೆ ಸೇರಿಕೊಂಡು, ದೈವಭೀರುವಾದ ಕಿರಿಯ ಮಗ ಅಲ್ಯೋಷಾನನ್ನು ಜಿಜ್ಞಾಸೆಗೆ ಎಳೆದು ಪುರೋಹಿತಶಾಹಿಯ ಕುತಂತ್ರಗಳ ವಿರುದ್ಧ ಯುದ್ಧವನ್ನೇ ಸಾರಿಬಿಟ್ಟಿದ್ದಾನೆ. ಇಲ್ಲಿನ ಒಂದೊಂದು ನುಡಿಯೂ ಲೇಖಕನ ಹೃದಯರಕ್ತದಿಂದಲೇ ಬರೆದಂತಿದೆ !

ಮತಧಾರ್ಮಿಕ ನಂಬಿಕೆಯ ಪೊಳ್ಳುತನವನ್ನು ಜಗಜ್ಜಾಹೀರುಪಡಿಸುವ ಈ ಪ್ರತಿಭಟನೆಯು 'ಕರಮಜೊವ್' ಕಾದಂಬರಿಯಲ್ಲೇ ಬಂದಿರುವುದೊಂದು ವಿಪರ್ಯಾಸ ! ಇದು ದಸ್ತೊಯೆವ್‌ಸ್ಕಿಯಲ್ಲಿ ರಕ್ತಗತವಾಗಿದ್ದ ಬಂಡಾಯ ಪ್ರವೃತ್ತಿಯ ಫಲ. ಸತ್ಯವು ಎಂದಾದರೂ, ಎಂತಾದರೂ ಹೊರಬೀಳತಕ್ಕದ್ದೇ. ಅಂತಸ್ಸತ್ವದ ಅಭಿವ್ಯಕ್ತಿಯೇ ನಿಜವಾದ ಸಾಹಿತ್ಯ.

ರಷ್ಯಾ ದೇಶದ ಸಾಹಿತ್ಯಕ ಪರಂಪರೆಯ ದಿವ್ಯಧ್ವನಿಯನ್ನು ಯಾವ ಅಧಿಕಾರಶಾಹಿ ದಬ್ಬಾಳಿಕೆಯಾಗಲಿ, ಮತಧಾರ್ಮಿಕ ಒತ್ತಡವಾಗಲಿ ಸ್ತಬ್ಧಗೊಳಿಸಲಾರದು ಎಂಬುದಕ್ಕೆ 'ಕರಮಜೊವ್ ಸೋದರರ' 'ಬಂಡಾಯ' ಸಾಕ್ಷಿಯಾಗಿದೆ. ದಸ್ತೊಯೆವ್‌ಸ್ಕಿಯು ತನ್ನ ಉತ್ತರಾಶ್ರಮದಲ್ಲಿ ಸೈದ್ಧಾಂತಿಕವಾಗಿ ಹಿರಿಯ ಲೇಖಕರಿಂದ ದೂರ ಸರಿಯಲೆತ್ನಿಸಿದ್ದರೂ ಸಹ ಚಿಕ್ಕಂದಿನಲ್ಲಿ ಆ ಪರಂಪರೆಯ ಅಂತಸ್ಸತ್ವವನ್ನು ಮೈಗೂಡಿಸಿಕೊಂಡೇ ಬೆಳೆದವನು. ಗೊಗೆಲ್ ಮತ್ತು ಬೆಲಿನ್ಸ್ಕಿಯರ ಶಿಷ್ಯನಾಗಿ ಲೇಖಕವೃತ್ತಿಯನ್ನಾರಂಭಿಸಿದವನು. ಪುಷ್ಕಿನ್, ಲೆರ್ಮಂಟೊವ್, ಗ್ರಿಬೊಯೆದೆವ್, ನೆಕರಸೊವ್ ಮತ್ತು ಟಾಲ್‌ಸ್ಟಾಯ್ — ಇವರ ಆರಾಧಕನಾಗಿದ್ದವನು. ಆದ್ದರಿಂದಲೇ ರಷ್ಯಾ ದೇಶದ ಮತ್ತು ಮಾನವಜನಾಂಗದ ಯಾವ ಸುಪ್ತವೇದನೆಗೆ ಅವರೆಲ್ಲ ಅಭಿವ್ಯಕ್ತಿ ನೀಡಿದರೋ, ಅದೇ ಪರಂಪರೆಯ ಲಹರಿಗೆ 'ಬಂಡಾಯ' ಎಂಬ ಅಧ್ಯಾಯದಲ್ಲಿ ತನ್ನದೂ ದನಿಗೂಡಿಸಿದ್ದಾನೆ.

ಈಚಿನ ವಿಮರ್ಶಕರೊಬ್ಬರು ಇವಾನ್ ಕರಮಜೊವ್‌ನ ಪ್ರತಿಭಟನೆಯನ್ನು ಕುರಿತು ಹೀಗೆ ಹೇಳಿದ್ದಾರೆ :

"ಮುಗ್ಧ ಮಾನವ ವರ್ಗದ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ಅನ್ಯಾಯಗಳನ್ನು ಕಂಡು, ಅವರಿಗೆ ಸಹಾಯ ಮಾಡಲು ತವಕಿಸಿದರೂ ಒಂದು ಹೆಜ್ಜೆ ಮುಂದಿಡಲಾರದ, ಸರಪಳಿಗಳಿಂದ ದೊಡ್ಡ ಬಂಡೆಗೆ ಬಿಗಿಸಿಕೊಂಡಿದ್ದರೂ ಅರಚುವ ಪ್ರೊಮಿಥಿಯಸ್‌ನ ಗರ್ಜನೆಯಂತೆ ಅದು ಓದುಗರನ್ನು ಅಲ್ಲಾಡಿಸಿಬಿಡುತ್ತದೆ."

ಜಗತ್ತಿನ ದುಃಖ ಸಂಕಟಗಳನ್ನು , ಸಾಮಾಜಿಕ ಅನ್ಯಾಯವನ್ನು ನೋಡಿ ನೋಡಿ ರೋಸಿಹೋಗಿದ್ದ ದಸ್ತೊಯೆವ್‌ಸ್ಕಿ ಆವೇಗದ ಭರದಲ್ಲಿ ಇವಾನ್ ಕರಮಜೊವ್ ಮೂಲಕ ಮೂಲಭೂತವಾದ ಮಾರ್ಮಿಕ ಪ್ರಶ್ನೆಗಳನ್ನು ಹಾಕಿಸಿದ, ನಿಜ. ಆದರೆ ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಕೊಡುವುದು ಮಾತ್ರ ಅವನಿಂದ ಸಾಧ್ಯವಾಗಲಿಲ್ಲ. 'ಕರಮಜೊವ್ ಸೋದರರು' ಅಲ್ಲಿ ಲೇಖಕನು ಕಂಠೋಕ್ತವಾಗಿ, ವಾಚ್ಯವಾಗಿ ಹೇಳುತ್ತಿರುವ ಹಾಗೆ 'ಜಗತ್ತೆಲ್ಲವೂ ದೈವನಿಯಾಮಕದಂತೆಯೇ ನಡೆಯುತ್ತದೆ' ಎನ್ನುವುದಾದರೆ ಆ ಮಾತನ್ನು ಮುಗ್ಧಶಿಶುಗಳು ನೋವು ಸಂಕಟಗಳನ್ನನುಭವಿಸುವುದು ಕೂಡ ದೈವಸಂಕಲ್ಪ ಮತ್ತು ಅಪರಿಹಾರ್ಯ ಎಂಬ ಷರತ್ತಿನೊಡನೆಯೇ ಒಪ್ಪಬೇಕಾಗುತ್ತದೆಯಷ್ಟೆ? ಸಂದಿಗ್ಧದಲ್ಲಿ ಸಿಕ್ಕಿದ ಲೇಖಕನು, 'The Grand Inquisitor' ಎಂಬ ಅಧ್ಯಾಯದಲ್ಲಿ ಸಂತ ಜೋಷಿಮಾ ಮೂಲಕ ಇವಾನ್ ಕರಮಜೋವನ ಪ್ರಶ್ನೆಗಳಿಗೆ ಕೊಡಿಸುವ ಉತ್ತರವು ಕೂಡ ಸಮರ್ಪಕವಾಗಿ ತೋರುವುದಿಲ್ಲ.

ಡ್ಮಿತ್ರಿ ಕರಮಜೊವ್ ನ್ಯಾಯಾಲಯದಿಂದ ಅಂತಿಮ ತೀರ್ಪಿನ ಪಠಣವನ್ನು ನಿರೀಕ್ಷಿಸುತ್ತ ತನಗೆ ಒದಗಲಿರುವ ಶಿಕ್ಷೆಯನ್ನು ಅನುಭವಿಸಲು ಮಾನಸಿಕವಾಗಿ ಸಿದ್ಧನಾಗುತ್ತಿರುವಾಗ, ವಿಶ್ವದಾದ್ಯಂತ ಕೇಳಿಬರುವ ಹಸಿದ ಮಕ್ಕಳ ರೋದನವನ್ನು ಒಂದು ಘೋರ ದುಸ್ವಪ್ನವಾಗಿ ಸೃಷ್ಟಿಸಲಾಗಿದೆ. ಇದು ಮಾತ್ರ ತನ್ನಷ್ಟಕ್ಕೇ ಧ್ವನಿಪೂರ್ಣವಾದ, ಕಲಾತ್ಮಕ ಪ್ರತೀಕ. ಓದುಗರ ಅನುಕಂಪವನ್ನು ಸೂರೆಗೊಳ್ಳುತ್ತದೆ. ನೆಕ್ರಸೊವ್ ಚಿತ್ರಿಸುವ ಹಸಿದ ಹಳ್ಳಿಗಳ ರೋದನದ ತೀಕ್ಷ್ಣ, ಮನೋವೇಧಕ ಚಿತ್ರಕ್ಕೂ ಇದಕ್ಕೂ ಇರುವ ಸಾಮ್ಯವನ್ನು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.

4

'ಕರಮಜೊವ್ ಸೋದರರ'ಲ್ಲಿ ಕೃತಿಕಾರನು ವ್ಯಕ್ತಿಜೀವನದಲ್ಲಿ ಅನುಭವಿಸಿದ ಅನಿರ್ವಚನಿಯ ವೇದನೆ, ಕ್ರಾಂತಿಪೂರ್ವ ರಷ್ಯಾ ದೇಶದ ಸಾಮಾಜಿಕ ದುರಂತ ಮತ್ತು

ಕ್ರೈಸ್ತ ಪುರೋಹಿತಶಾಹಿಯ ಅಪ್ರಬುದ್ಧ ತತ್ತ್ವೋಪದೇಶ, ಇವು ಮುಪ್ಪುರಿಗೊಂಡಿವೆ. ಸೂಕ್ಷ್ಮಸಂವೇದನಾಶಾಲಿಯಾದ ದಸ್ತೊಯೆವ್‌ಸ್ಕಿಯು ಜಗತ್ತಿನಲ್ಲಿ ತುಂಬಿರುವ ಮೇರೆವರಿಯದ ದುಃಖ ಅನ್ಯಾಯಗಳನ್ನೂ ಬಾಳಿನಲ್ಲಿ ಒದಗಿಬರುವ ಅನಿರೀಕ್ಷಿತ ಚಿತ್ರ ವಿಚಿತ್ರ ಘಟನೆಗಳನ್ನೂ ಯಥೋಚಿತವಾಗಿ ವರ್ಣಿಸಿ ಓದುಗರ ಮನಮಿಡಿಯುತ್ತಾನೆ. ಡ್ಮಿತ್ರಿಯಂಥವನ ಬದುಕಿನಲ್ಲಿ ಆಕಸ್ಮಿಕಗಳ ಪ್ರಭಾವವಿದ್ದರೆ, ಅದರ ಬಗ್ಗೆ ತೀರ್ಪು ಕೊಡುವುದರಲ್ಲಿ ಮಾನವ ಕೈವಾಡವಿದೆ. ಅಂದರೆ ಲೇಖಕನಿಗೆ 'ಕಾಣದಕೈ'ಯ ಕಾರುಣ್ಯದಲ್ಲಿ ನಂಬಿಕೆ ಇದ್ದಹಾಗೆಯೇ, ಮಾನವನಿರ್ಮಿತ ಸಾಮಾಜಿಕ ದುರಂತದ ಅರಿವೂ ಇದೆ. ಅನ್ಯಾಯಕ್ಕೆ ಒಳಗಾದವರ ಬಗ್ಗೆ ಅನುಕಂಪವೂ ತುಂಬಿದೆ, ಅವನ ಹೃದಯದಲ್ಲಿ. 'ಬಂಡಾಯ' ಎಂಬ ಅಧ್ಯಾಯದಲ್ಲಿ ಇವಾನ್ ಕರಮಜೊವ್ ಮುಖೇನ ಸಾಮಾಜಿಕ ಅನ್ಯಾಯವನ್ನು ಖಂಡಿಸುವುದರಲ್ಲಿ ವಹಿಸುವ ಕಾಳಜಿಯೇ ಇದಕ್ಕೆ ಸಾಕ್ಷಿ. ನಿರಪರಾಧಿಯಾದ ಡ್ಮಿತ್ರಿಯ ಬಗ್ಗೆ ತೀರ್ಪು ಕೊಡುವುದರಲ್ಲಿ ಆದ ನ್ಯಾಯದ ಅಪವಿತರಣೆಯೇ ಕಾದಂಬರಿಯ ಪ್ರಮುಖ ಸಂಗತಿ. ಹೀಗಿದ್ದೂ ಲೇಖಕನ ನಂಬಿಕೆಯಂತೆ ಇದೊಂದು ಅಪರಿಹಾರ್ಯ ದೋಷ. ಡ್ಮಿತ್ರಿಗೆ ಆದ ಅನ್ಯಾಯಕ್ಕಿಂತ ಅದನ್ನು ಅವನು ಸ್ವೀಕರಿಸಿದ ರೀತಿಗೆ, ಅಂದರೆ ವಿನಮ್ರವಾಗಿ ಬಂದದ್ದನ್ನು ಅನುಭವಿಸಲು ಸಿದ್ಧನಾದುದಕ್ಕೆ, ಹೆಚ್ಚು ಗಮನ ಕೊಟ್ಟಿದ್ದಾನೆ. ಇಲ್ಲಿ ಬರುವ ಧರ್ಮೋಪದೇಶದಿಂದಲೂ, ಗ್ರಂಥವನ್ನು ಅಂತ್ಯಗೊಳಿಸುವ ರೀತಿಯಿಂದಲೂ ಇದು ವ್ಯಕ್ತವಾಗುತ್ತದೆ. ಧರ್ಮಾಧಿ ಕರಣದ ತೀರ್ಪಿನಿಂದ ಅವನಿಗೆ ಅನ್ಯಾಯವಾಯಿತು ; ಆದರೇನು ಮಾಡಲಿಕ್ಕಾಗುತ್ತದೆ ? ಎಲ್ಲ ದೈವನಿಯಾಮಕವೆಂದೂ, ತನ್ನ ಯಾವುದೋ ಕಾಣದ ಪಾಪಕ್ಕೆ ಇದು ಪ್ರಾಯಶ್ಚಿತ್ತ ವೆಂದೂ ಭಾವಿಸಿ ಅನುಭವಿಸಬೇಕು – ಎನ್ನುವ ಮನೋಧರ್ಮ ಇಲ್ಲಿ ಕಾಣುತ್ತದೆ. ಸಾಮಾಜಿಕ ವ್ಯವಸ್ಥೆಯ ಬಗ್ಗೆ ಲೇಖಕನಿಗೆ ಅಷ್ಟೆಲ್ಲ ಕಳಕಳಿಯಿದ್ದೂ ಬಂಡಾಯ ಪ್ರಜ್ಞೆಯಿದ್ದೂ ಗ್ರಂಥದ ಪರಿಸಮಾಪ್ತಿಯು ಹೀಗಾದುದು ಸಾಹಿತ್ಯೇತಿಹಾಸದ ಒಂದು ವಿಪರ್ಯಾಸ.

'ಕರಮಜೊವ್' ಕಾದಂಬರಿಯ ಲೇಖಕನನ್ನು ಮತಧರ್ಮ ಪ್ರವಾದಿಯೆಂದೋ ಮಾನವತೆಯ ನಿಗೂಢ ಪಾಪಕ್ಕಾಗಿ ಆತ್ಮ ಬಲಿದಾನವನ್ನು ಪ್ರತಿಪಾದಿಸಿದ ಕ್ರೈಸ್ತ ಶ್ರದ್ಧಾಳು ವೆಂದೋ ಆದರ್ಶೀಕರಿಸುವುದು ಆತನಿಗೆ ಅನ್ಯಾಯ ಮಾಡಿದಂತೆ. ಕಾದಂಬರಿಯ ವಸ್ತು ವಿನ್ಯಾಸಕ್ಕೆ ಅಡಿಪಾಯವಾಗಿ ಆರ್ಭಟವಿಲ್ಲದೆ ಕೆಳಸ್ತರದಲ್ಲಿ ಮಿಡಿಯುವ ನೋವು ಸಂಕಟಗಳ ಪ್ರತಿಮೆಗಳಿವೆ. ಬಗೆಬಗೆಯ ಶೋಷಣೆಗಳ ಅಡಿಯಲ್ಲಿ ಸಿಕ್ಕಿ ನರಳುವ ದೀನ ದಲಿತರ ಕಷ್ಟಕಾರ್ಪಣ್ಯಗಳ, ಕೋಪ, ನಿಟ್ಟುಸಿರಿನ ಪ್ರತಿಬಿಂಬಗಳು 'ಕರಮಜೊವ್ ಸೋದರರು'ಗೆ ಪ್ರಪಂಚದ ಶ್ರೇಷ್ಠ ಕೃತಿಗಳ ಸಾಲಿನಲ್ಲಿ ಸ್ಥಾನ ದೊರಕಿಸಿಕೊಟ್ಟಿದೆ.

ಫಿಯೊದರ್ ದಸ್ತೊಯೆವ್‌ಸ್ಕಿಯ ಕೃತಿಗಳನ್ನು ಪುನರಾವಲೋಕನ ಮಾಡುವ

ಸಂದರ್ಭದಲ್ಲಿ ಲೇಖಕನನ್ನು ಪ್ರತಿಷ್ಠಿತ ವ್ಯಕ್ತಿ, ಶಕ್ತಿಗಳ ಸಂಗಾತಿಯಾಗಿಸಿ ಆತನ ನೈಜ ಪ್ರತಿಭೆಯ ಪ್ರಖರ ಪ್ರಕಾಶನಕ್ಕೆ ಆತಂಕವೊಡ್ಡಿದ ಬಾಹ್ಯಸಂಗತಿಗಳನ್ನು ಪ್ರತ್ಯೇಕಿಸಿ ವಿಮರ್ಶಿಸಬೇಕಾಗುತ್ತದೆ. ಎಲ್ಲ ಬಗೆಯ ಪ್ರತಿಗಾಮೀ ಧೋರಣೆಗಳಿಂದ ಆವೃತವಾಗಿದ್ದರೂ ಯಾರ ಅಂತಃಕರಣವು ಮಾನವವರ್ಗದ ಮೇಲೆ ನಡೆಯುವ ದಬ್ಬಾಳಿಕೆ, ಅಪಮಾನ, ಕ್ರೌರ್ಯಗಳ ವಿರುದ್ಧ ಪ್ರತಿಭಟಿಸುವುದನ್ನು ಮರೆಯಲಿಲ್ಲವೋ, ಯಾರ ಆತ್ಮವು ದೀನದಲಿತರು, ದುಃಖಾರ್ತರಿಗಾಗಿ ಸದಾ ಆತಂಕದಿಂದ ತುಡಿಯುತ್ತಿದ್ದಿತೋ ಅಂತಹ ಮಹಾನ್ ಲೇಖಕನ ಕೃತಿಗಳನ್ನು ಜನಮನವು ಉಪೇಕ್ಷಿಸುವುದು ಎಂದೆಂದೂ ಸಾಧ್ಯವಿಲ್ಲ.

ಟಾಲ್‌ಸ್ಟಾಯ್ : 'ಆನ್ನ ಕರೆನೀನ'

ಎಲ್. ಎಸ್. ಶೇಷಗಿರಿ ರಾವ್

ಹತ್ತೊಂಬತ್ತನೆಯ ಶತಮಾನದ ಯೂರೋಪಿನ ಎಲ್ಲ ದೇಶಗಳ ಕಾದಂಬರಿಗಳಲ್ಲಿ ಮಾನಸಿಕ ವ್ಯಾಪಾರದಲ್ಲಿ ವಿಶೇಷ ಆಸಕ್ತಿ. ಆ ಕಾಲದ ರಷ್ಯಾದ ಮಹಾ ಕಾದಂಬರಿಕಾರರಾದ ಟಾಲ್‌ಸ್ಟಾಯ್ (ರಷ್ಯನ್ ಉಚ್ಚಾರಣೆ ತಾಲ್‌ಸ್ತೋಯ್) ಮತ್ತು ದಾಸ್ತೊಯೆವ್‌ಸ್ಕಿ ಇವರ ಕೃತಿಗಳಲ್ಲೂ ಈ ಆಸಕ್ತಿ ತೀವ್ರವಾಗಿಯೇ ಕಾಣುತ್ತದೆ. ಮನಸ್ಸಿನ ವ್ಯಾಪಾರದ ಚಿತ್ರಣದಲ್ಲಿ ವಿಶಿಷ್ಟ ವಾಸ್ತವಿಕತೆ ಇವರ ಕಾದಂಬರಿಗಳಲ್ಲಿದೆ. ಇದರೊಡನೆ ಎದ್ದುಕಾಣುವುದು ಧಾರ್ಮಿಕ ಶ್ರದ್ಧೆ. ಇಬ್ಬರ ಕಾದಂಬರಿಗಳಲ್ಲಿಯೂ ಕ್ರೈಸ್ತ ಮತದ ವಿಚಾರಧಾರೆಯಲ್ಲಿ ಗಾಢ ವಿಶ್ವಾಸ ಕಾಣುತ್ತದೆ ; ಆದರೆ ಇವರ ಧಾರ್ಮಿಕ ಶ್ರದ್ಧೆ ಯಾವುದೇ ಒಂದು ಮತದ ಉಪದೇಶವನ್ನು ಮೀರಿದ್ದು ; ಬಾಳು ಸಾರ್ಥಕವಾಗುವುದು ಹೇಗೆ, ಮನುಷ್ಯ ಯಾವ ಮೌಲ್ಯಗಳನ್ನು ನೆಚ್ಚಿ ಬದುಕಬೇಕು, ಬಾಳಿನಲ್ಲಿ ನೋವು ಏಕುಂಟು, ಮನುಷ್ಯನ ನೈತಿಕ ಹೊಣೆ ಎಷ್ಟು – ಇಂತಹ ಮೂಲಭೂತ ಕಾಳಜಿಗಳು ಇವರ ಕಾದಂಬರಿಗಳುದ್ದಕ್ಕೂ ಹಬ್ಬಿವೆ.

'ಆನ್ನ ಕರೆನೀನ' ಪ್ರೇಮದ ಗದ್ಯ ಮಹಾಕಾವ್ಯ.

1

ಕಾದಂಬರಿ ಮುಖ್ಯವಾಗಿ ಆನ್ನ ಮತ್ತು ಕೌಂಟ್ ವ್ರಾನ್ಸ್ಕಿಯರ ಪ್ರೇಮದ ಕಥೆ. ಆನ್ನ ಅಲೆಕ್ಸಿ ಅಲೆಕ್ಸಾಂಡ್ರವಿಚ್ ಕರೆನೀನ್ ಎಂಬವನ ಹೆಂಡತಿ. ಕಥೆ ಪ್ರಾರಂಭವಾಗುವ ಹೊತ್ತಿಗೆ ಎಂಟು ವರ್ಷದ ಮಗನ ತಾಯಿ. ಮಗನೆಂದರೆ ಅವಳಿಗೆ ಪ್ರಾಣ. ಅವಳ ಗಂಡ ಪೀಟರ್ಸ್‌ಬರ್ಗಿನಲ್ಲಿ ಒಬ್ಬ ಉನ್ನತ ಅಧಿಕಾರಿ. ಮೂವತ್ತು ದಾಟಿದ ವ್ರಾನ್ಸ್ಕಿ ಸ್ಫುರದ್ರೂಪಿ, ಯಾವಾಗಲೂ ಶಾಂತ, ಸ್ವಲ್ಪ ಅಹಂಭಾವ ಎನ್ನಿಸಬಹುದಾದ ರೀತಿಯವನು, ಆದರೂ ಆಕ್ಷೇಪಿಸಲಾಗದ ಶಿಷ್ಟಾಚಾರ ಬಲ್ಲವನು. ಆನ್ನ ಮತ್ತು ವ್ರಾನ್ಸ್ಕಿ ಪರಸ್ಪರ ಆಕರ್ಷಿತರಾಗುತ್ತಾರೆ. ಆನ್ನಳ ಅಣ್ಣ ಸ್ಕೀವನ ಹೆಂಡತಿ ಡಾಲಿ ; ಅವಳ ತಂಗಿ ಕಿಟ್ಟಿ. ಕಿಟ್ಟಿಯೂ ವ್ರಾನ್ಸ್ಕಿಯಿಂದ ಆಕರ್ಷಿತಳಾದವಳೇ, ಅವನೂ ಅವಳಿಗೆ ಒಲಿದಂತೆ ಕಂಡವನೇ. ಆದರೆ ಆನ್ನಳನ್ನು ಕಂಡಮೇಲೆ ಆ ಪ್ರೇಮದ ಅನುಭವ ಅವನ ಬಾಳನ್ನು ತುಂಬಿಬಿಡುತ್ತದೆ ; ಕಿಟ್ಟಿ ನೊಂದುಕೊಳ್ಳುತ್ತಾಳೆ. ಮೊದಲು ತನ್ನನ್ನು ಪ್ರೀತಿಸಿದ್ದ ಲೆವಿನ್ ಎನ್ನುವವನನ್ನು ಮದುವೆಯಾಗುತ್ತಾಳೆ. ಆನ್ನ ಈ ಹೊಸ ಪ್ರೇಮಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿ

ಕೊಂಡುಬಿಡುತ್ತಾಳೆ. ಅವಳ ಗಂಡ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನು, ಸ್ಫುರದ್ರೂಪಿಯಲ್ಲ, ಹೊಳೆಹೊಳೆವ ನಯನ ಅವನಲ್ಲಿಲ್ಲ, ಸೂಕ್ಷ್ಮಗ್ರಹಿಕೆಯೂ ಅವನಿಗಿಲ್ಲ. ಆದರೆ ಕ್ರಮೇಣ ಆತನಿಗೂ ಅರ್ಥವಾಗುತ್ತದೆ — ಹೆಂಡತಿ ವ್ರಾನ್ಸ್ಕಿಗೆ ಒಲಿದಿದ್ದಾಳೆ ಎಂದು. ಆತನು ಪ್ರಶ್ನಿಸಿದಾಗ ಅವಳು 'ವ್ರಾನ್ಸ್ಕಿಯೇ ನನ್ನ ಸರ್ವಸ್ವ' ಎಂದುಬಿಡುತ್ತಾಳೆ. ಮುಂದೆ, ವ್ರಾನ್ಸ್ಕಿಯ ಮಗು ತನ್ನ ಗರ್ಭದಲ್ಲಿದೆ ಎಂದು ಅವಳಿಗೆ ಅರಿವಾಗುತ್ತದೆ. ತೀರ ಕಾಯಿಲೆ ಬೀಳುತ್ತಾಳೆ. ಉಳಿಯುವುದಿಲ್ಲ ಎನ್ನಿಸಿದಾಗ, ದೂರವಾಗಿದ್ದ ಗಂಡನನ್ನೂ ವ್ರಾನ್ಸ್ಕಿಯನ್ನೂ ಕರೆಸಿಕೊಳ್ಳುತ್ತಾಳೆ. 'ಕ್ಷಮಿಸು' ಎಂದು ಗಂಡನನ್ನು ಬೇಡುತ್ತಾಳೆ. ಅವನು ಸಂಕುಚಿತ ಮನಸ್ಸಿನವನಾದರೂ ಮರುಕವಿದೆ. ಅವಳನ್ನು ಕ್ಷಮಿಸುತ್ತಾನೆ, ವ್ರಾನ್ಸ್ಕಿಯನ್ನೂ ಕ್ಷಮಿಸುತ್ತಾನೆ. ಮುಖ ಮುಚ್ಚಿಕೊಂಡ ವ್ರಾನ್ಸ್ಕಿಗೆ, 'ಅವನ ಮುಖವನ್ನು ನೋಡು, ಅವನೊಬ್ಬ ಸಂತ' ಎನ್ನುತ್ತಾಳೆ. ಸಾಯಲು ಸಿದ್ಧಳಾಗುತ್ತಾಳೆ. ತಾನು ಬಹು ಸಣ್ಣ ಮನುಷ್ಯ ಎಂದು ನಾಚಿಕೆಪಟ್ಟ ವ್ರಾನ್ಸ್ಕಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ.

ಅವಳೂ ಸಾಯುವುದಿಲ್ಲ, ಅವನೂ ಸಾಯುವುದಿಲ್ಲ. ಅವಳಿಗೆ ಆರೋಗ್ಯ ಸುಧಾರಿಸುತ್ತಲೇ ಹಿಂದಿನ ಅನುರಾಗದ ಪ್ರವಾಹ ಆವರಿಸುತ್ತದೆ. ಜನ ಅವರಿಬ್ಬರನ್ನೂ ದೂರ ಮಾಡುತ್ತಾರೆ. ಅವಳಿಂದ ಅವನ ಭವಿಷ್ಯ ಹಾಳಾಯಿತು ಎನ್ನಿಸುತ್ತದೆ. ನೆರೆಹೊರೆಯವರೊಡನೆ ಸಾಮಾಜಿಕ ಬಾಂಧವ್ಯ ಸ್ಥಾಪಿಸಲು ಅವಳು ಮಾಡುವ ಪ್ರಯತ್ನ ಫಲಿಸುವುದಿಲ್ಲ. ಪ್ರೇಮಿಗಳಿಬ್ಬರೇ ಇದ್ದು, ಅಸಹನೆ, ಅನುಮಾನ, ಕಿರಿಕಿರಿ ಹೆಚ್ಚುತ್ತದೆ. ಇತರ ಹೆಂಗಸರು ಅವನ ಬಾಳಿನಲ್ಲಿ ಸುಳಿಯುತ್ತಿದ್ದಾರೆ ಎಂದು ಅನುಮಾನ ಆನ್ನಳಿಗೆ. ಜಗಳವಾಡುತ್ತಾಳೆ. ಅವನಿಗೂ ಯಾತನೆಯನ್ನುಂಟುಮಾಡಿ ತಾನೂ ಸಂಕಟಪಡುತ್ತಾಳೆ. ಕಡೆಗೊಂದು ದಿನ ರೈಲಿನಡಿಗೆ ಹಾರಿಕೊಳ್ಳುತ್ತಾಳೆ. ಅವಳ ಸುಂದರ ಮುಖ ಹಾಗೆಯೇ ಉಳಿಯುತ್ತದೆ. ದೇಹದ ಉಳಿದ ಭಾಗ ವಿಕಾರವಾದ ಮುದ್ದೆ.

ಎರಡು ತಿಂಗಳ ನಂತರ ವ್ರಾನ್ಸ್ಕಿ ಯುದ್ಧಕ್ಕೆ ಹೊರಡುತ್ತಾನೆ.

ಇಲ್ಲಿಗೆ ಆನ್ನ-ವ್ರಾನ್ಸ್ಕಿ ಕಥೆ ಮುಗಿಯುತ್ತದೆ. ಕಾದಂಬರಿಯಲ್ಲಿ ಇನ್ನೂ ಒಂದು ಭಾಗ ಉಂಟು. ಅದನ್ನು ಮುಂದೆ ಪ್ರಸ್ತಾಪಿಸಿದೆ.

2

ಇದರ ಮುಖ್ಯ ಎಳೆ ಆನ್ನ ಮತ್ತು ವ್ರಾನ್ಸ್ಕಿಯವರ ಪ್ರೇಮ.

ಈ ಪ್ರೇಮದ ವಸ್ತುವನ್ನು ಟಾಲ್‌ಸ್ಟಾಯ್ ಬೇರೆ ಬೇರೆ ದೃಷ್ಟಿಗಳಿಂದ

ನಿರೂಪಿಸುತ್ತಾನೆ. ಟಾಲ್‌ಸ್ಟಾಯಿಯ ಕಾದಂಬರಿ ಒಂದು ದಟ್ಟತನದ, ಗಾಢ ಅನುಭವದ ಪರಿಣಾಮವನ್ನು ಮಾಡಲು ಇದು ಒಂದು ಕಾರಣ.

ಟಾಲ್‌ಸ್ಟಾಯಿಯನ್ನು ವಿಮರ್ಶಕರು 'Seer of the flesh' ಎಂದು ವರ್ಣಿಸಿದ್ದಾರೆ. ಅವನು ಸ್ವತಃ ದೇಹದ ಬಯಕೆಗಳ ತೀವ್ರತೆಯನ್ನು, ಅದಮ್ಯತೆಯನ್ನು ಅನುಭವಿಸಿದ್ದವನು. ಎಪ್ಪತ್ತನೆಯ ವರ್ಷ ದಾಟಿದ ನಂತರವೂ ಕಾಮದ ಹಸಿವೆಯನ್ನು ಅನುಭವಿಸಿದ್ದವನು. ಆನ್ನ ಮತ್ತು ವ್ರಾನ್ಸ್ಕಿಯವರ ಆಕರ್ಷಣೆಯ ಒತ್ತಡವನ್ನು ಮಾತ್ರವಲ್ಲ, ಆ ಆಕರ್ಷಣೆಯ ಅಂಕುರಾರ್ಪಣೆಯಿಂದ ನಾವು ಅದನ್ನು ಅನುಭವಿಸುವಂತೆ ಮಾಡುತ್ತಾನೆ. ತನ್ನ ಪಾತ್ರಗಳ ಹೊರ ರೂಪ, ಕಣ್ಣೋಟ ಬೆರಳಾಟ ಕುರುಳ ಕುಣಿದಾಟ ಇವುಗಳನ್ನು ವರ್ಣಿಸುತ್ತಿರುವಾಗಲೇ ಮನಸ್ಸಿನ ಸಣ್ಣ ಅಲುಗಾಟವನ್ನೂ ನಮ್ಮ ಅನುಭವಕ್ಕೆ ತಂದುಕೊಡಬಲ್ಲ ಟಾಲ್‌ಸ್ಟಾಯ್. ಒಂದು ಪಾತ್ರ ನೋಡಿದವರ ಮೇಲೆ ಮೊದಲ ಕ್ಷಣ ಮೂಡಿಸುವ ಪರಿಣಾಮ, ನಾಲ್ಕು ಮಾತಾಡಿದ ಮೇಲೆ ಸ್ವಲ್ಪ ಪರಿಚಯವಾದ ಮೇಲೆ ಮೂಡಿಸುವ ಪರಿಣಾಮ ಎಲ್ಲವನ್ನೂ ಮಾತಿನಲ್ಲಿ ಸಂವಹನ ಮಾಡಬಲ್ಲ. ಮೊದಲ ಬಾರಿ ಆನ್ನಳನ್ನು ನಾವು ಕಾಣುವುದು ಅವಳೂ, ವ್ರಾನ್ಸ್ಕಿಯ ತಾಯಿಯೂ ರೈಲಿನಲ್ಲಿ ಒಟ್ಟಿಗೆ ಸ್ವಲ್ಪ ಕಾಲ ಪ್ರಯಾಣ ಮಾಡಿದ ನಂತರ ರೈಲ್ವೆ ಸ್ಟೇಷನ್ನಿನಲ್ಲಿ ಬಂದಿಳಿದಾಗ. ವ್ರಾನ್ಸ್ಕಿ ತಾಯಿಯನ್ನು ಕರೆದೊಯ್ಯಲು ಬಂದಿದ್ದಾನೆ. ಅವನು ಸುಸಂಸ್ಕೃತ ಎಂಬ ಮಾತನ್ನು ಆಗಲೇ ಇತರರಿಂದ ಕೇಳಿದ್ದೇವೆ. ಅವನು ಆನ್ನಳನ್ನು ಕಾಣುತ್ತಿರುವದು ಇದೇ ಮೊದಲನೆಯ ಬಾರಿ. ಅವಳು ಗಾಡಿಯಿಂದ ಇಳಿಯುವಾಗ ಸ್ಥಳ ಬಿಡಲೆಂದು ನಿಲ್ಲುವ ವ್ರಾನ್ಸ್ಕಿಗೆ ಮೊದಲು ಎನ್ನಿಸುವುದು ಅವಳು ಸಮಾಜದ ಉನ್ನತವಲಯಕ್ಕೆ ಸೇರಿದವಳು ಎಂದು. ಅನಂತರ ಮತ್ತೆ ಅವಳನ್ನು ನೋಡಬೇಕೆನ್ನಿಸುತ್ತದೆ ; (ಇಂಗ್ಲಿಷ್ ಅನುವಾದದ ಮಾತುಗಳನ್ನು ಬಳಸುವುದಾದರೆ) "not that she was very beautiful, not on account of the elegance and modest grace which were apparent in her whole figure, but because in the expression of her charming face, as she passed close by him, there was something peculiarly caressing and soft." ಅವನು ಅವಳತ್ತ ನೋಡಿದಾಗಲೆ ಅವಳ ಕಣ್ಣೂ ಅವನತ್ತ ಹೊರಳುತ್ತದೆ. Her shining grey eyes, that looked dark from the heavy eyelashes, rested wih friendly attention on his face. ಒಂದು ಕ್ಷಣ ಅಷ್ಟೇ, ಮರುಕ್ಷಣ ಅವಳ ಕಣ್ಣು ಬೇರೆಡೆ ಹೊರಳುತ್ತದೆ. In that brief look Vronsky had time to notice the suppressed eagerness which played over her face, and flitted between the brilliant eyes and the faint smile that curved her red lips. It was as though her nature was so brimming over with something that against her will it showed itself now in the flash of her eyes, and now in her smile. Deliberately she shrouded the light in her eyes, but it shone against her will in the faintly perceptible

smile. ಈ ವರ್ಣನೆಯಲ್ಲಿ ಅವಳ ಹೊರ ಸ್ವರೂಪ ಸ್ಪಷ್ಟವಾಗುತ್ತದೆ. ಜೊತೆಗೆ ಒಳಗಿನ ಲವಲವಿಕೆಯ ಚೇತನದ ಅರಿವಾಗುತ್ತದೆ. ಇದು ಅವಳನ್ನು ಒಬ್ಬ ಸುಸಂಸ್ಕೃತನಾದ, ಗಮನವಿಟ್ಟು ನೋಡುವ ಅಭ್ಯಾಸವುಳ್ಳ ಮನುಷ್ಯನ ಮನಸ್ಸಿನ ಮೇಲಾಗುವ ಪರಿಣಾಮ. ಈ ವರ್ಣನೆ ಮುಗಿಯುತ್ತಲೇ ವ್ರಾನ್ಸ್ಕಿಯ ತಾಯಿ ಆನ್ನಾಳನ್ನು ಬೀಳ್ಕೊಳ್ಳುವ ದೃಶ್ಯ. ಅವಳು ಆನ್ನಾಳಿಗೆ ಹೇಳುತ್ತಾಳೆ : I could go all around the world with you and never be dull. You are one of those delightful women in whose company it's sweet to be silent as well as to talk. Now please don't fret over your son ; you can't expect never to be parted" ಈ ಮಾತುಗಳಿಂದ ಆನ್ನಾ, ಅವಳನ್ನು ಸ್ವಲ್ಪ ಕಾಲ ನೋಡಿದವರ ಮೇಲೆ ಯಾವ ಪರಿಣಾಮ ಬೀರುತ್ತಾಳೆ ಎಂಬುದು ಸ್ಪಷ್ಟವಾಗುತ್ತದೆ. (ಅವಳಿಗೆ ಮಗನಲ್ಲಿರುವ ತೀವ್ರ ಪ್ರೀತಿಯೂ ವಿದಿತವಾಗುತ್ತದೆ.) ಅವಳು ನಾದಿನಿಯ ಮನೆಗೆ ಬರುತ್ತಲೇ ಮಕ್ಕಳು ಅವಳನ್ನು ಸುತ್ತಿಕ್ಕೊಳ್ಳುತ್ತಾರೆ, 'ನಾನು ಮೊದಲು ನಾನು ಮೊದಲು' ಎಂದು ಅವಳ ಕೈ ಎಳೆಯುತ್ತಾರೆ. 'ಎಲ್ಲ ಒಟ್ಟಿಗೆ' ಎಂದು ನಗುನಗುತ್ತ ಆನ್ನ ಅವರತ್ತ ಓಡುತ್ತಾಳೆ, ತಬ್ಬಿಕೊಳ್ಳುತ್ತಾಳೆ, ಒಬ್ಬರ ನಂತರ ಒಬ್ಬರನ್ನು ಎತ್ತಿ ಗಿರ್ರನೆ ಸುತ್ತಿಸುತ್ತಾಳೆ, ಮಕ್ಕಳು ಖುಷಿಯಾಗಿ ಕಿರಿಚಿಕೊಳ್ಳುತ್ತಾರೆ. ಅಲ್ಲಿಂದ ಮುಂದೆ ಅವಳ ಮತ್ತು ಅವಳ ನಾದಿನಿಯ ಸಂಭಾಷಣೆ. ರಾತ್ರಿ ಆನ್ನ ನಾದಿನಿಗೆ ಹೆಮ್ಮೆಯಿಂದ ತನ್ನ ಮಗನ ಭಾವಚಿತ್ರ ತೋರಿಸುತ್ತಾಳೆ. ಮಲಗುವಾಗ ಪ್ರತಿ ರಾತ್ರಿ ತನ್ನ ಮಗನನ್ನು ಮಲಗಿಸುತ್ತಿದ್ದ ನೆನಪಾಗಿ ಮಂಕಾಗುತ್ತಾಳೆ. ಆನ್ನ ಕಪ್ಪು ಉಡುಪನ್ನು ಧರಿಸಿದಾಗ, ಹೆಣ್ಣಾದ ಕಿಟ್ಟಿಯೇ, 'ಇವಳು ತುಂಬಾ ಚೆಲುವೆ ಎಂದು ಗೊತ್ತಿತ್ತು, ಆದರೆ ಇಷ್ಟು ಚೆಲುವೆ ಎಂದು ನನಗೇ ಗೊತ್ತಿರಲಿಲ್ಲ' ಎಂದುಕೊಳ್ಳುತ್ತಾಳೆ.

ಹೀಗೆ, ಅನೀತಿಯುತವಾದ ಆಕರ್ಷಣೆ ಆನ್ನಳ ಹೃದಯದಲ್ಲಿ ಬೇರಳೂಡುವ ಮೊದಲು ಟಾಲ್‌ಸ್ಟಾಯ್ ಅವಳ ರೂಪ, ಅವಳ ಲವಲವಿಕೆ, ಅವಳ ನಗು, ಮಕ್ಕಳಲ್ಲಿ ಅವಳ ಪ್ರೀತಿ, ಅವಳನ್ನು ಕಂಡಾಗ ಅವರ ಹಿಗ್ಗು — ಇವೆಲ್ಲವನ್ನು ಚಿತ್ರಿಸಿ ಅವಳನ್ನು ನಮಗೆ ತುಂಬಾ ಇಷ್ಟವಾಗುವಂತಹ ಸ್ತ್ರೀಯಾಗಿ ಕಡೆದು ನಿಲ್ಲಿಸಿದ್ದಾನೆ. ಇದರ ನಂತರ, ಅವಳ ನೀತಿಬಾಹಿರ ಪ್ರಣಯದ ಕಥೆ ಪ್ರಾರಂಭವಾದಾಗ ನಾವು ಅವಳನ್ನು ಒಬ್ಬ ಮನುಷ್ಯಳಾಗಿ, ತುಂಬಾ ಆಕರ್ಷಕಳಾದ ಮತ್ತು ದುಷ್ಟಳಲ್ಲದ ಮತ್ತು ಚೈತನ್ಯದ ಚೆಲುಮೆಯಾದ ಹೆಣ್ಣಾಗಿ ಕಾಣುತ್ತೇವೆ. ನಿಷ್ಠುರ ನ್ಯಾಯತೀರ್ಮಾನ ಹಿಂದೆ ನಿಲ್ಲುತ್ತದೆ ; ಅರ್ಥಮಾಡಿಕೊಳ್ಳುವ ಬಯಕೆ, ಸಹಾನುಭೂತಿ ಮುಂದಾಗುತ್ತದೆ.

ಟಾಲ್‌ಸ್ಟಾಯ್ ಅವಳನ್ನು ಪರಿಪೂರ್ಣಳೆಂದು, ಕೋಮಲತೆ - ಕಾಮನೆಗಳ ಜೀವಂತಮೂರ್ತಿ ಎಂದು ಚಿತ್ರಿಸುತ್ತಾನೆ ಎಂದೇನೂ ಅಲ್ಲ. ವ್ರಾನ್ಸ್ಕಿ ಕಿಟ್ಟಿಯೊಡನೆ ಎಲ್ಲರೂ ಕಾಣುವಂತೆ ಓಡಾಡಿದ್ದಾನೆ ; ಅವಳಿಗೆ ಅವನೆಂದರೆ ಹೃದಯ ಬಾಯಿಗೆ

ಬರುತ್ತದೆ. ನೃತ್ಯಕೂಟದಲ್ಲಿ, ಆನ್ನ ಮತ್ತು ವ್ರಾನ್ಸ್ಕಿ ದೂರ ದೂರ ಇರಲು ಪ್ರಯತ್ನಿಸುತ್ತಾರೆ. ವ್ರಾನ್ಸ್ಕಿ ಕಿಟ್ಟಿಯೊಡನೆ ಕೆಲವು ಬಾರಿ ನೃತ್ಯಮಾಡುತ್ತಾನೆ. ಆದರೆ ಕ್ರಮೇಣ ಕಿಟ್ಟಿಗೆ ಅವರಿಬ್ಬರೂ ತಮ್ಮಲ್ಲಿ ನುಗ್ಗಿ ಎದ್ದು ಬರುತ್ತಿರುವ ಆಕರ್ಷಣೆಗೆ ಕಡಿವಾಣ ಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಅರಿವಾಗುತ್ತದೆ, ಎದೆ ಬಿರಿಯುತ್ತದೆ. ಮುಖ್ಯ ನೃತ್ಯಕ್ಕೆ ತನ್ನನ್ನು ಜೊತೆಗಾರ್ತಿಯಾಗಿ ವ್ರಾನ್ಸ್ಕಿ ಕರೆಯುವನೆಂದು ಹಂಬಲಿಸಿ ಕಿಟ್ಟಿ ಉಳಿದ ತರುಣರ ಆಹ್ವಾನವನ್ನು ಒಲ್ಲೆನೆಂದಿದ್ದಾಳೆ. ವ್ರಾನ್ಸ್ಕಿ ಆ ನೃತ್ಯಕ್ಕೆ ಆನ್ನಳನ್ನು ಆಹ್ವಾನಿಸುತ್ತಾನೆ. ಕಿಟ್ಟಿಗೆ ತಡೆಯಲಾಗದ ಯಾತನೆ. ಅವಳು ಬೇರೊಬ್ಬನೊಡನೆ ನೃತ್ಯಮಾಡುತ್ತಾಳೆ. ನೃತ್ಯ ಸಾಗುತ್ತಿರುವಾಗಲೂ ಅವಳ ಕಣ್ಣೆಲ್ಲ ಅವರಿಬ್ಬರ ಮೇಲೆ ; ಆನ್ನಳ ಲಾವಣ್ಯವನ್ನು ಅವಳ ಚಲನೆಯ ಸೊಗಸನ್ನು ಮೆಚ್ಚಿಕೊಳ್ಳುತ್ತಲೇ ಯಾತನೆಯನ್ನು ಅನುಭವಿಸುತ್ತಾಳೆ. ನೃತ್ಯ ನಡೆಯುತ್ತಿರುವಾಗಲೇ ಆನ್ನ, ಕಣ್ಣಾಲಿಗಳು ಮುಚ್ಚಿಕೊಳ್ಳುತ್ತಿರುವಂತೆಯೇ ಕಿಟ್ಟಿಯತ್ತ ನೋಡಿ, ಅವಳ ಕೈ ಅದುಮುತ್ತ ಮುಗುಳ್ನಗೆ ಬೀರುತ್ತಾಳೆ. ಆನ್ನಳ ಯುಕ್ತಿ, ಅವಳಲ್ಲಿ ಸುಪ್ತವಾಗಿರುವ ಕ್ರೌರ್ಯ ಎರಡೂ ಈ ಒಂದು ಸಣ್ಣ ಪ್ರಸಂಗದಲ್ಲಿ ಕಾಣಿಸಿಕೊಳ್ಳುತ್ತದೆ.

ಇಲ್ಲಿಂದ ಮುಂದೆ ಟಾಲ್‌ಸ್ಟಾಯ್ ಈ ಪ್ರಣಯದ ಕಥೆಯನ್ನು ಬಹು ಸೂಕ್ಷ್ಮವಾಗಿ ನಿರೂಪಿಸುತ್ತ ಹೋಗುತ್ತಾನೆ. ಅವರ ಪರಸ್ಪರ ಆಕರ್ಷಣೆಯನ್ನು, ಅದರ ವಿರುದ್ಧ ಅವರ ಹೋರಾಟದ ಪ್ರಯತ್ನವನ್ನು ತೋರಿಸುತ್ತಾನೆ. ಅವರ ಭಾವನೆಗಳ ಸಂಕೀರ್ಣತೆಯನ್ನು ನಮಗೆ ಅರಿವು ಮಾಡಿಕೊಡುತ್ತಾನೆ. ಅವಳು ಊರಿಗೆ ಹೊರಟಾಗ ಅವನು ಮತ್ತೆ ರೈಲ್ವೆ ನಿಲ್ದಾಣಕ್ಕೆ ಬರುತ್ತಾನೆ. ಅವಳು ಅವನ ಒಲವಿನ ಮಾತುಗಳಿಗೆ ತಡೆಹಾಕಲು ಪ್ರಯತ್ನಿಸುತ್ತಾಳೆ. ರೈಲು ಹೊರಟ ನಂತರವೂ ಮನಸ್ಸಿನಲ್ಲಿ ತುಮುಲ ; ಆತಂಕದಿಂದ ತನ್ನ ಒಳಗೇ ಏನೋ ಕಿತ್ತುಹೋಗುವುದೆಂಬ ಭಾವನೆ. ಆದರೆ — She did not sleep all night. But in that nervous tension, and in the visions that filled her imagination, there was nothing disageeable or gloomy; on the contrary there was something blissful, glowing, and exhilarating. ಮರು ಬೆಳಗ್ಗೆ ರೈಲ್ವೆ ಸ್ಟೇಷನ್ನಿನಲ್ಲಿ ಗಂಡನನ್ನು ನೋಡಿದಾಗ ಅವಳಿಗೆ ಎನ್ನಿಸುವುದು, "ಅಯ್ಯೋ ಭಗವಂತ, ಇವನ ಕಿವಿಗಳೇಕೆ ಹೀಗೆ ಕಾಣುತ್ತವೆ ?" ಅವನ ಹ್ಯಾಟನ್ನು ಎತ್ತಿಹಿಡಿದಿರುವಂತೆ ಕಾಣುವ ಕಿವಿಗಳು, ವ್ಯಂಗ್ಯದ ಮಂದಹಾಸದಲ್ಲಿ ಅರೆತೆರೆದ ತುಟಿಗಳು, ಅವಳತ್ತಲೇ ನೋಡುತ್ತಿರುವ ದೊಡ್ಡ, ಆಯಾಸಗೊಂಡ ಕಣ್ಣುಗಳು, ಎಲ್ಲ ಈಗ ಎದ್ದು ಕಾಣುತ್ತವೆ ಅವಳಿಗೆ.

ಆನ್ನ, ಅವಳ ಗಂಡ, ವ್ರಾನ್ಸ್ಕಿ — ಮೂವರ ಬಾಳಿನಲ್ಲೂ ಈ ಪ್ರಣಯ ಪ್ರಸಂಗ ಎಬ್ಬಿಸಿದ ಬಿರುಗಾಳಿಯನ್ನು ಅವರ ಮನಸ್ಸಿನ ಅಲ್ಲೋಲಕಲ್ಲೋಲಗಳ ಮೂಲಕ ಚಿತ್ರಿಸುತ್ತ ಹೋಗುತ್ತಾನೆ. ಹೆಜ್ಜೆಹೆಜ್ಜೆಯಾಗಿ ಅವರ ಒಳತೋಟಿಯನ್ನು ಬಿಡಿಸುತ್ತ ಹೋಗುತ್ತಾನೆ. ಈ ಅನುಭವವನ್ನು ರಂಜಕ ಮಾಡುವ ಅಥವಾ ವೈಭವೀಕರಿಸುವ ಇಲ್ಲವೇ ನಾಟಕೀಯ

ಮಾಡುವ ಆಮಿಷದಿಂದ ದೂರವೇ ಉಳಿಯುತ್ತಾನೆ. ಅವಳ ಗಂಡ ಆಕರ್ಷಕ ವ್ಯಕ್ತಿಯಲ್ಲ, ಸೂಕ್ಷ್ಮಬುದ್ಧಿಯವನಲ್ಲ. ಟಾಲ್‌ಸ್ಟಾಯ್ ಅವನನ್ನು ಹಾಸ್ಯದ ವಸ್ತುವನ್ನಾಗಿ ಮಾಡುವುದಿಲ್ಲ ; ಸ್ವಲ್ಪ ಜಡಸ್ವಭಾವದವನು, ಆನ್ನಳ ಲವಲವಿಕೆ, ಹೊಳಪುಗಳಿಗೆ ತಕ್ಕವನಲ್ಲ. ಆದ್ದರಿಂದ ಅವನ ಪಾಲಿಗೆ ಬಂದದ್ದು ಅವನ ಯೋಗ್ಯತೆಗೆ ತಕ್ಕದ್ದೆ ಎಂಬ ಭಾವನೆಯಿಲ್ಲ; ಅವನ ಚಿತ್ರಣದಲ್ಲಿ ಭಾವಾತಿರೇಕವೂ ಇಲ್ಲ. ತನ್ನ ಅಧಿಕಾರದ ಜಗತ್ತಿನಲ್ಲಿ ಬಾಳನ್ನು ನೇರವಾಗಿ ಎದುರಿಸದ ಅವನಿಗೆ ಇದು ಒಂದು ಹೊಸ ಅನುಭವ. ಹೆಂಡತಿ ಗೊಂದು ಪ್ರತ್ಯೇಕ ಬಾಳಿರಬಹುದೆಂಬುದು ಅವನ ಊಹೆಗೂ ನಿಲುಕದ ವಿಷಯ. ಆದರೆ ಅವನ ವರ್ತನೆ ಕ್ರೂರವೂ ಅಲ್ಲ, ಧೀರೋದಾತ್ತವೂ ಅಲ್ಲ, ತ್ಯಾಗಶೀಲವೂ ಅಲ್ಲ. ತನ್ನ ನ್ಯಾಯಪ್ರಜ್ಞೆಗನುಗುಣವಾಗಿ ವಿವೇಚನೆಯಿಂದಲೇ ನಡೆದುಕೊಳ್ಳುತ್ತಾನೆ. ಅವಳಿಗೆ ವಿವಾಹ ವಿಚ್ಛೇದನ ಕೊಡಲು ಒಪ್ಪುವುದಿಲ್ಲ. 'ನಮ್ಮನ್ನು ಒಟ್ಟುಗೂಡಿಸಿದ್ದು ಮನುಷ್ಯನಲ್ಲ, ಭಗವಂತ' ಎಂದು ಅವಳಿಗೆ ಹೇಳುತ್ತಾನೆ. ಗಂಡನಾಗಿ ಅವಳಿಗೆ ಬುದ್ಧಿ ಹೇಳುವುದು ತನ್ನ ಕರ್ತವ್ಯ ಎನ್ನುತ್ತಾನೆ.

ಪ್ರಣಯದ ಕಥೆಯನ್ನು ಟಾಲ್‌ಸ್ಟಾಯ್ ಉದ್ದಕ್ಕೂ ಹೀಗೆ ವಾಸ್ತವಿಕತೆಯಿಂದ ನಿರೂಪಿಸುತ್ತಾನೆ. ಈ ವಾಸ್ತವಿಕತೆಗೆ ಎರಡು ಮುಖಗಳುಂಟು. ಒಂದು, ಇದರಲ್ಲಿ ಬಾಹ್ಯವಿವರಗಳಿಗೆ ಇರುವ ಪ್ರಾಧಾನ್ಯಕ್ಕಿಂತ ಒಳಜಗತ್ತಿನ ಚಿತ್ರಣಕ್ಕೆ ಪ್ರಾಧಾನ್ಯ ಎನ್ನುವುದು. ಈ ಅನುಭವ, ಇದರಲ್ಲಿ ಒಳಗಾದ ಮೂವರ ವ್ಯಕ್ತಿತ್ವಗಳಿಗೆ ಮಾಡಿದ ಅಪಘಾತ, ಅದು ಅವರ ಮನಸ್ಸುಗಳಲ್ಲಿ ನಿಧಾನವಾಗಿ ಹಬ್ಬಿ ಬೆಳೆದ ರೀತಿ, ಇವನ್ನು ಮನಗಾಣಿಸುವುದು ಕಾದಂಬರಿಯ ಉದ್ದೇಶ. ಕಾದಂಬರಿಯ ಒಂದು ಮಹತ್ವದ ಸಾಧನೆ ಎಂದರೆ, ಆನ್ನ – ವ್ರಾನ್ಸ್ಕಿಯರು ಮುಚ್ಚಾಟದ ಪ್ರಯತ್ನ ಮಾಡದೆ ಒಟ್ಟಿಗೆ ಕಾಲ ಕಳೆಯುವುದು, ಮೂವರ ಮನಸ್ಸಿನ ಹೊಯ್ದಾಟಗಳು ಮತ್ತು ಚಲನೆಗಳು, ಅಲುಗಾಟಗಳು, ಅವರಲ್ಲಿಯೇ ಕ್ರಮೇಣ ಆಗುವ ಪರಿವರ್ತನೆಗಳು, ಎಲ್ಲವನ್ನೂ ಕಾದಂಬರಿ ನಿರೂಪಿಸುತ್ತದೆ. ಉದಾಹರಣೆಗೆ, "(ಆನ್ನಳ ಗಂಡ) ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಆ ವರ್ಷ ತನ್ನ ಪಾಲಿಗೆ ತನ್ನ ನೌಕರಿಯಲ್ಲಿ ಬಂದಷ್ಟು ಕೆಲಸ ಹಿಂದೆ ಯಾವ ವರ್ಷದಲ್ಲೂ ಬಂದಿರಲಿಲ್ಲ ಎಂದು ಹೇಳುತ್ತಿದ್ದ, ಅದನ್ನು ನಂಬಿಯೂ ಇದ್ದ. ಆದರೆ ಆ ವರ್ಷ ತಾನೇ ಕೆಲಸವನ್ನು ಅರಸಿದ್ದ. ತನ್ನ ಹೆಂಡತಿ ಮತ್ತು ಮಗನನ್ನು ಕುರಿತ ಭಾವನೆಗಳು ಮತ್ತು ಯೋಚನೆಗಳಲ್ಲಿ ಅಡಗಿದ್ದ ಗುಟ್ಟಿನ ಸ್ಥಳವನ್ನು ಮುಚ್ಚಿಟ್ಟಿರಲು ಅವನು ಬಳಸಿದ ಉಪಾಯಗಳಲ್ಲಿ ಇದೂ ಒಂದು ಎಂದು ಅವನಿಗೇ ತಿಳಿದಿರಲಿಲ್ಲ."

ಎರಡನೆಯ ಮುಖ, ಆನ್ನ -ವ್ರಾನ್ಸ್ಕಿಯರಲ್ಲಿ ಟಾಲ್‌ಸ್ಟಾಯಿಗೆ ಅನುಕಂಪ ಇದ್ದರೂ ಇದು ಯಾವುದೇ ಆದರ್ಶೀಕರಣ ಅಥವಾ ವೈಭವೀಕರಣಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವುದು. ಇದಕ್ಕೆ ಎದ್ದು ಕಾಣುವ ನಿದರ್ಶನ ಆನ್ನಳ ತೀವ್ರ ಕಾಯಿಲೆಯ

ಪ್ರಸಂಗ. ಸಾವು ತೀರ ಹತ್ತಿರ ಬಂದಿದೆ ಎನ್ನಿಸುತ್ತದೆ ಅವಳಿಗೆ. ತನ್ನ ಪಾಪದ ನೆನಪು ಅವಳಿಗೆ ಸಹಿಸಲಾಗದಂತಿದೆ. ಗಂಡ ಬರಬೇಕು, ಬಂದರೆ ತನ್ನನ್ನು ಕ್ಷಮಿಸಿಯೇ ಕ್ಷಮಿಸುತ್ತಾನೆ ಎಂದು ಅವಳ ನಂಬಿಕೆ. ಈ ಗಳಿಗೆಯಲ್ಲಿ ಟಾಲ್‌ಸ್ಟಾಯ್ ತನ್ನ ನಾಯಕಿಯನ್ನು ಧೀರ ಮಹಿಳೆಯಾಗಿ ಚಿತ್ರಿಸುವ ಪ್ರಯತ್ನ ಮಾಡುವುದಿಲ್ಲ. ಅವಳೆನ್ನುತ್ತಾಳೆ : "ನನಗೆ ಅವನ ಭಯವಿಲ್ಲ, ಆದರೆ ಸಾವಿನ ಭಯ." ಹತ್ತಿರ ಬಂದು ನಿಂತಾಗ ಎನ್ನುತ್ತಾಳೆ, "ನಾನು ಮೊದಲಿನ ಹೆಣ್ಣೆ... ಆದರೆ ನನ್ನೊಳಗೆ ಇನ್ನೊಬ್ಬಳಿದ್ದಾಳೆ. ಅವಳನ್ನು ಕಂಡರೆ ನನಗೆ ಹೆದರಿಕೆ. ಆ ಮನುಷ್ಯನನ್ನು ಪ್ರೀತಿಸಿದವಳು ಅವಳು. ನಾನು ನಿನ್ನನ್ನು ದ್ವೇಷಿಸಲು ಪ್ರಯತ್ನಿಸಿದೆ, ಹಿಂದೆ ಇದ್ದವಳನ್ನು ಮರೆಯಲಾಗಲಿಲ್ಲ. ಆ ಹೆಂಗಸು ನಾನಲ್ಲ... ನನಗೀಗ ಬೇಕಾದದ್ದು ಒಂದೇ — ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು." ಗಂಡ ಅವಳನ್ನು ಕ್ಷಮಿಸುತ್ತಾನೆ. ಮುಖ ಮುಚ್ಚಿಕೊಂಡು ನಿಂತ ವ್ರಾನ್ಸ್ಕಿಗೆ ಅವಳು, "ಕೈಗಳನ್ನು ತೆಗಿ. ಅವನನ್ನು ನೋಡು. ಅವನೊಬ್ಬ ಸಂತ" ಎನ್ನುತ್ತಾಳೆ.

ಇದೊಂದು ಭಾವೋದ್ವೇಗದ ದೃಶ್ಯ. ಒಂದು 'ಕ್ಲೈಮ್ಯಾಕ್ಸ್'. ಇಲ್ಲಿಗೆ ಪ್ರಣಯ ಕಥೆ ಮುಕ್ತಾಯವಾಗಬಹುದಾಗಿತ್ತು.

ಆಗುವುದಿಲ್ಲ. ವ್ರಾನ್ಸ್ಕಿ ಪಶ್ಚಾತ್ತಾಪದಿಂದ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಾನೆ. ಅವನೂ ಸಾಯುವುದಿಲ್ಲ, ಆನ್ನಳೂ ಸಾಯುವುದಿಲ್ಲ. ಆರೋಗ್ಯ ಮೊದಲಿನಂತೆ ಆದ ಮೇಲೆ ಮನಸ್ಸೂ ಮೊದಲಿನಂತೆಯೇ. ಮೃತ್ಯುವಿನ ಹೊಸ್ತಿಲಿನಲ್ಲಿದ್ದಾಗ ಗಂಡನಿಗೆ ಹೇಳಿದ ಮಾತುಗಳೆಲ್ಲ ಮರೆತುಹೋಗುತ್ತವೆ. ಮತ್ತೆ ಆನ್ನ-ವ್ರಾನ್ಸ್ಕಿ ಪ್ರಣಯಿಗಳು.

ಈ ಪ್ರಣಯದ ಪ್ರಸಂಗವನ್ನು ಸಮಾಜ ಕಾಣುವ ರೀತಿಯನ್ನು ಟಾಲ್‌ಸ್ಟಾಯ್ ಟೀಕಿಸುತ್ತಾನೆ. ಅದು ಗುಟ್ಟಾಗಿ ಸಾಗಿದ್ದರೆ ಸಮಾಜ ಕಣ್ಣು ಮುಚ್ಚಿಕೊಂಡಿರುತ್ತಿತ್ತು. ವ್ರಾನ್ಸ್ಕಿಯಲ್ಲಿ ಆನ್ನಳಿಗೆ ಬರಿಯ ಕಾಮವಲ್ಲ, ಗಾಢವಾದ ಪ್ರೇಮ. ಆದ್ದರಿಂದ ಅವನನ್ನು ಕದ್ದುಕೂಡುವುದು ಅವಳಿಗೆ ಒಗ್ಗದು. ಆ ಪ್ರೇಮಕ್ಕಾಗಿ ಅವಳು ತನ್ನ ಗೌರವ, ಸ್ಥಾನ ಎಲ್ಲವನ್ನೂ ಬಲಿಕೊಡಲು ಸಿದ್ಧ. ಅವಳ ಪ್ರಣಯದ ಕತೆ ಬಹಿರಂಗವಾದಂತೆ ಜನ ಅವಳನ್ನು ದೂರ ಇಡುತ್ತಾರೆ. ಅವಳ ಮಗನನ್ನು ಅವಳಿಂದ ದೂರಮಾಡುತ್ತಾರೆ. ಅವಳು ಬರೆದ ಕಾಗದಗಳಿಗೆ ಉತ್ತರ ಕೊಡುವುದಿಲ್ಲ. ಎಲ್ಲವೂ, ಅವಳು ತನ್ನ ಪ್ರೇಮವನ್ನು ಕಳ್ಳತನದಲ್ಲಿ ಸಾಗಿಸಬೇಕಾದ ವ್ಯವಹಾರ ಎಂದು ಒಪ್ಪಲಿಲ್ಲ ಎಂಬ ಕಾರಣಕ್ಕಾಗಿ.

3

ಸಮಾಜ ಈ ಪ್ರೇಮಿಗಳನ್ನು ನಡೆಸಿಕೊಂಡ ರೀತಿಯನ್ನು ಟಾಲ್‌ಸ್ಟಾಯ್ ಆಕ್ಷೇಪಿಸುತ್ತಾನೆ ಎಂದರೆ, ಅವನು ಅದನ್ನು ಒಪ್ಪುತ್ತಾನೆ ಎಂದಲ್ಲ.

ಅನುಕಂಪ, ಮನಸ್ಸಿನ ಒಳನೋಟ ಇವುಗಳೊಡನೆಯೇ ಈ ಕಾದಂಬರಿಯಲ್ಲಿ ಗಾಢವಾದ ನೈತಿಕ ಶ್ರದ್ಧೆ, ಕಾಳಜಿ ಕಾಣುತ್ತದೆ.

ಕಾದಂಬರಿಯ ಪ್ರಾರಂಭದಲ್ಲಿ ಬೈಬಲಿನಿಂದ ಒಂದು ಮಾತನ್ನು ಉದ್ಧರಿಸಿದೆ : 'Vengeance is mine, I will repay.' ಇದು ಭಗವಂತನ ಮಾತು. ಪಾಪಕ್ಕೆ ಶಿಕ್ಷೆ ವಿಧಿಸುವ ಅಧಿಕಾರ ಇರುವುದು ಭಗವಂತನಿಗೆ ಮಾತ್ರ, ಮನುಷ್ಯರಿಗಲ್ಲ. ಆದುದರಿಂದಲೇ ಟಾಲ್‌ಸ್ಟಾಯ್, ಇತರರು ಪ್ರೇಮಿಗಳನ್ನು ನಡೆಸಿಕೊಳ್ಳುವ ರೀತಿಯನ್ನು ಆಕ್ಷೇಪಿಸುವುದು.

ಭಗವಂತನ ರೀತಿ ಕಾದಂಬರಿಯಲ್ಲಿ ಸ್ಪಷ್ಟವಾಗುತ್ತದೆ.

ಆನ್ನಾ, ವ್ರಾನ್ಸ್ಕಿಯರ ವಿಷಯದಲ್ಲಿ ನೈಜವಾದ ಅನುಕಂಪವಿದ್ದರೂ, ಅವರ ಪ್ರಣಯ ಪ್ರಸಂಗದ ವಿಷಯದಲ್ಲಿ ಟಾಲ್‌ಸ್ಟಾಯ್ ಸ್ಪಷ್ಟವಾದ ನೈತಿಕ ತೀರ್ಪನ್ನು ಸೂಚಿಸುತ್ತಾನೆ. ಈ ತೀರ್ಪಿಗೆ, ಸಂಕುಚಿತ ಮನೋಭಾವದ ಸರಿ – ತಪ್ಪು ಮೌಲ್ಯಗಳು ಆಧಾರವಲ್ಲ, ಗಾಢವಾದ ನೈತಿಕ ಕಾಳಜಿ ಆಧಾರ.

ಪ್ರಣಯಿಗಳಿಬ್ಬರೂ ಕುಟುಂಬಜೀವನದ ಪಾವಿತ್ರ್ಯವನ್ನು ಕಲುಷಿತಗೊಳಿಸಿದ್ದಾರೆ. ತಮ್ಮ ಸಂತೋಷದ ಅನ್ವೇಷಣೆಯಲ್ಲಿ ಆನ್ನಾಳ ಗಂಡ, ಮಗ, ಕಿಟ್ಟಿ ಎಲ್ಲರಿಗೆ ಆಗುವ ನೋವು, ಅವರ ಬಾಳುಗಳ ಕ್ಷೋಭೆ ಇವನ್ನು ಮರೆತಿದ್ದಾರೆ. ಆನ್ನಾ ಮತ್ತು ಅವಳ ಗಂಡನ ಜೀವನಕ್ಕೆ ಸಮಾನಾಂತರವಾಗಿ ಕಾದಂಬರಿ ಕಿಟ್ಟಿ ಮತ್ತು ಲೆವಿನರ ಜೀವನವನ್ನು ಚಿತ್ರಿಸುತ್ತದೆ. ಕಿಟ್ಟಿ ಮತ್ತು ಲೆವಿನರೇನೂ ದೇವತೆಗಳಲ್ಲ. ಅವರ ದಾಂಪತ್ಯದಲ್ಲೂ ಕಿರಿಕಿರಿ ಇದೆ. ಅಸಮಾಧಾನ ಇದೆ, ಕಲಹ ಇದೆ. ಆದರೆ ಕ್ಷಮೆ, ಒಬ್ಬರು ಇನ್ನೊಬ್ಬರನ್ನು ಸುಖವಾಗಿಡ ಬೇಕೆಂಬ ನೈಜ ಬಯಕೆ ಇವುಗಳಿಂದ ಅವರ ಅನುರಾಗ, ದಾಂಪತ್ಯ ಸುಂದರ. ಗಂಡ ನಾಗಲಿ ಹೆಂಡತಿಯಾಗಲಿ ತನ್ನ ಸುಖದ ಅಪೇಕ್ಷೆಯನ್ನೇ ಮುಖ್ಯವನ್ನಾಗಿ ಮಾಡಿಕೊಂಡು, ತನ್ನ ಸುಖಕ್ಕೆ ಇತರರು ಯಾವುದೇ ಬೆಲೆ ತೆತ್ತರೂ ಸರಿಯೆ ಎಂಬ ಧೋರಣೆಯನ್ನು ತಳೆದಾಗ ಪಾಪದ ಹಾದಿ ತುಳಿಯುತ್ತಾರೆ. ಆನ್ನಳ ಗಂಡ ಸುಂದರನಲ್ಲ, ಬುದ್ಧಿವಂತನಲ್ಲ, ಸೂಕ್ಷ್ಮಸ್ವಭಾವದವನಲ್ಲ, ವ್ರಾನ್ಸ್ಕಿ ಸುಂದರ, ಸುಸಂಸ್ಕೃತ, ಮೃದುಸ್ವಭಾವದವನು, ಬುದ್ಧಿವಂತ. ಆನ್ನಾ ಸುಂದರಿ, ಸುಸಂಸ್ಕೃತಳು, ಸೂಕ್ಷ್ಮ ಮನಸ್ಸಿನವಳು, ಪಾದರಸದಂತಹ ಹೆಣ್ಣು. ಅವಳ ಗಂಡನಿಗೆ ಅವನ ಕೆಲಸವೇ ಸರ್ವಸ್ವ. ಅದರಲ್ಲೇ ತೇಲಿಮುಳುಗುವ ಅವನಿಗೆ, ಪ್ರೀತಿಸುವ ಶಕ್ತಿಯೂ ಹೋಗಿಬಿಡುತ್ತದೆ. ಯಾರೇ ಆಗಲಿ ಮನುಷ್ಯಮಾತ್ರರು ಪ್ರೀತಿಯನ್ನು ಬಯಸುವುದು ಎಷ್ಟು ಸಹಜ ಎಂದು ಟಾಲ್‌ಸ್ಟಾಯ್ ಗುರುತಿಸಿದ್ದ. ವ್ರಾನ್ಸ್ಕಿ – ಆನ್ನಾರ ಪರಸ್ಪರ ಆಕರ್ಷಣೆ ತೀರ ಸಹಜ. ಆದರೆ ಸಹಜವಾದದ್ದೆಲ್ಲ ನೈತಿಕವಲ್ಲ.

ಅವರ ಶಿಕ್ಷೆ ಬೇಗನೆ ಪ್ರಾರಂಭವಾಗುತ್ತದೆ. ಆನ್ನಾಳ ಜೀವನದುದ್ದಕ್ಕೂ ಮುಂದುವರಿಯುತ್ತದೆ, ಅವಳ ಸಾವಿನಲ್ಲಿ ಅಂತ್ಯವಾಗುತ್ತದೆ.

ಒಬ್ಬರಲ್ಲಿನ್ನೊಬ್ಬರು ಅನುರಕ್ತರಾದಾಗ ಅವರಿಗೆ ಬೇರೆ ಯಾರ ಸಹವಾಸವೂ ಬೇಕಿರಲಿಲ್ಲ. ತಾವಿಬ್ಬರೂ ಒಟ್ಟಿಗಿರಬೇಕೆಂದು ಹಂಬಲಿಸುತ್ತಿದ್ದರು. ಈಗ ಬೇಕೆಂದರೂ ಅವರಿಗೆ ಇತರರ ಸಹವಾಸ ದೊರಕದು. ಎಲ್ಲರೂ ಅವರಿಂದ ದೂರವಾಗುತ್ತಾರೆ. ಅವಳ ಬಳಿ ಸುಳಿಯರು. ವ್ರಾನ್ಸ್ಕಿಯನ್ನೂ ಜನ ದೂರಮಾಡುತ್ತಾರೆ. ಹಿಂದಿನ ಕಾಲದವರು ಮಾತ್ರ ಹೀಗೆ ಎಂದು ಅವನು ಭಾವಿಸುತ್ತಾನೆ. ಈ ಭ್ರಾಂತಿ ಮಾಯವಾಗಲು ಬಹಳ ಕಾಲವೇನೂ ಬೇಕಾಗುವುದಿಲ್ಲ. ಅವನ ನೆಂಟಳು ಬೆಟ್ಸಿ, ಅವನ ತಾಯಿ, ಅವನ ಅತ್ತಿಗೆ ವಾರ್ಯ ಎಲ್ಲ ಅವರ ಬಳಿ ಸುಳಿಯರು. ವಾರ್ಯ ಇತರರಂತಲ್ಲ ಎಂದು ಆಸೆ ಇಟ್ಟುಕೊಂಡು, ಅವಳು ಆನ್ನಾಳನ್ನು ಭೇಟಿಮಾಡಬೇಕೆಂದು ಅವನು ಸೂಚಿಸಿದರೆ, ಅವಳು ನಯವಾಗಿ ಮಾತನಾಡಿ, 'ನನಗೆ ಹೆಣ್ಣು ಮಕ್ಕಳಿದ್ದಾರೆ, ನನ್ನ ಗಂಡನ ವಿಷಯ ಯೋಚಿಸಬೇಕು' ಎಂದು ನುಣುಚಿಕೊಳ್ಳುತ್ತಾಳೆ. ಅವನು ಎಲ್ಲಿ ಹೋದರೂ ಆನ್ನಾಳ ಗಂಡನ ಪ್ರಸ್ತಾಪ ಬರುತ್ತದೆ ಎಂದು ಅವನಿಗೆ ಎನ್ನಿಸುತ್ತದೆ. ಅವಳಿಗೆ ಮಗನನ್ನು ನೋಡಬೇಕೆಂಬ ಹಂಬಲ, ಅದು ಸಫಲವಾಗದು. ಈ ನೋವನ್ನು ವ್ರಾನ್ಸ್ಕಿಗೆ ಹೇಳಿ ಫಲವಿಲ್ಲ ಎಂದು ತಾನೇ ಒಳಗೊಳಗೇ ಕೊರಗುತ್ತಾಳೆ. ವ್ರಾನ್ಸ್ಕಿ ಕೆಲಸಕ್ಕೆ ರಾಜಿನಾಮೆ ಕೊಡಬೇಕಾಗುತ್ತದೆ. ಹಳ್ಳಿಗೆ ಹೋಗಿ ಅವರು ನೆಲಸುತ್ತಾರೆ. ಅಲ್ಲಿಯೂ ಅದೇ ಏಕಾಕಿತನ. ವ್ರಾನ್ಸ್ಕಿ ಬಹು ಸಹನೆಯಿಂದ ನಡೆದುಕೊಳ್ಳುತ್ತಾನೆ. ಆದರೆ ಅವನು ಆಗೀಗಲಾದರೂ ಇತರರನ್ನು ಕಾಣಬಹುದು, ಅವರ ಜೊತೆ ಕಾಲ ಕಳೆಯಬಹುದು. ಅವಳಿಗೆ ಆ ತುಣುಕು ಸಮಾಧಾನವೂ ಇಲ್ಲ. ತನ್ನಿಂದ ಅವನ ಉದ್ಯೋಗದಲ್ಲಿನ ಪ್ರಗತಿ ಎಲ್ಲ ಹಾಳಾಯಿತು ಎಂಬ ಚಿಂತೆ ಬೇರೆ. ನಿದ್ರೆ ಬಾರದು. ಅಫೀಮು ಸೇವಿಸುತ್ತಾಳೆ. ಅವಳು ಎಲ್ಲಿಗೂ ಹೋಗುವಂತಿಲ್ಲ, ಅವನು ತಡವಾಗಿ ಬಂದರೆ, ಬೇರೆ ಹೆಣ್ಣು ಅವನ ಬಾಳಿನಲ್ಲಿ ಸುಳಿದಿದ್ದಾಳೆಂಬ ಆತಂಕ, ಭಯ. ಇಬ್ಬರ ಬಾಳಿನಲ್ಲೂ ಕಿರಿಕಿರಿ. ಒಂದು ಕಲಹವಾಗಿ, ವ್ರಾನ್ಸ್ಕಿ ತಾಯಿಯ ಮನೆಗೆ ಹೋಗಿದ್ದಾನೆ. ಆನ್ನ, 'ತಪ್ಪು ನನ್ನದು. ಮನೆಗೆ ಬಾ' ಎಂದು ಕಾಗದ ಕಳಿಸುತ್ತಾಳೆ. ಉತ್ತರವಿಲ್ಲ. 'ಅವನು ಬರುವನೆ ? ಬಾರದಿದ್ದರೆ – !' ಎಂದು ಚಿಂತಿಸಿ ನಡುಗುತ್ತಾಳೆ. ತಂತಿ ಕಳಿಸುತ್ತಾಳೆ. ಉತ್ತರ ಬರುತ್ತದೆ : 'ರಾತ್ರಿ ಹತ್ತು ಗಂಟೆಗೆ ಬರುತ್ತೇನೆ.' ರೈಲು ಬರುತ್ತಿದೆ. ಹಿಂದೆ – ತಾನು ವ್ರಾನ್ಸ್ಕಿಯನ್ನು ಮೊದಲ ಬಾರಿಗೆ ಕಂಡ ದಿನ, ಒಬ್ಬ ವ್ಯಕ್ತಿ ರೈಲಿನ ಕೆಳಗೆ ಹಾರಿಕೊಂಡು ಪ್ರಾಣಬಿಟ್ಟದ್ದು ನೆನಪಾಗಿ ಅವಳಿಗೆ ತಾನೇನು ಮಾಡಬೇಕೆಂದು ಹೊಳೆಯುತ್ತದೆ. ರೈಲಿನ ಕೆಳಗೆ ಹಾರಿಕೊಳ್ಳುತ್ತಾಳೆ. ರೈಲಿನ ಚಕ್ರ ಅವಳತ್ತ ನುಗ್ಗಿದಂತೆ ದಿಗ್ಭ್ರಮೆಯಿಂದ, 'ಎಲ್ಲಿದ್ದೇನೆ? ಏನು ಮಾಡುತ್ತಿದ್ದೇನೆ?' ಎಂದು ಏಳಲು ಪ್ರಯತ್ನಿಸುತ್ತಾಳೆ. ದೈತ್ಯಶಕ್ತಿಯೊಂದು ಅವಳನ್ನು ಕೆಳಕ್ಕೆ ದೂಡುತ್ತದೆ. ಅರ್ಧಕ್ಷಣ ಕಣ್ಣುಕೋರೈಸುವ ಬೆಳಕಾಗಿ ಮರುಕ್ಷಣ ಬೆಳಕು ಆರಿಹೋಗುತ್ತದೆ, ಎಂದೆಂದಿಗೂ ಆರಿಹೋಗುತ್ತದೆ

'Vengeance is mine, and I will repay.'

4

ಕಾದಂಬರಿಯ ಏಳನೆಯ ಭಾಗದ ಕೊನೆಯಲ್ಲಿ ಆನ್ನ ಸಾಯುತ್ತಾಳೆ. ಕಾದಂಬರಿ ಇಲ್ಲಿಗೆ ಮುಗಿಯಬೇಕು. ಮುಗಿಯುವುದಿಲ್ಲ. ಹತ್ತೊಂಬತ್ತು ಅಧ್ಯಾಯಗಳ ಎಂಟನೆಯ ಭಾಗವೊಂದಿದೆ.

ಆನ್ನ–ವ್ರಾನ್ಸ್ಕಿಯವರ ಕಥೆಯ ನಿರೂಪಣೆ ಒಂದು ರೀತಿಯಲ್ಲಿ negative approach. ಹೇಗೆ ಬದುಕಬಾರದು ಎಂಬ ಚಿತ್ರಣ. ಆದರೆ ಹೇಗೆ ಬದುಕಬೇಕು ! ಇದರ ವಿಶ್ಲೇಷಣೆ ಎಂಟನೆಯ ಭಾಗದಲ್ಲಿ ಲೆವಿನನ ಅನುಭವ.

ಲೆವಿನ್ ಅಸಾಧಾರಣ ವ್ಯಕ್ತಿ ಏನೂ ಅಲ್ಲ. ಹತ್ತರೊಡನೆ ಹನ್ನೊಂದನೆಯವನು. ಶ್ರೀಮಂತ ವರ್ಗಕ್ಕೆ ಸೇರಿದವನು. ಓದುವುದರಲ್ಲಿ ಆಸಕ್ತಿ. ಗಂಭೀರವಾಗಿ ವಿಚಾರ ಮಾಡುವ ಸ್ವಭಾವ. ವ್ರಾನ್ಸ್ಕಿಯ ಸ್ವಭಾವದ ಹೊಳಪು, ರೂಪದ ಆಕರ್ಷಣೆ ಅವನಿಗಿಲ್ಲ. ಸ್ವಲ್ಪ ಸಂಕೋಚದ ಸ್ವಭಾವ.

ಯೌವನದಲ್ಲಿ ಅವನು ಕ್ರೈಸ್ತ ಧರ್ಮದಲ್ಲಿ, ದೇವರಲ್ಲಿ ನಂಬಿಕೆ ಕಳೆದು ಕೊಂಡವನು. ಅವನ ಸಂಗಾತಿಗಳೆಲ್ಲ ಹಾಗೆಯೇ. ಎಲ್ಲರೂ ಹೀಗೆಯೇ ಎಂಬ ಭಾವನೆ ಅವನಿಗೆ ಬಂದಿದೆ. ಜೀವನದಲ್ಲಿ ಉದ್ದೇಶವೇ ಇಲ್ಲ ಎನ್ನಿಸಿ, ಆತ್ಮಹತ್ಯೆಯ ಯೋಚನೆಯನ್ನೂ ಮಾಡಿದ್ದಾನೆ.

ಲೆವಿನ್ ಕಿಟ್ಟಿಯನ್ನು ಮದುವೆಯಾಗಿ ತನ್ನ ಜಮೀನನ್ನು ನೋಡಿಕೊಳ್ಳುತ್ತ ಬದುಕುತ್ತಿದ್ದಾನೆ. ಕ್ರಮೇಣ ಅವನಿಗೆ ಎಲ್ಲರೂ ತನ್ನಂತೆ ನಂಬಿಕೆ ಕಳೆದುಕೊಂಡಿಲ್ಲ, ಬಾಳಿಗೆ ಅರ್ಥವುಂಟೆ ಎಂದು ತನಗೆ ದಿಗ್ಭ್ರಮೆಯಾದಂತೆ ಅವರಿಗೆ – ರೈತರಿಗೆ, ಕಿಟ್ಟಿಗೆ – ಆಗುವುದಿಲ್ಲ ಎಂಬ ಅರಿವು ಬರುತ್ತದೆ. ತಾನು ತನ್ನ ಗೆಳೆಯರು ಅಷ್ಟೇ ಜಗತ್ತಲ್ಲ ಎಂದು ಕೊಳ್ಳುತ್ತಾನೆ. ಒಮ್ಮೆ ರೈತನೊಬ್ಬ ಯಾವನೋ ಒಬ್ಬನನ್ನು ಕುರಿತು ಅವನು ತನ್ನ ಹೊಟ್ಟೆಗಾಗಿಯಷ್ಟೆ ಬದುಕುತ್ತಾನೆ ಎಂದು ಹೇಳಿ, ''ಕೆಲವರು ದೇವರಿಗಾಗಿ ಬದುಕುತ್ತಾರೆ'' ಎಂದಾಗ ಲೆವಿನ್, ''ದೇವರಿಗಾಗಿ ಬದುಕುವುದು ಎಂದರೇನು ?'' ಎಂದು ಕೇಳುತ್ತಾನೆ. ''ದೇವರ ನಿಯಮದಂತೆ ಬದುಕುವುದು, ಸತ್ಯಕ್ಕಾಗಿ ಬದುಕುವುದು'' ಎನ್ನುತ್ತಾನೆ ರೈತ. ಈ ಮಾತುಗಳು ಲೆವಿನನ ಮನಸ್ಸಿನಲ್ಲಿ ಆಳವಾಗಿ ಇಳಿಯುತ್ತವೆ. ತನ್ನ ತಂದೆತಾಯಿಯದೂ ಇದೇ ನಂಬಿಕೆ ಎಂದು ಜ್ಞಾಪಿಸಿಕೊಳ್ಳುತ್ತಾನೆ. ತಾನಾದರೂ ತೀರ ದಿಗ್ಭ್ರಾಂತಿಯ ಗಳಿಗೆ ಗಳಲ್ಲೂ, ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಬಲವತ್ತರವಾದರೂ, ಉಳಿದುಕೊಂಡೆ ಹೇಗೆ ? ಇದೇ ನಂಬಿಕೆ ಅಂತರಾಳದಲ್ಲಿ ನಿಂತು ತನಗೆ ಅರಿವಿಲ್ಲದಂತೆ ಸ್ಥೈರ್ಯ ನೀಡಿತು. ತನ್ನ ಕರ್ತವ್ಯ ಆದಷ್ಟು ಒಳ್ಳೆಯವನಾಗಿರುವುದು, ಇದರಿಂದಲೇ ಒಳಗಿನ ಚೇತನಕ್ಕೆ ಬಂಧಮುಕ್ತಿ, ಎಂಬ ಸತ್ಯ ನಡುಹಗಲಿನ ಸೂರ್ಯನಷ್ಟು ಸ್ಪಷ್ಟವಾಗಿ ಹೊಳೆಯುತ್ತದೆ.

ಕಾದಂಬರಿಯ ಈ ಭಾಗದಲ್ಲಿ ಟಾಲ್‌ಸ್ಟಾಯಿ ಒಂದು ಘಟನೆಯನ್ನು ನಿರೂಪಿಸುತ್ತಾನೆ.

ಲೆವಿನ್, ಅವನ ಹೆಂಡತಿಮಕ್ಕಳು ಎಲ್ಲಿಯೋ ಹೋಗಿ ಹಿಂದಿರುಗುವಾಗ ಬೇರೆಬೇರೆಯಾಗುತ್ತಾರೆ. ಮಳೆ ಬರುತ್ತದೆ. ಮಿಂಚು ಗುಡುಗು ಸಿಡಿಲು ಅಬ್ಬರಿಸುತ್ತವೆ. ಸಿಡಿಲು ಬಳಿಯೇ ಅಪ್ಪಳಿಸುತ್ತದೆ. ಬೃಹತ್ ಓಕ್ ಮರವೊಂದು ಅಲ್ಲಾಡಿ ಒರಗುತ್ತದೆ. ಲೆವಿನನಿಗೆ ಮೈ ನಡುಕ. "ಭಗವಂತ, ಕಿಟ್ಟಿ ಮತ್ತು ಹುಡುಗರ ಮೇಲೆ ಬೀಳದಿರಲಿ" ಎಂದು ಪ್ರಾರ್ಥಿಸುತ್ತಾನೆ. ಓಡುತ್ತಾನೆ. ಅವರು ಕ್ಷೇಮವಾಗಿದ್ದಾರೆ. ಸುಖ ಎನ್ನುವುದು ಎಷ್ಟರಮಟ್ಟಿಗೆ ಆಕಸ್ಮಿಕವನ್ನು ಹೊಂದಿಕೊಂಡಿದೆ ಎಂದು ಅರ್ಥವಾಗುತ್ತದೆ.

ಆನ್ನ ಕೆಟ್ಟವಳಲ್ಲ. ವ್ರಾನ್ಸ್ಕಿ ಲೆವಿನನಿಗಿಂತ ಬುದ್ಧಿವಂತ ; ಅವನೂ ಕೆಟ್ಟವನಲ್ಲ. ಆದರೆ ಇಬ್ಬರೂ ರಾಗಗಳಿಗೆ ತಮ್ಮನ್ನು ಒಪ್ಪಿಸಿಕೊಂಡು, ತಮ್ಮ ಸುಖದಾಚೆ ಏನನ್ನೂ ಕಣ್ಣೆತ್ತಿ ನೋಡಲೊಲ್ಲರು. ಲೆವಿನ್ ರೈತನ ಮಾತನ್ನು ಕೇಳಿ ಯೋಚಿಸಿದ ನಂತರ, ತಾನು ಇನ್ನು ಮೇಲೆ ಸಿಟ್ಟುಮಾಡಿಕೊಳ್ಳುವುದಿಲ್ಲ, ಇತರರ ವಿಷಯದಲ್ಲಿ ಬೇಸರ ಪಟ್ಟುಕೊಳ್ಳುವುದಿಲ್ಲ ಎಂದೆಲ್ಲಾ ನಿರ್ಧಾರಗಳನ್ನು ಮಾಡಿಕೊಳ್ಳುತ್ತಾನೆ. ಸ್ವಲ್ಪ ಹೊತ್ತಿನಲ್ಲೆ ಈ ನಿರ್ಧಾರಗಳೆಲ್ಲ ಮುರಿಯುತ್ತವೆ. ಕ್ರಮೇಣ ಅವನಿಗೆ ಅರ್ಥವಾಗುತ್ತದೆ. ಈ ಬಗೆಯ ಸಂಪೂರ್ಣ ಸುಧಾರಣೆಗಳೂ ಸಾಧ್ಯವಿಲ್ಲ. ಮನುಷ್ಯ ಮನುಷ್ಯನಾಗಿಯೇ ಉಳಿಯುತ್ತಾನೆ. ಕಾದಂಬರಿ ಅವನ ಯೋಚನೆಗಳೊಂದಿಗೆ ಮುಕ್ತಾಯವಾಗುತ್ತದೆ.

I shall probably continue to get out of my temper with my coachman, to go into useless arguments, to air my ideas unreasonably... I shall continue to pray without being able to explain to myself why I pray. But my inner life has won its liberty; it will no longer be at the mercy of events, and every minute of my existence will have a meaning sure and profound which it will be in my power to impress on every one of my actions, that of being good.

ಕಾದಂಬರಿಯಲ್ಲಿ ಅಲ್ಲಲ್ಲಿ ಬೌದ್ಧಿಕ ಚರ್ಚೆಗಳು ಬರುತ್ತವೆ. ಮನುಷ್ಯನ ಜ್ಞಾನದ ಮೂಲ ಯಾವುದು, ಇಂದ್ರಿಯಗಳ ಗ್ರಹಣವನ್ನು ಬಿಟ್ಟು ಬೇರೆ ಅಸ್ತಿತ್ವ ಸಾಧ್ಯವೆ ? ಇಂತಹ ಹಲವಾರು ಪ್ರಶ್ನೆಗಳ ಚರ್ಚೆಯಾಗುತ್ತದೆ. ಬುದ್ಧಿಶಕ್ತಿ ಜಿಜ್ಞಾಸೆಗಳ ಮಹತ್ವವನ್ನು ಗುರುತಿಸುವ ಟಾಲ್‌ಸ್ಟಾಯ್, ಅವೇ ಪರಮಶಕ್ತಿಗಳಲ್ಲ, ಅಂತರಾತ್ಮದ ವಾಣಿ ಮುಖ್ಯ, ಬುದ್ಧಿ ತೀರ್ಮಾನಿಸಲಾಗದ ಇಕ್ಕಟ್ಟಿನಲ್ಲಿ ಒಳಗಿನ ಬೆಳಕು ಬುದ್ಧಿಯಾಚೆ, ಜಿಜ್ಞಾಸೆಯಾಚೆ ಸಾಗಿ ಸರಿಯಾಗಿ ತೀರ್ಮಾನಿಸುತ್ತದೆ ಎಂದು ಸೂಚಿಸುತ್ತಾನೆ. ವಿಜ್ಞಾನ ಮನುಷ್ಯನಿಗೆ ಬಾಳಿನ ಅರ್ಥವನ್ನು ತಿಳಿಸಿಕೊಡಲಾರದು, 'ನಾನು ಏಕೆ ಬಾಳಬೇಕು, ಹೇಗೆ ಬಾಳಬೇಕು ?' ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲಾರದು. ಈ ಪ್ರಶ್ನೆಗಳಿಗೆ ಉತ್ತರಗಳು ಅವಿದ್ಯಾವಂತರೆಂದು ನಾವು ಕಾಣುವ ರೈತರಲ್ಲಿ, ಜನ ಸಾಮಾನ್ಯರಲ್ಲಿ ಇವೆ.

5

ಕಾದಂಬರಿ ಮುಖ್ಯವಾಗಿ ಆನ್ನ-ವ್ರಾನ್ಸ್ಕಿಯವರ ಕಥೆ. ಇದರೊಂದಿಗೆ ಟಾಲ್‌ಸ್ಟಾಯ್ ಕಿಟ್ಟಿ– ಲೆವಿನರ ಕಥೆಯನ್ನು ಹೆಣೆದಿದ್ದಾನೆ. ಮುಖ್ಯಕಥೆ ಮುಕ್ತಾಯವಾದರೂ ಎರಡನೆಯ ಕಥೆ ಮುಂದುವರಿಯುತ್ತದೆ. ಇದರ ಉದ್ದೇಶ ಈಗ ಸ್ಪಷ್ಟ. ಆನ್ನ - ಅವಳ ಗಂಡನ ದಾಂಪತ್ಯ ವಿಫಲ, ಆನ್ನ – ವ್ರಾನ್ಸ್ಕಿಯವರ ಪ್ರೇಮ ದುಃಖದ ತವರು ; ಇವೆರಡಕ್ಕೆ ವೈದೃಶ್ಯವಾಗಿ ಬರುತ್ತದೆ, ಕಿಟ್ಟಿ-ಲೆವಿನರ ದಾಂಪತ್ಯ.

ಕಾದಂಬರಿ ಪ್ರಾರಂಭವಾಗುವುದು ಈ ಎರಡು ಕಥೆಗಳಿಂದಲೂ ಅಲ್ಲ, ಆನ್ನಳ ಅಣ್ಣ ಅಬ್ಲಾನ್ಸ್ಕಿಯ ಸಂಸಾರದ ಅಶಾಂತಿಯಿಂದ. ಅಬ್ಲಾನ್ಸ್ಕಿ ಹಿಂದೆ ತನ್ನ ಮಕ್ಕಳಿಗೆ ಪಾಠ ಹೇಳುತ್ತಿದ್ದ ಹುಡುಗಿಯೊಬ್ಬಳೊಡನೆ ಪ್ರಣಯವ್ಯವಹಾರ ಸಾಗಿಸಿದ್ದಾನೆ. ಅದು ಅವನ ಹೆಂಡತಿಗೆ ತಿಳಿದಿದೆ. ಅವಳು ಅತ್ತು ಕರೆದು ಗಂಡನೊಡನೆ ಮಾತು ಬಿಟ್ಟು ರಾದ್ಧಾಂತ ಮಾಡಿದ್ದಾಳೆ. ಅವರ ಮನೆಯ ಅಸಂತೋಷದ ಚಿತ್ರ. ಅನಂತರ ಅಬ್ಲಾನ್ಸ್ಕಿಯ ಕಚೇರಿಗೆ ಲೆವಿನ್ ಬರುತ್ತಾನೆ. ಹೀಗೆ ದುರಂತಪ್ರೇಮದ ಕಥೆ ಪ್ರಾರಂಭವಾಗುವುದು ಈ ಗಂಡು-ಹೆಣ್ಣಿನ ಚೆಲ್ಲಾಟದಿಂದ. ಅನಂತರ ಕಿಟ್ಟಿಯಲ್ಲಿ ಲೆವಿನ್‌ನ ಬಲವತ್ತರ ಅನುರಾಗದ ಚಿತ್ರ. ಅನಂತರ ಆನ್ನ-ವ್ರಾನ್ಸ್ಕಿಯರ ಭೇಟಿ.

ಅವರ ಭೇಟಿಯಾಗುವುದೂ ರೈಲ್ವೆ ನಿಲ್ದಾಣದಲ್ಲಿ. ಆನ್ನಾಳ ರೈಲು ಪ್ರವಾಸ ಮುಗಿಯುವ ಗಳಿಗೆಯಲ್ಲಿ ಅವರಿನ್ನೂ ರೈಲ್ವೆ ನಿಲ್ದಾಣದಲ್ಲಿರುವಾಗಲೇ ಯಾವನೋ ಜೀವನದಲ್ಲಿ ಬೇಸತ್ತವನು ಗಾಡಿಯ ಕೆಳಗೆ ಹಾರಿಕೊಂಡು ಪ್ರಾಣಬಿಡುತ್ತಾನೆ. ಆ ಗಳಿಗೆಯಿಂದಲೇ ಅವರಿಬ್ಬರ ಜೊತೆಯ ಪ್ರಯಾಣವೂ ಪ್ರಾರಂಭ. ರೈಲನ್ನು ಹತ್ತುವವರೆಗೆ ನಾವು ಸ್ವತಂತ್ರರು. ಹತ್ತಿದ ನಂತರ ಆ ದೈತ್ಯಶಕ್ತಿ ನಮ್ಮನ್ನು ಕೊಂಡೊಯ್ಯುತ್ತದೆ. ಇಂತಹದೇ ಪಯಣವನ್ನು ಆನ್ನ-ವ್ರಾನ್ಸ್ಕಿ ಕೈಗೊಳ್ಳುತ್ತಾರೆ. ಪಯಣ ಪ್ರಾರಂಭವಾದ ನಂತರ ಅವರ ಅಂಕೆ ಮೀರಿದ ಶಕ್ತಿ ಅವರನ್ನು ಕೊಂಡೊಯ್ಯುತ್ತದೆ. ಪ್ರಯಾಣ ಪ್ರಾರಂಭವಾದಂತೆಯೇ ಕೊನೆಗಾಣುತ್ತದೆ, ರೈಲಿನ ಚಕ್ರಗಳಡಿಯ ಸಾವಿನಲ್ಲಿ; ಆದರೆ ಈ ಬಾರಿ ಸಾವು ಆತುಕೊಳ್ಳುವುದು ಅಪರಿಚಿತನನ್ನಲ್ಲ, ಮುದ್ದು ಆನ್ನಳನ್ನು.

ಒಬ್ಬ ಶ್ರೀಮಂತ ಒಂದು ಬಡ ಹೆಣ್ಣಿನೊಡನೆ ನಡೆಸುವ ಚೆಲ್ಲಾಟದಿಂದ ಪ್ರಾರಂಭವಾಗುವ ಕಾದಂಬರಿ ಒಬ್ಬ ಪ್ರಾಮಾಣಿಕ ಪ್ರಣಯಿ ತಾನೊಲಿದ ಹೆಣ್ಣಿನೊಡನೆ ಸಂತೋಷವನ್ನೂ ತನ್ನ ಬಾಳಿನ ಸಾರ್ಥಕತೆಯನ್ನೂ ಸಾಧಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ನಡುವೆ, ಗಂಡು-ಹೆಣ್ಣು ತಮ್ಮ ಅನುರಾಗಕ್ಕೆ ಕರ್ತವ್ಯದ ಕಡಿವಾಣವನ್ನು ಹಾಕದಿದ್ದರೆ ಆಗುವ ಅನರ್ಥದ, ಯಾತನೆಯ, ನಾಶದ ಚಿತ್ರಣ. ಕಡೆಗೂ ವ್ರಾನ್ಸ್ಕಿ

ತನ್ನೊಳಗಿನ ಯಾತನೆಯಿಂದ ತಪ್ಪಿಸಿಕೊಳ್ಳಲು ಆಶ್ರಯಿಸಬೇಕಾಗುವುದು, ರಕ್ತದ ಹೊಳೆಯನ್ನು ಹರಿಸುವ ಯುದ್ಧವನ್ನೆ

ಕಾದಂಬರಿಯುದ್ದಕ್ಕೂ ಟಾಲ್‌ಸ್ಟಾಯ್ ಪ್ರತಿಮೆಗಳನ್ನು ಬಳಸಿಕೊಳ್ಳುತ್ತಾನೆ. ಪ್ರಣಯದ ಕಥೆ ಪ್ರಾರಂಭವಾದ ಹೊಸದರಲ್ಲಿ ವ್ರಾನ್ಸ್ಕಿ ಒಂದು ಕುದುರೆಗಳ ಓಟದ ಸ್ಪರ್ಧೆಯಲ್ಲಿ ಭಾಗವಹಿಸುತ್ತಾನೆ. (ಆನ್ನ, ಅವಳ ಗಂಡ ನೋಡಲು ಹೋಗಿದ್ದಾರೆ.) ವ್ರಾನ್ಸ್ಕಿ ಕುದುರೆಯನ್ನು ಹತ್ತುವ ಕ್ಷಣದಲ್ಲಿ ಮತ್ತೊಂದು ಪಾತ್ರ ಎಚ್ಚರಿಕೆ ಕೊಡುತ್ತದೆ. ''ಆತುರಪಡಬೇಡ, ಇದನ್ನು ಜ್ಞಾಪಕವಿಟ್ಟುಕೊ — ಕುದುರೆಯನ್ನು ತೀರ ಆತುರಪಡಿಸಬೇಡ, ಅದಕ್ಕೆ ಹೇಗೆ ಬೇಕೊ ಹಾಗೆ ಹೋಗಲಿ ಬಿಡು.'' ''ಸರಿ, ಹಾಗೇ ಆಗಲಿ'' ಎಂದು ಹೇಳಿ ಹೊರಡುತ್ತಾನೆ ವ್ರಾನ್ಸ್ಕಿ. ಅವನು ಕುದುರೆಯನ್ನು ಅದ್ಭುತವಾಗಿ ಓಡಿಸುತ್ತಾನೆ. ಅಡ್ಡಿಗಳನ್ನೆಲ್ಲ ಸುಲಭವಾಗಿ ನಿವಾರಿಸುತ್ತಾನೆ. ಕಡೆಯ ಅಡ್ಡಿಯನ್ನು ಕುದುರೆ ಹಾರಿ ದಾಟಿದ ರೀತಿಯನ್ನು ಅವನೇ ಮೆಚ್ಚಿಕೊಳ್ಳುತ್ತಾನೆ. ಅದರಲ್ಲಿ ಮಮತೆ ಇಮ್ಮಡಿಯಾಗುತ್ತದೆ. ಇನ್ನುಳಿದಿರುವುದು ಐನೂರು ಗಜ, ಅದನ್ನು ಮುಗಿಸುವುದರೊಳಗೆ ಒಂದು ಕಂದಕವನ್ನು ದಾಟಬೇಕು. ಕುದುರೆ ಆಯಾಸಗೊಂಡಿದೆ ಎಂದು ಅವನಿಗೆ ಅರಿವಾಗುತ್ತದೆ. ಬೆವರಿನಿಂದ ಅದರ ಮೈಯೆಲ್ಲ ಒದ್ದೆ. ಆದರೂ ಆ ಐನೂರು ಗಜ ಓಡಬಲ್ಲದು, ಎಂದು ಅವನ ವಿಶ್ವಾಸ. ಅದು ಕಂದಕವನ್ನು ಹಾರುವಾಗ ಅವನು ತಪ್ಪು ಮಾಡುತ್ತಾನೆ. ಹೇಗೊ ಅಲುಗಾಡುತ್ತಾನೆ. ಕುದುರೆಯ ಬೆನ್ನು ಮುರಿಯುತ್ತದೆ. ಅದು ಬಿದ್ದ ನಂತರವೂ ಏನಾಯಿತೆಂದು ತಿಳಿಯದೆ ಅವನು ಕಡಿವಾಣವನ್ನು ಎಳೆಯುತ್ತಾನೆ. ಬಡಪ್ರಾಣಿ ಏಳಲು ಪ್ರಯತ್ನಿಸುತ್ತದೆ, ನಡುಗುತ್ತ ಬೀಳುತ್ತದೆ. ಕೋಪದಿಂದ ವ್ರಾನ್ಸ್ಕಿಯ ಮುಖ ವಿಕೃತವಾಗುತ್ತದೆ, ದವಡೆ ನಡುಗುತ್ತದೆ, ಕೆನ್ನೆ ಬಿಳಿಚಿಕೊಳ್ಳುತ್ತದೆ, ಅದರ ಹೊಟ್ಟೆಗೆ ಒದೆಯುತ್ತ ಕಡಿವಾಣ ಎಳೆಯುತ್ತಾನೆ. ಕುದುರೆ ಅಲುಗಲಾರದೆ, ಭಾವ ತುಂಬಿದ ಕಣ್ಣುಗಳಿಂದ ಅವನನ್ನೇ ನೋಡುತ್ತದೆ. ಆಗ ವ್ರಾನ್ಸ್ಕಿಗೆ ಅರಿವಾಗುತ್ತದೆ ಸತ್ಯಾಂಶ. ಕುದುರೆಯ ಬೆನ್ನು ಮುರಿದದ್ದರಿಂದ ಅದನ್ನು ಗುಂಡು ಹಾಕಿ ಕೊಲ್ಲುವುದೇ ಸರಿ ಎಂದು ವೈದ್ಯರೂ ಇತರರೂ ತೀರ್ಮಾನಿಸುತ್ತಾರೆ.

ವ್ರಾನ್ಸ್ಕಿಯ ರಾಗ, ಅನುರಾಗ ಈ ರೀತಿಯದು. ಬಲವತ್ತರ, ನಿಷ್ಕರುಣ. ಆನ್ನಳ ಭವಿಷ್ಯದ ಮುನ್ಸೂಚನೆ ಇದು.

'ಆನ್ನ ಕರೆನೀನ'ವನ್ನು ಕುರಿತು ಹೇಳಬಹುದಾದ ಮಾತುಗಳು ಹಲವು. ಟಾಲ್‌ಸ್ಟಾಯ್ ನಿರೂಪಣೆಯ ಸಂಯಮ, ನಿರುದ್ವೇಗ ಇದನ್ನೇ ವಿವರಿಸಬಹುದು. ಇದಕ್ಕೆ ಒಂದೇ ಉದಾಹರಣೆಯನ್ನು ಕೊಡುತ್ತೇನೆ. ಆನ್ನಳ ಆತ್ಮಹತ್ಯೆ ನಮ್ಮ ಜೀವನವನ್ನು ಅಲ್ಲಾಡಿಸಿಬಿಡುವ ಘಟನೆ. ಅವಳ ಅನುಮಾನ, ಆತಂಕ, ಯಾತನೆ, 'ವ್ರಾನ್ಸ್ಕಿ ಪಶ್ಚಾತ್ತಾಪ

ಪಡುವಂತೆ ಮಾಡುತ್ತೇನೆ' ಎಂಬ ನಿರ್ಧಾರ, ರೈಲಿನ ಚಕ್ರ ಉರುಳುತ್ತ ಬಂದಂತೆ ಏಳುವ ಪ್ರಯತ್ನ– ಎಲ್ಲ ನಮ್ಮನ್ನು ಕಲಕಿಬಿಡುತ್ತವೆ. ಈ ಪ್ರಸಂಗದ ಕೊನೆಯ ವಾಕ್ಯ :

The light by which she had read the book filled with troubles, falsehoods, sorrow, and evil, flared up more brightly than ever before, lighted up for her all that had been in darkness, flickered, began to grow dim and was quenched for ever.

ಇಲ್ಲಿಗೆ ಅಧ್ಯಾಯ, ಭಾಗ ಎರಡೂ ಮುಗಿದವು. ಮುಂದಿನ ಭಾಗ, ಅಧ್ಯಾಯಗಳ ಮೊದಲ ಪ್ಯಾರ :

Almost two months had passed, the hot summer was half over, but Sergey Ivanovitch was only just preparing to leave for Moscow.

ಆನ್ನಳ ರುದ್ರ ಅಂತ್ಯದ ವಿಷಯ ಒಂದೇ ಮಾತಿಲ್ಲ.

ಈ ಕಾದಂಬರಿಯನ್ನು ಕುರಿತು ಇನ್ನೊಂದು ವಿಷಯವನ್ನು ಮಾತ್ರ ಪ್ರಸ್ತಾಪಿಸಿ ಮುಕ್ತಾಯ ಮಾಡುತ್ತೇನೆ.

ಲೇಖನದ ಪ್ರಾರಂಭದಲ್ಲಿ ಈ ಕಾದಂಬರಿಯನ್ನು 'ಗದ್ಯ ಮಹಾಕಾವ್ಯ' ಎಂದು ವರ್ಣಿಸಿದೆ. ಇಲ್ಲಿ ನಾಟಕೀಯ ದೃಶ್ಯಗಳು, ಹೃದಯ ಬಾಯಿಗೆ ಬರುವಂತೆ ಮಾಡುವ ದೃಶ್ಯಗಳು ಹಲವಾರು. ಆದರೆ ಒಟ್ಟಿನಲ್ಲಿ ಇದರ ಕೇಂದ್ರ ಮನೋಧರ್ಮ, ಇದರ ರೀತಿ, ಇದರ ಓಟ ಮಹಾಕಾವ್ಯದ್ದು. ಮಹಾಕಾವ್ಯದ ಕಥೆಯಂತೆ ಈ ಕಥೆಯೂ ನಿಧಾನವಾಗಿ ಸಾಗುತ್ತದೆ. ಮಹಾಕಾವ್ಯಕ್ಕೆ ನಾಯಕ ಉಂಟು. ನಾಯಕಿ ಉಂಟು. ಪ್ರಧಾನವಾಗಿ ಅದು ಅವರ ಕಥೆ. ಆದರೆ ಅವರ ಸುತ್ತಮುತ್ತ ಅಧಿಕಸಂಖ್ಯೆಯ ಪಾತ್ರಗಳು, ಇಡೀ ಸಮಾಜದ ಜೀವನ, ಅದರ ಮೌಲ್ಯಗಳು ಮಹಾಕಾವ್ಯದಲ್ಲಿ ರೂಪ ತಾಳುತ್ತವೆ. 'ಆನ್ನ ಕರೆನೀನ'ದ ಸೃಷ್ಟಿ ಇಂತಹದು. ಇಡೀ ರಷ್ಯದ ಸಮಾಜ ಇಲ್ಲಿ ನಮ್ಮ ಕಣ್ಣ ಮುಂದೆ ಸ್ಫುಟಗೊಳ್ಳುತ್ತದೆ. ಆನ್ನ, ವ್ರಾನ್ಸ್ಕಿ ಇಬ್ಬರೂ ಸಮಾಜದ ಪ್ರತಿಷ್ಠಿತ ವರ್ತುಲಕ್ಕೆ ಸೇರಿದವರು. ಹಲವು ಇತರ ಪಾತ್ರಗಳೂ ಹಾಗೆಯೇ. ಆದರೆ 'ಕೊಳಕ ದೀನ ರೈತ' ಕಥೆಯುದ್ದಕ್ಕೂ ಹಿನ್ನೆಲೆಯಲ್ಲಿ ಇದ್ದೇ ಇದ್ದಾನೆ. ಆನ್ನ ರೈಲಿನ ಚಕ್ರದ ಕೆಳಗೆ ಸಿಕ್ಕಿಕೊಂಡಾಗ, "A peasant muttering something was working at the iron above her." ಲೆವಿನನಿಗೆ ಹೊಸ ಬೆಳಕು ಗೋಚರಿಸುವುದು ಒಬ್ಬ ಸಾಮಾನ್ಯ ರೈತನಿಂದ. ನಗರಗಳ ಪ್ರತಿಷ್ಠಿತ ಜನರ ರಾಗಭೋಗಗಳ ಕಥೆ ಸ್ವಲ್ಪದೂರ ಸಾಗುತ್ತಲೇ ಗ್ರಾಮಜೀವನದ, ನಿಸರ್ಗದ ಚೆಲುವು ಶಾಂತಿಗಳಿಗೆ ಹಿಂದಿರುಗುತ್ತೇವೆ. ಕಿಟ್ಟಿಯನ್ನು ಪ್ರೀತಿಸಿ, ಆ ಮೋಹದಲ್ಲಿ ತೇಲಿ ಮುಳುಗಿ, ಅವಳು ತನ್ನನ್ನು ಮದುವೆಯಾಗುವುದಿಲ್ಲ ಎಂದು ಖಚಿತವಾದ ನಂತರ ಲೆವಿನ್ ತನ್ನ

ಗ್ರಾಮಕ್ಕೆ ಹಿಂದಿರುಗಿದ್ದಾನೆ. ನಾಚಿಕೆ, ದುಃಖ ಎಲ್ಲ ಅವನ ಮನಸ್ಸನ್ನು ಕ್ಷೋಭೆಗೊಳಿಸಿವೆ. ಟಾಲ್‌ಸ್ಟಾಯ್ ಅವನ ನೋವನ್ನು ಒಂದು ಪ್ಯಾರದಲ್ಲಿ ವರ್ಣಿಸುತ್ತಾನೆ. ಮುಂದಿನ ಪ್ಯಾರ ಪ್ರಾರಂಭವೇ ಹೀಗೆ :

Meanwhile spring came on, beautiful and kindly, without the delays and treacheries of spring - one of those rare springs in which plants, beasts, and men rejoice alike. This lovely spring roused Levin still more, and strengthened him in his resolution of renouncing all his past and building up his lonely life firmly and independently.

ಹಣ, ಹಣದ ಆಡಂಬರ ಇವೆಲ್ಲ ದೈಹಿಕಚೈತನ್ಯದ ಚಿಲುಮೆಗಳಿಂದ, ಮನಸ್ಸಿನ ನೆಮ್ಮದಿಯಿಂದ ಮನುಷ್ಯನನ್ನು ದೂರ ಇಡುತ್ತವೆ ಎಂದು ಟಾಲ್‌ಸ್ಟಾಯಿಯ ನಂಬಿಕೆ. 'ಆನ್ನ ಕರೆನೀನ'ದಲ್ಲಿ ಒಂದು ಭವ್ಯ ಪ್ರೇಮಗಾಥೆಯನ್ನು ಬಿತ್ತರಿಸುವುದಷ್ಟೇ ಅವನ ಉದ್ದೇಶವಲ್ಲ. ರಷ್ಯದ ಸಮಕಾಲೀನ ಸಮಾಜದ ರೀತಿನೀತಿಗಳನ್ನು ಚಿತ್ರಿಸುವುದೂ ಅವನ ಗುರಿ, ಜೀವನದಲ್ಲಿ ಹರ್ಷ-ಶಾಂತಿಗಳ ಮೂಲಗಳನ್ನು ಗುರುತಿಸುವುದೂ ಗುರಿ. 'ಆನ್ನ ಕರೆನೀನ'ದಲ್ಲಿ ಎಷ್ಟೊಂದು ಪಾತ್ರಗಳಿವೆಯೊ ಲೆಕ್ಕ ಹಾಕಿ ಹೇಳುವುದು ಕಷ್ಟ. ಕಾದಂಬರಿಕಾರ ಎಲ್ಲ ಪಾತ್ರಗಳಿಗೂ ಪೂರ್ಣಸ್ವಾತಂತ್ರ್ಯ ನೀಡುತ್ತಾನೆ. ಅವರ ಬಯಕೆಗಳು, ಗುಣಗಳು, ಮೌಲ್ಯಗಳು ಅವರನ್ನು ಎತ್ತೆತ್ತ ಕೊಂಡೊಯ್ಯುತ್ತವೆ, ಹೇಗೆ ಕುಣಿಸುತ್ತವೆ ಎಂದೆಲ್ಲ ತೋರಿಸುತ್ತಾನೆ. ಅವು ನೇಯುವ ನಲಿವು ನೋವುಗಳ ವಿನ್ಯಾಸವನ್ನು ತೋರಿಸುತ್ತಾನೆ. ಇದೆಲ್ಲದರ ಮಧ್ಯೆ ಅಲ್ಲಲ್ಲಿ ಶಾಂತಿಯ ತಾಣಗಳಿವೆ — ನಿಸರ್ಗದ ಮಡಿಲಲ್ಲಿ, ಒಳ್ಳೆಯ ಹೆಣ್ಣಿನ ಒಲವಿನಲ್ಲಿ. ಇಂತಹ ದಿವ್ಯ ಅನುಭವಗಳ ಕ್ಷಣಗಳಲ್ಲಿ ಮನುಷ್ಯ, ಮಾನವ ಜೀವನದಲ್ಲಿ ಎಷ್ಟೊಂದು ಸಂತೋಷ ಶಾಂತಿಗಳಿರ ಬಹುದು, ಎಷ್ಟು ಶೋಷಣೆ ತಳಮಳಗಳಿವೆ ಎಂದು ಕಂಡುಕೊಳ್ಳುತ್ತಾನೆ.

6

ಸಾಹಿತ್ಯದ ಕೆಲವು ಕೃತಿಗಳು ನಾವು ನಮ್ಮ ಮೌಲ್ಯಗಳನ್ನೇ ಮತ್ತೆ ಶೋಧಿಸಿ ಕೊಳ್ಳುವಂತೆ ಮಾಡುತ್ತವೆ. ಅಂತಹ ಮೇರುಕೃತಿಗಳಲ್ಲಿ 'ಆನ್ನ ಕರೆನೀನ' ಒಂದು.

ಎಫ್.ಆರ್. ಲೀವಿಸ್ ಈಚೆಗಿನ ವಿಮರ್ಶಕರಲ್ಲಿ ಬಹು ಕಟ್ಟುನಿಟ್ಟಿನ ಮಾನದಂಡ ಗಳನ್ನು ಬಳಸುವವನು. ಅವನು ಒಂದು ಪ್ರಬಂಧದಲ್ಲಿ "Anna Karenina one of the great European novels?" ಎಂಬ ಪ್ರಶ್ನೆಯನ್ನು ಕೇಳಿ ತಾನೇ ಉತ್ತರಿಸಿದ : "It is, surely, the European novel."

ಥಾಮಸ್ ಹಾರ್ಡಿ : 'ದಿ ರಿಟರ್ನ್ ಆಫ್ ದಿ ನೇಟಿವ್'

ಎಸ್. ರಾಮಸ್ವಾಮಿ

1840ನೇ ಇಸವಿಯ ಜೂನ್ 2ನೇ ತಾರೀಖು ಡಾರ್‌ಸೆಸ್ಟರ್ ಬಳಿ ಹುಟ್ಟಿ 1928ರಲ್ಲಿ ಮೃತನಾದ ಥಾಮಸ್ ಹಾರ್ಡಿಯು ತನ್ನ ಜೀವನದ ಬಹುಭಾಗವನ್ನು ಇಂಗ್ಲೆಂಡಿನ ಈ ಭಾಗದಲ್ಲೇ ಕಳೆದು ಈ ಪ್ರಾಂತ್ಯದ ವೆಸ್ಸೆಕ್ಸ್ ಎಂಬ ಹಳೆಯ ಹೆಸರನ್ನು ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಸಿದ್ಧಗೊಳಿಸಿದನು. ಬಾಲ್ಯದಿಂದಲೂ ಸಾಹಿತ್ಯಾಭಿರುಚಿಯನ್ನು ಪಡೆದಿದ್ದ ಈತನು ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಆಧುನಿಕ ಭಾಷೆಗಳ ಜೊತೆಗೆ ಆಧುನಿಕ ಗಾಥಿಕ್ (Gothic) ಶಿಲ್ಪಶಾಸ್ತ್ರವನ್ನೂ ಸಹ ಅಭ್ಯಾಸಮಾಡಿದನು. ಈತನು ಕಾದಂಬರಿಗಳನ್ನು ಮಾತ್ರವಲ್ಲದೆ ಸಣ್ಣಕಥೆಗಳನ್ನೂ ಕವನಗಳನ್ನೂ ಮತ್ತು 'ದಿ ಡೈನಾಸ್ಟ್ಸ್' (The Dynasts) ಎಂಬ ಒಂದು ಬೃಹತ್ ನಾಟಕವನ್ನೂ ಬರೆದಿದ್ದಾನೆ.

ಈತನ 'ದಿ ರಿಟರ್ನ್ ಆಫ್ ದಿ ನೇಟಿವ್' ಕೃತಿಯನ್ನು 'ದಿ ಮೇಯರ್ ಆಫ್ ಕ್ಯಾಸ್ಟರ್‌ಬ್ರಿಡ್ಜ್', 'ಟೆಸ್' ಮತ್ತು 'ಜೂಡ್ ದಿ ಅಬ್‌ಸ್ಕ್ಯೂರ್' ಕಾದಂಬರಿಗಳ ಜೊತೆಗೆ ಹಾರ್ಡಿಯ ದುರಂತಪ್ರಜ್ಞೆಯ ಮತ್ತು ದುರಂತ ವಸ್ತುವಿನ್ಯಾಸದ ಪರಾಕಾಷ್ಠತೆಯ ಪ್ರತೀಕವೆಂದು ಪರಿಗಣಿಸಬಹುದು. ಸಾಹಿತ್ಯ ಪ್ರಪಂಚದಲ್ಲಿ ಹಾರ್ಡಿಯ ಸ್ಥಾನ ಈ ಕಾರಣದಿಂದಾಗಿ ಸೋಫೋಕ್ಲಿಸ್ ಮತ್ತು ಷೇಕ್ಸ್‌ಪಿಯರ್ ಇವರ ದುರಂತ ವಸ್ತುವಿನ್ಯಾಸವನ್ನು ಸ್ಮರಣೆಗೆ ತರುವಂತಹುದು. ಜೀವನದಲ್ಲಿ ಮನಸ್ಸಿಗೆ ನೋವನ್ನುಂಟುಮಾಡುವ ಮತ್ತು ಸಹಿಸಲು ದುರ್ಭರವಾದ ಅನುಭವಗಳು ದುರಂತನಾಟಕಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಹಿನ್ನೆಲೆಯಾಗಿ ಸರ್ವಕಾಲದಲ್ಲಿಯೂ ಇದ್ದುದರಿಂದ ಈ ವಸ್ತುವನ್ನು ಯಾವ ರೀತಿಯಲ್ಲಿ ಯಾವ ದೃಷ್ಟಿ ಕೋನದಿಂದ ನೋಡಿ ಹೇಗೆ ಈ ಪ್ರಜ್ಞೆಗೆ ಅಭಿವ್ಯಕ್ತಿ ಕೊಡುತ್ತಾನೆಂಬುದು ಒಬ್ಬ ಬರಹಗಾರನನ್ನು ಇನ್ನೊಬ್ಬನಿಂದ ಬೇರ್ಪಡಿಸಿ ತೋರಿಸುವುದರ ಮೂಲಕ ನಾವು ಯಾವ ಬರಹಗಾರನ ಬಗ್ಗೆ ವಿಶ್ಲೇಷಣೆ ನಡೆಸುತ್ತಿದ್ದೇವೆಯೋ ಅವನ ಸ್ವಾಂತತೆಯನ್ನು ಮತ್ತು ಭಿನ್ನಮಯತೆಯನ್ನು ಅರಿಯುವ ಸಾಧನೆಯಾಗುತ್ತದೆ. ಈ ಪರಿಮಿತಿಯಲ್ಲಿ ಹಾರ್ಡಿಯ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯನ್ನು ಸ್ಥೂಲವಾಗಿ ಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

1878ರಲ್ಲಿ ಮೊದಲ ಬಾರಿಗೆ ಪ್ರಕಟಿಸಲ್ಪಟ್ಟ 'ದಿ ರಿಟರ್ನ್ ಆಫ್ ದಿ ನೇಟಿವ್' ಕಾದಂಬರಿಯನ್ನು ಭಾವುಕತೆಯ ದುರಂತವೆಂದು ವರ್ಣಿಸಬಹುದೆನಿಸುತ್ತದೆ. ಈ ಕಾದಂಬರಿಯಲ್ಲಿ ವರ್ಣಿಸಿರುವ ಘಟನೆಗಳ 'ಕಾಲ' ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗ. ಘಟನೆಗಳು ನಡೆಯುವ 'ದೇಶ' ಇಂಗ್ಲೆಂಡಿನಲ್ಲಿರುವ 'ಎಗ್ಡನ್ ಹೀಥ್'ನಲ್ಲಿ.

ಆದರೆ ಇದರಲ್ಲಿನ ಕಕ್ಷಿ-ಪ್ರತಿಕಕ್ಷಿಗಳು ಭಾವುಕನಾದ ಮಾನವ ಮತ್ತು ಬಲತರವಾದ ಪ್ರಕೃತಿಯ ಆವೇಶ. ಯೂಸ್ಟೇಷಿಯಾ ವೈ ಎಂಬ ಸುಂದರ ಯುವತಿಯು ಮಾನವನ ಹೋರಾಟದ ಪ್ರತೀಕವಾಗಿಯೂ ಎಗ್ಡನ್ ಹೀಥ್ ಎಂಬ ಬಂಜರುಭೂಮಿ ಅಮಾನುಷ ಪ್ರಕೃತಿಯ ಪ್ರತೀಕವಾಗಿಯೂ ಚಿತ್ರಿಸಲ್ಪಟ್ಟು ಮಾನವನು ಪರಿಸರದೊಂದಿಗೆ ವ್ಯರ್ಥವಾಗಿ ಹೋರಾಡಿ ಸೋಲನ್ನನುಭವಿಸಿ ತನ್ನ ಅಸಹಾಯಕತೆಯನ್ನೂ ಇದರಿಂದ ಉದ್ಭವಿಸುವ ನಿರಾಶೆಯನ್ನೂ ಮನೋಜ್ಞವಾಗಿ ಚಿತ್ರಿಸಿದ್ದಾನೆ ಹಾರ್ಡಿ. ಈಗ ಈ ಕಾದಂಬರಿಯ ಕಥಾವಸ್ತುವನ್ನು ಪರಿಚಯ ಮಾಡಿಕೊಳ್ಳೋಣ.

ಡಿಗೊರಿ ವೆನ್ ಸೂರ್ಯಾಸ್ತಮದ ಸಮಯದಲ್ಲಿ ತನ್ನ ಬಂಡಿಯನ್ನು ನಡೆಸುತ್ತಾ ಬರುತ್ತಿದ್ದನು. ಟಾಮಸಿನ್ ಯೋಬ್ರೈಟ್ ಗಾಡಿಯ ಹಿಂಭಾಗದಲ್ಲಿ ಅಸ್ವಸ್ಥತೆಯಿಂದ ಮಲಗಿದ್ದಳು. ಡಿಗೊರಿ ಆಕೆಯನ್ನು ಪ್ರೀತಿಸುತ್ತಿದ್ದರೂ ಆಕೆಯು ಅವನನ್ನು ಮದುವೆ ಯಾಗಲು ನಿರಾಕರಿಸಿದ್ದಳು – ಡೇಮನ್ ವೈಲ್ಡೀವ್ ಎಂಬುವನನ್ನು ಮದುವೆಯಾಗಲು. ವೈಲ್ಡೀವ್ "ದಿ ಕ್ವಯಟ್ ವುಮನ್" ಎಂಬ ವಿಶ್ರಾಂತಿಗೃಹದ ಮಾಲೀಕನಾಗಿದ್ದನು. ಈಗ ಡಿಗೊರಿ ಈ ಹುಡುಗಿಯನ್ನು "ಬ್ಲೂಮ್ಸ್ ಎಂಡ್" ಎಂಬಲ್ಲಿದ್ದ ಅವಳ ಮನೆಗೆ ಕರೆದೊಯ್ಯುತ್ತಿದ್ದನು. ಟಾಮಸಿನ್ ವೈಲ್ಡೀವ್‌ನನ್ನು ಮದುವೆಯಾಗಲು ಒಂದು ಹತ್ತಿರದ ಊರಿಗೆ ಹೋಗಿದ್ದಳು. ಆದರೆ ಮದುವೆಗೆ ಸಂಬಂಧಪಟ್ಟ ಕಾಗದಪತ್ರಗಳು ಸರಿಯಾಗಿಲ್ಲ ದ್ದರಿಂದ ಮದುವೆಯೂ ನಿಂತುಹೋಗಿತ್ತು. ಅವಮಾನಿತಳಾಗಿದ್ದ ಟಾಮಸಿನ್ ತನ್ನಲ್ಲಿ ಅನುರಾಗವಿದ್ದ ಡಿಗೊರಿಯನ್ನು ತನ್ನ ಮನೆಗೆ ವಾಪಸ್ಸು ಕರೆದೊಯ್ಯಬೇಕೆಂದು ಕೇಳಿದ್ದಳು.

ಟಾಮಸಿನ್‌ನ ಚಿಕ್ಕಮ್ಮನಾದ ಶ್ರೀಮತಿ ಯೋಬ್ರೈಟ್ ಡಿಗೊರಿಯಿಂದ ನಡೆದ ಸಮಾಚಾರವನ್ನು ತಿಳಿದುಕೊಂಡಳು. ಹುಡುಗಿಯ ಹಿತಚಿಂತನೆಯಲ್ಲಿ ಆಸಕ್ತಳಾಗಿದ್ದ ಆಕೆಯು ಟಾಮಸಿನ್‌ಳ ಮದುವೆಯು ಆದಷ್ಟು ಬೇಗನೆ ನಡೆಯಬೇಕೆಂದು ನಿರ್ಧರಿಸಿದಳು. ಈ ನಿರ್ಧಾರಕ್ಕೆ ಕಾರಣವೇನೆಂದರೆ ವೈಲ್ಡೀವ್‌ನ ಚಾರಿತ್ರ್ಯದ ಬಗ್ಗೆ ಆಕೆಗಿದ್ದ ಶಂಕೆ. ವೈಲ್ಡೀವ್ ಶ್ರೀಮತಿ ಯೋಬ್ರೈಟ್‌ಳಿಗೆ ತಾನು ಟಾಮಸಿನ್‌ಳನ್ನು ಆದಷ್ಟು ಬೇಗ ಮದುವೆಯಾಗುತ್ತೇನೆಂದು ಆಶ್ವಾಸನೆ ನೀಡಿದ. ಇದೇ ಸಮಯದಲ್ಲಿ ಆತನ ದೃಷ್ಟಿಯು ಮಿಸ್ಟೋವರ್ ನ್ಯಾಪ್ ಎಂಬ ಗುಡ್ಡದ ಮೇಲೆ ತನ್ನ ಮೊಮ್ಮಗಳಾದ ಯೂಸ್ಟೇಷಿಯಾ ವೈಳೊಂದಿಗೆ ವಾಸವಾಗಿದ್ದ ಕ್ಯಾಪ್ಟನ್ ವೈಳ ಮನೆಯತ್ತ ಹರಿಯಿತು. ಸೂರ್ಯಾಸ್ತಮದ ನಂತರ ತನ್ನ ಪ್ರೇಮಿಯನ್ನು ತನ್ನ ಬಳಿಗೆ ಬಾರೆಂದು ಸೂಚಿಸುವ ಸಲುವಾಗಿ ಯೂಸ್ಟೇಷಿಯಾ ಗುಡ್ಡದ ಮೇಲೆ ಒಂದು ಸಣ್ಣ ಬೆಂಕಿಯನ್ನು ಹಚ್ಚಿದ್ದಳು. ಅವನು ಯೂಸ್ಟೇಷಿಯಾಳ ಸಹವಾಸವನ್ನು ತ್ಯಜಿಸಬೇಕೆಂದು ನಿಶ್ಚಯಿಸಿದ್ದರೂ ಸಹ ಅವಳ ಸಂಜ್ಞೆಗೆ ಓಗೊಟ್ಟನು. ಆಗ ಅವಳು ಜಾನಿ ನನ್‌ಸಚ್ ಎಂಬ ಹುಡುಗನ ಜೊತೆಯಲ್ಲಿದ್ದಳು. ವೈಲ್ಡೀವ್ ತನ್ನ ಆಗಮನವನ್ನು ಅಲ್ಲಿದ್ದ ಕೊಳದ ನೀರಿನೊಳಕ್ಕೆ ಒಂದು

ಕಲ್ಲನ್ನು ಎಸೆದು ಸೂಚಿಸಿದನು. ಆಗ ಯೂಸ್ಟೇಷಿಯಾ ಜಾನಿಗೆ ಮನೆಗೆ ಹೋಗೆಂದು ಹೇಳಿದಳು. ಯೂಸ್ಟೇಷಿಯ ಮತ್ತು ವೈಲ್ಡೀವ್ ಇವರ ಸಮಾಗಮ ಅವರಿಗೆ ಅಷ್ಟೇನೂ ಸಮಾಧಾನವನ್ನು ತರಲಿಲ್ಲ. ಅವನು ಆಕೆಯನ್ನು ತನ್ನ ಅಶಾಂತತೆಗೆ ಕಾರಣಳೆಂದು ದೂರಿದನು. ಅವಳು ಆತನನ್ನು ತನ್ನನ್ನು ಬಿಟ್ಟುಹೋದುದಕ್ಕಾಗಿ ದೂರಿದಳು. ಇದರ ನಡುವೆ ಜಾನಿ ಗುಡ್ಡದ ಮೇಲಿದ್ದ ಬೆಂಕಿಯನ್ನು ನೋಡಿ ತಾನೊಬ್ಬನೇ ಮನೆಗೆ ಹೋಗಲು ಹೆದರಿ ಯೂಸ್ಟೇಷಿಯಾಳಿದ್ದ ಬಳಿಗೆ ವಾಪಸ್ಸು ಬರುತ್ತಾನೆ. ಆದರೆ ಅವನು ಯೂಸ್ಟೇಷಿಯಾ ವೈಲ್ಡೀವ್‌ನ ಜೊತೆಯಲ್ಲಿದ್ದುದನ್ನು ನೋಡಿ ತಾನೇ ಹಿಂದಿರುಗಲು ಯತ್ನಿಸುತ್ತಿದ್ದಾಗ ಡಿಗೊರಿ ವೆನ್‌ನ ಬಂಡಿಯ ಬಳಿ ಬರುತ್ತಾನೆ. ಜಾನಿಯಿಂದ ಡಿಗೊರಿ ಯೂಸ್ಟೇಷಿಯಾ ಮತ್ತು ವೈಲ್ಡೀವ್ ಇವರ ಸಮಾಗಮದ ಬಗ್ಗೆ ಅರಿಯುತ್ತಾನೆ. ಅನಂತರ ಅವನು ಯೂಸ್ಟೇಷಿಯ ತನಗೆ ಎಗ್ಡನ್ ಹೀಥ್ ಬಗ್ಗೆ ಇರುವ ದ್ವೇಷವನ್ನು ವೈಲ್ಡೀವ್‌ಗೆ ಹೇಳುತ್ತಿದ್ದುದನ್ನೂ ಅವನು ಆಕೆಯನ್ನು ತನ್ನೊಡನೆ ಅಮೆರಿಕಾಗೆ ಹೊರಟುಹೋಗಲು ಆಹ್ವಾನಿಸುತ್ತಿದ್ದದ್ದನ್ನೂ ಕೇಳುತ್ತಾನೆ. ಅದಕ್ಕೆ ಆಕೆಯ ಜವಾಬು ಖಚಿತವಾಗಿಲ್ಲದಿದ್ದರೂ ಡಿಗೊರಿ ಯೂಸ್ಟೇಷಿಯಾಳನ್ನು ಭೇಟಿ ಮಾಡಿ ಆಕೆಯನ್ನು ಟಾಮಸಿನ್‌ಳನ್ನು ಮದುವೆಯಾಗಲು ವೈಲ್ಡೀವ್‌ನನ್ನು ಬಿಟ್ಟುಕೊಡಬೇಕೆಂದು ಕೇಳಿಕೊಳ್ಳಲು ನಿರ್ಧರಿಸುತ್ತಾನೆ.

ಡಿಗೊರಿಯು ಯೂಸ್ಟೇಷಿಯಾಳನ್ನು ಭೇಟಿಮಾಡಿದ್ದು ನಿರರ್ಥಕವಾಗುತ್ತದೆ. ಮತ್ತೆ ಅವನು ಶ್ರೀಮತಿ ಯೋಬ್ರೈಟಳಿಗೆ ತಾನು ಟಾಮಸಿನ್‌ಳನ್ನು ಪ್ರೀತಿಸುತ್ತಿರುವ ವಿಷಯ ಹೇಳಿ ಅವಳನ್ನು ಮದುವೆಯಾಗಲು ಅನುಮತಿ ಕೇಳುತ್ತಾನೆ. ಶ್ರೀಮತಿ ಯೋಬ್ರೈಟ್ ಟಾಮಸಿನ್ ವೈಲ್ಡೀವನ್ನೇ ಮದುವೆಯಾಗಬೇಕೆಂದು ನಿರ್ಧರಿಸಿದ್ದುದರಿಂದ ಡಿಗೊರಿಯ ಆಸೆಯನ್ನು ನಿರಾಸೆಗೊಳಿಸುತ್ತಾಳೆ. ಅಷ್ಟೇ ಅಲ್ಲದೆ ವೈಲ್ಡೀವ್‌ಗೆ ಟಾಮಸಿನ್‌ಗೆ ಮದುವೆಯಾಗಲು ಬೇರೆ ಕಡೆಯಿಂದ ಆಹ್ವಾನವಿರುವುದೆಂದು ಸೂಕ್ಷ್ಮವಾಗಿ ಸೂಚಿಸುವುದರ ಮೂಲಕ ವೈಲ್ಡೀವ್‌ಗೆ ಟಾಮಸಿನ್‌ಳಲ್ಲಿ ಮತ್ತೆ ಆಸಕ್ತಿ ಮರುಕಳಿಸುವ ಹಾಗೆ ಮಾಡುತ್ತಾಳೆ.

ಈ ಸಮಯಕ್ಕೆ ಶ್ರೀಮತಿ ಯೋಬ್ರೈಟ್‌ಳ ಮಗ ಕ್ಲಿಮ್ ಪ್ಯಾರಿಸ್ ನಗರದಿಂದ ವಾಪಸ್ಸು ಬರುತ್ತಾನೆ. ಈ ಸಂದರ್ಭದಲ್ಲಿ ಇವನಿಗಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಕ್ಲಿಮ್‌ನ ಬಗ್ಗೆ ವಿಶೇಷವಾಗಿ ಕೇಳಿದ್ದ ಯೂಸ್ಟೇಷಿಯಾ ಅವನನ್ನು ನೋಡಲು ಅವಕಾಶವಾಗುತ್ತದೆ. ಯೂಸ್ಟೇಷಿಯಾಗೆ ಕ್ಲಿಮ್‌ನನ್ನು ಮದುವೆಯಾಗಿ ಅವನೊಂದಿಗೆ ಪ್ಯಾರಿಸ್‌ಗೆ ಹೊರಟುಹೋಗಬೇಕೆಂದು ಮನಸ್ಸಾಗುತ್ತದೆ. ಈ ಕಾರಣದಿಂದ ಅವಳು ವೈಲ್ಡೀವ್‌ನನ್ನು ನಿರಾಕರಿಸುತ್ತಾಳೆ. ಅವನು ಅವಳ ಮೇಲಿನ ಕೋಪದಿಂದ ಟಾಮಸಿನ್‌ಳನ್ನು ಮದುವೆಯಾಗುತ್ತಾನೆ.

ಕ್ಲಿಮ್ ಫ್ರಾನ್ಸ್ ದೇಶಕ್ಕೆ ಹಿಂದಿರುಗಲು ಇಚ್ಛಿಸುವುದಿಲ್ಲ. ಎಗ್ಡನ್‌ನಲ್ಲೇ ಒಂದು

ಪಾಠಶಾಲೆಯನ್ನು ಸ್ಥಾಪಿಸಿ ಅಲ್ಲಿನ ಜನರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂಬ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಶ್ರೀಮತಿ ಯೋಬ್ರೈಟ್‌ಳಿಗೆ ಇದು ಇಷ್ಟವಿರಲಿಲ್ಲ. ಆಕೆಯ ಇಚ್ಛೆಗೆ ವಿರುದ್ಧವಾಗಿ ಅವನು ಯೂಸ್ಟೇಷಿಯಾಳ ಮನೆಗೆ ಹೋಗಿ ಅವಳನ್ನು ತನ್ನ ಪಾಠಶಾಲೆಯಲ್ಲಿ ಕಲಿಸಲು ಆಹ್ವಾನಿಸುತ್ತಾನೆ. ಆಕೆಯು ಎಗ್ಡನ್ ಹೀಥ್ ಮತ್ತು ಅಲ್ಲಿನ ಗ್ರಾಮೀಣ ಜನರನ್ನು ದ್ವೇಷಿಸುತ್ತಿದ್ದುದರಿಂದ ಈ ಆಹ್ವಾನವನ್ನು ನಿರಾಕರಿಸುತ್ತಾಳೆ. ಆದರೆ ಈ ಭೇಟಿಯ ಪರಿಣಾಮವೆಂದರೆ ಕ್ಲಿಮ್ ಅಂದಚಂದದ ಯೂಸ್ಟೇಷಿಯಾಳನ್ನು ಮನಸಾರೆ ಪ್ರೀತಿಸಲು ತೊಡಗುತ್ತಾನೆ.

ಶ್ರೀಮತಿ ಯೋಬ್ರೈಟ್ ಕ್ಲಿಮ್ ಎಗ್ಡನ್ ಹೀಥ್‌ನಲ್ಲೇ ವಾಸಿಸಲು ನಿಶ್ಚಯಿಸುವುದನ್ನು ಯೂಸ್ಟೇಷಿಯಾಳ ಪ್ರಭಾವವೆಂದು ದೂರುತ್ತಾಳೆ. ತಾಯಿಗೂ ಮಗನಿಗೂ ಮಾತು ನಡೆದು ಅವನು ಮನೆಯನ್ನು ಬಿಟ್ಟು ಹೊರಗೆ ಹೋಗುತ್ತಾನೆ. ಯೂಸ್ಟೇಷಿಯಾಳೊಂದಿಗೆ ಅವನ ಮದುವೆಯು ಈ ಅಂತರವನ್ನು ಇನ್ನೂ ಹೆಚ್ಚಿಸುತ್ತದೆ. ಆದರೂ ಸ್ವಲ್ಪ ದಿನಗಳ ನಂತರ ಶ್ರೀಮತಿ ಯೋಬ್ರೈಟ್ ಒಂದಿಷ್ಟು ಹಣವನ್ನು ಕ್ರಿಸ್ಟಿಯನ್ ಕ್ಯಾಂಟಲ್ ಎಂಬುವವನಿಗೆ ಕೊಟ್ಟು ಅದನ್ನು ಅರ್ಧ ಕ್ಲಿಮ್‌ಗೂ ಅರ್ಧ ಟಾಮಸಿನ್‌ಳಿಗೂ ಕೊಡುವಂತೆ ಹೇಳುತ್ತಾಳೆ. ಕ್ರಿಸ್ಟಿಯನ್ ಜೂಜಾಟದಲ್ಲಿ ಆ ಹಣವನ್ನು ವೈಲ್ಡೀವ್‌ಗೆ ಸೋಲುತ್ತಾನೆ. ಆದರೆ ಡಿಗೊರಿ ಆ ಹಣವನ್ನು ವೈಲ್ಡೀವ್‌ನಿಂದ ಗೆದ್ದು ಅದಷ್ಟೂ ಟಾಮಸಿನ್‌ಗೇ ಸೇರಿದ್ದೆಂದು ಪೂರ್ತಾ ಹಣವನ್ನು ಟಾಮಸಿನ್‌ಗೆ ಕೊಡುತ್ತಾನೆ. ಶ್ರೀಮತಿ ಯೋಬ್ರೈಟ್ ವೈಲ್ಡೀವ್ ಕ್ರಿಸ್ಟಿಯನ್‌ನನ್ನು ಮೋಸಮಾಡಿರುವನೆಂದು ಅರಿಯುತ್ತಾಳೆ. ಆದರೆ ಅವಳಿಗೆ ಡಿಗೊರಿ ಆ ಹಣವನ್ನು ಗೆದ್ದುಕೊಂಡಿದ್ದುದು ತಿಳಿಯದೆ ವೈಲ್ಡೀವ್ ಹಣವನ್ನು ಯೂಸ್ಟೇಷಿಯಾಗೆ ಕೊಟ್ಟಿರುವನೆಂದು ಭಾವಿಸುತ್ತಾಳೆ. ಯೂಸ್ಟೇಷಿಯಾಳನ್ನು ಕಂಡಾಗ ಅವಳನ್ನು ವೈಲ್ಡೀವ್‌ನಿಂದ ಅವಳು ಹಣವನ್ನು ಪಡೆದದ್ದುಂಟೆ ಎಂದು ಕೇಳುತ್ತಾಳೆ. ಕುಪಿತಗೊಂಡ ಯೂಸ್ಟೇಷಿಯಾ ಕೋಪದ ರಭಸದಲ್ಲಿ ಅವಳು ಎಗ್ಡನ್‌ಹೀಥ್‌ನಲ್ಲೇ ಇರಬೇಕೆಂದು ಗೊತ್ತಿದ್ದರೆ ಕ್ಲಿಮ್‌ನಂಥವನನ್ನು ತಾನು ಎಂದೂ ಮದುವೆಯಾಗುತ್ತಲೇ ಇರಲಿಲ್ಲವೆಂದು ಹೇಳುತ್ತಾಳೆ. ಇಬ್ಬರು ಹೆಂಗಸರೂ ಕೋಪದಲ್ಲಿ ಭೇಟಿಯನ್ನು ಮುಕ್ತಾಯ ಮಾಡುತ್ತಾರೆ.

ಯೂಸ್ಟೇಷಿಯಾಳ ಮನಸ್ತಾಪ ಹೆಚ್ಚುವುದಕ್ಕೆ ಮತ್ತೊಂದು ಕಾರಣ ಸಿಗುತ್ತದೆ. ಕ್ಲಿಮ್ ಅತಿಯಾಗಿ ಓದುವುದರ ಮೂಲಕ ದೃಷ್ಟಿಮಾಂದ್ಯಕ್ಕೀಡಾಗುತ್ತಾನೆ. ಇದರಿಂದ ಯೂಸ್ಟೇಷಿಯಾ ಅವನೊಡನೆ ಪ್ಯಾರಿಸ್‌ಗೆ ಹೊರಟುಹೋಗುವ ಆಸೆ ನಿರಾಸೆಯಾಗುತ್ತದೆ. ಕ್ಲಿಮ್ ಸೌದೆ ಸೀಳುವ ಕೆಲಸಕ್ಕೆ ಕೈಹಾಕಿದಾಗ ಯೂಸ್ಟೇಷಿಯಾಳ ನಿರಾಸೆ ಮಿತಿಮೀರುತ್ತದೆ. ಈ ಸ್ಥಿತಿಯಲ್ಲಿದ್ದಾಗ ಅವಳು ಅಕಸ್ಮಾತ್ತಾಗಿ ವೈಲ್ಡೀವ್‌ನನ್ನು ಭೇಟಿಯಾದಾಗ ಅವಳಿಗೆ ಅವನಲ್ಲಿದ್ದ ಆಸಕ್ತಿ ಮರುಕಳಿಸುತ್ತದೆ. ಇವರಿಬ್ಬರನ್ನೂ ಒಟ್ಟಿಗೆ ನೋಡಿದ ಡಿಗೊರಿ ಶ್ರೀಮತಿ ಯೋಬ್ರೈಟ್ ತಾನು ಇದರ ಬಗ್ಗೆ ಪ್ರಯತ್ನಿಸುತ್ತೇನೆಂದು ಹೇಳುತ್ತಾಳೆ.

ಆದರೆ ಶ್ರೀಮತಿ ಯೋಬ್ರೈಟ್‌ಳು ಮಗ ಮತ್ತು ಸೊಸೆಯನ್ನು ನೋಡಲು ನಡುಹಗಲಿನಲ್ಲಿ ಎಗ್ಡನ್ ಹೀಥ್ ಮೇಲೆ ಪ್ರವಾಸ ಮಾಡಿದ್ದು ಆಕೆಗೆ ಗಂಡಾಂತರವಾಗಿ ಪರಿಣಮಿಸುತ್ತದೆ. ಮನೆಗೆ ಸುಮಾರು ದೂರವಿದ್ದಾಗಲೇ ಅವಳು ತನ್ನ ಮಗ ಮನೆಯೊಳಕ್ಕೆ ಹೋದುದನ್ನು ನೋಡುತ್ತಾಳೆ. ಸ್ವಲ್ಪ ಸುಧಾರಿಸಿಕೊಳ್ಳಲು ಒಂದು ದಿಬ್ಬಕ್ಕೆ ಒರಗಿ ನಿಂತಾಗ ಇನ್ನೊಬ್ಬ ಗಂಡಸು ಮನೆಯೊಳಕ್ಕೆ ಹೋದುದನ್ನು ಗಮನಿಸಿದರೂ ಅವಳಿಗೆ ಆ ದೂರದಿಂದ ಅದು ವೈಲ್ಡೀವ್ ಎನ್ನುವುದು ತಿಳಿಯಲಿಲ್ಲ. ಸುಮಾರು ಇಪ್ಪತ್ತು ನಿಮಿಷ ವಿಶ್ರಾಂತಿಯನ್ನು ಪಡೆದು ಮತ್ತೆ ಅವಳು ಕ್ಲಿಮ್‌ನ ಮನೆಗೆ ಬಂದು ಬಾಗಿಲನ್ನು ತಟ್ಟಿದಾಗ ಯಾರೂ ಬಾಗಿಲನ್ನು ತೆರೆಯುವುದಿಲ್ಲ. ಇದು ತನ್ನ ಮಗ ತನ್ನ ಮೇಲಿನ ಸಿಟ್ಟನ್ನು ತೋರಿಸುವ ರೀತಿಯೆಂದು ಬಗೆದು ಅವಳು ಹಿಂದಿರುಗಲು ಮೊದಲು ಮಾಡುತ್ತಾಳೆ. ಸುಸ್ತಿನಿಂದ ಸ್ವಲ್ಪ ಹೊತ್ತು ಕುಳಿತು ಮತ್ತೆ ಹೋಗೋಣವೆಂದು ಕುಳಿತುಕೊಂಡಾಗ ಒಂದು ವಿಷಸರ್ಪವು ಅವಳನ್ನು ಕಚ್ಚುತ್ತದೆ. ತನ್ನ ಮಗನು ಬೆಳಗಿನಿಂದ ಕೆಲಸಮಾಡಿದ್ದು ಆಯಾಸದಿಂದ ಮನೆಯಲ್ಲಿ ನಿದ್ದೆ ಮಾಡುತ್ತ ಮಲಗಿದ್ದನೆಂದು ಅರಿಯದೆಯೇ ಅವಳು ಅಸುವನ್ನು ನೀಗುತ್ತಾಳೆ. ಯೂಸ್ಟೇಷಿಯಾ ಅನಂತರ ಅವಳ ಗಂಡನಿಗೆ ಹೇಳುತ್ತಾಳೆ — ಅವನೇ ಬಾಗಿಲು ತೆಗೆಯುತ್ತಾನೆಂದುಕೊಂಡದ್ದರಿಂದ ತಾನು ಬಾಗಿಲನ್ನು ತೆಗೆಯಲಿಲ್ಲವೆಂದು. ಆದರೆ ಅವಳು ಬಾಗಿಲನ್ನು ತೆಗೆಯದ್ದಕ್ಕೆ ನಿಜವಾದ ಕಾರಣವೆಂದರೆ ತಾನು ಮತ್ತು ವೈಲ್ಡೀವ್ ಇಬ್ಬರೂ ಆಗ ಮನೆಯಲ್ಲಿಯೇ ಇದ್ದುದು ಪತ್ತೆಯಾಗಿಬಿಡುತ್ತೆಂಬ ಭೀತಿಯಿಂದ.

ಕ್ಲಿಮ್ ನಿದ್ದೆಯಿಂದ ಎದ್ದಾಗ ಅವನಿಗೆ ತನ್ನ ತಾಯಿಯನ್ನು ನೋಡಬೇಕೆನ್ನಿಸುತ್ತದೆ. ಅವಳ ಮನೆಯತ್ತ ಹೀಥ್ ಮೇಲೆ ಬರುತ್ತಿದ್ದಾಗ ಅವಳ ಮೃತಶರೀರ ಅವನಿಗೆ ಸಿಕ್ಕುತ್ತದೆ. ಅವಳು ಹೀಥ್ ಮೇಲೆ ಆ ಹೊತ್ತಿನಲ್ಲಿ ಯಾಕೆ ತಿರುಗಾಡುತ್ತಿದ್ದಳೆಂದುಕೊಳ್ಳುತ್ತಾನೆ. ಆದರೆ ಅವನಿಗೆ ಯೂಸ್ಟೇಷಿಯಾ ತನ್ನ ತಾಯಿಗೆ ಮನೆಯ ಬಾಗಿಲನ್ನು ತೆರೆಯದಿದ್ದುದೂ ವೈಲ್ಡೀವ್ ಆಗ ಅಲ್ಲಿಯೇ ಇದ್ದುದೂ ಗೊತ್ತಾದಾಗ ಅವನು ಯೂಸ್ಟೇಷಿಯಾಳನ್ನು ಮನೆಯಿಂದ ಹೊರಗೆ ಹೋಗಬೇಕೆಂದು ಆಜ್ಞಾಪಿಸುತ್ತಾನೆ. ಅವಳು ತನ್ನ ತಪ್ಪನ್ನು ಅರಿತು ಸದ್ದಿಲ್ಲದೆ ಮನೆಬಿಟ್ಟು ಹೋಗುತ್ತಾಳೆ.

ಯೂಸ್ಟೇಷಿಯಾ ತನ್ನ ತಾತನ ಮನೆಗೆ ಹಿಂದಿರುಗುತ್ತಾಳೆ. ತಾನು ಬೇರೆಯವರಿಗೆ ಉಂಟುಮಾಡಿದ ಉಪದ್ರವದಿಂದ ಬೇಸತ್ತ ಅವಳು ಮತ್ತೇನನ್ನೂ ಮಾಡಲು ದಿಕ್ಕು ಹರಿಯದೆ ಮತ್ತೆ ವೈಲ್ಡೀವ್‌ನನ್ನೇ ಭೇಟಿ ಮಾಡುತ್ತಾಳೆ. ಅನಿರೀಕ್ಷಿತವಾಗಿ ವೈಲ್ಡೀವ್‌ಗೆ ಹನ್ನೊಂದು ಸಾವಿರ ಪೌಂಡುಗಳ ನಿಧಿ ಒದಗುತ್ತದೆ. ಅವನು ಮತ್ತೆ ಯೂಸ್ಟೇಷಿಯಾಳನ್ನು ತನ್ನ ಜೊತೆಗೆ ದೇಶಾಂತರ ಹೋಗಲು ಆಹ್ವಾನಿಸುತ್ತಾನೆ. ಅವಳು ಅವನನ್ನು ಭೇಟಿ ಮಾಡಲು ಹೋಗುವ ಸಂದರ್ಭದಲ್ಲಿ ಕ್ಲಿಮ್ ಅವಳಿಗೆ ಮತ್ತೆ ತಮ್ಮ ಸಂಬಂಧವನ್ನು

ಮುಂದುವರೆಸಲು ಬರೆದ ಪತ್ರವು ಸಿಕ್ಕುವುದಿಲ್ಲ. ಈ ಸ್ನೇಹ ಪತ್ರವನ್ನು ಅವನು ಯೂಸ್ಟೇಷಿಯಾಳಿಗೆ ಬರೆಯಬೇಕೆಂದು ಟಾಮಸಿನ್ ಹೇಳಿ ಬರೆಸಿರುತ್ತಾಳೆ. ಆದರೆ ಎಗ್ಡನ್ ಹೀಥ್‌ನ ಕಗ್ಗತ್ತಲೆಯಲ್ಲಿ ಯೂಸ್ಟೇಷಿಯಾ ದಾರಿತಪ್ಪಿ ನೀರಿನೊಳಕ್ಕೆ ಬಿದ್ದು ಸಾಯುತ್ತಾಳೆ. ಸಮೀಪದಲ್ಲೇ ಇದ್ದ ವೈಲ್ಡೀವ್ ಅವಳನ್ನು ನೀರಿನಿಂದ ಹೊರಗೆಳೆಯಲು ಹೋಗಿ ತಾನೂ ನೀರುಪಾಲಾಗುತ್ತಾನೆ.

ಹಾರ್ಡಿ ಈ ಕಾದಂಬರಿಯನ್ನು ಮೊದಲು ಬರೆದಾಗ ಹೀಗೇ ಅದು ಪರ್ಯವಸಾನ ವಾಗಿತ್ತು. ಆದರೆ ಅನಂತರ ಭಾವುಕ ಓದುಗರನ್ನು ಸಂತೋಷಪಡಿಸಲು ಕೆಲವೊಂದು ಪುಟಗಳನ್ನು ಸೇರಿಸಿದನು. ಡಿಗೊರಿ ಟಾಮಸಿನ್‌ಳನ್ನು ಮದುವೆಯಾಗುತ್ತಾನೆ. ಕ್ಲಿಮ್ ಎಗ್ಡನ್ ಹೀಥ್ ಪ್ರದೇಶದಲ್ಲಿ ಉಪಾಧ್ಯಾಯನಾಗಿರುವುದರಿಂದ ಪ್ರಯೋಜನವಿಲ್ಲವೆಂದರಿತು ಅಲ್ಲಲ್ಲಿ ಅಲೆದಾಡುತ್ತಾ ಜನರಿಗೆ ಹಿತವಚನಗಳನ್ನು ಬೋಧಿಸುತ್ತಾ ಕಾಲಕಳೆಯುತ್ತಾನೆ.

ಹಾರ್ಡಿಯ ಕಾದಂಬರಿಗಳ ವೈಶಿಷ್ಟ್ಯವೆಂದರೆ ಇವು ಪ್ರಧಾನವಾಗಿ 'ದೃಶ್ಯಕಾವ್ಯ'ಗಳು. 'ದಿ ರಿಟರ್ನ್ ಆಫ್ ದಿ ನೇಟಿವ್'ನ ಕಥಾವಸ್ತುವನ್ನು ಒಂದು ದುರಂತನಾಟಕದ ರೀತಿಯಲ್ಲಿ ವ್ಯವಧಾನ ಮಾಡಿರುವುದನ್ನು ನೋಡಿದ್ದೇವೆ. ಪ್ರಕೃತಿಯ ವಿವರಣಕರ್ತೃವಾಗಿ ಈತನ ವಿವರಣಾ ಸಾಮರ್ಥ್ಯವನ್ನೂ ವ್ಯಷ್ಟಿಮಾನವನ ಲಕ್ಷಣಗಳನ್ನೂ ಗಮನಿಸುವವನಾಗಿ ಈತನ ವಿಶ್ಲೇಷಣಶಕ್ತಿಯನ್ನೂ ಮತ್ತು ಸಾಮಾನ್ಯ ಜನಜೀವನದ ಸಮಷ್ಟಿದ್ರಷ್ಟನಾಗಿ ಈತನ ತಾತ್ವಿಕದೃಷ್ಟಿಯನ್ನೂ ಪರಿಶೀಲಿಸಿದರೆ ನಮಗೆ ಹಾರ್ಡಿಯ ಬರಹಗಳ ಸಮಗ್ರ ಪ್ರಜ್ಞೆ ಮತ್ತು ಸಾಧನೆಯ ಮಹತ್ವ ಅರಿವಾಗುತ್ತದೆ. ಈ ಮೂರು ಬಗೆಯ ದೃಷ್ಟಿಯಿಂದಲೂ ಹಾರ್ಡಿಯ 'ದಿ ರಿಟರ್ನ್ ಆಫ್ ದಿ ನೇಟಿವ್' ಒಂದು ಮಹಾನ್ ಕಾದಂಬರಿಯೆಂದು ನಿಸ್ಸಂದೇಹವಾಗಿ ಹೇಳಬಹುದು.

'ದಿ ರಿಟರ್ನ್ ಆಫ್ ದ ನೇಟಿವ್' ಕಾದಂಬರಿಯ ಘಟನೆಗಳು ಎಗ್ಡನ್ ಹೀಥ್ ಎಂಬ ಕ್ಷೇತ್ರಕ್ಕೆ ಸೀಮಿತವಾಗಿರುವುದರಿಂದ ಪ್ರಾಚೀನ ನಾಟಕಗಳಲ್ಲಿನ 'ಯೂನಿಟಿ ಆಫ್ ಪ್ಲೇಸ್' (Unity of Place) ತಂತ್ರವನ್ನು ಪರಿಪಾಲಿಸಿದೆ. ಇಲ್ಲಿನ ಕಾರ್ಯಕ್ಷೇತ್ರದ ಹಿನ್ನೆಲೆಯಾಗಿ ನೈಸರ್ಗಿಕ ಪರಿಸರವನ್ನು ಅರ್ಥವತ್ತಾಗಿ ಅಳವಡಿಸಿಕೊಂಡಿರುವುದರಿಂದ ಮಾನವ ನಿರ್ಮಿತ ಜಗತ್ತು ಈ ಎಗ್ಡನ್ ಹೀಥ್‌ನ ಪ್ರಪಂಚದಲ್ಲಿ ಅಡಚಣೆಯನ್ನುಂಟುಮಾಡುವುದಿಲ್ಲ. ಈ ಕಾದಂಬರಿಯ ಒಂದು ಪಾತ್ರವನ್ನು ಬಿಟ್ಟು ಮಿಕ್ಕೆಲ್ಲರೂ ಈ ಪರಿಸರದ ಅನುಗಾಮಿಗಳೇ ಆಗಿರುತ್ತಾರೆ. ಆದ್ದರಿಂದ ಈ ಕಾದಂಬರಿಯು ಹಾರ್ಡಿಯು ನಿಸರ್ಗದ ಬಗ್ಗೆ ತಾಳಿರುವ ಮನೋಭಾವನೆಯನ್ನು ವ್ಯಕ್ತಪಡಿಸುತ್ತದೆಯೆಂದರೆ ತಪ್ಪಾಗಲಾರದು. ಎಗ್ಡನ್ ಹೀಥ್ ಹಾರ್ಡಿಯ 'ವೆಸ್ಸೆಕ್ಸ್' ಪ್ರಾಂತ್ಯದ ಹೃದಯವೆನ್ನಬಹುದು. ಇದು ಡಾರ್‌ಚೆಸ್ಟರ್‌ನಿಂದ ಬಾರ್ನಿಮತ್‌ವರೆಗೂ ಹರಡಿಕೊಂಡಿರುವ ವ್ಯವಸಾಯಕ್ಕೆ ವಿರುದ್ಧವಾದ ಸವಾಲನ್ನು

ಹಾಕುವ ಮಾನವನ ಕೈವಾಡವನ್ನು ದಿಟ್ಟವಾಗಿ ನಿರಾಕರಿಸಿ ನಿಂತಿರುವ ತನ್ನದೇ ಆದ ಅನಿರ್ವಾಚ್ಯವಾದ ಆಕರ್ಷಕತೆಯಿಂದ ಕೂಡಿದ ಅಜೇಯವಾದ ಬಂಜರುಭೂಮಿ. ಕಾದಂಬರಿಯ ಓದುಗರ ಪ್ರಜ್ಞೆಯಲ್ಲಿ ಈ 'ಹೀಥ್'ನ ಕಳಶಪ್ರಾಯವಾದ ಬೆಟ್ಟ ರೈನ್‌ಆರೋ. ಎಗ್ಡನ್ ಹೀಥ್‌ನಲ್ಲಿ ಸಂಚಾರ ಮಾಡಿರುವವರ ಪ್ರತ್ಯಕ್ಷಪ್ರಮಾಣದ ಪ್ರಕಾರ ಎಗ್ಡನ್ ಒಂದು ನಿರ್ಜೀವ ಪ್ರದೇಶವಲ್ಲ. ಅದು ಸುಮಾರು ಹೊತ್ತು ಯಾವುದೇ ಒಂದೇ ಒಂದು ಭಾವವನ್ನು ತಾಳಿರುವುದಿಲ್ಲ. ಪ್ರಕೃತಿಯು ಸತತವಾಗಿ ಬದಲಾಯಿಸುವ ಅತಿ ಸೂಕ್ಷ್ಮವಾದ ಭಾವನೆಗಳನ್ನೂ ಸಹ ತಕ್ಷಣ ನಿರೂಪಿಸುವ ಒಂದು ಸಜೀವವಾದ ಪ್ರತೀಕ ಎಗ್ಡನ್. ಋತುಗಳು ಬದಲಾದಂತೆಲ್ಲಾ ಎಗ್ಡನ್‌ನ ಮುಖಕಾಂತಿಯೂ ಬದಲಾಗುವುದನ್ನು ಹಾರ್ಡಿಯು ತನ್ನ ಬಾಲ್ಯದಲ್ಲೇ ಮನಗಂಡಿದ್ದುದು ಈತನ ಈ ಕಾದಂಬರಿಯಲ್ಲಿ ಅನೇಕ ಶಬ್ದಚಿತ್ರಗಳ ಮೂಲಕ ಸ್ಪಷ್ಟವಾಗಿ ಕಂಡುಬರುತ್ತದೆ. ಎಗ್ಡನ್ ಹೀಥ್ ಹಾರ್ಡಿಯ ಬೃಹತ್ ನಾಟಕವಾದ 'ದಿ ಡೈನಾಸ್ಟ್ಸ್'(The Dynasts)ನಲ್ಲೂ ಮತ್ತು ಮತ್ತೊಂದು ದುರಂತ ಕಾದಂಬರಿಯಾದ 'ಟೆಸ್'ನಲ್ಲೂ ಹಿನ್ನೆಲೆಯಾಗಿ ಬಂದರೂ 'ದಿ ರಿಟರ್ನ್ ಆಫ್ ದಿ ನೇಟಿವ್'ನಲ್ಲಿರುವಷ್ಟು ಅರ್ಥಪೂರ್ಣವಾದ ಪ್ರಾಮುಖ್ಯತೆಯನ್ನು ಇನ್ನೆಲ್ಲೂ ಗಳಿಸಿಲ್ಲ.

ಈ ಎಗ್ಡನ್ ಹೀಥ್ ಅನ್ನು ಹಾರ್ಡಿ ತನ್ನ ಪ್ರಧಾನಪಾತ್ರಗಳಾದ ಯೂಸ್ಟೇಷಿಯಾ ಮತ್ತು ಕ್ಲಿಮ್‌ರ ನಡುವೆ ಇರುವ ಅಂತರವನ್ನು ಸ್ಪಷ್ಟಗೊಳಿಸಲು ಉಪಯೋಗಿಸಿರುವುದನ್ನು ಗಮನಿಸಿದರೆ ನಮಗೆ ಹಾರ್ಡಿಯ ಪಾತ್ರ ಸಂಯೋಜನೆ ಮತ್ತು ವಿಶ್ಲೇಷಣಾತತ್ವದ ಅರಿವಾಗುತ್ತದೆ. ಯೂಸ್ಟೇಷಿಯಾಗೆ ಎಗ್ಡನ್ ಪರದೇಶ ; ಕ್ಲಿಮ್‌ಗೆ ಅದು ತೌರೂರು. ಯೂಸ್ಟೇಷಿಯಾ ಅದನ್ನು ಎಷ್ಟು ದ್ವೇಷಿಸುತ್ತಾಳೆಯೋ ಕ್ಲಿಮ್ ಅದನ್ನು ಅಷ್ಟೇ ತೀವ್ರತೆಯಿಂದ ಪ್ರೀತಿಸುತ್ತಾನೆ. ಇದರಿಂದಲೇ ಈ ಕಾದಂಬರಿಯಲ್ಲಿ ಮಾನವ ಝುಂಝಾಟದ ದುರಂತಪ್ರಜ್ಞೆಯನ್ನು ಪ್ರತಿಪಾದಿಸಿರುವ ತಂತ್ರವನ್ನು ಅರ್ಥಮಾಡಿಕೊಳ್ಳಬಹುದು – ಕ್ಲಿಮ್ ಮತ್ತು ಯೂಸ್ಟೇಷಿಯಾ ಇವರ ದುರಂತಪ್ರೇಮದ ನಿರೂಪಣೆಯ ಮೂಲಕ. ಹಾರ್ಡಿಯ ವ್ಯಕ್ತಿಗಳು ಪ್ರಧಾನವಾಗಿ ಭಾವಜೀವಿಗಳು – ಬುದ್ಧಿಜೀವಿಗಳಲ್ಲ. ಇದರಿಂದಾಗಿ ಈತನ ಪಾತ್ರಗಳು ಒಂದು ಬಗೆಯ ದುರಂತಪ್ರಜ್ಞೆಯ ಗಾಂಭೀರ್ಯದಿಂದ ಶೋಭಿಸುತ್ತವೆ. ಸಣ್ಣಪುಟ್ಟ ವ್ಯವಹಾರಗಳ ಬುದ್ಧಿವಂತಿಕೆಯ ಹಗರಣಗಳು ಈತನ ಕಾದಂಬರಿಗಳಲ್ಲಿ ವಿರಳ. ಯೂಸ್ಟೇಷಿಯಾ ವೈಳ ಪಾತ್ರನಿರೂಪಣೆಯೊಂದನ್ನೇ ಗಮನಿಸಿದರೂ ಸಾಕು – ಹಾರ್ಡಿಯ ಪಾತ್ರದೃಷ್ಟಿಯ ನಿದರ್ಶನವಾಗಿ. ಯೂಸ್ಟೇಷಿಯಾಳ ವರ್ಣನೆಯ ಒಂದೆರಡು ವಾಕ್ಯಗಳ ಭಾವಾನುವಾದವನ್ನು ಮಾತ್ರ ಇಲ್ಲಿ ಗಮನಿಸಲು ಸಾಧ್ಯ – "ಯೂಸ್ಟೇಷಿಯಾ ದೇವತೆಗಳನ್ನು ತಯಾರು ಮಾಡುವ ಪದಾರ್ಥದಿಂದಲೇ ಸೃಷ್ಟಿಸಲ್ಪಟ್ಟಿದ್ದಳು. ಆಕೆಯು ಒಲಿಂಪಸ್ ಪರ್ವತದ ಮೇಲೆ ಹೆಚ್ಚೇನೂ ಮಾರ್ಪಾಡಿಲ್ಲದೆಯೆ ವಾಸಿಸಬಹುದಿತ್ತು. ಆಕೆಯ ಭಾವೋದ್ದೀಪ್ತಸ್ವಭಾವ ಮತ್ತು ಅಂತಃಸ್ಫೂರ್ತಿಗಳು ಒಬ್ಬ ಮಾದರಿ

ದೇವತೆಗೆ ಸದ್ಗುಣಗಳಾಗಬಹುದಿದ್ದುವು – ಆದರೆ ಅವು ಮಾದರಿ ಸ್ತ್ರೀಗೆ ಸದ್ಗುಣಗಳಾಗಿರಲು ಸಾಧ್ಯವಿರಲಿಲ್ಲ... ಆಕೆಯ ಕೂದಲಿನ ಕಪ್ಪುಬಣ್ಣ ಒಂದು ಇಡೀ ಕೃಷ್ಣಪಕ್ಷದ ಕಗ್ಗತ್ತಲೆಯನ್ನು ಕಡೆಗಾಣಿಸುವಂತಿತ್ತು. ಮಾನವನ ಜೀವಾತ್ಮವು ಕಣ್ಣಿಗೆ ಕಾಣುವ ಬಣ್ಣವನ್ನು ತಾಳಬಹುದಾಗಿದ್ದರೆ ಅವಳ ಆತ್ಮದ ಬಣ್ಣ – ಬೆಂಕಿ ಕೆಂಪು.... ಅತೀ ಉದ್ರೇಕದಿಂದ ಆಕೆಯನ್ನು ಪ್ರೀತಿಸಬೇಕೆಂಬುದೇ ಅವಳ ಜೀವನದ ಗುರಿ. ಈ ಅಥವಾ ಆ ವ್ಯಕ್ತಿ ತನ್ನನ್ನು ಪ್ರೀತಿಸಬೇಕೆಂಬುದಕ್ಕಿಂತ ಹೆಚ್ಚಾಗಿ ಪ್ರೇಮದ ಘನೀಭೂತವಾದ ಒಬ್ಬ ಮೂರ್ತಿಯು ತನ್ನನ್ನು ಆರಾಧಿಸಬೇಕೆಂಬುದೇ ಈ ಪ್ರೇಮದೇವತೆಯ ಅಭಿಲಾಷೆ''

ಹಾರ್ಡಿಯ ಜೀವನ ದೃಷ್ಟಿಯನ್ನು ಒಂದೇ ಮಾತಿನಲ್ಲಿ ಸಂಕ್ಷೇಪಿಸಬಹುದಾದರೆ ಅದನ್ನು ಮಾನವನಿಗೂ ಮತ್ತು ಸರ್ವಶಕ್ತವಾದ ಮತ್ತು ಔದಾಸೀನ್ಯಯುತವಾದ ವಿಧಿ ಇವುಗಳ ನಡುವೆ ನಡೆಯುವ ನಿರಂತರವಾದ ತುಮುಲವೆಂದು ಹೇಳಬಹುದು. ಈ ತುಮುಲವು ಆತನ ಜೀವನದೃಷ್ಟಿಗೆ ಒಂದು ಅರ್ಥವತ್ತಾದ ಚೌಕಟ್ಟನ್ನು ಒದಗಿಸುತ್ತದೆ. ಹಾರ್ಡಿಯ ಪ್ರಕಾರ ಮಾನವಜೀವನವೆಂಬ ನಾಟಕದಲ್ಲಿ ಮಾನವ ಮತ್ತು ಅಂಧವಿಧಿ ಇವುಗಳ ಘರ್ಷಣೆ ಉಂಟಾಗುತ್ತದೆ. ಮಾನವನ ದುರಂತವೆಂದರೆ ಸರ್ವಶಕ್ತ ವಿಧಿಯ ಕೈಗೊಂಬೆಯಾಗಿ ದುಃಖಕ್ಕೀಡಾಗುವುದು. ಹೀಗಾಗಿ ಹಾರ್ಡಿಯ ದೃಷ್ಟಿಯಲ್ಲಿ ಮಾನವನ ಘರ್ಷಣೆ ಇನ್ನೊಬ್ಬ ಮಾನವನನ್ನು ಎದುರಿಸುವುದರಲ್ಲಿಯೂ ಅಲ್ಲ; ಮಾನವ ನಿರ್ಮಿತ ಸಾಮೂಹಿಕ ಸಂಸ್ಥೆಗಳ ಎದುರಿಗೂ ಅಲ್ಲ. ಮಾನವನ ಶತ್ರು ಅಮಾನುಷವಾದ ಒಂದು ಯಾಂತ್ರಿಕಶಕ್ತಿ. ಆದ್ದರಿಂದ ಸಾಮಾನ್ಯ ದೃಷ್ಟಿಯಲ್ಲಿ ಕೆಟ್ಟವರೆನಿಸಿಕೊಳ್ಳುವವರೂ ಸಹ ಹಾರ್ಡಿಯ ದೃಷ್ಟಿಯಲ್ಲಿ ವಿಧಿಯ ಪರಿಧಿಯಲ್ಲಿಯೇ ಇರುವುದರಿಂದ ಅವರು ಮಾಡುವ ಕಾರ್ಯಗಳು ಅವರನ್ನೂ ಸಹ ವಿಧಿಕಿಂಕರರನ್ನಾಗಿಯೇ ಪರಿರ್ತಿಸುತ್ತವೆ. ವಿಧಿ ಎನ್ನುವುದು ಕಣ್ಣಿಗೆ ಕಾಣದಿರುವ ಶಕ್ತಿಯಾದ್ದರಿಂದ ಹಾರ್ಡಿಯು ಇದನ್ನು ಬೇರೆ ಬೇರೆ ರೀತಿಯಲ್ಲಿ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸುತ್ತಾನೆ. ಸಾಮಾನ್ಯವಾಗಿ ಈ ಸರ್ವಶಕ್ತವಿಧಿಯು ಎರಡು ರೂಪಗಳನ್ನು ತಾಳುತ್ತದೆ— ಆಕಸ್ಮಿಕತೆ ಮತ್ತು ಪ್ರಣಯ. ಈ ಆಕಸ್ಮಿಕತೆಯ ಸರ್ವಶಕ್ತಿತ್ವದ ನಿರೂಪಣೆಯೇ ಹಾರ್ಡಿಯ ವಿಶಿಷ್ಟವಾದ ದೃಷ್ಟಿ. ಮತ್ತಾವ ಕಾದಂಬರಿಕಾರನ ದೃಷ್ಟಿಯಲ್ಲೂ ಆಕಸ್ಮಿಕತೆಯು ಒಂದು ಕಾದಂಬರಿಯ ಅನೇಕ ಘಟನೆಗಳನ್ನು ಈ ರೀತಿಯಲ್ಲಿ ಪ್ರಭಾವಗೊಳಿಸುವುದಿಲ್ಲ. ವಿಧಿಯು ಹೇಗೆ ಪ್ರವರ್ತಿಸುವುದೆಂದು ಮಾನವನ ಬುದ್ಧಿಶಕ್ತಿಯು ತಿಳಿಯಲಸಾಧ್ಯವಾದ್ದರಿಂದ ವಿಧಿಯೆದುರು ಮಾನವನ ಅಲ್ಪಶಕ್ತಿಯು ಕೇಡಿಗೀಡಾಗುತ್ತದೆ. ಈ ನಿರಾಶಾವಾದವನ್ನು ನಾವು 'ದಿ ರಿಟರ್ನ್ ಆಫ್ ದಿ ನೇಟಿವ್'ನಲ್ಲಿ ಕಾಣಬಹುದು.

ಹಾರ್ಡಿಯನ್ನು ತತ್ವಜ್ಞಾನಿಯೆಂದು ಪರಿಗಣಿಸದೆಹೋದರೂ ಈತನು ಮಾನವ ಜೀವನದ ಬಗ್ಗೆ ತನ್ನದೇ ಆದ ಒಂದು ಸುಸಂಸ್ಕೃತ ನಿಲುವನ್ನು ತಾಳಿದ್ದನೆಂದು

ನಿಸ್ಸಂದೇಹವಾಗಿ ಹೇಳಬಹುದು. ಜೀವನದ ಘಟನೆಗಳನ್ನೂ ಆಗುಹೋಗುಗಳನ್ನೂ ಬಿಡಿಬಿಡಿಯಾಗಿ ನೋಡಿ ಅವು ಹೀಗೆ ಎಂದು ತೋರಿಸುವುದರ ಜೊತೆಗೆ ಅವುಗಳ ಬಗ್ಗೆ ಸಮಷ್ಟಿದೃಷ್ಟಿಯೊಂದನ್ನು ದರ್ಶಿಸಿದ್ದನೆಂದು ಹೇಳಬಹುದು. ಹಾರ್ಡಿ 1887ರಲ್ಲಿ ಪ್ರಕಟಿಸಿದ 'ದಿ ವುಡ್‌ಲ್ಯಾಂಡರ್ಸ್' (The Woodlanders) ಕಾದಂಬರಿಯಿಂದ ಸಮಾಪ್ತಿಗೊಳಿಸಿದ್ದರೆ ಈಗ ಆತನ ಬಗ್ಗೆ ಇರುವ ನಿರಾಶಾವಾದಿತ್ವದ ಆಪಾದನೆ ಸ್ವಲ್ಪದರಮಟ್ಟಿಗೆ ತಪ್ಪುತ್ತಿತ್ತೋ ಏನೋ. ಇದಾದ ಮೇಲೆ ಬಂದ 'ಟೆಸ್' (1891) ಮತ್ತು 'ಜೂಡ್' (1895) ಕಾದಂಬರಿಗಳು ಈತನನ್ನು ನಿರಾಶಾವಾದದ ಪ್ರತಿನಿಧಿಯನ್ನಾಗಿಸಿದುವು. 1878ರಲ್ಲಿ ಹೊರಬಂದ ಪ್ರಸ್ತುತ ಕಾದಂಬರಿ 'ದಿ ರಿಟರ್ನ್ ಆಫ್ ದಿ ನೇಟಿವ್'ನಲ್ಲೂ ಸಹ ಈ ತಾತ್ವಿಕ ನಿಲುವಿದೆ ಎಂದು ಹೇಳಬಹುದು.

ಹಾರ್ಡಿಯ ಭಿನ್ನಮಯತೆ ಎಂದರೆ ಈತನ ಆಧುನಿಕತೆ. ಈತನ ಕಾದಂಬರಿಯ ತಂತ್ರವು ಹತ್ತೊಂಬತ್ತನೆಯ ಶತಮಾನದ್ದಾದರೂ ಈತನ ಸಾಹಿತ್ಯಪ್ರಜ್ಞೆ ಇಪ್ಪತ್ತನೇ ಶತಮಾನದ್ದೇ ಸರಿ. ಹಾರ್ಡಿಯ ದುರಂತ ಪ್ರಜ್ಞೆಯು ಆತನ ಸಮಕಾಲೀನರಿಗಿಂತ ಹೆಚ್ಚಾಗಿ ಈಗಿನವರಿಗೆ ಹೆಚ್ಚು ಅರ್ಥಪೂರ್ಣವಾಗಿದೆ. ಜೀವನದಲ್ಲಿ ಹಾಸುಹೊಕ್ಕಾಗಿರುವ ಮುದಿತನ, ಅನಾರೋಗ್ಯ, ಪ್ರೇಮದಲ್ಲಿ ವಿರಸ, ಮನಸ್ತಾಪಗಳು, ಕಲಹಗಳು, ಬೆಪ್ಪುತನ, ಕ್ರೌರ್ಯ, ಜಂಭಗಾರಿಕೆ, ಸ್ವಪ್ರತಿಷ್ಠೆ ಪರನಿಂದೆ – ಎಲ್ಲದಕ್ಕಿಂತ ಹೆಚ್ಚಾಗಿ ವಿಧಿಯ ಕೈವಾಡ– ಇವುಗಳ ಅಸ್ತಿತ್ವವನ್ನು ಅರ್ಥವತ್ತಾಗಿ ಮನಗಂಡು, ಮನೋಜ್ಞವಾಗಿ, ರಸವತ್ತಾಗಿ ಚಿತ್ರಿಸಿರುವುದೇ ಹಾರ್ಡಿಯ ಕೊಡುಗೆ.

ಥಾಮಸ್ ಹಾರ್ಡಿ : 'ಟೆಸ್ ಆಫ್ ದ ಡಬೆರ್‌ವಿಲ್'

ಬಿ. ಸಿ. ರಾಮಚಂದ್ರ ಶರ್ಮ

ಇಂಗ್ಲಿಷ್ ಸಾಹಿತ್ಯದ ಒಂದು ದೊಡ್ಡ ಹೆಸರೆಂದರೆ ಥಾಮಸ್ ಹಾರ್ಡಿ. ಇಪ್ಪತ್ತೈದು ವರ್ಷಗಳವರೆಗೆ ಕಾದಂಬರಿಯ ಕ್ಷೇತ್ರದಲ್ಲಿ ಕೆಲಸ ಮಾಡಿ ಹತ್ತು ಹದಿನೈದು ಕಾದಂಬರಿಗಳನ್ನು ಬರೆದು, ತನ್ನ ಐವತ್ತಾರನೆಯ ವಯಸ್ಸಿನಲ್ಲಿ ಕಾದಂಬರಿ ಬರೆಯುವುದಕ್ಕೆ ವಿದಾಯ ಹೇಳಿದ. ಆದಾದ ಎರಡು ವರ್ಷಕ್ಕೆ ತನ್ನ ಮೊದಲನೆಯ ಕವನಸಂಕಲನವನ್ನು ಪ್ರಕಟಿಸಿದ ಹಾರ್ಡಿ ತನಗಿನ್ನೂ ಉಳಿದಿದ್ದ ಮೂವತ್ತು ವರ್ಷಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕವನಗಳನ್ನು ಬರೆದ.

ಈ ಶತಮಾನದ ಮೊದಲೆರಡು ದಶಕಗಳಲ್ಲಿ ಇಂಗ್ಲಿಷ್ ಸಾಹಿತ್ಯಕ್ಷೇತ್ರದಲ್ಲಿ ಹುಯಿಲೆಬ್ಬಿಸಿದ ಬೀಸುಗಾಳಿ ತನ್ನತ್ತ ಸುಳಿಯಲಿಲ್ಲವೇನೋ ಅನ್ನುವ ಹಾಗೆ ಕಾವ್ಯರಚನೆ ಮಾಡುತ್ತ ಸಾಗಿದ ಹಾರ್ಡಿಯ ಸಾಧನೆ, ಅವನ ಕಾಲಕ್ಕಲ್ಲದಿದ್ದರೂ, ಈ ಎರಡು ದಶಕಗಳಲ್ಲಿ ಬಹುಪಾಲು ಜನಕ್ಕೆ ಮನವರಿಕೆಯಾಗಿದೆ. ಅವನೆಷ್ಟು ದೊಡ್ಡ ಕಾದಂಬರಿಗಾರ ನಾಗಿದ್ದನೋ ಅಷ್ಟೇ ದೊಡ್ಡ ಕವಿಯೂ ಆಗಿದ್ದ ಅನ್ನುವ ಮಾತನ್ನು ಅನೇಕ ವಿದ್ವಾಂಸರು ಹೇಳಿದ್ದಾರೆ. ಇವೊತ್ತಿನ ಫಿಲಿಪ್ ಲಾರ್ಕಿನ್ ಅಂತಹ ಮುಖ್ಯ ಕವಿಗಳ ಮೇಲೆ ಹಾರ್ಡಿಯ ಪ್ರಭಾವ ಸ್ಪಷ್ಟವಾಗಿರುವುದೇ ಮೊದಲನೆಯ ಪಂಕ್ತಿಯಲ್ಲಿ ಅವನಿಗೆ ಮಣೆಯಿದೆ ಅನ್ನುವುದಕ್ಕೆ ಸಾಕ್ಷಿ. ಯೂರೋಪ್ ಹಾಗೂ ಅಮೆರಿಕದ ಸಾಹಿತ್ಯಗಳ ಪ್ರಭಾವವನ್ನು ಜೀರ್ಣಿಸಿಕೊಂಡ ಇಂಗ್ಲೆಂಡಿನ ಸಾಹಿತ್ಯ ಮತ್ತೆ ತನ್ನ ಬೇರುಗಳನ್ನು ಹುಡುಕತೊಡಗಿದೆ. ಇಂಗ್ಲಿಷ್ ಸಂಪ್ರದಾಯದೊಳಗಿದ್ದೇ ಉತ್ತಮ ಸಾಹಿತ್ಯ ರಚನೆ ಮಾಡಿದ ಹಾರ್ಡಿ ಮತ್ತೆ ರೆಲೆವೆಂಟ್ ಅನ್ನಿಸಿದ್ದರೆ ಇಂಥ ಅನ್ವೇಷಣೆಯೇ ಕಾರಣ. ಹಾರ್ಡಿಯಂತಹವರತ್ತ ಹಿಂದಿರುಗಿದ ಇಂಗ್ಲೆಂಡಿನ ಸಾಹಿತ್ಯ ಮತ್ತೆ ಪ್ರಯಾಣಕ್ಕೆ ಸಿದ್ಧವಾಗಿದೆ.

1940ರಲ್ಲಿ ವೆಸೆಕ್ಸ್ ಕೌಂಟಿಯ ಹಳ್ಳಿಯೊಂದರಲ್ಲಿ ಹುಟ್ಟಿದ ಹಾರ್ಡಿಯ ವ್ಯವಸ್ಥಿತ ವಿದ್ಯಾಭ್ಯಾಸ ಮುಗಿದದ್ದು ಅವನ ಹದಿನಾರನೆಯ ವಯಸ್ಸಿಗೆ. ಅಷ್ಟರಲ್ಲೇ ಫ್ರೆಂಚ್ ಜರ್ಮನ್ ಲ್ಯಾಟಿನ್ ಭಾಷೆಗಳನ್ನು ಕಲಿತಿದ್ದರೂ ಶಾಲೆಯ ಆಚೆಗೂ ಅವನು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ನಡೆದನೆನ್ನುವುದು ಆತನ ಕಾದಂಬರಿಗಳಿಂದ ತಿಳಿಯುತ್ತದೆ. ಹದಿನಾರನೆಯ ವಯಸ್ಸಿಗೆ ತಂದೆಯ ಸ್ನೇಹಿತನಾಗಿದ್ದ ವಾಸ್ತುಶಿಲ್ಪಿಯ ಕೆಳಗೆ ತರಬೇತಿಗೆಂದು ಕಚೇರಿ ಸೇರಿದ ಹುಡುಗ ಆರು ವರ್ಷಗಳವರೆಗೆ ಡಾರ್ಚೆಸ್ಟರಿನಲ್ಲಿದ್ದ. ಈ ಅವಧಿಯಲ್ಲೇ ಹಾರ್ಡಿ ತನ್ನ ಮೊದಲ ಕವನ ಬರೆದದ್ದು. ಲಂಡನ್ನಿಗೆ ಇಪ್ಪತ್ತೆರಡನೇ ವಯಸ್ಸಿಗೆ ಬಂದ ತರುಣನಿಗೆ ಅನಂತವೆನಿಸಿದಂಥ ಒಂದು ಲೋಕ ಬಾಗಿಲು ತೆರೆದು

ಕೈಮಾಡಿ ಕರೆದಂತಾಗಿರಬೇಕು. ಹುಚ್ಚು ಹಿಡಿಸುವ ಆ ಮಹಾನಗರದ ಥಿಯೇಟರು, ಕಲಾಶಾಲೆ ಹಾರ್ಡಿಯ ಮೇಲೆ ಪ್ರಭಾವ ಹಾಡಿತು. ಹಳ್ಳಿ ಹುಡುಗನಾಗಿದ್ದವನ ಕವಿ ಹೃದಯ ಲಂಡನ್ನಿನ ನೋಟಗಳಿಂದ, ನಾಟಕ ಚಿತ್ರಗಳಿಂದ, ಅಭ್ಯಾಸ ಮಾಡಿದ ಸಾಹಿತ್ಯದಿಂದ ಶ್ರೀಮಂತವಾಯಿತು.

ಐದು ವರ್ಷಗಳ ಲಂಡನ್ ವಾಸವಾದ ಮೇಲೆ ವಾಸ್ತುಶಿಲ್ಪಿಯಾಗಿ ತನ್ನ ಮೊದಲ ಕಂಪೆನಿಗೇ ಬಂದವನೇ ಕಾದಂಬರಿಯೊಂದನ್ನು ಬರೆದ. ಆಗ ಆರಂಭವಾದ ಕಾದಂಬರಿ ಕ್ಷೇತ್ರದ ಕೃಷಿ ಮುಂದಿನ ಇಪ್ಪತ್ತೈದು ವರ್ಷಗಳವರೆಗೂ ನಡೆಯಿತು. ಇಂಗ್ಲಿಷ್ ಸಾಹಿತ್ಯಕ್ಕೆ ಕೆಲವೊಂದು ಅಪೂರ್ವ ಕಾದಂಬರಿಗಳನ್ನು ಕೊಟ್ಟಿತು.

ಮೊದಲು ಧಾರಾವಾಹಿಯಾಗಿ 1873ರಲ್ಲಿ, ಪುಸ್ತಕದ ರೂಪದಲ್ಲಿ ಅದರ ಮುಂದಿನ ವರ್ಷ, ಪ್ರಕಟವಾದ ಹಾರ್ಡಿಯ Far from the Madding Crowd ಆತನಿಗೆ ಜನಪ್ರಿಯತೆಯನ್ನು ತಂದಿತು. ಆ ಕಾದಂಬರಿಯ ಯಶಸ್ಸು, ಜೊತೆಗೆ ಅದೇ ತಾನೇ ಅವನು ಮದುವೆಯಾಗಿದ್ದ ಎಮ್ಮಾಳ ಪ್ರೋತ್ಸಾಹ, ಎರಡೂ ಸೇರಿಕೊಂಡು ಹಾರ್ಡಿ ಕೆಲಸ ಬಿಟ್ಟು ಬರಹದಿಂದಲೇ ಬದುಕುವ ನಿರ್ಧಾರ ಮಾಡಿದ. 1891ರಲ್ಲಿ ಆತನ ಕಾದಂಬರಿ, Tess of the Urbervilles, ಪ್ರಕಟವಾದರೂ ಆತನು ಅದನ್ನು ಬರೆದದ್ದು ಅದಕ್ಕೆ ಎರಡು ವರ್ಷಗಳ ಮೊದಲು. ಗ್ರಾಫಿಕ್ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಅದು ಅಚ್ಚಾದಾಗಲೇ ಮೆಚ್ಚಿಕೊಂಡಷ್ಟೇ ಜನ ಅದನ್ನು ಬೈದು, ಗಮನ ಸೆಳೆಯಿತು. ಆವೊತ್ತಿನ ಸಮಾಜ ಹೇಳಿಕೇಳಿ ಒಂದು ಕನ್ಸರ್ವೇಟಿವ್ ಸಮಾಜವಾಗಿತ್ತು ಅನ್ನುವದನ್ನೂ ಅಂದಿನ ವಿಕ್ಟೋರಿಯನ್ ಮೌಲ್ಯ ಮಡಿವಂತಿಕೆಗಳನ್ನೂ ನಾವು ಗಮನಕ್ಕೆ ತಂದುಕೊಂಡಾಗ ಆ ಕಾದಂಬರಿಗೆ ಬಂದ ಪ್ರತಿಕ್ರಿಯೆ ಸಹಜವೆನಿಸುವುದು. ಗ್ರಾಫಿಕ್ ಪತ್ರಿಕೆಯ ಸಂಪಾದಕನ ಅಪೇಕ್ಷೆಗನುಸಾರವಾಗಿ ಹಾರ್ಡಿ ಬದಲಾವಣೆ ಮಾಡಿ ಕೆಲವೊಂದು ಘಟನೆಗಳನ್ನು ಕೈಬಿಟ್ಟರೂ ಸಾಕಷ್ಟು ಜನ ಸಿಟ್ಟಿಗೆದ್ದರು. ಮದುವೆಯಾಗುವ ಮೊದಲೇ ತಾಯಿಯಾಗಿ ಕೊನೆಗೆ ಕೊಲೆ ಮಾಡಿದ ಹೆಣ್ಣೊಬ್ಬಳ ಆಗುಹೋಗುಗಳೇ ಟೆಸ್ ಕಾದಂಬರಿಯ ವಸ್ತು. ಇಂಥ ವಸ್ತುವನ್ನು ಎತ್ತಿಕೊಂಡದ್ದಲ್ಲದೇ ಕಾದಂಬರಿಯ ಪರಿಶೀರ್ಷಿಕೆಯಾಗಿ 'The Pure Woman' ಅನ್ನುವದನ್ನು ಹಾರ್ಡಿ ಸೇರಿಸಿದ್ದು ಜನರ ಮುಖಕ್ಕೆ ರಾಚಿದಂತಾಗಿರಬೇಕು. ಪತಿತಳೊಬ್ಬಳ ಕಥೆಯನ್ನು ಪರಿಶುದ್ಧಳ ಕಥೆಯೆಂದದ್ದು ಗಾಯಕ್ಕೆ ಬರೆಯೆಳೆದ ಹಾಗಾಗಿರಬೇಕು.....

'ಟೆಸ್' ಬರೆದ ಐದು ವರ್ಷಗಳಾದ ಮೇಲೆ Jude the Obscure ಅನ್ನುವ ಕಾದಂಬರಿ ಬರೆದು ಹಾರ್ಡಿ ಮುಂದೆ ಕಾದಂಬರಿಯನ್ನು ಬರೆಯುವುದಿಲ್ಲವೆಂದು ನಿರ್ಧಾರ ಮಾಡಿದ. ಅಷ್ಟೊಂದು ಯಶಸ್ವಿಯಾಗಿ ಕೃಷಿಮಾಡಿದ ಕ್ಷೇತ್ರವನ್ನು ಅವನು ಕೈ

ಬಿಡುವುದಕ್ಕೆ ವಿಮರ್ಶಕರ ಹಾಗೂ ಓದುಗರ ನಿಂದೆಯೇ ಕಾರಣವೆನ್ನುವುದು ಸಂಪೂರ್ಣ ಸತ್ಯವಾಗಲಾರದು. ಅದೇ ಹೊತ್ತಿಗೆ ಅದುವರೆಗೂ ಸುಖವಾಗಿಯೇ ಇದ್ದ ಆತನ ಸಂಸಾರದಲ್ಲಿ ಒಡಕು ಕಾಣಹತ್ತಿದ್ದೂ ಕಾರಣವಾಗಿರಬಹುದು. ಖಚಿತವಾಗಿ ಎಂಥದನ್ನೂ ಹೇಳದಹಾಗೆ ಹಾರ್ಡಿ ಸಾಯುವ ಮೊದಲು ತನ್ನದಾದ ಖಾಸಗೀ ಪತ್ರಗಳನ್ನೂ ದಿನಚರಿಗಳನ್ನೂ ನಾಶ ಮಾಡಿದ್ದರಿಂದ, ಕೇವಲ ಊಹೆ ಮಾತ್ರ ಸಾಧ್ಯ.

ನಮಗೆ ಗೊತ್ತಿರುವುದಿಷ್ಟು: ಹಾರ್ಡಿ 1896ರ ಅನಂತರ ಕಾದಂಬರಿ ಬರೆಯಲಿಲ್ಲ; ಬದಲು ಕಾವ್ಯರಚನೆ ಮಾಡಿದ ; ತನ್ನ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಹೆಂಡತಿಯನ್ನು ಕಳೆದುಕೊಂಡವನು ಮತ್ತೆ ಮದುವೆಯಾದ. ತನ್ನ ಮೊದಲ ಮದುವೆಯ ದಿನಗಳು ಮತ್ತೆ ಮರುಕಳಿಸಿದಂತೆ ತುಂಬಾ ಆತ್ಮೀಯವಾದ ಕವನಗಳನ್ನು ಸತ್ತವಳ ಬಗೆಗೆ ಬರೆದ. ಅವುಗಳಲ್ಲಿ 'The Voice' ಅನ್ನುವ ಕವನ ತುಂಬ ಸೊಗಸಾದದ್ದು.

ಆಕ್ಸ್‌ಫರ್ಡ್ – ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಡಾಕ್ಟರೇಟಿನ ಸನ್ಮಾನ ಪಡೆದ ಹಾರ್ಡಿ ತನ್ನ ಎಂಬತ್ತೆಂಟನೆ ವಯಸ್ಸಿನಲ್ಲಿ ತೀರಿಕೊಂಡ. ತುಂಬುಬದುಕನ್ನು ನಡೆಸಿದ ಆತನ ದೇಹ ವೆಸ್ಟ್‌ಮಿನ್‌ಸ್ಟರ್ ಅಬ್ಬೆಯಲ್ಲಿ ಕವಿಗಳಿಗೆಂದೇ ಮೀಸಲಾದ ತಾವಲ್ಲಿ – ಹೃದಯ ಮೊದಲ ಹೆಂಡತಿಯ ಗೋರಿಯಲ್ಲಿ – ಮಣ್ಣಾಯಿತು.

2

ಏಳು ಭಾಗಗಳಲ್ಲಿ ಬೆಳೆಯುವ 'ಟೆಸ್ ಆಫ್ ದ ಡಬೆರ್‌ವಿಲ್' ಕಾದಂಬರಿ ಆರಂಭ ವಾಗುವುದು ಮಾರ್ಲಾಟ್ ಹಳ್ಳಿಯ ಮಧ್ಯವಯಸ್ಸಿನ ರೈತ, ಜಾನ್ ಡರ್ಬಿಫೀಲ್ಡ್, ಸಂಜೆ ಪಬ್ಬಲ್ಲಿ ಒಂದೆರಡು ಬಿಯರ್ ಆದಮೇಲೆ ಮನೆಗೆ ಹೋಗುತ್ತಿದ್ದಾಗಿನ ದೃಶ್ಯದಿಂದ. ಎದುರಿಗೆ ಸಿಕ್ಕ ಡಾರ್ಸನ್ ಟ್ರಿಂಗಮ್‌ನಿಂದ ತಾನು ಒಂದಾನೊಂದು ಕಾಲದಲ್ಲಿ ಶ್ರೀಮಂತನಾಗಿದ್ದ ಡಬೆರ್‌ವಿಲ್ ಮನೆತನಕ್ಕೆ ಸೇರಿದವನೆಂದೂ, ಡರ್ಬಿಫೀಲ್ಡ್ ಅನ್ನುವ ಹೆಸರು ಮೂಲದ ಅಪಭ್ರಂಶವೆಂದೂ ತಿಳಿದು ಕಲಕಿತನಾಗುತ್ತಾನೆ. ತನ್ನ ಪೂರ್ವಜರ ಆಸ್ತಿಪಾಸ್ತಿ ತನಗಿಲ್ಲ ದಿದ್ದರೂ, ಧುತ್ತನೆ ಸರ್ ಜಾನ್ ಆದವನು, ನಡೆದು ಮನೆಗೆ ಹೋಗುವುದು ಯೋಗ್ಯತೆಗೆ ಕುಂದೆಂದುಕೊಂಡು ಕುದುರೆಗಾಡಿಗೆ ಹೇಳಿಕಳಿಸುವಷ್ಟು ಬದಲಾಗುತ್ತಾನೆ.

ಹಳ್ಳಿಯ ಹೆಣ್ಣುಮಕ್ಕಳು ಮೆರವಣಿಗೆ ಹೋಗಿ ಬಿಳಿ ಬಟ್ಟೆಯಲ್ಲಿ ಕುಣಿಯುವ ಸಂಪ್ರದಾಯವನ್ನು ನಡೆಸಿಕೊಡುವ ಮೇ ತಿಂಗಳ ಬೆಚ್ಚಗಿನ ಸಂಜೆ ಅದು. ಅವರಲ್ಲಿ ಒಬ್ಬಳಾದ ಟೆಸ್ ತನ್ನ ತಂದೆ ಕುದುರೆಗಾಡಿಯಲ್ಲಿ ಕೂತು ಗಟ್ಟಿಯಾಗಿ ಹಾಡುತ್ತ ಹೋಗುವುದನ್ನು ಕಂಡು ನಾಚುತ್ತಾಳೆ. ಅರ್ಧ ಹುಡುಗಿ ಅರ್ಧ ಹೆಂಗಸಾದ ಟೆಸ್

ಕಾದಂಬರಿಯ ಪ್ರವೇಶ ಮಾಡುವುದು ಇಂಥದೊಂದು ಘಟನೆಯಿಂದ. ಕಾಲ್ನಡಿಗೆಯಲ್ಲಿ ಪ್ರವಾಸ ಹೊರಟ ಮೂವರು ಸೋದರರು ಗಳಿಗೆಯವರೆಗೆ ಈ ಕುಣಿತದ ಪ್ರೇಕ್ಷಕರಾಗಿರುವುದರಲ್ಲಿ, ಚಿಕ್ಕವನು ಬಂದು ಕುಣಿತದಲ್ಲಿ ಭಾಗಿಯಾಗುವುದರಲ್ಲಿ ಆ ಸಂಜೆ ಮುಗಿಯುತ್ತದೆ. ಟೆಸ್ ಆ ಯುವಕನ ಗಮನಕ್ಕೆ ಬಂದಿದ್ದರೂ ಕುಣಿತಕ್ಕೆ ಜೊತೆಗಾರ್ತಿಯಾಗಿ ಆತನು ಅವಳನ್ನು ಆರಿಸಿಕೊಳ್ಳುವುದಿಲ್ಲ.

ಮುಂದೆ ಹೆಮ್ಮರವಾಗಲಿರುವುದಷ್ಟನ್ನೂ ತನ್ನ ಅತಿ ಸಣ್ಣ ಮೈಯೊಳಗೆ ಬೀಜ ಅಡಗಿಸಿಕೊಂಡಿರುವಂತೆ, ಕೊಂಚ ಕಾಮಿಕ್ ಅನ್ನುವ ರೀತಿಯಲ್ಲಿ ನಡೆಯುವ ಆ ಸಣ್ಣ ಪ್ರಸಂಗ ಇಡೀ ಕಾದಂಬರಿಯನ್ನು ಒಳಗೊಂಡಿರುವುದು ನಮಗೆ ತಿಳಿಯುವುದು ಕ್ರಮ ಕ್ರಮವಾಗಿ. ತಾವು ಶ್ರೀಮಂತ ಮನೆತನದವರೆನ್ನುವ ಗುಂಗು ಟೆಸ್ಸಳ ತಂದೆ ತಾಯಿಗಳಿಗೆ ಹಿಡಿದಿತ್ತು. ಹತ್ತಿರದ ಟ್ರ್ಯಾಂಟ್‌ರಿಜ್ ಅನ್ನುವ ಸ್ಥಳದಲ್ಲಿ ಡಬೆರ್‌ವಿಲ್ ಹೆಸರಿನ ಶ್ರೀಮಂತ ಮಹಿಳೆಯೊಬ್ಬಳು ವಾಸವಾಗಿದ್ದಾಳೆಂದು ತಿಳಿದಾಗ ಅವರ ಕನಸು ರೆಕ್ಕೆ ಬಡಿಯಿತು. ಮಗಳನ್ನು ಆಕೆಯಲ್ಲಿಗೆ ಕಳಿಸಿ ತಮ್ಮ ನೆಂಟಸ್ತನವನ್ನು ಕುದುರಿಸಿಕೊಂಡರೆ ತಮಗೆ ಪ್ರಯೋಜನವಾಗುವುದಲ್ಲದೇ ಮಗಳಿಗೆ ಎಂದಾದರೂ ಮನೆತನದ ಶ್ರೀಮಂತ ಯುವಕನೊಬ್ಬನ ಜೊತೆ ಮದುವೆಯಾಗಬಹುದೆನ್ನುವ ಲೆಕ್ಕಾಚಾರ ಅವರಿಗಿತ್ತು. ತಂದೆತಾಯಿಗಳ ದೂರಾಲೋಚನೆ ಗೊತ್ತಾಗಿ ಟೆಸ್ ಪ್ರತಿಭಟಿಸಿದಳು. ಆಮೇಲೆ, ಒಂದು ದಿನ ತನ್ನ ಅಜಾಗರೂಕತೆಯ ಕಾರಣವಾಗಿ ಕುಟುಂಬದ ಜೀವನಾಧಾರವಾಗಿದ್ದ ಕುದುರೆ ಸತ್ತಿತೆಂದೇ ನಂಬಿಕೊಂಡ ಹುಡುಗಿ ಮನೆತನದ ಆ ಶ್ರೀಮಂತೆಯನ್ನು ಕಾಣಲು ಹೋದಳು.

ಟೆಸ್ ಹೋದಾಗ ಅವಳ ಭೇಟಿಯಾದದ್ದು ಶ್ರೀಮಂತೆಯ ಮಗನನ್ನು, ಕಣ್ಣು ಕಳೆದುಕೊಂಡು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದ ತಾಯಿಯನ್ನಲ್ಲ. ವಾಸ್ತವವಾಗಿ ಡಬೆರ್‌ವಿಲ್ ಮನೆತನಕ್ಕೆ ಆ ಜನ ಸೇರಿರಲಿಲ್ಲವೆಂದು ಯಾರಿಗೂ ಗೊತ್ತಿರಲಿಲ್ಲ. ದಾಯಾದಿಗಳಿರಬಹುದು ಅನ್ನುವ ಭ್ರಾಂತಿಯಲ್ಲಿ ತಾಯಿ ತಂದೆ ಒತ್ತಾಯಕ್ಕೆ ಸೋತು ಬಂದ ಟೆಸ್ಸಳ ಚೆಲುವು ಆ ತರುಣನ ಕಣ್ಣಿಗೆ ಹಿಡಿಸಿತು. ಅವಳನ್ನು ಬಿಟ್ಟುಕೊಡುವ ಮನಸ್ಸಾಗದೇ ತನ್ನ ತಾಯಿಯ ಹೆಸರಲ್ಲಿ ಆ ಎಸ್ಟೇಟಿನ ಕೋಳಿಗಳನ್ನು ನೋಡುವ ಕೆಲಸಕ್ಕೆ ಅವನು ಟೆಸ್ಸಳನ್ನು ಕರೆಸಿಕೊಂಡ. ಅವನಲ್ಲಿ ಎಳ್ಳಷ್ಟು ಪ್ರೀತಿಯಿರದಿದ್ದರೂ ಟೆಸ್ ಅವನೊಡ್ಡಿದ ಬಲೆಗೆ ಸಿಕ್ಕಿ ಬಸುರಾಗಿ, ಆದರೂ ಅವನಿಗೆ ಆ ವಿಷಯ ತಿಳಿಸದೇ, ತೌರಿಗೆ ಹಿಂದಿರುಗಿ ಹಡೆದು ಮಗುವನ್ನು ಕಳೆದುಕೊಂಡಳು.

ತೌರೂರಲ್ಲಿ ಇದ್ದವಳು ಒಂದು ದಿನ ಡಬೆರ್‌ವಿಲ್ ಮನೆತನದವರು ಹಿಂದೆ ಇದ್ದ ಒಂದು ಜಾಗದ ಡೇಯ್ರಿಯಲ್ಲಿ ಕೆಲಸ ಗಿಟ್ಟಿಸಿಕೊಂಡು ಹೊರಟುಹೋದಳು. ತನ್ನ ಮನೆತನ ವೈಭವದಲ್ಲಿ ಬದುಕಿದ್ದ ಸ್ಥಳವೆಂದು ಗೊತ್ತಿದ್ದು ಕೊಂಚ ಕುತೂಹಲದಿಂದಲೇ ಅವಳು ಆ ಕೆಲಸ ಹಿಡಿದಳು..

❑ ❑ ❑

ಏಂಜೆಲ್ ಕ್ಲೇರ್, ವರ್ಷಗಳ ಕೆಳಗೆ ಮಾರ್ಲಾಟಿನಲ್ಲಿ ಆ ಮೇ ತಿಂಗಳ ಸಂಜೆಯ ಕುಣಿತಕ್ಕೆ ಮೊದಲು ಪ್ರೇಕ್ಷಕನಾಗಿ ಆಮೇಲೆ ಭಾಗಿಯಾಗಿ ನಿಂತ ಯುವಕ, ಅದೇ ಡೇಯ್ರಿಯಲ್ಲಿ ಕೆಲಸ ಮಾಡುತ್ತಿದ್ದ. ಇಬ್ಬರಿಗೂ ಪರಸ್ಪರ ನೋಡಿದ್ದರ ಮಬ್ಬುಮಬ್ಬು ನೆನಪು. ಸ್ವಂತವಾಗಿ ಕೃಷಿ ಮಾಡುವದರ ಮೊದಲು ಕೆಲಸ ಕಲಿಯಲೆಂದು ಇಲ್ಲಿಗೆ ಬಂದವನು ಕ್ರಮಕ್ರಮವಾಗಿ ಟೆಸ್ ಬಗೆಗೆ ಪ್ರೀತಿ ಬೆಳೆಸಿಕೊಂಡ.

ಆ ಭಾಗದಲ್ಲಿ ತುಂಬ ಆಚಾರವಂತನೆಂದು ಪ್ರಖ್ಯಾತನಾಗಿದ್ದ ಎಮ್ಮಿಸ್ಟರಿನ ಪಾರ್ಸನ್ ಕ್ಲೇರಿನ್ ಮೂರನೆಯ ಮಗ ಏಂಜೆಲ್ ತನ್ನ ಅಣ್ಣಂದಿರಂತೆ ವಿಶ್ವವಿದ್ಯಾಲಯಕ್ಕೆ ಹೋಗಿ ಚರ್ಚಿನ ಕೆಲಸಕ್ಕೆ ನಿಲ್ಲುವ ಯೋಚನೆ ಮಾಡಿರಲಿಲ್ಲ. ದೇವರ ವಿಷಯಕ್ಕಿಂತ ಮನುಷ್ಯನ ವಿಷಯವೇ ಹೆಚ್ಚು ಮುಖ್ಯವೆಂದು ನಂಬಿದ್ದ ಹುಡುಗ ತನ್ನ ಮನೆಗೆ ಸಹಜವಾಗಿ ಬಂದಿದ್ದ ಕಟ್ಟುಕಟ್ಟಳೆಗಳ ವಿರುದ್ಧ ದಂಗೆಯೇಳುವ ಮನಸ್ಸನ್ನು ರೂಢಿಸಿಕೊಂಡಿದ್ದ – ನಗರದ ಬದುಕಿಗೆ, ಶ್ರೀಮಂತ ಜನರ ಒಣ ಆಡಂಬರಕ್ಕೆ ಬೆಲೆ ಕೊಡದ ಏಂಜೆಲ್ ಪರದೇಶದಲ್ಲಿ ಎಲ್ಲಾದರೂ ರೈತನಾಗಿ ಬದುಕುವ ಆಸೆಯಿಟ್ಟುಕೊಂಡಿದ್ದ.

ಪುಸ್ತಕ ಓದುವುದರಲ್ಲಿ, ಹಾರ್ಪ್ ವಾದ್ಯವನ್ನು ನುಡಿಸುವುದರಲ್ಲಿ ತನ್ನ ಬಿಡುವಿನ ಹೊತ್ತನ್ನು ಕಳೆಯುತ್ತಿದ್ದ ಅವನನ್ನು ಮೋಹಿಸದಿದ್ದ ಹುಡುಗಿ ಆ ಡೇಯ್ರಿಯಲ್ಲಿರಲಿಲ್ಲ. ಸುಸಂಸ್ಕೃತನಾಗಿದ್ದ ಅವನು ಕನಸಿಗನೂ ಆಗಿದ್ದದ್ದು ಅವನ ಆಕರ್ಷಣೆಗೆ ಕಾರಣವಾಗಿತ್ತು. ವಯಸ್ಸಿಗೆ ಮೀರಿದ ದುಃಖವನ್ನು ಆಗಲೇ ಅನುಭವಿಸಿದ್ದ ಟೆಸ್ಸಳಲ್ಲಿ ತನ್ನ ಅಮೂರ್ತ ಆಕಾಂಕ್ಷೆಗಳಿಗೆ ಪ್ರತಿಸ್ಪಂದಿಸುವ ಒಂದು ಚೇತನವನ್ನು ಅವನು ಕಂಡುಕೊಂಡ. ಅವಳಲ್ಲಿ ಎದ್ದು ಕಾಣುತ್ತಿದ್ದ ಮುಗ್ಧತೆ, ಜೊತೆಗೆ ಅವಳಿಗೆ ಅರಿವಿಲ್ಲದಂತೆ ಒಳಗಿಂದ ಹೊಮ್ಮಿ ನುಡಿಸುತ್ತಿದ್ದ ಒಂದು ಸೀರಿಯಸ್ ಮನೋಭಾವ ಅವನಿಗೆ ಹಿಡಿಸಿದವು. ಪ್ರೀತಿಸಿದ ಹೆಣ್ಣಿಗಿಂತ ಪ್ರೀತಿಸುವದರಲ್ಲಿ ಮಗ್ನನಾಗಿದ್ದ ಏಂಜೆಲ್ಲಿಗೆ ಟೆಸ್, ತನ್ನೆಲ್ಲ ಓದಿನಲ್ಲಿ ಅವನು ಕಂಡುಕೊಂಡಿದ್ದ ಅಷ್ಟೂ ಪ್ರೇಯಸಿಗಳ ತದ್ರೂಪಾದಳು. ಅವನ ರೊಮ್ಯಾಂಟಿಕ್ ಕಲ್ಪನೆಗೆ ಆಗ ಈಗ ವಾಸ್ತವವಾಗಿ ಪ್ರಕೃತಿಯ ಮಗುವಾಗಿದ್ದ ಟೆಸ್ ಸೂಜಿ ಚುಚ್ಚಿದರೂ ಅವನು ನೆಲಕ್ಕಿಳಿದು ಬರುವುದಕ್ಕೆ ಸಿದ್ಧನಾಗಿರಲಿಲ್ಲ. ಅವನು ಪ್ರೀತಿಸಿದ್ದು ರಕ್ತಮಾಂಸಗಳ ಒಬ್ಬ ಮುಗ್ಧ ಹುಡುಗಿಯನ್ನಲ್ಲ, ತನ್ನ ಮನಸ್ಸಿನ ಆದರ್ಶವೆನಿಸುವಂಥ ಒಂದು ಅಮೂರ್ತ ಕಲ್ಪನೆಯನ್ನು.

ಏಂಜೆಲ್ಲನ್ನು ಮನಸಾರೆ ಒಪ್ಪಿಕೊಂಡ ಟೆಸ್ ತನ್ನ ಪೂರ್ವದ ಕತೆಯನ್ನು ಅವನಿಗೆ ಹೇಳುವ ಹಲವಾರು ಪ್ರಯತ್ನಗಳನ್ನು ಮಾಡಿದರೂ ಅದು ಸಾಧ್ಯವಾಗದೇಹೋದದ್ದು ದುರಂತಕ್ಕೆ ಕಾರಣವಾಯಿತು. ಮದುವೆಗೆ ಮೊದಲು ಒಲ್ಲೆ ಅಂದವಳು ಕೊನೆಗೆ ಒಪ್ಪಿದಳು. ತನ್ನ ಚರಿತ್ರೆಯನ್ನು ಬಹಿರಂಗಪಡಿಸುವುದು ಅಗತ್ಯವೆಂದು ತಾಯಿ ಕಾಗದ

ಬರೆದು ಸೂಚಿಸಿದಾಗ ಟೆಸ್, ಏಂಜೆಲ್ಲಿನ ಹೃದಯದ ಶ್ರೀಮಂತಿಕೆಯಲ್ಲಿ ಪೂರ್ಣ ಶ್ರದ್ಧೆ ಇದ್ದು ಮದುವೆಯಾದ ಮೇಲೆ ವಿಷಯ ತಿಳಿಸುವ ಇತ್ಯರ್ಥಕ್ಕೆ ಬಂದಳು. ಆದರೂ ಅಳುಕು : ನಡೆದದ್ದನ್ನು ತಿಳಿಸುವ ಕಾಗದವೊಂದನ್ನು ಬರೆದು ಅವನಿದ್ದ ಕೊಠಡಿಯ ಬಾಗಿಲ ಕೆಳಗೆ ತೂರಿಸುತ್ತಾಳೆ. ಅವಳ ದುರಾದೃಷ್ಟ — ಕಾಗದ ಜಮಖಾನದ ಕೆಳಗೆ ಹೋಗಿ ಅವನ ಕಣ್ಣಿಗೇ ಬೀಳುವುದಿಲ್ಲ.

ಮದುವೆ ನಡೆದ ರಾತ್ರಿ : ಅವಳು ತನ್ನ ಹಿಂದಿನ ಇತಿಹಾಸವನ್ನು ತಿಳಿಸಿದಳು. ಕೆಲವೊಂದು ವಿಚಾರಗಳಲ್ಲಿ ತಂದೆ ಹಾಗೂ ಅಣ್ಣಂದಿರಷ್ಟೇ ಮಡಿವಂತನಾಗಿದ್ದ ಏಂಜೆಲ್ಲಿಗೆ ಪ್ರಪಂಚ ಕುಸಿದುಬಿದ್ದಹಾಗಾಯಿತು..

❑ ❑ ❑

ಏಂಜೆಲ್ ದೇಶ ಬಿಟ್ಟು ಬ್ರೆಸಿಲ್ಲಿಗೆ ಹೋದ. ಕೆಲವು ದಿನಗಳವರೆಗೆ ತೌರಿಗೆ ಬಂದ ಟೆಸ್ ಅಲ್ಲಿರಲಾರದೆ ಕೆಲಸ ಹಿಡಿದು ಬೇರೆ ಒಂದು ಜಾಗಕ್ಕೆ ಹೋದಳು. ಟೆಸ್ಸಳ ಬಗ್ಗೆ ತಾನೊಂದು ದೃಢ ನಿಲುವಿಗೆ ಬರುವವರೆಗೂ ತನ್ನೊಡನೆ ಅವಳು ಸಂಪರ್ಕವಿಟ್ಟು ಕೊಳ್ಳುವುದು ಬೇಡವೆಂದು ಹೇಳಿದ್ದ ಏಂಜೆಲ್ಲಿನಿಂದ ಯಾವ ಸುದ್ದಿಯೂ ಬರದೆ ತಿಂಗಳುಗಳು ಕಳೆದ ಮೇಲೆ ಒಂದು ದಿನ ಅವಳ ಮಗುವಿನ ತಂದೆ, ಅಲೆಕ್ ಡಬೆರ್‌ವಿಲ್ ಕಣ್ಣಿಗೆ ಬಿದ್ದ. ಪಾರ್ಸನ್ ಕ್ಲೇರನನ್ನು ಹೀಯಾಳಿಸಿ ಅವನ ಪ್ರಭಾವಕ್ಕೆ ಸಿಕ್ಕಿದ್ದ ಅಲೆಕ್ ಕ್ರೈಸ್ತಮತದ ಉಗ್ರ ಪ್ರಚಾರಕನಾಗಿದ್ದವನು, ಟೆಸ್ ಕಂಡಕೂಡಲೇ, ತನ್ನೆಲ್ಲ ನಂಬಿಕೆಗಳಿಗೂ ವಿದಾಯ ಹೇಳಿ ಅವಳ ಬೆನ್ನು ಹಿಡಿದ. ಆತನಿಗೆ ಅವಳ ಬಗ್ಗೆ ಪ್ರೀತಿಯಿತ್ತು. ಅವಳು ಅನುಭವಿಸಿದ ಕಷ್ಟಗಳ ಬಗ್ಗೆ ಅವನಿಗೆ ಗೊತ್ತಿರಲಿಲ್ಲ. ವಿಷಯ ತಿಳಿದಾಗ, ಪ್ರೀತಿಯ ಜೊತೆಗೇ ಅವಳಿಗೆ ಒಳ್ಳೆಯ ಬದುಕು ಸಾಧ್ಯವಾಗುವಂತೆ ಮಾಡಬೇಕೆಂದು ಅನ್ನಿಸಿದ್ದೂ ನಿಜ. ತಾನು ಮಾಡಿದ್ದಕ್ಕೆ ಪಶ್ಚಾತ್ತಾಪದ ರೂಪದಲ್ಲಿ ಅವಳಿಗೆ ನೆರಳಾಗಬೇಕೆಂದುಕೊಂಡ.

ತಾಯಿಯ ಕಾಯಿಲೆಯ ಬಗ್ಗೆ ತಿಳಿದ ಟೆಸ್ ಊರಿಗೆ ಹಿಂದಿರುಗಿದಾಗ ತಂದೆ ಸತ್ತ. ನಿರ್ಗತಿಕಳಾದ ತನ್ನ ತಾಯಿಯನ್ನೂ ಸೋದರ ಸೋದರಿಯರನ್ನೂ ಕಟ್ಟಿಕೊಂಡು ಟೆಸ್ ಊರು ಬಿಟ್ಟಳು.

ಈ ಮಧ್ಯೆ ಬ್ರೆಸಿಲ್ಲಿಗೆ ಹೋದ ಏಂಜೆಲ್ಲಿಗೆ ಸುಖವಿರಲಿಲ್ಲ. ಆರೋಗ್ಯ ಕೆಡುವುದರ ಜೊತೆಗೆ ರೈತನಾಗಿ ನೆಲಸುವುದು ಸಾಧ್ಯವಾಗಲಾರದೆಂದು ತಿಳಿದಿದ್ದ. ಟೆಸ್ಸಳ ಬಗೆಗೂ ಆತನ ಮನಸ್ಸು ಬದಲಾಗಿ ತನ್ನೊಳಗಿದ್ದ ಉತ್ಕಟ ಪ್ರೀತಿಯನ್ನು ಕಂಡುಕೊಂಡಿದ್ದ. ಇಂಗ್ಲೆಂಡಿಗೆ ವಾಪಸ್ಸಾಗುವ ನಿರ್ಧಾರ ಮಾಡಿದ. ಹಿಂದಿರುಗಿ ಬಂದ. ಅಷ್ಟರಲ್ಲಿ ವಿಷಯ ಕೈ ಮೀರಿಹೋಗಿತ್ತು. ತಾನು ಬರೆದ ಪತ್ರಗಳಿಗೆ ಏಂಜೆಲ್ಲಿನಿಂದ ಉತ್ತರ ಬರದೆ ಬೇಸತ್ತಿದ್ದ ಟೆಸ್, ತನ್ನ ಸಂಸಾರದ ಬವಣೆ ತಾಳಲಾರದೆ, ಅಲೆಕ್ಕಿನ ಜೊತೆಗೆ ಸ್ಯಾಂಡ್‌ಬೋರ್ನಿನಲ್ಲಿ

ಸಂಸಾರ ಹೂಡಿದ್ದಳು. ಪ್ರೀತಿ ಉತ್ಸಾಹಗಳಿಲ್ಲದಿದ್ದರೂ ವಿಧಿಯಿಲ್ಲವೆಂದುಕೊಂಡು ಆವನಿಗೆ ವಶಳಾಗಿದ್ದಳು. ಗಂಡ ಹಿಂದಿರುಗಿ ಬರಲಾರನೆಂದು ಹೇಳುತ್ತಲೇ ಬಂದಿದ್ದ ಆಲೆಕ್ಕಿನ ಮಾತು ನಿಜವೆನ್ನಿಸಿತ್ತು.

ಏಂಜೆಲ್ ಟೆಸ್ಸಳನ್ನು ಬೇಟಿಯಾದ. ತುಂಬ ತಡವಾಗಿ ಬಂದ ಗಂಡನನ್ನು ನಿರಾಕರಿಸಿದ ಹುಡುಗಿ ಬುದ್ಧಿ ವಿಕಾರಳಾದವಳಂತೆ ಆಲೆಕ್ಕನ್ನು ಕೊಂದು ಬೀದಿಗಿಳಿದಳು.

ಕೆಲವು ದಿನಗಳವರೆಗೆ ಗಂಡನ ಜೊತೆ ಎಂದೋ ಪಡೆಯಬೇಕಾಗಿದ್ದ ಸುಖವನ್ನು ಕಂಡುಕೊಂಡ ಟೆಸ್ ಪೋಲೀಸಿಗೆ ಸಿಕ್ಕಿಬಿದ್ದು ಗಲ್ಲಿಗೇರುವುದರಲ್ಲಿ ಎಂಜೆಲ್ ಅವಳ ತಂಗಿಯನ್ನು ಮದುವೆಯಾಗುತ್ತಾನೆ ಅನ್ನುವ ಸೂಚನೆಯಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ.

3

ಒಂದು ದೃಷ್ಟಿಯಲ್ಲಿ, ಡಾನಲ್ಡ್ ಡೇವಿಡ್‌ಸನ್ ಗುರುತಿಸಿರುವ ಹಾಗೆ, 'ಟೆಸ್ ಆಫ್ ದ ಡಬೆರ್‌ವಿಲ್' ಕಾದಂಬರಿ ಜನರಂಜಕವಾದ ಒಂದು ಲಾವಣಿಯ ಜೊತೆಗೆ ಸೇರಿದ್ದು. ಕತೆಯ ಉದ್ದಕ್ಕೂ ಒಂದಾದರ ಮೇಲೊಂದರಂತೆ ಬರುವ ಘಟನೆಗಳು, ವಂಚಿತಳಾದ ಹೆಣ್ಣು ತನ್ನ ವಂಚಕನನ್ನು ಇರಿದು ಕೊಲ್ಲುವುದು – ಇತ್ಯಾದಿ ಗುಣಗಳೇ ಡೇವಿಡ್‌ಸನ್ ಹೇಳುವ ಮಾತಿಗೆ ಆಧಾರ.

ಕತೆ ಬೆಳೆಯುವ ರೀತಿಯಲ್ಲಿ ವಿಧಿಯ ಕೈವಾಡವೂ ಇದೆ : ಡಾರ್ಸನ್ ಟ್ರಿಂಗಮ್ ಡಬೆರ್‌ವಿಲ್ ಮನೆತನದ ಮಾತೆತ್ತುವುದರಿಂದ ಹಿಡಿದು ಏಂಜೆಲ್ ಒಂದು ವಾರದಷ್ಟು ಮೊದಲೇ ಬ್ರೆಸಿಲ್ಲಿಂದ ಇಂಗ್ಲೆಂಡಿಗೆ ಹಿಂದಿರುಗದೇ ಹೋಗುವ ತನಕ, ಟೆಸ್ಸಳ ದುರಂತ ಅನಿವಾರ್ಯವೆನ್ನುವಂತೆ ಅವಳ ಬದುಕಿನ ಘಟನೆಗಳು ಪೂರ್ವನಿಯೋಜನೆಯೊಂದರಂತೆ ಒಂದಕ್ಕೊಂದು ತಳಿಕೆ ಹಾಕಿಕೊಂಡು ನಡೆಯುತ್ತವೆ. ಮಾತೆತ್ತಿದರೆ ಹಣೆಬರಹವೆನ್ನುವ ನಮ್ಮ ಸಂಪ್ರದಾಯಕ್ಕೆ ಕತೆ ಹತ್ತಿರವಾಗುತ್ತದೆ. ಕಾದಂಬರಿಯ ಕೊನೆಗೆ ಹಾರ್ಡಿ ಈಸ್ಕಲಸ್ಸಿನ ಮಾತನ್ನು ಉಪಯೋಗಿಸಿಕೊಂಡು ಟೆಸ್ಸಳ ಜೊತೆಗೆ ದೈವದ ಲೀಲೆ ಇಲ್ಲಿಗೆ ಮುಗಿಯಿತು ಅಂದಾಗ ನಾವು ನಿಟ್ಟುಸಿರು ಬಿಡುವಂತಾಗುತ್ತದೆ.

ಸೆರೆ ಹಿಡಿಯುವ ಗುಣವುಳ್ಳ ಕತೆ ಆ ಮಟ್ಟದಲ್ಲಿ ನಮಗೆ ತೃಪ್ತಿಕೊಡುತ್ತದೆಯೆಂದು ಮಾತ್ರ ಹೇಳಿ ಮುಗಿಸುವುದು ಇಂತಹ ಅಪೂರ್ವವಾದೊಂದು ಕಾದಂಬರಿಗೆ ಅನ್ಯಾಯ ಮಾಡಿದ ಹಾಗೆ ; ಕಾದಂಬರಿಕಾರನಾಗಿ ಹಾರ್ಡಿ ಕತೆ ಹೇಳುವ ಜಾಣ್ಮೆಗೆ ಗಮನ ಕೊಡದೇ ಹೋದ ಹಾಗೆ. ಹಾರ್ಡಿಯ ಜಾಣ್ಮೆ ಹಾಗೂ ಕೌಶಲವಿರುವುದು ಘಟನೆಗಳಿಗೆ ಹಾಗೂ

ಕಾದಂಬರಿಯಲ್ಲಿ ಬರುವ ಮುಖ್ಯ ಪಾತ್ರಗಳಿಗೆ ಅವನು ಕಟ್ಟಿಕೊಡುವ ಚೌಕಟ್ಟಿನಲ್ಲಿ. ಕಾದಂಬರಿಯ ಉದ್ದಕ್ಕೂ ಟೆಸ್ಸಳ ಮನಸ್ಸನ್ನು, ಅದರ ಆ ಕಾಲದ ವಿಶಿಷ್ಟತೆಯನ್ನು ಪ್ರತಿಫಲಿಸುವಂತೆ ಪ್ರಕೃತಿ ಸಜ್ಜಾಗುವುದನ್ನು ನಾವು ಗಮನಿಸಬೇಕು. ಮನಸ್ಸಿನ ವ್ಯಾಪಾರಕ್ಕೂ ಪರಿಸರಕ್ಕೂ ಇರುವ ಸಾಂಗತ್ಯ ಕೃತಕವಾಗದ ಹಾಗೆ, ಒಂದು ಇನ್ನೊಂದಕ್ಕೆ ಪೋಷಕವಾಗುವ ಹಾಗೆ ಹಾರ್ಡಿ ಉಪಯೋಗಿಸಿರುವುದು ಕಾದಂಬರಿಯ ಹೆಚ್ಚಳವೆನ್ನಬಹುದು.

ವಾಸ್ತವಕ್ಕೆ ಕನ್ನಡಿ ಹಿಡಿಯುವುದು ಕಲೆಗೆ ಮುಖ್ಯವಾದುದಲ್ಲ, ವಾಸ್ತವದ ತಳಕ್ಕೆ ಅಡಗಿರುವ ಸತ್ಯವನ್ನು ಬೆಳಕಿಗೊಡ್ಡುವುದೇ ನಿಜವಾದ ಕಲೆ ಮಾಡಬೇಕಾದ ಕೆಲಸ — ಹಾರ್ಡಿ ತನ್ನ ಈ ನಂಬಿಕೆಯನ್ನು ಮಾಡಿ ತೋರಿಸುವಂತೆ ಈ ಕಾದಂಬರಿಯನ್ನು ರಚಿಸಿದ್ದಾನೆ.

ಒಂದು ದೃಷ್ಟಿಯಲ್ಲಿ, ಟೆಸ್ ಇಂಗ್ಲೆಂಡಿನ ಹತ್ತೊಂಬತ್ತನೇ ಶತಮಾನದ ಆಗುಹೋಗುಗಳಿಗೆ ಸಂಕೇತವಾಗಿ ನಿಲ್ಲುತ್ತಾಳೆನ್ನಬಹುದು. ದಾಪುಗಾಲಲ್ಲಿ ಬಂದು ಇಡೀ ದೇಶವನ್ನು, ಅದರ ಸಾಂಪ್ರದಾಯಿಕ ಮೌಲ್ಯ ಹಾಗೂ ವ್ಯವಸ್ಥೆಯನ್ನು ಕಬಳಿಸಿದ ವಿಕ್ಟೋರಿಯನ್ ಕಾಲದ ಇಂಡಸ್ಟ್ರಿಯಲ್ ಕ್ರಾಂತಿಯೇ ಅಲೆಕ್ಕಿನ ರೂಪ ಪಡೆದು ಬಂದಂತಿದೆ. ಈ ಬದಲಾವಣೆಗೆ ಬಲಿಪಶುವಾಗಿ ಇಂಗ್ಲೆಂಡ್ ಹಾಗೂ ಟೆಸ್ ಅಂತಹ ಮುಗ್ಧೆಯ ಬದುಕನ್ನು ರೂಢಿಸಿದ ಆಚಾರಗಳು ಕಳಚಿಕೊಳ್ಳುವುದಕ್ಕೂ ಟೆಸ್ ಅಲೆಕ್ ಒಡ್ಡಿದ ಬಲೆಗೆ ಬಿದ್ದು ಪ್ರಶಸ್ತವಾದ ಎಂಥದನ್ನೊ ಕಳೆದುಕೊಳ್ಳುವುದಕ್ಕೂ ಒಂದು ಸಂಬಂಧ ನಮ್ಮ ಮನಸ್ಸಿನಲ್ಲಿ ಭಾಸವಾಗುತ್ತದೆ. ಶ್ರೀಮಂತನಾದರೂ ಶ್ರೇಷ್ಠವಾದೊಂದು ಮನೆತನಕ್ಕೆ ಸೇರಿಲ್ಲದ ಅಲೆಕ್ ಸಮಾಜದ ಒಟ್ಟು ಅವನತಿಗೆ ಕಾರಣವಾಗುವ ಒಂದು ಅಸುರ ಶಕ್ತಿಗೆ ಸಂಕೇತವಾಗುತ್ತಾನೆ – ಟೆಸ್ಸನ್ನು ನರಕಯಾತನೆಗೆ ಗುರಿ ಮಾಡುವ, ತೆನೆ ಬಡಿಯುವ ಯಂತ್ರದ ಹಾಗೆ.

ಸಾಮಾನ್ಯವಾದ ಬ್ಯಾಲಡ್ ಮಾದರಿಯ ಒಂದು ಕತೆ ಇಷ್ಟೊಂದನ್ನು ಧ್ವನಿಸುವಂತೆ ದುಡಿಸಿಕೊಂಡಿರುವುದು ಹಾರ್ಡಿಯ ಕಲೆಯನ್ನು ಬೊಟ್ಟು ಮಾಡಿ ತೋರಿಸುತ್ತದೆ. ಜೊತೆಗೆ, ಆತನು ಪಾತ್ರಗಳನ್ನು ಸೃಷ್ಟಿಸಿ ಅವು, ಕಾದಂಬರಿಕಾರನ ಹಿಡಿತವನ್ನು ತಪ್ಪಿಸಿಕೊಂಡಂತೆ, ಬೆಳೆಯುವುದನ್ನು ತೋರಿಸುವುದು ಅಪೂರ್ವವಾಗಿದೆ. ಟೆಸ್ಸಳ ಬಗ್ಗೆ ನಮ್ಮಲ್ಲಿ ಮೊದಲಿನಿಂದಲೂ ಮೂಡಿಬರುವ ತಾದಾತ್ಮ್ಯ ಭಂಗವಾಗದೇ ಹೋದರೂ ದುರುಳನಾಗಿ ಆದಿಯಲ್ಲಿ ಕಾಣುವ ಅಲೆಕ್ಕಿಗೇ ಟೆಸ್ಸಳ ಮೇಲೆ ನಿಜವಾದ, ಬದುಕನ್ನು ಹಸನುಗೊಳಿಸಬಹುದಾದ ಪ್ರೀತಿ ಇತ್ತು ಅನ್ನುವ ಪ್ರತಿಕ್ರಿಯೆ ನಮ್ಮಿಂದ ಪಡೆಯುತ್ತಾನೆ ಹಾರ್ಡಿ ; ಹಾಗೇ, ಕ್ರಮಕ್ರಮವಾಗಿ, ಏಂಜೆಲ್ಲಿನ ಅಮೂರ್ತ ಪ್ರೇಮದ ಬಗ್ಗೆ, ಹಾರ್ಡಿಯ ಅಸಹನೆಯೇ ನಮ್ಮದಾದಂತೆ, ನಾವು ತೋರಿಸುವ ಪ್ರತಿಕ್ರಿಯೆ

ನಮ್ಮಲ್ಲಾದ ಬದಲಾವಣೆ ಅತಿ ಸಹಜವೆನ್ನಿಸುವಂತೆ ಮಾಡಿರುವುದು ಹಾರ್ಡಿಯ ಶ್ರೇಷ್ಠ ಕಲೆಗಾರಿಕೆಗೆ ಒಂದು ನಿದರ್ಶನ.

ಹಾರ್ಡಿಗೆ ಟೆಸ್ ಕೇವಲ ಒಂದು ಪಾತ್ರವಾಗದೇ ಜೀವಂತವಾದ ಹಾಗೂ ಹತ್ತಿರದ ಹೆಣ್ಣೊಂದಾಗಿರುವುದು ಕಾದಂಬರಿಯಲ್ಲಿ ಕಾಣುತ್ತದೆ. ಸಮಾಜದ ದೃಷ್ಟಿಯಲ್ಲಿ ಅವಳು ಜಾರಿದರೂ ನಮ್ಮ ಮನಸ್ಸಿನಲ್ಲಿ ಅವಳು ಪರಿಶುದ್ಧ ಹೆಣ್ಣಾಗಿ ಉಳಿಯುವಂತೆ ಹಾರ್ಡಿ ಮಾಡಿದ್ದಾನೆ.

ಒಳ್ಳೆಯತನ, ಸಾಮಾನ್ಯವಾಗಿ, ಕಾದಂಬರಿಯ ವಸ್ತುವಾಗಿದ್ದಾಗ ನಮ್ಮ ಗಮನವನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ಅಸಮರ್ಥವಾಗುತ್ತದೆ ; ಆದರೆ 'ಟೆಸ್ ಆಫ್ ದ ಡಬೆರ್‌ವಿಲ್' ಕಾದಂಬರಿ ಅಂಥ ಅಪೂರ್ವವಾದುದನ್ನು ಸಾಧಿಸಿದೆಯೆನ್ನುವ ಅರ್ಡಿಂಗ್ ಹೋನ ಮಾತು ಯಥಾರ್ಥವಾದದ್ದು.

ಹೆನ್ರಿ ಜೇಮ್ಸ್: 'ಪೋರ್‌ಟ್ರೇಟ್ ಆಫ್ ದಿ ಲೇಡಿ'

ಅರವಿಂದ ನಾಡಕರ್ಣಿ

ಹೆನ್ರಿ ಜೇಮ್ಸ್ ಹುಟ್ಟಿದ್ದು 15-4-1843, ನ್ಯೂಯಾರ್ಕಿನಲ್ಲಿ. ಐದು ಮಕ್ಕಳಲ್ಲಿ ಎರಡನೆಯವ ಸುಪ್ರಸಿದ್ಧ ಪ್ರಾಗ್ಮಾಟಿಸ್ಟ್ ವಿಲಿಯಮ್ ಜೇಮ್ಸ್ ಇವನ ತಮ್ಮ. ತಂದೆ ಅಪಾರ ಹಣ ಸಂಪಾದಿಸಿದ್ದ ; ಮಕ್ಕಳಿಗೆ ಸಂಪಾದನೆಯ ಒತ್ತಾಯ ಇದ್ದಿಲ್ಲ. ಹೆನ್ರಿಯ ಬಾಲ್ಯ ನ್ಯೂಯಾರ್ಕ್ ಆಲ್ಬನಿ ನ್ಯೂಪೋಟಿನಲ್ಲಿ. ಅವನಿಗೆ ಆಪ್ತರ ಸಹವಾಸ ಎಂದರೆ ತುಂಬಾ ಪ್ರೀತಿ. ಮಕ್ಕಳನ್ನು ಶಾಲೆಗೆ ಹಾಕುವಾಗ ಬದುಕಿನಲ್ಲಿಯ 'ಯಶಸ್ಸಿ'ನ ಬಗ್ಗೆ ಯೋಚಿಸದೇ ಅವಲೋಕನ ಶಕ್ತಿಯ ವೃದ್ಧಿಯನ್ನೇ ಗೆದ್ದಿದ್ದ ತಂದೆ. ಹೀಗಾಗಿ ಮಕ್ಕಳಲ್ಲಿ ಆಂತರಿಕ ಜಗತ್ತಿನ ಬಗ್ಗೆ ಅರಿವು ಬೆಳೆಯಿತು. ಪ್ರೌಢ ಶಿಕ್ಷಣ ಹಾರ್ವರ್ಡ್ ಲಾ ಸ್ಕೂಲಿನಲ್ಲಿ. ಅನಂತರ ಆಗಾಗ ಯೂರೋಪಿಗೆ ಪ್ರಯಾಣ. 1860ರಲ್ಲೇ ತನ್ನನ್ನು Expatriate ಎಂದು ತಿಳಿದಿದ್ದ. ಆಗಲೇ ಅವನ ಬರವಣಿಗೆಯ ಪ್ರಾರಂಭ. ಕತೆ ವಿಮರ್ಶಾಲೇಖನಗಳನ್ನು ಪ್ರಕಟಿಸಿದ. 1875ರಲ್ಲಿ ಪ್ಯಾರಿಸಿನಲ್ಲಿದ್ದಾಗ ಸುಪ್ರಸಿದ್ಧ ಕಾದಂಬರಿಕಾರರಾದ ಫ್ಲಾಬರ್ಟ್ ಮತ್ತು ಟರ್ಜಿನೇವ್ ಇವರ ಭೇಟಿಯಾಯಿತು. ಅವರ ಪ್ರಭಾವಕ್ಕೊಳಗಾದ ಎಂದರು ವಿಮರ್ಶಕರು. ಅಲ್ಲಿಂದ ಮುಂದೆ ಲಂಡನ್ನಿನ ವಾಸ. ಆಗ ಕಾದಂಬರಿ ಪ್ರಾರಂಭ. 1876ರಲ್ಲಿ 'ರಾಡ್ರಿಕ್ ಹಡ್ಸನ್', 77ರಲ್ಲಿ 'ದಿ ಅಮೆರಿಕನ್', 78ರಲ್ಲಿ 'ದಿ ಯೂರೋಪಿಯನ್ಸ್', 79ರಲ್ಲಿ 'ಡೇಝಿ ಮಿಲ್ಲರ್', 81ರಲ್ಲಿ 'ವಾಷಿಂಗ್ಟನ್ ಸ್ಕ್ವೇರ್' ಮತ್ತು ಪ್ರಸ್ತುತ ಕಾದಂಬರಿ 'ದಿ ಪೋರ್‌ಟ್ರೇಟ್ ಆಫ್ ದಿ ಲೇಡಿ.' ಅಷ್ಟರಲ್ಲಿ ಖ್ಯಾತ ಕಾದಂಬರಿಕಾರನಾದ. ಇಲ್ಲಿಗೆ ಒಂದು ಘಟ್ಟ ಮುಗಿದು ನಂತರ ಕತೆ ನಾಟಕ ಬರೆದ. ಅವು ಖ್ಯಾತಿ ಪಡೆದಿಲ್ಲ. ಮರಳಿ ಕಾದಂಬರಿಗೆ ಪ್ರಾರಂಭ. ಸುಮಾರು ಏಳೆಂಟು ಕಾದಂಬರಿ ಬರೆದ ನಂತರ ಮೂರು ಶ್ರೇಷ್ಠ ಎಂದೆನಿಸಿಕೊಂಡ ಕಾದಂಬರಿ ರಚಿಸಿದ. ಅವೆಂದರೆ – 'ವಿಂಗ್ಸ್ ಆಫ್ ಡೋವ್' (1902), 'ದಿ ಅಂಬೆಸೆಡರ್ಸ್' (1903), 'ದಿ ಗೋಲ್ಡನ್ ಬೌಲ್' (1904). ಅನಂತರ ಸಾಹಿತ್ಯ ರಚನೆ ನಿಂತಿತು. ಆಂಗ್ಲ ನಾಗರಿಕನಾಗಿದ್ದ ಹೆನ್ರಿ 1916ರಲ್ಲಿ ಸಸೆಕ್ಸಿನ ರಾಯ್ ಎಂಬಲ್ಲಿ ಸಾವನ್ನಪ್ಪಿದ. ಅದೇ ವರುಷ ರುಗ್ಣ ಮಂಚದಲ್ಲಿದ್ದಾಗ ಅವನಿಗೆ 'ಆರ್ಡರ್ ಆಫ್ ಮೆರಿಟ್' ಎಂಬ ಪ್ರಶಸ್ತಿ ಸಿಕ್ಕಿತು. 'ಡೇಝಿ ಮಿಲ್ಲರ್' ಬರೆದಾಗಲೇ ಜನಪ್ರಿಯನಾಗಿದ್ದ. ಆ ಕಾಲದಲ್ಲಿ 'ಡೇಝಿ ಮಿಲ್ಲರಿಝಂ' ಎಂಬ ಶಬ್ದವೇ ಪರಂಪರೆ ತೊರೆದ ನಿರ್ಭಯ ಹೆಣ್ಣಿನ ವರ್ತನೆಯ ಸಂಕೇತವಾಯಿತು. ಅದರಂತೇ 'ಜೇಮ್ಸಿಯನ್' ಎಂಬ ಶಬ್ದ, ಸೂಕ್ಷ್ಮವಾದದ್ದರ, ಪ್ರಬುದ್ಧ ಹಾಗೂ ಪೌರವಾದದ್ದರ (urbane) ಸಂಕೇತವಾಯಿತು.

1783ರಲ್ಲಿ ಸ್ವತಂತ್ರವಾದ ಅಮೆರಿಕಾದಲ್ಲಿ 1850ರ ತನಕ 'ಅಮೆರಿಕಾದ ವಾಣಿ' ಇನ್ನೂ ಮೂಡಿಬಂದಿಲ್ಲದ ಸಂದರ್ಭ. 1850-55ರಲ್ಲಿ ಎಮರ್‌ಸನ್, ಹಾಥಾರ್ನ್, ಮೆಲ್‌ವಿಲ್, ಥೋರೋ, ವ್ಹಿಟಮನ್, ಈ ಜಗತ್ಪ್ರಸಿದ್ಧ ಸಾಹಿತಿಗಳು ಅಮೆರಿಕಾ ವಾಣಿಯ ಕಹಳೆಯೂದಿದರು. ಅಲ್ಲಿಂದ ಉತ್ಥಾನ (Renaissance)ದ ಪ್ರಾರಂಭ. ಆದರೆ ಅಮೆರಿಕಾದ ಅಂತರ್ಕಲಹ (Civil War), 1861-65ರದ್ದು ಆ ಕಾಲದ ಬುದ್ಧಿಜೀವಿಗಳ ಮೇಲೆ ತೀವ್ರ ಪರಿಣಾಮ ಮಾಡಿತು. ವಾಸ್ತವವಾದ (Realism)ದ ಹೊಸ ಆಂದೋಲನ ಶುರುವಾಯಿತು. ಔದ್ಯಮೀಕೃತ ಉತ್ತರ ಅಮೆರಿಕಾ ಮುಂದುವರಿಯಿತು. ಕೃಷಿಪ್ರಧಾನ ದಕ್ಷಿಣ ಅಮೆರಿಕಾ ಸಾಕಷ್ಟು ಕಾಲ ನಷ್ಟದ ಕತ್ತಲಲ್ಲಿ ಉಳಿಯಿತು. ಈ ಸಮೃದ್ಧ ಉತ್ತರದ ಬೋಸ್ಟನ್, ನ್ಯೂಯಾರ್ಕ್, ಶಿಕಾಗೋ, ಫಿಲಾಡೆಲ್ಫಿಯಾ, ಇವು ಸಾಂಸ್ಕೃತಿಕ ಕೇಂದ್ರ ವಾದವು. ಟ್ವೇನ್, ಹೊವೆಲ್ಸ್, ಜೇಮ್ಸ್, ವಾರ್ಟನ್ ಇವರೆಲ್ಲ ಉತ್ತರದವರೇ. ಅಲ್ಲಿಯ ಶೀಘ್ರ ಸಮೃದ್ಧಿಯಲ್ಲಿ ಬೆಳೆದವರು. ಉತ್ಥಾನದವರು ನಿಸರ್ಗದ ಕಡೆ ಮುಖ ಮಾಡಿ ಅಮೂರ್ತ ಲೋಕಸತ್ಯಗಳ ಅನ್ವೇಷಣೆ ಅನುಸರಿಸಿದರೆ, ವಾಸ್ತವವಾದಿಗಳು ತತ್ಕಾಲದ ಸಮಾಜ ಸಂಬಂಧಗಳ ಕಡೆ ಗಮನ ಕೇಂದ್ರೀಕರಿಸಿದರು. ವಾಸ್ತವವಾದಿಗಳಲ್ಲಿ ಒಬ್ಬೊಬ್ಬರು ಒಂದೊಂದು ದೃಷ್ಟಿಕೋನದಿಂದ ಬದುಕನ್ನು ನೋಡಿದರು. ಜೇಮ್ಸ್‌ನಿಗೆ ವೈಯಕ್ತಿಕ ಮಾನಸಪ್ರಜ್ಞೆಯ ಹೊಳಹುಗಳನ್ನು ಹಾಗೂ ಸಾಮಾಜಿಕ ವರ್ತನೆಗಳ ಸೂಕ್ಷ್ಮಗಳನ್ನು ಅನ್ವೇಷಿಸುವದೇ ಗುರಿ. ಉತ್ಥಾನದವರಿಗೆ 'ನಿಸರ್ಗದಲ್ಲಿ ಮನುಷ್ಯ' ವಸ್ತುವಾದರೆ, ವಾಸ್ತವವಾದಿಗಳಿಗೆ 'ಸಮಾಜದಲ್ಲಿ ಮನುಷ್ಯ' ವಸ್ತುವಾಯಿತು. ಟ್ವೇನ್‌ನಲ್ಲಿ ಹಳೇ ಜಹಾಗೀರಶಾಹಿ ಹಾಗೂ ಹೊಸ ಡೆಮೋಕ್ರೆಸಿ ಇವುಗಳಲ್ಲಿಯ ಕರ್ಷಣೆ ಮುಖ್ಯವಾದರೆ, ಜೇಮ್ಸ್‌ನಲ್ಲಿ ಅಮೆರಿಕಾ-ಯೂರೋಪ್ ಸಂಬಂಧದ ಸೂಕ್ಷ್ಮ ಮುಖ್ಯವಾಯಿತು. ಅವರು ಆದರ ಸಂಕೀರ್ಣತೆಯ ಅನ್ವೇಷಕರಾದರು.

ಕಾದಂಬರಿಯ ವಿಶ್ಲೇಷಣೆಯ ಮೊದಲು, ಹೆನ್ರಿಯ ಸೈದ್ಧಾಂತಿಕ ಕಲ್ಪನೆಗಳ ಬಗ್ಗೆ ಯೋಚಿಸಬೇಕಾದದ್ದು ಅವಶ್ಯ. ಕಾದಂಬರಿ ಯಾವ ರೀತಿಯಲ್ಲಿರಬೇಕು ಎಂಬುದರ ಬಗ್ಗೆ ಜೇಮ್ಸ್‌ನ ನಿಶ್ಚಿತ ಧೋರಣೆಯನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು :

1. ವಸ್ತುವಿನ ಅನಿರ್ಬಂಧ ಆಯ್ಕೆಯಾಗಬೇಕು. ಶ್ರೀಮಂತವಾದ ವಸ್ತುವನ್ನೇ ಆಯ್ಕೆ ಮಾಡಬೇಕು. ಕಾದಂಬರಿಯ ಪ್ರಾರಂಭ ಪಾತ್ರದಿಂದಾಗಬೇಕು, ಸನ್ನಿವೇಶ ರಚನೆಯಿಂದಲ್ಲ. ವಾಸ್ತವಿಕವಾಗಿ ಪ್ರಾರಂಭವಾಗುವುದು ಒಂದು ಕಲ್ಪನೆಯಿಂದ ಅಥವಾ ವಿಷಯದ ಒಂದು ಕಾಣ್ಕೆಯಿಂದ ಆದರೂ ಅದನ್ನೂ ಒಂದು ಪಾತ್ರದ ಮೂಲಕ ಕಲ್ಪಿಸಿಕೊಳ್ಳುವುದು ಅವರ ಪ್ರವೃತ್ತಿಯಾಗಿತ್ತು. ಪ್ರಸ್ತುತ ಕಾದಂಬರಿಯ ವಿಷಯವನ್ನೇ ಇಝಾಬೆಲ್ ಆರ್ಚರ್, ಪ್ರಮುಖ ಪಾತ್ರದ ಮೂಲಕ ಕಲ್ಪಿಸಿದ್ದು ಎಂದರೆ ತಪ್ಪಾಗದು. ಪಾತ್ರದ ಆಯ್ಕೆಗೂ ಒಂದು ನಿಯಮವಿದೆ. ಪಾತ್ರ ಮಹತ್ವಪೂರ್ಣವಾಗಿರಬೇಕು,

ಜಿಜ್ಞಾಸುಪ್ರವೃತ್ತಿಯವರಿರಬೇಕು, ಚೈತನ್ಯಮುಕ್ತವಾಗಿರಬೇಕು. ಇಂಥ ಪಾತ್ರದ ಕಲ್ಪನೆಯ ಪೂರ್ವಸೂಚನೆ ಅಲ್ಪಸನ್ನಿವೇಶದ್ದೂ ಇರಬಹುದು. ಆದರೆ ಅದರ ಪೂರ್ಣ ಆಯಾಮಗಳನ್ನು ಕಲ್ಪಿತ ಶಕ್ತಿಯಿಂದ ರೇಖಿಸಿಕೊಳ್ಳಬೇಕು. ಅಂದರೆ ಪೂರ್ವಸೂಚಿತ ಕಲ್ಪನಾಬಿಂದುವನ್ನು ನಾಟ್ಯೀಕರಿಸುತ್ತ ಬೆಳೆಯಿಸಿಕೊಳ್ಳಬೇಕು. ಹೀಗೆ ಅಲ್ಪ ಸನ್ನಿವೇಶದಲ್ಲಿ ಫಕ್ಕನೆ ಕಾಣ್ಕೆಯಾಗಿ ಬರುವ ಕಲ್ಪನಾಬಿಂದುವಿಗೆ ಅವರು 'The suddenly determined absolute of perception' ಎಂದು ಕರೆಯುತ್ತಾರೆ. ಆದರೆ ಇದು ಪ್ರಾರಂಭ ಮಾತ್ರ. ಅಲ್ಲಿಂದ ಸಾಕಷ್ಟು ಕಾಲ ಕಷ್ಟಪಟ್ಟು ಬುದ್ಧಿಪೂರ್ಣವಾಗಿ ಸಂಯೋಜಿಸುತ್ತ ಸಂಕಲ್ಪಶಕ್ತಿಯಿಂದ ಅದರ ನಿಶ್ಚಿತ ಅಂತ್ಯಕ್ಕೆ ತರುವ ಸಾಹಸ ಮಾಡಬೇಕು. ಕಲೆ ಒಂದು ಅದ್ಭುತ ಸಾಹಸವೇ ಸರಿ. ಒಂದು ಸನ್ನಿವೇಶದ ಮಹತ್ವ ಇರುವುದು ಪಾತ್ರಗಳು ಸನ್ನಿವೇಶವನ್ನು ಯಾವ ರೀತಿಯಲ್ಲಿ ಕಂಡುಕೊಂಡಿದ್ದಾರೆ ಎಂಬ ತಿಳಿವಿನ ಮುಖಾಂತರ, ನಾಟಕವಾಗಿ ಸನ್ನಿವೇಶದ ರಹಸ್ಯಪೂರ್ಣ ಪರಿವರ್ತನೆ ಆದಾಗ. 'Maximum of intensity with minimum of strain, is the ideal'. ಇಲ್ಲಿ ಅವರ ಮೇಲೆ ಜಗತ್ಪ್ರಸಿದ್ಧ ಕಾದಂಬರಿಕಾರ ಇವಾನ್ ಟರ್ಜನೇವ್‌ನ ಪ್ರಭಾವ ಆಗಿದೆ ಎನ್ನುತ್ತಾರೆ ವಿಮರ್ಶಕರು. ಒಳ್ಳೇ ಪಾತ್ರಕ್ಕೆ ಬುದ್ಧಿಶಕ್ತಿ ಇರಬೇಕು, ಸ್ಪಷ್ಟತೆ ಇರಬೇಕು. ಕಲಾಕೃತಿಯಲ್ಲಿ ಬುದ್ಧಿಹೀನರಿಗೆ ಕೇಂದ್ರಸ್ಥಾನವಿಲ್ಲ, ಆದರೂ ಕ್ಷುಲ್ಲಕ ಪಾತ್ರಗಳೂ ಅವರ ಕಾದಂಬರಿಗಳಲ್ಲಿವೆ.

2. ಬೆಳವಣಿಗೆಯ ಬಗ್ಗೆಯೂ ಅವರ ವಿಚಾರಗಳಿದ್ದವು. ಪ್ರಥಮ ಸಂಕಲ್ಪನ ಧಾರಣದಿಂದ ಪ್ರಾರಂಭದ ಲೇಖನದವರೆಗೆ ದಕ್ಷತೆಯಿಂದ ಟಿಪ್ಪಣಿ ಮಾಡುವುದು ಅವಶ್ಯ. ಬೆಳವಣಿಗೆಯಲ್ಲಿ ಹೊಸಹೊಸ ಶಾಖೋಪಶಾಖೆಗಳು ಸಾಧ್ಯವಾದರೂ ಅನಾವಶ್ಯಕ ಬೆಳವಣಿಗೆ ಕತ್ತರಿಸಬೇಕು. ಆಕೃತಿಯ ಆಯಾಮಗಳನ್ನು ಬೆಳವಣಿಗೆ ಉಲ್ಲಂಘಿಸಬಾರದು. ತಾನು ಕಥೆಯನ್ನು ದೀರ್ಘ ಕಾದಂಬರಿಯೋ ಎಂಬಂತೆ ಪ್ರಾರಂಭಿಸುತ್ತಿದ್ದೆ ಎನ್ನುತ್ತಾನೆ. ಅನಂತರ ಸೂಕ್ತ ಕತ್ತರೀ ಪ್ರಯೋಗ ಮಾಡುವದು ಅವನ ಪದ್ಧತಿಯೂ ಆಗಿತ್ತು.

3. ವಾಸ್ತವಿಕತೆ ಮತ್ತು ತೀವ್ರತೆ ಕೃತಿಯ ಮೌಲಿಕ ಗುಣ ಎಂದು ನಂಬಿದ್ದ. ಬರೇ ದುರಂತಗಳನ್ನು ಪೇರಿಸುವುದರಲ್ಲಿ ನಂಬಿಗೆ ಇದ್ದಿಲ್ಲ ; ಆದರೆ ಅದಕ್ಕೂ ಪ್ರತಿಕ್ರಿಯೆ ಮುಖಾಮುಖಿ ಹಾಗೂ ಅವುಗಳಿಂದ ಪಾರಾಗುವ ಯೋಜನೆಯೂ ಇರಬೇಕು. ವಾಸ್ತವತೆಯ ವಾತಾವರಣ, ವಿಶಿಷ್ಟವಾದದ್ದರ ಗಟ್ಟಿತನ ಕಾದಂಬರಿಯ ಅತ್ಯುಚ್ಚ ಗುಣಗಳು. ಉಳಿದ ಎಲ್ಲ ಗುಣಗಳೂ ಅಂತ್ಯದಲ್ಲಿ ಇವುಗಳ ಮೇಲೆ ಅವಲಂಬಿಸಿವೆ. ಇಲ್ಲಿಯೇ ಅದು ಬದುಕಿನೊಂದಿಗೆ ಸೆಣಸಾಡುವುದು. ಆದರೂ ವಾಸ್ತವವನ್ನು ಇದ್ದಕ್ಕಿದ್ದಂತೆ ಬರೆದರೆ ಅದು ಕಲಾಕೃತಿಯಾಗುವುದಿಲ್ಲ, ಕಲ್ಪಕತೆಯ ಅಂತರ್‌ಪ್ರವೇಶ ಕೊನೇಪಕ್ಷ ಬಹುಮೂಲ್ಯವಾದದ್ದು. ವಾಸ್ತವಾಂಶಗಳಿಗೆ ಹಿಮ್ಮೆಟ್ಟುವುದು ತನ್ನ ಕಾಣ್ಕೆಗೆ ಹಿಮ್ಮೆಟ್ಟುವುದ

ಕ್ಕಿಂತ ಕಡಿಮೆ ಭೀತಿದಾಯಕವಾದದ್ದು. ವಾಸ್ತವಾಂಶಗಳೂ ಪರಿವರ್ತನವಾಗಬೇಕು. ಆಗ ಅದು ಬದುಕನ್ನು ವಿಚಾರಗಳ ಮುಖಾಂತರ ತಿಳಿದುಕೊಂಡಾಗ ಬದುಕಿನ ಕಲ್ಪಿತಕ್ಷೇತ್ರ, ಅದರ ರಸಗ್ರಹಣ ; ಒಂದು ದೃಷ್ಟಿಕೋನದಿಂದ ಹೊಂದಾಣಿಕೆ ಹಾಗೂ ಐಕ್ಯತೆ ಸಾಧಿಸುವುದರಲ್ಲಿದೆ. ಆದ್ದರಿಂದ ಉಚ್ಚಪಾತ್ರ ನಿಯೋಜಿಸುವುದು ಅವಶ್ಯ. ಒಂದು ಕ್ರಿಯೆಯಲ್ಲಿಯ ಪರಸ್ಪರ ಸಂಬಂಧಗಳಲ್ಲಿ ವಿಷಯ ಹುದುಗಿರುತ್ತದೆ. ಬದುಕಿಗೆ ಬದ್ಧವಾದ ಈ ಪರಸ್ಪರ ಸಂಬಂಧಗಳಲ್ಲಿ ಯಾವುದೇ ಭಾಗ ಕೃತಿ ಸಮಗ್ರವಾಗಿ ಬದುಕಿಗೆ ಸಂಬಂಧಿತವಾಗುವುದರಲ್ಲಿ ಧಕ್ಕೆ ತರಬಾರದು – ಇದು ಕೊನೆಯ ಪರೀಕ್ಷೆ.

2

ಇಝಾಬೆಲ್ ಆರ್ಚರ್, 'ಪೋರ್‌ಟ್ರೇಟ್ ಆಫ್ ದಿ ಲೇಡಿ' ಕಾದಂಬರಿಯ ನಾಯಕಿ. ಇವಳ ತಂದೆ ನ್ಯೂಯಾರ್ಕಿನಲ್ಲಿ ಸಾಯುತ್ತಾನೆ. ಇಝಾಬೆಲ್‌ಳ ತಾಯಿಯ ಸೋದರಿ ಲೀಡಿಯಾ ಟಶೆಟ್ ಅವಳನ್ನು ದತ್ತಕ ತೆಗೆದುಕೊಳ್ಳುವ ವಿಚಾರದಿಂದ ಅವಳ ಆಲ್ಬನಿಯ ಮನೆಯಲ್ಲಿ ಸಂಧಿಸುತ್ತಾಳೆ. ಆಗ ಇಝಾಬೆಲ್ ಆ ಮನೆಯ ಹಳೇ ಲೈಬ್ರರಿಯ ಮೂಲೆಯಲ್ಲಿ ಪುಸ್ತಕ ಓದುತ್ತಿದ್ದುದನ್ನು ಕಂಡು, ತನ್ನೊಡನೆ ಯೂರೋಪಿನಲ್ಲಿ ವಾಸಿಸಲು ಇಝಾಬೆಲ್‌ಳನ್ನು ಆಹ್ವಾನಿಸುತ್ತಾಳೆ. ಹೊರ ಜಗತ್ತನ್ನು ನೋಡುವ ತವಕದ, ಜಿಜ್ಞಾಸು ವೃತ್ತಿಯ ಇಝಾಬೆಲ್ ಆಮಂತ್ರಣ ಸ್ವೀಕರಿಸುತ್ತಾಳೆ. ಅಮೆರಿಕಾ ಬಿಡುವ ಮೊದಲು ಅಲ್ಲಿಯ ಉದ್ಯೋಗಪತಿ ಗುಡ್‌ವುಡ್ ಎಂಬವನು ಅವಳನ್ನು ಬಯಸಿ ಮದುವೆಯ ಪ್ರಸ್ತಾಪ ಎತ್ತುತ್ತಾನೆ ; ಆದರೆ ಇಝಾಬೆಲ್ ಒಪ್ಪುವುದಿಲ್ಲ. ಇಝಾಬೆಲ್‌ಳ ಸ್ವತಂತ್ರ ವಿಚಾರಪ್ರವೃತ್ತಿ ಕಂಡು ಮನಸ್ಸಿನಲ್ಲೇ ಹಿಗ್ಗಿದ ಆಂಟಿ ಲೀಡಿಯಾ ಅವಳೊಡನೆ ಇಂಗ್ಲೆಂಡಿನ ತನ್ನ ಮನೆಯಾದ ಗಾರ್ಡನ್ ಕೋರ್ಟಿಗೆ ಬರುತ್ತಾಳೆ. ಅಲ್ಲಿ ಇದ್ದವರು ಲೀಡಿಯಾಳ ಗಂಡ ಡೇನಿಯಲ್ ಟಶೆಟ್, ಎಂದೋ ಅಮೆರಿಕಾದಿಂದ ಬಂದು ವಾಸವಾದವ, ಧನಿಕ ಬ್ಯಾಂಕರ್, ಗೌಟ್ ರೋಗಪೀಡಿತನಾದವ, ಮತ್ತು ಅವರ ಮಗ ರಾಲ್ಫ್. ರಾಲ್ಫ್ ಸ್ಫುರದ್ರೂಪಿ, ತರುಣ – ಆದರೂ ಕ್ಷಯರೋಗಪೀಡಿತನಾಗಿ ಸಿನಿಕ್ ಆಗಿದ್ದವ. ಇಬ್ಬರೂ ಸ್ವತಂತ್ರ ಬುದ್ಧಿಯ ಇಝಾಬೆಲ್‌ಳನ್ನು ಮೆಚ್ಚುತ್ತಾರೆ. ರಾಲ್ಫ್ ಸಹಜವಾಗಿ ಆಕರ್ಷಿತನಾಗುತ್ತಾನೆ. ಇಝಾಬೆಲ್ ಅವರಿಂದ ಇಂಗ್ಲೆಂಡಿನ ವಿಷಯ ಸಾಕಷ್ಟು ಮಾಹಿತಿ ಪಡೆಯುತ್ತಾಳೆ. ಅವಳು ವಾದಿಸುವುದು ಅಮೆರಿಕಾದ ಪರವಾಗಿಯೇ. ಅವರೆಲ್ಲರ ಮಿತ್ರ ಲಾರ್ಡ್ ವಾರ್‌ಬರ್ಟನ್ ಅಲ್ಲಿಗೆ ಭೇಟಿಕೊಟ್ಟಾಗ ಇಝಾಬೆಲ್‌ಳನ್ನು ಮೆಚ್ಚುತ್ತಾನೆ ; ಇಝಾಬೆಲ್ ಕೂಡ ಅವನನ್ನು ಮೆಚ್ಚುತ್ತಾಳೆ. ಆಗ ಅವಳ ಸ್ನೇಹಿತೆ ನ್ಯೂಯಾರ್ಕ್ ಪೇಪರು 'ಇಂಟರ್‌ವ್ಯೂಅರ್'ದ ವರದಿಗಾರಳಾದ ಹೆನ್ರಿಯೆಟ್ ಸ್ಟಾಕ್‌ಪೋಲ್ ಅಲ್ಲಿಗೆ

ಬರುತ್ತಾಳೆ. ಇಂಗ್ಲೆಂಡ್-ಯೂರೋಪು ಕಡೆಯ ಸುದ್ದಿಸಾರಗಳನ್ನು ವರದಿ ಮಾಡುವದು ಅವಳ ಗುರಿ. ಅವಳಿಗೂ ಅಮೆರಿಕನ್‌ರಾದ ಟಶೆಟ್‌ರು ಯೂರೋಪಿಯನ್‌ರಾಗಿ ಬದುಕುವುದು ಸೇರುವುದಿಲ್ಲ. ಆದರೆ ಅವಳ ಬುದ್ಧಿವಂತಿಕೆಗೆ ರಾಲ್ಫ್ ತಲೆದೂಗುತ್ತಾನೆ. ಅದೇ ಸಮಯ ಇಝೂಬೆಲ್‌ಳಿಗೆ ಗುಡ್‌ವುಡ್‌ನ ಪತ್ರ ತಲುಪುತ್ತದೆ. ಅವಳು ಉತ್ತರಿಸುವುದಿಲ್ಲ. ಅದೇ ಕಾಲ ಲಾರ್ಡ್ ವಾರ್‌ಬರ್ಟನ್ ಅವಳಿಗೆ ಮದುವೆಯ ಬೇಡಿಕೆ ಹಾಕುತ್ತಾನೆ. ಮದುವೆಯಿಂದ ಅಷ್ಟರಲ್ಲೇ ತನ್ನ ಸ್ವಾತಂತ್ರ್ಯ ನಷ್ಟವಾಗುವದೆಂದು ನಂಬಿದ ಇಝೂಬೆಲ್ ಅದನ್ನು ಸ್ವೀಕರಿಸುವುದಿಲ್ಲ. ಅತ್ತ ಸ್ನೇಹಿತೆ ಹೆನ್ರಿಯೆಟ್ ಎಂದು ಇಝೂಬೆಲ್‌ಳೂ ಯೂರೋಪು ನಿವಾಸಿಯಾಗುತ್ತಾಳೋ ಎಂಬ ಭಯದಿಂದ ಗುಡ್‌ವುಡ್‌ನ ಭೆಟ್ಟಿಯ ಸಿದ್ಧತೆ ಮಾಡುತ್ತಾಳೆ. ರಾಲ್ಫ್, ಇಝೂಬೆಲ್, ಹೆನ್ರಿಯೆಟ್ ಇವರು ರಾಲ್ಫ್‌ನ ಮಿತ್ರ ಬೆಂಟ್‌ಲಿಂಗ್‌ನನ್ನು ನೋಡಲು ಲಂಡನ್ನಿಗೆ ಹೋಗುತ್ತಾರೆ. ಬೆಂಟ್‌ಲಿಂಗ್ ಹೆನ್ರಿಯೆಟ್‌ಳಲ್ಲಿ ಆಸಕ್ತನಾಗುತ್ತಾನೆ. ಆಗ ಅವರು ಇಳಿದ ಹೋಟೆಲಲ್ಲಿ ಗುಡ್‌ವುಡ್ ಇಝೂಬೆಲ್‌ಳನ್ನು ಸಂಧಿಸಿ ಮದುವೆಯ ಬೇಡಿಕೆ ಪ್ರಸ್ತಾಪಿಸುತ್ತಾನೆ. ತನ್ನ ಅಚಲ ಪ್ರೇಮ ತೋಡಿಕೊಳ್ಳುತ್ತಾನೆ. ಅವನ ಆಕ್ರಮಕ ಪ್ರವೃತ್ತಿಗೆ ಭೀತಳಾದ ಇಝೂಬೆಲ್ ಬೇಡಿಕೆಯನ್ನು ತಿರಸ್ಕರಿಸುತ್ತಾಳೆ. ಅವನು ನಿರಾಶನಾಗಿ ಅಮೆರಿಕಾಗೆ ಹಿಂತಿರುಗುತ್ತಾನೆ. ಆಗ ರಾಲ್ಫ್‌ನ ತಂದೆ ಮರಣಶಯ್ಯೆಯಲ್ಲಿದ್ದಾನೆಂದು ಲೀಡಿಯಾಳ ತಂತಿ ತಲುಪುತ್ತದೆ. ರಾಲ್ಫ್ ಇಝೂಬೆಲ್ ತಕ್ಷಣ ಗಾರ್ಡನ್ ಕೋರ್ಟಿಗೆ ಮರಳುವರು. ಡೇನಿಯಲ್ ತನ್ನ ಆಸ್ತಿ ವಿಭಜನೆಯ ವಿಚಾರ ತಿಳಿಸುತ್ತಾನೆ. ಆಗ ರಾಲ್ಫ್ ಇಝೂಬೆಲ್‌ಳಿಗೆ ತನ್ನಷ್ಟೇ ಸಿಗಬೇಕೆಂದು ವಾದಿಸುತ್ತಾನೆ. ಅವಳು ಆರ್ಥಿಕ ಸ್ವಾತಂತ್ರ್ಯ ಪಡೆದರೆ ಮಾನಸಿಕ ಸ್ವಾತಂತ್ರ್ಯ ಕಾಪಾಡಿಕೊಳ್ಳುವಳು ಎಂಬುದು ಅವನ ವಾದವಾದರೆ, ಧನಾನ್ವೇಷಕರು ಅವಳನ್ನು ವಂಚಿಸುತ್ತಾರೆ ಎಂಬುದು ತಂದೆಯ ವಾದ. ಕೊನೆಗೆ ತಂದೆ ಅವಳಿಗೆ 20,000 ಪೌಂಡು ಆಸ್ತಿ ಬಿಟ್ಟು ಸಾಯುತ್ತಾನೆ. ಇಝೂಬೆಲ್ ಪ್ರಥಮತಃ ದಿಗ್ಭ್ರಾಂತಳಾಗುತ್ತಾಳೆ. ಅವಳ ಆಂಟಿ ಲೀಡಿಯಾ ಫ್ಲಾರೆನ್ಸದಲ್ಲಿ ತನ್ನದೇ ಮನೆಮಾಡಿ ಪ್ರತ್ಯೇಕ ವಾಸವಾಗಿದ್ದು ಆಗಾಗ ಗಾರ್ಡನ್ ಕೋರ್ಟಿಗೆ ಬಂದು ಹೋಗುತ್ತಿದ್ದಳು. ಆಗ ಗಂಡನ ಮರಣದ ನಂತರ ಲೀಡಿಯಾ ಇಝೂಬೆಲ್‌ಳೊಂದಿಗೆ ಪ್ಯಾರೀಸಿಗೆ ಹೋಗುತ್ತಾಳೆ. ಇಝೂಬೆಲ್‌ಳಿಗೆ ಹೊಸ ಸ್ಥಳ ಹೊಸ ಜನ ಸಮಾಜ ನೋಡುವ ಕುತೂಹಲ. ಆದರೆ ಅಲ್ಲಿ ವಾಸವಾಗಿದ್ದ ಹಿಂದಿನ ಅಮೆರಿಕನ್ನರ ವರ್ತನೆ ನೋಡಿದಾಗ ತುಂಬ ನಿರಾಸೆಯಾಗುತ್ತದೆ. ಅವರ ಸೋಮಾರಿತನ ಭೋಗಲಾಲಸೆಗೆ ಮರುಗುತ್ತಾಳೆ. ಆ ಸಮಯ ಹೆನ್ರಿಯೆಟ್ ಮತ್ತು ಬೆಂಟ್‌ಲಿಂಗ್ ಅಲ್ಲಿಗೆ ಬರುತ್ತಾರೆ. ಫ್ಲಾರೆನ್ಸಿಗೆ ಹೋಗುವಾಗ ಹಾದಿಯಲ್ಲಿ ಸಾನ್‌ರೀಮೋದಲ್ಲಿ ರಾಲ್ಫ್‌ನೊಡನೆ ಕೆಲದಿನ ಆನಂದದಿಂದ ಕಳೆಯುತ್ತಾಳೆ. ಫ್ಲಾರೆನ್ಸಿಗೆ ಬಂದಾಗ ಇಝೂಬೆಲ್ ಸಾಕಷ್ಟು ಆಸ್ತಿವಂತಳೆಂದು ತಿಳಿದ ಲೀಡಿಯಾಳ ಸ್ನೇಹಿತೆ ಮ್ಯಾಡಂ

ಮರ್ಲ ತನ್ನ ಜಾಲ ಬೀಸುತ್ತಾಳೆ. ಕಟ್ಟಕಡೆಗೆ ಸಾಯುವಾಗ ಡೇನಿಯಲ್ ಹೇಳಿದ್ದು ಭವಿಷ್ಯವಾಣಿಯಾಯಿತು. ಅವಳ ಆಪ್ತಮಿತ್ರನಾದ ಗಿಲ್ಬರ್ಟ್ ಆಸ್ಮಂಡನಿಗೆ ಇಝಾಬೆಲ್‌ಳ ವಿಷಯ ತಿಳಿಸಿ ಅವನನ್ನು ವಿವಾಹೋತ್ಸುಕನನ್ನಾಗಿ ಮಾಡುತ್ತಾಳೆ. ಆಸ್ಮಂಡ ಅಮೆರಿಕಾದಲ್ಲಿ ಹುಟ್ಟಿದವನು, ಇಟಲಿಯಲ್ಲಿ ಬೆಳೆದವನು, ಯೂರೋಪು ನಿವಾಸಿ, ಕಲಾವಸ್ತು ಸಂಗ್ರಾಹಕ, ಚಿಕ್ಕ ಆದಾಯದವನು. ಅವನ ಒಬ್ಬ ಮಗಳು ಪ್ಯಾನ್ಸಿ ಕಾನ್ವೆಂಟಿನಲ್ಲಿ ಓದುತ್ತಿದ್ದಾಳೆ. ಮ್ಯಾಡಂ ಮರ್ಲ ಆಸ್ಮಂಡ್ ಇಝಾಬೆಲ್‌ರ ಭೇಟಿ ಮಾಡುತ್ತಾಳೆ. ಆಸ್ಮಂಡನ ತೋರಿಕೆಯದಾದರೂ ಒಳ್ಳೇ ಅಭಿರುಚಿ ಸುಶ್ಲೀಲ ವರ್ತನೆ ಏನೂ ಅರಿಯದ ಇಝಾಬೆಲ್‌ಳನ್ನು ಆಕರ್ಷಿಸುತ್ತದೆ. ಅವನ ಮನೆಗೂ ಹೋಗುತ್ತಾಳೆ. ಅಲ್ಲಿ ಅವನ ಸೋದರಿ ಕೌಂಟೆಸ್ ಜೇಮಿನಿ ಅವಳನ್ನು ಕಾಣುತ್ತಾಳೆ. ವಿಷಯ ತಿಳಿದ ಜೇಮಿನಿ ತಂತ್ರ ಕಂಡರೂ ಸುಮ್ಮನಿರುತ್ತಾಳೆ. ಆಸ್ಮಂಡ್ ಲೀಡಿಯಾಳ ಮನೆಗೆ ಬರಹೋಗುವುದೂ ಆಗ ಇಝಾಬೆಲ್‌ಳನ್ನು ಮೋಹಿಸುವುದೂ ನಿರಾತಂಕವಾಗಿ ಸಾಗುತ್ತದೆ. ರಾಲ್ಫ್‌ನಿಗೆ ಅದರ ಸುಳಿವಾದರೂ ಇಝಾಬೆಲ್ ಆಸ್ಮಂಡನನ್ನು ಮದುವೆಯಾಗಲಾರಳೆಂದೇ ನಂಬಿದ್ದ. ಅದೇ ಕಾಲ ಹೆನ್ರಿಯೆಟ್ ಹಾಗೂ ಬೆಂಟ್ಲಿಂಗ್ ಅಲ್ಲಿಗೆ ಬಂದು, ಒಟ್ಟುಗೂಡಿ ರೋಮಿಗೆ ಹೋಗುತ್ತಾರೆ. ರೋಮ್‌ದಲ್ಲಿ ಆಸ್ಮಂಡ್ ಬಂದು ಕೂಡಿಕೊಳ್ಳುತ್ತಾನೆ. ಇಝಾಬೆಲ್ ಅವನೊಡನೆ ಯೂರೋಪು ಸುತ್ತಾಡಿ, ಮರ್ಲ್‌ಳೊಡನೆ ಮಧ್ಯಪೂರ್ವದ ದೇಶಗಳನ್ನು ಸುತ್ತಾಡಿ ಫ್ಲಾರೆನ್ಸಿಗೆ ಬರುತ್ತಾಳೆ. ಅಷ್ಟರಲ್ಲಿ ಮ್ಯಾಡಂ ಮರ್ಲಳ ತಂತ್ರ ಸಫಲವಾದದ್ದಿರುತ್ತದೆ. ಮರಳಿದಾಕ್ಷಣ ಇಝಾಬೆಲ್ ಆಸ್ಮಂಡನನ್ನು ವರಿಸುತ್ತಾಳೆ. ಎಲ್ಲರೂ ವಿರೋಧಿಸುತ್ತಾರೆ. ರಾಲ್ಫನಂತೂ ಸ್ತಂಭೀಭೂತನಾಗುತ್ತಾನೆ. ಪ್ಯಾನ್ಸಿಗೆ ಮಹದಾನಂದ. ಅಂತೆಯೇ ಮ್ಯಾಡಂ ಮರ್ಲಳಿಗೆ, ಪ್ಯಾನ್ಸಿಯನ್ನು ಪ್ರೀತಿಸುವ ಚತುರ ತಾಯಿ ಸಿಕ್ಕಿದಳೆಂದು. ಮದುವೆಯಾದ ಎರಡು ವರುಷಗಳಲ್ಲೇ ಮದುವೆ ಸೋಲಾದದ್ದು ಇಝಾಬೆಲ್‌ಳಿಗೆ ಅರಿವಾದರೂ ಅದನ್ನು ವರ್ತನೆಯಲ್ಲಿ ತೋರಗೊಡುವುದಿಲ್ಲ. ಅವಳ ಸಾಮಾಜಿಕ ಕೂಟಗಳು ನಡೆದೇ ಇರುತ್ತವೆ. ಆಗ ಎಡ್ವರ್ಡ್ ರೋಜಿಯರ್ ಎಂಬ ತರುಣ ಪ್ಯಾನ್ಸಿಗಾಗಿ ತನ್ನ ಪ್ರೇಮ ತೋಡಿಕೊಳ್ಳುತ್ತಾನೆ. ಅದೇ ಸಮಯ ಲಾರ್ಡ್ ವಾರ್‌ಬರ್ಟನ್‌ನೂ ಪ್ಯಾನ್ಸಿಗಾಗಿ fancy ತಳೆದು ತನ್ನ ಬೇಡಿಕೆ ಸಾರುತ್ತಾನೆ. ಆಸ್ಮಂಡ್ ಹಣಕ್ಕಾಗಿ ವಾರ್‌ಬರ್ಟನ್‌ನಿಗಾಗಿಯೂ, ಇಝಾಬೆಲ್ ಪ್ರೇಮಕ್ಕಾಗಿ ರೋಜಿಯರ್‌ಗಾಗಿಯೂ ಯತ್ನಿಸುತ್ತಾರೆ. ವಿವಾಹೋತ್ತರದಲ್ಲಿ ಪತಿಪತ್ನಿಯರ ಸಂಘರ್ಷದ ಮೊದಲ ಘಟ್ಟ ಇದಾಗುತ್ತದೆ. ಕೆಲ ದಿನಗಳ ನಂತರ ಒಂದು ದಿನ ಮ್ಯಾಡಂ ಮರ್ಲ್ ತುಂಬ ಸಲಿಗೆಯಿಂದ ಎಂಬಂತೆ ಆಸ್ಮಂಡನ ತೀರ ಹತ್ತಿರ ನಿಂತಿದ್ದು ಕಾಣುತ್ತದೆ. ಅವರಿಬ್ಬರ ಗುಪ್ತ ಕಾರಸ್ಥಾನದ ಬಗ್ಗೆ ಇಝಾಬೆಲ್‌ಳಲ್ಲಿ ಸಂಶಯ ಮೂಡುತ್ತದೆ. ಗುಡ್‌ವುಡ್ ಪುನಃ ಅಲ್ಲಿಗೆ ಬಂದು ಆಸ್ಮಂಡ್‌ನನ್ನು ಬಿಡಲು ಪ್ರೇರೇಪಿಸುತ್ತಾನೆ. ಆದರೆ ಇಝಾಬೆಲ್ ಅವನನ್ನು ಪುನಃ

ತಿರಸ್ಕರಿಸುತ್ತಾಳೆ. ಅದೇ ಸಮಯ ರಾಲ್ಫ್ ಮರಣಶಯ್ಯೆಯಲ್ಲಿದ್ದಾನೆಂದು ತಂತಿ ತಲುಪುತ್ತದೆ. ಇಝಾಬೆಲ್ ಹೋಗಲು ಸಿದ್ಧಳಾಗುತ್ತಾಳೆ. ಆಸ್ಮಂಡ್ ವಿರೋಧಿಸುತ್ತಾನೆ. ಹೋಗಕೂಡದೆಂದು ಆಜ್ಞೆ ಮಾಡುತ್ತಾನೆ. ಅವಳು ಅಷ್ಟೇ ಹಟದಿಂದ ಹೋಗಲು ತಯಾರಾಗುತ್ತಾಳೆ. ಜೇಮಿನಿ ಅವಳನ್ನು ಕಂಡು ಪ್ಯಾನ್ಸಿ ಆಸ್ಮಂಡ – ಮರ್ಲರ ಮಗಳು ಎಂದೂ, ಅವಳಿಗೆ ಹಣದ ಕೊರತೆ ಇರಬಾರದೆಂದು ಈ ವಿವಾಹ ಮರ್ಲ ಮಾಡಿಸಿದಳೆಂದೂ ತಿಳಿಸುತ್ತಾಳೆ. ಪ್ಯಾನ್ಸಿಯ ಬಗ್ಗೆ ತುಂಬಾ ಅನುಕಂಪಭರಿತಳಾದ ಇಝಾಬೆಲ್ ಇಂಗ್ಲೆಂಡಿಗೆ ಹೋಗುವ ಮುನ್ನ ಕಾನ್ವೆಂಟಿಗೆ ಪ್ಯಾನ್ಸಿಯನ್ನು ನೋಡಲು ಹೋಗುತ್ತಾಳೆ. ಅಲ್ಲಿ ಮರ್ಲಳನ್ನು ಕಾಣುತ್ತಾಳೆ. ಗುಟ್ಟು ರಟ್ಟಾಗಿದೆಯೆಂದು ತಿಳಿದ ಮರ್ಲ ತಾನು ಅಮೆರಿಕೆಗೆ ಹೋಗುತ್ತಿದ್ದೇನೆಂದೂ, ಇಝಾಬೆಲ್‌ಳಿಗೆ ಆಸ್ತಿ ಸಿಕ್ಕಿದ್ದು ರಾಲ್ಫನ ಒತ್ತಾಯದಿಂದೆಂದೂ ತಿಳಿಸುತ್ತಾಳೆ. ಇಝಾಬೆಲ್ ಇಂಗ್ಲೆಂಡಿಗೆ ಬಂದಾಗ ಹೆನ್ರಿಯೆಟ್ – ಬೆಂಟ್ ಲಿಂಗರ ವಿವಾಹಘೋಷಣೆಯಾಗುತ್ತದೆ. ಇಝಾಬೆಲ್ ರಾಲ್ಫನನ್ನು ಕೊನೇ ರಾತ್ರಿ ಕಂಡಾಗ ಇಬ್ಬರೂ ಭಾವಾವೇಶಭರಿತರಾಗುತ್ತಾರೆ, ಆಲಿಂಗಿಸಿಕೊಳ್ಳುತ್ತಾರೆ. ಅದೇ ರಾತ್ರಿ ರಾಲ್ಫ ಸಾಯುತ್ತಾನೆ. ಇಝಾಬೆಲ್‌ಳಿಗೆ ಭೂತದರ್ಶನವಾಗುತ್ತದೆ. ರಾಲ್ಫನ ಸ್ಮಶಾನಯಾತ್ರೆಯಾದ ನಂತರ ವಾರಬರ್ಟನ್ ಇಂಗ್ಲಿಷ್ ಹುಡುಗಿಯೊಡನೆ ವಿವಾಹ ಘೋಷಣೆ ಮಾಡುತ್ತಾನೆ. ಗುಡ್‌ವುಡ್ ಪುನಃ ಬಂದು ಅವಳನ್ನು ಬಲವಂತವಾಗಿ ಮುದ್ದಿಸಿ ಹೋಗುತ್ತಾನೆ. ಈಗಲಾದರೂ ಒಪ್ಪಬಹುದೆಂದು ನಂಬಿ ಬಂದಿದ್ದ ಗುಡ್‌ವುಡ್ ಎರಡು ದಿನಗಳ ನಂತರ ಹೆನ್ರಿಯೆಟ್‌ಳ ಸೂಚನೆಯಂತೆ ಅವಳ ರೂಮಿಗೆ ಹೋದಾಗ, ಇಝಾಬೆಲ್ ಆಗಲೇ ರೋಮ್‌ಗೆ ಹೋದಳೆಂದು ಹೆನ್ರಿಯೆಟ್ ತಿಳಿಸುತ್ತಾಳೆ. 'ಇದು ನೋಡು ಗುಡ್‌ವುಡ್, ಸ್ವಲ್ಪ ಕಾಯು' ಎನ್ನುತ್ತಾಳೆ. ಇಲ್ಲಿಗೆ ಕಾದಂಬರಿ ಮುಗಿಯುತ್ತದೆ.

3

ಕಾದಂಬರಿಯನ್ನು ಜೇಮ್ಸ್ 1880ರ ವಸಂತದಲ್ಲಿ ಪ್ರಾರಂಭಿಸಿ ಡಿಸೆಂಬರ್ 1881ರಲ್ಲಿ ಮುಕ್ತಾಯಗೊಳಿಸಿದ. ಆಗ ಇಂದು ಪ್ರಚಲಿತವಿರುವ ವಿವಿಧ ವಾದಗಳು ಇದ್ದಿಲ್ಲ. ಅಸ್ತಿತ್ವವಾದದ ಸಣ್ಣ ಛಾಯೆ ಇದ್ದಂತೆನಿಸಿದರೂ, ಕರ್ಕೇಗಾರ್ಡ – ನೀಟ್ಸೆ ಅವರ ವಿಚಾರಗಳು ಅಷ್ಟು ಜನಪ್ರಿಯವಾಗಿದ್ದಿಲ್ಲ. ಅಂತೆಯೇ ಹೆಗಲ್-ಮಾರ್ಕ್ಸ್‌ರವರ ವಿಚಾರ. ಜೇಮ್ಸ್ ಸ್ವತಃ ತಾತ್ವಿಕ ಪಾಂಡಿತ್ಯಕ್ಕೆ ಅಂಟಿಕೊಂಡವನಲ್ಲ. ಸುಪ್ರಸಿದ್ಧ ಪ್ರಾಗ್ಮಟಿಸ್ಟ್ ವಿಲಿಯಂ ಜೇಮ್ಸ್‌ನ ತಮ್ಮನಾದರೂ ಅವನ ಪ್ರಭಾವಕ್ಕೆ ಒಳಗಾಗಿಲ್ಲ. ಬದಲಾಗಿ ಆಗ ಅಮೆರಿಕಾದಲ್ಲಿ ಪ್ರಚಾರದಲ್ಲಿರುವ ಎಮರ್‌ಸನ್ ಮತ್ತು ಥೋರೋ ಇವರ ವಿಚಾರಗಳೂ ಯೂರೋಪಿನ ಗಾಯಥೇ ಇವರ ವಿಕಸನ ವಿಚಾರಗಳೂ ಅವನನ್ನು ಆಕರ್ಷಿಸಿದ್ದವು.

ಕಾದಂಬರಿಯ ನಾಯಕಿ ಇಝಾಬೆಲ್ ತನಗೆ ಪೂರ್ಣ ಸ್ವಾತಂತ್ರ್ಯ ಇರಬೇಕೆಂದೂ ಆದರಂತೇ ತಾನು ವಿಚಾರ-ಆಚಾರ ರೂಪಿಸಿಕೊಳ್ಳುವೆನೆಂದೂ ತನ್ನ ಲೋಕಜ್ಞಾನ ಬೆಳೆಸಬೇಕೆಂದೂ, ಹಟತೊಟ್ಟಿದ್ದು ಎಮರ್‌ಸನ್-ಗಾಯಥೇ ಇವರ ವಿಚಾರಗಳಿಗೆ ಹತ್ತಿರವಾಗುತ್ತದೆ. ಇಷ್ಟಾದರೂ ಜೇಮ್ಸ್‌ನಿಗೆ ಮಾನವೀಯ ಸಂಬಂಧಗಳೇ ಮುಖ್ಯವಾಗಿದ್ದವು. ಬದುಕು ಮಾನವರ ಪರಸ್ಪರ ಸಂಬಂಧಗಳ ಸಮಸ್ಯೆಗೇ ಅನ್ವಯಿಸುವಂಥಾದ್ದು ಎಂಬುದು ಅವನ ವಾದ. ಆದನ್ನೇ ಹೊರಗಿನಿಂದ ಸೂಕ್ಷ್ಮವಾಗಿ ದಿಟ್ಟಿಸಿ ಪರಿಶೀಲಿಸಿ ಅರ್ಥೈಸಿಕೊಂಡ ಕ್ರಿಯೆ-ಪ್ರತಿಕ್ರಿಯೆಗಳ ನಾಟಕಮಂದಿರವಾಗಿ ಬದುಕನ್ನು ಕಂಡಿದ್ದ. ವರ್ಡ್ಸ್‌ವರ್ಥನಂಥ ಕವಿಯೊಡನೆ ನಿಸರ್ಗ ಮಾತನಾಡಿದಂತೆ ಜೇಮ್ಸ್‌ನೊಡನೆ ಮಾನವತೆ ಮಾತನಾಡುತ್ತಿತ್ತು. ಅನುಭವ ಯಾವುದೇ ಇರಲಿ ಅದನ್ನು ಬೌದ್ಧಿಕವಾಗಿ ಅರ್ಥೈಸಿಕೊಂಡು ಅದರ ಮಹತ್ವ ತಿಳಿದುಕೊಳ್ಳದಿದ್ದರೆ ಆ ಮಟ್ಟಿಗೆ ಅದು ಮೌಲ್ಯಹೀನವಾದದ್ದು ಎಂಬುದೂ ಅವನ ವಾದ. ಅದಕ್ಕೆ ಜ್ಞಾನದಾಹ ಮುಖ್ಯ. ಆದ್ದರಿಂದ ಇಝಾಬೆಲ್ ತಾನು ಸಾಕಷ್ಟು ಲೋಕಜ್ಞಾನ ಪಡೆಯಬೇಕೆಂದು ತವಕಿಸುತ್ತಿದ್ದಳು. ಲೀಡಿಯಾ ಮೊಟ್ಟಮೊದಲು ಅವಳನ್ನು ಲೈಬ್ರರಿಯಲ್ಲಿ ಕಂಡಾಗ ಅವಳ ಕೈಯಲ್ಲಿ ತಾತ್ವಿಕತೆಯ ಪುಸ್ತಕ ಇದ್ದಿತ್ತು. ತನ್ನ ಮಾನಸಿಕ ವಿಕಾಸಕ್ಕಾಗಿ ಹಟದಿಂದ ಅದನ್ನು ಓದುತ್ತಿದ್ದಳೆಂಬುದು ಇಲ್ಲಿ ಮುಖ್ಯವಾಗುತ್ತದೆ. ತನ್ನ ವಿಚಾರಸ್ವಾತಂತ್ರ್ಯದ ಬಗ್ಗೆ ಅವಳಿಗಿದ್ದ ಅಭಿಮಾನ ಅಷ್ಟಿಷ್ಟಲ್ಲ. ಲೀಡಿಯಾ ಅವಳನ್ನು ದತ್ತಕ ತೆಗೆದುಕೊಳ್ಳಬಹುದು ಎಂದು ತಿಳಿದಾಗ 'ತಾನು ದತ್ತಕಕ್ಕೆ ಉಮೇದುವಾರಳಲ್ಲ' ಎನ್ನುತ್ತಾಳೆ. 'ತಾನು ಮಾಡಿದ್ದಲ್ಲಿ ಮಾಡುವಲ್ಲಿ ಒಳ್ಳೇದು ಕೆಟ್ಟದ್ದು ಎರಡನ್ನೂ ತಿಳಿಸು, ಅಂದರೆ ಯೋಗ್ಯ ಆಯ್ಕೆ ತಾನು ಮಾಡುತ್ತೇನೆ' ಎನ್ನುತ್ತಾಳೆ ಲೀಡಿಯಾಳಿಗೆ. 'ತಾನು ಸ್ವಾತಂತ್ರ್ಯವನ್ನು ಹೆಚ್ಚಾಗಿ ಪ್ರೀತಿಸುತ್ತೇನೆ' ಎಂದು ಆಗಾಗ ಎನ್ನುತ್ತಾಳೆ. ಅಲ್ಲದೆ ಮದುವೆ ಸೋಲಾದಾಗ ತಾನು ಸ್ವತಂತ್ರವಿಚಾರದಿಂದಲೇ ವಿವಾಹಬದ್ಧಳಾದೆ ಎಂದು ಅದರ ಜವಾಬ್ದಾರಿ ಹೊರುತ್ತಾಳೆ. ಇಂಥಲ್ಲೆಲ್ಲ ಅಸ್ತಿತ್ವವಾದದ ಛಾಯೆ ಕಾಣಬಹುದು. ಆದರೆ ಮೇಲೆ ಹೇಳಿದವರ ವಿಚಾರಗಳ ಪ್ರಭಾವವೂ ಇದೆ. ಅದಕ್ಕನುಸರಿಸಿಯೇ ಇಝಾಬೆಲ್‌ಳ ವರ್ತನೆ ಕಾದಂಬರಿಯುದ್ದ ಇದೆ. ಗುಡ್‌ವುಡ್, ವಾರಬರ್ಟನ್‌ರಂಥ ಹಣವಂತರು ತಾವಾಗಿಯೇ ಅವಳೆದುರು ತಲೆಬಗ್ಗಿಸಿದಾಗ ಅವರನ್ನು ಸ್ವೀಕರಿಸದೇ ತನ್ನ ವಿಚಾರ ಸ್ವಾತಂತ್ರ್ಯ ಕಾಯ್ದುಕೊಳ್ಳುತ್ತಾಳೆ. ಆಗ ಅವಳಿಗೆ ತನ್ನ ಆರ್ಥಿಕ ಸ್ಥಿತಿ ಕೆಟ್ಟದ್ದಿತು ಎಂಬುದರ ಅರಿವೂ ಇತ್ತು. ಇಷ್ಟಾದರೂ ಆರ್ಥಿಕ ಸ್ಥಿತಿಯಿಂದ ತೀರ ಸಾಮಾನ್ಯವಾದ ಆಸ್ಮಂಡ್‌ನನ್ನು ವರಿಸುವ ಧೈರ್ಯಮಾಡಿದಳು. ಮಾನವೀಯ ಸಂಬಂಧಗಳ ಬೆಸುಗೆ ಹಾಗೂ ಘರ್ಷಣೆಗಳ ಸಂದರ್ಭದಲ್ಲಿ ಬದುಕಿನ ಗೂಢ ತೆರೆದು ತೋರಿಸುವುದು ಜೇಮ್ಸ್‌ನ ಪದ್ಧತಿ. ಆದ್ದರಿಂದ ಈ ಶತಕದ ಸುಪ್ರಸಿದ್ಧ ಆಂಗ್ಲ ಕಾದಂಬರಿಕಾರ ಜೋಸೆಫ್ ಕಾನ್ರಾಡ್ ಜೇಮ್ಸ್‌ನಿಗೆ 'Historian of Fine Consciences' 'ಒಳ್ಳೇ ಅಂತರಂಗಗಳ ಚರಿತ್ರಕಾರ' ಎಂಬ

ಬಿರುದು ನೀಡಿದ್ದಾನೆ. ತಾತ್ವಿಕದರ್ಶನದಲ್ಲಿ ಹೆಚ್ಚು ಆಸಕ್ತನಲ್ಲದಿದ್ದರೂ ಮೌಲ್ಯಗಳ ಲೋಕವನ್ನು ದೃಢವಾಗಿ ನಂಬಿದ್ದ. 'To be great work of Art it must lift up the heart'. 'ಕೃತಿ ಶ್ರೇಷ್ಠವಾಗಬೇಕಾದರೆ ಅದು ಅಂತರಂಗವನ್ನು ಮೇಲೆತ್ತಬೇಕು' ಎಂಬುದೇ ಅವನ ನಂಬಿಕೆಯಾಗಿತ್ತು.

'ಅಂತರ್‌ರಾಷ್ಟ್ರೀಯತೆ' ಜೇಮ್ಸ್‌ನ ಪ್ರಿಯ ವಿಷಯ. 'ದಿ ಅಮೆರಿಕನ್ಸ್' ಕಾದಂಬರಿಯಿಂದ ಹಿಡಿದು ಮುಂದಿನ ಬಹುಶಃ ಎಲ್ಲ ಕಾದಂಬರಿಗಳಲ್ಲಿ ಇದು ಶಾಖೋಪಶಾಖೆಯಾಗಿ ಬೆಳೆದು ನಿಂತಿದೆ. ಅಮೆರಿಕಾ (ಆ ಕಾಲಕ್ಕೆ) ಎಳೆಯ ರಾಷ್ಟ್ರ. ಅಲ್ಲಿಯ ಜನ ಹೆಚ್ಚು ಸರಳ ಸ್ವಭಾವದವರು, ಕಾರ್ಯಾಸಕ್ತರು, ಅಂತರಂಗಶುದ್ಧರು. ಆದರೆ ಯೂರೋಪು – ಇಂಗ್ಲೆಂಡ್‌ಗಳಂಥ ಹಳೇ ಭೂಖಂಡಗಳಲ್ಲಿ ವಿವಿಧ ಸಂಸ್ಕಾರಗಳ ಹಿನ್ನೆಲೆಯಲ್ಲಿ ಬದುಕು ನೈತಿಕ ಬಲ ಕಳೆದುಕೊಂಡು ಭೋಗಲಾಲಸೆ, ಸ್ವಾರ್ಥ, ಕುಕರ್ಮಗಳಿಗೆ ಇಳಿದಿದೆ – ಇದು ಅವನ ವಾದ. ಕಾದಂಬರಿಯ ನಾಯಕಿ ಅಮೆರಿಕನ್ ತರುಣಿ ತನ್ನ ಶುದ್ಧ ಸರಳ ಅಂತರಂಗವನ್ನು ಹೊತ್ತೇ ಮೊದಲ ಬಾರಿ ಇಂಗ್ಲೆಂಡ್–ಯೂರೋಪಿಗೆ ಬರುತ್ತಾಳೆ. ಇದೊಂದು ಧ್ರುವವಾದರೆ ಇನ್ನೊಂದು ಧ್ರುವಕ್ಕೆ ಹಿಂದೆಂದೋ ಅಮೆರಿಕಾದವರೇ ಆಗಿದ್ದು ತಮ್ಮೆಲ್ಲ ಬದುಕು ಯೂರೋಪಿನ ಉಪ್ಪುಂಡು ಬೆಳೆದಂಥ ತಳಕ್ಕೆ ವ್ಯವಹಾರಚತುರ, ಸ್ವಾರ್ಥಸಾಧಕ, ಧನಾನ್ವೇಷೀ ಮ್ಯಾಡಂ ಮರ್ಲ ಮತ್ತು ಆಸ್ಮಂಡ್. ಈ ನಡುವೆ ಅತ್ತ ಅಮೆರಿಕತ್ವ ತೊರೆದ, ಇತ್ತ ಯೂರೋಪಿಯನ್ನರಾಗಿ ಸಾಕಷ್ಟು ಕೆಡದ ಟಶೆಟ್ ಕುಟುಂಬ. ಇವರ ಪರಸ್ಪರ ಮುಖಾಮುಖಿಗಳ ಮುಖಾಂತರವೇ ಕಾದಂಬರಿಯ ಹಂದರ ಬೆಳೆಯುತ್ತದೆ. ಡೇನಿಯಲ್ ಟಶೆಟ್ ಅಪಾರ ಹಣ ಗಳಿಸಿದ್ದ ಬ್ಯಾಂಕರ್, ಮೂಲ ಅಮೆರಿಕನ್, ಸದ್ಯ ಇಂಗ್ಲೆಂಡ್ ನಿವಾಸಿ. ಅವನ ಹೆಂಡತಿ ಲೀಡಿಯಾ, ನಾಯಿಕೆಯನ್ನು ತಂದವಳು, ಗಂಡ ರೋಗಿಯಾದರೂ ತಾನು ಯೂರೋಪಿನ ಫ್ಲಾರೆನ್ಸ್‌ದಲ್ಲಿ ಮನೆಮಾಡಿ ಸ್ವತಂತ್ರ ವಾಸವಾಗಿದ್ದವಳು. ಗಾರ್ಡನ್ ಕೋರ್ಟಿಗೆ ಬಹಳ ದಿನಗಳ ನಂತರ ಬಂದರೂ ನೇರ ತನ್ನ ಕೋಣೆಗೆ ಹೋಗಿ 'ಏಳು ಗಂಟೆ ಸಂಜೆಗೆ ಬಾ ಎಂದು ನನ್ನ ಮಗನಿಗೆ ಹೇಳು' ಎಂದು ನೌಕರರಿಗೆ ಆಜ್ಞೆ ಮಾಡುತ್ತಾಳೆ ! ಆದರೆ ಯಾರ ಕೆಡಕನ್ನೂ ಬಯಸಿದವಳಲ್ಲ. ಆಸ್ಮಂಡ್ ಹಣಕ್ಕಾಗಿ ಇಝಾಬೆಲ್‌ಳನ್ನು ಮದುವೆಯಾಗಿ ತನ್ನ ಕಲಾತ್ಮಕ ವಸ್ತುಗಳಲ್ಲಿ ಅವಳೂ ಒಂದು ಎಂದು ನಂಬಿದವನು. ಮದುವೆಯಾದದ್ದೇ ಅವಳನ್ನು ಮಾನಸಿಕವಾಗಿ ಹಿಂಸಿಸುತ್ತಾನೆ. ಅವನೊಡನೆ ಗುಪ್ತಸಲಿಗೆ ಇಟ್ಟು ಪ್ಯಾನ್ಸಿಯನ್ನು ಹೆತ್ತ ಮ್ಯಾಡಂ ಮರ್ಲ ಹಣಕ್ಕಾಗಿಯೂ ಮಗಳಿಗೆ ಮಲತಾಯಿಯಾದರೂ ಇರಲಿ ಎಂತಲೂ ಇಝಾಬೆಲ್‌ಳನ್ನು ಆಸ್ಮಂಡ್‌ನ ಕೊರಳಿಗೆ ಕಟ್ಟಿ ತಾನು ಅಮೆರಿಕಾಗೆ ಮರಳುವಳು. ಇನ್ನು ಮಗಳಾದ ಪ್ಯಾನ್ಸಿಗೂ ಹಣವಂತನಿರಲಿ ಎಂದು ವಾರಬರ್ಟನ್‌ನನ್ನು ಆಸ್ಮಂಡ್ ಬರಮಾಡಿಕೊಂಡರೆ, ಹಣದಿಂದ ಸಾಮಾನ್ಯವಾದ ಪ್ರೇಮಿ ರೋಜಿಯರ್‌ನನ್ನು

ಧಿಕ್ಕರಿಸುತ್ತಾನೆ. ಅದಕ್ಕೆ ವಿರುದ್ಧವಾಗಿ ಇಝಬೆಲ್ ವಾರ್‌ಬರ್ಟನ್‌ನನ್ನು ನಿರುತ್ಸಾಹಗೊಳಿಸಿ ರೋಜಿಯರ್‌ನನ್ನು ಪ್ರೇರೇಪಿಸುತ್ತಾಳೆ. ಕೊನೆಗೆ ರಾಲ್ಫನನ್ನು ನೋಡಲೂ ಬಿಡುವುದಿಲ್ಲ ಆಸ್ಮಂಡ್ ; ಆದರೆ ಇಝಾಬೆಲ್ ತನ್ನ ನೈತಿಕ ಬಲ ಕಳಕೊಳ್ಳದೇ ಇಂಗ್ಲೆಂಡಿಗೆ ರಾಲ್ಫನಲ್ಲಿಗೆ ಹೋಗುತ್ತಾಳೆ. ಇಂಥ ಸಂದರ್ಭಗಳಲ್ಲಿ ಈ ಅಂತರ್‌ರಾಷ್ಟ್ರೀಯತೆಯ ವಿಷಯ ಸ್ಪಷ್ಟವಾಗಿ ಚಿತ್ರವತ್ತಾಗಿ ನಿಲ್ಲುತ್ತದೆ.

ಆ ಹಿಂದಿನ ರೋಮಾನ್ಸಗಳಂತೇ ರೋಮಿಯೋ–ಜ್ಯುಲಿಯೆಟ್ ಪ್ರೇಮಾಲಾಪಗಳೂ ಅದರ ಒತ್ತಡ ಹೆಚ್ಚಿಸುವ ಕೋಕಿಲಸಹಿತ ಉದ್ಯಾನಗಳೂ ಇಲ್ಲದಿದ್ದರೂ, ಮುಖ್ಯ ನಾಯಕಿ ಇಝಾಬೆಲ್‌ಳ ಚರಿತ್ರೆಯ ದೃಷ್ಟಿಕೋನದಿಂದ ಕಾದಂಬರಿ ಸಾಕಷ್ಟು ರೋಮ್ಯಾಂಟಿಕ್ ಆಗಿದೆ ಎನ್ನಬಹುದು. ವಿಚಾರ ಮತ್ತು ಆಚಾರ ಸ್ವಾತಂತ್ರ್ಯ, ಹಾಗೂ ಯಾವುದೇ ತರಹದ ದರ್ಪದ ಬಗ್ಗೆ ಪದೋನ್ನತಿಯ ಬಗ್ಗೆ ಜಿಗುಪ್ಸೆ ; ಇವೆರಡನ್ನೂ ತಲೆಯಲ್ಲಿ ಹೊತ್ತ ನಾಯಕಿ ರೋಮ್ಯಾಂಟಿಕ್ ಆಗಿ ಆಂಗ್ಲ ಲಾರ್ಡ್‌ನನ್ನೂ ಅಮೆರಿಕನ್ ಉದ್ಯೋಗಪತಿಯನ್ನೂ ಧಿಕ್ಕರಿಸಿ ಸಾಮಾನ್ಯನಾದ ಆಸ್ಮಂಡನನ್ನು ಮದುವೆಯಾದದ್ದು, ರೋಮ್ಯಾಂಟಿಕ್ ಅಂತ್ಯದಂತೇ ಅಲ್ಲಿಯೂ ಸೋಲು ಸಹಿಸಿದ್ದು, ಈ ದೃಷ್ಟಿಕೋನ ಚಿತ್ರಿಸುತ್ತಿದೆ. ಅವಳೆದುರು ಲಾರ್ಡ್ ವಾರ್‌ಬರ್ಟನ್, ಕಾಸ್ಪರ್ ಗುಡ್‌ವುಡ್, ಗಿಲ್ಬರ್ಟ್ ಆಸ್ಮಂಡ್ ಒಬ್ಬೊಬ್ಬರಾಗಿ ಮಂಡಿಯೂರುತ್ತಾರೆ. ಟಶೆಟ್ ಕುಟುಂಬವೇ ಅವಳಿಗೆ ಶರಣಾಗುತ್ತದೆ. ಎಲ್ಲರನ್ನೂ ಮೋಹಿನಿಯಂತೆ ಆಕರ್ಷಿಸುವ ವ್ಯಕ್ತಿತ್ವ ನಾಯಕಿಗಲ್ಲದೇ ಇನ್ಯಾರಿಗೆ ಇರಬೇಕು ? ಅದರಂತೆ ಪ್ಯಾನ್ಸಿಯನ್ನು ಬಯಸಿ ಬಂದ ಲಾರ್ಡ್‌ನನ್ನು ನಿಷ್ಕ್ರಿಯಗೊಳಿಸಿ ಸಣ್ಣ ಆದಾಯದ ರೋಜಿಯರ್‌ನನ್ನು ಹುರಿದುಂಬಿಸುತ್ತಾಳೆ. ಅವಳು ರೋಮ್ಯಾಂಟಿಕ್ ರಿಬೆಲ್ ಕೂಡ ಹೌದು. ಆಸ್ಮಂಡನ ಇಂಗಿತ ತಿಳಿದ ನಾಯಕಿ ಮುಂದೆ ಅವನ ಇಚ್ಛೆಯನ್ನೆಲ್ಲ ತಿರಸ್ಕರಿಸುತ್ತಾಳೆ, ಕೈಯಿಂದ ಜಾರುತ್ತಿರುವ ಸ್ವಾತಂತ್ರ್ಯ ಗಟ್ಟಿಯಾಗಿ ಹಿಡಿದಿಡಲು ಒದ್ದಾಡುತ್ತಾಳೆ. ನಾಯಿಕೆಯನ್ನು ಕೆಲ ವಿಮರ್ಶಕರು ಹಾರ್ಡಿಯ 'ಟೆಸ್ ಆಫ್ ದಿ ಡಬೆರ್‌ವಿಲ್'ನ ನಾಯಕಿಗೂ, ಟಾಲ್‌ಸ್ಟಾಯನ 'ಆನ್ನಾ ಕರೆನೀನಾ'ಗೂ ಹೋಲಿಸಿದ್ದಾರೆ.

ಜೇಮ್ಸ್ ವಾಸ್ತವವಾದಿಗಳಲ್ಲೊಬ್ಬನಾದರೂ ಪೂರ್ಣ ವಾಸ್ತವವಾದಿಯೂ ಅಲ್ಲ, ಅತ್ತ ಪೂರ್ಣ ರೋಮ್ಯಾಂಟಿಕ್‌ನೂ ಅಲ್ಲ. ಒಂದು ನೆಲೆಯಲ್ಲಿ ರೋಮ್ಯಾಂಟಿಕ್ ಸೂತ್ರ ಬದ್ಧತೆ ಇದ್ದರೂ ಇನ್ನೊಂದು ನೆಲೆಯಲ್ಲಿ ವಾಸ್ತವದ ವ್ಯಂಗ್ಯಗಳ ಚಿತ್ರಣ ಕಾದಂಬರಿಯುದ್ದಕ್ಕೂ ತುಂಬ ಖಚಿತವಾಗಿ ಗಂಭೀರವಾಗಿ ಬೆಳೆದಂತಿದೆ. ಹೆಣ್ಣಿಗೆ ಮದುವೆ ಮಹತ್ವದ ಘಟನೆ ; ಅದರ ಆಯ್ಕೆಯಲ್ಲಿ ಅವಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು, ಅಂದರೆ ಮದುವೆಯ ನಂತರ ಸ್ವಾತಂತ್ರ್ಯ ಕಾಯ್ದುಕೊಂಡು ಸ್ವಂತ ವಿಕಸನದ ದಾರಿ ಅವಳು ಕಂಡುಕೊಳ್ಳುತ್ತಾಳೆ, ಹೆಣ್ಣು ಗಂಡಿನ ಆಸ್ತಿಯಾಗಿರಬಾರದು – ಈ ವಿಚಾರದಿಂದ ಆಸ್ಮಂಡನನ್ನು

ಮದುವೆಯಾಗಿ ಅವನ ಕಲಾತ್ಮಕ ವಸ್ತುಗಳಲ್ಲಿ ಒಂದಾದಳು, ತನಗೆ ಪ್ರಿಯವಾದ ಸ್ವಾತಂತ್ರ್ಯವನ್ನೇ ಕಳಕೊಂಡಳು. ಅವಳನ್ನು ನಿಸ್ವಾರ್ಥಬುದ್ಧಿಯಿಂದ ಪ್ರೀತಿಸುವ ರಾಲ್ಫ್ ನಾದರೋ ಕ್ಷಯರೋಗಿ, ಮದುವೆಗೆ ಅಯೋಗ್ಯ ; ಧನಬಲ ಇದ್ದರೆ ಸ್ವತಂತ್ರಳಾಗಿ ಒಳ್ಳೇ ಗಂಡನನ್ನು ವರಿಸಿ ವಿಕಸನದ ದಾರಿ ಹಿಡಿಯುವಳೆಂಬ ನಂಬಿಕೆಯಿಂದ ತನ್ನರ್ಧ ಆಸ್ತಿ ಅವಳಿಗೆ ಬಿಟ್ಟುಕೊಡುವನು ; ಆದರೆ ಅವಳು ಮದುವೆಯಾದದ್ದು ಹಣಕ್ಕಾಗಿಯೇ ಬಾಯ್ತೆರೆದ ಆಸ್ಮಂಡನನ್ನು ; ಮದುವೆಯ ನಂತರ ಸ್ವಾತಂತ್ರ್ಯವನ್ನೂ ಕಳೆದುಕೊಂಡಳು, ಇದು ಅತ್ಯಂತ ವ್ಯಂಗ್ಯಾತ್ಮಕ ಪ್ರಕರಣ. ಡೇನಿಯಲ್ ವಿಭಜನೆಯ ಹೊತ್ತು, ತನ್ನ ಆಸ್ತಿ ಧನಾನ್ವೇಷಿಗೆ ಹೋಗಕೂಡದೆಂದು ನಿರ್ಧರಿಸಿದ್ದ ; ರಾಲ್ಫನ ಒತ್ತಾಯದಿಂದ ಇಝಾಬೆಲಳಿಗೆ ಅವಳ ಮುಖಾಂತರ ಧನಾನ್ವೇಷಿಗೇ ಹೋಯಿತೆಂಬುದೂ ಅಷ್ಟೇ ವ್ಯಂಗ್ಯಾತ್ಮಕವಾದದ್ದು. ಅಮೆರಿಕನ್ ಬದುಕಿನ ಅಭಿಮಾನಿ ಹೆನ್ರಿಯೆಟ್ ಬೆಂಟ್‌ಲಿಂಗ್ ನನ್ನು ಮದುವೆಯಾಗಿ ಇಂಗ್ಲೆಂಡಿನ ನಿವಾಸಿಯಾದದ್ದೂ, ಯೂರೋಪಿನಲ್ಲಿ ವಾಸಿಸಿದ ಮ್ಯಾಡಂ ಮರ್ಲ ತನ್ನ ಕುತಂತ್ರದ ಗುಟ್ಟು ರಟ್ಟಾದೊಡನೆ ಮರಳಿ ಅಮೆರಿಕೆಗೇ ಹೋಗುವುದೂ ವ್ಯಂಗ್ಯಭರಿತವಾದದ್ದು. ಧೂರ್ತತೆ ದಕ್ಷತೆಯ ಪ್ರತಿಮೆಯಾದ ಲೀಡಿಯಾ ಮ್ಯಾಡಂ ಮರ್ಲಳ ಕುತಂತ್ರ ತಿಳಿಯದೇಹೋದದ್ದೂ, ನೈಜಪ್ರೇಮದ ವಾರ್‌ಬರ್ಟನ್ ಮತ್ತು ಗುಡ್‌ವುಡ್‌ರನ್ನು ತಿರಸ್ಕರಿಸಿ ಖೊಟ್ಟಿ ಪ್ರೇಮದ ಆಸ್ಮಂಡನನ್ನು ನಾಯಿಕೆ ಮದುವೆಯಾದದ್ದೂ ಅದನ್ನು ತಿಳಿದೂ ಕೊನೆಗೆ ಇಝಾಬೆಲ್ ಆಸ್ಮಂಡನಲ್ಲಿಗೆ ಹೋಗುವದೂ ವಾಸ್ತವದ ವ್ಯಂಗ್ಯಭರಿತ ಪ್ರಕರಣಗಳು. ಅದರಂತೇ ಪ್ಯಾನ್ಸಿ ತಾಯಿಯಂತೆ ಅರಿವಿಲ್ಲದಿದ್ದರೂ ಮರ್ಲಳನ್ನು ದ್ವೇಷಿಸುವುದು, ಮಗಳ ಪ್ರೇಮಕ್ಕಾಗಿ ನಿಸ್ಸಹಾಯಕಳಾಗಿ ಮರ್ಲ ಒದ್ದಾಡುವುದೂ ಒಂದು ವ್ಯಂಗ್ಯಚಿತ್ರ. ಇಂಥ ವಿವಿಧ ಪ್ರಕರಣಗಳು ಬದುಕಿನ ವಾಸ್ತವದ ವ್ಯಂಗ್ಯಾತ್ಮಕ ಗತಿಯ ಬಗ್ಗೆ ಸಾಕಷ್ಟು ಹೇಳುತ್ತಿವೆ.

ಮೊದಲೇ ಹೇಳಿದಂತೆ ಜೇಮ್ಸ್‌ನ ಪದ್ಧತಿ ಪಾತ್ರಗಳ ಸನ್ನಿವೇಶಗಳ ತಾಕಲಾಟ ಹಾಗೂ ಬೆಳವಣಿಗೆಯ ಮುಖಾಂತರ ವಿಷಯ ಸೂಚಿಸುವದು. ಇಡೀ ಕಾದಂಬರಿ ಇಝಾಬೆಲಳ ವ್ಯಕ್ತಿತ್ವ, ವಿಚಾರ-ಆಚಾರ, ವಿವಿಧ ಸನ್ನಿವೇಶಗಳಿಗೆ ಅವಳ ಪ್ರತಿಕ್ರಿಯೆ, ವಿವಿಧ ಪಾತ್ರಗಳೊಡನೆ ತಾಕಲಾಟ – ಇವುಗಳ ಸುತ್ತ ಹೆಣೆಯಲ್ಪಟ್ಟಿದೆ. ಜೇಮ್ಸ್‌ನ ಪ್ರಿಯವಾದ ಕಲ್ಪನೆಯಂತೆ ಅವಳು ಉಚ್ಚಪಾತ್ರ. ಎಲ್ಲರನ್ನೂ ಮೆಚ್ಚಿಸುವ ಯೋಗ್ಯತೆಯವಳು. ಆಸ್ತಿ ಬಂದಾಗ ಅವಳು ದಿಗ್ಭ್ರಾಂತಳಾದಳೇ ಹೊರತು ಬಾಯಿ ತೆರೆಯಲಿಲ್ಲ ಅಥವಾ ಸ್ವರವೆತ್ತಿ ತೋರಿಸುವುದಿಲ್ಲ . ಇದನ್ನು ಕಂಡುಕೊಂಡ ರಾಲ್ಫನ ಊಹೆ ಸರಿಯಾಗಿಯೇ ಇತ್ತು. ಅದರಂತೆಯೇ ಡೇನಿಯಲ್‌ನ ಊಹೆ ಕೂಡ – ಮದುವೆಯಾದಲ್ಲಿ ಧನಾನ್ವೇಷಿಗೆ ಆ ಸೊತ್ತು ಹೋಗಬಹುದೆಂದು ಆಸ್ಮಂಡ್ ಹಣಕ್ಕಾಗಿಯೇ ಮದುವೆಯಾದ ಎಂದು ತಿಳಿದ ನಂತರವೂ ಅವಳು ಜಾಣ್ಮೆಯಿಂದ ಶಾಂತಳಾಗಿಯೇ ಪ್ರತಿಕ್ರಿಯೆ ನೀಡುತ್ತಾಳೆ. ಸಿನಿಮೀಯವಾಗಿ ರಾದ್ಧಾಂತ ಮಾಡುವದಿಲ್ಲ. ಮರ್ಲಳ ಗುಟ್ಟು ಕಂಡಾಗಲೂ ಬಾಯಿ

ತೆರೆಯುವದಿಲ್ಲ. ಪ್ಯಾನ್ಸಿಯ ಬಗ್ಗೆ ತುಂಬ ಅನುಕಂಪ ತೋರಿಸುತ್ತಾಳೆ. ಇಲ್ಲೆಲ್ಲ ಇಝಾಬೆಲಳ ಉದಾತ್ತ ಗುಣಪ್ರೇರಣೆಗಳ ಸುಳಿವಿದೆ. ಆದರೂ ಅವಳು ಲೋಕ ಜ್ಞಾನಿಯಲ್ಲ; ಅವಳಿಗೆ ದೌರ್ಜನ್ಯದ ಅನುಭವ ಇದ್ದಿಲ್ಲ. ಹೀಗಾಗಿ ಮರ್ಲ–ಆಸ್ಮಂಡರ ಬಲೆಯಲ್ಲಿ ಸಹಜ ಬೀಳುತ್ತಾಳೆ. ಆದರೆ ಮಾನಸಿಕ ತೋಲ ಕಳಕೊಳ್ಳುವದಿಲ್ಲ. ಮದುವೆಯ ಆಯ್ಕೆ ತಾನೇ ಮಾಡಿದ್ದರಿಂದ ಪರಿಣಾಮಕ್ಕೆ ತಾನೇ ಜವಾಬ್ದಾರಿ ಎಂತ ತಿಳಿಯುತ್ತಾಳೆ. ಆದಕಾರಣ ಕಾದಂಬರಿಯ ಕೊನೆಯಲ್ಲಿ ರಾಲ್ಫನ ಮರಣದ ನಂತರ ರೋಮಿಗೇ ಬರುತ್ತಾಳೆ. ಆ ದೃಷ್ಟಿಯಿಂದ ಕಾದಂಬರಿ 'open-ended' – ಮುಕ್ತ ಅಂತ್ಯದ್ದು (ತೆರೆದ ಅಂತ್ಯದ್ದು) – ಎನ್ನಬಹುದು. ಮುಂದೆ ವಿವಿಧ ಊಹೆಗಳಿಗೆ ಸ್ಥಾನವಿದೆ. ಅವಳ ವಿರುದ್ಧ ಅಂಶದಲ್ಲಿ ಆಸ್ಮಂಡ್. ಅವನು ವಿಶಿಷ್ಟ ಖಳನಾಯಕ, ಗುಪ್ತ ವ್ಯವಹಾರಚತುರ, ಸ್ವಾರ್ಥಸಾಧಕ, ಮಾನವೀಯ ಸಂದರ್ಭಗಳಲ್ಲಿ ನಿರಾಸಕ್ತ, ಜೀವನ ವಿಮುಖ. ಅವನ ಸೌಂದರ್ಯಾರಾಧನೆ ಹಾಗೂ ಬಾಹ್ಯ ಶ್ಲೀಲವರ್ತನೆಯ ಪ್ರದರ್ಶನ ಎಂದರೆ ತನ್ನ ನೈತಿಕ ಪೊಳ್ಳುತನ ಮುಚ್ಚಿಡುವ ಯತ್ನ. ಹೊರಗೆ ಸುಸಂಸ್ಕೃತೆ ಎಂದು ವ್ಯವಹರಿಸುವ ಮ್ಯಾಡಂ ಮರ್ಲ ಕೂಡ ತಳಕ್ಕೆ ವ್ಯವಹಾರಚತುರೆ. ಇವರು ಯೂರೋಪಿನ ಸಂಸ್ಕಾರಗಳಿಗೆ ಮಣಿದು ನೈತಿಕಬಲ ಕಳಕಂಡವರು. ಟಶೆಟ್ ಕುಟುಂಬ ಇಝಾಬೆಲ್‌ಳಿಗೆ ಆಪ್ತರಾಗಿಯೇ ಉಳಿಯುತ್ತಾರೆ. ಅಂತೆಯೇ ಸ್ನೇಹಿತೆ ಹೆನ್ರಿಯೆಟಾ. ಇವರೆಲ್ಲರ ಪಾತ್ರಚಿತ್ರಣದ ಮೂಲಕ ಹೊಮ್ಮುವ ವಾಸ್ತವಾಂಶಗಳೇ ಕಾದಂಬರಿಯ ವಸ್ತುವಿಗೆ ಪುಷ್ಟಿ ನೀಡಿವೆ. ಇದು ಜೇಮ್ಸ್‌ನ ಶ್ರೇಷ್ಠ ಎಂದು ಹೊಗಳಿಸಿಕೊಳ್ಳದಿದ್ದರೂ ಪ್ರಬುದ್ಧ ಹಾಗೂ ಅವನ ಕಲಾತ್ಮಕ ದೃಷ್ಟಿಯಿಂದ ಪರಿಪೂರ್ಣವಾದದ್ದು ಎಂದು ಹೆಸರು ಪಡೆದಿದೆ. ಇದರ ಮೂಲವನ್ನು ವಿವಿಧ ಕಾದಂಬರಿಗಳಲ್ಲೂ, ನಿತ್ಯಜೀವನದಲ್ಲೂ ಕಂಡಿದ್ದಾರೆ ವಿಮರ್ಶಕರು. ಜಾರ್ಜ್ ಏಲಿಯಟ್, ಹಾರ್ಡಿ, ಜಾರ್ಜ್ ಸೆಂಡ್, ಎಡ್ಮಂಡ್ ಎಬೌಟ್, ಟ್ರೊಲೋಪ್, ಚೆರ್‌ಬ್ಯೂಲಿಝ್ ಈ ಕಾದಂಬರಿಕಾರರ ಹೆಸರುಗಳಿವೆ. ಜೇಮ್ಸ್‌ನ ಸೋದರಿ ಮೇರಿ ಟೆಂಪಲ್‌ಳೇ ಇಝಾಬೆಲ್‌ಳ ಪಾತ್ರ, ಸ್ನೇಹಿತೆ ಲೀಝಿ ಬೂಟ್ ಪ್ಯಾನ್ಸಿಯ ಪಾತ್ರ, ಅಜ್ಜಿಯ ಮನೆ ಆಲ್ಬನಿಯ ಮನೆಯ ವಿವರಗಳನ್ನು ಸೂಚಿಸಿವೆಯೆಂದೂ ವಿಮರ್ಶಕರ ಅಭಿಪ್ರಾಯವಿದೆ. ಸಾಹಿತ್ಯ ಹಾಗೂ ಜೀವನದಿಂದ ಹೀರಿದ ವಸ್ತುವನ್ನು ಸುಂದರ ಕಲಾಕೃತಿಯನ್ನಾಗಿ ಮಾಡಿದ ಎಂಬುದು ನಿರ್ವಿವಾದ. ಜೇಮ್ಸ್‌ನ ಎಲ್ಲ ಉತ್ಕೃಷ್ಟ ಕಾದಂಬರಿಗಳನ್ನು ಗಮನದಲ್ಲಿಟ್ಟು ಸುಪ್ರಸಿದ್ಧ ಅಮೆರಿಕನ್ ಕಾದಂಬರಿಕಾರ, ವಿಮರ್ಶಕ ಹೋವೆಲ್ಸ್‌ನ ಮಾತುಗಳನ್ನು ಇಲ್ಲಿ ಸ್ಮರಿಸಬಹುದು : 'ಯಾರಲ್ಲಿ ಕವಿಯ ಪ್ರತಿಭೆ ಇದೆಯೋ, ಹಾಸ್ಯಪ್ರಧಾನ ಲೇಖಕನ ಬುದ್ಧಿಶಕ್ತಿ ಇದೆಯೋ, ನಿಷ್ಪಾಪ ನೀತಿಬೋಧಕನ ಅಂತರಂಗ ಇದೆಯೋ, ತಾತ್ವಿಕನ ಮನೋಭಾವ ಇದೆಯೋ, ವಿರಳ ಅನುಭವದ ಲೋಕ ಸಾಕ್ಷಿಯ ಜಾಣ್ಮೆ ಇದೆಯೋ ಅಂಥ ಮಹಾ ಮಾನಸಶಾಸ್ತ್ರಜ್ಞನ ಕೃತಿಯನ್ನು ನೀವು ಪಡೆದಿದ್ದೀರಿ.'

ಜೋಸೆಫ್ ಕಾನ್ರ್ಯಾಡ್ : 'ದಿ ಹಾರ್ಟ್ ಆಫ್ ಡಾರ್ಕ್‌ನೆಸ್'

ಹೇಮಂತ ಕುಲಕರ್ಣಿ

ಡಿಸೆಂಬರ್ 3, 1857ರಲ್ಲಿ, ಪೋಲಂಡ್ ದೇಶದಲ್ಲಿ ಜೋಸೆಫ್ ಕಾನ್ರ್ಯಾಡನ ಜನ್ಮವಾಯಿತು. ಇವನು ಚಿಕ್ಕವನಿರುವಾಗಲೇ ಮನೆಯಿಂದ ಓಡಿಹೋಗಿ ಒಂದು ಹಡಗಿನಲ್ಲಿ ಕೆಲಸವನ್ನು ದೊರಕಿಸಿಕೊಂಡನು. ತನ್ನ ಹದಿನಾರನೆಯ ವಯಸ್ಸಿನವರೆಗೆ ಆವನಿಗೆ ಇಂಗ್ಲಿಷ್ ಭಾಷೆಯ ಗಂಧವೂ ಇರಲಿಲ್ಲ. ಆಮೇಲೆ ಹಡಗಿನ ಮೇಲೆ ಇಂಗ್ಲಿಷ್ ಭಾಷೆಯನ್ನು ಕಲಿತು, ಅಲ್ಲಿರುವ ವಾಚನಾಲಯವನ್ನೆಲ್ಲ ತಿರುವಿಹಾಕಿ, ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಹೀಗಾಗಿ ವ್ಯಾಪಾರಿ ಹಡಗುಗಳ ಮೇಲೆ ಕಪ್ತಾನನಾಗುವ ಅನುವು ದೊರೆಯಿತು. ಕಪ್ತಾನನಾಗಿ ಕೆಲಸ ಮಾಡುತ್ತಿರುವಾಗ ಆಫ್ರಿಕಾ, ಏಷಿಯಾ ಮುಂತಾದ ದೇಶಗಳಲ್ಲಿ ಸಂಚಾರ ಮಾಡಿದನು. ಅವನಿಗೆ ಯಾವಾಗಲೂ ಲೇಖಕನಾಗಬೇಕೆಂಬ ಮಹತ್ವಾಕಾಂಕ್ಷೆ ಬಲವತ್ತರವಾಗಿತ್ತು. ತನ್ನ 32ನೇ ವಯಸ್ಸಿನಲ್ಲಿ ಹಡಗಿನ ನೌಕರಿಯಿಂದ ನಿವೃತ್ತನಾಗಿ ಮದುವೆ ಮಾಡಿಕೊಂಡು, ಇಂಗ್ಲೆಂಡಲ್ಲಿ ನೆಲೆ ನಿಂತನು. 1924ರಲ್ಲಿ ಶ್ರೇಷ್ಠ ಲೇಖಕನೆಂದು ಹೆಸರು ಗಳಿಸಿ ತನ್ನ ಸಂತೃಪ್ತ ಜೀವನವನ್ನು ಮುಕ್ತಾಯಗೊಳಿಸಿದನು.

ಇಂಗ್ಲಿಷ್ ಭಾಷೆ ಕಲಿತ ಭಾಷೆಯಾಗಿದ್ದರೂ ಕಾನ್ರ್ಯಾಡನು ಅದರಲ್ಲಿ ಪರಿಣತಿಯನ್ನು ಪಡೆದನು. ಈಗ ಆ ಭಾಷೆಯಲ್ಲಿನ ಉತ್ತಮ ಗದ್ಯಲೇಖಕನೆಂದೂ, ಉತ್ತಮ ಕಾದಂಬರಿಕಾರನೆಂದೂ ವಿಶ್ವಪ್ರಸಿದ್ಧಿಯನ್ನು ಪಡೆದಿದ್ದಾನೆ. ಅವನು ಬರೆದ ಅನೇಕ ಕಾದಂಬರಿಗಳಲ್ಲಿ Heart of Darkness ('ಇರುಳಿನ ಕರುಳು') ಅವನ ಮೇರುಕೃತಿಯಾಗಿದೆ. ಇದರ ಶೈಲಿ ಅಸಾಧಾರಣವಾಗಿದೆ. ಇಲ್ಲಿ ವಿಶದವಾದ ಅನನ್ಯ ಅನುಭವ ಓದುಗನ ಕರುಳನ್ನೇ ಹಿಂಡಿಬಿಡುತ್ತದೆ. ಆಫ್ರಿಕೆಯ ಕಪ್ಪು ಭೂಖಂಡದಲ್ಲಿ ನಡೆದ ಬಿಳಿಯರ ಅತ್ಯಾಚಾರದ ವಾಸ್ತವಿಕ ವರ್ಣನೆಯನ್ನು ಮಾಡಿದರೂ ಅದರಲ್ಲಿ ಹೆಣೆಯಲ್ಪಟ್ಟ ಆಧ್ಯಾತ್ಮಿಕ ವಿವರಣೆಯ ಮೂಲಕ ಮಾನವ ಜೀವನದ ಸರ್ವಕಾಲಿಕವಾದ ಅತೀಂದ್ರಿಯ ತತ್ವಗಳು ನಮ್ಮ ಮನಸ್ಸಿನ ಮೇಲೆ ಅಸಾಧಾರಣವಾದ ಪ್ರಭಾವವನ್ನು ಬೀರುತ್ತವೆ. ಅವನ ಶಬ್ದಸೌಷ್ಠವ, ಕಥನಕೌಶಲ್ಯ, ಪಾತ್ರರಚನೆಯಲ್ಲಿ ಕಂಡುಬರುವ ಮಾನಸಿಕ ಸಂಕೀರ್ಣತೆ – ಎಲ್ಲವೂ ಆದರಣೀಯವಾಗಿವೆ.

ಮೇಲುನೋಟಕ್ಕೆ, ಇದೊಂದು ಕಪ್ಪು ಭೂಖಂಡವೆಂದು ಹೆಸರು ಗಳಿಸಿದ ಆಫ್ರಿಕೆಯ ಹೃದಯಮಧ್ಯದಲ್ಲಿ ಸೇರಿಕೊಂಡ ಬಿಳಿಯರು ಅಲ್ಲಿಯ ಅಶ್ವೇತರನ್ನು ಗುಲಾಮರನ್ನಾಗಿಸಿ, ಅವರ ಮೇಲೆ ಎಲ್ಲ ತರಹದ ಬಲಾತ್ಕಾರ ಮಾಡಿ ಅವರ ಆಸ್ತಿಪಾಸ್ತಿಯನ್ನೂ, ಅವರ ನಾಡನ್ನೂ, ಅವರ ಕಾಡಿನಲ್ಲಿ ಹರಡಿಕೊಂಡಿರುವ

ವೈಭವವನ್ನೂ – ಮುಖ್ಯವಾಗಿ ಅಲ್ಲಿರುವ ಹಸ್ತಿದಂತದ ಅಗಣಿತ ಸಂಪತ್ತನ್ನೂ – ಸೂರೆಮಾಡುವ ದುಷ್ಕೃತ್ಯಗಳ ಕಥೆಯಾಗಿದೆ. ಹಸ್ತಿದಂತದ ವ್ಯಾಪಾರ ಸುಖಕರವಾಗಿ ಸಾಗಬೇಕಾದರೆ, ಆಫ್ರಿಕೆಯ ನಿಗ್ರೋ ಜನರನ್ನು ಹಿಂಸಿಸಿ, ಅನೇಕರ ಕೊಲೆ ಮಾಡಿ, ಅವರ ಮನೆತನವನ್ನೆಲ್ಲ ಮುರಿದು, ಅವರ ದೇಹ-ಮನೆಗಳ ಮೇಲೆ ಅಮಾನುಷ ಅತ್ಯಾಚಾರ ಮಾಡಿ ನಡೆಸಿದ ವ್ಯವಹಾರದ ಘೋರ ವಿಕೃತಿಯೇ ಈ ಕಥೆಯ ಜೀವಾಳವಾಗಿದೆ.

ಮಾರ್ಲೋ ಎಂಬ ನಾವಿಕ ಈ ಕಥೆಯ ನಿವೇದಕ. ಆಫ್ರಿಕೆಯಲ್ಲಿ ವ್ಯಾಪಾರ ಮಾಡುತ್ತಿರುವ ಒಂದು ಕಂಪನಿಯ ಯೂರೋಪಿನಲ್ಲಿರುವ ಕೇಂದ್ರ ಸ್ಥಳಕ್ಕೆ ಹೋಗಿ ಒಂದು ನಾವೆಯ ಕಪ್ತಾನನಾಗುವ ಭಾಗ್ಯ (?)ವನ್ನು ಅವನು ಪಡೆಯುತ್ತಾನೆ. ಆದರೆ ಅವನಿಗೆ ಕಂಡುಬರುವುದು ಸಾವಿನ ಸಂಕೇತಗಳೇ ! ಈ ಕಪ್ತಾನನ ನಾವೆ ಆಫ್ರಿಕೆಯ ಹೊಳೆಯೊಂದರಲ್ಲಿ ನಿತ್ಯವೂ ಓಡಾಡುತ್ತದೆ.

ಆಫ್ರಿಕೆಯನ್ನು ಮುಟ್ಟಿದ ಕೂಡಲೆ, ಅವನು ಕಾಣುವುದು ಕಂಪನಿಯ ನಿಲ್ದಾಣದಲ್ಲಿ ನಡೆದ ನಿಗ್ರೋ ಜನರ ಕ್ರೂರಹಿಂಸೆ. ಅನೇಕ ನಿಗ್ರೋ ಜನರ ಕೈಕಾಲುಗಳನ್ನು ಕಟ್ಟಿಹಾಕಿದ ಲೋಹಶೃಂಖಲೆಗಳನ್ನೂ, ಆ ಸ್ಥಿತಿಯಲ್ಲಿಯೇ ಅವರು ಗುಡ್ಡದ ಮೇಲೆ ಜಡವಾದ ಪೆಟ್ಟಿಗೆಗಳನ್ನು ಹೊತ್ತುಕೊಂಡು ಹೋಗುತ್ತಿರುವ ಸೋತುಹೋದ ಜನರನ್ನೂ, ನೋವಿನಿಂದ ಬಳಲುತ್ತಿರುವ, ಅನೇಕ ಗಾಯಗಳಿಂದ ನರಳುತ್ತಿರುವ, ಅಸಹ್ಯವಾದ ಬಿಸಿಲಿನಲ್ಲಿ ಕಾರ್ಯನಿರತರಾಗಿರುವ, ಕೊನೆಗೆ ಸಾವಿನ ದಾರಿ ಕಾಯುತ್ತಿರಲು, ನೆಳಲಿನ ಸೆರಗನ್ನು ಸೇರುತ್ತಿರುವ ಗುಲಾಮರನ್ನೂ ನೋಡಿ ದುಃಖಿತನಾಗುತ್ತಾನೆ. ಹೀಗೆ ಮೃತ್ಯುಮುಖದಲ್ಲಿ ಹೇಗೋ ಬಾಳು ಸಾಗಿಸುತ್ತಿರುವ ದೀನ ದುರ್ಬಲರಾದ ಅಶ್ವೇತರ ವಿರುದ್ಧವಾಗಿ, ಅವರ ಮೇಲೆ ನಿತ್ಯವೂ ಕಾರಣವಿಲ್ಲದೆ ಅತ್ಯಾಚಾರ ಮಾಡುತ್ತಿರುವ ಶ್ವೇತವರ್ಣೀಯ ಮೇಲ್ವಿಚಾರಕರ ಸಂಕೀರ್ಣವಾದ ಪಾತ್ರವಿವರಣೆಯನ್ನೂ ಅದಕ್ಕೆ ಹಿನ್ನೆಲೆಯಾಗಿ ಸುತ್ತಲೂ ಹರಡಿಕೊಂಡಿರುವ ಭೀಕರವಾದ ಅಡವಿಯ ದರ್ಶನವನ್ನೂ ಕಾನ್ರ್ಯಾಡನು ತನ್ನ ಅಮೋಘ ಶೈಲಿಯಲ್ಲಿ ಓದುಗರಿಗೆ ಮಾಡಿಕೊಡುತ್ತಾನೆ.

ಕಂಪನಿಯ ನಿಲ್ದಾಣದಲ್ಲಿ ತನ್ನ ಕೆಲಸದ ವಿವರವನ್ನು ತಿಳಿದುಕೊಂಡು ತನಗೆ ಆವಶ್ಯಕವಾದ ಸಹಕಾರಿಗಳನ್ನೂ ನಿಗ್ರೋ ಸೇವಕರ ತಂಡವೊಂದನ್ನೂ ತೆಗೆದುಕೊಂಡು ಹೊಳೆಯ ದಂಡೆಗೆ ಬಂದಾಗ ಅವನ ನಾವೆ ಮುರಿದುಹೋಗಿ ನೀರಿನ ತಳವನ್ನು ಕಂಡಿದೆಯೆಂಬುದನ್ನು ನೋಡುತ್ತಾನೆ. ಆಮೇಲೆ ಅದರ ದುರಸ್ತಿ ಮಾಡಿ ಹೊಳೆಯಲ್ಲಿ ಸಾಗಿಸಲು ಸಿದ್ಧಗೊಳಿಸುತ್ತಾನೆ. ಈಗಾಗಲೇ ಅನೇಕರಿಂದ 'ಕರ್ಟ್ಸ್' ಎಂಬ ಮುಖ್ಯಾಧಿಕಾರಿಯ ಆಶ್ಚರ್ಯಕರವಾದ ಜೀವನಾಂಶಗಳನ್ನು ತಿಳಿದುಕೊಂಡು ಅವನನ್ನು ಕಾಣುವುದೇ ಅವನ ಪರ್ಯಟನದ ಮುಖ್ಯ ಉದ್ದೇಶವಾಗುತ್ತದೆ. ಹೀಗೆ ಹೊಳೆಯಲ್ಲಿ ದಟ್ಟಡವಿಯ

ಮಧ್ಯದಲ್ಲಿ ಸಾಗುತ್ತಿರುವಾಗ ಮೃತ್ಯುವಿನ ಕೊನೆಯ ಕ್ಷಣಗಳಲ್ಲಿ ಬಳಲುತ್ತಿರುವ ಕರ್ಟ್ಸನ ದರ್ಶನವಾಗುತ್ತದೆ. ಅವನು ಸಾಯುವಾಗ "ಭಯಂಕರ, ಭಯಂಕರ" (Horror, horror) ಎಂಬ ಶಬ್ದಗಳನ್ನು ಉಚ್ಚರಿಸುತ್ತಾನೆ. ಅದಕ್ಕೂ ಕೆಲವು ಕಾಲ ಮೊದಲು ಅವನ ಸಾಹಚರ್ಯವನ್ನು ಪಡೆದಿರುವ ಒಬ್ಬ ನೀಗ್ರೋ ಸುಂದರಿಯ ದರ್ಶನವಾಗುತ್ತದೆ. ತಾನು ಸಾಯುವ ಮೊದಲು ಮಾರ್ಲೋನ ಕೈಯಲ್ಲಿ ಅನೇಕ ವರ್ಷಗಳವರೆಗೆ ಕೂಡಿಟ್ಟ ಪತ್ರವ್ಯವಹಾರವನ್ನು ಒಪ್ಪಿಸಿ, ಅವನೊಡನೆ ವಿವಾಹದ ವಾಗ್ದಾನ ಮಾಡಿದ ಯೂರೋಪಿಯನ್ ಹೆಣ್ಣನ್ನು ಕಂಡು, ತನ್ನ ಪ್ರೇಮ ಪತ್ರಗಳನ್ನೆಲ್ಲ ಅವಳಿಗೆ ಸಮಕ್ಷಮದಲ್ಲಿ ಕೊಡಬೇಕೆಂದು ಬೇಡಿಕೊಳ್ಳುತ್ತಾನೆ. ಇದೇ ಕಥೆಯ ಮುಖ್ಯಾಂಶ. ಅಂದರೆ ಸಂಕ್ಷೇಪದಲ್ಲಿ ಹೇಳಹೊರಟರೆ, ಇದರಲ್ಲಿ ಯಾವ ಸತ್ವವೂ ಇಲ್ಲವೆಂದೇ ಭಾವನೆಯಾಗಬಹುದು. ಆದರೆ ಸುಲಭವೆಂದೆನಿಸುವ ಈ ಕಥೆಯ ಹೆಣಿಗೆ ಮಾತ್ರ ಅದ್ಭುತವಾಗಿದೆ. ಇದೇ ಕಥೆಯ ತಿರುಳೆಂದು ಹೇಳಬೇಕಾಗುತ್ತದೆ.

ಐತಿಹಾಸಿಕ ಸತ್ಯದ ಮೇಲೆ ನಿಂತುಕೊಂಡ ಈ ಕಥೆಯ ಗರ್ಭಿತಾರ್ಥವನ್ನು ಅನೇಕ ವಿಮರ್ಶಕರು ಅನೇಕ ದೃಷ್ಟಿಯಿಂದ ವಿಶದವಾಗಿ ಚರ್ಚಿಸಿದ್ದಾರೆ. ಹಾಗೆ ನೋಡಿದರೆ, ಕಾನ್ರ್ಯಾಡನ ಲೇಖನವೃಂದ ವಿಮರ್ಶಕರಿಗೊಂದು ಆತ್ಮೀಯ ವಿಷಯವಾಗಿದೆಯೆಂದು ಹೇಳಬಹುದು. ಆದರೆ ನಾನು ಕೈಕೊಂಡ ಚರ್ಚೆಯ ವಿಷಯವನ್ನು ಅಲ್ಲಲ್ಲಿ ನಮೂದಿಸಿದ್ದಾರೆಯೇ ಹೊರತು ಅದರ ವಿವರಣೆಗೆ ಯಾರೂ ಕೈಹಾಕಿಲ್ಲವೆಂದು ಕಾಣುತ್ತದೆ. ಈ ಕಾದಂಬರಿಯ ರಚನೆಯಲ್ಲಿ ಅಂತರಂಗದ ಹೆಣಿಗೆಯಲ್ಲಿ ಬುದ್ಧಧರ್ಮದ ಅನೇಕ ಅಂಶಗಳನ್ನು ನಾವು ಗುರುತಿಸಬಹುದು. ಬುದ್ಧಜೀವನದ ವಿವರ, ಬುದ್ಧಧರ್ಮದ ವೈಚಾರಿಕ ಹಾಗೂ ಪೌರಾಣಿಕ ವಿಶೇಷ ಈ ಕಾದಂಬರಿಯ ಭಾವಾರ್ಥಗಳ ತಿಳಿವಳಿಕೆಗೆ ಆವಶ್ಯಕವಾಗಿದೆಯೆಂದು ನಾನು ನಂಬಿದ್ದೇನೆ.

ಈ ಕಥೆಯ ಪ್ರಮುಖ ಸ್ಥಳಗಳಲ್ಲಿ – ಆರಂಭ, ಮಧ್ಯ ಹಾಗೂ ಅಂತ್ಯದಲ್ಲಿ – ಪದ್ಮಾಸನದಲ್ಲಿ ಕುಳಿತು ಧ್ಯಾನಮಗ್ನನಾದ ಬುದ್ಧನ ಪ್ರತಿಮೆ ಚಿತ್ರಿತವಾಗಿದೆ. ಕಾದಂಬರಿಯ ಮೊದಲನೆಯ ಪುಟದ ಮೇಲೆ – ಕಥೆ ಅರ್ಥಪೂರ್ಣವಾದ ಚೌಕಟ್ಟನ್ನು ಕಟ್ಟಲು ತೊಡಗಿದಾಗ – ಧ್ಯಾನಸ್ಥನಾಗಿ ಕುಳಿತ ಒಬ್ಬ ಸಂನ್ಯಾಸಿಯ ವರ್ಣನೆಯನ್ನು ಕಾನ್ರ್ಯಾಡನು ಮಾಡುತ್ತಾನೆ. ಮಾರ್ಲೋ ಈ ಕಥೆಯ ನಿವೇದಕ. ಅವನು ತನ್ನ ಸಹಕಾರಿಗಳ ಜತೆಯಲ್ಲಿ ಹಡಗದ ಹಿಂಭಾಗದಲ್ಲಿ ಪಟಸ್ತಂಭಕ್ಕೆ ಆತು ಪದ್ಮಾಸನಸ್ಥನಾಗಿದ್ದಾನೆ. "ಮುದುಕನ ಹಾಗೆ ಅವನ ಗಲ್ಲ ಒಳಗೆ ಸೆಳೆದುಕೊಂಡಿವೆ ; ಅವನ ಮುಖ ವಿವರ್ಣವಾಗಿದೆ. ಬೆನ್ನು ಸರಳವಾಗಿದೆ ; ಬೆರಳುಗಳನ್ನು ಒಂದರೊಳಗೊಂದು ಹೆಣೆದು, ತೊಡೆಯ ಮೇಲೆ ಇಟ್ಟು ಕೊಂಡು ಸಂನ್ಯಾಸಿಯಂತೆ ಕುಳಿತ ಅವನ ಭಂಗಿ ಸ್ಥಿತಪ್ರಜ್ಞನ ಮೂರ್ತಿಯಾಗಿದೆ. ಅವನ ಮಾತನ್ನು ಕೇಳಲು ಉತ್ಸುಕರಾದ ಗೆಳೆಯರು ಶೂನ್ಯ ದೃಷ್ಟಿಯಿಂದ ಕುಳಿತುಕೊಂಡಿದ್ದಾರೆ."

ಕೆಲವು ಪುಟಗಳ ನಂತರ, ಮುಖ್ಯ ಕಥೆಗೆ ಪ್ರಾರಂಭವಾಗುವ ಸಮಯದಲ್ಲಿ ಮತ್ತೆ ಅದೇ ವರ್ಣನೆಯ ಪುನರಾವೃತ್ತಿಯಾಗುತ್ತದೆ : "ಪದ್ಮಾಸನವನ್ನು ಹಾಕಿಕೊಂಡು ಕುಳಿತ ಮಾರ್ಲೋ ಯೂರೋಪಿಯನ್ ಉಡುಪನ್ನು ತೊಟ್ಟ ಪದ್ಮಪುಷ್ಪವಿರಹಿತನಾದ ಬುದ್ಧನಂತೆ ಕಾಣುತ್ತಾನೆ." ಕಥೆಯ ಮಧ್ಯದಲ್ಲಿಯೂ ಅದೇ ಬುದ್ಧ ಪ್ರತಿಮೆ ಸ್ಪಷ್ಟವಾಗಿದೆ ; ಇದರ ವಿವೇಚನೆಯನ್ನು ಮುಂದೆ ಮಾಡಲಾಗುವುದು. ಕಥೆಯ ಕೊನೆಯ ಪ್ಯಾರಾದಲ್ಲಿಯೂ ಅದೇ ವರ್ಣನೆ : "ಮಾರ್ಲೋ ತನ್ನ ಮಾತು ಮುಗಿಸಿ, ಎಲ್ಲರಿಂದಲೂ ದೂರ ಕುಳಿತುಕೊಂಡ. ಅವನ ಪ್ರತಿಮೆ ಮೌನವನ್ನು ತಳೆದು ಧ್ಯಾನಲೀನನಾದ ಬುದ್ಧನ ಭಂಗಿಯನ್ನು ಹೋಲುತ್ತದೆ."

ಬುದ್ಧನ ವರ್ಣನೆಯಂತೆ, ಬುದ್ಧಪ್ರತಿಮೆಯ ಸ್ಥಾನವೂ ಮಹತ್ವದ್ದಾಗಿದೆ. ಬುದ್ಧನ ಧ್ಯಾನಸ್ಥ ಪ್ರತಿಮೆಯನ್ನು ಕಥೆಯ ಸುತ್ತಲೂ ಚಿತ್ರಿಸಿ ಕಥೆಗೆ ಒಂದು ಅರ್ಥಪೂರ್ಣವಾದ ಚೌಕಟ್ಟನ್ನು ಕಾನ್ರ್ಯಾಡ್ ಒದಗಿಸುತ್ತಾನೆ. ಬುದ್ಧನಿಗೂ, ಮಾರ್ಲೋನಿಗೂ ಸಂಬಂಧವನ್ನು ಮೊದಲಿನಿಂದ ಕೊನೆಯವರೆಗೆ ಜೋಡಿಸಿ 'ಇರುಳಿನ ಕರುಳ'ನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂದು ಸ್ಪಷ್ಟವಾದ ಸೂಚನೆಯನ್ನು ಕೊಡುತ್ತಾನೆ. ಸಾಮಾನ್ಯವಾಗಿ ಒಂದು ಕಥೆಯ ಅರ್ಥ ಅದರ ಅಂತರಂಗದಲ್ಲಿ ಅಡಗಿರುತ್ತದೆ. ಆದರೆ ಕಾನ್ರ್ಯಾಡನ ಈ ಕಥೆಯ ಅರ್ಥ ಹೊರಗೆ ಇಟ್ಟಂತೆ ತೋರುತ್ತದೆ. ಇದರ ಸ್ಪಷ್ಟೀಕರಣವನ್ನು ಮಾರ್ಲೋ ಹೇಳಿಕೆಯೇ ಮಾಡಿಕೊಡುತ್ತದೆ. "ಮಾರ್ಲೋನ ದೃಷ್ಟಿಯಿಂದ ಕಥೆಯ ಅರ್ಥ ಹಣ್ಣಿನ ತಿರುಳಿನಂತೆ – ಒಳಗಡಗೆ ಇರುವುದಿಲ್ಲ ; ಮಾತ್ರ – ಅದು ಒಂದು ವಸ್ತುವಿನ ತೇಜೋವಲಯದಂತೆ ಹೊರಗಡೆಗೆ ಆವರಿಸಿ ನಿಲ್ಲುತ್ತದೆ." ಆದಕಾರಣ ಕಾನ್ರ್ಯಾಡನು ಬುದ್ಧಪ್ರತಿಮೆಯನ್ನು ಪ್ರಮುಖ ಸ್ಥಳಗಳಲ್ಲಿ (strategic places) ಯಾಕೆ ಸ್ಥಾಪಿಸಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಕಪ್ಪು ಭೂಖಂಡದಲ್ಲಿ ಮಾರ್ಲೋನಿಗೆ ಉಂಟಾದ ತೀವ್ರಾನುಭವದ ಅರ್ಥವೇನೆಂದು ಈ ದೃಷ್ಟಿಯಿಂದಲೇ ನೋಡಬೇಕು. ಮಾರ್ಲೋನ ನಿವೇದನೆಯ ಪ್ರತಿಯೊಂದು ಪುಟಪುಟವೂ ಪ್ರತೀಕಾತ್ಮಕವಾಗಿ ಹೊಳೆಯತೊಡಗುತ್ತದೆ. ಹಾಗೆಯೇ ಅವನು ಹೇಳುವಂತೆ "ನನ್ನ ಈ ಅನುಭವ ಸಮುದ್ರಯಾನದ ಅಂತಿಮ ಪ್ರವಾಸವಾಗಿಯೂ, ಮಾನವನ ತಿಳಿವಳಿಕೆಯ ಕೊನೆಯ ಮಟ್ಟವಾಗಿಯೂ ನನ್ನ ಸುತ್ತಲೂ, ನನ್ನ ಅಂತರಂಗದಲ್ಲಿಯೂ ಒಂದು ವಿಶೇಷವಾದ ಬೆಳಕನ್ನು ಹರಡುತ್ತದೆಯೆಂದು ನನಗನಿಸುತ್ತದೆ." ನಿಜವಾಗಿ ನೋಡಿದರೆ ಈ ಕಥೆಯ ಪ್ರತೀಕಾತ್ಮಕ ವಿಮರ್ಶೆಯನ್ನು ಅನೇಕರು ಮಾಡಿ ತೋರಿಸಿದ್ದಾರೆ ; ಅಷ್ಟೇ ಸ್ಪಷ್ಟವಾಗಿ ಬುದ್ಧಧರ್ಮದ ಪ್ರತೀಕವನ್ನು ಎತ್ತಿ ತೋರಿಸುವುದು ಸಾಧ್ಯವಿದೆ. ಈ ಕಥೆಯ ರಚನೆ ಬುದ್ಧನ ನಿರ್ವಾಣ ಯಾತ್ರೆಯನ್ನು ಹೋಲುತ್ತದೆ ; ಲೇಖಕನು ತನ್ನ ನಿವೇದನೆಯ ಮೂಲಕ ಇದೇ ಪ್ರತೀಕವನ್ನು ಸ್ಪಷ್ಟೀಕರಿಸುವ ಪ್ರಯತ್ನವನ್ನು ಅವಿರತವಾಗಿ ಮಾಡುತ್ತಿದ್ದಾನೆಂಬುದು ಸಂಶಯಾತೀತವಾಗಿದೆ.

ಇಲ್ಲಿ ಸೂಚಿತವಾದ ಅನೇಕ ಕಥಾಭಾಗಗಳು ಇದೊಂದು ಅಧ್ಯಾತ್ಮಿಕ ಯಾತ್ರೆಯಾಗಿದೆಯೆಂಬುದನ್ನು ಸ್ಪಷ್ಟಗೊಳಿಸುತ್ತವೆ. ಅದರಲ್ಲಿಯೂ ಇದೊಂದು ಬುದ್ಧ ಧರ್ಮದ ವಿಶೇಷವೆಂತಲೂ ಓದುಗರಿಗೆ ಅನಿಸುತ್ತದೆ. ಉದಾಹರಣಾರ್ಥವಾಗಿ, ಬುದ್ಧ ಧರ್ಮದ ಎರಡು ಪಂಥಗಳನ್ನು ವರ್ಣಿಸುವಾಗ "ಯಾನ" (navigation) ಎಂಬ ಶಬ್ದವನ್ನು ಉಪಯೋಗಿಸಲಾಗಿದೆ : ಮಹಾಯಾನ, ಹೀನಯಾನ ; ಒಂದು ದೊಡ್ಡ ನಾವೆ. ಎರಡನೆಯದು ಸಣ್ಣ ನಾವೆ. 'ನಾವೆ' ಶಬ್ದದ ಮೇಲೆ ಬುದ್ಧ ಧರ್ಮದ ಕೇಂದ್ರ ಸಂಕೇತ ನಿರ್ಮಿತವಾಗಿದೆ. ಮುಕ್ತಿ ಅಥವಾ ನಿರ್ವಾಣ ಭಕ್ತರನ್ನು – 'ಯಾತ್ರಿಕರನ್ನು' – ಹೊಳೆಯ ಆಚೆಗೆ ಒಯ್ಯುವುದರಲ್ಲಿಯೇ ಇದೆ. ಅದರಂತೆ ಬುದ್ಧನೇ ಯಾನಕುಶಲನಾದ ಮುಖ್ಯನಾವಿಕನೆಂದು ತಿಳಿಯಲಾಗಿದೆ. ಅವನೇ ಜನರನ್ನು ಹೊಳೆಯ ಆಚೆಯ ದಂಡೆಗೆ ಒಯ್ದು, ಅವರಿಗೆ ನಿರ್ವಾಣದ ಅನುಭವದಾಚೆಗಿನ ಅನುಭವವನ್ನೂ ಒದಗಿಸುತ್ತಾನೆಂಬ ನಂಬಿಕೆ ದೃಢವಾಗಿದೆ. ಮಾರ್ಲೋನ ನಾವೆಯಲ್ಲಿರುವ ನಾವಿಕರ ತಂಡವನ್ನು 'ಯಾತ್ರಿಕ' ರೆಂದು ಸಂಬೋಧಿಸಲಾಗಿದೆ. ಈ ಯಾತ್ರೆಯ ಪ್ರಥಮ ಸಾಹಸವೆಂದರೆ ಮುರಿದು ಹೋದ ನಾವೆಯನ್ನು ದುರಸ್ತುಗೊಳಿಸಿ ಸಂಚಾರಕ್ಕೆ ಯೋಗ್ಯವಾಗುವಂತೆ ಮಾಡುವುದ ರಲ್ಲಿಯೇ ಅನೇಕ ತಿಂಗಳು ಕಳೆಯುತ್ತವೆ. ಮಹಾಬುದ್ಧನು ಮಾಡಿದ ಕಾರ್ಯವನ್ನು ಇದೇ ರೀತಿಯಿಂದ ವರ್ಣಿಸಬಹುದು. ಬುದ್ಧನ ಕಾಲದಲ್ಲಿ ಹಿಂದೂ ಧರ್ಮ ತನ್ನ ಮೂಲಶಕ್ತಿಯನ್ನು ಕಳೆದುಕೊಂಡು ಅತ್ಯಂತ ಅವನತ ಸ್ಥಿತಿಯಲ್ಲಿ ಬಿದ್ದುಕೊಂಡಿತ್ತು. ಹಿಂದೂ ಧರ್ಮದ ಅನುಯಾಯಿಗಳಿಗೆ ಕೊಟ್ಟ ಮುಕ್ತಿಯ ಮಾರ್ಗಗಳು ತಮ್ಮ ಸಾಧನ ಶುದ್ಧಿಯನ್ನು ಕಳೆದುಕೊಂಡು ಪಂಡಿತರ ವಾದವಿವಾದಗಳಲ್ಲಿಯೂ, ಕರ್ಮಕಾಂಡದ ಹಿಂಸಾತ್ಮಕ ವೃತ್ತಿಯಲ್ಲಿಯೂ ಕೊನೆಗೊಂಡಿತ್ತೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹಿಂದೂ ಧರ್ಮದ ಪುನರುಜ್ಜೀವನವೇ ಬುದ್ಧನ ಮೂಲ ಪ್ರೇರಣೆಯಾಗಿತ್ತು. ಅವನ ಮರಣೋತ್ತರ ಅದೊಂದು ಹೊಸ ಧರ್ಮವಾಗಿ ಬೆಳೆಯಿತು.

ಬುದ್ಧನು ಒಬ್ಬ ನಾವಿಕನೆಂದು ತಿಳಿದುಕೊಂಡರೆ, ಹೊಳೆಯೆಂಬುದು ಸಂಸಾರದ ಪ್ರತೀಕವೆಂದು ಗಣಿಸಲ್ಪಟ್ಟಿದೆ. ಬುದ್ಧನು ಹೇಳಿದ ಅನೇಕ ಕಥೆಗಳಲ್ಲಿ ಪ್ರಸಿದ್ಧವಾದ್ದು ಹೊಳೆಯ ಕಥೆಯೂ. ಅದನ್ನು ದಾಟಲು ಕಟ್ಟಿದ ನಾವೆಯೂ ಅವನ ಅಧ್ಯಾತ್ಮಿಕ ಅರ್ಥವನ್ನು ವಿವರಿಸುವ ರೂಪಕವಾಗಿದೆ. ಈ ನೀತಿ ಕಥೆಯ ಹಿನ್ನೆಲೆಯಲ್ಲಿ ಕಾನ್ರ್ಯಾಡನು ಉಪಯೋಗಿಸಿದ ಹೊಳೆಯ ಹಾಗೂ ನಾವೆಯ ಪ್ರತಿಮೆಗಳು ಅರ್ಥಪೂರ್ಣವಾಗುತ್ತದೆ.

ಅಷ್ಟೇ ಅರ್ಥಪೂರ್ಣವಾದದ್ದು 'ಸರ್ಪ' ಪ್ರತಿಮೆ – ಜೀವನ ಅಥವಾ ಕಾಲ, ಇವುಗಳ ಕವಿಸಮಯವಾಗಿದೆ. ಆಫ್ರಿಕೆಯ ನಕಾಶೆಯಲ್ಲಿ ಸ್ಪಷ್ಟವಾಗಿ ಕೊರೆಯಲ್ಪಟ್ಟ ವಿಶಾಲವಾದ ಹೊಳೆ 'ತನ್ನ ಸುರುಳಿಯನ್ನು ಸರಳವಾಗಿಸಿದ ಮಹಾಸರ್ಪ' (an immense snake uncoiled)ದಂತೆ ಮಾರ್ಲೋನ ಮನಸ್ಸನ್ನು ಮೋಹಿತಗೊಳಿಸುತ್ತದೆ. ಆಮೇಲೆ

ಮತ್ತೊಂದು ಕಡೆ ಅದೇ ಪ್ರತಿಮೆಯನ್ನುಪಯೋಗಿಸುತ್ತಾನೆ : .... the river was there - fascinating - deadly - like a snake) 'ಹೊಳೆ ಅಲ್ಲಿ ಬಿದ್ದುಕೊಂಡಿತ್ತು – ಹಾವಿನಂತೆ – ಆಕರ್ಷಕವಾಗಿ, ಮಾರಕವಾಗಿ.'

ಇದೇ ರೀತಿಯಲ್ಲಿ ನೌಕರಿಗಾಗಿ ಮಾರ್ಲೋ ಹೋದ ನಗರದ ವರ್ಣನೆ – 'ಬಿಳಿಯ ಗೋರಿ' (whited sepulchre) ಎಂದು ಮಾಡಲಾಗಿದೆ. ಅವನನ್ನು ಪರೀಕ್ಷಿಸುವ ವೈದ್ಯನ ಮನೆಯೂ 'ಸತ್ತುಹೋದ ಊರಿನಲ್ಲಿರುವ ಮನೆ'ಯಂತೆ ಮಾರ್ಲೋನಿಗೆ ಕಂಡಿತು. ಈ ತರಹದ ವರ್ಣನೆಯಲ್ಲಿ ವಿಮರ್ಶಕರಿಗೆ ಬೈಬಲ್ಲಿನ ಕಥೆಗಳ ನೆನಪಾಗುತ್ತದೆ. ಬುದ್ಧಜೀವನದಲ್ಲಿಯೂ ಇದೇ ಪರಿಸ್ಥಿತಿಯ ವರ್ಣನೆಯನ್ನು ನಾವು ಓದುತ್ತೇವೆ. ನಿರ್ವಾಣದ ಶೋಧನೆಗೆಂದು ತನ್ನ ಅರಮನೆಯನ್ನು ತೊರೆದು ಹೊರಟಾಗ, ಅವನ ಸುತ್ತಲೂ ಕಿಕ್ಕಿರಿದ ಸೌಂದರ್ಯದ ಸಂಪತ್ತು , ಕಾಮ, ಹಾಗೆಯೇ ಕಾಮವನ್ನು ಚೇತರಿಸುವ ವಸ್ತುಗಳು ಅವನ ಮನಸ್ಸಿಗೆ ಹೇಸಿಗೆಯನ್ನುಂಟುಮಾಡುತ್ತವೆ. 'ಅವನ ಸುಂದರವಾದ ಅರಮನೆ... ಕೊಳೆಯುತ್ತಿರುವ ಹೆಣಗಳ ಸ್ಮಶಾನ ಭೂಮಿಯಂತೆ ಕಂಡಿತು.' ಮಾರ್ಲೋನ ಜೀವನದಲ್ಲಿಯೂ ಅದೊಂದು ಪ್ರಯಾಣಸಂಧ್ಯೆಯಾಗಿತ್ತು ; ಧನಸಂಪನ್ನವಾದ, ಜಗತ್ತಿನ ವ್ಯಾಪಾರಕೇಂದ್ರವಾದ ಆ ಊರು – ಸತ್ತವರ ನಗರದಂತೆ – ಬಿಳಿಯ ಸ್ಮಶಾನದಂತೆ ಅವನ ಮನಸ್ಸಿನ ಮೇಲೆ ಆಳವಾದ ಪರಿಣಾಮವನ್ನುಂಟು ಮಾಡಿತು.

ಬುದ್ಧನು ತನ್ನ ನಿರ್ವಾಣಸಾಧನೆಗೆಂದು ಹೋದ ಅಡವಿಗೂ, ಆಫ್ರಿಕದ ಅರಣ್ಯಕ್ಕೂ ಅಂತರವಿದ್ದರೂ ಅವುಗಳಲ್ಲಿ ವ್ಯಕ್ತವಾಗುವ ಸಮಾನತೆ ಆಶ್ಚರ್ಯಕರವಾಗಿದೆ. ಮಾರ್ಲೋ ಪ್ರವೇಶಮಾಡಿದ ಕಾಂಗೋ ಅಡವಿಯ ವರ್ಣನೆ ನಾವೆಲ್ಲರೂ ಜೀವಿಸುತ್ತಿರುವ 'ಸಂಸಾರ'ವನ್ನು ನೆನಪಿಗೆ ತರುತ್ತದೆ. ಬುದ್ಧ ಧರ್ಮದವರಿಗೆ 'ಸಂಸಾರವೆಂಬುದು ಒಂದು ಅಡವಿ, ಸೂತ್ರದ ಬೊಂಬೆಯಾಟ, ಒಂದು ವೇದನೆ, ಒಂದು ಶೃಂಖಲೆ – ಅಂತೆಯೇ ಇಲ್ಲಿಯ ಬಾಳುವೆಯೆಂಬುದು ಒಂದು ದುಃಖ, ಸರ್ವನಾಶ, ಉಗ್ರ ನಿರಾಶೆ, ವಿಪರೀತ ಯಾತನೆ...' ಕಂಪನಿಯ ನಿಲ್ದಾಣದಲ್ಲಿ ಮಾರ್ಲೋ ಕಂಡ ಚಿತ್ರವೂ ಇದೇ ಅನುಭವವನ್ನು ತರುತ್ತದೆ : 'ಕಪ್ಪು ಆಕೃತಿಗಳು ಯಾತನೆ ಹಾಗೂ ನಿರಾಶೆಯ ಬೇರೆಬೇರೆ ಭಂಗಿಗಳಲ್ಲಿ ಬಿದ್ದುಕೊಂಡಿದ್ದವು.' ನಿಗ್ರೋ ಕರ್ಮಚಾರಿಗಳೆಲ್ಲ ಶೃಂಖಲೆಗಳಿಂದ ಬದ್ಧರಾಗಿದ್ದರು. ಪ್ರತಿಯೊಬ್ಬನ ಕುತ್ತಿಗೆ ಸುತ್ತ ಒಂದು ಲೋಹದ 'ಕೊರಳಪಟ್ಟಿ'ಯನ್ನು ಕಟ್ಟಲಾಗಿತ್ತು. 'ಎಲ್ಲರನ್ನೂ ಜೋಡಿಸುವ ಒಂದು ದೀರ್ಘ ಸರಪಣಿ ಮೇಲೆ ಕೆಳಗೆ ಸರಿಯುವಾಗ ಒಂದು ವಿಶಿಷ್ಟ ಛಂದೋಗತಿಯಿಂದ ಖಣಖಣ ಶಬ್ದಮಾಡುತ್ತಿತ್ತು.' ಆ ಸ್ಥಳ ಸರ್ವನಾಶದ ಸಂಕೇತದಂತೆ ಕಾಣುತ್ತಿತ್ತು . ಅಲ್ಲಿ ಮುರಿಯದೆ ಇದ್ದ ಯಾವ ವಸ್ತುವೂ ಇರಲಿಲ್ಲ. ಎಲ್ಲವನ್ನೂ ನುಚ್ಚು ನೂರುಗೊಳಿಸಲು ಹೊರಟ ಒಂದು ಸ್ವೈರಾಚಾರದ

ಹುಡುಗಾಟಿಕೆಯಾದಂತಿತ್ತು. ಇಂಥ ದುಃಖಪೂರ್ಣವಾದ, ಮರ್ತ್ಯಶೀಲವಾದ, ಯಾತನಾಕುಲವಾದ, ಸಂಸಾರದ ಪ್ರತೀಕವಾಗಿರುವ ಸಂಸಾರವೆಂಬ ಅಡವಿಯಲ್ಲಿ ಜನ್ಮದಿಂದ ಸೆರೆಯಾದ ಬುದ್ಧಧರ್ಮೀಯನಿಗೆ 'ನಿರ್ವಾಣ'ವೇ ಮುಕ್ತಿಯ ಮಾರ್ಗವಾಗಿದೆ. ಹಾಗೆ ನೋಡಿದರೆ, 'ಅಡವಿಯೊಳಗಿಂದ ಪಾರಾಗುವುದೇ' 'ನಿರ್ವಾಣ' ಶಬ್ದದ ಅರ್ಥವೆಂಬುದು ಎಲ್ಲರಿಗೂ ತಿಳಿದ ವಿಷಯ (ನಿರ್ + ವನ).

ಮಾರ್ಲೋನಿಗೆ ಉಂಟಾದ ಅನೇಕ ಅನುಭವಗಳನ್ನು ಬುದ್ಧಧರ್ಮಕ್ಕೆ ಸಂಬಂಧಿತ ಶಬ್ದಪ್ರಯೋಗಗಳನ್ನು ಉಪಯೋಗಿಸಿ ವರ್ಣಿಸುವುದು ಸಾಧ್ಯವಿದೆ. ಆಫ್ರಿಕೆಯ ಸಮುದ್ರತೀರದಲ್ಲಿ ಪ್ರಯಾಣಮಾಡುತ್ತಿರುವಾಗ ಅವನಿಗನಿಸುವ ಮಾತು ಅರ್ಥಪೂರ್ಣವಾಗಿದೆ : 'ಯಾವುದೋ ದುಃಖಪೂರ್ಣವಾದ ಭ್ರಮೆಯೋ, ಮಾಯೆಯೋ ಸತ್ಯವನ್ನು ತಿಳಿದುಕೊಳ್ಳಲು ಅಡ್ಡಿಯಾಗಿತ್ತು.'

ಈ ಸಂಸಾರದ ಮಾಯೆಯಾಚೆಗಿರುವ ಅನಂತ ಸತ್ಯವನ್ನು ಕಂಡುಹಿಡಿಯುವುದೇ ಬುದ್ಧಜೀವನದ ಮುಖ್ಯ ಸಾಧನೆಯಾಗಿತ್ತು. ಜೀವನವೆಂಬುದೊಂದು ಮಾಯೆ, ಒಂದು ಕನಸು. ಮಾರ್ಲೋನಿಗೂ ಇದೇ ತರಹದ ಅರಿವು ಅವನ ಮನಸ್ಸನ್ನು ಕೆಣಕುತ್ತಿತ್ತು. 'ಕರ್ಟ್ಸನ ಬಗ್ಗೆ ಹೇಳುವಾಗ ಒಂದು ಸ್ವಪ್ನದ ವರ್ಣನೆಯನ್ನು ಮಾಡುತ್ತಿದ್ದೇನೆಂದು ಭಾಸವಾಯಿತು. ಕನಸಿನಲ್ಲಿರುವಂತೆ ಏಕಾಕಿಯಾಗಿಯೇ ನಾವು ಬಾಳುತ್ತೇವೆ.' ಕಪ್ತಾನನಾಗಿ ಕೆಲಸವನ್ನು ಮಾಡುವ ಅನುಕೂಲ ಸಂದರ್ಭವನ್ನು ವರ್ಣಿಸುವಾಗ ಅಧ್ಯಾತ್ಮಿಕ ಭಾಷೆಯನ್ನು ಉಪಯೋಗಿಸುತ್ತಾನೆ ಮಾರ್ಲೋ :

> ''ನನಗೆ ದುಡಿಮೆ ಸೇರುವುದಿಲ್ಲ – ಯಾವ ಮನುಷ್ಯನಿಗೂ ಅದು ಸೇರಲಾರದು – ಆದರೆ ನನಗೆ ದುಡಿಮೆಯಲ್ಲಿ ಏನಿದೆಯೋ ಅದು ಸೇರುತ್ತದೆ. ಆತ್ಮಜ್ಞಾನವನ್ನು ಕೊಡುವ ಸಾಧನೆಯೇ ದುಡಿಮೆಯ ತಿರುಳು. 'ನೀನೆಂ'ಬುವ ಸತ್ಯವನ್ನು ನಿನ್ನ ಹೊರತಾಗಿ ಮತ್ತಾರಿಗೂ ತಿಳಿಯುವುದು ಸಾಧ್ಯವಿಲ್ಲ. ಅವರಿಗೆ ಬಹಿರಂಗದಲ್ಲಿ ನಡೆದ ನಾಟಕವೇ ಕಾಣಬಹುದು – ಅದು ನಿಜವಾಗಿ ಏನೆಂಬುದು ತಿಳಿಯಲಾರದು.''

ತನ್ನ ನಾವೆಯ ರಿಪೇರಿಗೆ ಆವಶ್ಯಕವಾದ ಮೊಳೆಗಳು ಸಿಗದೇಹೋದಾಗ ಅವನು ಹೇಳುವ ಮಾತನ್ನು ನಾವು ಕೇಳಬೇಕು : 'ಹೋಗಲಿ ಬಿಡು, ಕಾಲ ತನ್ನಷ್ಟಕ್ಕೆ ತಾನೇ ಸರಿಯಲಿ. ನನಗೆ ಧ್ಯಾನವನ್ನು ಮಾಡಲು ಸಾಕಷ್ಟು ಅವಕಾಶವಿದೆ.' ನಿಜವಾಗಿ ನೋಡಿದರೆ, 'ಧ್ಯಾನ' (meditation) – ಈ ಶಬ್ದ ಎಷ್ಟು ಸಲ ಉಚ್ಚರಿಸಲಾಗಿದೆಯೋ, ಅದು ಕಥೆಯ ಸಾರಶಬ್ದವೆಂಬಂತೆ ಎಲ್ಲಕಡೆಗೂ ನಿನದಿಸುತ್ತದೆ.

ಮಾರ್ಲೋ ಕಂಪನಿಯ ನಿಲ್ದಾಣವನ್ನು ಮುಟ್ಟಿದಾಗ ಅವನಿಗುಂಟಾದ ಅನುಭವ-ಸಮುಚ್ಚಯ, ನಿರ್ವಾಣವನ್ನು ಸಾಧಿಸಬೇಕೆಂಬ ಅಂತಿಮ ನಿರ್ಣಯವನ್ನು

ಮಾಡಬೇಕಾದರೆ ಬುದ್ಧನು ಕಂಡ 'ಸಂಕೇತ'ಗಳನ್ನು ಹೋಲುತ್ತದೆ. ನಿರ್ಣಾಯಕವಾದ ಆ ದಿವಸ ಬುದ್ಧನು ಪಟ್ಟಣದೊಳಗಿಂದ ಸಂಚಾರ ಮಾಡುತ್ತಾನೆ. ಅವನ ರಾಜಧಾನಿ ಮನುಷ್ಯನ ಮರ್ತ್ಯಜೀವನದ ಸುಂದರ ಪ್ರತೀಕವಾಗಿದೆ. ಅಲ್ಲಿ ಅವನು ನಾಲ್ಕು ಸಂಕೇತಗಳನ್ನು ಕಾಣುತ್ತಾನೆ. ಒಬ್ಬ ಮುದುಕ, ಒಬ್ಬ ರೋಗಿ, ಒಂದು ಶವ, ಒಬ್ಬ ಸನ್ಯಾಸಿ – ಈ ಚತುಷ್ಟಯದರ್ಶನ ತನ್ನ ರಾಜವೈಭವವನ್ನು ತೊರೆದು, ಅಡವಿಗೆ ಹೋಗಿ, ಅಲ್ಲಿ ತನ್ನ ಕಾಲವನ್ನೆಲ್ಲ ಸತ್ಯದ ಶೋಧನೆಯಲ್ಲಿ ಕಳೆಯಬೇಕೆಂಬ ನಿರ್ಣಯವನ್ನು ಮಾಡಲು ಅವನಿಗೆ ಸಾಧ್ಯವಾಗುತ್ತದೆ. ಮಾರ್ಲೋನ ಕಣ್ಣಿಗೆ ಬೀಳುವುದೂ ಅದೇ ವಸ್ತುಗಳು. ಆದರೆ ಅವೆಲ್ಲ ಭೀಕರವಾದ ತೀವ್ರತೆಯಿಂದ ಕಣ್ಣು ಕುಕ್ಕುತ್ತವೆ ; ಮನಸ್ಸನ್ನು ಕೆರಳಿಸುತ್ತವೆ. ಮೊದಲಿಗೆ ಅವು ಕಾಣುವುದು ರೋಗದಿಂದ ಬಳಲುತ್ತಿರುವ ಅಡವಿಯ ಉತ್ತರ ದಿಕ್ಕಿನಿಂದ ಬಂದ ಬಿಳಿಯ ಅಧಿಕಾರಿ. 'ಅವನಿಗೆ ನರಳುವಷ್ಟು ಶಕ್ತಿಯೂ ಇರಲಿಲ್ಲ. ನೊಣಗಳು ಶಾಂತವಾಗಿ ಅವನ ಮೇಲೆ ನುಗ್ಗಿ ಝೇಂಕರಿಸುತ್ತಿದ್ದವು.' ಅದಕ್ಕೆ ವಿರುದ್ಧವಾಗಿ ತೀವ್ರ ವ್ಯಂಗ್ಯವನ್ನು ನಿರ್ಮಿಸುವ, ಯಾವ ಸಹಾನುಭೂತಿಯಿಲ್ಲದೆ ತನ್ನ ಕಾರ್ಯದಲ್ಲಿಯೇ ಮಗ್ನನಾದ, ಒಳ್ಳೆಯ ಉಡುಪನ್ನು ತೊಟ್ಟ ಒಬ್ಬ ಕಾರಕೂನನು ಕಂಪನಿ ಲೆಕ್ಕವನ್ನು ಬರೆಯುತ್ತಿದ್ದನು. ಜಗತ್ತಿನ ಈ ಭಾಗದಲ್ಲಿ ಬಿಳಿಯರಿಗೆ ಕಾಯಿಲೆಯಲ್ಲಿ ಬಿದ್ದುಕೊಂಡಿರುವುದೇ ರೂಢಿಯಾಗಿತ್ತು. ಆರೋಗ್ಯವನ್ನು ಕಾಪಾಡಿಕೊಂಡಿರುವುದು (ಬಿಳಿಯರಿಗೆ) ಇಲ್ಲಿ ಅಸಾಧ್ಯವಾಗಿತ್ತು. ಆದರೆ ಇದಕ್ಕೆ ಒಂದು ಅಪವಾದವೆಂಬಂತೆ ಕಂಪನಿಯ ಕೇಂದ್ರೀಯ ನಿಲ್ದಾಣದ ಮುಖ್ಯಾಧಿಕಾರಿ ರೋಗಮುಕ್ತನಾಗಿ ಉಳಿಯುವ ಅಸಾಧಾರಣ ಕೌಶಲ್ಯವನ್ನು ಸಾಧಿಸಿದ್ದನು. ಇದೇ ಕಾರಣಕ್ಕಾಗಿ ಅವನಿಗೆ ಮುಖ್ಯಾಧಿಕಾರಿಯ ಸ್ಥಳ ಪ್ರಾಪ್ತವಾಗಿತ್ತು. ಆರೋಗ್ಯದಿಂದ ತನ್ನ ಮೇಲೆ ಗಳಿಸಿದ ವಿಜಯ, ರೋಗವೇ ಸಾಮಾನ್ಯವಾದ ಸ್ಥಿತಿಯಾಗಿರುವ ಲೋಕದಲ್ಲಿ ಒಂದು ಶಕ್ತಿಯೆಂದೇ ಒಪ್ಪಬೇಕಾಗುತ್ತದೆ. ಬುದ್ಧನಿಗೆ ಇದೇ ತಾತ್ವಿಕ ದರ್ಶನವಾಗಿತ್ತು : ಅವನ ತಿಳಿವಳಿಕೆಯಂತೆ ಈ ಸಂಸಾರದಲ್ಲಿ ದೇಹದ ಆರೋಗ್ಯಕ್ಕಿಂತ ಅನಾರೋಗ್ಯವೇ ಸಾಮಾನ್ಯ ಸ್ಥಿತಿಯಾಗಿದೆ.

ಅನಾರೋಗ್ಯದಂತೆ ಮೃತ್ಯುವಿನ ಚಿತ್ರವೂ ಅಷ್ಟೇ ಭೀಕರವಾದ ತೀಕ್ಷ್ಣತೆಯಿಂದಲೂ ಸರ್ವಕಾಲಿಕತೆಯಿಂದಲೂ ವರ್ಣಿತವಾಗಿದೆ. ಅಡವಿಯ ಒಂದು ನಿರ್ಜನ ದಾರಿಯಲ್ಲಿ ಹಣೆಯ ಮೇಲೆ ಗುಂಡಿನ ಗಾಯವುಳ್ಳ ಒಬ್ಬ ಮಧ್ಯಮ ವಯಸ್ಸಿನ ನಿಗ್ರೋನ ಶವದ ಮೇಲೆ ಎಡವಿ ಬೀಳುತ್ತಾನೆ ಮಾರ್ಲೋ. ಯಾವ ಕಾರಣವಿಲ್ಲದೆ ಆತ್ಮಹತ್ಯೆಯನ್ನು ಮಾಡಿಕೊಂಡ ಸ್ವೀಡಿಶ್ ವ್ಯಕ್ತಿಯ ವಿಚಿತ್ರ ಕಥೆಯನ್ನು ಕೇಳುತ್ತಾನೆ. ತನಗಿಂತಲೂ ಮೊದಲು ಕೆಲಸ ಮಾಡುತ್ತಿದ್ದ ಒಬ್ಬ ಅಧಿಕಾರಿಯನ್ನು ಒಬ್ಬ ನಿಗ್ರೋ ಗುಂಡು ಹಾಕಿ ಕೊಲ್ಲುತ್ತಾನೆ. ಅವನನ್ನು ಕಾಣುವ ಸಮಯ ಬಂದಾಗ, ಅವನ ಪಕ್ಕೆಲುಬಿನೊಳಗಿಂದ ಅವನ ದೇಹವನ್ನೆಲ್ಲ ಅಡಗಿಸುವಷ್ಟು ಹುಲ್ಲು ಎತ್ತರವಾಗಿ ಬೆಳೆದಿದೆ. ಮಾರ್ಲೋ

ಪ್ರವೇಶಿಸಿದ ಅನೇಕ ಸ್ಥಳಗಳಲ್ಲಿ ಮೃತ್ಯುವಿನ ನೃತ್ಯವೂ, ವ್ಯಾಪಾರವೂ ಅತ್ಯುಷ್ಣವಾದ ಸ್ಮಶಾನ-ಗುಹೆಯಲ್ಲಿ ಕಂಡುಬರುವ ಮಣ್ಣಿನ ವಾಸನೆಯಂತೆ ಏಕಕಾಲಕ್ಕೆ ನಡೆಯುತ್ತಿರುವುದನ್ನು ಕಾಣುತ್ತಾನೆ. ಕಂಪನಿಯ ನಿಲ್ದಾಣದಲ್ಲಿ ಗುಮಾಸ್ತನ ಕೊಠಡಿಯಿಂದ ಹೊರಗೆ ನೋಡಿದಾಗ ಮಾರ್ಲೋನ ಕಣ್ಣಿಗೆ ಬೀಳುವುದು ಶಾಂತವಾದ ಗಿಡಗಳಿಂದ ಕಿಕ್ಕಿರಿದ ಮೃತ್ಯುವಿನ ತೋಪು. ಒಳ್ಳೆಯ ಇಸ್ತರಿ ಮಾಡಿದ ಸೂಟು ಹಾಕಿಕೊಂಡು ಮೆರೆಯುವ ಗುಮಾಸ್ತನೂ ಹಜಾಮನ ಅಂಗಡಿಯಲ್ಲಿ ಶೋಭೆಗಾಗಿ ಪ್ರದರ್ಶಿಸಿದ ಕೃತಕ ಮನುಷ್ಯಾಕೃತಿಯಂತೆ ಕಾಣುತ್ತಾನೆ. ಇಲ್ಲಿ ಅತ್ಯಂತ ಯಾತನೆಯನ್ನುಂಟು ಮಾಡುವ ರೋಗ, ಹಸಿವೆ, ಸಾವುಗಳ ಚಿತ್ರಣ ಸ್ಪಷ್ಟವಾಗಿದ್ದರೂ ಒಬ್ಬ ಮುದುಕನ ಪ್ರತಿಮೆಯನ್ನು ಮಾತ್ರ ನಾವು ಕಾಣುವುದಿಲ್ಲ. ಅದಕ್ಕೊಂದು ಕಾರಣವಿರಬಹುದು. ಇಲ್ಲಿ ಜನ ಮುದಿತನ ಬರುವವರೆಗೆ ಜೀವಿಸುವುದಿಲ್ಲ. ವಯಸ್ಸಾಗುವ ಪೂರ್ವದಲ್ಲಿಯೇ ಅವರ ದೇಹ-ಮನಗಳು ಜರ್ಝರಿತವಾಗಿರುತ್ತವೆ. ಮಾರ್ಲೋನ ತಿಳಿವಳಿಕೆಯಂತೆ : ''ನಿಗ್ರೋ ಕರ್ಮಚಾರಿಗಳು ವಯಸ್ಸಿನಿಂದ ಚಿಕ್ಕವರಾಗಿದ್ದರೂ ಅವರ ಮೇಲೆ ಮಾಡಿದ ಬಲಾತ್ಕಾರದ ಪರಿಣಾಮವಾಗಿ ಅವರ ಶರೀರ ಮುರಿದುಹೋಗಿರುತ್ತದೆ.' ತಾರುಣ್ಯದಲ್ಲಿಯೇ ಭಗ್ನಶರೀರರಾದ ಇವರಿಗೆ ಮುದಿತನ ಏನು ಮಾಡೀತು ? ಮುದಿತನದವರೆಗೆ ಉಳಿಯುವುದಾದರೂ ಹೇಗೆ ?

ಅಡವಿಗೆ ಹೋದ ದಿವಸ ಬುದ್ಧನಿಗೆ ದೊರೆತ ನಾಲ್ಕನೆಯ ಸಂಕೇತ ಒಬ್ಬ ಸಂಸಾರವನ್ನು ತೊರೆದ ಸನ್ಯಾಸಿಯದಾಗಿತ್ತು. ಮಾರ್ಲೋನ ಕಥೆಯಲ್ಲಿ ಅವನು 'ರಸಿಯನ್'ನಾಗಿದ್ದಾನೆ. ಅವನ ವ್ಯಕ್ತಿತ್ವದ ಬಗ್ಗೆ ಅನೇಕ ಚರ್ಚೆಗಳಾಗಿವೆ ; ಆದರೂ ಅವನ ಬಗ್ಗೆ ನಡೆದ ವಿವಾದ ಕೊನೆಗಂಡಿಲ್ಲ. ನನಗನಿಸುವ ಮಟ್ಟಿಗೆ ರಸಿಯನ್‌ನು ಸನ್ಯಾಸಿಯ ಜೀವನವನ್ನು ಹೋಲುತ್ತಾನೆ. ಪ್ರಥಮತಃ, ಅವನು ಒಬ್ಬ ಮಹಾಪೂಜಾರಿಯ (arch-priest) ಮಗನಾಗಿರುವುದರಿಂದ ತಂದೆಯ ಆಧ್ಯಾತ್ಮಿಕ ವ್ಯಕ್ತಿತ್ವದ ಬಹು ಭಾಗವನ್ನು ಸಂಪಾದಿಸಿರುವುದು ಸಾಧ್ಯವಾಗಿದೆ. ಸ್ವಂತದ ಲಾಭಕ್ಕಾಗಿ ತನ್ನ ಸುತ್ತಲಿನ ಜನತೆಯನ್ನೆಲ್ಲ ಮೋಸಗೊಳಿಸುತ್ತಿರುವ ಅತ್ಯಾಚಾರಿಗಳೂ ಆಸೆಬುರುಕರೂ ತುಂಬಿಕೊಂಡಿರುವ ಅಲ್ಲಿಯ ಜಗತ್ತಿನಲ್ಲಿ ರಸಿಯನ್ ಮಾತ್ರ ಅವರಿಗೆ ವಿರುದ್ಧವಾಗಿರುವುದರಿಂದ ತನ್ನ ಸಹಚಾರಿಗಳಿಗೆ 'ಹುಚ್ಚ'ನೆಂಬ ಹೆಸರಿಗೆ ಪಾತ್ರನಾಗಿದ್ದಾನೆ. ಅವನು ತನ್ನ ಸ್ವಂತದ ಲಾಭಕ್ಕಾಗಿ ಬಾಳುವುದಿಲ್ಲ. ಅವನು ಹೊಸದಾಗಿ ಉಟ್ಟುಕೊಂಡ ಅರಿವೆ ಹಾಲೆಂಡಿನಿಂದ ಬಂದವೆಂದು ಹೇಳಿದರೂ ಈಗ ಅವುಗಳ ಬಣ್ಣ ಹೋಗಿ ಸನ್ಯಾಸಿಗಳು ಉಡುವ 'ಭಗವಾ' ಬಣ್ಣವನ್ನು ಪಡೆದಿವೆ. ಈಗ ಹರಿದುಹೋಗುತ್ತಿರುವ ಅವನ ಅರಿವೆಗಳಿಗೆ ಅನೇಕ 'ಪತಿ'ಗಳನ್ನು ಜೋಡಿಸಿ ಹೊಲೆಯಲಾಗಿದೆ. ಆದರೂ ಅವನ ಉತ್ಸಾಹ ದೊಡ್ಡದು, ಸಾಹಸ ಅಸಾಧಾರಣವಾದದ್ದು. ಯಾವ ತರಹದ ಎಣಿಕೆಯನ್ನೂ

ಮೀರದ, ಅತ್ಯಂತ ಶುದ್ಧವಾದ ಅವ್ಯವಹಾರಿಕ ಸಾಹಸಪ್ರಿಯತೆ ಅವನ ಬಾಳನ್ನು ತುಂಬಿಕೊಂಡಿತ್ತು. ಆದರೂ ಅವನು ನಿರಹಂಕಾರಿಯೂ ವಿನಯಶೀಲನೂ ಆಗಿದ್ದನು. ಯಾವುದೋ ಒಂದು ಅಂತಃಪ್ರಕಾಶ ಸ್ವಂತದ ಲಾಭಕ್ಕಾಗಿ ಮಾಡುವ ವಿಚಾರವನ್ನೆಲ್ಲ ಸುಟ್ಟುಬಿಟ್ಟಿತ್ತು. ಈ ವ್ಯಕ್ತಿತ್ವವನ್ನು ಕಂಡು ಮಾರ್ಲೋನ ಮನಸ್ಸಿನಲ್ಲಿ ಅವನ ಬಗ್ಗೆ ಅಸೂಯೆ ನಿರ್ಮಾಣವಾಗಿತ್ತು. ಆಸ್ತಿಯನ್ನು ಸಂಪಾದಿಸಬೇಕೆಂಬ ಹವ್ಯಾಸವಾಗಲಿ ತನ್ನ ಸುರಕ್ಷಿತತೆಯ ಬಗ್ಗೆ ಚಿಂತೆಯಾಗಲಿ ಅವನ ಮನಸ್ಸಿನಲ್ಲಿ ಎಳ್ಳಷ್ಟೂ ಇರಲಿಲ್ಲ. ಉಳಿದವರ ಕಲ್ಯಾಣವನ್ನೇ ಅವನು ಯಾವಾಗಲೂ ಚಿಂತಿಸುತ್ತಿದ್ದನು. ದಾರಿ ತಪ್ಪಿದ ಪ್ರವಾಸಿಗಳಿಗೆ ಉಪಯೋಗವಾಗಲೆಂದು ತನ್ನ ಗುಡಿಸಲು ಮುಂದೆ ಉರುವಲನ್ನು ಒಟ್ಟಿದ್ದನು. ಅವರಿಗಾಗಿ ಎಚ್ಚರಿಕೆಯನ್ನು ಕೊಡುವ ಒಂದು ಚೀಟಿಯನ್ನೂ ಇಟ್ಟಿದ್ದನು. ಕರ್ಟ್ಸನು ಕಾಯಿಲೆ ಬಿದ್ದಾಗ, ಮನಸ್ಸುಗೊಟ್ಟು ಅವನ ಶುಶ್ರೂಷೆಯನ್ನು ಮಾಡಿದನು. ನಿಗ್ರೋ ಜನರೆಲ್ಲ ಸರಳ ಮನಸ್ಸಿನವರು, ಯಾರಿಗೂ ನೋವುಂಟುಮಾಡಬೇಕೆಂಬ ವಿಚಾರವಿಲ್ಲದವರು – ಎಂಬ ನಂಬಿಗೆ ಅವನದಾಗಿತ್ತು. ಅವನಿಗೆ ಅಡವಿಯಿಂದ ಯಾವ ಲಾಭವನ್ನೂ ಪಡೆಯಬೇಕೆಂಬ ಆಸೆ ಎಳ್ಳಷ್ಟೂ ಇರಲಿಲ್ಲ. ವಿಶಾಲವಾದ ಅಡವಿಯಲ್ಲಿ ತಾನು ಸ್ವಚ್ಛಂದವಾಗಿ ಬಾಳಬಹುದೆಂಬ ಆಕಾಂಕ್ಷೆಯನ್ನು ಮಾತ್ರ ಅವನು ಇಟ್ಟುಕೊಂಡಿದ್ದನು. ಅವನ ನಿಃಸ್ವಾರ್ಥತೆ ಒಂದು ಪ್ರಕಾರವಾಗಿ ಅವನ ಆತ್ಮವನ್ನು ಬೆಳಗಿ ನಿಂತಿತ್ತು. ಸ್ವಾರ್ಥರಹಿತನೂ, ಪರಹಿತ ಚಿಂತಕನೂ ಮಗುವಿನ ಹಾಗೆ ಸರಳ ಸ್ವಭಾವದವನೂ ಆದ ಈ ರಸಿಯನ್ ವ್ಯಕ್ತಿ ಬುದ್ಧನ ನಿದರ್ಶನಕ್ಕೆ ಬಂದ ನಾಲ್ಕನೆಯ ಸಂಕೇತಕ್ಕೆ ಯೋಗ್ಯನಾದ ಉಮೇದುವಾರನೆಂದು ನಿಃಸಂಶಯವಾಗಿ ಒಪ್ಪಬಹುದು. ಈ ಸಂಕೇತಗಳೇ ಬುದ್ಧನನ್ನು ನಿರ್ವಾಣದ ದಾರಿಯಲ್ಲಿ ಕರೆದೊಯ್ದವು.

ಈ ರಸಿಯನ್‌ನ ಪರಿಚಯ ಮಾಡಿಕೊಡುವ ಸಮಯಕ್ಕೆ 'ಕರ್ಟ್ಸ' ಮರಣ ಹೊಂದಿರಬಹುದೆಂಬ ಸಂಶಯದಿಂದ ವ್ಯಥಿತನಾಗಿರುವಾಗ, ಬುದ್ಧನ ಭಂಗಿಯಲ್ಲಿ ಗಾಢವಾದ ಮೌನದಲ್ಲಿ ಮಾರ್ಲೋ ಧ್ಯಾನಸ್ಥನಾಗಿರುವಾಗ, ಅಲ್ಲಿ ಉರಿಯುತ್ತಿರುವ ಸಣ್ಣ ದೀಪ ಒಂದು ಕ್ಷಣ ಸ್ಪಂದಿಸಿ ಆರಿಹೋಗುತ್ತದೆ. ಕಥೆಯ ತಂತ್ರಕ್ಕೂ ಅದರ ಅರ್ಥಕ್ಕೂ ಅತ್ಯಂತ ಉಪಯುಕ್ತವಾದ ಸ್ಥಳದಲ್ಲಿ ಧ್ಯಾನಸ್ಥ ಬುದ್ಧ ಪ್ರತಿಮೆಯನ್ನು ಕಂಡು, ಅದೇ ಕಾಲಕ್ಕೆ ದೀಪವೊಂದು ಆರಿಹೋಯಿತೆಂದು ಹೇಳಿದ ಕೂಡಲೆ ಇದು ನಿಜವಾದ ನಿರ್ವಾಣವನ್ನು ಸೂಚಿಸಲು ಉಪಯೋಗಿಸಿದ ಒಂದು ತಂತ್ರವೆಂದು ಓದುಗರಿಗೆ ಮನದಟ್ಟಾಗದೆ ಇರಲಾರದು. 'ನಿರ್ವಾಣ' ಶಬ್ದದ ಅನೇಕಾರ್ಥಗಳಲ್ಲಿ ಒಂದಾದ ದೀಪ ಆರಿಹೋಗುವುದೆಂದಿದೆ [ನಿರ್ + ವಾಣ (ದೀಪ)].

ಹೀಗೆ ಬುದ್ಧನಂತೆ ನಾಲ್ಕು ಸಂಕೇತಗಳನ್ನು ತೀವ್ರತೆಯಿಂದ ಅನುಭವಿಸಿದ ಮೇಲೆ 'ಕರ್ಟ್ಸ'ನ ಅಂತಿಮ ದರ್ಶನದ ಪರಿಣಾಮವಾಗಿ ಮಾರ್ಲೋನಿಗೆ ನಿರ್ವಾಣ ಪ್ರಾಪ್ತಿಯಾಗುತ್ತದೆ.

ಅಡವಿಯ ಆಳದಲ್ಲಿ ಮಾರ್ಲೋ ಮಾಡಿದ ಪ್ರವೇಶಕ್ಕೆ ಎರಡು ಅರ್ಥವಿದೆ. ಒಂದು, ಕಾಲದಲ್ಲಿ ಪ್ರಯಾಣವನ್ನು ಸೂಚಿಸುತ್ತದೆ. ಅಲ್ಲಿಯ ಹೊಳೆಯಲ್ಲಿ ನಾವೆಯನ್ನು ತೇಲಿಸಿಕೊಂಡು ಹೋಗುತ್ತಿರುವಾಗ ಅವನು ತನ್ನ ಅನುಭವವನ್ನು ವರ್ಣಿಸುತ್ತಾನೆ :

'ಈ ಹೊಳೆಯಲ್ಲಿ ಪ್ರವಾಸವೆಂದರೆ ಜಗತ್ತಿನ ಆದಿಯನ್ನು ಮುಟ್ಟುವುದೆಂದೆನಿಸುತ್ತದೆ.' ತನಗೆ ಗೊತ್ತಿದ್ದ, ತಾನು ಉಪಯೋಗಿಸುತ್ತಿರುವ ಎಲ್ಲ ವಸ್ತುಗಳಿಂದ ಅವನು ಛೇದಿಸಲ್ಪಟ್ಟಿದ್ದಾನೆ ಎಂದು ಅನುಭವಿಸುತ್ತಾನೆ. ಹೀಗೆ ವರ್ಣನೆಯನ್ನು ಮಾಡುವಾಗ ಅವನು ಉಪಯೋಗಿಸುವ ಶಬ್ದಪ್ರಯೋಗ ಮಹತ್ವದ್ದಾಗಿದೆ : 'in another existence perhaps' (ಬಹುಶಃ ಮತ್ತೊಂದು ಜನ್ಮದಲ್ಲಿ). ಬುದ್ಧ ಧರ್ಮದ ಕೇಂದ್ರೀಯ ತತ್ವ ಯಾವುದೆಂದು ಕೇಳಿದರೆ 'ಪುನರ್ಜನ್ಮ'ವೆಂದು ಅನೇಕರು ಹೇಳುತ್ತಾರೆ. ಈ ವಿಚಾರ ಹಿಂದೂ ಧರ್ಮಕ್ಕೂ ಅನ್ವಯಿಸುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಆದರೆ ಬುದ್ಧ ಧರ್ಮೀಯರು ಇದನ್ನು ಅನೇಕ ರೀತಿಯಿಂದ ಬಳಸಿಕೊಂಡಿದ್ದಾರೆ. ಬುದ್ಧನು ರಾಜಪುತ್ರನಾಗಿ ಜನಿಸಿದ್ದು ನೂರಾರು ಪೂರ್ವಜನ್ಮಗಳ ನಂತರ. ಈ ಪುನರ್ಜನ್ಮಗಳ ಮಾಲಿಕೆಯಲ್ಲಿ ಅವನು ಒಮ್ಮೆ 'ಆನೆ'ಯಾಗಿ ಹುಟ್ಟಿದ್ದನು. ಮಾರ್ಲೋನ ಅಡವಿಯೊಳಗಿನ ಪ್ರವಾಸವೆಂಬುದು ಅವನ ಮನಸ್ಸಿನ ಕತ್ತಲೆಯಲ್ಲಿ ಮಾಡಿದ ಸಂಚಾರವಾಗಿದೆ. ಇದರೊಳಗೆ ಭೂತ-ಭವಿಷ್ಯಗಳೆಲ್ಲ ಸೇರ್ಪಡೆಯಾಗಿವೆ. ಹೀಗೆ ಸಂಚಾರಮಾಡುತ್ತಿರುವಾಗ ಇತಿಹಾಸಪೂರ್ವದಲ್ಲಿರುವ ಮಾನವನ ಕಾಡುಜೀವನ ಅತ್ಯಂತ ಸಮೀಪದಿಂದ ಮಾರ್ಲೋನಿಗೆ ದರ್ಶನವಾಗುತ್ತದೆ. ಅವನು ಒಂದು ದೃಷ್ಟಿಯಿಂದ ತನ್ನ ಸ್ವಂತದ ಪೂರ್ವಜನ್ಮವನ್ನೇ ಅನುಭವಿಸುತ್ತಾನೆ. ಆನೆಯ ಹಲ್ಲುಗಳನ್ನು ಪಡೆಯುವುದೇ ಅವನ ಸಾಹಸದ ಮುಖ್ಯ ಭಾಗವಾಗಿದೆಯೆಂದು ಒಪ್ಪಿದರೆ, ಅವನು ನಡೆಸಿರುವ ಕ್ರಿಯೆ ಮನಸ್ಸಿನ ಅಜಾಗೃತ ಪ್ರಜ್ಞೆಯಲ್ಲಿ ಆನೆಯ ಶೋಧವನ್ನೇ ಮಾಡುತ್ತಿದ್ದಾನೆಯೆಂದು ಹೇಳಬಹುದು. ನಿಜವಾಗಿ ನೋಡಿದರೆ, ಆನೆಯ ಎಲುಬುಗಳನ್ನು ನೆಲದಲ್ಲಿ ನೀಗ್ರೋ ಜನರು ಹುಗಿದಿಡುತ್ತಾರೆಂಬುದನ್ನು ತಿಳಿದರೆ, ಈ ಕ್ರಿಯೆ ವ್ಯಾಪಾರದ ಮಹತ್ವವನ್ನು ತೋರಿಸುವಂತೆ, ಭೂವಿಜ್ಞಾನದ ಮಹತ್ವವನ್ನೂ ಸೂಚಿಸುತ್ತದೆ. ಬುದ್ಧಜೀವನವನ್ನು ಅಭ್ಯಾಸಮಾಡಿದರೆ, ಅವನ 'ನಿರ್ವಾಣ' ಸಂಧ್ಯಾಕಾಲದಲ್ಲಿ ಅವನ ಸಕಲ ಪೂರ್ವಜನ್ಮಗಳ ಅರಿವು ಅವನಿಗುಂಟಾಗುತ್ತದೆ. ಈ ಕಥೆಯಲ್ಲಿ ಬುದ್ಧನ ಪ್ರತಿರೂಪವನ್ನು ತಳೆದಿರುವ ಮಾರ್ಲೋನಿಗೂ ಈ ದಟ್ಟಡವಿಯಲ್ಲಿ ಪೂರ್ವಜನ್ಮದ ತಿಳಿವಳಿಕೆಯಾಗುತ್ತದೆಯೆಂದು ಹೇಳಬಹುದು. ಈ ವಿಚಾರವನ್ನು ಪುಷ್ಟೀಕರಿಸುವ ಮತ್ತೊಂದು ಮಾತೆಂದರೆ ಮಾರ್ಲೋ ಮತ್ತು ಕರ್ಟ್ಸ್, ಹಾಗೂ ಕರ್ಟ್ಸ ಮತ್ತು ಹಸ್ತಿದಂತ ಇವುಗಳ ಅಭೇದವನ್ನು ವರ್ಣಿಸುವ ಕಥೆಯಲ್ಲಿ ತುಂಬಿದ ವಿವರಗಳು. ಮಾರ್ಲೋನ ಪ್ರವಾಸದ ಪ್ರಮುಖ ಉದ್ದಿಶ್ಯ ಕರ್ಟ್ಸನನ್ನು ಭೆಟ್ಟಿಯಾಗುವುದೆಂದು ತಾನೇ ವರ್ಣಿಸಿದ್ದಾನೆ.

'ಉಳಿದ ಯಾತ್ರಿಕರ ಉದ್ದೇಶವೇನಿದ್ದರೂ ನಾನು ಮಾತ್ರ ಕರ್ಟ್ಸನನ್ನು ಭೆಟ್ಟಿಯಾಗಲೆಂದೇ ಹೊರಟಿದ್ದೇನೆ. ಅದೇ ದಿಕ್ಕಿನಲ್ಲಿ ನನ್ನ ನಾವೆ ಹೊರಟಿದೆಯೆಂಬುದರಲ್ಲಿ ನನಗೆ ಸಂಶಯವಿಲ್ಲ.' ಕರ್ಟ್ಸನ ದಿಕ್ಕಿನಲ್ಲಿ ನಡೆದ ಈ ಪ್ರವಾಸ, ಅನೇಕ ವಿಮರ್ಶಕರು ಸ್ಪಷ್ಟಗೊಳಿಸಿದಂತೆ, ಮಾರ್ಲೋನ ಅಜಾಗೃತ ಪ್ರಜ್ಞೆಯ (unconscious) ದಿಕ್ಕಿನಲ್ಲಿ ನಡೆದ ಪ್ರವಾಸವಾಗಿದೆ. ಈ ಪ್ರವಾಸದಿಂದಲೇ ಅವನು ತನ್ನ ಅಂತರಂಗದಲ್ಲಿ ಅಡಗಿರುವ ಆತ್ಮದ ಸತ್ಯವನ್ನು ಎದುರಿಸುತ್ತಾನೆ. ಕಥೆಯ ಮಾನಸಿಕ ಸ್ತರದ ಮೇಲೆ ಕರ್ಟ್ಸ ಎಂದರೆ ಮಾರ್ಲೋನ ನಿಜವಾದ ಆತ್ಮವಾಗಿದೆಯೆಂತಲೂ (alter ego) ಅವನ ಸಹಜ ಪ್ರವೃತ್ತಿಗಳನ್ನು ರೂಪಿಸುವ ಪ್ರಕೃತಿಯೆಂತಲೂ (Id) ವಿಮರ್ಶಕರು ಒಪ್ಪುವ ವಿಷಯವಾಗಿದೆ. ಅದೇ ವರ್ಣನೆಗೆ ಸಮನಾಗಿ ಕರ್ಟ್ಸ ಮಾರ್ಲೋನ ಎರಡನೆಯ ರೂಪವೆಂತಲೂ (Double), ಅವನ ಒಂದು ಛಾಯೆಯೆಂತಲೂ ಹೇಳಲಾಗಿದೆ. ಈ ಕಥೆ ಆಧ್ಯಾತ್ಮಿಕ ಸ್ತರದ ಮೇಲೆಯೂ ವಿಶದವಾಗುತ್ತದೆಯೆಂಬುದನ್ನು ನೆನೆದರೆ, ಮಾರ್ಲೋ ಮತ್ತು ಕರ್ಟ್ಸ ಇವರ ಸಮೀಕರಣದ ಜತೆಯಲ್ಲಿ ಮತ್ತೊಂದು ಹೆಸರನ್ನು ಸಮೂದಿಸಬೇಕಾಗುತ್ತದೆ. ಅದೆಂದರೆ ಬುದ್ಧನ ಹೆಸರು.

ಮಾರ್ಲೋನ ಪ್ರವಾಸ ಅವನ ಪೂರ್ವಜನ್ಮಗಳ ಅರಿವನ್ನುಂಟುಮಾಡಿದಂತೆ ಹಸ್ತಿದಂತದ ಶೋಧವೂ ಪುರಾಣಕಾಲದಲ್ಲಿ ಹುದುಗಲ್ಪಟ್ಟ ಅವನ ಆತ್ಮದ ಶೋಧವೂ ಅದಕ್ಕೆ ಸಮನಾಗಿದೆ. ಈ ಸಮೀಕರಣವೂ ಮಾರ್ಲೋನ ಬುದ್ಧಿಗೆ ಸ್ಪಷ್ಟವಾಗಿದೆ. ಅವನು ಕರ್ಟ್ಸನ ತಲೆಯನ್ನು 'ಹಸ್ತಿದಂತದ ಚೆಂಡೆ'ಂದು (ivory ball) ವರ್ಣಿಸುತ್ತಾನೆ :

> ''ಅಡವಿ ಅವನ ತಲೆಯ ಮೇಲೆ ತನ್ನ ಕೈಯಾಡಿಸಿತ್ತು. ಅದರ ಪರಿಣಾಮವಾಗಿ ಅದೊಂದು ಚೆಂಡಿನಂತೆ ಬೋಳಾಗಿಬಿಟ್ಟಿತ್ತು. ಅಡವಿ ಅವನನ್ನು ಲಾಲನೆ ಮಾಡಿತ್ತು ; ಅಂತೆಯೇ ಅವನು ಒಣಗಿಹೋಗಿದ್ದನು. ಅವನನ್ನು ಅದು ಪ್ರೀತಿಸಿತ್ತು , ಮುದ್ದಿಸಿತ್ತು , ಆಲಿಂಗಿಸಿತ್ತು ; ಅವನ ನರಗಳಲ್ಲಿ ಸೇರಿಕೊಂಡಿತ್ತು ; ಅವನ ಮೈಮೇಲಿನ ಮಾಂಸವನ್ನೆಲ್ಲ ತಿಂದುಬಿಟ್ಟು, ಯಾವುದೋ ರಾಕ್ಷಸ ತಂತ್ರಗಳಿಂದ ಅವನ ಆತ್ಮದ ಮೇಲೆ ತನ್ನ ಮುದ್ರೆಯನ್ನೊತ್ತಿ ಬಿಟ್ಟಿತ್ತು .''

ಹಸ್ತಿದಂತವನ್ನು ಪಡೆಯಬೇಕೆಂಬ ಹಸಿವೆಯಿಂದ ಕರ್ಟ್ಸನು ಆರ್ತನಾಗಿದ್ದನು ; ಹಸ್ತಿದಂತಗಳಿಂದ ತನ್ನ ಗುಡಿಸಲನ್ನು ತುಂಬಿಬಿಟ್ಟಿದ್ದನು ; ನಿಜವಾಗಿ ನೋಡಿದರೆ, ಅವನೇ ಹಸ್ತಿದಂತವಾಗಿದ್ದನು ; ಕರ್ಟ್ಸನು ಕಾಯಿಲೆಯಿಂದ ಬಳಲುತ್ತಿರುವಾಗ ಇದೇ ಉಪಮೆಯನ್ನು ಮಾರ್ಲೋ ಉಪಯೋಗಿಸುತ್ತಾನೆ : ''ಹಳೆಯ ಹಸ್ತಿದಂತದಲ್ಲಿ ಕೊರೆದ ಮೃತ್ಯುವಿನ ಜೀವನ ಪ್ರತಿಮೆ ಅಲ್ಲಿ ನೆರೆದ ಕಂಚಿನ ಮೂರ್ತಿಯಂತಿರುವ ಜನರನ್ನು ಹೆದರಿಸುತ್ತಿತ್ತು.''

ಹಸ್ತಿದಂತ ಬುದ್ಧನ ಪೂರ್ವಜನ್ಮದ ಪಾಶವೀ ಸ್ವರೂಪವೆಂದು ಒಪ್ಪಿದರೆ, ಅದು ಭೌತಿಕ ಸಂಪತ್ತಿನ ಹಾಗೂ ಸಾಮರ್ಥ್ಯದ ಪ್ರತೀಕವೆಂತಲೂ ನಾವು ತಿಳಿದುಕೊಳ್ಳಬಹುದು. ನಿರ್ವಾಣಪ್ರಾಪ್ತಿಗಾಗಿ ಅರಣ್ಯಕ್ಕೆ ಹೋಗುವ ಮೊದಲು ಬುದ್ಧನು ಅವನ ಸುಖಕ್ಕಾಗಿ ಕಟ್ಟಿದ ಅರಮನೆಯಲ್ಲಿ ವಾಸಿಸುತ್ತಿದ್ದನು. ಅವನು ಸಂಸಾರವನ್ನು ತೊರೆದು ಸನ್ಯಾಸಿಯಾಗಬಹುದೆಂಬ ಭವಿಷ್ಯವನ್ನು ರಾಜಜ್ಯೋತಿಷಿಗಳು ಪ್ರಕಟಿಸಿದ್ದ ಕಾರಣ ಅದನ್ನು ತಪ್ಪಿಸುವದಕ್ಕಾಗಿ ಬುದ್ಧನ ತಂದೆ ಅವನ ಸುತ್ತಲೂ ಎಲ್ಲ ಭೋಗಗಳ ಸುರಿಮಳೆಯನ್ನೇ ಮಾಡಿ ಅದರಲ್ಲಿ ಬದ್ಧನಾಗುವಂತೆ ಪ್ರಯತ್ನ ಮಾಡಿದ್ದನು. ಅಲ್ಲಿ ನಾಲ್ವತ್ತು ಸಾವಿರ ನರ್ತಕಿಯರನ್ನು ಅವನ ಸೇವೆಗಾಗಿ ಇಡಲಾಗಿತ್ತು. ಇದನ್ನು ಕಂಡ ರಾಜ್ಯದ ಜನತೆ ಬುದ್ಧನ ಕಾಮಜೀವನದ ಬಗ್ಗೆ ತಕರಾರು ಮಾಡುತ್ತಿದ್ದರು. ಆದರೆ ಅರಮನೆಯ ಸೆರೆಯಿಂದ ಹೊರಗೆ ಹೋಗುವ ನಿಶ್ಚಯವನ್ನು ಮಾಡಿದ ದಿವಸ 'ಅರಮನೆಯೊಂದು ಕೊಳೆಯುತ್ತಿರುವ ಹೆಣಗಳಿಂದ ತುಂಬಿದ ಸ್ಮಶಾನ ಭೂಮಿಯಂತೆ ಅವನಿಗೆ ಕಂಡಿತು.'

ಬುದ್ಧನ ಅರಮನೆಯಂತೆ, ಕರ್ಟ್ಸನ ಗುಡಿಸಲೂ ರಾಜಕೀಯ ಪ್ರತೀಕವಾಗಿತ್ತು. ಅವನು ಅಲ್ಲಿ ಕಾಡುಜನರನ್ನೂ, ಆದಿವಾಸಿಗಳ ರಾಜರನ್ನೂ ಕೊಂದು ಅಲ್ಲಿ ತನ್ನ ಏಕಾಧಿಪತ್ಯವನ್ನು ಸ್ಥಾಪಿಸಿದನು : ಇದರ ಪ್ರತೀಕ ಸ್ಪಷ್ಟವಾಗುವಂತೆ ಮನೆಯ ಸುತ್ತಲೂ ಕಟ್ಟಿದ ಗೋಡೆಯನ್ನು ಮಾನವೀಯ ತಲೆಬುರುಡೆಗಳಿಂದ ಅಲಂಕರಿಸಿದ್ದನು. ಸ್ಮಶಾನವನ್ನು ಹೋಲುವ ಇವನ ಕಂಪನಿಯ ಕೇಂದ್ರವನ್ನೂ ಕಾನ್ರ್ಯಾಡನು ವಿವರವಾಗಿ ವರ್ಣಿಸಿದ್ದಾನೆ. ಬುದ್ಧನ ಅರಮನೆ ಹಾಗೂ ಕರ್ಟ್ಸನ ಗುಡಿಸಲು ಮನುಷ್ಯನ ಆಸೆಬುರುಕತನದ ಪ್ರತಿಫಲವಾಗಿವೆ. ಮತ್ತೊಂದು ಅರ್ಥದಲ್ಲಿ ಕರ್ಟ್ಸ ಮತ್ತು ಬುದ್ಧ — ಇವರ ಸಮೀಕರಣವನ್ನು ಮಾಡಬಹುದು. ತರುಣ ರಾಜಪುತ್ರನಂತೆ ಕರ್ಟ್ಸನೂ ಕಾಮಜೀವನದಲ್ಲಿ ರತನಾಗಿದ್ದನು. ಅಡವಿಯಲ್ಲಿ ಕಂಡ ಒಬ್ಬಳು ಕಪ್ಪು ಸುಂದರಿಯನ್ನು ತನ್ನ ಪ್ರೇಯಸಿಯನ್ನಾಗಿ ಸ್ವೀಕರಿಸಿದನು.

ಮಾರ್ಲೋ ಮತ್ತು ಕರ್ಟ್ಸ ಇವರ ಅತ್ಯಂತ ಸ್ಫೋಟಕವಾದ ಭೇಟಿಯಲ್ಲಿ ಕರ್ಟ್ಸನ ಜೀವನದ ಕೊನೆಯ ಕ್ಷಣಗಳನ್ನು ವರ್ಣಿಸುವಾಗ ಅಧ್ಯಾತ್ಮಿಕ ದೃಷ್ಟಿಯನ್ನು ಲೇಖಕ ಎತ್ತಿ ತೋರಿಸುತ್ತಾನೆ. ನಾವೆಯ ಒಂದು ಕೋಣೆಯಲ್ಲಿ ಸಾವನ್ನು ಎದುರಿಸುತ್ತ ಬಿದ್ದುಕೊಂಡ ಕರ್ಟ್ಸನು ತನ್ನ ಆಶೆ-ಆಕಾಂಕ್ಷೆಗಳಿಂದ ಮೋಹ-ಪ್ರಲೋಭನಗಳಿಂದ ತುಂಬಿದ ಬಾಳನ್ನು ಪುನಃ ಜೀವಿಸುತ್ತಾನೆ ; ಅದರ ಕೊನೆಯಲ್ಲಿ ಶುದ್ಧಜ್ಞಾನದ ಅತ್ಯುತ್ತಮ ಕ್ಷಣವನ್ನು ಅನುಭವಿಸುತ್ತಾನೆ. 'ಆಗ ಅವನೆದುರಿಗಿರುವ ಪರದೆಯೊಂದು ಹರಿದುಹೋಯಿತೋ ಏನೋ' ಎಂದು ಮಾರ್ಲೋ ವರ್ಣಿಸುತ್ತಾನೆ. 'ಭಯಂಕರ ! ಭಯಂಕರ !' (The Horror ! The Horror!) ಎಂದು ಕರ್ಟ್ಸ ಕೂಗುತ್ತಾನೆ ; ಆಗ ಮಾರ್ಲೋ ಮೇಲಕ್ಕೆದ್ದು

ಮೇಣಬತ್ತಿಯನ್ನು ಊದಿ ಆರಿಸುತ್ತಾನೆ. 'ಮೇಣಬತ್ತಿಯ ದೀಪವನ್ನು ಆರಿಸುವುದೆಂದರೆ' 'ನಿರ್ವಾಣ' ಶಬ್ದದ ಮೂಲಾರ್ಥ. ಅದು ಆತ್ಮಜ್ಞಾನದ ಅತ್ಯುತ್ತಮ ಕ್ಷಣ. ಅವನು 'horror' ಎಂದು ಕೂಗಿದಾಗ ಸಕಲ ವಿಶ್ವವನ್ನು ವ್ಯಾಪಿಸುವಷ್ಟು ಕತ್ತಲೆಯಲ್ಲಿ ಸ್ಪಂದಿಸುತ್ತಿರುವ ಎಲ್ಲ ಹೃದಯಗಳನ್ನು ಭೇದಿಸುವಷ್ಟು 'ವಿಶಾಲ'ವಾಗಿತ್ತು, ಆ ಕೂಗು.

''ಎಲ್ಲ ಸೋಲುಗಳು ಎಲ್ಲ ಭಯಂಕರ ಅನುಭೂತಿಗಳು ಎಲ್ಲ ರಾಕ್ಷಸೀ ಸಂತೃಪ್ತಿಗಳು ತಮ್ಮ ಬೆಲೆಯನ್ನು ಕೊಟ್ಟು ಪಡೆದ ನೈತಿಕ ವಿಜಯವಾಗಿತ್ತು ; ನಿಜವಾಗಿಯೂ ಅದೊಂದು ಅದ್ವಿತೀಯ ವಿಜಯ ! ಅಂತೆಯೇ ನಾನು ಕೊನೆಯವರೆಗೆ, ಅದಕ್ಕೂ ಆಚೆಯವರೆಗೆ ಅವನ ಬಗ್ಗೆ ಶ್ರದ್ಧೆಯುಳ್ಳವನಾಗಿದ್ದೆ...''

ನಿರ್ವಾಣದ ಬೆಳಕಿಗೂ, 'ಭಯಂಕರ'ವಾದ ಅನುಭವಕ್ಕೂ ಸಮೀಕರಣ ಮಾಡುವದು ಅಷ್ಟು ಯೋಗ್ಯವೆನಿಸಲಿಕ್ಕಿಲ್ಲ. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಹಿನ್ನೆಲೆಯಲ್ಲಿ, ಅಲ್ಲಿಯ ಜನರ ವಿಚಾರಪದ್ಧತಿಯಲ್ಲಿ, ನಿರ್ವಾಣವು ಭಯಂಕರವೆಂದೆನಿಸುವುದು ಸಾಧ್ಯವಿದೆ. ಬುದ್ಧನು ಮಾಡಿದ ಘೋಷಣೆಗಳಲ್ಲಿ ಸಂಸಾರದ ಅನಿತ್ಯತೆ ಅತ್ಯಂತ ಮಹತ್ವದ ತತ್ವವಾಗಿತ್ತು . ಭೌತಿಕ ಆಸ್ತಿಪಾಸ್ತಿಗಳು, ಗೆಲವುಗಳು, ಕಾಮ ಹಾಗೂ ಕೀರ್ತಿ ಬಹಳ ಕಾಲದವರೆಗೆ ಉಳಿಯುವ ವಿಷಯಗಳಲ್ಲ ; ಅಂತೆಯೇ ಅವುಗಳಿಗೆ ಅಂಟಿ ಕೊಂಡಿರಬಾರದು. ಆಸಕ್ತಿಯನ್ನು ತಾಳಬಾರದು ; ಆಸಕ್ತಿ ಎಲ್ಲ ದುಃಖಗಳ ಮೂಲವಾಗಿದೆ. ಅಡವಿಯ ವಾಸದಲ್ಲಿ ಕರ್ಟ್ಸನು ಕೂಡ ಇದೇ ದರ್ಶನವನ್ನು ಪಡೆಯುತ್ತಾನೆ : ಇವನು ಪಡೆದ ವಸ್ತುಗಳನ್ನು 'ಪೊಳ್ಳು ಮೋಸ'' (hollow sham) ಎಂದು ಧಿಃಕರಿಸುತ್ತಾನೆ. ಬುದ್ಧನ ದ್ವಿತೀಯ ಸತ್ಯವೆಂದರೆ 'ಅನತ್ತ' (ಆತ್ಮದ ಅಭಾವ). ಮಾರ್ಲೋ ವರ್ಣಿಸುವ ಹಾಗೂ ಕರ್ಟ್ಸ ಅನುಭವಿಸುವ ಸತ್ಯವೂ ಇದೇ : 'ಆತ್ಮದ ಪೊಳ್ಳುತನ.' 'ಅಡವಿಯ ಏಕಾಂತವು ಅವನ ಕಿವಿಯಲ್ಲಿ ಉಸುರಿದ ಸತ್ಯ ಆಕರ್ಷಕವಾಗಿತ್ತು... ಅವನ ಅಂತರಂಗವೆಲ್ಲ ಪೊಳ್ಳಾಗಿತ್ತು.'

ಕರ್ಟ್ಸನು ಕ್ರಿಸ್ತಧರ್ಮದ ಅನುಯಾಯಿಯಾಗಿದ್ದರಿಂದ ಆತ್ಮವೇ ಅಂತಿಮ ಸತ್ಯವೆಂದು ನಂಬಿದ್ದನು. ಅಂತೆಯೇ ಆತ್ಮದ ಅಭಾವ (ಅನತ್ತ) ಅವನ ಮನಸ್ಸಿನ ಮೇಲೆ ಭಯಂಕರ ಆಘಾತ ಮಾಡಿರಬೇಕು. ಈ ಆಘಾತದ ನಂತರ ಕರ್ಟ್ಸನು ಸಾಯುತ್ತಾನೆ. ಮಾರ್ಲೋ ಮಾತ್ರ 'ಅವನಿಗೆ ದೊರೆತ ಅಂತಿಮ ಜ್ಞಾನ'ವೆಂದು ಭಾವಿಸುತ್ತಾನೆ. ತನ್ನ ಆಫ್ರಿಕನ್ ಪ್ರವಾಸದಿಂದ ತಿರುಗಿ ಬಂದ ನಂತರ ತಮ್ಮ ಪೊಳ್ಳು ಆಸೆಗಳ ಬೆನ್ನು ಹತ್ತಿ ಜೀವಿಸುತ್ತಿರುವ ಸಾಮಾನ್ಯ ಜನರನ್ನು ಕಂಡು ಅವನಿಗೆ ಬೇಸರವಾಗುತ್ತದೆ. ಅವನ ಜ್ಞಾನವನ್ನು ತಿಳಿಯದ ಅವರ ದೌರ್ಬಲ್ಯ ಅವನನ್ನು ರೇಗಿಸುತ್ತದೆ.

ಮಾರ್ಲೋನಿಗೆ ಈ ಪೊಳ್ಳುತನದ ತಿಳಿವಳಿಕೆ ಕರ್ಟ್ಸನಿಂದಷ್ಟೇ

ದೊರೆಯುವುದಿಲ್ಲ. ಇಟ್ಟಂಗಿಗಳನ್ನು ಮಾಡಲು ಹೊರಟ ಸೈತಾನನಂತೆ ಕಾಣುವ ಒಬ್ಬ ವ್ಯಕ್ತಿಯನ್ನು ಸಂದರ್ಶಿಸುತ್ತಾನೆ. ಅವನೂ ಒಬ್ಬ ಪೊಳ್ಳು ಮನುಷ್ಯನೆಂದು ತಿಳಿದುಕೊಳ್ಳುತ್ತಾನೆ ; ಮಾರ್ಲೋ ಅವನನ್ನು ಹೀಗೆ ವರ್ಣಿಸುತ್ತಾನೆ : 'ನಾನು ಅವನನ್ನು ಸ್ವಲ್ಪ ತಿವಿದು ನೋಡಿದರೆ ಒಳಗಡೆಗೆ ಏನೂ ಸಿಗಲಿಕ್ಕಿಲ್ಲ – ಬಹುಶಃ ಸ್ವಲ್ಪ ಮಣ್ಣು ಮಾತ್ರ ನಾನು ಕಾಣಬಹುದು.' ಕಂಪನಿಯ ಮುಖ್ಯ ಕರಣಿಕನೂ 'ಹಜಾಮನ ಅಂಗಡಿಯಲ್ಲಿ ಶೋಭೆಗಾಗಿ ಇಟ್ಟ ಒಂದು ಗೊಂಬೆ'ಯಾಗಿದ್ದಾನೆ. ನಿಗ್ರೋ ಜನರನ್ನು ವರ್ಣಿಸುವಾಗ ಇದೇ ಸಂಕೇತಗಳನ್ನು ಮಾರ್ಲೋ ಉಪಯೋಗಿಸುತ್ತಾನೆ. 'ರೋಗಗಳಿಂದಲೂ ಹಸಿವೆಯಿಂದಲೂ ಜರ್ಝರಿತವಾದ ಛಾಯೆಗಳು' (shadows) ಎಂದು ಅವರನ್ನು ವರ್ಣಿಸುತ್ತಾನೆ. ರಸಿಯನ್‌ನ ಪಾತ್ರವೂ 'ಅನತ್ತ'ದ ವರ್ಗದಲ್ಲಿ ಸೇರ್ಪಡೆಯಾಗಬಹುದು. ಈ ಸಂದರ್ಭದಲ್ಲಿ ಟಿ.ಎಸ್. ಎಲಿಯಟ್‌ನ 'The Hollow Men' (ಪೊಳ್ಳುಜನ) ಎಂಬ ಕವಿತೆ ಅರ್ಥಪೂರ್ಣವಾಗಿದೆ. ಯಾಕೆಂದರೆ ಈ ಕವಿತೆಯ ಶೀರ್ಷಿಕೆಯಾಗಿ ಈ ಕಾದಂಬರಿಯಲ್ಲಿ ಬರುವ ವರ್ಣನೆ 'ಕರ್ಟ್ಸ್ – ಅವನು ಸತ್ತುಹೋಗಿದ್ದಾನೆ (Mistah Kurtz – he dead') ಎಂಬ ವಾಕ್ಯವನ್ನು ಕವಿ ಉಪಯೋಗಿಸಿದ್ದಾನೆ :

> ನಾವೆಲ್ಲ ಪೊಳ್ಳುಜನ
> ಒಳಗೆ ಹುಲ್ಲು ತುಂಬಿದ ಜನ !
> ಅಯ್ಯೋ, ತಲೆಯಲ್ಲಿ ಬರಿ ಹುಲ್ಲು !

ಈ ಸಾಲುಗಳು ಕಾನ್ರ್ಯಾಡನ ಕಾದಂಬರಿಯ ಮೇಲಿನ ಭಾಷ್ಯವಾಗಿಯೂ, ಅದರ ಬುದ್ಧ ಧರ್ಮದ ಹೆಣಿಗೆಯಾಗಿರುವ ದರ್ಶನವಾಗಿಯೂ ಎದ್ದು ನಿಲ್ಲುತ್ತವೆ.

ಬುದ್ಧನ ಪ್ರತಿಮೆ ಕಾದಂಬರಿಯ ಅರ್ಥವಾಗಿ ಎಲ್ಲ ಕಡೆಗೂ ಬೆಳಕಿನಂತೆ ಹಬ್ಬಿರುವ ಮಹತ್ವವನ್ನು ಓದುಗರು ಈಗ ಕಂಡುಕೊಳ್ಳಬಹುದು.

ನಟ್ ಹ್ಯಾಮ್ಸನ್ : 'ಗ್ರೋತ್ ಆಫ್ ದಿ ಸಾಯಿಲ್'

ಎಚ್. ಪಟ್ಟಾಭಿರಾಮ ಸೋಮಯಾಜಿ

ಬಡತನದಲ್ಲಿ ಹುಟ್ಟಿ ಜೀವನದ ಬಹುಭಾಗವನ್ನು ಸಮಗಾರ, ಗಣಿ ಕೆಲಸಗಾರ, ಅಂಗಡಿ ಲೆಕ್ಕಿಗ, ಬಸ್ ಕಂಡಕ್ಟರ್, ಅಂಚೆ ಕಛೇರಿ ಗುಮಾಸ್ತ, ನ್ಯಾಯಾಲಯದ ಓಲೆಕಾರ ಮುಂತಾದ ಕೆಲಸಗಳಲ್ಲಿ ನೆಲೆಯಿಲ್ಲದೇ ಕಳೆದು ಬಡತನದ ಬದುಕಿನ ಸಂಕಷ್ಟಗಳನ್ನು ಆಥೆಂಟಿಕ್ ಆಗಿ ಉಂಡು ಬೆಳೆದ ನಾರ್ವೆ ದೇಶದ ನಟ್ ಪೆಡರ್‌ಸನ್ (1859-1952), ತನ್ನ ವಂಶಪಾರಂಪರ್ಯ ಫಾರ್ಮಿನ ಹೆಸರಾದ 'ಹ್ಯಾಮ್ಸನ್'ನ್ನು ತನ್ನ ಕಾವ್ಯನಾಮವಾಗಿಸಿ ಕೊಂಡು ನಟ್ ಹ್ಯಾಮ್ಸನ್ ಎಂದೇ ಪ್ರಸಿದ್ಧನೂ ಪರಿಚಿತನೂ ಆದ. ತನ್ನ ದೇಶದ ಇತರ ನೆಲೆತಪ್ಪಿದ ಬಡವರಂತೆ ಹೊಸ ಆಶೋತ್ತರಗಳ ಹೊಸ ದಿಗಂತದ ಹುಡುಕಾಟದಲ್ಲಿ ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಎರಡು ಬಾರಿ ಅಮೆರಿಕಾಕ್ಕೆ ಹೋಗಿ ಅಲ್ಲಿಯೂ ನೆಲೆಕಾಣದೆ ಹಿಂದೆ ಬಂದ. ಬರುತ್ತಲೇ ಆತ ಬರೆದ The Cultural Life of America ಬಹಳ ಪವಾಡಾತ್ಮಕವೆನಿಸಿಕೊಂಡ ಆತನ ಮೊಟ್ಟ ಮೊದಲ ಕೃತಿ. ಅಮೆರಿಕವು ಪ್ರತಿನಿಧಿಸುವ ಹೊಸ ಕೈಗಾರಿಕೀಕೃತ ಸಂಸ್ಕೃತಿ ಮತ್ತು ಅದರ ಮೌಲ್ಯಗಳನ್ನು ಆತ ಇದರಲ್ಲಿ ಕಟುವಾಗಿ ಟೀಕಿಸಿದ್ದಾನೆ ; ತಾನು ಸ್ವಲ್ಪವೂ ಇಷ್ಟಪಡದಿದ್ದ ಸಮಕಾಲೀನ ಪ್ರಬಲ ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳಿಗೆ ಅಮೆರಿಕವನ್ನು ರೂಪಕವಾಗಿ ಆತ ಕಾಣುತ್ತಾನೆ. ಆ ಪುಸ್ತಕವನ್ನು ಪುನರ್ಪ್ರಕಟಿಸುವ ಅಮೆರಿಕನ್ನರು ಇವತ್ತಿಗೂ ಆತನನ್ನು ಟೀಕಿಸುವುದು ಆತನ ಟೀಕೆಯ ಹರಿತತೆ, ಜೀವಂತಿಕೆ ಮತ್ತು ಆ ಪುಸ್ತಕ ಒಳಗೊಂಡಿರುವ ಅಮೆರಿಕಕ್ಕೆ ರುಚಿಸಲಾರದ ಕೆಲವಾದರೂ ಕಟು ಸತ್ಯಗಳ ದ್ಯೋತಕವಾಗಿದೆ.

Hunger, Growth of the Soil ಮತ್ತು Women at the Well ಕಾದಂಬರಿಗಳ ಮೂಲಕ ಇಂಗ್ಲಿಷ್ ಮಾತಾಡುವ ಜನರಿಗೆ ಪರಿಚಿತನಾಗಿರುವ ನಟ್ ಹ್ಯಾಮ್ಸನ್ ನಾರ್ವೆಯ ಕಾದಂಬರಿಕಾರ ಮತ್ತು ಸಣ್ಣ ಕಥೆಗಾರ. 1917ರಲ್ಲಿ ಆತ ಬರೆದ Markens Grode (Growth of the Soil) ಕಾದಂಬರಿಗೆ 1920ರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ. ತನ್ನ ಎಲ್ಲ ಕೃತಿಗಳ ಮೂಲಕವೂ ಆತ ಅತ್ಯಂತ ವಿವಾದಾತ್ಮಕ ಲೇಖಕನೆನ್ನಿಸಿ ಕೊಂಡೇ ಉಳಿದವ. ಬದುಕಿನಲ್ಲೂ ಹಾಗೇ. ಮೊದಲ ಮತ್ತು ಎರಡನೆಯ ಮಹಾಯುದ್ಧಗಳ ಕಾಲದಲ್ಲಿ ಆತ ಜರ್ಮನಿಯ ಪರವಾಗಿದ್ದ. ಎರಡನೆಯ ಮಹಾಯುದ್ಧದ ಕಾಲದಲ್ಲಂತೂ ಹಿಟ್ಲರನ ನಾಜಿ ಸೇನೆಗೆ ಬಹಿರಂಗವಾಗಿ ಪ್ರಚಾರ ಮತ್ತು ಸಹಾಯಗಳನ್ನು ನೀಡಿ, ಯುದ್ಧಾನಂತರ, ದೇಶದ ವಿರುದ್ಧ ಈ ರೀತಿ ದ್ರೋಹ ಎನಿಸಿದ ಆಪಾದನೆಯ ಮೇರೆಗೆ ದಂಡ ತೆತ್ತು, ವಯಸ್ಸಿನ ಕಾರಣದಿಂದ ಜೈಲಿಗೆ ಹೋಗದೆ ಉಳಿದ. ಪ್ರಶಸ್ತಿ

ಸಿಕ್ಕಮೇಲೂ ಸದಾಕಾಲವೂ ಪ್ರಚಾರಕ್ಕೆ ಸಿಗದ ಹಾಗೆ ದೂರವೇ ಇದ್ದು ಜೀವನದ ಕೊನೆಯ ಮೂವತ್ತು ವರ್ಷಗಳ ಕಾಲ ವ್ಯವಸಾಯ ಹಾಗೂ ಬರವಣಿಗೆಗಳನ್ನು ಮಾಡಿಕೊಂಡು ಬದುಕಿ 1952ರಲ್ಲಿ ತೀರಿಕೊಂಡ ಈತ, ತನ್ನ ಜೀವನದ ಹೋರಾಟದಲ್ಲಿ ದಕ್ಕಿಸಿಕೊಂಡ ಆತ್ಮಕಥಾ ವಿವರಗಳನ್ನು ಆತನ ಬರಹಗಳಲ್ಲಿ ಹೇರಳವಾಗಿ ಕಾಣಬಹುದು. ಹೋರಾಟದ ಬದುಕಿನಿಂದ ಬೆಳೆದವನೊಬ್ಬ ತನ್ನ ಉತ್ತುಂಗ ಪ್ರೌಢಿಮೆಯಲ್ಲಿ ಮಾತ್ರ ಕಾಣಬಹುದಾದ ಜೀವನದ ವಿವರಗಳು, ಓದುತ್ತ ಹೋದಂತೆ ಆಳಕ್ಕೆ ಇಳಿಯುತ್ತ ಹೋಗುವ ಜೀವನದೃಷ್ಟಿ ಮತ್ತು ಪ್ರೌಢವೂ ಗಂಭೀರವೂ ಆದ ನಿಲುವುಗಳು ಯಾವುದೇ ಸದ್ದುಗದ್ದಲ, ಕೊಂಕುಕುಹಕಗಳಿಲ್ಲದೇ ಸಮ್ಮಿಳನವಾಗಿರುವ Growth of the Soil ಯಾವುದೇ ಪೂರ್ವಯೋಜಿತ ತಾತ್ವಿಕತೆಯ ಸೋಂಕಿಲ್ಲದೆ ತನ್ನ ವಾಸ್ತವದ ವಿವರಗಳ ನಡುವಿಂದಲೇ ತತ್ತ್ವವನ್ನು ಪುಟಿಯಿಸುವ ಮೇರುಕೃತಿ.

❑ ❑ ❑

ನಾರ್ವೆಯ ಉತ್ತರಭಾಗದ ಬೆಟ್ಟಕಾಡುಗಳ ನಿರ್ಜನ ಪ್ರಾಂತಕ್ಕೆ ಮೊದಲು ಕಾಲಿಟ್ಟು ಸೂಕ್ತ ಸ್ಥಳವನ್ನು ಅರಸಿ ನೆಲಸುವ ಐಸಾಕ್ ಮನುಷ್ಯನ ಇತಿಹಾಸದ ಮೂಲ ಪುರುಷ. ತನ್ನ ಸಾಧಾರಣ ದೈಹಿಕ ಬಲ, ಮನೋದಾರ್ಢ್ಯ ಮತ್ತು ಅನುಭವದಿಂದ ಕಲಿತ ಬುದ್ಧಿವಂತಿಕೆ – ಇವುಗಳ ಸಹಾಯದಿಂದ ತನಗೆ ಪ್ರಕೃತಿಯನ್ನೂ ಪ್ರಕೃತಿಗೆ ತನ್ನನ್ನೂ ಒಗ್ಗಿಸಿಕೊಳ್ಳುತ್ತ ಆತ ಬದುಕು ರೂಢಿಸಿಕೊಳ್ಳುತ್ತಾನೆ. ತನ್ನ ಬದುಕನ್ನು ಪ್ರಕೃತಿಯ ಜೊತೆಗಿನ ಈ ಹೋರಾಟದಲ್ಲಿ ಕೀಲಿಸಿಕೊಂಡ ಈ ಸಾಹಸಿ ಹೆಂಗಸೊಬ್ಬಳ ಸಹಾಯ ಮತ್ತು ಸಂಗದ ಅಗತ್ಯದಲ್ಲಿದ್ದಾಗ ಸಹಭಾಗಿನಿಯಾಗಿ ಪಡೆಯುವುದು ಮೊಲದಂತೆ ಬಿರಿದ ತುಟಿಯ ಇಂಗರ್‌ಳನ್ನ. ತನ್ನ ಜೀವನ ಇಲ್ಲೇ, ಈ ಪ್ರಕೃತಿಯ ಮಡಿಲಲ್ಲೇ ಎಂದು ನಿರ್ಧರಿಸಿದ ಐಸಾಕ್ ಬೆಳೆಬೆಳೆಯುತ್ತ, ತನ್ನ ಭೂಮಿಯನ್ನು ಬೆಳೆಸುತ್ತ ಹದಮಾಡುತ್ತ, ಪ್ರಾಣಿಗಳನ್ನು ಸಾಕುತ್ತ, ಕಟ್ಟಡಗಳನ್ನು ಕಟ್ಟುತ್ತ, ಹೊರ ಪ್ರಪಂಚದ ಜೊತೆ ಅನಿವಾರ್ಯವಾಗುವಷ್ಟು ಸಂಬಂಧವನ್ನು ಮಾತ್ರ ದೂರದ ಹಳ್ಳಿಯ ಜೊತೆಗೆ ಇಟ್ಟುಕೊಳ್ಳುತ್ತ ಬದುಕು ಹೂಡುತ್ತಾನೆ. ಪ್ರಕೃತಿಯ ಔದಾರ್ಯ ಮತ್ತು ಐಸಾಕನ ಗಟ್ಟಿತನಗಳು ಸೇರಿ ಐಸಾಕನ ಬದುಕು ವೃದ್ಧಿಸುತ್ತ ಹೋಗುತ್ತದೆ. ಪ್ರಕೃತಿಯ ಜೊತೆಗೆ ಅತ್ಯಂತ ಅರ್ಥಪೂರ್ಣವೂ, ನಿಕಟವೂ, ಗಾಢವೂ ಆದ ಸಂಬಂಧವನ್ನಿಟ್ಟುಕೊಂಡ ಆತ ಬದುಕಿನ ಫಲವನ್ನು ಯಥೇಚ್ಛವಾಗಿ ಕೊಯಿಲು ಮಾಡುತ್ತ ಹೋಗುತ್ತಾನೆ. ಪ್ರಪಂಚವನ್ನು ದೂರವಿಟ್ಟು ಇಲ್ಲಿಗೆ ಬಂದ ಐಸಾಕನನ್ನು ಪ್ರಪಂಚವೇ ಹುಡುಕಿಕೊಂಡು ಬಂದು ಕ್ರಮಕ್ರಮೇಣ ಸುತ್ತುವರಿಯುತ್ತದೆ. ಯಾರದೂ ಅಲ್ಲದ ಈ ಐಸಾಕನ ಭೂಮಿಯನ್ನು ಸರಕಾರ ಅವನಿಗೆ ಮಾರುವಲ್ಲಿಂದ ಹೊರ ಪ್ರಪಂಚದ ಬರವಿನ ಆರಂಭವಾಗುತ್ತದೆ.

ಇಂಗರ್ ತನ್ನ ಮೂರನೆಯ ಮಗುವನ್ನು – ತನ್ನಂತೆಯೇ ಮೊಲದಂತೆ ಬಿರಿದ ತುಟಿಯ ಹೆಣ್ಣು ಮಗುವನ್ನು – ತನ್ನ ಯೌವನದ ಪಾಡುಗಳು ಅದಕ್ಕೂ ಬಾರದಿರಲಿ ಎಂದು ಹುಟ್ಟಿನಲ್ಲೇ ಕೊಲ್ಲುತ್ತಾಳೆ. ಆ ಕಾರಣಕ್ಕಾಗಿ ಆಕೆ ನಾಲ್ಕನೆಯ ಮಗುವಿನ ಗರ್ಭಿಣಿಯಾಗಿದ್ದಾಗಲೇ ಟ್ರೊಂಡ್‌ಜೆಮ್ ಪಟ್ಟಣದಲ್ಲಿ ಎಂಟು ವರ್ಷ ಜೈಲುವಾಸ ಅನುಭವಿಸುತ್ತಾಳೆ. ಅವಳ ಅಪರಾಧದ ಹಿಂದಿನ ಮಾನವೀಯ ಕಾರಣಗಳು, ಇಂಗರ್‌ಳ ಅಪ್ರತಿಮ ವ್ಯಕ್ತಿತ್ವ, ಹಾಗೂ ಅವಳು ಗರ್ಭಿಣಿಯಾಗಿದ್ದುದು – ಈ ಕಾರಣಗಳಿಂದಾಗಿ ಅವಳ ಜೈಲುವಾಸ ಆಶ್ರಮವಾಸದಂತಿರುತ್ತದೆ. ಅದನ್ನು ಮುಗಿಸಿ ಇಂಗರ್ ಹಿಂದೆ ಬಂದಾಗ ಅವಳು ಬದುಕಿದ ನಗರದ ವಾತಾವರಣ, ಮೌಲ್ಯಗಳು, ಜೀವನ ಕ್ರಮಗಳು ಐಸಾಕನ ಮನೆಯೊಳಕ್ಕೇ ಕಾಲಿಡುತ್ತವೆ. ಪಟ್ಟಣದಿಂದ ಬದಲಾಗಿ ಬಂದ ಆಕೆ – ಶಸ್ತ್ರಕ್ರಿಯೆಯಿಂದ ಬಿರಿದ ತುಟಿ ಕೂಡಿ ಆಗ ಸುಂದರಿಯಾಗಿರುವ ಆಕೆ – ಹಳ್ಳಿಗನೇ ಆದ ಗಂಡನ ಜೊತೆ ಮುಂದೆ ನಡೆಸುವ ಬಾಳ್ವೆ ಮಹತ್ತರ ಒಳನೋಟಗಳಿಂದ ಕೂಡಿರುವಂಥದ್ದು. ಈಗ, ತನ್ನ ಬಗೆಗೂ, ಪ್ರಪಂಚದ ಬಗೆಗೂ ಸಾಕಷ್ಟು ಜ್ಞಾನವಿರುವ ಆಕೆ ಮುಗ್ಧ ಐಸಾಕನ ಕಣ್ಣುತಪ್ಪಿಸಿ ಕಾಲುಜಾರುತ್ತಾಳೆ. ಹಾಗೇ ಐಸಾಕನ ಅಸಾಧಾರಣ ವ್ಯಕ್ತಿತ್ವದ ಗಾಂಭೀರ್ಯದ ಎದುರಲ್ಲಿ ಮತ್ತೆ ಪ್ರಾಯಶ್ಚಿತ್ತದ ಬದುಕಿಗೆ ಹಿಂದಿರುಗುತ್ತಾಳೆ.

ಮೇನ್‌ಲ್ಯಾಂಡಿನ ಏಕ್ಸೆಲ್ ಸ್ಟ್ರಾರ್ಮ್‌ಗೆ ಸಂಗಾತಿಯಾಗಿ ಸಿಗುವವಳು ಬಡಾಯಿ ಕೋರ ಬ್ರೀಡೆ ಓಲ್ಸೆನ್‌ನ ಮಗಳಾದ ಬಜಾರಿ ಬಾರ್ಬ್ರೊ. ಆಕೆ ಬಹುಕಾಲವನ್ನು ಪಟ್ಟಣದಲ್ಲೇ ಕಳೆದವಳು. ಏಕ್ಸೆಲ್‌ನಿಂದ ಅವಳಿಗೊಂದು ಮಗುವಾದಾಗ ಅವನ ಅಂಕೆಯಲ್ಲಿ ಹಳ್ಳಿಯಲ್ಲಿರಲು ಸಹಿಸದೇ ತನ್ನ ಮಗುವನ್ನು ಹುಟ್ಟಿನಲ್ಲೇ ಕೊಂದ ಆಕೆ, ಪ್ರಭಾವಶಾಲಿಯೂ ಮತ್ತು ತನ್ನ ಪರವಾಗಿ ವಾದಿಸಬಲ್ಲ ಜನರನ್ನು ಹೊಂದಿರುವವಳೂ ಆದುದರಿಂದ ಇಂಗರ್‌ಳಂತೆ ಶಿಕ್ಷೆಗೆ ಗುರಿಯಾಗುವುದಿಲ್ಲ. ಬಹಳ ಕಾಲ ಬೇರೆಡೆಯಿದ್ದು ತನ್ನ ಬಜಾರಿತನಕ್ಕೆ ಅವಕಾಶ ಸಿಕ್ಕದೇಹೋದಾಗ ಆಕೆ ಪುನಃ ಏಕ್ಸೆಲ್‌ನನ್ನು ಸೇರುತ್ತಾಳೆ. ಓಲ್ಸೆನ್ನನ ಭೂಮಿಯನ್ನು ಏಕ್ಸೆಲ್ ಕೊಳ್ಳುತ್ತಾನೆ. ಓಲ್ಸೆನ್ ಹಳ್ಳಿಯಲ್ಲಿ ಹೋಟೆಲಿಟ್ಟು ಬದುಕುತ್ತಾನೆ.

ತಾಮ್ರದ ಅದುರು ಉತ್ಕೃಷ್ಟವಲ್ಲವೆಂದು ಕಂಡುಬಂದು ಗಣಿಯ ಕೆಲಸ ಇದ್ದಕ್ಕಿದ್ದಂತೆ ನಿಲ್ಲುತ್ತದೆ. ಅರೋನ್ಸೆನ್ನನ ನೆಲೆ ತಪ್ಪುತ್ತದೆ. ಗೀಸ್ಲರನ ವಶದಲ್ಲಿರುವ ಭೂಮಿಯಲ್ಲಿ ತಾಮ್ರ ಸಿಗುತ್ತದೆಯಾದರೂ ಅದನ್ನು ಗಣಿ ಉದ್ಯಮಕ್ಕೆ ಕೊಡದೇ, ಒಮ್ಮೆ ತನಗೆ ತೊಂದರೆಕೊಟ್ಟ, ಊರವರನ್ನು ಅವರ ಈ ಹಾತೊರೆಯುವಿಕೆಯ ಕಾಲದಲ್ಲಿ ಆಟವಾಡಿಸುತ್ತಾನೆ. ಕೊನೆಗೆ ಅರೋನ್ಸೆನ್ನನ ಭೂಮಿಯನ್ನು ಐಸಾಕ್ ತನ್ನ ಮಗನಿಗಾಗಿ ಕೊಂಡುಕೊಳ್ಳುತ್ತಾನೆ. ಅರೋನ್ಸೆನ್ ಗಣಿ ಪ್ರದೇಶದಲ್ಲಿ, ಗೀಸ್ಲರ್‌ನ ಭೂಮಿಯಲ್ಲಿ ಕೆಲಸ ಆರಂಭಿಸಲಿರುವ ಗಣಿ ಕೆಲಸಗಾರರ ಬರವನ್ನು ನೋಡುತ್ತಾ, ಅಂತರಪಿಶಾಚಿಯಂತೆ ತಿರುಗಾಡುತ್ತಿರುತ್ತಾನೆ.

ತನ್ನ ಊರಿನ ಹಾಗೂ ತನ್ನ ಮನೆಯ ಈ ಎಲ್ಲ ಏರಿಳಿತ, ಬದಲಾವಣೆ, ಪ್ರಕ್ಷುಬ್ಧತೆ ಮತ್ತು ಹೊಸತನಗಳ ನಡುವೆಯೂ ತನ್ನ ಮನೋದಾರ್ಢ್ಯವನ್ನು ಕಳಕೊಳ್ಳದೇ ಗಟ್ಟಿಯಾಗಿ ಕೊನೆಯ ತನಕವೂ ಉಳಿಯುವವನೆಂದರೆ ಐಸಾಕ್ ಒಬ್ಬನೇ..

❑ ❑ ❑

Growth of the Soil : ಕಾದಂಬರಿಯ ಹೆಸರೇ ಅದರ ಅನ್ವರ್ಥನಾಮ. ಇದೊಂದು ಮಹಾಕಾವ್ಯದ ವೈಶಾಲ್ಯವಿರುವ ಭೂಮಿಗೀತ : ಮನುಷ್ಯನ ಇತಿಹಾಸದ ಅನ್ಯೋಕ್ತಿಯಂತಿರುವ, ನೆಲದ, ಸಂಸ್ಕೃತಿಯ ಕಥೆ. ಯಾರದೂ ಅಲ್ಲದ ದೂರದ ಕಾಡಲ್ಲಿ ನೆಲೆಸಿ ಅದನ್ನು ನಾಡನ್ನಾಗಿಸುತ್ತಾ ಹೋದ ಮನುಷ್ಯನೊಬ್ಬನ ಕಥೆಯು ಅಲ್ಲಿ ರೂಢಿಗೊಳ್ಳುವ ಸಂಸ್ಕೃತಿಯೊಂದಿಗೆ ಹೆಣೆದುಕೊಂಡು ಬೆಳೆಯುವ ಕಥೆ. ಮನುಷ್ಯನ ಜೀವನ ಇತಿಹಾಸದುದ್ದಕ್ಕೂ ಕಂಡ ಪಾಡುಗಳು, ಬದಲಾವಣೆಗಳು, ಪ್ರಭಾವಗಳು ಮತ್ತು ಅವನ್ನೆದುರಿಸಿ ಬದುಕು ಸಾಗಿಸುತ್ತ ಬಂದ ಮನುಷ್ಯನ ಹೋರಾಟಗಳು ಪ್ರಕೃತಿಯ ನೆರಳಲ್ಲಿ ಬೆರೆತು ಬೆಳೆದ ಕಥೆ. ದೈಹಿಕ ಶಕ್ತಿ ಮತ್ತು ಮನೋಸಂಕಲ್ಪಗಳು ಪ್ರಕೃತಿಯ ಎದುರಲ್ಲಿ ಸೆಣಸಿ ಪುಟಿಯುವ ಬದುಕು ಒಂದು ಅರ್ಥಪೂರ್ಣ ಹೋರಾಟವಾಗಿರುವ ಮಹಾಕಾವ್ಯ. ಪ್ರಕೃತಿ ಮತ್ತು ಮನುಷ್ಯ-ಪ್ರಕೃತಿಗಳನ್ನು ಮುಖ್ಯಪಾತ್ರಗಳನ್ನಾಗಿ ಉಳ್ಳ ಲೋಕಕಥಾನಕ, ಈ ಹೋರಾಟವನ್ನು ದಕ್ಕಿಸಿಕೊಳ್ಳಬಲ್ಲ ದೈಹಿಕ ಶಕ್ತಿ ಮತ್ತು ಮನೋದಾರ್ಢ್ಯವಿರುವವರು ಮಾತ್ರ ಯಶಪಡೆದು ಉಳಿದವರು ಅತಂತ್ರರೂ ಅಲಾಲಟೋಪಿಗಳೂ ಆಗುವ ಅರ್ಥಪೂರ್ಣ ಜೀವನ ಸಂಗ್ರಾಮದ ರಣರಂಗ.

ಅನುವಾದದಲ್ಲೇ ಆದರೂ ತನ್ನ ಅತ್ಯಂತ ಆಕರ್ಷಕ ಶೈಲಿಯಿಂದ ಮೊದಲು ನಮ್ಮ ಮನಸೆಳೆಯುವ ಈ ಕಾದಂಬರಿ ತನ್ನ ತೋರಿಕೆಯ ಸರಳತೆಯ ಒಳಗಡೆ ಹೊಂದಿರುವ ಅರ್ಥಪೂರ್ಣತೆಯನ್ನು ನೋಡಲು ಬಹಳ ಕಾಲವೇ ಬೇಕು. ಜೀವನದ ವಿವರಗಳನ್ನು ಅವುಗಳ ಸೂಕ್ಷ್ಮದಲ್ಲಿ ಹೇರಳವಾಗಿ ಹೊಂದಿರುವ ಈ ಕಾದಂಬರಿ ಪ್ರದರ್ಶನಪ್ರಿಯವಾದ ವಿವರಗಳಿಂದ ಕೂಡಿಲ್ಲದಿರುವುದು ಬಹು ಮುಖ್ಯವಾದ ಅಂಶ. ಯಾಕೆಂದರೆ ಪ್ರಕೃತಿಯ ಕುರಿತು ಬರೆಯುವ ಅನುಭವಿ ಲೇಖಕನಿಗೆ ಪ್ರಕೃತಿಯು ಪಟ್ಟಣದ ಓದುಗನಿಗೆ ಮಾರುವ ಸರಕಾಗಿಯೋ, ಹಳ್ಳಿಯಿಂದ ಪಟ್ಟಣಕ್ಕೆ ಹೋಗಿ ಹಳ್ಳಿಯನ್ನು ಮರೆಯುತ್ತಿರುವವನಿಗೆ ಖುಷಿಕೊಡುವ ವಿವರವಾಗಿಯೋ ಬರುವ ಬರವಣಿಗೆ ಈ ಕ್ರಮದಲ್ಲಿ ಒದಗುವ ಅತ್ಯಂತ ಸ್ವಾಭಾವಿಕವಾದ ಅಪಾಯ. ಹಾಗೆಯೇ ಪ್ರಕೃತಿಯ ಮಡಿಲಿನ ಹಳ್ಳಿಯ ಬದುಕನ್ನು ರಮ್ಯಗೊಳಿಸಿ ವೈಭವೀಕರಿಸುವ ಅಪಾಯವನ್ನೂ ಮೀರಿ ಗಾಂಭೀರ್ಯದ ಮಧ್ಯಮ ಸ್ಥಾಯಿಯಲ್ಲೇ ಸಾಗುವ ಈ ಕಾದಂಬರಿ ಹಾಗಾಗಿಯೇ ವಿವರಗಳ ಮತ್ತು ನಿಲುವುಗಳ ಮೂಲಕ ಕೊಡುವ ಅನುಭವ ಅನನ್ಯವೆನಿಸುವಂಥದ್ದು. ಗೊಂದಲಮಯ ನಾಗರಿಕ ಬದುಕಿನಿಂದ ಅತಿ ದೂರದಲ್ಲಿರುವ ಈ ಹಳ್ಳಿಗೆ ನಾಗರಿಕ

ಬದುಕು ಒಸರಿಬಂದಾಗ ಅಲ್ಲಿ ಅದು ಊರಿಕೊಳ್ಳುವ ಕ್ರಮ ಕಾದಂಬರಿಯ ವಿವರಗಳಲ್ಲಿ ಸೂಕ್ಷ್ಮಜ್ಞತೆಯೊಂದಿಗೆ ಮೂರ್ತಗೊಳ್ಳುತ್ತದೆ. ಐಸಾಕನು ಮನೆಗೆ ತಂದ ಸುಮಧುರವಾಗಿ ಗಂಟೆಗೊಮ್ಮೆ ಸದ್ದು ಮಾಡುವ ಗಡಿಯಾರ, ರಾತ್ರಿ ಉರಿಸಲೆಂದು ತರುವ ಲ್ಯಾಂಪುಗಳು ಆ ಊರಲ್ಲಿ ಮನೆಮಾತಿಗೆ, ಇಂಗರ್ ತೊಡುವ ಬಟ್ಟೆ ಮತ್ತು ಅದರ ವಿನ್ಯಾಸಗಳು ಸುತ್ತಮುತ್ತಲ ಹೆಂಗಳೆಯರ ಮನ ಸೂರೆಗೊಂಡು, ಸುತ್ತಲಿನ ಜನರು ಬಂದು ನೋಡಿ ಆನಂದಿಸುವ ವಸ್ತುಗಳಾಗುತ್ತವೆ.

ಪ್ರಕೃತಿಯನ್ನು ತನ್ನ ಅತಿಪ್ರಮುಖ ಒಡನಾಡಿಯನ್ನಾಗಿ ಪಡೆದ ಐಸಾಕ್ ಕೊನೆಗೂ ಗೆಲ್ಲುತ್ತಾನೆ ; ಪ್ರಕೃತಿಯನ್ನು ಕೇವಲ ನೆಪಮಾತ್ರವಾಗಿ ಮತ್ತು ಪರೋಕ್ಷವಾಗಿ ಸಂಪರ್ಕಿಸಿ ಬದುಕುವ ಅರೋನ್ಸೆನ್ ಅತಂತ್ರನಾಗುತ್ತಾನೆ. ಮನುಷ್ಯ ಮತ್ತು ಪ್ರಕೃತಿಯ ಈ ಎದುರುಬದುರಾಗುವಿಕೆ ಈ ಎರಡು ಪ್ರಮುಖ ಘಟನೆಗಳಿಗೆ ಏಕ್ಸೆಲ್ ಮತ್ತು ಓಲ್ಸೆನ್ ಪೂರಕವಾಗಿ ಬರುತ್ತಾರೆ. ಏಕ್ಸೆಲ್ ಐಸಾಕ್‌ಗೆ ತೀರ ಹತ್ತಿರ ; ಸ್ವಲ್ಪ ಎಡವಿದರೂ ಓಲ್ಸೆನ್ ಅರೋನ್ಸೆನ್ನನಂತೆಯೇ. ಅರೋನ್ಸೆನ್ ಐಸಾಕನ ಕಾರಿಕೇಚರ್ : ಐಸಾಕನೇ ಒಂದು ತುದಿಯಲ್ಲಿ – ಪ್ರಕೃತಿಯ ಜೊತೆಗೆ ಸಂಪೂರ್ಣ ತಾದಾತ್ಮ್ಯದಲ್ಲಿ – ಅರೋನ್ಸೆನ್ನನೇ ಒಂದು ತುದಿಯಲ್ಲಿ – ಪ್ರಕೃತಿಗೆ ಪರಕೀಯನಾಗಿ – ಬರುವುದು ಪ್ರಕೃತಿಯ ಜೊತೆಗಿನ ಸಂಬಂಧದ ಫಲವನ್ನು ಸೂಚಿಸುವ ಹಾಗೆಯೇ ನಮ್ಮೆಲ್ಲರ ಒಟ್ಟು ಬದುಕಲ್ಲಿ ಬರುವ ಈ ಎರಡು ಜೀವನಕ್ರಮಗಳ ಸಂಘರ್ಷದ ಸೂಚಿಯೂ ಹೌದು. ಈ ಇಡೀ ಕಾದಂಬರಿಯೇ ಕೊನೆಗೆ ಇಂಥ ಎರಡು ಜೀವನಕ್ರಮಗಳ ಸಂಘರ್ಷದ ಬಿಕ್ಕಟ್ಟಿನಲ್ಲಿ ಫಲಿಸಿ ಅರಳುವ ಬದುಕು. ಇಡೀ ಹಳ್ಳಿಯ ಈ ಸಂಘರ್ಷ ಐಸಾಕನ ಮನೆಯಲ್ಲೇ – ಐಸಾಕನಿಗೆ ಎದುರಾಗಿ ಬರುವ ಇಂಗರ್‌ಳಲ್ಲಿ ಮತ್ತು ಅದು ತೀವ್ರವಾಗಿ ಎದುರಾಗುವ ಎಲೆಸಿಯಸ್‌ನಲ್ಲಿ – ವೈಯಕ್ತಿಕ ನೆಲೆಯಲ್ಲೂ ಕಾಣುತ್ತದೆ. ಎಲೆಸಿಯಸ್ ಇಲ್ಲಿ ದುಷ್ಟನಲ್ಲ ; ಕೆಡುಕನಲ್ಲ ; ಆತ ಬದಲಾಗುತ್ತಿರುವ ಸಮಾಜದ ಕೊಡುಗೆಯಾದ, ಸಣ್ಣಪುಟ್ಟ ಏರಿಳಿತಗಳಿದ್ದರೂ ಇನ್ನೂ ಭಗ್ನಗೊಂಡಿಲ್ಲದ ಸಂಸ್ಕೃತಿಯೊಂದರ ಸಮಗ್ರತೆಗೆ ಸವಾಲಾಗಿ ಬಂದು ಆ ಸಮಗ್ರತೆ ನಿಧಾನವಾಗಿ ಲಡ್ಡಾಗುತ್ತಿರುವುದರ ಸೂಚನೆಯಾಗಿದ್ದಾನೆ. ಅದರ ಅತ್ಯಂತ ವಿಸ್ತೃತ ರೂಪವಾಗಿ ಅರೋನ್ಸೆನ್ ಕಾಣಿಸಿಕೊಳ್ಳುತ್ತಾನೆ. ಒಂದರ ನಂತರ ಒಂದಾಗಿ ಬರುವ ಈ ನಾಲ್ಕು ಫಾರ್ಮ್‌ಗಳು – ಸೆಲಾನ್ರಾ, ಮೇನ್‌ಲ್ಯಾಂಡ್, ಬ್ರೀಡಾಬ್ಲಿಕ್ ಮತ್ತು ಸ್ಟೋರ್ ಬೋರ್ಗ್ – ಮೌಲ್ಯಗಳ ದೃಷ್ಟಿಯಿಂದ ಅನುಕ್ರಮವಾಗಿ ಒಂದಕ್ಕಿಂತ ಒಂದು ಸೊರಗಿ ಹೋಗಿರುವಂಥವು.

ಐಸಾಕ್ ಪಟ್ಟಣದ ಬದುಕಿನಿಂದ ಸಂಪೂರ್ಣ ವಿಮುಖನಾಗಿ ಕ್ರೂಸೋನಂತೆ ಬದುಕುವವನೇನೂ ಅಲ್ಲ. ತನ್ನ ಭೂಮಿಯ ಪಕ್ಕದಲ್ಲಿ ಹಾದುಹೋಗುವ ಟೆಲಿಗ್ರಾಫ್ ತಂತಿಯನ್ನು ನೋಡಿ ಆತನಿಗೆ ಹೊರಪ್ರಪಂಚದ ಇಣುಕುನೋಟವನ್ನು ಕೊಡುವದರ

ಬಗ್ಗೆ ಸಂತಸವೇ ಎನಿಸುತ್ತದೆ ; ಸುತ್ತಲಿನ ಪ್ರಕೃತಿಯ ಜೊತೆಗದು ಬೆರೆಯುತ್ತದೆ ; ಅವನ ಫಾರ್ಮಿನಲ್ಲೇ ಅವನ ಕೆಲಸಕ್ಕೆ ಅನುಕೂಲವಾಗುವ ಸಾಕಷ್ಟು ಸಣ್ಣ ಪುಟ್ಟ ಯಂತ್ರಗಳಿವೆ. ಪ್ರಕೃತಿಯನ್ನು ಸುಮ್ಮನೆ ವೈಭವೀಕರಿಸುವ, ಪಟ್ಟಣವನ್ನು ಕೆಡುಕಿನ ಜೊತೆಗೆ ಸಮೀಕರಿಸುವ ದೃಷ್ಟಿಕೋನ, ಬಹುಮುಖ್ಯವಾದ ಈ ಸಂಘರ್ಷವನ್ನು ಸರಳೀಕರಿಸುವ ಉದಾಹರಣೆ ನಮಗೆ ಹಲವು ಸಾಹಿತ್ಯ ಕೃತಿಗಳಲ್ಲಿ ದೊರೆಯುತ್ತದೆ. ಪ್ರಕೃತಿಯೊಡನೆ ಕೇವಲ ಪರಕೀಯವಾಗಿ ಸಂಪರ್ಕವನ್ನು ಕಲ್ಪಿಸುವಂತೆ ಪ್ರೇರಿಸುವ ನಗರ ಸಂಸ್ಕೃತಿಯ ಅಂಶ ಮಾತ್ರ ಈ ಕಾದಂಬರಿಯಲ್ಲಿ ಮನ್ನಣೆ ಗಳಿಸದೇ ಹೋಗುತ್ತದೆ. ಯಾಕೆಂದರೆ ಅಂಥ ದೃಷ್ಟಿಕೋನ, ಈ ಕಾದಂಬರಿಯ ಎರಡನೆಯ ಪೀಳಿಗೆಯ ಎಲೆಸಿಯಸ್‌ನಲ್ಲಿ ಮೂರ್ತ ವಾಗುವಂತೆ, ಬದುಕಿನ ಬಗ್ಗೆ ಗಂಭೀರವಾದ ಹೋರಾಟಗಳಿಗೆ ಪಕ್ಕಾಗದ ಆರಾಮದ ಜೀವನವನ್ನು ಮಾತ್ರ ಪ್ರೇರೇಪಿಸುತ್ತದೆ.

ಬದುಕಿನ ಈ ಸಾಂಸ್ಕೃತಿಕತೆಯ ಚಿಂತನೆಯ ಅಂಗವಾಗಿ ಇಲ್ಲಿ ಬದುಕನ್ನು ಗಂಭೀರವಾಗಿ ಪರಿಗಣಿಸಿ ರೂಢಿಸಿಕೊಳ್ಳುವ ಐಸಾಕ್‌ನಿಂದ ಹಿಡಿದು ಬದುಕನ್ನು ಕೇವಲ ಅದೃಷ್ಟವೆಂದು ಕಾಯುತ್ತ ಕೂರುವ ಆರೋನ್ಸೆನ್ನನವರೆಗೆ ವೈವಿಧ್ಯಮಯ ಪಾತ್ರಗಳಿದ್ದಾರೆ. ಗೀಸ್ಲರ್ ಒಬ್ಬ ರಹಸ್ಯಪೂರ್ಣ ವ್ಯಕ್ತಿ : ಯಾರಿಗೂ ಅವನ ಸ್ಥಿತಿ ಬದುಕುಗಳ ಪರಿಚಯವೇ ಪೂರ್ತಿಯಾಗಿ ಇಲ್ಲ ; ಬುದ್ಧಿವಂತನೂ ಮಾನವೀಯನೂ ಆದ ಈತ ಎಲ್ಲ ಕಷ್ಟದ ಸಂದರ್ಭಗಳಲ್ಲೂ ತಾನೇತಾನಾಗಿ ಬಂದು ನೈತಿಕ ಆಧಾರವಾಗಿ ನಿಲ್ಲುತ್ತಾನೆ. ಆ ಪುಟ್ಟ ಪ್ರಪಂಚದ ಒಳಹೊರಗುಗಳನ್ನು ತಿಳಿದ, ಆ ಪ್ರಪಂಚದಲ್ಲಿ ಬದುಕು ತಳ್ಳುತ್ತ ಹೋಗಲು ಬೇಕಾದ ಕುತಂತ್ರ ಜಾಣ್ಮೆಗಳ ಮೂರ್ತರೂಪವಾದ ಓಲೈನ್‌ಳದ್ದು ಕಾದಂಬರಿಯಲ್ಲಿ ಅಸಾಧಾರಣ ಪಾತ್ರ. ಹಾಗೆಯೇ ಇಂಗರ್ ಕೂಡಾ : ಮನುಷ್ಯ ಸ್ವಭಾವವು ತನ್ನ ಬೇರೆಬೇರೆ ಸನ್ನಿವೇಶಗಳಿಗೆ ಪಕ್ಕಾಗುತ್ತ ಹೋಗುವಾಗ ಕಾಣುವ ಬದಲಾವಣೆಗಳಿಗೆ ಅನುಗುಣವಾಗಿ ಬದುಕುವ ಇಂಗರ್ ಮನುಷ್ಯವ್ಯಕ್ತಿತ್ವದ ಆಳ ತಿಳುವಳಿಕೆಯಿಂದ ಒಡಮೂಡಿರುವಾಕೆ.

Growth of the Soil ತನ್ನ ವಿವರಗಳಲ್ಲಿ, ವಸ್ತುವಿನಲ್ಲಿ, ಪಾತ್ರಗಳಲ್ಲಿ ಮತ್ತು ನಿಲುವುಗಳಲ್ಲಿ ಒಂದು ಭಾರತೀಯ ಕಾದಂಬರಿಯಂತಿದೆ. ಮೊದಲಿಂದ ಕೊನೆಯ ವರೆಗೂ ಕಾಣುವ ಅಸಾಧಾರಣ ಸಂಯಮ ಮತ್ತು ತನ್ನ ಮನಸ್ಸಿನ ಪ್ರಪಂಚದೊಳಗೆ ಅಡಗಿದ ಮನುಷ್ಯನ ಮನೋವ್ಯಾಪಾರಗಳಿಂದ ಹಿಡಿದು ಸಮಾಜದ ಸಾಂಸ್ಕೃತಿಕ ಚಿಂತನೆಯವರೆಗಿನ ವಿಶಾಲವಾದ ಬೀಸು ಹೊಂದಿರುವ ಈ ಕೃತಿ ಕೈಗಾರಿಕೀಕರಣ ಮತ್ತು ನಗರೀಕರಣಗಳಿಂದ ಪ್ರಪಂಚಕ್ಕೆ ದಕ್ಕಿರುವ ಹೊಸ ಮೌಲ್ಯಗಳ ಬಗ್ಗೆ ಸಾಂಸ್ಕೃತಿಕವಾಗಿ ಮಹತ್ತರವಾದ ಹಾಗೂ ಆರೋಗ್ಯಪೂರ್ಣವಾದ ಒಳನೋಟಗಳನ್ನು ಕೊಡಬಲ್ಲಂಥದ್ದು. ಆದುದರಿಂದಲೇ ನಮ್ಮ ಸನ್ನಿವೇಶಕ್ಕೆ ವಿಶಿಷ್ಟವಾದ ಪ್ರಸ್ತುತತೆಯನ್ನು ಹೊಂದಿರುವಂಥದ್ದು.

ಗಾಲ್ಸ್‌ವರ್ದಿ : 'ದಿ ಫೊರ್ಸಾಯಿಟ್ ಸಾಗಾ'

ಪಿ.ವಿ. ಜೋಶಿ

ಜಾನ್ ಗಾಲ್ಸ್‌ವರ್ದಿ (1867-1933) ಕಾದಂಬರಿಗಳನ್ನೂ ನೀಳ್ಗತೆಗಳನ್ನೂ ನಾಟಕಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಗಾತ್ರದಿಂದಲೂ ಗುಣದಿಂದಲೂ ವಿಶಿಷ್ಟವೆನಿಸಿದ್ದು 'ಫೊರ್ಸಾಯಿಟ್ ಸಾಗಾ' ಎಂಬ ಮೂರು ಕಾದಂಬರಿಗಳ ಸಂಪುಟ. ಇದರ ಕೊನೆಯ ಭಾಗದಲ್ಲಿ ತಾರುಣ್ಯದಲ್ಲಿಯೂ ಬಾಲ್ಯದಲ್ಲಿಯೂ ಇದ್ದ ಪಾತ್ರಗಳ ಕತೆಯನ್ನು ಮುಂದುವರಿಸಿ ಮತ್ತೆ ಮೂರು ಕಾದಂಬರಿಗಳನ್ನು 'ದಿ ವ್ಹಾಯಿಟ್ ಮಂಕಿ', 'ದಿ ಸಿಲ್ವರ್ ಸ್ಪೂನ್' ಮತ್ತು 'ಸ್ವಾನ್ ಸಾಂಗ್' – ಸೇರಿಸಿ 'ಮಾಡರ್ನ್ ಕಾಮೆಡಿ' ಎಂಬ ಸಂಕಲನವಾಗಿ ಪ್ರಕಟಿಸಿದ್ದಾರೆ. ಇವೆರಡೂ ಸೇರಿ ಫೊರ್ಸಾಯಿಟ್ ಮನೆತನದ ಐದು ತಲೆಮಾರುಗಳ ಕತೆಯನ್ನು 1866 ರಿಂದ 1926 ರವರೆಗೆ ಹೇಳುತ್ತದೆ.

ಈ ಅವಧಿ ಇಂಗ್ಲೆಂಡಿನ ರಾಜಕೀಯ ಸಾಮಾಜಿಕ ಇತಿಹಾಸದಲ್ಲಿ ಒಂದು ಸಂಧಿ ಕಾಲವಾಗಿತ್ತು. ಕಾನ್ಸರ್ವೇಟಿವ್ ಮತ್ತು ಲಿಬರಲ್ ಪಕ್ಷಗಳು ಒಂದೇ ಶರೀರದ ಬಲಗೈ ಎಡಗೈಗಳಂತೆ ಸಹಕರಿಸಿ ಕಟ್ಟಿದ ಬ್ರಿಟಿಷ್ ಸಾಮ್ರಾಜ್ಯವು ತನ್ನ ಪರಮೋನ್ನತಿಯನ್ನು ಮುಟ್ಟಿ ಬೇರೆ ಐರೋಪ್ಯ ರಾಷ್ಟ್ರಗಳ ಅಸೂಯೆಯನ್ನು ಕೆರಳಿಸಿ, ಮೊದಲನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿಯನ್ನು ಸೋಲಿಸುವ ಸಾಹಸದಲ್ಲಿ ತನ್ನ ಉಚ್ಚವರ್ಗಗಳ ಧನಜನ ಶಕ್ತಿಗಳನ್ನು ಅಪಾಯಕ್ಕೀಡುಮಾಡಿ, ಸಾಮಾಜಿಕ ಅಂತರ್ವಿರೋಧಗಳನ್ನೂ ಸಾಮ್ರಾಜ್ಯ ರಾಜಕೀಯ ವಿರೋಧಗಳನ್ನೂ ನಿರ್ವಹಿಸುವುದಕ್ಕೆ ಹೆಣಗುತ್ತಿದ್ದ ಕಾಲವಿದು. ಈ ನಿರ್ವಹಣೆಯಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಭಾಗಿಗಳಾದ ಜನಗಳ, ಜನವರ್ಗಗಳ ಗುಣದೋಷಗಳನ್ನು ಯಾವ ಪಕ್ಷಪಾತವೂ ಇಲ್ಲದೆ ಮನೋಜ್ಞವಾಗಿ ಚಿತ್ರಿಸಿರುವುದೇ ಗಾಲ್ಸ್‌ವರ್ದಿ ಕಾದಂಬರಿಯ ವೈಶಿಷ್ಟ್ಯ.

ಇದೇ ಕಾಲವು ಸಾಹಿತ್ಯದಲ್ಲಿಯೂ ಸಂಧಿಕಾಲವಾಗಿತ್ತು. ಫೀಲ್ಡಿಂಗ್, ಜೇನ್ ಆಸ್ಟಿನ್, ಥ್ಯಾಕರೆ ಮೊದಲಾದ ಬ್ರಿಟಿಷ್ ನೆಲದ ಕಾದಂಬರಿಕಾರರ ಪರಂಪರೆಯನ್ನು ಮುನ್ನಡೆಸುತ್ತಿದ್ದ ಗಾಲ್ಸ್‌ವರ್ದಿಯ ಕೃತಿಗಳನ್ನು 'ಸಪ್ಪೆ ಸಾರು' ಎಂದು ಹೀಯಾಳಿಸಿ, ವೈಯಕ್ತಿಕ ಹಿಂಸೆ, ಮನೋವೈಕಲ್ಯ ಮತ್ತು ಸಾಮಾಜಿಕ ಆಕ್ರೋಶ ಆಟಾಟೋಪಗಳ ಮಸಾಲೆಯನ್ನು ಯೂರೋಪಿನಿಂದ ಆಮದು ಮಾಡಿಕೊಂಡು ಕಾರವಾಗಿ ಬರೆಯುವ ಪಂಥವು ಜನಪ್ರಿಯತೆಗಾಗಿ ಪೈಪೋಟಿಯನ್ನು ನಡೆಯಿಸುತ್ತಿತ್ತು. ಹೀಗೆಂದಾಗ ಗಾಲ್ಸ್‌ವರ್ದಿ ವೈಯಕ್ತಿಕ ಕ್ಲೇಶಗಳಿಗೂ ಸಾಮಾಜಿಕ ಅನ್ಯಾಯಗಳಿಗೂ ಕುರುಡಾಗಿದ್ದರೆಂದಲ್ಲ; ಅವರ ಕೃತಿಗಳಲ್ಲಿ ದುಃಖಿಗಳ ದೀನರ ಬಗೆಗೆ ಆಳವಾದ ಸಹಾನುಭೂತಿಯನ್ನು ಕಾಣಬಹುದು.

ಆದರೆ ಚೀರುವ, ಕೂಗುವ, ಆರ್ಭಟಿಸುವ ರೀತಿ ಅವರದಲ್ಲವಾದ್ದರಿಂದ, ಸಾಹಿತ್ಯಕ್ಕಿಂತ 'ಚಳವಳಿ'ಗಳಲ್ಲಿ ಆಸಕ್ತರಾದವರಿಗೆ ಅವರ ಕೃತಿಗಳು ಹಿಡಿಸದಿದ್ದರೆ ಯಾರಿಗೂ ಹಾನಿಯಿಲ್ಲ.

ಈ ಕಾದಂಬರಿಗಳ ಆಧಾರವಾದ ಫೊರ್ಸಾಯಿಟ್ ಕುಟುಂಬ ಇಂಗ್ಲೆಂಡಿನ ಆ ಕಾಲದ ಒಂದು ವಿಶಿಷ್ಟ ಜನವರ್ಗವನ್ನು ಪ್ರತಿನಿಧಿಸುತ್ತದೆ. ಆ ವರ್ಗವೇ ಇಂಗ್ಲೆಂಡಿನ ವ್ಯಾಪಾರ ಉದ್ಯಮ ಹಣಕಾಸು ವ್ಯವಹಾರಗಳನ್ನು ಬೆಳೆಯಿಸಿದವರು ಎನ್ನುವದರಲ್ಲಿ ಭಿನ್ನಾಭಿಪ್ರಾಯವಿರಬೇಕಾಗಿಲ್ಲ. ಕಾದಂಬರಿಯ ಆರಂಭವಾಗುವುದು ಹಿರಿಯ ಜೋಲಿಯನ್ನನ ಮೊಮ್ಮಗಳಾದ ಜೂನ ಎಂಬ ಹುಡುಗಿಯ ವಿವಾಹ ಆ ವರ್ಗಕ್ಕೆ ಸೇರದ ಬೋಸಿನಿ ಎಂಬ ವಾಸ್ತುಶಿಲ್ಪಿಯೊಡನೆ ನಿಶ್ಚಯವಾಗುವ ಸಂದರ್ಭದಲ್ಲಿ, ಆ ಕುಟುಂಬದ ಎಲ್ಲ ಜನಗಳು ಸೇರಿದಾಗ. ಆ ಕುಟುಂಬದ ವೈಶಿಷ್ಟ್ಯವನ್ನು ಗಾಲ್ಸ್‌ವರ್ದಿ ಹೀಗೆ ವರ್ಣಿಸುತ್ತಾರೆ : "ಆ ಸಮ್ಮೇಳನದಲ್ಲಿ ಉಪಸ್ಥಿತರಿದ್ದವರಲ್ಲಿ ಯಾರಿಗಾದರೂ ಮನೋವೈಜ್ಞಾನಿಕ ವಿಶ್ಲೇಷಣೆಯಲ್ಲಿ ಆಸಕ್ತಿ ಇದ್ದರೆ (ಈ ಆಸಕ್ತಿಗೆ ಹಣದ ರೂಪದ ಬೆಲೆಯಿರಲಿಲ್ಲವಾದ್ದರಿಂದ ಫೊರ್‌ಸಾಯಿಟರಾರಿಗೂ ಸಹಜವಾಗಿಯೇ ಇದರಲ್ಲಿ ಆಸ್ಥೆ ಇರಲಿಲ್ಲ) ಅಂಥವರಿಗೆ ಆ ಸಮ್ಮೇಳನ ಅಪರೂಪವಾದ ಮನೋವಿನೋದವನ್ನು ಒದಗಿಸುತ್ತಿತ್ತು. ಮಾತ್ರವಲ್ಲದೆ ಮಾನವಸ್ವಭಾವದ ಒಂದು ಕಗ್ಗಂಟಾದ ಸಮಸ್ಯೆಗೂ ನಿದರ್ಶನವಾಗಿತ್ತು. ಒಂದು ಕುಟುಂಬವನ್ನು ಕಟ್ಟಿ ನಿಲ್ಲಿಸುವ ನಿಗೂಢ ಆಕರ್ಷಣೆ, ಯಾವುದರಿಂದ ಕುಟುಂಬವೆನ್ನುವ ಸಂಸ್ಥೆ ಒಂದು ಸಮಾಜದ ಪ್ರಬಲವಾದ ಘಟಕವಾಗುತ್ತದೆ ಮತ್ತು ಯಾವುದರಿಂದ ಒಂದು ಕುಟುಂಬವು ಸಮಾಜದ ಸ್ಪಷ್ಟ ಪ್ರತಿಬಿಂಬವೆನಿಸುತ್ತದೆ, ಅಲ್ಲಿ ಕಾಣಸಿಗುತ್ತಿತ್ತು. ಸಮಾಜವು ಬೆಳೆದು ಬಂದ ದಾರಿಯು ಕಾಲಗತಿಯಿಂದ ಮಸುಕಾಗಿದ್ದರೂ ಅಲ್ಲಿ ಎದ್ದು ಕಾಣುತ್ತಿತ್ತು. ಪಿತೃಪ್ರಧಾನ ಕುಟುಂಬದ ಜೀವಶಕ್ತಿ, ಆದಿಮಾನವನ ತಂಡಗಳ ಸಂಘಟನೆ, ರಾಷ್ಟ್ರಗಳ ಏಳು ಬೀಳುಗಳು – ಎಲ್ಲಾ ಆ ಸಮುದಾಯದಲ್ಲಿ ಕಾಣಬಹುದಾಗಿತ್ತು. ಸಸಿಯಿಂದ ಬೆಳೆದು ದೊಡ್ಡದಾದ ಮರ ಯಾವ ಜಿಗುಟಿನಿಂದ ಯಾವ ಪ್ರತ್ಯೇಕತೆಯಿಂದ ತನ್ನ ಅಕ್ಕಪಕ್ಕದಲ್ಲಿಯ ಕಡಮೆ ಸತ್ವದ ಕಡಮೆ ಜಿಗುಟಿನ ಸಸಿಗಳ ಸಾವಿಗೆ ಕಾರಣವಾಗಿ ತಾನು ಬೆಳೆದು ಒಂದು ದಿನ ರಸಭರಿತವಾದ ಸಮೃದ್ಧವಾದ ಎಲೆ ಚಿಗುರುಗಳನ್ನು ಹೊತ್ತು ಮೆರೆಯುತ್ತ ನಿಲ್ಲುವದೆಂಬುದನ್ನು ಅಲ್ಲಿ ಕಾಣಬಹುದಿತ್ತು."

ಕಾದಂಬರಿಯ ಮುಖ್ಯ ಪಾತ್ರವಾದ ಸೋಮ್ಸನು ಕಟ್ಟಿಕೊಂಡ ವಿವಾಹಸಂಬಂಧ ಸುಖವಾಗಿ ನಡೆದಿಲ್ಲವೆಂಬ ಪಿಸುಮಾತು ಕುಟುಂಬದಲ್ಲಿ ಸುಳಿಯುತ್ತಿದ್ದಾಗ ಅವನ ತಂದೆ ಜೇಮ್ಸ (ಹಿರಿಯ ಜೋಲಿಯನ್ನನ ತಮ್ಮ) ತಾನೇ ಸ್ವತಃ ನೋಡಿಕೊಂಡು ಬರುತ್ತೇನೆಂದು ಹೋಗುತ್ತಾನೆ. ಈ ಸಂದರ್ಭದಲ್ಲಿ ಆ ಕುಟುಂಬದಲ್ಲಿಯ ಪರಸ್ಪರ ಆಸಕ್ತಿಯನ್ನು ಗ್ರಂಥಕರ್ತರು ಹೀಗೆ ವರ್ಣಿಸುತ್ತಾರೆ : "ಪ್ರಬಲವಾದ ಪ್ರಚೋದನೆಯಿಲ್ಲದೆ ಇಂತಹ

ಪಿಸುಮಾತುಗಳನ್ನು ಕುಟುಂಬದ ಬೇರೆಬೇರೆ ಸದಸ್ಯರು ಸೇರಿದಾಗ ಯಾರೂ ಆಡುತ್ತಿರಲಿಲ್ಲ. ಆ ಯಂತ್ರದ ತೂಕ ಬಹು ನಾಜೂಕಾಗಿದ್ದಿತು. ಒಂದು ಸಣ್ಣ ಸಂಶಯದ ಮಾತು, ಅತೃಪ್ತಿಯ ಮಾತು, ಎಷ್ಟು ಮೆಲ್ಲಗೆ ಎಲ್ಲಿ ಉಸಿರಿದರೂ ಆ ಸಮಗ್ರ ಯಂತ್ರ ಪ್ರತಿಸ್ಪಂದಿಸುತ್ತಿತ್ತು. ಇದರಿಂದ ಯಾರಿಗಾದರೂ ಕೇಡಾಗಲೆಂಬ ವಿಚಾರ ಯಾರಿಗೂ ಸರ್ವಥಾ ಇರಲಿಲ್ಲ. ಸದುದ್ದೇಶದಿಂದಲೇ ಆ ಕಂಪನಗಳನ್ನು ಪ್ರೇರಿಸಲಾಗುತ್ತಿತ್ತು. ಸಮಗ್ರ ಕುಟುಂಬದ ಸ್ವಾಸ್ಥ್ಯದಲ್ಲಿ ಪ್ರತಿಯೊಬ್ಬರಿಗೂ ಆಸ್ಥೆ ಇದೆ ಎಂದು ತೋರುವುದೇ ಉದ್ದೇಶವಾಗಿರುತ್ತಿತ್ತು. ಇಂತಹ ಪಿಸುಮಾತುಗಳ ಮೂಲದಲ್ಲಿ ನಿಜವಾದ ಅಂತಃಕರಣವಿರುತ್ತಿತ್ತು.''

ಮೇಲೆ ಹೇಳಿದ ಬೋಸಿನಿ, ಜೂನಳ ಪ್ರಿಯಕರನೆನಿಸಿದ ನಂತರ ಅವಳಿಂದ ದೂರವಾಗುತ್ತಿದ್ದಾನೆಂಬ ಗಾಳಿಮಾತು ಹುಟ್ಟಿದಾಗ ಹಿರಿಯ ಜೋಲಿಯನ್ ತನ್ನ ಮಗ (ಎಂದೋ ದೂರವಾಗಿದ್ದವ) ಕಿರಿಯ ಜೋಲಿಯನ್‌ಗೆ (ಅವನು ಜೂನಳ ತಂದೆಯಾದ್ದರಿಂದ) ನಿಜಸ್ಥಿತಿಯನ್ನು ವಿಚಾರಿಸಲಿಕ್ಕೆ ಹೇಳುತ್ತಾನೆ. ಕಿರಿಯ ಜೋಲಿಯನ್ ಬೋಸಿನಿಯನ್ನು ಕ್ಲಬ್ಬಿನಲ್ಲಿ ಕಂಡು ಮಾತಾಡುತ್ತಾನೆ. ಅಲ್ಲಿ ಕಿರಿಯ ಜೋಲಿಯನ್ ಫೋರ್ಸಾಯಿಟರ ವೈಶಿಷ್ಟ್ಯಗಳನ್ನು ಹೀಗೆ ವರ್ಣಿಸುತ್ತಾನೆ : ''ಇಂಥವರೇ ಫೋರ್ಸಾಯಿಟರೆಂದು ಗುರುತಿಸುವದು ಅವರು ತಮ್ಮ ಆಸ್ತಿ ಎಂಬುದನ್ನು ಹೇಗೆ ಗಟ್ಟಿಯಾಗಿ ಹಿಡಿದುಕೊಳ್ಳುತ್ತಾರೆ ಎಂಬುದರಿಂದ. ಅವನು ಯಾವುದನ್ನೂ ವ್ಯಾವಹಾರಿಕ ಬುದ್ಧಿಯಿಂದ ನೋಡುತ್ತಾನೆ. ವ್ಯಾವಹಾರಿಕ ದೃಷ್ಟಿಯ ಮೂಲದಲ್ಲಿರುವದು ಆಸ್ತಿವ್ಯವಸ್ಥೆಯೇ. ಫೋರ್ಸಾಯಿಟ್ ಯಾವ ಸಂದರ್ಭದಲ್ಲೂ ತನ್ನ ಮನಸ್ಸನ್ನು ಬಿಚ್ಚಿ ತೋರಿಸುವದಿಲ್ಲವೆಂಬುದನ್ನು ಯಾರೂ ಕಾಣಬಹುದು... ಒಂದು ದೃಷ್ಟಿಯಲ್ಲಿ ನಾವೆಲ್ಲರೂ ಆಸ್ತಿಯನ್ನು ನಂಬಿ ಇರುವವರೇ. ಸ್ವಲ್ಪ ಹೆಚ್ಚು ಸ್ವಲ್ಪ ಕಡಮೆ ಅಷ್ಟೆ. ಆದರೆ ನಾನು ಯಾವನನ್ನು ಫೋರ್ಸಾಯಿಟ್ ಎಂದು ಕರೆಯುತ್ತೇನೋ ಅವನು ಸುಮಾರಾಗಿ ಆಸ್ತಿಯ ಗುಲಾಮನೇ ಆಗಿರುತ್ತಾನೆ. ಯಾವುದು ಒಳ್ಳೆಯದು, ಯಾವುದು ಸುರಕ್ಷಿತ ಎನ್ನುವುದು ಅವನಿಗೆ ತಿಳಿದಿರುತ್ತದೆ ಮತ್ತು ಒಮ್ಮೆ ಅದು ಅವನದಾಯಿತೆಂದರೆ ಬಡಪೆಟ್ಟಿಗೆ ಅದನ್ನು ಅವನು ಬಿಟ್ಟುಕೊಡುವದಿಲ್ಲ – ಇದು ಹೆಂಡತಿಯೇ ಆಗಲಿ, ಮನೆಯೇ ಆಗಲಿ, ಹಣವೇ ಆಗಲಿ, ಒಂದು ಒಳ್ಳೆಯವನೆಂಬ ಖ್ಯಾತಿಯೇ ಆಗಲಿ, ಅವನದಾದರೆ ತೀರಿತು. ಅದೇ ಅವನ ಶಾಶ್ವತವಾದ ಗುರುತು. ದಲ್ಲಾಳಿಗಳೆಲ್ಲ ಫೋರ್ಸಾಯಿಟರು ; ಅವರೇ ವ್ಯಾಪಾರಿಗಳು ; ಅವರೇ ಸಮಾಜದ ಆಧಾರಸ್ತಂಭಗಳು ; ಸಂಪ್ರದಾಯದ ಆಧಾರ ಶಿಲೆಗಳು ; ಹೆಚ್ಚೇನು ? ಯಾವು ಯಾವುದನ್ನು ನಾವು ಶ್ಲಾಘನೀಯವೆನ್ನುತ್ತೇವೋ ಅದೆಲ್ಲ ಅವರಿಂದಲೇ.''

ಸೋಮ್ಸನ ಮತ್ತು ಅವನ ಹೆಂಡತಿ ಐರೀನೆಯ ವಿರಸ ವಿಕೋಪಕ್ಕೆ ಹೋದಾಗ ಅವಳು ತನ್ನ ಕೋಣೆಗೆ ಒಳಗಿಂದ ಬೀಗ ಜಡಿದು ಮಲಗುವಳೆಂಬ ಮಾತು ಹರಡಿತು.

ಸೋಮ್ಸನು ಬೀಗವನ್ನು ಮುರಿದು ಅವಳನ್ನು ಬಲಾತ್ಕರಿಸುವದಿಲ್ಲವೇಕೆ ಎಂದೂ ಕೆಲವರು ಕೇಳಿದರು. ಅದಕ್ಕೆ ಗಾಲ್ಸ್‌ವರ್ದಿ ವಿವರಣೆ ಇದು : "ಪ್ರಕಟವಾದ ಪಾಶವೀ ವರ್ತನೆ ಫೊರ್ಸಾಯಿಟರಿಗೆ ಇಷ್ಟವಾದದ್ದಲ್ಲ. ಅವರಲ್ಲಿ ಜಾಗರೂಕತೆ ಹೆಚ್ಚು ಮತ್ತು ಒಟ್ಟಿನಲ್ಲಿ ಅವರು ಗಟ್ಟಿಗುಂಡಿಗೆಯವರಲ್ಲವೆಂದೇ ಹೇಳಬೇಕು. ವಿಶೇಷವಾಗಿ ಸೋಮ್ಸನಲ್ಲಿ ಒಂದು ಸಾಧಾರಣವಾದ ತರದ ಅಭಿಮಾನವೂ ಇತ್ತು ; ಅವನನ್ನೊಂದು ಉದಾರ ಕಾರ್ಯಕ್ಕೆ ಪ್ರೇರಿಸುವಷ್ಟು ಶಕ್ತಿ ಅದಕ್ಕಿಲ್ಲದಿದ್ದರೂ ಅವನು ತೀರಾ ಹೀನವಾದ ಕಾರ್ಯ ಮಾಡದಂತೆ ತಡೆಯುವ ಶಕ್ತಿ ಅದಕ್ಕಿತ್ತು ; ಕ್ರೋಧಾವೇಶದ ಅತಿರೇಕದಲ್ಲಿ ಅದು ವಿಫಲವೂ ಆಗಬಹುದಿತ್ತು. ಎಲ್ಲಕ್ಕೂ ಹೆಚ್ಚಾಗಿ ಅವನ ಅಭಿಜಾತ ಫೊರ್ಸಾಯಿಟ ಬುದ್ಧಿ ಅವನನ್ನು ನಗೆಪಾಟಲಾಗದಂತೆ ತಡೆಯುತ್ತಿತ್ತು."

ಇಂತಹ ಒಂದು ಫೊರ್ಸಾಯಿಟ ಕುಟುಂಬದ ಕಥೆ ಆರಂಭವಾಗುವ ಹೊತ್ತಿಗೆ ಆ ಕುಟುಂಬದಲ್ಲಿರುವವರಲ್ಲಿ ಹಿರಿಯ ತಲೆಮಾರಿನವರು : 1. ಹಿರಿಯ ಜೋಲಿಯನ್ 2. ಅವನ ತಮ್ಮ ಜೇಮ್ಸ್ ; ಅವನ ತಮ್ಮಂದಿರು 3. ಸ್ವಿದಿನ್ 4. ರೋಜರ 5. ನಿಕೊಲಸ 6. ಟಿಮೊಥಿ ; ಇವರೆಲ್ಲರಿಗೂ ಅಕ್ಕ ಆನ್, ರೋಜರನ ತಂಗಿಯರು ಜೂಲಿಯಾ ಮತ್ತು ಹೆಸ್ಟರ, ಎಲ್ಲರಿಗೂ ಕಿರಿಯವಳು ಸೂಸಾನ್. ಎರಡನೆಯ ತಲೆಮಾರಿನವರು : ಕಿರಿಯ ಜೋಲಿಯನ್, ಜೇಮ್ಸನ ಮಗ ಸೋಮ್ಸ ಮತ್ತು ಹೆಣ್ಣು ಮಕ್ಕಳು ; ವಿನಿಫ್ರೆಡ್, ರಾಚೆಲ್, ಸಿಸಿಲೀ ; ರೋಜರನ ಮಕ್ಕಳು ಜಾರ್ಜ, ಫ್ರಾನ್ಸೀ, ಯುಸ್ಟೇಸ ; ನಿಕೊಲಸನ ಮಕ್ಕಳು ಕಿರಿಯ ನಿಕೊಲಸ, ಯುಫೇಮಿಯ ; ಸೂಸಾನನ ಮಕ್ಕಳು ಜಾಯಿಲ್ಸ ಮತ್ತು ಜೆಸ್. ಮೂರನೆಯ ತಲೆಮಾರಿನವರು : ಕಿರಿಯ ಜೋಲಿಯನ್ನನ ಮೊದಲನೆಯ ಹೆಂಡತಿಯ ಮಗಳು ಜೂನ್ ; ಎರಡನೆ ಹೆಂಡತಿಯ ಮಕ್ಕಳು ಜಾಲಿ ಮತ್ತು ಹಾಲೀ. ಈ ವಂಶವೃಕ್ಷದೊಡನೆ ಹೊರಗಿನಿಂದ ಸಂಬಂಧಪಟ್ಟವರು ಜೂನಳ ಪ್ರಿಯಕರ ಬೋಸಿನಿ, ಸೋಮ್ಸನ ಹೆಂಡತಿ ಐರೀನ್, ವಿನಿಫ್ರೆಡ್‌ಳ ಪತಿ ಡಾರ್ಟೀ. ಇವರಲ್ಲಿ ಫೊರ್ಸಾಯಿಟ ಬಂಧುಗಳೆಲ್ಲರ ಸಂಪಾದನೆ ಹಣಕಾಸಿನ ವ್ಯವಹಾರಗಳಿಂದ, ಆಸ್ತಿಯ ವಹಿವಾಟಿನಿಂದ, ಕಂಪನಿಗಳ ಆಡಳಿತಗಳಿಂದ, ವಕೀಲಿ, ದಲ್ಲಾಲಿ, ಇತ್ಯಾದಿ. ಎಲ್ಲರೂ ಲಂಡನ್ ನಗರದ ಬೇರೆಬೇರೆ ಪ್ರತಿಷ್ಠಿತ ಭಾಗಗಳಲ್ಲಿ ಪ್ರಶಸ್ತವಾದ ಮನೆಗಳನ್ನು ಕಟ್ಟಿಕೊಂಡಿದ್ದು 'ಉಚ್ಚ ಮಧ್ಯಮ' ವರ್ಗಕ್ಕೆ ಸೇರಿದವರಾಗಿದ್ದಾರೆ. ಇವರಲ್ಲಿಯೇ ಒಂದು ಕಾಲು ಒಳಗೆ, ಒಂದು ಹೊರಗೆ ಇರಿಸಿದವ ಕಿರಿಯ ಜೋಲಿಯನ್ ; ಉದ್ಯೋಗ ದಲ್ಲಾಲಿ ಎಂದುಕೊಂಡಿದ್ದರೂ ಚಿತ್ರಕಲೆಯನ್ನೂ ವ್ಯವಸಾಯ ಮಾಡಿಕೊಂಡಿದ್ದಾನೆ. ಹೊರಗಿನಿಂದ ಸಂಬಂಧಿಸಿದವರಲ್ಲಿ ಡಾರ್ಟಿ ಸುಖವಸ್ತು. ಬೋಸಿನಿ ವಾಸ್ತುಶಿಲ್ಪಿಯಾದರೂ ವ್ಯವಹಾರಚತುರನಲ್ಲವಾದ್ದರಿಂದ ಹಣವಂತನಲ್ಲ.

ಕಿರಿಯ ಜೋಲಿಯನ್ನನ ಮೊದಲನೆಯ ಹೆಂಡತಿ ತೀರಿದ ಮೇಲೆ ಅವನು

ಎಡನೆಯ ಸಂಬಂಧವನ್ನು ಕಟ್ಟಿಕೊಳ್ಳುವಾಗ ಫೋರ್ಸಾಯಿಟ ಆಚಾರಸಂಹಿತೆಯನ್ನು ಅತಿಕ್ರಮಿಸಿದನೆಂದು ಅವನ ತಂದೆಯೊಡನೆ ವಿರಸವಾಗಿತ್ತು. ಆದ್ದರಿಂದ ಹಿರಿಯ ಜೋಲಿಯನ್ ಅವನನ್ನು ದೂರಮಾಡಿ ಅವನ ಮೊದಲನೆಯ ಹೆಂಡತಿಯ ಮಗಳು ಜೂನ್‌ಳನ್ನು ತನ್ನ ವಾರಸುದಾರಳೆಂದು ತನ್ನ ಬಳಿ ಇರಿಸಿಕೊಂಡಿದ್ದನು. ಈ ಜೂನ ಳಲ್ಲಿಯೂ ಫೋರ್ಸಾಯಿಟ ಗುಣ ಅಷ್ಟಾಗಿರಲಿಲ್ಲ. ಅವಳು ಬಡವರ ಮತ್ತು ಕಷ್ಟದಲ್ಲಿದ್ದ ಕಲಾವಿದರ ಸಹಾಯಕ್ಕೆ ತನ್ನ ಸಮಯ ಮತ್ತು ಹಣಗಳನ್ನು ವಿನಿಯೋಗಿಸುತ್ತಿದ್ದಳು. ಬೋಸಿನಿಯ ವಾಸ್ತುಶಿಲ್ಪ ವ್ಯವಸಾಯ ಚೆನ್ನಾಗಿ ನಡೆದಿರಲಿಲ್ಲವೆಂಬುದೇ ಅವಳು ಅವನನ್ನು ಎತ್ತಿಕಟ್ಟಿ ಮಾತಾಡುವುದಕ್ಕೆ ಸಾಕಾಗಿತ್ತು. ಅವಳು ಶ್ರೀಮಂತನ ವಾರಸುದಾರಳೆನ್ನುವದು ಬೋಸಿನಿಗೆ ಲೆಕ್ಕಕ್ಕಿಲ್ಲದಿದ್ದರೂ, ಅವನು ಜೂನಳ ಸ್ನೇಹ ಬೆಳೆಸಿದ್ದು ಬೇರೆಯವರಿಗೆ ಹಾಗೆ ಕಾಣುತ್ತಿತ್ತು. ಅಂತೂ ಅವರ ಸ್ನೇಹ ಒಂದು ಮಟ್ಟಕ್ಕೆ ಬಂದು ಮದುವೆಯ ನಿಶ್ಚಯವನ್ನು ಪ್ರಕಟಿಸುವುದಕ್ಕೆ ಹಿರಿಯ ಜೋಲಿಯನ್ನನ ಮನೆಯಲ್ಲಿ ಏರ್ಪಾಡಾಗಿದ್ದ ಔತಣಕ್ಕೆ ಸುಮಾರಾಗಿ ಈ ಕುಟುಂಬದ ಸದಸ್ಯರೆಲ್ಲರೂ ಸೇರಿದ್ದರು, ಕಿರಿಯ ಜೋಲಿಯನ್ ಬಿಟ್ಟು

ಗಾಲ್ಸವರ್ದಿ ಕಥಾರಚನೆಯಲ್ಲಿ ಚಮತ್ಕಾರಕವಾದ ಘಟನಾವಳಿಗಳೂ ಅವುಗಳನ್ನು ಕಾರ್ಯಕಾರಣಭಾವದಿಂದ ಜೋಡಿಸುವ ವಿವರಣೆಗಳೂ ಇರುವದಿಲ್ಲ. ಪಾತ್ರಗಳ ಸ್ವಭಾವಗಳನ್ನು ಬಹುಸೂಕ್ಷ್ಮವಾಗಿ ವಿವರಿಸಿ ಆ ವಿವರಣೆಗೆ ದೃಷ್ಟಾಂತಗಳೆನ್ನು ವಂತೆ ಕೆಲವು ಘಟನೆಗಳನ್ನು ವರ್ಣಿಸುತ್ತಾರೆ. ಮತ್ತು ಆ ಘಟನೆಯ ಸ್ವರೂಪಕ್ಕನುಗುಣವಾಗಿ ಆಯಾ ಸನ್ನಿವೇಶ ಕಾಲಗಳನ್ನು ಸೂಕ್ಷ್ಮವಾಗಿ ವರ್ಣಿಸುತ್ತಾರೆ. ಅದೇ ಕಾದಂಬರಿಯ ಜೀವಾಳ. ಆರಂಭದಲ್ಲಿಯೇ ಬರುವ ಹಿರಿಯ ಜೋಲಿಯನ್ನನ ಚಿತ್ರ ಹೀಗಿದೆ : ''ಆ ವಿಶಾಲವಾದ ಕೋಣೆಯ ಮಧ್ಯದಲ್ಲಿ ಗಾಜಿನ ಅಲಂಕಾರದ ತೂಗುದೀಪದ ಕೆಳಗೆ ಮನೆಯ ಯಜಮಾನನಿಗೆ ಒಪ್ಪುವ ಸ್ಥಳದಲ್ಲಿ ಹಿರಿಯ ಜೋಲಿಯನ್ ನಿಂತಿದ್ದನು. ಎಂಬತ್ತು ವರ್ಷದ ಅವನ ತಲೆತುಂಬ ನಯವಾದ ಬಿಳಿಗೂದಲಿತ್ತು. ಗುಮ್ಮಟದಂತೆ ಎತ್ತರವಾದ ಅವನ ಹಣೆಯ ಕೆಳಗೆ ದಟ್ಟವಾದ ಕಂದುಬಣ್ಣದ ಕಣ್ಣುಗಳು ಚಿಕ್ಕವಾಗಿ ಕಾಣುತ್ತಿದ್ದವು. ನೀಳವಾದ ಬಿಳಿಯ ಮೀಸೆ ಕೆಳಗಿಳಿದು ಅವನ ಬಲವಾದ ದವಡೆಗಳ ಮೇಲೆ ಹರಡಿ ಕೆಳಗೆ ಬಂದಿತ್ತು. ಒಟ್ಟಾಗಿ ಅವನ ಚಹರೆ ಕುಲವೃದ್ಧನಿಗೆ ಶೋಭಿಸುವಂತಿತ್ತು. ಅವನ ಗಲ್ಲಗಳು ಚಪ್ಪಟೆಯಾಗಿದ್ದರೂ ಮೆಲುಕುಗಳು ತಗ್ಗಾಗಿದ್ದರೂ ಅವನು ಚಿರಯೌವನದ ಸ್ವಾಮಿತ್ವವನ್ನು ಪಡೆದವನಂತಿದ್ದನು. ಅವನು ನೆಟ್ಟಗೆ ಸೆಟೆದು ನಿಲ್ಲುತ್ತಿದ್ದನಲ್ಲದೆ ಅವನ ಚಾಣಾಕ್ಷವಾದ ನೇರವಾದ ದೃಷ್ಟಿಯ ಕಣ್ಣುಗಳ ಹೊಳಪು ಸ್ವಲ್ಪವೂ ಕುಂದಿರಲಿಲ್ಲ. ಹೀಗೆ ನಿಂತಿದ್ದ ಅವನನ್ನು ನೋಡಿದವರಿಗೆ ಈ ಮನುಷ್ಯನು ಹುಲುಮನುಜರನ್ನು ಪೀಡಿಸುವ ರಾಗದ್ವೇಷಗಳನ್ನೂ ಸಂಶಯಗಳನ್ನೂ ಮೀರಿದ್ದಾನೆಂದು ಭಾಸವಾಗುತ್ತಿತ್ತು. ಅನೇಕ ವರ್ಷಗಳ ಕಾಲ ತಾನು ನಡೆದದ್ದೇ ದಾರಿ

ಎಂಬಂತೆ ಅವನು ಬಾಳಿದ್ದರಿಂದ ಆ ದಾರಿಯಲ್ಲಿ ಅವನ ವಹಿವಾಟಿನ ಹಕ್ಕು ಸ್ಥಾಪಿತವಾದಂತಿತ್ತು. ತನ್ನ ಮುಖದಲ್ಲಿ ಅನಿಶ್ಚಿತತೆಯ ಇಲ್ಲವೆ ಪ್ರತಿಭಟನೆಯ ಭಾವವನ್ನು ಯಾವ ಸಂದರ್ಭದಲ್ಲಾದರೂ ತೋರಿಸಬೇಕಾದೀತು, ಎನ್ನುವ ಸಂಭಾವ್ಯತೆಯೇ ಬಹುಶಃ ಅವನಿಗೆ ಹೊಳೆಯುತ್ತಿರಲಿಲ್ಲ.''

ಅವನು ಪ್ರೀತಿಯಿಂದ ಸಾಕಿ ಬೆಳೆಸಿದ, ತಾಯಿ ಇಲ್ಲದ ಮೊಮ್ಮಗಳು, ಜೂನ್, ಬೋಸಿನಿಯೊಡನೆ ವಿವಾಹ ನಿಶ್ಚಯವಾದ ಮೇಲೆ ಮುದುಕನ ಜೊತೆಗೆ ಮನೆಯಲ್ಲಿ ಇರುತ್ತಲೇ ಇರಲಿಲ್ಲ. ಏಕಾಕಿಯಾದ ಜೋಲಿಯನ್ ಗತಕಾಲವನ್ನು ನೆನೆಯುತ್ತ ಕುಳಿತಿರುತ್ತಾನೆ : ''ತನಗೆ ಮುಪ್ಪಾದೆನೆಂಬ ಭಾವನೆ ಏಕೆ ಬರುವುದಿಲ್ಲ !'' ತಲೆಯೆಲ್ಲಾ ಬೆಳ್ಳಗಾಗಿದ್ದರೂ ಅವನ ಹೃದಯ ತರುಣನಂತೆ ಹಸಿಯಾಗಿಯೇ ಇತ್ತು. ಒಂದು ಸಂಜೆ ತನ್ನ ಲವೆಂಡರ್ ಬಣ್ಣದ ಕೈಚೀಲಗಳನ್ನು ತೆಗೆದು ಎಂದಿನಂತೆ ಒಪೆರಾಕ್ಕೆ ಹೋಗಿ ನೋಡುತ್ತ ಕುಳಿತಿದ್ದಾಗಲೂ ''ಅವನಿಗೆ ಏಕೋ ಎಂದಿಗಿಂತಲೂ ಹೆಚ್ಚಾಗಿ ತನ್ನದೆಲ್ಲಾ ಮುಗಿದುಹೋಯಿತು, ಇನ್ನು ಯಾವುದರಿಂದ ಏನಾಗಬೇಕಿದೆ ಎಂದೇ ಎನಿಸಿತು.... ಅಂದಿನ ಕಾಲದಲ್ಲಿ ತನ್ನ ನಿಲುವು ಎಷ್ಟು ನೇರವಾಗಿತ್ತೋ ಅಷ್ಟೇ – ಸುಮಾರಾಗಿ – ಇಂದೂ ಇದೆ. ತನ್ನ ದೃಷ್ಟಿಯೂ ಸುಮಾರಾಗಿ ಅಂದಿನಂತೆಯೇ ಇದೆ. ಆದರೂ ಇದೆಂತಹ ದಣಿವು. ಇದೆಂತಹ ಭ್ರಮೆ ಕರಗಿಹೋಯಿತೆಂಬ ನಿರಾಸೆ ?.... ತನ್ನ ಜೀವಮಾನವೆಲ್ಲವೂ ಎಲ್ಲ ವಿಷಯಗಳಿಂದಲೂ ಸುಖ ಪಡುವದನ್ನು ಅವನು ರೂಢಿಸಿಕೊಂಡಿದ್ದ... ಆದರೆ ಅವನ ಆ ಸುಖಿಸುವ ಶಕ್ತಿಯೇ ಅವನನ್ನು ಬಿಟ್ಟುಹೋಗಿದೆ ; ಅವನ ಜೀವನವಿಜ್ಞಾನವೇ ಅವನನ್ನು ಬಿಟ್ಟುಹೋಗಿದೆ ; ಅದೆಲ್ಲ ಮುಗಿದುಹೋಯಿತು ಎಂಬ ಭಯಾನಕವಾದ ಈ ಖಿನ್ನತೆಯೊಂದೇ ಇಂದು ತನ್ನ ಪಾಲಿಗೆ ಉಳಿದಿದೆ....'' ಎನ್ನಿಸಿ, ಅವನಿಗೆ ಮಗನ ನೆನಪುಕ್ಕಿ ಬಂತು. ''ಆ ಹುಡುಗ 'ಜೋ' ತನ್ನ ಜೊತೆಯಲ್ಲಿದ್ದರೆ ? ಹುಡುಗನೇನು ? ಅವನಿಗೆ ಈಗ ನಲವತ್ತು ವರ್ಷಗಳೇ ಆಗಿರಬೇಕು. ಈಗವನು ಸಮಾಜಬಾಹಿರನೂ ಅಲ್ಲ. ಮದುವೆಯೂ ಆಗಿದೆಯಂತೆ.''

''ಆ ವಿಶಾಲವಾದ ಸಭಾಂಗಣದಲ್ಲಿ ಅವನು ಕುಳಿತದ್ದೆಷ್ಟೊ ಅಷ್ಟೆ ; ಅವನ ಮನಸ್ಸು ತನ್ನ ಮಗನನ್ನು ಕಾಣಬೇಕೆಂಬ ಬಲವಾದ ಸೆಳೆತಕ್ಕೆ ಸಿಕ್ಕಿತ್ತು. ಆ ಹುಡುಗ ಚಿಕ್ಕವನಾಗಿದ್ದಾಗ ಕಂದು ಬಣ್ಣದ ಹಾಲಂಡ್ ಬಟ್ಟೆಯ ಸೂಟ್ ತೊಡಿಸಿ ಅವನನ್ನು ತನ್ನ ಕಾಲುಗಳ ನಡುವೆ ಜೋಕಾಲಿ ಆಡಿಸಿದ ಚಿತ್ರ ಅವನ ಕಣ್ಣ ಮುಂದೆ ಸುಳಿಯಿತು ; ಹಾಗೆಯೇ ಅವನನ್ನೊಂದು ಪುಟ್ಟ ಕುದುರೆಯ ಮೇಲೆ ಕೂಡಿಸಿ ಅವನನ್ನು ಹಿಡಿದುಕೊಂಡು ತಾನು ಕುದುರೆಯ ಜೊತೆಗೆ ಓಡುತ್ತ ಅವನಿಗೆ ಸವಾರಿಯನ್ನು ಕಲಿಸುತ್ತಿದ್ದದ್ದು ; ಅವನನ್ನು ಮೊದಲ ದಿನ ಶಾಲೆಗೆ ಕರೆದುಕೊಂಡು ಹೋದದ್ದು. ನಿಜವಾಗಿಯೂ ಆ ಹುಡುಗ ಪ್ರೀತಿ ಮಾಡಬಲ್ಲವನೂ ಮಾಡಿಸಿಕೊಳ್ಳಬಲ್ಲವನೂ

ಆಗಿದ್ದನು. ಅವನು ಈಟನ್‌ಗೆ, ಕೇಂಬ್ರಿಡ್ಜ್‌ಗೆ ಹೋಗಿ ಬಂದ ನಂತರವೂ ತನ್ನ ಸಂಗಾತಿಯಾಗಿಯೇ ಇದ್ದನು – ಸ್ವಲ್ಪ ಅಂತರ ಹೆಚ್ಚಾಗಿದ್ದದ್ದು ಸಹಜವೇ. ಆ ವಿಶಿಷ್ಟತೆಗಾಗಿಯಲ್ಲವೆ ತಾನು ಅವನನ್ನಲ್ಲಿಗೆ ಕಳುಹಿಸಿದ್ದು!...''

''ಈಗ ತನ್ನ ಮಗನನ್ನು ಕಂಡರೆ ಸ್ವಲ್ಪ ಸಮಾಧಾನವಾಗಬಹುದು ಎನ್ನಿಸಿತು ಅವನಿಗೆ. ತನ್ನ ಈ ಚಿಂತನೆ ತನ್ನ ಕುಟುಂಬದ ಪರಂಪರೆಗೂ, ತನ್ನ ತತ್ತ್ವಗಳಿಗೂ, ತನ್ನ ವರ್ಗಕ್ಕೂ ದ್ರೋಹವಾದೀತೇನೋ'' ಎಂದುಕೊಳ್ಳುತ್ತ ಜೋಲಿಯನ್ ತನ್ನ ದೃಷ್ಟಿಯನ್ನು ರಂಗಸ್ಥಳದಲ್ಲಿ ನಿಲ್ಲಿಸಿದನು. ಬಡಪಾಯಿಗಳು ! ದರಿದ್ರ ಬಡಪಾಯಿಗಳು ! ಈ ಸಣಕಲ ಫ್ಲೋರೆಸ್ತಾನನೇ ? ಅಂತೂ ಒಪೆರಾ ಮುಗಿಯಿತು. ಈಗಿನವರು ಅಲ್ಪಸಂತೋಷಿಗಳು.''

ಒಪೆರಾ ಶಾಲೆಯನ್ನು ಬಿಟ್ಟವನೇ ನೇರವಾಗಿ ಮಗನನ್ನು ನೋಡುವದಕ್ಕೆ ಅವನ ಕ್ಲಬ್ಬಿಗೆ ಹೋಗುತ್ತಾನೆ. ''ಕಿರಿಯ ಜೋಲಿಯನ್ ಕ್ಲಬ್ಬಿನಿಂದ ಹೊರಡಲೆಂದು ತನ್ನ ಹ್ಯಾಟ್ ಎತ್ತಿಕೊಂಡು ಮೊಗಸಾಲೆಯನ್ನು ದಾಟುತ್ತಿದ್ದಂತೆ ಪೋರ್ಟರನು (ಹಿರಿಯ ಜೋಲಿಯನ್ ಬಂದಿರುವದನ್ನು ಹೇಳುವದಕ್ಕೆ) ಅವನನ್ನು ತಡೆದನು. ಅವನೀಗ ತರುಣನೆಂಬಂತೇನೂ ಇರಲಿಲ್ಲ. ತಲೆ ಆಗಲೆ ನರೆಯುತ್ತಿತ್ತು. ಮುಖ ಅವನ ತಂದೆಯದೇ ಆದರೂ ಸ್ವಲ್ಪ ಚಿಕ್ಕದು, ಅಂತಹದೇ ಇಳಿ ಮೀಸೆ. ಆ ಮುಖದಲ್ಲಿ ಸುಖಿ ಜೀವನದಿಂದಾದ ಸವಕಳಿ ಎದ್ದು ಕಾಣುತ್ತಿತ್ತು. ಪೋರ್ಟರನ ಸಂದೇಶ ತಿಳಿಯುತ್ತಲೇ ಅವನ ಮುಖ ಬಿಳಿಚಿತು. ಇಷ್ಟೊಂದು ಕಾಲ ಗತಿಸಿದ ಮೇಲೆ ಒದಗಿದ ಈ ಭೇಟಿ ಅವನನ್ನು ತತ್ತರಿಸುವಂತೆ ಮಾಡಿತು. ಸಂಭವಿಸಬಹುದಾದ ಭಾವಾವಿಷ್ಕಾರ ನಾಲ್ಕು ಜನರಿರುವಲ್ಲಿ ನಡೆಯುವದು ಅಸಹನೀಯ ! ತಂದೆ ಮಕ್ಕಳಿಬ್ಬರೂ ಒಂದೂ ಮಾತಿಲ್ಲದೆ ಒಬ್ಬರೊಬ್ಬರ ಕೈ ಹಿಡಿದುಕೊಂಡರು. ಆಮೇಲೆ ನಡುಗುವ ದನಿಯಲ್ಲಿ ತಂದೆ ಎಂದನು – 'ಚೆನ್ನಾಗಿದ್ದೀಯಾ ಮಗು ?' ಮಗನೆಂದನು – 'ಚೆನ್ನಾಗಿದ್ದೀಯಾ ಅಪ್ಪ !' ಅವನ ಲವೆಂಡರ ಬಣ್ಣದ ಕೈಚೀಲದಲ್ಲಿ ಹಿರಿಯ ಜೋಲಿಯನ್ನನ ಕೈ ನಡುಗುತ್ತಿತ್ತು. 'ನನ್ನ ಹಾದಿಯಲ್ಲಿಯೇ ನೀನು ಬರುತ್ತಿದ್ದರೆ ನನ್ನ ಜೊತೆಗೇ ಬರಬಹುದಲ್ಲ.' ಪ್ರತಿ ದಿನವೂ ಜತೆಯಾಗಿಯೇ ಹೋಗುವ ರೂಢಿ ಇರುವವರಂತೆ ಇಬ್ಬರೂ ಒಂದೇ ಗಾಡಿಯಲ್ಲಿ ಕುಳಿತರು. ಮಗ ದೊಡ್ಡವನಾಗಿದ್ದಾನೆಂದು ಹಿರಿಯ ಜೋಲಿಯನ್ನನಿಗೆ ಕಂಡಿತು ; ಸುಮಾರಾಗಿ ಹಿರಿತನದ ಕಳೆ ಬಂದಿದೆ ಎಂದುಕೊಂಡನು. ಮಗನ ಮುಖದಲ್ಲಿಯ ಸ್ವಾಭಾವಿಕವಾದ ಸೌಮ್ಯ ಕಳೆಯ ಮೇಲೆ ಅಣಕಿಸುವ ಹಾಸ್ಯದ ಮುಖವಾಡವೊಂದನ್ನು ಎಳೆದಂತಿತ್ತು. ಅವನ ಜೀವನಾನುಭವಗಳು ಅವನಿಗೆ ಇಂತಹ ಕವಚದ ಅವಶ್ಯಕತೆಯನ್ನು ತೋರಿಸಿದಂತಿತ್ತು. ಕಣ್ಣು ಮೂಗು ಮುಖಾಕೃತಿಗಳೆಲ್ಲ ಫೊರ್ಸ್ಟಾಯಿಟ ಸಂತತಿಯವೇ ಆಗಿದ್ದರೂ ಒಟ್ಟಾರೆ ಚಹರೆಯಲ್ಲಿ ಒಬ್ಬ ವಿದ್ಯಾರ್ಥಿ ಇಲ್ಲವೆ ತತ್ವಜ್ಞಾನಿಯ ಚಿಂತನಶೀಲತೆ ಕಾಣುತ್ತಿತ್ತು. ಕಳೆದ ಹದಿನೈದು ವರ್ಷಗಳಲ್ಲಿ ಆತ್ಮನಿರೀಕ್ಷಣೆಗೆ ಅನೇಕ ಸಂದರ್ಭಗಳು ಅವನಿಗೊದಗಿದ್ದವೆನ್ನುವದರಲ್ಲಿ ಸಂಶಯವಿರಲಿಲ್ಲ.''

ತಂದೆಯನ್ನು ಕಂಡ ಕ್ಷಣದಲ್ಲಿ ಕಿರಿಯ ಜೋಲಿಯನ್‌ಗೆ ಆಘಾತವೇ ಆಗಿತ್ತು : ಎಷ್ಟು ಮುಪ್ಪಾಗಿದ್ದಾನಲ್ಲ ; ಬಡವಾಗಿದ್ದಾನಲ್ಲ ! ಎಂದು. ಆದರೆ ಗಾಡಿಯಲ್ಲಿ ಕುಳಿತ ಮೇಲೆ ಅವನಲ್ಲಿ ಯಾವ ಬದಲಾವಣೆ ಆಗಿದ್ದದ್ದೂ ಕಾಣುತ್ತಿರಲಿಲ್ಲ. ತನ್ನ ನೆನಪಿನಲ್ಲಿ ಕಂಡ ಅದೇ ಧೀರವಾದ ನೋಟ, ಅದೇ ನೆಟ್ಟನೆಯ ಆಕೃತಿ. ''ಅಪ್ಪ, ನೋಡಲಿಕ್ಕೆ ನೀನಿನ್ನೂ ಚೆನ್ನಾಗಿಯೇ ಇದ್ದೀಯ !'' ''ಇದ್ದೇನೆ ಸುಮಾರಾಗಿ.'' ಹಿರಿಯ ಜೋಲಿಯನ್ನನ್ನು ಕಾಡುತ್ತಿದ್ದ ಚಿಂತೆಯನ್ನು ಮಾತಿನಲ್ಲಿ ನುಡಿಯುವದಕ್ಕೆ ಅವನು ಚಡಪಡಿಸುತ್ತಿದ್ದನು. ತನ್ನ ಮಗನನ್ನೇನೊ ಮರಳಿ ಪಡೆದದ್ದಾಯಿತು, ಈಗ ಅವನ ಹಣಕಾಸಿನ ಸ್ಥಿತಿ ಹೇಗಿದೆ ಯೆಂಬುದನ್ನು ತಿಳಿಯಬೇಡವೆ ! ಅವನೆಂದನು – ''ಜೋ, ನಿನ್ನ ಸ್ಥಿತಿಗತಿಗಳು ಹೇಗಿವೆ ಎಂಬುದನ್ನು ನಾನು ಕೇಳಬಾರದೆ ? ಸ್ವಲ್ಪ ಸಾಲವೂ ಆಗಿರಬಹುದಲ್ಲವೆ ?'' ಮಗನಿಗೆ ಒಪ್ಪಿಕೊಳ್ಳುವದು ಸುಲಭವಾಗಬೇಕೆಂದು ಅವನು ಹೀಗೆ ಕೇಳಿದ್ದು. ಆದರೆ ಕಿರಿಯ ಜೋಲಿಯನ್ ಆಣಕಿಸುವ ದನಿಯಲ್ಲಿ– ''ಇಲ್ಲ ಇಲ್ಲ, ನಾನೇಕೆ ಸಾಲ ಮಾಡಬೇಕು ?'' ಅವನು ಕೆರಳಿದನೆಂಬುದು ಹಿರಿಯ ಜೋಲಿಯನ್‌ಗೆ ತಿಳಿಯಿತು. ಅವನ ಕೈ ಮೇಲೆ ಕೈಯಿಟ್ಟ. ತಾನು ಸ್ವಲ್ಪ ದುಡುಕಿದೆ. ದುಡುಕಿದ್ದೂ ಒಳ್ಳೆಯದೇ ಆಯಿತು. ಜೋ ತನ್ನೊಡನೆ ಎಂದೂ ಮುನಿಸಿಕೊಂಡವನಲ್ಲ. ಆಮೇಲೆ ಸ್ಟಾನಹೋಪ ಗೇಟ (ಹಿರಿಯ ಜೋಲಿಯನ್ ಮನೆ) ಬರುವವರೆಗೆ ಇಬ್ಬರೂ ಸುಮ್ಮನಿದ್ದರು. ಹಿರಿಯ ಜೋಲಿಯನ್ ಅವನನ್ನು ಮನೆಯೊಳಕ್ಕೆ ಬಾ ಎಂದನು. ಅವನು ಒಲ್ಲೆನೆಂದು ತಲೆಯಲ್ಲಾಡಿಸಿದನು. ತಂದೆಯು ಚಟ್ಟನೆ ''ಜೂನ್ ಮನೆಯಲ್ಲಿಲ್ಲ'' ಎಂದನು. ''ಒಂದೇ ದಿನದ ಮಟ್ಟಿಗೆ ಹೋಗಿ ಬರುವೆನೆಂದಿದ್ದಾಳೆ. ಅವಳ ಮದುವೆ ಗೊತ್ತಾಗಿರುವದು ನಿನಗೆ ತಿಳಿದಿರಬೇಕಲ್ಲವೆ ?'' ''ಈಗಾಗಲೆಯೆ !'' ಎಂದನು ಕಿರಿಯ ಜೋಲಿಯನ್ ಇಳಿದನಿಯಲ್ಲಿ.

ತಂದೆ ಮಕ್ಕಳ ಸ್ವಭಾವ ಆಕಾರಗಳನ್ನೂ ಗಾಲ್ಸ್‌ವರ್ದಿಯ ಪಾತ್ರಚಿತ್ರಣದ ರೀತಿಯನ್ನೂ ತೋರಿಸುವದಕ್ಕೆ ಇಷ್ಟು ಅವತರಣಿಕೆಗಳು ಸಾಕು. ನಮ್ಮ ಆಲಂಕಾರಿಕರು ಹೇಳುವಂತೆ ಕಬ್ಬಿನ ಜಲ್ಲೆ ಎಲ್ಲಿ ಕಚ್ಚಿದರೂ ಸಿಹಿ. ಆದರೂ ಕಥೆಯ ಒಂದಂಶದ ಪೂರ್ತಿಗಾಗಿ ಇನ್ನೆರಡು ಪಾತ್ರಗಳ ಬಗೆಗೆ ಸ್ವಲ್ಪ ಹೇಳಬೇಕು. ಈ ಆರು ಕಾದಂಬರಿಗಳಲ್ಲಿ ಐದಕ್ಕೆ ಆಧಾರವಾಗಿರುವ ಮೊದಲನೆಯ ಕಾದಂಬರಿಗೆ 'ಮ್ಯಾನ್ ಆಫ್ ಪ್ರಾಪರ್ಟಿ' – 'ಆಸ್ತಿವಂತ ಮನುಷ್ಯ' – ಎಂಬ ಹೆಸರು ಬರುವದಕ್ಕೆ ಕಾರಣವಾದ ವ್ಯಕ್ತಿ ಸೋಮ್ಸ . ಇವನು ಹಿರಿಯ ಜೋಲಿಯನ್ನನ ತಮ್ಮ ಜೇಮ್ಸನ ಮಗ. ಕಥಾರಂಭದ ಸನ್ನಿವೇಶದಲ್ಲಿ ತಂದೆ ಮಕ್ಕಳಿಬ್ಬರೂ ಇದ್ದಾರೆ. ತಾಯಿ ಎಮಿಲಿ ಮನೆಯಲ್ಲಿ. ಜೇಮ್ಸ ತನ್ನ ಮಗ ಸೋಮ್ಸನ ಮನೆಯ ಸಮೀಪದಲ್ಲಿ ಒಂದು ಮನೆ ಖರೀದಿಗೆ ನೋಡಿದ್ದನಂತೆ. ಅದನ್ನು ತನ್ನ ಅಣ್ಣ ಜೋಲಿಯನ್ ಕೊಂಡನೆಂದು ಅವನಿಗೆ ತಿಳಿಯಬರುತ್ತದೆ : ''ನೀನು ಅದಕ್ಕೆ ಕೊಟ್ಟ ಬೆಲೆ ತುಂಬ ಜಾಸ್ತಿ.... ಆ ಮನೆ ಸೋಮ್ಸಗೆ ಗೊತ್ತು. ನೀನು ಕೊಟ್ಟ ಬೆಲೆ ಜಾಸ್ತಿ

ಎಂದು ಅವನೂ ಹೇಳುವನು. ಅವನ ಅಭಿಪ್ರಾಯ ವಿಚಾರಾರ್ಹವಾದದ್ದು.'' ಅದಕ್ಕೆ ಜೋಲಿಯನ್ ಉತ್ತರ : ''ಅವನ ಮಾತಿಗೆ ನಾನು ಕಸದ ಬೆಲೆಯನ್ನೂ ಕೊಡಲಾರೆ.''

ಅಂದಿನ ಸಮಾರಂಭಕ್ಕೆ ಕಾರಣಳಾದ ಜೂನ್ ತನ್ನ ಪ್ರಿಯಕರನನ್ನು ಐರೀನ್‌ಗೆ ಪರಿಚಯಿಸುತ್ತಿದ್ದಾಗ ಸೋಮ್ಸ ನಿಶ್ಶಬ್ದವಾಗಿ ಐರೀನಳ ಹಿಂದೆ ಬಂದು ''ಹಾಂ, ನನ್ನ ಪರಿಚಯವನ್ನೂ ಹೇಳು'' ಅನ್ನುತ್ತಾನೆ. ಗಾಲ್ಸ್‌ವರ್ದಿ ಹೇಳುತ್ತಾರೆ : ''ನಾಲ್ಕು ಜನ ಸೇರಿದ ಸಂದರ್ಭದಲ್ಲಿ ಸೋಮ್ಸ ಐರೀನಳನ್ನು ಬಿಟ್ಟು ದೂರ ಸರಿಯುತ್ತಲೇ ಇರಲಿಲ್ಲ. ಸಮಾಗಮಗಳ ಸಂದರ್ಭಾನುಸಾರ ಸ್ವಲ್ಪವೇ ದೂರ ಹೋದರೂ ಅವನ ಕಣ್ಣುಗಳು ಅವಳನ್ನೇ ಹಿಂಬಾಲಿಸುತ್ತಿರುತ್ತವೆ. ಆ ಕಣ್ಣುಗಳಲ್ಲಿ ವಿಚಿತ್ರವಾದ ಎಚ್ಚರಿಕೆಯ ಮತ್ತು ಬಯಕೆಯ ನೋಟವಿರುತ್ತದೆ.''

ಹಿರಿಯ ಅಕ್ಕ ಆನ್ ಜೇಮ್ಸನೊಡನೆ ಬೋಸಿನಿಯ ಹಣಕಾಸಿನ ಸ್ಥಿತಿಯ ಮಾತು ತೆಗೆಯುತ್ತಾಳೆ. ಆ ಸಂದರ್ಭದಲ್ಲಿ ಜೇಮ್ಸ ಹೇಳುತ್ತಾನೆ : ''ಐರೀನಳೂ ಮದುವೆಯಾದಾಗ ಬರಿಗೈಯಿಂದಲೇ ಬಂದಳು. ನಾನೇನೂ ಮಾಡುವಂತಿರಲಿಲ್ಲ ; ಅವಳ ಹಿಂದೆ ಹಿಂದೆ ತಿರುಗುತ್ತ ಸೋಮ್ಸ ದಿನದಿನಕ್ಕೆ ಬಡವಾಗುತ್ತಿದ್ದನು.'' ಗ್ರಂಥಕರ್ತರ ಶಬ್ದಗಳಲ್ಲಿ ಆನ್ ಪ್ರತಿಕ್ರಿಯೆ : ''ಐರೀನ್‌ಗೆ ತನ್ನದೇ ಎಂಬ ಹಣವಿಲ್ಲದಿದ್ದರೆ ಅವಳು ತಪ್ಪಿ ನಡೆಯುವಂತಹ ಮೂರ್ಖಳಾದರೂ ಆಗಲಾರಳು, ಏಕೆಂದರೆ – ಅದೇನೋ ನಾನರಿಯೆ – ಹಾಗೆನ್ನುತ್ತಾರೆ – ಅವಳೇನೋ ತನ್ನ ಕೋಣೆ ಪ್ರತ್ಯೇಕವಾಗಿರಬೇಕೆನ್ನುತ್ತಾಳಂತೆ. ಆದರೆ ಸೋಮ್ಸ ಖಂಡಿತ ವಾಗಿಯೂ –'' ಜೇಮ್ಸ ಅವಳನ್ನು ತಡೆದು, ''ಟಿಮೋಥಿ ಎಲ್ಲಿ, ಕಾಣುವದಿಲ್ಲವಲ್ಲ.'' ಆಗ ಸೋಮ್ಸ ಆನ್‌ಳನ್ನು ಮಾತಾಡಿಸಲಿಕ್ಕೆ ಬರುತ್ತಾನೆ. ''ಈ ವಿವಾಹ ನಿಶ್ಚಯ ನಿನಗೆ ಹೇಗೆ ಕಾಣುತ್ತದೆ'' ಎಂದನು.

ಆನ್ ಅವನನ್ನು ಅಭಿಮಾನಪೂರ್ಣ ದೃಷ್ಟಿಯಿಂದ ನೋಡಿದಳು. ಕಿರಿಯ ಜೋಲಿಯನ್ ಮನೆಬಿಟ್ಟು ಹೋದಮೇಲೆ ತನ್ನ ಸೋದರರ ಮಕ್ಕಳಲ್ಲಿ ಸೋಮ್ಸನೇ ಹಿರಿಯವ. ಈಗ ಇವನೇ ಅವಳಿಗೆ ಅಚ್ಚುಮೆಚ್ಚಾಗಿದ್ದನು. ಏಕೆಂದರೆ ಒಟ್ಟು ಮನೆತನದ ಅಂತರಂಗ ಸ್ವರೂಪ ಅವನಲ್ಲಿ ಭದ್ರವಾಗಿ ಉಳಿಯುವದೆಂಬ ನಿರೀಕ್ಷೆ ಅವಳದಾಗಿತ್ತು ; ತಾನಿನ್ನೆಷ್ಟು ದಿನದವಳು ! ಸೋಮ್ಸನ ಪ್ರಶ್ನೆಗೆ ಉತ್ತರವಾಗಿ ''ಹುಡುಗನಿಗೆ ತುಂಬ ಹಿತವಾದದ್ದೇ. ನೋಡುವದಕ್ಕೂ ಹುಡುಗ ಚೆನ್ನಾಗಿದ್ದಾನೆ, ಆದರೆ ನಮ್ಮ ಜೂನಳಿಗೆ ಇವನು ಸರಿಯಾದವನೇ ? ಎಂಬ ಸಂಶಯ ನನಗೆ.'' ಸೋಮ್ಸ ಅಲ್ಲಿಯೇ ಇದ್ದ ಒಂದು ಅರಗಿನಲ್ಲಿ ಚಿನ್ನದ ಬಣ್ಣ ಮಾಡಿದ ಗಾಜಿನ ತೂಗುದೀಪವನ್ನು ಮುಟ್ಟಿ ಮುಟ್ಟಿ ನೋಡುತ್ತಿದ್ದನು. ''ಅವಳು ಅವನನ್ನು ಸರಿಯಾಗಿ ಪಳಗಿಸಬಲ್ಲಳು'' ಎಂದನು. ಮತ್ತೆ ''ನಮ್ಮ ಐರೀನ್ ಹೇಗಿದ್ದಾಳೆ ?'' ಸೋಮ್ಸನ ಮುಖದಲ್ಲಿಯ ನಸುನಗೆ ಈಗ ಮಾಯ

ವಾಯಿತು. ''ಪರವಾ ಇಲ್ಲ'' ಎಂದನು ; ''ನಿದ್ದೆಯೇ ಬರುವುದಿಲ್ಲವೆಂದು ತಕರಾರು ; ನಿಜವಾಗಿ ನನಗಿಂತ ಅವಳೇ ಎಷ್ಟೋ ಚೆನ್ನಾಗಿ ನಿದ್ದೆ ಮಾಡುತ್ತಾಳೆ.'' ನಿಡಿದಾಗಿ ಉಸಿರು ಬಿಟ್ಟು ಆನ್ ಅಂದಳು : ''ಇರಬಹುದು. ಆದರೆ ಅವಳು ಜೂನಳನ್ನು ಇಷ್ಟು ಮಟ್ಟಿಗೆ ಹಚ್ಚಿಕೊಂಡಿರುವದು ಹಿತವಲ್ಲ. ಪಾಪ ! ಜೂನ್ ಯಾವಾಗಲೂ ತಾನು ನಡೆದದ್ದೇ ದಾರಿ ಎನ್ನುವವಳು'' ಸೋಮ್ಸನ ಮುಖ ಕೆಂಪೇರಿತು. ಆ ಕೆಂಪು ಸರ್ರನೇ ಅವನ ಚಪ್ಪಟೆ ಗಲ್ಲಗಳ ಮೇಲೆ ಸರಿದು ಅವನ ಹುಬ್ಬಿನ ನಡುವೆ ನಿಂತಿತು, ಸುಖವಲ್ಲದ ವಿಚಾರಗಳ ದ್ಯೋತಕವಾಗಿ. ''ಆ ಹಲ್ಕಾ ಬೊಡ್ಡಿಯಲ್ಲಿ ಇವಳೇನು ಕಂಡಿದ್ದಾಳೊ !'' ಎಂದು ಒಮ್ಮೆಲೆ ಕೆರಳಿದನು ; ಕೂಡಲೆ ಅಲ್ಲಿ ಬೇರೆಯವರಿರುವದನ್ನು ಗಮನಿಸಿ ಆ ಗಾಜಿನ ದೀಪವನ್ನು ತಿರುವಿತಿರುವಿ ನೋಡುತ್ತ ನಿಂತನು.

ಆ ಔತಣಕ್ಕೆ ನೆರೆದ ಫೊರ್ಸಾಯಿಟರುಗಳ ಕುತೂಹಲ ಅಂದು ತಮ್ಮ ಕುಟುಂಬ ದೊಳಗಿನವರಿಗಿಂತ ಹೆಚ್ಚಾಗಿ ಹೊರಗಿನವನಾದ ಬೋಸಿನಿಯ ಮೇಲೆ ಕೇಂದ್ರಿತವಾಗಿತ್ತು. ಅವನು ಹಣವಂತನಲ್ಲ. ಹಣ ಗಳಿಸುವದಕ್ಕಿಂತ ತನ್ನ ಕಲೆಯಲ್ಲಿಯೇ ಅವನ ಆಸಕ್ತಿ ಹೆಚ್ಚಾಗಿತ್ತು. ಅವನ ಬಟ್ಟೆಬರೆಗಳಲ್ಲಿ ಅಂತಹ ಅಚ್ಚುಕಟ್ಟುತನ ಕಂಡುಬರುತ್ತಿರಲಿಲ್ಲ. ಅವನ ಹ್ಯಾಟ್ ಅಂತೂ ಅವರಿಗೆಲ್ಲ ಒಂದು ಅಪಹಾಸ್ಯಕ್ಕೆ ವಸ್ತುವಾಗಿತ್ತು. ಫೊರ್ಸಾಯಿಟ ಅಣ್ಣತಮ್ಮಂದಿರಲ್ಲಿ ನಾಲ್ಕನೆಯವನಾದ ರೋಜರನ ಮಗ ಜಾರ್ಜ ಮದುವೆಯನ್ನೇ ಮಾಡಿಕೊಂಡಿರಲಿಲ್ಲವಾದ್ದರಿಂದ ತನ್ನ ಜವಾಬ್ದಾರಿಯಿಲ್ಲದೆ ಹಾಸ್ಯಗಾರನೆಂಬ ಪ್ರಥೆಯನ್ನು ಪಡೆದಿದ್ದನು. ಅವನಂತೂ ಬೋಸಿನಿ ಚಹರೆ ವೇಷಗಳನ್ನು ನೋಡಿ ಅವನಿಗೆ 'ಬಕ್ಯಾನೀರ' ('ಕಡಲಗಳ್ಳ')ನೆಂದು ಹೆಸರಿಟ್ಟುಬಿಟ್ಟನು. ಜೂನಳಿಗೆ ಅವನಲ್ಲಿ ಆಸಕ್ತಿಯುಂಟಾದದ್ದು ಅವಳ ಸಮಾಜಸೇವೆಯ ಚಟುವಟಿಕೆಗಳಲ್ಲಿ ಬಡವನಾದ ಕಲಾವಿದನನ್ನು ಎತ್ತಿಕಟ್ಟುವದು ಅವಳ ಸ್ವಭಾವಕ್ಕೆ ಅನುಗುಣವಾಗೇ ಇದ್ದಿತು.

ಈ ಔತಣದ ನಂತರ ಆ ಅಣ್ಣತಮ್ಮಂದಿರಲ್ಲಿ ಮೂರನೆಯವನಾದ ಸ್ವಿದಿನ್ (ಅವನೂ ಕುಟುಂಬ ಕಟ್ಟಿಕೊಂಡಿರಲಿಲ್ಲ) ತನ್ನ ಮನೆಯಲ್ಲಿ ಔತಣವನ್ನು ಏರ್ಪಾಡು ಮಾಡಿದ್ದನು. ಇಷ್ಟರಲ್ಲಿ ಜೂನ್ ತನ್ನ ಪತಿಯಾಗಲಿರುವವನಿಗೆ ಸರಿಯಾದ ಕಂಟ್ರಾಕ್ಟುಗಳನ್ನು ದೊರಕಿಸುವ ಯತ್ನದಲ್ಲಿದ್ದಳು. ಅವಳು ತನ್ನ ಚಿಕ್ಕತಾತ ಜೇಮ್ಸನನ್ನು ಈಗ ಹಿಡಿದುಕೊಂಡು – ''ನಿಮ್ಮಂತಹವರು ಈ ಪಟ್ಟಣದ ಗದ್ದಲದಲ್ಲಿ ಏಕೆ ಕೊಳೆಯಬೇಕು, ಹೊರಗೆ ಸ್ವಚ್ಛವಾದ ಹವೆಯಲ್ಲಿ ಮನೆಗಳನ್ನೇಕೆ ಕಟ್ಟಿಸಬಾರದು ? ನಾನೊಂದು ಸುಂದರವಾದ ಸ್ಥಳವನ್ನು ನೋಡಿದ್ದೇನೆ'' ಎಂದು ಆರಂಭಿಸುತ್ತಾಳೆ. ಅದಕ್ಕೆ ಜೇಮ್ಸನ ಉತ್ತರ ''ಭೂಮಿ ಖರೀದಿ, ಮನೆ ಕಟ್ಟುವದು ಇದೆಲ್ಲ ನನಗೇಕೆ ? ಅದರಲ್ಲಿ ಹಾಕಿದ ಹಣಕ್ಕೆ ನೂರಕ್ಕೆ ನಾಲ್ಕರಷ್ಟೂ ಬಡ್ಡಿ ಬರುವದಿಲ್ಲ.'' ಜೂನ್: ''ಆದರೇನು, ಒಳ್ಳೆಯ ತಾಜಾ ಹವೆ ದೊರೆಯುವ ದಿಲ್ಲವೆ?'' ಜೇಮ್ಸ್ : ''ತಾಜಾ ಹವೆ ? ತಾಜಾ ಹವೆಯಿಂದ ನನಗೇನು ಲಾಭ ?'' ಜೂನ್

ತಿರಸ್ಕಾರದಿಂದ ''ಯಾರೇ ಆದರೂ ತಾಜಾ ಹವೆಯನ್ನು ಇಷ್ಟಪಡುವರೆಂದು ತಿಳಿದಿದ್ದೆ.'' ಜೇಮ್ಸ ಅವಳ ಕಣ್ಣು ತಪ್ಪಿಸುತ್ತ: ''ನಿನಗೆ ಹಣದ ಬೆಲೆ ಗೊತ್ತಿಲ್ಲ'' ಎಂದನು.

ಆದರೂ ಜೂನಳ ಈ ಆಸಕ್ತಿ ಸೋಮ್ಸನ ಗಮನ ಸೆಳೆದಿತ್ತು. ಜೂನಳಿಗೆ ಇಷ್ಟವಾದದ್ದನ್ನು ಮಾಡಿದರೆ ಐರೀನಳ ಪ್ರೀತಿಯನ್ನೂ ಪಡೆಯಬಹುದು ಎಂಬ ಆಸೆಯೂ ಇತ್ತು. ಇದರ ಜತೆಗೇ ಪಟ್ಟಣವಾಸವನ್ನು ಬಿಡಲಾಗದವರಾದ ಜೂನ್ ಮತ್ತು ಬೋಸಿನಿಯವರಿಂದಲೂ ಅವಳನ್ನು ದೂರ ಇಡುವದೂ ಆಯಿತು ಎಂಬ ಹಂಚಿಕೆಯೂ ಇತ್ತು. ಇಂತಹ ಹಂಚಿಕೆಗಳು ಅವನ ತಲೆಯಲ್ಲಿ ಸುಳಿಯುತ್ತಿದ್ದಾಗ ತಾನೊಂದು ಭೋಗ್ಯದ ವ್ಯವಹಾರಕ್ಕೆ ಸಂಬಂಧಿಸಿದ ಆಸ್ತಿಯನ್ನು ನೋಡಲಿಕ್ಕೆ ಹೋದಾಗ ರಾಬಿನ್ ಹಿಲ್ ಎಂಬಲ್ಲಿ ನೋಡಿದ ಸ್ಥಲ ಪ್ರಶಸ್ತವೆಂದು ಕಂಡಿತು. ಅಲ್ಲಿ ಆಸ್ತಿಯ ಬೆಲೆ ಇಳಿಯುವ ಸಂಭವವೇ ಇಲ್ಲ. ಈಗ ಬಡ್ಡಿಯ ದರಗಳೂ ಹೆಚ್ಚಾಗಿಲ್ಲ. ಆದ್ದರಿಂದ ಈಗ ಮನೆ ಕಟ್ಟದವರಿಗೆ ನಷ್ಟವಿಲ್ಲ. ಫೂರ್ಸಾಯಿಟ ಮನೆತನದವರಾರೂ ಇನ್ನೂ ನಗರದ ಹೊರವಲಯಗಳಲ್ಲಿ ಮನೆ ಕಟ್ಟರಲಿಲ್ಲ. ಈ ಬಾಬತ್ತಿನಲ್ಲಿ ತಾನೇ ಮೊದಲಿಗನೆನಿಸಬೇಕೆಂಬ ಅಭಿಮಾನವೂ ಜಾಗ್ರತವಾಗಿತ್ತು. ಮನೆ ಅಂದರೆ ಸುಮ್ಮನೆ ಎಲ್ಲರಂತಹ ಒಂದು ಮನೆ ಕೂಡದು. ಅದು ವಿಶಿಷ್ಟವಾಗಿರಬೇಕು. ಕಾಲ ಬದಲಾದರೂ ಅದರ ಆಕರ್ಷಣೆ ತಗ್ಗದಂತಹ ಮುನ್ನೋಟವಿರಬೇಕು. ಹೀಗೆ ಅವನು ಶಿಲ್ಪಿಯ ಬಗ್ಗೆ ಚಿಂತಿಸುತ್ತಿದ್ದಾಗ 'ನಮ್ಮ ಬೋಸಿನಿಯೇ ಯಾಕಾಗಬಾರದು' ಎಂದುಕೊಂಡ. ಅವನು ಬುದ್ಧಿವಂತನಂತೆ ಕಾಣುತ್ತಾನೆ. ಹಣದ ವಿಷಯದಲ್ಲಿ ಅವನು ಏಚು ಪೇಚು ತಿಳಿದವನಲ್ಲವೆಂಬುದೂ ತನಗೆ ಅನುಕೂಲವೇ ಆಗಬಹುದು. ಮತ್ತು ಜೂನ್ ತಮ್ಮವಳೇ. ಫೂರ್ಸಾಯಿಟ ಹಣ ಬೇರೆಯವರಿಗೆ ಹೋಗುವದೇಕೆ ? ಎಂದೆಲ್ಲ ಯೋಚಿಸಿ, ಅವನು ಬೋಸಿನಿಗೆ ಸ್ಥಳವನ್ನು ತೋರಿಸಿ ಅವನನ್ನು ಒಪ್ಪಿಸಿ ಕೆಲಸ ಆರಂಭಿಸುತ್ತಾನೆ. ಈ ವಿಷಯ ಗೋಪ್ಯವಾಗಿರಬೇಕೆಂದು ಅವನು ಎಷ್ಟು ಬಯಸಿದರೂ ಜೂನಳಿಗೆ ತಿಳಿಯದೇ ಇರುವದು ಸಾಧ್ಯವೇ ಇರಲಿಲ್ಲ. ಜೂನಳಿಗೆ ತಿಳಿದಮೇಲೆ ಗೋಪ್ಯವೆನ್ನುವದು ಪರಿಹಾಸವೇ. ಅಂತೂ ಎಲ್ಲರ ಕುತೂಹಲ ಕೆರಳಿತು. ಜೇಮ್ಸ ಯಾರಿಗೂ ಹೇಳದೆ ತಾನೊಬ್ಬನೇ ಹೋಗಿ ನೋಡಿಕೊಂಡು ಬಂದ. ಅವನ ಪ್ರಶ್ನೆಗಳಿಗೆ ಬೋಸಿನಿಯಿಂದ ಸಮರ್ಪಕ ಉತ್ತರ ಬರಲಿಲ್ಲ. ಕೇವಲ ಅಪವ್ಯಯ ಎಂದು ಗೊಣಗಿಕೊಂಡು ಬಂದ. ಸ್ವಿದಿನ್ ತಾನೇ ನಡೆಸುತ್ತಿದ್ದ ತನ್ನ ಕುದುರೆಯ ಗಾಡಿಯಲ್ಲಿ ಐರೀನ್‌ಳೊಡನೆ ಹೋಗಿ ಬಂದ. ಆದರೆ ಈ ವಿಷಯದಲ್ಲಿ ಯಾವ ಕುತೂಹಲವನ್ನೂ ಯಾವ ಉತ್ಸಾಹವನ್ನೂ ತೋರಿಸದಿದ್ದವಳು ಐರೀನ್ ಒಬ್ಬಳೇ. ಇದು ಸೋಮ್ಸನಿಗೆ ಅತಿಶಯವಾದ ಕಿರಿಕಿರಿಗೆ ಕಾರಣವಾಗಿತ್ತು.

ಸ್ವಿದಿನ್ ಆ ಮನೆಯನ್ನು ನೋಡಿಕೊಂಡು ವಾಪಸು ಬರುವಾಗ ಅವನ ಕುದುರೆಗಳು ಬೆದರಿ ಸಿಕ್ಕಾಪಟ್ಟೆ ಓಟ ಕಿತ್ತವು. ರಸ್ತೆಯ ಪಕ್ಕಕ್ಕೆ ಸರಿದು ನಿಂತವರ

ಮುಖದಲ್ಲಿ ಭಯ ಎದ್ದು ಕಾಣುತ್ತಿತ್ತು. ಸ್ವಿದಿನ್ ತುಟಿ ಕಚ್ಚಿ ಮುಖ ಕೆಂಪು ಮಾಡಿ ಕಡಿವಾಣಗಳನ್ನು ಎಳೆಯುತ್ತಿದ್ದರೂ ಗಾಡಿ ಪುಟಿಯುತ್ತ ತೂನೆಯುತ್ತ ಓಡುತ್ತಲೇ ಇತ್ತು. ಐರೀನ್ ಪಕ್ಕದ ಸಲಾಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡು "ಸ್ವಿದಿನ್ ಮಾವ, ಅಪಘಾತವಾಗುವದೆ ? ನಾನೆಂದೂ ಅಪಘಾತವನ್ನೇ ನೋಡಿಲ್ಲ" ಎಂದಳು. "ಕದಲಬೇಡ. ಗಟ್ಟಿಯಾಗಿ ಹಿಡಿದುಕೊಂಡಿರು. ಭಯಕ್ಕೆ ಕಾರಣವಿಲ್ಲ. ನಿನ್ನನ್ನು ಸುರಕ್ಷಿತವಾಗಿ ಮನೆಗೆ ತಲುಪಿಸುವೆನು" ಎಂದನು ಸ್ವಿದಿನ್. ಅದಕ್ಕವಳು ವಿಚಿತ್ರವಾದ ದನಿಯಲ್ಲಿ "ಚಿಂತೆಯಿಲ್ಲ. ಮನೆಗೆ ಹೋದರೇನು, ಹೋಗದಿದ್ದರೇನು !" ಸ್ವಿದಿನ್ನನ ಆಶ್ಚರ್ಯದ ಉದ್ಗಾರ ಗಾಡಿಯ ಪುಟಿತದಿಂದಾಗಿ ಅವನ ಗಂಟಲಲ್ಲೇ ಇಳಿದು ಹೋಯಿತು. ಸ್ವಿದಿನ್ ತನ್ನ ಈ ಸಾಹಸವನ್ನು ತನ್ನ ಬಳಗದಲ್ಲಿ ವರ್ಣಿಸುವಾಗ ಅವರೆಲ್ಲ "ಮನೆಗೆ ಹೋದರೇನು, ಹೋಗದಿದ್ದರೇನು ಅಂದಳೆ ? ಹಾಗೆಂದರೇನು ?" ಎಂದು ಅವನನ್ನೂ ತಾವೇ ಒಬ್ಬರೊಬ್ಬರನ್ನೂ ಕೇಳುತ್ತಿದ್ದಾಗ ಸ್ವಿದಿನ್ ಉತ್ತರ : "ಸೋಮ್ಸನಂತಹ ಗರಿಮುರಿಯ ಲೊಲ್ಲದ ಇಸ್ತ್ರಿ ಗಂಡನ್ನು ಕಟ್ಟಿಕೊಂಡ ಹೆಂಗಸು ಇನ್ನೇನು ಎಂದಾಳು !" ಅಂತೂ ಐರೀನ್ ಬಳಗದ ಹರಟೆಗೆ ವಸ್ತುವಾದಳು. ಯಾರು ಯಾರನ್ನು ಭೆಟ್ಟಿಯಾದರೂ ಐರೀನ್‌ಳನ್ನು ಅಲ್ಲಿ ಕಂಡೆ, ಇಲ್ಲಿ ಕಂಡೆ, ಅವಳ ಜೊತೆಗೆ ಬೋಸಿನಿ ಇದ್ದದ್ದು ಆಕಸ್ಮಿಕವೇ ನಿಯೋಜಿತವೇ ? ಎನ್ನ ತೊಡಗಿದರು. ಒಳ್ಳೆಯ ಫೊರ್ಸಾಯಿಟ್ ಆಗಿದ್ದ ಸೋಮ್ಸ ಅಪಹಾಸ್ಯಕ್ಕೆ ಈಡಾಗುವ ವ್ಯಕ್ತಿತ್ವದವನೇನಲ್ಲ; ಅವನಲ್ಲಿಯೂ ಒಳ್ಳೆಯ ಗುಣಗಳಿದ್ದವು.

ಸೋಮ್ಸನ ಸಲಹೆಗಳು ನಿರ್ದುಷ್ಟವಾದವೆಂದು ಅವನ ವ್ಯವಸಾಯದಲ್ಲಿ ಅವನ ಖ್ಯಾತಿಯಿತ್ತು. ಯಾರನ್ನು ಕೇಳಿದರೂ 'ಕಿರಿಯ ಫೊರ್ಸಾಯಿಟನ ಕಡೆಗೆ ಹೋಗಿರಿ ; ತಲೆಯನ್ನು ಚೆನ್ನಾಗಿ ಓಡಿಸುವ ಮನುಷ್ಯ' ಎನ್ನುತ್ತಿದ್ದರು. ಈ ಖ್ಯಾತಿ ಸೋಮ್ಸನಿಗೆ ಬಹು ಮಹತ್ವದ್ದಾಗಿತ್ತು. ಅವನ ಮಾತು ಕಡಮೆ ಎನ್ನುವದನ್ನು ಜನ ಅವನ ಪರವಾಗಿಯೇ ಅರ್ಥವಿಸುತ್ತಿದ್ದರು. ಅವನ ಈ ಮಿತಭಾಷಿತದಂತೆ ಅವನ ಯಾವ ಗುಣವೂ ಅವನ ಕಕ್ಷಿಗಾರರ ಮೇಲೆ ವರ್ಚಸ್ಸು ಬೀರುತ್ತಿರಲಿಲ್ಲ; ವಿಶೇಷವಾಗಿ ಆಸ್ತಿವಂತರಾದ ಕಕ್ಷಿಗಾರರ ಮೇಲೆ ; ಅಂತಹವರಲ್ಲದ ಕಕ್ಷಿಗಾರರು ಅವನಿಗೆ ಇರಲೇ ಇಲ್ಲ ; ಅದರಿಂದ ಅವರು ಊಹಿಸುತ್ತಿದ್ದದ್ದು ಸೋಮ್ಸ ಯಾವಾಗಲೂ ಸುರಕ್ಷಿತತೆಯ ಪರವಾಗಿ ಇದ್ದವನೆಂದು. ಆ ಊಹೆ ಸರಿಯಾಗಿಯೂ ಇತ್ತು. ಅವನು ಸದಾ ಸುರಕ್ಷಿತ. ಪರಂಪರೆ, ಅಭ್ಯಾಸ, ಶಿಕ್ಷಣ, ವಂಶಾನುಗತವಾಗಿ ಬಂದ ಗುಣ, ಅವನಿಗೇ ಸಹಜವಾದ ಜಾಗರೂಕತೆ – ಎಲ್ಲಾ ಸೇರಿ ಅವನಲ್ಲಿ ಒಂದು ದೃಢವಾದ ವ್ಯವಸಾಯಿಕ – ಪ್ರಾಮಾಣಿಕತೆಗೆ ಆಧಾರವಾಗಿದ್ದವು. ಆ ಪ್ರಾಮಾಣಿಕತೆ ಎಂತಹ ಪ್ರಲೋಭನೆಗೂ ಬಗ್ಗದು, ಏಕೆಂದರೆ ಯಾವುದನ್ನೂ ಸಾಹಸದ ಅನಿಶ್ಚಿತತೆಗೆ ಒಡ್ಡುವದು ಅವನ ಜಾಯಮಾನಕ್ಕೆ ಒಗ್ಗದು. ಅಂಥವನು ಎಡವಿ

ಬೀಳುವದೆಂದರೇನು ? ಬೀಳುವ ಸಂಭಾವ್ಯತೆಯಿರುವ ಪರಿಸರದಿಂದಲೇ ಅವನ ಜೀವ ಹಿಂದೆಗೆಯುತ್ತಿತ್ತು. ನೆಲವನ್ನೇ ಕಚ್ಚಿಕೊಂಡಿದ್ದವನು ಬೀಳುವದಾದರೂ ಹೇಗೆ !

ಇಂತಹ ಸೋಮ್ಸನು ವಿಧಿವಶನಾಗಿ ಕಟ್ಟಿಕೊಂಡ ಹೆಂಡತಿ ಐರೀನ್. ಹಿಂದೊಮ್ಮೆ ಜೇಮ್ಸ್ ಹೇಳಿದಂತೆ ಅವಳ ಹಿಂದೆ ಹಿಂದೆ ತಿರುಗುತ್ತ ದಿನದಿನಕ್ಕೆ ಬಡವಾಗುತ್ತಿದ್ದನಂತೆ. ಐರೀನಳ ತಂದೆ ಪ್ರೊಫೆಸರ್ ಹೆರೊನ್. ಹಣವಂತನಲ್ಲ. ತಾಯಿ ಮೊದಲೇ ಹೋಗಿದ್ದಳು. ಮಲತಾಯಿಯ ಮನೆಯಲ್ಲಿ ಐರೀನ್ ತುದಿಗಾಲಲ್ಲಿ ನಿಂತು ಕಾಲ ಕಳೆಯುತ್ತಿದ್ದಳು. ಸೋಮ್ಸನಂಥವನು ಅವಳನ್ನು ಮೆಚ್ಚಿಕೊಂಡರೂ ಅವನಲ್ಲಿ ಅವಳಿಗೇನೂ ಅಂತಹ ಆಕರ್ಷಣೆ ಕಂಡಿರಲಿಲ್ಲ. ಆದರೂ ಸೋಮ್ಸನು ಅಚಲವಾದ ತಾಳ್ಮೆಯಿಂದ ಸತತ ಪ್ರಯತ್ನದಿಂದ ತನ್ನ ಬೆನ್ನ ಬಿಡದಿರುವಿಕೆಗೆ ಮಣಿದೋ, ತನ್ನ ಮಲತಾಯಿಗೆ ಭಾರವಾಗಿ ಎಷ್ಟು ದಿನ ಇರುವದೆಂಬ ಸಂಕೋಚದಿಂದಲೋ ಸೋಮ್ಸನನ್ನು ಒಪ್ಪಿ ಅವನ ಮನೆಗೆ ಬಂದಳು. ಕಥಾರಂಭದಲ್ಲಿ ಫೊರ್ಸಾಯಿಟ ಕುಟುಂಬ ಸಮಾವೇಶದಲ್ಲಿ ಐರೀನಳ ವರ್ಣನೆ ಹೀಗಿದೆ : "ಜೂನ್ ಬೋಸಿನಿಯರು ಇಬ್ಬರೇ ಬೇರೆಯಾಗಿ ಮಾತಾಡುತ್ತ ನಿಂತಿದ್ದಾಗ ಸುಂದರಾಕೃತಿಯ ಎತ್ತರವಾದ ನಿಲುವಿನ ಒಬ್ಬ ಹೆಂಗಸು (ಒಬ್ಬ ಫೊರ್ಸಾಯಿಟನು ಅವಳನ್ನು ಹಳೆಯ ಕಾಲದ ದೇವತಾಮೂರ್ತಿ ಎಂದಿದ್ದನು) ಅವರಿಬ್ಬರತ್ತ ನೋಡುತ್ತ ನಿಂತಿದ್ದಾಗ ಅವಳ ಮುಖದಲ್ಲಿ ಈಷನ್ಮಾತ್ರ ಮಂದಸ್ಮಿತದ ಛಾಯೆಯಿದ್ದಿತು. ಫ್ರೆಂಚ್ ರಜತವರ್ಣದ ಕೈಚೀಲಗಳನ್ನು ತೊಟ್ಟ ಕೈಗಳನ್ನವಳು ಒಂದರ ಮೇಲೊಂದು ಹಾಕಿದ್ದಳು. ಗಂಭೀರವಾದ ಅವಳ ಲಾವಣ್ಯಪೂರ್ಣ ಮುಖವನ್ನವಳು ಸ್ವಲ್ಪ ಓರೆಯಾಗಿ ನಿಲ್ಲಿಸಿದ್ದಳು. ಅಲ್ಲಿದ್ದ ಎಲ್ಲಾ ಗಂಡಸರ ಕಣ್ಣುಗಳು ಅವಳಲ್ಲಿಯೇ ನೆಲೆಸಿದ್ದವು. ಮೆಲ್ಲಗೆ ತೊನೆಯುತ್ತಿದ್ದ ಅವಳ ಆಕೃತಿಯ ನಿಲುವಿನ ತೂಕ ಎಷ್ಟು ನಾಜೂಕಾಗಿತ್ತೆಂದರೆ ಸ್ವಲ್ಪ ಗಾಳಿ ಸುಳಿದರೂ ಅದು ಅತ್ತಿತ್ತ ತೊನೆದಂತೆ ಭಾಸವಾಗುತ್ತಿತ್ತು. ಅವಳ ಕಪೋಲಗಳಲ್ಲಿ ಆರೋಗ್ಯ ಎದ್ದು ಕಾಣುತ್ತಿದ್ದರೂ ಬಣ್ಣದ ಛಾಯೆ ಸೂಕ್ಷ್ಮವಾಗಿತ್ತು. ಅವಳ ದೊಡ್ಡ ದಟ್ಟವಾದ ಬಣ್ಣದ ಕಣ್ಣುಗಳ ನೋಟದಲ್ಲಿ ಮಾರ್ದವ ಸೂಸುತ್ತಿತ್ತು. ಆದರೆ ಜನಗಳ ನೋಟವನ್ನು ಬಹುವಾಗಿ ಆಕರ್ಷಿಸುತ್ತಿದ್ದವು ಅವಳ ತುಟಿಗಳು ; ಒಂದು ಪ್ರಶ್ನೆ ಕೇಳುವಾಗಲೇ ಆಗಲಿ, ಉತ್ತರ ಕೊಡುವಾಗಲೇ ಆಗಲಿ ಅಲ್ಲಿ ಸುಳಿಯುತ್ತಿದ್ದ ಮಂದಸ್ಮಿತದ ಛಾಯೆ ಅಷ್ಟು ಆಕರ್ಷಕವಾಗಿತ್ತು. ಭಾವಪೂರ್ಣವಾದ, ಉದ್ದೀಪಕವಾದ, ಮಾಧುರ್ಯವನ್ನು ಸೂಸುವ ಆ ತುಟಿಗಳೊಳಗಿಂದ ಅರಳುತ್ತಿದ್ದ ಹೂವಿನೊಳಗಿಂದ ಬರುವಂತೆ ಸುಗಂಧವೂ ಕಾತರತೆಯೂ ಹೊರಡುತ್ತಿದ್ದಂತೆ ಭಾಸವಾಗುತ್ತಿತ್ತು. ಅವಳ ನೋಟ ತಮ್ಮಲ್ಲಿಯೇ ನೆಲಸಿತ್ತೆಂಬ ಅರಿವು ಜೂನ್-ಬೋಸಿನಿಯರಿಗೆ ಇರಲಿಲ್ಲ. ಬೋಸಿನಿ ಅವಳತ್ತ ಮೊದಲು ನೋಡಿ ಜೂನಳನ್ನು ಅವಳ ಹೆಸರು ಕೇಳಿದನು. ಜೂನ್ ತಟ್ಟನೆ ಅವನನ್ನು ಐರೀನ್‌ಳ ಹತ್ತಿರ ಎಳೆದು ತಂದು

''ಐರೀನ್ ನನಗೆ ಅಚ್ಚುಮೆಚ್ಚಾದವಳು. ನೀವಿಬ್ಬರೂ ಒಳ್ಳೆಯ ಸ್ನೇಹಿತರಾಗಿರಬೇಕು, ತಿಳಿಯಿತೆ ?'' ಎಂದಳು. ಅದಕ್ಕೆ ಮೂವರೂ ನಕ್ಕರು. ಅದೇ ಕ್ಷಣದಲ್ಲಿಯೇ ಸೋಮ್ಸ ಬಂದು ತನಗೂ ಬೋಸಿನಿಯನ್ನು ಪರಿಚಯಿಸಬೇಕು ಎಂದದ್ದು. ಔತಣ ಮುಗಿದ ನಂತರ ಬಳಗ ಚದುರುತ್ತಿದ್ದಾಗ ನಿಕೊಲಸ್ ಮತ್ತು ರೋಜರ ಅವಳ ಮಾತೇ ಆಡುತ್ತ ಹೊರಗೆ ಬಂದರು: ''ಆ ಸೋಮ್ಸನ ಹೆಂಡತಿ ಚೆಲುವೆಯಲ್ಲವೆ ?''..... ''ಸೋಮ್ಸನಿಗೆ ಅವಳೊಡನೆ ತೊಂದರೆಯೇ ಬರಲಿದೆ. ನೋಡುತ್ತಿರು. ಅವಳ ನೋಟ ನಮ್ಮ ಜನಗಳಂತಿಲ್ಲ''.... ''ಅವಳ ಬಟ್ಟೆಗಳಿಗಾಗಿಯೇ ಸೋಮ್ಸ ತುಂಬ ಖರ್ಚುಮಾಡುತ್ತಿರಬೇಕು.'' ಅವಳ ವೆಚ್ಚದ ಬಗ್ಗೆ ಸೋಮ್ಸನ ತಂದೆಯ ಅಭಿಪ್ರಾಯವೂ ಸುಮಾರು ಇದೇ ಆಗಿತ್ತು.

ಜೂನಳ ಭಾವೀ ಪತಿಯೆಂದು ಗೊತ್ತಾದ ಬೋಸಿನಿ ಸೋಮ್ಸನ ರಾಬಿನ್ ಹಿಲ್ ಮನೆ ಕಟ್ಟಲಾರಂಭಿಸಿದ ನಂತರ ಐರೀನಳನ್ನು ಭೇಟಿಯಾಗುವ ಸಂದರ್ಭಗಳು ಹೆಚ್ಚಾದಂತೆ ಅವನು ಜೂನಳಿಂದ ದೂರವಾಗುತ್ತಿದ್ದಾನೆಂಬ ವಾರ್ತೆ ಹಿರಿಯ ಜೋಲಿಯನ್ ಕಿವಿಗೆ ಬರುವದಕ್ಕೆ ತಡವಾಗಲಿಲ್ಲ. ಈಗ ಮುದುಕ ತನ್ನ ಏಕಾಕಿತನವನ್ನು ಮರೆತು ಜೂನಳಿಗೊದಗಿದ ವಿಪತ್ತಿಗೆ ಪರಿಹಾರ ಹುಡುಕಬೇಕಾಯಿತು. ಅದರಲ್ಲಿ ಜೂನ್ ತಂದೆಯ ಸಹಾಯ ಕೇಳಿದರೆ ಅವನ ಉತ್ತರ ವಿಚಿತ್ರವಾಗಿತ್ತು. ಜೂನ್-ಬೋಸಿನಿ ವಿವಾಹ ನಿಶ್ಚಯವಾಗುವ ಮೊದಲು ಅವಳೂ ಐರೀನಳೂ ಯಾವಾಗಲೂ ಜತೆಯಾಗಿ ಇರುತ್ತಿದ್ದ ಕಾರಣ ಹಿರಿಯ ಜೋಲಿಯನ್ ಐರೀನಳನ್ನು ಸಾಕಷ್ಟು ನೋಡಿದ್ದ. ಅವಳ ಪ್ರಭಾವ ಗಂಡಸರನ್ನು ಹೇಗೆ ಸೆಳೆಯುತ್ತದೆನ್ನುವದನ್ನೂ ಕಂಡಿದ್ದ. ಅವನು ಕಂಡಂತೆ ಅವಳು ಸೋಗುಲಾಡಿಯಲ್ಲ, ಮೋಹಿನಿಯೂ ಅಲ್ಲ... ಆದರೂ ಅವಳಿಂದ ಅಪಾಯವಾಗಬಲ್ಲದು. ಅದೇಕೆ ? ಅವನಿಗೆ ತಿಳಿಯದು. ಕೆಲವು ಹೆಂಗಸರಲ್ಲಿ ಒಂದು ವಿಚಿತ್ರ ಆಕರ್ಷಣೆ ಸಹಜವಾಗಿಯೇ ಇರುತ್ತದೆ, ಅದು ಅವರ ಇಚ್ಛೆಗೂ ಅಧೀನವಲ್ಲ ಎಂದು ಹೇಳಿದರೆ ಅವನು ''ಶುದ್ಧ ಮೋಸ ! ಭ್ರಾಂತಿ !'' ಎಂದಾನು. ಅವನಿಗೆ ತಿಳಿದ ಮಟ್ಟಿಗೆ ಅವಳು ಅಪಾಯಕಾರಿ ಎಂದುಬಿಟ್ಟರೆ ಸಾಕು. ಹಿರಿಯ ಜೋಲಿಯನ್ ಐರೀನಳ ಬಗೆಗೆ ಹೇಳಿದ ಈ ಮಾತು ಒಂದು ವಾಸ್ತವಿಕ ಗುಣವಿಶೇಷವನ್ನೇ ಹೇಳುತ್ತದೆ. ಇದನ್ನು ಮುದುಕನ ಉತ್ಪ್ರೇಕ್ಷೆ ಎನ್ನಲಾಗುವುದಿಲ್ಲ.

ರಾಬಿನ್ ಹಿಲ್ ಮನೆಯ ಕಟ್ಟಡ ಮುಗಿಯುತ್ತ ಬಂದಂತೆ ಸೋಮ್ಸನಿಗೂ ಬೋಸಿನಿಗೂ ನಡುವೆ ವಿರಸ ಹೆಚ್ಚಾಗುತ್ತಲೇ ಇರುತ್ತದೆ. ಒಂದು ಏಪ್ರಿಲ್ ತಿಂಗಳ ಕೊನೆಯ ದಿನ ಸೋಮ್ಸ್ ಮನೆಯ ಕೆಲಸವನ್ನು ನೋಡಿ ಲೆಕ್ಕಗಳನ್ನು ಕೇಳಬೇಕೆಂದು ಅಲ್ಲಿಗೆ ಹೋಗುತ್ತಾನೆ. ಬೋಸಿನಿ ಕೆಲಹೊತ್ತು ಅವನೊಡನೆ ಸುತ್ತಾಡಿ 'ಇನ್ನು ತಾನು ಜೂನ್‌ಳನ್ನು ಕಾಣಲಿಕ್ಕೆ ಹೋಗಬೇಕು. ಉಳಿದ ಲೆಕ್ಕಪತ್ರಗಳನ್ನು ಮನೆಗೇ ತರುತ್ತೇನೆ'

ಎನ್ನುತ್ತಾನೆ. 'ಓ, ಇವನು ಮತ್ತೆ ಬರುವೆನೆನ್ನುವದು ಅವಳನ್ನೇ (ಐರೀನ್) ನೋಡಲಿಕ್ಕೆ' ಎಂದುಕೊಳ್ಳುತ್ತಾನೆ ಸೋಮ್ಸ್. ಹೀಗೆ ಸೋಮ್ಸನು ಹಣದ ವಿಷಯದಲ್ಲಿಯೂ ಹೆಂಡತಿಯ ವಿಷಯದಲ್ಲಿಯೂ ಬೋಸಿನಿಯೊಡನೆ ತಾನು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡೆನೆಂದು ಪರಿತಪಿಸುತ್ತಾನೆ.

ಹೊಸ ಮನೆಯ ಅಲಂಕರಣಕ್ಕೆ ತಾಗಿದ ಹಣದ ವಿಷಯದಲ್ಲಿ ಸೋಮ್ಸ – ಬೋಸಿನಿ ವಿರಸ ವಿಕೋಪಕ್ಕೆ ಹೋಗಿ ಸೋಮ್ಸ್ ಕೋರ್ಟು ಮೆಟ್ಟಿಲನ್ನು ಹತ್ತಿದನು. ಐರೀನ್-ಬೋಸಿನಿಯರ ಸ್ನೇಹವು 'ತುಂಬಾ ದೂರ ಹೋಗಿದೆ' ಎಂಬ ಪ್ರವಾದವೂ ಸೋಮ್ಸನನ್ನು ಕೆರಳಿಸಿತ್ತು. ತನ್ನ ಎಲ್ಲ ಕಷ್ಟಗಳಿಗೂ ತನ್ನ ದಾಯಾದಿಗಳ 'ಫಾಜೀಲ' ಕುತೂಹಲವೂ ಪಿಸುಮಾತುಗಳೂ ಕಾರಣವೆಂದು ಒಮ್ಮೊಮ್ಮೆ ಅವರ ಮೇಲೂ ಅವನ ಕೋಪ ಕೆರಳುತ್ತಿತ್ತು. ಆದರೂ ಬೇರೆ ಸಮಾಧಾನವನ್ನು ಕಾಣದೆ ತನ್ನ ಚಿಕ್ಕಪ್ಪ ಟಿಮೋಥಿ ಮನೆಯಲ್ಲಿ ಸೇರುತ್ತಿದ್ದ ಹರಟೆಗಳಲ್ಲಿ ಶಾಮಿಲಾಗುತ್ತಿದ್ದನು. ಅದರಿಂದ ಅವನಿಗೆ ಸಮಾಧಾನದ ಬದಲು ಕಿರಿಕಿರಿಯೇ ಹೆಚ್ಚಾಗುತ್ತಿತ್ತು ; ಹಾಗೆಂದು ಹೋಗದೆ ಇರಲೂ ಆಗುತ್ತಿರಲಿಲ್ಲ. ಇಂತಹ ಒಂದು ಸಂಜೆಯನ್ನು ಅಲ್ಲಿ ಕಳೆದು, ಪಾರ್ಕಿನ ಒಳದಾರಿಯಿಂದ ತನ್ನ ಮನೆಗೆ ನಡೆದುಕೊಂಡೇ ಹೋಗುತ್ತಾನೆ. ಆ ಪಾರ್ಕು ಹೇಗಿತ್ತು ಎಂಬುದರ ವರ್ಣನೆ ಸೊಗಸಾಗಿದೆ. ಸೋಮ್ಸನು ತನಗೆ ಏನು ಬೇಕಿತ್ತೆಂಬುದನ್ನೇ ತಿಳಿಯದೆ ಬೆಳಕಿನಲ್ಲಿದ್ದ ದಾರಿಯನ್ನು ಬಿಟ್ಟು ಮರಗಳ ಮಬ್ಬುಗತ್ತಲೆಯಲ್ಲಿಯೇ ಅಲ್ಲಿ ಸುತ್ತಾಡುತ್ತಿದ್ದು, ''ಒಮ್ಮೆಲೇ ಅಸಹ್ಯಪಟ್ಟುಕೊಂಡು ಎಚ್ಚತ್ತಂತೆ ಮೈಕೈ ಕೊಡವಿಕೊಂಡು ದಾರಿಯ ಬೆಳಕಿನಲ್ಲಿ ಬಂದನು. ತಾನು ಶೋಧಿಸುತ್ತಿದ್ದದ್ದು ಏನೆಂಬುದೇ ತಿಳಿಯದೆ ಆ ಶೋಧವನ್ನು ಬಿಟ್ಟು ನಡೆದನು.

ಒಂದು ರಾತ್ರಿ ಐರೀನಳು ಮಲಗುವಾಗ ತನ್ನ ಕೋಣೆಯ ಬಾಗಿಲಿಗೆ ಒಳಗೀಲಿಯನ್ನು ಹಾಕಲಿಕ್ಕೆ ಮರೆತಿದ್ದ ಸಮಯ ಸಾಧಿಸಿ ಸೋಮ್ಸ್ ಬಲಾತ್ಕಾರದಿಂದ ಅವಳ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಿಯೇಬಿಟ್ಟನು. ಐರೀನಳ ದುಃಖ, ಕೋಪ, ತಿರಸ್ಕಾರ, ಅಸಹಾಯಕತೆಗಳ ಪ್ರತಿಕ್ರಿಯೆಯಿಂದ ಅವನಿಗೆ ಆಘಾತವಾಗುತ್ತದೆ. ತಾನು ಮಾಡಿದ್ದು ತಪ್ಪೆ ? ಎಲ್ಲರೂ ಮಾಡದಿರುವದೇನನ್ನು ತಾನು ಮಾಡಿದ್ದು ?— ಹೀಗೆ ಪಶ್ಚಾತ್ತಾಪ, ಆತ್ಮಸಮರ್ಥನೆಗಳಲ್ಲಿ ತುಯ್ದಾಡುತ್ತ ರಾತ್ರಿಯನ್ನು ಕಳೆದು ಹಗಲಿನಲ್ಲಿ ತನ್ನ ಕೆಲಸಗಳಲ್ಲಿ ಮೈಮರೆಯುವ ಯತ್ನ ಮಾಡುತ್ತಾನೆ. ಮುಂದೆ ಎರಡು ದಿನಗಳಲ್ಲಿ ಅವನು ಬೋಸಿನಿಯ ಮೇಲೆ ಹೂಡಿದ ದಾವೆ ವಿಚಾರಣೆಗೆ ಬರಲಿದೆ.

''ಅಂದು ಸಂಜೆ ಸೋಮ್ಸ್ ಮನೆಗೆ ಹೊರಟಾಗ ಗಾಢವಾದ ಮಂಜು ಕವಿದಿತ್ತು. ನೆಲದೊಳಗಿನ ರೈಲಿನಿಂದ ಹೋಗುವದೇ ಸುರಕ್ಷಿತವೆಂದು ತನ್ನ ವಾಡಿಕೆಯ ಸ್ಟೇಷನ್ನಿಗೆ ಬರುವಾಗ ಮಂಜು ಇನ್ನೂ ಹೆಚ್ಚಾಗಿತ್ತು. ನಿಶ್ಚಲವಾದ ಆ ಅಂಧಕಾರದಲ್ಲಿ ತಡವರಿಸುತ್ತ

ಜನಗಳು ಒಳಗೂ ಹೊರಗೂ ತಿರುಗುತ್ತಿದ್ದರು... ಸೋಮ್ಸ್‌ನಿಂದ ಅನತಿ ದೂರದಲ್ಲಿಯೇ ಒಂದು ಆಕೃತಿ ಸ್ಟೇಷನ್ ಬಾಗಿಲಲ್ಲಿ ಯಾರಿಗಾಗಿಯೋ ಕಾಯುತ್ತಿತ್ತು... ಕೇವಲ ಒಬ್ಬ ಪೋಲೀಸನು ಮಾತ್ರ ಮೆಲ್ಲಗೆ ಹೆಜ್ಜೆ ಹಾಕುತ್ತ ತನ್ನ ಕಾವಲ ಸಂಚಾರದಲ್ಲಿ ಅವನನ್ನು ಗಮನಿಸುತ್ತಿದ್ದನು. ಇಳಿಬಿದ್ದ ಹ್ಯಾಟಿನ ಅಂಚು ಆ ಮುಖವನ್ನು ಅರ್ಧ ಮರೆಮಾಡಿದ್ದಿತು. ಚಳಿಯಿಂದ ಕೆಂಪಾಗಿದ್ದ, ಕೃಶವಾದ, ವ್ಯಗ್ರವಾದ ಮುಖದ ಮೇಲೆ ಕವಿಯುತ್ತಿದ್ದ ಚಿಂತೆಯನ್ನು ಒರಸುವುದಕ್ಕೋ ನಿರ್ಧಾರವನ್ನು ಗಟ್ಟಿ ಮಾಡುವುದಕ್ಕೋ ಅವನ ಕೈ ಆ ಮುಖದ ಮೇಲೆ ಆಡಿ ಮರೆಯಾಗುತ್ತಿತ್ತು....

"ಅದೇ ಸಂಜೆ ಜಾರ್ಜ್ ಫೊರ್ಸಾಯಿಟನು ಬೇಸರ ಕಳೆಯುವುದಕ್ಕೆ ತನಗೆ ಸುಪರಿಚಿತವಾದ ರೆಡ್‌ಪೋಟಲ್‌ಗೆ ಹೋಗಿ ಬಿಲಿಯರ್ಡ್ಸ್ ಆಡುವದೆಂದು ಹೊರಟನು. ಅವನು ಚೇರಿಂಗ ಕ್ರಾಸ್ ನಿಲ್ದಾಣದಲ್ಲಿಳಿದಾಗ ಮೊದಲನೆ ವರ್ಗದ ಬಂಡಿಯಿಂದ ಒಬ್ಬ ವ್ಯಕ್ತಿ ಪ್ಲಾಟ್‌ಫಾರ್ಮಿಗೆ ಹಾರಿ ಸ್ಟೇಷನ್ನಿನ ಹೊರಬಾಗಿಲಿನ ಕಡೆಗೆ ತೂರಾಡಿಕೊಂಡು ಹೋದದ್ದು ಅವನ ಕಣ್ಸೆಳೆಯಿತು. "ಓಹೋ, ಇದು ನಮ್ಮ ಹಕ್ಕಿಯೇ ! ಇವನು ನಮ್ಮ ಕಡಲ್ಗಳ್ಳನಲ್ಲವೆ ?" (ಬೋಸಿನಿಗೆ ಅವನು ಇಟ್ಟಿದ್ದ ಹೆಸರು) ಎಂದುಕೊಂಡು ತನ್ನ ಸ್ಥೂಲದೇಹವನ್ನು ಅವನ ಬೆನ್ನಟ್ಟಿಸಿದನು. ಕುಡುಕರಿಂದ ಅವನಿಗಾಗುವಂತಹ ಮನೋರಂಜನೆ ಇನ್ನಾವುದರಿಂದಲೂ ಆಗುತ್ತಿರಲಿಲ್ಲ. ಇಳಿಬಿದ್ದ ಅಂಚಿನ ಹ್ಯಾಟ್ ಧರಿಸಿದ ಬೋಸಿನಿ ಅವನ ಮುಂದೆ ಕ್ಷಣ ತಡೆದು ಗಕ್ಕನೆ ತಿರುಗಿ ತಾನು ಆದೇ ಇಳಿದಿದ್ದ ಬಂಡಿಯತ್ತ ಧಾವಿಸಿದನು. ಆದರೆ ತಡವಾಯಿತು. ಪೋರ್ಟರನೊಬ್ಬ ಅವನ ಕೋಟನ್ನು ಹಿಡಿದು ಹಿಂದೆಳೆದನು. ರೈಲು ಹೊರಟಿತ್ತು. ಇತಹ ಬೇಟೆಗೆ ಅಭ್ಯಸ್ತವಾದ ಜಾರ್ಜನ ದೃಷ್ಟಿ ಕಿಟಕಿಯಲ್ಲಿ ಒಬ್ಬ ಹೆಂಗಸಿನ ಮುಖವನ್ನು ಗಮನಿಸಿತು. ಅವಳು ಬೂದುಬಣ್ಣದ ತುಪ್ಪಳದ ಕೋಟನ್ನು ಧರಿಸಿದ್ದಳು. ಅವಳು ಸೋಮ್ಸನ ಹೆಂಡತಿಯಲ್ಲವೆ ! ಇದೇನೋ ಸ್ವಾರಸ್ಯವಾಗಿದೆ ಎಂದುಕೊಂಡ ಜಾರ್ಜ್.

"ಈಗ ಅವನು ಇನ್ನೂ ಹೆಚ್ಚಿನ ಆಸ್ಥೆಯಿಂದ ಬೋಸಿನಿಯ ಬೆನ್ನು ಹತ್ತಿದ. ಬೋಸಿನಿ ಕುಡಿತದ ಅಮಲಿನಲ್ಲಿರಲಿಲ್ಲ. ಯಾವದೋ ಉಗ್ರವಾದ ಭಾವನೆಯಿಂದ ತ್ರಸ್ತವಾಗಿ ಪರದಾಡುತ್ತಿದ್ದಂತೆ ತೋರುತ್ತಿತ್ತು ; ಅವನು ತನ್ನಷ್ಟಕ್ಕೆ ತಾನೆ ಮಾತಾಡಿಕೊಳ್ಳುತ್ತಿದ್ದನು : 'ಅಯ್ಯೋ ದೇವರೇ' ಎಂದದ್ದು ಮಾತ್ರ ಜಾರ್ಜನಿಗೆ ಕೇಳಿಸಿತು. ಆ ಮನುಷ್ಯನಿಗೆ ತಾನೇನು ಮಾಡುತ್ತಿದ್ದೇನೆಂಬ ಎಚ್ಚರವಿರಲಿಲ್ಲ. ಎಲ್ಲಿ ಹೋಗುತ್ತಿದ್ದೇನೆಂಬುದು ತಿಳಿಯುತ್ತಿರಲಿಲ್ಲ; ಆಗಾಗ ನಿಂತು ಅತ್ತಿತ್ತ ನಿಟ್ಟಿಸಿ ನೋಡಿ, ತುಸು ಅನುಮಾನಿಸಿ, ಮತ್ತೆ ಹುಚ್ಚನಂತೆ ಸಾಗುತ್ತಿದ್ದನು ; ಈಗ ಜಾರ್ಜನು ಕೇವಲ ಮನೋರಂಜನೆಯನ್ನರಸುತ್ತಿದ್ದ ಹಾಸ್ಯಗಾರನಾಗಿರಲಿಲ್ಲ ; ಈ ಬಡಪಾಯಿಯನ್ನು ಹೇಗಾದರೂ ಪಾರುಗಾಣಿಸಬೇಕೆಂಬ ವಿಚಾರ ಅವನಲ್ಲಿ ಮೂಡಿತು.

''ಅವನು ಪೆಟ್ಟು ತಿಂದಿದ್ದಾನೆ ! ಬಲವಾದ ಪೆಟ್ಟು ತಿಂದಿದ್ದಾನೆ ! ಅಂತಹದೇನನ್ನು ಸೋಮ್ಸನ ಹೆಂಡತಿ ಅಂದಿದ್ದಾಳು ? ಆ ರೈಲು ಬಂಡಿಯಲ್ಲಿ ಅಂತಹದೇನನ್ನು ಅವನಿಗೆ ಹೇಳಿದ್ದಾಳು ? ತನ್ನ ತೊಂದರೆಗಳನ್ನು ತನ್ನೊಡನೇ ಕಟ್ಟಿಕೊಂಡು ಅವಳು ಏಕಾಕಿಯಾಗಿ ಹೇಗೆ ಸಾಗುತ್ತಿದ್ದಾಳು ? ಎಂದು ಜಾರ್ಜ್‌ನಿಗೆ ಕನಿಕರವೆನಿಸಿತು.

''ಅವನು ಬೋಸಿನಿಯ ಬೆನ್ನ ಹಿಂದಿನಿಂದಲೇ ಅವನ ನೆರಳಿನಂತೆ ನಡೆದನು.... ಆ ಭಯಂಕರವಾದ ಕತ್ತಲ ಕಂದರದಲ್ಲಿ ಬೋಸಿನಿ ವೇಗವಾಗಿ ನುಗ್ಗುತ್ತಿದ್ದ.... ಹಾಗೆ ಭೂತಾವಿಷ್ಟನಂತೆ ನುಗ್ಗುತ್ತಿದ್ದ ಆ ಮನುಷ್ಯನ ಬೆನ್ನಟ್ಟಿ ನಡೆದಂತೆ ಜಾರ್ಜನಲ್ಲಿ ಒಂದು ವಿಚಿತ್ರವಾದ ಪರವಶತೆ ಕಾಣಿಸಿಕೊಳ್ಳುತ್ತಿತ್ತು.

''ಆಮೇಲೆ ನಡೆದದ್ದು ಮಾತ್ರ ಅವನಿಗೆ ಅನಿರೀಕ್ಷಿತವಾಗಿದ್ದಷ್ಟೇ ಅಲ್ಲದೆ ಅವನ ಮನಸ್ಸಿನಲ್ಲಿ ಎಂದೂ ಮಾಸದಂತೆ ಅಚ್ಚೊತ್ತಿತ್ತು. ಆ ಕತ್ತಲೆಯಲ್ಲಿ ಏನೂ ಕಾಣದಂತಾಗಿ ಫಕ್ಕನೇ ಒಮ್ಮೆ ತಡೆದಾಗ ಅವನ ಕಿವಿಗೆ ಬಿದ್ದ ಬೋಸಿನಿಯ ಶಬ್ದಗಳು ಆಗ ನಡೆಯುತ್ತಿದ್ದ ಘಟನೆಗಳ ಮೇಲೆ ನಿಚ್ಚಳವಾದ ಬೆಳಕು ಬೀರಿದವು – ತನ್ನಿಂದ ವಿಮುಖಳಾಗಿದ್ದ, ತನ್ನೊಡನೆ ಕೂಡಲು ಮನಸ್ಸಿಲ್ಲದ, ತನ್ನ ಹೆಂಡತಿಯು ತನ್ನ ಸೊತ್ತೆಂದು ಪರಿಗಣಿಸಿ ಬಲಾತ್ಕಾರದಿಂದ ನಡೆಸಬಹುದಾದದ್ದನ್ನು ಸೋಮ್ಸ ನಡೆಯಿಸಿಬಿಟ್ಟಿದ್ದನು... ಓಹೋ ಇದು ಹೀಗೋ... ಈ ಬಡಪಾಯಿ, ಹುಚ್ಚನಾಗಿರುವದು ಸೋಜಿಗವಲ್ಲ – ಎಂದುಕೊಂಡ ಜಾರ್ಜ್... ಅಬ್ಬಾ ! ಈ ಮನುಷ್ಯ ಸೋಮ್ಸನ ಮೇಲೆ ಕೈ ಮಾಡುವೆನೆಂದು ಹೊರಟಿದ್ದಾನೆ ! ಎಂದು ಅವನಿಗೆ ಹೊಳೆಯಿತು... ಹಾಗೆಯೇ ಮುನ್ನುಗ್ಗುತ್ತ ಪಕ್ಕದಲ್ಲೇ ಹಾಯ್ದ ಒಂದು ಗಾಡಿಯ ಈಸು ಜಾರ್ಜನ ಹೆಗಲಿಗೆ ತಾಗಿ ಅವನು ಪಕ್ಕಕ್ಕೆ ನೆಗೆಯುವಂತೆ ಮಾಡಿತು. ಹಾಳಾಗಲಿ, ಈ ಬೋಸಿನಿಗಾಗಿ ನಾನೇಕೆ ಜೀವ ಕಳೆದುಕೊಳ್ಳಲಿ ? ಎಂದು ಚಿಂತಿಸಿದರೂ ಮುಂದೆ ಸಾಗಿದಂತೆ ಈ 'ಕಡಲ್ಗಳ್ಳ'ನ ಹೆಗಲ ಮೇಲೆ ಕೈ ಹಾಕಿ 'ಅಣ್ಣಾ ಹೀಗೆ ಬಾ, ಕಾಲಗತಿಯಲ್ಲಿ ಎಲ್ಲವೂ ತಾನಾಗಿಯೇ ಸರಿಹೋಗುತ್ತದೆ, ಇಬ್ಬರೂ ಸೇರಿ ಚೆನ್ನಾಗಿ ಕುಡಿದು ಮರೆತುಬಿಡುವ, ಬಾ' ಎನ್ನಲೇ ಎಂದೂ ಜಾರ್ಜ್ ಚಿಂತಿಸಿದನು... ಅಷ್ಟರಲ್ಲಿ ತನ್ನ ಹಿಂದೆಯೇ ಭಯಂಕರವಾಗಿ ತನ್ನನ್ನು ಕುರಿತೇ ಒದರಿದಂತೆ ಕತ್ತಲಲ್ಲಿ ಕೇಳಿಸಿದ್ದರಿಂದ ಜಾರ್ಜ್ ಬೆಚ್ಚಿ ಪಕ್ಕಕ್ಕೆ ಸರಿದನು. ಒಂದು ಗಾಡಿ ಕತ್ತಲಲ್ಲಿ ಉರುಳುತ್ತ ಬಂದು ಕತ್ತಲಲ್ಲಿ ಮಾಯವಾಯಿತು. ಒಮ್ಮೆಲೆ ಬೋಸಿನಿ ಮರೆಯಾದನೆಂದು ಅವನಿಗೆ ತೋರಿತು. ಹಿಂದೆಯೂ ಮುಂದೆಯೂ ಓಡಾಡಿ ನೋಡಿದ. ಅಸಹ್ಯವಾದ ಭಯವೊಂದು ತನ್ನ ಹೃದಯವನ್ನು ಕಿವಿಚಿದಂತೆ ಅವನಿಗೆ ಭಾಸವಾಯಿತು. ಆ ಮಂಜಿನ ವಿಶಾಲವಾದ ತೆಕ್ಕೆಗಳಲ್ಲಿ ಅವಿತುಕೊಂಡ ಕರಾಳವಾದ ಭಯ – ಅವನ ಹಣೆಯಲ್ಲಿ ಬೆವರು ಹನಿಗೂಡಿತು.

''.... ಮರುದಿನ ಕೋರ್ಟಿನ ಸುನಾವಣೆಯಲ್ಲಿ ಬೋಸಿನಿಯ ಹೆಸರನ್ನು

ಮೂರು ಸಲ ಕೂಗಿದಾಗ ಉತ್ತರವಿಲ್ಲದ ಆ ಶಬ್ದ ವ್ಯಾಕುಲವಾಗಿ ಪ್ರತಿಧ್ವನಿಸಿತು... ಅದು ಜೇಮ್ಸನ ಮೇಲೆ ವಿಚಿತ್ರವಾದ ಪರಿಣಾಮ ಬೀರಿತು... ಅಜ್ಞಾತ ಭಯವೊಂದು ತನ್ನತ್ತ ಸರಿದು ಬರುತ್ತಿದ್ದಂತೆ ಅನ್ನಿಸಿತು. ಒಬ್ಬ ಮನುಷ್ಯ ಕಳೆದೇ ಹೋಗಬಹುದೆ ? ಎನ್ನುವ ವಿಚಾರ ಅವನ ಸುಖದ ಸುರಕ್ಷಿತತೆಯ ಆವರಣವನ್ನು ಪರಚಿನೋಯಿಸಿತು. ತನಗೇನಾಯಿತೆಂದು ಅವನಿಗೆ ಹೇಳಲಿಕ್ಕೆ ಬರದಿದ್ದರೂ ಅವನ ಮನಸ್ಸು ಅಸ್ವಸ್ಥವಾಯಿತು...''

ಬೋಸಿನಿಯ ಅಪಮೃತ್ಯುವಿನ ಸುದ್ದಿ ತಿಳಿದ ಕೂಡಲೆ ಐರೀನ್ ಉಟ್ಟ ಬಟ್ಟೆಯಲ್ಲೇ ಸೋಮ್ಸನ ಮನೆ ಬಿಟ್ಟು ಹೋಗುತ್ತಾಳೆ. ಎಲ್ಲಿ ಹೋದಳೆಂಬುದು ತಿಳಿಯದು. ಸೋಮ್ಸನು ತನಗೆ ಕೊಟ್ಟಿದ್ದ ಹಣ ವಸ್ತು ಒಡವೆ ಎಲ್ಲವನ್ನೂ ಇದ್ದಕ್ಕಿದ್ದಂತೆ ಬಿಟ್ಟು ಹೋಗುತ್ತಾಳೆ.

ಅಂದಿನಿಂದ ಸೋಮ್ಸನಿಗೆ ರಾಬಿನ್ ಹಿಲ್ ಮನೆಯಲ್ಲಿ ಆಸ್ಥೆ ಅಳಿದು ಹೋಗುತ್ತದೆ. ಅದನ್ನು ಅವನು ಮಾರಲಿಕ್ಕೆ ತೆಗೆದಾಗ ಹಿರಿಯ ಜೋಲಿಯನ್ ಕೊಳ್ಳುತ್ತಾನೆ. ಜೂನಳನ್ನು ಕರೆದುಕೊಂಡು ಅಲ್ಲಿ ಇರಲಿಕ್ಕೆ ಹೋಗುತ್ತಾನೆ. ಜೂನಳ ಸಹಾನುಭೂತಿಗೆ ಪಾತ್ರರಾದ ಬಡ ಕಲಾವಿದರಿಗೂ ಅದು ಆಶ್ರಯವಾಗುತ್ತದೆ. ಈಗ ಐರೀನಳೂ ನಿರ್ಗತಿಕಳಾದ್ದರಿಂದ ಜೂನ್ ಬೋಸಿನಿಯನ್ನು ಮರೆತು ಅವಳಲ್ಲಿ ಸಹಾನುಭೂತಿಯುಳ್ಳವಳಾಗುತ್ತಾಳೆ. ಆದ್ದರಿಂದ ಆಗಾಗ ಆ ಮನೆಗೆ ಬಂದು ಹೋಗುತ್ತಿರುತ್ತಾಳೆ. ಜೂನಳು ಮನೆಯಲ್ಲಿರುವದೇ ಕಡಿಮೆಯಾದ್ದರಿಂದ ಹಿರಿಯ ಜೋಲಿಯನ್ ಏಕಾಕಿಯಾಗುತ್ತಾನೆ. ಮಕ್ಕಳು ಮೊಮ್ಮಕ್ಕಳನ್ನು ಪ್ರೀತಿಸಬೇಕೆಂದಿದ್ದ ಅವನ ಅಂತಃಕರಣ ಬೇರಾವ ಅವಲಂಬನವನ್ನೂ ಕಾಣದೆ, ತಾರುಣ್ಯದಲ್ಲಿದ್ದರೂ ತನ್ನಂತೆಯೇ ಏಕಾಂಗಿಯಾಗಿದ್ದ ಐರೀನಳಲ್ಲಿ ಒಂದು ನೆಲೆ ಕಾಣುತ್ತದೆ. ಫೋರ್ಸಾಯಿಟರಲ್ಲಿ ಹಿರಿಯನಾಗಿದ್ದರೂ ಅವನ ಸಾಂತಾನಿಕ ಪ್ರೀತಿ ನೆಲೆ ಕಾಣದೆ ಒಂದು ವಿಧವಾಗಿ ಮಾಗಿದಾಗ ಅವನ ಬುದ್ಧಿಬಲ, ಮನೋಬಲ, ಸೌಂದರ್ಯಪ್ರೀತಿಗಳಿಂದಾಗಿ ಅವನಲ್ಲಿ ಐರೀನಳಿಗೆ ಗೌರವವೂ ಕರುಣೆಯೂ ಪ್ರೀತಿಯೂ ಉಂಟಾಗಿ ತನ್ನಿಂದ ಅವನ ಇಳಿವಯಸ್ಸಿನ ಕಾಲ ಸುಖಮಯವಾಗುವಂತಿದ್ದರೆ ಆಗಲಿ ಎಂದುಕೊಂಡು, ಐರೀನ್ ಆಗಾಗ ಬಂದು ಅವನಿಗೊಂದು ಆಸರೆಯಾಗುತ್ತಾಳೆ. ಒಂದು ನಿರಭ್ರವಾದ ಮಾಗಿಯ ದಿನದ ಹಿತವಾದ ಬಿಸಿಲಿನಲ್ಲಿ ರಾಬಿನ್ ಹಿಲ್ ಮನೆಯ ಎದುರಿನ ದೊಡ್ಡ ಓಕ್ ಮರದಡಿಯಲ್ಲಿ ಅವನು ಐರೀನಳನ್ನು ನಿರೀಕ್ಷಿಸುತ್ತ ಕುಳಿತಾಗ, ನೆಲಜಲ ಮುಗಿಲುಗಳ ಸೌಂದರ್ಯವನ್ನು ಅನುಭವಿಸುತ್ತ ಮಂಪರಿಗೊಳಗಾದ ಅವನು ಐರೀನ್ ಬಂದಾಗ ಈ ಲೋಕವನ್ನೇ ತ್ಯಜಿಸಿರುತ್ತಾನೆ.

'ಮ್ಯಾನ್ ಆಫ್ ಪ್ರಾಪರ್ಟಿ' ಮತ್ತು 'ಇನ್ ಚಾನ್ಸರಿ' ('ನ್ಯಾಯಾಲಯದಲ್ಲಿ')

ಕಾದಂಬರಿಗಳ ನಡುವಿನ ಹನ್ನೆರಡು ವರ್ಷಗಳ ಅವಧಿಯಲ್ಲಿ ಕಡಿದ ಕಥೆಯ ಕೊಂಡಿಗಳನ್ನು ಜೋಡಿಸುವದಕ್ಕೆ ''ಇಂಡಿಯನ್ ಸಮರ್ ಆಫ್ ಎ ಫೊರ್ಸಾಯಿಟ್'' ('ಫೊರ್ಸಾಯಿಟನೊಬ್ಬನ ಜೀವನದಲ್ಲಿ ಒಂದು ಮಾಗಿಯ ಹಗಲು') ಎಂಬ ಬಹುಸುಂದರವಾದ ಒಂದು ವಿಷ್ಕಂಭಕ (Interlude) ಇತ್ತು. ಅದರ ಕೇಂದ್ರಬಿಂದು ಹಿರಿಯ ಜೋಲಿಯನ್ನನ ಸುಖಾವಸಾನ. ಹಾಗೆಯೇ 'ಇನ್ ಚಾನ್ಸರಿ' ಮತ್ತು 'ಟುಲೆಟ್' ('ಬಾಡಿಗೆಗೆ') ಎರಡನೆಯ – ಮೂರನೆಯ ಕಾದಂಬರಿಗಳ ನಡುವಿನ ಇಪ್ಪತ್ತು ವರ್ಷಗಳನ್ನು ಜೋಡಿಸುವ ವಿಷ್ಕಂಭಕ 'ಆವೇಕನಿಂಗ್' ('ನಿದ್ದೆಯಿಂದೇಳುವದು') ಎಂಬುದರಲ್ಲಿ ಐರೀನಳು ಕಿರಿಯ ಜೋಲಿಯನ್‌ನಿಂದ ಪಡೆದ ಮಗು ಜೊನ್ (John ಅಲ್ಲ Jon) ಬಾಲ್ಯದಿಂದ ಕೈಶೋರಕ್ಕೆ ಬೆಳೆದ ಸುಂದರವಾದ ಚಿತ್ರವಿತ್ತು. ಆದರೆ ಇಂದು ಅದೇ ಪ್ರಕಾಶಕರು 'Complete and Unabridged' ಎಂದು ಸಾರಿ ಪ್ರಕಟಿಸಿದ ಆರು ಕಾದಂಬರಿಗಳ ಸಂಕಲನದಲ್ಲಿ ಈ ವಿಷ್ಕಂಭಕಗಳೇ ಇಲ್ಲ ! ಏಕೊ ತಿಳಿಯದು. ಹಿರಿಯ ಜೋಲಿಯನ್ ಹೇಳಿದಂತೆ 'ಇಂದಿನವರು ಅಲ್ಪಸಂತೋಷಿಗಳು.' ಅದು ಬಹುಶಃ ಪ್ರತಿಯೊಂದು ತಲೆಮಾರಿನದೂ ಅನುಭವವೆಂದು ತೋರುತ್ತದೆ.

'ಇನ್ ಚಾನ್ಸರಿ' ಆರಂಭದಲ್ಲಿ ಹಿರಿಯ ತಲೆಮಾರಿನ ಫೊರ್ಸಾಯಿಟರಲ್ಲಿ ಎಲ್ಲಕ್ಕೂ ಕಿರಿಯವನೊಬ್ಬ ಟಿಮೊಥಿ ಬದುಕಿರುತ್ತಾನೆ. ತನ್ನನ್ನು ಬಿಟ್ಟುಹೋದ ಐರೀನಳಿಗಾಗಿ ಸೋಮ್ಸ ಹನ್ನೆರಡು ವರ್ಷ ಕಾಯುತ್ತಿದ್ದು, ಅವಳು ಬರದಿದ್ದರೆ ಇನ್ನೊಬ್ಬಳಾದರೂ ಇರಲಿ ಎಂದು ಸೋಹೋ ವಿಭಾಗದಲ್ಲಿ ಒಂದು ರೆಸ್ತುರಾಂ ನಡೆಸುತ್ತಿದ್ದ ಫ್ರೆಂಚ್ ಮಹಿಳೆಯ ಮಗಳು ಆನೆಟ್ ಎಂಬುವಳ ಪರಿಚಯವನ್ನು ಬೆಳೆಸುತ್ತಿರುತ್ತಾನೆ. ಆನೆಟ್‌ಳನ್ನು ವರಿಸಬೇಕಾದರೆ ಐರೀನ್‌ಳಿಂದ ಬಿಡುಗಡೆಯಾಗಬೇಕು. ಅದಕ್ಕಾಗಿ ಕೋರ್ಟಿಗೆ ಹೋಗಬೇಕು. ಅದಕ್ಕೊಂದು ನೆಪಬೇಕು. ಹನ್ನೆರಡು ವರ್ಷ ಸುಮ್ಮನಿದ್ದು ಈಗ ಏನೆಂದು ನೆಪ ಹೇಳಬೇಕು ? ಇನ್ನೊಮ್ಮೆ ಐರೀನಳನ್ನೇ ಮರಳಿ ಪಡೆಯುವ ಯತ್ನ ಮಾಡುವ ಎಂದು ಅವಳ ಬೆನ್ನು ಹತ್ತುತ್ತಾನೆ. ಹಿರಿಯ ಜೋಲಿಯನ್ ತನ್ನ ಮೃತ್ಯುಪತ್ರದಲ್ಲಿ ಅವಳಿಗೂ ಒಂದು ಜೀವನಾಂಶವನ್ನು ಕಲ್ಪಿಸಿದ್ದರಿಂದ ಅವಳು ಈಗ ತನ್ನಷ್ಟಕ್ಕೆ ತಾನಿರುವದು ಸಾಧ್ಯವಾಗಿರುತ್ತದೆ. ಆ ಮೃತ್ಯುಪತ್ರದ ವಹಿವಾಟು ನಡೆಸುವ ಅಧಿಕಾರವನ್ನು ಕಿರಿಯ ಜೋಲಿಯನ್‌ಗೆ ಕೊಟ್ಟಿದ್ದರಿಂದ ಅವನೂ ಐರೀನಳೂ ಆಗೊಮ್ಮೆ ಈಗೊಮ್ಮೆ ಭೆಟ್ಟಿಯಾಗುತ್ತಿರುತ್ತಾರೆ. ಅವನ ಎರಡನೆಯ ಹೆಂಡತಿಯೂ ತೀರಿಹೋಗಿ ಅವನಿಗೀಗ ಇಬ್ಬರು ಹರೆಯಕ್ಕೆ ಬಂದ ಮಕ್ಕಳು (ಹಾಲೀ ಮತ್ತು ಜೋಲಿ) ಇದ್ದ ಕಾರಣ, ಐರೀನ್-ಜೋಲಿಯನ್ ನಡುವೆ ಸ್ನೇಹಕ್ಕಿಂತ ಹೆಚ್ಚಿನ ಭಾವನೆಗೆ ಆಸ್ಪದವಿರಲಿಲ್ಲ. ಆದರೆ ಐರೀನ್ ಮೇಲೆ ಸೋಮ್ಸ ತರುತ್ತಿದ್ದ ಒತ್ತಡ ಅವರಿಬ್ಬರನ್ನೂ ಒಟ್ಟುಗೂಡಿಸುತ್ತದೆ. ತನ್ನ ಮರುಮದುವೆಯ ಮಾರ್ಗ ಸುಗಮವಾಗಲೆಂದೂ, ಅವರಿಬ್ಬರನ್ನೂ ಅವಮಾನಿಸ

ಲೆಂದೂ ಸೋಮ್ಸನು ಅವರಿಬ್ಬರಲ್ಲಿ ವ್ಯಭಿಚಾರವನ್ನು ಆರೋಪಿಸಿ ಕೋರ್ಟಿನಲ್ಲಿ ಹೂಡಿದ ದಾವೆಯನ್ನು ಅವರು ಎದುರಿಸಲಿಕ್ಕೇ ಹೋಗುವದಿಲ್ಲ. ಸೋಮ್ಸ ಬಿಡುಗಡೆ ಪಡೆದು ಆನೆಟ್ಟಳನ್ನು ಮದುವೆಯಾಗುತ್ತಾನೆ. ಅವಳು ಅವನಿಗಿಂತ ಇಪ್ಪತ್ತುನಾಲ್ಕು ವರ್ಷ ಕಿರಿಯಳು. ಸೋಮ್ಸನ ತಂದೆ ಜೇಮ್ಸ ಮರಣೋನ್ಮುಖನಾಗಿ ಸೋಮ್ಸನಿಗೊಂದು ಗಂಡು ಮಗುವಾಗಲಿ ಎಂದು ಕಾಯುತ್ತಿದ್ದಾಗ ಹೆಣ್ಣುಮಗು ಆಗುತ್ತದೆ. ಅವಳೇ ಫ್ಲೂರ್. ಜೇಮ್ಸನಿಗೆ ಮರಣಕಾಲದಲ್ಲಾದರೂ ಶಾಂತಿ ಇರಲೆಂದು ಸೋಮ್ಸ ಗಂಡುಮಗುವಾಯಿ ತೆಂದು ಸುಳ್ಳು ಹೇಳುತ್ತಾನೆ. ಐರೀನಳಿಗೆ ಅಷ್ಟರಲ್ಲಿಯೇ ಜೋಲಿಯನ್ನನಿಂದ ಗಂಡುಮಗು ವಾಗಿರುತ್ತದೆ, ನಾಲ್ಕನೆಯ ಜೋಲಿಯನ್ನನೇ ಜೊನ್. ಹಿರಿಯ ಜೋಲಿಯನ್, ಕಿರಿಯ ಜೋಲಿಯನ್, ಮೂರನೆಯ ಜೋಲಿಯನ್ ಜೋಲೀ (ದಕ್ಷಿಣ ಆಫ್ರಿಕದಲ್ಲಿ ಕರುಳುಜ್ವರದಿಂದ ಸಾಯುತ್ತಾನೆ), ನಾಲ್ಕನೆಯ ಜೋಲಿಯನ್ ಜೊನ್.

ವ್ಯಕ್ತಿಗಳ ಕತೆಯ ಸುತ್ತ ಅಂದಿನ ಸಾಮಾಜಿಕ ಕತೆ ; ವಕೀಲರು, ಕೋರ್ಟುಗಳು, ಪುರಾವೆ ಸೃಷ್ಟಿಸುವದಕ್ಕೆ ಖಾಸಗೀ ಪತ್ತೇದಾರರು ; ಸಮಾಜವಾದದ ಬೆಳವಣಿಗೆ ; ರಾಜಕೀಯದಲ್ಲಿ ಬೋಅರರೊಡನೆ ಯುದ್ಧ, ವಿಕ್ಟೋರಿಯನ್ ಯುಗದ ಅವಸಾನ, ಇತ್ಯಾದಿಗಳ ಸ್ವಾರಸ್ಯವಾದ ಅರ್ಥಪೂರ್ಣವಾದ ವರ್ಣನೆಗಳಿಂದ ಕಾದಂಬರಿ ಪುಷ್ಟವಾಗಿ ಬೆಳೆಯುತ್ತದೆ. ಅದರ ಕೇಂದ್ರ ಸೋಮ್ಸ - ಐರೀನರ ಬಿಡುಗಡೆಯ ವ್ಯಾಜವಾದ್ದರಿಂದ ಹೆಸರು 'ಇನ್ ಚಾನ್ಸರಿ' ('ನ್ಯಾಯಾಲಯದಲ್ಲಿ').

'ಮ್ಯಾನ್ ಆಫ್ ಪ್ರಾಪರ್ಟಿ' ವಿಕ್ಟೋರಿಯ ಯುಗದ ಉಚ್ಛ್ರಾಯವನ್ನೂ 'ಇನ್ ಚಾನ್ಸರಿ' ಆ ಯುಗದ ಅವಸಾನವನ್ನೂ ವರ್ಣಿಸಿದಂತೆ, 'ಟು ಲೆಟ್' ಬೋಅರ್ ಯುದ್ಧದ ತರುವಾಯ ಮೊದಲನೆಯ ಮಹಾಯುದ್ಧದ ಪೂರ್ವದಲ್ಲಿ ಇಂಗ್ಲೆಂಡಿನ ಸ್ಥಿತಿಗತಿಗಳನ್ನು ವರ್ಣಿಸುತ್ತದೆ. ಸಮಾಜವಾದದ ಬೆಳವಣಿಗೆ, ಸ್ತ್ರೀ ಸ್ವಾತಂತ್ರ್ಯದ ಚಳುವಳಿ, ಸಾಹಿತ್ಯಕತೆ ಗಳಲ್ಲಿ ವಿಚಿತ್ರವೆನ್ನಿಸುವ ಹೊಸ ಪ್ರವೃತ್ತಿಗಳು, ಸ್ವಾಮಿತ್ವದ ಜವಾಬುದಾರಿಯನ್ನೊಲ್ಲದ ತರುಣ ಜನಾಂಗ – ಇವು ಈ ಕಾದಂಬರಿಯ ಸಾಮಾಜಿಕ ಹಿನ್ನೆಲೆ. ಸ್ಥಿರಾಸ್ತಿಯಾಗಲಿ ಚರಾಸ್ತಿಯಾಗಲಿ, ವ್ಯಕ್ತಿಸಂಬಂಧಗಳಾಗಲಿ, ಸ್ವಾಮಿತ್ವದಲ್ಲಿ ಇಟ್ಟುಕೊಳ್ಳುವುದಕ್ಕಿಂತ ಸದ್ಯಃ ಪ್ರಯೋಜನಕ್ಕಾದರೆ ಸಾಕು ಎಂಬ ಸಾರ್ವತ್ರಿಕ ಭಾವನೆಯನ್ನು ಸೂಚಿಸುವ ಹೆಸರು 'ಟು ಲೆಟ್'.

ವ್ಯಕ್ತಿಗಳಲ್ಲಿ ಹಿರಿಯ ತಲೆಮಾರಿನವರಾರೂ ಇಲ್ಲಿ ಉಳಿದಿಲ್ಲ. ಇಲ್ಲಿ ಸೋಮ್ಸನಿಗೆ ವಯಸ್ಸಾಗಿದ್ದರೂ ಆರೋಗ್ಯ ಕಾಯ್ದುಕೊಂಡಿದ್ದಾನೆ. ಆದರೆ ಅವನ ಜೀವಕ್ಕೆ ನಿಶ್ಚಿಂತೆಯೆಂಬುದಿಲ್ಲ. ದೊಡ್ಡವಳಾದ ಮಗಳನ್ನು ಕಾಯಬೇಕೊ ಚಿಕ್ಕವಳಾದ ಹೆಂಡತಿಯನ್ನು ಕಾಯಬೇಕೊ ಎಂಬ ಪರದಾಟ. ತನ್ನ ದೈನಂದಿನ ಕಾರ್ಯಭಾರದಿಂದ ನಿವೃತ್ತನಾಗಿ

ನಗರದ ಹೊರವಲಯದಲ್ಲಿ ನದೀತೀರದಲ್ಲಿ ಮನೆಮಾಡಿಕೊಂಡಿದ್ದರೂ ಆನೆಟ್ಟಳ ಮಿತ್ರರಿಂದ ಅವಳನ್ನು ದೂರ ಇಡಲಾಗುತ್ತಿರಲಿಲ್ಲ. ಸೋಮ್ಸನ ತಂಗಿ ವಿನಿಫ್ರೆಡ್‌ಳ ಮಗ ವಾಲ್ ಡಾರ್ಟಿ ಕಿರಿಯ ಜೋಲಿಯನ್ನನ ಮಗಳು ಹಾಲಿಯನ್ನು ಮದುವೆಯಾಗಿ ಬೇಸಾಯಕ್ಕೆಂದು ಒಂದು ಫಾರ್ಮ್ ಮಾಡಿಕೊಂಡಿರುತ್ತಾನೆ. ಅವರಿಬ್ಬರೊಡನೆ ಫ್ಲೂರ್ ರಾಬಿನ್ ಹಿಲ್‌ಗೆ ಹೋದಾಗ ಅಲ್ಲಿ ಐರೀನ್‌ಳ ಮಗ ಜೊನ್ ದರ್ಶನವಾಗುತ್ತದೆ. ಅವರಿಬ್ಬರ ನಡುವೆ ಬೆಳೆಯುತ್ತಿದ್ದ ಸಲುಗೆಯನ್ನು ತಡೆಯಬೇಕೊ ಬೇಡವೊ ಎಂಬ ಸಮಸ್ಯೆಯೂ ಸೋಮ್ಸನನ್ನು ಕಾಡುತ್ತದೆ. ಅವಳಿಂದಾದರೂ ಮರಳಿ ರಾಬಿನ್ ಹಿಲ್ ಸಂಬಂಧ ಬೆಳೆದರೆ ಎಂದು ಒಂದು ಮನಸ್ಸು ಚಿಂತಿಸುತ್ತಿದ್ದರೆ, ತನ್ನನ್ನು ಐರೀನ್ ತಿರಸ್ಕರಿಸಿದಂತೆ ತನ್ನ ಮಗಳನ್ನು ಐರೀನ್ ಮಗ ತಿರಸ್ಕರಿಸುವುದು ಬೇಡ ಎಂಬ ಭಯ ಇನ್ನೊಂದು ಮನಸ್ಸನ್ನು ಕಾಡುತ್ತದೆ. ಸೋಮ್ಸ-ಐರೀನರ ಪೂರ್ವ ವೃತ್ತಾಂತ ಆ ಹುಡುಗರಿಬ್ಬರಿಗೂ ತಿಳಿಯಕೂಡದೆಂದು ಎಲ್ಲರೂ ಎಚ್ಚರವಹಿಸಿದರೂ ಅದು ಅವರಿಗೆ ತಿಳಿದೇಹೋಗುತ್ತದೆ. ಆಗ ಹಿರಿಯರ ಸಂಕೋಚಗಳಿಗಿಂತ ಕಿರಿಯರ ಪರಸ್ಪರ ಆಕರ್ಷಣೆಯ ಕೈಯೇ ಮೇಲಾಗುವಂತಿದ್ದ ಸಂದರ್ಭದಲ್ಲಿ, ಕಿರಿಯ ಜೋಲಿಯನ್ ಹೃದಯಾಘಾತದಿಂದ ತೀರಿಹೋಗುತ್ತಾನೆ. ಆದರಿಂದ ಜೊನ್ ಐರೀನಳಿಗೆ ಇನ್ನೂ ಹತ್ತಿರವಾಗುತ್ತಾನೆ. ಮೊದಲೇ ನೊಂದ ಅವಳ ಮನಸ್ಸನ್ನು ಮತ್ತಷ್ಟು ನೋಯಿಸಲೊಲ್ಲದೆ ಅವನು ಫ್ಲೂರ್‌ಳಿಂದ ದೂರವಾಗುತ್ತಾನೆ. ಸೋಮ್ಸನ ನದೀತೀರದ ಮನೆಯ ಹತ್ತಿರವೇ ಇದ್ದ ಒಬ್ಬ ಶ್ರೀಮಂತ ಜಮೀನುದಾರ ಹುಡುಗ ಮೈಕೇಲ್ ಮಾಂಟ್ ಫ್ಲೂರ್‌ಳಿಂದ ಆಕರ್ಷಿತನಾಗಿ ಅವಳನ್ನು ಓಲಯಿಸುತ್ತಿದ್ದರೂ ಜೊನ್‌ನಲ್ಲಿ ಅನುರಕ್ತಳಾಗಿದ್ದ ಫ್ಲೂರ್ ಅವನನ್ನು ದೂರವಿಟ್ಟಿದ್ದಳು. ಆದರೆ ಸೋಮ್ಸನಿಗೆ ಅವನದು ಒಳ್ಳೆಯ ಸಂಬಂಧವೇ ಎಂದು ತೋರಿತ್ತು. ಈಗ ಜೊನ್‌ನಿಂದ ನಿರಾಶೆ ಹೊಂದಿದ ಫ್ಲೂರ್ ಸೋಮ್ಸನ ಪ್ರೋತ್ಸಾಹದಿಂದ ಮೈಕೆಲ್ ಮಾಂಟನನ್ನು ವರಿಸುತ್ತಾಳೆ.

'ಟು ಲೆಟ್' ಕೊನೆಯಲ್ಲಿ ಹಿಂದಿನ ತಲೆಮಾರಿನವರಲ್ಲಿ ಉಳಿದಿರುವವರು ಮುಖ್ಯವಾಗಿ ಸೋಮ್ಸ ಮತ್ತು ಐರೀನ್ ಇಬ್ಬರೇ. ಐರೀನ್ ಮಗನನ್ನು ಕರೆದುಕೊಂಡು ದೇಶತ್ಯಾಗ ಮಾಡುತ್ತಾಳೆ. ಇಲ್ಲಿಯವರೆಗಿನ ಕತೆ ಸಾಗಾ (ಮಹಾಕಾವ್ಯ) ಹೆಸರಿಗೆ ಯೋಗ್ಯವಾದರೆ, ಅದೇ ಸಂತಾನದ ಮುಂದಿನ ಕತೆಯ ಮೂರು ಕಾದಂಬರಿಗಳು ಸೇರಿ 'ಮಾಡರ್ನ್ ಕಾಮೆಡಿ' – 'ಹೊಸಕಾಲದ ಪ್ರಹಸನ'– ಆಗುತ್ತದೆ. ಸೋಮ್ಸ್ ಕೊನೆಯವರೆಗೆ ಇದ್ದರೂ ಏಕಾಕಿ. ಮತ್ತು ಮಹಾಕಾವ್ಯಕ್ಕೆ ವಸ್ತುವಾಗುವ ಗುಣಗಳು ಅವನಲ್ಲಿ ಎಂದೂ ಇರಲೇ ಇಲ್ಲ. ಅವರಲ್ಲಿ ಧೃತಿ ಎಂದೆನಿಸಿದ್ದು ಇವನಲ್ಲಿ ಕಾರ್ಪಣ್ಯವಾಗಿಯೂ, ಅವರಲ್ಲಿ ಕಿರಿತನವೆನಿಸಿದ್ದು ಇವನಲ್ಲಿ ದುರಭಿಮಾನವಾಗಿಯೂ ಅವರಲ್ಲಿ ಮಮತೆ ಎನಿಸಿದ್ದು ಇವನಲ್ಲಿ ಲೋಭವಾಗಿಯೂ ತೋರುತ್ತಿತ್ತು. ಕಿರಿಯ

ತಲೆಮಾರಿನವರಿಗೆ ಅವರ ದೊಡ್ಡ ಗುಣಗಳೂ ಬೇಡ, ಇವರ ಸಣ್ಣ ಗುಣಗಳೂ ಬೇಡ. ಯುದ್ಧಗಳಲ್ಲಾಗುವ ಸಾವು ನೋವುಗಳನ್ನೂ ದೊಡ್ಡ ಆಸ್ತಿಗಳ ಮೇಲೆ ಕರಭಾರದ ಹಾವಳಿಯನ್ನೂ ನೋಡಿ ಅವರಿಗೆ 'ಇಂದು ಮಜವಾಗಿರೋಣ, ನಾಳಿನ ಚಿಂತೆ ನಮಗೇಕೆ' ಎಂಬ ಲಘುಭಾವನೆಯೇ ಸಾಮಾಜಿಕ ಮನೋಧರ್ಮವಾಗಿದೆ. ಆದ್ದರಿಂದ ಅವರ ವ್ಯವಹಾರಗಳು ಪ್ರಹಸನಕ್ಕೆ ವಸ್ತುವಾಗಬಹುದೇ ಹೊರತು ಮಹಾಕಾವ್ಯಕ್ಕಲ್ಲ. ಕೊನೆಯ ಕಾದಂಬರಿ 'ಸ್ವಾನ್ ಸಾಂಗ್' ('ಹಂಸಗೀತೆ')ದಲ್ಲಿ ಸೋಮ್ಸ್ ತನ್ನ ಜೀವಮಾನವೆಲ್ಲವೂ ಬೆಲೆ ಇಳಿಕೆಯ ಭಯವಿಲ್ಲದ ಆಸ್ತಿಯ ಲೋಭದಿಂದಲೋ ನಿಜವಾದ ಕಲಾಭಿಮಾನ ದಿಂದಲೋ ಸಂಗ್ರಹಿಸಿದ್ದ ಚಿತ್ರಗಳು ಅಗ್ನಿಗೆ ಆಹುತಿಯಾಗುತ್ತಿದ್ದಾಗ, ಅವನ್ನು ಉಳಿಸಿಕೊಳ್ಳುವ ಹವಣಿಕೆಯಲ್ಲಿ ತಾನೇ ಬೆಂದು ಮರಣವನ್ನಪ್ಪುತ್ತಾನೆ.

ಸಾಧಾರಣವಾದ ವಸ್ತುಸಂಗತಿಗಳಲ್ಲಿಯ ಅಸಾಧಾರಣತೆಯನ್ನು ಕಾಣಿಸುವದೇ ನಿಜವಾದ ಕವಿಕರ್ಮ ಎಂಬ ವರ್ಡ್ಸ್‌ವರ್ತ್ ಕವಿಯ ವಾಕ್ಯ ಗಾಲ್ಸ್‌ವರ್ದಿ ಕೃತಿಗಳಲ್ಲಿ ಸಾರ್ಥಕವಾದಂತೆ ಸಾರ್ಥಕವಾಗಬಲ್ಲ ಬೇರೆ ಕಾದಂಬರಿಗಳನ್ನು ಕಾಣಬೇಕಾದರೆ ನಾವು ಥ್ಯಾಕರೆ, ಜೇನ್ ಆಸ್ಟೆನ್, ಫೀಲ್ಡಿಂಗ್‌ರಷ್ಟು ಹಿಂದೆ ಹೋಗಬೇಕು. ಮಾಮ್, ಗ್ರಾಹಾಂ ಗ್ರೀನ್, ಕಾನ್ರಾಡ್‌ರ ಕತೆಗಳ ಆಕರ್ಷಣೆ ಪಾತ್ರಕಥಾಸಂವಿಧಾನಗಳಲ್ಲಿದ್ದಷ್ಟೇ ಅವು ನಡೆಯುವ ಅಪರಿಚಿತ ದೇಶಾಂತರಗಳ ವರ್ಣನೆಯಲ್ಲೂ ಇರುತ್ತದೆ. ಗಾಲ್ಸ್‌ವರ್ದಿ ಕತೆಗಳು ಲಂಡನ್ ನಗರ, ಅದರ ಪರಿಸರಗಳನ್ನು ಬಿಟ್ಟು ಹೋಗುವದೇ ಬಹಳ ಕಮ್ಮಿ ಹೋದರೂ ವಿಚಿತ್ರ ಜನಗಳು ವಾಸಿಸುವ ವಿಚಿತ್ರ ದೇಶಗಳಿಗಲ್ಲ, ಆಕ್ಸ್‌ಫರ್ಡ್, ಕೇಂಬ್ರಿಜ್ ಇನ್ನೂ ದೂರವೆಂದರೆ ಪ್ಯಾರಿಸ್. ಪಾತ್ರಗಳಲ್ಲೂ ಅಷ್ಟೇ. ಗ್ರಾಹಾಂ ಗ್ರೀನ್, ಕಾನ್ರಾಡರ ಕತೆಗಳ ಪಾತ್ರಗಳು ವಿಚಿತ್ರ ವ್ಯಕ್ತಿಗಳು. ಕೆಲವರನ್ನಂತೂ ದುಃಸ್ವಪ್ನಗಳಲ್ಲಿ ಮಾತ್ರ ಕಾಣಬಹುದು. ಗಾಲ್ಸ್‌ವರ್ದಿ ಜನಗಳನ್ನು ನಾವು ಬೀದಿಯಲ್ಲಿ ನೆರೆಹೊರೆಯಲ್ಲಿಯೇ, ನಮ್ಮಲ್ಲಿಯೂ ಕೂಡ, ಕಾಣಬಹುದು. ಹಾರ್ಡಿಯ ಕತೆಗಳಲ್ಲಿ ದೇಶಕಾಲ ಪಾತ್ರಗಳ ವೈಚಿತ್ರ್ಯವಿಲ್ಲದಿದ್ದರೂ ಅಲ್ಲಿ ವ್ಯಕ್ತವಾಗುವ ಭಾವೋದ್ರೇಕಗಳಿಂದಲೂ, ದೈವದುರ್ವಿಲಾಸ ವೆನ್ನುವಂತಹ ಘಟನೆಗಳಿಂದಲೂ ಅವು ಸಾಮಾನ್ಯದ ಕತೆಗಳೆಂದು ಹೇಳಲಾಗುವದಿಲ್ಲ.

ಇಂತಹ ಪರಿಚಿತ ಪರಿಸರದಲ್ಲಿ ನಡೆಯುವ ಸಾಮಾನ್ಯ ಜನರ ಸಾಮಾನ್ಯ ಘಟನೆಗಳಿಗೇಕೆ ಇಷ್ಟು ದೊಡ್ಡ ಕೀರ್ತಿ ಎನ್ನುವದು ತಿಳಿಯಬೇಕಾದರೆ ಆ ಕಾದಂಬರಿಗಳನ್ನು ಮೂಲದಲ್ಲಿಯೇ ಓದಬೇಕು. ಆ ರುಚಿಯನ್ನು ಭಾಷಾಂತರದಲ್ಲಿ ತೋರಿಸುವದು ಅಸಾಧ್ಯ. ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತರಾದ ನಮ್ಮ ಸೃಜನಶೀಲ ಲೇಖಕರು ಈ ಸಾಹಿತ್ಯಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಆದರೆ ಆ ಸಾಹಿತ್ಯದ ಮೇಲೆ ಆಧಾರಿತ ಮೀಮಾಂಸೆ ಅರ್ಥಪೂರ್ಣವಾಗಬೇಕಾದರೆ ಆ ಪಾಶ್ಚಾತ್ಯ ಕೃತಿಗಳ ಸಮಗ್ರ ಭಾಷಾಂತರಗಳು ಲಭ್ಯವಿಲ್ಲದೆ ಸಾಧ್ಯವಿಲ್ಲ.

ಗಾಲ್ಸ್‌ವರ್ದಿಯವರ ವಸ್ತು ಆ ಕಾಲದ 'ಉಚ್ಚ ಮಧ್ಯಮ ವರ್ಗ' ಎನ್ನಿಸಿಕೊಳ್ಳುತ್ತಿದ್ದ ಜನಗಳ ಸ್ವಭಾವ ಚಿತ್ರಣ. ತನ್ನ ಮೇಲಿನ ವರ್ಗದವರ ಹಣಕಾಸು ಆಸ್ತಿವಿತ್ತಗಳ ವಹಿವಾಟುಗಳನ್ನು ಈ ವರ್ಗವೇ ನಿರ್ವಹಿಸುತ್ತಿತ್ತಲ್ಲದೆ ತನ್ನ ಕೆಳಗಿನ ವರ್ಗಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವದು, ದಾನಧರ್ಮ ಕಲೆ ಸಂಸ್ಕೃತಿಗಳಿಗೆ ಆಶ್ರಯ ಕೊಡುವದು, ಅಂತರ್‌ರಾಷ್ಟ್ರೀಯ ವ್ಯಾಪಾರ, ಹಣಕಾಸಿನ ವಹಿವಾಟಿನಲ್ಲಿ ರಾಷ್ಟ್ರದ ಪತ್ತು (credit) ಬೆಳೆಸುವುದು, ಇಂತಹ ವ್ಯವಹಾರಗಳಿಂದ ವಿಕ್ಟೋರಿಯ ಯುಗದ ಬ್ರಿಟನ್ ಎಂದರೆ ಈ ವರ್ಗವೇ ಎನ್ನುವಂತಿತ್ತು. ಮತ್ತು ರಾಜಕಾರಣದಲ್ಲಿ ಇವರ ಪ್ರಾಬಲ್ಯವೆಂದರೆ ಅಲ್ಪಸಂಖ್ಯಾತರ ಪ್ರಾಬಲ್ಯವೆಂದೂ ಹೇಳುವಂತಿರಲಿಲ್ಲ. ಏಕೆಂದರೆ ತಮ್ಮ ಮೇಲಿನ ವರ್ಗವನ್ನು ಇವರು ಹಿಮ್ಮೆಟ್ಟಿಸುತ್ತಿದ್ದರೂ ಅವರು ಕಟ್ಟಿದ ಸಂಸ್ಥೆಗಳನ್ನು (ಉದಾ : ಯೂನಿವರ್ಸಿಟಿಗಳು, ಪಬ್ಲಿಕ್ ಸ್ಕೂಲುಗಳು, ಕ್ಲಬ್ಬುಗಳು ಇತ್ಯಾದಿ) ಇವರು ಬಲಪಡಿಸುತ್ತಿದ್ದು, ತಾವೂ ಅವರೊಡನೆ ಸೇರಲು ಬಯಸುತ್ತಿದ್ದರು. ಕೆಳಗಿನ ವರ್ಗದ 'ಕೈವಾರಿ'ಗಳ ಬಾಯಿ ದೊಡ್ಡದಾಗಿದ್ದರೂ ಅವರಿಗೆ ಹೇಳಿಕೊಳ್ಳುವಂತಹ ಬೆಂಬಲವಿರಲಿಲ್ಲ. ಏಕೆಂದರೆ ಕೆಳವರ್ಗದವರಿಗೆ ಮತದಾನದ ಹಕ್ಕುಗಳನ್ನು ಕೊಟ್ಟವರೂ, ಕಾರ್ಖಾನೆಗಳಲ್ಲಿ ದುಡಿಯುವವರ ಹಿತರಕ್ಷಣೆಗೆ ಕಾನೂನುಗಳನ್ನು ಮಾಡಿದವರೂ ಇವರೇ. ಹಾಗಿರಲಿಲ್ಲವಾದರೆ ಯೂರೋಪಿನಲ್ಲೆಲ್ಲ ಬೀಸಿದ ಎಡ ಬಲ ಗಾಳಿಗಳು ಇಂಗ್ಲೆಂಡ್ ತಲುಪಿ ದುರ್ಬಲವಾಗುತ್ತಿದ್ದ ಕ್ರಮ ಇಂದಿಗೂ ಕಾಣುವಂತೆ ಇರುತ್ತಿರಲಿಲ್ಲ. ಪ್ರಪಂಚದ ಎಲ್ಲ ವ್ಯವಸ್ಥೆಗಳಲ್ಲೂ ಇರುವಂತೆ ಈ ವರ್ಗದಲ್ಲೂ ವ್ಯವಸ್ಥೆಯ ಮತ್ತು ವೈಯಕ್ತಿಕ ದೋಷಗಳು ಇದ್ದೇ ಇವೆ. ಆ ಗುಣಗಳಿಗಾಗಿಯೇ ಆ ವರ್ಗವನ್ನು ಮಹಾಕಾವ್ಯದ ವಸ್ತುವೆಂದು ಎತ್ತಿಕೊಂಡ ಗಾಲ್ಸ್‌ವರ್ದಿಗೆ ಅದರ ದೋಷಗಳು ಕಾಣಿಸುವದಿಲ್ಲವೆಂದಲ್ಲ. ದಕ್ಷಿಣ ಆಫ್ರಿಕದಲ್ಲಿ ಬೋಅರರೊಡನೆ ಯುದ್ಧ ಹೂಡಿದವರು ಈ ವರ್ಗದವರೇ ಆದರೂ ಅದನ್ನು ಅನ್ಯಾಯವೆಂದು ವಿರೋಧಿಸಿದವರೂ ಇದೇ ವರ್ಗಕ್ಕೆ ಸೇರಿದವರು. ಈ ವ್ಯವಸ್ಥೆಯಲ್ಲಿ ಬಂದ ಆಸ್ತಿಯ ಅನುಕೂಲವನ್ನು ಪಡೆಯುತ್ತಿದ್ದರೂ ಅದನ್ನು ಅಪಹಾಸ್ಯಕ್ಕೆ ಗುರಿ ಮಾಡುತ್ತ ಅದರ ಹೊರಗೆ ಇದ್ದವರಂತೆ ನಟಿಸುವ ಹಿರಿಯ ತಲೆಮಾರಿನ ಜಾರ್ಜ್, ಎರಡನೆಯ ತಲೆಮಾರಿನ ಕಿರಿಯ ಜೋಲಿಯನ್, ಮೂರನೆಯ ತಲೆಮಾರಿನ ಜೂನ್‌ರಂಥವರ ವಿರೋಧಾಭಾಸಗಳನ್ನು ಗಾಲ್ಸ್‌ವರ್ದಿ ನಿಷ್ಪಾಕ್ಷಿಕವಾಗಿ ತೋರಿದ್ದಾರೆ. ಆ ವರ್ಗದ ಉದ್ಯೋಗಶೀಲತೆ, ದುಂದು ಜೀವನದಲ್ಲಿ ಅರುಚಿ, ವೈಯಕ್ತಿಕ ಅಚ್ಚುಕಟ್ಟುತನಗಳಂತಹ ಗುಣಗಳೇ ಜೇಮ್ಸ್-ಸೋಮ್ಸರಂಥವರಲ್ಲಿ ಕಾರ್ಪಣ್ಯ, ಹೃದಯಶೂನ್ಯತೆ, ಛಾಂದಸತನಗಳಂತಹ ದೋಷಗಳಾಗುವುದನ್ನು ಮುಚ್ಚುಮರೆಯಿಲ್ಲದೆ ತೋರಿಸಲಾಗಿದೆ. ಹಾಗಿದ್ದರೂ ಗಾಲ್ಸ್‌ವರ್ದಿ ಉಚ್ಚವರ್ಗದ ಕೈವಾರಿಯೆಂದೂ, ಸಾಮಾಜಿಕ ಪ್ರಜ್ಞೆ

ಇಲ್ಲದವನೆಂದೂ ಅಭಿಪ್ರಾಯಕ್ಕೆ ಚಾಲನೆ ದೊರೆತದ್ದು ಒಂದು ಫ್ಯಾಶನ್ ಮಾತ್ರ. ಇಂತಹ ಫ್ಯಾಶನ್‌ಗೆ ಸೇರಿದ ಕೆಲವರು ಐರೀನ್ ಪಾತ್ರ ಸ್ತ್ರೀ ಸ್ವಾತಂತ್ರ್ಯದ ಮೊದಲ ನಿದರ್ಶನ ಎಂದು ಪ್ರತಿಪಾದಿಸಿದ್ದೂ ಉಂಟು !

ಸಾಹಿತ್ಯನಿರ್ಮಿತಿಯ ಇನ್ನೊಂದು ಸುಲಭಮಾರ್ಗವನ್ನು ಕಂಡವರು ತಮ್ಮ ತಮ್ಮ ಕತೆಗಳನ್ನೇ ಬರೆಯುವವರು. ಅವರು ಆತ್ಮಸಮರ್ಥನೆಗೆ ಪ್ರತಿಪಾದಿಸಿದ ಸಿದ್ಧಾಂತ ಸಾಹಿತಿಯ ಜೀವನಚರಿತ್ರೆ ಅವನ ಸಾಹಿತ್ಯದ ರಸಗ್ರಹಣಕ್ಕೆ ಸಹಾಯಕ ಎನ್ನುವದು. ಇಂಥವರು ಸೋಮ್ಸ-ಐರೀನರ ಪಾತ್ರಗಳ ಹಿಂದಿರುವ ವ್ಯಕ್ತಿಗಳನ್ನು ಗಾಲ್ಸ್‌ವರ್ದಿಯ ಜೀವನದಲ್ಲಿ ಗುರುತಿಸಿದ್ದಾರೆ. ಇದೊಂದು ಕ್ಷುದ್ರ ಕುತೂಹಲ. ಹಾಗೇ, 'ಮ್ಯಾನ್ ಆಫ್ ಪ್ರಾಪರ್ಟಿ' ಐರೀನಳ ಕತೆ ಎಂದು ಹೇಳುವುದೂ ಓದುಗರ ಒಂದು ವಯೋಧರ್ಮ ಅಥವಾ ಮನೋಧರ್ಮದ ವಿಶೇಷವೆಂದು ಮಾತ್ರ ಹೇಳಬಹುದು. ಆ ಕತೆಯಲ್ಲಿ ನಡೆದ ಕೆಲವು ಪ್ರಮಾದಗಳಿಗೆ ಐರೀನಳ ಚೆಲುವು ಕಾರಣವಾಗಿದ್ದಂತೆ, ಅಥವಾ ಇನ್ನೂ ಹೆಚ್ಚಾಗಿ, ಸೋಮ್ಸನ ಸಣ್ಣತನವೂ ಕಾರಣವಾಗಿತ್ತು. ಆ ಕುಟುಂಬದ ಐಕ್ಯಕ್ಕೆ ಕಾರಣವಾದ ಪರಸ್ಪರ ಆಸಕ್ತಿಯೂ ಕಾರಣವಾಗಿತ್ತು ; ಆ ವಿಶಿಷ್ಟ ವರ್ಗದ ಸಭ್ಯಸಂಸ್ಕೃತಿಯ ವಿಧಿನಿಷೇಧಗಳೂ ಕಾರಣವಾಗಿದ್ದವು. ಐರೀನಳ ಬಡತನದಂತೆಯೇ ಅವಳ ಹಟವೂ ಕಾರಣವಾಗಿತ್ತು. ಐರೀನಳಲ್ಲಿ ದೈವದತ್ತವಾದ ಚೆಲುವು, ಆ ಚೆಲುವನ್ನು ಹೇಗೆ ಹೆಚ್ಚಿಸಿ ತೋರಿಸಬೇಕೆಂಬ ಕಲೆ ಎರಡನ್ನು ಬಿಟ್ಟರೆ ಬೇರೆ ಯಾವ ಗುಣಗಳಿವೆ ಎಂದು ಪ್ರಶ್ನವನ್ನು ಕೇಳಿಕೊಂಡರೆ 'ಸುತರಾಂ ಇಲ್ಲ' ಎಂಬ ಉತ್ತರ ಆಶ್ಚರ್ಯಕರವಾದರೂ ಸತ್ಯವಾಗಿದೆ. ಸೋಮ್ಸ್ ಒಮ್ಮೆ ಅವಳ ವಿರೋಧಕ್ಕೆ ರೋಸಿ "ನೀನು ಬೇಡಿದ್ದನ್ನು ನಾನು ಎಂದಾದರೂ ಇಲ್ಲವೆಂದಿದ್ದೇನೆಯೆ ? ನಾನು ಜಿಪುಣನೆ ? ರೋಗಿಯೆ ? ಕುರೂಪಿಯೆ ? ಕುಡುಕನೆ ? ಹೆಂಡತಿಯನ್ನು ಹೊಡೆಯುತ್ತೇನೆಯೇ ? ನನ್ನಲ್ಲಿ ಯಾವ ದುರ್ಗುಣವನ್ನು ಕಂಡು ನೀನು ನನ್ನನ್ನು ದೂರವಿಡುತ್ತೀ" ಎನ್ನುವಾಗ ಸೋಮ್ಸನ ಬಗ್ಗೆ ಕನಿಕರ ಮೂಡುತ್ತದೆ. ಐರೀನಳ ಹಟ ಒಂದು ದೋಷವೆಂಬಂತೆ ಇಲ್ಲಿ ಕಂಡರೆ, ಸ್ವಂತ ತನ್ನ ಪ್ರೀತಿಯ ಮಗನ ಮನಸ್ಸನ್ನೇ ಅವಳು ಮುರಿದು ಅವನನ್ನು ಫ್ಲೂರಳಿಂದ ದೂರಮಾಡುವದನ್ನು (ಅವಳು ಸೋಮ್ಸನ ಮಗಳು ಎಂಬ ಒಂದೇ ಕಾರಣಕ್ಕಾಗಿ) ನೋಡಿದರೆ ಅವಳು ಅಪ್ಪಟ ಸ್ವಾರ್ಥಿಯೆಂದೇ ತೋರುತ್ತದೆ. ಅದೇ ತರುಣ ಜೊನ್ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ತನ್ನ ತಂದೆಯ ಮತ್ತು ತಾತನ ಔದಾರ್ಯವನ್ನು ಮಮತೆಯನ್ನು ಉಳ್ಳವನಾಗಿದ್ದಾನೆಂದು ಅವನನ್ನು ಮೆಚ್ಚುತ್ತೇವೆ.

ಈ ಕೃತಿಯ ಸಮಗ್ರ ಸೌಂದರ್ಯವನ್ನು ಗ್ರಹಿಸಬೇಕಾದರೆ ಏಕದೇಶೀಯವಾದ ಪ್ರಚಾರದ ದೃಷ್ಟಿಯಾಗಲಿ, ಮನೋವಿಜ್ಞಾನದ ದೃಷ್ಟಿಯಾಗಲಿ, ಸೌಂದರ್ಯ ಮೀಮಾಂಸೆಯ ದೃಷ್ಟಿಯಾಗಲಿ ಸಹಾಯಕವಾಗಲಾರದು. ಇದರ ಪೂರ್ಣ ಪ್ರಯೋಜನವನ್ನು ಪಡೆಯ ಬೇಕಾದರೆ ನಿಷ್ಪಾಕ್ಷಿಕ ಸೂಕ್ಷ್ಮದೃಷ್ಟಿಯಿಂದ ಜೀವನವನ್ನು ಸಮಗ್ರವಾಗಿ ಗಾಲ್ಸ್‌ವರ್ದಿ

ಚಿತ್ರಿಸಿರುವಂತೆ ಯಾವುದೇ ಪೂರ್ವಗ್ರಹವಿಲ್ಲದೆ ನೋಡಬೇಕು. ಇಲ್ಲಿರುವದು 'ಗಾಡ್ಸ್ ಪ್ಲೆಂಟಿ'. ಸೃಷ್ಟಿಯಲ್ಲಿ ಕ್ರೌರ್ಯ, ಪರುಷ್ಯ, ಬರ್ಬರತೆಗಳು ಇಲ್ಲವೆ ? ಇವೆ. ಆದರೆ ಅವು ವಿಕೃತಿಗಳು, ಪ್ರಕೃತಿ (ಸಹಜಸ್ಥಿತಿ)ಯಲ್ಲ. ಮನುಷ್ಯ ಬಯಸುವದು ಆರೋಗ್ಯವನ್ನು, ರೋಗವನ್ನಲ್ಲ. ಹಾಗೇ ಸಮಾಜ ಬಯಸುವದು ಪ್ರಕೃತಿಯನ್ನು, ವಿಕೃತಿಗಳನ್ನಲ್ಲ. ವಿಕ್ಟೋರಿಯನ್ ಯುಗದ ಸಂಸ್ಕೃತಿಯನ್ನು ಮೌಢ್ಯ ಧಾಂಬಿಕತೆ ಎಂದು ಹಳಿದವರು ಸಾಧಿಸಿ ದ್ದೇನು ? ಇಂದು ಸರ್ವತ್ರವ್ಯಾಪ್ತವಾದ ಅಪರಾಧ ಹಿಂಸೆ ಅತ್ಯಾಚಾರ ಅಶಾಂತಿಗಳು ಎಲ್ಲಿಂದ ಬಂದುವೆಂಬುದನ್ನು ಸಾಹಿತ್ಯ, ಕಲೆಗಳಲ್ಲಿ ವಿಕೃತಿಗಳನ್ನು ಪ್ರತಿಪಾದಿಸುವವರು ಒಂದು ಕ್ಷಣ ಪೂರ್ವಗ್ರಹಗಳನ್ನು ಮರೆತು ಚಿಂತಿಸಬೇಕು. ಸಮಾಜದಲ್ಲಿರುವ ಅಭಿಪ್ರಾಯಗಳಿಗೆ ಕುರುಡಾಗಿರುವವರ ಕಣ್ಣನ್ನು ಕಲೆಯಲ್ಲಿ ಅವುಗಳ ಪ್ರದರ್ಶನದಿಂದ ತೆರೆಯಿಸುತ್ತೇವೆನ್ನುವ ವಾದ ಎಂದಿಗೂ ಅರ್ಥಹೀನವಾದದ್ದೇ. ಒಂದು ಸಮಾಜದಲ್ಲಿ ಶಾಂತಿಸೌಹಾರ್ದಗಳು ನೆಲೆಸಬೇಕಾದರೆ ಜನಗಳೆಲ್ಲ ಸೂಕ್ಷ್ಮ ಸಂವೇದಿಗಳಾಗಿರಬೇಕು. ಬರೇ ಹಾಡುವವರು, ಕುಣಿಯುವವರು, ಅವರನ್ನು ನೋಡುವವರು ಇರುವ ಸಮಾಜ ಸಭ್ಯ ಸಮಾಜವಲ್ಲ, ಸುಸಂಸ್ಕೃತ ಸಮಾಜವಲ್ಲ. ಈ ಸುಸಂಸ್ಕೃತ ಗುಣವನ್ನು ಬಾಣನು 'ಅಗ್ರಾಮ್ಯತಾಸಿದ್ಧಿ' ಎಂದು ಕರೆದಿದ್ದಾನೆ. ಆ ಸಿದ್ಧಿ ಸಂಸ್ಕಾರದಿಂದ ಪಡೆಯಬೇಕಾದದ್ದು. ಎಲೈಟಿಸಮ್, ಶಿಷ್ಟಾಚಾರ ಎನ್ನುವದು ಬೈಗುಳದ ಮಾತಲ್ಲವೆಂದು ಇಂದು ಒತ್ತಿಹೇಳಬೇಕಾಗಿದೆ. ಆ ಪದವಿಯನ್ನು ಯಾವ ವರ್ಗವೂ ತನ್ನಷ್ಟಕ್ಕೆ ತಾನೇ ಅನ್ವಯಿಸಿಕೊಳ್ಳಲಾರದು. ಬೇರೆಯವರು ಯಾವ ಮಾರ್ಗ ಅನುಕರಣೀಯವೆಂದು ಒಪ್ಪಿ ನಡೆಯುವರೋ ಅವರು ಮಾತ್ರ ಎಲೈಟರು, ಶಿಷ್ಟರು. ಪಶುಬುದ್ಧಿಯನ್ನು ಬಿಡಲಾಗದ ಅನೇಕ ಪಶುವರ್ಗಗಳು ಹೇಳಹೆಸರಿಲ್ಲದಂತಾಗಿದ್ದರೂ ಇಂದೂ ಕ್ಷೀಣಿಸುತ್ತಿದ್ದರೂ ಶಿಷ್ಟರ ಮಾರ್ಗ ದರ್ಶನದಲ್ಲಿ ನಡೆದ ಮನುಷ್ಯ ಕುಲ ಬೆಳೆಯುತ್ತಲೇ ಇದೆ. ಆ ಮಾರ್ಗವನ್ನು ತಿರಸ್ಕರಿಸಿ ಬೆಳೆಯುವ ಜನಾಂಗಗಳು ತಮ್ಮ ವಿನಾಶದ ಸಾಧನೆಗಳನ್ನು – ಉದಾ : ಆಟಂ ಬಾಂಬ್, ಏಯ್ಡ್ಸ್, ಇತ್ಯಾದಿ – ತಾವೇ ಸಿದ್ಧಪಡಿಸಿವೆ. ಬದುಕುವ ಮಾರ್ಗವೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಅಗ್ರಾಮ್ಯತಾಸಿದ್ಧಿಯನ್ನು ಪಡೆಯುವದು. ಅದು ಅಭದ್ರಗಳನ್ನೇ ಎಲ್ಲೆಲ್ಲಿಯೂ ಕಾಣುವಂತಾದರೆ ಸಾಧ್ಯವಿಲ್ಲ. ಸಾಹಿತ್ಯ, ಕಲೆಗಳು ತಮ್ಮ ವಿಕೃತಿಗಳನ್ನು ತ್ಯಜಿಸಿ ಶಿಷ್ಟಮಾರ್ಗಕ್ಕೆ ಮತ್ತೆ ಬರಬೇಕು. ಆ ಕಾರ್ಯದಲ್ಲಿ ಗಾಲ್ಸ್‌ವರ್ದಿಯಂಥವರ ಕೃತಿಗಳ ಪುನರ್ಮೌಲ್ಯಾಂಕನ ಅವಶ್ಯವಾಗಿದೆ.

ಮಾರ್ಸೆಲ್ ಪ್ರೂಸ್ಟ್: 'ಸ್ವ್ಯಾನ್ಸ್ ವೇ'

ಕೆ. ನರಸಿಂಹಮೂರ್ತಿ

ಮಾರ್ಸೆಲ್ ಪ್ರೂಸ್ಟ್‌ನ (1871-1922) ಸ್ಥಾನ ವಿಶ್ವದ ಕಾದಂಬರಿಕಾರರ ಅಗ್ರ ಪಂಕ್ತಿಯಲ್ಲಿ. ಇಪ್ಪತ್ತನೆ ಶತಮಾನದಲ್ಲಿ ಅವನಿಗೆ ಸಮಸ್ಕಂಧನೆನ್ನಬಹುದಾದವನು ಥಾಮಸ್ ಮ್ಯಾನ್. ಶ್ರೇಷ್ಠ ಕಾದಂಬರಿಕಾರನೂ ವಿಮರ್ಶಕನೂ ಆದ ಇ.ಎಂ. ಫಾರ್‌ಸ್ಟರ್‌ನ ದೃಷ್ಟಿಯಲ್ಲಿ ಪ್ರೂಸ್ಟ್‌ನಷ್ಟು ಯಶಸ್ವಿಯಾಗಿ ಆಧುನಿಕ ಪ್ರಜ್ಞೆಯನ್ನು ವಿಶ್ಲೇಷಿಸಿರುವ ಕಾದಂಬರಿಕಾರ ಇನ್ನೊಬ್ಬನಿಲ್ಲ. ಛಾಯೆಗಳ, ಜಾಲಗಳ ಅಸತ್ಯದ ಲೋಕದಲ್ಲಿ ಹೋರಾಡಿ ಕಷ್ಟದಿಂದ ಆರ್ಜಿಸಿಕೊಂಡ ತನ್ನ ದರ್ಶನವನ್ನು ಪ್ರೂಸ್ಟ್ ತನ್ನ ಮಹತ್ವದ ಕಾದಂಬರಿಯಲ್ಲಿ ನೀಡಿದ್ದಾನೆ ಎಂದು ಇನ್ನೊಬ್ಬ ಕಾದಂಬರಿಕಾರ - ವಿಮರ್ಶಕ ಹೇಳುತ್ತಾನೆ. ನಿರಂತರವಾಗಿ ಮನಸ್ಸನ್ನು ಕಾಡುವ ಪ್ರೇಮದ ಅತ್ಯಂತ ಸ್ವೋಪಜ್ಞ ಮತ್ತು ನಿಷ್ಕೃಷ್ಟ ವಿಶ್ಲೇಷಣೆಗೆ ಪ್ರೂಸ್ಟ್‌ನ ಕಾದಂಬರಿಗೆ ಹೋಗಬೇಕೆಂದು ಒಬ್ಬ ವಿಮರ್ಶಕ ಹೇಳಿದರೆ, ಪ್ರಪಂಚದ ಅತ್ಯಂತ ಮಹತ್ವದ ಹಾಸ್ಯ ಲೇಖಕರಲ್ಲಿ ಪ್ರೂಸ್ಟ್ ಒಬ್ಬನೆಂದು ಇನ್ನೊಬ್ಬ ಹೇಳುತ್ತಾನೆ. ಒಂದೆಡೆ ಭಾವಗಳ ಮತ್ತು ಭಾವನೆಗಳ ಸೂಕ್ಷ್ಮಾತಿಸೂಕ್ಷ್ಮ ಪದರಗಳನ್ನು ತೆರೆದು ತೋರುವ ವಿಶ್ಲೇಷಣೆ, ಇನ್ನೊಂದೆಡೆ ಭಾವಗೀತೆಯಂತೆ ಮನೋಹರವಾದ ಕಾವ್ಯಮಯ ವರ್ಣನೆ, ಮತ್ತೊಂದೆಡೆ ಪಾತ್ರಗಳ ವಿಶಿಷ್ಟತೆಗೆ ಅನುಗುಣವಾದ ಸಂಭಾಷಣೆಗಳುಳ್ಳ ನಾಟಕೀಯ ದೃಶ್ಯ – ಹೀಗೆ ಪ್ರೂಸ್ಟ್‌ನ ಕಾದಂಬರಿ ಸರ್ವಗುಣಸಂಪನ್ನವಾಗಿದೆ. ಆತ್ಮವೃತ್ತಾತ್ಮಕವಾದ ಈ ಕಾದಂಬರಿ ಮುಖ್ಯವಾಗಿ ಸೃಷ್ಟಿಶೀಲ ಕಲಾವಿದನೊಬ್ಬನ ಸ್ವಭಾವದ ಮತ್ತು ಸಂವೇದನೆಯ ಸಂಸ್ಕರಣವನ್ನು ನಿರೂಪಿಸುವ ಒಂದು 'ವರ್ಧನ' ಕಾದಂಬರಿ ('ಬಿಲ್ಡುಂಗ್ಸ್ ರೊಮಾನ್'). ಇನ್ನೂ ನಿಷ್ಕೃಷ್ಟವಾಗಿ ಹೇಳಬೇಕಾದರೆ ಒಂದು 'ಕಲಾವಿದ ವರ್ಧನ' ಕಾದಂಬರಿ ('ಕುನ್‌ಸ್ಟ್ಲರ್ ರೊಮಾನ್'). ಕಾದಂಬರಿಕಾರ ಈ ಕಾದಂಬರಿಯನ್ನು ಬರೆಯಲು ಆವಶ್ಯಕವಾದ ಭಾವಪರಿಪಾಕ, ಪ್ರತಿಭಾಪರಿಣತಿ ಮತ್ತು ಜೀವನದ ಸಮಗ್ರದರ್ಶನವನ್ನು ಪಡೆದುಕೊಳ್ಳುವುದೇ ಕಾದಂಬರಿಯ ಮುಖ್ಯ ವಸ್ತುವಾದುದರಿಂದ ಕಾದಂಬರಿ ಕೊನೆಯಾಗುವುದು ಕಾದಂಬರಿಯನ್ನು ರಚಿಸಲು ನಾಯಕ ನಿಶ್ಚಯಿಸಿ ಕಾರ್ಯೋದ್ಯುಕ್ತನಾಗುವುದರೊಂದಿಗೆ. ಕಾದಂಬರಿಯ ಇನ್ನೊಂದು ಆಶಯ ಒಂದು ನಿರ್ದಿಷ್ಟ ಕಾಲಮಾನದ ಫ್ರೆಂಚ್ ಸಮಾಜದ ವಿಶ್ಲೇಷಣಾತ್ಮಕ ಚಿತ್ರಣ. ಈ ದಿಶೆಯಲ್ಲಿ ಪ್ರೂಸ್ಟ್‌ನ ಕಾದಂಬರಿ ಸೇಂಟ್ ಸೈಮನ್‌ನ ಸ್ಮೃತಿಗಳನ್ನೂ ಬಾಲ್ಜಾಕ್‌ನ ಕಾದಂಬರಿಗಳನ್ನೂ ನೆನಪಿಗೆ ತರುತ್ತದೆ. ಮೂರನೇ ನೆಪೋಲಿಯನ್‌ನ ಕಾಲದಿಂದ ಹಿಡಿದು ಮೊದಲನೇ ಜಾಗತಿಕ ಸಂಗ್ರಾಮದ ಕಡೆಯವರೆಗಿನ ಕಾಲದ ಫ್ರೆಂಚ್ ಸಮಾಜದ ಒಳ ಚಲನವಲನಗಳನ್ನು ಅದು ದಾಖಲಿಸುತ್ತದೆ. ಮೂರನೆಯದಾಗಿ, ಈ ಕಾದಂಬರಿ ಪ್ರೇಮದ, ಕಾಲದ ಮತ್ತು ಕಲೆಯ

ಸ್ವರೂಪದ ಸೂಕ್ಷ್ಮ ತಾತ್ವಿಕ ವಿವೇಚನೆಯನ್ನೊಳಗೊಂಡಿದೆ. ಪ್ರೂಸ್ಟ್‌ನ ದೃಷ್ಟಿಯಲ್ಲಿ ಪ್ರೇಮ ವಸ್ತುನಿಷ್ಠವಲ್ಲ; ಆತ್ಮನಿಷ್ಠ. ಅದು ಉತ್ಕಟಾವಸ್ಥೆಗೆ ತರುವುದು ಪ್ರೇಮ ಭಾಜನಗಳ ಅನುಪಸ್ಥಿತಿಯಲ್ಲಿ ಮತ್ತು ಅಸೂಯೆಯ ಪ್ರಭಾವದಲ್ಲಿ. ಕಾಲ ಸರ್ವಗ್ರಾಹಿ. ಆದರೆ ಕಾಲವನ್ನು ಮೀರಿ ನಿಲ್ಲಬಲ್ಲುದು ಕಲೆ. ಕಾಲವಶವಾದುದನ್ನು ಅನೈಚ್ಛಿಕ ಸ್ಮೃತಿಯಿಂದ ಮರಳಿಪಡೆದುಕೊಳ್ಳುವುದು ಸಾಧ್ಯ. ಕಾಲದ ಪ್ರಾಬಲ್ಯವನ್ನೂ ಅದು ಗೆಲ್ಲಬಲ್ಲ ಅನೈಚ್ಛಿಕ ಸ್ಮೃತಿಯ ಮತ್ತು ಕಲೆಯ ಮಹೋನ್ನತಿಯನ್ನೂ ಪ್ರೂಸ್ಟ್‌ನ ಕಾದಂಬರಿ ಸಾರುತ್ತದೆ.

ಪ್ರೂಸ್ಟ್‌ನ ಈ ಮೇರುಕೃತಿ 'ಅಳಿದ ಕಾಲದ ಅನ್ವೇಷಣೆಯಲ್ಲಿ' ಏಳು ಸಂಪುಟಗಳಲ್ಲಿ ಪ್ರವಹಿಸುವ ಮಹಾಕಾದಂಬರಿ ('ರೊಮಾನ್ ಫ್ಲೂವ್'). ಅದರ ಮೊದಲ ಸಂಪುಟವೇ 'ಸ್ವಾನ್‌ನ ಮಾರ್ಗ'. ಮಿಕ್ಕ ಆರು, 'ಮೊಗ್ಗೊಡೆವ ಬನದಲ್ಲಿ', 'ಗರ್ಮಾಂತೇ ಅವರ ಮಾರ್ಗ, 'ಸೋಡೋಂ ಮತ್ತು ಗೊಮ್ಮಾರ್', 'ಬಂದಿನಿ', 'ಪಲಾಯಿನಿ' ಮತ್ತು 'ಕಾಲ ಪ್ರತಿಲಾಭ'. ಕಾದಂಬರಿಯ ನಿರೂಪಕ-ನಾಯಕ ಬಾಲ್ಯದಲ್ಲಿ ರಜದಲ್ಲಿ ತಾಯಿತಂದೆಯ ರೊಡನೆ ಹೋಗುತ್ತಿದ್ದುದು ಪ್ಯಾರಿಸ್‌ನಿಂದ ಸ್ವಲ್ಪ ದೂರದಲ್ಲಿದ್ದ 'ಕಾಂಬ್ರೆ' ಎಂಬ ಊರಿಗೆ. ಅವನ ಚಿಕ್ಕಮ್ಮನ ಮನೆಯಿಂದ ಅವನ ತಾಯಿತಂದೆ ವಾಯುವಿಹಾರಕ್ಕಾಗಿ ನಡೆದು ಹೋಗುತ್ತಿದ್ದುದು ಎರಡು ದಿಕ್ಕುಗಳಲ್ಲಿ. ಒಂದು ದಿಕ್ಕಿಗೆ ಸ್ವಾನ್‌ನ ನಿವಾಸದ ಗಡಿಯಲ್ಲಿ ಹಾದುಹೋಗುವ ಸಮತಟ್ಟಿನ ದಾರಿ. ಇನ್ನೊಂದು ದಿಕ್ಕಿಗೆ ಗರ್ಮಾಂತೇ ಎಂಬ ಪ್ರತಿಷ್ಠಿತ ಕುಟುಂಬದ ನಿವಾಸದ ಗಡಿಯನ್ನು ಹಾದುಹೋಗುವ ನದಿಯ ದಡದ ಮೇಲೆ ಸಾಗುವ ದಾರಿ. ಮೊದಲನೆಯದನ್ನು 'ಸ್ವಾನ್‌ನ ಮಾರ್ಗ' ವೆಂದೂ ಅದು ಮೆಸೆಗ್ಲಿಸೆ ಎಂಬ ಊರಿಗೆ ಹೋಗುವ ದಾರಿಯಾದುದರಿಂದ 'ಮೆಸೆಗ್ಲಿಸೆ ಮಾರ್ಗ'ವೆಂದೂ ಕರೆಯುವ ವಾಡಿಕೆ. ಎರಡನೆಯದು 'ಗರ್ಮಾಂತೇ ಮಾರ್ಗ'. ಸ್ವಾನ್ ಮಧ್ಯಮ ವರ್ಗದ ಶ್ರೀಮಂತ. ಗರ್ಮಾಂತೇ ಕುಟುಂಬ ಸಮಾಜದ ಅತ್ಯುನ್ನತ ವರ್ಗಕ್ಕೆ ಸೇರಿದುದು. ಇವೆರಡು ಮಾರ್ಗಗಳೂ ಎರಡು ಜೀವನಕ್ರಮಗಳನ್ನೇ ಸಂಕೇತಿಸುತ್ತವೆ. ಕಾದಂಬರಿಯ ಆರಂಭದಲ್ಲಿ ನಾಯಕ ಮಾರ್ಸೆಲ್‌ನ ಬಾಲ್ಯದ ಕಲ್ಪನೆಯಲ್ಲಿ, ವಿರುದ್ಧ ದಿಕ್ಕುಗಳಲ್ಲಿ ಸಾಗುವ ಈ ಮಾರ್ಗಗಳು ಸಂಧಿಸುವ ಸಾಧ್ಯತೆಯೇ ಕಾಣುವದಿಲ್ಲ. ಕಾದಂಬರಿಯ ಕಡೆಯಲ್ಲಿ, ಗರ್ಮಾಂತೇ ಮಾರ್ಗವೂ ಮೆಸೆಗ್ಲಿಸೆಗೇ ಹೋಗುತ್ತದೆ ಎಂದು ಮಾರ್ಸೆಲ್‌ನಿಗೆ ಆಗುವ ಅರಿವು ಆ ವೇಳೆಗೆ ಸಮಾಜದ ಅತ್ಯುನ್ನತ ವರ್ಗದ ಸ್ಥಾನವನ್ನು ಮಧ್ಯಮವರ್ಗ ಆಕ್ರಮಿಸಿಕೊಳ್ಳುತ್ತಿದೆ ಎನ್ನುವುದನ್ನು ಸಂಕೇತಿಸುತ್ತದೆ.

'ಸ್ವಾನ್‌ನ ಮಾರ್ಗ'ವನ್ನು ನಾವು ಸ್ವಸಂಪೂರ್ಣ ಕಾದಂಬರಿಯಾಗಿಯೂ ಓದಿ ಸಂತೋಷಪಡಬಹುದು. ಆದರೆ ಅದು ಅರ್ಥಪೂರ್ಣವಾಗುವುದು 'ಅಳಿದ ಕಾಲದ ಅನ್ವೇಷಣೆಯಲ್ಲಿ'ಯ ಅವಿಭಾಜ್ಯ ಅಂಗವಾಗಿ, ಅದರ ಪ್ರಸ್ತಾವನೆಯಾಗಿ. 'ಸ್ವಾನ್‌ನ ಮಾರ್ಗ'ದ ನಾಲ್ಕು ಉಪಭಾಗಗಳಲ್ಲಿ ಅತ್ಯಂತ ದೀರ್ಘವಾದುದು 'ಸ್ವಾನ್‌ನ ಪ್ರೇಮ'.

ಇದಿಷ್ಟೇ ಒಂದು ಚಿಕ್ಕ, ಚೊಕ್ಕ, ಮಹತ್ವಪೂರ್ಣ ಕಾದಂಬರಿ. ಇಲ್ಲಿ ವರ್ಣಿತವಾಗಿರುವ ಸ್ವ್ಯಾನ್‌ನ ಪ್ರೇಮಾನುಭವ ತನ್ನ ಸಾದೃಶ್ಯದಿಂದ ಮುಂದೆ ಇತರ ಸಂಪುಟಗಳಲ್ಲಿ ವಿವರಿಸಲ್ಪಡುವ ಮಾರ್ಸೆಲ್‌ನ ಪ್ರೇಮಾನುಭವದ ಮೇಲೆ ಬೆಳಕು ಚೆಲ್ಲಿ ಅದಕ್ಕೆ ಪ್ರವೇಶಿಕೆಯಾಗುತ್ತದೆ. ಅಲ್ಲದೆ, ಸ್ವ್ಯಾನ್‌ನ ಕುಟುಂಬವೂ ಮಹಾಕಾದಂಬರಿಯಲ್ಲಿ ಪ್ರಮುಖಪಾತ್ರ ವಹಿಸುತ್ತದೆ. ಸ್ವ್ಯಾನ್‌ನ ಪತ್ನಿ ಗರ್ಮಾಂತೇ ಡ್ಯೂಕ್‌ನ ಪ್ರೇಯಸಿ ಯಾದರೆ, ಸ್ವ್ಯಾನನ ಮಗಳು ಗರ್ಮಾಂತೇ ಕುಟುಂಬಕ್ಕೆ ಸೇರಿದ ರಾಬರ್ಟ್ ದ ಸೇಂಟ್‌ಲೂಪ್‌ನ ಪತ್ನಿಯಾಗುತ್ತಾಳೆ. 'ಸ್ವ್ಯಾನ್‌ನ ಮಾರ್ಗ' ಮತ್ತು 'ಗರ್ಮಾಂತೇ ಮಾರ್ಗ' ಹೀಗೂ ಕೂಡುತ್ತವೆ. ಅಲ್ಲದೆ ಈ ಭಾಗದಲ್ಲಿ ಪ್ರೂಸ್ಟ್ ನಮಗೆ ಪರಿಚಯಿಸುವ ಮದಾಂ ವರ್ಡೂರಿನ್ ಮುಂದೆ ಗರ್ಮಾಂತೇ ರಾಜಕುಮಾರನನ್ನು ತನ್ನ ಎರಡನೆ ಮದುವೆಯಲ್ಲಿ ವರಿಸುತ್ತಾಳೆ. ಈ ಪ್ರಸಂಗ ಮಧ್ಯಮವರ್ಗದ ಪ್ರಗತಿಯನ್ನು ಸೂಚಿಸುತ್ತದೆ. 'ಸ್ವ್ಯಾನ್ ಮಾರ್ಗ'ದ ಉಳಿದ ಮೂರು ಉಪಭಾಗಗಳು ಮಾರ್ಸೆಲ್‌ನ ನೆನಪುಗಳನ್ನು ನಿರೂಪಿಸುತ್ತಾ ಒಬ್ಬನ ಸತ್ವದ ಸ್ವರೂಪವನ್ನು ವಿಶ್ಲೇಷಿಸುತ್ತದೆ ಮತ್ತು ಅನೈಚ್ಛಿಕ ಸ್ಮರಣಶಕ್ತಿಯ ಪ್ರಭಾವವನ್ನು ಸಾಬೀತುಪಡಿಸುತ್ತದೆ. ಈ ಉಪವಿಭಾಗಗಳು ನಿರೂಪಕ-ನಾಯಕನ ಬಾಲ್ಯದ ಕತೆಯಲ್ಲಿ ಮುಖ್ಯವಾದ ಎರಡು ಪ್ರಸಂಗಗಳನ್ನು ವಿವರಿಸುತ್ತಾ ಈ ಮಹಾಕಾದಂಬರಿಯ ಕ್ರಿಯೆ ಮುಂದೆ ಸಾಗುವ ಸ್ಥಳಗಳನ್ನು ಪ್ರಾಸಂಗಿಕವಾಗಿ ಹೆಸರಿಸಿ ಅದರ ತತ್ವ, ನಿರೂಪಣಾ ತಂತ್ರ ಮತ್ತು ಪಾತ್ರಚಿತ್ರಣ – ಇವುಗಳ ವೈಶಿಷ್ಟ್ಯವನ್ನು ಸೂಚಿಸುತ್ತವೆ. ಈ ಉಪಭಾಗಗಳು ಕ್ರಮವಾಗಿ 'ಪ್ರವೇಶಿಕಾ', 'ಕಾಂಬ್ರೆ' ಮತ್ತು 'ಸ್ಥಳಗಳ ಹೆಸರುಗಳು ; ಹೆಸರು.' 'ಸ್ವ್ಯಾನ್‌ನ ಮಾರ್ಗ'ದ ಮೊದಲ ವಾಕ್ಯ, 'ದೀರ್ಘಕಾಲದವರೆಗೆ ನಾನು ರಾತ್ರಿ ಬೇಗನೆ ಹಾಸಿಗೆ ಸೇರುತ್ತಿದ್ದೆ.' ಕಡೆಯ ವಾಕ್ಯ, 'ವರುಷಗಳಂತೆ ಮನೆಗಳೂ ಮಾರ್ಗಗಳೂ ಅಳಿದುಹೋಗುತ್ತವೆ.' ಮಹಾಕಾದಂಬರಿಯ ಕಡೆಯ ವಾಕ್ಯ, 'ಕಾಲಮಾನದಲ್ಲಿ ಬೇರೆ ಬೇರೆ ಯುಗಗಳನ್ನೇ ಸ್ಪರ್ಶಿಸುವಷ್ಟು ವಿಸ್ತೃತ ಪ್ರದೇಶವನ್ನು ತಮ್ಮದಾಗಿಸಿಕೊಂಡಿರುವ ಪಾತ್ರಗಳನ್ನು ಸಾಕಷ್ಟು ಆಯುರ್ಮಾನವಿದ್ದರೆ ಚಿತ್ರಿಸುತ್ತೇನೆ.' ಈ ಮಹಾಕಾದಂಬರಿಯ ವಸ್ತು – ಕಾಲದ ಅಳಿವು ಮತ್ತು ಅನೈಚ್ಛಿಕ ಸ್ಮೃತಿಯಲ್ಲಿ ಮತ್ತು ಕಲೆಯಲ್ಲಿ ಅದರ ಮೇಲೆ ಗೆಲುವು – ಮೊದಲಲ್ಲಿ ಮತ್ತು ಕಡೆಯಲ್ಲಿ ಧ್ವನಿತವಾಗುವುದನ್ನು ಗಮನಿಸಬಹುದು.

'ಪ್ರವೇಶಿಕೆ'ಯಲ್ಲಿ ಐಚ್ಛಿಕ ಸ್ಮೃತಿಯಿಂದ ಮರುಕೊಳಿಸುವ ಬಾಲ್ಯದ ಒಂದು ಪ್ರಸಂಗ ಮತ್ತು ಅನೈಚ್ಛಿಕ ಸ್ಮೃತಿ ಕೆಲಸ ಮಾಡುವ ಕ್ರಮ ನಿರೂಪಿತವಾಗಿವೆ. ಮೊದಲಲ್ಲಿ ಒಬ್ಬನ ಸ್ವತ್ವವು ಹೇಗೆ ಜೀವನದ ಅಸಂಖ್ಯ ಕ್ಷಣಗಳ ಅನುಭವಗಳ ನೆನಪಿನಿಂದ ರೂಪವಡೆಯುತ್ತದೆಂಬುದನ್ನು ನಿರೂಪಕ ನಿದ್ದೆಯಿಂದ ಏಳುವ ಮೊದಲ ಕ್ಷಣಗಳ ವರ್ಣನೆಯಲ್ಲಿ ಚಿತ್ರಿಸುತ್ತಾನೆ. ಎಚ್ಚರವಾದಾಗ ತಾನು ಯಾರು, ತಾನು ಎಲ್ಲಿದ್ದೇನೆ

ಎಂಬುದು ಕ್ರಮಕ್ರಮವಾಗಿ ಅರಿವಾಗುತ್ತದೆ. ಸತ್ವದ ಐಕ್ಯವನ್ನು ಸ್ಮೃತಿ ಮತ್ತು ಅಭ್ಯಾಸಬಲ ಕಾಪಾಡುತ್ತವೆ. ಬಳಿಕ ಮಾರ್ಸೆಲ್ ತನ್ನ ಬಾಲ್ಯದಲ್ಲಿ ತಾನು ರಜವನ್ನು ಕಳೆಯುತ್ತಿದ್ದ ತನ್ನ ಚಿಕ್ಕಮ್ಮನ ಊರು ಕಾಂಬ್ರೆಯನ್ನು ನೆನಪಿಗೆ ತಂದುಕೊಳ್ಳುತ್ತಾನೆ. ಸ್ಮೃತಿಯು ಅವನಿಗೆ ತೋರುವ ಅವನ ಚಿಕ್ಕಮ್ಮನ ಮನೆ, ಕೆಳಗಿದ್ದ ಎಲ್ಲರೂ ಕೂಡುವ ಕೋಣೆ, ಅದರಿಂದ ಮೇಲಕ್ಕೆ ಹೋಗುತ್ತಿದ್ದ ಮಹಡಿ ಮೆಟ್ಟಿಲುಗಳು, ಮೊದಲ ಅಂತಸ್ತಿನಲ್ಲಿದ್ದ ಅವನು ನಿದ್ರಿಸುವ ಕೋಣೆ, ಇಷ್ಟೆ ಅಲ್ಲಿ ಸದಾ ಸಂಜೆ ಏಳು ಗಂಟೆ. ಅವನ ಬಾಲ್ಯದಲ್ಲಿ ಪಡೆದ ಮುಖ್ಯವಾದ ಘಟನೆಗೆ ಇಷ್ಟು ಮಾತ್ರ ಆವರಣ ಸಾಕು. ಐಚ್ಛಿಕ ಸ್ಮೃತಿಗೆ ಇದಕ್ಕಿಂತ ಹೆಚ್ಚನ್ನು ತೋರಿಸಲು ಆಗದು. ನಿದ್ದೆ ಮಾಡುವ ಮುನ್ನ ಅವನಿಗೆ ತಾಯಿ ಶುಭರಾತ್ರಿಯನ್ನು ಕೋರಿ ಮುತ್ತುಕೊಟ್ಟು ಹೋಗುವ ವಾಡಿಕೆ. ಇದು ತಪ್ಪುತ್ತಿದ್ದುದು ಯಾರಾದರೂ ಅತಿಥಿ ಬಂದಾಗ ಮಗುವನ್ನು ಬೇಗ ಹೋಗಿ ಮಲಗು ಎಂದು ಕಳುಹಿಸಿಬಿಟ್ಟಾಗ. ಅವನ ತಾತನ ಸ್ನೇಹಿತನ ಮಗ ಸ್ವ್ಯಾನ್ ಭೇಟಿ ಇತ್ತ ಒಂದು ರಾತ್ರಿ ಹೀಗೆ ಆಗಿ ಮಾರ್ಸೆಲ್ ಏನಾದರೂ ಮಾಡಿ ತಾಯಿಯ ಮುತ್ತನ್ನು ಪಡೆದುಕೊಳ್ಳಬೇಕೆಂದು ಕಾದುಕೊಂಡಿದ್ದು ಸ್ವ್ಯಾನ್ ಹೊರಟ ಮೇಲೆ ತಾಯಿ ಮೇಲೆ ಬರುತ್ತಿದ್ದಾಗ ಅವಳಿಗೆ ದುಂಬಾಲು ಬೀಳುತ್ತಾನೆ. ಇದೊಂದು ರಾತ್ರಿ ಮಗನ ದುಃಖವನ್ನು ಮನಗೊಂಡು ತಾಯಿಗೆ ಮಗನೊಡನೆಯೇ ಮಲಗುವಂತೆ ತಂದೆ ಸೂಚಿಸುತ್ತಾನೆ. ಹಾಗೆಯೇ ಅವಳು ಮಗನೊಡನೆ ಮಲಗುತ್ತಾಳೆ. ಮಾರ್ಸೆಲ್‌ನ ದೃಷ್ಟಿಯಲ್ಲಿ ಈ ಅನುಭವ ಸಂತೋಷವನ್ನು ತಂದರೂ ಅವನ ಭಾವಾತಿರೇಕವನ್ನೂ ಶಿಸ್ತಿನ ಅಭಾವವನ್ನೂ ತಾಯಿಯ ಬಗ್ಗೆ ಅತಿಯಾದ ಪರಾವಲಂಬಿತೆಯನ್ನೂ ಅವನ ಜೀವನಕ್ರಮವನ್ನಾಗಿಯೇ ಮಾಡಿಬಿಡುತ್ತದೆ.

ಅನೈಚ್ಛಿಕ ಸ್ಮೃತಿ ಕೆಲಸ ಮಾಡುವುದನ್ನು ಈ ಉಪಭಾಗದ ಕಡೆಯಲ್ಲಿ ಪ್ರೂಸ್ಟ್ ಹೀಗೆ ನಿರೂಪಿಸುತ್ತಾನೆ : ಬಾಲ್ಯ ಕಳೆದ ಎಷ್ಟೋ ವರ್ಷಗಳ ಬಳಿಕ ಮಾರ್ಸೆಲ್‌ಗೆ ಒಮ್ಮೆ ಚಳಿಗಾಲದಲ್ಲಿ ಒಂದು ಬೇಸರದ ದಿನದ ಕೊನೆಯಲ್ಲಿ ಮನೆಗೆ ಅವನು ಹಿಂದಿರುಗಿದಾಗ ಅವನು ಸಾಮಾನ್ಯವಾಗಿ ತೆಗೆದುಕೊಳ್ಳದಿದ್ದ ಟೀ ಅನ್ನು ತಾಯಿ ಕೊಡುತ್ತಾಳೆ. ಜೊತೆಗೆ ಪುಟ್ಟ ಮ್ಯಾಡಿಲೈನ್ ಎನ್ನುವ ಕೇಕುಗಳನ್ನು ಕೊಡುತ್ತಾಳೆ. ಇಂಥ ಕೇಕ್ ಅದ್ದಿದ್ದ ಒಂದು ಚಮಚ ಬಿಸಿಯಾದ ಟೀ ಅನ್ನು ಅವನು ಗುಟುಕರಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಮೈ ನಡುಗಿ ಅವನ ಸ್ಮೃತಿಪಥದಲ್ಲಿ ಅವನ ಬಾಲ್ಯದ ಪ್ರಪಂಚ ಸರ್ವಾಂಗೀಣವಾಗಿ ಪ್ರತ್ಯಕ್ಷವಾಗುತ್ತದೆ. ಈಗ ಅವನಿಗೆ ಅನುಭವಕ್ಕೆ ಬಂದ ರುಚಿ ಹಿಂದೆ ಕಾಂಬ್ರೆಯಲ್ಲಿ ಭಾನುವಾರ ಬೆಳಿಗ್ಗೆ ಅವನ ಚಿಕ್ಕಮ್ಮನ ಕೋಣೆಯಲ್ಲಿ ಅವನು ಅವಳಿಗೆ ಶುಭದಿನವನ್ನು ಕೋರಲು ಹೋಗುತ್ತಿದ್ದಾಗ ಅವಳು ಟೀಯಲ್ಲಿ ಅಥವಾ ನಿಂಬೆಹೂ ಟೀಯಲ್ಲಿ ಅದ್ದಿದ ಇಂಥದೇ ಕೇಕನ್ನು ಕೊಡುತ್ತಿದ್ದು ಅದನ್ನು ಅವನು ಸವಿಯುತ್ತಿದ್ದ ರುಚಿಯ ನೆನಪನ್ನು ಎಚ್ಚರಿಸುತ್ತದೆ. ಅನೈಚ್ಛಿಕವಾದ ಇಂಥ ಸ್ಮೃತಿ ಸೃಷ್ಟಿಸುವುದು ಒಂದು ಕಾಲದ, ಒಂದು ಪ್ರದೇಶದ, ಒಂದು ಅನುಭವ ಪ್ರಪಂಚದ

ಮುಕ್ಕಾದ ಒಂದು ಚೂರನ್ನಲ್ಲ, ಇಡೀ ಆ ಕಾಲವನ್ನೇ, ಆ ಪ್ರದೇಶವನ್ನೇ, ಆ ಅನುಭವ ಪ್ರಪಂಚವನ್ನೇ. ಈ ಅದ್ಭುತ ಶಕ್ತಿಯಿಂದಲೆ ಮುಂದಿನ ಮಹಾ ಕಾದಂಬರಿಯ ಘಟ್ಟಗಳು ಕಣ್ಣಿಗೆ ಕಟ್ಟಿದಂತೆ ಪುನಃಸೃಷ್ಟಿಯಾಗುತ್ತದೆ.

'ಕಾಂಬ್ರೆ' ಸುಂದರ ಪ್ರಕೃತಿಚಿತ್ರಗಳಿಂದಲೂ ಮಾರ್ಸೆಲ್‌ನ ಪ್ರಥಮ ಪ್ರೇಮ ಪ್ರಸಂಗದ ನಿರೂಪಣೆಯಿಂದಲೂ ತಾನು ಕಲಾವಿದನಾಗಬಲ್ಲೆನೆಂಬ ಭರವಸೆಯನ್ನು ಅವನಿಗೆ ತಂದುಕೊಟ್ಟ ಸಂದರ್ಭದ ವಿವರಣೆಯಿಂದಲೂ ಮನನೀಯವಾಗಿದೆ. ತನ್ನ ತಂದೆ ತಾತಂದಿರೊಡನೆ ಮಾರ್ಸೆಲ್ ಸ್ವ್ಯಾನ್‌ನ ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾಗ ಸ್ವ್ಯಾನ್‌ನ ಉದ್ಯಾನದಲ್ಲಿ, ಈಜುಗೊಳದ ಬಳಿ ಮತ್ತು ದಾರಿಯ ಇಕ್ಕೆಲಗಳಲ್ಲಿ ಕಿಕ್ಕಿರಿದ ಬಗೆಬಗೆಯ ಬಣ್ಣಬಣ್ಣದ ಹೂಗಳು ಅವನ ಕಣ್ಮನಗಳನ್ನು ಸೆಳೆಯುತ್ತವೆ. ಹಾಥಾರ್ನ್ ಹೂಗಳ, ಅವುಗಳಲ್ಲಿಯೂ ಅಪರೂಪದ ನಸುಗೆಂಪು ಬಣ್ಣದ ಹಾಥಾರ್ನ್ ಹೂಗಳ ಅಂದವನ್ನು ಕಂಡ. ಅವುಗಳ ಸುಗಂಧವನ್ನೀಂಟಿದ ಅವನಿಗೆ ಹರ್ಷವೋ ಹರ್ಷ. ಉದ್ಯಾನದೊಳಗಿನ ಮಲ್ಲಿಗೆ ಮತ್ತಿತರ ಹೂಗಳ ಅಂಚುಗಟ್ಟಿದ್ದ ದಾರಿಯಲ್ಲಿ ಸ್ವ್ಯಾನನ ಸುಮಾರು ತನ್ನದೇ ವಯಸ್ಸಿನ ಮಗಳು ಬ್ಯಾರನ್ ಚಾರ್ಲ್ಸ್‌ನೊಂದಿಗೆ ನಡೆದು ಬರುವುದನ್ನು ಅವನು ಕಾಣುತ್ತಾನೆ. ಅವಳೂ ಅವನನ್ನು ನೋಡಿ ಒಂದು ಬಗೆಯ ಅಸಭ್ಯವೆಂದು ತೋರುವ ಸನ್ನೆ ಮಾಡುತ್ತಾಳೆ. ಅವಳನ್ನು ನೋಡಿದ ಆನಂದದ ಜೊತೆಗೆ ಅವಳು ತನಗೆ ಅಲಭ್ಯಳೆಂಬ ಭಾವನೆಯಿಂದ ಖಿನ್ನತೆಯೂ ಸೇರುತ್ತದೆ. ಹೀಗೆಯೇ ಗರ್ಮಾಂತೇ ಮಾರ್ಗದಲ್ಲಿ ಅವನು ನಡೆದಾಗ ವಿಮೋನ್ ಹೊಳೆಯೂ ಅದರ ನೈದಿಲೆಗಳೂ ಅವನ ಮನಸ್ಸನ್ನು ಸೆಳೆಯುತ್ತವೆ. ಒಮ್ಮೆ ಆ ಊರ ವೈದ್ಯನ ಮಗಳ ಮದುವೆಗಾಗಿ ಗರ್ಮಾಂತೇ ಡಚೆಸ್ ಬರುವಳೆಂದು ತಾಯಿಯಿಂದ ತಿಳಿದು ಅವನು ಚರ್ಚಿಗೆ ಹೋದಾಗ ಅವಳು ರೂಪವತಿಯಲ್ಲದಿದ್ದರೂ ಅವಳ ಪದವಿಯ ಚಾರಿತ್ರಿಕ ಮಹತ್ವ ಅವಳಿಗೆ ಮೋಹಕರೂಪವನ್ನು ಕೊಟ್ಟು ಅವನು ಅವಳನ್ನು ಪ್ರೀತಿಸುವಂತೆ ಮಾಡುತ್ತದೆ.

ಒಮ್ಮೆ ಮೆಸೆಗ್ಲಿಸೆ ದಾರಿಯಲ್ಲಿ ಹೋಗಿ ಹಿರಿಯರೊಡನೆ ಹಿಂದಿರುಗುತ್ತಿದ್ದಾಗ ವೈದ್ಯನ ಗಾಡಿ ಅವರ ಬಳಿ ಬರಲು ವೈದ್ಯನು ಅವರನ್ನು ಗಾಡಿಯಲ್ಲಿ ಕೂಡಿಸಿಕೊಳ್ಳುತ್ತಾನೆ. ಮಾರ್ಸೆಲ್ ಕೋಚ್‌ಮನ್‌ನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾನೆ. ಮಾರ್ಟಿನ್ ವಿಲ್ ಕಡೆ ಗಾಡಿ ಸಾಗುವಾಗ ಅದರ ಚರ್ಚಿನ ಜೋಡಿಗೋಪುರಗಳು ಬೇರೆ ಬೇರೆ ಜಾಗಗಳಿಂದ ಬೇರೆ ಬೇರೆ ರೀತಿಯಲ್ಲಿ ಕಾಣುತ್ತವೆ. ಒಮ್ಮೆ ದೂರದ ವ್ಯೂಸ್‌ವಿಕ್ ಚರ್ಚಿನ ಗೋಪುರದೊಡನೆ ಸೇರಿ ಅಂದವಾದ ಚಿತ್ರದಂತೆ ಕಾಣುತ್ತದೆ. ಕುಳಿತಲ್ಲಿಯೇ ಈ ಗೋಪುರಗಳನ್ನು ವರ್ಣಿಸಬೇಕೆಂದೆನಿಸಿ ಗಾಡಿ ಅಲುಗಾಡುವುದನ್ನೂ ಲೆಕ್ಕಿಸದೆ ಬರೆಯುತ್ತಾನೆ. ತಾನು ಕವಿಯಾಗಬೇಕೆಂಬ ಆಸೆ ಕೈಗೂಡುವುದೋ ಇಲ್ಲವೋ ಎಂದು

ಸಂದೇಹಿಸುತ್ತಿದ್ದ ಅವನಿಗೆ ಈ ಬರಹ ತಾನು ಕವಿಯಾಗಬಲ್ಲೆನೆಂಬ ಭರವಸೆಯನ್ನು ಮೊದಲ ಬಾರಿಗೆ ತರುತ್ತದೆ.

ಈ ಉಪಭಾಗದ ಇತರ ಸ್ವಾರಸ್ಯಗಳೆಂದರೆ ಅವನ ಚಿಕ್ಕಮ್ಮನ ಮತ್ತು ಅವಳ ನಿಷ್ಠ ಸೇವಕಿ ಫ್ರಾನ್ಸ್ವಾಳ ಸಂಕೀರ್ಣಸ್ವಭಾವದ ಚಿತ್ರಣ. ಆ ಊರಿನ ಸಂಗೀತಕಾರನ ಮಗಳ ಸಲಿಂಗಕಾಮದ ಸೂಚ್ಯದೃಶ್ಯ, ಲೆಗ್ರಾಂಡಿನ್ ಎಂಬ ಪ್ರತಿಷ್ಠಾಪೂಜಕನ ಹಾಸ್ಯಾಸ್ಪದ ನಡೆವಳಿಕೆ ಮತ್ತು ಮಾರ್ಸೆಲ್ ಚಿಕ್ಕಪ್ಪನ ಕೋಣೆಯಲ್ಲಿ ಅನಿರೀಕ್ಷಿತವಾಗಿ ಕಾಣುವ ನಸುಗೆಂಪುಬಣ್ಣದ ಉಡುಪಿನ ಸುಂದರಿಯ (ಅವಳೇ ಓಡೆಟ್ ಎಂದು ಮುಂದೆ ಮಾರ್ಸೆಲ್‌ಗೆ ತಿಳಿಯುತ್ತದೆ) ಬಗ್ಗೆ ಅವನು ಮನೆಯಲ್ಲಿ ಮಾತಾಡಿದಾಗ ಆಗುವ ಗೊಂದಲ.

ಇವೆರಡು ಉಪಭಾಗಗಳ ರಚನೆಗೆ ಆಧಾರ ಮಾರ್ಸೆಲ್‌ನ ಐಚ್ಛಿಕ ಸ್ಮೃತಿ ಮತ್ತು ಅನೈಚ್ಛಿಕ ಸ್ಮೃತಿ. 'ಸ್ವ್ಯಾನ್‌ನ ಪ್ರೇಮ' ಎಂಬ ಮುಂದಿನ ಉಪಭಾಗ ಮಾರ್ಸೆಲ್ ಹುಟ್ಟಿದ ಸುಮಾರು ಸಮಯದಲ್ಲಿ ನಡೆದ ಪ್ರಸಂಗವನ್ನು ನಿರೂಪಿಸುತ್ತದೆ. ಈ ಪ್ರಸಂಗವನ್ನು ತನಗೆ ಸ್ನೇಹಿತನಾಗುವ ಗರ್ಮಾಂತೇ ಕುಟುಂಬದ ಸಂಬಂಧಿ ಬ್ಯಾರನ್ ಚಾರ್ಲ್ಸ್‌ನಿಂದ ಮಾರ್ಸೆಲ್ ಪ್ರಾಯಶಃ ಕೇಳಿ ತಿಳಿಯುತ್ತಾನೆ. 'ಸ್ವ್ಯಾನ್‌ನ ಪ್ರೇಮ'ದ ಸ್ವಾರಸ್ಯವಿರುವುದು ಪ್ರೇಮದ ಉದಯದ, ಅದು ಉತ್ಕಟ, ಉನ್ಮಾದಕ ಅವಸ್ಥೆಗಳಿಗೇರುವುದರ ಮತ್ತು ಕಡೆಗೆ ಅದರ ಕಾವು ಇಳಿದು ಅದು ಅಸ್ತವಾಗುವುದರ ಗಾಢ, ಸೂಕ್ಷ್ಮ ವಿಶ್ಲೇಷಣೆಯಲ್ಲಿ ಮತ್ತು ಪ್ರೇಮದ ಸ್ಥಿತ್ಯಂತರಗಳನ್ನು ಮೂರ್ತವಾಗಿಸುವ ಕಾವ್ಯಮಯ ನಿರೂಪಣೆಯಲ್ಲಿ. ಅಲ್ಲದೆ ಈ ಪ್ರೇಮಕಥಾನಕ ಶ್ರೀಮಂತೆ ವರ್ಡೂರಿನ್‌ಳ ಮನೆಯ ಪಾರ್ಟಿಗಳ ವರ್ಣನೆಯಲ್ಲಿ ಆ ಕಾಲದ ಸಮಾಜವನ್ನು ನಾಟಕೀಯವಾಗಿ ಚಿತ್ರಿಸುತ್ತದೆ.

ಓಡೆಟ್-ದ-ಕ್ರೆಸಿಯ ರೂಪ ಸ್ವ್ಯಾನ್ ಇಷ್ಟಪಡುವಂತಹ ರೂಪವಲ್ಲ. ಅವನ ಸ್ನೇಹಿತರಲ್ಲೊಬ್ಬ ಒಂದು ನಾಟಕಮಂದಿರದಲ್ಲಿ ಅವನಿಗೆ ಅವಳ ಪರಿಚಯ ಮಾಡಿ ಕೊಟ್ಟಾಗ ಅವನ ಪ್ರತಿಕ್ರಿಯೆ ಆಕರ್ಷಣೆಯಲ್ಲ, ವಿಕರ್ಷಣೆ. ಅವರ ಸಂಬಂಧದ ಮೊದಲ ದಿನಗಳಲ್ಲಿ ಅವನನ್ನು ಒಲಿಸಿಕೊಳ್ಳಲು ಯತ್ನಿಸುವವಳು ಅವಳು. ಅವನನ್ನು ಕಾಣಲು ಮತ್ತೆ ಮತ್ತೆ ಅವಕಾಶ ಬೇಡುತ್ತಾಳೆ. ತಾನು ಹೋಗುತ್ತಿದ್ದ ಮಧ್ಯಮವರ್ಗದ ಶ್ರೀಮಂತೆ ಮದಾಂ ವರ್ಡೂರಿನ್‌ಳ ಪಾರ್ಟಿಗೆ ಅವಳು ಅವನನ್ನು ಕರೆದೊಯ್ಯುತ್ತಾಳೆ. ಈ ಪಾರ್ಟಿಗಳಿಂದ ಮರಳುವಾಗ ಅವಳನ್ನು ಸ್ವ್ಯಾನ್ ಅವಳ ಮನೆಗೆ ತಲುಪಿಸುವ ಪರಿಪಾಠ ಆರಂಭವಾಗುತ್ತದೆ. ಈ ಅಭ್ಯಾಸದಿಂದ, ಅವಳು ಅವನಿಗೆ ಪ್ರಿಯವಾಗುವಂತೆ ನಡೆದು ಕೊಳ್ಳುವುದರಿಂದ, ತನ್ನ ಪ್ರೇಮವನ್ನು ಹಲವು ವಿಧಗಳಲ್ಲಿ ಅವಳು ಪ್ರಕಟಿಸುವುದರಿಂದ, ಬರುಬರುತ್ತ ಅವಳು ಅವನ ಹೃದಯವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ. ಮದಾಂ ವರ್ಡೂರಿನ್‌ಳ ಪಾರ್ಟಿಗಳಲ್ಲಿ ಪಿಯಾನೋ ಬಾರಿಸುವ ಒಬ್ಬ ಸಂಗೀತಗಾರ ಕಾಂಬ್ರೆಯ

ಒಬ್ಬ ಸಂಗೀತ ರಚನಕಾರ ವಿನ್ಯೂಯಿಲ್ ರಚಿಸಿದ್ದ ಒಂದು ಸೊನಾಟಾವನ್ನು ನುಡಿಸುತ್ತಿರುತ್ತಾನೆ. ಅದು ರಸಿಕನಾದ ಸ್ವ್ಯಾನ್‌ನ ಮನಸ್ಸನ್ನು ಆನಂದದಲ್ಲಿ ಮಿಾಯಿಸುತ್ತದೆ. ಅವನ ಮತ್ತು ಓಡೆಟ್‌ಳ ಪ್ರೇಮದ ಅನನ್ಯತೆಯನ್ನು ಗುರುತಿಸುವಂತೆ ಭಾಸವಾಗುವ ಆ ಸೊನಾಟ ಅವರ ಪ್ರೇಮದ 'ರಾಷ್ಟ್ರಗೀತೆ'ಯಾಗುತ್ತದೆ. ಸ್ವ್ಯಾನ್ ಅಪರೂಪಕ್ಕೆ ಅಪರಾಹ್ನದಲ್ಲಿ ಟೀ ಹೊತ್ತಿಗೆ ಒಮ್ಮೆ ಓಡೆಟ್‌ಳ ಮನೆಗೆ ಹೋದಾಗ, ಅವಳು ಅಂದು ತೊಟ್ಟಿದ್ದ ಉಡುಪಿನಲ್ಲಿ, ಮಾಡಿಕೊಂಡಿದ್ದ ಅಲಂಕಾರದಲ್ಲಿ ಬಾಟಿಚೆಲ್ಲಿಯ ಸೆಸ್ಟೈನ್ ಚರ್ಚಿನ ಭಿತ್ತಿ ಚಿತ್ರದ ಜೆಥ್ರೋನ ಮಗಳು ಜಿಪ್ಪೋರಳಂತೆ ಅವನಿಗೆ ಅವಳು ಕಂಡುಬಂದು, ಅಂದಿನಿಂದ ಅವಳ ರೂಪದ ಆಕರ್ಷಣೆಯ ಬಗ್ಗೆ ಅವನಿಗಿದ್ದ ಸಂದೇಹಗಳು ಮಾಯವಾಗಿ, ಅವನು ಅವಳನ್ನು ನೆನಪಿಗೆ ತರುವ ಜಿಪ್ಪೋರಳ ಚಿತ್ರವನ್ನು ತನ್ನ ಮೇಜಿನ ಮೇಲೆ ಇಟ್ಟುಕೊಳ್ಳುತ್ತಾನೆ. ಒಂದು ಸಂಜೆ ಹೊಲಿಗೆ ಕೆಲಸ ಮಾಡುವ ಅಂದವಾಗಿದ್ದ ಒಬ್ಬ ಹೆಣ್ಣಿನೊಡನೆ ಹೆಚ್ಚು ಕಾಲ ಕಳೆದಿದ್ದುದರಿಂದ ಮದಾಂ ವರ್ಡೂರಿನಳ ಪಾರ್ಟಿಗೆ ಸ್ವ್ಯಾನ್ ಹೊತ್ತು ಮೀರಿ ಹೋಗುತ್ತಾನೆ. ಅವನು ಇನ್ನು ಮೇಲೆ ಬರಲಾರನೆಂದು ತಿಳಿದು ಓಡೆಟ್ ಹೊರಟುಹೋಗಿರುತ್ತಾಳೆ. ಅವಳು ಪ್ರೆವೊಸ್ಟ್ ಎಂಬ ಹೊಟೇಲಿಗೆ ಹೋದಳೆಂದು ತಿಳಿದು ಅವನು ಆ ಹೊಟೇಲಿನಲ್ಲೂ ಇತರ ಹಲವು ಹೊಟೇಲುಗಳಲ್ಲಿಯೂ ಅವಳಿಗಾಗಿ ಹುಡುಕಾಡುತ್ತಾನೆ. ಹೊಟೇಲುಗಳೆಲ್ಲಾ ಮುಚ್ಚ ತೊಡಗಿದಾಗ, ಮಾರ್ಗಗಳ ಗ್ಯಾಸ್ ದೀಪಗಳು ನಂದತೊಡಗಿದಾಗ, ಅವನು ನಿರಾಶನಾಗುತ್ತಾನೆ. ಅವನ ಆ ರಾತ್ರಿಯ ಚಿತ್ತಕ್ಷೋಭೆ ಅವನ ಹೃದಯದಲ್ಲಿ ಪ್ರೇಮೋದಯ ವಾಗಲು ಕಾರಣ ಮತ್ತು ಹಾಗೆ ಪ್ರೇಮೋದಯವಾದುದರ ಸಾಕ್ಷಿ. ಮೈಸನ್-ಡ-ಓರಿ ಎಂಬ ಹೊಟೇಲಿನ ಸಮೀಪಕ್ಕೆ ಅವನು ಬರುತ್ತಿದ್ದಾಗ ಹಠಾತ್ತನೆ ಅವನಿಗೆ ಓಡೆಟ್ ಎದುರಾಗುತ್ತಾಳೆ. ಸ್ವ್ಯಾನ್ ತನ್ನ ಕೋಚನ್ನು ಹಿಂದೆ ಬರಲು ಹೇಳಿ, ಅವಳ ಕೋಚ್ ಅನ್ನೇ ಹತ್ತಿ, ಅವಳ ಮನೆಯ ಕಡೆ ಸಾಗುತ್ತ, ಅವಳು ತನ್ನ ಉಡುಪಿನ ಮೇಲೆ ಎದೆಯ ಬಳಿ ಸಿಕ್ಕಿಸಿಕೊಂಡಿದ್ದ ಕಟ್ಲೇಯ ಎನ್ನುವ ವಿಶಿಷ್ಟ ಆರ್ಕಿಡ್ ಹೂಗಳನ್ನು ಸರಿಪಡಿಸುವ ನೆಪದಲ್ಲಿ ಅವಳನ್ನು ಆತ್ಮೀಯವಾಗಿ ಸ್ಪರ್ಶಿಸುತ್ತಾನೆ. ಮೊದಲ ಬಾರಿಗೆ ಅವಳನ್ನು ಚುಂಬಿಸುತ್ತಾನೆ. ಹಿಂದೆಂದೂ ಅವಳ ಮನೆಯನ್ನು ರಾತ್ರಿ ಪ್ರವೇಶಿಸದಿದ್ದವನು ಅವಳ ಮನೆಯನ್ನು ಪ್ರವೇಶಿಸುತ್ತಾನೆ ; ರಾತ್ರಿಯನ್ನು ಅವಳೊಡನೆ ಕಳೆಯುತ್ತಾನೆ. ಆಗಾಗ ಓಡೆಟ್ ಅವನಿಗಾಗಿ ನುಡಿಸುವ ವಿನ್ಯೂಯಿಲ್‌ನ ಸೊನಾಟಾ ಅವಳ ಸ್ವಭಾವದಲ್ಲಿ ಅವನಿಗೆ ಕಂಡುಬಂದ ಕೆಲವು ನ್ಯೂನತೆಗಳನ್ನು ತುಂಬಿಕೊಡುತ್ತದೆ ಮತ್ತು ಅವರ ಪರಸ್ಪರ ಪ್ರೇಮದ ಗಾಥೆಯಾಗುತ್ತದೆ.

ಪ್ರೇಮ ಉತ್ಕಟ, ಉನ್ಮಾದಕ ಅವಸ್ಥೆಗಳಿಗೆ ಏರುವುದು ಪ್ರೇಯಸಿಯ ನಿಷ್ಠೆಯ ಬಗ್ಗೆ ಸಂಶಯ ತಲೆದೋರಿ ಅವಳ ಪ್ರೇಮವನ್ನು ತಾನು ಕಳೆದುಕೊಳ್ಳುವ ಅಪಾಯ ಸ್ಥಿತಿ

ಒದಗಿದೆಯೆಂಬ ಅರಿವು ಮೂಡಿ ಮನಸ್ಸಿನಲ್ಲಿ ಭೀತಿ ಉದಿಸಿದಾಗ. ಒಂದು ಮಧ್ಯಾಹ್ನ ಅಕಸ್ಮಾತ್ ಅವನಿಗೆ ಬಿಡುವಾದಾಗ ಅಪರೂಪಕ್ಕೆ ಆ ಹೊತ್ತಿನಲ್ಲಿ ಸ್ವ್ಯಾನ್ ಅವಳ ಮನೆಗೆ ಹೋಗಿ ಬಾಗಿಲು ತಟ್ಟುತ್ತಾನೆ. ಬಾಗಿಲು ತೆರೆಯುವುದಿಲ್ಲ. ಒಂದು ಗಂಟೆ ಬಿಟ್ಟು ಮತ್ತೆ ಹೋಗಿ ಬಾಗಿಲು ತಟ್ಟಿದಾಗ, ಓಡೆಟ್ ಅವನನ್ನು ಬರಮಾಡಿಕೊಂಡು ಅವನು ಮುಂಚೆ ಬಂದಿದ್ದಾಗ ಸದ್ದು ಕೇಳಿ ಬಾಗಿಲು ತೆರೆಯುವುದರೊಳಗೆ ಅವನು ಹೊರಟುಹೋಗಿದ್ದ ನೆಂದು ವಿವರಣೆ ನೀಡುತ್ತಾಳೆ. ಅವರು ಹೀಗೆ ಮಾತಾಡುತ್ತಿದ್ದಾಗ ಹೊರಗೆ ಯಾರೋ ಬಾಗಿಲು ತಟ್ಟಿದಂತಾಗುತ್ತದೆ ಮತ್ತು ಅವಳು ಮನೆಯಲ್ಲಿಲ್ಲವೆಂದು ತಿಳಿದು ಅವರು ಹೊರಟುಹೋದಂತೆ ಸದ್ದಾಗುತ್ತದೆ. ಸ್ವ್ಯಾನ್ ಅವಳನ್ನು ಬೀಳ್ಕೊಳ್ಳುವಾಗ ಪೋಸ್ಟ್ ಮಾಡಲೆಂದು ಓಡೆಟ್ ಅವನ ಕೈಗೆ ಕೆಲವು ಪತ್ರಗಳನ್ನು ಕೊಡುತ್ತಾಳೆ. ಅವುಗಳಲ್ಲೊಂದರ ಮೇಲೆ ಮದಾಂ ವರ್ಡೂರಿನ್‌ಳ ಪಾರ್ಟಿಗಳಿಗೆ ಈ ಸಮಯಕ್ಕೆ ಸ್ವಲ್ಪ ಮುಂಚೆ ಬರತೊಡಗಿದ್ದ ಕಾಂಟೆ-ದ-ಫೋರ್ಷವಿಲ್‌ನ ವಿಳಾಸ ಇದ್ದುದು ಸ್ವ್ಯಾನ್‌ನಿಗೆ ಕಂಡು ಬಂದು ಅವನಿಗೆ ಸಂಶಯವಾಗಿ ಅವನು ಅದನ್ನು ಬೆಳಕಿಗೆ ಹಿಡಿದು ಓದಲು ಯತ್ನಿಸುತ್ತಾನೆ. ಅವನಿಗೆ ಓದಲು ಸಾಧ್ಯವಾದ ಒಂದು ವಾಕ್ಯ ಹೀಗಿರುತ್ತದೆ : 'ನಾನು ಬಾಗಿಲು ತೆರೆದುದು ಸರಿಯಾಯಿತು. ನನ್ನ ಚಿಕ್ಕಪ್ಪ ಬಂದಿದ್ದರು.' ಇದರಿಂದ ಸ್ವ್ಯಾನ್‌ನಿಗೆ ತಾನು ಅವಳ ಮನೆಯಲ್ಲಿದ್ದಾಗ ಹೊರಗೆ ಬಾಗಿಲು ತಟ್ಟಿ ವಿಚಾರಿಸಿಕೊಂಡವನು ಫೋರ್ಷವಿಲ್ ಇರಬೇಕೆಂದು ಊಹಿಸಲೂ ಸಾಧ್ಯವಾಗುತ್ತದೆ. ಮಾರ್ಕ್ವಿಸೆ–ದ–ಯೂವರ್ಟೆ ಕೊಟ್ಟ ಒಂದು ಪಾರ್ಟಿಯಲ್ಲಿ ಅಲ್ಲಿದ್ದ ಸಂಗೀತಗಾರನು ನುಡಿಸಿದ ಅವನಿಗೆ ಪ್ರಿಯವಾದ ವಿನ್ಟ್ಯೂಯಿಲ್‌ನ ಸೊನಾಟಾ ಪ್ರೇಮದ ಅನರ್ಘ್ಯತೆಯನ್ನು ಕೀರ್ತಿಸುತ್ತಲೇ ಅದರ ಆನಂದದ ಕ್ಷಣಭಂಗುರತೆಯನ್ನೂ ತೋರಿಸಿಕೊಡುತ್ತಾ ಮನಸ್ಸಿಗೆ ಒಂದು ಬಗೆಯಲ್ಲಿ ಸಮತೋಲನವನ್ನು ಒದಗಿಸುತ್ತದೆ. ಓಡೆಟ್‌ಳ ಪ್ರೇಮ ತನಗೆ ಮತ್ತೆ ಮೊದಲಿನಂತೆ ಲಭ್ಯವಾಗಲಾರದೆಂಬ ಭಾವನೆ ಅವನಲ್ಲಿ ಮೊಳೆಯುತ್ತದೆ. ಆ ಪಾರ್ಟಿಯಲ್ಲಿಯೇ ಕಾಂಬ್ರೆಯವನೇ ಆದ ಲಗ್ರಾಂಡಿನ್‌ನ ಮಗಳು, ಈಚೆಗೆ ಮದುವೆಯಾಗಿ ಮದಾಂ ಕಾಂಬ್ರೆಮೆರ್ ಆಗಿದ್ದ ಸುಂದರಿ ಅವನ ಕಣ್ಣಿಗೆ ಬೀಳುತ್ತಾಳೆ. ತನ್ನ ಕಾಂಬ್ರೆಗೆ ಮತ್ತೆ ಮರಳಬೇಕೆಂದು ಆಗ ಅವನಿಗೆ ಎನ್ನಿಸುತ್ತದೆ. ಸ್ವಲ್ಪ ದಿನಗಳಾದ ಮೇಲೆ ಅವನಿಗೆ ಬಂದ ಒಂದು ಅನಾಮಿಕ ಪತ್ರ ಓಡೆಟ್‌ಳ ಬಗ್ಗೆ ಕೆಟ್ಟ ಆರೋಪಗಳನ್ನು ಮಾಡುತ್ತದೆ. ಅವುಗಳಲ್ಲಿ ಒಂದು ಅವಳು ಸಲಿಂಗ ಕಾಮಿನಿಯೆಂಬುದು. ಇನ್ನೊಂದು ಅವಳನ್ನು ಕುಂಟಣಿಯರು ಸಂಪರ್ಕಿಸುತ್ತಿರುತ್ತಾರೆ ಎಂಬುದು. ಅವಳನ್ನು ಅವನು ವಿಚಾರಿಸಿದಾಗ ಅವನು ಆಶಿಸುವಂತೆ ಅವಳು ಈ ಆರೋಪಗಳನ್ನು ಸುಳ್ಳೆಂದು ತೆಗೆದುಹಾಕುವುದಿಲ್ಲ. ಎಷ್ಟೋ ವರ್ಷಗಳ ಹಿಂದೆ ಎಲ್ಲೋ ಎರಡು ಮೂರು ಸಲ ತಾನು ಸಲಿಂಗ ಕಾಮಿಯಾಗಿದ್ದಿರಬಹುದು, ಅಷ್ಟೆ ಎನ್ನುತ್ತಾಳೆ ಹಾಗೂ ಕುಂಟಣಿಯರು ಅವಳ ಮನೆಗೆ ಬಂದು ಅವಳೊಡನೆ ಮಾತಾಡಲು ಇಚ್ಛಿಸಿದಾಗ ಅವರನ್ನು ಸಂಧಿಸದೆ ತನ್ನ ಹತ್ತಿರ ಸುಳಿಯಬಾರದೆಂದು ಒರಟಾಗಿ ಹೇಳಿಕಳುಹಿಸಿ ಅಟ್ಟಿಬಿಟ್ಟಿದ್ದಳೆಂದು ಹೇಳುತ್ತಾಳೆ. ಈ

ಆರೋಪಗಳಲ್ಲಿ ಸತ್ಯಾಂಶ ಇಲ್ಲದಿಲ್ಲವೆಂದು ಅವನಿಗೆ ಎನಿಸಿ ಮನಸ್ಸಿನ ನೆಮ್ಮದಿ ಕೆಡುತ್ತದೆ. ತಿಂಗಳಿಗೆ ಐದು ಸಾವಿರ ಫ್ರ್ಯಾಂಕ್‌ಗಳಿಗೂ ಹೆಚ್ಚು ಹಣವನ್ನು ಅವಳಿಗೆ ತಾನು ಕೊಡುತ್ತಿರುವುದು ತನ್ನ ಪ್ರೇಮದ ಕುರುಹಾಗಿ ಎಂದು ತಿಳಿಯುತ್ತಾನೆಯಲ್ಲದೆ ತಾನು 'ಇಟ್ಟುಕೊಂಡಿರುವ' ಹೆಣ್ಣೆಂದು ಅವಳನ್ನು ಕಲ್ಪಿಸಿಕೊಳ್ಳಲಾರ.ಬರಬರುತ್ತಾ ಮೊದಲಿಗೆ ಅವಳು ಹೇಗೆ ಅವನಲ್ಲಿ ಆಸಕ್ತಳಾಗಿ ಅವನ ಬೆನ್ನುಹತ್ತಿದ್ದಳೊ ಹಾಗೆ ಅವನಲ್ಲಿ ಅವಳ ಆಸಕ್ತಿ ಕಡಿಮೆಯಾಗಿ ಅವನು ಅವಳ ಬೆನ್ನು ಹತ್ತುವಂತಾಗುತ್ತದೆ. ಈ ಸಮಯದಲ್ಲಿ ನಿರ್ಣಾಯಕವಾದ ಸಂಗತಿಯೆಂದರೆ ಮದಾಂ ವರ್ಡೂರಿನ್‌ಗೆ ಅವನ ಬಗ್ಗೆ ಇದ್ದ ಸ್ನೇಹಭಾವನೆ ಹೋಗಿ ಅದರ ಜಾಗವನ್ನು ಆಕ್ರೋಶ, ರೋಷ ಆಕ್ರಮಿಸುವುದು. ಅವಳ ಮನೆಯ ಪಾರ್ಟಿಯಲ್ಲಿ ಮಾತು ಗರ್ಮಾಂತೇ ಡಚೆಸ್‌ಳ ವಿಷಯಕ್ಕೆ ಬರುತ್ತದೆ. ಮದಾಂ ವರ್ಡೂರಿನ್‌ಗೆ ಪ್ರತಿಷ್ಠಿತ ವರ್ಗವನ್ನು ಯಾರು ಮೆಚ್ಚಿದರೂ ಸಹಿಸುವುದಿಲ್ಲ. ಅವಳ ಪಾರ್ಟಿಯಲ್ಲಿ ಸಾಮಾನ್ಯವಾಗಿ ಆ ವರ್ಗದ ಮಾತೆಂದರೆ ಅದರ ಬಗ್ಗೆ ಎಲ್ಲರೂ ನಗೆಯಾಡುತ್ತಾರೆ, ಅದನ್ನು ತಿರಸ್ಕಾರದಿಂದ ನೋಡುತ್ತಾರೆ. ಆದರೆ ಸ್ವ್ಯಾನ್‌ನಂತಹ ಸಭ್ಯನಿಗೆ ಇಂಥ ಸೋಗಲಾಡಿತನ ಸಾಧ್ಯವಾಗುವದಿಲ್ಲ. ಡಚೆಸ್‌ಳ ಬಗ್ಗೆ ಅವನಿಗಿದ್ದ ಒಳ್ಳೆಯ ಅಭಿಪ್ರಾಯವನ್ನು ಅವನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸುತ್ತಾನೆ. ಅಂದಿನಿಂದ ವರ್ಡೂರಿನ್ ಅವನ ಮೇಲೆ ಹಗೆ ಸಾಧಿಸುತ್ತಾಳೆ. ಓಡೆಟ್‌ಳನ್ನು ಅವನಿಂದ ಬೇರ್ಪಡಿಸಿ ಅವಳನ್ನು ಫೋರ್ಷವಿಲ್‌ನ ಜೊತೆ ಸೇರಿಸುತ್ತಾಳೆ. ಮೊದಮೊದಲು ವನವಿಹಾರಕ್ಕೆ ಹೋದಾಗ ಓಡೆಟ್‌ಳೊಡನೆ ಅವನನ್ನೂ ಕರೆಯುತ್ತಿದ್ದವಳು ಈಗ ಅವನನ್ನು ಆಹ್ವಾನಿತ ರೊಳಗೆ ಸೇರಿಸುವುದಿಲ್ಲ. ಒಮ್ಮೆ ಸ್ವ್ಯಾನ್‌ನಿಗೆ ಜೀವನವೇ ಸಾಕಾಗಿ ಸಾವು ಸ್ವಾಗತಾರ್ಹ ವೆನಿಸುತ್ತದೆ. ಸ್ವಲ್ಪ ಕಾಲದ ಬಳಿಕ ಮದಾಂ ವರ್ಡೂರಿನ್ ದೀರ್ಘಕಾಲದ ಸಮುದ್ರ ಪ್ರವಾಸಕ್ಕೆ ಓಡೆಟ್‌ಳನ್ನು ಒಬ್ಬಳನ್ನೇ ತನ್ನ ಇತರ ಮಿತ್ರರೊಂದಿಗೆ ಕರೆದೊಯ್ಯುತ್ತಾಳೆ. ಈ ಪ್ರವಾಸದಲ್ಲಿಯೂ ಓಡೆಟ್ ತನ್ನನ್ನು ಮರೆತಿಲ್ಲವೆಂದೂ ತನ್ನನ್ನು ವಿಶ್ವಾಸದಿಂದ ನೆನೆಯುತ್ತಿದ್ದಳೆಂದು ಸ್ವ್ಯಾನ್‌ನಿಗೆ ತಿಳಿದುಬಂದರೂ ಈಗ ಅವಳು ಪ್ರೇಯಸಿಗೆ ಬದಲು ಸ್ನೇಹಿತೆಯಂತೆ ಅವನಿಗೆ ತೋರುತ್ತಾಳೆ. ಈ ದೀರ್ಘಕಾಲದ ವಿಯೋಗ ಅವನ ಪ್ರೇಮಕ್ಕೆ ಕೊಡಲಿಪೆಟ್ಟಾಗುತ್ತದೆ. ಅದು ಅವನ ಪ್ರೇಮೋನ್ಮಾದವನ್ನು ಶಮನಗೊಳಿಸಿ ಅವಳನ್ನು ಅವಳ ನಿಜಸ್ಥಿತಿಯಲ್ಲಿ ಅವನು ಮತ್ತೆ ಕಾಣಲು ಕಾರಣವಾಗುತ್ತದೆ. ಫೋರ್ಷವಿಲ್ ಅವಳ ಪ್ರೇಮಿಯೆಂದು ಸಾಬೀತಾದರೂ ಅವನ ಮನಸ್ಸಿಗೆ ಈಗ ಗಾಸಿಯಾಗುವುದಿಲ್ಲ. ಒಮ್ಮೆ ಅವನಿಗೆ ಒಂದು ದುಃಸ್ವಪ್ನವಾಗುತ್ತದೆ. ಅದರಲ್ಲಿ ಸಮುದ್ರ ತೀರದಲ್ಲಿ ಮದಾಂ ವರ್ಡೂರಿನ್ ಓಡೆಟ್ ಫೋರ್ಷವಿಲ್ ಮತ್ತು ಮಾರ್ಸೆಲ್‌ನ ತಾತನೊಂದಿಗೆ ಅವನು ಸಂಚಾರ ಮಾಡುತ್ತಿರುತ್ತಾನೆ. ಇದ್ದಕ್ಕಿದ್ದಂತೆ ಓಡೆಟ್ ಫೋರ್ಷವಿಲ್ ಜೊತೆಗೆ ಸೇರಿಕೊಳ್ಳುತ್ತಾಳೆ. ಕನಸಿನೊಳಗಣ ಸ್ವ್ಯಾನ್‌ನ ಕಣ್ಣೀರನ್ನು

ಕನಸು ಕಾಣುವ ಸ್ವ್ಯಾನ್ ಒರೆಸಿ ಇದಕ್ಕೇಕೆ ಶೋಕಿಸುತ್ತೀ ಎಂದು ಸಮಾಧಾನಪಡಿಸುತ್ತಾನೆ. ಸಮುದ್ರದಷ್ಟೇ ಸ್ವ್ಯಾನ್‌ನ ಹೃದಯ ಬಡಿದುಕೊಳ್ಳುತ್ತಿರುತ್ತದೆ. ಅಷ್ಟು ಹೊತ್ತಿಗೆ ಬೆಳಗಾಗಿ ಎಷ್ಟೋ ಹೊತ್ತಾಗಿ ಸ್ವ್ಯಾನ್‌ನ ಸೇವಕ ಅವನನ್ನು ಎಚ್ಚರಿಸುತ್ತಾನೆ. ಮದಾಂ ಕಾಂಬ್ರೆಮೆರ್ ಕಾಂಬ್ರೆಗೆ ಹೊರಟಿದ್ದಾಳೆಂದು ತಿಳಿದು ತಾನೂ ಕಾಂಬ್ರೆಗೆ ಆ ದಿನ ಸ್ವ್ಯಾನ್ ಹೊರಡುವವನಿದ್ದಾನೆ. ತಾನು ಮೊದಲ ಸಲ ಓಡೆಟ್‌ಳನ್ನು ಕಂಡಾಗ ಅವಳು ಕಾಣಿಸುತ್ತಿದ್ದಂತೆ ಮತ್ತೆ ಅವನ ಕಲ್ಪನೆಯಲ್ಲಿ ಅವಳು ಕಂಡು, ಅವನು ಉದ್ಗರಿಸುತ್ತಾನೆ : 'ಛೆ, ನನಗೆ ಇಷ್ಟವಾಗದಂತಹ ಈ ಹೆಣ್ಣಿಗಾಗಿ ಇಷ್ಟು ವರ್ಷಗಳನ್ನು ವೃಥಾ ಪೋಲುಮಾಡಿದೆನಲ್ಲ. ಸಾಯುವುದಕ್ಕೂ ಮನಸ್ಸು ಮಾಡಿದ್ದೆನಲ್ಲ!' ಎಂದು.

'ಸ್ವ್ಯಾನ್‌ನ ಮಾರ್ಗ'ದ ಕಡೆಯ ಉಪಭಾಗ 'ಸ್ಥಳಗಳ ಹೆಸರುಗಳು : ಹೆಸರು' ('ಸ್ಥಳಗಳ ಹೆಸರುಗಳು : ಸ್ಥಳ' ಎನ್ನುವುದು ಎರಡನೆಯ ಸಂಪುಟದ ಕೊನೆಯ ಉಪಭಾಗ). ಮಾರ್ಸೆಲ್ ಮತ್ತು ಗಿಲ್ಬರ್ಟೆ ಇವರ ಬಾಲ್ಯದ ಪ್ರೇಮಪ್ರಕರಣದ ವರ್ಣನೆಯನ್ನು 'ಕಾಂಬ್ರೆ' ಉಪಭಾಗದಿಂದ ಇದು ಮುಂದುವರಿಸುತ್ತದೆ. ಕಡೆಗೂ ಸ್ವ್ಯಾನ್ ಮತ್ತು ಓಡೆಟ್ ದೈವಿಕ ವ್ಯಕ್ತಿಗಳಂತೆ ತೋರುತ್ತಾರೆ. ಪ್ಯಾರಿಸ್‌ನಲ್ಲಿ ಛಾಂಪ್ಸ್ ಎಲೀಸೀ ಉದ್ಯಾನದಲ್ಲಿ ಮಾರ್ಸೆಲ್ ತಾನು ಕಾಂಬ್ರೆಯಲ್ಲಿ ಕೆಲವು ಕ್ಷಣಗಳು ಮಾತ್ರ ಕಂಡಿದ್ದ ಗಿಲ್ಬರ್ಟೆಯನ್ನು ಮತ್ತೆ ಕಾಣುತ್ತಾನೆ, ಅವಳ ಮತ್ತು ಅವಳ ಗೆಳತಿಯರೊಡನೆ ಆಟದಲ್ಲಿ ಸೇರುತ್ತಾನೆ. ಒಂದು ದಿನ ಅವಳ ಸ್ನೇಹಿತೆಯರೆಲ್ಲಾ ಹೊರಟ ಮೇಲೆ ಗಿಲ್ಬರ್ಟೆ ಓಡೋಡಿ ಬರುತ್ತಾಳೆ, ಚಳಿಗಾಲದ ಮುಂಜು ಬಿದ್ದಿದ್ದ ನೆಲದ ಮೇಲೆ ಎರಡು ತೋಳುಗಳನ್ನೂ ಚಾಚಿಕೊಂಡು ಜಾರುತ್ತ ಅವನಿದ್ದ ಜಾಗವನ್ನು ಸಮೀಪಿಸುತ್ತಾಳೆ. ಇಬ್ಬರೇ ಸ್ವಲ್ಪಕಾಲ ಒಟ್ಟಿಗೆ ಇರುತ್ತಾರೆ. ಅವಳಿಗೂ ಅವನು ಇಷ್ಟವಾಗಿ ಮುಂದೊಂದು ದಿನ ಅವನಿಗೆ ಒಂದು ಅಗೇಟ್ ಕಲ್ಲಿನ ಗೋಲಿಯನ್ನು ತನ್ನ ನೆನಪಿಗಾಗಿ ಇಟ್ಟುಕೊಳ್ಳಲು ಕೊಡುತ್ತಾಳೆ. ಅವನ ಮೆಚ್ಚಿನ ಕಾದಂಬರಿಕಾರ ಬರ್ಗೋಟೆ ಬರೆದ ಒಂದು ಪುಸ್ತಕವನ್ನು ಅವನ ಕೋರಿಕೆಯಂತೆ ತಂದುಕೊಡುತ್ತಾಳೆ. ಆದರೆ ಒಂದು ದಿನ ತಾನು ಇನ್ನು ಮುಂದೆ ಆ ಉದ್ಯಾನಕ್ಕೆ ಬರುವುದಾಗುವುದಿಲ್ಲವೆಂದು ಸಂತೋಷದಿಂದ ಹೇಳಿ ಹೊರಟುಹೋದ ಮೇಲೆ ಅವನಿಗೆ ತಾನು ಮಾತ್ರ ಅವಳನ್ನು ಪ್ರೀತಿಸಿದ್ದೇನೆಂದೂ ಅವಳು ತನ್ನ ಬಗ್ಗೆ ಉದಾಸೀನಳಾಗಿದ್ದಳೆಂದೂ ಅರ್ಥವಾಗಿ ದುಃಖಿತನಾಗುತ್ತಾನೆ. ಸ್ವ್ಯಾನ್‌ನ ಮನೆಯ ಮುಂದೆ ನಡೆದುಹೋಗುತ್ತಾನೆ – ಗಿಲ್ಬರ್ಟೆ ಕಂಡಾಳೆಂದು. ಬೋಯಿ-ದ-ಬಲೋನ್‌ನಲ್ಲಿದ್ದ ಪ್ರಮದೋದ್ಯಾನವೆಂದು ಹೆಸರಾದ ಅಕೇಷಿಯಾಗಳ ಹಾದಿಯಲ್ಲಿ ಹಾಯುತ್ತಾನೆ, ಅವಳ ತಾಯಿ ಓಡೆಟ್ ಕಾಣಸಿಗುವಳೆಂದು. ತನ್ನ ಕೋಚಿನಿಂದಿಳಿದು ಓಡೆಟ್ ನಡೆದಾಗ ಮಾರ್ಸೆಲ್ ಅವಳಿಗೆ ತನ್ನ ಹ್ಯಾಟ್ ತೆಗೆದು ಗೌರವ ಸೂಚಿಸುತ್ತಾನೆ. ಮಾರ್ಸೆಲ್‌ಗೆ ಗಿಲ್ಬರ್ಟೆಯ ವಿಷಯದಲ್ಲಿ ಆಗುವ ಪ್ರೇಮ ಮತ್ತು ನಿರಾಶೆಯ ಅನುಭವಗಳು ಓಡೆಟ್‌ಳ ಬಗ್ಗೆ ಸ್ವ್ಯಾನ್‌ನ ಅನುಭವಗಳನ್ನು ಪ್ರತಿಫಲಿಸುತ್ತವೆ.

ಮಾರ್ಸೆಲ್‌ನ ವಿಶಿಷ್ಟ ಶಕ್ತಿ ಅವನ ಕಲ್ಪನಾಶಕ್ತಿ. ಮೋಹಕ ಸ್ಥಳಗಳ ಹೆಸರುಗಳು ಅವನು ಅಲ್ಲಿಗೆ ಹೋಗಲಾರದಿದ್ದಾಗ ಅವನ ಕಲ್ಪನೆಯಲ್ಲಿ ಮಾಯಾಲೋಕದ ಬಣ್ಣಗಳನ್ನು ಪಡೆದುಕೊಳ್ಳುತ್ತವೆ. ಅವನ ತಂದೆ ತಾಯಿ ಅವನನ್ನು ಬಾಲ್ಬೆಕ್, ಫ್ಲಾರೆನ್ಸ್, ವೆನಿಸ್‌ಗಳಿಗೆ ಕರೆದುಕೊಂಡು ಹೋಗುವ ಯೋಚನೆಯಲ್ಲಿರುತ್ತಾರೆ. ಆದರೆ ಡಾಕ್ಟರ್ ಅವನ ಆರೋಗ್ಯದ ದೃಷ್ಟಿಯಿಂದ ಬೇಡವೆನ್ನುತ್ತಾರೆ. ಈ ಉಪಭಾಗದಲ್ಲಿ ಅವನು ಕನಸು ಕಟ್ಟುವಂತೆ ಪ್ರೇರಿಸಿದ ಸ್ಥಳಗಳ ಹೆಸರುಗಳ ಒಂದು ಪಟ್ಟಿಯೇ ಇದೆ. ಮುಂದೆ ಅವನು ಬಾಲ್ಬೆಕ್‌ಗೆ ಹೋಗುತ್ತಾನೆ. ಹಲವು ವರ್ಷಗಳ ಮೇಲೆ ವೆನಿಸ್‌ಗೂ ಹೋಗುತ್ತಾನೆ. ಈ ಉಪಭಾಗ ಮುಂದಿನ ಕಥಾಭಾಗಗಳಿಗೆ ಪ್ರವೇಶಿಕೆಯಾಗುತ್ತದೆ.

'ಸ್ವ್ಯಾನ್‌ನ ಮಾರ್ಗ'ದ ಕಡೆಯ ಪುಟಗಳಲ್ಲಿ ಎಲ್ಲವೂ ಕಾಲವಶವಾಗುವುದರ ಸ್ಮರಣೀಯ ವರ್ಣನೆ ಇದೆ. ಹಲವು ವರ್ಷಗಳ ಮೇಲೆ ನಿರೂಪಕ ಮಾರ್ಸೆಲ್ ಬೋಯಿ-ದ-ಬಲೋನ್ ಉದ್ಯಾನಕ್ಕೆ ಹೋಗುತ್ತಾನೆ. ಅವನು ಹುಡುಗನಾಗಿದ್ದಾಗ ಓಡೆಟ್‌ಳಂತೆ ಸುಂದರಿಯರು ಓಡಾಡುತ್ತಿದ್ದ ಅಲ್ಲಿನ ಆಕೇಷಿಯಾ ಹಾದಿಯಂತಹ ಹಾದಿಗಳು ಈಗ ಪೂರ್ಣ ಬದಲಾಗಿವೆ. ಸ್ತ್ರೀಯರ ಮತ್ತು ಪುರುಷರ ಉಡುಪುಗಳು ಬದಲಿಸಿವೆ. ಹಿಂದಿನ ಉಡುಪುಗಳ ಚೆಲುವು ಮಾಯವಾಗಿದೆ. ಕೋಚ್‌ಗಳು ಎಷ್ಟು ಆಕರ್ಷಕವಾಗಿದ್ದವು ! ಈಗ ಬೇಸರ ತರುವ ಮೋಟಾರ್ ಕಾರುಗಳು ಕಾಣುತ್ತವೆ. ಅಂದು ಓಡಾಡುತ್ತಿದ್ದ ಕೆಲವು ಹೆಣ್ಣುಗಳು ಈಗ ಕಣ್ಣಿಗೆ ಬಿದ್ದರೆ ಮುಪ್ಪಿನ ದೆಸೆಯಿಂದ ತಮ್ಮ ಪ್ರೇತಗಳಂತೆ ಕಾಣುತ್ತಾರೆ. ಅವನು ಹಿಂದೆ ಕಂಡಿದ್ದ ಲೋಕ ಅಳಿದು ಹೋಗಿದೆ. ಸ್ಮೃತಿಕೋಶದಲ್ಲಿ ಶೇಖರವಾದುದಕ್ಕೆ ಪ್ರಸ್ತುತ ಅಸ್ತಿತ್ವವಿಲ್ಲ. ಯಾವುದರ ಸ್ಮೃತಿಯೂ ಅದು ಅಳಿದುದಕ್ಕಾಗಿ ಖೇದ ಅಷ್ಟೆ – ವರುಷಗಳಂತೆ ಮನೆಗಳೂ ಮಾರ್ಗಗಳೂ ಅಳಿದುಹೋಗುತ್ತವೆ. ಸರ್ವವನ್ನೂ ನುಂಗಿಹಾಕುವ ಕಾಲದ ಪ್ರಾಬಲ್ಯವನ್ನು ಕುರಿತ ಈ ಶೋಕಗೀತದೊಂದಿಗೆ 'ಸ್ವ್ಯಾನ್‌ನ ಮಾರ್ಗ' ಕೊನೆಗೊಳ್ಳುತ್ತದೆ.

'ಅಳಿದ ಕಾಲದ ಅನ್ವೇಷಣೆಯಲ್ಲಿ' ಮಹಾಕಾದಂಬರಿಯ ಮೊದಲ ಸಂಪುಟ 'ಸ್ವ್ಯಾನ್‌ನ ಮಾರ್ಗ' ನಾಯಕ-ನಿರೂಪಕ ಮಾರ್ಸೆಲ್ ಬಾಲ್ಯಸ್ಮೃತಿಗಳ, ಸ್ವ್ಯಾನ್‌ನ ಪ್ರೇಮೋನ್ಮಾದ ಪ್ರಸಂಗದ ಮತ್ತು ಅಂದಿನ ಸಮಾಜದ ವರ್ಗಗಳ ಏರಿಳಿತಗಳ ಒಂದು ಅದ್ಭುತ ಮನೋಜ್ಞ ಚಿತ್ರ ಮತ್ತು ಅನೈಚ್ಛಿಕ ಸ್ಮೃತಿ ಮತ್ತು ಕಲೆ ಹಾಗೆ ಕಾಲವಶವಾದುದನ್ನು ಮತ್ತೆ ಉಳಿಸಿಕೊಳ್ಳಬಹುದು ಎಂಬುದಕ್ಕೆ ಚಿರಸಾಕ್ಷಿ.

ಸಾಮರ್ಸೆಟ್ ಮಾಮ್ : 'ಆಫ್ ಹ್ಯೂಮನ್ ಬಾಂಡೇಜ್'

ಎಚ್. ಸತ್ಯನಾರಾಯಣ

ವಿಲಿಯಂ ಸಾಮರ್ಸೆಟ್ ಮಾಮ್ (1874-1965) ಇಂಗ್ಲಿಷ್ ಕಾದಂಬರಿಕಾರ, ನಾಟಕಕಾರ ಹಾಗೂ ಕಥೆಗಾರ. ಸ್ಪಷ್ಟತೆ ಹಾಗೂ ಆಲಂಕಾರಿಕವಲ್ಲದ ಶೈಲಿ ಅವನ ವೈಶಿಷ್ಟ್ಯಗಳು. ಮಾನವಸ್ವಭಾವದ ನಿಕಟವಾದ ತಿಳಿವಳಿಕೆ ಇವನ ಬರಹಗಳಲ್ಲಿ ಎದ್ದು ಕಾಣುತ್ತದೆ. ಬರಹವನ್ನು ವೃತ್ತಿಯನ್ನಾಗಿ ಮಾಡಿಕೊಂಡವ ಈತ. 1874ರ ಜನವರಿ 25 ರಂದು ಪ್ಯಾರಿಸಿನಲ್ಲಿ ಹುಟ್ಟಿದ ಮಾಮ್ ತನ್ನ ಹತ್ತನೆಯ ವಯಸ್ಸಿನಲ್ಲಿ ಅನಾಥನಾದ. ಅವನ ಚಿಕ್ಕಪ್ಪ ಅವನನ್ನು ಸಾಕಿ ಸಲಹಿದ. 1897ರಲ್ಲಿ ವೈದ್ಯನಾದ. ಅನಂತರ ಬರಹವನ್ನೇ ವೃತ್ತಿಯನ್ನಾಗಿ ಸ್ವೀಕರಿಸಿದ. ಸ್ಪೆಯಿನ್ ಹಾಗೂ ಇಟಲಿಗಳಲ್ಲಿ ಸಂಚರಿಸಿದ ; ತನ್ನ ನಾಟಕಗಳಿಂದ ಪ್ರಸಿದ್ಧಿ ಪಡೆದ. ಮೊದಲನೆ ಮಹಾಯುದ್ಧದಲ್ಲಿ ಗುಪ್ತಚಾರನಾಗಿ ಕೆಲಸ ಮಾಡಿದ. ಯುದ್ಧ ಮುಗಿದ ಮೇಲೆ ದೇಶಸಂಚಾರ ಕೈಗೊಂಡ.

ಅವನ ಪ್ರಸಿದ್ಧಿ ಮುಖ್ಯವಾಗಿ ನಾಲ್ಕು ಕಾದಂಬರಿಗಳ ಮೇಲೆ ನಿಂತಿದೆ : 1) ಆತ್ಮ ವೃತ್ತದ ಅಂಶಗಳಿಂದ ಕೂಡಿದ್ದು, ಒಬ್ಬ ತರುಣ ವೈದ್ಯಕೀಯ ವಿದ್ಯಾರ್ಥಿಯ ಪ್ರಬುದ್ಧತೆ, ಪರಿಪಕ್ವತೆಗಳನ್ನು ಪಡೆಯುವ ಕಥೆಯಾದ Of Human Bondage (1915) ; 2) ಪೌಲ್ ಗಾಗಿನ್‌ನನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದ, ಸಂಪ್ರದಾಯಬದ್ಧನಲ್ಲದ ಒಬ್ಬ ಕಲಾವಿದನ ಕಥೆಯಾದ The Moon and Six Pence (1919) ; 3) ಹಾರ್ಡಿ ಹಾಗೂ ವಾಲ್‌ಪೋಲ್ ಅವರನ್ನು ಮನಸ್ಸಿನಲ್ಲಿಟ್ಟು ಚಿತ್ರಿಸಿದ ಒಬ್ಬ ಪ್ರಸಿದ್ಧ ಕಾದಂಬರಿಕಾರನ ಕಥೆಯಾದ Cakes and Ale (1930) ; 4) ಒಬ್ಬ ತರುಣ ಅಮೆರಿಕನ್ ಸೈನಿಕನು ತೃಪ್ತಿಕರವಾದ ಜೀವನವಿಧಾನಕ್ಕಾಗಿ ಹುಡುಕಾಡುವ ಕಥೆಯಾದ The Razor's Edge (1944). Summing Up (1938) ಹಾಗೂ A Writer's Notebook (1949) ಎಂಬ ಎರಡು ಪುಸ್ತಕಗಳಲ್ಲಿ ಈತ ತನ್ನ ಜೀವನದರ್ಶನ ಹಾಗೂ ಸಿದ್ಧಾಂತಗಳನ್ನು ನಿರೂಪಿಸಿದ್ದಾನೆ.

ಕಾದಂಬರಿ ಒಂದು ಸಡಿಲವಾದ ಕಲಾಪ್ರಕಾರ ಎಂಬುದು ಮಾಮ್‌ನ ನಿಲುವು. ಒಟ್ಟು ಬರವಣಿಗೆಯ ಬಗೆಗೇ ಯಾವುದೇ ಭ್ರಮೆಗಳಿಲ್ಲದ, ಮಹತ್ವಾಕಾಂಕ್ಷೆಯೂ ಇಲ್ಲದ, ಲೌಕಿಕವಾದ ದೃಷ್ಟಿಕೋನ ಹೊಂದಿದ್ದಾನೆ. ವೃತ್ತಿನಿರತ ಬರಹಗಾರನಿಗೆ ಇದು ಸಹಜವೇ. ಆತ್ಮಕಥೆಯ ಅಂಶಗಳಿಂದ ಕೂಡಿದ ಪ್ರಸ್ತುತ ಕಾದಂಬರಿಯನ್ನು ತಾನು ತನ್ನ ಜೀವನದ ಕಹಿ ನೆನಪುಗಳಿಂದ ಬಿಡುಗಡೆ ಪಡೆಯಲು ರಚಿಸಿದೆನೆಂದೂ, ಅದರಲ್ಲಿ ಯಶಸ್ವಿಯೂ ಆದೆನೆಂದೂ ಹೇಳಿಕೊಳ್ಳುತ್ತಾನೆ. ಈ ವಿಧಾನದಲ್ಲಿ ಅಡಗಿರಬಹುದಾದ ಅಪಾಯಗಳ ಅರಿವೂ ಅವನಿಗಿದೆ. ಲೇಖಕನಿಗೆ ಮಹತ್ವದ್ದಾಗಿ ಕಾಣುವ ಅವನ ಜೀವನದ ಎಷ್ಟೋ

ವಿವರಗಳು ಓದುಗನಿಗೆ ಅಮುಖ್ಯ ಎನಿಸಬಹುದು. ತನ್ನದು ವೈಜ್ಞಾನಿಕ ಕೃತಿಯಲ್ಲ ಹಾಗೂ ಅದು ನೀತಿಸಂಹಿತೆಯ ಕೆಲಸವನ್ನೂ ಮಾಡಬೇಕಿಲ್ಲ ; ಬುದ್ಧಿವಂತಿಕೆಯಿಂದ ಕೂಡಿದ ಮನರಂಜನೆ (Intelligent Entertainment) ಒದಗಿಸಿದರೆ ಸಾಕು ಎನ್ನುತ್ತಾನೆ. ಆದರೂ ನಾವು ಅವನ ಕಾದಂಬರಿಯನ್ನು ಒಂದು ಕಲಾಕೃತಿಯಾಗಿ ನೋಡಿ ಚರ್ಚಿಸಿದಾಗ ಮಾತ್ರ, ಒಂದು ಸಾಹಿತ್ಯ ಪ್ರಕಾರದಿಂದ ಏನನ್ನು ನಿರೀಕ್ಷಿಸಬಹುದು ಎಂಬುದರ ಬಗ್ಗೆ ನಮ್ಮ ಅಭಿಪ್ರಾಯಗಳು ನಮಗೇ ಸ್ಪಷ್ಟವಾಗುತ್ತವೆ. ಅಲ್ಲದೆ ಅವನೇ ಉಪಯೋಗಿಸುವ 'ಬುದ್ಧಿವಂತಿಕೆ' ಹಾಗೂ 'ಮನರಂಜನೆ' ಎಂಬ ಪದಗಳೂ ಕೂಡ ಬೇರೆಬೇರೆ ಕಾಲದಲ್ಲಿ, ಒಂದೇ ಕಾಲದ ಬೇರೆಬೇರೆ ವ್ಯಕ್ತಿಗಳಿಗೆ ಬೇರೆಬೇರೆ ಅರ್ಥವನ್ನು ಕೊಡಬಹುದು.

2

ಇಂತಹ ಕೃತಿಯೊಂದನ್ನು ಚರ್ಚೆಗೆ ತೆಗೆದುಕೊಂಡಾಗ ಏಳುವ ಇನ್ನೊಂದು ಪ್ರಶ್ನೆಯೆಂದರೆ, ಕಾಲ ಹಾಗೂ ಸಾಂಸ್ಕೃತಿಕ ಪರಿಸರದ ದೃಷ್ಟಿಯಿಂದ ನಮಗೆ ದೂರವಾದ ಕೃತಿಯ ಬಗ್ಗೆ ಮಾತನಾಡುವಾಗ ಅದರ ಪ್ರಸ್ತುತತೆಯನ್ನು ಪ್ರಶ್ನಿಸದೆ ಮುಂದುವರಿಯುವುದು ಸಾಧ್ಯವೆ, ಸಾಧುವೆ ಎಂಬುದು. ಶ್ರೇಷ್ಠ ಕೃತಿಯೊಂದು ಈ ಎರಡೂ ಎಲ್ಲೆಗಳನ್ನು ಮೀರಬಲ್ಲುದು ಎಂಬುದು ಸಾಮಾನ್ಯವಾದ ನಂಬಿಕೆ. ಇಲ್ಲದಿದ್ದರೆ ಷೇಕ್ಸ್‌ಪಿಯರ್ ಆಗಲಿ, ದಾಸ್ತೋವ್‌ಸ್ಕೀ ಆಗಲಿ ಇಂದಿಗೂ ನಮಗೆ ಪ್ರಸ್ತುತ ಆಗಿ ಉಳಿಯಲು ಸಾಧ್ಯವಾಗು ತ್ತಿರಲಿಲ್ಲ. ಕೇವಲ ಚಾರಿತ್ರಿಕ ಮಹತ್ವವನ್ನು ಮಾತ್ರ ಉಳಿಸಿಕೊಂಡಿರುವ ಕೃತಿ ನಮಗೆ ಈ ಕ್ಷಣದಲ್ಲಿ ಮಹತ್ವವಾದದ್ದನ್ನು, ಮುಖ್ಯವಾದದ್ದನ್ನು ಏನನ್ನೂ ಕೊಡದಿದ್ದರೆ, ಗಂಭೀರವಾದ ಓದಿಗೆ ಚರ್ಚೆಗೆ ಮತ್ತೆ ಮತ್ತೆ ಒಳಗಾಗಲಾರದು. ಪ್ರತಿಯೊಂದು ಕೃತಿಯೂ ತಾನು ಹುಟ್ಟಿದ ಸಾಂಸ್ಕೃತಿಕ ಪರಿಸರದಿಂದಲೇ ದ್ರವ್ಯವನ್ನು, ವಿವರಗಳನ್ನು ಆರಿಸಿಕೊಳ್ಳಬೇಕಾದ ಅನಿವಾರ್ಯವನ್ನು ಎದುರಿಸಿಯೂ, ಸಾರ್ವಕಾಲಿಕವಾದುದನ್ನು ಹಿಡಿದಿಡಲು ಸಾಧ್ಯ ಎಂಬುದಷ್ಟೆ ನಮಗೆ ಮುಖ್ಯ. ಒಂದು ಸಾಹಿತ್ಯಕೃತಿ ಹೇಗೆ ಸಾರ್ವಕಾಲಿಕತೆಯನ್ನು ಪಡೆಯುತ್ತದೆ ಎಂಬ ಕುತೂಹಲದ ಸಂಗತಿಯೇ ಒಂದು ಪ್ರತ್ಯೇಕವಾದ ಸಮಗ್ರವಾದ ಅಧ್ಯಯನಕ್ಕೆ ವಸ್ತುವಾಗಬಹುದು. ಮನುಷ್ಯ ಸ್ವಭಾವ ಹಾಗೂ ಮಾನವೀಯ ಸಂಬಂಧಗಳು ಕಥಾ ಸಾಹಿತ್ಯದ ನಿಜವಾದ ಕಾಳಜಿಗಳಾದ್ದರಿಂದ, ದೈನಿಕವಾದ ವಿವರಗಳು ಕೇವಲ ಗೌಣವಾದ್ದರಿಂದ, ಯಾವುದೇ ಕಾಲದ, ದೇಶದ ಕೃತಿಯೊಂದನ್ನು ನಮ್ಮ ಮಧ್ಯೆಯೇ ಹುಟ್ಟಿದ ಕೃತಿಯೆಂಬಂತೆ ಚರ್ಚಿಸುವುದು ಸಾಧ್ಯ. ಹಾಗೂ ಈ ರೀತಿಯ ಚರ್ಚೆಯೇ ಹೆಚ್ಚು ಉಪಯುಕ್ತ.

3

ಈ ಕಾದಂಬರಿಯ ಕಥಾವಸ್ತುವನ್ನು ಹೀಗೆ ಸಂಗ್ರಹಿಸಬಹುದು : ಕೇಂದ್ರ ಪಾತ್ರವಾದ ಫಿಲಿಪ್ ಅನಾಥನಾಗಿ ತನ್ನ ಜೀವನವನ್ನು ಪ್ರಾರಂಭಿಸುತ್ತಾನೆ. ಈ ಅನಾಥತೆ ಹಾಗೂ ಕುಂಟುಕಾಲಿನ ಅಂಗವಿಕಲತೆಗಳಿಂದ ಹುಟ್ಟಿದ ಕೀಳರಿಮೆಯನ್ನು ಗೆಲ್ಲಲು ಪ್ರಯತ್ನಿಸುವ ಹಾಗೂ ಯಶಸ್ವಿಯಾಗುವ ಕತೆಯೇ ಈ ಕಾದಂಬರಿಯ ವಸ್ತು. ಹುಟ್ಟಿದಾಗಲೇ ತಂದೆಯನ್ನು ಕಳೆದುಕೊಂಡಿದ್ದ ಈತ ಒಂಬತ್ತನೆಯ ವಯಸ್ಸಿನಲ್ಲಿ ತಾಯಿಯನ್ನೂ ಕಳೆದುಕೊಂಡು ಚಿಕ್ಕಪ್ಪ ಹಾಗೂ ಚಿಕ್ಕಮ್ಮನ ಆಶ್ರಯಲ್ಲಿ ಬೆಳೆಯುತ್ತಾನೆ. ಪಾದ್ರಿಯಾದ ಚಿಕ್ಕಪ್ಪನಿಗೆ ಈತನೂ ತನ್ನ ದಾರಿಯಲ್ಲಿ ನಡೆಯಲಿ ಎಂಬ ಆಸೆ. ದೇವರು ಸರ್ವಶಕ್ತ ಎಂದು ಬೈಬಲಿನಲ್ಲಿ ಓದಿದ ಫಿಲಿಪ್ ಅವನು ತನ್ನ ಕುಂಟುಕಾಲನ್ನು ಸರಿಪಡಿಸಬಲ್ಲನೆಂದು ನಂಬುತ್ತಾನೆ. ರಾತ್ರಿ ದೇವರನ್ನು ಭಕ್ತಿಯಿಂದ ಪ್ರಾರ್ಥಿಸಿ ಮಲಗಿಕೊಂಡವನು ಬೆಳಿಗ್ಗೆ ಎಲ್ಲ ಹುಡುಗರಂತೆ ತಾನೂ ಓಡುವ, ಫುಟ್‌ಬಾಲ್ ಆಡುವ, ಮೆಟ್ಟಲಿನಿಂದ ಮೆಟ್ಟಲಿಗೆ ಹಾರುವ ಕನಸು ಕಾಣುತ್ತಾನೆ ; ಬೆಳಕು ಹರಿದಾಗ ಯಥಾ ಪ್ರಕಾರ ಕುಂಟುತ್ತಾ ಮಹಡಿಯಿಂದ ಕೆಳಗೆ ಇಳಿದು ಬರುತ್ತಾನೆ. ಚಿಕ್ಕಂದಿನಿಂದಲೂ ಸ್ವತಂತ್ರ ಮನೋಭಾವ ಬೆಳೆಸಿಕೊಂಡು, ಸಾಂಪ್ರದಾಯಿಕವಾದ ವಿದ್ಯಾಭ್ಯಾಸದ ಬಗ್ಗೆ ನಿರುತ್ಸಾಹ ತಳೆಯುತ್ತಾನೆ ; ಜರ್ಮನಿಗೆ ಹೋಗಿ ಹೊಸ ಭಾಷೆಗಳನ್ನು ಕಲಿಯುವ ನಿರ್ಧಾರ ಮಾಡುತ್ತಾನೆ ; ಲಂಡನ್‌ಗೆ ಹೋಗಿ ಚಾರ್ಟರ್ಡ್ ಅಕೌಂಟೆಂಟ್ ಆಗಲು ಪ್ರಯತ್ನಿಸುತ್ತಾನೆ. ಈ ದಾರಿ ತನ್ನದಲ್ಲವೆಂಬ ಅರಿವು ಬಹಳ ಬೇಗ ಮೂಡಿ ಪ್ಯಾರಿಸ್‌ನಲ್ಲಿ ಚಿತ್ರಕಲೆ ಕಲಿಯಲು ಹೊರಡುತ್ತಾನೆ. ಚಿಕ್ಕಪ್ಪನ ತೀವ್ರ ವಿರೋಧದ ನಡುವೆಯೂ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ಹಣಕ್ಕಾಗಿ ಚಿಕ್ಕಪ್ಪನನ್ನು ಆಶ್ರಯಿಸಬೇಕಾದ ತನ್ನ ದುಃಸ್ಥಿತಿಗೆ ಹಲುಬುತ್ತಾನೆ. ತನಗೆ 21ನೆಯ ವಯಸ್ಸು ಬೇಗ ಆಗಿ ತಂದೆ ಉಳಿಸಿದ ಹಣ ತನ್ನದಾಗುವ ದಿನಕ್ಕಾಗಿ ಕಾಯುತ್ತಾನೆ ; ಚಿಕ್ಕಪ್ಪನ ಆಸೆ ಹಾಗೂ ಆದೇಶಕ್ಕೆ ವಿರುದ್ಧವಾಗಿ ಕಲಾವಿದನಾಗುವ ನಿರ್ಧಾರ ಕೈಗೊಳ್ಳುತ್ತಾನೆ.

ಹೀಗೆ ಜೀವನವನ್ನು ಮತ್ತೆ ಮತ್ತೆ ಹೊಸದಾಗಿ ಪ್ರಾರಂಭಿಸಲು ಹಿಂದೆಗೆಯು ವುದಿಲ್ಲ. ಕ್ರಿಶ್ಚಿಯನ್ ಹಾಗೂ ಜಂಟ್ಲ್‌ಮನ್ ಎಂಬ ಕಲ್ಪನೆಗಳನ್ನು ವಿರೋಧಿಸಿ ಆತ್ಮಸಾಕ್ಷಿಯಂತೆ ನಡೆಯುತ್ತಾನೆ. ಸಹಜವಾದ ಮೇಧಾಶಕ್ತಿಯ ಅಭಾವವಿದ್ದಾಗ ಕೇವಲ ಇಚ್ಛಾಶಕ್ತಿಯಿಂದಲೇ ಎಲ್ಲವನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬ ಪಾಠವನ್ನು ಪ್ಯಾರಿಸ್ ಕಲಿಸುತ್ತದೆ. ಕಲಾವಿದನಾಗಬೇಕೆಂಬ ಆಸೆಯನ್ನು ತ್ಯಜಿಸುತ್ತಾನೆ. ತನ್ನ ಮಿತಿಗಳನ್ನು ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳುವ ಧೈರ್ಯವನ್ನು ಗಳಿಸಿಕೊಳ್ಳುತ್ತಾನೆ. ಪ್ರತಿಭೆ ಇಲ್ಲದಿದ್ದರೂ ಕಲಾವಿದೆಯಾಗಲು ಪ್ರಯತ್ನಿಸಿ, ಸೋತು ಆತ್ಮಹತ್ಯೆಯಲ್ಲಿ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಂಡ ಮಿಸ್ ಪ್ರೈಸ್ ಎಂಬಾಕೆಯ ಸಾವು ನಿರರ್ಥಕ ಹೋರಾಟದ ಬಗ್ಗೆ ಅವನ ಕಣ್ಣು ತೆರೆಸುತ್ತದೆ. ಲಂಡನ್ನಿಗೆ ಹಿಂದಿರುಗಿ ಮೂರನೆಯ ಬಾರಿ ತನ್ನ ಜೀವನವನ್ನು

ಪ್ರಾರಂಭಿಸುತ್ತಾನೆ. ತಾನೇ ಮೊದಲು ತಿರಸ್ಕರಿಸಿದ್ದ ವೈದ್ಯಕೀಯ ವೃತ್ತಿಯನ್ನು ಈಗ ತಾನಾಗಿ ಆರಿಸಿಕೊಂಡು, ವಿದ್ಯಾರ್ಥಿಜೀವನವನ್ನು ಪ್ರಾರಂಭಿಸುತ್ತಾನೆ. ಹೋಟೆಲ್ ಒಂದರಲ್ಲಿ ಪರಿಚಯವಾದ ಮಿಲ್ಲಿ ಎಂಬ ಹುಡುಗಿಯಿಂದ ಆಕರ್ಷಿತನಾಗುತ್ತಾನೆ. ಪ್ರೇಮಭಿಕ್ಷೆ ಬೇಡಿ ತಿರಸ್ಕೃತನಾಗುತ್ತಾನೆ. ಈ ಮಧ್ಯೆ ನೋರಾ ಎಂಬ ಇನ್ನೊಬ್ಬ ಹೆಂಗಸನ್ನು ಪ್ರೇಮಿಸುತ್ತಾನೆ. ಈಕೆಯ ಸಂಬಂಧದಲ್ಲಿ ಫಿಲಿಪ್‌ಗೆ ಮಾತೃಪ್ರೇಮದ ಅನುಭವ ಆಗುತ್ತದೆ. ಅವಳು ಅಂಗವಿಕಲತೆಯ ಬಗೆಗಿನ ಅವನ ಕೀಳರಿಮೆಯನ್ನು ಚರ್ಚೆಯ ಮೂಲಕ ಹೋಗಲಾಡಿಸುವ ಪ್ರಯತ್ನ ಮಾಡುತ್ತಾಳೆ. ಈಗ ಮಿಲ್ಲಿ ಮತ್ತೆ ಅವನ ಜೀವನವನ್ನು ಪ್ರವೇಶಿಸುತ್ತಾಳೆ. ಅವಳಿಗಾಗಿ ನೋರಾಳನ್ನು ಕ್ರೂರವಾಗಿ ತಿರಸ್ಕರಿಸುತ್ತಾನೆ. ಶುದ್ಧ ಲೌಕಿಕವಾದ ದೃಷ್ಟಿಕೋನವನ್ನು ಹೊಂದಿರುವ ಮಿಲ್ಲಿಯ ಕುರುಡು ಆಕರ್ಷಣೆ ಕೊನೆಯವರೆಗೂ ಅವನನ್ನು ಕಾಡುತ್ತದೆ. ಮತ್ತೆಮತ್ತೆ ಈ ಹುಡುಗಿಯಿಂದ ವಂಚಿತನಾಗಿ, ಆ ಮೂಲಕವೇ ಬಾಲಿಶವಾದ ಮುಗ್ಧತೆಯನ್ನು ಕಳೆದುಕೊಂಡು ಪ್ರಬುದ್ಧತೆಯನ್ನು ಪಡೆಯುತ್ತಾನೆ. ಕರೆಕನ್ಯೆಯಾಗಿ ಅಧೋಗತಿ ತಲುಪಿದ್ದ ಅವಳನ್ನು ಅದರಿಂದ ಬಿಡಿಸಲು ವಿಫಲಪ್ರಯತ್ನ ನಡೆಸುತ್ತಾನೆ. ಮನುಷ್ಯಸ್ವಭಾವದ ವೈಚಿತ್ರ್ಯಗಳ ದರ್ಶನ ಆಗುತ್ತದೆ. ಕಡೆಯ ಬಾರಿ ಅವನಿಗೆ ದ್ರೋಹ ಬಗೆದು ಹೋಗುವಾಗ ಅವಳು ಇಲ್ಲಿಯವರೆಗೆ ತನ್ನ ಹೃದಯದಲ್ಲಿ ಬಚ್ಚಿಟ್ಟುಕೊಂಡಿದ್ದ ಕ್ರೌರ್ಯ ಪ್ರತ್ಯಕ್ಷವಾಗುತ್ತದೆ. ಅವನ ಕೊಠಡಿಯಲ್ಲಿಯ ಎಲ್ಲ ವಸ್ತುಗಳನ್ನೂ ಧ್ವಂಸಮಾಡಿ, ಅವಳು ಮಾಯವಾಗುತ್ತಾಳೆ.

ಅಥೆಲ್ನೀ ಎಂಬ ಕೆಳಮಧ್ಯಮವರ್ಗದ ಒಂದು ಕುಟುಂಬದ ಪರಿಚಯ ಈತನ ಜೀವನದ ಒಂದು ಮುಖ್ಯ ತಿರುವು. ಇಲ್ಲಿಯವರೆಗೂ ಅವನು ವಂಚಿತನಾಗಿದ್ದ ಕುಟುಂಬ ಜೀವನದ ಅನುಭವ ಆಗುತ್ತದೆ. ಒಂದು ವ್ಯಕ್ತಿತ್ವದ ಪರಿಪೂರ್ಣತೆ, ಪರಿಪಕ್ವತೆಗೆ ಕುಟುಂಬ ಜೀವನ ಹೇಗೆ ಮುಖ್ಯ ಎಂಬುದು ಇಲ್ಲಿ ಚಿತ್ರಿತವಾಗಿದೆ. ಇನ್ನು ಮುಂದೆ ಫಿಲಿಪ್ ರಾತ್ರೋರಾತ್ರಿ ಶ್ರೀಮಂತನಾಗುವ ಆಮಿಷಕ್ಕೆ ಒಳಗಾಗಿ, ತನ್ನಲ್ಲಿ ಅಳಿದುಳಿದಿದ್ದ ಹಣವನ್ನೆಲ್ಲ ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ತೊಡಗಿಸಿ ನಿರ್ಗತಿಕನಾಗುತ್ತಾನೆ. ಬಡತನದ ಪರಮಾವಧಿಯನ್ನು ಅನುಭವಿಸಿಯೂ, ಆತ್ಮಹತ್ಯೆಯಂತಹ ಸರಳ ಪರಿಹಾರ ಕಂಡುಕೊಳ್ಳದೆ ಕಾಯುತ್ತಾನೆ. ಈ ದುರ್ಭರ ದಿನಗಳಲ್ಲಿ ಅಥೆಲ್ನೀ ಕುಟುಂಬದ ನೈತಿಕ ಹಾಗೂ ಆರ್ಥಿಕ ಆಧಾರದಿಂದ ಬದುಕಿ ಉಳಿಯುತ್ತಾನೆ. ಚಿಕ್ಕಪ್ಪನ ಸಾವಿನಿಂದ ದೊರೆತ ಆಸ್ತಿಯಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ಓದು ಮುಂದುವರಿಸಿ ವೈದ್ಯನಾಗುತ್ತಾನೆ. ದೇಶಸಂಚಾರ ಮಾಡಬೇಕೆಂಬ ತನ್ನ ಬಹು ದಿನದ ಕನಸು ನನಸಾಗುವ ದಿನ ಹತ್ತಿರ ಬಂದಾಗ ಅಥೆಲ್ನೀಯ ಮಗಳು ಸ್ಯಾಲಿಯ ಪ್ರೇಮ ಪಾಶದಲ್ಲಿ ಸಿಲುಕುತ್ತಾನೆ. ನೈಜವಾದ ಮಾನವೀಯ ಸಂಬಂಧಗಳು ಈ ಎಲ್ಲ ಆದರ್ಶಗಳಿಗಿಂತ ಮುಖ್ಯ ಎಂಬ ಅರಿವು ಮೂಡುತ್ತದೆ. ಎಟುಕಲಾರದ ಕಲೆ ಹಾಗೂ ಹುಸಿ ಆದರ್ಶಗಳನ್ನು ಬಿಟ್ಟುಕೊಟ್ಟು ನಿಜವಾದ ಜೀವನಕ್ಕೆ ಹಿಂದಿರುಗುತ್ತಾನೆ.

4

ದಿನನಿತ್ಯದ ಕೇವಲ ಮೂರ್ತವಾದ ವಿವರಗಳನ್ನು ಹಾಗೂ ಘಟನಾವಳಿಗಳ ನಿಷ್ಠುರವಾದ ಕ್ರಮವನ್ನು ತನ್ನ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಬಳಸಬೇಕಾದ ಕಟ್ಟು ಪಾಡು ಕಥೆಗಾರನದು. ಯಾವುದೇ ಕೃತಿಯ ಬಗ್ಗೆ ಮಾತನಾಡುವಾಗ ಅದರ ಆಶಯವನ್ನು ಗ್ರಹಿಸಿ, ಅದರ ಬಗ್ಗೆ ಕೆಲವು ತೀರ್ಮಾನಗಳಿಗೆ ತಲುಪುತ್ತೇವೆ. ಇನ್ನೊಂದು ಹಂತದಲ್ಲಿ ಈ ಆಶಯವನ್ನು ಪ್ರಕಟಪಡಿಸುವಲ್ಲಿ ಕೃತಿಕಾರ ಆರಿಸಿಕೊಂಡ ಮಾಧ್ಯಮದ ಬಗ್ಗೆ ಮಾತನಾಡುತ್ತಾ, ಅವನು ಬಳಸಿರುವ ತಂತ್ರ, ವಿಧಾನ ಇವುಗಳ ಬಗ್ಗೆ ಚರ್ಚಿಸಬಹುದು. ಕಥಾಪ್ರಕಾರದಲ್ಲಿ ಈ ತಂತ್ರ ಎಂಬುದು ಕಥೆಗಾರ ತನ್ನ ಮೂಲಸಾಮಗ್ರಿಯಾದ ಘಟನೆಗಳನ್ನು ಜೋಡಿಸಿರುವ ಕ್ರಮವಾಗಿರಬಹುದು ; ತನ್ನ ವಿವಿಧ ಪಾತ್ರಗಳ ಬೆಳವಣಿಗೆಗೆ ಕೊಟ್ಟಿರುವ ಒತ್ತು ಆಗಿರಬಹುದು ; ಅವನು ಬಳಸಿರುವ ಭಾಷೆ ಆಗಿರಬಹುದು... ಇತ್ಯಾದಿ. ಈ ದೃಷ್ಟಿಯಿಂದ ಪ್ರತಿಯೊಂದು ಮೌಲಿಕ ಸಾಹಿತ್ಯ ಕೃತಿಯೂ ತನಗೇ ವಿಶಿಷ್ಟವಾದ ಪ್ರತಿಕ್ರಿಯೆಯನ್ನು, ವಿಮರ್ಶೆಯನ್ನು ಅಪೇಕ್ಷಿಸುತ್ತದೆ. ಆ ಕೃತಿ ಒಂದು ಸಿದ್ಧವಾದ ಸಾಹಿತ್ಯ ಮೀಮಾಂಸೆಯಿಂದ ಹುಟ್ಟಿರದೆ, ತನ್ನದೇ ಆದ ಮೀಮಾಂಸೆಯನ್ನು ಸೃಷ್ಟಿಸುತ್ತದೆ. ನಿಜವಾಗಿ ಎಲ್ಲ ಕೃತಿಗಳಿಗೂ ಅನ್ವಯವಾಗುವಂಥ ಸಿದ್ಧವಾದ ನಿಯಮಾವಳಿಗಳು ಇರುವುದು ಸಾಧ್ಯವಿಲ್ಲ.

ಒಂದು ಕಥಾಕೃತಿಯ ನಿಲುವು, ಧೋರಣೆ ಇವು ಘಟನೆಗಳು ಸಂಭವಿಸುವ ಕ್ರಮದ ಮೂಲಕ ಅಭಿವ್ಯಕ್ತವಾಗಬೇಕು. ಇದು ಸಾಧ್ಯವಾಗದೆ ಹೋದಾಗ ಕಥೆಗಾರ ಒಮ್ಮೊಮ್ಮೆ ಸ್ಪಷ್ಟೀಕರಣ ನೀಡಲು ಅಕ್ರಮ ಪ್ರವೇಶ ಮಾಡಬೇಕಾಗುತ್ತದೆ. ಉದಾಹರಣೆಗೆ ಕಾದಂಬರಿಯ ಕೊನೆಯಲ್ಲಿ ಬರುವ ಕೆಲವು ಸಾಲುಗಳನ್ನು ನೋಡಬಹುದು : ಫಿಲಿಪ್ ಇಲ್ಲಿಯವರೆಗೂ ಭವಿಷ್ಯದಲ್ಲಿ ಬದುಕಿದ, ಬೇರೆಯವರಿಗಾಗಿ ಬದುಕಿದ, ಜೀವನವಿಡೀ ಬೇರೆಯವರ ಆದರ್ಶಗಳನ್ನು ಅನುಸರಿಸಿದ.... ಇತ್ಯಾದಿ. ನಿಜವೆಂದರೆ ಫಿಲಿಪ್ ಈ ಎಲ್ಲ ಆದರ್ಶಗಳನ್ನು ತಿರಸ್ಕರಿಸಿ ಸ್ವಂತ ಧೈರ್ಯದ ಮೇಲೆ ಬದುಕಲೆಳಸಿದವನು ; ಭವಿಷ್ಯದ ಬಗ್ಗೆ ಯೋಚಿಸದೆ ವರ್ತಮಾನದಲ್ಲಿ ಬದುಕಿದವನು. ಕೃತಿ ಹಾಗೂ ಕೃತಿಕಾರ ಬೇರೆಬೇರೆ ಮಾತುಗಳನ್ನು ಹೇಳುತ್ತಿದ್ದಾರೆ.

ತನ್ನ ಪೂರ್ವ ನಿಯೋಜಿತವಾದ ಉದ್ದೇಶ ಸಾಧನೆಗೆ ಅನುಗುಣವಾಗಿ ಘಟನೆ ಗಳನ್ನು ಜೋಡಿಸಲಾಗಿದ್ದರೆ, ಇಡೀ ಕೃತಿಯ ಹಂದರ ಮುಟ್ಟಿದರೆ ಬಿದ್ದುಹೋಗುವಷ್ಟು ಕೃತಕವಾಗಿಬಿಡುತ್ತದೆ. ಲೇಖಕ ತಾನೇ ಸೃಷ್ಟಿಸಿದ ಸವಾಲುಗಳಿಗೆ ತಾನೇ ಹೆದರಿ ಪಲಾಯನ ಮಾಡುವುದರ ಪರಿಣಾಮ ಇದು. ಸಾವು ಈ ಹಿಂದೆ ಅಸಂಖ್ಯ ಲೇಖಕರನ್ನು ಇಂತಹ ಸಮಸ್ಯೆಗಳಿಂದ ಪಾರುಮಾಡಿದೆ. 'ಸಾವು ಎಲ್ಲ ಸಮಸ್ಯೆಗಳಿಗೂ ಪರಿಹಾರ' ಎಂಬ

ಧೋರಣೆ ಈ ಅಂಶದ ಹಿಂದಿದೆ. ಲೇಖಕನ ಸಹಾಯವಿಲ್ಲದೆ ನಾಯಕನಿಗೆ ತನ್ನ ಹೋರಾಟದಲ್ಲಿ ಜಯ ಗಳಿಸಲು ಸಾಧ್ಯವಾಗಬೇಕು. ಪ್ರಾರಂಭದಿಂದಲೂ ಸ್ವಂತಿಕೆಗಾಗಿ ಹೋರಾಡಿದ ಫಿಲಿಪ್‌ನ ಚಿಕ್ಕಪ್ಪನ ಸಾವಿನಿಂದ ಈ ಕಥೆ ಇಂತಹ ಒಂದು ಘಟ್ಟವನ್ನು ತಲುಪುತ್ತದೆ. ಈ ಸಾವಿನಿಂದ ಶ್ರೀಮಂತನಾದ ಫಿಲಿಪ್ ತನ್ನ ಎಲ್ಲ ಆರ್ಥಿಕ ಸಮಸ್ಯೆಗಳನ್ನೂ ಬಗೆಹರಿಸಿಕೊಳ್ಳುತ್ತಾನೆ. ಅವನು ಪ್ರತಿನಿಧಿಸುವ ಹೋರಾಟ, ಪ್ರತಿಭಟನೆಗಳ ಸೋಲು ಇದು. ಕಲೆಯ ಸೋಲು ಎಂದು ನಾವು ಗುರುತಿಸುವುದೂ ಇದನ್ನೇ. ಲೇಖಕನಿಗೆ ಈ ಸಾಹಿತ್ಯಪ್ರಕಾರ ಕೊಟ್ಟ ಸ್ವಾತಂತ್ರ್ಯದ ದುರುಪಯೋಗ ಪಡೆದುಕೊಂಡಂತೆ ಕಾಣುತ್ತದೆ. ಇಂತಹ ಆಕಸ್ಮಿಕಗಳು ಕೇವಲ ಘಟನೆಗಳಾಗಿ ಉಳಿಯುವುದೇ ಹೊರತು, ಒಟ್ಟು ಕಥಾಸರಣಿ ಸಂದರ್ಭದಲ್ಲಿ ಅರ್ಥಪೂರ್ಣವಾಗುವುದಿಲ್ಲ. ಜೀವನದ ಅಸಂಬದ್ಧತೆಯ ಬಗೆಗೇ ಲೇಖಕ ಹೇಳುತ್ತಿದ್ದರೆ ಅದು ಬೇರೆ ಮಾತು. ಹಾಗಲ್ಲದಿದ್ದರೆ ಇಂತಹ ಘಟನೆಗಳ ಕೃತಕ ಜೋಡಣೆ ಕೇವಲ ಮನರಂಜನೆಗಾಗಿ ಮಾತ್ರ ಬರಬಹುದಾದದ್ದು.

ಕಾದಂಬರಿಯನ್ನು ಕಲಾಪ್ರಕಾರವಾಗಿ ಪರಿಗಣಿಸುವದಿಲ್ಲ ಎಂಬ ಅವನ ಸ್ವಘೋಷಿತ ನಿಲುವಿಗೆ ಬೇರೆಡೆಯೂ ಪುರಾವೆಗಳು ಸಿಗುತ್ತವೆ : ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ ಹಣ ತೊಡಗಿಸಿ ಫಿಲಿಪ್ ದುಡ್ಡು ಮಾಡುವುದು, ನಂತರ ಎಲ್ಲ ಹಣವನ್ನೂ ತೊಡಗಿಸಿ ನಿರ್ಗತಿಕನಾಗುವುದು... ಇತ್ಯಾದಿ.

ಜೀವನದ ನೈಜವಾದ ವಿವರಗಳ ಮೂಲಕವೇ ತನ್ನ ಅಭಿವ್ಯಕ್ತಿಯನ್ನು ಸಾಧಿಸ ಬೇಕಾದ ಜವಾಬ್ದಾರಿ ಈ ಗದ್ಯಪ್ರಕಾರಕ್ಕೆ ಇದೆ. ವಿವರಗಳ ಸಾಚಾತನ ಕಾದಂಬರಿಯ ತಂತ್ರದ ಪ್ರಾಥಮಿಕ ಅವಶ್ಯಕತೆ. ಇದರಲ್ಲಿ ಮಾಮ್ ಅದ್ಭುತವಾದ ಯಶಸ್ಸು ಗಳಿಸುತ್ತಾನೆ. ವಿವರಗಳಲ್ಲಿ ಮನುಷ್ಯಸ್ವಭಾವದ ನಿಕಟವಾದ ತಿಳಿವಳಿಕೆ ವ್ಯಕ್ತವಾಗುತ್ತದೆ. ಕಾದಂಬರಿಯ ಪ್ರಾರಂಭದಲ್ಲಿ ಫಿಲಿಪ್‌ನ ತಾಯಿ ಸತ್ತು ಹುಟ್ಟಿದ ಮಗುವೊಂದಕ್ಕೆ ಜನ್ಮನೀಡಿದ್ದಾಳೆ. ಅದು ಗಂಡೋ, ಹೆಣ್ಣೋ ಎಂದು ಅವಳು ಡಾಕ್ಟರನ್ನು ಕೇಳುತ್ತಾಳೆ.

ಪ್ರಜ್ಞಾಪೂರ್ವಕವಾಗಿ ಎಂಬಂತೆ ನಿರ್ದಿಷ್ಟವಾದ ಭಾಷೆಯನ್ನು ಬಳಸುವುದರ ಮೂಲಕ ಹಾಗೂ ಮಹತ್ವಾಕಾಂಕ್ಷೆಯ ಗೈರುಹಾಜರಿಯನ್ನು ಒಂದು ಸ್ವೀಕೃತ ನಿಲುವಾಗಿ ಒಪ್ಪಿಕೊಳ್ಳುವ ಮೂಲಕ, ಮಾಮ್ ತಾನು ಆರಿಸಿಕೊಂಡ ಪ್ರಕಾರದ ಸಾಧ್ಯತೆಯನ್ನು ಮೊಟಕುಗೊಳಿಸಿದ್ದಾನೆ ಎನ್ನಿಸುತ್ತದೆ. ಈ ರೀತಿಯ ಅತಿಯಾದ ಸ್ಪಷ್ಟತೆ ಕಥಾಸಾಹಿತ್ಯವನ್ನು ಅನ್ಯೋಕ್ತಿ (allegory) ಆಗಿಸಿಬಿಡಬಹುದಾದ ಅಪಾಯ ಇದೆ. ತನ್ನ ಕೃತಿಯ ಮೂಲಕ ಒಂದು ಜೀವನದರ್ಶನವನ್ನು ಅನುಭವಕ್ಕೆ ಬರುವಂತೆ ಮಾಡುವಲ್ಲಿ ಮಾಮ್ ಯಶಸ್ವಿಯಾಗದೆ ಇರುವುದು ಆತನು ಸೀಮಿತ ಉದ್ದೇಶದಿಂದಲೇ ಹೊರಟಿರುವುದರ ಫಲವೇ ಆಗಿದೆ. ಸರಳವಾದ ಹಾಗೂ ನೇರವಾದ ಕಥೆಗಾರಿಕೆಯ ಮೂಲಕ ತನ್ನ

ಉದ್ದೇಶವನ್ನು ಸಮರ್ಥವಾಗಿ ನಿರೂಪಿಸುವ ಕಲೆಗಾರಿಕೆಗೆ ಕೆಲವು ತುಣುಕುಗಳಲ್ಲಿ ಕರ್ತೆಗಾರ ಯಶಸ್ವಿಯಾಗಿದ್ದಾನೆ. ಉದಾಹರಣೆಗೆ ಫಿಲಿಪ್ ತನ್ನ ಜೀವನದ ಮೊದಲನೆಯ ಲೈಂಗಿಕ ಅನುಭವವನ್ನು ಗಳಿಸಿಕೊಳ್ಳುವ ಸಂದರ್ಭವನ್ನು ನೋಡಬಹುದು. ಮಿಸ್ ವಿಲ್ಕಿನ್‌ಸನ್ ಎಂಬಾಕೆಯೊಂದಿಗೆ ತನ್ನ ಮನೆಯಲ್ಲಿ ಒಬ್ಬನೇ ಉಳಿದುಕೊಳ್ಳುವ ಸಂದರ್ಭವನ್ನು ಬಹಳ ಕಷ್ಟದಿಂದ ಫಿಲಿಪ್ ಸೃಷ್ಟಿಸಿಕೊಳ್ಳುತ್ತಾನೆ ; ತೀವ್ರವಾದ ಕುತೂಹಲ ಹಾಗೂ ನೀರಿಕ್ಷೆಗಳಿಂದ ಕಾದಿದ್ದಾನೆ. ಆದರೆ ಅವಳು ನಿಜವಾಗಿಯೂ ತನಗೆ ದಕ್ಕಿದಾಗ ಅವನು ಅನುಭವಿಸುವ ನಿರಾಸೆ ಹಾಗೂ ಭ್ರಮನಿರಸನ ಇವು ಕಾಲ್ಪನಿಕವಾದ ಅನುಭವಕ್ಕೂ ವಾಸ್ತವಕ್ಕೂ ಇರುವ ಅಗಾಧವಾದ ಅಂತರವನ್ನು ಸಮರ್ಥವಾಗಿ ನಿರೂಪಿಸುತ್ತವೆ.

ಈ ರೀತಿಯ ಯಶಸ್ವಿಯಾದ ಕಥೆಗಾರಿಕೆಗೆ ಇನ್ನೊಂದು ಉದಾಹರಣೆ ಕಾದಂಬರಿಯ ಕಡೆಯ ಪುಟಗಳಲ್ಲಿ ಸಿಗುತ್ತದೆ. ಅಥೆಲ್ನೀ ಕುಟುಂಬದ ಸ್ಯಾಲಿ ಎಂಬ ಹುಡುಗಿಯೊಡನೆ ತನ್ನ ಪ್ರಣಯ ವಿವಾಹದಲ್ಲಿ ಪರ್ಯವಸಾನಗೊಳ್ಳಬೇಕೆಂಬ ನಿರ್ಧಾರ ತೆಗೆದುಕೊಳ್ಳುತ್ತಾನೆ ; ತನ್ನ ಕನಸುಗಳಿಗೆಲ್ಲ ವಿದಾಯ ಹೇಳಿ, ಅವಳನ್ನು ಮದುವೆಯಾಗಿ ಜೀವನದಲ್ಲಿ ನೆಲೆ ನಿಲ್ಲಬೇಕೆಂಬ ನಿರ್ಣಯ ತೆಗೆದುಕೊಳ್ಳುತ್ತಾನೆ. ಸ್ಯಾಲಿ ತನ್ನಿಂದ ಗರ್ಭಿಣಿಯಾಗಿದ್ದಾಳೆಂದು ತಿಳಿದ ನಂತರ ಈ ನಿರ್ಧಾರ ಕೈಗೊಳ್ಳುತ್ತಾನೆ. ಇಷ್ಟೇ ಆಗಿದ್ದರೆ ಫಿಲಿಪ್‌ನ ಜೀವನದ ಅನೇಕ ಆಕಸ್ಮಿಕಗಳಲ್ಲಿ ಇದೂ ಒಂದು ಆಗುತ್ತಿತ್ತು ; ಸನ್ನಿವೇಶದ ಒತ್ತಡದಿಂದ ತೆಗೆದುಕೊಂಡ ಒಂದು ಅನಿವಾರ್ಯವಾದ ನಿರ್ಧಾರ ಆಗುತ್ತಿತ್ತು. ಮನುಷ್ಯನ ಆಯ್ಕೆಯ ಸ್ವಾತಂತ್ರ್ಯದ ದೃಷ್ಟಿಯಿಂದ ಇದಕ್ಕೆ ಯಾವುದೇ ಮಹತ್ವವಾಗಲಿ, ಅರ್ಥವಾಗಲಿ ಇಲ್ಲ. ಈಗ ಸ್ಯಾಲಿ ತಾನು ಗರ್ಭಿಣಿಯಾಗಿದ್ದೇನೆಂಬ ಗ್ರಹಿಕೆ ತಪ್ಪೆಂದೂ ತಿಳಿಸುತ್ತಾಳೆ. ಈಗ ಮತ್ತೆ ಫಿಲಿಪ್ ಸ್ವತಂತ್ರ. ಕಾದಂಬರಿಕಾರ ಅವನ ಸ್ವಾತಂತ್ರ್ಯವನ್ನು ಅವನಿಗೆ ಹಿಂದಿರುಗಿಸಿದ್ದಾನೆ. ಈಗಲೂ ಫಿಲಿಪ್ ತನ್ನ ಮೊದಲಿನ ನಿರ್ಧಾರಕ್ಕೆ ಅಂಟಿಕೊಳ್ಳುತ್ತಾನೆ ; ಸ್ಯಾಲಿಯನ್ನು ಮದುವೆಯಾಗುವ ತನ್ನ ನಿರ್ಣಯವನ್ನು ಬದಲಾಯಿಸುವುದಿಲ್ಲ.

ತಾತ್ವಿಕವಾಗಿ ಮನುಷ್ಯನ ಮೂಲಭೂತ ಸ್ವಾತಂತ್ರ್ಯದ ಕಲ್ಪನೆಗೆ ಸಮರ್ಥನೆ ಇಲ್ಲದಿರಬಹುದು. ಈ ಜಗತ್ತಿನ ಎಲ್ಲ ಕ್ರಿಯೆ ಪ್ರತಿಕ್ರಿಯೆಗಳನ್ನೂ ಭೌತಶಾಸ್ತ್ರದ ಪ್ರಕ್ರಿಯೆ ಗಳಿಗೆ ಇಳಿಸುವುದು ಸಾಧ್ಯವಿರಬಹುದು. ಆದರೆ ನಿಲುವು ಹೇಗೆ ನಮ್ಮನ್ನು ನಿರಾಶಾವಾದದ ಕಡೆಗೆ, ನಿಷ್ಕ್ರಿಯತೆಯ ಕಡೆಗೆ ಅನಿವಾರ್ಯವಾಗಿ ಎಂಬಂತೆ ಕರೆದೊಯ್ಯುತ್ತದೆ ಎಂಬುದರ ಅರಿವು ಮುಖ್ಯ. ಪರಿಸರದ ದಬ್ಬಾಳಿಕೆಯಿಂದ ಸ್ವತಂತ್ರನಾಗುವ ಮನುಷ್ಯನ ಆಕಾಂಕ್ಷೆಯನ್ನು ಹಾಗೂ ಅವನ ಆಯ್ಕೆಯ ಸ್ವಾತಂತ್ರ್ಯವನ್ನು ಸಮರ್ಥಿಸುವ ಮೂಲಕ, ಇಚ್ಛಾಶಕ್ತಿಯ ಅಸ್ತಿತ್ವವನ್ನು ಸ್ಥಾಪಿಸುವ ಕೃತಿ ಸಾರ್ವಕಾಲಿಕವಾಗಬಲ್ಲದು. ಇದನ್ನು ಪುರಾಣ, ಇತಿಹಾಸದ ಸಾಮಗ್ರಿಯ ನೆರವು ಇಲ್ಲದೆ ಸಮಕಾಲೀನವಾದ ವಿವರಗಳ

ಮೂಲಕ ಸಾಧಿಸಲು ಪ್ರಯತ್ನಿಸುತ್ತಾನೆ ಮಾಮ್. ಪರಿಸರದ ವಿರುದ್ಧ ದನಿಯೆತ್ತಿದಾಗಲೆಲ್ಲ ಸೋಲುವ ನಿರಾಶಾವಾದದ, ದುರಂತದ ಕಥೆ ಅದೆಷ್ಟೇ ವಾಸ್ತವವಾದಿಯಾಗಿದ್ದರೂ, ನೈತಿಕ ನೆಲೆಯಲ್ಲಿ ಸ್ವೀಕಾರಾರ್ಹವಲ್ಲ. ಫಿಲಿಪ್ ಕೊನೆಯವರೆಗೂ ಆಶಾವಾದಿಯಾಗಿಯೇ ಉಳಿಯುತ್ತಾನೆ. ಸಂಭಾವ್ಯತೆಗಳ ಪ್ರಾಮಾಣಿಕ ಶೋಧನೆ ನಡೆಸಿದಾಗ ಎಂತಹ ದುರ್ಭರ ಸನ್ನಿವೇಶದಲ್ಲೂ ಆಶಾವಾದಕ್ಕೆ ಎಡೆಯಿದೆ ಎಂಬ ಮಾತಿಗೆ ಸಾಕ್ಷಿಯಾಗಿ ಉಳಿಯುತ್ತಾನೆ.

ಥಾಮಸ್ ಮಾನ್ : 'ದಿ ಮ್ಯಾಜಿಕ್ ಮೌಂಟನ್'

ಎಸ್. ದಿವಾಕರ್

ಕೆಲವು ಕಾದಂಬರಿಗಳಿವೆ : ಓದಿದ ಮೇಲೆ ಬಹುಕಾಲದವರೆಗೆ ಮನಸ್ಸನ್ನು ಕ್ಷೋಭೆಗೀಡುಮಾಡಿ, ನಾವು ಬದುಕುತ್ತಿರುವ ಕಾಲವನ್ನು ಹೊಸ ಬೆಳಕಿನಲ್ಲಿ ನೋಡುವಂತೆ ಪ್ರೇರೇಪಿಸುವ ಮೂಲಕ ಮನುಷ್ಯನ ಬಗೆಗೆ ನಮಗೆ ನಾವೇ ಅಪರೂಪದ ಒಳನೋಟಗಳನ್ನು ಪಡೆದುಕೊಳ್ಳಲು ನೆರವಾಗುವ ಕಾದಂಬರಿಗಳು. ಇಂಥ ಕೃತಿಗಳಲ್ಲಿ ಥಾಮಸ್ ಮಾನ್‌ನ 'ದಿ ಮ್ಯಾಜಿಕ್ ಮೌಂಟನ್' ಕಾದಂಬರಿಗೆ ವಿಶಿಷ್ಟಸ್ಥಾನವಿದೆ. ಆರೋಗ್ಯಕರ ಬದುಕಿಗೆ ಮಾರಕವಾಗಿ ಪರಿಣಮಿಸುವ ಶಕ್ತಿಗಳನ್ನು ಮಾನವೀಯತೆಯ ನಿಲುವಿನಿಂದ ವಿಶ್ಲೇಷಿಸುವ ಈ ಕಾದಂಬರಿ ಒಂದೇ ಕಾಲಕ್ಕೆ ಜರ್ಮನ್ ಸಂವೇದನೆಯನ್ನೂ, ಅಲ್ಲಿನ ಸಾಮಾಜಿಕ ರಾಜಕೀಯ ಸ್ಥಿತಿಗತಿಗಳನ್ನೂ ಒಟ್ಟಿಗೆ ಹಿಡಿದು, ತೀರ ಅಪೂರ್ವವಾದ ಜೀವನದರ್ಶನವನ್ನು ಮಿಂಚಿಸುತ್ತದೆ. ಧಾರ್ಮಿಕ, ಐತಿಹಾಸಿಕ, ಮನೋವೈಜ್ಞಾನಿಕ ನೆಲೆಗಳಲ್ಲಿ ಮನುಷ್ಯನನ್ನು ಪರಿಶೀಲಿಸುವ ಮಾನ್ ಇಲ್ಲಿ ಮನುಷ್ಯನ ಅತಿಗೆ ಕಾರಣವಾಗುವ ವಿಘಟಿತ ಪ್ರಜ್ಞೆಯನ್ನು ಶೋಧಿಸುತ್ತಾನೆ.

ಥಾಮಸ್ ಮಾನ್ ಉತ್ತರ ಜರ್ಮನಿಯ ಲ್ಯುಬೆಕ್ ಎಂಬಲ್ಲಿ 1875ರಲ್ಲಿ ಜನಿಸಿದ. ಒಂದು ಕಾಲಕ್ಕೆ ಸ್ವಾಯತ್ತತೆ ಪಡೆದಿದ್ದ ಲ್ಯುಬೆಕ್ ನಗರ ಇನ್ನೂ ಶ್ರೀಮಂತವ್ಯಾಪಾರಿ ಕುಟುಂಬಗಳಿಂದಲೇ ತುಂಬಿತ್ತು. ಇಂಥದೊಂದು ಕುಟುಂಬಕ್ಕೆ ಸೇರಿದವನು ಮಾನ್. ಅವನ ತಂದೆ ಪ್ರಮುಖ ಧಾನ್ಯ ವ್ಯಾಪಾರಿ, ಶಾಸಕ. ತನ್ನ ಮಕ್ಕಳೂ ಈ ಪಾರಂಪರಿಕ ವ್ಯಾಪಾರವೃತ್ತಿ ಮುಂದುವರಿಸಬೇಕೆಂಬ ಆಸೆ ಅವನದು. ಈ ಹಿನ್ನೆಲೆಯಲ್ಲಿ ಥಾಮಸ್ ಮಾನ್ ಬೂರ್ಜ್ವಾ ಮೌಲ್ಯಗಳನ್ನು ಗ್ರಹಿಸಿ, ಅವುಗಳನ್ನು ಗೌರವಿಸತೊಡಗಿದ. ಅದೇ ಕಾಲಕ್ಕೆ ಅವನಲ್ಲಿ ಮಧ್ಯಮವರ್ಗದ ಜಗತ್ತಿನಲ್ಲಿ ಬದುಕುವ ಕಲಾವಿದ ಒಂದು ರೀತಿಯಿಂದ ನ್ಯಾಯಸಮ್ಮತವಲ್ಲದ, ಕಳಪೆ ಕೆಲಸದಲ್ಲಿ ತೊಡಗಿರುತ್ತಾನೆಂಬ ಭಾವನೆ ಇತ್ತು. ಜರ್ಮನ್ ಹಾಗೂ ಬ್ರೆಜಿಲಿಯನ್ ರಕ್ತಸಂಬಂಧ ಪಡೆದಿದ್ದ ಅವನ ತಾಯಿಯಿಂದಾಗಿ ಆ ಕುಟುಂಬದಲ್ಲಿ ಕಲಾತ್ಮಕ ಸೆಲೆ ಒಡೆದಿತ್ತು. ಥಾಮಸ್ ಮಾನ್‌ನನ್ನು ಬಿಟ್ಟರೆ ಆ ಕುಟುಂಬದ ಇತರ ಮಕ್ಕಳಲ್ಲಿ ಹೇನ್‌ರಿಶ್ (ಕಾದಂಬರಿಕಾರ) ಹಾಗೂ ವಿಕ್ಟರ್ ಗಂಡುಮಕ್ಕಳು. ಮಾನ್‌ನ ತಂಗಿಯರಾದ ಜ್ಯುಲಿಯಾ ಮತ್ತು ಕ್ಲಾರಾ ಮುಂದೆ ವಿಚಿತ್ರ ಸನ್ನಿವೇಶಗಳಲ್ಲಿ ಆತ್ಮಹತ್ಯೆ ಮಾಡಿಕೊಂಡರು.

ಲ್ಯುಬೆಕ್ ನಗರದ ರಿಯಲ್‌ಜಿಮ್ನೇಷಿಯಂ ಎಂಬ ಶಾಲೆಯಲ್ಲಿ ಮಾನ್ ವಿದ್ಯಾರ್ಥಿಯಾದ. ಪ್ರಶ್ಯನ್ ನೀತಿಯನ್ನು ಅನುಸರಿಸುತ್ತಿದ್ದ ಈ ಶಾಲೆಯಲ್ಲಿ ಅವನಿಗೆ

ಮೊದಮೊದಲು ತಾನು 'ಅನ್ಯ'ನೆಂಬ ಭಾವನೆ ಇತ್ತು. ಆದರೂ ಸಾಹಿತ್ಯದಲ್ಲಿ ಒಲವು ಬೆಳೆಸಿಕೊಂಡು ಪದ್ಯ ಬರೆಯುತ್ತಿದ್ದ. 1891ರಲ್ಲಿ ಅವನ ತಂದೆ ಅನಿರೀಕ್ಷಿತವಾಗಿ ಸತ್ತ ಕಾರಣ ಕುಟುಂಬದ ಆಸ್ತಿ ಹಂಚಿಹೋಯಿತು. ಅವನ ತಾಯಿ ಮ್ಯೂನಿಖ್‌ನಗರಕ್ಕೆ ಬಂದು ನೆಲೆಸಿದಳು. ಮುಂದೆ ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ಕಲಿತರೂ ಮಾನ್ ಪದವಿಯನ್ನೇನೂ ಪಡೆಯಲಿಲ್ಲ. ಸ್ವಲ್ಪ ಕಾಲ ಇನ್‌ಶೂರೆನ್ಸ್ ಕಂಪೆನಿಯೊಂದರಲ್ಲಿ ಗುಮಾಸ್ತನಾಗಿದ್ದು ಬಿಟ್ಟರೆ ಮತ್ತೆಲ್ಲೂ ಅವನು ಕೆಲಸ ಮಾಡಿದ್ದಿಲ್ಲ – ಸಾಹಿತ್ಯವನ್ನು ಹೊರತುಪಡಿಸಿ.

1890ರ ದಶಕ ಮಾನ್‌ನನ್ನು ಪ್ರತಿಭಾವಂತ ಲೇಖಕನನ್ನಾಗಿ ರೂಪಿಸತೊಡಗಿದ ಕಾಲ. ಆಗ ಅವನು ನೀಟ್ಷೆ, ಶೋಪೆನ್‌ಹಾವರ್, ಹಾಗೂ ರಷ್ಯನ್ ಕಾದಂಬರಿಕಾರರನ್ನು ಓದಿದ ; ಇಟಲಿ ಪ್ರವಾಸ ಕೈಗೊಂಡ ; ಹಾಸ್ಯಪತ್ರಿಕೆಯೊಂದರ ಸಂಪಾದಕೀಯ ವಿಭಾಗದಲ್ಲಿ ಕೆಲಸಮಾಡಿದ್ದಲ್ಲದೆ ಕತೆ ಬರೆಯುವುದರಲ್ಲೂ ಕೈ ಆಡಿಸಿದ. ಮೊದಲ ಕಾದಂಬರಿ 'ಬುಡೆನ್‌ಬ್ರೂಕ್ಸ್' ಪ್ರಕಟವಾದದ್ದು 1901ರಲ್ಲಿ. ಆತ್ಮಚರಿತ್ರಾತ್ಮಕವಾದ ಈ ಕಾದಂಬರಿ ಧಾನ್ಯವ್ಯಾಪಾರಿ ಕುಟುಂಬವೊಂದರ ನಾಲ್ಕು ಪೀಳಿಗೆಗಳ ಏಳಿಗೆ ಹಾಗೂ ಅವನತಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿತು ; ಬಹುಬೇಗ ಹಲವಾರು ಮುದ್ರಣಗಳನ್ನು ಕಂಡು ಅವನಿಗೆ ನೊಬೆಲ್ ಬಹುಮಾನವನ್ನೂ ದೊರಕಿಸಿಕೊಟ್ಟಿತು. ನಂತರ 1903ರಲ್ಲಿ 'ಟ್ರಿಸ್ಟನ್' ಎಂಬ ಕಥಾಸಂಗ್ರಹ ಹೊರಬಂತು. ಇದರಲ್ಲಿರುವ ಜಗತ್ಪ್ರಸಿದ್ಧ ಕಥೆ 'ಟೋನಿಯೋ ಕ್ರೂಗರ್'. ಈ ಕತೆಯೂ ಆತ್ಮಚಾರಿತ್ರಾತ್ಮಕವಾಗಿದ್ದು ಇಲ್ಲಿನ ನಾಯಕ ಸ್ವತಃ ಮಾನ್‌ನೇ ಆಗಿದ್ದ; ಘಟನೆಗಳು ನಿಜಕ್ಕೂ ನಡೆದುವೇ. ಅವನ ಅನೇಕ ಕಥೆಗಳಂತೆ ಇಲ್ಲಿನ ವಸ್ತುವೂ ಒಂದೇ : ಸುತ್ತಲಿನ ಆರೋಗ್ಯಕರ ಬದುಕಿನಲ್ಲಿ ಬೆರೆಯಲಾಗದ ಪ್ರತಿಭಾವಂತ ಕಲಾವಿದನ ಸ್ಥಿತಿ.

ಮಾನ್ 1905ರಲ್ಲಿ ಕಾತ್ಯಾ ಪ್ರಿಂಗ್‌ಶೈಮ್‌ಳನ್ನು ಮದುವೆಯಾದ. ಶ್ರೀಮಂತ, ಸುಸಂಸ್ಕೃತ ಕುಟುಂಬದವಳಾದ ಈಕೆ ಮ್ಯೂನಿಖ್ ವಿಶ್ವವಿದ್ಯಾಲಯದ ಗಣಿತ ಪ್ರಾಧ್ಯಾಪಕರ ಮಗಳು. ಆ ಕಾಲದ ಅವನ ದಾಂಪತ್ಯ ಜೀವನ 'ರಾಯಲ್ ಹೈನೆಸ್' ಎಂಬ ನಂತರದ ಕಾದಂಬರಿಯಲ್ಲಿ ದಾಖಲಾಗಿದೆ. ಲಘು ಧಾಟಿಯಲ್ಲಿರುವ ಈ ಕೃತಿ ಸುಖಾಂತವಾಗಿದೆ. ಮಾನ್‌ನ ಆರು ಮಂದಿ ಮಕ್ಕಳಲ್ಲಿ ಕ್ಲಾಸ್ ಮತ್ತು ಎರಿಕಾ ಇಬ್ಬರೂ ಬರಹಗಾರರಾದರೆ ಗೋಲೋ ಪ್ರಸಿದ್ಧ ಇತಿಹಾಸಕಾರನಾದ.

'ಡೆತ್ ಇನ್ ವೆನಿಸ್' ಮಾನ್‌ನ ಬಹುಮುಖ್ಯ ಕೃತಿಗಳಲ್ಲಿ ಒಂದು. ಮಾನ್ 1911ರಲ್ಲಿ ವೆನಿಸ್ ನಗರದಲ್ಲಿ ಕಳೆದ ಒಂದು ದಿನವಷ್ಟೆ ಈ ಕಿರುಕಾದಂಬರಿಯ ಕಾಲ. ಕಲೆ ಮತ್ತು ರೋಗ, ಪ್ರೇಮ ಮತ್ತು ಸಾವು – ಇವುಗಳ ನಡುವಣ ಸಂಬಂಧವನ್ನು

ವಿಶ್ಲೇಷಿಸುವ ಇಲ್ಲಿನ ನಾಯಕ ಗುಸ್ತಾವ್ ವಾನ್ ಆಶೆನ್‌ಬಾಕ್. ಈತ ಪ್ರಸಿದ್ಧ ಲೇಖಕ ; ತುಂಬ ಶಿಸ್ತಿನ ಜೀವನ ನಡೆಸಿದವನು. ವೆನಿಸ್‌ಗೆ ಪ್ರವಾಸ ಹೋಗಿದ್ದಾಗ ಅಲ್ಲಿ ಈತ ತನ್ನನ್ನು ವಿಶೇಷವಾಗಿ ಆಕರ್ಷಿಸಿದ ಹುಡುಗನೊಬ್ಬನನ್ನು ಎಷ್ಟೆಲ್ಲ ಪ್ರೀತಿಸುತ್ತಾನೆಂದರೆ, ಕಾಲರಾ ಸೋಂಕು ಇರುವ ಆ ನಗರದಲ್ಲೇ ಇದ್ದುಬಿಡುತ್ತಾನೆ. ಪ್ರೀತಿಗೆ, ಅವಮಾನಕ್ಕೆ ತನ್ನನ್ನು ಒಳಗಾಗಿಸಿಕೊಂಡಂತೆ ಕಾಲರಕ್ಕೂ ಒಳಗಾಗುತ್ತಾನೆ, ಕೊನೆಗೆ ಸಾಯುತ್ತಾನೆ. ತಾತ್ವಿಕ ಹಾಗೂ ಮನೋವೈಜ್ಞಾನಿಕ ಒಳನೋಟಗಳಿರುವ 'ಡೆತ್ ಇನ್ ವೆನಿಸ್' ಒಂದು 'ಕ್ಲಾಸಿಕ್' ಎನಿಸಿದೆ.

ಅದೇ ವರ್ಷ ಕಾತ್ಯಾ ಶ್ವಾಸಕೋಶದ ತೊಂದರೆಯಿಂದಾಗಿ ಡಾವೋಸ್ ಎಂಬಲ್ಲಿ ಸ್ಯಾನಿಟೋರಿಯಂನಲ್ಲಿ ಸ್ವಲ್ಪ ಕಾಲ ಇರಬೇಕಾಯಿತು. ಅವಳ ಜೊತೆ ಅಲ್ಲಿಗೆ ಹೋದ ಮಾನ್‌ಗೆ, ಮುಂದೆ 'ದಿ ಮ್ಯಾಜಿಕ್ ಮೌಂಟನ್'ನಲ್ಲಿ (1924) ಅವನು ನಿರೂಪಿಸಿದ ಕೆಲವು ಅನುಭವಗಳಾದುವು. ಇವನ್ನು 'ಡೆತ್ ಇನ್ ವೆನಿಸ್'ನ ಮುಂದಿನ ಭಾಗವಾಗಿ ಬರೆಯುವ ಉದ್ದೇಶವಿತ್ತು ಮಾನ್‌ಗೆ. ಆದರೆ ಅದೇ ಕಾಯಿಲೆ, ಅದೇ ಪ್ರೇಮ ಮತ್ತು ಸಾವುಗಳಂಥ ವಸ್ತುಗಳನ್ನು ವ್ಯಂಗ್ಯದೃಷ್ಟಿಯಿಂದ ಪರಿಶೀಲಿಸಿದ 'ದಿ ಮ್ಯಾಜಿಕ್ ಮೌಂಟನ್', 'ಡೆತ್ ಇನ್ ವೆನಿಸ್'ಗಿಂತ ಬೇರೆಯೇ ಆಗಿ ಬೆಳೆಯಿತು.

ಮಾನ್ ಮೊದಲ ಮಹಾಯುದ್ಧದಲ್ಲಿ ಭಾಗವಹಿಸಲಿಲ್ಲ, ನಿಜ. ಆದರೆ ಯೂರೋಪಿನ ಸಂಸ್ಕೃತಿಯಲ್ಲಿ ಜರ್ಮನಿಗಿರುವ ಪಾತ್ರದ ಬಗ್ಗೆ ಸಾಕಷ್ಟು ಯೋಚಿಸಿದ್ದ. ಈ ದಿಸೆಯಲ್ಲಿ ಅವನ ವಿಚಾರಗಳು 'ರಿಫ್ಲೆಕ್ಷನ್ಸ್ ಆಫ್ ಎ ನಾನ್-ಪೊಲಿಟಿಕಲ್ ಮ್ಯಾನ್' ಎಂಬ ಕೃತಿಯಲ್ಲಿ ಅಡಕವಾಗಿವೆ. ಇಲ್ಲಿ ಜರ್ಮನ್ ರೊಮ್ಯಾಂಟಿಕ್ ರಾಷ್ಟ್ರೀಯವಾದದ ಬಗೆಗೆ ಒಂದು ಅತಿಸಂಪ್ರದಾಯವಾದೀ ಧೋರಣೆ ವ್ಯಕ್ತವಾಗುತ್ತದೆ. ಮೌಲ್ಯಗಳ ದೃಷ್ಟಿಯಿಂದ ಅವನ ತಮ್ಮ ಹೆನ್ರಿಶ್‌ನ ವಿಚಾರಗಳೇ ಹೆಚ್ಚು ಸಾರ್ವತ್ರಿಕವಾಗಿದ್ದುವು. ಆದ್ದರಿಂದ ಮಾನ್ ತನ್ನ ತಮ್ಮನ ಜೊತೆ ಭಿನ್ನಾಭಿಪ್ರಾಯ ತಾಳುವಂತಾಯಿತು. ಆದರೆ ಮಹಾಯುದ್ಧದ ನಂತರ ಮಾನ್ ಉದಾರವಾದಿ ಪ್ರಜಾಸತ್ತಾತ್ಮಕ ನಿಲುವು ತಾಳಿದ. 1920ರ ದಶಕದಲ್ಲಿ ಅವನು ಸದುದ್ದೇಶಗಳನ್ನು ಪ್ರತಿಪಾದಿಸುತ್ತಿದ್ದ ವೆಯಿಮರ್ ಗಣರಾಜ್ಯವನ್ನು ಬೆಂಬಲಿಸಿದ. 1930ರಲ್ಲಿ ತನ್ನ ಎರಡು ಕೃತಿಗಳಲ್ಲಿ ಫ್ಯಾಸಿಸಂನ ವಿರುದ್ಧ ಪ್ರತಿಭಟಿಸಿದ. ಒಂದು ಜರ್ಮನ್ ಜನತೆಯನ್ನು ಉದ್ದೇಶಿಸಿ ಬರೆದ 'ಅನ್ ಅಪೀಲ್ ಟು ರೀಸನ್' ಎಂಬ ಗ್ರಂಥ ; ಇನ್ನೊಂದು ಮುಸ್ಸೋಲಿನಿಯ ಇಟಲಿಯಲ್ಲಿ ನಡೆಯುವ 'ಮರಿಯೋ ಅಂಡ್ ದಿ ಮ್ಯಾಜಿಷಿಯನ್' ಎಂಬ ಕಥೆ. 1933ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದಾಗ ಮಾನ್ ವಿದೇಶಪ್ರವಾಸದಲ್ಲಿದ್ದ. ಆಮೇಲೆ ಹದಿನಾರು ವರ್ಷ ಅವನು ದೇಶದ ಹೊರಗೇ ನೆಲೆಸಿದ್ದ. 1936ರಲ್ಲಿ ನಾತ್ಸಿ ಸರಕಾರ ಅವನ ಪೌರತ್ವವನ್ನು ಕಸಿದುಕೊಂಡಿತು ; ಬಾನ್ ವಿಶ್ವವಿದ್ಯಾನಿಲಯ ಅವನಿಗೆ ನೀಡಿದ್ದ ಗೌರವ ಡಾಕ್ಟೊರೇಟನ್ನು ಹಿಂತೆಗೆದು ಕೊಂಡಿತು. 1938ರಲ್ಲಿ ಅಮೆರಿಕದಲ್ಲಿ ನೆಲೆಸಿದ ಮಾನ್ 1944ರಲ್ಲಿ ಅಲ್ಲಿನ ಪೌರನಾದ.

ಮಾನ್‌ನ ನಂತರದ ಕೃತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು 'ಜೋಸೆಫ್ ಅಂಡ್ ಹಿಸ್ ಬ್ರದರ್ಸ್'. 1933-43ರ ಕಾಲಾವಧಿಯಲ್ಲಿ ಪ್ರಕಟವಾದ ಈ ಬೃಹತ್ ಕಾದಂಬರಿಯಲ್ಲಿ ಬೈಬಲಿನಲ್ಲಿ ಬರುವ ಜೋಸೆಫ್‌ನ ಕಥೆ ಇದ್ದು ಅದು ಆರಂಭಕಾಲದ ಧರ್ಮ ಹಾಗೂ ಪುರಾಣಗಳ ಬಗೆಗೆ ಮಾನ್‌ನ ವಿಚಾರಗಳನ್ನು ಧ್ವನಿಸುತ್ತದೆ. 'ಡಾಕ್ಟರ್ ಫಾಸ್ಟಸ್' (1948) ಫೌಸ್ಟ್ ಕಥಾನಕದ ಆಧುನಿಕ ರೂಪ. ಯುದ್ಧ ಹಾಗೂ ಫ್ಯಾಸಿಸಂನ ಹಿನ್ನೆಲೆಯಲ್ಲಿ ಅಪ್ರತಿಮ ವಾಗ್ಗೇಯಕಾರನೊಬ್ಬನ ಜೀವನವನ್ನು ನಿರೂಪಿಸುತ್ತದೆ ಈ ಕಾದಂಬರಿ. 'ದಿ ಅಡ್ವೆಂಚರ್ಸ್ ಆಫ್ ಫೆಲಿಕ್ಸ್ ಕ್ರಲ್' (1954) ನೆಚ್ಚಿಕೊಳ್ಳಬಹುದಾದ ಒಬ್ಬ ಘಟಿಂಗನ ವಿನೋದಭರಿತ ಕಥೆ.

1949ರಲ್ಲಿ ಮಾನ್ ಸ್ವಲ್ಪ ಕಾಲ ಜರ್ಮನಿಗೆ ಹಿಂತಿರುಗಿ ಬಂದರೂ ಅಲ್ಲಿ ನೆಲೆಸಲು ಇಷ್ಟಪಡಲಿಲ್ಲ. ಬದಲಾಗಿ ಅವನು ನೆಲೆಸಿದ್ದು ಸ್ವಿಟ್ಜರ್ಲೆಂಡಿನಲ್ಲಿ. ಅಲ್ಲಿಯೇ 1955ರಲ್ಲಿ ತನ್ನ 80ನೆಯ ವಯಸ್ಸಿನಲ್ಲಿ ಅವನು ತೀರಿಕೊಂಡ.

2

'ದಿ ಮ್ಯಾಜಿಕ್ ಮೌಂಟನ್' ವಿಚಾರಗಳ ಒಂದು ಕಾದಂಬರಿಯಾಗಿರುವುದರಿಂದ, ಅದರ ಕಥೆಯನ್ನು ಸಂಗ್ರಹಿಸಿ ಹೇಳುವುದು ಸುಲಭವಲ್ಲ. ಮೊದಲನೆಯ ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ ಸ್ವಿಟ್ಜರ್ಲೆಂಡಿನ ಡಾವೋಸ್ ಕ್ಷಯರೋಗಿಗಳ ಒಂದು ಆರೋಗ್ಯಧಾಮ ವಾಗಿತ್ತು. ಆಹ್ಲಾದಕರ ಗಾಳಿ ಬೀಸುತ್ತಿದ್ದ ಈ ಪರ್ವತ ಪ್ರದೇಶದಲ್ಲಿ ಅದ್ದೂರಿಯ ಹೋಟೆಲ್‌ಗಳಂತೆ ನಡೆಯುತ್ತಿದ್ದ ಕೆಲವು ಸ್ಯಾನಿಟೋರಿಯಂಗಳಿದ್ದುವು. ಇವುಗಳಲ್ಲಿ ಬೆರ್ಗ್‌ಹಾಫ್ ಎಂಬುದು ಒಂದು ಸ್ಯಾನಿಟೋರಿಯಂ. ಇಲ್ಲಿಗೆ ಹ್ಯಾಂಬರ್ಗಿನಿಂದ ಹ್ಯಾನ್ಸ್ ಕ್ಯಾಸ್ಟೋರ್ಪ್ ಎಂಬ ಸೌಮ್ಯ ಮನಸ್ಸಿನ, ಅಷ್ಟಾಗಿ ಎದ್ದುಕಾಣದ ತರುಣ ಬರುತ್ತಾನೆ. ಈತ ಆರೋಗ್ಯವಂತ ; ಸ್ಯಾನಿಟೋರಿಯಂನಲ್ಲಿ ರೋಗಿಯಾಗಿರುವ ತನ್ನ ಚಿಕ್ಕಪ್ಪನ ಮಗ ಜೋಕಿಮ್‌ನ ಜೊತೆ ಕೆಲವು ದಿನ ಇರಲು ಬಂದವನು. ವಿಚಿತ್ರದ ಸಂಗತಿಯೆಂದರೆ ಈ ಹ್ಯಾನ್ಸ್ ಸ್ಯಾನಿಟೋರಿಯಂನ ಜೀವನದಿಂದ ಇದ್ದಕ್ಕಿದ್ದಂತೆ ಆಕರ್ಷಿತನಾಗುವುದು. ಅಲ್ಲಿ ರೋಗಿಯಾಗಿರುವ ಕ್ಲಾಡಿಯಾ ಕ್ಲಾವ್‌ಶೆಟ್ ಎಂಬ ರಷ್ಯನ್ ಮಹಿಳೆಯಲ್ಲಿ ಅವನಿಗೆ ಒಲವು. ಕೆಲವು ದಿನಗಳಾದ ಮೇಲೆ 'ರೋಗಿ ಬಯಸಿದ್ದೇ ಹಾಲು ಅನ್ನ' ಎಂಬಂತೆ ಅವನಿಗೂ ಕ್ಷಯರೋಗ ತಗಲುತ್ತದೆ, ಈಗ ಇಷ್ಟ ಬಂದಷ್ಟು ದಿನ ಅಲ್ಲಿರಲು ಅವನಿಗೆ ಅರ್ಹತೆ ಸಿಕ್ಕಿದಂತೆ. ಏಳು ವರ್ಷಗಳವರೆಗೆ ಇಲ್ಲಿಯೇ ಇದ್ದು ಯುದ್ಧ ಪ್ರಾರಂಭವಾದಾಗ ಮಿಲಿಟರಿಗೆ ಸೇರಿಕೊಳ್ಳಲು ಹೊರಡುತ್ತಾನೆ. 'ದಿ ಮ್ಯಾಜಿಕ್ ಮೌಂಟನ್' ಅವನ ಆ ಏಳು ವರ್ಷಗಳ ಅನುಭವವನ್ನು, ಅವನ ಮಾನಸಿಕ ಹಾಗೂ ಭಾವನೆಗಳ ವಿಕಾಸವನ್ನು,

ರೋಗದ ಮಾನಸಿಕ ಹಾಗೂ ಆಧ್ಯಾತ್ಮಿಕ ಅರ್ಥದ ಬಗೆಗೆ ಅವನು ಪಡೆಯುವ ಒಳನೋಟಗಳನ್ನು ನಿರೂಪಿಸುವ ಕಥೆ.

ಕಾದಂಬರಿಯ ಪ್ರಾರಂಭದ ಅಧ್ಯಾಯಗಳಲ್ಲಿ ಬೆರ್ಗ್ಹಾಫ್ ಬಗೆಗೆ ಹ್ಯಾನ್ಸನ ಮೊದಲ ಅನುಭವಗಳ ಚಿತ್ರವಿದೆ. ಎಲ್ಲೆಲ್ಲೂ ಜ್ವರ ತುಂಬಿದ ವಾತಾವರಣ. ರೋಗಿಗಳು ತೀರ ಗಂಭೀರವಾದ ರೋಗಕ್ಕೆ ತುತ್ತಾಗದಿದ್ದರೂ ಬೇರೂರಿದ ಜ್ವರದಿಂದ ಉತ್ತೇಜಿತ ರಾದವರು. ದಿನದ ಬಹುಕಾಲ ಲಲ್ಲೆಗರೆಯುವುದರಲ್ಲೇ ಅವರಿಗೆ ಆಸಕ್ತಿ. ಸ್ವತಃ ಆಸ್ಪತ್ರೆಯೇ ಆರೋಗ್ಯ ಕರುಣಿಸದ ರೋಗಕ್ಕೆ ಸೀಮಿತವಾದ ಕ್ಷೇತ್ರ. ತಮ್ಮ ಖಾಯಿಲೆ ಯಿಂದ ಹೆಮ್ಮೆಪಡುವ ರೋಗಿಗಳು, ಬಹುಶಃ ಕ್ಷಯರೋಗಕ್ಕೆ ತುತ್ತಾಗಿರುವ ಆಸ್ಪತ್ರೆಯ ಡೈರೆಕ್ಟರು. ಮತ್ತೆ ಈ ಆಸ್ಪತ್ರೆಯನ್ನು ಲಾಭಕ್ಕಾಗಿ ನಡೆಸುತ್ತಿರುವುದರಿಂದ, ಇದರ ಮಾಲಿಕರಿಗೆ ರೋಗಿಗಳು ಬೇಗ ಗುಣಮುಖರಾಗಬೇಕೆಂಬ ಇರಾದೆಯಿಲ್ಲ. ಹ್ಯಾನ್ಸನ ಬದುಕು ಆರೋಗ್ಯಭರಿತವಾಗಿ, ಹೊಣೆಗಾರಿಕೆಯರಿತ, ಕ್ರಿಯಾಶೀಲ ಉದ್ಯಮ ವೊಂದಕ್ಕಾಗಿ ರೂಪುಗೊಂಡದ್ದು. ಆದರೆ ಅವನಿಗೆ ಖಾಯಿಲೆ, ಇಂದ್ರಿಯ ಲೋಲುಪತೆ, ನೈತಿಕ ಸ್ವಾತಂತ್ರ್ಯ – ಇವುಗಳ ಮಿಶ್ರಣವಾಗಿರುವ ಆಸ್ಪತ್ರೆಯದೇ ಮೋಹ. ಸೆಟ್ಟೆಂಬ್ರಿನಿ ಎಂಬ ರೋಗಿ ಹ್ಯಾನ್ಸನಿಗೆ 'ಈ ಸ್ಥಳದ ಆಕರ್ಷಣೆಗೆ ಮರುಳಾಗುವ ಮುನ್ನವೇ ಇಲ್ಲಿಂದ ಹೋಗು' ಎಂದು ಎಚ್ಚರಿಸುತ್ತಾನೆ. ಆದರೆ ಹ್ಯಾನ್ಸ್, ರೋಗ ಮತ್ತು ಸಾವುಗಳ ಮೂಲಕ ಸಾಗದೆ ಬದುಕನ್ನು, ಪ್ರೀತಿಯನ್ನು ಅರಿಯಲಾಗದ ಸ್ಥಿತಿ ತಲುಪಿದವನು.

ಹ್ಯಾನ್ಸನ ಆಧ್ಯಾತ್ಮಿಕ ಶಿಕ್ಷಣದಲ್ಲಿ ಪ್ರೀತಿಯದು ಪ್ರಮುಖ ಪಾತ್ರ. ವರ್ಷಗಳ ಹಿಂದೆ ಅವನು ತನ್ನ ಶಾಲೆಯ ಒಬ್ಬ ಹುಡುಗನೊಡನೆ ಅವ್ಯಕ್ತವಾದ ಒಂದು ಬಗೆಯ ಪ್ರೇಮ ಪ್ರಕರಣದಲ್ಲಿ ಪಾಲುಗೊಂಡಿದ್ದ. ಆ ಘಟನೆಯ ನೆನಪು ಈಗ ಕನಸುಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ಮತ್ತೆ ಆ ಹುಡುಗನ ಹಾಗೆಯೇ ಕಾಣುತ್ತಿದ್ದ ಕ್ಲಾಡಿಯಾ ಅವನ ಈ ನೆನಪುಗಳನ್ನು ಮತ್ತಷ್ಟು ಕೆರಳಿಸುತ್ತಿದ್ದಳು. ಹ್ಯಾನ್ಸನನ್ನು ಕಾಡುವ ಜ್ವರವೆಂದರೆ ಅವನಿಗೆ ಕ್ಲಾಡಿಯಾಳಲ್ಲಿ ಇರುವ – ಮೊದಮೊದಲು ಸ್ಪಷ್ಟವಾಗದ, ಕ್ರಮೇಣ ಬಹಿರಂಗವಾಗಿ ವ್ಯಕ್ತವಾದ – ಜೀವಂತ ಪ್ರೀತಿಯೇ. ಈ ಪ್ರೀತಿ ಫಲಿಸಿದ್ದು ಒಮ್ಮೆ ಮಾತ್ರ. ಮರುದಿನವೇ ಕ್ಲಾಡಿಯಾ ತನ್ನ ಗಂಡನನ್ನು ಸೇರಿಕೊಳ್ಳಲು ಆಸ್ಪತ್ರೆ ಬಿಟ್ಟು ಹೊರಟುಬಿಡುತ್ತಾಳೆ.

ಬೆರ್ಗ್ಹಾಫ್‌ನ ಉರಿಯ ವಾತಾವರಣದಲ್ಲಿ ಹ್ಯಾನ್ಸನ ಬೌದ್ಧಿಕ ಸಾಮರ್ಥ್ಯ ಕುಡಿಯೊಡೆಯುತ್ತದೆ. ಅವನು ಅತಿ ಉತ್ಸಾಹದಿಂದ ವೈಜ್ಞಾನಿಕ ಸಾಹಿತ್ಯಕೃತಿಗಳನ್ನು ಓದುತ್ತಾನೆ ; ಫ್ರೆಂಚ್ ಭಾಷೆಯಲ್ಲಿ ಪರಿಣತನಾಗುವುದೇ ಅಲ್ಲದೆ ಮನೋವಿಶ್ಲೇಷಣೆಗೂ ಗುರಿಯಾಗುತ್ತಾನೆ. ಅವನ ಬೌದ್ಧಿಕ ನಿಷ್ಠೆಗಾಗಿ ಹೆಣಗುವವರು ಮುಖ್ಯವಾಗಿ ಇಬ್ಬರು : ಒಬ್ಬ ಉದಾರವಾದಿ, ಮಾನವತಾವಾದಿ ಸೆಟ್ಟೆಂಬ್ರಿನಿ ; ಇನ್ನೊಬ್ಬ ನಾಫ್ತಾ ಎಂಬ ಜೆಸ್ಯೂಟ್.

ಈ ಜೆಸ್ಯೂಟನ ವಿಚಾರ ಯೂರೋಪಿಯನ್ ಸಂಸ್ಕೃತಿಯ ಫ್ಯಾಸಿಸಂ, ಕಮ್ಯೂನಿಸಂ, ಕೆಥಾಲಿಸಿಸಂ – ಹೀಗೆ ಎಲ್ಲ ಸರ್ವಾಧಿಕಾರಿ ವಿಚಾರಧಾರೆಗಳಿಂದ ರೂಪುಗೊಂಡದ್ದು. ಹ್ಯಾನ್ಸ್ ಇವರ ವಾದಗಳಿಗೆ ಕಿವಿಗೊಟ್ಟರೂ ಯಾರೊಬ್ಬರ ವಿಚಾರಧಾರೆಗೂ ಬದ್ಧನಾಗದವನು. ದಟ್ಟವಾಗಿ ಮಂಜು ಸುರಿಸುವ ಬಿರುಗಾಳಿಯೊಂದರಲ್ಲಿ ಒಬ್ಬನೇ ಬರುತ್ತಿದ್ದಾಗ ಅವನಿಗೆ ಉಂಟಾಗುವುದು ಒಂದು ವಿಶಿಷ್ಟ ಜೀವನ ದರ್ಶನ. ಈ ಬಿರುಗಾಳಿಯಲ್ಲಿ ಸಾಗಿಬರುವುದೇ ಅವನಿಗೆ ಸಾವಿನೊಡನೆ ಸರಸವಾಡುವಂಥ ಅನುಭವ ತಂದುಕೊಡುತ್ತದೆ. ಮತ್ತೆ ಅವನು ಅನುಭವಿಸುವ ದರ್ಶನಕ್ಕೆ ಎರಡು ಮುಖ : ಒಂದು, ಯೌವನ, ಆರೋಗ್ಯ, ಸುಖ, ಪ್ರೀತಿ ಇವೆಲ್ಲ ಇರುವ, ರಮಣೀಯವಾದ ಮೆಡಿಟರೇನಿಯನ್ ಜಗತ್ತು ; ಇನ್ನೊಂದು, ಪುರಾತನ ದೇವಾಲಯ ಮತ್ತು ಅದರಲ್ಲಿ ಇಬ್ಬರು ಹೆಂಗಸರು ಒಂದು ಮಗುವನ್ನು ಕತ್ತರಿಸಿ ತಿನ್ನುತ್ತಿರುವ ದೃಶ್ಯ. ಒಂದು ರೀತಿಯಲ್ಲಿ ವಂಶವಾಹಿ ನೆನಪಾದ ಈ ದ್ವಿಮುಖದರ್ಶನ ಹ್ಯಾನ್ಸನಿಗೆ ಸಾವು – ಬದುಕು ಒಟ್ಟಿಗೇ ಇವೆಯೆಂದೂ, ಅವೆರಡನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲವೆಂದೂ, ಬದುಕಿನಲ್ಲಿದ್ದು ಬೆಳಕು ಕಾಣಬೇಕಾದರೆ ಸಾವಿನ ಅನುಭವಕ್ಕೆ ತೆರೆದುಕೊಳ್ಳಲೇಬೇಕೆಂದೂ ಕಲಿಸಿಕೊಡುತ್ತದೆ. ಒಳ್ಳೆಯತನವನ್ನು, ಪ್ರೀತಿಯನ್ನು ಹಂಬಲಿಸುವ ಮನುಷ್ಯ ತನ್ನ ಪ್ರಜ್ಞೆಯ ಮೇಲೆ ಸಾವಿಗೆ ಯಾವುದೇ ಅಧಿಕಾರ ಕೊಡಕೂಡದು ಎಂದು ಧ್ವನಿಸುತ್ತದೆ ಕಾದಂಬರಿಯ ಅಂತ್ಯ.

ಈ ದರ್ಶನವಾದ ಮೇಲೂ ಹ್ಯಾನ್ಸನ ಶಿಕ್ಷಣ ಮುಂದುವರಿಯುತ್ತದೆ. ಜೋಕಿಮ್ ಸತ್ತು, ಒಂದು ಆಧ್ಯಾತ್ಮಿಕ ಆವಾಹನಾ ಕಾರ್ಯಕ್ರಮದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಾನೆ. ಕ್ಲಾಡಿಯಾ, ಪೀಟರ್ ಪೀಪರ್‌ಕಾರ್ನ್ ಎಂಬ ಜಾವಾದ ಡಚ್ ಪ್ಲಾಂಟರನ ಜೊತೆ ಹಿಂತಿರುಗಿ ಬರುತ್ತಾಳೆ. ಈ ಪ್ಲಾಂಟರ್ ತಿನ್ನುವುದರಲ್ಲಿ, ಕುಡಿಯುವುದರಲ್ಲಿ ಗಟ್ಟಿಗ ; ಅನುಭವಿಸುವುದರಲ್ಲೂ ಅಸಾಧ್ಯ. ಇವನ ದೃಷ್ಟಿಯಲ್ಲಿ ಲೈಂಗಿಕ ಪ್ರೇರಣೆಯೆನ್ನುವುದು ವಿಶ್ವದ ಜೀವಶಕ್ತಿ. ಆದರೆ ಇವನೂ ಕಾಯಿಲೆ ಮಲಗಿ ಕಳೆಗುಂದುವುದಷ್ಟೇ ಅಲ್ಲ, ಕೊನೆಗೆ ಆತ್ಮಹತ್ಯೆಯನ್ನೇ ಮಾಡಿಕೊಂಡುಬಿಡುತ್ತಾನೆ. ಸಾಯುವ ಮುನ್ನ ಹ್ಯಾನ್ಸ್ ಮತ್ತು ಕ್ಲಾಡಿಯಾರ ನಡುವಣ ಪ್ರೀತಿಯನ್ನು ಅವನು ಹರಸುತ್ತಾನೆ.

ಈ ನಡುವೆ ಯೂರೋಪಿನಲ್ಲಿ ಉಲ್ಬಣಗೊಳ್ಳುತ್ತಿದ್ದ ಯುದ್ಧದ ಕಾಯಿಲೆ ಬೆರ್ಗಾಫ್‌ನ ಸಣ್ಣ ಜಗತ್ತನ್ನೂ ತಲುಪುತ್ತದೆ. ಪರಿಸ್ಥಿತಿ ಹದಗೆಡುತ್ತದೆ. ಎಲ್ಲೆಲ್ಲೂ ಯೆಹೂದ್ಯ ವಿರೋಧಿ ಚಟುವಟಿಕೆಗಳು, ಅರ್ಥವಿಲ್ಲದ ಹಿಂಸಾಚಾರ. ನಾಫ್ತಾ ಮತ್ತು ಸೆಟ್ಟೆಂಬ್ರಿನಿಯರು ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಸಹಿಸಲಾರದೆ ದ್ವಂದ್ವ ಯುದ್ಧಕ್ಕೆ ಅಣಿಯಾಗುತ್ತಾರೆ. ಸೆಟ್ಟೆಂಬ್ರಿನಿಯ ಗುಂಡು ಗಾಳಿಗೆ ಹಾರಿದರೆ, ನಾಫ್ತಾ ತನ್ನನ್ನು ತಾನೇ ಕೊಂದುಕೊಳ್ಳುತ್ತಾನೆ. ಯುದ್ಧ ಇನ್ನಷ್ಟು ವ್ಯಾಪಿಸುತ್ತದೆ. ಈಗ ಅಂಥ ತೀವ್ರ ಕಾಯಿಲೆ ಇಲ್ಲದ ಹ್ಯಾನ್ಸನಿಗೆ ಕರೆ ಬರುವುದು ಸೈನ್ಯದಿಂದ. ಇದರ ಪರಿಣಾಮವಾಗಿ ಅತ್ಯಂತ

ಮನಮೋಹಕವಾದ ಆ ಮಾಂತ್ರಿಕ ಪರ್ವತದ ಮೇಲೆ ಏಳು ವರ್ಷಗಳವರೆಗೆ ಅವನನ್ನು ಕವಿದಿದ್ದ ಮೋಡಿಗೆ ಕೊನೆಗ ಅಂತ್ಯ.

'ದಿ ಮ್ಯಾಜಿಕ್ ಮೌಂಟನ್' ಒಂದೇ ಪಟ್ಟಿಗೆ ಹಲವು ಅರ್ಥಗಳನ್ನು ಹೊಳೆಯಿಸುವ ಅಪರೂಪದ ಕಾದಂಬರಿ. ಅದನ್ನು ಅನೇಕ ರೀತಿಗಳಲ್ಲಿ ಓದಬಹುದು. ಒಂದೇ ರೀತಿಯ ಓದಿನಿಂದ ಅದರ ವಿವಿಧ ಒಳನೋಟಗಳು ಬಿಚ್ಚಿಕೊಳ್ಳಲಾರವು. ಮೇಲು ನೋಟಕ್ಕೆ ಅದು ಸ್ಯಾನಿಟೋರಿಯಂ ಜೀವನವನ್ನು ಮನೋರಂಜಕವಾಗಿ ಚಿತ್ರಿಸುವ ಕೃತಿ ಅಥವಾ ಕ್ಷಯರೋಗದ ನೈಸರ್ಗಿಕ ಅಧ್ಯಯನ ನಡೆಸಿರುವ ಕೃತಿ. ಇನ್ನೊಂದು ಹಂತದಲ್ಲಿ ಇದನ್ನೊಂದು ಸಾಮಾಜಿಕ-ರಾಜಕೀಯ ಕಾದಂಬರಿಯಾಗಿ ಗ್ರಹಿಸಬಹುದು. ನಿಜಕ್ಕೂ ಇಲ್ಲಿ ದೊರೆಯುವುದು ಮೊದಲ ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ ಇದ್ದ ಯೂರೋಪಿನ ಮೇಲ್ಮಧ್ಯಮ ವರ್ಗದ ಒಂದು ಚಿತ್ರ. ಸಮೃದ್ಧಿಯನ್ನು ಕಂಡ ಈ ವರ್ಗದ ಸಮಾಜ ಲಾಭಕರವಾಗಿತ್ತು, ಸ್ಥಿರವಾಗಿತ್ತು. ಬೆರ್ಗ್‌ಹಾಫ್ ಸ್ಯಾನಿಟೋರಿಯಂ ಈ ಸಮಾಜದ ಒಂದು ಸೂಕ್ಷ್ಮರೂಪವಷ್ಟೆ. ಇಲ್ಲಿನ ಭಾವಣೆಯಡಿ ಯೂರೋಪಿನ ಪ್ರತಿಯೊಂದು ದೇಶದ ಪ್ರಜೆಗಳಿಗಷ್ಟೇ ಅಲ್ಲ, ಇತರ ದೇಶಗಳವರಿಗೂ ಆಶ್ರಯ ಸಿಕ್ಕಿದೆ. ಈ ಸಣ್ಣ ಜಗತ್ತಿನಲ್ಲಿ ಹ್ಯಾನ್ಸ್ ಮತ್ತು ಜೋಕಿಮ್ ಪ್ರತಿನಿಧಿಸುವುದು ಜರ್ಮನಿಯ ಎರಡು ಮುಖಗಳನ್ನು – ಒಂದು ಹ್ಯಾನ್ಸನ ನಾಗರಿಕ ಮುಖ, ಇನ್ನೊಂದು ಜೋಕಿಮ್‌ನ ಸೈನಿಕ ಮುಖ. ಜೋಕಿಮ್ ಯಾವುದನ್ನೂ ಪ್ರಶ್ನಿಸದೆ ವಿಧಿ ಕರೆದೊಯ್ದತ್ತ ಸಾಗುವವನು. ಆದರೆ ಹ್ಯಾನ್ಸ್ ಎರಡು ಧ್ರುವಗಳಿಂದ ಘಾಸಿಗೊಂಡವನು : ಒಂದು ಧ್ರುವ ಹ್ಯಾಂಬರ್ಗಿನಲ್ಲಿ ತನ್ನ ಕುಟುಂಬ ಹಾಗೂ ತನ್ನ ಕೆಲಸ ಪ್ರತಿನಿಧಿಸುವ, ಓರಣವುಳ್ಳ ಗೌರವಯುತ ಬದುಕು ; ಇನ್ನೊಂದು ಸಂಪ್ರದಾಯ ಬಾಹಿರವಾಗಿ ವರ್ತಿಸುವ ಮೂಲಕ ಕ್ಲಾಡಿಯಾ ಪ್ರತಿನಿಧಿಸುವ, ವೈಚಾರಿಕ ಸುರಚನೆಯಿಲ್ಲದ, ಮೂಲಪ್ರವೃತ್ತಿಗಳ ಪರವಾದ ಬದುಕು. ಅಲ್ಲದೆ ಅವನು 'ಸ್ವತಃ ನೇಮಿಸಿಕೊಂಡ' 'ಗುರು'ಗಳಾಗಿರುವ ಮಾನವತಾವಾದಿ ಸೆಟ್ಟೆಂಬ್ರಿನಿ ಹಾಗೂ ಮೂಲತಃ ಫ್ಯಾಸಿಸ್ಟ್ ಆಗಿರುವ ನಾಫ್ತಾ – ಇವರಿಬ್ಬರ ವಿಚಾರಗಳ ನಡುವೆ ತನ್ನದೇ ಆದ ನಿಲುವನ್ನು ತಾಳಲು ಹೆಣಗಿದವನು. ಜರ್ಮನಿಯ ವೆಯಿಮರ್ ಗಣರಾಜ್ಯದ ಕಾಲದಲ್ಲಿ ನಡು ವಯಸ್ಸಿನವರಾಗಿರಬಹುದಾದ ಜರ್ಮನ್ ಪೀಳಿಗೆಗೆ ಸೇರಿದವನು ಹ್ಯಾನ್ಸ್. ಆದ್ದರಿಂದಲೇ ಅವನು ತೆಗೆದುಕೊಳ್ಳುವ ತೀರ್ಮಾನ ಸಾಂಕೇತಿಕವಾಗಿ ಆ ಪೀಳಿಗೆಯವರದೂ ಆಗುತ್ತದೆ.

ವಿಮರ್ಶಕರ ಅಭಿಪ್ರಾಯದಲ್ಲಿ 'ದಿ ಮ್ಯಾಜಿಕ್ ಮೌಂಟನ್' 'ಬಿಲ್ಡಿಂಗ್ಸ್ ರೋಮಾನ್' ಧಾಟಿಯ ಕೃತಿ. ಅಂದರೆ ಯುವಕನೊಬ್ಬನ ಗುಣ, ಸ್ವಭಾವಗಳ ಬೆಳವಣಿಗೆಯನ್ನು ನಿರೂಪಿಸುವ ಮನೋವಿಶ್ಲೇಷಣೆಯ ಕಾದಂಬರಿ ಎಂದಾಯಿತು. ಇಲ್ಲಿ ಹ್ಯಾನ್ಸ್ ಒಂದು ಬಗೆಯ ವಿಧಿವತ್ತಾದ ದೀಕ್ಷೆಯಂತೆ ಅನುಭವಗಳನ್ನು ಪಡೆಯುತ್ತಾನೆ.

ಕಾದಂಬರಿಯುದ್ದಕ್ಕೂ ಅವನು ಪ್ರಶ್ನೆ ಕೇಳುತ್ತಾನೆ, ತಾನೇ ಪ್ರಶ್ನೆಗೆ ಗುರಿಯಾಗುತ್ತಾನೆ, ಕೆಲವು ಅಗ್ನಿ ಪರೀಕ್ಷೆಗಳಿಗೆ ತನ್ನನ್ನೇ ಒಡ್ಡಿಕೊಳ್ಳುತ್ತಾನೆ. ಕೊನೆಗೆ ಮಾನಸಿಕವಾಗಿ ಉನ್ನತ ಶಕ್ತಿ ಚೈತನ್ಯಗಳನ್ನು ಪಡೆದು ಹೊರಬರುತ್ತಾನೆ. ಶೀರ್ಷಿಕೆಯೇ ಕಾದಂಬರಿಯ ಮಾಂತ್ರಿಕ ಸಾಂಕೇತಿಕತೆಯನ್ನು ಸೂಚಿಸುವಂತಿದೆ. ಅದು ಧ್ವನಿಸುವುದು ಹೋರ್ಸೆಲ್‌ಬರ್ಗ್ ಎಂಬ ಇನ್ನೊಂದು ಮಾಂತ್ರಿಕ ಪರ್ವತವನ್ನು. ಅಲ್ಲಿರುವ ಅಶ್ವಸೈನಿಕ ವೀನಸ್ ದೇವತೆಯ ಸೌಂದರ್ಯಕ್ಕೆ ಮರುಳಾಗಿ ಬಂಧಿಯಾದವನು. ಕಾದಂಬರಿಯಲ್ಲಿ 'ಏಳು' ಒಂದು ಮಾಂತ್ರಿಕ ಸಂಖ್ಯೆಯಾಗಿ ಕೆಲಸ ಮಾಡುತ್ತದೆ. ಕುತೂಹಲದ ಸಂಗತಿಯೆಂದರೆ ಬೆರ್ಗ್‌ಹಾಫ್‌ನಲ್ಲಿ ಊಟದ ಕೊಠಡಿಯಲ್ಲಿ ಒಂದೊಂದಕ್ಕೂ ಏಳು ಏಳು ಕುರ್ಚಿಗಳಿರುವ ಏಳು ಟೇಬಲ್ಲುಗಳಿವೆ. ಕ್ಲಾಡಿಯಾಳ ಕೋಣೆಯ ಸಂಖ್ಯೆ ಏಳು. ಹ್ಯಾನ್ಸ್ ಅಲ್ಲಿ ಏಳು ವರ್ಷ ಇರುತ್ತಾನೆ. ಕಾದಂಬರಿಯಲ್ಲಿ ಇರುವುದಂತೂ ಏಳೇ ಅಧ್ಯಾಯಗಳು.

ನಾಫ್ತಾ ಒಮ್ಮೆ ರಸವಿದ್ಯೆಯ (alchemy) ಹಾಗೂ ಗುಪ್ತ ಭ್ರಾತೃವರ್ಗದ ಸಂಕೇತಗಳಲ್ಲಿ ತನ್ನ 'ಶಿಷ್ಯ' ಹ್ಯಾನ್ಸನ ಅನುಭವಗಳ ಯಾಕ್ಷಿಣಿಕ ಅರ್ಥವನ್ನು ವಿವರಿಸುವುದು ಹೀಗೆ :

'ಕಲಿಯುವವನಿಗೆ ಎದೆಗುಂದದ ಧೈರ್ಯವಿರಬೇಕು, ಜ್ಞಾನದಾಹವಿರಬೇಕು..... ಸಮಾಧಿ ಯಾವಾಗಲೂ ಈ ಸಮಾಜವನ್ನು ಪ್ರವೇಶಿಸುವುದಕ್ಕೆ ದೀಕ್ಷೆ ಕೊಡುವ ಸಂಕೇತ. ನಿಗೂಢಗಳೊಳಕ್ಕೆ ಪ್ರವೇಶ ಪಡೆಯುವುದನ್ನೇ ಹಂಬಲಿಸುವ ಹೊಸ ಶಿಷ್ಯ ಆ ನಿಗೂಢಗಳ ಭಯಾನಕತೆಯ ಎದುರಿನಲ್ಲಿ ಸದಾ ಧೈರ್ಯಶಾಲಿಯಾಗಿರಬೇಕು..... ನಿಗೂಢಗಳ ಹಾಗೂ ಮನುಷ್ಯ ಶುದ್ಧಗೊಳ್ಳುವ ಮಾರ್ಗ ಅಪಾಯಗಳಿಂದ ತುಂಬಿದ್ದು ಆ ಮಾರ್ಗ ಸಾವಿನ ಯಾತನೆಯನ್ನು, ವಿಘಟನೆಯ ಸಾಮ್ರಾಜ್ಯವನ್ನು ಹಾದುಹೋಗುತ್ತದೆ. ಕಲಿಯುವ ಹೊಸ ಶಿಷ್ಯ ಯುವಕ. ಅವನು ಜೀವನದ ಪವಾಡಗಳಿಗಾಗಿ ಹಾತೊರೆಯುವವನು, ಅನುಭವಗಳ ರಾಕ್ಷಸಸಾಮರ್ಥ್ಯಕ್ಕೆ ತನ್ನನ್ನು ಕರೆದೊಯ್ಯಬೇಕೆಂದು ಆಶಿಸುವವನು....' ಈ ಮಾತುಗಳಲ್ಲಿ ಹ್ಯಾನ್ಸನ ಜೀವನ ಕಥೆಯ ಎಳೆಗಳು ಸಿಕ್ಕುತ್ತವೆ.

ಮನೋವಿಶ್ಲೇಷಣೆಯೂ ಇನ್ನೊಂದು ಬಗೆಯ ದೀಕ್ಷೆ. ಈ ದಿಸೆಯಲ್ಲಿ ಡಾ॥ ಕ್ರೊಕೋವ್‌ಸ್ಕಿ ಹ್ಯಾನ್ಸನ ಮಾರ್ಗದರ್ಶಕ. ಈ ವೈದ್ಯನ ಅರೆಗತ್ತಲೆಯ ಕೊಠಡಿಯಲ್ಲಿ ಏನು ನಡೆಯುತ್ತಿದೆ ಎಂಬುದರ ಬಗೆಗೆ ಥಾಮಸ್ ಮಾನ್ ಯಾವ ಸೂಚನೆಯನ್ನೂ ಕೊಡುವುದಿಲ್ಲ, ನಿಜ. ಆದರೆ ಅವನು ಫ್ರಾಯ್ಡನ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದನೆಂಬುದಕ್ಕೆ, ಮನುಷ್ಯನ ಅಜಾಗೃತ ಸ್ಥಿತಿಯ ಬಗ್ಗೆ, ಕಾಯಿಲೆಯೊಡನೆ ಸಂಬಂಧವುಳ್ಳ ಮಾನಸಿಕ ಸ್ಥಿತಿಯ ಬಗ್ಗೆ ಬಹಳಷ್ಟು ತಿಳಿದಿದ್ದನೆಂಬುದಕ್ಕೆ ಕಾದಂಬರಿಯಲ್ಲೇ ಪುರಾವೆ ಇದೆ.

'ದಿ ಮ್ಯಾಜಿಕ್ ಮೌಂಟನ್' ಮೊದಲೇ ಹೇಳಿದಂತೆ ವಿಚಾರಗಳ ಕಾದಂಬರಿ. ಇದರ ಧಾಟಿಯಲ್ಲಿ ವ್ಯಂಗ್ಯವಿದೆ. ಮಾನ್ ಇಲ್ಲಿ ಪರಸ್ಪರ ವಿರುದ್ಧವಾದ ಎರಡು ದೃಷ್ಟಿಕೋನಗಳನ್ನು ನಿರೂಪಿಸಿದ್ದಾನೆ. ಅವು 'ಒಂದನ್ನೊಂದು ಮೊಟಕುಗೊಳಿಸಲು ಯತ್ನಿಸುತ್ತವೆ. ಉದಾಹರಣೆಗೆ ಸೆಟ್ಟೆಂಬ್ರಿನಿ, ನಾಫ್ತಾರ ದೃಷ್ಟಿಕೋನಗಳು. ಕೆಲವೊಮ್ಮೆ ಮಾನ್ ಬೇಕೆಂದೇ ಓದುಗನನ್ನು ದಾರಿ ತಪ್ಪಿಸುತ್ತಾನೆ. ಕಾಯಿಲೆಯ ಬಗೆಗೆ ಕ್ರೊಕೋವ್‌ಸ್ಕಿಯ ಅಭಿಪ್ರಾಯವನ್ನು ಸ್ವೀಕರಿಸುತ್ತಿರುವಂತೆ ಕಂಡರೂ ಅವನು ಬೆಹರೆನ್‌ನೇ ಹೆಚ್ಚು ಪ್ರಿಯವೆನ್ನುವಂತೆ ಚಿತ್ರಿಸುತ್ತಾನೆ. ಇನ್ನು ಕೆಲವು ಸಲ ಪಾತ್ರಗಳ ಮನೋಭಾವದಲ್ಲೇ ಅನಿರೀಕ್ಷಿತ ತಿರುವುಗಳು ಕಾಣಿಸಿಕೊಳ್ಳುತ್ತವೆ. ಜೋಕಿಮ್ ಸತ್ತಾಗ ಹ್ಯಾನ್ಸ್ ಸುರಿಸುವ ಕಣ್ಣೀರನ್ನು ಮಾನ್ ರಾಸಾಯನಿಕ ಕ್ರಿಯೆಯಿಂದ ವಿಶ್ಲೇಷಿಸುವಂತೆ ತೋರುತ್ತದೆ. ಲೇಖಕ ತನ್ನ ಪಾತ್ರಗಳ ಅಭಿಪ್ರಾಯಗಳನ್ನು ನಿರೂಪಿಸಿದರೂ, ಅವುಗಳನ್ನು ಸ್ಪಷ್ಟವಾಗಿ ಒಪ್ಪಿಕೊಂಡಂತೆ ಕಾಣಿಸುವುದಿಲ್ಲ. ತನ್ನ ನಾಯಕನನ್ನು ಚಿತ್ರಿಸುವಾಗ ಅವನ ಒಳಪ್ರಪಂಚದ ಬಗೆಗೆ ತನಗೇನೂ ಗೊತ್ತಿಲ್ಲ ಎನ್ನುವ ಹಾಗೆ ವರ್ತಿಸುತ್ತಾನೆ. ಇದೆಲ್ಲ ವಸ್ತುವಿನಿಂದ ತಾನು ಸಾಕಷ್ಟು ದೂರವಿರಲು ಸಹಾಯಕ ; ಅಲ್ಲದೆ ವಸ್ತುವಿನ ಸಂಕೀರ್ಣತೆಯ ಹಲವು ಮುಖಗಳನ್ನು ತೆರೆದಿಡಲೂ ಅಗತ್ಯ.

ವ್ಯಂಗ್ಯ ಧೋರಣೆಯಿಂದ ಬದಲಾಗುವ ಈ ದೃಷ್ಟಿಕೋನಗಳ ನಡುವೆ ಲೇಖಕನ ಉದ್ದೇಶವನ್ನು ಸೂಚಿಸುವ ಅಂಶಗಳೆಂದರೆ ಆತ ಉಪಯೋಗಿಸುವ ಸಂಕೇತಗಳು. ಉದಾಹರಣೆಗೆ ಸೆಟ್ಟೆಂಬ್ರಿನಿ. ಇವನು ಒಂದು ರೀತಿಯಲ್ಲಿ ವಿವೇಕದ ಪ್ರತೀಕ. ಆದ್ದರಿಂದಲೇ ಅವನ ವ್ಯಕ್ತಿತ್ವಕ್ಕೆ ಬೆಳಕಿನ ಸ್ಪರ್ಶವಿದೆ. ಮಲಗುವ ಕೊಠಡಿಗೆ ಬಂದೊಡನೆ ಹ್ಯಾನ್ಸ್ ಮಾಡುವ ಮೊದಲ ಕೆಲಸ ದೀಪ ಹೊತ್ತಿಸುವುದು. ಅಜಾಗೃತ ಪ್ರಜ್ಞೆಯನ್ನು ಪರಿಶೀಲಿಸುವ ಡಾ॥ ಕ್ರೊಕೋವ್‌ಸ್ಕಿಯ ಉಡುಪು ಪೂರ ಕಪ್ಪು ಬಣ್ಣದ್ದು. ಅವನ ಪರೀಕ್ಷಾ ಕೊಠಡಿಯಲ್ಲೂ ಕತ್ತಲು. ಪೀಪರ್‌ಕಾರ್ನನ್ನು ಪೇಗನ್ ಪುರೋಹಿತನೆಂದು ಪದೇ ಪದೇ ವರ್ಣಿಸಲಾಗಿದೆ. ಹ್ಯಾನ್ಸನ ದೃಷ್ಟಿಯಲ್ಲಿ ಗರಿಗರಿಯಾದ ಬಿಳಿಬಟ್ಟೆ ಸಾವಿನ ಸಂಸ್ಕಾರದ ಪ್ರತೀಕ ; ಮುನ್ನೂರು ವರ್ಷಗಳಷ್ಟು ಹಳೆಯದಾದ ಒಂದು ಬಟ್ಟಲು ಕ್ಯಾಸ್ಟೋರ್ಪ್ ಕುಟುಂಬದ ಮುಂದುವರಿಕೆಯ ಸೂಚಕ. ದಢಾರೆಂದು ಬಾಗಿಲು ಹಾಕಿದರೆ ಸಾಕು, ಕ್ಲಾಡಿಯಾ ಕೋಣೆ ಪ್ರವೇಶಿಸಿದಳೆಂದು ಅರ್ಥ. ಈ ಕ್ರಿಯೆ ಅವಳ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ. ಹ್ಯಾನ್ಸನಿಗೆ ಬಾಗಿಲು ಸದ್ದಾದರೆ ಕಿರಿಕಿರಿ. ಅದು ಅವನ ಸ್ವಭಾವ. ಪೀಪರ್‌ಕಾರ್ನನ ಜೊತೆಯಲ್ಲಿ ಕ್ಲಾಡಿಯಾ ಹಿಂತಿರುಗಿದ ಮೇಲೆ ಅವಳು ಸದ್ದಿಲ್ಲದೆ ಕೋಣೆಯನ್ನು ಪ್ರವೇಶಿಸುತ್ತಾಳೆ. ಯಾಕೆಂದರೆ ಈಗ ಬಾಗಿಲು ಹಾಕಲು ಅವಳಿಗೊಬ್ಬ ಪ್ರಿಯತಮ ಇದ್ದಾನೆ.

ಇಷ್ಟೆಲ್ಲ ದೀರ್ಘವಾದ, ಸಂಕೀರ್ಣವಾದ 'ದಿ ಮ್ಯಾಜಿಕ್ ಮೌಂಟನ್' ಪ್ರಕಟವಾದ ತಕ್ಷಣವೇ ಲೇಖಕನ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು.

ಆತ್ಮಚರಿತ್ರಾತ್ಮಕವಾದ ಲೇಖನವೊಂದರಲ್ಲಿ ಮಾನ್, 'ಯುದ್ಧೋತ್ತರ ಜರ್ಮನಿಯ ಸ್ಥಿತಿಯ ಬಗೆಗೆ ಮಾತಾಡಿದ ಕಾರಣ ಈ ಕಾದಂಬರಿ ಯಶಸ್ವಿಯಾಯಿತು' ಎಂದಿದ್ದಾನೆ. ಇದು ವಿನಯದಿಂದ ಹೇಳಿದ ಮಾತು. ಕಾದಂಬರಿಯ ಸಮೃದ್ಧ ವಸ್ತುವಿನ ಬಗೆಗೆ, ಅದರ ಬಹು ದೊಡ್ಡ ಆಶಯದ ಬಗೆಗೆ, ಅದು ಪ್ರಚೋದಿಸುವ ಸಾರ್ವತ್ರಿಕ ಸ್ಪಂದನಶಕ್ತಿಯ ಬಗೆಗೆ ಈ ಮಾತು ಏನೂ ಹೇಳಿದಂತಾಗಲಿಲ್ಲ. ಒಂದು ಮಾತಂತೂ ನಿಜ. ಈ ಕಾದಂಬರಿ ಓದುಗನ ಭಾವಾನುಭವವನ್ನು ಎಷ್ಟು ತೀವ್ರವಾಗಿ ಮಿಡಿಯಬಲ್ಲುದೋ ಅಷ್ಟೇ ಪ್ರಮಾಣದಲ್ಲಿ ಅವನ ಬೌದ್ಧಿಕ ಹಸಿವನ್ನೂ ಇಂಗಿಸಬಲ್ಲುದು.

ಇ. ಎಂ. ಫಾರ್ಸ್ಟರ್ : 'ಹಾವರ್ಡ್ಸ್ ಎಂಡ್'

ಎಸ್. ಬಿ. ಮಿಣಜಗಿ

ಎಡ್ವರ್ಡ್ ಮೊರ್ಗನ್ ಫಾರ್ಸ್ಟರ್ ಹುಟ್ಟಿದ್ದು ಲಂಡನ್‌ನಲ್ಲಿ ; ಹೋದ ಶತಮಾನದ 1879ರಲ್ಲಿ. ಓದಿದ್ದು ಟಾನ್‌ಬ್ರಿಜ್ ಸ್ಕೂಲು ಹಾಗೂ ಕಿಂಗ್ಸ್ ಕಾಲೇಜು — ಕೇಂಬ್ರಿಜ್‌ನಲ್ಲಿ. ಅಭ್ಯಾಸಕ್ಕಾಗಿ ಆಯ್ದುಕೊಂಡ ವಿಷಯಗಳು ಕ್ಲಾಸಿಕ್ಸ್ ಮತ್ತು ಇತಿಹಾಸ. ಫಾರ್ಸ್ಟರ್ ಪದವಿ ಶಿಕ್ಷಣ ಮುಗಿದ ನಂತರ ಇಟಲಿ, ಗ್ರೀಸ್, ಜರ್ಮನಿ ದೇಶಗಳನ್ನು ಸುತ್ತಾಡಿ ಕೇಂಬ್ರಿಜ್‌ದಲ್ಲೇ ಬಂದು ನೆಲೆಸಿದ. ರಾಜಕೀಯದಲ್ಲಿ ಉದಾರವಾದಿಯಾಗಿ ವಯಸ್ಸಿನ 23ಕ್ಕೆ Independent Review ಗೆ ಲೇಖನಗಳನ್ನು ಬರೆದ.

ಫಾರ್ಸ್ಟರನ ತಂದೆ ಕೆಲಸದಿಂದ ವಾಸ್ತುಶಿಲ್ಪಿಯಾಗಿದ್ದ. ಚಿಕ್ಕಂದಿನಲ್ಲಿಯೇ ತಂದೆ ತಾಯಿಗಳು ತೀರಿಕೊಂಡಿದ್ದರಿಂದ, ತಾಯಿಯ ತಾಯಿ, ಅಕ್ಕಂದಿರ ಮನೆಯಲ್ಲಿ ಬೆಳೆಸಲ್ಪಟ್ಟ. ತಾಯಿಯ ತಾಯಿಯ ಕಡೆಯಿಂದ ಸಾಕಷ್ಟು ಹಣ ದೊರೆತದ್ದರಿಂದ ಫಾರ್ಸ್ಟರನು ಯಾವ ಆರ್ಥಿಕ ತೊಂದರೆಗಳಿಲ್ಲದೆ ಶಿಕ್ಷಣವನ್ನು ಪೂರೈಸಿದ. ಇಷ್ಟೇ ಅಲ್ಲ, ಈ ಹಣವು ಅವನಿಗೆ ನಿರಂತರ ಆಪದ್ಧನವಾಗಿ ಸಿಗುತ್ತಿದ್ದುದರಿಂದ ಫಾರ್ಸ್ಟರ ಹಾಯಾಗಿ ಓದು, ಬರಹದ ಜೀವನವನ್ನೇ ಸಾಗಿಸಿದ. 1927ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕ್ಲಾರ್ಕ್ ಉಪನ್ಯಾಸಗಳನ್ನು ನೀಡಿದ. ಈ ಉಪನ್ಯಾಸಗಳ ಸಂಗ್ರಹವೇ ಮುಂದೆ ಅದೇ ವರ್ಷ Aspects of the Novel ಎಂಬ ಶೀರ್ಷಿಕೆಯ ಕೆಳಗೆ ಪ್ರಕಟವಾಯಿತು.

ತರುಣ ಫಾರ್ಸ್ಟರ್ ಆಗ ರೂಪುಗೊಳ್ಳುತ್ತಿದ್ದ ಕೇಂಬ್ರಿಜ್ ಬುದ್ಧಿವಂತರ ಗುಂಪಾದ 'ಬ್ಲೂಮ್ಸಬರಿ ಗ್ರೂಪ್'ಗೆ ಸೇರಿದವನಾಗಿದ್ದ. ಈ ಗುಂಪಿನ ಪ್ರಮುಖರಲ್ಲಿ ಬರಟ್ರ್ಯಾಂಡ್ ರಸ್ಸೆಲ್, ಪ್ರೊಫೆಸರ್ ಮೂರ್, ಕ್ಲೈವ್ಹ ಬೆಲ್, ಶ್ರೀಮತಿ ಬೆಲ್, ವ್ಹರ್ಜೀನಿಯಾ ವೂಲ್ಫ, ಡಿ.ಎಚ್. ಲಾರೆನ್ಸ್ — ಇವರುಗಳು ಸಮಾವೇಶರಾಗುತ್ತಾರೆ. ವೈಚಾರಿಕವಾಗಿ ಈ ಗುಂಪಿನ ಗಣ್ಯವ್ಯಕ್ತಿ ಎಂದರೆ ಪ್ರೊ. ಮೂರ್ ಅವರು. ಅವರ ವಿಚಾರಪ್ರಣಾಲಿಯ ಮುಖ್ಯ ಅಂಶಗಳೆಂದರೆ : (1) ಜೀವನದಲ್ಲಿ ಸೌಂದರ್ಯದ ಪೂಜಕನಾಗುವುದು ; (2) ವ್ಯಕ್ತಿ-ವ್ಯಕ್ತಿಗಳಲ್ಲಿ ಚಿರಂತನ ಪ್ರೀತಿ, ಸ್ನೇಹಗಳನ್ನು ಸಂವರ್ಧಿಸುವುದು. ಈ ಅಂಶಗಳೇ ಫಾರ್ಸ್ಟರನ ಸೃಜನಶೀಲತೆಯ ಪ್ರಮುಖ ಸೆಲೆಗಳಾಗಿವೆ. 'ಹಾವರ್ಡ್ಸ್ ಎಂಡ್' ಈ ಎರಡನೆಯ ವಿಚಾರಕ್ಕೆ ಅದೆಷ್ಟು ಸಂವಾದಿಯಾಗಿ ಬರೆಯಲ್ಪಟ್ಟಿದೆ ಎಂಬ ಮಾತು ಕಾದಂಬರಿಯನ್ನು ಸೂಕ್ಷ್ಮವಾಗಿ ಓದಿದವರಿಗೆಲ್ಲ ಹೊಳೆಯುತ್ತದೆ.

ಫಾರ್ಸ್ಟರನ ಜೀವನವೆಂದರೆ, ತಿರುಗಾಟ, ಓದು, ಸಾಮಾಜಿಕ ರಾಜಕೀಯ ವಿಷಯಗಳ ಚಿಂತನೆ ಹಾಗೂ ಚರ್ಚೆ. ಮದುವೆ ಹಾಗೂ ಸ್ತ್ರೀಪ್ರೇಮರಹಿತವಾದ

ಜೀವನವು ಅವನ ಈ ತರಹದ 'academic nomadism'ಗೆ, ವಿದ್ವತ್ ಅಲೆತಕ್ಕೆ ಹೆಚ್ಚು ಪುಟಕೊಟ್ಟಂತೆ ಕಾಣುತ್ತದೆ. ಪ್ರಕೃತಿಯಿಂದ ಉದಾರ ಮಾನವತಾವಾದಿಯಾಗಿ, ರಾಜಕೀಯದಲ್ಲಿ ಉದಾರವಾದಿಯಾಗಿ ಮೊದಲನೆಯ ಜಾಗತಿಕ ಮಹಾಯುದ್ಧದಲ್ಲಿ ಅಲೆಕ್ಸಾಂಡ್ರಿಯಾದಲ್ಲಿ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಸ್ವಯಂಸೇವಕನಾಗಿ ಸೇವೆ ಸಲ್ಲಿಸಿದ. ಯುದ್ಧದ ಮೊದಲು 1910ರಲ್ಲಿ ಇಂಡಿಯಾ ದೇಶಕ್ಕೆ ಭೆಟ್ಟಿಕೊಟ್ಟ. ಅದರ ಫಲವಾಗಿ 1912ರಲ್ಲಿ 'A Passage to India' ಎಂಬ ಅವನ ಸುಪ್ರಸಿದ್ಧ ಕಾದಂಬರಿಯ ಬರವಣಿಗೆ ಪ್ರಾರಂಭವಾಯಿತು. ಮುಂದೆ ಎರಡನೆಯ ಸಲ 1921ರಲ್ಲಿ ಈ ದೇಶಕ್ಕೆ ಭೆಟ್ಟಿ ನೀಡಿದ ನಂತರ ಅದನ್ನು ಬರೆದು ಮುಗಿಸಿ, 1924ರಲ್ಲಿ ಪ್ರಸಿದ್ಧಿಸಲಾಯಿತು.

ಫಾರ್ಸ್ಟರ್ ಬರೆದದ್ದು ಕಡಿಮೆಯೇ. ಒಟ್ಟಂದದ ಆತನ ಸಾಹಿತ್ಯಕೃಷಿ ಅಷ್ಟೊಂದು ಕಣ್ಣು ಕುಕ್ಕಿಸುವಂತಹದಲ್ಲ. ಅವನು ಬರೆದದ್ದು – ಐದು ಕಾದಂಬರಿಗಳು : Where Angels Fear to Tread (1905) ; The Longest Journey (1907) ; A Room with a View (1908) ; Howards End (1910) ; ಎರಡು ನಿಬಂಧ ಸಂಗ್ರಹಗಳು : Abinger Harvest (1936) ಮತ್ತು Two Cheers for Democracy (1951) ; ಎರಡು ಕಥಾ ಸಂಗ್ರಹಗಳು : The Celestial Omnibus (1911) ; ಮತ್ತು The Eternal Moment (1928) ; ಎರಡು ಜೀವನ ಚರಿತ್ರೆಗಳು : Dickinson (1934) ಮತ್ತು Marianne Thornton (1956).

ವಿಸ್ತಾರ ಹಾಗೂ ವಿಚಾರಗಳ ದೃಷ್ಟಿಯಿಂದ ಫಾರ್ಸ್ಟರನ ಸಾಹಿತ್ಯಕೃತಿಗಳು ಅಷ್ಟೊಂದು ಪ್ರಖರವಾಗಿರದಿದ್ದರೂ ಕೊನೆತನಕ ಅವನು ಪ್ರಕಟಗೊಳಿಸಿದ ಸಣ್ಣ ಕಥೆ, ನಿಬಂಧ, ಆಕಾಶವಾಣಿಯ ಭಾಷಣಗಳು, ಪುಸ್ತಕ ವಿಮರ್ಶೆ – ಇವೆಲ್ಲ ಅವನ ಜನಪ್ರಿಯತೆಗೆ ಕಾರಣವಾದವು. ಅಂತೆಲೇ ಅವನ ಕೀರ್ತಿಯ ಮೌಲ್ಯಮಾಪನ ಮಾಡುತ್ತಾ ಒಬ್ಬ ವಿಮರ್ಶಕ ಹೇಳಿದ್ದೆಂದರೆ : 'His reputation goes up with every book he doesn't write.'

ಜೀವನಾಂತ್ಯದವರೆಗೂ ಫಾರ್ಸ್ಟರ್ ತನ್ನ ಮೆಚ್ಚುಗೆಯ ಸ್ನೇಹ, ಸತ್ಯಗಳ ನಗರವಾದ (The City of Friendship and Truth) ಕೇಂಬ್ರಿಜ್‌ನಲ್ಲಿಯೇ ನೆಲಸಿ, ಆ ವಿಶ್ವವಿದ್ಯಾಲಯದ ಆನರರಿ ಫೆಲೋ ಆಗಿಯೇ ಉಳಿದ. ತನ್ನ ತೊಂಭತ್ತೊಂದನೆಯ ವಯಸ್ಸಿಗೆ 1970ರಲ್ಲಿ ಅಲ್ಲಿಯೇ ನಿಧನನಾದ.

2

'ಹಾವರ್ಡ್ಸ್ ಎಂಡ್' (1910) ಫಾರ್ಸ್ಟರನ ನಾಲ್ಕನೆಯ ಕೃತಿ. ಅದು ಒಂದು ಕೌಟುಂಬಿಕ ಕಾದಂಬರಿ. ಅದು ಎಡ್ವರ್ಡಿಯನ್ ಯುಗದ ಕಲಾ-ಬುದ್ಧಿವಂತ (Art

Intellectual) ಒಬ್ಬನ, ಸಾಂಸ್ಕೃತಿಕ ಪ್ರತಿಕ್ರಿಯೆ. ಜೇನ್ ಆಸ್ಟಿನ್‌ಳ ಕೌಟುಂಬಿಕಗಳಂತೆ ಸುಖಾಂತ್ಯದ ವಾತಾವರಣವನ್ನು ಒಳಗೊಂಡೂ ಅದು ಸಮಕಾಲೀನ ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಪರಿಸ್ಥಿತಿಗೆ ಅತ್ಯುತ್ಕಟತೆಯಿಂದ ಪ್ರತಿಸ್ಪಂದಿಸಿದ್ದೇ ಅದರ ತಾಜಾತನಕ್ಕೆ ಕಾರಣವಾಗಿದೆ.

ಫಾರ್ಸ್ಟರ್ ಮೊದಲಿನಿಂದಲೂ ಇತಿಹಾಸ, ಸಂಸ್ಕೃತಿಗಳಲ್ಲಿ ವಿಶೇಷ ಆಸಕ್ತನಾದ ವಿದ್ಯಾರ್ಥಿ. ಇಂಗ್ಲೆಂಡಿನ ಸಾಮ್ರಾಜ್ಯವೈಭವದ ಅಹಂಭಾವದ ಯುಗದಲ್ಲಿ ಬೆಳೆದೂ, ಬೇರೆ ಸಂಸ್ಕೃತಿಗಳ ಆದರ್ಶಗಳನ್ನು, ಮೌಲ್ಯಗಳನ್ನು ಆದರದಿಂದ ಕಂಡ ಉದಾರ ಮನಸ್ಸಿನ ಇಂಗ್ಲೀಷ್ ವ್ಯಕ್ತಿ. ಹೀಗಾಗಿ ಅವನ ಮೊದಲಿನ ಕಾದಂಬರಿ Where Angels fear to Tread (1905) ಹಾಗೂ ಮೂರನೆಯ ಕಾದಂಬರಿ A Room with a View ಇಂಗ್ಲೀಷ್ ಸಂಸ್ಕೃತಿ ಹಾಗೂ ಮೆಡಿಟರೇನಿಯನ್ ಸಂಸ್ಕೃತಿಯ ಅಂಗವಾದ ಇಟ್ಯಾಲಿಯನ್ ಸಂಸ್ಕೃತಿ – ಇವುಗಳ ತುಲನಾತ್ಮಕ ದೃಷ್ಟಿಗೆ ಎಡೆಗೊಟ್ಟಿವೆ. 'ಹಾವರ್ಡ್ಸ್ ಎಂಡ್' ಒಂದು ದೃಷ್ಟಿಯಿಂದ ಗ್ರಾಮೀಣ ಹಾಗೂ ನಗರ ಸಂಸ್ಕೃತಿಗಳ ಸಂಘರ್ಷದ ಚರ್ಚೆಗೆ ಎಡೆಗೊಟ್ಟ ಕಾದಂಬರಿಯೂ ಅಹುದು. A Passage to India (1924) ಅವನ ಕೊನೆಯ ಕಾದಂಬರಿ. ಅವನ ಉದಾರ ಮಾನವತಾವಾದ (Liberal Humanism), ಜಾಗತಿಕ ಸಾಹಿತ್ಯಕ್ಕೆ ಸಲ್ಲಿಸಿದ ಅನುಪಮ ಕೊಡುಗೆಯಾಗಿದೆ.

'ಹಾವರ್ಡ್ಸ್ ಎಂಡ್' ಮೂರು ಕುಟುಂಬಗಳ ಸುತ್ತ ಹೆಣೆದುಕೊಂಡ ಕಾದಂಬರಿ. ಮೊದಲನೆಯದು ಅಪ್ಪಟ ಇಂಗ್ಲೀಷ್ ಮನೆತನ ; ಮೇಲ್‌ಮಧ್ಯಮ ವರ್ಗದ್ದು ; ವಿಲ್‌ಕಾಕ್ಸ್ ಎಂದು ಅದರ ಹೆಸರು. ಎರಡನೆಯದು ಹೆಣ್ಣು ಕುಟುಂಬ ; ಶ್ಲೆಗಲ್ ಸಹೋದರಿಯರದು ; ಇದೂ ಕೂಡಾ ಮೇಲ್‌ಮಧ್ಯಮ ವರ್ಗದ ಮನೆತನ. ಮೂರನೆಯದು ಇಂಗ್ಲೆಂಡಿನ ಬಡಕುಟುಂಬ ; ಲಿಯೋನಾರ್ಡ ಬ್ಯಾಸ್ಟ ಹಾಗೂ ಅವನ ದುಂದುಜೀವನದ ಗಯ್ಯಾಳಿ ಗರ್ಲ್‌ಫ್ರೆಂಡ್ ಜ್ಯಾಕಿ ಅವರದು.

ವಿಲ್‌ಕಾಕ್ಸ್‌ರದು ಉದ್ಯೋಗಶೀಲ ವ್ಯಾಪಾರೀ ಮನೆತನ. ಕೆಲಸ ಹಾಗೂ ಹಣ (Work and Money) ಜೀವನದಲ್ಲಿ ಅವರ ಮುಖ್ಯ ಧ್ಯೇಯಗಳು. ಹೊಲ-ಮನೆ, ಫ್ಯಾಕ್ಟರಿ, ಹಣದ ಲೇವಾದೇವಿ – ಇವೆಲ್ಲ ಈ ಕುಟುಂಬದ ಕಾರ್ಯಕ್ಷೇತ್ರಗಳು. ಈ ಮನೆತನದ ಯಜಮಾನನೇ ಹೇನ್ರಿ ವಿಲ್‌ಕಾಕ್ಸ್. ಮಧ್ಯವಯಸ್ಸು ದಾಟಿ ಅರವತ್ತರ ಎಡವಯಸ್ಸಿನ ಹೇನ್ರಿ ಮೂರು ಮಕ್ಕಳ ತಂದೆ. ಅವನ ಹೆಂಡತಿ ರುಥ್ ವಿಲ್‌ಕಾಕ್ಸ್, ಅಂದರೆ ಮನೆಯ ಯಜಮಾನಿ, ತುಂಬಾ ಪರಿಣತಮತಿಯ ಹಳೆಯ ಶ್ರೀಮಂತ ಸಂಸ್ಕಾರದ ನಮ್ರ ಹೆಂಗಸು. ಸದ್ಯ ಅವರು ವಾಸವಾಗಿದ್ದ ಮನೆಯೇ 'ಹಾವರ್ಡ್ಸ್ ಎಂಡ್'. ವಿಶಾಲವಾದ ಹಳ್ಳಿಯ ಮನೆ ಅದು. ಆ ಹಳ್ಳಿಯ ಹೆಸರು ಹಿಲ್ಟನ್ ;

ಲಂಡನ್‌ನಿಂದ ರೈಲಲ್ಲಿ ಹೋದರೆ ಒಂದು ತಾಸು ಅಂತರದಲ್ಲಿದೆ. ಈ ಮನೆ ರುಥ್‌ಳಿಗೆ ಅವಳ ತಂದೆಯ ಕಡೆಯಿಂದ ಬಂದದ್ದು. ಈ ಮನೆಯ ವೈಶಿಷ್ಟ್ಯವೆಂದರೆ ಇದು ಕಾದಂಬರಿಯಲ್ಲಿ ಸಾಂಕೇತಿಕ ಪಾತ್ರವಾಗಿ ಬೆಳೆಯುತ್ತಾ ಅದರ ಧ್ವನಿರಮ್ಯತೆಯನ್ನು ಹೆಚ್ಚಿಸುತ್ತದೆ. (ಇಲ್ಲಿ ಎಲಿಯಟ್‌ನ ಎಡ್ವರ್ಡಿಯನ್ ಪರಿಸರ ಹೊಂದಿದ 'ಫ್ಯಾಮಿಲಿ ರೀಯೂನಿಯನ್' ನಾಟಕದಲ್ಲಿ ಬರುವ 'ವಿಶ್‌ವುಡ್' ಭವನದ ಸಾಂಕೇತಿಕತೆಯನ್ನು ನೆನಪಿಸಿಕೊಳ್ಳಬಹುದು).

ಹೇನ್ರಿಗೆ ಮೂರು ಜನ ಮಕ್ಕಳು. ಹಿರಿಯವನು ಪ್ರೌಢವಯಸ್ಕನಾದ ಚಾರ್ಲ್ಸ್. ಹೊಲ-ಮನೆ ಮಾಡಿಕೊಂಡು, ಸಾಗಾಟಕ್ಕಾಗಿ ಒಂದು ಮೋಟಾರ್‌ವ್ಯಾನ್ ಇಟ್ಟುಕೊಂಡಿದ್ದಾನೆ. ಅವನ ಹೆಂಡತಿ ಡಾಲಿ. ಹೇನ್ರಿಯ ಎರಡನೆಯ ಮಗನೇ ಪಾಲ್ ವಿಲ್‌ಕಾಕ್ಸ್. ಕೊನೆಯ ಹುಡುಗಿ ಈವ್ಹ ಮದುವೆಯ ವಯಸ್ಸಿಗೆ ಬಂದವಳು. ಎರಡನೆಯವನಾದ ಪಾಲ್, ಸ್ವಲ್ಪ ಹೊತ್ತು ಕಾದಂಬರಿಯಲ್ಲಿ ಮುಖ ತೋರಿಸಿ ಮುಂದೆ ಮಾಯವಾಗುತ್ತಾನೆ. ಅವನು ಇಂಗ್ಲೆಂಡಿನ ವಸಾಹತು ಪ್ರದೇಶವಾದ ನೈಜೀರಿಯಾದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಭಿವೃದ್ಧಿಗಾಗಿ 'ಸೇವೆ' ಸಲ್ಲಿಸುತ್ತಿದ್ದಾನೆ.

ಕಾದಂಬರಿಯಲ್ಲಿ ಬರುವ ಎರಡನೆಯ ಕುಟುಂಬ ಶ್ಲೆಗಲ್ ಸಹೋದರಿಯರದು. ಇದು ಅರ್ಧ ಜರ್ಮನ್, ಅರ್ಧ ಇಂಗ್ಲೀಷ್ ಮನೆತನ. ಸದ್ಯ ಈ ಮನೆಯ ವಾರಸುದಾರರೆಂದರೆ ಈರ್ವರು ಹೆಣ್ಣು ಹುಡುಗಿಯರು : ಮಾರ್ಗರೆಟ್ ಮತ್ತು ಹೆಲೆನ್. ಇವರಿಗೆ ಒಬ್ಬ ತಮ್ಮ : ಥಿಯೋಬಾಲ್ಡ ಶ್ಲೆಗಲ್ – ಟಿಬಿ ಎಂದು ಇಲ್ಲಿ ಕರೆಯಲಾಗುತ್ತದೆ – ಆಕ್ಸ್‌ಫರ್ಡಿನಲ್ಲಿ ಓದುತ್ತಿದ್ದಾನೆ. ಈ ಮನೆತನದ ಮೇಲ್ವಿಚಾರಣೆಯೆಲ್ಲ ಈ ಹುಡುಗಿಯರ ಚಿಕ್ಕಮ್ಮ ಜ್ಯೂಲಿ ಮಂಟ್‌ಳಿಂದ ನಡೆಯುತ್ತದೆ. ಈ ಸಹೋದರಿಯರ ತಂದೆ ತಾಯಿಗಳು ಬೇಗನೇ ತೀರಿಕೊಂಡರು. ಇವರ ತಾಯಿ ಎಮಿಲಿ ಇಂಗ್ಲೆಂಡದ ಶ್ರೀಮಂತ ಮನೆತನದ ಮಗಳು ; ತಂದೆ ಜರ್ಮನಿಯವರು. ಅವನು ಇಂಗ್ಲೆಂಡಕ್ಕೆ ಬಂದು ನೆಲೆಸಿ ಇಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕನಾಗಿದ್ದ. ಇಲ್ಲಿ ಇರುತ್ತಿದ್ದಾಗ ಎಮಿಲಿಯನ್ನು ಪ್ರೀತಿಸಿ ಅವಳೊಡನೆ ಲಗ್ನವಾಗಿದ್ದ. ಎಮಿಲಿ ಈ ಮೂರು ಮಕ್ಕಳನ್ನು ಹಡೆದ ನಂತರ ಅವರಿಬ್ಬರೂ ತೀರಿಕೊಂಡರು. ಆಗ ಈ ಮನೆಯ ವ್ಯವಸ್ಥೆಯ ಭಾರವೆಲ್ಲ ಜ್ಯೂಲಿ ಮಂಟಳ ಮೇಲೆ ಬಂದಿತು. ಮಂಟ್‌ಳು ಈ ಹುಡುಗಿಯರ ಪಾಲಿಗೆ ಬಂದ ದೊಡ್ಡ ಸಂಪತ್ತನ್ನು ಕಂಪನಿಯ ಷೇರು, ಡಿಬೆಂಚರುಗಳಲ್ಲಿ ತೊಡಗಿಸಿ, ಅವರು ಬಡ್ಡಿಯ ಹಣದಿಂದ ಜೀವನ ಸಾಗಿಸುವಂತೆ ನೋಡಿಕೊಂಡಳು.

ಶಿಕ್ಷಣ ಹಾಗೂ ಸಾಂಸ್ಕೃತಿಕ ಸಹೃದಯತೆಯಲ್ಲಿ ಶ್ಲೆಗಲ್ ಸಹೋದರಿಯರು ತುಂಬಾ ಮುಂದುವರಿದವರಾಗಿ ನಯವಂತರಾಗಿದ್ದರು. ಮನೆಯಲ್ಲಿ ಕಲೆ ಹಾಗೂ

ವಿದ್ವತ್ ಚರ್ಚೆಯ ವಾತಾವರಣವಿದೆ. ಜೀವನದಲ್ಲಿ ಆದರ್ಶಮಯತೆ, ಪರೋಪಕಾರ ವೃತ್ತಿ, ಸೌಂದರ್ಯಾರಾಧನೆ – ಇವುಗಳನ್ನು ಮೈಗೂಡಿಸಿಕೊಂಡವರು. ಅಂತರ್ಮುಖಿ ಸ್ವಭಾವದವರು (introverts). ಇಂಗ್ಲೀಷ್ ಮನೆತನಗಳ ವಾಣಿಜ್ಯ ಸಂಸ್ಕೃತಿ ಇವರಲ್ಲಿ ಕಾಣಲಾರದು. ಈ ಸಹೋದರಿಯರು ವಾಸಿಸುತ್ತಿದ್ದ ಮನೆಯೇ 'ವಿಕ್‌ಹ್ಯಾಮ್ ಪ್ಲೇಸ್'. ಲಂಡನ್ ನಗರದಲ್ಲೇ ಮನೆ ಇದೆ. ಸಾಕಷ್ಟು ಹಣವುಳ್ಳ ಮನೆತನವಾದ್ದರಿಂದ ಹೋರಾಟದ ಜೀವನ ನಡೆಸುವುದು ಇವರ ಪಾಲಿಗೆ ಬಂದಿರಲಿಲ್ಲ. ಒಂದು ತರಹದ ಹಾಯಾದ, ಆರಾಮಜೀವನ ಇವರದು. ಮನೆಗೆಲಸದ ನಂತರ ಇಬ್ಬರೂ ಹುಡುಗಿಯರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಲಬ್ಬುಗಳ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಸೆಮಿನಾರು, ಸಿಂಪೋಜಿಯಮ್‌ಗಳಲ್ಲಿ ರಾಜಕೀಯ, ಆರ್ಥಿಕ ವಿಷಯಗಳ ಮೇಲೆ ಪ್ರಬಂಧ ಮಂಡಿಸುತ್ತಾರೆ. ಚರ್ಚಾಕೂಟಗಳಲ್ಲಿ ಭಾಗವಹಿಸುತ್ತಾರೆ. ಶ್ಲೆಗಲ್ ಮನೆತನದ ವಾತಾವರಣ ವೆಂದರೆ 'ರಾಜಕೀಯ-ಆರ್ಥಿಕ-ಕಲಾತ್ಮಕ ವಾತಾವರಣ'ವೆಂದೇ ಹೇಳಬೇಕು.

ಇಲ್ಲಿಯ ಮೂರನೆಯ ಕುಟುಂಬವೆಂದರೆ ಲಿಯೋನಾರ್ಡ ಬ್ಯಾಸ್ಟ ಮತ್ತು ಅವನ ಪ್ರೇಯಸಿ ಜ್ಯಾಕಿ ಅವರದು. ಬ್ಯಾಸ್ಟನ ವಯಸ್ಸು ಇಪ್ಪತ್ತೊಂದು, ಜ್ಯಾಕಿಯದು ಮೂವತ್ತು ಮೂರು. ಬ್ಯಾಸ್ಟ ಇನ್‌ಶುರೆನ್ಸ್ ಕಂಪನಿಯೊಂದರಲ್ಲಿ ಕ್ಲಾರ್ಕನಾಗಿ ಸೇರಿ ಕಡಿಮೆ ಸಂಬಳದ ಕಾರಣ ನಿಕೃಷ್ಟ ಜೀವನ ನಡೆಸುತ್ತಿದ್ದಾನೆ. ಅವನಿಗೆ ಸಾಹಿತ್ಯ ಸಂಗೀತಗಳಲ್ಲಿ ಅಭಿರುಚಿ ಇದೆ. ರಸ್ಕಿನ್, ಸ್ಟೀವನ್ಸನ್ನರ ಪುಸ್ತಕಗಳನ್ನು ಓದುತ್ತಿರುತ್ತಾನೆ. ತನಗಿಂತಲೂ ಹಿರಿಯವಳಾದ ಜ್ಯಾಕಿಯ ಮೋಹಪಾಶದಲ್ಲಿ ಸಿಲುಕಿ ಅವಳನ್ನು ಮದುವೆಯಾಗುತ್ತೇನೆಂದು ಮನೆಗೆ ಕರೆದುಕೊಂಡು ಬಂದಿದ್ದಾನೆ. ಮೂರು ವರ್ಷ ಕಳೆದರೂ ಇಬ್ಬರೂ ಸಹಜೀವನಕ್ಕೆ ಒಪ್ಪಿದ್ದಾರೇ ಹೊರ್ತು ಮದುವೆಗೆ ಒಪ್ಪಿಗೆ ತೋರಿಸಿಲ್ಲ. ಜ್ಯಾಕಿ ತುಂಬಾ ಧಾಂಡಿಗ ಹೆಂಗಸು ; ಬರ್ಜರಿ ಫ್ಯಾಷನ್ ; ಅವಳ ಕಿವಿಯ ಲೋಲಕಗಳು, ತುಟಿಯ ಲಿಪ್‌ಸ್ಟಿಕ್, ಬಣ್ಣಬಣ್ಣದ ರಿಬ್ಬನ್‌ಗಳು, ಉದ್ದನ ವ್ಹೆಲ್‌ವೆಟ್ ನಿಲುವಂಗಿ ಫಳಫಳ ಹೊಳೆಯುತ್ತವೆ. ಅವಳು ನಡೆದರೆ ಶ್ಯಾಂಡ್‌ಲೀಯರ್ ಚಲಿಸಿದಂತೆ ಕಾಣುತ್ತದೆ.

ಕಾದಂಬರಿಯ ಕಾರ್ಯಕ್ಷೇತ್ರದ ವಿಸ್ತಾರವೆಂದರೆ ಹಿಲ್ಟನ್ ಹಳ್ಳಿಯ ದೊಡ್ಡಮನೆ, ಹಾವರ್ಡ್ಸ್ ಎಂಡ್; ಲಂಡನ್ ನಗರದ ವಿಕ್‌ಹ್ಯಾಮ್ ಪ್ಲೇಸ್ ; ಡ್ಯೂಸಿ ಸ್ಟ್ರೀಟ ಮೇಲಿನ ಇನ್ನೊಂದು ಮನೆ ; ಅಲ್ಲದೆ ವೇಲ್ಸ ಪ್ರದೇಶದಲ್ಲಿ ಈವ್ಹಳ ಮದುವೆಗಾಗಿ ಸ್ಪೆಶಲ್ ಆಗಿ ಕೊಂಡುಕೊಂಡ ಓನಿಟನ್ ಭವನ. ದೊಡ್ಡ ದೊಡ್ಡ ಮನೆ ಮಹಲುಗಳು, ಪ್ರಶಾಂತವಾದ ನದಿ ಬೆಟ್ಟಗಳು, ಎತ್ತರದ ಸೇತುವೆಗಳು – ಇವೆಲ್ಲದರ ರಹಸ್ಯಮಯತೆಯನ್ನು ಮತ್ತೆ ಮತ್ತೆ ಒತ್ತುಕೊಟ್ಟು ವೈಭವೀಕರಿಸುವ ಪರಿಪಾಠ ಎಡ್ವರ್ಡಿಯನ್ ಕಾದಂಬರಿಗಳಲ್ಲಿ ಕಂಡುಬರುತ್ತದೆ.

3

ಕಾದಂಬರಿಯು ಶುರುವಾಗುವುದು ಒಂದು ಕುತೂಹಲಕಾರಕವಾದ ಅಪಾರಂಪರಿಕ ಪ್ರಾರಂಭದೊಂದಿಗೆ. ಫಾರ್ಸ್ಟರ್ ತೀರ ಕ್ಯಾಜ್ಯುವಲ್ ಆಗಿ ಸಲಿಗೆಯ ಧ್ವನಿಯೊಂದಿಗೆ 'One may as well begin with Helen's letters to her sister' ('ಯಾರಾದರೂ ಹೆಲೆನ್ ತನ್ನ ಅಕ್ಕನಿಗೆ ಬರೆದ ಪತ್ರಗಳಿಂದ ಕಥೆ ಪ್ರಾರಂಭಿಸಬಹುದು') ಎಂದು ಆರಂಭಿಸುತ್ತಾನೆ. ಈ ಪತ್ರ ಒಂದು ವಿಸ್ಫೋಟಕ ಸಮಾಚಾರವನ್ನು ಹೊತ್ತು ತಂದಿದೆ. ಇದನ್ನು ಹೆಲೆನ್ ಹಾವರ್ಡ್ಸ್ ಎಂಡ್‌ದಿಂದ ತನ್ನ ಅಕ್ಕ ಮಾರ್ಗರೆಟ್‌ಳಿಗೆ ಬರೆದಿದ್ದಾಳೆ. ಪತ್ರದಲ್ಲಿ ಅವಳು ವಿಲ್‌ಕಾಕ್ಸ್ ಕುಟುಂಬದ ಪಾಲ್‌ನನ್ನು ಪ್ರೀತಿಸಿದ್ದೇನೆಂದೂ, ಅದರ ರೀತಿ ಅವಳು ಅವನನ್ನು ಮದುವೆಯಾಗುತ್ತೇನೆಂದೂ ಬರೆದಿದ್ದಾಳೆ. ಹಾಗಾದರೆ ಅವಳು ಈ ಮನೆಗೆ ಬರಲು ಕಾರಣವೇನು ಎಂಬ ಪ್ರಶ್ನೆ ಏಳುತ್ತದೆ. ಅದರ ಕಥೆ ಹೀಗಿದೆ : ವಿಲ್‌ಕಾಕ್ಸ್ ಹಾಗೂ ಶ್ಲೆಗಲ್ ಕುಟುಂಬಗಳು, ಈ ಮೊದಲು, ವಿದೇಶ ಪ್ರವಾಸಕ್ಕೆಂದು ಹೋದಾಗ ಅಕಸ್ಮಾತ್ ಅವರು ಒಬ್ಬರನ್ನೊಬ್ಬರು ಜರ್ಮನಿಯಲ್ಲಿ ಸಂಧಿಸುವ ಪ್ರಸಂಗ ಒದಗಿತು. ಆಗ ರುಥ್ ವಿಲ್‌ಕಾಕ್ಸ್‌ಗೆ ಈ ಶ್ಲೆಗಲ್ ಸಹೋದರಿಯರ ಮೇಲೆ ಪ್ರೀತಿ ಹುಟ್ಟಿತು. ಅವಳು ರೀತಿರಿವಾಜಿನಂತೆ ಈ ಹುಡುಗಿಯರಿಗೆ ಇಂಗ್ಲೆಂಡಿಗೆ ವಾಪಸಾದ ನಂತರ ಬಿಡುವು ಮಾಡಿಕೊಂಡು ಒಂದು ದಿನ ತಮ್ಮ ಮನೆಗೆ ಬರಬೇಕೆಂದು ಆಮಂತ್ರಣವಿತ್ತಳು. ಹೀಗಾಗಿ ಆಮಂತ್ರಣದ ಮೇರೆಗೆ ಹೆಲೆನ್ ಶ್ಲೆಗಲ್ ರುಥ್‌ಳ ಮನೆ, ಹಾವರ್ಡ್ಸ್ ಎಂಡ್‌ದಲ್ಲಿ ಅತಿಥಿಯಾಗಿ ತಂಗಿದ್ದಾಳೆ. ಅಲ್ಲಿ ಇರುತ್ತಿರುವಂತೆ, ಆ ಮನೆಯ ವಾತಾವರಣ, ವಿಶಾಲವಾದ ಅದರ ಸುತ್ತಿನ ಜಮೀನು, ತೋಟದಲ್ಲಿಯ ಗಿಡಗಳು, ಕಲಾತ್ಮಕ ಮನಸ್ಸುಳ್ಳ ಹೆಲೆನ್‌ಳ ಮೇಲೆ ಪ್ರಭಾವ ಬೀರಿದವು. ರುಥ್‌ಳ ನಮ್ರ, ಪರಿಪಕ್ವಬುದ್ಧಿಯ ವ್ಯಕ್ತಿತ್ವ ಇನ್ನೂ ಹೆಚ್ಚಾಗಿ ಅವಳನ್ನು ಆಕರ್ಷಿಸಿತು. ಈ ಕೃತಾರ್ಥತೆಯ ಅವಸ್ಥೆಯಲ್ಲಿ ರುಥ್‌ಳ ಎರಡನೆಯ ಮಗ ಪಾಲ್‌ನನ್ನು ಹೆಲೆನ್ ಏಕಾಕಿಯಾಗಿ ಸಂಧಿಸುವ ಪ್ರಸಂಗ ಬಂದಿತು. ಇಂಥ ಪ್ರಸಂಗದ ಮಾದಕ ಸ್ಥಿತಿಯಲ್ಲಿ ಅವನು ಅವಳನ್ನು ಮುದ್ದಿಸಿದ. ಈ ಮುದ್ದಿನ ಕಾವ್ಯಮಯತೆಯಲ್ಲಿ ಮಿಂದ ಹೆಲೆನ್‌ಳ ಮನಸ್ಸು ಈ ಪತ್ರವನ್ನು ಪ್ರೇರೇಪಿಸಿತು. ಅದರಲ್ಲಿ ಅವಳು ಈ ಪ್ರೇಮಪ್ರಸಂಗ ನಡೆದುಹೋಯಿತೆಂದೂ ಮತ್ತು ಈ ವಿಷಯವನ್ನು ಆಂಟಿ ಜ್ಯೂಲಿಗೆ ತಿಳಿಸಕೊಡದೆಂದೂ ಎಚ್ಚರಿಕೆ ಕೊಟ್ಟಿದ್ದಾಳೆ.

ಆದರೆ ಜ್ಯೂಲಿ ಮಂಟಳಿಗೆ ಈ ಸಮಾಚಾರ ಗೊತ್ತಾಗಿ ಈ ಸಂಬಂಧ ನಡೆಯಲೇ ಕೂಡದೆಂದು ಕೋಪಗೊಂಡಳು. ಅದಕ್ಕಾಗಿ ತಕ್ಷಣ ಅವಳು ರೈಲಿನಿಂದ ಹಾವರ್ಡ್ಸ್ ಎಂಡ್‌ಗೆ ಬಂದು ಚಾರ್ಲ್ಸ್‌ನೊಡನೆ ಜಗಳವಾಡಿ ಈ ಸಂಬಂಧ ಆಗಕೂಡದೆಂದು ರುಥ್‌ಳಿಗೆ ಹೇಳಿ, ಹೆಲೆನ್‌ಳಿಗೆ ಛೀ ಹಾಕಿ ಅವಳನ್ನು ವಾಪಸ್ಸು ವಿಕ್‌ಹ್ಯಾಮ್ ಪ್ಲೇಸ್‌ಗೆ

ಕರೆತರುತ್ತಾಳೆ. ಈ ಸಂದರ್ಭದಲ್ಲಿ ರುಥ್‌ಳು ತೋರಿದ ಮೌನ ಹಾಗೂ ನಮ್ರವಾದ, ಮಿತವಾದ ಮಾತು ಅವಳ ಸುಸಂಸ್ಕೃತ ವ್ಯಕ್ತಿತ್ವಕ್ಕೆ ಸಾಕ್ಷಿ. ಫಾರ್ಸ್ಟರನಿಗೆ ಅವಳು ಪರಂಪರೆಯ ಒಳ್ಳೆಯತನದ ಪ್ರತೀಕವಾಗಿ ಕಾಣುತ್ತಾಳೆ.

ಇತ್ತ ವಿಕ್‌ಹ್ಯಾಮ್ ಪ್ಲೇಸಿನಲ್ಲಿ ಈ ಭಗ್ನಪ್ರೇಮದ ಪ್ರಸಂಗದಿಂದ ಮನನೊಂದವರಾಗಿ ಈರ್ವರು ಸಹೋದರಿಯರು ಇನ್ನು ಇಂಥದರ ಗೊಡವೆಗೆ ಹೋಗಕೂಡದೆಂದು ತಮ್ಮತಮ್ಮೊಳಗೆ ನಿಶ್ಚಯಿಸುತ್ತಾರೆ. ಇಷ್ಟರಲ್ಲಿ ಇವರಿಗೆ ಇನ್‌ಶುರೆನ್ಸ್ ಕಂಪನಿಯ ಕ್ಲಾರ್ಕು ಬ್ಯಾಸ್ಟನ ಪರಿಚಯವಾಗುತ್ತದೆ. ಈ ಪ್ರಸಂಗ ಹೀಗೆ ಕೂಡಿಬರುತ್ತದೆ : ಒಂದು ಸಂಜೆ ಲಂಡನ್‌ನಲ್ಲಿ ಬಿಥೋವನ್ ಸಿಂಫನಿಯ ಸಂಗೀತ ಏರ್ಪಟ್ಟಿತ್ತು. ಅದಕ್ಕೆ ಮಾರ್ಗರೆಟ್, ಹೆಲೆನ್, ಜ್ಯೂಲಿ ಮತ್ತು ಟಿಬಿ ಹೋಗಿದ್ದರು. ಈ ಸಂಗೀತ ಕೇಳಲು ಬ್ಯಾಸ್ಟನೂ ಅಲ್ಲಿಗೆ ಬಂದಿದ್ದ. ಇಲ್ಲಿ ಸಂಗೀತ ಮುಗಿಯುವ ಮೊದಲೇ ಹೆಲೆನ್ ನಡುವೆಯೇ ಎದ್ದು ಹೊರಟುಹೋಗುತ್ತಾಳೆ. ಅದೇ ವೇಳೆಗೆ ಮಾರ್ಗರೆಟ್‌ಳ ಪಕ್ಕದಲ್ಲಿ ಕುಳಿತ ಬ್ಯಾಸ್ಟ ಅವಳನ್ನು ಉದ್ದೇಶಿಸಿ ಇದೀಗ ಹೊರಟುಹೋದ ಆ ಹೆಂಗಸು ಮರೆತು ತನ್ನ ಹರಕಲು ಛತ್ರಿಯನ್ನು ತೆಗೆದುಕೊಂಡು ಹೊರಟುಹೋದಳೆಂದು ಫಿರ್ಯಾದಿಯನ್ನು ಸೂಚಿಸುತ್ತಾನೆ. ಅದಕ್ಕೆ ಉತ್ತರವಾಗಿ ಮಾರ್ಗರೆಟ್‌ಳು ಮರುದಿನ ತಮ್ಮ ಮನೆಗೆ ಬಂದು ಛತ್ರಿಯನ್ನು ವಾಪಸು ಒಯ್ಯಬಹುದೆಂದು ಬ್ಯಾಸ್ಟನಿಗೆ ತಿಳಿಸುತ್ತಾಳೆ. ಅದಕ್ಕಾಗಿ ಅವಳು ತನ್ನ ಪರಿಚಯದ ಕಾರ್ಡನ್ನೂ ಅವನಿಗೆ ಕೊಡುತ್ತಾಳೆ.

ಆ ವಿಳಾಸ ನೋಡಿಕೊಂಡು ಬ್ಯಾಸ್ಟನು ವಿಕ್‌ಹ್ಯಾಮ್ ಪ್ಲೇಸಿಗೆ ಬಂದು ಈ ಸಹೋದರಿಯರನ್ನು ಭೆಟ್ಟಿಯಾಗುತ್ತಾನೆ. ಅಲ್ಲಿ ಅವರು ಅವನಿಗೆ ನೂರೆಂಟು ಪ್ರಶ್ನೆ ಕೇಳಿ ಅವನ ಪರಿಸ್ಥಿತಿಯ ಬಗ್ಗೆ ಪರಿಚಯ ಮಾಡಿಕೊಳ್ಳುತ್ತಾರೆ. ಹೆಲೆನ್ ಸುಧಾರಣಾವಾದಿಯಾಗಿ ಪ್ರಜಾಸತ್ತೆಯ ವ್ಯವಸ್ಥೆಯಲ್ಲಿ ನಂಬುಗೆ ಉಳ್ಳವಳಾದ್ದರಿಂದ ಬ್ಯಾಸ್ಟನ ಬಡತನದ ಬಗ್ಗೆ ಕರುಣೆ ತಳೆಯುತ್ತಾಳೆ. ಮನುಷ್ಯನು ಬಡವನಾಗಿರಕೂಡದೆಂಬ ಅಭಿಪ್ರಾಯವನ್ನು ಈರ್ವರೂ ಅನುಮೋದಿಸುತ್ತಾರೆ. ಈ ಸಹೋದರಿಯರಿಗೆ ದೊರೆತ ಮಾಹಿತಿಯ ಪ್ರಕಾರ ಅವನು ಪಾರ್‌ಫೀರಿಯನ್ ಫ್ಯಾರ್ ಇನ್‌ಶುರೆನ್ಸ್ ಕಂಪನಿಯಲ್ಲಿ ಕ್ಲಾರ್ಕನಾಗಿ ಬಡತನದ ಜೀವನ ಸಾಗಿಸುತ್ತಿರುತ್ತಾನೆ. ಇದಲ್ಲದೆ ಜ್ಯಾಕಿಯ ವಿಷಯವಾಗಿ ಮತ್ತು ಬ್ಯಾಸ್ಟನ ಸಂಗೀತ ಸಾಹಿತ್ಯಗಳಲ್ಲಿಯ ಅಭಿರುಚಿಯ ಬಗ್ಗೆಯೂ ಅವರಿಗೆ ಗೊತ್ತಾಗುತ್ತದೆ. ಸದ್ಯ ಆತನ ಬಡತನದ ಸ್ಥಿತಿಯಿಂದ ಅವನನ್ನು ಮೇಲೆತ್ತಬೇಕೆಂದು ಸೋಶಿಯಲಿಸ್ಟ್ ಪ್ರವೃತ್ತಿಯ ಹೆಲೆನ್ ನಿಶ್ಚಯಿಸುತ್ತಾಳೆ. ಸಹೋದರಿಯರಿಬ್ಬರಿಗೂ ಬ್ಯಾಸ್ಟನ ವಿಷಯವಾಗಿ ಅಭಿಮಾನ ಕರುಣೆ ಉಕ್ಕುತ್ತವೆ.

ಇಷ್ಟರಲ್ಲಿ ಹಾವರ್ಡ್ಸ್ ಎಂಡಲ್ಲಿ ವಾಸವಾಗಿದ್ದ ಹೇನ್ರಿ ವಿಲ್‌ಕಾಕ್ಸ ಲಂಡನ್‌ನಲ್ಲಿ

ವಿಕ್‌ಹ್ಯಾಮ್ ಪ್ಲೇಸಿನ ಸಮೀಪ ಒಂದು ಮನೆ ಬಾಡಿಗೆಗೆ ತಗೊಳ್ಳುತ್ತಾನೆ. ಕಾರಣ, ರುಥ್ ವಿಲ್‌ಕಾಕ್ಸ ಬೇಜಾರು ಕಳೆಯಲೆಂದು, ನಗರದಲ್ಲಿ ಸ್ವಲ್ಪ ದಿವಸ ಇರಬೇಕೆಂದು ಇಚ್ಛಿಸುತ್ತಾಳೆ. ಇದರಿಂದ ಮಾರ್ಗರೆಟ್‌ಳಿಗೆ ಎದೆಗುದಿಯಾಗುತ್ತದೆ. ಯಾಕೆಂದರೆ, ಒಮ್ಮೆ ಮಗಿದುಹೋದ ಹೆಲೆನ್-ಪಾಲ್‌ರ ಪ್ರೇಮಪ್ರಸಂಗ ಪುನಃ ಎಲ್ಲಿ ಹೊತ್ತಿಕೊಳ್ಳುತ್ತದೋ ಎಂಬ ಅನುಮಾನ ಮಾರ್ಗರೆಟಳನ್ನು ಕಾಡುತ್ತದೆ. ಆದರೆ ರುಥ್ ಮಾತ್ರ ಯಾವ ಕಳವಳಕ್ಕೂ ತುತ್ತಾಗದೆ ಹಾಯಾಗಿ ಇರುತ್ತಾಳೆ.

ರುಥ್ ವಿಲ್‌ಕಾಕ್ಸ ಈಗ ಮನೆಯ ಸಮೀಪವೇ ಬಂದಿದ್ದರೂ ಮಾರ್ಗರೆಟ್ ಅವಳನ್ನು ಭೆಟ್ಟಿಯಾಗಿ ಮಾತಾಡಿಸುವ ಗೊಡವೆಗೆ ಹೋಗಲಿಲ್ಲ. ಅಷ್ಟೇ ಅಲ್ಲ, ಮಾರ್ಗರೆಟ್ ಸ್ವಲ್ಪ ಅಧಿಕಪ್ರಸಂಗಿಯಾಗಿ 'ನಾವು ಭೆಟ್ಟಿಯಾಗದಿರುವುದೇ ಒಳ್ಳೆಯದೆಂದು' ರುಥ್‌ಳಿಗೆ ಪತ್ರ ಬರೆಯುತ್ತಾಳೆ. ರುಥ್‌ಳು ಪತ್ರದ್ವಾರಾ ಇಂಥದನ್ನು ತಿಳಿಸುವ ಅವಶ್ಯಕತೆ ಇರಲಿಲ್ಲವೆಂದು ಅವಕ್ಕೆ ಅತಿನಮ್ರಳಾಗಿ ಉತ್ತರಿಸುತ್ತಾಳೆ. ಅದಕ್ಕೆ ಮಾರ್ಗರೆಟ್‌ಳು ತನ್ನದು ತಪ್ಪಾಯಿತೆಂದು ರುಥ್‌ಳಲ್ಲಿ ಕ್ಷಮೆ ಕೇಳುತ್ತಾಳೆ. ಈ ಘಟನೆಯ ನಂತರ ಮಾರ್ಗರೆಟ್ ಹಾಗೂ ರುಥ್‌ರ ನಡುವೆ ಅನ್ಯೋನ್ಯ ಸಂಬಂಧ ಬೆಳೆಯಿತು. ಇಬ್ಬರಿಗೂ ಪರಸ್ಪರರು ಬೇಕಾದವರಾದರು. ಈರ್ವರಲ್ಲಿಯೂ ಪರಸ್ಪರ ಆದರ, ಪ್ರೇಮ, ಸಲುಗೆಗಳು ಹುಟ್ಟಿ ಕೊಂಡವು. ಒಮ್ಮೆ ರುಥ್‌ಳು ಮಾರ್ಗರೆಟ್‌ಳಿಗೆ ಏನಾದರೂ ಕಾಣಿಕೆ ಕೊಡಬೇಕೆಂದು ತನ್ನ ಇಚ್ಛೆಯನ್ನು ಅವಳೆದುರೇ ವ್ಯಕ್ತಮಾಡಿದಳು. ಅದೇ ಸಮೀಪಿಸುತ್ತಿರುವ ಕ್ರಿಸ್‌ಮಸ್ ಹಬ್ಬದ ಸಾಮಾನು ಖರೀದಿಗೆಂದು ರುಥ್‌ಳು ಮಾರ್ಗರೆಟಳನ್ನು ತನ್ನ ಜೊತೆ ಕರೆದುಕೊಂಡು ಹೋದಳು.

ಹೀಗೆ ಇಬ್ಬರಲ್ಲಿಯೂ ಪರಸ್ಪರ ಪ್ರೇಮ ಬೆಳೆಯುತ್ತಾ ಹೋಗುತ್ತದೆ. ತನಗಿಂತಲೂ ಅರ್ಧ ಚಿಕ್ಕವಳಾದ ಮಾರ್ಗರೆಟ್ಟಳ ಜೀವನವನ್ನು ನೋಡಿ ರುಥ್‌ಳಿಗೆ ಅಭಿಮಾನವೆನಿಸುತ್ತದೆ. ಮಾರ್ಗರೆಟ್‌ಳ ಓದು, ಚರ್ಚೆ, ಕ್ಲಬ್ ಜೀವನ, ಇವನ್ನೆಲ್ಲ ಕಂಡು ರುಥ್‌ಳಿಗೆ ಹೊಸ ಪೀಳಿಗೆಯಿಂದ ತಾನೆಷ್ಟು ಭಿನ್ನವಾಗಿದ್ದೇನೆ ಎಂಬ ತಿಳಿವಳಿಕೆ ಮೂಡುತ್ತದೆ. ಈ ಭಿನ್ನತೆಯ ಅರಿವಿನ ವಿಶ್ಲೇಷಣೆ ಕಾದಂಬರಿಯ ರಸಸ್ಥಾನಗಳ ಲ್ಲೊಂದಾಗಿದೆ. ರುಥ್‌ಳ ಜಗತ್ತು ಗ್ರಾಮೀಣ ಜಗತ್ತು ; ಅವಳದು ಹಿಲ್ಟನ್ ಹಳ್ಳಿಯ ದೊಡ್ಡಮನೆ, ಹಾವರ್ಡ್ಸ್ ಎಂಡ್. ಅವಳು ಮೌನದ ವನದೇವತೆ ; ಗ್ರಾಮದೇವತೆ ಇದ್ದಂತೆ. ತನ್ನ ಯಜಮಾನರಂತೆ ಆಗಲೀ, ತಾನೇ ಹಡೆದ ಅವಳ ದೊಡ್ಡ ಮಗು ಚಾರ್ಲ್ಸನಂತಾಗಲೀ, ಟ್ರೇನ್, ಟೆಲಿಗ್ರ್ಯಾಮ್, ಆಟೋಮೊಬಾಯಿಲ್‌ಗಳ ಜಗತ್ತಿಗೆ (ಅವಳು) ಸೇರಿದವಳಲ್ಲ. ಅವಳದು ಪ್ರಶಾಂತವಾದ, ಕ್ಷಯಿಸಿಹೋಗುತ್ತಿರುವ ಗ್ರಾಮೀಣ ನಾಗರಿಕತೆ. ರುಥ್‌ಳು ತಿರುಗಿ ಹಾವರ್ಡ್ಸ್ ಎಂಡ್‌ಗೆ ಬಂದು ಇರುತ್ತಿರುವಂತೆ ಒಂದು ದಿನ ಕಾಯಿಲೆಯಿಂದ ತೀರಿ ಹೋಗುತ್ತಾಳೆ. (ರುಥ್‌ಳ ಸಾವನ್ನು ಎರಡು ಸಾಲುಗಳಲ್ಲಿ ಹೇಳಿ

ಮುಗಿಸಿಬಿಡಲಾಗಿದೆ. ಇದು ಕಾದಂಬರಿಯಲ್ಲಿಯ ದೋಷವೂ ಅಹುದು. ಸಾವನ್ನು ಇಷ್ಟು ಸಲೀಸಾಗಿ ವಿಸಂಗತವಾಗಿ ಉಪಯೋಗಿಸಿಕೊಳ್ಳುವ ಏಕಮಾತ್ರ ಇಂಗ್ಲೀಷ್ ಕಾದಂಬರಿಕಾರನೆಂದರೆ ಫಾರ್ಸ್ಟರ್ ಒಬ್ಬನೆಂದೇ ತೋರುತ್ತದೆ. ಈ ವಿಷಯವಾಗಿ ಫಾರ್ಸ್ಟರನ ಮೇಲೆ ವಿಮರ್ಶಕರ ಫಿರ್ಯಾದು ಇದ್ದೇ ಇದೆ. ಹಾಗೆಯೇ ಮುಂದೆ ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಬ್ಯಾಸ್ಟನ ಸಾವೂ ಕೂಡಾ ಅಷ್ಟೊಂದು ಮನಸ್ಸು ಒಪ್ಪುವ ರೀತಿಯಲ್ಲಿ ಇಲ್ಲ.)

ಸಾಯುವ ಸಮಯದಲ್ಲಿ ರುಥ್ ಮೃತ್ಯುಪತ್ರ ಮಾಡಿಯೇ ತೀರಿಕೊಂಡಳು. ಇಲ್ಲಿ ಆಶ್ಚರ್ಯದ ಸಂಗತಿ ಎಂದರೆ ರುಥ್‌ಳು ವಿಶೇಷ ಚೀಟಿಯೊಂದನ್ನು ಮೃತ್ಯುಪತ್ರದೊಡನೆ ಇರಿಸಿದ್ದಳು. ಆ ಚೀಟಿಯಲ್ಲಿಯ ಅಭಿಪ್ರಾಯದ ಮೇರೆಗೆ ತನ್ನ ಮರಣಾನಂತರ, ತನ್ನ ತಂದೆಯ ಕಡೆಯಿಂದ ಬಂದ 'ಹಾವರ್ಡ್ಸ್ ಎಂಡ್' ಮನೆ ತನ್ನ ಯಾವ ಸಂಬಂಧಿಕರಿಗೂ ಹೋಗದೆ, ಮಾರ್ಗರೆಟ್‌ಳಿಗೆ ಮಾತ್ರ ಹೋಗಬೇಕೆಂದು ರುಥ್ ತಿಳಿಸಿದ್ದಳು. ಇದನ್ನು ಕೇಳಿ ಹೇನ್ರಿಯ ಕುಟುಂಬಕ್ಕೆಲ್ಲ ಆಶ್ಚರ್ಯವಾಯಿತು. ಚಾರ್ಲ್ಸ್, ಡಾಲಿಯರಿಗಂತೂ ಕೋಪವೂ ಉಕ್ಕಿತು. ಆದರೆ ಈ ಚೀಟಿ ಬೇರೆಯಾಗಿಯೇ ಇದ್ದದ್ದರಿಂದ ಮುಖ್ಯ ಮೃತ್ಯುಪತ್ರದ ಜೊತೆಗೆ ಅದರ ಸಂಬಂಧವಿಲ್ಲವೆಂದು ಯಾರಾದರೂ ಒಪ್ಪುವಂತಾಯಿತು. ಮತ್ತು ಈ ವಿಷಯ ಬೇರೆಯವರಿಗೆ ಗೊತ್ತಾಗಕೂಡದೆಂಬ ಮಾತಿಗೆ ಎಲ್ಲರೂ ಒಪ್ಪುವಂತಿತ್ತು.

ಇತ್ತ ಮಾರ್ಗರೆಟ್‌ಳಿಗೆ ರುಥ್‌ಳ ಮೃತ್ಯುಪತ್ರದ ವಿಷಯವಾಗಿ ಏನೂ ಗೊತ್ತಾಗಲಿಲ್ಲ. ರುಥ್‌ಳ ಸಾವಿಗಾಗಿ ಅವಳು ಮನನೊಂದರೂ ಅವಳ ಸಾವಿನಿಂದ ವಿಲ್‌ಕಾಕ್ಸ್ ಮನೆತನದ ಒಟ್ಟಾರೆ ಸಂಬಂಧ ಒಮ್ಮೆ ಕೊನೆಯದಾಗಿ ಕಡಿದುಹೋಯಿತೆಂದು ಮಾರ್ಗರೆಟ್‌ಳಿಗೆ ಸಂತೋಷವಾಯಿತು. ಪಾಲ್-ಹೆಲೆನ್ ಪ್ರಕರಣದ ಕಹಿ ಅನುಭವದ ಪುನರಾವೃತ್ತಿಯಾಗುವುದು ಅವಳಿಗೆ ಬೇಡವಾಗಿತ್ತು.

ಎಂದಿನಂತೆ ಇತ್ತ ವಿಕ್‌ಹ್ಯಾಮ್ ಪ್ಲೇಸಿನಲ್ಲಿ ಶ್ಲೆಗಲ್ ಸಹೋದರಿಯರ ಜೀವನ ಸಾಗುತ್ತಿತ್ತು. ಸ್ತ್ರೀ ಸಂಘ, ಕ್ಲಬ್ಬುಗಳ ಸದಸ್ಯೆಯರಾಗಿ, ಸಿಂಪೋಜಿಯಮ್ ಸೆಮಿನಾರುಗಳಲ್ಲಿ ಭಾಗವಹಿಸಿ ಅವರು ಜೀವನ ನೂಕುತ್ತಿದ್ದರು. ಒಮ್ಮೆ ಹೆಲೆನ್ 'ಮರಣಾನಂತರ ಆಸ್ತಿಯ ವಿತರಣ ಹಾಗೂ ಉಪಯೋಗ' ಎಂಬುದರ ಮೇಲೆ ಪ್ರಬಂಧ ಬರೆದು ಒಂದು ಸಿಂಪೋಜಿಯಮ್‌ದಲ್ಲಿ ಸಾದರಪಡಿಸಿದಳು. ಚರ್ಚೆಯಲ್ಲಿ ಇಬ್ಬರೂ ಅಕ್ಕತಂಗಿಯರು ಭಾಗವಹಿಸಿದರು. ಹೆಲೆನ್‌ಳು ಬ್ಯಾಸ್ಟನಂಥ ಅಭಿರುಚಿಸಂಪನ್ನ ಬಡವರಿಗೆ ಆರ್ಥಿಕ ಸಹಾಯ ದೊರೆಯಬೇಕೆಂದು ತನ್ನ ವಾದವನ್ನು ಮಂಡಿಸಿದಳು. ಚರ್ಚೆ ಮುಗಿದ ನಂತರ ಇಬ್ಬರೂ ಸಹೋದರಿಯರು ಚೆಲ್‌ಸೀ ಎಂಬ್ಯಾಂಕ್‌ಮೆಂಟ್‌ದ ಕಡೆ ಅಡ್ಡಾಡಲು ಹೋಗಿದ್ದರು. ಅಲ್ಲಿ ಅಕಸ್ಮಾತ್ ಸಂಜೆ ತಿರುಗಾಟಕ್ಕೆ ಬಂದ ಹೇನ್ರಿಗೆ ರುಥ್‌ಳ

ಮರಣಾನಂತರ ಬಹಳ ದಿನಗಳ ನಂತರ ಅಕಸ್ಮಾತ್ ಭೆಟ್ಟಿಯಾದ ಇಬ್ಬರನ್ನೂ ಕಂಡು ಸಂತೋಷವಾಯಿತು. ಅವರು ಮಾತಾಡುತ್ತಿರುವಂತೆ ಬ್ಯಾಸ್ಟನ ಪ್ರಸ್ತಾಪ ಬಂದಿತು. ಶ್ಲೆಗಲ್ ಸಹೋದರಿಯರು ಅವನು ಒಳ್ಳೆಯವನೆಂದೂ, ಅವನ ದಾರುಣ ಸ್ಥಿತಿಯನ್ನು ವಿವರಿಸಿ ಅವನಿಗೆ ಸಹಾಯ ಮಾಡಬೇಕೆಂದೂ ಹೇನ್ರಿಯನ್ನು ಕೇಳಿಕೊಂಡರು. ಅದಕ್ಕೆ ಚಾಣಾಕ್ಷನಾದ ಹೇನ್ರಿ ಬ್ಯಾಸ್ಟನ ಆಪ್ತಸ್ನೇಹಿತನಂತೆ ನಟಿಸಿ ತನ್ನ ಸಲಹೆಯನ್ನು ಅವರೆದುರು ಹೇಳಿದ. ಹೇನ್ರಿಯು ತಿಳಿದಂತೆ ಬ್ಯಾಸ್ಟನ ಆ ಇನ್‌ಶುರೆನ್ಸ್ ಕಂಪನಿ ಅಷ್ಟು ಒಳ್ಳೆಯದಲ್ಲ ವೆಂದೂ, ಅದು ಇನ್ನು ಕೆಲವೇ ದಿನಗಳಲ್ಲಿ ದಿವಾಳಿ ತೆಗೆಯಲಿದ್ದರಿಂದ ಬ್ಯಾಸ್ಟ ತನ್ನ ನೌಕರಿಯನ್ನು ಬಿಟ್ಟು ಬೇರೆ ಕಡೆಗೆ ಹೋಗಬಹುದೆಂದೂ ಸಲಹೆ ನೀಡಿದ. ಈ ಸಲಹೆಯ ಕಾರಣವೆಂದರೆ ಬ್ಯಾಸ್ಟ ಹಾಗೂ ಈ ಸಹೋದರಿಯರ ಸಂಬಂಧ ಇದರಿಂದ ಸಂಪೂರ್ಣ ಕಡಿದು ಹೋಗುವುದೆಂದು ಹೇನ್ರಿ ತಿಳಿದ. ಯಾಕೆಂದರೆ, ಇತ್ತಿತ್ತಲಾಗಿ ರುಥ್‌ಳ ನಿಧನದ ನಂತರ ತನ್ನ ಗಮನ ಸೆಳೆಯುತ್ತಿದ್ದ ಮಾರ್ಗರೆಟ್‌ಳನ್ನು ಬ್ಯಾಸ್ಟ ಮೋಹಿಸಬಹುದೆಂಬ ಭಯ ಅವನಿಗೆ ಬಂದಂತೆ ಕಾಣುತ್ತಿತ್ತು.

ಇಷ್ಟರಲ್ಲಿ ವಿಕ್‌ಹ್ಯಾಮ್ ಪ್ಲೇಸ್‌ನ ಬಾಡಿಗೆಯ ಅವಧಿ ತೀರಿದ್ದರಿಂದ ಶ್ಲೆಗಲ್ ಸಹೋದರಿಯರು ಅದನ್ನು ಬಿಡಬೇಕಾಗಿ ಬಂದಿತು. ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ ಈ ಕುಟುಂಬ ಅಲ್ಲಿಯೆ ವಾಸವಾಗಿತ್ತು. ಹೆಲೆನ್, ಟಿಬಿ ಅವರೆಲ್ಲ ಈ ಮನೆಯಲ್ಲಿಯೇ ಹುಟ್ಟಿ ಬೆಳೆದವರಾಗಿದ್ದರು. ಇಲ್ಲಿರುತ್ತಿರುವಾಗಲೇ ಅವರ ಇಂಗ್ಲಿಷ್ ತಾಯಿ ಎಮಿಲಿ ಹಾಗೂ ಜರ್ಮನ್ ತಂದೆ ತೀರಿಕೊಂಡದ್ದು. ಇಲ್ಲಿದ್ದಾಗ ಒಮ್ಮೆ ಮಾರ್ಗರೆಟ್ ರುಥ್‌ಳ ಮನೆಗೆ ಹೋದಾಗ, ಯಾವುದೋ ಮಾತಿನಲ್ಲಿ 'ನೀವು ಆ ಮನೆ ಯಾವಾಗ ಬಿಡುತ್ತೀರಿ ?' ಎಂದು ರುಥ್‌ಳು ಕೇಳಿದ್ದಕ್ಕೆ 'ಇನ್ನೂ ಎರಡು ವರ್ಷ' ಎಂದು ಉತ್ತರಿಸಿದ್ದುಂಟು. ಅಲ್ಲದೆ ರುಥ್‌ಳು ಸಲಿಗೆಯಿಂದ 'ನಿನಗೆ ನಾನು ಯಾವ ಕಾಣಿಕೆ ಕೊಡಬೇಕು?' ಎಂದು ಕೇಳಿದಾಗ ಮಾರ್ಗರೆಟ್ ಉತ್ತರಿಸದೆ ಸುಮ್ಮನಿದ್ದು ಬಿಟ್ಟಿದ್ದಳು.

ಎರಡು ವರ್ಷಗಳ ನಂತರ ಮನೆ ಬಿಡಬೇಕಾಗಿ ಬಂದದ್ದರಿಂದ ಈಗ ದಿನ ಬೆಳಗಾದರೆ ಮನೆ ಹುಡುಕುವದೇ ಒಂದು ದೊಡ್ಡ ಕೆಲಸವಾಯಿತು. ಇದರಿಂದ ಅವರು ಕಂಗೆಟ್ಟವರಾದರು. ಅವರ ಪೇಚಾಟ ಹೆಚ್ಚಾಯಿತು. ಹೀಗಿರುವಂತೆ ಒಮ್ಮೆ ಈವ್ಸ ಕೊಟ್ಟ ಪಾರ್ಟಿಗೆ ಹೋದಾಗ ತಾವು ಈ ಬರುವ ಸೆಪ್ಟೆಂಬರ್ ತಿಂಗಳಲ್ಲಿ ಮನೆ ಬಿಡಬೇಕಾಗಿದೆ ಎಂದು ಮಾರ್ಗರೆಟ್ ಹೇನ್ರಿಗೆ ತಿಳಿಸಿ ಅದರಿಂದ ತಮಗಾದ ಸಂಕಟಸ್ಥಿತಿಯ ಬಗ್ಗೆ ತನ್ನ ದುಃಖವನ್ನು ಅವನೆದುರು ತೋಡಿಕೊಂಡಳು.

ಈ ಘಟನೆ ನಡೆದ ಕೆಲ ದಿನಗಳ ನಂತರ ಹೇನ್ರಿಯಿಂದ ಮಾರ್ಗರೆಟ್‌ಳಿಗೆ ಒಂದು ಚೀಟಿ ಬಂದಿತು. ಅದರಲ್ಲಿ ಹೇನ್ರಿಯು ತಾವು ಲಂಡನ್‌ನ ಮನೆಯನ್ನು ಬಿಡುವದರಲ್ಲಿರು

ವದರಿಂದ ಅದೇ ಮನೆಯನ್ನು ಶ್ಲೆಗಲ್ ಸಹೋದರಿಯರು ಉಪಯೋಗಿಸಿಕೊಳ್ಳಬಹು ದೆಂದೂ ಅದಕ್ಕಾಗಿ ಮನೆ ನೋಡಲು ಅಂದೇ ಬರಬೇಕೆಂದೂ ತಿಳಿಸಿದ್ದ. ಮಾರ್ಗರೆಟ್ ಈಗ ಮನೆ ನೋಡಲು ಬರುತ್ತಾಳೆ. ಅಲ್ಲಿ ಮತ್ತೊಂದು ವಿಚಿತ್ರ ಘಟನೆ ನಡೆಯುತ್ತದೆ. (ಫಾರ್ಸ್ಟರನ ಆಕಸ್ಮಿಕ ಆಶ್ಚರ್ಯಗಳಲ್ಲಿ ಕೆಲವೊಂದು ದೋಷಪೂರ್ಣವಾಗಿಯೂ ಇವೆ.) ಹೇನ್ರಿ ಮಾರ್ಗರೆಟ್‌ಳೊಡನೆ ಮಾತನಾಡುತ್ತಿದ್ದಂತೆ ಅತ್ಯಂತ ವ್ಯವಹಾರ-ಸಂಕ್ಷಿಪ್ತಿ ಯೊಂದಿಗೆ, ಮುಚ್ಚುಮರೆಯಿಲ್ಲದೆ ನೇರವಾಗಿ ಅವಳನ್ನು ತಾನು ಹೆಂಡತಿಯಾಗಿ ಸ್ವೀಕರಿಸಲು ಒಪ್ಪುತ್ತೇನೆಂದೂ, ಅದಕ್ಕಾಗಿ ಅವಳ ಅಭಿಪ್ರಾಯ ತಿಳಿಯಲು ತಾನು ಅವಳನ್ನು ಮನೆ ನೋಡುವದರ ನೆಪದಲ್ಲಿ ಕರೆಯಿಸಿಕೊಂಡಿದ್ದೇನೆಂದೂ ಹೇಳಿಬಿಡುತ್ತಾನೆ. ಇದಕ್ಕೆ ಅವಳು ಒಪ್ಪಿದಲ್ಲಿ ಹೊಸಮನೆಯ ಹುಡುಕಾಟದ ಪ್ರಶ್ನೆಯೇ ಬರಲಾರದೆಂದು ಹೇನ್ರಿ ಸೂಚಿಸುತ್ತಾನೆ.

ಮಾರ್ಗರೆಟ್ ಮೊದಲು ಆಶ್ಚರ್ಯಚಕಿತಳಾಗುತ್ತಾಳೆ. ಆದರೆ ಕ್ರಮೇಣ ಸಂತೋಷ ಅವಳನ್ನು ಆವರಿಸುತ್ತದೆ : ಮದುವೆಯ ವಯಸ್ಸು ದಾಟಿದ್ದರೂ ತನಗೆ ಒಬ್ಬ ಆಶ್ರಯದಾತ, ಯಜಮಾನ ದೊರಕಿದನೆಂದು. ತಾನು ಅಷ್ಟು ರೂಪವತಿ ಆಗದ್ದರಿಂದ ತನಗಿಂತ ಎರಡರಷ್ಟು ದೊಡ್ಡವನಾದ ಹೇನ್ರಿಯ ವಯಸ್ಸನ್ನು ಅವಳು ಗಣನೆಗೆ ತರಲಿಲ್ಲ. ಜೀವನದಲ್ಲಿ ಅವಳಿಗಿದ್ದ ಮುಖ್ಯ ಉದ್ದೇಶವೆಂದರೆ, 'Only Connect' – 'ಸಂಬಂಧ ಬೆಳೆಸುವುದು'. ಯಾಕೆಂದರೆ, ಸಂಬಂಧವು ಜೀವನದಲ್ಲಿ ಪರಕೀಯತೆಯನ್ನು, ಅನಾಥ ಸ್ಥಿತಿಯನ್ನು ಅನುಭವಿಸುತ್ತಿದ್ದ ಮನುಷ್ಯಜೀವಕ್ಕೆ ಆಶ್ರಯವೀಯುತ್ತದೆ. ಜೀವನವು ಅರ್ಥಪೂರ್ಣವಾಗಿ ಜೀವಿಸುವಂತಾಗಬೇಕಾದರೆ ಮನುಷ್ಯನು ಸಂಬಂಧ ಬೆಳೆಸಬೇಕು. ಆದ್ದರಿಂದ 'Only Connect' ಎಂಬುದೇ ಅವನ ಧ್ಯೇಯವಾಗಿರಬೇಕು. ಗಿಡ, ಮರ, ಹಳ್ಳಿ, ನದಿ, ಬೆಟ್ಟ – ಇವುಗಳ ಭಾವನಾತ್ಮಕ ಸಂಬಂಧವನ್ನು ಮನುಷ್ಯನು ಕಡಿದುಕೊಂಡು ಅವುಗಳಿಂದ ದೂರವಾಗಿ ಅನಾಥನಾಗುತ್ತಿದ್ದಾನೆ. ಹೀಗಾಗಿ ಜೀವವು ರಸವಿಹೀನವಾಗಿ, ಸಪ್ಪೆಬಾಳಾಗಿ, ಮಖಾಳಾದ ಯಾಂತ್ರಿಕತೆಯ ಕಾರ್ಯದಿಂದ ಮನುಷ್ಯನನ್ನು ಹಿಂಡುತ್ತಿದೆ. ಇಂಥ ದಾರುಣ ಪರಿಸ್ಥಿತಿಯಲ್ಲಿ ಪ್ರೀತಿ, ಸಂಬಂಧಗಳೇ ಅವನನ್ನು ಪರಕೀಯತೆಯಿಂದ, ಅಸುರಕ್ಷಿತತೆಯ ವಾತಾವರಣದಿಂದ ಪಾರುಮಾಡಬಲ್ಲವು. ಇದನ್ನು ಮನಗಂಡು ಮಾರ್ಗರೆಟ್ ತನ್ನ ಒಪ್ಪಿಗೆಯನ್ನು ಸೂಚಿಸಿದಳು. ಇತ್ತ ಹೇನ್ರಿಯ ಧ್ಯೇಯವೆಂದರೆ 'Concentrate' 'ಕೇಂದ್ರೀಕರಿಸುವುದು.' ಹಣದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಶ್ರೀಮಂತನಾಗಬೇಕೆಂಬುದು ಅವನಿಗೆ ಗೊತ್ತಿದ್ದಿತು. ಈ ಕೇಂದ್ರೀಕರಣದ ತತ್ವದೊಂದಿಗೆ 'Connect'ದ ತತ್ವ ಬೆಸೆಯಲ್ಪಟ್ಟಾಗ ಮನುಷ್ಯನು ಕೇವಲ ಅಂಧಶಕ್ತಿಯ ವಾಹಕನಾಗದೆ ನಿಜವಾದ ಮಾನವನಾಗುತ್ತಾನೆ ಎಂಬ ಅರಿವೂ ಮಾರ್ಗರೆಟ್‌ಳಿಗೆ ಇದ್ದಿತು.

ಹೇನ್ರಿಯ ಸೂಚನೆಯನ್ನು ಕೆಲ ದಿನಗಳ ನಂತರ ಮಾರ್ಗರೆಟ್‌ಳು

ಕೊನೆಯದಾಗಿ ಒಪ್ಪಿದ್ದರಿಂದ ಬೇರೆ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುವ ಪ್ರಸಂಗವೇ ಅವರಿಗೆ ಬರಲಿಲ್ಲ. ಹೇನ್ರಿಯು ಈ ಮೊದಲು ತನ್ನ ಮಗಳಾದ ಈವ್ಹಿಯ ಲಗ್ನವನ್ನು ಸೆಪ್ಟೆಂಬರದಲ್ಲಿ ಮಾಡಬೇಕೆಂದು ಮಾಡಿದ್ದ. ಆದರೆ ಈಗ ಅವಳ ಮದುವೆಯನ್ನು ಆಗಸ್ಟ್ ತಿಂಗಳಲ್ಲಿಯೇ ಮಾಡಿ ಮುಗಿಸಿದ. ವೇಲ್ಸದಲ್ಲಿ ಕೊಂಡುಕೊಂಡ 'ಓನಿಟನ್'ನ ಮನೆಯಲ್ಲಿ ಆ ಸಮಾರಂಭ ನೆರವೇರಿಸಿದ. ಓನಿಟನ್‌ದ ಸಮುದ್ರತೀರ, ಅಲ್ಲಿಯ ಹಳ್ಳಿಯ ಹಸಿರು ಪ್ರಶಾಂತ ವಾತಾವರಣ ಮಾರ್ಗರೆಟ್‌ಳ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿದವು.

ಈವ್ಹಿಯ ಮದುವೆಯ ನಂತರ ಹೇನ್ರಿ-ಮಾರ್ಗರೆಟ್‌ಳ ಮದುವೆಯ ಸಮಾಚಾರ ಎಲ್ಲರಿಗೂ ಗೊತ್ತಾಯಿತು. ಹೆಲೆನ್ ಮಾತ್ರ ಈ ಮದುವೆಗೆ ಒಪ್ಪಲಿಲ್ಲ. ಈ ಒಳಗಾಗಿ ಒಂದು ದುರ್ಘಟನೆ ಸಂಭವಿಸಿದ್ದಿತು. ಹೇನ್ರಿ ಹೆಲೆನ್‌ಳಿಗೆ ಬ್ಯಾಸ್ಟನ ವಿಷಯವಾಗಿ ಕೊಟ್ಟ ಸಲಹೆಯ ಮೇರೆಗೆ ಬ್ಯಾಸ್ಟ ತನ್ನ ನೌಕರಿಗೆ ಎರವಾಗಿ, ಉಪವಾಸ ವನವಾಸ ಅನುಭವಿಸಬೇಕಾಯಿತು. ಈಗ ಅವಳು ರೋಷದಿಂದ ಬ್ಯಾಸ್ಟ ಹಾಗೂ ಅವನ ಪ್ರೇಯಸಿ ಜ್ಯಾಕಿ ಇಬ್ಬರನ್ನೂ ಮಾರ್ಗರೆಟ್‌ಳಿದ್ದಲ್ಲಿಗೆ ಕರೆತಂದು ಹೇನ್ರಿಯು ಅವನಿಗೆ ನೌಕರಿ ಕೊಡಿಸ ಬೇಕೆಂದು ವಾದಿಸಿದಳು. ಇಷ್ಟರಲ್ಲಿ ಬ್ಯಾಸ್ಟನ ಗರ್ಲ್‌ಫ್ರೆಂಡ್ ಜ್ಯಾಕಿ ಕುಡಿದು ಲಾನಿನ ತುಂಬೆಲ್ಲ ಹುಚ್ಚಳಂತೆ ಓಡಾಡಿದಳು. ಅವಳು ಈ ನಿಶೆಯ ಮಬ್ಬಿನಲ್ಲಿ ಒಂದು ವಿಚಿತ್ರ ಸಂಗತಿಯನ್ನು ಹೊರಗೆಡವಿದಳು. ಅದೇಂದರೆ – ಜ್ಯಾಕಿ ವಯಸ್ಸಿಗೆ ಬಂದ ಹುಡಿಗೆ ಯಾದಾಗ ಹೇನ್ರಿಯು ಅವಳನ್ನು ಸಲೀಸಾಗಿ ಉಪಯೋಗಿಸಿಕೊಂಡನೆಂದು ಅವಳು ಬಾಯಿಬಿಟ್ಟು ಮಾರ್ಗರೆಟ್‌ಳ ಎದುರು ಹೇನ್ರಿಯ ಹಾಜರಿಯಲ್ಲಿಯೇ ಹೇಳಿದಳು. ಇದರಿಂದ ಒಂದು ಕ್ಷಣ ಮಾರ್ಗರೆಟ್ ತಲ್ಲಣಿಸಿದಳು. ಹೇನ್ರಿಗೂ ವಿಪರೀತ ನಾಚಿಕೆಯಾಗಿ ಮಾರ್ಗರೆಟ್‌ಳ ಕ್ಷಮೆ ಕೇಳುವ ಸ್ಥಿತಿಗೆ ಬಂದ. ಆಗ ಮಾರ್ಗರೆಟ್‌ಳು ಅದು ಹೇನ್ರಿಯು ರುಥ್‌ಳಿಗೆ ಮಾಡಿದ ದೊಡ್ಡ ಅನ್ಯಾಯವೆಂದು ತನಗೇ ತಾನು ಸಾಂತ್ವನ ಹೇಳಿ ಹೇನ್ರಿಯನ್ನು ಕ್ಷಮಿಸಿದಳು. ಅದೇ ವೇಳೆಗೆ ಅವಳು ಬ್ಯಾಸ್ಟನಿಗೆ ಸಹಾಯ ನೀಡುವುದಾಗಿ ಹೇಳಿದಳು. ಆದರೆ ಸದ್ಯದ ಸ್ಥಿತಿಯಲ್ಲಿ ಮಾತ್ರ ಬ್ಯಾಸ್ಟನನ್ನು ಅವಳು ಸಮರ್ಥಿಸುವಂತಿರಲಿಲ್ಲ.

ಹೆಲೆನ್‌ಗೆ ಮಾತ್ರ ಬ್ಯಾಸ್ಟನ ಅಸಹಾಯ ಸ್ಥಿತಿಯನ್ನು ನೋಡಿ ಕರುಣೆ ಉಕ್ಕಿತು. ಅಲ್ಲದೆ ಹೇನ್ರಿಯು ಬ್ಯಾಸ್ಟನ ಸಂಸಾರ ಹಾಳುಮಾಡಿದನೆಂದು ಅವನನ್ನು ದ್ವೇಷಿಸಿದಳು. ಈಗ ತನಗೆ ಬರುತ್ತಿದ್ದ ವರ್ಷ 5,000 ಪೌಂಡುಗಳನ್ನು ಬ್ಯಾಸ್ಟನಿಗೆ ಕೊಡಿಸುವದಾಗಿ ನಿರ್ಧರಿಸಿದಳು. ಅದೇ ರಾತ್ರಿ ಜ್ಯಾಕಿಗೆ ಬೇರೆ ಮಲಗಲು ವ್ಯವಸ್ಥೆಮಾಡಿ ಬ್ಯಾಸ್ಟನ ಮೇಲಿನ ಕರುಣೆಯಿಂದ ಒಂದು ಸಲ ಆ ರಾತ್ರಿ ಅವನೊಡನೆ ರಮಿಸಿದಳು. ಮರುದಿನ ಅವಳು ಮ್ಯೂನಿಕ್ ನಗರದಲ್ಲಿ ವಾಸವಾಗಿದ್ದ ತನ್ನ ಗೆಳತಿ ಮೋನಿಕಾಳೊಡನೆ ಇರಲು ಜರ್ಮನಿಗೆ ಹೊರಟುಹೋದಳು. ಹೋಗುವ ಮೊದಲು ಆಕ್ಸ್‌ಫರ್ಡ್‌ದಲ್ಲಿ ಟಿಬಿಯನ್ನು ಭೆಟ್ಟಿಯಾಗಿ ಅವನಿಗೆ ಬ್ಯಾಸ್ಟನ ಸಲುವಾಗಿ 5,000 ಪೌಂಡುಗಳ ಚೆಕ್‌ನ್ನು ಪೋಸ್ಟಿನಿಂದ ಕಳಿಸಲು

ಹೇಳಿಹೋದಳು. ಬ್ಯಾಸ್ಟನು ಮಾತ್ರ ಆ ಚೆಕ್‌ನ್ನು ಸ್ವೀಕರಿಸಲು ನಿರಾಕರಿಸಿದ. ಚೆಕ್ಕು ಟಿಬಿಗೆ ವಾಪಸ್ಸಾಯಿತು.

ಮಾರ್ಗರೆಟ್‌ಳಿಗೆ ಹೆಲೆನ್-ಬ್ಯಾಸ್ಟರ ಸಂಬಂಧ ತಿಳಿಯಲೇ ಇಲ್ಲ. ಮುಂದೆ ಸೆಪ್ಟೆಂಬರ ತಿಂಗಳಲ್ಲಿ ಚಾರ್ಲ್ಸ್ ಹಾಗೂ ಈವ್ಹಿಯರ ಹಾಜರಿಯ ಮಧ್ಯೆ ಚರ್ಚ್ ಒಂದರಲ್ಲಿ ಹೇನ್ರಿ-ಮಾರ್ಗರೆಟ್‌ರ ಮದುವೆ ನಡೆದುಹೋಯಿತು. ಮದುವೆಯ ಸಮಯದಲ್ಲಿ ಹೆಲೆನ್‌ಳ ಗೈರುಹಾಜರಿಯಿಂದ ಮಾರ್ಗರೆಟ್‌ಳಿಗೆ ಬೇಜಾರಾಯಿತು. ಮದುವೆ ಮುಗಿದು ಎಂಟು ತಿಂಗಳಾದರೂ ಮಾರ್ಗರೆಟ್‌ಳಿಗೆ ಹೆಲೆನ್‌ಳ ಸಮಾಚಾರವೇ ಗೊತ್ತಾಗಲಿಲ್ಲ.

ಮದುವೆಯ ನಂತರ ಯಥಾಪ್ರಕಾರ ವಿಕ್‌ಹ್ಯಾಮ್ ಪ್ಲೇಸಿನಲ್ಲಿದ್ದ ಕೆಲವೊಂದು ಫರ್ನಿಚರು, ಲೈಬ್ರರಿ ಬುಕ್ಸ್ ಅಲ್ಲದೆ ಇನ್ನೂ ಹೆಚ್ಚಿನ ಸಾಮಾನುಗಳನ್ನು ಹಾವರ್ಡ್ಸ್ ಎಂಡ್‌ಗೆ ಸ್ಥಳಾಂತರಿಸಲಾಯಿತು. ಹಾವರ್ಡ್ಸ್ ಎಂಡ್ ಇಷ್ಟೊತ್ತಿಗೆ ಖಾಲಿಯಾಗಿದ್ದಿತು. ಆದಕ್ಕೆ ಕಾರಣವೆಂದರೆ ಈವ್ಹಿಯ ಮದುವೆಯ ನಂತರ ಅವಳು ಗಂಡನ ಮನೆಗೆ ಹೊರಟು ಹೋದಳು. ಪಾಲ್ ನೈಜೀರಿಯಾದಲ್ಲಿ ಇದ್ದ. ಚಾರ್ಲ್ಸ್ ಮತ್ತು ಡಾಲಿ ಹಾವರ್ಡ್ಸ್ ಎಂಡ್ ಬಿಟ್ಟು ಹಿಲ್ಟನ್ ಹಳ್ಳಿಯಲ್ಲಿಯೇ ಬೇರೆ ಕಡೆ ಮನೆ ಮಾಡಿಕೊಂಡಿದ್ದರು. ಡ್ಯೂಸಿ ಸ್ಟ್ರೀಟ್ ಮನೆಯಲ್ಲಿ ಹೇನ್ರಿ ಮತ್ತು ಮಾರ್ಗರೆಟ್ ಇರುವಂತಾಯಿತು. ಈ ಮನೆಯಲ್ಲಿಯೇ ಮಾರ್ಗರೆಟ್ ಹಾಗೂ ರುಥ್‌ಳ ಸ್ನೇಹ ಅತಿಯಾಗಿ ಬೆಳೆದು 'ಫಲ' ಕೊಟ್ಟಿದ್ದು. ಆ 'ಫಲ'ದ ಸುಳಿವು ಇದುವರೆಗೂ ಮಾರ್ಗರೆಟ್‌ಗೆ ಹತ್ತಿಲ್ಲ. ರುಥ್ ತನ್ನ ಮೃತ್ಯುಪತ್ರದಲ್ಲಿ ಹಾವರ್ಡ್ಸ್ ಎಂಡ್ ಮಾರ್ಗರೆಟ್‌ಳಿಗೆ ಹೋಗಬೇಕೆಂದು ಮಾಡಿದ್ದ ಪ್ರಸ್ತಾಪ, ಲಗ್ನದ ನಂತರವೂ ಹೇನ್ರಿ ಅವಳಿಗೆ ಈವರೆಗೂ ಹೇಳಿಲ್ಲ.

ಎಂಟ್ಹತ್ತು ತಿಂಗಳಾದ ನಂತರ ಮಾರ್ಗರೆಟ್‌ಳಿಗೆ ಹೆಲೆನ್‌ಳಿಂದ ಒಂದು ಕಾಗದ ಬಂದಿತು. ಆ ಕಾಗದದಲ್ಲಿ ಹೆಲೆನ್ ಹೇಳಿದ್ದೆಂದರೆ : ಅವಳಿಗೆ ಕೆಲವೊಂದು ಪುಸ್ತಕಗಳು ಬೇಕಾದ್ದರಿಂದ ಸದ್ಯ ಲಂಡನ್‌ನಿಂದ ತಾನು ನೇರವಾಗಿ ಹಾವರ್ಡ್ಸ್ ಎಂಡ್‌ಗೆ ಹೋಗುವದಾಗಿ ತಿಳಿಸಿದ್ದಳು. ಯಾಕೆಂದರೆ ವಿಕ್‌ಹ್ಯಾಮ್ ಪ್ಲೇಸಿನಲ್ಲಿಯ ಅವಳ ಲೈಬ್ರರಿ ಪುಸ್ತಕಗಳು ಮಾರ್ಗರೆಟ್‌ಳಿಂದ ಹಾವರ್ಡ್ಸ್ ಎಂಡ್‌ಗೆ ಸ್ಥಳಾಂತರಿಸಲ್ಪಟ್ಟಿದ್ದವು. ಈಗ ಮಾರ್ಗರೆಟ್‌ಳು ತನ್ನನ್ನು ಕಾಣಬೇಕಿದ್ದರೆ ಹಾವರ್ಡ್ಸ್ ಎಂಡ್‌ಗೆ ಬಂದು ಭೆಟ್ಟಿಯಾಗಬಹುದೆಂದು ತಿಳಿಸಿದ್ದಳು. ಆದರೆ ಹೇನ್ರಿಯ ವಿಷಯವಾಗಿ ಅವಳು ಯಾವ ಪ್ರಸ್ತಾಪವನ್ನೂ ಮಾಡಿರಲಿಲ್ಲ. ಹೆಲೆನ್ ಇಷ್ಟೇಕೆ ರಹಸ್ಯವಾಗಿ ವರ್ತಿಸುತ್ತಿದ್ದಾಳೆಂದು ಹೇನ್ರಿಗೆ ಸಂಶಯ ಬಂದು ಅವನು ಮಾರ್ಗರೆಟ್‌ಳ ಜೊತೆಗೆ ಹೆಲೆನ್‌ಳನ್ನು ಕಾಣಲು ಬರುತ್ತಾನೆ. ಅಲ್ಲಿ ಪುನಃ ಅವರಿಗಾಗಿ ಒಂದು ಆಶ್ಚರ್ಯದ ಸುದ್ದಿ ಕಾಯ್ದು ನಿಂತಿರುತ್ತದೆ. ಅದೆಂದರೆ ಹೆಲೆನ್ ಬಸುರಿಯಾದ್ದರಿಂದ

ಆವಳೇ ಸ್ವತಃ ಯಾರನ್ನೂ ಕಾಣುವುದು ಬೇಡವಾಗಿತ್ತು. ಬ್ಯಾಸ್ಟ ಹಾಗೂ ಹೆಲೆನ್‌ರ ಸ್ನೇಹ ಇಷ್ಟರ ಮಟ್ಟಿಗೆ ಹೋಗಿದೆ ಎಂದು ಮಾರ್ಗರೆಟ್‌ಳಿಗೆ ಗೊತ್ತಾದದ್ದು ಆಗ ಮಾತ್ರ. ಹೇನ್ರಿಗಂತೂ ಇದನ್ನು ನಂಬಲಾರದಷ್ಟು ಆಶ್ಚರ್ಯವಾಯಿತು. ಆದರೆ ಅದು ನಡೆದ ಘಟನೆಯಾಗಿದ್ದಿತು.

ಮಾರ್ಗರೆಟ್‌ಳು ಅಂದಿನ ರಾತ್ರಿ ಹೆಲೆನ್‌ಳೊಡನೆ ಹಾವರ್ಡ್ಸ್ ಎಂಡ್‌ದಲ್ಲಿಯೇ ಇದ್ದಳು. ಹೇನ್ರಿಗೆ ಮಾತ್ರ ಮಾರ್ಗರೆಟ್ ಹೆಲೆನ್‌ಳೊಡನೆ ಇರುವುದು ಬೇಡವಾಗಿತ್ತು. ಇತ್ತ ಚಾರ್ಲ್ಸ್ ಈ ಸಹೋದರಿಯರಿಬ್ಬರೂ ಹಾವರ್ಡ್ಸ್ ಎಂಡ್‌ಗೆ ಏಕೆ ಹೋದರು ಎಂದು ಕೋಪಗೊಂಡ. ತಮ್ಮ ತಾಯಿಯ ಕಡೆಯಿಂದ ನ್ಯಾಯವಾಗಿ ತಮ್ಮ ಮನೆತನಕ್ಕೆ ಬರಬೇಕಾದ ಈ ಮನೆಯನ್ನು ಇಬ್ಬರೂ ಅಕ್ಕತಂಗಿಯರು ಎಲ್ಲಿ ಕಬಳಿಸಿಬಿಡುತ್ತಾರೊ ಎಂಬ ಭಯ ಅವನಿಗೆ ಉಂಟಾಯಿತು. ಸಾಲದ್ದಕ್ಕೆ ರುಥ್‌ಳು ಆ ಮನೆ ಮಾರ್ಗರೆಟ್‌ಳಿಗೆ ಹೋಗಬೇಕೆಂದು ತಿಳಿಸಿ ತೀರಿಕೊಂಡಿದ್ದಾಳೆ.

ಹೀಗಾಗಿ ಚಾರ್ಲ್ಸ್‌ಗೆ ರೋಷ ಹೆಚ್ಚಾಗಿ ಅವನು ಇಬ್ಬರನ್ನೂ ಆ ಮನೆಯಿಂದ ಹೊರತಳ್ಳಬೇಕೆಂದು ಅಲ್ಲಿಗೆ ಬರುತ್ತಾನೆ. ಇದೇ ವೇಳೆಗೆ ನೌಕರಿಗೆ ಎರವಾದ ಬ್ಯಾಸ್ಟ ಮಾರ್ಗರೆಟ್‌ಳಿಂದ ಸ್ವಲ್ಪಾದರೂ ಹಣ ಕಡವಾಗಿ ಕೇಳಲು ಅಲ್ಲಿಗೇ ಬರುತ್ತಾನೆ. ಚಾರ್ಲ್ಸ್ ಇದರಿಂದ ಇನ್ನಷ್ಟು ಕೋಪಗೊಂಡು ಬ್ಯಾಸ್ಟನನ್ನು ಅಲ್ಲಿಯೇ ಸಮೀಪದಲ್ಲಿ ತನ್ನ ಕೈಗೆ ಸಿಕ್ಕ ಕೋಲಿನಿಂದ ಥಳಿಸುತ್ತಾನೆ. ಅಲ್ಲಿ ನೆರೆದ ಹೆಂಗಸರೆಲ್ಲರೂ ಚೀರಿಕೊಳ್ಳುತ್ತಿದ್ದಂತೆ ಬ್ಯಾಸ್ಟ ಹೌಹಾರಿ ಪ್ರಾಣ ನೀಗುತ್ತಾನೆ. ಆನಂತರ ಅವನ ಅಂತ್ಯವಿಧಿಯೂ ಹಾವರ್ಡ್ಸ್ ಎಂಡ್‌ದಲ್ಲಿಯೇ ಮುಗಿದುಹೋಗುತ್ತದೆ.

ಅಂತ್ಯವಿಧಿಯ ನಂತರ ಮಾರ್ಗರೆಟ್‌ಳಿಗೆ ಹೇನ್ರಿಯಲ್ಲಿ ಅಪನಂಬಿಕೆಯಾಗುತ್ತದೆ. ಬ್ಯಾಸ್ಟನ ದುಸ್ಥಿತಿ ಹಾಗೂ ಮರಣಕ್ಕೆ ಹೇನ್ರಿಯೇ ಕಾರಣವೆಂದು ಅವಳು ತಿಳಿಯುತ್ತಾಳೆ. ಹೇನ್ರಿಯನ್ನು ಇನ್ನು ತ್ಯಜಿಸಿ ಹೆಲೆನ್‌ಳೊಡನೆ ಮ್ಯೂನಿಕ್‌ನಲ್ಲಿ ಅವಳ ಮಗುವನ್ನು ಜೋಪಾನ ಮಾಡುತ್ತಾ ಕಾಲ ಕಳೆಯಬೇಕೆಂದು ನಿಶ್ಚಯಿಸುತ್ತಾಳೆ. ಜೀವನದುದ್ದಕ್ಕೂ ಬ್ಯಾಸ್ಟ ಕಷ್ಟ ಸಹಿಸಬೇಕಾಯಿತೆಂದೂ ಅದಕ್ಕೆ ಹೇನ್ರಿ ಹಾಗೂ ತಾನು ಇಬ್ಬರೇ ಕಾರಣರೆಂದೂ ಪಶ್ಚಾತ್ತಾಪ ಪಡುತ್ತಾಳೆ. ತಮ್ಮಿಬ್ಬರ ಅಪರಾಧದ ಪರಿಹಾರಕ್ಕಾಗಿ ಬ್ಯಾಸ್ಟನ ಮಗುವನ್ನು ಜೋಪಾನವಾಗಿ ಬೆಳೆಸುವದೊಂದೇ ಹಾದಿ ಎಂದು ಅವಳು ತಿಳಿಸುತ್ತಾಳೆ.

ಇತ್ತ ಬ್ಯಾಸ್ಟನ ಕೊಲೆಯ ಪ್ರಕರಣದ ಖಟ್ಲೆ ಕೋರ್ಟಿನಲ್ಲಿ ನಡೆದು ಅದು ಹೃದಯಾಘಾತದ ಮರಣವೆಂದು ನಿರ್ಣಯವಾಗಿ ಚಾರ್ಲ್ಸನಿಗೆ ಮೂರು ವರ್ಷ ಮಾತ್ರ ಶಿಕ್ಷೆಯಾಗುತ್ತದೆ. ಈ ಶಿಕ್ಷೆಯ ಸುದ್ದಿಯನ್ನು ಕೇಳಿ ಹೇನ್ರಿ ತತ್ತರಿಸುತ್ತಾನೆ. ವಯಸ್ಸಾದ ಹೇನ್ರಿ ಇದರಿಂದ ಕುಪ್ಪಳಿಸಿ ಹೋಗುತ್ತಾನೆ. ಅಪಾಂಗ ಮಗುವಿನ ಸ್ಥಿತಿ ಅವನದಾಗುತ್ತದೆ.

ಹೇನ್ರಿಯ ಸ್ಥಿತಿಯನ್ನು ನೋಡಿ ಮಾರ್ಗರೆಟ್ ಕರಗಿ ಹೋಗುತ್ತಾಳೆ. ಅವಳು ತನ್ನಲ್ಲಿಯೇ ಇರಬೇಕೆಂದು ಹೇನ್ರಿ ಕೇಳಿದ್ದಕ್ಕೆ ಈಗ ಒಪ್ಪುತ್ತಾಳೆ. ಇಷ್ಟೇ ಅಲ್ಲ, ಹೆಲೆನ್ ಕೂಡಾ ಬ್ಯಾಸ್ಟನಿಂದ ಹಡೆದ ಮಗುವನ್ನು ಜೋಪಾನ ಮಾಡುತ್ತಾ ಹಾವರ್ಡ್ಸ್ ಎಂಡ್‌ದಲ್ಲಿಯೇ ಇವರೀರ್ವರ ಜೊತೆಗೆ ಇರಬೇಕೆಂದು ನಿರ್ಣಯವಾಗುತ್ತದೆ.

ಈ ನಿರ್ಣಯದಂತೆ ಮೂವರೂ ಆ ಮಗುವಿನ ಜೊತೆಗೆ ಹಾವರ್ಡ್ಸ್ ಎಂಡ್ ದಲ್ಲೇ ವಾಸವಾಗಿ ಸುಮಾರು ಎರಡೂವರೆ ವರ್ಷ ಕಳೆಯುತ್ತವೆ. ಚಾರ್ಲ್ಸ್ ಸೆರೆಮನೆಯಿಂದ ಬಿಡುಗಡೆಯಾಗುವ ಮೂರು ತಿಂಗಳ ಮೊದಲು ಹೇನ್ರಿಯು ತನ್ನ ಆಪ್ತಮಿತ್ರರ ಸಭೆಯೊಂದನ್ನು ಕರೆದು ಆಸ್ತಿಯ ವಿತರಣದ ರೀತಿಯನ್ನು ಚರ್ಚಿಸುತ್ತಾನೆ. ಚಾರ್ಲ್ಸ್, ಪಾಲ್, ಈವ್ವಿ, ಡಾಲಿ ಇವರೆಲ್ಲರಿಗೂ ಆಸ್ತಿಯ ಪಾಲು ಹಂಚಿದ ನಂತರ ಹಾವರ್ಡ್ಸ್ ಎಂಡ್ ಯಾರಿಗೆ ಹೋಗಬೇಕೆನ್ನುವ ಪ್ರಶ್ನೆ ಏಳುತ್ತದೆ. ಅದಕ್ಕೆ ಹೇನ್ರಿಯು ಆ ಮನೆಯು ಮಾರ್ಗರೆಟ್‌ಗೆ ಹೋಗಬೇಕೆಂದೂ, ಅವಳ ನಂತರ ಅದು ಹೆಲೆನ್ ಬ್ಯಾಸ್ಟನಿಂದ ಹಡೆದ ಮತ್ತು ಸದ್ಯ ಇಲ್ಲಿ ಜೋಪಾನವಾಗುತ್ತಿರುವ ಮಗುವಿಗೆ ಬರಬೇಕೆಂದೂ ತನ್ನ ನಿರ್ಣಯ ಹೇಳುತ್ತಾನೆ. ಈ ಮಗುವಿನ ವಾರಸು ಹಕ್ಕಿಗೆ ಯಾರೂ ತಕರಾರು ಮಾಡಕೂಡದೆಂದು ಹೇನ್ರಿಯು ಕೊನೆಯದಾಗಿ ಆ ಸಭೆಯಲ್ಲಿ ಆದೇಶ ನೀಡುತ್ತಾನೆ. ಸಭೆಯು ಕೇವಲ ವಿಲ್‌ಕಾಕ್ಸ್ ಕುಟುಂಬದ ಸಭೆಯಾದ್ದರಿಂದ ಮಾರ್ಗರೆಟ್ ಹಾಗೂ ಹೆಲೆನ್ ಅಲ್ಲಿ ಇರಲಿಲ್ಲ.

ಕಾದಂಬರಿಯ ಕೊನೆಯ ದೃಶ್ಯವೆಂದರೆ — ಈ ಆಸ್ತಿ ವಿತರಣದ ಸಭೆ ಮುಗಿದು ಡಾಲಿ, ಪಾಲ್, ಈವ್ವರು ಹೇನ್ರಿಗೆ ಗುಡ್‌ಬಾಯ್ ಹೇಳಿ ಹೊರಟುಹೋಗುತ್ತಾರೆ. ಆಮೇಲೆ ಹೇನ್ರಿಯು ಮಾರ್ಗರೆಟ್‌ಳ ಎದುರು ಹಾವರ್ಡ್ಸ್ ಎಂಡ್‌ದ ಭವಿತವ್ಯದ ಬಗ್ಗೆ ಹೇಳುತ್ತಾನೆ.

ಆಗ ಮಾರ್ಗರೆಟ್‌ಳಿಗೆ ಆಶ್ಚರ್ಯವಾಗಿ, ರುಥ್‌ಳು ತನಗೇಕೆ ಹಾವರ್ಡ್ಸ್ ಎಂಡ್ ದೊರೆಯಬೇಕೆಂದು ಇಚ್ಛಿಸಿದ್ದಳು ಎಂದು ಪ್ರಶ್ನಿಸಿದಾಗ, ಅದೊಂದು ಹಳೆಯ ಕತೆ ಎಂದೂ, ರುಥ್‌ಳು ಮಾರ್ಗರೆಟ್‌ಳ ಸ್ನೇಹದ ಸಲುವಾಗಿ ಅವಳಿಗಿತ್ತ ಕಾಣಿಕೆ ಎಂದೂ ಅವನು ಮಾರ್ಗರೆಟ್‌ಳಿಗೆ ವಿವರಿಸಿ ಹೇಳುತ್ತಾನೆ. ಇದರಿಂದ ತನ್ನಿಂದ ಏನಾದರೂ ಪ್ರಮಾದವಾಯಿತೋ ಎಂದು ಹೇನ್ರಿ ಕೇಳಿದಾಗ, 'ಯಾವ ಪ್ರಮಾದವೂ ಇಲ್ಲವಲ್ಲ !' ಎಂದು ಉತ್ತರಿಸಿ ಮಾರ್ಗರೆಟ್ ಅವನನ್ನು ತಬ್ಬುತ್ತಾಳೆ. ಅಷ್ಟರಲ್ಲಿ ದೂರದ ತಮ್ಮ ಹೊಲದಲ್ಲಿ ಆಟವಾಡುತ್ತಿರುವ ಮಕ್ಕಳ ಧ್ವನಿ ಕೇಳಿಬರುತ್ತದೆ.

ಇತ್ತ ಹೊರಗೆ ಮುಸುಕುತ್ತಿರುವ ಮಂಜಿನಲ್ಲಿ ಹೆಲೆನ್ ತನ್ನ ಮಗುವನ್ನು ಒಂದು ಕೈಯಲ್ಲಿ ಎತ್ತಿಕೊಂಡು, ಇನ್ನೊಂದು ಕೈಯಿಂದ ತಮ್ಮ ಮನೆಯ ಆಳಿನ ಆರು ವರ್ಷದ ಮಗು ಟಾಮ್‌ನನ್ನು ನಡೆಯಿಸಿಕೊಂಡು ಬರುತ್ತಿದ್ದಾಳೆ. ಅವಳ ಸುತ್ತಲೂ ಆಟದ

ಹುಡುಗರ ಗುಂಪೊಂದಿದೆ. ಹೆಲೆನ್ ತನ್ನೆದುರು ವಿಶಾಲವಾಗಿ ಹಬ್ಬಿದ ಹಾವರ್ಡ್ಸ್ ಎಂಡ್‌ನ ಜಮೀನಿನ ಕಡೆ ನೋಡುತ್ತಲೇ 'ಅದೋ ಹೊಲವೆಲ್ಲಾ ಕೊಯ್ದದ್ದಾಗಿದೆ' ! ನೋಡಿದತ್ತೆಲ್ಲಾ ರಾಶಿರಾಶಿಯಾಗಿ ಹೊಲದ ತುಂಬಾ ಕೊಯ್ಲು ಬಿದ್ದಿದೆ' ಎಂದು ಹರ್ಷದಿಂದ ಕೂಗುತ್ತಾಳೆ. ಈ ಹರ್ಷ ಧ್ವನಿಯೊಂದಿಗೆ ಕಾದಂಬರಿ ಕೊನೆಯಾಗುತ್ತದೆ.

ಸ್ವಭಾವದಿಂದ ರುಥ್‌ಳನ್ನೇ ಹೋಲುವ ಮಾರ್ಗರೆಟ್ ಈಗ ಹಾವರ್ಡ್ಸ್ ಎಂಡ್‌ದ ಒಡತಿಯಾಗುತ್ತಾಳೆ. ಭವಿಷ್ಯತ್ತಿನಲ್ಲಿ ಬ್ಯಾಸ್ಟ್-ಹೆಲೆನ್‌ರ ಮಗು ಅದಕ್ಕೆ ವಾರಸುದಾರನಾಗುತ್ತಾನೆ. ಹೇನ್ರಿ-ಮಾರ್ಗರೆಟ್‌ರ ಸಮಾಗಮವೇ ಕಾದಂಬರಿಯ ದೊಡ್ಡ ಯಶಸ್ಸಾಗಿದೆ.

ಕಥೆಯ ವಿವರಗಳನ್ನು ಓದುತ್ತಿದ್ದಂತೆ 'ಹಾವರ್ಡ್ಸ್ ಎಂಡ್' ಒಂದು 'ಪ್ರಶಾಂತ' ಕಾದಂಬರಿ ಎಂದು ಅನಿಸುತ್ತದೆ. ಹಾಗೆ ನೋಡಿದರೆ, ಫಾರ್ಸ್ಟರನು ತನ್ನ ಹಿರಿಯ ಸಮಕಾಲೀನರಾದ ಹಾರ್ಡಿ, ಕೊನ್‌ರ್ಯಾಡ್‌ರಂತೆ ಆಗಲೀ ಅಥವಾ ಕಿರಿಯ ಸಮಕಾಲೀನರಾದ ಡಿ.ಎಚ್. ಲಾರೆನ್ಸ್, ಜೇಮ್ಸ್ ಜಾಯ್ಸ್, ವರ್ಜೀನಿಯಾ ವೂಲ್ಫರಂತೆ ಆಗಲೀ ಮರ್ಮಸ್ಥಲವನ್ನು ಮೀಟುವ 'ತಾಂಡವ' ಕಾದಂಬರಿಗಳನ್ನು ಬರೆಯಲಾರನೆಂದು ತೋರುತ್ತದೆ. ಹಾರ್ಡಿಯಲ್ಲಿಯ immanent will/crass causality, ಕೊನರ್ಯಾಡನಲ್ಲಿಯ resonance of the mysterious in life, ಲಾರೆನ್ಸನಲ್ಲಿಯ mysticism of sex — ಇವುಗಳ ಗಂಭೀರ ದರ್ಶನದ ಪ್ರತೀತಿಯೊಂದಿಗೆ ಅವರವರ ಕೃತಿ ಹುಟ್ಟಿಕೊಳ್ಳುತ್ತದೆ. ಒಂದು ದೃಷ್ಟಿಯಿಂದ ಇಂಥ ಕೃತಿಗಳು ಒಂದು ನಿರ್ದಿಷ್ಟ ಜೀವನದರ್ಶನದಿಂದ ಸ್ಫುರಣಗೊಂಡ ಕಲೆ (Inspired Art) ಎಂದು ಹೇಳಬಹುದು. ಸ್ಪೆಂಡರನು ಇಂಥ ಲೇಖಕರನ್ನು ಆಧುನಿಕರೆಂದು (Moderns) ಕರೆಯುತ್ತಾನೆ. ಫಾರ್ಸ್ಟರನ ಕಲೆ ಮಾತ್ರ ಒಬ್ಬ ಉದಾರ ಸಮಾನತಾವಾದಿಯ 'ಪ್ರತಿಕ್ರಿಯೆ' ಎಂದು ಅನಿಸುತ್ತದೆ. ಸ್ಪೆಂಡರನ ಗ್ರಹಿಕೆಯ ಮೇರೆಗೆ ಫಾರ್ಸ್ಟರನನ್ನು 'ಸಮಕಾಲೀನ', 'contemporary' ಎಂದು ನಾವು ಹೆಸರಿಸಬಹುದು. ಫಾರ್ಸ್ಟರ ಒಬ್ಬ 'ರಚನಾತ್ಮಕ' ('constructive') ಲೇಖಕ. ಸಮಕಾಲೀನನೆಂದು ವರ್ಣಿಸಲ್ಪಡುವ ಬರಹಗಾರನಿಗೆ ಸ್ಫೂರ್ತಿಗಿಂತ ಔಚಿತ್ಯ ಹೆಚ್ಚು ಮಹತ್ವದ್ದಾಗುತ್ತದೆ. ಅದಕ್ಕಾಗಿ ಕಾದಂಬರಿಯು ಕಲಾತ್ಮಕವಾಗುವದರೊಂದಿಗೆ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಪ್ರತಿಕ್ರಿಯೆಯಾಗಿ ಮಾರ್ಪಡುತ್ತದೆ. ಹೀಗೆಂದು ತಿಳಿದಲ್ಲಿ ಮಾತ್ರ ಫಾರ್ಸ್ಟರನ ಕೃತಿಗಳ ಮೌಲ್ಯಮಾಪನಕ್ಕೆ ಉಪಯುಕ್ತ ಪರಿಪ್ರೇಕ್ಷ್ಯವನ್ನು ಒದಗಿಸಿದಂತಾಗುತ್ತದೆ.

ಎಡ್ವರ್ಡಿಯನ್ ಯುಗವೆಂದರೆ ಇಂಗ್ಲೆಂಡು ಸಾಮ್ರಾಜ್ಯವೈಭವದ ಹೆಮ್ಮೆಯಲ್ಲಿ ಮೈಮರೆಯುತ್ತಿತ್ತು. ಕುಟುಂಬ-ಮನೆತನ ಇವುಗಳ ಹೆಗ್ಗಳಿಕೆ, ಶ್ರೀಮಂತ-ಬಡವ ತಾರತಮ್ಯ, ನಾಗರಿಕ ಹಾಗೂ ಹಿಂದುಳಿದ ರಾಷ್ಟ್ರಗಳಲ್ಲಿಯ ಸಂಸ್ಕೃತಿ-ಭೇದ– ಇವುಗಳ ಅರಿವು ಜನತೆಯಲ್ಲಿ ತೀವ್ರತರವಾಗಿದ್ದ ಕಾಲವದು. ಅದೇ ವೇಳೆಗೆ ಇಂಗ್ಲೆಂಡು

ಔದ್ಯೋಗೀಕರಣದಿಂದುಂಟಾದ ಕಟು ಪರಿಣಾಮಗಳನ್ನು ಅನುಭವಿಸುತ್ತಿತ್ತು. ಔದ್ಯೋಗೀಕರಣದಿಂದ ಗ್ರಾಮ್ಯ ಪರಿಸರ, ಗ್ರಾಮ್ಯ ಸಂಸ್ಕೃತಿ ನಷ್ಟವಾಗಿ, ಯಂತ್ರ ನಾಗರಿಕತೆಯು ಜನತೆಯಲ್ಲಿ ಪರಕೀಯತೆಯ ತಿಳಿವಳಿಕೆಯನ್ನು, sense of alienationನ್ನು ತರುತ್ತಿತ್ತು. ದೊಡ್ಡ ದೊಡ್ಡ ಶಹರುಗಳಲ್ಲಿ ತಲೆದೋರುತ್ತಿದ್ದ 'ವಿಶ್ವ ಬಾಂಧವ್ಯ' ಜೀವನವು ಅಲೆದಾಟದ ನಾಗರಿಕ-ಜೀವನಕ್ಕೆ ಹಾದಿಮಾಡಿಕೊಡುತ್ತಿದ್ದಿತು. ಇಂಥ ಪರಿಸ್ಥಿತಿಗೆ ಸಂವಾದಿಯಾಗಿ ಕಾದಂಬರಿಯು ಹುಟ್ಟಿದ್ದೇ ಅದರ ಅನನ್ಯ ಔಚಿತ್ಯವನ್ನು ಸೂಚಿಸುತ್ತದೆ.

ಈ ಕೃತಿಯು ತನ್ನ ಒಟ್ಟಂದದ ಹರಹನ್ನು ತುಂಬಿಕೊಂಡು ಬೆಳೆಯುತ್ತಿರುವುದು ಎರಡು ಧ್ವನಿಪೂರ್ಣ ಶಬ್ದ ವಿಶೇಷಗಳ ಸಾಮರ್ಥ್ಯದಿಂದ ಎಂದು ತೋರುತ್ತದೆ. ಆ ಸೃಜನಶೀಲ ಶಬ್ದಗಳೆಂದರೆ : 'Connect' and 'Concentrate' — 'ಸಂಬಂಧ ಬೆಳೆಸು' ಹಾಗೂ 'ಕೇಂದ್ರೀಕರಿಸು'. ಇದೇ ಕಾದಂಬರಿಯ ವೃದ್ಧಿ ಬೀಜಗಳು.

ಹೇನ್ರಿ ವಿಲ್‌ಕಾಕ್ಸ್ ಇಂಗ್ಲೆಂಡದ ವಾಣಿಜ್ಯ ಸಂಸ್ಕೃತಿಯ ಪ್ರತೀಕವಾಗಿದ್ದಾನೆ. ಅವನು ತನ್ನ ವ್ಯಾಪಾರ ವಾಣಿಜ್ಯದಲ್ಲಿ ಸಂಪೂರ್ಣ ತಲ್ಲೀನನಾದ ವ್ಯಕ್ತಿ. ಹೊಲ, ಮನೆ, ರಬ್ಬರ್ ಕಂಪನಿ, ಹೀಗೆ ಕೈತುಂಬ ಕೆಲಸವಿದ್ದವನು. ಆರೇಳು ಮನೆಗಳ ಮಾಲೀಕನಾಗಿದ್ದಾನೆ. ಇಷ್ಟಲ್ಲದೆ ಅವನ ದೊಡ್ಡ ಮಗ ಚಾರ್ಲ್ಸನು ತಂದೆಗೆ ಒಳ್ಳೆ ನೆರವು ಕೊಡುತ್ತಾನೆ. 'My motto is to concentrate. I have no intention of frittering away my strength' – 'ದುಡಿಮೆಯಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದೇ ನನ್ನ ಉದ್ದೇಶ. ಸುಮ್ಮನೆ ನನ್ನ ಶಕ್ತಿಯನ್ನು ಅತ್ತಿತ್ತ ಬೇರೆಡೆಗೆ ಹರಿಗೊಡಲಾರೆ' ಎಂದು ಅವನು ಒಮ್ಮೆ ಮಾರ್ಗರೆಟ್‌ಗೆ ಉತ್ತರಿಸುತ್ತಾನೆ. ಇಡೀ ವಿಲ್‌ಕಾಕ್ಸ್ ಮನೆತನ – ರುಥ್‌ಳನ್ನು ಹೊರ್ತುಪಡಿಸಿ – ಒಂದು ರೀತಿಯ extrovert- 'ಬಾಹ್ಯಗಾಮಿ' ಮನೆತನ. ಅವರ ದೃಷ್ಟಿಯಲ್ಲಿ ಶ್ಲೆಗಲ್ ಸಹೋದರಿಯರು 'ಅವ್ಯವಹಾರೀ' ಹುಡುಗಿಯರು. ಹೇನ್ರಿಯು ಹೇಳುವದೆಂದರೆ 'I am not a fellow who bothers about my own inside.' ಅಂತಸ್ಥ ಜೀವನ, ಆದರ್ಶ, ಮಮತೆ, ನಯ ನಾಜೂಕು ಇವೆಲ್ಲ ಹೇನ್ರಿಯ ಜೀವನದ ಅವಶ್ಯಕತೆಗಳಲ್ಲ. ಕೆಲಸ ಹಾಗೂ ಕೈತುಂಬ ಹಣ – ಇವೇ ಅವನ ಜೀವನದ ಉದ್ದೇಶಗಳು. ಫಾರ್ಸ್ಟರ ಹೇಳುವಂತೆ, ವಿಲ್‌ಕಾಕ್ಸರ ಜೀವನವೆಲ್ಲ 'ಟೆಲಿಗ್ರಾಮು, ಸಿಟ್ಟು, ಆಟೋಮೊಬಾಯಿಲ್ಸ್' ಇವುಗಳಿಂದ ತುಂಬಿದ ಜಗತ್ತು.

ಶ್ಲೆಗಲ್ ಸಹೋದರಿಯರಿಗೆ ವಿಲ್‌ಕಾಕ್ಸ್ ಜನಗಳು 'ಒರಟು' ಎಂದೆನಿಸುತ್ತಾರೆ. ಹೆಲೆನ್ ಈ ಕುಟುಂಬವೆಲ್ಲ fraud ಎಂದು ಹೇಳುತ್ತಾಳೆ. 'It was just a wall of newspapers and motor cars and golf-clubs, and that if it fell I should find nothing behind it but panic and emptiness.' ಸ್ವಭಾವತಃ ಇಬ್ಬರೂ

ಸಹೋದರಿಯರು ಆದರ್ಶವಾದಿಗಳು. ಅದರಲ್ಲಿ ಹೆಲೆನ್ ಅತಿರೇಕದ ಆದರ್ಶವಾದಿ. ಅಲ್ಲದೆ ಅವಳು ಓದು ಬರಹದಲ್ಲಿ ಹೆಚ್ಚಿನ ಕಾಲ ಕಳೆಯುತ್ತಾಳೆ. ಅಪ್ಪಟ ಬ್ಲೂಮ್ಸಬರಿ ಗ್ರೂಪಿನಿಂದ ಹುಟ್ಟಿದ ಪೈರು ಎಂದು ಕಾಣುತ್ತಾಳೆ.

ಹೆಲೆನ್‌ಳು ಮಾರ್ಗರೆಟ್‌ಳಿಗಿಂತ ರೂಪವತಿ ; ಎರಡನೆಯವರನ್ನು ಆಕರ್ಷಿಸಿ, ತಾನೂ ಮೋಹಿತಳಾಗುವ ಹುಡುಗಿ. ಫಾರ್ಸ್ಟರನ ಆದರ್ಶವಾದ ಪ್ರಕೃತಿಯಿಂದ ಹುಟ್ಟಿದ ಕನ್ಯೆ. ಬ್ಯಾಸ್ಟನ ಮೇಲಿನ ಅನನ್ಯ ಕರುಣೆಯಿಂದ ಒಂದೇ ರಾತ್ರಿ ಅವನೊಡನೆ ರಮಿಸಿ ಗರ್ಭವತಿಯಾದಳು. ಅವಳನ್ನು sheer romantic ಎಂದು ಹೇಳಬಹುದು. ಒಮ್ಮೆ ಅವಳು ಮಾರ್ಗರೆಟ್‌ಳೆದುರು ಮಾತನಾಡುತ್ತಾ ಹೇಳಿದ್ದೆಂದರೆ, 'I can't and won't attempt difficult relations. You are different ; you are a heroine... You mean to keep proportion, and that's heroic. It's Greek and I don't see why it shouldn't succeed with you. Go on and fight with him and help him. Don't ask me for help, or even for sympathy. I am going my own way.'

ಹೆಲೆನ್ ಕಂಡಂತೆ, ಮಾರ್ಗರೆಟ್‌ಳ ಸ್ವಭಾವವೆಂದರೆ ಜೀವನದಲ್ಲಿ proportionನ್ನು ಪಾಲಿಸುವಂಥಾದ್ದು. ಅದು ಗ್ರೀಕರ ಸುವರ್ಣಮಾಧ್ಯಮದ ತಿಳುವಳಿಕೆ. ಪರಿಣತಮತಿಯ ಅಭಿಜಾತ ಪರಂಪರೆಯ ಲಕ್ಷಣವದು. ಮಾರ್ಗರೆಟ್ ಕಾದಂಬರಿಯ ಸುವರ್ಣ ಮಾಧ್ಯಮದ ಕನ್ಯೆಯಾಗಿದ್ದಂತೆ ಫಾರ್ಸ್ಟರನ ಮೆಚ್ಚಿನ ಕೃತಿ ಎಂದೂ ತೋರುತ್ತದೆ.

ಮಾರ್ಗರೆಟ್ ತಂಗಿಯ ಉಗ್ರ ಆದರ್ಶವಾದ ಹಾಗೂ ಹೆನ್ರಿಯ ಅತಿರೇಕದ ವ್ಯಾವಹಾರಿಕ ವಾಸ್ತವತೆ ಇವೆರಡರ ನಡುವಿನ ಅವಸ್ಥೆಯನ್ನು ಪ್ರತಿನಿಧಿಸುವಂತೆ ಫಾರ್ಸ್ಟರ ಇವಳನ್ನು ಸೃಷ್ಟಿಸಿದಂತೆ ತೋರುತ್ತದೆ. ಕಥೆಯ ಪ್ರಾರಂಭದಲ್ಲಿಯೇ ಅವಳ ಪಕ್ವ ಬುದ್ಧಿಯ ಮನೋಧೋರಣೆ ಸ್ಪಷ್ಟವಾಗುತ್ತದೆ.

'I have often thought about it, Helen. It's one of the most interesting things in the world. The truth is that there is a greater outer life that you and I have never touched - a life in which telegrams and anger count.... This outer life though obviously horrid, often seems the real one - there is grit in it. It does breed character. Do personal relations lead to sloppiness in the end?'

ಮಾರ್ಗರೆಟ್‌ಳು ಹೆಲೆನ್‌ಳಂತೆ ಭಾವನಾಮಯವಾಗದೆ ಅಂತರ್ಮುಖಿಯಾಗಿ ತನ್ನನ್ನೇ ತಾನು ಕೇಳಿಕೊಳ್ಳುವ ಪ್ರಶ್ನೆ ಅವಳನ್ನು ಮೇಲ್‌ಮಟ್ಟದ ನಾಯಿಕೆಯನ್ನಾಗಿ ಮಾಡಿದೆ. ಅವಳು ಹೆಲೆನ್‌ಳ ಆದರ್ಶ ಮತ್ತು ಹೆನ್ರಿಯ ನೀರಸ ಹಾಗೂ ಅನಿವಾರ್ಯ ವಾಸ್ತವತೆ – ಇವೆರಡನ್ನೂ ಇಂದ್ರಧನುಷ್ಯದಂತೆ ಸೇತುವೆ ಕಟ್ಟಿ ಅವೆರಡೂ ಜಗತ್ತುಗಳ ಪರಸ್ಪರ ಸಂಬಂಧವನ್ನು ಬಲಪಡಿಸುವದೇ ತನ್ನ ಜೀವನದ ಪರಮೋದ್ದೇಶವೆಂದು

ತಿಳಿದಿದ್ದಾಳೆ. ಈ ಉದ್ದೇಶವನ್ನು ಅಂತಿಮವಾಗಿ, ಹೇನ್ರಿಯ ಹೆಂಡತಿಯಾಗಿ ಕಲಶಪ್ರಾಯವಾಗಿ ಸಾಧಿಸಿದ್ದೇ ಮಾರ್ಗರೆಟ್‌ಳ ವಿಜಯವಾದಂತೆ ಕಾದಂಬರಿಯ ವಿಜಯವೂ ಆಗಿದೆ. ಹೇನ್ರಿ ಹಾಗೂ ಮಾರ್ಗರೆಟ್‌ಳ ಸಂಬಂಧವೇ ಫಾರ್ಸ್ಟರನ ಇಂದ್ರಧನುಷ್ಯ ಸೇತುವೆಯಂತಿದೆ.

ಲಗ್ನದ ವಯಸ್ಸು ಮೀರಿದ ಮೂವತ್ತು ನಾಲ್ಕು - ಮೂವತ್ತೈದು ವಯಸ್ಸಿನ ಮಾರ್ಗರೆಟ್ ಅರವತ್ತರ ಮೇಲಿನ ವಿಧುರ ಹೇನ್ರಿಯನ್ನು ಮದುವೆಯಾಗಲು ಒಪ್ಪಿದಾಗ ಅವಳಲ್ಲಿ ಹೆಂಗಸಾಗಿ ಗಂಡನಿಗೆ ಕೊಡಬೇಕಾದ ಯೌವನವೇ ತೀರಿಹೋಗಿತ್ತು. ಆದರೆ ತನ್ನ ಉದ್ದೇಶಸಾಧನೆಗಾಗಿ ಇಷ್ಟು ದೊಡ್ಡ ಗಂಡನ್ನು ಒಪ್ಪಲು ಹಿಂಜರಿಯಲಿಲ್ಲ.

ಇತ್ತ ಶ್ರೀಮಂತ ಹೇನ್ರಿಗೆ ರುಥ್‌ಳ ಸಾವಿನ ನಂತರ ಒಬ್ಬ ಅನುಕೂಲ ಹೆಂಗಸು ಬೇಕಿತ್ತು. ಮಾರ್ಗರೆಟ್‌ಳು ಒಪ್ಪಿದಾಗ ಅವಳೆದುರು ಇದ್ದ ದೊಡ್ಡ ಆದರ್ಶವೆಂದರೆ ಜೀವನದಲ್ಲಿ ಸಂಬಂಧ ಬೆಳೆಸುವುದು. ಈ ಸಂಬಂಧವೇ ಜೀವನವನ್ನು ಅಸುರಕ್ಷಿತತೆಯಿಂದ ಪಾರುಮಾಡಬಲ್ಲದು ಎಂದು ಅರಿತವಳಾಗಿದ್ದಳು. ಅವಳ ಇಂಗಿತವನ್ನು ವಿಮರ್ಶಿಸುತ್ತಾ ಫಾರ್ಸ್ಟರ ಹೇಳುವ ಮಾತುಗಳು ಕಾದಂಬರಿಯ ಮೂಲ ವೈಚಾರಿಕ ಹರಹನ್ನು ಮಾರ್ಮಿಕವಾಗಿ ವಿವರಿಸುತ್ತವೆ.

'She (Margaret) need trouble him with no gift of her own. She would only point out the salvation that was latent in his own soul and in the soul of every man. Only connect the prose and the passion, and both will be exalted, and human love will be soon at its height. Live in fragments no longer. Only connect, and the beast and the monk, robbed of the isolation that is life to either, will die.'

ವಯಸ್ಸಾದ ಮಾರ್ಗರೆಟ್‌ಳು ವಿಧುರನಾದ ಹೇನ್ರಿಗೆ ಕಾಣಿಕೆಯಾಗಿ ಕೊಡಲು ಅಷ್ಟೊಂದು ಚಿಂತಿಸಲಿಲ್ಲ. ಆದರೆ ಅವನ ಅಂತಸ್ಥ ಆತ್ಮದಲ್ಲಿ ಅಡಗಿದ್ದ – ಪ್ರತಿ ಮನುಷ್ಯನ ಆತ್ಮದಲ್ಲಿ ನಿಹಿತವಾದ – ಪರಿಹಾರದ ಕಲ್ಪನೆಯನ್ನು ಅವನಿಗೆ ತೋರಿಸಿ ಕೊಡಲು ಅವಳು ಸಮರ್ಥಳಾಗಿದ್ದಳು. ಆ ಪರಿಹಾರದ ಕಲ್ಪನೆಯೆಂದರೆ, ಸಂಬಂಧ ಬೆಳೆಸುವುದು, ಸ್ನೇಹದ ಬಂಧ ಕಟ್ಟಿಕೊಳ್ಳುವುದು. ಅದೇ ಅವಳ ಬೀಜಮಂತ್ರವಾಗಿತ್ತು. ನೀರಸ ಗದ್ಯವನ್ನು ಭಾವದೊಂದಿಗೆ ಸಂಗಮಿಸುವುದು. ಹೀಗಾಗಿ ಅವು ಎರಡೂ ಉತ್ಕಟತೆಯನ್ನು ಮುಟ್ಟಿ ಮನುಷ್ಯ ಪ್ರೇಮವು ಉನ್ನತ ಶಿಖರವನ್ನು ಸಾಧಿಸುತ್ತದೆ. ಕೇವಲ ಬಿಡಿಬಿಡಿಯಾಗಿ, ಒಂಟಿಯಾಗಿ ಜೀವಿಸುವುದು ಬೇಡ. ಸಂಬಂಧ ಬೆಳೆಸುತ್ತಲೇ ಇರಬೇಕು. ಹಾಗಾದಲ್ಲಿ ಮನುಷ್ಯನಲ್ಲಿಯ ಏಕಾಕೀವೃತ್ತಿಯನ್ನು ಬೆಳೆಯಿಸಲು ಹಾತೊರೆಯುತ್ತಿದ್ದ ಪಶು ಹಾಗೂ ಬೈರಾಗಿ ಎರಡೂ ಪ್ರವೃತ್ತಿಗಳೂ ತಮ್ಮಷ್ಟಕ್ಕೆ ತಾವೇ ಸತ್ತುಹೋಗುವವು.

ಮಾರ್ಗರೆಟ್ ಈ ರೀತಿಯ ಪರಿಹಾರವನ್ನು ತೋರಿಸುವ ಪಾತ್ರವಾಗಿದ್ದಾಳೆ. ಆವಳ ಕಾರ್ಯ ಒಂದು ಧಾರ್ಮಿಕ ಕಾರ್ಯವೆಂಬಂತೆ ಇದೆ ಎಂದು ಫಾರ್ಸ್ಟರ ತಿಳಿದಂತಿದೆ :

'She might yet be able to help him to the building of the rainbow bridge that should connect the prose in us with the passion. Without it we are meaningless fragments, half monks half beasts, unconnected arches that have never joined into a man.'

ಜೋಡಿಯಾಗಿ ಸಂಬಂಧ ಬೆಳೆಸದ ಜೀವ ನಿರರ್ಥಕವಾದುದು ಎಂಬ ಮಾತನ್ನು ಕಾದಂಬರಿಯು ಬ್ಯಾಸ್ಟನ ದುರ್ದೈವಿ ಜೀವನದ ಮೂಲಕ ಹೇಳಲೆತ್ನಿಸುತ್ತದೆ. ಹೇನ್ರಿಯ ಜೀವನವು ಅರ್ಥವತ್ತಾಗುವುದಕ್ಕೆ ಕಾರಣವೆಂದರೆ ಅದು ಬರೀ ಮಾರ್ಗರೆಟ್‌ಳನ್ನು ಒಳಗೊಳ್ಳುವದಲ್ಲದೆ ಹೆಲೆನ್, ಬ್ಯಾಸ್ಟ ಹಾಗೂ ಅವನ ಮಗು ಇವರುಗಳ ಸಂಬಂಧ ಬೆಳೆಸುತ್ತಲೇ ಮುಂದುವರಿಯುತ್ತದೆ. ಪ್ರೇಮದ ಭದ್ರ ತಳಹದಿಯ ಮೇಲೆ ಸಾತತ್ಯ ಪ್ರಸ್ಥಾಪಿಸಲಾಯಿತು ಎಂದು ಫಾರ್ಸ್ಟರ ಸೂಚಿಸಿದಂತಿದೆ.

ಇಷ್ಟಲ್ಲದೆ ಈ ಕಾದಂಬರಿಯು ತನ್ನ ಯುಗದ ಇನ್ನೊಂದು ಪ್ರಮುಖ ಪ್ರಶ್ನೆಯನ್ನು ತನಗಿರುವ ಇತಿಮಿತಿಗಳಲ್ಲೇ ಕಲಾತ್ಮಕ ರೀತಿಯಲ್ಲಿ ಬಿಡಿಸಲೆತ್ನಿಸುತ್ತದೆ. ಅದೆಂದರೆ ಪರಕೀಯತೆಯ ಪ್ರಜ್ಞೆಯ ಸಮಸ್ಯೆ (the problem of sense of alienation). ಈ ತಿಳುವಳಿಕೆಗೆ ತುತ್ತಾದ ಆಧುನಿಕ ಮನುಷ್ಯನು ಜೀವನವನ್ನು ಸರಿಯಾಗಿ ಅರ್ಥೈಸಲು ಅಸಮರ್ಥನಾಗುತ್ತಾನೆ, ಕಾರಣವೆಂದರೆ ಅವನು ಸ್ನೇಹ ಹಾಗೂ ಸಲುಗೆಯ ಸೇತುವೆ ಗಳನ್ನು ನಿರ್ಮಿಸುವ ಪ್ರವೃತ್ತಿಯನ್ನೇ ಕಳೆದುಕೊಂಡಿರುತ್ತಾನೆ. ಹಾಗಾದರೆ ಉಪಾಯ ವೇನೆಂದು ಕೇಳಿದಾಗ ಫಾರ್ಸ್ಟರನ ಉತ್ತರವೆಂದರೆ 'only connect' ಎಂದಿದೆ. ತನ್ನ ಈ ಸಂಕಟದ ಪೀಕಲಾಟವನ್ನು ಫಾರ್ಸ್ಟರ ಸೂಚಿಸುತ್ತಲೇ ಅದಕ್ಕೆ ಉತ್ತರವೀಯುತ್ತಾನೆ :

'It's impossible to see modern life steadily and see it whole, and she (Margaret) had chosen to see it whole. Mr. Wilcox saw steadily. He never bothered over the mysterious or the private.'

ಆಧುನಿಕ ಜೀವನವನ್ನು ನೇರವಾಗಿ, ನಿಧಾನವಾಗಿ ನಿರೀಕ್ಷಿಸುವುದು ಹಾಗೂ ಆದನ್ನು ಆದರ ಸಮಗ್ರತೆಯಲ್ಲಿ ಗ್ರಹಿಸುವುದು ಕಷ್ಟದ ಕೆಲಸವಾಗಿದ್ದು, ಮಾರ್ಗರೆಟ್ ಮಾತ್ರ ಆದನ್ನು ಸಮಗ್ರವಾಗಿ ತಿಳಿಯಲು ಕಟಿಬದ್ಧಳಾಗಿದ್ದಾಳೆ. ವಿಲ್‌ಕಾಕ್ಸ್ ಮಾತ್ರ ಜೀವನದ ನೇರ ನಿರೀಕ್ಷಕನಾಗಿದ್ದಾನೆ. ಅವನು ಆದರ ರಹಸ್ಯ ವಿಷಯಕ್ಕಾಗಲೀ, ಗಾಂಭೀರ್ಯದ ವಿಷಯಕ್ಕಾಗಲೀ ಅಷ್ಟೊಂದು ಚಿಂತಿಸುವ ಗೊಡವೆಗೆ ಹೋಗಲಾರ.

ಆದರೆ ಇಂಥ ಕಠಿಣ ಸಮಸ್ಯೆಯನ್ನು ಬಿಡಿಸಲು ಫಾರ್ಸ್ಟರ ಕಾದಂಬರಿಯಲ್ಲಿ ಯೋಜಿಸಿದ ಸನ್ನಿವೇಶ ಅತ್ಯಂತ ಮಾರ್ಮಿಕ ಪ್ರಸಂಗವಾಗಿದೆ. ಈ ರಸಪ್ರಸಂಗವೆಂದರೆ :

ಮಾರ್ಗರೆಟ್-ಹೇನ್ರಿ ಅವರ ಮದುವೆ ಮುಗಿದ ಮೇಲೆ ಹೇನ್ರಿಯು ತನ್ನ ವಯಸ್ಸಾದ ವಧುವಿಗೆ ಹಾವರ್ಡ್ಸ್ ಎಂಡ್ ಮನೆಯನ್ನು ನೋಡಲು ಕರೆತರುತ್ತಾನೆ. ಆ ಸಂದರ್ಭದಲ್ಲಿ ಫಾರ್ಸ್ಟರ ಹೇಳುವ ಮಾತುಗಳು ಕಾದಂಬರಿಯು ಎತ್ತಿದ ಗಂಭೀರ ಪ್ರಶ್ನೆಗಳಿಗೆ ಉತ್ತರ ಕೊಟ್ಟಂತಿವೆ.

'Here had lived an elder race, to which we look back with disquietude. The country which we visit at week-ends was really a home to it, and the graver sides of life, the deaths, the partings, the yearnings for love, have their deepest expression in the heart of the fields. All was not sadness. The sun was shining without. The thrush sang in two syllables on the budding guelder rose. Some children were playing uproariously in heaps of golden straw. It was the presence of sadness at all that surprised Margaret, and ended by giving her a feeling of completeness. In these English farms, if anywhere, one might see life steadily and see it whole, group in one vision its transitoriness and its eternal youth, connect connect without bitterness until all men are brothers.'

ಮಾರ್ಗರೆಟ್ ನೋಡಲು ಬಂದಿದ್ದು ಹಿಲ್ಟನ್ ಹಳ್ಳಿಯ ಹಳೆಯ ದೊಡ್ಡ ಮನೆ, ಹಾವರ್ಡ್ಸ್ ಎಂಡ್. ಇಲ್ಲಿಯೇ ನಮ್ಮ ಪೂರ್ವಜರು ಮಕ್ಕಳು ಮೊಮ್ಮಕ್ಕಳನ್ನು ಹಡೆದು, ಅವರನ್ನು ಬೆಳೆಸಿ ದೊಡ್ಡ ಸಂಸಾರ ಹೂಡಿದ್ದರು. ಇಂಥ ಮನೆಗಳಿಗೆ ಈಗ ಕೇವಲ ವೀಕ್-ಎಂಡ್‌ಗಾಗಿ ಬರುವ ಪರಿಪಾಠ ಬೆಳೆದುಬಂದಿದೆ. ಇಲ್ಲಿ ಅದರ ಸುತ್ತಲೂ ಹರಡಿದ ಭೂಪ್ರದೇಶದೊಂದಿಗೆ ಗತಿಸಿಹೋದ ನಮ್ಮ ಪೂರ್ವಜರ ನಿಕಟ ಸಂಬಂಧವಿದ್ದಿತು ಎಂದು ಫಾರ್ಸ್ಟರ ರೋದನೆಯ ಧ್ವನಿಯಲ್ಲಿ ಹೇಳಿದಂತಿದೆ. ಸದ್ಯ ಮಾರ್ಗರೆಟ್ ಆ ಮನೆಯನ್ನು ನೋಡಲು ಬಂದಾಗ ಅವಳು ಅನುಭವಿಸಿದ್ದು ಗತಿಸಿಹೋದ ದುಃಖಾತ್ಮಕ ವಾತಾವರಣ ವನ್ನಷ್ಟೇ ಅಲ್ಲ, ಒಂದು ತರಹದ ಪೂರ್ಣತ್ವದ ಅನುಭವವನ್ನು ಅವಳು ಪಡೆದಂತಾಗಿತ್ತು. ಇಂಗ್ಲೆಂಡಿನ ಇಂಥ ಮನೆಗಳಲ್ಲಿ ಹಾಗೂ ಜಮಿನು ಪ್ರದೇಶದಲ್ಲಿ ಮಾತ್ರ ನಾವು ಜೀವನ ವನ್ನು ನೇರವಾಗಿ ಅಲ್ಲದೆ ಸಮಗ್ರವಾಗಿ ನಿರೀಕ್ಷಿಸಬಲ್ಲೆವು ಎಂಬ ಮಾತು ಮಾರ್ಗರೆಟ್‌ಳಿಗೆ ಈಗ ಮನವರಿಕೆಯಾಗುತ್ತದೆ. ಇಂಥ ಸಮಗ್ರತೆಯ ನಿರೀಕ್ಷಣೆಯಲ್ಲೇ ಕ್ಷಣಿಕತೆಯು ಚಿರಂತನತೆ ಯೊಂದಿಗೆ ಬೇರೆಯುವ ದರ್ಶನವನ್ನು ಮನುಷ್ಯನು ಪಡೆಯಬಲ್ಲನೆಂದು ಅವಳು ತಿಳಿಯುತ್ತಾಳೆ. ಅಂತೆಲೇ ಅವಳ ಜೀವನದ ಧ್ಯೇಯ 'Only Connect' ಎಂಬುದಾಗಿತ್ತು.

'ಹಾವರ್ಡ್ಸ್ ಎಂಡ್' ಹೀಗೆ ಮೂಲತಃ ಕುಟುಂಬ ಚಿತ್ರಣಕ್ಕೆ ಎಡೆಗೊಟ್ಟು ಸಮಕಾಲೀನ ಜೀವನದ ಜಟಿಲ ದ್ವಂದ್ವಗಳನ್ನು ಉತ್ತರಿಸುತ್ತ ಭವಿಷ್ಯ ಜೀವನದ ದಿಕ್ಸೂಚಿಯಾಗಿದ್ದುದು ಅದರ ಹಿರಿಮೆಯ ರಹಸ್ಯವಾಗಿದೆ.

ಫ್ರಾನ್ಜ್ ಕಾಫ್ಕಾ : 'ದಿ ಟ್ರಯಲ್'

ಕೆ. ವಿ. ನಾರಾಯಣ

ಫ್ರಾನ್ಜ್ ಕಾಫ್ಕಾ ಹುಟ್ಟಿದ್ದು ಪ್ರೇಗ್ ನಗರದಲ್ಲಿ; ವರ್ಷ 1883. ಇವನ ತಂದೆ ಶ್ರೀಮಂತ ಯಹೂದಿ. ತಂದೆಗೆ ಶ್ರೀಮಂತಿಕೆ ಆಸ್ತಿಯಾಗಿ ಬಂದುದಲ್ಲ. ಆತನೇ ರೂಢಿಸಿದ ವ್ಯವಹಾರಗಳಿಂದ ಸಂಪಾದಿಸಿದ್ದು. ಫ್ರಾನ್ಜ್ ಕಾಫ್ಕಾ ಈ ತನ್ನ ತಂದೆಯ ವ್ಯಕ್ತಿತ್ವದ ಒತ್ತಾಯದಿಂದ ಬಿಡುಗಡೆ ಪಡೆಯಲು ಜೀವನದ ಉದ್ದಕ್ಕೂ ಹೋರಾಡಿದನು. ಸಾಹಿತ್ಯ, ವೈದ್ಯವಿಜ್ಞಾನ, ಕಾನೂನು ಮುಂತಾದ ಕ್ಷೇತ್ರಗಳಲ್ಲಿ ಓದು ಮುಂದುವರೆಸಿ ಪ್ರೇಗ್ ವಿಶ್ವವಿದ್ಯಾಲಯದಿಂದ ಕಾನೂನು ವಿಷಯದಲ್ಲಿ ಉನ್ನತ ಪದವಿ ಗಳಿಸಿದನು. ಅನಂತರ ವಿಮಾ ಕಂಪೆನಿಯಲ್ಲಿ ದುಡಿಮೆ. ಅದು ಬಿಟ್ಟು ಬಗೆಬಗೆಯ ಹುದ್ದೆಯಲ್ಲಿ ಕೆಲಸ ಮಾಡಿದನು. ನಿಯತ ದುಡಿಮೆಯ ನಿಯಂತ್ರಣ ತರುವ ಒತ್ತಡಗಳನ್ನು ವಹಿಸಲಾರದೆ ಕೊನೆಗೆ ಬಿಟ್ಟ. ಆರೋಗ್ಯ ಕೂಡ ಕಷ್ಟದ ದುಡಿಮೆಗೆ ಅನುಕೂಲವಾಗಿರಲಿಲ್ಲ.

ಕಾಫ್ಕಾನ ಜೀವನದಲ್ಲಿ ಒಂಟಿತನವೇ ಅವನ ಸಂಗಾತಿ. ಆದರೂ ಕೆಲವು ಗೆಳೆಯರಿರ ಲಿಲ್ಲವೆಂದಲ್ಲ. ಕೆಲವು ಹೆಂಗಸರೊಡನೆ, ತನ್ನ ಜೀವನದ ಬೇರೆಬೇರೆ ಹಂತಗಳಲ್ಲಿ ಅತ್ಯಂತ ನಿಕಟ ಸ್ನೇಹ ಬೆಳೆಸಿದರೂ ಅವರಲ್ಲಿ ಯಾರೊಬ್ಬರನ್ನೂ ಆತ ಮದುವೆಯಾಗಲಾರದೇ ಹೋದನು. ಕೊನೆಗೆ ತಾನು ಕ್ಷಯಪೀಡಿತನೆಂದು ತಿಳಿದು ಸ್ಯಾನಿಟೋರಿಯಂ ಸೇರಿದ. ವಿಯೆನ್ನಾದ (ಆಸ್ಟ್ರಿಯಾ) ಬಳಿಯ ಕಿಯರ್‌ಲಿಂಗ್ ಸ್ಯಾನಿಟೋರಿಯಂನಲ್ಲಿ ಕೊನೆಯುಸಿರೆಳೆದನು; ವರ್ಷ 1924. ಅಂದರೆ ಒಟ್ಟು ಜೀವಿತಾವಧಿ ನಲವತ್ತೊಂದು ವರ್ಷ.

ಕಾಫ್ಕಾನ ಭಾಷೆ ಜೆಕ್. ಆದರೆ ಅವನು ಕಲಿತ ಭಾಷೆ ಜರ್ಮನ್. (ನಡುವೆ ಹೀಬ್ರೂ ಭಾಷೆಯನ್ನೂ ಕಲಿಯತೊಡಗಿದ್ದನು). ಅವನ ಎಲ್ಲ ಕೃತಿಗಳೂ ಜರ್ಮನ್ ಭಾಷೆಯಲ್ಲೇ ರಚನೆಯಾಗಿವೆ. ಕೆಲವು ಕೃತಿಗಳು ಅವನು ಜೀವಿಸಿದ್ದಾಗಲೇ ಪ್ರಕಟವಾದವು. ಬಹು ಪಾಲು ಬರಹಗಳು ಅವನ ಮರಣಾನಂತರ, ಅವನ ಆಪ್ತಗೆಳೆಯ ಮ್ಯಾಕ್ಸ್ ಬ್ರಾಡ್‌ನ ಪ್ರಯತ್ನ ದಿಂದಾಗಿ ಬೆಳಕು ಕಂಡವು. ತನ್ನ ಎಲ್ಲ ಬರಹಗಳನ್ನೂ ತಾನು ಸತ್ತ ಮೇಲೆ ನಾಶಪಡಿಸ ಬೇಕೆಂದೂ ಪ್ರಕಟಿಸಬಾರದೆಂದೂ ಕಾಫ್ಕಾ ತನ್ನ ಗೆಳೆಯನಿಗೆ ಬರೆದ ಪತ್ರದಲ್ಲಿ ತಿಳಿಸಿದುದೇನೋ ನಿಜ. ಆದರೆ ಕಾಫ್ಕಾನಿಗೆ ತನ್ನ ಸಾಹಿತ್ಯ ಕೃತಿಗಳು ಪ್ರಕಟವಾಗಬೇಕೆಂಬ ಇಚ್ಛೆಯೂ ಇದ್ದುದನ್ನು ಗ್ರಹಿಸಿದ್ದ ಬ್ರಾಡ್, ಕಾಫ್ಕಾನ ಮಾತನ್ನು ಮೀರಿ, ಕೃತಿಗಳನ್ನು ಪ್ರಕಟಿಸಿದನು. The Trial (1925) ಜೊತೆಗೆ ಇಂಗ್ಲಿಷ್ ಅನುವಾದದಲ್ಲಿ ಪ್ರಕಟವಾಗಿರುವ ಇತರ ಕಾಫ್ಕಾ ಕೃತಿಗಳು : The Castle (1926), America (1927), The Great Wall of China (1931) — ಕಾದಂಬರಿಗಳು. Wedding Preparations in the Country

and Other Stories (1953) – ಸಣ್ಣಕತೆ). Letters to Milena (1953) ಮತ್ತು Letters to Felice (1914), ಇತ್ಯಾದಿ. 'ವಿಚಾರಣೆ' (The Trial) ಕಾದಂಬರಿಯನ್ನು ಫ್ರಾನ್ಜ್ ಕಾಫ್ಕಾ ಬರೆಯತೊಡಗಿದ್ದು 1914ರಲ್ಲಿ. 1920ರಲ್ಲಿ ಇದರ ಹಸ್ತಪ್ರತಿ ಮ್ಯಾಕ್ಸ್ ಬ್ರಾಡ್‌ನ ಕೈಸೇರಿತು. ಹಾಗೆ ನೋಡಿದರೆ ಕಾಫ್ಕಾ ಈ ಕೃತಿಗೆ ಯಾವ ಹೆಸರನ್ನೂ ತನ್ನ ಹಸ್ತಪ್ರತಿಯಲ್ಲಿ ಸೂಚಿಸಿರಲಿಲ್ಲ. ಆದರೆ ಮಾತುಕತೆಯಾಡುವಾಗ, ಈ ಕೃತಿಯನ್ನು ಉಲ್ಲೇಖಿಸಿ ಹೇಳುತ್ತಿದ್ದ ಹೆಸರನ್ನು ಮ್ಯಾಕ್ಸ್ ಬ್ರಾಡ್ ಗಮನಿಸಿದ್ದನು. ಹಾಗಾಗಿ ಆ ಜಾಡು ಹಿಡಿದು ಈ ಕಾದಂಬರಿಗೆ 'ವಿಚಾರಣೆ' ಎಂದು ಹೆಸರಿಸಲಾಯಿತು. ಮೂಲ ಜರ್ಮನ್ ಹೆಸರು Der Prozess. ಈ ಕೃತಿಯನ್ನು ಕಾಫ್ಕಾ ಹಲವು ಅಧ್ಯಾಯಗಳಲ್ಲಿ ಬರೆದಿದ್ದ ; ಅವುಗಳಿಗೆ ಶೀರ್ಷಿಕೆಯನ್ನು ತಾನೇ ನೀಡಿದ್ದನು. ಆದರೆ ಈ ಅಧ್ಯಾಯಗಳು ಯಾವ ಅನುಕ್ರಮದಲ್ಲಿ ಮುದ್ರಿತವಾಗಬೇಕೆಂದು ತೀರ್ಮಾನಿಸಿದವನು ಮ್ಯಾಕ್ಸ್ ಬ್ರಾಡ್. ಈಗ ಪ್ರಕಟವಾಗಿರುವ ಅನುಕ್ರಮವನ್ನು ಕೆಲವು ವಿಮರ್ಶಕರು ಒಪ್ಪುವುದಿಲ್ಲ ; ಬೇರೊಂದು ಅನುಕ್ರಮವನ್ನು ಸೂಚಿಸುತ್ತಾರೆ. ಅಲ್ಲದೆ ಕಾಫ್ಕಾ ಎಷ್ಟೋ ಅಧ್ಯಾಯಗಳನ್ನು ಪೂರ್ಣಗೊಳಿಸದೇ ಬಿಟ್ಟಿದ್ದನು. ಅವುಗಳಲ್ಲಿ ಒಂದನ್ನುಳಿದು ಉಳಿದವುಗಳನ್ನು ಮ್ಯಾಕ್ಸ್ ಬ್ರಾಡ್ ಪ್ರಕಟಿಸಿಲ್ಲ. ಈಗ ಪ್ರಕಟಿತ ರೂಪದಲ್ಲಿರುವ ಎಂಟನೇ ಅಧ್ಯಾಯವನ್ನು ಕೊಂಚ ನೇರ್ಪುಗೊಳಿಸಿ, ಮುಗಿಸಿದ ಅಧ್ಯಾಯವೆಂಬಂತೆ ಕೃತಿಯಲ್ಲಿ ಸೇರಿಸಲಾಗಿದೆ. ಕೃತಿಯ ರೂಪಣ ಕ್ರಿಯೆಯನ್ನು ಕುರಿತ ಈ ಮಾಹಿತಿ ಗಮನಾರ್ಹವಾಗಿದೆ.

ಈ ಕಾದಂಬರಿಯಲ್ಲಿ ಹತ್ತು ಅಧ್ಯಾಯಗಳಿವೆ. ಇವುಗಳ ನಡುವೆ ಇರುವ ಸಂಬಂಧ ಬಲು ತೆಳುವಾದುದು. ಕಥಾನಾಯಕ ಮಾತ್ರ ಈ ಅಧ್ಯಾಯಗಳಿಗೆಲ್ಲ ಸಾಮಾನ್ಯ ಅಂಶ. ಸಾಂಪ್ರದಾಯಿಕ ಕಾದಂಬರಿ ಬಂಧದ ದೃಷ್ಟಿಯಿಂದ ಈ ಕೃತಿಯಲ್ಲಿ ಬಂಧವೇ ಇಲ್ಲ; ಸಾಹಸಕಥನಗಳ ಮಾಲೆಯಂತಿರುವ ಹಳೆಯ ರೋಚಕ ಕಥಾನಕಗಳ ಮಾದರಿ ಇಲ್ಲಿದೆ. ಹಾಗೆ ನೋಡಿದರೆ ಇಲ್ಲಿ ಕಥೆ ಎಂಬುದೂ ಕೆಲವು ಸಾಲಿನ ವ್ಯಾಪ್ತಿಯನ್ನು ದಾಟದು. ಇನ್ನೇನು ಮೂವತ್ತೊಂದು ವರ್ಷ ತುಂಬಲಿರುವ ನಾಯಕ ಜೋಸೆಫ್ ಕೆ. ಇದ್ದಕ್ಕಿದ್ದಂತೆ ಒಂದು ದಿನ ಬೆಳಿಗ್ಗೆ ಅವನ ದಸ್ತಗಿರಿಯಾಗುವುದು. ತನ್ನ ದಸ್ತಗಿರಿಗೆ ಕಾರಣವನ್ನು, ತಾನು ಮಾಡಿರಬಹುದಾದ ಅಪರಾಧದ ಸ್ವರೂಪವನ್ನು ಅರಿಯಲು ನಾಯಕ ಯತ್ನಿಸುತ್ತಾನೆ. ಅವನನ್ನು ಅಪರಾಧಿ ಎಂದು ಕರೆದರೂ ಬಂಧನದಲ್ಲಿರುವುದಿಲ್ಲ. ಕೆಲಸಕ್ಕೆ ಎಂದಿನಂತೆ ಹಾಜರಾಗುವ ಅವಕಾಶವಿರುತ್ತದೆ. ತನ್ನ ಮೇಲಿರುವ ಆಪಾದನೆಯು ಏನು ಎಂಬುದು ಅವನಿಗೆ ಕೊನೆಗೂ ತಿಳಿಯದು. ಅವನ ಶೋಧದ ಹಲವು ಹಂತಗಳಲ್ಲಿ ಭೇಟಿಯಾಗುವ ಕೆಲವು ವ್ಯಕ್ತಿಗಳಿದ್ದಾರೆ ; ಅವನು ಬಾಡಿಗೆಗೆ ಇದ್ದ ಮನೆಯ ಮಾಲೀಕಳಾದ ಶ್ರೀಮತಿ ಗ್ರುಬಕ್, ಅಲ್ಲೇ ಬಾಡಿಗೆಗೆ ಇದ್ದ ಕುಮಾರಿ ಬ್ರಸ್ಟ್‌ನರ್, 'ಕೋರ್ಟ'ನ ಜನರು, ಅಗಸಗಿತ್ತಿ, ಬಣ್ಣ ಬಳಿಯುವವ, ಚಾವಟಿ ಹಿಡಿದು ಹೊಡೆಯುವವರು, ತನಿಖೆಯ ಅಧಿಕಾರಿಗಳು,

ಚಿಕ್ಕಪ್ಪ, ಲಾಯರ್, ಲೆನಿ, ಮಾರಾಟಗಾರ, ಚರ್ಚಿನ ಧರ್ಮಗುರು ಹೀಗೆ ಹಲವರು. ವಿಚಾರಣೆಯು ನಡೆಯದೆ ನಾಯಕ ಮರಣದಂಡನೆಗೆ ಗುರಿಯಾಗುತ್ತಾನೆ.

ಕಾದಂಬರಿಯ ಎಷ್ಟೋ ಘಟನೆಗಳು ತರ್ಕಬದ್ಧ ಸಂಬಂಧಗಳನ್ನು ಹೊಂದಿರುವಂತೆ ತೋರುವುದಿಲ್ಲ. 'ಅಸಂಗತ'ವಾದ ಒಂದು ಜಗತ್ತನ್ನು ರೂಪಿಸುತ್ತ ಹೋದಂತೆ ಭಾಸವಾಗುತ್ತದೆ. ಮೊದಲೇ ಹೇಳಿದಂತೆ ಇದು ಸಾಂಪ್ರದಾಯಿಕ ಕಾದಂಬರಿಯ ಉದ್ದೇಶ ಹಾಗೂ ಸ್ವರೂಪಗಳೆರಡನ್ನೂ ನಿರಾಕರಿಸುವ ಕೃತಿ. ಹಾಗೆಂದು ಎಲ್ಲಿಯೂ ಕೃತಿಕಾರ ಘೋಷಿಸಿಲ್ಲವಾದರೂ, ಪರಿಚಿತ ಮಾನದಂಡಗಳು – ಅದರಲ್ಲೂ ವಾಸ್ತವವಾದದ ಕೃತಿಗಳ ಮೂಲಕ ದೊರೆತ ಮಾನದಂಡಗಳು – ಇಲ್ಲಿ ನಿರುಪಯುಕ್ತ ಇಲ್ಲವೆ ಅನುಚಿತವಾಗುತ್ತವೆಂಬ ತಿಳಿವಳಿಕೆ ನಮ್ಮಲ್ಲೇ ಮೂಡತೊಡಗುತ್ತದೆ ; ಹೀಗಾಗಿ ಈ ಕೃತಿಯನ್ನು, ಅದರಲ್ಲಿ ಮಂಡಿತವಾದ ಜಗತ್ತನ್ನು ವಿಶ್ಲೇಷಿಸಿಕೊಳ್ಳಲು ತಕ್ಕ ನೆಲೆಗಳನ್ನು ಹುಡುಕಿಕೊಳ್ಳುವ ಅವಶ್ಯಕತೆಯನ್ನು ಮನಗಾಣಲಾಗಿದೆ.

'ವಿಚಾರಣೆ' ಕೃತಿಯ ಬಗೆಗೆ ಬಂದಿರುವ ಐರೋಪ್ಯ ವಿಮರ್ಶೆಗಳಲ್ಲಿ ಕೆಲವು ಕೃತಿಗೂ ಕೃತಿಕಾರನ ಜೀವನವೃತ್ತಾಂತಗಳಿಗೂ ಸಂಬಂಧವನ್ನು ಕಾಣುವ ಹಾದಿ ಹಿಡಿದಿವೆ. ವಿಕ್ಷಿಪ್ತ ಜಗತ್ತನ್ನು ರೂಪಿಸುವ ಕಲಾಕಾರನ ಜೀವನವೂ ವಿಕ್ಷಿಪ್ತವಾಗಿರುವುದೆಂಬ, ಸರಳಗೊಳಿಸಿದ ಮನೋವೈಜ್ಞಾನಿಕ ಚಿಂತನೆಗಳು ಈ ವಿವರಣೆಯ ಬೆನ್ನಾಗಿವೆ. ಅಂಥ ಎರಡು ಮುಖ್ಯ ವಿವರಣೆಗಳು ಹೀಗಿವೆ :

1. ಕಾಫ್ಕಾ - ಅವನ ತಂದೆಯ ಸಂಬಂಧ : ಜೋಸೆಫ್ ಕೆ. ಯನ್ನು ಆರೋಪಿ ಎಂದು ಬಂಧಿಸಿ ವಿಚಾರಣೆಗೆ ಗುರಿಪಡಿಸಲು ಯತ್ನಿಸುವುದು. ಬಿಡುಗಡೆಗಾಗಿ ನಾಯಕ ನಡೆಸುವ ಯತ್ನಗಳ ವಿಫಲತೆ ಹಾಗೂ ಅವನಿಗೆ ಒದಗುವ ಮರಣದಂಡನೆ – ಈ ಮುಖ್ಯ ಸಂಗತಿಗಳ ಹಿಂದಿನ ಪ್ರೇರಣೆಯನ್ನು ಕಾಫ್ಕಾನ 'ಅಹಂ' (ego) ಮತ್ತು 'ಮಹದಹಂ'ಗಳ (super ego)* ಮುಖಾಮುಖಿಯಲ್ಲಿ ಗುರುತಿಸಲಾಗಿದೆ. ತಂದೆಯ ವ್ಯಕ್ತಿತ್ವದ ಹಿಡಿತದಿಂದ ಬಿಡುಗಡೆ ಪಡೆಯಲು ಕಾಫ್ಕಾ ಜೀವನದ ಉದ್ದಕ್ಕೂ ಹೆಣಗಿದ. ಅವನ ತಂದೆಗೆ ಬರೆದ – ಆದರೆ ಅವನಿಗೆ ತಲುಪಿಸದ – ಹಲವು ಕಾಗದಗಳಲ್ಲಿ ಅವನ ಮನೋದ್ವೇಗಗಳು ದಾಖಲಾಗಿವೆ. ತನ್ನ ಜೀವನದಲ್ಲಿ ಯಾವ ಹೆಣ್ಣನ್ನೂ ಆತ ಮದುವೆಯಾಗದೇ ಹೋದುದಕ್ಕೂ ಈ ಮಾನಸಿಕ ಒತ್ತಡವೇ ಕಾರಣವೆನ್ನಲಾಗಿದೆ.

ಜೋಸೆಫ್ ಕೆ. ಕೂಡ ತನ್ನನ್ನು ಹಿಡಿತದಲ್ಲಿರಿಸಿಕೊಳ್ಳಲು ಯತ್ನಿಸುತ್ತಿರುವ ವ್ಯವಸ್ಥೆಯ (order) ವಿರುದ್ಧ ಹೆಣಗುತ್ತಾನೆ. ಕಾದಂಬರಿಯ ಪ್ರಾರಂಭವೇ ಅವನ 'ಅಹಂ' ಅನ್ನು, ಅದರ ಬೆಳವಣಿಗೆಯನ್ನು ತಡೆಯುವ (arrest) ಮೂಲಕ ಆಗಿದೆ. ನಾಯಕ

* super egoಗೆ ಮಹದಹಂ ಎಂಬ ಪದವನ್ನು ರಾ.ಶಿ.ಯವರು ಬಳಸಿದ್ದಾರೆ.

ತನ್ನನ್ನು ಹೀಗೆ ಬಂಧಿಸುವುದರ ವಿರುದ್ಧ ಸೆಣಸುವುದು ಅವನ 'ಅಹಂ'ನ ಚಡಪಡಿಕೆಯಾಗಿದೆ. ವ್ಯಕ್ತಿಯನ್ನು ಸಮಾಜೀಕರಿಸುವ ಮೂಲಕ ಅವನ 'ಅಹಂ' ಅನ್ನು ತಹಬಂದಿಗೆ ತರಲೆತ್ನಿಸುವ 'ಮಹದಹಂ'ನ ಸ್ವರೂಪ ನಾಯಕನಿಗೆ ಪರಿಚಯವಾಗುವುದು ಆದರ ಆವಿಷ್ಕಾರಗಳಲ್ಲಿ ಮಾತ್ರ.

ತನ್ನ ವಿಚಾರಣೆ ನಡೆಯಲಿರುವ ಕೋರ್ಟಿಗೆ ರಜೆಯ ದಿನದಂದು ಹೋದ ನಾಯಕ ಅಲ್ಲಿ ತನ್ನನ್ನು ಬಂಧಿಸಿ ಶಿಕ್ಷಿಸುವ ವ್ಯವಸ್ಥೆಯ ವಿರುದ್ಧ ಬಂಡಿನ ಮಾತಾಡುತ್ತಾನೆ. ಅವನಿದ್ದ ಪರಿಸ್ಥಿತಿಯಲ್ಲಿ ಅವನ ಮಾತುಗಳು ನಗೆಪಾಟಲಾಗುತ್ತದೆ. ಮುಂದೆ ಆತ ತನ್ನ ಬಂಧನದ ವಿಚಾರವನ್ನು ನೆನಪಿಂದ ತೆಗೆಯಲು ತೊಡಗಿಸಿಕೊಳ್ಳುವ ಎಲ್ಲ ಕ್ರಿಯೆಗಳೂ ಮತ್ತೆ ಅವನನ್ನು ಹೇಗೋ ರಾಜಬೀದಿಗೆ ತಂದುಬಿಡುತ್ತವೆ. ಹೀಗೆ ಕಾಫ್ಕಾ ತನ್ನ ವ್ಯಕ್ತಿತ್ವದ ಬೆಳವಣಿಗೆಗೆ, ಕಾರ್ಯಪಟುತ್ವದಿಂದಲೇ ಸವಾಲಾಗಿದ್ದ ತಂದೆಯು ತಂದೊಡ್ಡಿದ ನಿಲುಗಡೆಯನ್ನು ಈ ಕಾದಂಬರಿಯಲ್ಲಿ ಪ್ರತೀಕಗಳ ಜಗತ್ತಿನಲ್ಲಿ ಮಂಡಿಸಿದ್ದಾನೆನ್ನಲಾಗಿದೆ.

2. ಕಾಫ್ಕಾನ ರೋಗ : ಕಾಫ್ಕಾ ಕ್ಷಯಪೀಡಿತನಾದ ವಿಚಾರ ಈ ಮೊದಲೇ ತಿಳಿದಿದೆ. ವ್ಯಕ್ತಿಯೊಬ್ಬನಿಗೆ ಬಂದೊದಗುವ ಈ ಮರಣಾಂತಿಕ – ಆಗ – ಆಪತ್ತಿಗೆ ಆತ ಹೇಗೂ ಕಾರಣನಲ್ಲ. ಆದರೆ ಆತ ಅದರ ಪರಿಣಾಮವನ್ನು, ಅಂದರೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಕೃತಿಯ ನಾಯಕನೂ ತಾನು ಯಾವ ಅಪರಾಧ ಮಾಡದಿದ್ದರೂ, ಒಂದು ವೇಳೆ ಅಪರಾಧವನ್ನು ಮಾಡಿದ್ದರೂ ಅದು ಏನೆಂದು ತಿಳಿಯದೆ ಶಿಕ್ಷೆಗೆ ಗುರಿಯಾಗುತ್ತಾನೆ. ಅವನ ಹೋರಾಟವೆಲ್ಲ ತಾನು ಅಪರಾಧಿಯಲ್ಲವೆಂದು ಸಾಬೀತು ಪಡಿಸುವುದಕ್ಕಿಂತ ತನ್ನ ಅಪರಾಧ ಯಾವುದೆಂದು ತಿಳಿಯಲು, ತನ್ನನ್ನು ವಿಚಾರಣೆಗೆ ಒಳಪಡಿಸುತ್ತಿರುವ ಮೂಲವನ್ನು ಶೋಧಿಸಲು ಮೀಸಲಾಗಿದೆ. ಶಿಕ್ಷೆಯಿಂದ ಮಾತ್ರ ಬಿಡುಗಡೆಯಿಲ್ಲ. ಕಾಫ್ಕಾ ತನ್ನ ಬದುಕಿನ ಈ ಚೌಕಟ್ಟನ್ನು ಜೋಸೆಫ್ ಕೈಯಲ್ಲಿ ಆರೋಪಿಸಿದ್ದಾನೆಂದು ಕೆಲವರು ವ್ಯಾಖ್ಯಾನಿಸುತ್ತಾರೆ.

ಕೃತಿಕಾರನ ಜೀವನ ವಿವರಗಳು ಕೃತಿಗೆ ನೀಡುವ ಪ್ರೇರಣೆಗಳ ಸ್ವರೂಪ ಹಾಗೂ ಸಾಧ್ಯತೆಯ ಬಗ್ಗೆ ಇನ್ನೂ ಕೊನೆಯ ಮಾತೆಂಬುದಿಲ್ಲ. ಹೀಗಲ್ಲದೆ ಹೀಗೆ ಕೃತಿಯಲ್ಲಿ ಕೃತಿಕಾರನನ್ನು ಹುಡುಕುವ ಯತ್ನ ರೋಚಕ ಎನಿಸಿದರೂ ಮಹತ್ವದ ನೆಲೆಗಳನ್ನು ಪರಿಚಯಿಸದೆ ಉಳಿಯುತ್ತದೆ. ಆದರೂ ಕಾಫ್ಕಾನಿಗೆ ಪ್ರವಾದಿಯ ಸ್ಥಾನವನ್ನು ಒದಗಿಸಿದ ಒಂದು ಸಂಗತಿಯನ್ನು ಗಮನಿಸಿದರೆ ಕೃತಿಯ ಹಿಂದಿನ ಕೃತಿಕಾರನ ಜೀವನದ ನೆಲೆಗಳನ್ನು ಕೈಬಿಡುವಂತೆಯೂ ಇಲ್ಲ. ಆ ಸಂಗತಿ : ಕಾಫ್ಕಾ ತನ್ನ ಮುಂದಿನ ಎರಡು ದಶಕಗಳಲ್ಲಿ ಯೂರೋಪನ್ನು ದಿಕ್ಕುಗೆಡಿಸಿದ ಫ್ಯಾಸಿಸಂನ ಕರಾಳತೆಯನ್ನು ಮುಂಗಂಡಿದ್ದ. ಯಹೂದಿಯಾಗಿ ತಾನು ಅನುಭವಿಸಿದ ಇಕ್ಕಟ್ಟುಗಳು ಮುಂದೆ ಈ ಶತಮಾನದ ಅತ್ಯಂತ

ಭೀಕರ ನರಹತ್ಯೆಗೆ ಮುನ್ಸೂಚನೆ ಎಂದು ಕಂಡುಕೊಂಡಿದ್ದ. ಯಹೂದಿಯಾಗುವುದು ವ್ಯಕ್ತಿಯ ತಪ್ಪಲ್ಲ ; ಅಪರಾಧವಲ್ಲ. ಆದರೆ ಅದಕ್ಕಾಗಿ ಜನಾಂಗದ್ವೇಷದ ದಳ್ಳುರಿಗೆ ಸಿಲುಕುವ ಶಿಕ್ಷೆಯಿಂದ ಮಾತ್ರ ಬಿಡುಗಡೆಯಿಲ್ಲ. ಕಾದಂಬರಿಯ ನಾಯಕನ ಸ್ಥಿತಿಯೂ ಇಂಥದೇ. ಎರಡನೇ ಮಹಾಯುದ್ಧದವರೆಗೂ ಯೂರೋಪು ಇಲ್ಲವೇ ಅಮೆರಿಕ ಕಾಫ್ಕಾನಿಗೆ ನೀಡಿದ ಮನ್ನಣೆ ಕಡಿಮೆ. ಆದರೆ ಇತಿಹಾಸದ ಆ ಭೀಕರ ದಿನಗಳ ಅನಂತರದಲ್ಲಿ 'ವಿಚಾರಣೆ' ಕಾದಂಬರಿ ಹೊಸ ಅರ್ಥಗಳನ್ನು ಪ್ರಕಟಿಸತೊಡಗಿತು. ಆಗಲೇ ಕಾಫ್ಕಾ ಪ್ರವಾದಿಯಾಗಿಬಿಟ್ಟ ; ಅವನ ಜೋಸೆಫ್ ಕೆ. ಈ ಶತಮಾನದ ಕೋಟ್ಯಂತರ ನಿರಪರಾಧಿ ಬಲಿಪಶುಗಳ ಪ್ರತಿನಿಧಿಯಾಗಿ ತೋರತೊಡಗಿದನು.

ಮತ್ತೆ ಕೆಲವರು ಕಾದಂಬರಿಯ ನಾಯಕನ ಬಂಧನದ ಗಳಿಗೆಯನ್ನು, ಪಾಶ್ಚಾತ್ಯ ಧಾರ್ಮಿಕ ಪರಿಕಲ್ಪನೆಗಳಲ್ಲಿ ಒಂದಾದ ಮೂಲಪಾಪದ ಪ್ರಜ್ಞೆಯ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ದೇವರ ಎಚ್ಚರಿಕೆಯನ್ನು ಮೀರಿ ಆದಿಯಲ್ಲಿ ಮೂಲಗಂಡು ಹಾಗೂ ಹೆಣ್ಣು ಮಾಡಿದ ಪಾಪದ (sin) ಪರಿಣಾಮವೇನೇ ಇರಲಿ ಮುಂದಿನ ಮಾನವ ಜನಾಂಗ ಆ ಮೂಲ ಪಾಪದ ಹೊಣೆಯನ್ನು ಹೊರುತ್ತಿದೆ. ವ್ಯಕ್ತಿಯಲ್ಲಿ ಈ ಮೂಲಪಾಪದ ಅರಿವು, ಪ್ರಜ್ಞೆಯ ಸ್ತರಕ್ಕೆ ಬಂದಕೂಡಲೇ ಆತ ನೋವಿನ ಗಳಿಗೆಗಳನ್ನು, ಉದ್ವೇಗವನ್ನು, ದೈನಿಕಗಳಲ್ಲಿ ಪಲ್ಲಟವನ್ನು ಅನುಭವಿಸತೊಡಗುತ್ತಾನೆ. ಜೋಸೆಫ್ ಕೆ.ಯಲ್ಲಿ ಈ ಮೂಲ ಪಾಪಪ್ರಜ್ಞೆಯು ಮೂಡಿದ ಸಂದರ್ಭವನ್ನೇ ಬಂಧನವೆಂದು ಕೃತಿ ಅನ್ಯೋಕ್ತಿ ವಿಧಾನದಲ್ಲಿ ಹೇಳುತ್ತಿದೆಯೆಂಬ ನಿಲುವಿನ ವಿಮರ್ಶಕರೂ ಇದ್ದಾರೆ. ಅನಂತರದಲ್ಲಿ ಜೋಸೆಫ್ ಕೆ. ನಡೆಸುವ ಯತ್ನಗಳೆಲ್ಲ ಈ ಪ್ರಜ್ಞೆಯಿಂದಲೇ ನಿಯಂತ್ರಿತವಾಗಿದ್ದು ತಾನು ಹೊಣೆಗಾರನಾಗ ಲಾರನೆಂದು, ತನ್ನನ್ನು ಇಂಥದೊಂದು ಗೋಜಲಿಗೆ ತಳ್ಳುತ್ತಿರುವ ಪ್ರಜ್ಞೆಯ ವಿರುದ್ಧ ಆತ ಚಲಿಸಲು ಯತ್ನಿಸುತ್ತಾನೆ. ಆದರೆ ಮನುಷ್ಯ ಈ ಪ್ರಜ್ಞೆಯನ್ನು ಪಡೆದಮೇಲೆ ಅದನ್ನು ಅನುಭವಿಸಲೇಬೇಕು.

ಈ ಮೇಲೆ ನೀಡಿದ ವಿಮರ್ಶೆಯ ವಿವರಗಳು ಬಹುಮಟ್ಟಿಗೆ ಕೃತಿಯ ನಾಯಕನ ಉಗಮಕ್ಕೆ ಕಾರಣಗಳನ್ನು ಹುಡುಕುತ್ತಿವೆ ; ಕಾಫ್ಕಾನ ಜೀವನ, ಚಾರಿತ್ರಿಕ ಸಂದರ್ಭ ಹಾಗೂ ಧಾರ್ಮಿಕ ಪರಿಕಲ್ಪನೆಗಳಲ್ಲಿ ಜೋಸೆಫ್ ಕೆ. ರೂಪುತಳೆಯಲು ಬೇಕಾದ ಸಂಗತಿಗಳಿರುವುದನ್ನು ಗುರುತಿಸಲಾಗಿದೆ. ಆದರೆ ಹೀಗೆ ನಾಯಕನ ಉಗಮದ ವಿವರಣೆಯಿಂದ ಕೃತಿಯ ವಿವರಗಳನ್ನು ವಿಶ್ಲೇಷಿಸಿದಂತೆ ಆಗುವುದಿಲ್ಲವಷ್ಟೆ. ಈ ವಿವರಗಳಿಂದ ದೊರಕುವ ಸೂಚನೆಗಳು ಉಪಯುಕ್ತವಾದರೂ, ಅವುಗಳಿಂದ ಮುಂದುವರೆಯದ ಹೊರತು ಕೃತಿಯನ್ನು 'ಕಾಣು'ವುದು ಸಾಧ್ಯವಾಗದು.

'ವಿಚಾರಣೆ'ಯನ್ನು ಓದುವಾಗ ಅಲ್ಲಿ ಚಿತ್ರಣಗೊಂಡ ವಿವರಗಳಿಗೆ, ಪಾತ್ರಗಳಿಗೆ,

ಒಟ್ಟಾರೆ ಅಲ್ಲಿನ ಜಗತ್ತಿಗೆ ಅರ್ಥವೇನು ಎಂಬ ಪ್ರಶ್ನೆ ಕಾಡತೊಡಗುತ್ತದೆ. ಇಡೀ ಜಗತ್ತು ಒಂದು ದುಃಸ್ವಪ್ನವೆಂದು ತೋರಿದರೂ ಇಲ್ಲಿನ ವಿವರಗಳಲ್ಲಿ, ವಿವರಗಳ ಹೊಂದಾಣಿಕೆ ಹಾಗೂ ಜೋಡಣೆಯಲ್ಲಿ ಸ್ವಪ್ನಗಳಿಗೆ ಸಹಜವಾದ ಅಸಾಂಗತ್ಯ, ಅಸ್ಪಷ್ಟತೆ, ವಾಸ್ತವಾತೀತತೆ ಇಲ್ಲ. ಒಬ್ಬ ವಿಮರ್ಶಕನ ಮಾತಿನಂತೆ 'ಇಲ್ಲಿ ನಮ್ಮನ್ನು ಬಡಿದೆಬ್ಬಿಸುವುದು ಈ ಜಗತ್ತಿನ ರೂಕ್ಷತೆಯಲ್ಲ; ಬದಲಿಗೆ ಅದರ ನಿರ್ಮಮತೆ, ದಿವ್ಯ ನಿರ್ಲಕ್ಷ್ಯ ಅಥವಾ ಎಲ್ಲವೂ ಇಂತಿಷ್ಟೆಂದು ಗಣಿಸುವ' ಬಗೆ ನಮ್ಮನ್ನು ಕಾಡತೊಡಗುತ್ತದೆ. ಮನುಷ್ಯನನ್ನು ಈ ಜಗತ್ತು ಒಳಗೊಂಡಿದ್ದರೂ ಅವನೊಡನೆ ಭಾವುಕ ಸಂಬಂಧವನ್ನು ರೂಪಿಸಿಕೊಳ್ಳದೆ ಅವನನ್ನು ದೂರವಿರಿಸುತ್ತಿದೆ. ಈ ಜಗತ್ತು ಮನುಷ್ಯನಿಗಾಗಿ ಇದೆಯೆಂಬ ಧಾರ್ಮಿಕ ತಿಳುವಳಿಕೆ ಇಲ್ಲಿ ಸುಳ್ಳಾಗತೊಡಗುತ್ತದೆ. ಹೀಗಾಗಿ ಆಧುನಿಕ ಮಾನವನಲ್ಲಿ ತನ್ನ ಇರವಿನ ಅರಿವು ತರುವ ಉದ್ವಿಗ್ನತೆಯನ್ನು ಜೋಸೆಫ್ ಕೆ.ಯಲ್ಲಿ ನಾವು ಗುರುತಿಸಬಹುದು. ಇದು ಅಸ್ತಿತ್ವವಾದದ ಪರಿಭಾಷೆಯ ವ್ಯಾಖ್ಯಾನವೆಂದು ತೋರಿದರೂ ಕಾಫ್ಕಾ ಒಬ್ಬ ಘೋಷಿತ ಅಸ್ತಿತ್ವವಾದಿ ಏನಲ್ಲ. ದೈನಿಕಗಳ ಜೀವನ ಸ್ಥಗಿತಗೊಂಡಾಗ ವ್ಯಕ್ತಿಯಲ್ಲಿ ಮೂಡುವ ಈ ತಿಳುವಳಿಕೆ ಅತ್ಯಂತ ತೀವ್ರವಾದ ಧಾರ್ಮಿಕ ಪ್ರೇರಣೆಗಳನ್ನು ಹೊಂದಿರುತ್ತದೆ. ಜೋಸೆಫ್ ಕೆ. ಕೊನೆಯ ಅಧ್ಯಾಯದಲ್ಲಿ 'ವಧಾಸ್ಥಾನ'ಕ್ಕೆ ಹೋಗುವ ಸನ್ನಿವೇಶ ಒಂದು ಧಾರ್ಮಿಕ ಆಚರಣೆಯ ಅನುರಣನಗಳನ್ನು ಪಡೆದುಕೊಳ್ಳುತ್ತದೆ. ಅದಕ್ಕೆ ಮೊದಲು ಬರುವ ಅಧ್ಯಾಯದ ಶೀರ್ಷಿಕೆ 'ಕೆಥಿಡ್ರಲ್‌ನಲ್ಲಿ'. ಈ ಪ್ರಸಂಗದಲ್ಲಿ ಬರುವ 'ನೀತಿಕಥೆ'(fable) ಯೊಂದು ಗಮನಾರ್ಹವಾಗಿದೆ. ಈ ನೀತಿಕತೆಗೆ, ದಾಸ್ತೊಯ್‌ವಸ್ಕಿಯ 'ಕರಮಜೋವ್ ಸೋದರರು' ಕಾದಂಬರಿಯಲ್ಲಿ ಬರುವ ಮಹಾವಿಚಾರಣೆಗಾರ (Grand Inqusitor) ಪ್ರಸಂಗದಷ್ಟೇ ಮಹತ್ವ ಇದೆ ಎಂದು ಗುರುತಿಸಲಾಗಿದೆ. ಈ ಕತೆ ಹೀಗಿದೆ : ನ್ಯಾಯಾಪೇಕ್ಷಿಯೊಬ್ಬ ನ್ಯಾಯಮಂದಿರದ ಮಹಾದ್ವಾರದ ಬಳಿ ಪ್ರವೇಶ ಕೋರಿ ದೂರದಿಂದ ಬರುತ್ತಾನೆ. ಆ ದ್ವಾರದ ಬಳಿ ಇದ್ದ ರಕ್ಷಕ ಅವನನ್ನು 'ಈಗ ಒಳಗೆ ಬಿಡಲಾರೆ' ಎನ್ನುತ್ತಾನೆ. 'ಎಂದಾದರೂ ಪ್ರವೇಶ ದೊರತೀತೆ ?' ಎಂದು ಕೇಳಿದ ಆಕಾಂಕ್ಷಿಗೆ 'ಸಾಧ್ಯ'ವೆಂಬ ಉತ್ತರ ದೊರಕುವುದು. ಮುಂದೆ ಹೇಗಾದರೂ ಮಾಡಿ – ದ್ವಾರಪಾಲಕನ ಕಣ್ಣುತಪ್ಪಿಸಿ, ಅವನಿಗೆ ಲಂಚ ನೀಡಿ, ಹೇಗೋ – ಒಳಹೋಗಲು ವ್ಯಕ್ತಿ ಯತ್ನಿಸುತ್ತಾನೆ. ಲಂಚವನ್ನು ಪಡೆದ ದ್ವಾರಪಾಲಕ 'ಪ್ರವೇಶ ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಿದೆನೆಂಬ ನಿನ್ನ ಸಂತೃಪ್ತಿಗಾಗಿ ಈ ಹಣವನ್ನು ತೆಗೆದುಕೊಳ್ಳುವೆ' ಎಂದು ಹೇಳಿ ಮತ್ತೆ ಪ್ರವೇಶಕ್ಕೆ ಮನ್ನಣೆ ನೀಡದೆ ಕೂರುತ್ತಾನೆ. ವ್ಯಕ್ತಿ ವರ್ಷಗಟ್ಟಲೆ ಅಲ್ಲೇ ಕಾಯುತ್ತಾನೆ. ದೂರದ ಪಯಣಕ್ಕೆ ಸಿದ್ಧನಾಗಿ ಬಂದಿದ್ದ ವ್ಯಕ್ತಿ ಅಲ್ಲೇ ನಿರ್ಗತಿಕನಾಗುವನು. ಕೊನೆಗೊಮ್ಮೆ ನಿಶ್ಶಕ್ತನಾಗಿ ಕೊನೆಗಾಲವನ್ನು ಸಮೀಪಿಸುವನು. ಮಂದವಾಗಿದ್ದ ಅವನ ದೃಷ್ಟಿಗೆ ದ್ವಾರದೆಡೆಯಿಂದ ಬರುತ್ತಿರುವ ಕಿರಣಗಳು ಕಾಣತೊಡಗುತ್ತವೆ. ಅಲ್ಲಿವರೆಗೆ ದ್ವಾರಪಾಲಕನಲ್ಲಿ ಆತ ಕೇಳದೆ ಬಿಟ್ಟ ಪ್ರಶ್ನೆಯೊಂದನ್ನು ಈಗ ತವಕದಿಂದ ಕೇಳುವನು : 'ಎಲ್ಲರೂ ನ್ಯಾಯಕ್ಕಾಗಿ

ಪರಿಪಾಟಲು ಪಡುವುದನ್ನು ಕಂಡಿರುವೆ. ಆದರೆ ಇಷ್ಟು ವರ್ಷ ಕುಳಿತರೂ ನನ್ನನ್ನು ಬಿಟ್ಟು ಯಾರೂ ಈ ದ್ವಾರದಲ್ಲಿ ಪ್ರವೇಶ ಕೋರಿ ಬರಲಿಲ್ಲವೇಕೆ ?' ದ್ವಾರಪಾಲಕ ಅವನ ಕಿವಿಯ ಬಳಿ ಬಾಗಿ ಕೂಗಿ ಹೇಳುವುದಿಷ್ಟು : 'ಏಕೆಂದರೆ ಈ ದ್ವಾರ ನಿನಗಾಗಿಯೇ ಇದ್ದುದಾಗಿ ಇಲ್ಲಿಂದ ಒಳಹೋಗಲು ಬೇರೆ ಯಾರೂ ಬರಲಿಲ್ಲ. ಇದೋ ! ಈಗ ನಿನ್ನ ಕಾಲ ಮುಗಿಯಿತಾಗಿ ಈ ಬಾಗಿಲು ಮುಚ್ಚಿ ಹೊರಡುವೆ.'

ಈ ನೀತಿಕತೆಯಲ್ಲಿನ ಒಪ್ಪು-ತಪ್ಪುಗಳ ಬಗ್ಗೆ ಮುಂದೆ ಚರ್ಚೆ ನಡೆಯುವುದಾದರೂ ನಮಗೆ ಒಟ್ಟು ಕತೆ ಪ್ರತಿನಿಧಿಸುವುದೇನನ್ನು ಎಂಬ ಕಡೆ ಆಸಕ್ತಿ ಹೆಚ್ಚಾಗಿರುವುದು ಸಹಜ. ಮಾನವನ ಶೋಧಪ್ರವೃತ್ತಿಯ ವೈಫಲ್ಯವನ್ನು – ಎಂಬ ಸರಳ ಉತ್ತರ ಸಾಧ್ಯ. ಆದರೆ ಪರಿಹಾರಕ್ಕಾಗಿ ತುಡಿತವಿದ್ದೂ ಪರಿಹಾರವೂ ಸಾಧ್ಯವಿದ್ದು ಅದು ಅಲಭ್ಯವಾಗಿರುವ ವಿಪರ್ಯಾಸವಿದು. ಆಯ್ಕೆಗಳಿಗೆ ಅವಕಾಶವಿದ್ದೂ ಆಯ್ಕೆಮಾಡುವ ಸಾಮರ್ಥ್ಯ ತರುವ ಇಕ್ಕಟ್ಟನ್ನು ಅಸ್ತಿತ್ವವಾದಿಗಳು ವಿವರಿಸುವವರಷ್ಟೆ ಇಲ್ಲಿಯೂ ನ್ಯಾಯಾಪೇಕ್ಷಿ ಮನುಷ್ಯನ ಸ್ಥಿತಿ ಹಾಗೆ. ಜೋಸೆಫ್ ಕೆ. ಬಂಧಿತನಾಗಿದ್ದಾನೆಂದರೆ, ಬಂಧನದ ಅರಿವು ಮಾತ್ರ ಇದೆ. ಆದರೆ ಉಳಿದಂತೆ ಅವನು ಮುಕ್ತ. ಮುಂದೆ ತನ್ನ ಹೋರಾಟದಲ್ಲಿ ವ್ಯಕ್ತಿಸಂಬಂಧಗಳ ಅಸಾಧ್ಯತೆಯನ್ನು ಅರಿಯುತ್ತಾನೆ. ಮತ್ತೆ ಮತ್ತೆ ಎಲ್ಲರೂ ಇವನನ್ನು ಧೀರನೆಂದೂ, ಇತರರಿಗಿಂತ ಬೇರೆ ಎಂದೂ ಹೇಳುವುದು ಗಮನಾರ್ಹ. ಆದರೆ 'ಹೋರಾಟದ ಛಲವೊಂದೇ ಗೆಲುವಿಗೆ ಸಾಕು ಎಂಬ ನಿಲುವನ್ನು ತಾಳುವುದೇ' ಕಾಫ್ಕಾನ ನಾಯಕರ ದೋಷ ; ಕೊರತೆ. ನಿರ್ಧಾರಗಳು ಸ್ವಾತಂತ್ರ್ಯವನ್ನು ಗಾಢವಾಗಿಸುತ್ತವೆ ಎಂದು ಮನುಷ್ಯನು ನಂಬಿರುವುದು ನಿಜ. ಆದರೆ ಈ 'ಜಗತ್ತಿ'ನಲ್ಲಿ ಆ ನಂಬಿಕೆ ಹುಸಿಯಾಗುತ್ತದೆ. ದೇವರೆಂಬ ಆಧಾರಕಲ್ಪನೆಯು ಅಸಾಧ್ಯವಾದ ಆಧುನಿಕ ಮಾನವನ ತೀವ್ರವಾದ ಧಾರ್ಮಿಕ ತೊಳಲಾಟ 'ವಿಚಾರಣೆ'ಗೆ ಒಂದು ತಾತ್ತ್ವಿಕ ತಿರುಳನ್ನು ತಂದಿತ್ತಿದೆ. ಆದರೆ ಇದು ನೈರಾಶ್ಯವಲ್ಲ; ಹತಾಶೆಯಲ್ಲ. ಕೊನೆಗೆ ತನ್ನಲ್ಲಿ ಚೂರಿ ಹಾಕಿದಾಗ ನಾಯಕ ತನ್ನನ್ನೇ, ತನ್ನ ಸಾವನ್ನೇ ದಿಟ್ಟಿಸುತ್ತಿರುವ ಆ ಇಬ್ಬರನ್ನು ನೋಡುತ್ತಾ 'ನಾಯಿಯಂತೆ' ಎನ್ನುತ್ತಾನೆ. ನಿರೂಪಕನ ವ್ಯಾಖ್ಯೆ ಇದು : ಈ ಮಾತು ನಾಯಕನ ಬಾಯಿಂದ ಬಂದುದರ ಔಚಿತ್ಯವೆಂದರೆ ಹೀಗೆ ತನ್ನನ್ನು ಕೊನೆಗಾಣಿಸಿ ಪ್ರಶ್ನೆಗಳನ್ನು ಇಲ್ಲವಾಗಿಸಲೆತ್ನಿಸುವ ಇವರಿಗೆ ತನ್ನ ಅನಂತರದ ಬದುಕು (ನಾಯಿಯಂತೆ) ನಾಚಿಕೆಗೇಡಿನದು. ಏಕೆಂದರೆ ಪ್ರಾಶ್ನಿಕನ ಇಕ್ಕಟ್ಟುಗಳೇನೇ ಇರಲಿ ಪ್ರಶ್ನೆಗಳಿಂದಲೇ ಜೀವನಕ್ಕೆ ಅರ್ಥ, ಗೌರವ. ಈ ವೈರುಧ್ಯ ಇಲ್ಲವಾದರೆ ಇದು ಜೀವಿಸಲು ಅರ್ಹವಾದ ಜೀವನವೆನಿಸದು. ಹೀಗಾಗಿ ಇಲ್ಲಿ ನಾಯಕನ ನಿಲುವು ಅತ್ತ ನಿರಾಶೆಯದೂ ಅಲ್ಲ, ಇತ್ತ ಒಣ ಹೆಮ್ಮೆಯದೂ ಅಲ್ಲ ; ಬದಲಿಗೆ ಮನುಷ್ಯನ ಘನತೆಯ ಪರವಾದುದಾಗಿದೆ.

'ಕಾಫ್ಕಾ ಈ ಶತಮಾನದ ಅತಿ ಶ್ರೇಷ್ಠ ವಾಸ್ತವವಾದೀ ಲೇಖಕ'ನೆಂದು ವಿಮರ್ಶಕ

ರೊಬ್ಬರು ಗುರುತಿಸಿದ್ದಾರೆ. ಈ ಮಾತಿನಲ್ಲಿ ತಥ್ಯವಿದೆ. ವಾಸ್ತವವನ್ನು ಪ್ರತಿನಿಧಿಸಲು ಕಾಫ್ಕಾ ಯಾವುದೇ ಪ್ರಯೋಗಗಳ ಮೊರೆ ಹೋಗುವುದಿಲ್ಲ. ದತ್ತ ವಿವರಗಳಿಗೆ ಇರಬಹುದಾದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮೇಲುಚರ್ಮವನ್ನು ಸೆಳೆದುಹಾಕಿ ಅವುಗಳನ್ನು ಭಾವಸ್ಪರ್ಶವಿಲ್ಲದ ಭಾಷೆಯಲ್ಲಿ ಮಂಡಿಸುತ್ತಾನೆ. ಇದರಿಂದ ವಾಸ್ತವ ಪರಿವರ್ತಿತವಾದಂತೆ ಭಾಸವಾಗುತ್ತದೆ. ವಿವರಗಳನ್ನು ನೀಡುವಾಗ ಯಾವುದೇ ಅರ್ಥಭಾರವನ್ನು ಆ ವಿವರಗಳಿಗೆ ತರುವ ಯತ್ನವನ್ನು ಕಾಫ್ಕಾ ಮಾಡುವುದಿಲ್ಲ. ಅವನ 'ಬಂಧನದ ದಿನದ ವಿವರ', 'ಕೋರ್ಟಿನ ವರ್ಣನೆ', 'ಅಡ್ವೋಕೇಟಿನ ಮನೆಯ ವರ್ಣನೆ', 'ಕೆಥಿಡ್ರಿಲ್‌ನ ವರ್ಣನೆ'ಗಳನ್ನು ಇಲ್ಲಿ ಉದಾಹರಿಸಬಹುದು. ಮತ್ತೆ ಮತ್ತೆ ವಿಮರ್ಶಕರು ಈ ಕಾದಂಬರಿಯ ಚಾರಿತ್ರಿಕ ಕಾಲಾತೀತ (ahistorical) ಸ್ಥಿತಿಯನ್ನು ಉಲ್ಲೇಖಿಸುತ್ತಾರೆ. ಇದು ಸಾಧ್ಯವಾಗಿರುವುದು ಕೃತಿಯ ವರ್ಣನಕ್ರಮದಲ್ಲಿ.

ಕಾನೂನು ಮತ್ತು ಆಡಳಿತಗಳ ಪ್ರಭಾವ ಮನುಷ್ಯ ಪರಿಸರವನ್ನು ಯಾಂತ್ರಿಕಗೊಳಿಸಬಲ್ಲ ಗರಿಷ್ಠ ಪರಿಣಾಮ ಈ ಕೃತಿಯಲ್ಲಿದೆ. ಪ್ರಜ್ಞೆ ಲಭಿಸಿದ ನಾಯಕ ತಾನೂ ಯಾವುದರ ಒಂದು ಜೀವಂತ ಭಾಗವಾಗಿದ್ದನೋ ಅದರಿಂದ ಹೊರಬಂದು ಅದನ್ನು ನೋಡನೋಡುತ್ತಿದ್ದಂತೆ ಅದು ಆಯಾಮಗಳನ್ನು ಕಳೆದುಕೊಂಡು ಸ್ಪಂದನವಿಲ್ಲದ ಹಿನ್ನಲೆಯಾಗಿಬಿಡುತ್ತದೆ. ವ್ಯಾವಹಾರಿಕ ಜಗತ್ತಿನ ಈ ಲಕ್ಷಣವನ್ನು ಮಂಡಿಸಿರುವುದೇ ಈ ಕೃತಿಯ ಇನ್ನೊಂದು ಹೆಚ್ಚಳವಾಗಿದೆ.

ನಾಯಕನ ಅನ್ವೇಷಣೆ, ಮುಖಾಮುಖಿ, ಬಂಡಾಯ, ತಂತ್ರ ಮುಂತಾದ ಮಾದರಿಗಳು ಇರುವ ಈ ಕಾದಂಬರಿ ಪಾರಂಪರಿಕ ಕಾದಂಬರಿಯ 'ಅಣಕ'ವಾಗಿದೆ. ಇಲ್ಲಿ ಪಾತ್ರಸೃಷ್ಟಿ ಎಂಬುದೇ ಇಲ್ಲ. 'ಡಾನ್ ಕ್ವಿಹೋ' ಮಧ್ಯಯುಗದ 'ರೋಚಕ'ಗಳ ಅಣಕವಾದಂತೆ, 'ವಿಚಾರಣೆ' ಆಧುನಿಕ ಯುಗದ ಮಾನವನ ಹೆಮ್ಮೆಯ ಅಣಕ. ನಾಯಕನಲ್ಲಿ ಹುಸಿನಾಯಕನ ಚಹರೆಗಳಿವೆ. ಕಾದಂಬರಿಯಲ್ಲಿ ಒಂದು ಬಂಧದ ಅಣಕವೂ ಇದೆ. ಮೊದಲ ಅಧ್ಯಾಯ ಬೆಳಗಿನ ವೇಳೆಯಲ್ಲಿ ನಾಯಕ ನಿದ್ರೆಯಿಂದ ಎಚ್ಚೆತ್ತಾಗ ಆರಂಭವಾಗುತ್ತದೆ. ಕೊನೆಯ ಅಧ್ಯಾಯ ನಾಯಕನ ಹುಟ್ಟುಹಬ್ಬದ – ಮೂವತ್ತೊಂದನೆಯದು – ಮುನ್ನಾ ದಿನದ ರಾತ್ರಿಯಲ್ಲಿ ಮುಗಿಯುವುದು. ಕೊನೆಯ ಅಧ್ಯಾಯದಲ್ಲಿ ಕಪ್ಪು ಎಲ್ಲೆಲ್ಲೂ ಢಾಳಾಗಿದೆ. ಆದರೆ ವೈದೃಶ್ಯವನ್ನು ರಚಿಸುವಂತೆ, ನಾಯಕನ ಕೊನೆಯ ಪಯಣದಲ್ಲಿ ಬೆಳುದಿಂಗಳಿನಲ್ಲಿ ಲಿಪ್ತವಾಗಿದ್ದ ನಿಸರ್ಗದ ಮಾಯಕತೆಯ ಅನುಭವವಾಗುತ್ತದೆ. ಹೀಗೆ ಎಷ್ಟೋ ಕಡೆಗಳಲ್ಲಿ ಇಂಥ ವೈದೃಶ್ಯಗಳನ್ನು ರೂಪಿಸುವ ಮೂಲಕವೇ ಕಾದಂಬರಿಯ ಅರ್ಥಪರಂಪರೆ ಗಾಢಗೊಳ್ಳುತ್ತಾ ಹೋಗುವುದು. ಈ ದೃಷ್ಟಿಯಿಂದಂತೂ ಇದು ರೂಪಿಸುವ ಸಾಂಗತ್ಯ (coherence) ಅನನ್ಯವಾದುದು.

ಬೋರಿಸ್ ಪಾಸ್ಟರ್‌ನಾಕ್ : 'ಡಾಕ್ಟರ್ ಷಿವಾಗೊ'

ಜಿ.ರಾಮಕೃಷ್ಣ

ಬೋರಿಸ್ ಪಾಸ್ಟರ್‌ನಾಕ್ ಹುಟ್ಟಿದ್ದು 1890ರಲ್ಲಿ, ತಂದೆ ಚಿತ್ರಕಲಾವಿದ, ತಾಯಿ ಸಂಗೀತಗಾರ್ತಿ. ಇಬ್ಬರೂ ಮಾಸ್ಕೋ ನಗರವಾಸಿಗಳು. ಮೊದಲಿಗೆ ಸಂಗೀತಾಭ್ಯಾಸಿಯಾಗಿದ್ದ ಬೋರಿಸ್ ನಂತರ ತತ್ವಶಾಸ್ತ್ರದ ವ್ಯಾಸಂಗ ಮಾಡಲು ಜರ್ಮನಿಗೆ ತೆರಳಿದ. ಮೊದಲನೆ ಮಹಾಯುದ್ಧದ ಅವಸರದಲ್ಲಿ ರಷ್ಯಾಕ್ಕೆ ಹಿಂದಿರುಗಿ ಒಂದು ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ. 1917ರ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ನಂತರ ಶಿಕ್ಷಣ ಸಚಿವಾಲಯದ ಪುಸ್ತಕಭಂಡಾರದಲ್ಲಿ ಕೆಲಸಕ್ಕೆ ನೇಮಕಗೊಂಡ. ಈತ ಕವಿಯಾಗಿ ಶ್ಲಾಘನೀಯ ಸ್ಥಾನ ಪಡೆದದ್ದು 1917 ರಿಂದ 1932ರವರೆಗೆ ಪ್ರಕಟವಾಗಿದ್ದ ಕವನಗಳ ಹಿರಿಮೆಯಿಂದ. ಇಂದಿಗೂ ಸೋವಿಯತ್ ಒಕ್ಕೂಟದಲ್ಲಿ ಆತನ ಪ್ರತಿಭೆ ಗುರುತಿಸಲಾಗುವುದು ಈ ಕವನಗಳ ಶ್ರೇಷ್ಠತೆಯ ಹಿನ್ನೆಲೆಯಲ್ಲೇ. ಶೇಕ್ಸ್‌ಪಿಯರನ ಅನೇಕ ನಾಟಕಗಳನ್ನು ರಷ್ಯನ್ ಭಾಷೆಗೆ ಅನುವಾದಿಸಿರುವುದೂ ಈತನ ಗಳಿಕೆಗಳಲ್ಲೊಂದು.

ಸೋವಿಯತ್ ಒಕ್ಕೂಟದ ಹೊರಗೆ ಇವನ ಕವನಗಳು ಅಷ್ಟಾಗಿ ಪ್ರಖ್ಯಾತವಾಗಿಲ್ಲವೆಂದು ತೋರುತ್ತದೆ. 1958ರಲ್ಲಿ ಆತನ ಕಾದಂಬರಿ 'ಡಾಕ್ಟರ್ ಷಿವಾಗೊ' ನೊಬೆಲ್ ಪಾರಿತೋಷಕಕ್ಕೆ ಆಯ್ಕೆಯಾಯಿತೆಂಬ ಕಾರಣದಿಂದ ವಿಶ್ವದ ಹಲವು ರಾಷ್ಟ್ರಗಳ ಮಟ್ಟಿಗೆ ಆತ ಕೇವಲ ಕಾದಂಬರಿಕಾರನಾಗಿಯೇ ಉಳಿದಿದ್ದಾನೆ. ಆತನ ಉತ್ತಮ ಕಾವ್ಯಕ್ಕಿಂತಲೂ ವಿಷಣ್ಣತೆಯನ್ನು ಬೋಧಿಸುವ ಕಾದಂಬರಿ 'ಷಿವಾಗೊ' ವಿಶ್ವದ ಮನ ಸೆಳೆದಿರುವುದೊಂದು ಸೋಜಿಗದ ಸಂಗತಿ. ರಷ್ಯದ ಸಾಹಿತಿಯೊಬ್ಬ ಸಮಾಜವಾದಿ ಕ್ರಾಂತಿಯನ್ನು ಹೀಯಾಳಿಸುವಂತಹ ಕೃತಿಯನ್ನು ರಚಿಸಿದರೆ ಅಮೆರಿಕಾ, ಇತ್ಯಾದಿ ರಾಷ್ಟ್ರಗಳಲ್ಲಿ ತಕ್ಷಣ ಪುರಸ್ಕರಿಸಲ್ಪಡುತ್ತಾನೆಂಬುದು ಅನುಭವದ ಮಾತು. ಆತನು ಶ್ರೇಷ್ಠ ಕಲಾವಿದನೂ ಆಗಿದ್ದರೆ ದೊರಕುವ ಸನ್ಮಾನಕ್ಕೂ ಅಂತರರಾಷ್ಟ್ರೀಯ ರಾಜಕೀಯ ಸಂಘರ್ಷಗಳ ಅಂಗವಾಗಿ ಸಾಹಿತಿಯೊಬ್ಬನಿಗೆ ದೊರಕಬಹುದಾದ ಸನ್ಮಾನಕ್ಕೂ ಸಹಜವಾಗಿಯೇ ವ್ಯತ್ಯಾಸವಿರುತ್ತದೆ. ಅಲೆಕ್ಸಾಂಡರ್ ಸೋಲ್ಜೆನಿತ್ಸಿನ್‌ಗೆ ದೊರಕಿದ ಪುರಸ್ಕಾರ ಕೇವಲ ಸೋವಿಯತ್ – ವಿರೋಧಿ ರಾಜಕೀಯದ ಅವಾಂತರದಿಂದ. ಆದರೆ ಪಾಸ್ಟರ್‌ನಾಕ್ ಕೃತಿಗಳಲ್ಲಿ ಕಲಾವಂತಿಕೆ ಹೇರಳವಾಗಿದ್ದು ಮಾನವನ ಅಳಿವು-ಉಳಿವುಗಳ ಬಗ್ಗೆ ವಿಶೇಷ ಕಾಳಜಿ ಕಾಣಬರುತ್ತದೆ. 1960ರಲ್ಲಿ ಗತಿಸಿದ ಈ ಸಾಹಿತಿ ಸಾಹಿತ್ಯಿಕ ಚರ್ಚೆಗಳಿಗೆ ಎಷ್ಟೇ ವಿಷಯವಾಗಿರಲಿ, ಪ್ರಬುದ್ಧ ಬರಹಗಾರನೆಂದು ಇಂದಿಗೂ ಗೌರವಕ್ಕೆ ಪಾತ್ರನಾಗಿದ್ದಾನೆ.

ಜೀವನದ ಸೌಂದರ್ಯವನ್ನು ಗುರುತಿಸಿ ಅದನ್ನು ವೈಯಕ್ತಿಕ ಜೀವನದಲ್ಲಿ

ಅಳವಡಿಸಿಕೊಳ್ಳುವುದರಲ್ಲಿ ಎಂತಹ ಸೊಗಸಿದೆ, ಮತ್ತು ಹಾಗೆ ಮಾಡಹೋಗದೆ ಪ್ರಪಂಚವನ್ನೇ ಬದಲಿಸಿಬಿಡುತ್ತೇನೆಂದು ಮುನ್ನುಗ್ಗುವವನ ಮೌಢ್ಯ ಎಷ್ಟು ಅರುಚಿಕರ ಎಂಬಂಶವನ್ನು ಪ್ರಧಾನವಾಗಿ ಪ್ರತಿಪಾದಿಸುವುದು ಈ ಕಾದಂಬರಿಯ ಉದ್ದೇಶ. ಅದನ್ನು ಸಾಧಿಸುವಾಗ ಲೇಖಕನು ತನ್ನ ಮುಂಚಿನ ಕಾವ್ಯಗಳಲ್ಲಿ ನಿರೂಪಿಸಿದ್ದ ಜೀವನದ ಸ್ವರೂಪ ಮತ್ತು ಗುರಿಗಳನ್ನು ಒತ್ತಟ್ಟು ಮಾಡಿ ನವೀನವಾದ ಒಂದು ಮ್ಲಾನತೆಯ ಛಾಯೆಯಲ್ಲಿ ಜೀವನದ ಘಟನೆಗಳನ್ನೆಲ್ಲಾ ಅರ್ಥೈಸಹೊರಟಿದ್ದಾನೆ. '1905', 'ದ್ವಿತೀಯ ಜನ್ಮ', 'ಅಲೆಗಳು', 'ಮೊದಲ ರೈಲುಗಳು', ಇತ್ಯಾದಿ ಕವನಗಳಲ್ಲಿ ಕಾಣಬರುವ ಉತ್ತೇಜಕ ಜೀವನದರ್ಶನದ ಬದಲು ನಿಸ್ತೇಜವಾದ ದೃಷ್ಟಿಕೋನವನ್ನು 'ಷಿವಾಗೊ' ಕಾದಂಬರಿ ಚಿತ್ರಿಸುತ್ತದೆ. ಸಮಾಜವಾದಿ ಕ್ರಾಂತಿಯ ನಿರಾಕರಣೆ ಕಾದಂಬರಿ ಹೊರಸೂಸುವ ಮೂಲಭೂತ ಸಂದೇಶ. ಕ್ರಾಂತಿಯ ನಂತರದ ಆಂತರಿಕ ಘರ್ಷಣೆಗಳು ಮತ್ತು ಸಾಮಾಜಿಕ ಬದಲಾವಣೆಗಳು ಜನಗಳಿಗೆ ಬವಣೆ ತಂದಿತೇ ಹೊರತು ಯಾವ ಸಿದ್ಧಿಯನ್ನೂ ಅಲ್ಲ; ಇದರೊಟ್ಟಿಗೆ ಕ್ರಾಂತಿಯು ರಷ್ಯದ ಬುದ್ಧಿಜೀವಿಯನ್ನು ಸದಾಕಾಲಕ್ಕೂ ಸದೆಬಡೆದು ವಿನಾಶಗೊಳಿಸಿತು ಎಂಬ ತರ್ಕವನ್ನೂ ಕಾದಂಬರಿ ಬೆಳೆಸುತ್ತದೆ. ಪದೇ ಪದೇ ಕಾದಂಬರಿಕಾರನು ಸೂಚಿಸುವ ಒಂದಂಶವೆಂದರೆ, ಅಕ್ಟೋಬರ್ ಕ್ರಾಂತಿಯು ದುರದೃಷ್ಟಕರ ವಾದೊಂದು ಘಟನೆಯಾಗಿತ್ತು. ಬುದ್ಧಿ ಜೀವಿಗಳು ಅಂತಹ ಘಟನೆಗೆ ಕುಮ್ಮಕ್ಕು ಕೊಟ್ಟು ಅದರಲ್ಲಿ ಭಾಗವಹಿಸಿದ್ದು ಅಪರಾಧ, ಮತ್ತು ಅದರ ನಂತರದ ಬೆಳವಣಿಗೆಗಳೆಲ್ಲಾ ಕೆಡುಕಿನಿಂದ ತುಂಬಿವೆ – ಎಂಬುದು. ಷಿವಾಗೋನ ಜೀವನ ಮತ್ತು ಮರಣವು ರಷ್ಯದ ಬುದ್ಧಿಜೀವಿವರ್ಗದ ಜೀವನ-ಮರಣಗಳ ಕಥೆ ಎಂಬ ರೀತಿಯಲ್ಲಿ ಪಾಸ್ಟರ್‌ನಾಕ್ ಚಿತ್ರಣ ನೀಡಿದ್ದಾರೆ.

ವ್ಯಕ್ತಿ ಮತ್ತು ಸಮಷ್ಟಿಗಳ ನಡುವಣ ಸಂಬಂಧದ ಸಂಕೀರ್ಣತೆಯು ಅನೇಕ ಸಾಹಿತಿಗಳ, ದಾರ್ಶನಿಕರ ಮತ್ತು ಸಮಾಜವಿಜ್ಞಾನಿಗಳ ಚಿಂತನೆಗೆ ವಿಷಯವಾಗಿರುವಂತೆ ಪಾಸ್ಟರ್‌ನಾಕ್ ಅವರ ಮಂಥನಕ್ಕೂ ವಿಷಯವಾಗಿದೆ. ಕುಟುಂಬ ಸೌಖ್ಯಕ್ಕಿಂತಲೂ ಮಿಗಿಲಾದುದಿಲ್ಲವೆಂಬ ಸಿದ್ಧಾಂತವನ್ನು ಪ್ರತಿಪಾದಿಸುವ ಆವೇಶದಲ್ಲಿ ಸಮಷ್ಟಿಯ ಎಲ್ಲ ಕಾರ್ಯಾಚರಣೆಯೂ ಅಪ್ರಬುದ್ಧ ಹಾಗೂ ಅಪಾಯಕಾರಿ ಎಂಬ ತೀರ್ಮಾನಕ್ಕೆ ಬರುವ ಪಾಸ್ಟರ್‌ನಾಕ್ ವ್ಯಕ್ತಿಗಳ ಅಂತಸ್ಸಂಬಂಧಗಳನ್ನು ಬಹು ಸೀಮಿತವಾದ ಕ್ಷೇತ್ರದಲ್ಲಷ್ಟೇ ಗ್ರಹಿಸುತ್ತಾರೇನೋ ಎಂಬ ಸಂಶಯ ಸಹಜವಾಗಿಯೇ ಉದ್ಭವಿಸುತ್ತದೆ.

ಅಂದರೆ ಕಾದಂಬರಿಕಾರನಿಗೆ ಸಮಷ್ಟಿಯ ಜೀವನರಂಗ, ಒಂದು ಪರ್ಯಾಯಕ್ಕಾಗಿ ಕಾತರತೆ, ಸಂಕಷ್ಟಗಳ ನಡುವೆ ಹೋರಾಟ, ಹೋರಾಟದ ನಡುವೆ ಮಹದಾಕಾಂಕ್ಷೆಯ ಬಲದಿಂದ ತಮ್ಮ ಆಪತ್ತನ್ನು ಲಘುವಾಗಿ ಕಾಣುವುದು, ಇತ್ಯಾದಿಗಳ ಪರಿಚಯವಿಲ್ಲವೆಂದಲ್ಲ. ಅವನ್ನೆಲ್ಲಾ ಕೆಲವೊಮ್ಮೆ ಸಾರವತ್ತಾಗಿ, ಇನ್ನು ಕೆಲವೊಮ್ಮೆ ಸೂಕ್ಷ್ಮವಾಗಿ ಕಾದಂಬರಿಕಾರ

ಚಿತ್ರಿಸಿದ್ದಾನೆ. 1917 ವಿಶ್ವದ ಇತಿಹಾಸದಲ್ಲಿದ್ದಂತೆ ಈ ಕಾದಂಬರಿಯ ಘಟನಾವಳಿಯಲ್ಲಿ ಒಂದು ಪರ್ವಕಾಲ. ಕಾದಂಬರಿಯಲ್ಲಿ ಬರುವ ಪಾತ್ರಗಳು ಆ ವರ್ಷಕ್ಕೆ ಮುನ್ನ ನಿರೀಕ್ಷಿಸಿದ್ದ ಮಹತ್ತರ ಬದಲಾವಣೆಗಳು ಅಂದಿನ ಪರಿಸ್ಥಿತಿಯ ಅವಲೋಕನದಿಂದ ಅನಿವಾರ್ಯವೆಂದು ಬಗೆಯಲಾಗಿದ್ದ ಬದಲಾವಣೆಗಳು. ಆ ಶೋಷಣೆ, ಹಿಂಸೆ, ಅನ್ಯಾಯ, ದಬ್ಬಾಳಿಕೆ, ಬಡತನ, ಕ್ರೌರ್ಯ, ಅಜ್ಞಾನ, ಇತ್ಯಾದಿ ಪಿಡುಗಿನ ಪರಂಪರೆಗೆ ಇತಿಶ್ರೀ ಹಾಡಲು ಕ್ರಾಂತಿಯಿಂದಲ್ಲದೆ ಬೇರೆ ಮಾರ್ಗವೇ ಇರಲಿಲ್ಲವೆಂಬ ಆಶಯವನ್ನು ಕಾದಂಬರಿಯ ಬಹುತೇಕ ಪಾತ್ರಗಳ ಮುಖೇನ ಪಾಸ್ಟರ್‌ನಾಕ್ ನಿರೂಪಿಸುತ್ತಾರೆ. ಆದರೆ ಕ್ರಾಂತಿಯ ನಂತರ ಅವರಲ್ಲಿ ಪ್ರಮುಖರು ನಿರಾಸೆಯಿಂದ ಆವೃತರಾಗಿ ದಿಕ್ಕಿಲ್ಲದ ನಡೆಯಲ್ಲಿ ತೊಡಗುವಂತಹವರು, ನಿರುತ್ಸಾಹಿಗಳು, ನಿಷ್ಕ್ರಿಯರು. ಕ್ರಾಂತಿಯ ಪೂರ್ವದಲ್ಲಿ ಮತ್ತು ನಂತರ ತಮ್ಮ ಎಂದಿನ ಕೃತ್ರಿಮತೆಯಿಂದ ಸಾಫಲ್ಯ ಹೊಂದುವವರ ಪೈಕಿ ಕಾದಂಬರಿಯಲ್ಲಿ ಕೊಮರೋವ್ಸ್ಕಿ ಎಂಬ ದುಷ್ಟನೊಬ್ಬನ ಚಿತ್ರಣ ಸಮಗ್ರವಾಗಿ ಕಂಡುಬರುತ್ತದೆ. ಶೋಷಣೆಯನ್ನು ಕಂಡು ಮರುಗುವ ಜನ ಇಂತಹ ಕಠೋರಹೃದಯಿಯನ್ನು ದೂಷಿಸುವುದಿಲ್ಲ, ದಂಡಿಸುವುದಿಲ್ಲ, ಎದುರಿಸುವುದೂ ಇಲ್ಲ. ಸ್ವತಃ ಶೋಷಕರು ಕೂಡ ಪಾಸ್ಟರ್‌ನಾಕ್‌ನ ದೃಷ್ಟಿಯಲ್ಲಿ ಒಂದು ನೊಣವನ್ನು ಸಹ ಹಿಂಸಿಸಲು ಹಿಂಜರಿಯುವಂತಹ ನವಿರುಹೃದಯದವರೋ ಎನ್ನುವಂತೆ ಭಾಸವಾಗುತ್ತಾರೆ. ಮೇಲಾಗಿ, ಕ್ರಾಂತಿಯ ಪೂರ್ವದ ರಷ್ಯದಲ್ಲಿ ಶೋಷಣೆ-ದಮನಗಳಿಗಿಂತ ದಾನಶೂರರು, ಕರುಣಾಮಯಿಗಳು, ಸಹೃದಯಿಗಳು, ಸ್ವತಂತ್ರ ವ್ಯಕ್ತಿಗಳು, ಬಡತನದಲ್ಲೂ ಸುಲಭವಾಗಿ ಮುನ್ನಡೆಯಬಲ್ಲಂತಹವರು, ಇತ್ಯಾದಿಗಳೇ ಹೇರಳವಾಗಿದ್ದರೆಂಬ ಕಲ್ಪನೆಯನ್ನು ಪಾಸ್ಟರ್‌ನಾಕ್ ಮೂಡಿಸುತ್ತಾರೆ. ಈ ದೃಷ್ಟಿಯೇ ಬಹುಶಃ ಕ್ರಾಂತಿಯು ಅನವಶ್ಯಕವಾಗಿ ಮೂಡಿಬಂದ ಒಂದು ದುರದೃಷ್ಟಕರ ಘಟನೆ ಎಂಬ ತತ್ವಕ್ಕೆ ಮೂಲವಾಗುತ್ತದೆ. ಕಾದಂಬರಿಯ ಮೊದಲ ಭಾಗದಲ್ಲಿ ಕ್ರಾಂತಿಯನ್ನು ಕುರಿತು ಚರ್ಚಿಸುವ ಧೀಮಂತ ವ್ಯಕ್ತಿಗಳಿಗೆ ನಿಜಕ್ಕೂ ಕ್ರಾಂತಿಯ ಅವಶ್ಯಕತೆಯೇ ಇಲ್ಲ. ಅವರ ಜೀವನದ ಯಾವ ವಿಭಾಗದಲ್ಲೂ ಕುಂದುಕೊರತೆಗಳಿಗೆ ಅವಕಾಶವಿಲ್ಲ. ದೌರ್ಜನ್ಯಗಳಿಗೆ ಗುರಿಯಾಗಿದ್ದು ಕ್ರಾಂತಿಯಿಂದ ನೂತನ ವಾತಾವರಣವನ್ನಪೇಕ್ಷಿಸುವಂತಹ ಪಾತ್ರಗಳು ಪಾಸ್ಟರ್‌ನಾಕ್‌ನ ಮುಖವಾಣಿಗಳೂ ಆಗುವುದಿಲ್ಲ. ಕಾದಂಬರಿಯ ಮೊದಲ ಮೂರನೆಯ ಒಂದು ಭಾಗವು ಹಲವು ಧೀಮಂತ ವ್ಯಕ್ತಿಗಳ ಬಹುಮುಖ ಬೌದ್ಧಿಕ ಜೀವನದ ಚಿತ್ರಣವಾಗಿದೆ. ಅವರ ಮೂಲಭೂತ ಪ್ರಶ್ನೆಗಳೆಲ್ಲಾ ಅವರವರ ವೈಯಕ್ತಿಕ ಆಧ್ಯಾತ್ಮಿಕ ಸಮಸ್ಯೆಗಳಿಗೆ ಸಂಬಂಧಿಸಿದುವು. ಅಂತಹವರಲ್ಲೊಬ್ಬ ನಿಕೊಲಾಯ್ ನಿಕೊಲಾಯೆವಿಚ್. ಕಾದಂಬರಿಯ ಮೊದಲ ಹಂತದಲ್ಲೇ ಅವನೆನ್ನುತ್ತಾನೆ : 'ಸಾಮೂಹಿಕ ಕಾರ್ಯಾಚರಣೆಯು ಕಳಪೆಯ ಬುದ್ಧಿಮಟ್ಟದ ಕುರುಹು. ಸೊಲೊವ್ಯೇವ್, ಕಾಂಟ್, ಮಾರ್ಕ್ಸ್ ಅಥವಾ ಯಾರ ಬಗೆಗೇ ಆಗಲಿ ಶ್ರದ್ಧೆ ಇರುವುದೆಂದರೆ ಇದೇ ಅರ್ಥ. ಸತ್ಯವನ್ನು ಅರಸುವವರು ಏಕಾಂಗಿಗಳಾದ ವ್ಯಕ್ತಿಗಳು ಮಾತ್ರವೇ. ಅವರಿಗೆ ಇತರರ ಸಂಗ ಸಹಿಸಲಾಗದ ಒಂದು ಬಾಧೆ. ನಮ್ಮ ಶ್ರದ್ಧೆಗೆ

ಪಾತ್ರವಾಗಬಹುದಾದದ್ದು ಏನಾದರೂ ಇದೆಯೇ ಈ ಪ್ರಪಂಚದಲ್ಲಿ? ಇಲ್ಲ. ಅದು ಅತಿ ವಿರಳ.'

ಕಾದಂಬರಿ ಮೊದಲಾಗುವುದು ಯೂರಿ ಆಂಡ್ರೇವಿಚ್ ಷಿವಾಗೋನ ತಾಯಿಯ ಮರಣದ ಉಲ್ಲೇಖದಿಂದ. ಯೂರಿಯ ತಾಯಿಯ ಸಹೋದರ ಈ ನಿಕೊಲಾಯ್ ನಿಕೊಲಾಯೆವಿಚ್ ಅಥವಾ ಕೋಲ್ಯಾ ಮಾಮ; ಯೂರಿ ಒಂದು ರೀತಿಯ ಪೋಷಕ ಮತ್ತು ಪ್ರಕಾಂಡ ಬುದ್ಧಿಜೀವಿ. ಯೂರಿಯ ತಂದೆ ಆಂಡ್ರೆ ಷಿವಾಗೊ ಒಬ್ಬ ಉದ್ಯಮಿ ಮತ್ತು ಲೇವಾದೇವಿಗಾರ. ತನ್ನ ಹೆಂಡತಿಯನ್ನು ಅಂದರೆ ಯೂರಿಯ ತಾಯಿಯನ್ನು ಬಿಟ್ಟು ಬೇರೊಬ್ಬಳೊಡನೆ ಸಹವಾಸ ಇವನಿಗೆ. ಅಲ್ಲಿ ಎವ್‌ಗ್ರಾಫ್ ಎಂಬ ಇನ್ನೊಬ್ಬ ಮಗನ ಜನನ. ಮೊದಲ ಹೆಂಡತಿ ಕಾರ್ಪಣ್ಯಕ್ಕೆ ಸಿಲುಕಿ ಅಸು ನೀಗಿದಳು. ಯೂರಿಯಾದರೋ ತಂದೆಯ ಆಸ್ತಿಯ ಕಡೆ ಕೂಡ ಲಕ್ಷ್ಯ ಕೊಡಲಿಲ್ಲ; ಅದೆಲ್ಲಾ ಎವ್‌ಗ್ರಾಫ್ ಪಾಲಿಗೆ.

1903ರಲ್ಲಿ ಯೂರಿಯು ಕೋಲ್ಯಾ ಮಾಮನೊಡನೆ ಕಲೋಗ್ರಿವೋವ್ ಸಂತಾನದವರ ಭೂಸಂಪತ್ತಿದ್ದ ಡೂಪ್ಲ್ಯಾಂಕ ಎಂಬಲ್ಲಿಗೆ ಹೋದ. ಕಲೊಗ್ರಿವೋವ್ ಸಂಸ್ಕೃತಿಯ ಆರಾಧಕ. ಅಲ್ಲಿಗೆ ಹೋಗುವಾಗ ಯೂರಿಗೆ ಪ್ರಪ್ರಥಮವಾಗಿ ರಷ್ಯದ ಹಳ್ಳಿಗಳಲ್ಲಿ ತಲೆದೋರಿದ್ದ ಘರ್ಷಣೆಗಳ ಪರಿಚಯವಾಯಿತು. ಎಲ್ಲೆಲ್ಲೂ ರೈತಾಪಿ ಜನ ಸಿಡಿದೆದ್ದಿದ್ದಾರೆ. ಅಲ್ಲಿದ್ದಾಗ ನಡೆದ ಇನ್ನೊಂದು ಘಟನೆ ಯೂರಿಯ ತಂದೆಯ ಆತ್ಮಹತ್ಯೆ. ಕೊಮರೋವ್ಸ್ಕಿ ಎಂಬ ದುಷ್ಟ ವಕೀಲನೊಡನೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಆಂಡ್ರೆ ಷಿವಾಗೊ ರೈಲಿನಿಂದ ಜಿಗಿದು ಪ್ರಾಣ ಬಿಟ್ಟಿದ್ದ.

ಇತ್ತ ಮಾಸ್ಕೋದಲ್ಲಿ ಕಲೋಗ್ರಿವೋವ್‌ನ ಮಗಳು ನಾದ್ಯಾ ಶಾಲೆಯಲ್ಲಿ ವಿದ್ಯಾರ್ಥಿನಿ. ಅವಳ ಸ್ನೇಹಿತೆ ಲಾರಿಸ್ಸ ಫ್ಯೂಡೊರೋವ್ನಾ ಗ್ವಿಶಾರ್, ಅಥವಾ ಲಾರಾ. ಅವಳ ತಾಯಿ ಅಮಾಲಿಯಾ ಮೂಲತಃ ಫ್ರಾನ್ಸಿನವಳು; ಆದರೆ ರಷ್ಯದಲ್ಲೇ ನೆಲೆಸಿದ್ದವಳು. ಲಾರಾ ಮತ್ತು ರೋದ್ಯ ಎಂಬಿಬ್ಬರು ಮಕ್ಕಳನ್ನು ಬಿಟ್ಟು ತನ್ನ ಗಂಡ ಸತ್ತ ಮೇಲೆ ಆಕೆ ಉಡುಪು ತಯಾರಿಸುವ ಪುಟ್ಟ ಕೇಂದ್ರವನ್ನು ಕೊಂಡಳು. ಅವಳಿಗೆ ಕೊಮರೋವ್ಸ್ಕಿ ಸಲಹೆಗಾರ; ಅದಕ್ಕಿಂತಲೂ ಹೆಚ್ಚಾಗಿ ಅವಳು ಅವನಿಗೆ ಪ್ರೇಯಸಿ. ಲಾರಾಗೆ ಆಗಿನ್ನೂ ಹದಿನಾರು ವರ್ಷ; ಶಾಲಾ ವಿದ್ಯಾರ್ಥಿನಿ. ತಾಯಿಯ ಆರೋಗ್ಯ ಕೆಟ್ಟಿತ್ತು. ಕೊಮರೋವ್ಸ್ಕಿ ತಾಯಿಯ ಬದಲು ಮಗಳನ್ನು ಒಂದು ಸಂತೋಷಕೂಟಕ್ಕೆ ಕೊಂಡೊಯ್ದ. ವಾಪಸ್ಸಾದಾಗ ಅವಳ ವಯಸ್ಸಿನ ಇತರರು ಯಾರೂ ಪಡೆಯದಿದ್ದ ಅನುಭವ ಅವಳು ಪಡೆದಿದ್ದಳು. ಅವನನ್ನು ಕೊಲ್ಲಬೇಕೆಂಬಷ್ಟು ಸಿಟ್ಟು, ಆದರೂ ಒಂದು ಬಗೆಯ ಉಲ್ಲಾಸ ಅವಳಿಗೆ. 1912ರಲ್ಲಿ ಅವಳು ಉಪಾಧ್ಯಾಯಿನಿಯಾಗಲು ಬೇಕಾದ ಪದವಿ ಪಡೆದಳು. ಆ ಕಾಲದಲ್ಲಿ ಅವಳು ಕಲೋಗ್ರಿವೋವ್ ಕುಟುಂಬದೊಡನೆ ವಾಸಿಸುತ್ತಿದ್ದಳು; ನಂತರ ಆ ಕುಟುಂಬದ

ಮಕ್ಕಳ ಮೇಲ್ವಿಚಾರಕಳಾಗಿ ಕೆಲಸ ಮಾಡಿ ಜೀವನ ಸಾಗಿಸುವುದಲ್ಲದೆ ತನ್ನ ಪ್ರಿಯತಮ ಪಾವೆಲ್ ಆಂಟಿಪೋವ್‌ಗೆ ಸಹಾಯಹಸ್ತ ನೀಡಿದಳು.

ಪಾವೆಲ್ ಅಥವಾ ಪಾಶಾ ಲಾರಾಗಿಂತ ವಯಸ್ಸಿನಲ್ಲಿ ಸ್ವಲ್ಪ ಚಿಕ್ಕವ. ರೈಲ್ವೆ ಕೆಲಸಗಾರನೊಬ್ಬನ ಮಗ. ತಂದೆ ಮುಷ್ಕರಗಳ ಸಂಘಟಕ, ನೇತಾರ. ರಾಜಕೀಯ ಚಟುವಟಿಕೆಗಳಿಂದಾಗಿ ಸೈಬೀರಿಯಾಕ್ಕೆ ಅಟ್ಟಲ್ಪಟ್ಟ. ತಾಯಿ ಆಸ್ಪತ್ರೆಯಲ್ಲಿ ಗತಿಸಿದಳು. ಪಾಶಾ ಬೇರೊಬ್ಬ ಕೆಲಸಗಾರ ಟಿವರ್ಜಿನ್ ಮನೆ ಸೇರಿದ. ಆ ಮನೆಯ ಯಜಮಾನನೂ ಸೈಬೀರಿಯಾಕ್ಕೆ ಗಡೀಪಾರಾದವನೆ. ಈ ಟಿವರ್ಜಿನ್ ರೈಲ್ವೆ ಕಾರ್ಯಾಗಾರದಲ್ಲೊಮ್ಮೆ ಅಧಿಕಾರಿಯನ್ನು ಪ್ರಶ್ನಿಸಿದ್ದ; ಓಸಿಪ್ (ಅಥವಾ ಯೂಸುಪ್ಕ) ಗಲಿಯುಲಿನ್ ಎಂಬ ಬಾಲಕನನ್ನು ಥಳಿಸುತ್ತಿದ್ದ ಎಂಬ ಕಾರಣಕ್ಕಾಗಿ. ಯೂಸುಪ್ಕ ಒಂದು ಭಾರಿ ಅಂತಸ್ತುಗಳ ಮನೆಯ ಬಾಗಿಲು ಕಾಯುವವನ ಮಗ.

ಯೂರಿ ಷಿವಾಗೊ ತನ್ನ ಪೋಷಕ ಕೋಲ್ಯಾ ಮಾಮನು ಮಾಡಿದ್ದ ಏರ್ಪಾಡಿನಂತೆ ಮಾಸ್ಕೋದಲ್ಲಿ ಗ್ರೋಮಿಕೋ ಕುಟುಂಬದವರೊಡನಿದ್ದು ವಿದ್ಯಾಭ್ಯಾಸ ನಡೆಸುತ್ತಿದ್ದ. ಅಲೆಕ್ಸಾಂಡರ್ ಗ್ರೋಮಿಕೋ ವಿಶ್ವವಿದ್ಯಾನಿಲಯದಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕ. ಆತನ ಹೆಂಡತಿ ಆನಾ ಇವನೋವ್ನಾ ಉರಾಲ್ ಪ್ರಾಂತದವಳು. ಯುರ್ಯಾತಿನ್ ಬಳಿ ವರೀಕಿನೋ ಎಂಬಲ್ಲಿ ಅವಳ ತಂದೆ ಇವಾನ್ ಕ್ರೂಗರ್‌ಗೆ ಬೇಕಾದಷ್ಟು ಭೂಮಿ, ಗಣಿ, ವನಸಂಪತ್ತು ಇತ್ಯಾದಿಗಳಿದ್ದವು. ಟೋನ್ಯಾ ಈ ಕುಟುಂಬದ ಸ್ತ್ರೀರತ್ನ, ಮುಂದೆ ಯೂರಿಯ ಪತ್ನಿ

ಆಗ ಮಾಸ್ಕೋದ ಪ್ರೆಸ್ನ್ಯಾ ವಿಭಾಗದಲ್ಲಿ ಗಲಭೆಯುಂಟಾಗಿತ್ತು. ಲಾರಾಳ ತಾಯಿ ಆ ಭಾಗದ ಒಂದು ಹೋಟೆಲಿನಲ್ಲಿ ತಂಗಿದ್ದಳು. ಅಸ್ವಸ್ಥತೆ ತೀವ್ರವಾಗಿತ್ತು; ಆತ್ಮಹತ್ಯೆ ಪ್ರಯತ್ನ ನಡೆಸಿದ್ದಳು. ಗ್ರೋಮಿಕೋ ಕುಟುಂಬದಲ್ಲಿ ಅಂದು ಸಂಗೀತ ಕಾರ್ಯಕ್ರಮ. ಅತಿಥಿಗಳ ಪೈಕಿ ಒಬ್ಬರು ವೈದ್ಯರು. ಅವರಿಗೆ ಕರೆ ಬಂದಾಗ ಯೂರಿ ಸಹ ಅವರೊಡನೆ ಹೋಟೆಲಿಗೆ ಹೋಗಿದ್ದ. ಅಲ್ಲಿ ಸುಮಾರು ವಯಸ್ಸಿನ ಕೊಮರೋವ್ಸ್ಕಿ ಬಾಲೆಯಾದ ಲಾರಾಳನ್ನು ನೋಡುತ್ತಿದ್ದ ರೀತಿ ಯೂರಿಗೆ ವಿಚಿತ್ರವೆನಿಸಿತು.

1911. ಯೂರಿ ವೈದ್ಯಕೀಯ ವಿದ್ಯಾರ್ಥಿ. ನಿಷ್ಠಾವಂತ, ಪ್ರತಿಭಾವಂತ. ಆ ವರ್ಷ ಗ್ರೋಮಿಕೋ ಪತ್ನಿ ಆನಾ ಇವನೋವ್ನಾ ಅನಾರೋಗ್ಯದಿಂದ ನರಳಿ ಕಾಲವಾದಳು. ಯೂರಿಯು ಟೋನ್ಯಾಳನ್ನು ಮದುವೆಯಾಗಬೇಕೆಂದು ಅವಳ ಹಂಬಲವಾಗಿತ್ತು.

ಮಾಸ್ಕೋದಲ್ಲಿದ್ದ ಒಂದು ಪ್ರತಿಷ್ಠಿತ ಕುಟುಂಬ ಸ್ವೆಂಟಿಟ್ಸ್ಕಿಯವರದು. ಅಲ್ಲಿ ಒಂದು ಕ್ರಿಸ್‌ಮಸ್ ಸಮಾರಂಭ. ಗ್ರೋಮಿಕೋರೊಡನೆ ಯೂರಿ ಮತ್ತು ಅವನ ವಯಸ್ಸಿನವನೇ ಆದ ಮಿಾಶಾ ಗೋರ್ಡನ್ ತೆರಳಿದ್ದಾರೆ. ಕೊಮರೋವ್ಸ್ಕಿಯೂ ಇದ್ದಾನೆ. ಸಮಾರಂಭದ

ಮಧ್ಯೆ ಒಂದು ಅನಿರೀಕ್ಷಿತ ಘಟನೆ. ಕೋಮರೊವ್ಸ್ಕಿಗೆ ಗುಂಡಿಕ್ಕಿ ಕೊಲ್ಲುವುದರಲ್ಲಿ ಅಸಫಲಳಾಗಿದ್ದ ಲಾರಾ, ಕೋರ್ನಕೋವ್ ಎಂಬುವವನನ್ನು ಗಾಯಗೊಳಿಸಿದ್ದಳು. ಕಾರಣ: ತನ್ನನ್ನು ಹಾಳುಮಾಡಿದ್ದ ಆ ದುಷ್ಟ ಈಗ ಕೋರ್ನಕೋವ್‌ನ ಮಗಳ ಮೇಲೆ ಕಣ್ಣು ಹಾಕಿದ್ದಾನೆ.

ಲಾರಾ ಮತ್ತು ಪಾಶಾ ಇಬ್ಬರೂ ಉಪಾಧ್ಯಾಯವೃತ್ತಿಗೆ ತರಬೇತಿ ಪಡೆದವರು. ಯುರ್ಯಾತಿನ್‌ನಲ್ಲಿ ವೃತ್ತಿಗೆ ಸೇರಲು ತೆರಳಿದರು. ಅವರಿಗೊಬ್ಬಳು ಮಗಳು, ಕಾಶ್ಯಾ ಅಥವಾ ಕಾತ್ಯೆಂಕಾ.

1914. ಪ್ರಥಮ ಮಹಾಯುದ್ಧದ ಆರಂಭ. ರಷ್ಯದ ತ್ಸಾರ್ ಸರ್ಕಾರ ಜರ್ಮನಿಯ ವಿರುದ್ಧ. ಎಲ್ಲೆಲ್ಲೂ ಯುದ್ಧದ ಅಲೆ, ಪ್ರಭಾವ. ಟೋನ್ಯಾಳನ್ನು ಮದುವೆಯಾಗಿ ಒಂದು ಮಗುವಿನ ತಂದೆಯಾಗಿರುವ ವೈದ್ಯ ಯೂರಿ ಷಿವಾಗೋ. ಸೈನ್ಯದಲ್ಲಿ ಅವನ ಭರ್ತಿ.

ಇತ್ತ ಯುರ್ಯಾತಿನ್‌ನಲ್ಲಿ ಪಾಶಾಗೆ ಯಾವಾಗಲೂ ಕಸಿವಿಸಿ. ಲಾರಾಗೆ ಸಮಾನನಾಗಲು ಅವನ ತಳಮಳ, ಸತತ ಪ್ರಯತ್ನ. ಅದಕ್ಕಾಗಿ ವಿಶೇಷ ಅಧ್ಯಯನ. ಆದರೂ ಅಸಮಾಧಾನ. ಯುದ್ಧದಲ್ಲಿ ಭಾಗಿಯಾಗಿ ತನ್ನ ವರ್ಚಸ್ಸನ್ನು ಪ್ರದರ್ಶಿಸಬಹುದೆಂಬ ಆಸೆ. ಅಧ್ಯಾಪಕ ವೃತ್ತಿಗೆ ವಿದಾಯ. ಸೈನ್ಯಾಧಿಕಾರಿಯಾಗಿ ಆಯ್ಕೆ. ಓಸಿಪ್ ಗಲಿಯುಲಿನ್ ಸಹ ಸೇನೆಯಲ್ಲಿದ್ದ. ಜರ್ಮನರ ಮೇಲಿನ ಒಂದು ದಾಳಿಯಲ್ಲಿ ಪಾಶಾ ಸತ್ತನೆಂದು ಗಲಿಯುಲಿನ್ ಸೇರಿದಂತೆ ಪಾಶಾನ ಎಲ್ಲ ಸಹಯೋಧರ ಅಭಿಪ್ರಾಯವೂ ಆಗಿತ್ತು. ಆದರೆ ಅವನು ಜರ್ಮನರ ಸೆರೆಗೆ ಸಿಕ್ಕಿದ್ದ, ಸತ್ತಿರಲಿಲ್ಲ. ಗಂಡನ ಸಮಾಚಾರ ತಿಳಿಯಲು ಮತ್ತು ಸಾಧ್ಯವಾದರೆ ಅವನ ಸನಿಹದಲ್ಲಿರಲು ತೀರ್ಮಾನಿಸಿದ ಲಾರಾ ರೋಗಿಗಳ ಶುಶ್ರೂಷೆ ಮಾಡುವುದರಲ್ಲಿ ತರಬೇತಿ ಹೊಂದಿ ಸೈನ್ಯಕ್ಕೆ ದಾಖಲಾದಳು.

ಜರ್ಮನರ ದಾಳಿಯೊಂದರಿಂದ ತಪ್ಪಿಸಿಕೊಳ್ಳಲು ಯೂರಿ ಇದ್ದ ಸೈನ್ಯದ ತುಕಡಿ ಹಿಮ್ಮೆಟ್ಟುತ್ತಿತ್ತು. ಆಗ ಗುಂಡೊಂದು ಹಾರಿ ಅವನು ಕುಸಿದುಬಿದ್ದ. ಆಸ್ಪತ್ರೆಯಲ್ಲಿ ಗಲಿಯುಲಿನ್ ಮತ್ತು ಯೂರಿ ಇಬ್ಬರೂ ಇದ್ದರು. ಲಾರಾ ಅಲ್ಲಿ ಶುಶ್ರೂಷೆ ಮಾಡುತ್ತಿದ್ದವಳು. ಈ ಸಂದರ್ಭದಲ್ಲಿ ಮಿಶಾ ಯೂರಿಯಿದ್ದಲ್ಲಿಗೆ ಬಂದಿದ್ದ. ತಾನು ಬರೆದಿದ್ದ ಕವನಗಳನ್ನು ಯೂರಿ ಅವನಿಗೆ ಕೊಟ್ಟ. ಮಾಸ್ಕೋದಲ್ಲಿ ಅವನ್ನು ಮಿಶಾ ಪ್ರಕಾಶ ಪಡಿಸಿದ. ಯೂರಿ ಈಗ ಒಳ್ಳೆಯ ವೈದ್ಯ ಮತ್ತು ಖ್ಯಾತ ಕವಿ. ಆದರೆ ಇನ್ನೂ ಸೈನ್ಯದಲ್ಲೇ ಸೇವೆ ಸಲ್ಲಿಸುತ್ತಿದ್ದಾನೆ.

ಯೂರಿಯ ಜೀವನದುದ್ದಕ್ಕೂ ಬಿರುಗಾಳಿಯ ಬೀಸುವಿಕೆ ಬಹುವಾಗಿತ್ತು. ಆದರೆ ಹೊಸ ಬಿರುಗಾಳಿಯೊಂದು ಹಳೆಯದನ್ನೆಲ್ಲಾ ತರಗೆಲೆಗಳನ್ನು ಕೊಂಡೊಯ್ಯುವಂತೆ ರಭಸದಿಂದ ಸುಯ್ಯುಗುಡುತ್ತಿತ್ತು. ಅದರ ನಿದರ್ಶನವೋ ಎಂಬಂತೆ ಯೂರಿ ವರ್ತಮಾನ ಪತ್ರಿಕೆಯಲ್ಲಿ ಓದಿದ : ಸೆಂಟ್ ಪೀಟರ್ಸ್‌ಬರ್ಗಿನ ರಸ್ತೆಗಳಲ್ಲಿ ಭಾರಿ ಕದನ. ಯುದ್ಧವಿನ್ನೂ

ಮುಗಿದಿರಲಿಲ್ಲ. ಆದರೆ ಅದಕ್ಕಿಂತಲೂ ಹೆಚ್ಚು ನಿರ್ಧಾರಕವಾದ ಬೇರೊಂದು ಯುದ್ಧದ ಆರಂಭವಾಗಿತ್ತು. ಶೋಷಕರ ವಿರುದ್ಧ, ಭೂಮಾಲಿಕರ ವಿರುದ್ಧ, ಬಂಡವಳಿಗರ ವಿರುದ್ಧ, ಅವರೆಲ್ಲರ ನಾಯಕ-ಪ್ರತಿನಿಧಿ ತ್ಸಾರನ ವಿರುದ್ಧ. ಈ ಯುದ್ಧದಲ್ಲಿ ರಷ್ಯದ ಜನಸ್ತೋಮವೇ ವೀರಯೋಧರು. ಎಲ್ಲೆಲ್ಲೂ ಆಲ್ಲೋಲ-ಕಲ್ಲೋಲ, ಕದಡಿದ ವಾತಾವರಣ, ಪ್ರಕ್ಷುಬ್ಧ ಪರಿಸ್ಥಿತಿ. ಲಾರಾ ಮತ್ತು ಯೂರಿ ಇನ್ನೂ ಸೈನ್ಯದಲ್ಲಿಯೇ ಇದ್ದರು. ವೈದ್ಯ ಮತ್ತು ನರ್ಸ್ ಸಹಜವಾಗಿಯೇ ಹೆಚ್ಚು ಪರಸ್ಪರರನ್ನು ಸಂಧಿಸುತ್ತಿದ್ದರು.

ಫೆಬ್ರವರಿ 1917 : ತ್ಸಾರ್‌ಶಾಹಿಯ ಪತನ. ಕೆರೆನ್ಸ್ಕಿ ಸರ್ಕಾರ ಅಧಿಕಾರಕ್ಕೆ ಬಂತು. ಕೋರ್ನಿಲೋವ್‌ನ ಪಿತೂರಿ, ಬೋಲ್ಶೆವಿಕರ ವೃದ್ಧಿ, ರೈತಾಪಿ ವರ್ಗದ ಆರ್ಭಟ, ಸೈನಿಕರ ಷರತ್ತುಗಳು, ಸೋವಿಯೆತ್ತುಗಳ ಪ್ರಾಬಲ್ಯ — ಒಟ್ಟಿನಲ್ಲಿ ಘರ್ಷಣೆಯ ಹಾದಿ ಇನ್ನೂ ವಿಸ್ತಾರವಾಯಿತು. ಯಾವ ಪ್ರಾಂತ್ಯದಲ್ಲೂ ಶಾಂತಿಯಿಲ್ಲ, ಯಾವ ಕುಟುಂಬದಲ್ಲೂ ನೆಮ್ಮದಿಯಿಲ್ಲ, ಯಾವ ವ್ಯಕ್ತಿಯಲ್ಲೂ ಸಂಯಮವಿಲ್ಲ.

ಪಾಶಾ ಹೇಗೂ ಸತ್ತಿದ್ದ. ಇನ್ನು ಸೈನ್ಯದಲ್ಲಿ ತನಗೇನು ಕೆಲಸ ? ಲಾರಾ ಯುರ್ಯಾತಿನ್‌ಗೆ ಹಿಂದಿರುಗಿದಳು. ಕ್ರಮೇಣ ಯೂರಿ ಮಾಸ್ಕೋಗೆ ತೆರಳಿ ತನ್ನ ಕುಟುಂಬದವರನ್ನು ಸೇರಿಕೊಂಡ. ಅಕ್ಟೋಬರ್ 1917 ಬಂತು. ಕೆರೆನ್ಸ್ಕಿಯ ಮೆನ್ಶೆವಿಕ್ ಸರ್ಕಾರ ತಲ್ಲಣಗೊಂಡು ಕುಸಿಯಿತು. ಲೆನಿನ್ನರ ನಾಯಕತ್ವದಲ್ಲಿ ಬೋಲ್ಶೆವಿಕರು ಅಧಿಕಾರಕ್ಕೆ ಬಂದರು. ಈ ಮಧ್ಯೆ ಅರಾಜಕತಾವಾದಿಗಳ ಹಲ್ಲೆ ಬೇರೆ.

ಯೂರಿ ಷಿವಾಗೋ ಸುತ್ತ ಭೂಮಿ ಕುಸಿಯುತ್ತಿದ್ದಂತೆ ಭಾಸವಾಯಿತು. ಎಲ್ಲಾ ಛಿದ್ರಛಿದ್ರವಾಗಿ ಹೋಗಿಬಿಡುವ ಸಾಧ್ಯತೆ ಹೆಚ್ಚಾಗಿತ್ತು. ಅವನು ಮಾಸ್ಕೋಗೆ ಹಿಂದಿರುಗುವ ವೇಳೆಗಾಗಲೇ ಗ್ರೋಮಿಕೋ ಕುಟುಂಬದವರ ಮನೆಯ ಒಂದು ಭಾಗದಲ್ಲಿ ಸರ್ಕಾರದ ಒಂದು ವಿಭಾಗ ತನ್ನ ಕಚೇರಿಯನ್ನು ಸ್ಥಾಪಿಸಿಕೊಂಡಿತ್ತು. ಕೋಲ್ಯಾ ಮಾಮ ಸ್ವಿಟ್ಜರ್ಲೆಂಡಿನಿಂದ ಹಿಂದಿರುಗಿದ್ದ. ಅವನ ಉತ್ಸಾಹಕ್ಕೆ ಎಲ್ಲೆಯೇ ಇದ್ದಂತೆ ಕಾಣುತ್ತಿರಲಿಲ್ಲ. ಯೂರಿ ಇದನ್ನೆಲ್ಲಾ ಕಂಡು ರೋಸಿಹೋದ. ಅವನಿಗೆ ಇದೆಲ್ಲಾ ಕೇವಲ ದಾಂಧಲೆಯಂತೆ ಕಂಡಿತು. ಯಾರಿಗೆ ಬೇಕು ಈ ಅಸಹ್ಯವಾದ ಗೊಂದಲ ? ಒಂದು ಸಂಸಾರಸುಖವೇ, ವ್ಯಕ್ತಿ ಸೌಖ್ಯವೆ, ನಾಗರಿಕ ಸೌಲಭ್ಯವೆ, ಸಾಂಸ್ಕೃತಿಕ ಜೀವನವೆ, ಕಲಾರಾಧನೆಯೆ, ಸ್ವತಂತ್ರ-ಸ್ವಚ್ಛಂದ ವ್ಯವಹಾರವೆ ? ಯಾವುದಕ್ಕೂ ಅವಕಾಶವಿಲ್ಲ. ಯೂರಿಗೆ ಜೀವನದಲ್ಲಿ ಕಾರ್ಮೋಡ ಕವಿದಂತಾಯಿತು. ಅವನು ಪೇಲವಗೊಂಡ. ನಿರುದ್ಯೋಗಿಯಾದ. ಯಾವುದಕ್ಕಾದರೂ ಅರ್ಥವಿದ್ದರೆ ಅದು ಸಂಸಾರಕ್ಕೆ, ಸಂಸಾರಸುಖಕ್ಕೆ, ವ್ಯಕ್ತಿಗತ ಪ್ರೇಮಕ್ಕೆ ಎಂದು ತೀರ್ಮಾನಿಸಿದ. ಆದರೆ ವೈಯಕ್ತಿಕವಾದದ್ದು ಏನೂ ಉಳಿದಿರಲಿಲ್ಲ. ರಷ್ಯದ ಅಂದಿನ ಪರಿಸರದಲ್ಲಿ ಎಲ್ಲವೂ ಸಾಮೂಹಿಕ, ಸಾರ್ವಜನಿಕವಾಗಿದ್ದಂತೆ ಅವನಿಗೆ ತೋರಿತು.

ಮಿತ್ರರಿಂದ ಅವನು ಸ್ಫೂರ್ತಿಯನ್ನಾಗಲಿ ಸಾಂತ್ವನವನ್ನಾಗಲಿ ಪಡೆಯಲಾರದವನಾದ. ಅವರ ಸಂಭ್ರಮ ಅವನಿಗೆ ಇನ್ನೂ ಘಾಸಿಯನ್ನುಂಟುಮಾಡಿತು.

ರಷ್ಯದ ಚಳಿಗಾಲ ಆ ವರ್ಷ ತೀವ್ರವಾಗಿಯೇ ಕಂಡುಬಂತು. ಮಾಸ್ಕೋದಲ್ಲಿ ಎಲ್ಲಿ ಹುಡುಕಿದರೂ ಕೊಳ್ಳಲು ಆಹಾರವಿಲ್ಲ. ಹಣಕ್ಕಂತೂ ಎಳ್ಳಷ್ಟೂ ಬೆಲೆಯಿಲ್ಲ. ಜೊತೆಗೆ ಭೀಕರವಾದ ಅಸ್ತವ್ಯಸ್ತತೆ. ಯಾವ ಪರಿಣಾಮ ಉಂಟಾಗಬಹುದೆಂದು ತರ್ಕಿಸಲು ಯಾರಿಗೂ ಶಕ್ಯವಿಲ್ಲ. ಉಳಿದಿದ್ದ ಅಲ್ಪಸ್ವಲ್ಪ ವಸ್ತುಗಳನ್ನು ಆಗೊಮ್ಮೆ ಈಗೊಮ್ಮೆ ಸಿಗುತ್ತಿದ್ದ ಆಹಾರಕ್ಕೆ ಬದಲಾಗಿ ಕೊಟ್ಟು ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗುವುದೊಂದೇ ಉಳಿದಿದ್ದ ಮಾರ್ಗ!

ಮನಸ್ಸಿಲ್ಲದಿದ್ದರೂ ಯೂರಿ ಮತ್ತೆ ಆಸ್ಪತ್ರೆಯೊಂದರಲ್ಲಿ ಡಾಕ್ಟರಾಗಿ ಕೆಲಸ ಆರಂಭಿಸುತ್ತಾನೆ. ಅದರ ಹೆಸರು 'ಎರಡನೆ ಸುಧಾರಿತ' ಆಸ್ಪತ್ರೆ. ಕ್ರಾಂತಿಯ ಮುನ್ನ ಅದು 'ಹೋಲಿ ಕ್ರಾಸ್ ಆಸ್ಪತ್ರೆ' ಆಗಿತ್ತು. ಹೊಸ ನಿಯಮಗಳ ಪ್ರಕಾರ ಯೂರಿಯ ಕುಟುಂಬ ಸಾಮೂಹಿಕ ಜೀವನಕ್ಕೆ ಒಗ್ಗಿಕೊಳ್ಳಬೇಕು, ಹೊಸ ಯಜಮಾನರನ್ನು ಒಪ್ಪಿಕೊಳ್ಳಬೇಕು. ಯೂರಿಗೆ ತಲೆ ಚಿಟ್ಟು ಹಿಡಿದುಹೋಗುತ್ತದೆ. ಬಳಲಿದ ಯೂರಿ ಟೈಫಾಯ್ಡ್‌ಗೆ ಗುರಿಯಾದಾಗ ಅವನಿಗೆ ತಿಳಿಯದಂತೆ ಎನ್‌ಗ್ರಾಫ್ ಅವನಿಗೆ ನೆರವಾಗುತ್ತಾನೆ. ಮನೆಗೆ ಬೇಕಾದುದನ್ನೆಲ್ಲ ಅವನು ಎಲ್ಲಿಂದಲೋ ಸರಬರಾಜು ಮಾಡಿಸುತ್ತಾನೆ. ಅವನು ಗುಣಮುಖನಾದ ಮೇಲೆ ಮಾಸ್ಕೋ ಮತ್ತು ಕ್ರಾಂತಿಯ ಜಂಜಾಟದಿಂದ ಪಾರಾಗಲು ಇಡೀ ಕುಟುಂಬ ಉರಾಲ್ ಪ್ರದೇಶಕ್ಕೆ ಹೋಗಿ ವರೀಕಿನೋದಲ್ಲಿ ನೆಲೆಸಲು ನಿರ್ಧರಿಸುತ್ತಾರೆ. ಟೋನ್ಯಳ ತಂದೆ ಅಲೆಗ್ಸಾಂಡರ್ ಗ್ರೋಮಿಕೋ ವಿಶ್ವವಿದ್ಯಾನಿಲಯದಿಂದ ನಿರ್ಗಮಿಸಲು ಅಂಜುವುದಿಲ್ಲ. ಪ್ರಯಾಣ ಬೆಳೆಸಲು ರೈಲುಗಳು ಬೇಕು, ಪರವಾನಗಿ ಬೇಕು. ಯಾವುದಕ್ಕೂ ಒಂದು ಕ್ರಮವಿಲ್ಲ , ಎಲ್ಲಿ ಹೋದರೂ ಮುಗಿಯದ ಕ್ಯೂಗಳು. ಅಂತೂ 1918ರ ಮಾರ್ಚ್‌ನಲ್ಲಿ ಪ್ರಯಾಣ ಸಾಗಿತು. ರೈಲಿನ ಗದ್ದಲ ಅಸಹನೀಯ. ಪ್ರಯಾಣಿಕರಂತೂ ಯಾವ ಯಾವ ವರ್ಗಕ್ಕೋ ಸೇರಿದವರು ; ತಲೆ ಮಾಸಿದವರು, ಬಟ್ಟೆ ನಾರುತ್ತಿದ್ದವರು, ಜಗಳಗಂಟಿಗಳು, ಮೋಸಗಾರರು, ಸೈನ್ಯ ಬಿಟ್ಟೋಡಿ ಬಂದವರು, ಇತ್ಯಾದಿ. ಒಬ್ಬ ಬೋಲ್ಶೆವಿಕ್ ಸೈನಿಕನಂತೂ ನಿಲ್ದಾಣವೊಂದರಲ್ಲಿ ಹಳ್ಳಿಯ ಮುದುಕಿಯೊಬ್ಬಳ ಕೋಳಿಯನ್ನೇ ಕೊಂಡುಹೋದ. ಹಣ ಕೇಳಿದರೆ ಬೆದರಿಕೆ ಹಾಕಿದ. ಹಾದಿಯುದ್ದಕ್ಕೂ ಹಳ್ಳಿಗಳ ನೀರವತೆ. ಜೀವನದ ಗುರುತಿದ್ದಲ್ಲಿ ಕಾದಾಟಗಳು. ಬೋಲ್ಶೆವಿಕರ ವಿರುದ್ಧ ಸೈನ್ಯಾಧಿಪತಿ ಕೋಲ್ಚಾಕನ ನೇತೃತ್ವದಲ್ಲಿ ಒಳಸಂಚು, ಪಿತೂರಿ ಜರುಗುತ್ತಿತ್ತು. ವಿದೇಶೀ ಹಸ್ತಕ್ಷೇಪವೂ ಸಾಕಷ್ಟಿತ್ತು. (ಪಾಸ್ಟರ್‌ನಾಕ್ ಇದನ್ನು ಎಲ್ಲೂ ನಮೂದಿಸುವುದಿಲ್ಲ .) ಹಳ್ಳಿಗಳು ಕೆಂಪು ಸೈನ್ಯದಿಂದ ಆವೃತರಾದಾಗ ಅವು ಬೋಲ್ಶೆವಿಕರ ಪರ, ಕೋಲ್ಚಾಕ್ ಮುತ್ತಿಗೆ ಹಾಕಿ ಅವನ್ನು

ವಶಪಡಿಸಿಕೊಂಡಾಗ ಅವು ಬಿಳಿಸೈನ್ಯದ ಪರ ! ಹಾದಿಯಲ್ಲಿ ದುರ್ಗಮವಾದ ಮಂಜು. ಪ್ರಯಾಣಿಕರೇ ರೈಲ್ವೆ ಹಳಿಗಳಿಂದ ಮಂಜನ್ನು ಎತ್ತಿ ಹಾಕಿ ರೈಲಿಗೆ ಹಾದಿ ಮಾಡಿಕೊಳ್ಳಬೇಕು.

ಯೂರಿಯ ಕುಟುಂಬ ತೆರಳುತ್ತಿದ್ದುದು ಪೂರ್ವ ರಷ್ಯಕ್ಕೆ, ಯುರ್ಯಾತಿನ್ ಪ್ರಾಂತ್ಯಕ್ಕೆ. ಅಲ್ಲಿ ಕೋಲ್ಚಾಕ್ ಸೈನ್ಯದ ಹಿಡಿತವಿದೆ. ಗಲಿಯುಲಿನ್ ಬಿಳಿಸೈನ್ಯದ ಅಧಿಕಾರಿ. ಸದ್ಯದಲ್ಲೇ ಯುರ್ಯಾತಿನ್ ಪಟ್ಟಣ ಅವನ ಕೈವಶವಾಗಬಹುದು. ಕೆಂಪು ಸೈನ್ಯದ ನೇತಾರ ಇಡೀ ಪ್ರಾಂತದಲ್ಲಿ ಹೆಸರುವಾಸಿಯಾದ ಸ್ಟ್ರೆಲ್ನಿಕೋವ್. ರೈಲ್ವೆ ನಿಲ್ದಾಣವೊಂದರಲ್ಲಿ ರೈಲು ಡಬ್ಬಿಯೊಂದರಲ್ಲಿ ಅವನ ವಾಸ. ಅಲ್ಲೇ ಅವನ ಕಚೇರಿ. ಅವನು ಬೋಲ್ಶೆವಿಕ್ ಪಕ್ಷಕ್ಕೆ ಸೇರಿಲ್ಲದಿದ್ದರೂ ಮಿಲಿಟರಿ ತಜ್ಞನಾದ್ದರಿಂದ ಕೆಂಪು ಸೈನ್ಯದಲ್ಲಿ ಅವನಿಗೆ ಅಗ್ರಸ್ಥಾನ. ಅವನು ಬೇರಾರೂ ಅಲ್ಲ ಪಾವೆಲ್ ಆಂಟಪೋವ್, ಲಾರಾಳ ಗಂಡ. ಲಾರಾ ಮತ್ತು ಅವಳ ಮಗಳು ಯುರ್ಯಾತಿನ್‌ನಲ್ಲೇ ಇದ್ದರೂ ಸ್ಟ್ರೆಲ್ನಿಕೋವ್ ಅವರನ್ನು ಭೇಟಿಯಾಗಿಲ್ಲ, ಭೇಟಿಯಾಗುವ ಯೋಚನೆಯೂ ಇಲ್ಲ. ಈ ನಿಲ್ದಾಣದಲ್ಲಿ ಯೂರಿಯ ರೈಲು ನಿಂತುಬಿಟ್ಟಿತು. ಯೂರಿ ಅಡ್ಡಾಡಲು ಉಪಕ್ರಮಿಸಿದ. ಸಂದೇಹಾಸ್ಪದ ಚಲನವಲನಗಳಿಂದಾಗಿ ಬೇಹುಗಾರನೆಂದು ಶಂಕಿಸಲಾದ ಯೂರಿಯನ್ನು ಸ್ಟ್ರೆಲ್ನಿಕೋವ್ ಬಳಿ ಹಾಜರುಪಡಿಸಲಾಯಿತು. ಅವನನ್ನು ಕಂಡಾಗ ಯೂರಿಗೆ ಇಡೀ ಕ್ರಾಂತಿಯ ನಾಯಕತ್ವದ ಬಗ್ಗೆ ಬೇಸರವೆನಿಸಿತು. ಇವರೆಲ್ಲಾ ನಿರ್ಹೃದಯಿಗಳು, ವ್ಯಕ್ತಿತ್ವವಿಲ್ಲದವರು, ಕಠೋರಜೀವಿಗಳು, ಯಾಂತ್ರಿಕವಾಗಿ ಚಿಂತಿಸುವವರು, ಕ್ರಿಯಾಶಕ್ತಿರಹಿತರು, ಜೀವದ ಬಗ್ಗೆ ಗೌರವವಿಲ್ಲದವರು, ಇತ್ಯಾದಿ. ಯೂರಿಯನ್ನು ಗುಂಡಿಕ್ಕಿ ಕೊಲ್ಲದೆ ಸ್ಟ್ರೆಲ್ನಿಕೋವ್ ಅವನನ್ನು ಬಿಡುಗಡೆ ಮಾಡಿದ. ಯೂರಿಯ ಕುಟುಂಬ ವರೀಕಿನೋಗೆ ಬಂದರು. ರೈಲಿನಲ್ಲಿ ಸ್ಯಾಮ್‌ದೆವ್ಯತೋವನ ಪರಿಚಯವಾಗಿತ್ತು. ಯುರ್ಯಾತಿನ್‌ನಲ್ಲಿ ಕ್ರಾಂತಿಯ ನಂತರವೂ ಅವನು ಪ್ರಭಾವಶಾಲೀ ವ್ಯಕ್ತಿ, ಕ್ರೂಗರ್ ಕುಟುಂಬವನ್ನು ಬಲ್ಲವ ; ವರೀಕಿನೋದಲ್ಲಿ ಆಸ್ತಿಯ ಮೇಲ್ವಿಚಾರಕ ಮಿಕುಲಿಟ್ಸಿನ್ ಬಗ್ಗೆ ಯೂರಿಗೆ ಅವನೇ ತಿಳುವಳಿಕೆ ನೀಡಿದ್ದು. ಮಾರ್ಕ್ಸ್‌ವಾದದ ಬಗ್ಗೆ ಅವನ ಅಭಿಪ್ರಾಯ ಯೂರಿಯ ಅಭಿಪ್ರಾಯದಿಂದ ಅಭಿನ್ನವಾದದ್ದು : 'ಮಾರ್ಕ್ಸ್‌ವಾದ ಒಂದು ವಿಜ್ಞಾನವೆ ? ಅದನ್ನು ಚರ್ಚಿಸುವುದೇ ಹಾಸ್ಯಾಸ್ಪದ. ವಿಜ್ಞಾನವೆನಿಸಿಕೊಳ್ಳಲು ಅದಕ್ಕೆ ನಿರ್ಧಾರಿತ ನಿಲುವಾದರೂ ಉಂಟೆ ? ವಿಜ್ಞಾನವೆಂದರೆ ವಸ್ತುನಿಷ್ಠತೆ ಇರಬೇಕು. ಅಹಂಭಾವದಿಂದ ಉಕ್ಕಿ ಹರಿಯುವ ಮಾರ್ಕ್ಸ್‌ವಾದಿ ಚಳುವಳಿಗೂ ವಸ್ತುನಿಷ್ಠತೆಗೂ ಎಲ್ಲಿಯ ಸಂಬಂಧ ?' ಇದು ಬಹುಶಃ ನಮ್ಮ ನಡುವೆ ಇರುವ ಅನೇಕ ಬುದ್ಧಿಜೀವಿಗಳ ಪ್ರತಿಕ್ರಿಯೆಗಿಂತ ಆಳವಾದುದೇನೂ ಅಲ್ಲ. ಪಾಸ್ತರ್‌ನಾಕ್‌ಗೆ ಇದೇ ಸತ್ಯದ ಪರಾಕಾಷ್ಠೆ, ಅದನ್ನು ದೂಷಿಸುವುದೇ ಮಾನವತೆಯ ಕುರುಹು.

ವರೀಕಿನೋದಲ್ಲಿ ಇವರನ್ನು ಕಂಡಾಗ ಮಿಕುಲಿಟ್ಸಿನ್‌ಗೆ ಆದರವಿಲ್ಲ; ಬದಲು ಒಂದು ರೀತಿಯ ಕೋಪ. ಹೇಗೋ ಅವರನ್ನು ಇರಗೊಡುತ್ತಾನೆ. ಯೂರಿಗೆ ಈಗ ಸ್ವಲ್ಪ ಸಮಾಧಾನ.

ತನ್ನ ವಿರಾಮವನ್ನೆಲ್ಲಾ ಅಧ್ಯಯನದಲ್ಲಿ ಕಳೆಯಬಹುದು. ಯಾವ ಕೆಲಸದ ಬಾಧೆಯೂ ಇಲ್ಲ, ರಾಜಕೀಯ ಗೊಂದಲದ ಕಾವೂ ಮುಟ್ಟಲಾರದು. ಜೀವನವೆಂದರೆ ಇದು ; ಎಲ್ಲಿಯ ವರ್ಗ ವೈಷಮ್ಯ, ಎಲ್ಲಿಯ ಹೋರಾಟ ? ಸ್ವತಃ ಪುಷ್ಕಿನ್ ಸಹ ಹೇಳಿದ್ದಂತೆ ಸಂಸಾರಸುಖಕ್ಕಿಂತಲೂ ಮಾನವ ಅರಸಬಹುದಾದದ್ದೇನಿದೆ ? ಯೂರಿ ಇದೇ ಗುಂಗಿನಲ್ಲಿದ್ದುಕೊಂಡು ಪ್ರತಿದಿನ ಅಧ್ಯಯನಕ್ಕೆಂದು ಯುರ್ಯಾತಿನ್ ಪಟ್ಟಣದ ಗ್ರಂಥಭಂಡಾರದಲ್ಲಿ ಹಲವು ಗಂಟೆಗಳನ್ನು ಕಳೆಯುತ್ತಾನೆ. ಸ್ಯಾಮ್‌ದೆವ್ಯತೋವ್ ಕೊಟ್ಟಿರುವ ಕುದುರೆ ಇವನಿಗೆ ವಾಹನ. ಗ್ರಂಥ ಭಂಡಾರದಲ್ಲಿ ಒಬ್ಬಾಕೆ ಏಕಾಗ್ರತೆಯಿಂದ ವ್ಯಾಸಂಗ ಮಾಡಲು ಬರುತ್ತಾಳೆ. ಆಕೆ ಒಬ್ಬ ಅಧ್ಯಾಪಕಿ. ಅವಳೇ ಲಾರಾ. ಬೋಲ್ಶೆವಿಕರ ಕಚೇರಿಯ ಎದುರೇ ಆಕೆಯ ವಾಸ. ಮನೆಯಲ್ಲೆಲ್ಲಾ ಇಲಿಗಳ ಅತಿಸಂತಾನ. ಯೂರಿಯನ್ನು ಆಕೆ ಅಲ್ಲಿಗೆ ಕರೆದೊಯ್ಯುತ್ತಾಳೆ. ಸ್ಟ್ರೆಲ್ನಿಕೋವ್ ತನ್ನ ಪತಿಯೆಂಬುದು ಅವಳಿಗೆ ತಿಳಿದಿದೆ. ಯೂರಿಗೂ ತಿಳಿಸುತ್ತಾಳೆ. ಕೆಂಪು ಸೈನ್ಯಕ್ಕೆ ಅವನ ಅವಶ್ಯಕತೆ ಇರುವುದರಿಂದ ಬೋಲ್ಶೆವಿಕರು ಅವನನ್ನು ಸಹಿಸಿಕೊಂಡಿದ್ದಾರೆ, ವಿಜಯ ಸಾಧಿಸಿದ ನಂತರ ಅವರು ಅವನನ್ನು ನಿರ್ನಾಮಗೊಳಿಸುವುದು ಖಚಿತವೆಂದು ಅವಳ ಅನಿಸಿಕೆ. ಆದರೂ ಕ್ರಾಂತಿಯನ್ನು ಕುರಿತಂತೆ ಅವಳು ಯೂರಿಯ ಅಭಿಪ್ರಾಯ ವನ್ನೊಪ್ಪುವವಳಲ್ಲ. ಬಡತನವನ್ನೂ ಕಂಡಿದ್ದ ಅವಳಿಗೆ ಗಲಿಯುಲಿನ್‌ನಂತಹವನು ಬಿಳಿಸೈನ್ಯಕ್ಕೆ ಅಧಿಕಾರಿಯಾಗುವುದೆಂದರೆ ವಿಸ್ಮಯ. ಕ್ರಾಂತಿಯ ಫಲ ತಕ್ಷಣದಲ್ಲೇ ಮೂಡಿಬರಬೇಕೆಂದು ಭಾವಿಸುವ ಭ್ರಾಂತಿಯೂ ಅವಳಲ್ಲಿಲ್ಲ. ಸಮಾಜದ ಬೆಳವಣಿಗೆ ಎಷ್ಟು ಕಷ್ಟಸಾಧ್ಯವೆಂಬ ಅರಿವು ಅವಳಲ್ಲಿದೆ. ತಾನು ಬಾಲ್ಯದಿಂದಲೂ ಕಂಡಿದ್ದ ಪಾಶಾ ಮತ್ತು ಗಲಿಯುಲಿನ್ ಕೆಂಪು ಸೈನ್ಯ ಮತ್ತು ಬಿಳಿಸೈನ್ಯಗಳಲ್ಲಿದ್ದಾರೆ. ಪ್ರಪಂಚ ಎಷ್ಟು ತಮಾಷೆಯದು !

ಯುರ್ಯಾತಿನ್‌ನಿಂದ ವರೀಕಿನೋಗೆ ಹಿಂದಿರುಗುತ್ತಿದ್ದಾಗ ಒಂದು ಸಂಜೆ ಯೂರಿಯನ್ನು ಕೆಲವರು ಅಡ್ಡಗಟ್ಟಿ ತಮ್ಮ ಬಣದ ಸೈನ್ಯಕ್ಕೆ ಚಿಕಿತ್ಸಾಧಿಕಾರಿಯಾಗಬೇಕೆಂದು ಎಳೆದೊಯ್ದರು. ಇವನು ವೃತ್ತಿಯನ್ನೇ ಬಿಟ್ಟಿದ್ದ ; ಈಗ ಬಂಧನಕ್ಕೆ ಸಿಕ್ಕಿ ಮತ್ತೆ ಡಾಕ್ಟರಾಗಬೇಕಾಯಿತು. ಟಿವರ್ಜಿನ್, ಆಂಟಿಪೋವ್ (ಪಾಶಾನ ತಂದೆ), ಇತ್ಯಾದಿಗಳೆಲ್ಲಾ ಈ ಪ್ರಾಂತ್ಯದಲ್ಲಿ ಸಕ್ರಿಯರಾಗಿದ್ದುಕೊಂಡು ಕೋಲ್ಚಾಕನ ವಿರುದ್ಧ ಜನರನ್ನು ಅಣಿಗೊಳಿಸಲು ಶ್ರಮಿಸುತ್ತಿದ್ದಾರೆ. ಮಿಕುಲಿತ್ಸಿನ್ನನ ಮಗ ಲೈಬೀರಿಯಸ್ ಇಲ್ಲಿ ಕೆಂಪು ಸೈನ್ಯದ ತುಕಡಿಯ ಅಧಿಕಾರಿ. ಯೂರಿಯ ಪ್ರಕಾರ ಅವನೊಬ್ಬ ಕಡುಮೂರ್ಖ. ಅವನ ಸಹವಾಸದಿಂದ ಯೂರಿ ಕೆಂಡವಾಗುತ್ತಾನೆ. ಅವನ ಜೊತೆ ಚರ್ಚೆಯೆಂದರೆ ಯೂರಿಗೆ ಎಲ್ಲಿಲ್ಲದ ರೋಷ. ಕೆಲವೊಮ್ಮೆ ಬಿಳಿಸೈನ್ಯದವರೇ ತನ್ನ ನಿಜವಾದ ಆಪ್ತರು ಎಂಬ ಭಾವನೆ ಯೂರಿಯಲ್ಲಿ ಉಗ್ರವಾಗಿ ಕಾಣಬರುತ್ತದೆ. (ಕಾದಂಬರಿಯ ಹನ್ನೊಂದನೆ ಅಧ್ಯಾಯದ ನಾಲ್ಕನೆಯ ಪ್ರಕರಣದಲ್ಲಿ ಪಾಸ್ಟರ್‌ನಾಕ್ ಇದನ್ನು ಸಮಗ್ರವಾಗಿ ವಿವರಿಸಿದ್ದಾರೆ). ಬೋಲ್ಶೆವಿಕರು ಮಾನವನ ಜೀವನವನ್ನೇ ಕಲುಷಿತಗೊಳಿಸುತ್ತಿದ್ದಾರೆ, ಜನಮನದ ಮೇಲೆ ತಮ್ಮ ಚಿಂತನೆಯನ್ನು

ಹೇರುತ್ತಿದ್ದಾರೆ, ಎಂಬ ಭಾವನೆ ಅವನನ್ನು ಉದ್ವಿಗ್ನಗೊಳಿಸುತ್ತದೆ. ಈ ಮಧ್ಯೆ ಯುರ್ಯಾತಿನ್ ಬಳಿ ಬಿಳಿ ಸೈನ್ಯ ಕರಾಳಹಿಂಸೆಯಲ್ಲಿ ತೊಡಗಿದೆಯೆಂಬ ವಾರ್ತೆ ಬರುತ್ತದೆ. ಹೇಗಾದರೂ ತಾನು ವರೀಕಿನೋಗೆ ತೆರಳಿ ಕುಟುಂಬವನ್ನು ಸೇರಿಕೊಳ್ಳಬೇಕೆಂಬ ಹಂಬಲ ಅವನಲ್ಲಿ ಪ್ರಬಲಗೊಳ್ಳುತ್ತದೆ. ಅಂತೆಯೇ ಅವನು ತಪ್ಪಿಸಿಕೊಂಡು ಯುರ್ಯಾತಿನ್‌ಗೆ ಬಂದ. ಕುಟುಂಬ ವರೀಕಿನೋದಲ್ಲಿರಲಿಲ್ಲ. ಎಲ್ಲಿ ಹೋಗಿದ್ದರೋ ತಿಳಿಯದಾದ. ಅಲ್ಲೂ ಭೀಕರ ಕ್ಷಾಮ. ಆದರ ಮಧ್ಯೆ ಬೋಲ್ಶೆವಿಕರ ಹೊಸ ಆದೇಶಗಳು, ಸಂದೇಶಗಳು, ಆಶ್ವಾಸನೆಗಳು.

ಅಲೆಕ್ಸಾಂಡರ್ ಗ್ರೋಮಿಕೋ ಹೊಸ ಸರ್ಕಾರದ ಆಣತಿಯಂತೆ ಮಾಸ್ಕೋಗೆ ಹಿಂದಿರುಗಿ ಸಲಹೆಗಾರನಾಗಿ ನಿಯಮಿತನಾಗಿದ್ದ. ಕುಟುಂಬ ಅವನೊಡನೆ ತೆರಳಿತ್ತು. ಯೂರಿಗೂ ಅಲ್ಲಿಗೆ ಹೋಗಬೇಕೆಂಬ ಅಭಿಲಾಷೆ. ಆದರೆ ಮತ್ತೆ ಅವನು ಅನಾರೋಗ್ಯದಿಂದ ಹಾಸಿಗೆ ಹಿಡಿದ. ಲಾರಾ ಅವನ ಶುಶ್ರೂಷೆ ಮಾಡಿದಳು. ಪಾಶಾ ತನ್ನಲ್ಲಿಗೆ ಮರಳಿಬಾರನೆಂದು ಅವಳಿಗೆ ಖಚಿತವಾಗಿತ್ತು ; ಕ್ರಾಂತಿ ಅವನನ್ನು ಆಹುತಿ ತೆಗೆದುಕೊಳ್ಳುತ್ತದೆಂಬುದು ಅವಳಿಗೆ ನಿಸ್ಸಂಶಯ. ಸ್ವಲ್ಪ ಚೇತರಿಸಿಕೊಂಡ ನಂತರ ಯೂರಿ ಯಾವುದೋ ಒಂದು ಆಸ್ಪತ್ರೆಯಲ್ಲಿ ಮತ್ತೆ ಕೆಲಸಕ್ಕೆ ಸೇರಿಕೊಂಡ. ತನ್ನನ್ನು ದಸ್ತಗಿರಿ ಮಾಡಲು ಕೆಂಪುಸೈನ್ಯ ಹೊಂಚುಹಾಕುತ್ತಿದೆಯೆಂದು ಅವನ ಭೀತಿ. ಆಗ ಕೋಮರೋವ್‌ಸ್ಕಿ ಮತ್ತೆ ಎಲ್ಲಿಂದಲೋ ಪ್ರತ್ಯಕ್ಷನಾದ. ಕ್ರಾಂತಿಯ ನಂತರವೂ ಅಂತಹ ದುಷ್ಟ ಕುಟಿಲಮತಿಗೆ ಅಂಜಿಕೆ, ಅಧೈರ್ಯ, ಅಥವಾ ಸೋಲು ಉಂಟಾಗಿರಲಿಲ್ಲ. ಬಹುಶಃ ಸಂಕಷ್ಟಗಳೆಲ್ಲಾ ತನ್ನಂತಹ ಒಳ್ಳೆಯವರಿಗೆ ಮಾತ್ರವೇ ಏನೋ ಎಂದು ಯೂರಿ ಬಗೆದ. ಸ್ಟ್ರೆಲ್ನಿಕೋವ್ ಆಗಲೇ ಅಪಖ್ಯಾತಿಯತ್ತ ಸಾಗುತ್ತಿದ್ದ. ಬೋಲ್ಶೆವಿಕರು ತಮ್ಮ ಸ್ಥಾನ ಭದ್ರಪಡಿಸಿಕೊಂಡ ಮೇಲೆ ಅವನಿಂದ ಅವರಿಗಾಗಬೇಕಾದ್ದೇನಿತ್ತು? ಕ್ರಮೇಣ ಲಾರಾಳಿಗೂ ಉರುಳು ಬೀಳಬಹುದೆಂಬ ಶಂಕೆ ಅವಳನ್ನೂ ಬಾಧಿಸುತ್ತಿತ್ತು. ಇದರಿಂದ ತಪ್ಪಿಸಿಕೊಳ್ಳಲು ಮಾಸ್ಕೋಗೆ ತೆರಳಿ ಅಲ್ಲಿಂದ ಮಂಗೋಲಿಯಾಕ್ಕೆ ಪಾರಾಗಿ ತನ್ನೊಡನಿರುವಂತೆ ಲಾರಾಳಿಗೆ ಕೊಮರೋವ್ಸ್ಕಿ ನಿವೇದಿಸಿ ಕೊಂಡ. ಸ್ಟ್ರೆಲ್ನಿಕೋವ್ ಇರುವ ಪ್ರದೇಶದಲ್ಲೇ ತಾನಿರಬೇಕೆಂದು ಲಾರಾ ಆಶಿಸಿದಳು.

ಯೂರಿಗೆ ಮಾಸ್ಕೋದಿಂದ ಪತ್ರ ಬಂದಿತು. ತನ್ನ ಮಾವ ಮತ್ತು ಹೆಂಡತಿಯೂ ಸೇರಿದಂತೆ ಹಲವರು ಬೋಲ್ಶೆವಿಕ್ ಸರ್ಕಾರದ ಆಜ್ಞೆಯಂತೆ ದೇಶ ಬಿಟ್ಟು ಹೊರಡಬೇಕಾಗಿದೆಯೆಂಬ ಸಮಾಚಾರ ಅವನನ್ನು ಹುಚ್ಚನನ್ನಾಗಿಸಿತು. ಟೋನ್ಯಾ ತನ್ನ ಪ್ರೇಮ ಮತ್ತು ಆತಂಕಗಳನ್ನು ಪತ್ರದಲ್ಲಿ ಹೃದಯದಾಳದಿಂದ ತೋಡಿಕೊಂಡಿದ್ದಳು. ಅವರು ಪ್ಯಾರಿಸ್ಸಿಗೆ ಹೊರಡುವ ತಯಾರಿ ನಡೆಸುತ್ತಿದ್ದರು. ಲಾರಾಳೊಂದಿಗೆ ಯೂರಿಯ ಸಂಬಂಧ ಅತಿ ಹೆಚ್ಚಿನ ಅನುರಾಗದಿಂದ ಕೂಡಿತ್ತು. ಇಬ್ಬರೂ ಆಪತ್ತನ್ನೆದುರಿಸಬೇಕಾಗಿದ್ದವರು. ಮತ್ತೆ ವರೀಕಿನೋಗೆ ತೆರಳಲು ತೀರ್ಮಾನಿಸಿ ಅಲ್ಲಿಗೆ ಹೋದಾಗ ಅವರಿಗೆ ಕಂಡಿದ್ದು ಯಾರೂ ವಾಸಿಸಿರದ ಮನೆ. ಸುತ್ತ ಎಲ್ಲೂ ಮನುಷ್ಯ ಜೀವಿಗಳ ಸುಳಿವಿರಲಿಲ್ಲ. ಮನೆಯ ಸುತ್ತ

ಕಾಡಿನಲ್ಲಿ ತೋಳಗಳ ಗುಂಪೇ ವಾಸವಾಗಿತ್ತು. (ಯೂರಿ ಮತ್ತು ಲಾರಾ ಬೋಲ್ಶೆವಿಕ್ ತೋಳಗಳಿಂದ ಕ್ರಮೇಣ ಆವರಿಸಲ್ಪಟ್ಟಿದ್ದರೆಂದು ಸೂಚಿಸಲು ಪಾಸ್ಟರ್‌ನಾಕ್ ಬಳಸುವ ಪ್ರತೀಕ ಇದು.) ಹಾಗಿದ್ದಾಗ್ಯೂ ಕೆಲಕಾಲ ಅವರು ನಿರಾತಂಕದಿಂದ ಜೀವನ ಸಾಗಿಸಿದರು. ಕೋಮರೋವ್ಸ್ಕಿ ಮತ್ತೆ ಬಂದು ಯೂರಿಯನ್ನೊಪ್ಪಿಸಿ ಲಾರಾಳನ್ನು ಮಾಸ್ಕೋ ಮುಖಾಂತರ ಮಂಗೋಲಿಯಾಕ್ಕೆ ಕರೆದೊಯ್ದ. ತಾನೂ ಅವಳನ್ನು ಹಿಂಬಾಲಿಸುವುದಾಗಿ ಯೂರಿ ಅವಳಿಗೆ ಸಮಾಧಾನಪಡಿಸಲು ಸುಳ್ಳು ಹೇಳಿದ. ತೀವ್ರ ದುಗುಡದಿಂದ ಕಂಗಾಲಾಗಿದ್ದ ಯೂರಿ ಅವಳಿಗೆ ಅಂತಿಮ ವಿದಾಯ ಹೇಳಲು ಸಹ ಅಶಕ್ತನಾದ. ಸ್ಟ್ರೆಲ್ನಿಕೋವನನ್ನು ಬೋಲ್ಶೆವಿಕರು ಗುಂಡಿಟ್ಟು ಕೊಂದಿದ್ದರೆಂದು ಕೋಮರೋವ್ಸ್ಕಿ ಲಾರಾಗೆ ಹೇಳಿ ಅವಳ ಮನವೊಪ್ಪಿಸಿದ್ದ. ಆದರೆ ಅವಳು ತೆರಳಿದ ತರುವಾಯದಲ್ಲಿ ಸ್ಟ್ರೆಲ್ನಿಕೋವ್ ಯೂರಿ ಇದ್ದಲ್ಲಿಗೆ ಬಂದು ಲಾರಾಳಲ್ಲಿ ಆವರಿಸಿದ್ದ ಉತ್ಕಟ ಪ್ರೇಮ ಮತ್ತು ಆದರಗಳನ್ನು ತೋಡಿಕೊಂಡ ; ಮಾರನೆಯ ದಿನ ತನ್ನನ್ನು ತಾನು ಗುಂಡಿಕ್ಕಿ ಕೊಂದುಕೊಂಡ. ಯೂರಿಗೆ ಒಂಟಿತನ ಹಾಗೂ ಭೀತಿ ಇಂದು ಉಪದ್ರವವಾಗಿ ತಾನೂ ಮಾಸ್ಕೋಗೆ ತೆರಳಲು ಸಿದ್ಧನಾದ. ಬಹುತೇಕ ನಡೆಯುತ್ತಲೇ ದಾರಿ ಸವೆಸಿ ಕಡೆಗೆ ರೈಲೊಂದರಲ್ಲಿ ಮಾಸ್ಕೋ ತಲುಪಿದ ; ಹಾದಿಯಲ್ಲಿ ಒಬ್ಬ ಹುಡುಗ ಅವನನ್ನು ಸೇರಿಕೊಂಡಿದ್ದ.

ಡಾಕ್ಟರಾಗಿ ಯೂರಿ ಮುಂದುವರಿಯುವಂತಿರಲಿಲ್ಲ, ಅವನ ಎಲ್ಲಾ ಕ್ರಿಯಾಶಕ್ತಿ, ಮೇಧಾಶಕ್ತಿಗಳೂ ನಶಿಸಿಹೋಗಿದ್ದುವು. ಕವಿ ಅಥವಾ ಲೇಖಕನಾಗಿ ಉಳಿಯುವುದೂ ಅವನಿಗೆ ಅಸಾಧ್ಯವಾಗಿತ್ತು. ಎಲ್ಲೆಲ್ಲೂ ಹಿಂಸೆ, ಅಮಾನವೀಯತೆ ಮತ್ತು ಸಂಶಯ ತಾಂಡವವಾಡುತ್ತಿದ್ದುದನ್ನು ಅವನು ಗಮನಿಸಿದ್ದ. ಅವನೊಡನೆ ಬಂದಿದ್ದ ವಾಸ್ಯ ಓದುಬರಹ ಕಲಿಯತೊಡಗಿದ್ದ. ಯೂರಿಯ ಹಿಂದಿನ ಕವನಗಳನ್ನು ಲೇಖನಗಳನ್ನು ಪ್ರಕಾಶಿಸುವುದರಲ್ಲಿ ಅವನು ಮುಂದಾದ. ಯೂರಿಯ ಚೈತನ್ಯ ಕಮರಿಹೋಗಿತ್ತು ; ಆದರೆ ಅವನ ಸಾಹಿತ್ಯ ಮಾಸ್ಕೋದ ಪ್ರತಿಷ್ಠಿತರ ನಡುವೆ ಪ್ರಸಿದ್ಧಿ ಪಡೆಯುತ್ತಿತ್ತು. ಅವನನ್ನರಿಯದವರು ಅವನ ಬಗ್ಗೆ ವಿಶೇಷ ಮೆಚ್ಚುಗೆಯ ಮಾತನ್ನಾಡುತ್ತಿದ್ದರು. ಎಲ್ಲವನ್ನೂ ತೊರೆದಿದ್ದ ಯೂರಿ ಯಾವ ಗುರಿಯೂ ಇಲ್ಲದೆ ಬಡತನದಲ್ಲಿ ಚಡಪಡಿಸುತ್ತಿದ್ದ. ಹಿಂದೆ ಕಾವಲುಗಾರನಾಗಿದ್ದ ಮಾರ್ಕೆಲ್‌ನ ಮಗಳು ಮರಿನಾ ಈಗ ಅವನ ಜೊತೆಗಾರ್ತಿ. ವಿವಾಹವಾಗದೆ ಅವಳಲ್ಲಿ ಯೂರಿ ಇಬ್ಬರು ಮಕ್ಕಳನ್ನು ಪಡೆದ. ಸೋವಿಯತ್ ಬುದ್ಧಿಜೀವಿಗಳನ್ನು ಕಂಡರೆ ಯೂರಿಗೆ ಜುಗುಪ್ಸೆ. ಅವನ ಬಾಲ್ಯ ಸ್ನೇಹಿತರಾದ ಮಿಶಾ ಮತ್ತು ಡ್ಯುಡರೋವ್ ಯೂರಿ ತನ್ನ ಕೌಶಲ್ಯವನ್ನು ಉಪೇಕ್ಷಿಸಿ ಕಂದಿಹೋಗಬಾರದೆಂದು ಸಲಹೆ ನೀಡಿದರು. ಅವರೆಲ್ಲಾ ವ್ಯಕ್ತಿತ್ವ ಕಳೆದುಕೊಂಡವರೆಂದು ಯೂರಿ ಅವರನ್ನು ಧಿಕ್ಕರಿಸಿದ. ಹೀಗೇ ಇರುತ್ತಿದ್ದಾಗ ಒಂದು ಸಂಜೆ ಅವನು ಅದೃಶ್ಯನಾದ. ಸಹೋದರ ಎವ್‌ಗ್ರಾಫ್ ಅವನಿಗೆ ಒಂದು ನೆಲೆ ಮಾಡಿಕೊಟ್ಟು ಅವನ ಚೈತನ್ಯ ಮತ್ತೆ ಉಕ್ಕಿ ಹರಿಯುವಂತೆ ಮಾಡಲು ಯತ್ನಿಸಿದ. ಆದರೆ ಒಂದು ಸಂಜೆ

ಜನಜಂಗುಳಿಯ ಮಧ್ಯೆ ರಸ್ತೆಯಂಚಿನಲ್ಲೇ ಯೂರಿ ಕುಸಿದುಬಿದ್ದ, ಮರಣ ಹೊಂದಿದ. ಅವನ ಅಂತಿಮ ಸಂಸ್ಕಾರದಂದು ಲಾರಾ ಎಲ್ಲಿಂದಲೋ ಪ್ರತ್ಯಕ್ಷಳಾಗಿದ್ದಳು ; ಆದರೆ ಮಾರನೆಯ ದಿನ ಅವಳೂ ಅದೃಶ್ಯಳಾದಳು. ಬಹುಶಃ ಸೆರೆಮನೆಯ ವಾಸಕ್ಕೆ ಹೋದಳೇನೋ ಎಂದು ಪಾಸ್ಟರ್‌ನಾಕ್ ಕಾದಂಬರಿಯನ್ನು ಮುಕ್ತಾಯಗೊಳಿಸಿದ್ದಾರೆ.

ನಂತರದ ಘಟ್ಟದಲ್ಲಿ ಸೋವಿಯತ್ ಒಕ್ಕೂಟದಲ್ಲಿ ಉಂಟಾದ ಘರ್ಷಣೆಗಳು ಭೂಮಿಯ ಸಮಾಜೀಕರಣದ ಹಿನ್ನೆಲೆಯಲ್ಲಿ ಕೆಲವು, ಬೋಲ್ಶೆವಿಕ್ ಪಕ್ಷದ ಆಂತರಿಕ ವಿದ್ಯಮಾನಗಳಿಂದ ಕೆಲವು, ಎರಡನೆಯ ಮಹಾಯುದ್ಧದಿಂದಾಗಿ ಕೆಲವು ; ಅಂತೂ ಆಂತರಿಕ ಸಂಘರ್ಷಕ್ಕೆ ಕೊನೆಯಿಲ್ಲ. ಅಂತಿಮ ಭವಿಷ್ಯ ಏನೋ ತಿಳಿದವರಾರು ! ಇತಿಹಾಸ ವೊಂದೇ ಅದಕ್ಕೆ ಉತ್ತರ ನೀಡಬಲ್ಲುದು. ಇದು ಕಾದಂಬರಿಯ ಕೊನೆಗೆ ಸೇರಿಸಲಾಗಿರುವ ಪರಿವಿಡಿಯ ಸಾರಾಂಶ. 1943ರ ಸಂಗತಿಗಳ ಸಂದರ್ಭದಲ್ಲಿ ಹೇಳಿರುವ ಮಾತುಗಳು.

ಸಮಾಜದ ಬದಲಾವಣೆಯನ್ನು ಪುರಸ್ಕರಿಸುವ ಒಂದು ತತ್ವ 'ಆಧುನಿಕ ಸಾಂಕ್ರಾಮಿಕ ರೋಗ' ಎಂಬ ನಿಲುವನ್ನು ತಾಳುವ ಪಾಸ್ಟರ್‌ನಾಕ್ ಕಾದಂಬರಿಯುದ್ದಕ್ಕೂ ಯೂರಿಯನ್ನು ಪರಿಸರದ ಮಧ್ಯೆ ನಿಲ್ಲಿಸಿ ಪರೀಕ್ಷಿಸುವ ಬದಲು ಕೇವಲ ಅಹಮಿಕೆಯ ಆಗರವನ್ನಾಗಿ ಮಾಡಿರುವುದು ಅವರು ಸಾಮಾಜಿಕ ರುಜಿನಗಳನ್ನು ಕುರಿತು ಯಾವ ನಿರ್ದಿಷ್ಟ ಅಭಿಪ್ರಾಯವನ್ನೂ ತಾಳಲು ಸಿದ್ಧವಿಲ್ಲವೆಂಬುದಕ್ಕೆ ಸೂಚನೆಯಂತಿದೆ. ಕ್ರಾಂತಿಯಿಂದ ಮಂದಬುದ್ಧಿ ವಿಜೃಂಭಿಸುತ್ತದೆ, ಪ್ರತಿಭೆ ನಾಶವಾಗುತ್ತದೆ ಎಂಬರ್ಥ ಬರುವ ಮಾತುಗಳನ್ನು ಲಾರಾಳ ಬಾಯಿಂದ ಆಡಿಸುತ್ತಾರೆ ಪಾಸ್ಟರ್‌ನಾಕ್, ಕಾದಂಬರಿಯ ಕೊನೆಯ ಘಟ್ಟದಲ್ಲಿ. 1957ರಲ್ಲಿ ಇಟಲಿಯಲ್ಲಿ ಮೊದಲಿಗೆ ಪ್ರಕಟವಾದ ಈ ಕಾದಂಬರಿಯು 1917-1922ರ ಘಟನೆಗಳನ್ನು ಇಷ್ಟು ವಿದ್ವೇಷಕಾರಿ ಮನೋಭಾವದಿಂದ ಚಿತ್ರಿಸಿದೆಯೆಂದರೆ ಆಶ್ಚರ್ಯವೆನಿಸುತ್ತದೆ. ಬಹುಶಃ ವರ್ತಮಾನವನ್ನು ಟೀಕಿಸಲು ಭೂತಕಾಲದ ಘಟನೆಗಳನ್ನಾರಿಸಿಕೊಳ್ಳುವುದು ಕಾದಂಬರಿಕಾರರ ಮಾರ್ಮಿಕ ಉದ್ದೇಶವಿರಬಹುದು. ಅದೇ ಕಾಲದ ಸಂಗತಿಗಳನ್ನು ಆಧರಿಸಿ ಹೊರಬಂದಿರುವ ಸೋವಿಯತ್ ಕಾದಂಬರಿಗಳ ಪೈಕಿ ಫುರ್ಮನೋವ್ ಅವರ 'ಛಪಾಯೇವ್' ಮತ್ತು ಶೊಲೊಖೋವ್ ಅವರ 'ಡಾನ್ ನದಿ ಗಂಭೀರವಾಗಿ ಹರಿಯುತ್ತಿದೆ', ಇತ್ಯಾದಿಗಳೊಡನೆ 'ಡಾಕ್ಟರ್ ಷಿವಾಗೋ' ಕಾದಂಬರಿಯನ್ನು ಹೋಲಿಸಿ ನೋಡಿದರೆ ಪಾಸ್ಟರ್‌ನಾಕ್ ಅವರ ಸಂವೇದನೆ ಗತಿಶೀಲವಲ್ಲದ್ದೆಂಬುದು ಸ್ಪಷ್ಟವಾದೀತು. ಯೂರಿ ಪ್ರತಿನಿಧಿಸುವ ಚಿಂತನೆ, ವೇದನೆ, ಜೀವನದರ್ಶನ, ಸಾಮಾಜಿಕ ತತ್ವ, ಎಲ್ಲವೂ ವ್ಯಕ್ತಿಯ ಅಂತರಾಳದ ತುಮುಲಗಳ ಪ್ರತಿಫಲನವೆಂಬುದನ್ನು ಒಪ್ಪಿದರೂ ಸಹ ಕಾದಂಬರಿಯಲ್ಲಿ ಇದಕ್ಕೆ ಪ್ರತಿಯಾಗಿ ಬೇರೊಂದು ದೃಷ್ಟಿಯನ್ನು ಪ್ರತಿನಿಧಿಸುವ ಒಂದು ಪಾತ್ರವನ್ನಾದರೂ ಸೃಷ್ಟಿಸದಿರುವುದು ಪಾಸ್ಟರ್‌ನಾಕ್‌ರ ಕಲಾತ್ಮಕತೆಯ ಸೋಲು ಎಂದೇ ಹೇಳಬೇಕು. ಕಾದಂಬರಿಯಲ್ಲಿ ಚಿತ್ರಿತವಾಗಿರುವ

ಬುದ್ಧಿಜೀವಿಗಳು ಸೋವಿಯೆತ್ ಒಕ್ಕೂಟದ ಬುದ್ಧಿಜೀವಿಗಳ ವಸ್ತುನಿಷ್ಠ ಪ್ರತಿಬಿಂಬಗಳೆಂದು ಹೇಳುವುದು ಸರ್ವಥಾ ಅತಾರ್ಕಿಕವಾದೀತು. 1930ರ ದಶಕದಲ್ಲಿ ಜರ್ಮನಿಯಲ್ಲಿ ಫ್ಯಾಸಿಸ್ಟ್ ದುಷ್ಟಶಕ್ತಿ ಪ್ರವರ್ಧಮಾನಕ್ಕೆ ಬರುತ್ತಿದ್ದಾಗ ವಿಶ್ವದ ಸಾಂಸ್ಕೃತಿಕ ಕ್ಷೇತ್ರದ ಕ್ರಿಯಾಶೀಲರಿಗೆ ಮ್ಯಾಕ್ಸಿಂಗೋರ್ಕಿ ಒಂದು ಸವಾಲನ್ನು ಹಾಕಿದ್ದ. 'ಸಂಸ್ಕೃತಿಯ ಆರಾಧಕರೆ, ನೀವು ಯಾರ ಪಕ್ಷ ವಹಿಸುತ್ತೀರಿ ?' ಅರ್ಥಾತ್, ಇದೊಂದು ಸಾಮಾಜಿಕ ಪ್ರಶ್ನೆ; ಕೇವಲ ವೈಯಕ್ತಿಕ ಜೀವನಕ್ಕೆ ಜೋತುಬೀಳುವುದರಿಂದ ಇದಕ್ಕೆ ಪರಿಹಾರ ದೊರಕದು. ಪಾಸ್ಟರ್‌ನಾಕ್ ಸಮಾಜವಾದಿ ಕ್ರಾಂತಿಯ ಸಂದರ್ಭದಲ್ಲಿ ಅಂತಹ ಪ್ರಶ್ನೆಯನ್ನೇ ಹಾಕಿಕೊಂಡಿರಲಿಲ್ಲ. ಸಮಾಜದಲ್ಲಿರುವ ಪಿಡುಗನ್ನು ಉಲ್ಲೇಖಿಸುವ ಕಾದಂಬರಿಕಾರ ಅದಕ್ಕೆ ಪರಿಹಾರರೂಪದಲ್ಲಿ ಯಾವೊಂದು ಮಾರ್ಗವನ್ನೂ ಕಂಡುಕೊಳ್ಳದಿರುವುದು ಈ ಕಾದಂಬರಿಯ ವಿಶಿಷ್ಟ ಲೋಪವಾಗಿದೆ. ವೈಯಕ್ತಿಕ ಜೀವನದಲ್ಲಿ ಸೌಂದರ್ಯಕ್ಕಾಗಿ ಹಾತೊರೆಯುವ ಪಾತ್ರಗಳು ಸಾಮೂಹಿಕ ಜೀವನದ ಸಂದರ್ಭದಲ್ಲಿ ನಿರಾಸಕ್ತಿಭಾವ ತಳೆಯುವುದು 'ಡಾಕ್ಟರ್ ಷಿವಾಗೋ' ಕಾದಂಬರಿಯಲ್ಲಿ ಕಾಣಬರುವ ಪ್ರಮುಖ ನ್ಯೂನತೆಯಾಗಿದೆ. ಯೂರಿಗೆ ಹೊಸ ಸಮಾಜ ಬೇಕು ; ಅದಕ್ಕಾಗಿ ನಡೆಯುವ ಸಂಘರ್ಷ ಮಾತ್ರ ಬೇಡ. ಹೀಗಾಗಿ ಅವನು ಮರುಗುತ್ತಲೇ ಕಾಲ ವ್ಯಯಿಸಬೇಕು ; ಎಲ್ಲವನ್ನೂ ನಿರಾಕರಣ ದೃಷ್ಟಿಯಿಂದಲೇ ಅಳೆಯಬೇಕು. 'ಆಮ್ಲೆಟ್ ಬೇಕಾದರೆ ಮೊಟ್ಟೆಯನ್ನು ಒಡೆಯಲೇಬೇಕು' ಎಂಬ ಲೆನಿನ್ನರ ನುಡಿ ಪಾಸ್ಟರ್‌ನಾಕ್‌ಗೆ ಹಿಡಿಸುವುದಿಲ್ಲ. ಆಳುವ ವರ್ಗ ತನ್ನ ಹಿತಾಸಕ್ತಿಗಳನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಆದ್ದರಿಂದಲೇ ಸಮಾಜದಲ್ಲಿ ಅಂತರ್ಯುದ್ಧ ಸನ್ನಿಹಿತವಾಗುವುದು. ಸೋವಿಯೆತ್ ಒಕ್ಕೂಟದಲ್ಲಿ ಜರುಗಿದ್ದಾದರೂ ಅದೇ ಅಲ್ಲವೆ ? ಪಾಸ್ಟರ್‌ನಾಕ್‌ರ ಅಭಿಪ್ರಾಯದಂತೆ ಸಮಾಜದ ವ್ಯಕ್ತಿಗಳ ಹೃದಯ ಪರಿವರ್ತನೆಯಿಂದ ಸಮಾಜದ ಬದಲಾವಣೆಯನ್ನು ಆಗುಮಾಡಬೇಕು. ಈ ಮಾರ್ಗದಲ್ಲಿ ಫಲ ಸಿಕ್ಕುತ್ತದೆಯೇ ಇಲ್ಲವೇ ಎಂಬುದಕ್ಕೆ ಮಾನವಜನಾಂಗದ ಇತಿಹಾಸವೊಂದೇ ನಮಗಿರುವ ನಿದರ್ಶನ. ಸ್ಪಾರ್ಟಕಸ್‌ನಿಂದ ಹಿಡಿದು ಎಲ್ ಸಾಲ್ವಡಾರ್ – ದಕ್ಷಿಣ ಆಫ್ರಿಕಾಗಳವರೆಗೆ ವರ್ಗ ಹೋರಾಟದಿಂದ ಮಾತ್ರವೇ ಕ್ರಾಂತಿಕಾರಿ ಬದಲಾವಣೆಗಳು ಸಿದ್ಧಿಸಿವೆಯೆಂಬುದು ಅಲಕ್ಷಿಸಲಾಗದಂತಹ ಒಂದು ಅಂಶ. ಪಾಸ್ಟರ್‌ನಾಕ್ ತಿಳಿಯುವಂತೆ ಇದು ಸಿದ್ಧಾಂತದಲ್ಲಿರುವ ಶ್ರದ್ಧೆಯ ಪ್ರಶ್ನೆ ಮಾತ್ರವಲ್ಲ. ಅವರೇ ಹೇಳುವಂತೆ ಕ್ರಾಂತಿಯು 'ಅಮೋಘವಾದೊಂದು ಶಸ್ತ್ರಚಿಕಿತ್ಸೆ'. ಯೂರಿಯಂತಹ ಕೆಲವರಿಗೆ ಇದರಿಂದ ಆಘಾತವುಂಟಾದರೆ ಅದಕ್ಕೆ ಪರಿಹಾರವೇನು ? ಕ್ರಾಂತಿಯು ಅಪೇಕ್ಷಿತ ಪರಿಣಾಮವನ್ನು ನೀಡದಿದ್ದರೆ ಅದು ವೈಫಲ್ಯವೇ ಸರಿ ; ಆದರೆ ಅದನ್ನು ತಿರಸ್ಕರಿಸಿದರೆ ಪರಿಹಾರದ ಪ್ರಶ್ನೆಯನ್ನೇ ಕೈಬಿಟ್ಟಂತೆ. ಆರ್ಥಿಕ-ಸಾಮಾಜಿಕ ಪ್ರಶ್ನೆಗಳಿಗೆ ಪರಿಹಾರ ನೀಡಿ ಕ್ರಾಂತಿಯು ವ್ಯಕ್ತಿಯ ಉನ್ನತ ಆಕಾಂಕ್ಷೆಗಳತ್ತ ಗಮನ ನೀಡದಿದ್ದರೆ ಅದು ಸಾಂಸ್ಕೃತಿಕ ರಂಗದಲ್ಲಿ ಕ್ರಾಂತಿಯ ಸೋಲನ್ನು ಸಾರುತ್ತದೆ. ಯೂರಿಯ ಆಕ್ಷೇಪವೂ ಇದೇ. ಆದರೆ ಆ ನ್ಯೂನತೆಗೆ ಪರಿಹಾರ ಸೂಚಿಸುವಾಗ ಪಾಸ್ಟರ್‌ನಾಕ್ ಸಾಮಾಜಿಕ ಬದಲಾವಣೆಯನ್ನೇ

ಅಲ್ಲಗಳೆಯುತ್ತಾರೆ. ಸಿದ್ಧಾಂತ ಮತ್ತು ಕಾರ್ಯಾಚರಣೆಗಳ ನಡುವೆ ಇರಬಹುದಾದ ಅಂತರವನ್ನು ಗುರುತಿಸಿ ಪಾಸ್ಟರ್‌ನಾಕ್ ಮಾಡುವ ಟೀಕೆ ಮಾತ್ರ ಯಾವುದೇ ಪುರೋಗಾಮಿ ವ್ಯವಸ್ಥೆಯು ಆದ್ಯತೆಯಿಂದ ಗಮನಿಸಬೇಕಾದ ಅಂಶ.

ಪಾಸ್ಟರ್‌ನಾಕ್ ಕಾದಂಬರಿಯಲ್ಲಿ ಒಂದೆಡೆ ಹೀಗೆನ್ನುತ್ತಾರೆ : 'ಮಾನವ ಹುಟ್ಟಿರುವುದು ಜೀವಿಸುವುದಕ್ಕಾಗಿಯೇ ಹೊರತು ಜೀವಿಸಲು ಬೇಕಾದ ತಯಾರಿ ನಡೆಸುತ್ತಲೇ ಇರಲು ಅಲ್ಲ. ಜೀವನ, ಜೀವನದ ಕಲ್ಪನೆ, ಜೀವನದ ಕೊಡುಗೆ, ಅವೆಲ್ಲಾ ಅದೆಷ್ಟು ಮನಮೋಹಕ ವಾಗಿವೆ !' ಈ ಮಾತನ್ನು ಹೇಳುವ ಯೂರಿ 1917ರ ನಂತರ ಕೇವಲ ಎರಡು ವರ್ಷಗಳಲ್ಲಿ ಇಡೀ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಗೂ ಇದರ ಆವಿರ್ಭಾವ ಆಗಿರಬೇಕಿತ್ತೆಂದು ತರ್ಕಿಸುತ್ತಾನೆ. ಅಲ್ಲದೆ, ಇತರರ ಜೀವನದ ಬಗ್ಗೆ ಅವನೇನೂ ಆಸಕ್ತಿಯನ್ನು ತೋರುವುದಿಲ್ಲ ಕೂಡ. ತನ್ನ ಜೀವನದ ಪಥ ಬದಲಾಗಿ ತಾನು ಅನುಸರಿಸಬೇಕೆಂದಿದ್ದ ಹಾದಿಗೆ ಅಡ್ಡಿಯುಂಟಾಗಿದೆಯಲ್ಲ ಎಂಬುದೇ ಅವನ ಆಕ್ಷೇಪಕ್ಕೆ ಮೂಲಕಾರಣ. ಸಮಗ್ರ ಬದಲಾವಣೆಯನ್ನು ಸ್ವಾಗತಿಸಿ ಅದಕ್ಕಾಗಿ ಶ್ರಮಿಸುವ ಬದಲು ಸುಲಭವಾಗಿ ಹಿಂದಿನ ವ್ಯವಸ್ಥೆಗೇ ಹಿಂದಿರುಗಬಹುದಾಗಿತ್ತಲ್ಲ ಎಂಬುದು ಅವನ ಪ್ರಜ್ಞೆಗೆ ಹೊಳೆಯುವ ಪರಿಹಾರ.

ಮಾನವಸಮಾಜದಲ್ಲಿ ದ್ವಂದ್ವಗಳ ಪರಂಪರೆ ಅನೂಚಾನವಾಗಿ ನಡೆದು ಬಂದಿರುವ ಚಾರಿತ್ರಿಕ ಸತ್ಯ. ಯೂರಿಯ ವ್ಯಕ್ತಿತ್ವದಲ್ಲೂ ಈ ದ್ವಂದ್ವಾತ್ಮಕತೆ ಪ್ರತಿಫಲನ ಗೊಂಡಿದೆ. ಆದರೆ ಅವನು ನೈತಿಕ ಜವಾಬ್ದಾರಿಯನ್ನು ವ್ಯಕ್ತಿಗತವಾದ ಗುಣವೆಂದು ಲೆಕ್ಕಿಸುತ್ತಾನೆಯೇ ವಿನಾ ಸಾರ್ವತ್ರಿಕವಾದ ಸಾಮಾಜಿಕ ಹೊಣೆ ಎಂದು ಗುರುತಿಸುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಯೂರಿಯ ನಿರಾಸೆ, ನಿರಾಸಕ್ತಿ ಮತ್ತು ನಿರ್ಗಮನವು ಸೋವಿಯತ್ ಒಕ್ಕೂಟದ ಬುದ್ಧಿಜೀವಿ ವರ್ಗದ ಕ್ರಿಯಾಶೀಲತೆಯ ನಾಶವೇ ಆಗಿದೆ ಎಂಬ ಪಾಸ್ಟರ್‌ನಾಕ್‌ರ ಪ್ರತಿಪಾದನೆ ಹುಸಿಯಾಗುತ್ತದೆ, ಚಾರಿತ್ರಿಕ ಅಸತ್ಯವಾಗುತ್ತದೆ, ಸಾಹಿತ್ಯದಲ್ಲಿ ಅಸಂಗತವಾಗುತ್ತದೆ.

ಅರ್ನೆಸ್ಟ್ ಹೆಮಿಂಗ್ವೆ: 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ'

ವೀಣಾ ಶಾಂತೇಶ್ವರ

ಇಪ್ಪತ್ತನೆಯ ಶತಮಾನದ ಪೂರ್ವಾರ್ಧವಿಡೀ ಅಮೆರಿಕನ್ ಸಾಹಿತ್ಯದಲ್ಲಿ ಕಾದಂಬರಿ ಕ್ಷೇತ್ರದ ಅನಭಿಷಿಕ್ತ ಸಮ್ರಾಟರಾಗಿ ಮೆರೆದವರು ಫಾಕ್‌ನರ್ ಹಾಗೂ ಹೆಮಿಂಗ್ವೆ. ಇವರ ಕಾದಂಬರಿಗಳ ವಸ್ತುನಾವೀನ್ಯತೆ, ಶೈಲಿಯ ತೀಕ್ಷ್ಣತೆ, ತಂತ್ರದ ಸಂಕೀರ್ಣತೆ, ಭಾಷೆಯ ವಸ್ತುನಿಷ್ಠತೆ ಹಾಗೂ ಜೀವನದ ಬಗೆಗಿನ ದೃಷ್ಟಿಕೋನದ ಪ್ರಖರತೆ – ಇವೆಲ್ಲ ಇಡೀ ಶತಮಾನದ ಕಾದಂಬರಿಕಾರರ ಮೇಲೆ ಗಾಢಪ್ರಭಾವ ಬೀರಿದವು. ದುರ್ದೈವದಿಂದ ಇಬ್ಬರೂ ದುರ್ಮರಣವನ್ನಪ್ಪಿದರು – ಫಾಕ್‌ನರ್ ಕುಡಿತದ ಹಿಡಿತಕ್ಕೆ ಸಿಲುಕಿ ದಿನಾ ಸ್ವಲ್ಪಸ್ವಲ್ಪವಾಗಿ ಸತ್ತರೆ, ಹೆಮಿಂಗ್ವೆ ಗುಂಡು ಹೊಡೆದುಕೊಂಡು ತನ್ನ ಸಾಹಸಮಯ ವರ್ಣಮಯ ಜೀವನಕ್ಕೆ ಒಮ್ಮೆಲೆ ವಿದಾಯ ಹೇಳಿದ. ಇಬ್ಬರೂ ತಮ್ಮ ಕ್ರಾಂತಿಕಾರಿ ದೃಷ್ಟಿಕೋನ, ಪರಿಣಾಮಕಾರಿ ಬರವಣಿಗೆಗಳಿಂದಾಗಿ ಅಮೆರಿಕನ್ ಕಾದಂಬರಿ ಕ್ಷೇತ್ರದಲ್ಲಷ್ಟೇ ಅಲ್ಲ, ಜಗತ್ತಿನ ಕಾದಂಬರಿ ಪ್ರಪಂಚದಲ್ಲೇ ತಮ್ಮ ಹೆಸರನ್ನು ಸ್ಥಾಯಿಯಾಗಿ ಉಳಿಸಿಹೋದವರು.

ಹೆಮಿಂಗ್ವೆ ಆಧುನಿಕ ಕಾದಂಬರಿ ಕ್ಷೇತ್ರದಲ್ಲಿ ಗಳಿಸಿಕೊಂಡಿರುವ ವಿಶಿಷ್ಟ ಸ್ಥಾನಕ್ಕೆ ಹಲವಾರು ಕಾರಣಗಳಿವೆ. ಕೇವಲ ಕಾದಂಬರಿಕಾರನಷ್ಟೇ ಅಲ್ಲದೆ ಸ್ವತಃ ಬಾಕ್ಸರ್, ಕುಸ್ತಿಪಟು, ಒಳ್ಳೆಯ ಬೇಟೆಗಾರ, ಕುಶಲ ಮೀನುಗಾರ, ಅತ್ಯಂತ ಧೈರ್ಯಶಾಲಿ ಹಾಗೂ ಯುಕ್ತಿಶಾಲಿಯಾದ ಯುದ್ಧ ವರದಿಗಾರ, ಇತ್ಯಾದಿ ಆಗಿದ್ದ ಅವನ ಅನುಭವದ ಆಳ-ವಿಸ್ತಾರ-ವೈವಿಧ್ಯ-ವರ್ಣರಂಜಿತತನದಿಂದಾಗಿ ಆತನ ಕಾದಂಬರಿಗಳು ಸೃಷ್ಟಿಸುವ ಲೋಕವೇ ಬೇರೊಂದು ಬಗೆಯದು. ಪಾತ್ರಗಳೆಲ್ಲ ಅಮೆರಿಕನ್‌ರೇ ಆದರೂ ಅವನ ಕಾದಂಬರಿಗಳಲ್ಲಿನ ವಿಶಿಷ್ಟ ವಾತಾವರಣದ ಹಿನ್ನೆಲೆಯಲ್ಲಿ ಆ ಪಾತ್ರಗಳ ವ್ಯಕ್ತಿತ್ವಕ್ಕೆ ಒಂದು ಬೇರೆಯದೇ ಪ್ರಭಾವಲಯ ಸೃಷ್ಟಿಯಾದುದು ಕಾಣುತ್ತದೆ. ಯಾವ ಬಗೆಯ ಸಾಹಿತ್ಯಿಕ ಕಸರತ್ತುಗಳ ಬಳಕೆಯನ್ನೂ ಮಾಡದೆ, ನೇರವಾಗಿ ವಸ್ತು ಪ್ರತಿಪಾದನೆಯತ್ತ ಗಮನವಿಟ್ಟು ವಿವರಗಳನ್ನು ಸರಳವಾಗಿ ನೀಡುತ್ತ, ಈ ನೇರತೆ ಹಾಗೂ ಸರಳತೆಯ ಮೇಲ್ಪದರಿನ ಹಿನ್ನೆಲೆಯಲ್ಲಿ ಅಗಾಧವಾದ ಜೀವನಜ್ಞಾನವನ್ನು ಚಿತ್ರಿಸುತ್ತ ಬದುಕಿನ ವೈಚಿತ್ರ್ಯ, ಚಮತ್ಕಾರ, ನೋವು, ಪ್ರೀತಿ, ವಿಕ್ಷಿಪ್ತತೆ, ಅನಿರ್ವಚನೀಯತೆಯ ಪರಿಚಯ ಮಾಡಿಸುವ ಅದ್ಭುತ ಕಾದಂಬರಿಕಾರ ಹೆಮಿಂಗ್ವೆ. ತಾನೊಬ್ಬ ಕಲಾವಿದನಾಗಿರುವುದಕ್ಕಿಂತ ಹೆಚ್ಚಾಗಿ ಒಬ್ಬ ಕುಶಲಕರ್ಮಿಯೆಂದು ನಂಬಿದ್ದ ಹೆಮಿಂಗ್ವೆ ಸ್ಫೂರ್ತಿ, ಕಲಾತ್ಮಕತೆ, ಕಲ್ಪನೆ, ಇತ್ಯಾದಿಗಳಿಗಿಂತ ಹೆಚ್ಚಾಗಿ ನಿಧಾನ ಹಾಗೂ ಕಠಿಣ ಪರಿಶ್ರಮದಲ್ಲಿ ಹೆಚ್ಚಿನ ನಂಬಿಗೆಯಿರಿಸಿದ್ದ ಬರಹಗಾರನಾಗಿದ್ದ. ಆದ್ದರಿಂದಲೇ ಆತನ ಕೃತಿಗಳು ಒಂದು ಸುಂದರ ಶಿಲ್ಪದಂತೆ ಕಣ್ಣನ್ನೂ ತಲೆಯನ್ನೂ ಮನಸ್ಸನ್ನೂ ಅಂತರಂಗವನ್ನೂ

ಒಮ್ಮೆಲೇ ತುಂಬುತ್ತವೆ. ನೋಬೆಲ್ ಬಹುಮಾನ ವಿಜೇತನೂ ಆದ ಹೆಮಿಂಗ್ವೆ ಮೊದಲ ಮಹಾಯುದ್ಧದಲ್ಲಿ ಯುದ್ಧ ವರದಿಗಾರನಾಗಿ, ನಂತರ ಪತ್ರಕರ್ತನಾಗಿ ಅಪಾಯಕ್ಕೆ ಸಾವಿಗೆ ತೀರ ಹತ್ತಿರವಾಗಿ ಬದುಕಿದವನು. ಆತನ ಕೃತಿಗಳಲ್ಲಿ ಸಹಜವಾಗಿಯೇ ಒಂದು ವಿಶಿಷ್ಟ ಬಗೆಯ ಕೆಚ್ಚು, ಎದೆಗಾರಿಕೆ, ಧಾರ್ಷ್ಟ್ಯ, ನಿರ್ಲಕ್ಷ್ಯ ನಿರ್ಭೀತತೆ ಇವೆ.

2

ಹೆಮಿಂಗ್ವೆಯ ತಾಯಿ ಗ್ರೇಸ್ ಅರ್ನ್‌ಸ್ಟೈನ್ ಹಾಲ್ ಮತ್ತು ತಂದೆ ಕ್ಲೇರನ್ಸ್ ಎಡ್ಮಂಡ್ಸ್ ಹೆಮಿಂಗ್ವೆ ವಿಕ್ಟೋರಿಯನ್ ಸಂಪ್ರದಾಯದಲ್ಲಿ ಕಟ್ಟುನಿಟ್ಟಿನ ಕುಟುಂಬದಲ್ಲಿ ಬೆಳೆದವರಾದರೂ ಸಂಪ್ರದಾಯಶರಣರಾಗಿರಲಿಲ್ಲ. ತಾಯಿ ಸಂಗೀತವಿದುಷಿ ತಂದೆ ವೃತ್ತಿಯಿಂದ ವೈದ್ಯ ; ತುಂಬ ನಿಷ್ಠಾವಂತ, ಕರ್ತವ್ಯದಕ್ಷ, ಪರೋಪಕಾರಿ ಸ್ವಭಾವದವನು. ಅಲ್ಲದೆ ಬೇಟೆ-ಮೀನುಗಾರಿಕೆ ಹಾಗೂ ನಿಸರ್ಗದ ಪರಮಭಕ್ತ. ಶಿಕ್ಯಾಗೋ ಪಟ್ಟಣದಲ್ಲಿ ನೆಲೆಸಿದ್ದ ಈ ದಂಪತಿಗಳಿಗೆ ಜುಲೈ 21, 1899ರಂದು ಅರ್ನೆಸ್ಟ್ ಜನಿಸಿದ. ಚಿಕ್ಕಂದಿನಲ್ಲೇ ತಂದೆಯಿಂದ ಆತ ವಿವಿಧ ಹಕ್ಕಿ, ಪ್ರಾಣಿ, ಮೀನು, ಅರಣ್ಯ, ಸಮುದ್ರ, ಇತ್ಯಾದಿಗಳ ಬಗ್ಗೆ ನಿಕಟ ಪರಿಚಯ ಪಡೆದುಕೊಂಡ. ಶಾಲೆಯಲ್ಲಿ ಜಾಣ ವಿದ್ಯಾರ್ಥಿಯಾಗಿದ್ದ ಅರ್ನೆಸ್ಟ್ ಬೇಟೆಯಲ್ಲೂ ಮೀನು ಹಿಡಿಯುವುದರಲ್ಲೂ ಪರಿಣತಿ ಪಡೆದ. ನೋವನ್ನು ಸಹಿಸುವ ವಿಶಿಷ್ಟ ಶಕ್ತಿಯೊಂದನ್ನು ಆತ ಆಗಿನಿಂದಲೇ ಬೆಳೆಸಿಕೊಂಡ. ಇದೇ ಆತನ ಬರಹಗಳಲ್ಲಿನ ನಿರ್ಲಿಪ್ತ ಮನೋಭಾವದ ಬುನಾದಿಯೂ ಆಯಿತು.

ಹೈಸ್ಕೂಲಿನಲ್ಲಿ ಆತ ಕಿಪ್ಲಿಂಗ್, ಮಾರ್ಕ್‌ಟ್ವೇನ್, ಆರ್.ಎಲ್. ಸ್ಟೀವನ್‌ಸನ್‌ರ ಕೃತಿಗಳನ್ನು ಬಹಳವಾಗಿ ಓದುತ್ತಿದ್ದ. ಸಾಹಸಪ್ರಿಯನಾಗಿದ್ದಷ್ಟೇ ಅಲ್ಲದೆ ವಿಜ್ಞಾನದಲ್ಲೂ ಆಸಕ್ತಿಯುಳ್ಳವನಾಗಿದ್ದ. ಪ್ರಾಣಿ, ಮೀನು, ಹಕ್ಕಿಗಳನ್ನು ಕೊಂದು, ಜತನದಿಂದ ಅವುಗಳನ್ನು ಕೊಯ್ದು ಸ್ವಚ್ಛಗೊಳಿಸಿ ಹುಲ್ಲು ತುಂಬಿಸಿ ಹೊಲೆದಿಡುವ ಕುಶಲಕಲೆ – 'ಟ್ಯಾಕ್ಸಿಡರ್ಮಿ' –ಯನ್ನು ಕಲಿತುಕೊಂಡ. ಗುರಿಯಿಟ್ಟು ಬಂದೂಕು ಹೊಡೆಯುವುದರಲ್ಲಿ ನಿಷ್ಣಾತನಾದ. ಹದಿವಯಸ್ಸಿನಲ್ಲಿ ಸಾಧ್ಯವಾದಷ್ಟು ರಾತ್ರಿಗಳನ್ನು ಆತ ಮನೆಯಿಂದ ಹೊರಗೆ ದೂರ ಬಯಲಲ್ಲಿ, ಅಡವಿಯಲ್ಲಿ, ನದೀದಡದಲ್ಲಿ, ಹೊಲದಲ್ಲಿ ಮಲಗಿ ಕಳೆಯುತ್ತಿದ್ದ. ಹೈಸ್ಕೂಲಿನಲ್ಲಿದ್ದಾಗಲೇ ಬರೆಯಲು ಪ್ರಾರಂಭಿಸಿದ್ದ.

ಹೈಸ್ಕೂಲಿನ ನಂತರ ಅರ್ನೆಸ್ಟ್ ನೇರವಾಗಿ ಯುದ್ಧವನ್ನು ಸೇರಬೇಕೆಂದು ಬಯಸಿದನಾದರೂ ಮಗನು ಕಾಲೇಜಿನಲ್ಲಿ ಉಚ್ಚಶಿಕ್ಷಣ ಪಡೆಯಬೇಕೆಂಬ ಬಯಕೆಯಿದ್ದ ತಂದೆ ಆತನ ಅಪೇಕ್ಷೆಯನ್ನು ಬಲವಾಗಿ ವಿರೋಧಿಸಿದರು. ಕೆನ್ಸಸ್ ನಗರದ 'ಸ್ಟಾರ್'

ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಅರ್ನೆಸ್ಟ್‌ಗೆ ಮಾತ್ರ ಯುದ್ಧ ಸೇರುವ ಬಯಕೆ ಹೆಚ್ಚುತ್ತಲೇ ಇತ್ತು. ಆದರೆ ಕಣ್ಣಿನಲ್ಲಿ ದೋಷವಿದ್ದುದರಿಂದ ಸೈನ್ಯಕ್ಕೆ ಸೇರ್ಪಡೆಯಾಗುವುದು ಸಾಧ್ಯವಾಗದೆ ಕೆಲ ಕಾಲಾನಂತರ ಅಮೆರಿಕನ್ ರೆಡ್‌ಕ್ರಾಸ್ ಸಂಸ್ಥೆಯನ್ನು ಸೇರುವುದು ಸಾಧ್ಯವಾಯಿತು. ಘೋರಯುದ್ಧ ನಡೆದಿದ್ದ ಸ್ಥಳಕ್ಕೇ ಹೋಗಿದ್ದುಕೊಂಡು ಸ್ಥಿತಪ್ರಜ್ಞತೆ ಯಿಂದ, ದೃಢಮನಸ್ಸಿನಿಂದ ಕೆಲಸ ಮಾಡುವುದೂ ಆತನಿಗೆ ಸುಲಭಸಾಧ್ಯವಾಯಿತು. ಒಮ್ಮೆ ಯುದ್ಧಭೂಮಿಯಲ್ಲಿ ತೀವ್ರ ಗಾಯಗೊಂಡ ಅರ್ನೆಸ್ಟ್ ಮಿಲನ್ ನಗರದ ಹೊರವಲಯದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಮೊದಲ ಬಾರಿಗೆ ಅಲ್ಲಿನ ದಾದಿಯಾದ ಆ್ಯಗ್ನೆಸ್ ಕುರೋಸ್ಕಿ ಎಂಬ ಆಕರ್ಷಕ ಭಾವುಕ ಹೆಣ್ಣಿನಲ್ಲಿ ಆತನಿಗೆ ಪ್ರೇಮಾಂಕುರವಾಯಿತು. ಆತನಿಗಿಂತ ವಯಸ್ಸಿನಲ್ಲಿ ಹಿರಿಯಳಾದ ಆಕೆ ಮದುವೆಯಾಗಲು ನಿರಾಕರಿಸಿದ್ದು ಅರ್ನೆಸ್ಟ್‌ಗೆ ತುಂಬಾ ನಿರಾಸೆಯುಂಟುಮಾಡಿತು. ಸತತವಾಗಿ ಯುದ್ಧ ಭೂಮಿಯ ತೀರ ಸಮೀಪ ದಿನಗಳನ್ನು ಕಳೆದು, ಯುದ್ಧದ ಭೀಕರ ಪರಿಣಾಮಗಳನ್ನು, ಬೀಭತ್ಸ ವಾತಾವರಣವನ್ನು ಕಣ್ಣಾರೆ ಕಂಡ ಆತನ ಮನಸ್ಥಿತಿ – ಆಗಿನ ಕಾಲದ ಅನೇಕ ಯುವಕರಂತೆ – ವಿಕ್ಷಿಪ್ತವಾಯಿತು. ಯುದ್ಧದಿಂದ ಹಿಂದಿರುಗಿದ ನಂತರ ಕೆಲಕಾಲ ಕುಟುಂಬದೊಂದಿಗೆ ವಿರಸ ಹೊಂದಿ ದೂರವಿದ್ದ ಅರ್ನೆಸ್ಟ್‌ನ ದೃಷ್ಟಿ ಹೆಚ್ಚು ವಸ್ತುನಿಷ್ಠವೂ ನಿರ್ಲಿಪ್ತವೂ ಆಯಿತು.

1921 ಸೆಪ್ಟೆಂಬರ್‌ನಲ್ಲಿ ಹ್ಯಾಡ್ಲೀ ಎಂಬಾಕೆಯನ್ನು ಮದುವೆಯಾದ ಅರ್ನೆಸ್ಟ್ ಬರಹಗಾರನಾಗಿ, ಪತ್ರಕರ್ತನಾಗಿ ಜೀವನ ನಿರ್ವಹಿಸಲು ನಿಶ್ಚಯಿಸಿ ಪ್ಯಾರಿಸ್‌ಗೆ ಹೋದ. ಆಗಿನ ಕಾಲದಲ್ಲಿ ಎಲ್ಲ ಕಲಾವಿದರಿಗೆ, ಬರಹಗಾರರಿಗೆ, ಭಾವಜೀವಿಗಳಿಗೆ ಪ್ಯಾರಿಸ್ ಕನಸಿನ ಸ್ವರ್ಗದಂತಿತ್ತು. ಅರ್ನೆಸ್ಟ್‌ನ ಮೊದಲ ಕತೆಗಳ ರಚನೆಯಾದುದು ಇಲ್ಲಿಯೇ. ಯೂರೋಪಿನ ಇತರ ದೇಶಗಳನ್ನು ವರದಿಗಾರನಾಗಿ ಸಂದರ್ಶಿಸಿ ಬಂದ ಆತ ಈ ಅವಧಿ ಯಲ್ಲಿ ವ್ಯಕ್ತಿಚಿತ್ರಗಳನ್ನೂ, ಲೇಖನಗಳನ್ನೂ, ಕವನಗಳನ್ನೂ ಬರೆದ. 1923ರಲ್ಲಿ ಆತನ ಮೊದಲ ಕೃತಿ Three Stories and Ten Poems ಹೊರಬಂದಿತು. ಅದೇ ವರ್ಷ ಮಗ ಜಾನ್ ಹುಟ್ಟಿದ. ಆತನ ಎರಡನೆಯ ಪುಸ್ತಕ In Our Time (1924)ನಲ್ಲಿಯ ಕತೆಗಳು ಹೆಚ್ಚು ಪ್ರಬುದ್ಧವೂ ಸತ್ವಶಾಲಿಯೂ ಆಗಿದ್ದವು. ಕತೆಗಳಲ್ಲಿ ತನ್ನ ಉದ್ದೇಶ ಜೀವನವನ್ನು ವರ್ಣಿಸುವುದು ಅಥವಾ ಟೀಕಿಸುವುದು ಮಾತ್ರವಾಗಿರದೆ ಜೀವನದ ವಾಸ್ತವಿಕತೆಯನ್ನು ಪ್ರತಿಬಿಂಬಿಸುವುದೇ ಆಗಿದೆ ಎಂದು ಆತ ಹೇಳುತ್ತಿದ್ದ. ಆತನ ಮೊದಲ ಮುಖ್ಯ ಕಾದಂಬರಿ The Sun Also Rises (1925) ಯುದ್ಧಾನಂತರದ ಯುವಕರ ಮನಸ್ಸಿನ ತುಡಿತ-ಮಿಡಿತಗಳನ್ನು ಸಮರ್ಥವಾಗಿ ಬಿಂಬಿಸಿತು. ಅದೇ ಸಮಯದಲ್ಲಿ ಹೊರಬಂದ The Torrents of Spring ಒಂದು ಮೊನಚಾದ, ವ್ಯಂಗ್ಯಾತ್ಮಕ ವಿಮರ್ಶೆಯುಳ್ಳ ಕೃತಿಯಾಗಿತ್ತು. ಅನೇಕ ಸಾಮಾಜಿಕ ವ್ಯಕ್ತಿಗಳು ಈ ಕೃತಿಯಲ್ಲಿ ಟೀಕೆಗೆ ಗುರಿಯಾಗಿದ್ದರು. ವಿಮರ್ಶಕರಿಂದ ಮೆಚ್ಚುಗೆ ಪಡೆಯುತ್ತ ಹೊರಟ ಅರ್ನೆಸ್ಟ್ 1927ರಲ್ಲಿ ತನ್ನ ಮೊದಲ ಹೆಂಡತಿ ಹ್ಯಾಡ್ಲೀಯಿಂದ ದೂರವಾದ.

ಅದೇ ವರ್ಷದ ಬೇಸಿಗೆಯಲ್ಲಿ ಪಾಲಿನ್ ಫೇವರ್ ಎಂಬಾಕೆಯನ್ನು ಮದುವೆಯಾದ ಅರ್ನೆಸ್ಟ್ ತನ್ನ ಮಹತ್ವಪೂರ್ಣ ಕೃತಿಯಾದ Men Without Women ಅನ್ನು ಹೊರತಂದ. ನಂತರ ಬಂದದ್ದು A Farewell to Arms. ಈ ಮಧ್ಯೆ ಅರ್ನೆಸ್ಟ್‌ನ ತಂದೆ ವ್ಯವಹಾರದಲ್ಲಿನ ಏನೋ ತೊಡರುಗಳಿಂದಾಗಿ ತಲೆಗೆ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಸಹಜವಾಗಿಯೇ ಹಿರಿಯ ಮಗನಾದ ಅರ್ನೆಸ್ಟ್ ತನ್ನ ತಾಯಿ, ಅಕ್ಕ, ತಂಗಿ, ತಮ್ಮ ಇವರನ್ನು ಸಮಾಧಾನಿಸುವ ಹಾಗೂ ಮನೆತನದ ಇತರ ವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕೆಲಕಾಲ ಹೊರಬೇಕಾಯಿತು. ಪಾಲಿನ್‌ಳಿಂದ ಆತನಿಗೆ ಪ್ಯಾಟ್ರಿಕ್ ಹಾಗೂ ಗ್ರೆಗರಿ ಎಂಬಿಬ್ಬರು ಗಂಡು ಮಕ್ಕಳು ಹುಟ್ಟಿದರು. ಕೆಲವು ಸಲ ಮಕ್ಕಳನ್ನು ಕರೆದುಕೊಂಡು, ಹೆಚ್ಚಾಗಿ ತಾನೊಬ್ಬನೇ, ಪ್ರವಾಸಕ್ಕೆ, ಬೇಟೆಗೆ, ಮೀನು ಹಿಡಿಯಲಿಕ್ಕೆ ಹೋಗುವುದು ಹೆಮಿಂಗ್ವೇನ ಪ್ರೀತಿಯ ಹವ್ಯಾಸವಾಗಿ ಮುಂದುವರಿಯಿತು. ವಿಶೇಷ ವ್ಯವಸ್ಥೆಯುಳ್ಳ ತನ್ನವೇ ಎರಡು ದೋಣಿಗಳನ್ನು ಆತ ತಯಾರಿಸಿಕೊಂಡಿದ್ದು ತುಸುವೆ ಸಮಯ ಸಿಕ್ಕರೂ ಸಮುದ್ರದಲ್ಲಿ ಹೋಗಿಬಿಡುತ್ತಿದ್ದ. ಆತನಿಗೆ ಪ್ರಚಾರವಾಗಲೀ ಸಾರ್ವಜನಿಕ ಮನ್ನಣೆಯಾಗಲೀ ಬೇಕಾಗಿರಲಿಲ್ಲ. ಆತನೆಂದೂ ಕೀರ್ತಿಯ ವ್ಯಾಮೋಹಕ್ಕೆ ಒಳಗಾಗಲಿಲ್ಲ. 1932ರಲ್ಲಿ Death in the Afternoon ಬರೆದಾದ ನಂತರ ಅರ್ನೆಸ್ಟ್‌ನಿಗೆ ಒಂದು ಚಿಕ್ಕ ದೋಣಿಯಲ್ಲಿ ಕ್ಯೂಬಾದವರೆಗೆ ಹೋಗಿ ಆಫ್ರಿಕೆಯ ಪ್ರವಾಸ ಮಾಡುವ ಬಯಕೆಯಾಯಿತು. ಆಫ್ರಿಕೆಯ ದಟ್ಟ ಅಡವಿಗಳು, ಕಾಡುಪ್ರಾಣಿಗಳು, ವಿಕ್ಷಿಪ್ತವಾದ ನಿಸರ್ಗ, ಎಲ್ಲೆಲ್ಲೂ ತುಂಬಿದ ಜೀವಶಕ್ತಿ ಇವೆಲ್ಲ ಆತನೆದುರು ಒಂದು ಹೊಸ ಲೋಕವನ್ನೇ ತೆರೆದಿರಿಸಿದವು. ಪೆಂಬಾ, ಝಾಂಝಿಬಾರ, ಮೊಂಬಾಸಾ, ನೈರೋಬಿ ಇತ್ಯಾದಿ ಪ್ರದೇಶಗಳಲ್ಲೆಲ್ಲ ಸಂಚರಿಸಿ ತನ್ನ ಅನುಭವಗಳನ್ನು ತುಂಬ ರಸವತ್ತಾಗಿ ವರ್ಣಮಯವಾಗಿ ಪತ್ರಿಕೆಗಳ ಅಂಕಣಗಳಲ್ಲಿ ಪತ್ರರೂಪದಲ್ಲಿ ಚಿತ್ರಿಸಿದ. ಅಲ್ಲಿಂದ ಬಂದ ನಂತರ ಬರೆದ ಕಾದಂಬರಿಗಳು The Green Hills of Africa ಮತ್ತು To Have and Have Not. ಕೇ ವೆಸ್ಟ್ ನಗರದಲ್ಲಿ ನೆಲೆಸಿದ್ದ ಆತ ಹೆಚ್ಚು ಹೆಚ್ಚಾಗಿ ಸಮುದ್ರಯಾನ ಪ್ರಿಯನಾಗತೊಡಗಿದ. ಆತನ ಪ್ರತಿಯಾನವೂ ಒಂದು ಅದ್ಭುತವಾದ ಹೊಸ ಅನುಭವ ಸಾಮ್ರಾಜ್ಯವನ್ನೇ ಸೃಷ್ಟಿಸುವ ಚಮತ್ಕಾರಿಕ ಶಕ್ತಿಯುಳ್ಳದ್ದಾಗಿತ್ತು.

ಈ ಮಧ್ಯೆ ಸುಂದರಿ ಮಾರ್ಥಾ ಗೆಲ್‌ಹಾರ್ನ್ ಎಂಬ ಬರಹಗಾರ್ತಿಯೊಡನೆ ಅರ್ನೆಸ್ಟ್‌ನ ಪರಿಚಯವಾಗಿ ಅದು ಪ್ರೇಮಕ್ಕೆ ತಿರುಗಿತು. ಅರ್ನೆಸ್ಟ್‌ನಂತೆಯೇ ಅವಳೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವುದೇ ಬರಹಗಾರನ ಉದ್ದೇಶವಾಗಿರಬೇಕೆಂದು ನಂಬಿದ್ದವಳು. ಮತ್ತೆ ಯುದ್ಧ ಶುರುವಾದಾಗ ಆಕೆಯೂ ಅರ್ನೆಸ್ಟ್‌ನ ಜೊತೆ ಅಪಾಯಕಾರಿ ಪ್ರದೇಶಗಳಲ್ಲೆಲ್ಲ ಸಂಚರಿಸಿ ವರದಿಗಳನ್ನು ಬರೆದಳು. ರಶಿಯಾ, ಝೆಕೊಸ್ಲೊವಾಕಿಯಾ, ಹಂಗರಿ, ಯುಗೋಸ್ಲಾವಿಯಾ, ಜರ್ಮನಿ, ಇಟಲಿ, ಉತ್ತರ ಆಫ್ರಿಕಾ ಇತ್ಯಾದಿ ದೇಶಗಳೆಲ್ಲ ಭಾಗವಹಿಸಿದ್ದ ಸ್ಪ್ಯಾನಿಶ್ ಯುದ್ಧದ ಭೀಕರತೆಯನ್ನು ಅರ್ನೆಸ್ಟ್ ತೀರ ವಾಸ್ತವಿಕವಾಗಿ ತನ್ನ

ವರದಿಗಳಲ್ಲಿ ಚಿತ್ರಿಸಿದನು. ಯುದ್ಧ ಸಮಯದಲ್ಲಿ ಕಂಡ ಧೈರ್ಯ, ಮೋಸ, ತ್ಯಾಗ ಇತ್ಯಾದಿಗಳನ್ನೊಳಗೊಂಡ ಆತನ ಕೃತಿ The Fifth Column 1938ರಲ್ಲಿ ಹೊರಬಂದಿತು. ಸ್ಪ್ಯಾನಿಶ್ ಯುದ್ಧ ಘೋರವಾಗಿ ನಡೆದಿದ್ದಾಗಲೇ ಆತ ಯುದ್ಧ ಭೂಮಿಯಲ್ಲಿ ಸಂಚರಿಸಿ ಜೀವನ-ಮರಣ ಎರಡರ ನಡುವಿರುವ ಕೂದಲೆಳೆಯಷ್ಟೇ ಅಂತರವನ್ನು ಅರಿತು ಬದುಕಿನ ಬಗೆಗೆ ಸ್ಥಿತಪ್ರಜ್ಞತೆಯನ್ನು ಬೆಳೆಸಿಕೊಂಡಿದ್ದನು. ಆದರೂ ಶಾಂತಸ್ವಭಾವದ ಪ್ರೇಮಲ ಪತ್ನಿಯಾಗಿದ್ದ ಪಾಲಿನ್‌ಳನ್ನು ತೊರೆದು ಮಾರ್ಥಾಳನ್ನು ಲಗ್ನವಾಗುವಾಗ ಆತನಿಗೆ ಮಾನಸಿಕವಾಗಿ ತುಂಬ ವೇದನೆಯಾಯಿತು. ಮಾರ್ಥಾಳೊಂದಿಗಿನ ಮದುವೆ ಆತನಿಗೆ ಸುಖವನ್ನು, ಶಾಂತಿಯನ್ನು ನೀಡಲಿಲ್ಲ. ಆ ನಂತರ ಆತ ಬರೆದ ಕಾದಂಬರಿಗಳು – For Whom The Bell Tolls, Across the River and into the Trees, ಹಾಗೂ The Old Man and the Sea. ಅನೇಕ ಕಾದಂಬರಿಗಳು ಚಲನಚಿತ್ರಗಳಾಗಿ ಅವನಿಗೆ ಕೀರ್ತಿ ಹಾಗೂ ಹಣದ ಸುರಿಮಳೆಯನ್ನೇ ತಂದವು. ಆದರೆ ಯುದ್ಧ ಸಮಯದಲ್ಲಿ ಅಪಘಾತದಿಂದ ತೀವ್ರವಾಗಿ ಗಾಯಗೊಂಡ ಹಾಗೂ ಇತರ ದೈಹಿಕ ಬೇನೆಗಳಿಂದ ಪೀಡಿತನಾಗಿ ಅರ್ನೆಸ್ಟ್ ಆಸ್ಪತ್ರೆಗೆ ದಾಖಲಾದಾಗ ಆತ ನಿರೀಕ್ಷಿಸಿದ್ದಂತೆ ಮಾರ್ಥಾ ಆತನ ಬಳಿಯಿದ್ದು ಆತನ ಶುಶ್ರೂಷೆ ಮಾಡದೆ ತನ್ನ ಕೆಲಸದ ನೆಪ ಹೇಳಿ ದೂರವೇ ಉಳಿದಳು. ಅರ್ನೆಸ್ಟ್ ನೋವನ್ನು ಎದುರಿಸುವ ರೀತಿಯೂ ಅದ್ಭುತವಾಗಿತ್ತು. ತಲೆಗೆ ಮೈಗೆಲ್ಲ ತೀವ್ರ ಪೆಟ್ಟಾಗಿದ್ದಾಗಲೂ ಏಳೆಂಟೇ ದಿನಗಳಲ್ಲಿ ಚೇತರಿಸಿಕೊಂಡು ಕೇವಲ ತನ್ನ ಮನೋಬಲದಿಂದ ಮತ್ತೆ ಎರಡನೆಯ ಮಹಾಯುದ್ಧದಲ್ಲಿ ಚಟುವಟಿಕೆಯಿಂದ ಭಾಗವಹಿಸಲು ಶಕ್ತನಾದ. ಈಗ ಆತ ಸೇರಿದ್ದು 4ನೇ ಇನ್‌ಫೆಂಟ್ರಿ ಡಿವಿಜನ್ನನ್ನು. ಈ ನಡುವೆ ತುಸು ಕಠಿಣಹೃದಯಿಯೆನಿಸಿದ ಮಾರ್ಥಾಳಿಂದ ದೂರವಾಗಿ ಮೇರಿವೆಲ್ಶ್ ಎಂಬ ಮೃದುಹೃದಯಿ ಹೆಂಗಸನ್ನು ಲಗ್ನವಾದ. ಮಹಾಯುದ್ಧ ಮುಗಿದ ನಂತರ ಅವರು ಹವಾನಾದಲ್ಲಿ ನೆಲೆಸಿದರು. ಆನಂತರ ಯುದ್ಧ ಅಪಘಾತಗಳಲ್ಲಿ ಉಂಟಾದ ಗಾಯಗಳೊಡನೆ ತಲೆ ಹಾಗೂ ಕಣ್ಣಿನ ಬೇನೆಯೂ ಸೇರಿ ಅರ್ನೆಸ್ಟ್‌ನ ಆರೋಗ್ಯ ಕೆಟ್ಟಿತು. ಆ ದಿನಗಳಲ್ಲಿ ಹೊರಬಂದ ಕೃತಿ The Old Man and the Sea ಅವನ ಇಡಿಯ ಆಯುಷ್ಯದಲ್ಲಿನ ನೀರು-ಮೀನು ಹಾಗೂ ಮೀನುಗಾರರೊಡನೆಯ ಗಾಢ ಸಂಬಂಧದ ಸುಂದರ ಚಿತ್ರಣವಾಗಿತ್ತು. ಅದಕ್ಕೆ ಪ್ರತಿಷ್ಠೆಯ ಪುಲಿಟ್ಝರ್ ಬಹುಮಾನವಲ್ಲದೆ ಮುಂದೆ ನೋಬೆಲ್ ಪ್ರಶಸ್ತಿಯೂ ದೊರಕಿತು.

ಐವತ್ತರ ದಶಕದಲ್ಲಿಯೂ ಆತನ ಆಸಕ್ತಿಗಳು ನೂರು ಮುಖವಾಗಿದ್ದವು. ಬೇಟೆ, ಮೀನುಗಾರಿಕೆ, ಬರವಣಿಗೆ, ಓದು, ಪ್ರವಾಸ ಇವೂ ಅವ್ಯಾಹತವಾಗಿ ಸಾಗಿಯೇ ಇದ್ದವು. ರಕ್ತದ ಒತ್ತಡದಿಂದ ಬಳಲುತ್ತಿದ್ದ ಆತನಿಗೆ ತನ್ನ ಜೀವನವಿಡೀ ಸಂಗಾತಿಗಳಾಗಿದ್ದ ಈ ಹಲವಾರು ಕ್ರಿಯೆಗಳಿಗೆ ತನ್ನ ದೈಹಿಕ ದುರ್ಬಲತೆಯಿಂದಾಗಿ ಅಡ್ಡಿ ಬಂದಂತೆನಿಸಿತು. ಮನಸ್ಸು ಎಷ್ಟೇ ಪ್ರಬಲವಾಗಿದ್ದರೂ ದೇಹ ದುರ್ಬಲವಾಗತೊಡಗಿ ಮಾನಸಿಕ ಶಕ್ತಿಯಿಂದ ದೈಹಿಕ

ದುರ್ಬಲತೆಯನ್ನು ಇಕ್ಕಿ ಮೆಟ್ಟುವುದು ಸಾಧ್ಯವಾಗದೆ ಹೋಗಿ, ಸಾಹಸೀ ಜೀವನ ನಡೆಸಿದ್ದ ಅರ್ನೆಸ್ಟ್ ಹೆಮಿಂಗ್ವೇಗೆ ಬದುಕು ದುರ್ಭರವೆನ್ನಿಸಿತು. ಮಹಾಯುದ್ಧದ ಭೀಕರ ಪರಿಣಾಮಗಳು, ಆತ್ಮೀಯ ಸ್ನೇಹಿತರ ಸಾವು ಆತನನ್ನು ಇನ್ನೂ ಜರ್ಝರಿತಗೊಳಿಸಿದವು. ಕೊನೆಗೊಮ್ಮೆ ಅರ್ನೆಸ್ಟ್ ಬಂದೂಕಿನಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಅಸಾಮಾನ್ಯ ಧೈರ್ಯಶಾಲಿಯೂ ಕೆಚ್ಚೆದೆಯ ಯೋಧನೂ ಆಗಿದ್ದ ಆತ ಆತ್ಮಹತ್ಯೆಯಂಥ ಕೆಲಸ ಮಾಡಿರಲಾರ, ಆತನ ಸಾವು ಒಂದು ಆಕಸ್ಮಿಕ ಅಪಘಾತವೆಂದು ಹಲವರ ಅಭಿಪ್ರಾಯ. ಒಟ್ಟು ಅರ್ಧಶತಕವಿಡೀ ಕಾದಂಬರೀ ಸಾಮ್ರಾಟನಾಗಿ ಮೆರೆದ ಆತನ ಬದುಕು ಹೀಗೆ ದುರಂತದಲ್ಲಿ ಕೊನೆಗೊಂಡಿತು.

3

ಹೆಮಿಂಗ್ವೇನ ಇತರ ಕಾದಂಬರಿಗಳಿಗಿಂತ 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ' ಭಿನ್ನವಾದ ಕೃತಿ. ಒಂದು ಸಲ ಗೆಳೆಯನೊಬ್ಬ ಮೀನು ಹಿಡಿಯುವುದರಲ್ಲೇನು ಸ್ವಾರಸ್ಯವಿದೆ? ಎಲ್ಲಿ ಗಂಡಾಂತರವಿಲ್ಲವೋ ಅಲ್ಲಿ ಥ್ರಿಲ್ ಇರಲು ಹೇಗೆ ಸಾಧ್ಯ ?– ಎಂದೆಲ್ಲ ಆತನಿಗೆ ಕೇಳಿದನಂತೆ. ಅಷ್ಟೆ ಅಲ್ಲ, ಆನೆಯ ಬೇಟೆಯಾಡುವುದರಲ್ಲಿ ಇರುವ ಖುಷಿ ಬೇರಾವುದರಲ್ಲೂ ಇರಲು ಶಕ್ಯವಿಲ್ಲ ಎಂದು ಖಚಿತವಾಗಿ ಹೇಳಿದನಂತೆ. ಈ ಬಗ್ಗೆ ಏಪ್ರಿಲ್1936ರ Esquire ಪತ್ರಿಕೆಯಲ್ಲಿ ಬರೆದ ಲೇಖನವೊಂದರಲ್ಲಿ ಅರ್ನೆಸ್ಟ್ ಮೀನು ಹಿಡಿಯುವುದರಲ್ಲಿರುವ ನಿಜವಾದ ಸ್ವಾರಸ್ಯವನ್ನು ತುಂಬ ಸ್ವಾರಸ್ಯಕರವಾಗಿ ವಿವರಿಸಿದ್ದಾನೆ. ಈ ಸಂದರ್ಭದಲ್ಲಿ ಒಂದು ನೈಜ ಘಟನೆಯನ್ನು ಉದಾಹರಣೆಯಾಗಿ ಕೊಟ್ಟಿದ್ದಾನೆ. ಒಂದು ಸಲ ಕಬಾನಾದಲ್ಲಿ ಒಬ್ಬ ಮುದುಕ ಒಂದು ಚಿಕ್ಕ ಮೀನು ಹಿಡಿಯುವ ದೋಣಿಯಲ್ಲಿ ಒಬ್ಬನೇ ಹೋದಾಗ ದೊಡ್ಡದಾದ ಮಾರ್ಲಿನ್ ಮೀನೊಂದು ಆತನ ಗಾಳಕ್ಕೆ ಸಿಕ್ಕಿತು. ದೋಣಿಯನ್ನು ಎಳೆದುಕೊಂಡು ಆ ಬೃಹತ್ ಗಾತ್ರದ ಮೀನು ಎರಡು ರಾತ್ರಿ, ಎರಡು ಹಗಲು ಹಾಗೆಯೇ ಸಮುದ್ರದಲ್ಲಿ ಮುಂದೆ ಮುಂದೆ ಹೋಯಿತು. ಕೊನೆಗೊಮ್ಮೆ ಆ ಮೀನು ಸತ್ತು ಶರಣಾಗಿ ಮೇಲೆ ಬಂದಾಗ ಆ ಮುದುಕ ತುಂಬ ಪ್ರಯಾಸದಿಂದ ಅದನ್ನು ಎಳೆದುಕೊಂಡು ತಿರುಗಿ ಬರಲು ಪ್ರಯತ್ನಿಸಿದಾಗ ಶಾರ್ಕ್ ಇತ್ಯಾದಿ ಇತರ ಮೀನುಗಳು ಆ ಮೀನನ್ನು ತಿಂದು ಹಾಕಿದವು. ತನ್ನ ಪ್ರಯತ್ನ ನಿಷ್ಫಲವಾಗಿ ಅಳುತ್ತಲಿದ್ದ ಮುದುಕನನ್ನು ಉಳಿದ ಮೀನುಗಾರರು ತಿರುಗಿ ಕರೆದುಕೊಂಡು ಬಂದರು. ಈ ಘಟನೆಯನ್ನು ವಿವರಿಸುತ್ತಾ ಹೆಮಿಂಗ್ವೆ ಹೇಳುತ್ತಾನೆ – ಆಳ ಸಮುದ್ರದಲ್ಲಿ ಬಲಶಾಲಿಯಾದ ಮೀನಿನ ಬೆನ್ನುಹತ್ತಿ, ಅದರೊಂದಿಗೆ ಹಾಗೂ ನೀರಿನೊಂದಿಗೆ ಕೂಡಿಯೇ ಹೋರಾಡಿ, ಎರಡನ್ನೂ ಜಯಿಸುವುದರಲ್ಲಿರುವ ಅವರ್ಣನೀಯ ಅಭೂತಪೂರ್ವ ಖುಷಿಯನ್ನು ಅನುಭವಿಸಿ

ದವರು ಬಲ್ಲರೇ ವಿನಾ ಅದನ್ನು ಹೇಳಲು ಸಾಧ್ಯವಿಲ್ಲ. ಈ ಘಟನೆಯೇ ಆತನ ಈ ಪ್ರಸಿದ್ಧ ಕಾದಂಬರಿಯ ಮೂಲ.

ಕಾದಂಬರಿಯ ನಾಯಕ ಸ್ಯಾಂಟಿಯಾಗೊ ಒಬ್ಬ ಮುದುಕ ಮೀನುಗಾರ. ('ಸ್ಯಾಂಟಿಯಾಗೊ' ಅಂದರೆ 'ಸೇಂಟ್ ಜೇಮ್ಸ್' ಎಂದರ್ಥ). ಈ ಮುದುಕ ನಡೆಸಿದ ಹೋರಾಟ, ತೋರಿದ ಸ್ಥೈರ್ಯ - ತಾಳ್ಮೆ - ಮನೋಬಲ ಇವು ಯಾವ ಪ್ರವಾದಿಗೂ ಕಡಿಮೆಯಿಲ್ಲದಂತಹವೆಂದು ಇಲ್ಲಿ ಸೂಚಿಸಲಾಗಿದೆ. ಈ ಸ್ಯಾಂಟಿಯಾಗೊಗೆ ಹಲವಾರು ದಿನ ದುರ್ದೈವದಿಂದ ಮೀನೇ ಸಿಗುವುದಿಲ್ಲ. ಒಂದು ಮಂಜಾನೆ ಕ್ಯೂಬಾ ದ್ವೀಪದ ದಂಡೆಗುಂಟ ಆತ ಒಬ್ಬನೇ ತನ್ನ ಚಿಕ್ಕ ಮೀನುದೋಣಿಯನ್ನು ತೆಗೆದುಕೊಂಡು ಹೋಗುತ್ತಾನೆ. ಮಧ್ಯಾಹ್ನ ಆತನ ಗಾಳಕ್ಕೆ ದೊಡ್ಡದೊಂದು ಮಾರ್ಲಿನ್ ಮೀನು ಸಿಕ್ಕಿಹಾಕಿಕೊಳ್ಳುತ್ತದೆ. ಎರಡು ರಾತ್ರಿ, ಎರಡು ಹಗಲು ಸತತವಾಗಿ ಒಂದೇ ಸಮನೆ ಜೀವದ ಹಂಗು ತೊರೆದು ಆ ಮೀನಿನ ಆಸೆಯಿಂದ ಆತ ಆ ಮೀನು ದೋಣಿಯನ್ನು ದೂರ ಉತ್ತರಕ್ಕೆ, ಪೂರ್ವಕ್ಕೆ ಎಳೆದೊಯ್ಯಲು ಬಿಡುತ್ತಾನೆ. ಮೂರನೆಯ ದಿನ ಮಧ್ಯಾಹ್ನಕ್ಕೆ ಆ ಮೀನನ್ನು ಹಾಗೂ ಹೀಗೂ ನೀರಿನ ಮೇಲೆ ಎಳೆತಂದು ತನ್ನ ಭರ್ಜಿಯಿಂದ ಅದನ್ನು ಕೊಲ್ಲಲು ಶಕ್ತನಾಗುತ್ತಾನೆ. ದೋಣಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗದಷ್ಟು ದೊಡ್ಡದಾಗಿರುವ ಆ ಮೀನನ್ನು ತನ್ನ ದೋಣಿಯ ಬದಿಗಿರುವ ಉದ್ದನ್ನ ಪಟ್ಟಿಗೆ ಕಟ್ಟಿ ಬಿಗಿದು ದಂಡೆಯೆಡೆ ಹೊರಡುತ್ತಾನೆ. ಆದರೆ ಉದ್ದಕ್ಕೂ ಆತ ಶಾರ್ಕ್‌ಗಳ ದಾಳಿಯನ್ನೆದುರಿಸಬೇಕಾಗುತ್ತದೆ. ಕೊನೆಗೊಮ್ಮೆ ದಂಡೆ ಸೇರಿದಾಗ ಆತ ಅಷ್ಟೊಂದು ಪ್ರಯಾಸಪಟ್ಟು ಹಿಡಿದ ಮೀನಿನ ಅಸ್ಥಿಪಂಜರ, ತಲೆ ಹಾಗೂ ಬಾಲ ಮಾತ್ರ ಉಳಿದಿರುತ್ತದೆ.

ಹೀಗೆ ತನ್ನ ಹೋರಾಟದಲ್ಲಿ ಮುದುಕ ಸ್ಯಾಂಟಿಯಾಗೊ ಗೆದ್ದೂ ಸೋಲುತ್ತಾನೆ. ಒಬ್ಬ ಮನುಷ್ಯ ಅವಶ್ಯಕತೆಯಿದ್ದಾಗ, ಗಂಡಾಂತರ ಪರಿಸ್ಥಿತಿಯಲ್ಲಿ, ತನ್ನ ಮನೋಕಾಮನಾ ಸಿದ್ಧಿಗಾಗಿ, ಎಷ್ಟರಮಟ್ಟಿಗೆ ವಿರುದ್ಧ ಶಕ್ತಿಗಳ ಕೂಡ ಸೆಣಸಾಡಬಲ್ಲನೆಂದು ಆತ ತೋರಿಸುತ್ತಾನೆ. ತನ್ನ ಪ್ರಯತ್ನವನ್ನು ಆತ ಕೊನೆವರೆಗೂ ಮುಂದುವರಿಸುತ್ತಾನೆ. ಕಷ್ಟಪಟ್ಟು ಆತ ಪಡೆದದ್ದನ್ನು ದುಷ್ಟಶಕ್ತಿಗಳು ಅಪಹರಿಸಿಕೊಂಡು ಹೋಗುತ್ತವೆ. ಈ ಸೆಣಸಾಟದಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ತೀರ ದುರ್ಬಲನಾದ ಆತ ಕೊನೆಯಲ್ಲಿ ಸೋಲು ಹಾಗೂ ಗೆಲುವಿನ ನಡುವಿನ ಅಂತರವನ್ನು ಸಹ ಅರಿಯಲಾರದಂಥ ಮನಃಸ್ಥಿತಿಯನ್ನು ತಲುಪಿರುತ್ತಾನೆ. ಭಯಾನಕ ಸೋಲಿನ ಎದುರಲ್ಲೂ ಎಲ್ಲವನ್ನೂ ಕಳಕೊಂಡಾಗಲೂ ತನ್ನ ಹೋರಾಟದ ಸಾರ್ಥಕ್ಯದ ಪೂರ್ಣ ಅರಿವಿರುವ ಸ್ಯಾಂಟಿಯಾಗೋನದು ಜೀವನದಲ್ಲಿ ದುಷ್ಟಶಕ್ತಿಗಳ ಮೇಲಿನ ನೈತಿಕ ವಿಜಯವೆನಿಸುತ್ತದೆ. ಹೊರನೋಟಕ್ಕೆ ಈ ಕಥೆ ಹೆಮಿಂಗ್ವೆ ತನ್ನ ಲೇಖನದಲ್ಲಿ ನಮೂದಿಸಿದ ಘಟನೆಯನ್ನಾಧರಿಸಿ ಹೆಣೆದ ಹಾಗೆ ಕಾಣುವುದಾದರೂ ಇದು ಕೇವಲ ಮುದುಕ ಮೀನುಗಾರನ ಹೋರಾಟ ಅಥವಾ ಜಯಾಪಜಯಗಳ ಕಥೆಯಲ್ಲ; ಒಬ್ಬ ಮನುಷ್ಯ

ತನ್ನ ಮನೋಬಲದಿಂದಾಗಿ ಸೋಲಿನ ಮುಖದಲ್ಲೂ ಹೇಗೆ ಬೀಳದೆ ಇರಬಲ್ಲ ಎಂಬುದನ್ನು ಸಮರ್ಥವಾಗಿ ತೋರಿಸುವ ಕೃತಿ ಇದು.

'ಆತನೊಬ್ಬ ತೆಳ್ಳಗಿನ ನಿರಿಗಟ್ಟಿದ ಮುಖದ ಮುದುಕ. ಬಿಸಿಲಿನಿಂದ ಆತನ ಮುಖ, ಕುತ್ತಿಗೆ ಎಲ್ಲ ಸುಟ್ಟಹಾಗೆ ಕಾಣುತ್ತಿತ್ತು. ಅವನದಾದ ಎಲ್ಲವೂ ಜರ್ಝರಿತವೂ ಹಳೆಯದೂ ಆಗಿತ್ತು, ಕೇವಲ ಅವನ ಕಣ್ಣುಗಳು ಮಾತ್ರ ಸಮುದ್ರದ ಬಣ್ಣದವಾಗಿದ್ದು ಅಜೇಯವಾಗಿ ಕೌತುಕಪೂರ್ಣವಾಗಿ ಕಾಣುತ್ತಿದ್ದವು.' ವರ್ಡ್ಸ್‌ವರ್ಥ್‌ನ 'Leech Gatherer' ನ ಹಾಗೆ ಬಲಶಾಲಿಯಾದ ನೈಸರ್ಗಿಕ ಶಕ್ತಿಯ ಎದುರು ಏಕಾಕಿಯಾಗಿ ಛಲದಿಂದ ಹೋರಾಡುವ ಈ ಮುದುಕನ ಪಾತ್ರ ಮೊದಲಲ್ಲಿ ಅನುಕಂಪ ಮೂಡಿಸಿದರೂ ಕಥೆ ಬೆಳೆದಹಾಗೆ ಓದುಗನ ಅನುಕಂಪ ಕ್ರಮೇಣ ಕೌತುಕವಾಗಿ, ಪ್ರಶಂಸೆಯಾಗಿ, ಗೌರವವಾಗಿ, ಕೊನೆಯಲ್ಲಿ ಇಡೀ ಜೀವನದ ಬಗೆಗೆ ಒಂದು ರೀತಿಯ ಭಯಮಿಶ್ರಿತ ಆಶ್ಚರ್ಯಮಿಶ್ರಿತ ಚಮತ್ಕಾರ ಪೂರ್ಣ ಅನುಭವವಾಗಿ ಮಾರ್ಪಡುತ್ತದೆ. ಸ್ವಭಾವತಃ ಸಾಹಸಪ್ರಿಯನಾದ ಹೆಮಿಂಗ್ವೆ ಈ ಕೃತಿಯಲ್ಲಿ ತನ್ನ ನಾಯಕನು ಸಾಹಸವೇ ಮೂರ್ತಿವೆತ್ತಂತಹ ವಿರುದ್ಧ ಶಕ್ತಿಯೊಂದಿಗೆ ಹೋರಾಡುವಂತೆ ಮಾಡುತ್ತಾನೆ. ಎದುರಾಳಿಯ ಶಕ್ತಿಯೂ ಅಪಾರವಾದುದರಿಂದ ಮುದುಕನ ಹೋರಾಟ ಅಪ್ರತಿಮವೆನಿಸುತ್ತದೆ. ಮೊದಲ ಸಲ ಮುದುಕನ ಗಾಳದ ಹಸಿರುಬಣ್ಣದ ಕೋಲಿಗೆ ಭಾರವಾದ ಮೀನು ಸಿಲುಕಿಕೊಂಡಾಗ ಆತನಿಗೆ ಮಹತ್ತರವಾದುದೇನೋ ನಡೆಯಲಿದೆ ಯೆಂಬ ಅತೀಂದ್ರಿಯವಾದುದೊಂದು ಅರಿವಾಗುತ್ತದೆ. ಆಗ ನೀರಿನ ಒಳಗೆ ಆರು ನೂರು ಅಡಿ ಆಳದಲ್ಲಿ ಆ ಮೀನು ಗಾಳಕ್ಕೆ ಸಿಕ್ಕಿಸಿದ ತನ್ನ ಬೇಟೆಯನ್ನು ತಿನ್ನುತ್ತಿರುತ್ತದೆ. ನಂತರ ಆ ದೊಡ್ಡ ಮೀನು ಗಾಳವನ್ನೂ ಕೊಕ್ಕೆಯನ್ನೂ ದೋಣಿಯನ್ನೂ ಪೂರ್ಣಶಕ್ತಿಯಿಂದ ಎಳೆದುಕೊಂಡು ಹೋಗುತ್ತಿರುವಾಗ ಮುದುಕನು ತನ್ನ ಪೂರ್ಣಶಕ್ತಿ ಉಪಯೋಗಿಸಿ ಸಮಬಲದಿಂದ ತನ್ನ ಸ್ಥಳದಲ್ಲಿ ಸುರಕ್ಷಿತವಾಗಿರಲು ಪ್ರಯತ್ನಿಸುತ್ತಾನೆ. ಈಗ ಆತನ ವಿಚಾರಶಕ್ತಿಗಿಂತ ಸಹನಶಕ್ತಿಯದೇ ಕ್ರಿಯೆ ನಡೆದಿರುತ್ತದೆ. ಸಂಜೆಯಾದರೂ ಒಮ್ಮೆ ಸಹ ಒಂದಿಷ್ಟು ಸಹ ಮೇಲಿನ ಪಾತಳಿಗೆ ಬರದ ಆ ಮೀನನ್ನು ನೋಡುವ ಕುತೂಹಲ ಮುದುಕನಿಗೆ ಹೆಚ್ಚಾಗುತ್ತಲೇ ಹೋಗುತ್ತದೆ. ಒಂದು ಸಾಹಸೀ ಶಕ್ತಿಯ ವಿರುದ್ಧ ಮತ್ತೊಂದು ಸಾಹಸೀಶಕ್ತಿಯ ಸೆಣಸಾಟ ಹೀಗೆ ಪ್ರಾರಂಭವಾಗುತ್ತದೆ. ಎರಡರಲ್ಲಿ ಯಾವ ಶಕ್ತಿಯೂ ತನ್ನ ಎದುರಾಳಿಯನ್ನು ಇನ್ನೂ ಕಣ್ಣಾರೆ ಕಂಡಿರುವುದಿಲ್ಲ.

ಎರಡನೆಯ ದಿನ ಮಧ್ಯಾಹ್ನದ ಹೊತ್ತಿಗೆ ಮೊದಲ ಸಾರಿ ಮುದುಕನಿಗೆ ಆ ಮೀನಿನ ಸ್ವರೂಪ ಗೋಚರಿಸುತ್ತದೆ. ಕಡುನೇರಳೆ ಬಣ್ಣದ ಆ ಮೀನು ನೀರಿನ ಮೇಲ್ಗಡೆ ಬಂದಾಗ ಅದರ ಸುತ್ತಲೂ ನೀರು ಬುಗ್ಗೆಯಾಗಿ ಚಿಮ್ಮುತ್ತದೆ. ಅದರ ಉದ್ದವಾದ ಹಾಗೂ ಹರಿತವಾದ ಬಾಲವನ್ನು ಪಟ್ಟೆಗಳಿರುವ ಮಗ್ಗುಲುಗಳನ್ನು ಆಶ್ಚರ್ಯದಿಂದ ನೋಡಿದ ಸ್ಯಾಂಟಿಯಾಗೊ ಆ ಮೀನು ತನ್ನ ದೋಣಿಗಿಂತಲೂ ತುಂಬ ದೊಡ್ಡದಿರುವುದನ್ನು ಗಮನಿಸುತ್ತಾನೆ. ಮೀನಿನ ಶಕ್ತಿ

ಸಾಮರ್ಥ್ಯಗಳ ಬಗ್ಗೆ ತುಂಬ ಗೌರವ ಹೊಂದಿದ್ದ ಆತ ಈಗ ಅದರೊಂದಿಗೆ ಏಕಮುಖ ಸಂಭಾಷಣೆ ನಡೆಸುತ್ತಾನೆ. ನೀಲ ಸಮುದ್ರದಲ್ಲಿನ ಪಯಣದಲ್ಲಿ ಆತನ ಏಕಮೇವ ಸಜೀವ ಸಂಗಾತಿಯಾದ ಆ ಮೀನಿನ ಬಗ್ಗೆ ಆತನಲ್ಲಿ ಒಂದು ಬಗೆಯ ಭ್ರಾತೃಭಾವ ಉದ್ಭವಿಸುತ್ತದೆ. ತನ್ನಲ್ಲಿ ಅಳಿದುಳಿದ ಒಣತಿಂಡಿ ತಿನ್ನುವಾಗ ಅದಕ್ಕೂ ಒಂದು ತುಂಡು ಕೊಡೋಣವೇ ಅನಿಸುತ್ತದೆ. ಆದರೆ ಈ ಹೋರಾಟದಲ್ಲಿ ತಾನು ಮೇಲುಗೈ ಸಾಧಿಸಬೇಕಾದರೆ ಅದರ ಶಕ್ತಿ ಅಳಿದು ತನ್ನ ಶಕ್ತಿ ಉಳಿಯುವುದು ಅವಶ್ಯವಾದುದರಿಂದ ಆತ ಹಾಗೆ ಮಾಡುವುದಿಲ್ಲ. ತನ್ನ ಎದುರಾಳಿ ತುಂಬಾ ಶಕ್ತಿಶಾಲಿಯಾದ ಮಾರ್ಲಿನ್ ಎಂದು ಗೊತ್ತಾದ ಕ್ಷಣದಿಂದ ಅದನ್ನು ಸಮರ್ಥವಾಗಿ ಎದುರಿಸಲು ಹಾಗೂ ಜಯಿಸಲು ತಾನು ಶಕ್ತನಾಗಬೇಕೆಂದು ನಿರ್ಧರಿಸಿದ ಸ್ಯಾಂಟಿಯಾಗೋನ ಹೋರಾಟಕ್ಕೆ ಈಗೊಂದು ನಿಶ್ಚಿತ ಗತಿ ಪ್ರಾಪ್ತವಾಗುತ್ತದೆ. ಸುತ್ತಣ ಏಕಾಂತ, ನೀರವತೆ, ಹಸಿವು, ಏಕಾಕಿತನ, ನಿಶ್ಶಕ್ತಿ – ಈ ಎಲ್ಲವನ್ನೂ ಮೀರಿದ ಶಕ್ತಿಯೊಂದನ್ನು ಪ್ರಯತ್ನಪೂರ್ವಕವಾಗಿ ತನ್ನೊಳಗೆ ತಾನೇ ನಿರ್ಮಿಸಿಕೊಂಡು ಆತ ಮುಂದುವರಿಯುತ್ತಾನೆ. 'ಒಬ್ಬ ಮನುಷ್ಯ ಇತರ ಯಾವುದೇ ಜಂತುವಿಗಿಂತ ಎಷ್ಟು ಹೆಚ್ಚು ಸಮರ್ಥನೆಂದು ನಿನಗೆ ನಾನು ತೋರಿಸಿಯೇ ತೀರುತ್ತೇನೆ' ಎಂದು ಆ ಮಾರ್ಲಿನ್‌ಗೆ ಹೇಳುತ್ತ ಆತ ಸಾಗುತ್ತಾನೆ. ಜೀವನದ ಹೋರಾಟದಲ್ಲಿ ಗೆಲ್ಲಬೇಕಾದರೆ ಮನುಷ್ಯನಿಗೆ ಅತ್ಯವಶ್ಯವಾಗಿ ತಾಳ್ಮೆ-ಸ್ಥೈರ್ಯ-ಮನೋಬಲ ಇವು ಬೇಕೆಂದು ಸ್ಯಾಂಟಿಯಾಗೋನ ಅವಿರತ ಹೋರಾಟ ಸೂಚಿಸುತ್ತದೆ.

ಈ ಹೋರಾಟ ಅತ್ಯಂತ ಕ್ಲಿಷ್ಟವಾದ ಕ್ಲೈಮ್ಯಾಕ್ಸ್ ತಲುಪುವುದು ಮೂರನೆಯ ಮುಂಜಾನೆ ಮಾರ್ಲಿನ್ ಬಳಲಿ ದೋಣಿಯ ಬಳಿಗೇ ಬಂದಾಗ. ತನ್ನಲ್ಲಿ ಅಳಿದುಳಿದಿದ್ದ ಎಲ್ಲ ಹಗ್ಗ ತಂತಿಗಳನ್ನು ಬಳಸಿ ಅದನ್ನು ಬಳಿಗೆಳೆದು ಭರ್ಚಿಯಿಂದ ಕೊಲ್ಲಲೆಂದು ಮುದುಕ ಶ್ರಮಿಸತೊಡಗುತ್ತಾನೆ. 'ನಿನ್ನಷ್ಟು ದೊಡ್ಡದಾದ ಹಾಗೂ ಬಲಶಾಲಿಯಾದ ಮೀನನ್ನು ಇದುವರೆಗೂ ನಾನು ನೋಡಲಿಲ್ಲ, ನನಗನಿಸುತ್ತಿದೆ – ಈ ಹೋರಾಟದಲ್ಲಿ ನಿನ್ನದೇ ಮೇಲುಗೈಯಾಗುತ್ತಲಿದೆ. ನೀನೇ ನನ್ನನ್ನು ಗೆಲ್ಲುತ್ತಲಿರುವಿ. ಹೋಗಲಿ, ಹೇಗಾದರೂ ಇದೊಮ್ಮೆ ಮುಗಿದುಹೋಗಲಿ, ಯಾರು ಯಾರನ್ನು ಗೆದ್ದರೂ ಕೊಂದರೂ ಸರಿ' – ಅನ್ನುತ್ತಾನೆ. ಆದರೆ ಕೊನೆಯ ಸಲ ಆತ ತುಂಬ ಶ್ರಮಪಟ್ಟು ಎಳೆದಾಗ ಆ ಮೀನು ದೋಣಿಯ ಹತ್ತಿರ ಬರಲು ತನ್ನ ವಿಶಿಷ್ಟವಾದ ಭರ್ಚಿ-ಹಾರ್ಪೂನ್‌ದಿಂದ ಅದನ್ನು ಕೊಲ್ಲಲು ಆತ ಶಕ್ತನಾಗುತ್ತಾನೆ. ನಾಲ್ವತ್ತೆಂಟು ಗಂಟೆಗಳ ಈ ಅವಿರತ ಹೋರಾಟದಲ್ಲಿ ಹೆಮಿಂಗ್ವೇನ ಉದ್ದೇಶ ಸಫಲವಾಗುತ್ತದೆ. ಅದೆಂದರೆ – ಪ್ರತಿಯೊಬ್ಬ ಒಳ್ಳೆಯ ಮನುಷ್ಯನಲ್ಲೂ ಜೀಸಸ್ ಕ್ರೈಸ್ಟನ ಕೆಲವೊಂದು ಅಂಶಗಳಿರುತ್ತವೆ ಎಂದು ತೋರಿಸುವುದು. ಗುರಿ ತಲುಪುವವರೆಗೂ ಹಿಂದೆ ಸರಿಯದ ಛಲ, ಕಷ್ಟಗಳ ಪರಂಪರೆಗಳನ್ನೇ ಎದುರಿಸುತ್ತ ಸಾಗುವ ಧೈರ್ಯ, ಗುರಿ ಸಾಧನೆಯತ್ತ ಲಕ್ಷ್ಯವಿಟ್ಟು ದೈಹಿಕ ನೋವಿನ ತೀವ್ರತೆಯನ್ನು ಕಡೆಗಣಿಸುವ ಮನೋಬಲ, ಇದೆಲ್ಲಕ್ಕೂ ಹೆಚ್ಚಾಗಿ ಕೊನೆಯಲ್ಲಿ ತೀರ ಸೋತುಹೋದ ಸ್ಯಾಂಟಿಯಾಗೊ ತನ್ನ ದೋಣಿಯ

ಕಟ್ಟಿಗೆಯ ಹಾಯಿಗೆ ಆತುನಿಂತು, ತನ್ನ ಮೆದುಳಿಗೆ ಎರಡು ಕ್ಷಣ ವಿಶ್ರಾಂತಿ ಕೊಟ್ಟು, ದೈಹಿಕವಾಗಿ ಮಾನಸಿಕವಾಗಿ ನಿಷ್ಕ್ರಿಯವಾಗಿ ಪರಿಸ್ಥಿತಿಯನ್ನು ಎದುರಿಸುವ ದೃಶ್ಯ, ನೇರವಾಗಿ ಶಿಲುಬೆಯ ಮೇಲಿನ ಕ್ರೈಸ್ಟ್‌ನನ್ನು ನೆನಪಿಸುತ್ತವೆ. ಇವುಗಳ ಜೊತೆಗೇ ಮುದುಕನಲ್ಲಿ ಅನುಕಂಪ, ಭೀರುತನ ಹಾಗೂ ವಿನೀತತೆಯೂ ಇವೆ. ಆತನ ಪ್ರಿಯ ಶಿಷ್ಯ ಮನೋಲೋ ಆತನನ್ನು ಅತ್ಯಂತ ಶ್ರೇಷ್ಠ ಮೀನುಗಾರನೆಂದು ಕರೆದ ಪ್ರತಿಸಾರಿಯೂ ಮುದುಕ 'ಇಲ್ಲ ಇಲ್ಲ, ನನಗಿಂತಲೂ ಶ್ರೇಷ್ಠರಾದವರು ಅನೇಕರಿದ್ದಾರೆ' ಅನ್ನುತ್ತಾನೆ. ದೊಡ್ಡದಾದ ಮಾರ್ಲಿನ್ ಅನ್ನು ಕೊಲ್ಲಲು ಶಕ್ತನಾದ ನಂತರವೂ ಆತನಿಗೆ ಹೆಮ್ಮೆಯೆನಿಸುವುದೇ ಇಲ್ಲ; ಯಾಕೆಂದರೆ ಆ ಹೊತ್ತಿಗೆ ಆತನಲ್ಲಿ ಶಕ್ತಿಯೆಲ್ಲ ಸೋರಿಹೋಗಿರುತ್ತದೆ.

ಈ ಮುದುಕನಿಗೆ ಎಲ್ಲ ಚರಾಚರ ವಸ್ತುಗಳ ಬಗೆಗೆ, ವಿಶೇಷವಾಗಿ ಜಲಚರಗಳ ಬಗ್ಗೆ, ಅತ್ಯಧಿಕವಾಗಿ ಹಾರುವ ಮೀನುಗಳ ಬಗ್ಗೆ ತುಂಬಾ ಪ್ರೀತಿ, ಅನುಕಂಪ, ಸಹಾನುಭೂತಿ. ಮೀನುಗಳ ಬೇಟೆಗಾಗಿ ಸಮುದ್ರದ ತೆರೆಗಳ ತುಸುವೇ ಮೇಲೆ ಹಾರುತ್ತಿರುವ ಪಕ್ಷಿಗಳ ಬಗೆಗೂ ಆತನಿಗೆ ಪ್ರೀತಿ. ಈ ಪ್ರೀತಿ ಭಾವುಕವಲ್ಲ, ಬದಲಿಗೆ ತೀರ ಸಹಜ ಹಾಗೂ ವಾಸ್ತವಿಕ. ಆತ ಅವುಗಳೊಡನೆ ಸಹಜವಾಗಿ ಸಂಭಾಷಿಸಬಲ್ಲ, ಚರ್ಚಿಸಬಲ್ಲ, ವಾದಿಸಲೂ ಬಲ್ಲ. ತಾನು ಗಾಳ ಹಾಕಿದ ಮಾರ್ಲಿನ್ ಬಗ್ಗೆ ಆತನಿಗೆ ಅತ್ಯಂತ ಮಮತೆ. 'ಎಷ್ಟು ಸುಂದರ, ಅದ್ಭುತ, ಭವ್ಯ ಹಾಗೂ ವಿಚಿತ್ರ !' ಎಂದು ಅದರ ಬಗ್ಗೆ ಆತ ಕೌತುಕಪೂರ್ಣ ಪ್ರಸಂಸೆಯೊಂದಿಗೆ ಯೋಚಿಸುತ್ತಲೇ ಇರುತ್ತಾನೆ. ಹೆಮಿಂಗ್ವೇನ ಈ ನಾಯಕ ಮಾನವೀಯ ಮೌಲ್ಯಗಳುಳ್ಳವನೂ ಮೃದುಹೃದಯಿಯೂ ಆದ ಕೆಚ್ಚೆದೆಯ ಸಹನಾಮೂರ್ತಿ. ಎಂಥ ವಿಚಿತ್ರ ಗುಣಗಳ ಹೊಂದಾಣಿಕೆ!

ಮುದುಕ ಸ್ಯಾಂಟಿಯಾಗೋನ ಜೊತೆಗಾರ-ಶಿಷ್ಯ-ಆರಾಧಕನಾದ ಹುಡುಗ ಮನೋಲೋ. ಓದುಗನಲ್ಲಿ ಮುದುಕನ ಬಗೆಗಿನ ಗೌರವ ಹಾಗೂ ಅನುಕಂಪ ಹೆಚ್ಚಿಸಲು ಈ ಪಾತ್ರದ ಕೌಶಲ್ಯಪೂರ್ಣ ಬಳಕೆಯಾಗಿದೆ. ಯಾರೂ ದಿಕ್ಕಿಲ್ಲದ ಮುದುಕನಿಗೆ ಆಗೀಗ ಊಟ, ತಿಂಡಿ, ಇತರ ಸಹಾಯ ಒದಗಿಸುವವನು ಈ ಮನೋಲೋ. ಮುದುಕನ ಕೌಶಲ್ಯ, ಶಕ್ತಿಯ ಬಗ್ಗೆ ಈ ಹುಡುಗನಿಗೆ ಅಪಾರ ನಂಬಿಕೆ. ಸತತವಾಗಿ ಎಂಬತ್ನಾಲ್ಕು ದಿನ ದುರ್ದೈವದಿಂದ ಬರಿಗೈಯಿಂದಲೇ ಹಿಂದಿರುಗಿದ ಮುದುಕನನ್ನು ಎಂಬತ್ತೈದನೇ ದಿನ ಈ ಮನೋಲೋ ತುಂಬ ಹುರಿದುಂಬಿಸಿ ಬೀಳ್ಕೊಟ್ಟಿರುತ್ತಾನೆ. ಕೊನೆಯಲ್ಲಿ ಷಾರ್ಕ್‌ಗಳೊದಿಗೆ ಸೆಣಸಾಡಿ ತಾನು ಗೆದ್ದ ಮೀನಿನ ಮುಕ್ಕಾಲು ಪಾಲಿಗಿಂತ ಹೆಚ್ಚಿನಷ್ಟನ್ನು ಕಳೆದುಕೊಂಡು ನಿರ್ವಿಣ್ಣನಾಗಿ ಹಿಂದಿರುಗಿದ ಮುದುಕನಿಗೆ ಮನೋಲೋ ಶುಶ್ರೂಷೆ ಮಾಡುತ್ತಾನೆ. ಸ್ಯಾಂಟಿಯಾಗೋ ಪಾಲಿಗೆ ಈ ಹುಡುಗ ತನ್ನ ಗತತಾರುಣ್ಯದ, ಕಳೆದ ದಿನಗಳ ವೈಭವದ, ಸುಂದರ ಕಲ್ಪನೆಗಳ, ಜೀವನದ ಎಲ್ಲ ಆಶೋತ್ತರಗಳ ಏಕಮಾತ್ರ ಸಂಕೇತ. ಮಾರ್ಲಿನ್‌ದ ಬೆನ್ನುಹತ್ತಿ ಆಳಸಮುದ್ರದಲ್ಲಿ ಏಕಾಕಿಯಾಗಿ ಹೋದಾಗ ಹಲವಾರು ಸಲ ಮುದುಕ

ಹುಡುಗನನ್ನು ನೆನೆಯುವುದು ತನ್ನದೇ ಗತಯೌವನದ ಶಕ್ತಿ-ಸಾಮರ್ಥ್ಯಗಳಿಗಾಗಿ ಹಂಬಲಿಸುವ ಪ್ರತೀಕವಾಗುತ್ತದೆ. ಯೌವನದಲ್ಲೊಮ್ಮೆ ಆಫ್ರಿಕಾದ ದಟ್ಟಡವಿಯಲ್ಲಿ ತಾನು ಕಂಡಿದ್ದ ಹೆಮ್ಮೆಯಿಂದ ಬೀಗುತ್ತಿದ್ದ ಸಿಂಹಗಳನ್ನು ಸ್ಯಾಂಟಿಯಾಗೋ ಸದಾ ನೆನೆಸುತ್ತಾನೆ. ಆ ಸಿಂಹಗಳ ಆತ್ಮಪ್ರತಿಷ್ಠೆ ಹಾಗೂ ಶಕ್ತಿಯ ನೆನಪನ್ನು ಆತ ತುಂಬಾ ಪ್ರೀತಿಸುತ್ತಾನೆ. ಮನೋಲೋನ ವ್ಯಕ್ತಿತ್ವದಲ್ಲಿ ಮುದುಕನಿಗೆ ತನ್ನ ಕಳೆದುಹೋದ ದಿನಗಳ ಶಕ್ತಿಯಲ್ಲದೆ ಆ ಸಿಂಹಗಳ ಅಸಾಮಾನ್ಯ ಬಲವೂ ತಿರುತಿರುಗಿ ಕಾಣುತ್ತದೆ. ಹೆಮಿಂಗ್ವೇನ ಅನೇಕ ಕೃತಿಗಳ ನಾಯಕರ ಹಾಗೆ ಸ್ಯಾಂಟಿಯಾಗೋನ ವ್ಯಕ್ತಿತ್ವ ಸಹ ನಿಸರ್ಗದ ಶಕ್ತಿಗಳೊಂದಿಗಿನ ಸಂಬಂಧದಿಂದಲೇ ವಿಶಿಷ್ಟವೂ ಪ್ರಬಲವೂ ಆಗಿದೆ.

ಒಂದು ಸಲ ಆ ಬೃಹತ್ ಮಾರ್ಲಿನ್ ಅನ್ನು ಕೊಂದಾದ ನಂತರ ನಿಶ್ಚಿಂತನಾಗಿ ಮುದುಕನೂ ಆತನ ಬೇಟೆಯೂ ಸಮುದ್ರದಲ್ಲಿ ತಿರುಗಿ ಸಾಗುತ್ತದೆ. ಈ ಹೋರಾಟದಲ್ಲಿ ಎದುರಾಳಿಗಳಿಬ್ಬರೂ ಗೌರವಯುತವಾಗಿ ಹೋರಾಡಿದೆವೆಂಬ ಸಮಾಧಾನ ಆತನಿಗೆ. ಆದರೆ ಒಂದು ತಾಸಿನ ಪಯಣದ ನಂತರ ಮೊದಲ ಶಾರ್ಕ್ ಬಂದು ದಾಳಿ ಮಾಡಿದಾಗ ಆತ ಗುರಿಯಿಟ್ಟು ಅದರ ಮೆದುಳಿಗೆ ಹೊಡೆಯುತ್ತಾನೆ. ಶಾರ್ಕ್ ಸಾಯುವುದಾದರೂ ಸಾಯುವ ಮೊದಲೇ ಮಾರ್ಲಿನ್‌ದ ನಲ್ವತ್ತು ಪೌಂಡಿನಷ್ಟು ಮಾಂಸವನ್ನೂ ಮುದುಕನ ಆಯುಧ ಹಾರ್ಪೂನನ್ನೂ, ಜೊತೆಗೆ ಉದ್ದವಾದ ಹಗ್ಗವನ್ನೂ ತೆಗೆದುಕೊಂಡೇ ನೀರಿನಾಳಕ್ಕೆ ಇಳಿಯುತ್ತದೆ. ಈ ಹೊತ್ತಿಗೆ ಮುದುಕನ ಅಂಗೈಗಳೆರಡರಿಂದಲೂ ರಕ್ತ ಸೋರುತ್ತಿರುತ್ತದೆ. ವಿಪರೀತ ದಣಿವಿನಿಂದ ಹಾಗೂ ನೋವಿನಿಂದ ಆತ ಅರೆನಿದ್ರೆಯಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿರುವಾಗ ಎರಡನೆಯ ಹಾಗೂ ಮೂರನೆಯ ಶಾರ್ಕ್‌ಗಳು ದಾಳಿ ಮಾಡುತ್ತವೆ. ಈಗ ಆತ ತನ್ನಲ್ಲುಳಿದ ಚೂರಿಯಿಂದ ಅವುಗಳನ್ನು ಎದುರಿಸುತ್ತಾನೆ. ಅವು ಮಾರ್ಲಿನ್‌ದ ಕಾಲುಭಾಗದಷ್ಟು ಮಾಂಸವನ್ನು ಧ್ವಂಸ ಮಾಡಿಯೇ ಸಾಯುತ್ತವೆ. ನಾಲ್ಕನೆಯ ಶಾರ್ಕ್ ಅನ್ನು ಕೊಲ್ಲುವಾಗ ಆತನ ಚೂರಿಯೇ ಮುರಿದುಹೋಗುತ್ತದೆ. ಐದನೆಯ ಹಾಗೂ ಆರನೆಯ ಶಾರ್ಕ್‌ಗಳು ಮೀನಿನ ಅರ್ಧದಷ್ಟನ್ನು ಕಬಳಿಸಿಬಿಟ್ಟಿರುತ್ತದೆ. ರಾತ್ರಿಯಿಡೀ ಎದುರಾದ ಇನ್ನೂ ಅನೇಕ ದಾಳಿಗಳನ್ನು ಕಡೆಗಣಿಸಿ ಮುಂದುವರಿದ ಮುದುಕ ಕೊನೆಗೊಮ್ಮೆ ದಂಡೆ ಸೇರಿದಾಗ ಉಳಿದದ್ದು ಮೀನಿನ ಅಸ್ಥಿಪಂಜರ, ತಲೆ ಹಾಗೂ ಬಾಲ ಮಾತ್ರ.

ಈ ಕಥೆಯಲ್ಲಿ ಸೋಲು ಹಾಗೂ ಗೆಲುವು ಎರಡೂ ಉತ್ಕೃಷ್ಟವಾದವು, ಸಮಾನವಾದವು. ಹಸಿದ ಶಾರ್ಕ್‌ಗಳಿಂದ ತುಂಬಿದ ಸಮುದ್ರದಲ್ಲಿ ಕರಾಳರಾತ್ರಿಯಲ್ಲಿ ಜೀವ ಸಹಿತ ತಿರುಗಿ ಬಂದ ಮುದುಕ ಒಂದು ದೊಡ್ಡ ಪವಾಡವನ್ನೇ ಸಾಧಿಸಿದ ಹಾಗೆ, ಆತ ಹುತಾತ್ಮನ ಹಾಗೆ ಓದುಗರಿಗೆ ತೋರುತ್ತಾನೆ. ಆದರೆ ಸ್ವತಃ ತನ್ನ ಸಾಧನೆಯ ಬಗ್ಗೆ ಅರಿವಿಲ್ಲದಷ್ಟು ಆತ ಸರಳ ಹಾಗೂ ವಿನೀತ. 'ಮನುಷ್ಯ ಹುಟ್ಟಿದ್ದು ಸೋಲಲೆಂದಲ್ಲ. ಆತ

ಪ್ರಕೃತಿಯಿಂದ ನಾಶಗೊಳಿಸಲ್ಪಡಬಹುದು, ಆದರೆ ಸೋಲಿಸಲ್ಪಡಲಾರ' ಅನ್ನುವ ಸ್ಯಾಂಟಿಯಾಗೊ ಸ್ಥಿರಮನಸ್ಕನಾದ ಪ್ರಯತ್ನವಾದಿ. ಆತ ಕ್ರಾಂತಿಕಾರಿಯಾಗಲೀ ಬಂಡಾಯಗಾರನಾಗಲೀ ಅಲ್ಲ. ಕಲ್ಪನಾಸಾಮ್ರಾಜ್ಯದಲ್ಲಿ ವಿಹರಿಸುವ ಕನಸಿಗನೂ ಅಲ್ಲ. ಆತ ಕೇವಲ 'ಮನುಷ್ಯ'. ಒಂದು ಘಟ್ಟದಲ್ಲಿ ಪಾಪಪ್ರಜ್ಞೆ ಅವನನ್ನು ಕಾಡುತ್ತದೆ. ಆದರೆ ಮೀನನ್ನು ಕೊಲ್ಲುವುದು ತನ್ನ ಉಳಿವಿಗಾಗಿ ಅವಶ್ಯವೆಂದು ಸಮಾಧಾನಿಸಿಕೊಳ್ಳುತ್ತಾನೆ. ಆತ ನೈತಿಕಪ್ರಜ್ಞೆಯುಳ್ಳ ವಾಸ್ತವವಾದಿ. ಕತೆಯ ಕೊನೆಯಲ್ಲಿ ಆತ ತಿರುಗಿ ದಂಡೆಗೆ ಬಂದಾಗ ಪ್ರಯಾಸದಿಂದ ದೋಣಿಯನ್ನು ಎಳೆದು ತರುತ್ತಾನೆ. ಹುಟ್ಟುಗೋಲನ್ನು ಹಿಡಿದು ದಿಣ್ಣೆ ಏರಲು ಪ್ರಯತ್ನಿಸುತ್ತಾನೆ. ಸಾಧ್ಯವಾಗದೆ ದಾರಿಯಲ್ಲೆ ಕುಸಿದು ಕುಳಿತು ಒಂದು ಸಲ ತಿರುಗಿ ನೋಡುತ್ತಾನೆ. ದಾರಿಯಲ್ಲಿ ಓಡಿಹೋದ ಬೆಕ್ಕೊಂದು ವಾತಾವರಣದ ಹತಾಶೆಯನ್ನು ಪ್ರತಿಬಿಂಬಿಸುತ್ತದೆ. ತನ್ನ ಚಿಕ್ಕ ಮನೆಗೆ ಹಿಂತಿರುಗಿ ಮುಖಪುಟದಲ್ಲಿ ಜೀಸಸ್‌ನ ಚಿತ್ರವಿದ್ದ ಪತ್ರಿಕೆಯ ಮೇಲೆ ಮುಖವಡಿಯಾಗಿ ಬಿದ್ದುಕೊಳ್ಳುತ್ತಾನೆ. ಮರುದಿನ ಒಮ್ಮೆ ಎಚ್ಚೆತ್ತು ಮನೋಲೋ ತಂದುಕೊಟ್ಟ ಕಾಫಿ ಕುಡಿದು ಮತ್ತೆ ಆಳವಾದ ನಿದ್ರೆಯಲ್ಲಿ ಇಳಿದು ಹೋಗುತ್ತಾನೆ – ಮತ್ತೆ ಸಿಂಹಗಳ ಕನಸು ಕಾಣಲು ; ಜೀಸಸ್‌ನಂತೆ ಒಮ್ಮೆ ಸತ್ತು, ತಿರುಗಿ ಹುಟ್ಟಿ ಬರಲು.

ಹೆಮಿಂಗ್ವೆಯ ಕೃತಿಗಳ ಪಾತ್ರಗಳು ವಿಶೇಷವಾಗಿ ಮನುಷ್ಯನ ಸಾಮರ್ಥ್ಯವನ್ನು ಮೇಲ್ಮೆಯನ್ನು ಎತ್ತಿ ಹಿಡಿಯುತ್ತವೆ. ಈ ಕಾದಂಬರಿಯಲ್ಲೂ ಅಷ್ಟೆ. ಸ್ಯಾಂಟಿಯಾಗೋನ ಶ್ರದ್ಧೆ-ನಂಬಿಕೆಗಳು ದೇವರ ದಯೆಯ ಮೇಲಿಲ್ಲ, ದುಃಖವನ್ನು ಸಹಿಸುವ ಮನುಷ್ಯನ ಸಾಮರ್ಥ್ಯದ ಮೇಲಿವೆ. ತೀರ ಮುದುಕನಾಗಿದ್ದರೂ ಸತತ ಎಂಬತ್ನಾಲ್ಕು ದಿನ ಒಂದು ಮೀನೂ ದೊರೆಯದಿದ್ದರೂ ಎಂಬತ್ತೈದನೆಯ ದಿನವೂ ಹಾಯಿ ಹಾಕಿಕೊಂಡು ದೋಣಿ ನಡೆಸಿಕೊಂಡು ಬೇಟೆಗೆ ಹೊರಡುವ ಮುದುಕನಲ್ಲಿ ಅದೇ ಶ್ರದ್ಧೆ ವಿಶ್ವಾಸ ಇವೆ. ಭಾಗ್ಯ ಹಾಗೂ ನೋವು ತೀರ ಹತ್ತಿರದ ಸಂಬಂಧಿಗಳೆಂದು ಆತನ ಅನಿಸಿಕೆ. ಜೀವನದಲ್ಲಿ ಭಾಗ್ಯ ಬರುತ್ತದೆ, ಹೋಗುತ್ತದೆ ; ಆದರೆ ನೋವನ್ನೆದುರಿಸುವ ಶಕ್ತಿಯಿಲ್ಲದವನಿಗೆ ಭಾಗ್ಯವೇ ಅರ್ಥಹೀನವೆನಿಸುತ್ತದೆ. ಒಂದರ್ಥದಲ್ಲಿ ಈ ಕಾದಂಬರಿ ನೋವಿನ ಅರ್ಥದ ಒಳಪದರುಗಳನ್ನು ಬಿಚ್ಚಿಡುವ ಕೃತಿ. ನೋವು, ನೋವನ್ನು ಸಹಿಸುವ ಹಾಗೂ ಆ ಶಕ್ತಿಯ ಮೌಲ್ಯ – ಇದೇ ಈ ಕೃತಿಯ ವಸ್ತು. ನೋವನ್ನು ಎದುರಿಸುತ್ತ ಹೋಗುವ ಸ್ಯಾಂಟಿಯಾಗೊ ಒಬ್ಬ ಸಾಮಾನ್ಯ ಮೀನುಗಾರ ಮುದುಕನಾಗಿ ತೋರದೆ ಧೀರೋದಾತ್ತ ನಾಯಕನಾಗಿ ತೋರುತ್ತಾನೆ. ಸಾಮಾನ್ಯರಿಗಿಂತ ಹೆಚ್ಚಿನದನ್ನು ಮಾಡುವವನು, ಹೆಚ್ಚಿನ ಅಪಾಯ ಗಳನ್ನೆದುರಿಸುವವನು 'ಹೀರೋ' ಅನಿಸುತ್ತಾನಾದ್ದರಿಂದ ಅಂಥವನಿಗೇ ಸಾವಿನ ಹಾಗೂ ಸೋಲಿನ ಅಪಾಯ ಹೆಚ್ಚು. ದೊಡ್ಡ ಮಾರ್ಲಿನ್‌ನ ಬೆನ್ನುಹತ್ತಿ ಹೋದ ಮುದುಕನ ಸಾಹಸ ಹೆಚ್ಚಿನದೇನೋ ಸರಿ. ಆದರೆ ಹೋರಾಟವನ್ನೊಡ್ಡುವ ನಿಸರ್ಗದ ಶಕ್ತಿಗಳು ಜೊತೆಗೆ

ಅಪಾಯವನ್ನೂ ಒಡ್ಡುತ್ತವೆ. ಪರಿಣಾಮ, ನೋವು-ಹತಾಶೆ. ಆದರೆ ಆ ನೋವಿನಲ್ಲೂ ಹತಾಶೆಯಲ್ಲೂ ಸೋಲೊಪ್ಪದ ಸ್ಯಾಂಟಿಯಾಗೊ ಕಷ್ಟಪರಂಪರೆಗಳು ತೀವ್ರವಾಗಿ ಎದುರಾಗುತ್ತ ನಡೆದ ಹಾಗೆ ಆ ವಿಶಾಲ ಸಮುದ್ರಮಧ್ಯದಲ್ಲಿ ತನ್ನನ್ನು ತಾನೇ ಹೆಚ್ಚು ತಿಳಿದು ಕೊಳ್ಳುತ್ತ ಹೋಗುತ್ತಾನೆ. ಜೊತೆಗೇ ತನ್ನ ಸುತ್ತಲ ಪರಿಸರದೊಂದಿಗೆ ಅವ್ಯಕ್ತ ಬಾಂಧವ್ಯ ಹೊಂದುತ್ತ ಹೋಗುತ್ತಾನೆ. ಹಲವಾರು ಬಗೆಗಳಲ್ಲಿ ದುಷ್ಟಶಕ್ತಿಗಳು ಆತನ ಬಲವನ್ನು ಕುಂದಿಸಲು ಪ್ರಯತ್ನಿಸಿದಾಗಲೂ, ಬಲಗುಂದಿದರೂ ಧೃತಿಗೆಡದೆ ಮುನ್ನುಗ್ಗುತ್ತಾನೆ. ಸಾಧಿಸಿದ್ದನ್ನು ದಕ್ಕಿಸಿಕೊಳ್ಳಲಾಗದಿದ್ದರೂ ಸಾಧನೆಯ ಶ್ರಮವೇ, ಪ್ರಯತ್ನದಲ್ಲಿನ ನಿಷ್ಠೆಯೇ, ಕಷ್ಟದಲ್ಲಿನ ಧೈರ್ಯವೇ ಸ್ಯಾಂಟಿಯಾಗೊನನ್ನು ಉದಾತ್ತ ನಾಯಕನನ್ನಾಗಿ ಮಾಡುತ್ತದೆ. ಹೀಗೆ ಅವನು ಸೋತು ಗೆಲ್ಲುತ್ತಾನೆ.

ನಬೋಕಾಫ್ : 'ಲೊಲೀಟ'

ವಿಮಲಾ ರಾಮರಾವ್

ವ್ಲಡೀಮರ್ ನಬೋಕಾಫ್‌ರ ಕಾದಂಬರಿ 'ಲೊಲೀಟ' ಕನ್ನಡದ ಓದುಗರಿಗೆ ಹೆಸರಿನ ಮಟ್ಟಿಗೆ ಪರಿಚಿತವಾಗಿಲ್ಲ. ಈಗ ಮರೆತುಹೋಗಿರುವ ನಾಟಕವೊಂದರಲ್ಲಿ ಶಾಲೆಯಲ್ಲಿ ಮೇಷ್ಟರು ಈ ಕಾದಂಬರಿಯನ್ನು ಕದ್ದು ಓದುತ್ತಿದ್ದ ಹುಡುಗನನ್ನು ಹಿಡಿದು ಬಡಿದಿದ್ದ ಪ್ರಸಂಗವೊಂದನ್ನು ನಾಟಕದ ಹಳಸಲು ಮನೋವಿಶ್ಲೇಷಣೆಗೆಂದು ಬಳಸಲಾಗಿದ್ದಿದ್ದು ಉಂಟು. ಈ ಕಾದಂಬರಿ ಶಾಲಾಬಾಲಕರ ರುಚಿಗೆ ಹೊಂದುವಂತಹದ್ದಲ್ಲ. ಅಥವಾ ಹೊತ್ತು ಕಳೆಯಲು ಓದುವವರಿಗೂ ನಿಲುಕುವಂತಹದ್ದಲ್ಲ. ಮೂರು ಭಾಷೆ, ಸಾಹಿತ್ಯಗಳಲ್ಲಿ ಉದ್ದಾಮ ಪಾಂಡಿತ್ಯವಿದ್ದ, ರಷ್ಯ ದೇಶದ ಸುಸಂಸ್ಕೃತ ಸಂಪನ್ನ ಮನೆತನದಲ್ಲಿ ಹುಟ್ಟಿ ಬೆಳೆದ ನಬೋಕಾಫ್ ಅವರ ಈ ಕಾದಂಬರಿ ಭಾಷೆ, ವಸ್ತು ಹಾಗೂ ತಂತ್ರಗಳ ದೃಷ್ಟಿಯಿಂದ ಬಹಳ ಸಂಕೀರ್ಣವಾದದ್ದು. ಈ ಮೂವತ್ತು ವರ್ಷಗಳಲ್ಲಿ ಅದರ ಬಗ್ಗೆ ನೂರಾರು ವಿದ್ವನ್ಮಯ ಲೇಖನಗಳು ಪ್ರಕಟಿತವಾಗಿವೆ. ಅಷ್ಟೇ ಅಲ್ಲದೆ ಎರಡು ಪುಸ್ತಕಗಳು ಪೂರ್ತಿಯಾಗಿ ಇದರಲ್ಲಿಯ ಸಂಕೀರ್ಣತೆಯನ್ನು ಸಾಮಾನ್ಯ ಓದುಗನಿಗೆ ಎಟುಕುವಂತೆ ಮಾಡುವ ಪ್ರಯತ್ನ ಮಾಡಿವೆ. 1955ರಲ್ಲಿ ಫ್ರಾನ್ಸಿನಲ್ಲಿ (ರಸಿಕತೆಗೆ, ಸ್ವಚ್ಛಂದತೆಗೆ ಪ್ರಸಿದ್ಧವಾದ ಫ್ರಾನ್ಸಿನಲ್ಲಿ) ಪ್ರಕಟವಾಗಿ ನಂತರ ಸರ್ಕಾರದಿಂದ ಮಾರಾಟ ನಿಷೇಧಿಸಲ್ಪಟ್ಟಿದ್ದು ಕಾದಂಬರಿಗೆ ಅನಪೇಕ್ಷಿತ ಜಾಹೀರಾತು ಕೊಟ್ಟಿತ್ತು. ಇದರ ಬಗ್ಗೆ ಆದ ಚರ್ಚೆ, ಗಲಾಟೆ ಎಲ್ಲ ಈಗ ಸಾಹಿತ್ಯಚರಿತ್ರೆಗೆ ಸೇರಿಹೋಗಿದೆ.

ವ್ಲಡೀಮರ್ ವ್ಲಡೀಮರೋವಿಚ್ ನಬೋಕಾಫ್ 1899ರಲ್ಲಿ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಕುಲೀನ, ಸುಸಂಸ್ಕೃತ ಮತ್ತು ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ನ್ಯಾಯಶಾಸ್ತ್ರದಲ್ಲಿ ಪರಿಣತರಾದ ತಂದೆ ರಷ್ಯದ ದಮನಕಾರೀ ರಾಜರ ವಿರುದ್ಧ ಕೆಲಸ ಮಾಡಿ ಸಂವಿಧಾನಯುಕ್ತ ಆಳ್ವಿಕೆಯನ್ನು ತರಲು ಪ್ರಯತ್ನಿಸಿದವರು. ತಾಯಿ ಪಟ್ಟಣದಿಂದ ಹಳ್ಳಿಗೆ ಹಿಂದಿರುಗಿದಾಗೆಲ್ಲ ಮೊಣಕಾಲೂರಿ ನೆಲಕ್ಕೆ ಮುತ್ತಿಡುತ್ತಿದ್ದ ಅಪ್ಪಟ ರಷ್ಯನ್ ಮನೋಭಾವದ ವ್ಯಕ್ತಿ. ತಮ್ಮ ಬಾಲ್ಯದ ಸುಭಗ, ಸುಂದರ ದಿನಗಳನ್ನು ನಬೋಕಾಫ್ ಸ್ವಚರಿತ್ರೆ 'Speak Memory.' ('ಮಾತಾಡು ನೆನಪೇ')ಯಲ್ಲಿ ಚಿತ್ರಿಸಿದ್ದಾರೆ. ಮಳೆಹನಿಗಳ ಭಾರದಿಂದ ತುಯ್ಯುತ್ತಿದ್ದ ಎಲೆಯೊಂದು ಬಾಗಿ, ಅದರ ಮೇಲಿದ್ದ ಹನಿ ಸರಕ್ಕನೆ ಧುಮುಕಿ, ಎಲೆ ಮತ್ತೆ ನಿಮಿರಿ ನಿಂತ ಕ್ಷಣವನ್ನು ತಮ್ಮ ಕಾವ್ಯಜೀವನದ ಮೊದಲ ಗಳಿಗೆಯೆಂದು ವರ್ಣಿಸಿದ್ದಾರೆ. ರಷ್ಯನ್ ಸಾಹಿತ್ಯದಲ್ಲಿ ಪ್ರಚೋದಕಾರಿಯೆಂದು ಪ್ರಸಿದ್ಧವಾದ ಆ ಪೀಟರ್ಸ್‌ಬರ್ಗಿನಲ್ಲಿ ಸಾಹಿತಿಗಳು, ವಿದ್ವಾಂಸರು, ಸಂಗೀತಗಾರರು, ಕಲಾವಿದರು,

ವಿಜ್ಞಾನಿಗಳು – ಇಂತಹವರೆಲ್ಲರೂ ಇವರ ಮನೆಗೆ ಬಂದು ಹೋಗುವ ಪರಿಪಾಠವಿತ್ತು. ಸದಭಿರುಚಿಯಿದ್ದ ತಂದೆತಾಯಿಗಳು ಮೇಧಾವಿ ಮಗನನ್ನು ಪ್ರೋತ್ಸಾಹಿಸಿ ಸಾಹಿತ್ಯದಲ್ಲಿ ಆತನಿಗಿದ್ದ ಒಲವನ್ನು ಬೆಳೆಸಿದ್ದರು. ಇದರೊಂದಿಗೆ ಆತನ ಎರಡನೆಯ ಆಜೀವಪರ್ಯಂತ ನಡೆಸಿಕೊಂಡು ಬಂದ ಕೈಂಕರ್ಯವೆಂದರೆ ಚಿಟ್ಟೆಗಳ ವೈಜ್ಞಾನಿಕ ಅಧ್ಯಯನ. ಜೊತೆಗೆ ಚದುರಂಗದ ಆಟದಲ್ಲಿಯೂ ಪ್ರಾವೀಣ್ಯವಿತ್ತು. ಶ್ರೀಮಂತಿಕೆಯ ಹವ್ಯಾಸಗಳೆನ್ನಬಹುದಾದ ಈ ಲಹರಿಗಳು, ಕೆಲವೇ ವರ್ಷಗಳ ನಂತರ (1917ರ ಕ್ರಾಂತಿ ರಷ್ಯದ ಜನಜೀವನವನ್ನು ತಲೆ ಕೆಳಗು ಮಾಡಿದಾಗ, ಚರಿತ್ರೆಯ ಸುಳಿಯಲ್ಲಿ ಕೊಚ್ಚಿಹೋದ ನಬೋಕಾಫ್ ಕುಟುಂಬ ದೇಶ ಬಿಟ್ಟು ನಿರ್ಗತಿಕರಾಗಿ ಜರ್ಮನಿಗೆ ಹೋಗಬೇಕಾಯಿತು) ಅವರಿಗೆ ಜೀವನೋಪಾಯವಾಗಿ ಪರಿಣಮಿಸಿದವು. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಮೂರು ವರ್ಷ ಶಿಷ್ಯವೃತ್ತಿಯ ಸಹಾಯದಿಂದ ಓದಿ ಪದವೀಧರರಾದ ಮೇಲೆ ನಬೋಕಾಫ್ ಜರ್ಮನಿಯಲ್ಲಿ ನೆಲೆಸಿದರು. 1922ರಲ್ಲಿ ರಾಜಕೀಯ ಸಂಬಂಧದ ಸಭೆಯೊಂದರಲ್ಲಿ ತಮ್ಮ ಹಿತಶತ್ರುವಿಗೆ ಗುರಿಯಿಟ್ಟ ಗುಂಡನ್ನು ತಡೆಯುವ ಯತ್ನದಲ್ಲಿ ಲೇಖಕರ ತಂದೆ ಅಸುನೀಗಿದರು. ತಮ್ಮ ರಾಜಕೀಯ ಜೀವನದಲ್ಲಿ ಆತ ನಡೆಸಿದ್ದ ಸದಾಚಾರ, ಯೆಹೂದಿಗಳ ಬಗ್ಗೆ ಆತನಿಗಿದ್ದ ಕಾಳಜಿ ಎಷ್ಟೋ ವರ್ಷಗಳ ನಂತರ ಆತನ ಮಗ, ಸೊಸೆ ಮತ್ತು ಮೊಮ್ಮಗುವನ್ನು ಕಾಪಾಡಿದ್ದವು. 1940ರಲ್ಲಿ ಯೂರೋಪಿನಲ್ಲಿ ಹಿಟ್ಲರ್ ಯೆಹೂದಿಗಳ ಬೇಟೆಯಾಡಿ ಕಗ್ಗೊಲೆ ನಡೆಸಿದ್ದಾಗ ಲೇಖಕರ ತಂದೆ ಮಾಡಿದ್ದ ಉಪಕಾರಗಳ ನೆನಪಿದ್ದ ಯೆಹೂದಿಗಳ ರಕ್ಷಣಾಸಮಿತಿಯೊಂದು ನಬೋಕಾಫ್ ಮತ್ತು ಅವರ ಪತ್ನಿ, (ಈಕೆ ಯೆಹೂದಿ ಕುಟುಂಬದವರು) ಪುತ್ರರಿಗೆ ಅಮೆರಿಕಾಕ್ಕೆ ವಲಸೆ ಹೋಗಲು ಸಹಾಯ ನೀಡಿದರು.

ವಿದ್ಯಾರ್ಥಿದೆಸೆಯಿಂದಾಚೆಗೆ ಯೂರೋಪಿನಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ನಬೋಕಾಫ್‌ರ ಜೀವನೋಪಾಯ ಇಂಗ್ಲೀಷ್ ಪಾಠ, ಟೆನಿಸ್ ಆಟ ಮತ್ತು ಕುಸ್ತಿ ಕಲಿಸುವುದು, ರಷ್ಯನ್ ವಾರಪತ್ರಿಕೆಗಳಿಗೆ ಚದುರಂಗದ ಸಮಸ್ಯೆಗಳನ್ನು ಸಂಯೋಜಿಸು ವುದು, ಇತ್ಯಾದಿಯಾಗಿತ್ತು. ಸಾಹಿತ್ಯಸೃಷ್ಟಿ ಅವರ ಜೀವನದ ಕೇಂದ್ರಬಿಂದುವಾಗಿದ್ದರೂ ಅದರ ನಿರ್ವಹಣೆಗೆ ಇತರೆ ಕೆಲಸಗಳನ್ನವಲಂಬಿಸಿತ್ತು. ಸ್ವದೇಶದಿಂದ ಹೊರಗುಳಿದು ಪರಕೀಯರ ನಡುವೆ ಎಂದೆಂದಿಗೂ ಇತರರಾಗಿ, ಗತಕಾಲದ ಮೋಡಿಯಲ್ಲಿ ಸಿಲುಕಿ, ವರ್ತಮಾನದಿಂದ ಹೊರತಾದವರ ಬಾಳು ಅವರ ಮೊದಲನೆಯ ಕಾದಂಬರಿ 'ಮಾಷೆಂಕ'ದಲ್ಲಿ ಚಿತ್ರಿತವಾಗಿದೆ.

ರಷ್ಯನ್ ಭಾಷೆಯಲ್ಲಿ ನಬೋಕಾಫ್ ಒಂಬತ್ತು ಕಾದಂಬರಿಗಳನ್ನು ಬರೆದಿದ್ದಾರೆ. 'ವಿ. ಸಿರೀನ್' ಎಂಬ ಕಾವ್ಯನಾಮದಲ್ಲಿ ಪ್ರಕಟವಾದ ಈ ಕಾದಂಬರಿಗಳು ಯೂರೋಪಿನಲ್ಲಿದ್ದ ರಷ್ಯನ್ ಜನಾಂಗದಲ್ಲಿ ವಿವಿಧ ಪ್ರತಿಕ್ರಿಯೆಗಳನ್ನುಂಟುಮಾಡಿದವು. ಹತ್ತೊಂಬತ್ತನೆಯ

ಶತಮಾನದಲ್ಲಿ ವಿಜೃಂಭಿಸಿದ್ದ ವಾಸ್ತವಚಿತ್ರಣ ಪ್ರಮುಖ ಕಾದಂಬರಿಯ ಜಾಡಿನಲ್ಲಿಯೇ ಸಾಗಿದ್ದ ಅನೇಕರು 'ಈತನ ಬರವಣಿಗೆ ರಷ್ಯನ್ ಸಾಹಿತಿಯದಂತಿಲ್ಲ' ಎಂದು ಟೀಕಿಸಿದ್ದರು.

ಮೊದಲಿನಿಂದಲೂ ನಬೋಕಾಫ್‌ರ ಕಾದಂಬರಿಗಳಲ್ಲಿ ಮುಖ್ಯವಾದ ಒಂದು ಎಳೆ ಕಲಾಕೃತಿ, ಕಲೆ ಮತ್ತು ಕಲಾವಿದರ ನಡುವಣ ಸಂಬಂಧ. ಆತನ ಅಭಿಪ್ರಾಯ ಸಾಹಿತ್ಯ ಪ್ರಪಂಚದ ಮುಖಕ್ಕೆ ಹಿಡಿದ ಕನ್ನಡಿಯಲ್ಲ ಎಂದು. ಈ ನಂಬಿಕೆ ಅವರ ಒಂದು ಕಾದಂಬರಿಯಲ್ಲಿ ಪ್ರತಿಮೆಯೊಂದರ ಮೂಲಕ ಪರಿಣಾಮಕಾರಿಯಾಗಿ ಒಡಮೂಡಿದೆ. ಪುಸ್ತಕದ ಹೆಸರು Invitation to a Beheading ('ಶಿರಚ್ಛೇದನಕ್ಕೆ ಆಮಂತ್ರಣ'). ಯೂರೋಪಿನಲ್ಲಿ ಎಲ್ಲೆಲ್ಲಿಯೂ ಸರ್ವಾಧಿಕಾರಿಗಳ ಕರಾಳ ನೆರಳು ದಟ್ಟವಾಗುತ್ತಿದ್ದಂತೆ ಈ ಕಾದಂಬರಿ ರೂಪುಗೊಂಡಿತು. ಸರ್ವಾಧಿಪತ್ಯದಲ್ಲಿ ಎಲ್ಲರ ಜೀವವೂ ಪಾರದರ್ಶಕ ವಾಗಿರುವಾಗ ಇದರ ನಾಯಕ ಒಬ್ಬನು ಮಾತ್ರ ಭಿನ್ನವಾಗಿರುವ ಆಪಾದನೆಯ ಮೇಲೆ ಶಿರಚ್ಛೇದನಕ್ಕೆ ಗುರಿಯಾಗಿ ಬಂದೀಖಾನೆಯಲ್ಲಿರುವವನು. ಮನುಷ್ಯನ ಎಲ್ಲ ಸ್ವೇಚ್ಛೆಯನ್ನೂ ಹೆರೆದುಹಾಕಿ, ಕೇವಲ ವಸ್ತುವಿನ ಪರಿಸ್ಥಿತಿಗೆ ಇಳಿಸಿದ್ದಾಗ, ತನ್ನ ಕಲ್ಪನೆ ಮತ್ತು ಚೇತನಗಳ ಮೂಲಕ ಆ ದುಸ್ಥಿತಿಯಿಂದ ಹೊರತಾಗುವ ಕಥೆ ಇದು. ಅಂದರೆ ಸಾಲ್‌ಜೆನ್ನಿಟ್ಸಿನ್‌ರ 'ಇವಾನ್ ಡೆನಿಸಾವಿಚ್‌ನ ಜೀವನದಲ್ಲೊಂದು ದಿನ'ದಂತೆ ಇದೊಂದು ಮನುಷ್ಯಚೇತನದ ಅದಮ್ಯತೆಯ ನೈಜಚಿತ್ರಣವೆಂದು ಹೇಳುವಂತಿಲ್ಲ. ಚೇತನದ ಅದಮ್ಯತೆ ಇಲ್ಲಿ ಚಿತ್ರಿತವಾಗಿರುವುದು ನೈಜವಾಗಿಯಲ್ಲ, ಉಪಮೇಯವೇ ಕಥಾತಂತ್ರವಾಗಿರುವುದರ ಮೂಲಕ. ಒಬ್ಬ ಪಾತ್ರ (ನಾಯಕನ ತಾಯಿ) ತನ್ನ ಬಾಲ್ಯದ ಆಟಿಕೆಯೊಂದರ ಬಗ್ಗೆ ಹೇಳುತ್ತಾಳೆ. ವಿಚಿತ್ರ ವಿಲಕ್ಷಣವಾದ, ಡೊಂಕುಡೊಂಕಾದ ಸಾಮಾನೊಂದನ್ನು ಅದಕ್ಕೆಂದೇ ಇದ್ದ ವಿಕಟ ಮಾಡುವ ಕನ್ನಡಿಯ ಮುಂದೆ ಹಿಡಿದರೆ ಅದರ ಪ್ರತಿಬಿಂಬ ಹಡಗು, ಹೂವು, ಮನುಷ್ಯ, ಪ್ರಕೃತಿದೃಶ್ಯ ಇತ್ಯಾದಿಗಳಾಗಿ ಕಾಣುವುದಂತೆ. ಹಾಗೆಯೇ ಕಲೆ ಇದ್ದದ್ದನ್ನು ಇದ್ದಂತೆ ತೋರಿಸುವುದಲ್ಲ; ಸುತ್ತಲಿನ ಪ್ರಪಂಚ ನಮ್ಮ ಅನುಭವಕ್ಕೆ ನಿಲುಕಬೇಕಾದರೆ ಕಲೆ ಅದನ್ನು ವಿರೂಪಗೊಳಿಸಿ ನಂತರ ತಾನದರ ಕನ್ನಡಿಯಾಗಿ ನಮಗೆ ಕಾಣಿಸುತ್ತದೆ. ಅಂದರೆ ನಮ್ಮನ್ನು ಸುತ್ತುವರೆದು ಆವರಿಸಿರುವ ಪ್ರಪಂಚವನ್ನು ನಾವು ನೋಡುವ ದೃಷ್ಟಿ ಅನೇಕ ವಿಧವಾದ ಕಟ್ಟುಪಾಡುಗಳಿಂದ, ಅಭ್ಯಾಸಬಲದಿಂದ ಡೊಂಕಾದದ್ದು, ಮಸಕಾದದ್ದು. ಕಲೆ ಆ ಡೊಂಕಾದ ಪರಿವೆಯನ್ನು ಮತ್ತೊಮ್ಮೆ ವಿರೂಪಗೊಳಿಸಿ ನೈಜತೆಯೆಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಈ ಉದ್ದೇಶ ಸಾಹಿತ್ಯವನ್ನು ತುಂಬಾ ಸ್ವಪ್ರಜ್ಞಾಪರವಾಗಿ ಮಾಡುತ್ತದೆ. ನಬೋಕಾಫ್‌ರ ಕಾದಂಬರಿಗಳಲ್ಲಿ – ಅದರಲ್ಲಿಯೂ ಇಂಗ್ಲೀಷಿನಲ್ಲಿ ಅವರು ರಚಿಸಿದವು ಗಳಲ್ಲಿ – ಕಲಾತ್ಮಕ ಸ್ವಪ್ರಜ್ಞಾಪರತೆ ಎದ್ದುಕಾಣುತ್ತದೆ. ಕಾದಂಬರಿ ತನ್ನ ರಚನೆಯ ಸ್ವರೂಪವನ್ನೇ ಎತ್ತಿ ತೋರಿಸಿ ತನ್ನ ಸಾಹಿತ್ಯಕ ಸ್ಥಾನವನ್ನು ಪದಗಳಿಂದ ಸೃಷ್ಟಿಯಾದ ರಚನೆ ತಾನೆಂಬುದನ್ನು ಘೋಷಿಸುವುದು ಸ್ವಪ್ರಜ್ಞಾಪರ ಕಾದಂಬರಿಯದೊಂದು ಮುಖ್ಯ ಲಕ್ಷಣ. ಈ ಲಕ್ಷಣ ನವ್ಯದಿಂದೀಚಿನ ಸಾಹಿತ್ಯದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ.

ನಬೋಕಾಫ್ ಅವರ ಅನೇಕ ಕಾದಂಬರಿಗಳು ತಮ್ಮ ಸಾಹಿತ್ಯಕ ಪಿತೃವರ್ಗಕ್ಕೆ ಇರುವ ಋಣಾನುಬಂಧವನ್ನು ತೋರಿಸುತ್ತವೆ. ಅವರು ರಷ್ಯನ್ ಭಾಷೆಯಲ್ಲಿ ಬರೆದ ಕಡೆಯ ಕಾದಂಬರಿ 'ದಾರ್' ('The Gift' – 'ವರ' / 'ಉಡುಗೊರೆ') ಒಂದು ಸಾಹಿತ್ಯ ಪರಂಪರೆಯೊಡನೆ ಹೊಸ ಲೇಖಕನೊಬ್ಬನು ಯಾವ ರೀತಿಯಲ್ಲಿ ಸಂಬಂಧ ಬೆಳೆಸಿಕೊಳ್ಳ ಬಹುದು ಎಂಬುದನ್ನು ವಸ್ತುವಾಗಿ ಹೊಂದಿದೆ. ಸಾಹಿತ್ಯ ಪ್ರಕಾರಗಳು ಎಷ್ಟರಮಟ್ಟಿಗೆ ಒಬ್ಬ ಲೇಖಕನ ಅನುಭವವನ್ನು, ಪರಿವೆಯನ್ನು, ಸಂವೇದನೆಯನ್ನು ರೂಪುಗೊಳಿಸುತ್ತವೆ ಎನ್ನುವುದು ನಬೋಕಾಫ್‌ರ ಮೊದಲನೆಯ ಇಂಗ್ಲಿಷ್ ಕಾದಂಬರಿ ('ಸೆಬಾಸ್ಟಿಯನ್ ನೈಟ್‌ನ ನಿಜಜೀವನ')ನಲ್ಲಿ ಸ್ಪಷ್ಟ. ಮತ್ತೊಬ್ಬನ ಜೀವನದ ಕತೆಯನ್ನು ಬರೆಯುವವನು ಆ ಜೀವನದಲ್ಲಿ ಕಾಣುವ ರೂಪುರೇಷೆಗಳಲ್ಲಿ ಸ್ವಕಪೋಲಕಲ್ಪಿತವಾದದ್ದೆಷ್ಟು ಎಂದು ಹೇಳುವುದು ಕಷ್ಟ. ಈ ಕಾದಂಬರಿಯಲ್ಲಿ ಕಥನಕಾರ ಒಂದು ಎಚ್ಚರಿಕೆ ನೀಡುತ್ತಾನೆ. 'ನಾವು ಕೇಳುವ ಕಥೆ ಮೂರ್ಮಡಿಯಾದದ್ದು. ನಾಯಕನಿಗೇ ತಿಳಿದ ಅವನ ನಿಜವಾದ ಕಥೆಗೆ ಹೇಳುವವನು ಕೊಟ್ಟ ರೂಪ ಕೇಳುವವನ ಕಿವಿಯಲ್ಲಿ ಬದಲಾಯಿಸಿ ಹೋಗಿರುತ್ತದೆ.' ಹೀಗಿರುವಾಗ ತಾನೊಂದು ಭಾಷೆಯ ಸೃಷ್ಟಿ ಎಂಬುದನ್ನು ಎತ್ತಿ ತೋರಿಸುವುದು ಮುಖ್ಯವಾದ ಸಂಗತಿ. ಹತ್ತೊಂಬತ್ತನೆಯ ಶತಮಾನದಲ್ಲಿ ಹೆಮ್ಮರವಾಗಿ ಬೆಳೆದು ವಿರಾಜಿಸಿದ ಕಾದಂಬರಿ ಈಗಿನ ಸಾಹಿತ್ಯಕ ಸನ್ನಿವೇಶಕ್ಕೆ ಹೊರತಾಗಿದೆ. ಲೇಖಕ ಜೀವನ ಮತ್ತು ಸಮಾಜಗಳಿಗೆ ಸಂಬಂಧಪಟ್ಟ ಕೆಲವು ಸಾಮಾನ್ಯ ಸಿದ್ಧಾಂತಗಳನ್ನು ತಾನು ಮತ್ತು ತನ್ನ ಓದುಗರಿಗೆ ಉಂಟಾದದ್ದೆಂದು ಒಪ್ಪಿಕೊಂಡು ಸಾಹಿತ್ಯಸೃಷ್ಟಿ ಮಾಡುತ್ತಿದ್ದ ಕಾಲ ಈಗ ಇಲ್ಲ. ಪ್ರತಿಯೊಬ್ಬ ಲೇಖಕನೂ ತನ್ನ ಪ್ರಪಂಚವನ್ನು ಹೊಸದಾಗಿ ಸೃಷ್ಟಿಸಿ ಅದರ ನಿಯಮಗಳನ್ನು ಕಾದಂಬರಿಯ ಮೂಲಕವೇ ತೋರಿಸಬೇಕಾಗಿದೆ.

ಎರಡನೆಯ ಮಹಾಯುದ್ಧದ ಹಿಂದೆ ಮುಂದೆ ಯೂರೋಪಿನಲ್ಲಿ ನಡೆದ ಚರಿತ್ರೆಯ ಮಹಾಪೂರ ನಬೋಕಾಫ್ ಅವರನ್ನು ಎರಡನೆಯ ಸಲ ಸ್ಥಳಾಂತರಗೊಳಿಸಿತ್ತು. 1930ರ ದಶಕದ ಕಡೆಯ ವರ್ಷಗಳಲ್ಲಿ ಅವರಿಗೆ ಒಂದು ಭಯಂಕರ ಬಿಕ್ಕಟ್ಟು ಎದುರಾಗಿತ್ತು. ರಷ್ಯದಲ್ಲಿ 1917ರಲ್ಲಿ ಕ್ರಾಂತಿಯಾದ ತರುಣದಲ್ಲಿ ದೇಶಬಿಟ್ಟು ಬಂದು ಮಧ್ಯ ಯೂರೋಪಿನಲ್ಲಿ ನೆಲೆಸಿದ್ದ ರಷ್ಯನ್ ಜನರು ಲಕ್ಷಾಂತರ ಸಂಖ್ಯೆಯಲ್ಲಿದ್ದರು. ಅವರೆಲ್ಲರೂ ತಮ್ಮ ದೇಶಾಟನೆ ಕೇವಲ ತಾತ್ಕಾಲಿಕವಾದದ್ದು, ಶೀಘ್ರದಲ್ಲಿಯೇ ಭಯಾನಕ ಪರಿಸ್ಥಿತಿ ಕೊನೆಗೊಂಡು ತಾವೆಲ್ಲಾ ಅರಳಿದ ಹೂವುಗಳ ಬೀಡಾದ, ತಮ್ಮನ್ನು ಬಾ ಎಂದು ಕೈಮಾಡಿ ಕರೆಯುವ ತಾಯಿನಾಡಿಗೆ ಹಿಂದಿರುಗುವೆವೆಂದು ನಂಬಿದ್ದರು. ಹತ್ತಾರು ವರ್ಷಗಳ ನಂತರ ಆ ನಂಬಿಕೆ ಬುಡವಿಲ್ಲದ್ದೆಂದು ಸಿದ್ಧಾಂತವಾಗಿತ್ತು. ಆಗತಾನೇ ಅವರುಗಳಿಗೆ ತಮ್ಮ ಪರಿಸ್ಥಿತಿಯ ನಿಜಸ್ವರೂಪದ ಅರಿವಾಗಿದ್ದು. ಮೊದಲಿಗೆ, ಬರ್ಲಿನ್ ಮತ್ತು ಪ್ಯಾರಿಸ್ ನಗರಗಳಲ್ಲಿ ರಷ್ಯನ್ ಜನರು ತಮ್ಮ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಸಂಭ್ರಮದಿಂದ ಕಾಪಾಡಿಕೊಂಡು

ಬಂದಿದ್ದರು. ಅನೇಕ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಪ್ರಕಾಶನಗಳು ತರುಣ ಲೇಖಕರಿಗೆ ಒತ್ತಾಸೆ ನೀಡುತ್ತಿದ್ದವು. ಬೇರೆ ದೇಶದಲ್ಲಿದ್ದರೂ ರಷ್ಯದಲ್ಲಿಯೇ ವಾಸವಿದ್ದಂತೆ ತಮ್ಮ ಜನಾಂಗದ ಎಲ್ಲ ಸಾಮಾಜಿಕ ಸಂಸ್ಕೃತಿ ಆಚರಣೆಗಳನ್ನೂ ಅವರು ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಹದಿನೈದು ಇಪ್ಪತ್ತು ವರ್ಷಗಳು ಕಳೆದಂತೆ, ಅವರನ್ನು ಹಿಡಿದು ನಡೆಸಿದ್ದ ಆಶೋತ್ತರಗಳು ಮುರಿದುಬಿದ್ದಿದ್ದವು. ಪರದೇಶಿಯ ಬಾಳು ಎಲ್ಲ ವಿಧದಲ್ಲಿಯೂ ಕಷ್ಟಕರವಾಗಿದ್ದು ಆರ್ಥಿಕ, ಸಾಮಾಜಿಕ ಸಂಕಷ್ಟಗಳಿಂದ ಬೇರು ಕಳಚಿದ ಸಂಕಟವನ್ನು ತಡೆಯಲಾರದ ಅನೇಕರು ಪ್ರಾಣ ಕಳೆದುಕೊಂಡಿದ್ದರು. ಹೇಗಾದರೂ ರಷ್ಯಕ್ಕೇ ಹಿಂದಿರುಗಬೇಕೆಂದು ಹೋದವರು ಸ್ಟಾಲಿನ್‌ನ ಶ್ರಮಶಿಬಿರಗಳಲ್ಲಿ ಕೊನೆಗೊಂಡಿದ್ದರು. ಒಟ್ಟಿನಲ್ಲಿ ರಷ್ಯನ್ ಭಾಷೆಯಲ್ಲಿ ಒಬ್ಬ ಲೇಖಕನಿಗೆ ಜೀವನೋಪಾಯ ನಡೆಸುವ ಮಟ್ಟಿಗೆ ಅವಶ್ಯಕವಾದ ಸಾಂಸ್ಕೃತಿಕ ಸಾರಸ್ವತ ಅಡಿಪಾಯ ಚಲ್ಲಾಪಿಲ್ಲಿಯಾಗಿ ಚದುರಿ ನಿರ್ನಾಮವಾಗಿತ್ತು. ಅದಷ್ಟೇ ಅಲ್ಲದೆ ಯೆಹೂದಿಗಳನ್ನು ಬೇಟೆಯಾಡುತ್ತಿದ್ದ ಹಿಟ್ಲರನ ವಿಕಟನಾಟ್ಯದ ಮದ್ದಳೆ ಎಲ್ಲೆಲ್ಲಿಯೂ ಮೊಳಗುತ್ತಿತ್ತು.

1940ರಲ್ಲಿ ನಬೋಕಾಫ್ ತಮ್ಮ ಪತ್ನಿ ಮತ್ತು ಆರು ವರ್ಷದ ಮಗ ಡಿಮಿಟ್ರಿಯೊಂದಿಗೆ ಅಮೆರಿಕಾಕ್ಕೆ ವಲಸೆಹೋದರು. ಅಲ್ಲಿ ಜೀವನೋಪಾಯ ಕಠಿಣವಾದರೂ ರಷ್ಯನ್ ಭಾಷೆಯಲ್ಲಿ ಆತನ ಬರಹದ ಪರಿಚಯವಿದ್ದ ಒಬ್ಬಿಬ್ಬರ ಸಹಾಯದಿಂದ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಗಳ ಮೂಲಕ ಜೀವನ ನಿರ್ವಹಣೆ ಮಾಡುವದಕ್ಕೆ ಸಾಧ್ಯವಿತ್ತು. ಯೂರೋಪಿನಲ್ಲಿದ್ದ ಜೀವಭಯ, ಕಾರ್ಪಣ್ಯ ಎರಡೂ ಇಲ್ಲಿಲ್ಲದೆ ನೆಮ್ಮದಿಯಾದ ಮೇಲೆ ಅವರ ಮುಂದಿದ್ದ ದೊಡ್ಡ ಪ್ರಶ್ನೆ ಸಾಹಿತ್ಯ ಸೃಷ್ಟಿಯ ಭಾಷೆಯದು. ರಷ್ಯನ್ ಭಾಷೆಯಲ್ಲಿ ಬರೆದ ಸಾಹಿತ್ಯಕ್ಕಿದ್ದ ಓದುಗರ ಸಮುದಾಯ ಹಿಟ್ಲರನ ಕಾಲದಲ್ಲಿ ಚದುರಿಹೋಗಿ ನಷ್ಟವಾಗಿತ್ತು. ಅಮೆರಿಕದಲ್ಲಿ ಅಲ್ಲಲ್ಲಿ ವಿಶ್ವವಿದ್ಯಾಲಯಗಳಲ್ಲಿ ರಷ್ಯನ್ ಭಾಷೆ, ಸಾಹಿತ್ಯಗಳ ಬೋಧನೆಯಿದ್ದರೂ ಲೇಖಕನಿಗೆ ಪೂರಕವಾದ ಜೀವಂತ, ತುಡಿಯುವ ಸಾರಸ್ವತ ವಾತಾವರಣ ಇರಲಿಲ್ಲ. ನಬೋಕಾಫ್ ಅವರಿಗಿದ್ದ ದಾರಿ ಒಂದೇ : ರಷ್ಯನ್ ಬಿಟ್ಟು ಬೇರೆ ಭಾಷೆಯಲ್ಲಿ ಬರೆಯುವುದು.

ಯೂರೋಪಿನಲ್ಲಿದ್ದಾಗಲೇ ಆತ ಫ್ರೆಂಚ್ ಭಾಷೆಯಲ್ಲಿ ಕೆಲವೊಮ್ಮೆ ಬರೆದಿದ್ದರು. ಆದರೆ ಇಂಗ್ಲೀಷಿನ ಮೂಲಕ ಎಟುಕುವ ಸಾಹಿತ್ಯಸಂಬಂಧ, ಸಾಧ್ಯತೆಗಳ ಪೂರ್ಣ ಪರಿಚಯವಾಗಿದ್ದು ಅಮೆರಿಕಕ್ಕೆ ಬಂದಮೇಲೆ. ಬರುವ ಮುನ್ನ ಇಂಗ್ಲಿಷಿನಲ್ಲಿ ಬರೆದಿದ್ದ The Real Life of Sebastian Knight ಅಮೆರಿಕದಲ್ಲಿ ಪ್ರಕಟಿತವಾಯಿತು. ವಿಮರ್ಶಕರೇನೂ ಇದರ ಬಗ್ಗೆ ಅಷ್ಟಾಗಿ ಉತ್ಸಾಹ ತೋರಿಸದಿದ್ದರೂ ಇಂಗ್ಲಿಷಿನಲ್ಲಿ ಬರೆಯುವುದರ ಬಗ್ಗೆ ಲೇಖಕರಿಗಿದ್ದ ಅನುಮಾನಗಳೆಲ್ಲ ಕಡೆಗೊಂಡವು.

ಇಂಗ್ಲಿಷ್ ಭಾಷೆ ನಬೋಕಾಫ್ ಅವರಿಗೆ ಹೊಸದಲ್ಲ. ಆ ಭಾಷೆ ಮತ್ತು ಸಾಹಿತ್ಯಗಳ ನಿಕಟ ಪರಿಚಯವಿದ್ದ ಅವರ ತಂದೆ ಮಕ್ಕಳಿಗೆ ಮೊದಲಿನಿಂದಲೂ ಇಂಗ್ಲಿಷ್ ಉಪಾಧ್ಯಾಯರ ಮೂಲಕ ಶಿಕ್ಷಣ ಕೊಡಿಸಿದ್ದರು. ಅವರ ಕುಟುಂಬದಲ್ಲಿ ರಷ್ಯನ್, ಇಂಗ್ಲಿಷ್ ಮತ್ತು ಫ್ರೆಂಚ್ ಮೂರು ಭಾಷೆಗಳೂ ದಿನನಿತ್ಯದ ಸಾಮಾನ್ಯ ಬಳಕೆಯಲ್ಲಿದ್ದವು. ಇಂಗ್ಲಿಷ್ ಭಾಷೆ ಸಾಹಿತ್ಯಗಳನ್ನು ಬಾಲ್ಯದಿಂದಲೂ ಒಡಗೂಡಿಸಿಕೊಂಡಿದ್ದು ನಬೋಕಾಫ್ ಅವರಿಗೆ ಇಂಗ್ಲಿಷಿನಲ್ಲಿ ಬರೆಯುವುದು ಕಷ್ಟಸಾಧ್ಯವಾಗಿರಲಿಲ್ಲ. ಆದರೆ ದೇಶಬಿಟ್ಟು ಬಂದಾಗ ಕಳೆದುಕೊಂಡಿದ್ದ ರಷ್ಯನ್ ಸಂಸ್ಕೃತಿ ಮತ್ತು ಸಾಹಿತ್ಯ ಪರಂಪರೆಗಳ ಆಸರೆಯನ್ನು ಯೂರೋಪಿನ ವನವಾಸದಲ್ಲಿ ಜೋಪಾನ ಮಾಡಿಕೊಂಡು ಬಂದಿದ್ದ ಅವರಿಗೆ, ತಾವಾಗಿಯೇ ಆ ಅಮೂಲ್ಯ ಆಸ್ತಿಯನ್ನು ಬಿಟ್ಟುಗೊಟ್ಟು, ನಲವತ್ತನೆಯ ವಯಸ್ಸಿನಲ್ಲಿ ಅಮೆರಿಕದಲ್ಲಿ ಹೊಸದಾಗಿ ಇನ್ನೊಂದು ಬಾಳನ್ನು ಲೇಖಕನಾಗಿ ರೂಪಿಸಿಕೊಳ್ಳಬೇಕಾಗಿ ಬಂದಿತ್ತು. ಅವರ ಎರಡನೆಯ ಇಂಗ್ಲಿಷ್ ಕಾದಂಬರಿ Bend Sinister ಸರ್ವಾಧಿಕಾರಿ ಆಳ್ವಿಕೆಯಲ್ಲಿ ಮನುಷ್ಯ ಚೇತನದ ಸ್ಪಂದನವನ್ನೆಲ್ಲಾ ನಿಶ್ಚೇತನವಾಗಿಸುವ ಪ್ರಯತ್ನ ಮತ್ತು ಅದಕ್ಕೆ ಬಗ್ಗದ ದಾರ್ಶನಿಕನೊಬ್ಬನ ಮಗುವನ್ನು ವೈಜ್ಞಾನಿಕ ಪ್ರಯೋಗದ ಹೆಸರಿನಲ್ಲಿ ಕೊಂದ ಕಥೆ. ನಬೋಕಾಫ್ ಈ ಕಾದಂಬರಿಯ ಬಗ್ಗೆ ಹೇಳುತ್ತಾ 'ತನ್ನ ಮಗುವನ್ನು ಸರ್ಕಾರ ಯಾವುದೋ ಜ್ಞಾನದಲ್ಲಿ ಕೊಂದುಹಾಕಿದೆಯೆಂದು ತಿಳಿದಾಗ, ವಿಧುರ ಕ್ರುಗ್ ಪಡುವ ಸಂಕಟ ಕಾದಂಬರಿಯ ಒಂದು ಜೀವತಂತು' ಎದಿದ್ದಾರೆ. ಇದರಲ್ಲಿನ 'ವಾಸ್ತವಿಕತೆ' ಲೆನಿನ್‌ರ ಭಾಷಣಗಳು, ಸೋವಿಯಟ್ ಸಂವಿಧಾನ ಮತ್ತು ಹಿಟ್ಲರನ ನಾಟ್ಸೆ ಪ್ರಚಾರಸಾಹಿತ್ಯ ಇವುಗಳಿಂದ ತೆಗೆದ ತುಣುಕುಗಳಲ್ಲಿದೆ.

ಈ ಕಾದಂಬರಿಯ ಮೂಲಕ ಚರಿತ್ರೆ ತಮ್ಮ ವೈಯಕ್ತಿಕ ಜೀವನದ ಮೇಲೆ ಚಾಚುತ್ತಿದ್ದ ಕರಿನೆರಳನ್ನು ದಾಟಿ ನಡೆದಿದ್ದರು. ಅಲ್ಲಿಂದಾಚೆಗೆ ನಬೋಕಾಫ್ ಅವರಿಗೆ ಮುಖ್ಯವಾಗಿದ್ದ ಪ್ರಶ್ನೆ ತಾವು ಬಂದು ನೆಲೆಸಿದ್ದ ಹೊಚ್ಚ ಹೊಸ ದೇಶದ ಪ್ರಕೃತಿ ಸಂಪತ್ತು, ಭೌತಿಕ ರೂಪುರೇಷಗಳು, ಜನವೈವಿಧ್ಯ, ನಾಗರಿಕತೆ ಮತ್ತು ಪರಿಭಾಷೆಗಳನ್ನು ತಮ್ಮ ಬರವಣಿಗೆಗೆ ಗ್ರಾಸವಾಗಿ ಉಪಯೋಗಿಸುವುದು. ಕವಿಸಂವೇದನೆಯ ಲೇಖಕನೊಬ್ಬನಿಗೆ ತನ್ನ ತಾಯಿ ನಾಡು, ನುಡಿ ಮತ್ತು ಸಾಹಿತ್ಯಪರಂಪರೆಗಳೆಲ್ಲವೂ ಇಲ್ಲವಾಗಿ ಆ ನೋವಿನೊಂದಿಗೆ ಹೊಸ ದೇಶ ಭಾಷೆಗಳೊಂದಿಗೆ ಅರ್ಥಪೂರ್ಣ ಸೃಜನಶೀಲ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅವಶ್ಯಕವಾಗಿತ್ತು. ನಬೋಕಾಫ್ ಅವರಿಗೆ ಹಂಬಲಿನ ಹಿನ್ನೋಟ ಲೇಖಕನಿಗೆ ಸ್ಫೂರ್ತಿಯಷ್ಟೇ ಆಗಿ ಪರ್ಯವಸಾನವಾಗದೆ ಜೀವನದುದ್ದಕ್ಕೂ ಕಾಲಿಗೆ ತೊಡರುವ ಹುಚ್ಚು ಸಹವಾಸವಾಗ ಬಹುದೆಂಬುದರ ಪರಿವೆ ತೀವ್ರವಾಗಿತ್ತು. ಹಿಂದಿನದನ್ನು ನೆನಪಿನ ಮೂಲಕ, ಕಲ್ಪನೆಯ ಸಹಾಯದಿಂದ ಸೃಜನಶೀಲ ಸಾಹಿತ್ಯವಾಗಿ ರೂಪಿಸುವುದರಿಂದ ಗತಕಾಲ ಅಳಿದು ನಶಿಸದೆ ಕಲೆಯ ಮಾಧ್ಯಮದಲ್ಲಿ ಜೀವಂತವಾಗಿ ನಿಲ್ಲಬಹುದು ಎಂಬುದನ್ನವರು ತಮ್ಮ ಕೃತಿಗಳ

ಮೂಲಕ ಕಂಡುಕೊಂಡಿದ್ದರು. ಅಮೆರಿಕಾಕ್ಕೆ ಬಂದ ಮೇಲೆ ಬರೆದ ಇನ್ನೊಂದು ಕಾದಂಬರಿ 'ಪ್ನಿನ್'. ಇದರ ನಾಯಕ ಪ್ನಿನ್ ಒಬ್ಬ ವಿದ್ವಾಂಸ. ರಷ್ಯನ್ ಭಾಷೆ ಮತ್ತು ಸಾಹಿತ್ಯಗಳಲ್ಲಿ ಅಪಾರ ಪಾಂಡಿತ್ಯವಿದ್ದ ಈ ಸುಸಂಸ್ಕೃತ ವ್ಯಕ್ತಿ ರಷ್ಯದಿಂದ ಹೊರಗೆ ನೀರಿನಿಂದ ತೆಗೆದ ಮೀನಿನಂತೆ. ಇಂಗ್ಲಿಷ್ ಭಾಷೆ ಮತ್ತು ಅಮೆರಿಕದ ನಾಗರಿಕತೆ ಆತನಿಗೆ ಬಗೆಹರಿಯದ ಸಮಸ್ಯೆ. ಆತನ ಅಂತಃಸಂಸ್ಕಾರ, ಪಾಂಡಿತ್ಯ, ಸಹೃದಯತೆಗಳೆಲ್ಲವೂ ಪರಕೀಯ ಭಾಷೆಯ ಮಾಧ್ಯಮದಲ್ಲಿ ಸೇರಿಹೋಗಿ ಆತ ಕೇವಲ ನಗೆಗೀಡಾಗುತ್ತಾನೆ. ಈ ಕಾದಂಬರಿಯಲ್ಲಿ ನಬೋಕಾಫ್ ದೇಶ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನುಳಿದು ಬಾಳಬೇಕಾದ ವ್ಯಕ್ತಿಯ ಆತಂಕ, ಧಾವಂತ, ಸಂಕಟಗಳನ್ನು ಚಿತ್ರಿಸಿದ್ದಾರೆ. ಚಿತ್ರಣದಲ್ಲಿ ಹಾಸ್ಯದ ಲಾಸ್ಯವೇ ಹೆಚ್ಚಾಗಿದ್ದರೂ ನಗುಪಾಟಲಾದ ವಿಲಕ್ಷಣ ನುಡಿಕಟ್ಟುಗಳ ಈ ಮನುಷ್ಯನ ಭಾಷೆ, ಆತನ ಮಾನವೀಯತೆ ಮತ್ತು ಘನತೆಗಳನ್ನು ಎತ್ತಿತೋರಿಸುತ್ತದೆ.

2

'ಲೊಲೀಟ' ಬರೆಯುವ ಕಾಲಕ್ಕೆ ನಬೋಕಾಫ್ ಅವರಿಗೆ ಅಮೆರಿಕದಲ್ಲಿದ್ದು ಇಂಗ್ಲೀಷಿನಲ್ಲಿ ಬರೆಯುವ ಬಗ್ಗೆ ಇದ್ದ ಅಳುಕುಗಳು ಯಾವುದೂ ಉಳಿದಿರಲಿಲ್ಲ. ಈ ಕಾದಂಬರಿಯಲ್ಲಿ ನಾಯಕ ಕಥನಕಾರ ಹಂಬರ್ಟ್ ಹಂಬರ್ಟ್‌ನ, ವಿದ್ಯಾವಂತ, ಮಧ್ಯ ಐರೋಪ್ಯ, ಸುಸಂಸ್ಕೃತ ಧ್ವನಿ ಕಥೆಯನ್ನು ಹೇಳಿದರೆ, ಹತ್ತಾರು ಅಮೆರಿಕನ್ ಧ್ವನಿಗಳು ವಿವಿಧ ಪರಿಭಾಷೆಗಳಲ್ಲಿ ಮಾತನಾಡುವುದು ಆಯಾ ಸಂದರ್ಭ ಮತ್ತು ವ್ಯಕ್ತಿತ್ವ ಪ್ರಕಾರಕ್ಕೆ ಪೂರ್ತಿ ಪಡಿಯಚ್ಚು ತೆಗೆದಂತಿದೆ. ಅಂದರೆ, ಯೂರೋಪಿನ ಹಳೆಯ ಪ್ರಪಂಚವನ್ನು ಹಿಂದೆ ಬಿಟ್ಟು ಬಂದಿದ್ದ ನಬೋಕಾಫ್ ಹೊಸ ಪ್ರಪಂಚದ ವಿವಿಧವಿಚಿತ್ರಗಳನ್ನು ಅದರ ಭಾಷೆಯ ಬಲೆಯಲ್ಲಿಯೇ ಸೆರೆಹಿಡಿಯುವ ಸಾಮರ್ಥ್ಯವನ್ನು ಸಂಪಾದಿಸಿದ್ದರು.

ಒಂದು ವಿಧದಲ್ಲಿ 'ಲೊಲೀಟ' ಇಂಗ್ಲಿಷ್ ಭಾಷೆಯೊಂದಿಗೆ ನಬೋಕಾಫರ ಪ್ರೇಮ ಪ್ರಕರಣದ ಕಥೆಯೆನ್ನಬಹುದು. ಈ ದಿಶೆಯಲ್ಲಿ ವಿಮರ್ಶಕರು ಸಾಕಷ್ಟು ಕೃಷಿ ನಡೆಸಿದ್ದಾರೆ. ಈ ಕಾದಂಬರಿ ಬರೆಯುವ ಕಾಲಕ್ಕೆ ಇಂಗ್ಲಿಷ್ ಭಾಷೆಯೊಡನೆ ನಬೋಕಾಫ್ ಅವರ ಸಾಹಿತ್ಯ ಸೃಷ್ಟಿ ಸಂಬಂಧಕ್ಕೆ ಹನ್ನೆರಡು ವರ್ಷಗಳಾಗಿತ್ತೆಂಬುದೂ, ಅಮೆರಿಕದಲ್ಲಿ ಬಳಕೆಯಲ್ಲಿದ್ದ ಇಂಗ್ಲಿಷಿನ ತಾರುಣ್ಯ, ಲವಲವಿಕೆ, ವಡ್ಡತನ, ಉತ್ಸಾಹ ಇವೆಲ್ಲವೂ ಯೂರೋಪಿನ ಹಳೆಯ ಸಂಸ್ಕೃತಿಯಿಂದ ಬಂದವರಿಗೆ ಆಕರ್ಷಕವಾಗಿದ್ದಷ್ಟೇ ಅಸಹನೀಯವೂ ಆಗಿರಬೇಕೆಂದು ಈ ವಾದ.

ಕಾದಂಬರಿಯಲ್ಲಿ ಹುದುಗಿರಬಹುದಾದ ಅರ್ಥ ವಿಶೇಷಗಳೇನೇ ಇದ್ದರೂ ಒಟ್ಟಿನಲ್ಲಿ ಅದೊಂದು ಪ್ರೇಮ ಕಥೆ. ಮೂವತ್ತೆಂಟು ವರ್ಷದ ಹಂಬರ್ಟ್ ಹಂಬರ್ಟ್ ಪ್ಯಾರಿಸ್ಸಿನಿಂದ

ಅಮೆರಿಕಾಕ್ಕೆ ವಲಸೆ ಬಂದು ನ್ಯೂ ಇಂಗ್ಲೆಂಡಿನ ಸಣ್ಣ ಊರೊಂದರಲ್ಲಿ ವಸತಿಗೆಂದು ಮನೆಯೊಂದಕ್ಕೆ ಹೋದಾಗ, ಅವನಿಗೆ ಬಾಲ್ಯದಲ್ಲಿ ತಾನು ಪ್ರೀತಿಸಿ ಕಳೆದುಕೊಂಡಿದ್ದ ಬಾಲಿಕೆಯ ಪುನರಾವತಾರವೆನಿಸುವ, ಮನೆಯೊಡತಿಯ ಮಗಳು ಹನ್ನೆರಡು ವರ್ಷದ ಡೋಲೊರಸ್ ಕಣ್ಣಿಗೆ ಬೀಳುತ್ತಾಳೆ. ಹಂಬರ್ಟ್ ಹಂಬರ್ಟ್ ಹದಿಮೂರು ವರ್ಷದವನಾಗಿದ್ದಾಗ, ಫ್ರಾನ್ಸಿನಲ್ಲಿ ಸಮುದ್ರ ತೀರದಲ್ಲಿ ಜೊತೆಗಾತಿಯಾಗಿದ್ದ ಆ್ಯನಬೆಲ್ ಲೀ, ಅವರಿಬ್ಬರ ಪರಸ್ಪರ ಪ್ರೇಮ ಸಹಜವಾಗಿ ದಡ ಮುಟ್ಟುವ ಮುನ್ನ ಅವನಿಂದ ಬೇರ್ಪಡೆಯಾಗಿ, ಅನಂತರದಲ್ಲಿ ಸಾವನ್ನಪ್ಪಿದಳು. ಅಂದಿನಿಂದ, ಆ ಬಾಲೆಯ ರೂಪವನ್ನು ಮರೆಯಲಾರದ ಹಂಬರ್ಟ್‌ನಿಗೆ ಬೆಳೆದು ವಯಸ್ಕನಾದಮೇಲೆಯೂ ವಯಸ್ಕ ಹೆಂಗಸರ ಸಹವಾಸ ಅಸಹ್ಯ. ಆತನಿಗಿದ್ದ ಹಂಬಲು ಬಾಲ್ಯಾವಸ್ಥೆಯಿಂದಿನ್ನೂ ಆಗತಾನೇ ಹೊರಬರುತ್ತಿರುವ ಹುಡುಗಿಯರ ಮೇಲೆ. ತನ್ನ ಈ ವಿಚಿತ್ರವಾಂಛೆಯನ್ನು ಚೆನ್ನಾಗಿ ಓದಿಕೊಂಡಿರುವ ಹಂಬರ್ಟ್ ಚರಿತ್ರೆ, ಸಾಹಿತ್ಯಗಳಿಂದ ತೆಗೆದ ನಿದರ್ಶನಗಳ ಮೂಲಕ ಸಮರ್ಥಿಸುತ್ತಾನೆ. ಮಹಾಕವಿ ಡಾಂಟೆ ಬಿಯಾಟ್ರೆಸಳನ್ನು ಕಂಡು ಪ್ರೀತಿಸಿದಾಗ ಆಕೆಗಿನ್ನೂ ಒಂಬತ್ತು ವರ್ಷ; ಎಡ್ಗರ್ ಆಲೆನ್ ಪೋನ ಹೆಂಡತಿಗೆ ಹದಿನಾಲ್ಕು ವರ್ಷ. ಪೌರ್ವಾತ್ಯ ದೇಶಗಳಲ್ಲಿ ಹನ್ನೆರಡು ವರ್ಷದ ಹುಡುಗಿಯನ್ನು ನಲ್ವತ್ತು ವರ್ಷದವನಿಗೆ ಮದುವೆ ಮಾಡುವುದು ಸರ್ವೇಸಾಮಾನ್ಯ, ಇತ್ಯಾದಿ. ಆತ ತನ್ನ ಈ ಅಭಿಲಾಷೆಯನ್ನು ವರ್ಣಿಸುವ ಭಾಷೆ ಪುರಾಣ, ಮಾಟ, ಮಂತ್ರ, ಕಾವ್ಯ, ವಿಜ್ಞಾನಗಳ ವಿಶೇಷ ಪದಗಳನ್ನೊಳಗೊಂಡ ಒಂದು ಸೃಷ್ಟಿ. ಅವನು ಹೇಳುವ ಪ್ರಕಾರ ಅವನ ಈ ಲಾಲಸೆ ಒಂದು ಬಹಳ ವಿಶೇಷವಾದ ದೃಷ್ಟಿಸಂಬಂಧವಾದದ್ದು ; ಅಂದರೆ, ಈ ಬಗೆಯ ಪ್ರೇಮೋತ್ಪತ್ತಿಯಾಗಬೇಕಾದರೆ ಗಂಡು ಮತ್ತು ಹೆಣ್ಣಿನ ಮಧ್ಯೆ ಇಪ್ಪತ್ತೈದು-ಮೂವತ್ತು ವರ್ಷಗಳ ವ್ಯತ್ಯಾಸವಾದರೂ ಇರಬೇಕು. ಅಲ್ಲದೆ ಇಂತಹ ಪ್ರೇಮವನ್ನು ಪ್ರಚೋದಿಸುವ ಬಾಲಿಕೆಯರು ಒಂದು ವಿಶೇಷ ಗಣ – ಅದಕ್ಕೆ ಆತ ಕೊಡುವ ಹೆಸರು ಪ್ರಾಣಿಶಾಸ್ತ್ರದಲ್ಲಿ ಚಿಟ್ಟೆಗಳ ಬೆಳವಣಿಗೆಯಲ್ಲಿ ಒಂದು ಘಟ್ಟಕ್ಕೆ ಇರುವ ಪದ nymphet – ಜಲಕನ್ನಿಕೆ – ಎನ್ನಬಹುದು. ಒಂಬತ್ತರಿಂದ ಹದಿನಾಲ್ಕರವರೆಗೆ ಮಾತ್ರ ಬಾಲಿಕೆಯರಿಗೆ ಈ ಪಟ್ಟ ಉಂಟು. ಅಷ್ಟೇ ಅಲ್ಲದೆ ರೂಪಲಾವಣ್ಯಗಳಿಗೂ ಈ ವೈಶಿಷ್ಟ್ಯಕ್ಕೂ ಏನೂ ಸಂಬಂಧವಿಲ್ಲ. ಕನ್ನಿಕೆಯ ಲಕ್ಷಣಗಳನ್ನು ಹಂಬರ್ಟ್ ಅತಿಸೂಕ್ಷ್ಮದಿಂದ ವರ್ಣಿಸುತ್ತಾನೆ. ವಿಜ್ಞಾನಿ ಯಾವುದೋ ಒಂದು ಹೊಸ ಜಾತಿಯ ಪ್ರಾಣಿಯನ್ನು ವರ್ಣಿಸುವಂತೆ, ಈ ಎಲ್ಲ ನ್ಯಾವಣ, ಜಾಣತನಗಳ ನೇಯ್ಗೆಯಲ್ಲಿ ನಾಜೂಕಾಗಿ ಹಂಬರ್ಟ್ ಓದುಗನನ್ನು ತನ್ನ ಮಾತಿನ ಮೋಡಿಯಲ್ಲಿ ಸಿಲುಕಿಸುತ್ತಾನೆ. ಕನ್ನಿಕೆಯ ಮೋಡಿಯಲ್ಲಿ ಸಿಕ್ಕಿದ ಪ್ರೇಮಿಯಂತೆ, ಓದುಗನ ಔಚಿತ್ಯಪ್ರಜ್ಞೆಯೂ ಹಂಬರ್ಟ್‌ನ ಮಾತಿನ ಜಾಲದಲ್ಲಿ ಸಿಕ್ಕಿ ತಟಸ್ಥವಾಗುತ್ತದೆ.

ಹಂಬರ್ಟ್‌ನ ಪ್ರಜ್ಞೆ ನೂರಾರು ವರ್ಷಗಳನ್ನು ಆವರಿಸಿದರೂ ಅವನ ಪರಿಸ್ಥಿತಿ 1947ರ ಅಮೆರಿಕಾದ ಸಾಮಾಜಿಕ ಕಟ್ಟುಪಾಡುಗಳ ಮಧ್ಯೆ ಇತ್ತು. ಆತ ತನ್ನ ಪ್ರೀತಿಯನ್ನು

ಪುರಾಣ, ಕಾವ್ಯ, ಇತಿಹಾಸಗಳಲ್ಲಿನ ಪ್ರೇಮ ಪ್ರಕರಣಗಳ ಚೌಕಟ್ಟಿನಲ್ಲಿ ನೋಡುತ್ತಾನೆ. ಆತನ ಮೊದಲನೆಯ ಪ್ರಿಯತಮೆಯ ಹೆಸರು ಆ್ಯನಬೆಲ್ ಲೀ ಅದೇ ಹೆಸರಿನ ಎಡ್ಗರ್ ಆ್ಯಲನ್ ಪೋರ ಪ್ರಖ್ಯಾತ ಕವಿತೆಯನ್ನು ಪ್ರತಿಧ್ವನಿಸುತ್ತದೆ. ಕವಿತೆಯ ವಸ್ತು ಸಾವು ಸೆಳೆದೊಯ್ದ ತನ್ನ ಪ್ರಿಯತಮೆಯಲ್ಲಿ ಕವಿಗಿರುವ ಅಮರ ಪ್ರೇಮ. ಕಾದಂಬರಿಯುದ್ದಕ್ಕೂ ಯೂರೋಪಿನ ಹಲವು (ಫ್ರೆಂಚ್, ಇಂಗ್ಲಿಷ್, ಜರ್ಮನ್, ಇಟ್ಯಾಲಿಯನ್, ರಷ್ಯನ್) ಸಾಹಿತ್ಯ, ಸಂಗೀತ, ಸಂಸ್ಕೃತಿ, ಸಾಹಿತಿ, ಕಲಾವಿದರಿಗೆ ಮನ್ನಣೆ ಇದೆ. ಹಂಬರ್ಟ್‌ನ ಪ್ರಜ್ಞೆ/ಕವಿ ಹೃದಯದ ಕೆಲವು ಶತಮಾನಗಳ ಐರೋಪ್ಯ ಸಂಸ್ಕೃತಿಯಿಂದ ರೂಪಿತವಾದದ್ದು, ಹೊಚ್ಚ ಹೊಸ ನಾಗರಿಕತೆಯ ತಾಣವಾದ ಅಮೆರಿಕವನ್ನು ಎದುರಾದಾಗ ಆತನ ಮನಸ್ಸಿನಾಳದಲ್ಲಿದ್ದ ಪ್ರತಿಮೆಯೊಂದು ತೇಲಿಬಂದು, ತೀರ ಸಾಮಾನ್ಯತರಳಾದ ಹುಡುಗಿಯೊಬ್ಬಳ ಮೇಲೆ ತನ್ನ ಅಚ್ಚನ್ನು ಊರುತ್ತದೆ. ಅಂದರೆ ಹಂಬರ್ಟ್ ತನ್ನ ವಯಸ್ಕಜೀವನವೆಲ್ಲಾ ಹಾತೊರೆದು ಬಯಸಿದ್ದ ಬಾಲಿಕಾ ಪ್ರಿಯತಮೆಯ ಆದರ್ಶ ಪ್ರತಿಮೆ ಡೊಲೋರೆಸಳಲ್ಲಿ ಪುನರಾವತಾರವಾಗುತ್ತದೆ. ಇದು ಹಂಬರ್ಟ್‌ನ ಮನಸ್ಸಿನ ಸೃಷ್ಟಿ

ಈ ಕಾದಂಬರಿ ಹಂಬರ್ಟ್ ಹಂಬರ್ಟ್ ಜೈಲಿನಲ್ಲಿ ಬರೆದ ನೆನಪು/ಪಾಪ ನಿವೇದನೆಯ ರೂಪದಲ್ಲಿದೆ. ತನ್ನ ಸ್ವರೂಪದಿಂದಲೇ ನಿವೇದನೆಯೇ ಮುಖ್ಯವಾದ ಕಾದಂಬರೀಪ್ರಕಾರವನ್ನು 'ಲೊಲೀಟ' ವಿಡಂಬನೆ ಮಾಡುತ್ತದೆ. ಕಥನದುದ್ದಕ್ಕೂ ಹಂಬರ್ಟ್ ಓದುಗ ತನ್ನ ನಿವೇದನೆಯನ್ನು ಕೇಳುತ್ತಿರುವ ನ್ಯಾಯಾಧೀಶನೆಂಬಂತೆ, ಆ ಪ್ರಕಾರದ ಕೆಲವು ಸಾಮಾನ್ಯ ಲಕ್ಷಣಗಳನ್ನು ಎತ್ತಿ ಕಾಣುವಂತೆ ಬಳಸುತ್ತಾನೆ. ಅಷ್ಟೇ ಅಲ್ಲದೆ ಜನಪ್ರಿಯ ಪ್ರೇಮಕಥೆಗಳ ಸೂತ್ರಗಳೂ ಅನೇಕವು ಇಲ್ಲಿ ವಿಡಂಬನೆಗೆ ಗುರಿಯಾಗುತ್ತವೆ. ಜೊತೆಗೆ ಮೊದಲಿನಿಂದಲೂ ನಬೋಕಾಫ್ ಅವರಿಗೆ ತಿರಸ್ಕಾರವಿದ್ದ ಫ್ರಾಯ್ಡ್‌ರ ಮನೋ-ವಿಶ್ಲೇಷಣೆಯ ಪದ್ಧತಿಗಳೂ ಸಾಕಷ್ಟು ಏಟು ತಿನ್ನುತ್ತವೆ. ಪ್ರತಿಯೊಬ್ಬ ಹುಡುಗಿಯೂ ತನ್ನ ತಂದೆಯನ್ನು ಕಾಮಿಸಿ ತಾಯಿಯನ್ನು ದ್ವೇಷಿಸುತ್ತಾಳೆಂಬ ಮನೋವಿಶ್ಲೇಷಣೆಯ ನಂಬುಗೆಯನ್ನು ಇಲ್ಲಿ ವಿಲಕ್ಷಣವಾಗಿ ಆಚರಿಸಿ ಅಣಕಿಸಿದೆ. ಕಾದಂಬರಿಯಲ್ಲಿ ಅನೇಕ ಸಂದರ್ಭಗಳಲ್ಲಿ ಹಂಬರ್ಟ್ ಮನೋವಿಶ್ಲೇಷಣೆಯ ಪದ್ಧತಿಗಳನ್ನು ತಲೆಕೆಳಗು ಮಾಡಿ ಒಳಗೇ ಸಂತೋಷಪಡುವುದಿದೆ.

ಈಗ ಪ್ರಪಂಚಪ್ರಸಿದ್ಧವಾಗಿರುವ 'ಲೊಲೀಟ'ದ ಮೊದಲನೆಯ ವಾಕ್ಯಗಳು ಲೊಲೀಟಳ ಹೆಸರನ್ನು ಹಂಬರ್ಟ್ ಕಲ್ಲುಸಕ್ಕರೆಯಂತೆ ಚಪ್ಪರಿಸಿ ಒಂದೊಂದು ಅಕ್ಷರದ ಸೊಗಸನ್ನೂ ಅನುಭವಿಸುವ, ವರ್ಣಿಸುವುದರ ಚಿತ್ರಣ : 'Lolita, light of my life, fire of my loins. My sin, my soul. Lo-lee-ta : the tip of the tongue taking a trip of three steps down the palate to tap, at three, on the teeth. Lo. Lee. Ta." ಈ ವಾಕ್ಯಗಳು, ಮುಖ್ಯವಾಗಿ ಮೊದಲನೆಯ ಎರಡು, ಓದುಗರ ಮನಸ್ಸಿನಲ್ಲಿ ಹಲವು

ಹನ್ನೊಂದು ಬಗೆಯ ಆಶೋತ್ತರಗಳನ್ನು ಎಬ್ಬಿಸುತ್ತವೆ ; ಈ ಕಾದಂಬರಿ ಪುಟಕ್ಕೊಮ್ಮೆ ರತಿಕ್ರಿಯೆಯ ವರ್ಣನೆ ಮಾಡಬಹುದೆಂಬುದೂ ಒಂದು. ಆದರೆ, ಇಂಗ್ಲಿಷಿನಲ್ಲಿ ಈ ಪದಗಳ ಜೋಡಣೆಯಿಂದ ಏಳಬಹುದಾದ ನಿರೀಕ್ಷಣೆ ಲೇಖಕ ಓದುಗರ ಮೇಲೆ ಆಡುವ ಆಟವಷ್ಟೆ ಸಾಮಾನ್ಯವಾಗಿ ರತಿಕ್ರಿಯೆಯ ವರ್ಣನೆಯೇ ಪ್ರಧಾನವಾದ ಕಾದಂಬರಿಯಲ್ಲಿ ಉಪಯೋಗಿಸುವ ಭಾಷೆಯ ವಿಡಂಬನೆ ಇದು. ವಿಡಂಬನೆ ನಬೋಕಾಫ್‌ರ ಬತ್ತಳಿಕೆಯಲ್ಲಿ ಮುಖ್ಯವಾದ ಒಂದು ಬಾಣ. ಹಂಬರ್ಟ್ ತನ್ನ ಪ್ರಿಯತಮೆಗೆ ಕೊಟ್ಟ ಹೆಸರು ಇಂಗ್ಲಿಷಿನದಲ್ಲ. ಆಕೆಯ ಹೆಸರಿನ (ಡೊಲೋರಸ್) ಒಂದು ಅಕ್ಷರಕ್ಕೆ ಸ್ಪ್ಯಾನಿಶ್ ಭಾಷೆಯ ಮುದ್ದಿನ - ಲಿಟ ಎಂಬ ಪ್ರತ್ಯಯವನ್ನು ಸೇರಿಸಿ ಮಾಡಿದ್ದು. ಹಂಬರ್ಟ್ ಪೂರ್ತಿ ಅಮೆರಿಕನ್ ಆದ, 'ಡಾಲಿ' ಎಂದು ಎಲ್ಲರೂ ಕರೆಯುವ ಆ ಹುಡುಗಿಗೆ ಈ ಯೂರೋಪಿನ ಹೆಸರಿಟ್ಟಂತೆಯೇ ತನ್ನ ಸಾಹಿತ್ಯಕ ಕಲ್ಪನೆಯಿಂದ, ಹಂಬಲಿನಿಂದ ರೂಪಿಸಿದ ವ್ಯಕ್ತಿತ್ವವನ್ನೂ ಆಕೆಗೆ ತೊಡಿಸುತ್ತಾನೆ. ಆದರೆ ಜೀವಂತ ಆಶೆ ಆಕಾಂಕ್ಷೆಗಳಿರುವ ಆ ಹುಡುಗಿ ಆತನ ಕೈತಪ್ಪಿಸಿ ಓಡಿಹೋಗುತ್ತಾಳೆ.

ಕಾದಂಬರಿಯ ಕಥೆಯ ಭಾಗ ಇಷ್ಟು: ಹಂಬರ್ಟ್ ಹಂಬರ್ಟ್ ತನ್ನ ಕಲ್ಪನೆಗಳು ಹಗಲುಗನಸುಗಳೇ ಮೂರ್ತಿವೆತ್ತಂತಹ ಡೋಲೋರಸಳನ್ನು ನೋಡಿದ ಗಳಿಗೆಯಲ್ಲಿಯೇ ಆಕೆಯ ತಾಯಿಯ ಮನೆಯಲ್ಲಿ ಬಾಡಿಗೆ ಕೊಡುವ ಅತಿಥಿಯಾಗಿ ಬರಲು ಒಪ್ಪುತ್ತಾನೆ. ಅಲ್ಲಿಂದಾಚೆಗೆ ಈತ ಆ ಹುಡುಗಿಯ ಸಾನ್ನಿಧ್ಯಕ್ಕೆ ಹಂಬಲಿಸಿ, ಹಲವಾರು ಬಗೆಯ ಉಪಾಯಗಳನ್ನು ಮಾಡುತ್ತಿರುವಂತೆಯೇ ವಿಧಿ ಅನುಕೂಲಸಿಂಧುವಾಗಿ ಡೋಲೋರಸಳ ವಿಧವೆ ತಾಯಿ, ಅಮೆರಿಕದ ಹೆಂಗಸರ ಜನಪ್ರಿಯ, ಕಥಾಸಾಹಿತ್ಯದ ಆದರ್ಶವಾದ, ಐರೋಪ್ಯ ಸಂಸ್ಕೃತಿಯ ಪ್ರತೀಕದಂತಿರುವ, ಅಲ್ಲದೆ ತಾನಾಗೇ ಬಂದು ಮನೆಯಲ್ಲಿ ವಾಸವಾಗಿದ್ದು ಹತ್ತಿರದಲ್ಲಿಯೇ ಕೈಗೆಟಕುವಂತಿರುವ, ಈತನ ಬಗ್ಗೆ ಆಸಕ್ತಿ ತಳೆಯುತ್ತಾಳೆ. ಅಲ್ಲಿಂದಾಚೆಗೆ, ಮನೆಯೊಡತಿ ಶಾರ್ಲೆಟ್ ಈತನನ್ನು ಆಕರ್ಷಿಸುವ ಪ್ರಯತ್ನದಲ್ಲಿ, ತನ್ನ ಅನುಕೂಲ ಹಂಬರ್ಟ್‌ನಿಗೆ ಗೋಚರವಾಗುತ್ತದೆ. ಮಧ್ಯಮವರ್ಗದ ಎಲ್ಲಾ ಅರ್ಥರಹಿತ 'ಸಾಂಸ್ಕೃತಿಕ' ಚಟುವಟಿಕೆಗಳನ್ನೂ ಪೂರ್ಣಶ್ರದ್ಧೆಯಿಂದ ನಡೆಸುವ ಶಾರ್ಲೆಟಿಗೆ ಯೂರೋಪಿನ ಗಂಡ ತನ್ನ ಆಶೆ ಆಕಾಂಕ್ಷೆಗಳೆಲ್ಲದರ ಪರಾಕಾಷ್ಠೆಯಾಗಿ ಕಂಡುಬರುತ್ತಾನೆ. ಹಂಬರ್ಟನಿಗೆ, ಹನ್ನೆರಡರ ಬಾಲೆಯ ಎಳೇ ಲಾವಣ್ಯದ, ಆಗಿನ್ನೂ ತಾರುಣ್ಯದ ಹೊಸಲಿನಲ್ಲಿ ಕಾಲಿಡುತ್ತಿರುವ ಲಾಲಿತ್ಯದ ಕನಸು ಕಾಣುತ್ತಿದ್ದವನಿಗೆ, ಮಧ್ಯವಯಸ್ಸಿನ, ಹಳಸಲು ಆಶೋತ್ತರಗಳ, ಚರ್ವಿತಚರ್ವಣ 'ಸಂಸ್ಕೃತಿ'ಯ, ದೃಢಸಂಕಲ್ಪದ ಹೆಂಡತಿ ಜೊತೆಯಾಗುತ್ತಾಳೆ. ಆಕೆಯ ಗಂಡನಾಗಿ, ಲೊಲೀಟಳ ತಂದೆಯ ಸ್ಥಾನದಲ್ಲಿ ತಾನು ಮಗುವಿನಲ್ಲಿ ತೋರಿಸಬಹುದಾದ ನ್ಯಾಯಸಮ್ಮತ ಆಸಕ್ತಿ ಹಂಬರ್ಟ್‌ನಿಗೆ ಈ ಸಂಬಂಧದಲ್ಲಿದ್ದ ಮುಖ್ಯ ಪ್ರಚೋದನೆ. ಆದರೆ ಅಮೆರಿಕದ ಸಾಮಾಜಿಕ ಜೀವನದಲ್ಲಿ ಬಹು

ಪ್ರಾಮಾಣಿಕವಾದ ಲೈಂಗಿಕ ಆಕರ್ಷಣೆ ತಾಯಿ ಮಗಳನ್ನು ಕೂಡ ಎದುರಾಳಿಗಳನ್ನಾಗಿ ಮಾಡಿರುತ್ತದೆ. ಮಗಳು ಬೆಳೆದು ದೊಡ್ಡವಳಾದಂತೆ ತನ್ನ ಆಕರ್ಷಣೆ ಕುಂಠಿತವಾಗ ಬಹುದೆಂಬ ಭಾವನೆ ತಾಯಿಯ ಮನಸ್ಸಿನಲ್ಲಿ ಕೆಲಸಮಾಡಿ ತನ್ನ ಹೊಸ ಸಂಸಾರ ಮಧುಚಂದ್ರದೋಪಾದಿಯಲ್ಲಿ ಸಾಗಲೆಂದು ಶಾರ್ಲೆಟ್ ಮಗಳನ್ನು ದೂರದಲ್ಲಿರುವ ಮಕ್ಕಳ ಬೇಸಿಗೆ ಶಿಬಿರಕ್ಕೆ ಕಳಿಸುತ್ತಾಳೆ. ನಂತರ ಶಾಲೆಯಲ್ಲಿಯೇ ವಾಸವಿರುವ ಏರ್ಪಾಟು ಮಾಡಿ ಮಗಳನ್ನು ಕಳಿಸುವ ನಿರ್ಧಾರ ಆಕೆಯದು.

ಹಂಬರ್ಟ್‌ನ ಅವಸ್ಥೆ ವಿಪರೀತವಾಗಿ, ತನ್ನ ಒಳಗುದಿಯನ್ನು ಆತ ಒಂದು ದಿನಚರಿ ಯಲ್ಲಿ ತೋಡಿಕೊಳ್ಳುತ್ತಾನೆ. ಗಂಡನ ಎಲ್ಲಾ ಚಟುವಟಿಕೆಗಳಲ್ಲೂ ತನಗೂ ಪ್ರವೇಶವಿರ ಬೇಕೆಂದು ನಂಬಿರುವ ಶಾರ್ಲೆಟ್ ಒಂದು ದಿನ ಅದನ್ನು ಕದ್ದು ಓದಿ ಹೌಹಾರುತ್ತಾಳೆ. 'ಇನ್ನೆಂದಿಗೂ ನೀನು ಆ ಕರ್ಮದ ಹುಡುಗಿಯನ್ನು ನೋಡದಂತೆ ನಾನು ನೋಡಿಕೊಳ್ಳುತ್ತೇನೆ' ಎಂದು ಅತ್ತು ಅಬ್ಬರಿಸಿದ ಹೆಂಡತಿ ಮನೆಯಿಂದಾಚೆಗೆ ಹೋಗುತ್ತಾಳೆ. ಆ ದಿನಚರಿ ತಾನು ಬರೆಯುತ್ತಿರುವ ಕಾದಂಬರಿಯ ತುಣುಕೊಂದೆಂದು ಆಕೆಯನ್ನು ನಂಬಿಸುವ ಸಾಧ್ಯತೆಗಳನ್ನು ಹಂಬರ್ಟ್ ಪರಿಶೀಲಿಸುತ್ತಿರುವಾಗ ದೂರವಾಣಿಯ ಕರೆಗಂಟೆ ಶಬ್ದವಾಗಿ ಯಾರೋ 'ನಿಮ್ಮ ಹೆಂಡತಿ ಕಾರಿನ ಅಪಘಾತದಲ್ಲಿ ಸಿಕ್ಕಿದ್ದಾರೆ' ಎನ್ನುತ್ತಾರೆ. ಇದೊಂದು ತಮಾಷೆ, ಹೆಂಡತಿಯೊಂದಿಗೆ ರಾಜಿಯಾಗಲು ಒಂದು ಒಳ್ಳೆಯ ನೆಪ — ಎಂದು ಆಕೆಯನ್ನು ಕೂಗಿ ಹೇಳಲು ಹೊರಟಾಗ, ಆಕೆ ಮನೆಯಲ್ಲಿಲ್ಲವೆಂದು ಗೋಚರವಾಗುತ್ತದೆ. ರೋಷದಿಂದ ಕುರುಡಾದ ಆಕೆ ರಸ್ತೆಯಲ್ಲಿ ಅಡ್ಡ ಬಂದು ಸಿಕ್ಕುತ್ತಿದ್ದ ನಾಯಿಯನ್ನು ಉಳಿಸಲು ಸರಕ್ಕನೆ ತಿರುಗಿಸಿದ ಕಾರಿಗೆ ಸಿಕ್ಕಿ, ತಕ್ಷಣ ಮೃತಳಾಗಿದ್ದಳು.

ಹಂಬರ್ಟ್‌ನ ಅದೃಷ್ಟದೇವತೆ ಅವನಿಗೆ ಬೇಕಾದುದನ್ನು ತಾನಾಗಿಯೇ ನಡೆಯುವಂತೆ ಮಾಡಿತ್ತು. ಅಲ್ಲಿಂದಾಚೆಗೆ ದುಃಖವನ್ನು ಪಾನದಲ್ಲಿ ತೇಲಿಬಿಟ್ಟ ವಿಧುರ ತಾಯಿ ಇಲ್ಲದ ತಬ್ಬಲಿಯನ್ನು ನೋಡಿ, ಮುಖತಃ ವಿಷಯ ತಿಳಿಸಿ ಅವಳನ್ನು ಸಮಾಧಾನ ಮಾಡಲೆಂದು ಅವಳಿದ್ದ ಶಿಬಿರಕ್ಕೆ ಹೋಗುತ್ತಾನೆ. ಅಲ್ಲಿಂದ ಹೊರಟಮೇಲೆ ವಿಧಿ ತನಗೆ ಕೊಟ್ಟ ವರವನ್ನು ರೂಢಿಸಿಕೊಳ್ಳಲು ಅವನು ಮಾಡಿದ್ದ ಉಪಾಯ, ಲೊಲೀಟಳನ್ನು ಕರೆದುಕೊಂಡು ದೂರದ್ದೊಂದು ಊರಿಗೆ ಹೋಗಿ ಅವಳಿಗೆ ನಿದ್ದೆ ಗುಳಿಗೆ ಕೊಟ್ಟು – ಇತ್ಯಾದಿ. ಅವನ ಎಲ್ಲ ಹೊಂಚಿಕೆಯೂ ನೀರುಪಾಲಾಗುವುದು ಕಾದಂಬರಿಯ ಈ ಭಾಗದ ವೈಶಿಷ್ಟ್ಯ. ಹಂಬರ್ಟ್ ಮಾಡಿದ ಉಪಾಯ ತಲೆಕೆಳಗಾದಂತೆಯೇ ಅವನ ವಿಧಿದೇವತೆ ದೊಡ್ಡದೊಂದು ಆಶ್ಚರ್ಯ ಕಾದಿರಿಸಿರುತ್ತಾನೆ. ಶಿಬಿರದಲ್ಲಿ ಸ್ವಚ್ಛಂದ ವಾತಾವರಣದಲ್ಲಿ ಲೈಂಗಿಕಕ್ರಿಯೆಯೂ ಒಂದು ಆಟ ಎಂದು ಆಡಿದ್ದ ಹನ್ನೆರಡು ವರ್ಷದ ಲೊಲೀಟ ರಾತ್ರಿಯೆಲ್ಲಾ ನಿದ್ದೆಗೆಟ್ಟು ಹಾತೊರೆಯುತ್ತಿದ್ದ ಹಂಬರ್ಟ್‌ನನ್ನು ಬೆಳಿಗ್ಗೆ ಎದ್ದ ಗಳಿಗೆಯೇ ಆಡಲು ಆಹ್ವಾನಿಸುತ್ತಾಳೆ ! ಹಂಬರ್ಟನಿಗೋಸ್ಕರವಾಗಿ ಮೈಮುರಿಯ ಕೆಲಸಮಾಡುತ್ತಿರುವ

ಅವನ ವಿಧಿ, ಅವನು ಕನಸಿನಲ್ಲಿಯೂ ಕಂಡಿಲ್ಲದ ಸ್ವೇಚ್ಛೆಯ ಪ್ರಪಂಚವನ್ನು ಆತನ ಕಣ್ಣುಮುಂದೆ ತೆರೆದಿತ್ತು. ಅಂದರೆ ಇಲ್ಲಿ ಲೈಂಗಿಕ ಕ್ರಿಯೆಯ ವರ್ಣನೆಯಿದೆಯೇ ? ಇಲ್ಲ. 'ಆ ಪ್ರಾಣಿಗಳಂತಹ ಕ್ರಿಯೆಯನ್ನು ಯಾರು ಬೇಕಾದರೂ ಊಹಿಸಿಕೊಳ್ಳಬಹುದು. ನನ್ನ ಮುಂದಿರುವ ಕೆಲಸ ಕನ್ನಿಕೆಯರ ಅಪಾಯಕಾರೀ ಮೋಡಿಯನ್ನು ವರ್ಣಿಸುವುದು' ಎಂದು ಹಂಬರ್ಟ್ ('ಇಷ್ಟು ಹೊತ್ತಿಗೆ ನನ್ನ ಓದುಗನ ಹುಬ್ಬುಗಳು ಮೇಲೇರಿ ಅವನ ಬೋಳುತಲೆಯ ಹಿಂದಿನವರೆಗೂ ಪ್ರಯಾಣ ಮಾಡಿರಬೇಕು') ಓದುಗರ ನಾಲಿಗೆ ಚಪ್ಪರಿಸುವಿಕೆಯನ್ನು ಅಣಕಿಸಿ ಮುಂದೆ ನಡೆಯುತ್ತಾನೆ.

ಕನಸು ನನಸಾದದ್ದು ಹಂಬರ್ಟ್‌ನಿಗೆ ಸಂತೋಷ ತರುವುದಿಲ್ಲ. ಅದರ ಬದಲು ತಾನು ಕೊಲೆಮಾಡಿದ ವ್ಯಕ್ತಿಯ ಪ್ರೇತವೊಂದರ ಜೊತೆಗೆ ಅಲೆಯುತ್ತಿರುವಂತೆ ಭಾಸವಾಗುತ್ತದೆ. ಲೊಲೀಟಳನ್ನು ತನ್ನೊಡನೆ ಇಟ್ಟುಕೊಳ್ಳುವುದಕ್ಕೆ ಅವನ ಉಪಾಯ ತಾವಿಬ್ಬರೂ ಅಮೆರಿಕ ದೇಶವನ್ನೆಲ್ಲಾ ಪರ್ಯಟನ ಮಾಡುವುದು. ಅಂದರೆ ತಮ್ಮ ಪರಿಚಯದವರು ಯಾರೂ ಸಿಗದೇ ಇರುವಂತಹ ಊರುಗಳಲ್ಲಿ, ತಾಣಗಳಲ್ಲಿ ಒಂದೆರಡು ದಿನ ಮಾತ್ರ ಇದ್ದು, ಹೊರಡುವುದು. ಈ ಪ್ರಕಾರದಿಂದ ಅನೇಕ ತಿಂಗಳುಗಳು ಕಳೆಯುತ್ತವೆ. ಹಂಬರ್ಟನ ಸ್ಥಿತಿ ಸ್ವರ್ಗ, ನರಕಗಳೆರಡನ್ನೂ ಒಟ್ಟಿಗೇ ಅನುಭವಿಸಿದಂತೆ. ತಾನು ಜೀವಮಾನದಲ್ಲಿ ಹಂಬಲಿಸಿದ್ದದ್ದು ತನ್ನದಾಗಿದ್ದರೂ, ಜೀವಂತ ಬಾಲಿಕೆ ಅವನ ಪೌರಾಣಿಕ ಪ್ರತಿಮೆಯನ್ನು ಸೀಳಿ ಎದ್ದು ಬರುತ್ತಾಳೆ. ಆಗೀಗ ಅವನಿಗೆ ತನ್ನ ಭ್ರಮೆಯಿಂದ ಹೊರಗೆ ಕ್ಷಣಿಕವಾಗಿ ಕಾಲಿಟ್ಟಾಗ ಕಾಣುವುದು ನೀನೇ ಎನ್ನುವವರಿಲ್ಲದ, ವಯಸ್ಕನೊಂದಿಗೆ ವಿಚಿತ್ರ ಕಾಮಕೇಳಿ ಬಲವಂತವಾಗಿ ನಡೆಸುತ್ತಿರುವ, ತಬ್ಬಲಿ ಮಗು. ಅವಳ ಬಗ್ಗೆ ಅವನ ಕನಿಕರ, ವಾತ್ಸಲ್ಯ ಉಕ್ಕಿ ಹರಿಯುತ್ತದೆ. ಆದರೆ ಕಾಮನೆಯ ಸೆಳವು ಕನಿಕರವನ್ನು ಕೊಚ್ಚಿಹೋಗುತ್ತದೆ.

'ಇನ್ನೆಷ್ಟು ದಿನ ಈ ಹೊಲಸು ಬಾಳು' ಎಂದು ಲೊಲೀಟ ಸಿಡಿದು ಬಿದ್ದಾಗ ಹಂಬರ್ಟ್ ತನ್ನ ವಿಲಕ್ಷಣ ಮಧುಚಂದ್ರಕ್ಕೆ ವಿದಾಯ ಹೇಳಿ ಸಣ್ಣದೊಂದು ಊರಿನಲ್ಲಿ ತಳ ಊರುವ ಪ್ರಯತ್ನ ಮಾಡುತ್ತಾನೆ. ಅಲ್ಲಿ ಲೊಲೀಟ ಶಾಲೆಗೆ ಹೋಗುತ್ತಾಳೆ. ಶಾಲೆಯಲ್ಲಿ ನಾಟಕದಲ್ಲಿ ಪಾತ್ರ ವಹಿಸುವುದರ ಮೂಲಕ ಅವಳಿಗೆ ಹಂಬರ್ಟ್‌ನ ಸೆರೆಯಿಂದ ಬಿಡಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ನಾಟಕ ನಡೆಯಬೇಕಾದ ದಿನಕ್ಕೆ ಮೊದಲೇ ಒಂದು ದಿನ ತನಗೆ ಅದರಲ್ಲಿಯಾಗಲೀ, ಶಾಲೆಯಲ್ಲಿಯಾಗಲೀ ಆಸಕ್ತಿಯಿಲ್ಲವೆಂದು ಹೇಳಿ, ಮೊದಲಿನಂತೆ ದೇಶವೆಲ್ಲಾ ತಿರುಗುವುದೇ ತನಗೆ ಇಷ್ಟವೆಂದು ಲೊಲೀಟ ಹೇಳುತ್ತಾಳೆ. ಅವಳ ಜೊತೆಗಾರರು, ಸಮವಯಸ್ಕರು, ಎಲ್ಲಾ ವಯಸ್ಸಿನ ಗಂಡಸರೂ ಅವಳ ಮೇಲೆ ಕಣ್ಣಿಟ್ಟಿದ್ದಾರೆಂದು ಕೊರಗಿ ಸಂಶಯದಲ್ಲಿ ಬೇಯುತ್ತಿದ್ದ ಅವನಿಗೆ ಊರೇ ಬಿಟ್ಟು ಹೊರಟುಹೋಗಿ ಸರ್ವದಾ ಅಲೆಯುತ್ತಿರುವುದರಿಂದ ಲೊಲೀಟ ತನ್ನವಳಾಗಿಯೇ ಇರುತ್ತಾಳೆಂಬ ಭ್ರಾಂತಿ. ಅಲ್ಲಿಂದ ಅವರು ಹೊರಟ ಕೆಲವೇ ದಿನಗಳಲ್ಲಿ ಯಾವುದೋ

ಒಂದು ಊರಿನಲ್ಲಿ ಲೊಲೀಟಳಿಗೆ ಜ್ವರ ಬಂದು ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಅಲ್ಲಿಂದವಳು ಮಾಯವಾಗಿಹೋಗುತ್ತಾಳೆ. ಅಲ್ಲಿ ನರ್ಸು 'ನಿಮ್ಮ ಸೋದರ ಬಂದು ನಿಮ್ಮ ಮಗಳನ್ನು ಕರೆದುಕೊಂಡು ಹೋದರು' ಎಂದು ಹೇಳುತ್ತಾಳೆ.

ಮುಂದೆರಡು ವರ್ಷಗಳ ಕಾಲ ಲೊಲೀಟಳನ್ನು ತನ್ನಿಂದ ಕದ್ದ 'ಸೋದರ'ನನ್ನು ಹುಡುಕುವುದರಲ್ಲಿ ಹಂಬರ್ಟ್ ಕಳೆಯುತ್ತಾನೆ. ಈ ಪ್ರಯಾಣ ಹೊರಟ ಗಳಿಗೆಯಿಂದ ತಮ್ಮನ್ನು ಯಾರೋ ಹಿಂಬಾಲಿಸುತ್ತಿದ್ದುದರ ಅರಿವು ಹಂಬರ್ಟ್‌ಗಿತ್ತು. ಅಷ್ಟೇ ಅಲ್ಲದೆ, ಆ ಹಿಂಬಾಲಿಕೆ ಲೊಲೀಟಳ ಸಹಾಯದಿಂದ ನಡೆಯುತ್ತಿದೆ ಎಂಬ ಸಂಶಯವೂ ಇತ್ತು. ಒಂದೆರಡು ಸಲ ಇನ್ನೇನು ತನ್ನ ಹಿಂದೆ ನೆರಳಿನಂತೆ ಬರುತ್ತಿರುವವನನ್ನು ಹಿಡಿದೆ ಎಂಬುವುದರಲ್ಲಿ ಲೊಲೀಟ ಹೇಗೋ ಮಾಡಿ ಅವನ ಪ್ರಯತ್ನವನ್ನು ವಿಫಲ ಮಾಡಿದ್ದಳು. ಹಂಬರ್ಟ್‌ನಿಗೆ ತನ್ನ ಕಳೆದುಹೋದ ಹುಡುಗಿಯನ್ನು ಹುಡುಕಲು ಬಹಿರಂಗವಾದ ಮಾರ್ಗಗಳು ಯಾವುದೂ ಇಲ್ಲ. ಪೊಲೀಸರಿಗೆ ದೂರು ಕೊಡಲು ಅವನು ಲೊಲೀಟಳಿಗೆ ನ್ಯಾಯಸಮ್ಮತವಾಗಿ ರಕ್ಷಕನಾಗಿರಲಿಲ್ಲ. ಆದ್ದರಿಂದ ಅವಳನ್ನು ಹುಡುಕಲು ಹೊರಟಾಗ ಹಂಬರ್ಟ್‌ಗಿದ್ದ ದಾರಿ ತನ್ನ ಅನುಮಾನ, ಗುಮಾನಿಗಳನ್ನು ಪ್ರಯೋಗಿಸುವುದು. ಎರಡು ವರ್ಷಗಳ ಕಾಲ ಸಂಯುಕ್ತ ಸಂಸ್ಥಾನಗಳನ್ನೆಲ್ಲಾ ಅಲೆದರೂ ಅವನಿಗೆ ಸಿಕ್ಕಿದ್ದು ಹೊಟೇಲ್ ದಾಖಲೆಗಳಲ್ಲಿ ಅವನನ್ನು ಅಣಗಿಸಲೆಂದೇ ಬರೆದಿದ್ದಂತೆ ಕಾಣುವ ಹಂಬರ್ಟ್‌ನ ಭಾಷೆ, ನುಡಿಕಟ್ಟು, ಸಾಹಿತ್ಯಕ ಅಭಿರುಚಿ, ಲೊಲೀಟಳೊಂದಿಗೆ ಲಲ್ಲೆಗರೆದಿದ್ದ ಪ್ರೀತಿಯ ಮಾತುಗಳು – ಇವನ್ನೆಲ್ಲಾ ಉಪಯೋಗಿಸಿ, ಸೃಷ್ಟಿಸಿದ್ದ ವಿಳಾಸಗಳು. ಅಂದರೆ ಹಂಬರ್ಟ್‌ನ ಮನಸ್ಸನ್ನೇ ಹೊಕ್ಕು ನೋಡಿ ಯಾರೋ ಪಿಶಾಚಿಯಾಗಿ ಅವನನ್ನು ಅಣಕಿಸಿದಂತಿತ್ತು.

ಬರಿಗೈಯಾದ ಹಂಬರ್ಟ್ ಎಂದಾದರೂ ತನ್ನನ್ನು ಹಾಳುಮಾಡಿದ ಆ ಮೋಸಗಾರನನ್ನು ಹಿಡಿದು ಸೇಡು ತೀರಿಸಿಕೊಳ್ಳಬೇಕೆನ್ನುವ ಆಸೆಯಲ್ಲಿ ಲೊಲೀಟಳನ್ನು ಕಳೆದುಕೊಂಡ ಸಂಕಟವನ್ನು ಮುಳುಗಿಸಿದ್ದ. ಅವಳು ಕಾಣೆಯಾದ ಮೂರು ವರ್ಷಗಳ ಮೇಲೆ ಅವನಿಗೊಂದು ಕಾಗದ ಬಂದಿತ್ತು; ಲೊಲೀಟ ಮದುವೆಯಾಗಿ, ತಾಯಿಯಾಗುವವಳಿದ್ದಳು. ಅವರಿಗೆ ಕೈಯಲ್ಲಿ ಕಾಸಿರಲಿಲ್ಲ. ಅವಳ ಗಂಡನಿಗೆ ದೂರದಲ್ಲೆಲ್ಲೋ ಕೆಲಸ ಸಿಗುವ ನಿರೀಕ್ಷಣೆಯಿತ್ತು. ಏನಾದರೂ ಸಹಾಯ ಮಾಡುವುದಕ್ಕೆ ಸಾಧ್ಯವಿತ್ತೇ ? ಎಂದು ಒಕ್ಕಣೆ.

ವರ್ಷಗಳ ಕಾಲ ಹಲುಬಿ, ಹಂಬಲಿಸಿ, ದ್ವೇಷದಿಂದ ಉರಿದಿದ್ದ ಹಂಬರ್ಟ್ ಅವಳಿದ್ದ ದೂರದ ಊರಿಗೆ ಪ್ರಯಾಣ ಬೆಳೆಸುತ್ತಾನೆ. ಅಲ್ಲಿ ತುಂಬಿದ ಬಸುರಿ, ಕಾರ್ಪಣ್ಯದಿಂದ ಬಡಕಲಾಗಿದ್ದ ಅವಳನ್ನು ನೋಡಿ ಅವನಿಗೆ ಕನಿಕರ ತುಂಬಿ ಹರಿಯುತ್ತದೆ. ಅವಳನ್ನು ತನ್ನಿಂದ ಬೇರೆ ಮಾಡಿದವನು ಅವಳ ಗಂಡನಲ್ಲವೆಂದು ತಿಳಿದುಬರುತ್ತದೆ. ತುಂಬಾ ಬಲವಂತದಿಂದ ಲೊಲೀಟಳಿಂದ ಹಂಬರ್ಟ್ ಅವಳನ್ನು ತನ್ನಿಂದ ಅಪಹರಿಸಿದವನ

ಹೆಸರನ್ನು ಹೊರಡಿಸುತ್ತಾನೆ. ಲೊಲೀಟ ತನ್ನ ಜನ್ಮದಲ್ಲೆಲ್ಲಾ ತನಗೆ ನಿಜವಾದ ಪ್ರೇಮವಿದ್ದಿದ್ದು ಅವನೊಂದಿಗೆ ಮಾತ್ರ ಎಂದು ಹೇಳುತ್ತಾಳೆ. 'ನಿನ್ನ ಗಂಡ ?', 'ಓ ಅವನು, ಒಳ್ಳೆಯವನು', 'ನನ್ನದೇನು ಲೆಕ್ಕವಿಲ್ಲ ಅಲ್ಲವೇ ?' ಒಂದು ಗಳಿಗೆ ಅವಳ ಕಣ್ಣುಗಳಲ್ಲಿ ಆ ಗತಪ್ರೇಮ ಪ್ರಕರಣ ಪ್ರತಿಬಿಂಬಿಸಿ ಮರುಗಳಿಗೆಯೇ ಯಾವುದೋ ಮಳೆ ಹಿಡಿದ ದಿನದ ಸಂತೋಷಕೂಟದ ನೆನಪಿನಂತೆ, ಬಾಲ್ಯದ ನೆನಪುಗಳಿಗೆ ಮೆತ್ತಿಕೊಂಡು ಒಣಗಿದ ಮಣ್ಣಿನಂತೆ, ಅದನ್ನು ಅವಳು ತೊಡೆದುಹಾಕಿದಳು. ಲೊಲೀಟಳಿಗೆ ಅವಳ ತಾಯಿಯ ಮನೆ ಮಾರಿದ್ದರ, ಕಾರಿನ ಹಣ ಕೊಟ್ಟು ಹಂಬರ್ಟ್ ಅಲ್ಲಿಂದ ನಡೆದಿದ್ದ.

ಮುಂದಿನ ದಿನಗಳು ಅವನಿಗೆ ತನ್ನ ಸೇಡಿನ ನಿರೀಕ್ಷೆಯಲ್ಲಿ ಸಿಹಿಯಾಗಿರುತ್ತವೆ. ಲೊಲೀಟಳನ್ನು ಅಪಹರಿಸಿದ್ದವನು ಅವಳ ಬಾಲ್ಯದಲ್ಲಿ ಪರಿಚಿತನಾಗಿದ್ದ ಕ್ವಿಲ್ಟಿ ಎಂಬ, ಬರವಣಿಗೆಯಿಂದ ಸಂಪಾದನೆ ಮಾಡುತ್ತಿದ್ದ ನಾಟಕಕಾರ. ಅವನಿಗೂ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳ ಮೇಲೆ ಕಣ್ಣಿತ್ತು. ನಾಟಕದ ಕಾರಣ ಲೊಲೀಟಳ ಶಾಲೆಗೆ ಬಂದವನು ಹಂಬರ್ಟ್‌ನಿಗೆ ಪಂಗನಾಮ ಹಾಕುವುದು ತಮಾಷೆಯಾಗಿರುತ್ತದೆ ಎಂದು ಆ ಆಟ ಆಡಿದ್ದ. ಹಂಬರ್ಟ್ ಅವನನ್ನು ಹುಡುಕಿ ಹಿಡಿದು ಗುಂಡಿಕ್ಕಿ ಕೊಲ್ಲುತ್ತಾನೆ. ಅದಾದ ಮೇಲೆ ತಾನಾಗೇ ಪೊಲೀಸರ ಕೈಗೆ ಸಿಕ್ಕಿ ಬೀಳುತ್ತಾನೆ. ಜೈಲಿನಲ್ಲಿರುವಾಗ ಶಿಕ್ಷೆಯಾಗುವ ಮೊದಲು ಅವನು ಬರೆದ ನೆನಪುಗಳೇ ಕಾದಂಬರಿ.

ಲೊಲೀಟ ಮಾಯವಾದ ಕೆಲವೇ ದಿನಗಳಲ್ಲಿ ಹಂಬರ್ಟ್ ಯಾವುದೋ ಬೆಟ್ಟದ ರಸ್ತೆಯಲ್ಲಿ ಸಾಗುತ್ತಾ, ಮಧ್ಯೆ ಒಂದು ಕಡೆ ನಿಂತು ಸುಧಾರಿಸಿಕೊಳ್ಳುತ್ತಾನೆ. ಆಗ ಅವನಿಗೆ ಬೆಟ್ಟದ ತಪ್ಪಲಿನಲ್ಲಿದ್ದ ಸಣ್ಣ ಊರೊಂದು ಆಟಿಕೆಯಂತೆ ಚಿಕ್ಕದಾಗಿ, ದೂರದಿಂದ ಕಾಣಿಸುತ್ತದೆ. ಜೊತೆಗೆ ಗಾಳಿಯಲ್ಲಿ ತೇಲಿಕೊಂಡು ಬಂದ ಮಕ್ಕಳು ಆಟದಲ್ಲಿರುವ ಗಲಾಟೆಯ ಶಬ್ದಗಳು. ಲೊಲೀಟಳನ್ನು ಇನ್ನಿಲ್ಲದಂತೆ ಕಳೆದುಕೊಂಡ ತನ್ನ ಸಂಕಟವನ್ನು ತಡೆಯಲಾರದ ಸ್ಥಿತಿಯಲ್ಲಿದ್ದ ಹಂಬರ್ಟನಿಗೆ ಆ ಗಳಿಗೆಯಲ್ಲಿ ಅನಿಸುತ್ತದೆ — ಸಂಕಟದ ವಿಷಯ ತನ್ನೊಡನೆ ಲೊಲೀಟ ಇಲ್ಲದೇ ಇರುವುದಲ್ಲ ; ಅಲ್ಲಿ, ದೂರದಲ್ಲಿ ಆಟವಾಡುತ್ತಿರುವ ಮಕ್ಕಳ ಧ್ವನಿಗಳ ಮಧ್ಯೆ ಅವಳ ಧ್ವನಿಯಿಲ್ಲದ್ದು ಎಂದು.

ಹಂಬರ್ಟ್‌ನ ಮನಸ್ಸಿನಲ್ಲಿ ಈಗ ಪಾಪಪ್ರಜ್ಞೆ ಬಲವಾಗಿದೆ. ಅವನು ಪಾಪವೆನ್ನುವುದು ಒಂದು ಮಗುವಿನ ಬಾಲ್ಯವನ್ನು ತಾನು ಇಲ್ಲವಾಗಿಸಿದ್ದು. ಬೇರೆ ಮಕ್ಕಳಂತೆ ಆಡಿ ನಲಿದಾಡುವ ವಯಸ್ಸಿನಲ್ಲಿ ತನ್ನ ಕಾಮುಕತೆಯ ಸೆರೆಯಲ್ಲಿಟ್ಟು ಲೊಲೀಟಳ ಬಾಲ್ಯವನ್ನು ತಾನು ಹಾಳುಮಾಡಿದ್ದು ಅವನಿಗೆ ತನ್ನ ಮೇಲೇ ದ್ವೇಷ ಹುಟ್ಟಿಸುತ್ತದೆ. ಅವನ ಕಥನದುದ್ದಕ್ಕೂ ಮನುಷ್ಯತೆ, ಕನಿಕರಗಳೊಂದಿಗೆ ಅವನ ಲಾಲಸೆಯ ಜಂಜಾಟ ನಡೆದು ಲಾಲಸೆಯೇ ಯಾವಾಗಲೂ ಗೆಲ್ಲುವುದು ಕಾಣುತ್ತದೆ. ಹಂಬರ್ಟ್ ಹೇಳುವುದು – ಈ ಪ್ರಪಂಚದಲ್ಲಿ

ನಡೆಯುವ ಲೆಕ್ಕವಿಲ್ಲದ ಅಕೃತ್ಯಗಳಲ್ಲಿ ನನ್ನದೂ ಒಂದು ಎಂದು ನನಗೆ ಸಮಾಧಾನ ಹೇಳಬಹುದು ; ಇದರ ಮಧ್ಯೆ ಒಂದು ಹುಡುಗಿಯ ಬಾಲ್ಯ ನಾಶವಾಗಿದ್ದು ಲೆಕ್ಕವಿಲ್ಲದಿರಬಹುದು. ಹಾಗೆಂದರೆ ಜೀವನವೇ ಒಂದು ವಿಕಟವೆಂದರ್ಥ, ಎಂದು. ಅವನು ಈ ಮಾತುಗಳನ್ನಾಡುವಾಗ ದಾಸ್ತಯೆವ್‌ಸ್ಕಿಯ ಇವಾನ್ ಕರಮಾಜಾವ್ ಹೇಳಿದ್ದು ಜ್ಞಾಪಕ ಬರುತ್ತದೆ : 'ನಿಷ್ಪಾಪೀ ಹಸುಮಕ್ಕಳನ್ನು ಸಂಕಟಪಡಲು ಅವಕಾಶ ಕೊಟ್ಟಿರುವ ದೇವರ ಪ್ರಪಂಚಕ್ಕೆ ಧಿಕ್ಕಾರ '– ಎಂದು. ಸಮಾಜದ ಯಾವ ಕಟ್ಟಲೆಗಳನ್ನೂ ಗೌರವಿಸದ ಹಂಬರ್ಟ್, ಇವಾನ್‌ನನ್ನು ನೆನಪಿಗೆ ತರುತ್ತಾನೆ. ಅಲ್ಲದೆ ಪಾಪಪ್ರಜ್ಞೆ, ಕನಿಕರ, ಕಾಮ ಮೂರೂ ಒಟ್ಟಿಗೆ ಅವನಲ್ಲಿರುವುದು ಓದುಗರ ಕಣ್ಣಿನಲ್ಲಿ ಅವನು ಕೇವಲ ವಿಕೃತನಾಗಿರದೆ ಸಹಾನುಭೂತಿಗೂ ಪಾತ್ರನಾಗುತ್ತಾನೆ. ಕಾದಂಬರಿ ಓದಿ ಮುಗಿಸಿದಾಗ ನಮಗನಿಸುವುದು ಇದೊಂದು ಪ್ರೀತಿಯ ಕಥೆ ಎಂದು, ಕಾಮದ್ದಲ್ಲ.

3

'ಲೊಲೀಟ' ಒಂದು ಅಪರೂಪದ ಅಭಿಜಾತ ಕೃತಿ. ಅದು ಸುಲಭವಾಗಿ ಓದಿಸಿಕೊಳ್ಳುವುದಿಲ್ಲ. ಲೈಂಗಿಕ ಕ್ರಿಯೆಯ ವರ್ಣನೆಗಳು ಇಲ್ಲ. ಆ ವಿಷಯ ಬಂದಾಗೆಲ್ಲ ಹಂಬರ್ಟ್‌ನ ಕವಿಹೃದಯ, ಪ್ರಜ್ಞೆ ಅದನ್ನು ಕಾವ್ಯಮಯವಾಗಿ ಪರಿವರ್ತಿಸುತ್ತದೆ. ಕಥನಶೈಲಿಯೂ ಸಂಕೀರ್ಣವಾಗಿದ್ದು ಓದುಗನ ಗಮನವೆಲ್ಲವೂ ಪೂರ್ಣವಾಗಿ ತನ್ನಲ್ಲಿ ಕೇಂದ್ರೀಕೃತವಾಗಿರಬೇಕೆಂದು ಒತ್ತಾಯಪಡಿಸುತ್ತದೆ. ಅಷ್ಟೇ ಅಲ್ಲದೆ ಒಂದು ಸಲ ಓದಿ ಪಕ್ಕಕ್ಕಿಡುವ ಪುಸ್ತಕ ಇದಲ್ಲ, ಕಥನದುದ್ದಕ್ಕೂ ಯೂರೋಪಿನ ಸಾಹಿತ್ಯಗಳಿಂದ ಮಾಡುವ ನೂರಾರು ಉಲ್ಲೇಖ, ಉದ್ಧರಣೆ, ಸೂಚನೆಗಳು ತಿಳಿಯದಿದ್ದರೆ ಈ ಕಾದಂಬರಿ ಓದುಗರಿಗೆ ಕೊಡಬಲ್ಲ ವಿಶೇಷ ಅನುಭವ ಕುಂಠಿತವಾಗುತ್ತದೆ. ಹಂಬರ್ಟ್ ತನ್ನ ವಿಕಾರವನ್ನು ಇತಿಹಾಸ, ಸಾಹಿತ್ಯಗಳ ಚೌಕಟ್ಟಿನಲ್ಲಿಟ್ಟು ತನ್ನ ಪ್ರೀತಿ ವಿಕೃತವೂ ವಿಚಿತ್ರವೂ ಅಲ್ಲ, ಸಾಮಾನ್ಯ ವಯಸ್ಕರ ಸಾಮಾನ್ಯ ಲಾಲಸೆಗಳ ವಿಷಯ ತಾನು ಹೇಳುತ್ತಿಲ್ಲ, ತಾನೊಬ್ಬ ಕವಿ, ಕವಿ ಸಮೂಹದ ಕಣ್ಣಿನಿಂದ ತಾನು ಕಂಡ ವಿಶಿಷ್ಟ ದರ್ಶನವೊಂದನ್ನು, ಅಲೌಕಿಕವೆನ್ನಬಹುದಾದ ಕನ್ನಿಕೆಯರ ಸಮ್ಮೋಹನಶಕ್ತಿಯನ್ನು ವರ್ಣಿಸುವುದು ತನ್ನ ಪ್ರಯತ್ನ, ಎಂದು ಹೇಳಿಕೊಳ್ಳುತ್ತಾನೆ. ಕಾದಂಬರಿಯ ಅಂತಿಮ ವಾಕ್ಯಗಳಲ್ಲಿ ಹಂಬರ್ಟ್ ಹೇಳುತ್ತಾನೆ : 'ಬರೆಯುವ ತನ್ನ ಈ ಕೈಯಲ್ಲಿ ರಕ್ತಚಲನೆಯಾಗುತ್ತಿರುವಾಗ ನೀನಿನ್ನೂ ಈ ಭೌತಿಕ ಪ್ರಪಂಚದ ಒಂದು ಭಾಗವಾಗಿದ್ದೀ. ನಾನಿದನ್ನು ಬರೆಯುತ್ತಿರುವುದು ಮುಂದಿನ ತಲೆಮಾರುಗಳ ಕಲ್ಪನೆಯಲ್ಲಿ ನಿನ್ನ ಪ್ರತಿಮೆಯನ್ನು ಸ್ಥಿರವಾಗಿಸಲೆಂದು. ನನ್ನ ಮನಸ್ಸಿನಲ್ಲಿರುವ ಆಕಾಂಕ್ಷೆ ಕಲ್ಲಿನಲ್ಲಿ ಕಡೆದ ದೇವತೆಗಳಂತೆ, ಗುಹೆಗಳಲ್ಲಿ ಆದಿಮಾನವ ಕೆತ್ತಿದ ಪ್ರಾಣಸ್ವರೂಪಗಳಂತೆ, ಶತಮಾನಗಳು

ಕಳೆದರೂ ಮಾಸದ ಬಣ್ಣಗಳ ರಹಸ್ಯದಂತೆ, ಭವಿಷ್ಯವಾಣಿಯನ್ನೊಳಗೊಂಡ ಸುನೀತಗಳಂತೆ ನನ್ನ ಕಥೆಗೂ ಕಲೆಯ ಆಶ್ರಯ ಬೇಕು. ಇದೊಂದೇ ವಿಧವಾದ ಅಮರತ್ವ ನಿನಗೂ, ನನಗೂ ಒಟ್ಟಿಗೆ ಪ್ರಾಪ್ತವಾಗಬಹುದಾದದ್ದು, ನನ್ನ ಲೊಲೀಟ.'

'ಲೊಲೀಟ'ವನ್ನು ಪ್ರತಿಸಲ ಓದಿದಾಗಲೂ ಆಶ್ಚರ್ಯ ಸಂಭ್ರಮ ಸಂತೋಷದಾಯಕ ಸಂಗತಿಗಳು ಹೊರಬರುತ್ತದೆ. ಅಂದರೆ ಓದುಗರ ಸಾಹಿತ್ಯ ಕೃಷಿ ಬೆಳೆದಂತೆಲ್ಲ ಈ ಪುಸ್ತಕದಲ್ಲಿ ಕೈಗೆಟುಕುವ ಸಂತೋಷ ಹೆಚ್ಚುತ್ತದೆ. ಸಾಹಿತ್ಯ, ವಿಜ್ಞಾನಗಳೆರಡರಲ್ಲಿಯೂ ಉದ್ದಾಮ ಪಾಂಡಿತ್ಯವಿದ್ದು, ಈ ಕ್ಷೇತ್ರಗಳಲ್ಲಿ ಸತತವಾಗಿ ಸಂತೋಷ ಕಂಡಿದ್ದವರು ಮಾತ್ರ ಈ ಕಾದಂಬರಿ ಬರೆದಿರುವುದಕ್ಕೆ ಸಾಧ್ಯ. 'ಲೊಲೀಟ'ದಲ್ಲಿ ಬರೀ ಒಣ ಪಾಂಡಿತ್ಯ ಪ್ರದರ್ಶನವಿಲ್ಲ. ಪಾಂಡಿತ್ಯವನ್ನು ಹಗುರಾಗಿ ಹೊತ್ತು ಲೀಲಾಜಾಲವಾಗಿ ಬಳಸಿರುವ ಕೃತಿ ಇದು. ಲೀಲಾ ಮತ್ತು ಜಾಲ — ಇವೆರಡು ಪದಗಳು 'ಲೊಲೀಟ'ದ ಕಥನತಂತ್ರವನ್ನು ವರ್ಣಿಸುತ್ತವೆ. ಓದುಗನೊಂದಿಗೆ ಲೇಖಕ ಆಟವಾಡಿ ತನ್ನ ಕಥೆಯ ಜಾಲದಲ್ಲಿ ಅವನನ್ನು ಸಿಲುಕಿಸಿ, ಸಾಹಿತ್ಯದಲ್ಲಿ ತನ್ನ ಸಂಭ್ರಮ, ಸಂತೋಷಗಳನ್ನು ಅವನೂ ಹಂಚಿಕೊಳ್ಳುವಂತೆ ಮಾಡುವ ಅಪರೂಪದ, ಸೊಬಗಿನ, ಅಭಿಜಾತ ಕೃತಿ 'ಲೊಲೀಟ'.

ಜಾನ್‌ಸ್ಟೀನ್‌ಬೆಕ್ : 'ಗ್ರೇಪ್ಸ್ ಆಫ್ ರಾತ್'

ಎಚ್. ಎಸ್. ರಾಘವೇಂದ್ರ ರಾವ್

ಸಮಕಾಲೀನ ಕನ್ನಡ ಕಥಾಸಾಹಿತ್ಯದ ವಿಶಿಷ್ಟಸಂದರ್ಭದಲ್ಲಿ, ಜಾನ್ ಸ್ಟೀನ್‌ಬೆಕ್‌ನ ಬದುಕು, ಸಾಹಿತ್ಯ ಕೃತಿಗಳು ಮತ್ತು ಅವುಗಳಿಗೆ ದೊರೆತ ವಿಮರ್ಶೆಯ ಅಧ್ಯಯನವು ಬಹಳ ಉಪಯುಕ್ತವಾದುದು. ಮೊದಲನೆಯದಾಗಿ, ವಾಚಕವರ್ಗದಲ್ಲಿ ದೊರೆಯುವ ಜನಪ್ರಿಯತೆ ಮತ್ತು ವಿಮರ್ಶಕವೃಂದದ ಮನ್ನಣೆಗಳು ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಚಲಿಸುತ್ತಿರುವುದನ್ನು ನಾವು ಗಮನಿಸಬಹುದು. ಅತ್ಯುತ್ತಮ ಕೃತಿಗಳೆಂದು ಪರಿಗಣಿತವಾದುವು ಪುಸ್ತಕಭಂಡಾರಗಳಲ್ಲಿ ಅಸ್ಪೃಶ್ಯವಾಗಿ ಉಳಿಯುತ್ತವೆ. ವಿಮರ್ಶಕರು ಕಳಪೆಯೆಂದು ಕರೆಯುವ ಕೃತಿಗಳು ಹೇರಳವಾಗಿ ಓದಲ್ಪಡುತ್ತವೆ. ಸ್ಟೀನ್‌ಬೆಕ್, ಸತತವಾಗಿ ಇವೆರಡರ ನಡುವೆ ಸಮತೋಲನವನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಿ ಯಶಸ್ವಿಯಾದವನು. ಎರಡನೆಯದಾಗಿ, ಬರಹಗಾರನ ಸಾಮಾಜಿಕ ಹಿನ್ನೆಲೆ, ರಾಜಕೀಯ ಧೋರಣೆ ಮತ್ತು ಸಂವಹನವು ಸಾಧ್ಯವಾಗಲೆಂದು ಅವನು ಆವಿಷ್ಕರಿಸಿಕೊಳ್ಳುವ ತಂತ್ರಗಳು ಈಗ ಸಾಹಿತ್ಯ ಕೃತಿಯ ಮೌಲ್ಯನಿರ್ಣಯದ ಮಾನದಂಡಗಳಾಗುತ್ತವೆ. ಬಂಡವಾಳಶಾಹೀ ಸಮಾಜವು ಭದ್ರವಾಗಿ ಬೇರೂರುತ್ತಿದ್ದ ಕಾಲದ ಅಮೆರಿಕಾದ ಸಂಯುಕ್ತಸಂಸ್ಥಾನಗಳ ಸಾಹಿತ್ಯಕ ಪರಿಸರವು ಸ್ಟೀನ್‌ಬೆಕ್‌ನ ಕೃತಿಗಳನ್ನು ನಡೆಸಿಕೊಂಡ ರೀತಿಯ ಅರಿವು ನಮಗೆ ಉಪಯುಕ್ತವಾಗುತ್ತದೆ. ಮೂರನೆಯದಾಗಿ, ಸಾಮಾಜಿಕ ಮಹತ್ವವನ್ನು ಪಡೆದೂ ಕೂಡ, ಕೇವಲ ಪ್ರಚಾರಸಾಧನವಾಗಿ ಉಳಿಯದ ಕಲಾಕೃತಿಯಾಗುವ ಸಾಧ್ಯತೆಗೆ ಮಾದರಿಯಾಗಿ ಸ್ಟೀನ್‌ಬೆಕ್‌ನ ಕೆಲವು ಕಾದಂಬರಿಗಳನ್ನು ತೆಗೆದುಕೊಳ್ಳಬಹುದು.

ಜಾನ್ ಸ್ಟೀನ್‌ಬೆಕ್ (1902-1969) ಸಂಯುಕ್ತ-ಸಂಸ್ಥಾನಗಳ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಹುಟ್ಟಿದವನು. ಈ ಪ್ರದೇಶದ ಹಸಿರು ಕಣಿವೆಗಳು, ಕಂದು ಬೆಟ್ಟಗಳು ಮತ್ತು ಫಲಭರಿತ ತೋಟಗಳು ಅವನ ಬದುಕಿನ ಹಾಗೂ ಬರವಣಿಗೆಯ ಅವಿಭಾಜ್ಯ ಅಂಗಗಳಾದವು. ಜರ್ಮನ್, ಇಂಗ್ಲಿಷ್ ಮತ್ತು ಐರಿಷ್ ಮೂಲಗಳಿಂದ ಬಂದ ಅವನ ತಾಯಿತಂದೆಗಳು ಮಧ್ಯಮವರ್ಗಕ್ಕೆ ಸೇರಿದವರು. ಎಂದರೆ ಅವನು ಶ್ರಮಿಕವರ್ಗದ ಒಡಲಿನಿಂದಲೇ ಮೂಡಿ ಬಂದವನೇನೂ ಅಲ್ಲ. ಆಟಗಳು ಮತ್ತು ವಿಜ್ಞಾನದಲ್ಲಿ ಆಸಕ್ತವಾದ ಶಾಲಾಜೀವನದ ನಂತರ, ಒಂದು ವರ್ಷಕಾಲ ಬೀಟ್ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿ, 1920ರಲ್ಲಿ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯವನ್ನು ಸೇರಿದನು. ಗ್ರೀಕ್, ರೋಮನ್ ಮತ್ತು ಇಂಗ್ಲಿಷ್ ಸಾಹಿತ್ಯ, ಪ್ರಾಣಿಶಾಸ್ತ್ರಗಳಂತಹ ವಿಷಯಗಳು ಅವನನ್ನು ಆಕರ್ಷಿಸಿದವು. ಆದರೆ ಅವನ ಹಲವು ಆಸಕ್ತಿಗಳಲ್ಲಿ ವಿದ್ಯಾರ್ಜನೆ ಗೌಣವಾಗಿತ್ತು. 1925ರಲ್ಲಿ ಪದವಿಯಿಲ್ಲದೆ

ವಿಶ್ವವಿದ್ಯಾಲಯದಿಂದ ಹೊರಬಂದು, ಬರಹಗಾರನಾಗಿ ತನ್ನ ಭವಿಷ್ಯವನ್ನು ಅರಸುತ್ತಾ ನ್ಯೂಯಾರ್ಕ್ ನಗರಕ್ಕೆ ಬಂದ ಸ್ಟೀನ್‌ಬೆಕ್ ನಿರಾಶೆಯನ್ನು ಎದುರಿಸಬೇಕಾಯಿತು. ಅವನ ಮೊದಮೊದಲು ಕೃತಿಗಳಾದ Cup of Gold (1929), The Pastures of Heaven (1932), To A God Unknown ಮುಂತಾದವು ಹೆಚ್ಚಿನ ಗಮನವನ್ನು ಸೆಳೆಯಲಿಲ್ಲ. ಅವನ ಕಡುಬಡತನವನ್ನು ನೀಗಲಿಲ್ಲ. ಆದರೆ 1935ರಲ್ಲಿ ಹೊರಬಂದು ಚಲನಚಿತ್ರವಾದ Torilla Flat ನಾಟಕರೂಪದಲ್ಲಿ ಮತ್ತು ಕಾದಂಬರಿಯಾಗಿ ಅಪಾರ ಜನಪ್ರಿಯತೆ ಪಡೆದ Of Mice and Men (1937) ಅವನನ್ನು ಯಶಸ್ವೀ ಲೇಖಕನಾಗಿ ಸ್ಥಾಪಿಸಿದವು. Of Mice and Men ಪುಸ್ತಕದ ಒಂದೂವರೆ ಲಕ್ಷ ಪ್ರತಿ ಮಾರಾಟವಾದವು. ಆದರೆ ಈ ಕೀರ್ತಿ ಅವನ ತಲೆ ಕೆಡಿಸಲಿಲ್ಲ. 'I am scared to death of popularity. It has ruined every one I know.... I must have my anonymity... Unless I can stand in a crowd without self-consciousness and watch things... I am going to have hell of a hard time' ಎಂದದ್ದುಂಟು. ಅವನ ಅತ್ಯುತ್ತಮ ಕೃತಿ The Grapes of Wrath 1939ರಲ್ಲಿ ಪ್ರಕಟವಾಯಿತು. ಅದು ಅವನನ್ನು ಕೇವಲ ಕಲಾವಿದನಾಗಿ ಉಳಿಯಬಿಡದೆ ರಾಷ್ಟ್ರ ವ್ಯಾಪೀ ರಾಜಕಾರಣದ ಒಳಸುಳಿಗಳಲ್ಲಿ ಸಿಲುಕಿಸಿತು. ಹೊಗಳಲೆಂದೋ, ತೆಗಳಲೆಂದೋ ಅವನ ಕೃತಿಗಳನ್ನು ಓದುವುದು, ಚರ್ಚಿಸುವುದು ಅನಿವಾರ್ಯವಾಯಿತು. ಅದರ ನಂತರ ಶಾಂತವಾದ ಜೀವನ ನಡೆಸುವುದು ಅವನಿಗೆ ಅಸಾಧ್ಯವಾಯಿತು. ಅವನು ವಿಶ್ವಪ್ರವಾಸಿ ಯಾಗಿ ನ್ಯೂಯಾರ್ಕ್, ಲಂಡನ್, ಪ್ಯಾರಿಸ್, ರಷ್ಯಾ, ಮೆಕ್ಸಿಕೋ, ಇಟಲಿ, ಮುಂತಾದ ದೇಶಗಳಲ್ಲಿ ಯುದ್ಧ ವರದಿಗಾರನಾಗಿ ತಿರುಗಬೇಕಾಯಿತು. 'ಸಾಟರ್‌ಡೇ ರೆವ್ಯೂ', 'ಪಂಚ್', 'ಹಾಲಿಡೇ' ಮುಂತಾದ ಪತ್ರಿಕೆಗಳಲ್ಲಿ ಅವನ ವರದಿಗಳು, ಲೇಖನಗಳು ಪ್ರಕಟವಾದವು. ಅವನ ಹಲವು ಕಾದಂಬರಿಗಳ ಚಲನಚಿತ್ರ ನಿರ್ಮಾಣಕಾರ್ಯದಲ್ಲಿ ನಿರತನಾಗಿ ಹಾಲಿವುಡ್‌ನಲ್ಲಿ ಎಷ್ಟೋ ಕಾಲ ಕಳೆಯಿತು. ಅವನ ಮದುವೆಗಳು, ವ್ಯಾಪಾರೋದ್ಯಮಗಳು, ಟೆಲಿವಿಷನ್ ಪ್ರಸಿದ್ಧಿಗಳು ಮುಂತಾದವನ್ನು ವಿವರಿಸಲು ಇಲ್ಲಿ ಸಾಧ್ಯವಿಲ್ಲ.

ಇವೆಲ್ಲದರ ಪರಿಣಾಮವಾಗಿ ತನಗೆ ಪರಿಚಿತವಾದ ಜನಸಾಮಾನ್ಯರ ಬದುಕಿನೊಂದಿಗೆ ಅವನ ಸಂಪರ್ಕಗಳು ಕಡಿಮೆಯಾದರೂ ಅವನ ಜನಪರವಾದ ಧೋರಣೆಗಳು ಮತ್ತು ನಾಚುಗುಳಿ ಸ್ವಭಾವ ಹಾಗೆಯೇ ಉಳಿದವು. 1941ರಲ್ಲಿ ಅವನ Sea of Cortez ಎಂಬ ಪುಸ್ತಕ ಪ್ರಕಟವಾಯಿತು. ಎಡ್ವರ್ಡ್ ಎಫ್. ರಿಕೆಟ್ಸ್ ಎಂಬ ಸಾಗರಜೀವಶಾಸ್ತ್ರಜ್ಞನು ಇದರ ಸಹಲೇಖಕ. ಬಹುದಿನಗಳ ಗೆಳೆಯರಾದ ಇವರಿಬ್ಬರು, ಮೀನು ಹಿಡಿಯುವ ದೋಣಿಯೊಂದರಲ್ಲಿ ಕಳೆದ ಆರು ವಾರಗಳ ವೀಕ್ಷಣಾಪ್ರವಾಸದ ವರದಿ ಈ ಗ್ರಂಥದ ವಸ್ತು. ಕ್ಯಾಲಿಫೋರ್ನಿಯಾದ ಅಪ್ರಸಿದ್ಧ ಕೊಲ್ಲಿಯೊಂದರಲ್ಲಿನ ಸಾಗರಜೀವಿಗಳ ಬದುಕಿನ ವೈಜ್ಞಾನಿಕ ವಿಶ್ಲೇಷಣೆ ಈ ಪ್ರವಾಸದ ಗುರಿಯಾಗಿತ್ತು. ಈ ಪುಸ್ತಕದ ಎರಡನೆಯ ಭಾಗವನ್ನು

ಬರೆದವನು ಸ್ಟೀನ್‌ಬೆಕ್. ಇದು ಕೇವಲ ಕುತೂಹಲಕರವಾದ ಮನೋರಂಜಕವಾದ ಪ್ರವಾಸದ ವರದಿ ಮಾತ್ರವಾಗದೆ ಜೀವನ, ಸಾಹಿತ್ಯ, ಹಾಗೂ ಮನುಷ್ಯನನ್ನು ಕುರಿತಾದ ಅವನ ತಾತ್ವಿಕ ಧೋರಣೆಗಳ ಸಾರಸಂಗ್ರಹವೂ ಆಗಿದೆ. ಅವನ ಕೃತಿರಚನೆಯ ಮೇಲೆ ಈ ಧೋರಣೆಗಳ ಪ್ರಭಾವ ಎಷ್ಟೆಂದು ಹೇಳುವುದು ಕಷ್ಟವಾದರೂ, ಅವುಗಳಲ್ಲಿ ಅವನು ಸಾಕಷ್ಟು ತೀವ್ರವಾದ ಆಸಕ್ತಿಯನ್ನು ತಳೆದಿದ್ದನೆನ್ನುವುದು ಸ್ಪಷ್ಟ. ಅಲ್ಲಿ ಅವನು 'ನಾನ್ ಟೆಲಿಯೋಲಾಜಿಕಲ್ ಥಿಂಕಿಂಗ್' (non-teleological thinking) ಅಥವಾ 'is thinking' ಎಂಬ ತತ್ವವನ್ನು ಪ್ರತಿಪಾದಿಸುತ್ತಾನೆ. ಒಂದು ಘಟನೆಯ ಕಾರ್ಯ-ಕಾರಣ-ಪರಿಣಾಮಗಳನ್ನು ಕುರಿತು ಚಿಂತಿಸುವುದಕ್ಕಿಂತ ಅದರ ವಿವರಗಳ ಮೇಲೆ ಗಮನ ಹರಿಸುವುದು ಹೆಚ್ಚು ಸೂಕ್ತವೆಂದು ಅವನ ಅಭಿಮತ. ಅದನ್ನು ಅವನ ಮಾತುಗಳಲ್ಲೇ ಹೀಗೆ ಸಂಗ್ರಹಿಸಬಹುದು : 'Through inspection of thinking technique a kind of purity of approach may be consciously achieved... Non-teleological or "is" thinking might be substituted in part for the usual cause-effect methods. This pure kind of thinking would concern itself primarily with what should be or could be or might be but rather with what actually "is"... The opposite way of teleological thinking is most frequently associated with the evaluating of causes and effects, the purposiveness of events. This kind of thinking considers and cures, ... It presumes the bettering of conditions, often, unfortunately, without achieving more than a most superficial understanding of those conditions.'

ಆದರೆ ಈ ಬಗೆಯ ವಾಸ್ತವತೆಯ ನಿರೂಪಣೆಗೆ ಬದ್ಧವಾದ, ನಿರ್ಲಿಪ್ತವಾದ, ಸುಧಾರಣೆಯ ಕನಸು ಕಾಣದ ಮನೋಧರ್ಮವನ್ನು ಸ್ಟೀನ್‌ಬೆಕ್‌ನ ಕೃತಿಗಳಲ್ಲಿ ಕಾಣಬಹುದೇ ಎನ್ನುವುದು ತೊಡರಿನ ಪ್ರಶ್ನೆ. ಅವನ ಸಮಗ್ರ ಕೃತಿಗಳನ್ನು ಪರಿಶೀಲಿಸಿದಾಗ ಸಂಪೂರ್ಣ ನಿರ್ಲಿಪ್ತತೆ ಮತ್ತು ಪಾತ್ರಗಳೊಂದಿಗಿನ ಅತಿಯಾದ ಏಕೀಭವನಗಳ (Identification) ನಡುವಿನ ತಾಕಲಾಟವನ್ನು ಗುರುತಿಸಬಹುದು. ಸಾಗರಜೀವಿಗಳ ಅಧ್ಯಯನದಿಂದ ಮನುಷ್ಯರ ಸ್ವಭಾವದ ಕೆಲವು ಮೂಲ ಲಕ್ಷಣಗಳನ್ನು ಗುರುತಿಸಲು ಕೂಡ ಅವನಿಗೆ ಸಾಧ್ಯವಾಯಿತೆನ್ನಲಾಗಿದೆ. 'First there was striking evidence of the life force at work, the primal urges of survival and procreation. To watch the unending struggle of marine creatures to survive.... Tide pools show not only the fascinating spectacle of individual survival, they offer unusual examples of corporate and unified life.' ಹೀಗೆ ಸ್ಪರ್ಧೆ ಮತ್ತು ಸಂಘಜೀವನಗಳ ನಡುವಿನ ದ್ವಂದ್ವವನ್ನು ಕೂಡ ಸ್ಟೀನ್‌ಬೆಕ್ ಸಾಗರಜೀವಿಗಳಲ್ಲಿ ಗುರುತಿಸಿದನು. ಇವೆಲ್ಲವೂ ಬುದ್ಧಿಶಕ್ತಿಯ ನೆರವಿಲ್ಲದೆ, ಪ್ರವೃತ್ತಿಯ ನೆಲೆಯಲ್ಲಿ (Instinctive) ನಡೆಯುತ್ತಿದ್ದ ಕ್ರಿಯೆಗಳಾದ್ದರಿಂದ, ಈ ಸ್ವಭಾವವು ಮನುಷ್ಯನಿಗೆ ಸಹಜ ಹಾಗೂ ಅಂತರ್ಗತ

ವೆಂಬ ತೀರ್ಮಾನಕ್ಕೆ ಸ್ಟೀನ್‌ಬೆಕ್ ಬಂದಂತೆ ಕಾಣುತ್ತದೆ. ಏನೇ ಆಗಲಿ, ಈ ಕೆಲವು ಅಂಶಗಳ ತಿಳಿವಳಿಕೆಯು ಸ್ಟೀನ್‌ಬೆಕ್‌ನ ಕೃತಿಗಳನ್ನು ಸರಿಯಾಗಿ ತಿಳಿದುಕೊಳ್ಳಲು ನೆರವಾಗುತ್ತದೆ.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಮತ್ತು ನಂತರ ಸ್ಟೀನ್‌ಬೆಕ್ ತನ್ನ ಸರ್ಕಾರದ ಅಪೇಕ್ಷೆಯ ಮೇರೆಗೆ Bombs Away (1942) ಮತ್ತು The Moon is Down (1942) ಎಂಬ ಕಾದಂಬರಿಗಳನ್ನು ರಚಿಸಿದನು. ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಜನರಿಗೆ, ಯುದ್ಧದ ವಾಸ್ತವತೆಗಳ ಪರಿಚಯ ಮಾಡಿಕೊಡುವ ಉದ್ದೇಶದಿಂದ ಮೂಡಿಬಂದ ಈ ಕೃತಿಗಳ ಫ್ಯಾಸಿಸ್ಟ್ ವಿರೋಧಿ ಧೋರಣೆಯನ್ನು ಎಲ್ಲರೂ ಸ್ವಾಗತಿಸಿದರಾದರೂ, ಪಾತ್ರಚಿತ್ರಣವು ಕೃತಕವಾಯಿತೆಂಬ ಆಕ್ಷೇಪಣೆಯನ್ನು ಅನೇಕರು ಮಾಡಿದರು.

1945ರಿಂದ 1961ರವರೆಗಿನ ಅವಧಿಯಲ್ಲಿ ಸ್ಟೀನ್‌ಬೆಕ್ ಎಂಟು ಕಾದಂಬರಿಗಳನ್ನು ರಚಿಸಿದನು. ಇವುಗಳಲ್ಲಿ East of Eden (1952), Connary Row (1945), The Short Reign of Pippin IV (1957) ಮತ್ತು The Winter of Our Discontent (1961) ಮುಖ್ಯವಾದವು. ಇವುಗಳು ಅಪಾರ ಜನಪ್ರಿಯತೆಯನ್ನು ಸಂಪಾದಿಸಿದರೂ ವಿಮರ್ಶಕರ ಮನ್ನಣೆಯನ್ನು ಪಡೆಯುವುದರಲ್ಲಿ ವಿಫಲವಾದವು. ಜೀವನದೊಂದಿಗೆ ತನಗಿದ್ದ ನಿಕಟಸಂಪರ್ಕವನ್ನು ಕಳೆದುಕೊಂಡಿದ್ದು ಮತ್ತು ಬದಲಾಗುತ್ತಿರುವ ಅನುಭವಗಳಿಗೆ ಅನುಗುಣವಾದ ಹೊಸ ಕಥನತಂತ್ರಗಳನ್ನು ರೂಪಿಸಿಕೊಳ್ಳದೆ ಹೋಗಿದ್ದು ಈ ವಿಫಲತೆಗೆ ಕಾರಣವೆನ್ನಲಾಯಿತು. ಅವನು ಈ ಸತ್ಯವನ್ನು ಕಂಡುಕೊಂಡನು. ಜನಸಂಪರ್ಕವನ್ನು ಮರಳಿ ಪಡೆಯಲೋ ಎಂಬಂತೆ, ತನ್ನ ನಾಯಿ ಚಾರ್ಲಿಯೊಂದಿಗೆ ಒಬ್ಬಂಟಿಯಾಗಿ ದೇಶವೆಲ್ಲಾ ತಿರುಗಿದನು. 'Can it be true, that a man who has no one to say anything to has no words as he has no need for words ?' ಎಂದು ಪ್ರಶ್ನಿಸಿಕೊಂಡನು. ಈ ರೀತಿಯ ಅಂತರ್ಮುಖಿ ಚಿಂತನೆಯ ಕಾಲದಲ್ಲಿ ಮೂಡಿಬಂದ The Winter of Our Discontent ತನ್ನ ಕಾಲದ ಸಮಸ್ಯೆಗಳನ್ನು ಬಹಳ ಯಶಸ್ವಿಯಾಗಿ ಚಿತ್ರಿಸಿತು.

1950ರ ಮತ್ತು 1960ರ ದಶಕಗಳಲ್ಲಿ ಸ್ಟೀನ್‌ಬೆಕ್ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದನು. ಡೆಮೊಕ್ರಾಟಿಕ್ ಪಕ್ಷದ, ಅದರಲ್ಲೂ ಅಡ್ಲಾಯ್ ಸ್ಟೀವನ್‌ಸನ್‌ನ, ಪ್ರಮುಖ ಅನುಯಾಯಿಗಳಲ್ಲಿ ಒಬ್ಬನಾಗಿ ಅವನಿಗೆಂದು ಭಾಷಣಗಳನ್ನು ಬರೆದುಕೊಟ್ಟನು. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಅಮೆರಿಕಾದ ಪ್ರತಿನಿಧಿಯಾಗಿ ಮಾತನಾಡುವುದು ಹೆಚ್ಚಾದಂತೆಲ್ಲಾ, ಕಮ್ಯೂನಿಸ್ಟ್ ಸರ್ಕಾರಗಳು ಅವನನ್ನು ಯುದ್ಧಪ್ರಿಯನೆಂದು ನಿಂದಿಸುವುದು ಹೆಚ್ಚಾಯಿತು. ಕೊರಿಯಾ ಮುಂತಾದ ಯುದ್ಧಕ್ಷೇತ್ರ ಗಳಲ್ಲಿ ಅವನು ಅಮೆರಿಕಾದ ನಿಲುವನ್ನು ಸಮರ್ಥಿಸಿದನು. ಹೀಗೆ, 1969ರಲ್ಲಿ ನಿಧನನಾಗುವವರೆಗೆ ಸ್ಟೀನ್‌ಬೆಕ್ ತನ್ನ ದೇಶದ ತನ್ನ ಕಾಲದ ಪ್ರಮುಖ ಮತ್ತು ವಿವಾದಾಸ್ಪದ ವ್ಯಕ್ತಿಗಳಲ್ಲಿ ಒಬ್ಬನಾಗಿ ಜೀವಿಸಿದನು.

ತನ್ನ ಜೀವಮಾನದ ಅವಧಿಯಲ್ಲಿಯೇ ಸ್ಟೀನ್‌ಬೆಕ್ ಸಾಹಿತ್ಯಕೃಷಿಗಾಗಿ ಅನೇಕ ಗೌರವಗಳನ್ನು ಸಂಪಾದಿಸಿದನು. 'ಗ್ರೇಪ್ಸ್ ಆಫ್ ರಾತ್' ಕಾದಂಬರಿಗಾಗಿ ಪುಲಿಟ್ಜರ್ ಸಾಹಿತ್ಯ ಪ್ರಶಸ್ತಿ (1941), ಅಮೆರಿಕನ್ ಸಾಹಿತ್ಯ ಮತ್ತು ಕಲಾ ಅಕಾಡೆಮಿಯ ಸದಸ್ಯನಾಗಿ ಆಯ್ಕೆ (1948), ನಾರ್ವೆ ದೇಶದ ದೊರೆ ಕೊಟ್ಟ ಲಿಬರ್ಟಿ ಕ್ರಾಸ್ (1946), ಮತ್ತು ನೊಬೆಲ್ ಪಾರಿತೋಷಕ (1962) ಅವುಗಳಲ್ಲಿ ಮುಖ್ಯವಾದವು.

2

'ಗ್ರೇಪ್ಸ್ ಆಫ್ ರಾತ್' ಕಾದಂಬರಿಯನ್ನು ಜಾನಪದ ಮಹಾಕಾವ್ಯವೆಂದು ವಿಮರ್ಶಕರು ಕರೆದಿದ್ದಾರೆ. ಕಾರಣ, ಇದರ ಘಟನಾವಳಿಯು ವಾಸ್ತವದಲ್ಲಿ ಭದ್ರವಾದ ಬೇರುಗಳನ್ನು ಹೊಂದಿರುವುದು.

1930ರ ದಶಕದಲ್ಲಿ ಅಮೆರಿಕದ ಸಂಯುಕ್ತಸಂಸ್ಥಾನಗಳು ಅತ್ಯಂತ ತೀವ್ರವಾದ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು. ಅದನ್ನು 'The Great Depression' ('ಮಹಾನ್ ಕುಸಿತ') ಎಂದು ಕರೆಯಲಾಗುತ್ತದೆ. ಉತ್ಪಾದನೆಯ ಕುಸಿತ, ಉದ್ಯೋಗಾವಕಾಶಗಳ ಇಳುವರಿ ಮತ್ತು ತತ್ಪರಿಣಾಮವಾದ ನಿರುದ್ಯೋಗ ಈ ಕುಸಿತದ ಪರಿಣಾಮಗಳು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಂತರ ಕಟ್ಟಿದ ಕನಸುಗಳು ನುಚ್ಚುನೂರಾದ ಕಾಲ ಇದು. ದೇಶದ ಜನರ ಆತ್ಮವಿಶ್ವಾಸ ರಸಾತಳವನ್ನು ತಲುಪಿತು. ಇದರ ಜೊತೆಗೆ ಓಕ್ಲಹಾಮ, ನ್ಯೂ ಮೆಕ್ಸಿಕೋ, ಅರಿಜೋನಾ ಮುಂತಾದ ಬಯಲುಸೀಮೆಯ ರಾಜ್ಯಗಳು ಬರಗಾಲಕ್ಕೆ ಆಹುತಿಯಾದವು. ಅದೂ ಅಲ್ಲದೆ ಸಾವಿರಾರು ಎಕರೆ ಭೂಮಿಯನ್ನು ಬ್ಯಾಂಕುಗಳ ಮೂಲಕ ಕೊಂಡು, ದೊಡ್ಡ ಹಿಡುವಳಿಗಳಾಗಿ ಪರಿವರ್ತಿಸಿ, ಯಾಂತ್ರೀಕೃತ ಬೇಸಾಯ ನಡೆಸುವ ಪ್ರಕ್ರಿಯೆಯೂ ಆಗಲೇ ನಡೆಯಿತು. ಇಂತಹ ಭಾರೀ ಕೃಷಿಕ್ಷೇತ್ರಗಳು ಚಿಕ್ಕಪುಟ್ಟ ರೈತರನ್ನು ನಾಶ ಮಾಡಿದವು. ಅವರು ತಮ್ಮ ಭೂಮಿಕಾಣಿಗಳನ್ನು ಮಾರಿಕೊಂಡು, ನೆಲದೊಂದಿಗಿನ ಹೊಕ್ಕಳು ಬಳ್ಳಿಯನ್ನು ಕತ್ತರಿಸಿಕೊಂಡು ನಿರ್ವಾಸಿತರಾಗಿ ನಗರಗಳ ಕಡೆಗೆ ಉದ್ಯೋಗದ ಶೋಧನೆಯಲ್ಲಿ ವಲಸೆಬಂದರು. ಇವರಲ್ಲಿ ಅನೇಕರು ಪಶ್ಚಿಮದ ಕ್ಯಾಲಿಫೋರ್ನಿಯಾ ರಾಜ್ಯವು ನಂದನವನವೆಂಬ ಕನಸು ಕಂಡರು. ಅಲ್ಲಿ ಉದ್ಯೋಗ, ಸುಖಜೀವನ ಹಾಗೂ ಆತ್ಮಗೌರವಗಳನ್ನು ಮರಳಿ ಸಂಪಾದಿಸುವ ಗುರಿಯೊಂದಿಗೆ ಆ ಕಡೆಗೆ ಒಂದು ಮಹಾನ್ ಚಲನೆ ಪ್ರಾರಂಭವಾಯಿತು. ಆದರೆ ಅಲ್ಲಿ ಅವರನ್ನು ಸ್ವಾಗತಿಸಿದ್ದು ನಿರಾಶೆ ಮತ್ತು ಕ್ರೌರ್ಯಗಳು. ಏಕೆಂದರೆ ಲಾಭ ಗಳಿಕೆ ಮತ್ತು ಶೋಷಣೆಗಳ ಆಧಾರದ ಮೇಲೆ ರೂಪಿತವಾದ ಆರ್ಥಿಕವ್ಯವಸ್ಥೆಯು ಆಗಲೇ ಅಲ್ಲಿ ಮನೆ ಮಾಡಿತ್ತು.

ಇಂತಹ ದಾರುಣ ಅನುಭವದಲ್ಲಿ ನೇರವಾಗಿ ಭಾಗವಹಿಸುವ ಅವಕಾಶವನ್ನು ಹುಡುಕಿಕೊಂಡು ಹೊರಟವನು ಸ್ಟೀನ್‌ಬೆಕ್. ಅವನು 1937ರಲ್ಲಿ ಓಕ್ಲಹಾಮಕ್ಕೆ ಹೋದನು. ಅಲ್ಲಿಂದ ಕ್ಯಾಲಿಫೋರ್ನಿಯಾಗೆ ಹೋಗುತ್ತಿದ್ದ ವಲಸೆಗಾರ ಕಾರ್ಮಿಕರ ತಂಡವೊಂದರ ಸದಸ್ಯನಾಗಿ ಸೇರಿಕೊಂಡನು. ಅವರ ಪ್ರಯಾಣದಲ್ಲಿ ಪಾಲುಗೊಂಡು, ಅವರ ಬಿಡಾರಗಳಲ್ಲಿ ವಾಸಮಾಡಿ, ಅವರ ನೋವನ್ನು ಹಂಚಿಕೊಂಡನು. ಕ್ಯಾಲಿಫೋರ್ನಿಯಾದ ಹಣ್ಣಿನ ತೋಟಗಳಲ್ಲಿ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಳ್ಳುತ್ತಿದ್ದುದನ್ನು ಕಣ್ಣಾರೆ ಕಂಡನು. 'ಗ್ರೇಪ್ಸ್ ಆಫ್ ರಾತ್' ಕಾದಂಬರಿಯ ತುಂಬ ವಾಸ್ತವದ ಅತ್ಯಂತ ಸಮರ್ಥವಾದ ಚಿತ್ರಣ ದೊರೆಯಲು ಈ ಸ್ವಾನುಭವವೇ ಮೂಲಕಾರಣ.

ಮೂರು ಪೀಳಿಗೆಗಳನ್ನು ತನ್ನೊಳಗೆ ಹೊಂದಿರುವ ರೈತ-ಕಾರ್ಮಿಕ ಕುಟುಂಬ ವೊಂದು ಪಡೆಯುವ ಅನುಭವಗಳನ್ನು ಇಡೀ ದೇಶದ ದುರಂತದ ಹಿನ್ನೆಲೆಯಲ್ಲಿ ನಿರೂಪಿಸುವುದು ಈ ಕಾದಂಬರಿಯ ಉದ್ದೇಶ. ವ್ಯಕ್ತಿಗಳ ನೋವು-ನಲಿವುಗಳು ಕೇವಲ ಅವರಿಗೆ ಸೀಮಿತವಾಗಿ ಉಳಿಯದೆ ಸಾರ್ವತ್ರಿಕವಾದ ಆಯಾಮಗಳನ್ನು ಪಡೆಯುವುದು ಇಲ್ಲಿ ಸಾಧ್ಯವಾಗುತ್ತದೆ.

'Throughout the novel runs a persistent generalising and universalising force, so that the personal saga of the Joads takes on social, political and even religious implications of the broadest sort, inviting and to a degree justifying the use of the term "Epic". (ಎಫ್. ಡಬ್ಲ್ಯೂ. ವ್ಯಾಟ್)

ಆತ್ಮರಕ್ಷಣೆಗಾಗಿ ಕೊಲೆಯೊಂದನ್ನು ಮಾಡಿ, ಏಳು ವರ್ಷಗಳ ಜೈಲು ಶಿಕ್ಷೆ ಪಡೆದ ಟಾಮ್, ಒಳ್ಳೆಯ ನಡತೆಗಾಗಿ ಅಲ್ಲಿಂದ ಪೆರೋಲ್ ಪಡೆದು ಊರಿಗೆ ಹಿಂದಿರುಗುವುದು ಕಾದಂಬರಿಯ ಪ್ರಾರಂಭಬಿಂದು. ಅದೇ ಟಾಮ್, ತೀವ್ರವಾದ ಭಾವನೆಗಳ ಹಿಡಿತಕ್ಕೆ ಸಿಕ್ಕಾಗ ಮತ್ತೊಂದು ಕೊಲೆ ಮಾಡಿ ಅದರ ಪರಿಣಾಮದಿಂದ ತಪ್ಪಿಸಿಕೊಳ್ಳಲು ಮರಳಿ ಹೊರಟುಹೋಗುವುದು ಕಾದಂಬರಿಯ ಕೊನೆಕೊನೆಯ ಘಟನೆ. ಇವೆರಡರ ನಡುವೆ ಕಾದಂಬರಿಯ ಹರಹಿದೆ.

ಟಾಮ್ ಜೋಡ್‌ನ ಕುಟುಂಬದಲ್ಲಿ ತಾತ-ಅಜ್ಜಿ, ಅಪ್ಪ-ಅಮ್ಮ, ಚಿಕ್ಕಪ್ಪ, ಅಣ್ಣ, ಟಾಮ್, ತಮ್ಮ ಆಲ್, ಪುಟ್ಟತಮ್ಮ-ತಂಗಿಯರಾದ ಎನ್‌ಫೀಲ್ಡ್ ಮತ್ತು ರುತಿ, ಹೀಗೆ ಮೂರು ಪೀಳಿಗೆಗಳಿಗೆ ಸೇರಿದ ಜನರಿದ್ದಾರೆ. ಇವರ ಜೊತೆಗೆ, ಮದುವೆಯಾದ ಸೋದರಿ ರೋಸ್ ಆಫ್‌ಶರಾನ್ ಮತ್ತು ಅವಳ ಗಂಡ ಕಾನಿ. ಅವಿಭಕ್ತ ಕುಟುಂಬದ ಈ ಸದಸ್ಯರೊಂದಿಗೆ ಸೇರಿಕೊಳ್ಳುವವನು ಮಾಜಿ ಪಾದ್ರಿ ಜಿಮ್ ಕೇಸಿ. ಟಾಮ್ ಹಿಂದಿರುಗಿದಾಗ

ಉಳಿದವರೆಲ್ಲರೂ ಆಸ್ತಿಪಾಸ್ತಿಗಳನ್ನು ಮಾರಿ, ಬಂದ ಹಣದಿಂದ ಹಳೆಯ ಕಾರೊಂದನ್ನು ಕೊಂಡುಕೊಂಡು, ಅದನ್ನು ಸರಕುಸಾಗಾಣಿಕೆಯ ಹಾಗೂ ಪ್ರಯಾಣದ ವಾಹನವಾಗಿ ಪರಿವರ್ತಿಸಿ ಪಶ್ಚಿಮಕ್ಕೆ ಹೊರಡಲು ಸಿದ್ಧರಾಗುತ್ತಿದ್ದಾರೆ. ಇದನ್ನು ನೋಡಿ ಟಾಮ್‌ಗೆ ದಿಗ್ಭ್ರಮೆಯಾದರೂ, ನಂತರ ಕುಟುಂಬದ ಉದ್ದೇಶದಲ್ಲಿ ಸಹಕರಿಸುತ್ತಾನೆ. ಅವರು ಹೆಜ್ಜೆಹೆಜ್ಜೆಗೂ ಮೋಸಹೋಗುವ, ದುಃಖಿಸುವ, ಕೊನೆಗೆ ಅಸಹಾಯಕರಾಗಿ ಸೋಲನ್ನು ಒಪ್ಪಿಕೊಳ್ಳುವ ವಿವರಗಳು ಹೃದಯವಿದ್ರಾವಕವಾಗಿ ಚಿತ್ರಿತವಾಗಿವೆ.

'You are not buying only junk, you are buying junked lives. And more-you'll see-you're buying bitterness. Buying a plough to plough your own children under, buying the arms and spirits that might have saved you..... You're buying years of work, toil in the sun ; you are buying a sorrow that cannot talk.'

ಈ ಭಾವನೆಗಳಿಗೆ ಕಾರಣವಾದ ವಿವರಗಳನ್ನು ಇಲ್ಲಿ ಕೊಡಲು ಸಾಧ್ಯವಿಲ್ಲ. ಅವರು ಹೊರಡುವುದಕ್ಕೆ ಮೊದಲು ಎರಡು ಹಂದಿಗಳನ್ನು ಕೊಂದು ಅವುಗಳ ಮಾಂಸವನ್ನು ದೊಡ್ಡ ಜಾಡಿಗಳಲ್ಲಿ ಸಂಗ್ರಹಿಸುತ್ತಾರೆ. ಪಾದ್ರಿಯೂ ತಮ್ಮೊಡನೆ ಬರಬೇಕೆಂಬ ಸಲಹೆಯನ್ನು ಮೊದಮೊದಲು ವಿರೋಧಿಸಿದ ಗಂಡಸರು ಕ್ರಮೇಣ, ಅಮ್ಮನ ವಾದಕ್ಕೆ ತಲೆಬಾಗುತ್ತಾರೆ. ಅಜ್ಜನಿಗೆ ತಾನು ಹುಟ್ಟಿ ಬೆಳೆದ, ತಾನೇ ಫಲವತ್ತಾಗಿ ಮಾಡಿದ ಭೂಮಿಯನ್ನು ಬಿಟ್ಟು ಹೋಗಲು ಸಾಧ್ಯವೂ ಇಲ್ಲ, ಇಷ್ಟವೂ ಇಲ್ಲ. ಎಂತಹ ಕಷ್ಟ ಬಂದರೂ 'ಈ ನೆಲ ನನ್ನದು. ನಾನು ಇದಕ್ಕೆ ಸೇರಿದವನು' ಎಂಬ ಮುದುಕನ ನಂಬಿಕೆ ಅಚಲವಾದುದು. ನಿದ್ದೆ ಬರುವ ಔಷಧ ಕೊಟ್ಟು ಅವನನ್ನು ಕರೆದುಕೊಂಡು ಹೋದರೂ ಕೂಡ ಅವನು ಮಾರ್ಗಮಧ್ಯ ಸಾಯುತ್ತಾನೆ. ಟಾಮ್ ಮತ್ತು ಅಮ್ಮನಿಗಾದರೋ, ಭವಿಷ್ಯವು ನಿಜವಾಗಿಯೂ ಸುಖಪ್ರದವಾಗುತ್ತದೆಯೇ ಎಂಬ ಸಂಶಯ. ಯುವದಂಪತಿಗಳಾದ ರೋಸ್ ಮತ್ತು ಕಾನಿಯರದು ತಮ್ಮ ಬರಲಿರುವ ಮಗುವಿಗಾಗಿ ಕಾಮನ ಬಿಲ್ಲಿನ ಕನಸು ಕಾಣುವ ಕಣ್ಣು; ಮನಸ್ಸು, ಇವೆಲ್ಲದರ ನಡುವೆ ಪ್ರತಿಯೊಂದು ವಿವರವನ್ನೂ ಕುತೂಹಲ, ವಿಸ್ಮಯ ಮತ್ತು ಸಂತೋಷದಿಂದ ನೋಡುವ, ನಿರೀಕ್ಷಿಸುವ ಹುಡುಗ-ಹುಡುಗಿಯರು. ಈ ಬಾಹ್ಯ ವ್ಯಾಪಾರಗಳೆಲ್ಲವನ್ನೂ ನಿರ್ಲಿಪ್ತನಾಗಿ ನೋಡುತ್ತಾ, ಅಂತರಂಗದಲ್ಲಿ ಮಹತ್ವದ ತೀರ್ಮಾನಗಳನ್ನು ತಲುಪುತ್ತಿರುವ ಮೌನಿ ಜಿಮ್ ಕೇಸಿ. ತನ್ನ ಪಾದ್ರಿ ಜೀವನದ ಹುಸಿತನ ಮತ್ತು ಕೃತಕತೆಗಳಿಂದ ಬೇಸರಗೊಂಡು ಭ್ರಮನಿರಸನ ಹೊಂದಿ, ಮಣ್ಣಿನ ಮಕ್ಕಳೊಂದಿಗೆ ಜೀವಂತ ಸಂಪರ್ಕವನ್ನು ಕಟ್ಟಿಕೊಳ್ಳಬಯಸಿರುವ ಈತ ನಿಸ್ಸಂದೇಹವಾಗಿ ಈ ಕಾದಂಬರಿಯ ವೈಚಾರಿಕ ನಿಲುವುಗಳ ಪ್ರತಿಪಾದಕ. ತನ್ನ ಸುತ್ತಲಿನ ಬದುಕಿನಲ್ಲಿ ನಿಗೂಢವಾಗಿರುವ ಪರಿವರ್ತನೆಯ ಒಲವುಗಳನ್ನು ಗ್ರಹಿಸುವ, ಅವುಗಳಿಗೆ ಮಾತಿನ ಮೂರ್ತರೂಪ ಕೊಡುವ ಸಾಮರ್ಥ್ಯ ಇರುವುದು ಇವನಿಗೆ ಮಾತ್ರ.

ತಮ್ಮ ಊರಿನಿಂದ ಹೊರಡುವುದೇ ತಡ, ಈ ಕುಟುಂಬದವರು ಸಾಮೂಹಿಕವಾದ ವಲಸೆಯೊಂದರ ಭಾಗವಾಗಿ ತಮ್ಮ ವಿಶಿಷ್ಟ ವ್ಯಕ್ತಿತ್ವಗಳನ್ನು ಕಳೆದುಕೊಂಡು ಬಿಡುತ್ತಾರೆ. 66ನೆಯ ರಾಜಮಾರ್ಗದಲ್ಲಿ ಒಂದು ಉಚ್ಚಾಟಿತ ಜನವರ್ಗವೇ ಅನ್ನದ ಬೆನ್ನು ಹಿಡಿದು ಯಾತ್ರೆ ಹೊರಟಿದೆ.

'66 is the path of a people in flight, refugees from dust and shrinking land, from the thunder of tractors.... and shrinking ownership.... they come into 66 from the tributary roads, from the wagon tracks and the rutted country roads. 66 is the mother road, the road of flight.'

ಈ ಬಗೆಯ ಪ್ರಯಾಣದ ವಿವರಗಳನ್ನು ಸ್ವಂತ ಅನುಭವದಿಂದ ಬಲ್ಲ ಸ್ಟೀನ್‌ಬೆಕ್ ತುಂಬಾ ವಾಸ್ತವವಾಗಿ ಚಿತ್ರಿಸಿದ್ದಾನೆ. ವೈಭವೋಪೇತ ಕಾರುಗಳಲ್ಲಿ ಸಂಚರಿಸುವ ರೋಗಗ್ರಸ್ತ ಶ್ರೀಮಂತರು, ಅವರ ಕಾರುಗಳಿಗೆ ಸಿಕ್ಕಿ ಸಾಯುವ ನಾಯಿಗಳು, ಗಾಜಿನ ಕಪಾಟಿನೊಳಗಿನ ಸಿಹಿತಿಂಡಿಗಳನ್ನು ಆಸೆ ಸತ್ತ ಕಣ್ಣುಗಳಿಂದ ನಿಟ್ಟಿಸುವ ಬಡವರ ಮಕ್ಕಳು, ಅವರಿಗಾಗಿ ಮರುಗಿ ಡಾಲರ್‌ಗಟ್ಟಲೆ ಬೆಲೆಬಾಳುವ ಸಿಹಿಯನ್ನು ಮೂರು ಕಾಸಿಗೆ ಕೊಟ್ಟುಬಿಡುವ ಹೊಟೆಲ್ ಮಾಲಕಿ, ಅವಳ ಉದಾರತೆಯನ್ನು ಮೆಚ್ಚುವ ಅಷ್ಟೇ ಉದಾರಿಗಳಾದ ಟ್ರಕ್ ಚಾಲಕರು, ತಾನೇ ನೋವಿನ, ರೋಗದ, ಸಾಯುವ ತವರಾದರೂ ಸಾಯುವ ಮುದುಕನಿಗೆ ತನ್ನ ಟೆಂಟ್‌ನಲ್ಲಿ ಜಾಗ ಕೊಟ್ಟು ಜೋಡ್ ಕುಟುಂಬದ ಹೃದಯವನ್ನೇ ಪ್ರವೇಶಿಸಿಬಿಡುವ ಸಾರಾ ವಿಲ್ಸನ್, ಒಂದು ಕಣ್ಣನ್ನು ಕಳೆದುಕೊಂಡು ಆತ್ಮಮರುಕದ ಹೊಳೆಯಲ್ಲಿ ಮೀಯುತ್ತಿರುವ ಗ್ಯಾರೇಜ್ ಕೆಲಸಗಾರ ಮುದುಕ, ಈ ಬಡವರಿಂದ ಹಣ ಸುಲಿಯುವುದನ್ನೇ ಕಸುಬು ಮಾಡಿಕೊಂಡಿರುವ ಕ್ಯಾಂಪ್ ಗ್ರೌಂಡ್ ಮಾಲಿಕ, ಇವರಿಗೆ ಕ್ಯಾಲಿಫೋರ್ನಿಯಾದ ವಾಸ್ತವತೆಯ ಬಗ್ಗೆ ಎಚ್ಚರಿಕೆ ಕೊಡಲೆತ್ನಿಸಿ ಕಮ್ಯೂನಿಸ್ಟ್ ಎಂಬ ಆಪಾದನೆಗೆ ತುತ್ತಾಗುವ ಯುವಕ– ಇವರೆಲ್ಲರೂ ಜೋಡ್‌ನ ಕುಟುಂಬಕ್ಕೆ ಬದುಕಿನ ಪಾಠಗಳನ್ನು ಕಲಿಸುತ್ತಾರೆ. ಈ ಎಲ್ಲ ಪಾಠಗಳ ಸಾರಾಂಶ ಒಂದೇ. ಅದನ್ನು ಅಮ್ಮ ಹೀಗೆ ಸಂಗ್ರಹಿಸುತ್ತಾಳೆ :

'I am learning one thing good.' she said, 'Learning it all a time, ever' day. If you are in trouble or hurt or need - go to poor people. They're the only ones that'll help-the only ones.'

ಕಷ್ಟದಲ್ಲಿರುವವರಿಗೆ ಬಡವರು ಮಾತ್ರ ನೆರವು ನೀಡಬಲ್ಲರೆಂಬ ಈ ತಿಳಿವಳಿಕೆ ಅವರಲ್ಲಿ ಒಗ್ಗಟ್ಟನ್ನು ಮೂಡಿಸುವ ಸಂಗತಿಯಾಗಬೇಕು. ಈ ಜನ ಭಯಂಕರ ವಾಸ್ತವತೆಯಿಂದ ಪಲಾಯನ ಮಾಡುವಾಗ ಅನೇಕ ವಿಚಿತ್ರ ಅನುಭವಗಳನ್ನು ಪಡೆಯುತ್ತಾರೆ. ಅವುಗಳಲ್ಲಿ ಕೆಲವು ಅತ್ಯಂತ ಕ್ರೂರವಾದವು. ಮತ್ತೆ ಕೆಲವು ಮಾನವೀಯತೆಯಲ್ಲಿ ಅವರಿಗಿರುವ ನಂಬಿಕೆಯನ್ನು ಅರಳಿಸುವ ಸುಂದರ ಸತ್ಯಗಳು.

ಇವೆಲ್ಲದರ ನಡುವೆ ಜೋಡ್ ಕುಟುಂಬದ ಸದಸ್ಯರು ಬೆಳೆಯುತ್ತಾರೆ, ಬದಲಾಗುತ್ತಾರೆ. ಹದಿಹರೆಯದ ಆಲ್ ಕ್ರಮೇಣ ಪ್ರಬುದ್ಧತೆಯ ಕಡೆಗೆ ಪ್ರಯಾಣ ನಡೆಸುತ್ತಾನೆ. ಅವನ ವಾಹನ ಅವನಿಗೆ ಗಂಡುತನವನ್ನು, ಆತ್ಮವಿಶ್ವಾಸವನ್ನು ಕೊಡುತ್ತದೆ. ವಾಸ್ತವದ ನಿರಾಶೆಗಳ ಬಿಸಿಲಿಗೆ ರೋಸ್-ಕಾನಿಯರ ಕನಸುಗಳು ಬಾಡತೊಡಗುತ್ತವೆ. ಅನ್ಯಾಯವನ್ನು ಕಂಡ ಕೂಡಲೇ ಆಕ್ರಮಣಶೀಲನಾಗುವ ಟಾಮ್ ಸಹನೆ-ಸೌಜನ್ಯಗಳ ಬೆಲೆ ತಿಳಿದುಕೊಂಡು ಮಾಗುತ್ತಾನೆ. ಆದರೆ ಅವನ ಹೃದಯವನ್ನು ತುಂಬುತ್ತಿರುವ ಪ್ರತಿಭಟನೆಯ ಬೆಂಕಿ ಹೆಚ್ಚು ವ್ಯವಸ್ಥಿತವಾಗುವುದೇ ಹೊರತು ಆರುವುದಿಲ್ಲ, ಕೇಸಿ, ನಿಜವಾದ ದೇವರು ಜನರೇ ಎಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ. ಇವರೆಲ್ಲರಿಗಿಂತ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿರುವವಳು ಅಮ್ಮ. ತನ್ನ ಕುಟುಂಬದ ಏಕಸೂತ್ರತೆಯನ್ನು ಕಾಯ್ದುಕೊಳ್ಳುವುದು ಅವಳ ಪ್ರತಿಕ್ಷಣದ ಪ್ರಯತ್ನ. ಅವಳ ಪಾಲಿಗೆ ಭವಿಷ್ಯವೆಂದರೆ ತಕ್ಷಣದಲ್ಲಿ ಸಂಭವಿಸಲಿರುವ ಘಟನೆ ಮಾತ್ರ. ಭವಿಷ್ಯದಲ್ಲಿ ಬರಬಹುದಾದ ಸಾವಿರ ಆಪತ್ತುಗಳನ್ನು ಕಲ್ಪಿಸಿಕೊಂಡು ನರಳುವ ವ್ಯವಧಾನ ಅವಳಿಗಿಲ್ಲ. ಆದರೆ ಕುಟುಂಬದ ಸದಸ್ಯರು ಬೇರೆ ಬೇರೆ ಕಡೆ ಹೋಗಬೇಕೆಂಬ ಸೂಚನೆ ಬಂದಾಗ ಅವಳು ಸಿಡಿದೇಳುತ್ತಾಳೆ. ಕಬ್ಬಿಣದ ಗಡಾರೆ ಹಿಡಿದುಕೊಂಡು ಗಂಡನನ್ನು ಹೆದರಿಸಿ, ಶಕ್ತಿಕೇಂದ್ರವಾಗುತ್ತಾಳೆ. ಅವಳ ಮಾತುಗಳಲ್ಲಿ ಅರ್ಥವಿದೆ.

'What we got lef' in the world ? Nothin' but us. Nothin' but the folks.... We got a long bitter road ahead. All we got is the family unbroke.'

ನೂರು ಬವಣೆಗಳನ್ನು ಯಶಸ್ವಿಯಾಗಿ ಎದುರಿಸಿ, ಈ ಕುಟುಂಬ ಕ್ಯಾಲಿಫೋರ್ನಿಯಾದ ಗಡಿಯನ್ನು ತಲುಪುತ್ತದೆ. ಪ್ರಯಾಣದ ಕೊನೆಯ ಹಂತದಲ್ಲಿ, ಅಜ್ಜಿಯ ಹೆಣದೊಂದಿಗೆ, ರಾತ್ರಿಯೆಲ್ಲ ಪ್ರಯಾಣ ಮಾಡಿದರೂ ಏನೂ ಆಗಿಲ್ಲವೆಂಬಂತೆ ನಟಿಸುವ ಅಮ್ಮನ ಧೈರ್ಯ ಹಿಮಾಲಯಸದೃಶವಾದುದು. ಮೊದಲ ಮಗ ನೋಹ ಹರಿಯುವ ನದಿಯ ಜಾಡು ಹಿಡಿದು ಹೊರಟುಹೋಗುತ್ತಾನೆ. ಕಷ್ಟಗಳನ್ನು ಎದುರಿಸಿ ಬದುಕುವಷ್ಟು ಎದೆಗಾರಿಕೆಯಾಗಲೀ ಜೀವನಪ್ರೇಮವಾಗಲೀ ಅವನಿಗೆ ಇಲ್ಲ. ತಾಯಿಯ ನೋವು ಹೊರಗೆ ಕಾಣಿಸಿಕೊಳ್ಳುವುದಿಲ್ಲ, ಅಷ್ಟೆ.

ಇವರು ಬಯಸಿ ಬಂದ, ಹಾಲುಜೇನುಗಳ ಹೊಳೆ ಹರಿಯುವ ನಾಡು ಕ್ಯಾಲಿಫೋರ್ನಿಯಾ. ಆ ರಾಜ್ಯದ ಪ್ರಕೃತಿ ಸೌಂದರ್ಯ, ಸಸ್ಯಸಮೃದ್ಧಿ ಅದನ್ನು ಭೂಮಿಯ ಮೇಲಿನ ಸ್ವರ್ಗವಾಗಿ ಮಾಡಿವೆ. ಅಪ್ಪ ಮತ್ತು ಆಲ್ ಉದ್ಗರಿಸುವಂತೆ, ಅಂತಹ ವಾಸ್ತವದ ಕನಸನ್ನೂ ಕೂಡ ಅವರು ಕಂಡವರಲ್ಲ. ಆದರೆ ಆ ರಾಜ್ಯದಲ್ಲಿ ಬಡವರು ಎದುರಿಸಬೇಕಾದ ದುರಂತ ಬೇರೆ ಬಗೆಯದು.

ಒಂದು ಕಾಲದಲ್ಲಿ, ಆ ರಾಜ್ಯದಲ್ಲಿ ನೆಲಕ್ಕಾಗಿ ಹಂಬಲಿಸುವ, ಕಷ್ಟಪಟ್ಟು ಬೆವರು ಸುರಿಸುವ ರೈತರಿದ್ದರು. ಒಂದಷ್ಟು ನೆಲ, ಕೆಲವು ಸಾಕುಪ್ರಾಣಿಗಳು, ಸರಳವಾದ ಕೃಷಿ ಉಪಕರಣಗಳು ಇಷ್ಟರ ಸುತ್ತ ಅವರ ಸರಳ ಸಂತೃಪ್ತ ಬದುಕು ರೂಢಿತವಾಗಿತ್ತು. ಆದರೆ ಕ್ರಮೇಣ, ಹಸಿರು ನೆಲದ, ನೀಲಿ ಆಕಾಶದ ನೆಲದ ಬಸಿರಿನಿಂದ ಬೆಳೆ ತೆಗೆಯುವ ಹಸಿವು ಮಾಯವಾಯಿತು. ರೈತರು ಜಮೀನುದಾರರಾದರು ; ಭೂ'ಮಾಲಿಕ'ರಾದರು ; ವ್ಯವಸಾಯವು ಕೈಗಾರಿಕೆಯಾಯಿತು. ಕೊನೆಗೆ ಭೂಮಾಲಿಕರು ಕೈಗಾರಿಕೋದ್ಯಮಿಗಳಾದರು. ನೆಲದೊಂದಿಗಿನ ಸಂಪರ್ಕವನ್ನು ಕಳೆದುಕೊಂಡರು. ಕೆಲವೇ ಕೆಲವರು ಸಾವಿರ ಸಾವಿರ ಎಕರೆಗಳ ಒಡೆಯರಾದರು. ಕೆಲಸ ಮಾಡಲು ಕಾರ್ಮಿಕರನ್ನು ಕರೆಸಿಕೊಂಡರು ; ಅವರನ್ನು ಗುಲಾಮರಂತೆ ನೋಡಿಕೊಂಡರು. ಅವರು ಎದುರುಮಾತಾಡಿದರೆ ಹೊಡೆದು ಕೊಂದರು. ಹತ್ತು ಜನರಿಗೆ ಕೆಲಸವಿದ್ದರೆ ನೂರು ಜನ ಬರುವಂತೆ ಮಾಡಿ, ಕೂಲಿಯ ದರವನ್ನು ಪಾತಾಳಕ್ಕೆ ಇಳಿಸಿದರು. ಸಂಸಾರಸಹಿತ ಗುಳೆ ಬಂದ ಬಡಜನ ಅರೆಹೊಟ್ಟೆಗೂ ಸಾಲದ ಕೂಲಿಗಾಗಿ ಸ್ಪರ್ಧೆ ನಡೆಸುವುದು ಅನಿವಾರ್ಯವಾಯಿತು. ಕಾರ್ಮಿಕರಲ್ಲಿ ಯಾವುದೇ ಬಗೆಯ ಸಂಘಟನೆಯ, ಪ್ರತಿಭಟನೆಯ ಸುಳಿವು ಸಿಕ್ಕರೂ ಸರಿ, ಅದನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಯಿತು. 'ಅನ್ನ ಕೊಡಿ' ಎಂದು ಕೇಳಿದವರೂ ಕೂಡ ಕಮ್ಯೂನಿಸ್ಟರೆಂಬ ಆಪಾದನೆಯ ಮೇಲೆ ಶಿಕ್ಷೆಗೆ ಗುರಿಯಾದರು. ಮನುಷ್ಯರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುವುದು ನಿತ್ಯನಿಯಮವಾಯಿತು. ಆದರೆ ಆ ಶ್ರೀಮಂತರ ಕ್ರೌರ್ಯದೊಂದಿಗೆ ಅಂತರಂಗದ ಭಯವೂ ಹೆಚ್ಚಿತು. ಹಸಿದ ಹೊಟ್ಟೆಗಳು ದಂಗೆಯೇಳಬಹುದೆಂಬ ಭಯ ಅವರ ಕಟುಕತನವನ್ನು ಹೆಚ್ಚಿಸಿತು. ವರ್ಷವೆಲ್ಲ ರೈತರ ಗಮನವನ್ನು ಬಯಸುವ ಧಾನ್ಯಗಳ ಬದಲಾಗಿ, ವರ್ಷದಲ್ಲಿ ಯಾವಾಗಲೋ ಒಮ್ಮೆ ಸಾವಿರಾರು ಕಾರ್ಮಿಕರನ್ನು ಅಪೇಕ್ಷಿಸುವ ಹಣ್ಣುಗಳ ವ್ಯವಸಾಯ ಪ್ರಾರಂಭವಾಯಿತು. ಹಣ್ಣು ಕೀಳುವ, ಹತ್ತಿ ಬಿಡಿಸುವ ತಾತ್ಕಾಲಿಕ ಕೆಲಸಕ್ಕಾಗಿ ಆ ರಾಜ್ಯಕ್ಕೆ ಬಂದ ಜನ, ನಿರುದ್ಯೋಗದ ದವಡೆಗಳಲ್ಲಿ ನುಚ್ಚಾದರು. ಅವರ ಕಣ್ಣೆದುರಿಗೆ ಬೇಸಾಯ ಮಾಡಬಹುದಾದ, ಮಾಡದೆ ಬಂಜರು ಬಿದ್ದಿರುವ ರಾಶಿರಾಶಿ ನೆಲ. ಆದರೆ ಅದನ್ನು ಉಳುವ ಅಧಿಕಾರ ಅವರಿಗಿಲ್ಲ. ಊರ ಹೊರಗಿನ ಕೊಳಚೆ ಪ್ರದೇಶಗಳಂತಹ 'ಹೂವರ್‌ವಿಲ್'ಗಳಲ್ಲಿ ಪ್ರಾಣಿಗಳಿಗಿಂತ ಕಡೆಯಾಗಿ ಬದುಕುವ ಜನ, ಒಗ್ಗಟ್ಟಾಗಿ ಮೇಲೆ ಬಿದ್ದರೆ ತಾವು ನಿರ್ನಾಮವಾಗುವೆವೆಂದು ಕ್ಯಾಲಿಫೋರ್ನಿಯಾದ ಶ್ರೀಮಂತರಿಗೆ ಚೆನ್ನಾಗಿ ಗೊತ್ತು. ಆದ್ದರಿಂದಲೇ ಅವರಿಗೂ, ಬಡವರಿಗೂ ನಡುವೆ ನಿರಂತರ ದ್ವೇಷ

'Three hundred thousand. Hungry and miserable; if they ever know themselves, the land will be theirs, and all the gas, all the rifles in the world won't stop them. And great owners, who had become through their holdings both more and less than men, ran to their destruction, and

used everything that in the long run would destroy them. Every little means, every violence, every raid on a Hooverville, every deputy swaggering thro' a ragged camp put off the day a little and lamented the inevitability of the day.'

ಈ ಮಾತುಗಳಲ್ಲಿ ಕ್ರಾಂತಿಯ ಅನಿವಾರ್ಯತೆಯನ್ನು ಕುರಿತಾದ ಆಶಾವಾದ ಉಜ್ವಲವಾಗಿದೆ. ಆದರೆ ಅಮೆರಿಕಾದಲ್ಲಿ ಕ್ರಾಂತಿ ಆಗಲಿಲ್ಲವೆನ್ನುವುದು ನಮಗೆಲ್ಲರಿಗೂ ತಿಳಿದಿರುವ ಸತ್ಯ.

ಇಂತಹ ಸುಖ ತುಂಬಿದ ನರಕಕ್ಕೆ ಬಂದವರು, ಟಾಮ್ ಜೋಡ್ ಮತ್ತು ಅವನ ಕುಟುಂಬದ ಇತರ ಸದಸ್ಯರು. ಅಜ್ಜಿಯ ಶವಸಂಸ್ಕಾರವನ್ನು ಮುಗಿಸಿ ಕಾರ್ಮಿಕರ ಶಿಬಿರವನ್ನು ಪ್ರವೇಶಿಸುವ ಅವರು ಸಂಧಿಸುವ ಮೊದಲ ವ್ಯಕ್ತಿ, ಪೋಲೀಸರ ಏಟಿನಿಂದ ಮತಿಭ್ರಾಂತನಾಗಿರುವ ಮೇಯರ್. ಆನಂತರ ಸಿಗುವ ಯುವಕ ಹೂವರ್‌ವಿಲೆಯ ವಾಸ್ತವಗಳನ್ನು ಆಲ್‌ಗೆ ಪರಿಚಯ ಮಾಡಿಕೊಡುತ್ತಾನೆ. ಅಮ್ಮ ಮಾಂಸದ ಸಾರನ್ನು ತಯಾರಿಸಲು ಕುಳಿತಾಗ, ಅವಳ ಸುತ್ತ ಸೇರುವ ಆಗಂತುಕರಾದ ಹಸಿದ ಮಕ್ಕಳ ಬಳಗ ಅವಿಸ್ಮರಣೀಯವಾದುದು :

'The children stood stiffly and looked at her. Their faces were blank, rigid, and their eyes went mechanically from the pot to the tin plate she held. Their eyes followed the spoon from pot to plate, and when she passed the steaming plate upto Uncle John, their eyes followed it up. Uncle John dug his spoon in the strew, and banked eyes rose up with the spoon. A piece of potato went into John's mouth and the banked eyes were on his face, watching to see how he would react. Would it be good ? Would he like it ?'

ನಂತರ ಘಟನೆಗಳು ವೇಗವಾಗಿ ನಡೆಯುತ್ತವೆ. ಹೂವರ್‌ವಿಲೆಗೆ ಒಬ್ಬ ಕಂಟ್ರಾಕ್ಟರ್ ಪೋಲೀಸರ ಸಂಗಡ ಬರುತ್ತಾನೆ. ತನಗೆ ಕೂಲಿಕಾರರು ಬೇಕು ಎನ್ನುತ್ತಾನೆ. ಕೂಲಿ ಎಷ್ಟೆಂದು ಕೇಳಿದರೆ ಹೇಳುವುದಿಲ್ಲ. ಫ್ಲಾಯ್ಡ್ ಪ್ರತಿಭಟಿಸುತ್ತಾನೆ. ಪೊಲೀಸ್ ಅಧಿಕಾರಿ ಅವನನ್ನು ಸೆರೆಹಿಡಿಯಲೆತ್ನಿಸಿದಾಗ, ಅವನು ಅಧಿಕಾರಿಗೆ ಹೊಡೆದು ಓಡುತ್ತಾನೆ. ಪೊಲೀಸ್ ಅಧಿಕಾರಿಯ ಗುಂಡು ಹಾರುವಷ್ಟರಲ್ಲಿ ಟಾಮ್ ಅವನಿಗೆ ತೊಡರುಗಾಲು ಕೊಟ್ಟು ಬೀಳಿಸುತ್ತಾನೆ. ರೆವರೆಂಡ್ ಕೇಸಿ ಅವನ ಮುಖದ ಮೇಲೆ ಒದೆಯುತ್ತಾನೆ. ಅಧಿಕಾರಿಯ ಗುಂಡು ಹೆಂಗಸೊಬ್ಬಳ ಕೈಯನ್ನು ತುಂಡುಮಾಡುತ್ತದೆ. ಕೇಸಿ ಟಾಮ್ ಕುಟುಂಬವನ್ನು ಅಪಾಯದಿಂದ ತಪ್ಪಿಸಲೋಸ್ಕರ, ತಾನೇ ಅಪರಾಧಿಯೆಂದು ಹೇಳಿ ಸೆರೆಯಾಗುತ್ತಾನೆ. ಇದರ ಮಧ್ಯೆ ಇದೆಲ್ಲದರಿಂದ ಭಗ್ನ ಮನಸ್ಕನಾದ 'ಕಾನಿ' ಹೆಂಡತಿಯನ್ನು ಬಿಟ್ಟು ಹೋಗುತ್ತಾನೆ.

ಅದರ ಜೊತೆಗೆ ಚಿಕ್ಕಪ್ಪ ಜಾನ್ ತನ್ನ ಆತ್ಮನಿಂದೆಯ ಪ್ರವೃತ್ತಿಗೆ ಔಷಧವೋ ಎಂಬಂತೆ ಹೆಂಡ ಕುಡಿದು ಮೈಮರೆಯುತ್ತಾನೆ. ಅದೇ ರಾತ್ರಿ ಗೂಂಡಾಗಳು ಬಂದು ಹೂವರ್‌ವಿಲೆಯನ್ನು ಸುಟ್ಟುಬಿಡುವರೆಂಬ ಸುದ್ದಿ ಗೊತ್ತಾಗುತ್ತದೆ. ಆ ದುರಂತ ಸಂಭವಿಸುವುದಕ್ಕೆ ಮೊದಲೇ ಟಾಮ್‌ನ ಕುಟುಂಬ ತನ್ನ ಟ್ರಕ್‌ನಲ್ಲಿ ಕುಳಿತು ಆ ಸ್ಥಳದಿಂದ ಪಲಾಯನ ಮಾಡುತ್ತದೆ. ಇದು ಅವರ ಕುಟುಂಬದ ಕ್ಯಾಲಿಫೋರ್ನಿಯಾ ವಾಸದ ಮೊದಲ ಅಧ್ಯಾಯ.

ಇಡೀ ಕಾದಂಬರಿಯಲ್ಲಿ ಸಂತೋಷದ, ನ್ಯಾಯದ, ಆತ್ಮಗೌರವದ, ಹಾಸ್ಯದ ಸುಳಿವುಗಳು ಕಾಣಿಸಿಕೊಳ್ಳುವ ಒಂದೇ ಒಂದು ಜಾಗವೆಂದರೆ, ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಕೇಂದ್ರ ಸರ್ಕಾರದವರು ನಡೆಸುವ ಕ್ಯಾಂಪ್. ಅದರೊಳಗೆ ಕ್ಯಾಲಿಫೋರ್ನಿಯಾದ ಅಧಿಕಾರಿಗಳಿಗಾಗಲೀ, ಪೋಲೀಸರಿಗಾಗಲೀ ಅವಕಾಶವಿಲ್ಲ. ಅದು ಸಂಪೂರ್ಣವಾಗಿ ನಿರಾಶ್ರಿತರೇ ನಡೆಸುವ ಶಿಬಿರ. ಟಾಮ್ ಕುಟುಂಬದವರು, ತಾವು ಹೋಗುವ ಪ್ಯಾಚ್ ವೀಡ್ ಕ್ಯಾಂಪ್‌ನಲ್ಲಿ ಮೊದಲ ಬಾರಿಗೆ ಮಾನವೀಯತೆಯ ಸಂಪರ್ಕ ಪಡೆಯುತ್ತಾರೆ. ಟಾಮ್‌ಗೆ ಕೆಲವು ದಿನಗಳಾದರೂ ಕೆಲಸ ಸಿಗುತ್ತದೆ. ಸ್ನಾನ ಮಾಡುವುದು, ಬಟ್ಟೆ ಒಗೆಯುವುದು, ಮೈ ಮುರಿದು ದುಡಿಯುವುದು ಮುಂತಾದ ಸಾಮಾನ್ಯ ಸೌಕರ್ಯಗಳು ದೊರೆತವೆಂದು ಅಮ್ಮನಿಗೆ ಹೇಳತೀರದ ಆನಂದ. ಈ ಶಿಬಿರದ ಶಾಂತಜೀವನವನ್ನು ನೋಡಿ ಕರುಬುವ ಜನ ಇದನ್ನು ವಿಧ್ವಂಸ ಮಾಡುವ ಹಲವು ಯೋಜನೆಗಳನ್ನು ಹಾಕುತ್ತಾರೆ. ಏಕೆಂದರೆ ಮನುಷ್ಯರಂತೆ ಬದುಕುವ ಅವಕಾಶವನ್ನು ಒಮ್ಮೆ ಪಡೆದ ಬಡವರು ಮತ್ತೆ ಪ್ರಾಣಿಗಳಾಗಲು ಒಪ್ಪದಿರಬಹುದೆಂದು ಅವರ ಭಯ. ಬಡವರಿಗಾದರೋ ಹಸಿವು ಕಡಿಮೆಯಾದ ಕೂಡಲೇ ಸೌಂದರ್ಯವನ್ನು ನೋಡುವ ಕಣ್ಣು ಜಾಗ್ರತವಾಗುತ್ತದೆ. ಹಾರುವ ಬಾತುಕೋಳಿಗಳು, ನಿಶ್ಚಲವಾಗಿ ಕುಳಿತ ಪಾರಿವಾಳಗಳು, ಮನುಷ್ಯನಂತೆ ಚಲಿಸುವ ಸುಂಟರಗಾಳಿ, ಇವೆಲ್ಲವೂ ಅವರಿಗೆ ಜೀವಂತವಾಗುತ್ತವೆ. ಆದರೆ ಕೆಲಸ ಮಾತ್ರ ಸಿಗುವುದೇ ಇಲ್ಲ. ಸರ್ಕಾರದ ಅತಿಥಿಗಳಾಗಿ ಎಷ್ಟು ದಿನ ತಾನೇ ಕಾಲ ಕಳೆಯಲು ಸಾಧ್ಯ ? ಕ್ಯಾಂಪನ್ನು ತೊರೆದು ಕೆಲಸದ ಅನ್ವೇಷಣೆಯಲ್ಲಿ ಬೇರೆ ಕಡೆ ತೆರಳುವುದು ಅನಿವಾರ್ಯವಾಗುತ್ತದೆ.

ಈ ತೀರ್ಮಾನದ ಜೊತೆಜೊತೆಯಲ್ಲಿಯೇ ಹಣ್ಣುಗಳ ಫಸಲುಗಳು ಕೀಳಲು ಸಿದ್ಧವಾಗುತ್ತವೆ. ಭೂಮಿ ಅತ್ಯಂತ ಫಲವತ್ತಾಗಿರುವುದರಿಂದ ರಾಶಿ ರಾಶಿ ಹಣ್ಣುಗಳು ಬೆಳೆಯುತ್ತವೆ. ಸಹಜವಾಗಿಯೇ ಅವುಗಳ ಬೆಲೆ ಕಡಿಮೆಯಾಗುತ್ತದೆ. ಅವನ್ನು ಆ ಬೆಲೆಗೆ ಮಾರಿದರೆ, ಹಣ್ಣನ್ನು ಮರದಿಂದ ಕೀಳಿಸಿದ ಕೂಲಿಯೂ ಬರುವುದಿಲ್ಲ. ಸರಿ, ಕೀಳುವುದೇ ಬೇಡ. ಅವು ಕೊಳೆತು ಕೆಳಗೆ ಬಿದ್ದು ಮರದ ಕೆಳಗೆ ಹಣ್ಣಿನ ಹಾಸಿಗೆಯಾದರೂ ಪರವಾಗಿಲ್ಲ. ಆದರೆ ಹೊಟ್ಟೆಗಿಲ್ಲದ ಬಡವರು ಮಾತ್ರ ಅವುಗಳನ್ನು ತಿನ್ನಬಾರದು. ಸಾವಿರಾರು ಹಂದಿಗಳನ್ನು ಕೊಂದು, ನೆಲದಲ್ಲಿ ಗುಂಡಿ ತೋಡಿ, ಹೂಳಿ, ಮೇಲೆ ಸುಣ್ಣ ಕಲ್ಲು

ಮುಚ್ಚಿದರೂ ತಪ್ಪಿಲ್ಲ. ಅವು ಬಡವರ ಆಹಾರವಾಗಬಾರದು. ಈ ಬಗೆಯ ಕ್ರೌರ್ಯವನ್ನು ಹೇಗೆ ತಾನೇ ಸಹಿಸುವುದು ?

'The people come with nets, to fish for potatoes in the river, and the guards hold them back..... and they stand still and watch the potatoes float by... listen to the screaming pigs being killed in the ditch and covered with quick-lime ; and in the eyes of the people there is the failure ; and in the eyes of the hungry there is a growing wrath. In the souls of the people, the grapes of wrath are filling and growing heavy, growing heavy for the vintage.'

ಇಂತಹ ಸಂದರ್ಭದಲ್ಲಿ ಕೆಲಸ ಹುಡುಕಿಕೊಂಡು ಹೊರಟಿದ್ದಾರೆ ಜೋಡ್ ಕುಟುಂಬದ ಸದಸ್ಯರು. ಅವರೆಲ್ಲರಿಗೂ ಹತ್ತಿರದ ಹೂವರ್ ರ್‍ಯಾಂಚ್‌ನಲ್ಲಿ ಕೆಲಸ ಸಿಗುತ್ತದೆ. ಆದರೆ ಅದು ಎಂತಹ ಕೆಲಸ ? ಅನೇಕ ಜನ ಕಾರ್ಮಿಕರು ತಮಗೆ ಬರುತ್ತಿರುವ ಕೂಲಿಯನ್ನು ಕಡಿಮೆ ಮಾಡಿದ್ದಕ್ಕಾಗಿ ಮುಷ್ಕರ ಹೂಡಿದ್ದಾರೆ. ಅವರೆಲ್ಲರೂ ಒಗ್ಗಟ್ಟಾಗಿದ್ದರೆ ಅವರಿಗೆ ಗೆಲುವು ಖಂಡಿತ. ಏಕೆಂದರೆ ಎರಡು ಮೂರು ದಿನಗಳಲ್ಲಿ ಎಲ್ಲ ಹಣ್ಣುಗಳನ್ನು ಕೀಳದಿದ್ದರೆ ಬೆಳೆ ನಾಶವಾಗುತ್ತದೆ. ಆದರೆ ಹೆಚ್ಚಿನ ಕೂಲಿ ಕೊಡಲು ಮಾಲಿಕರು ಸಿದ್ಧರಿಲ್ಲ. ಮುಷ್ಕರವನ್ನು ಹೇಗಾದರೂ ಮಾಡಿ ಮುರಿಯಬೇಕೆಂಬುದು ಅವರ ಉದ್ದೇಶ. ಸರಿ, ದೂರದೂರದ ಪ್ರದೇಶಗಳಿಗೆಲ್ಲಾ ಹೋಗಿ ಇಲ್ಲಸಲ್ಲದ ಆಸೆ ತೋರಿಸಿ, ಕೂಲಿಕಾರರನ್ನು ಕರೆತರುತ್ತಾರೆ. ಜೋಡ್ ಮತ್ತು ಕುಟುಂಬ ಹಾಗೆ ಬಂದವರಲ್ಲಿ ಕೆಲವರು. ಅವರಿಗೆ ವಸ್ತುಸ್ಥಿತಿಯ ಅರಿವಿಲ್ಲ, ಅವರನ್ನು ಪೊಲೀಸ್ ರಕ್ಷಣೆಯಲ್ಲಿ ತೋಟಕ್ಕೆ ಕರೆದೊಯ್ಯುತ್ತಾರೆ. ತೋಟದೊಳಗಿನದು ಸುಲಿಗೆಯ ಸಾಮ್ರಾಜ್ಯ. ಕತ್ತೆಯ ಹಾಗೆ ದುಡಿದರೆ ಹೊಟ್ಟೆತುಂಬದಷ್ಟು ಕೂಲಿ. ಅಲ್ಲಿರುವ ಅಂಗಡಿಯಲ್ಲಿ ಪ್ರತಿಯೊಂದು ಸಾಮಾನಿನ ಬೆಲೆಯೂ ಆಕಾಶದಲ್ಲಿಯೇ. ಅಂಗಡಿಯ ಒಡೆಯನೇ ತೋಟದ ಒಡೆಯನೂ ಹೌದು. ಸರಿ, ದುಡಿದದ್ದೆಲ್ಲಾ, ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ಏನೋ ಹೇಗೋ ಎಲ್ಲರೂ ದುಡಿಯತೊಡಗಿರುತ್ತಾರೆ.

ರಾತ್ರಿಯಾಗುವುದೇ ತಡ ಟಾಮ್, ತೋಟದ ಬಾಗಿಲ ಬಳಿ ಕಂಡ ಜನರ ವರ್ತನೆಗೆ ಕಾರಣ ಹುಡುಕುತ್ತಾ ಅಲ್ಲಿಂದ ಹೊರಬರುತ್ತಾನೆ. ಮುಷ್ಕರ ಮಾಡುತ್ತಿರುವ ಕಾರ್ಮಿಕರ ಗುಂಪನ್ನು ಭೇಟಿಯಾಗುತ್ತಾನೆ. ಅವರೆಲ್ಲರಿಗೂ ನಾಯಕನಾಗಿರುವವನು ಟಾಮ್‌ನ ಹಳೆಯ ಗೆಳೆಯ ಪಾದ್ರಿ ಜಿಮ್ ಕೇಸಿ. ಅವನೀಗ ಕಾರ್ಮಿಕರೊಂದಿಗೆ ಕೆಲಸ ಮಾಡಿ ಅವರನ್ನು ಹೋರಾಟಕ್ಕೆ ತೊಡಗಿಸುವ ಹೊಣೆ ಹೊತ್ತ ಕಾರ್ಯಕರ್ತ. ಅವನು ಪಡೆದ ಸೆರೆಮನೆಯ ಅನುಭವ ಅವನ ರಾಜಕೀಯ ನಿಲುವುಗಳನ್ನು ಇನ್ನಷ್ಟು ಖಚಿತವಾಗಿಸಿದೆ. ಬಡತನವೇ ಎಲ್ಲ ಅಪರಾಧದ ಮೂಲವೆಂದು ಅವನು ತಿಳಿದಿದ್ದಾನೆ. ಏಸು ಕ್ರಿಸ್ತನಂತೆ ಅಜ್ಞಾತವಾಸ ಮಾಡಿದ ನಂತರ ತನಗೆ ಜ್ಞಾನೋದಯವಾಗುವ ಅವನಿಗೂ

ಕ್ರಿಸ್ತನಿಗೂ ಅನೇಕ ಸಾಮ್ಯಗಳನ್ನು ರೂಪಿಸಲಾಗಿದೆ. ಅವನಿಗೂ, ಟಾಮ್‌ಗೂ ಮಾತು ಕಥೆಯಾದ ಸ್ವಲ್ಪ ಹೊತ್ತಿನಲ್ಲಿಯೇ ಪೋಲೀಸರ ಬೆಂಬಲ ಪಡೆದ ಬಾಡಿಗೆ ಗೂಂಡಾಗಳು ಇವರೆಲ್ಲರ ಮೇಲೆ ಆಕ್ರಮಣ ಮಾಡುತ್ತಾರೆ. ಅವರ ಏಟಿನಿಂದ ಕೇಸಿ ಅಲ್ಲಿಯೇ ಸಾಯುತ್ತಾನೆ. ಈ ಹತ್ಯೆಯನ್ನು ತಡೆಯಲಾರದ ಟಾಮ್ ತಾನೂ ಒಬ್ಬನನ್ನು ಕೊಲ್ಲುತ್ತಾನೆ. ಏಟು ತಿನ್ನುವುದಕ್ಕೆ ಮೊದಲು ಕೇಸಿ ಆಡುವ ಮಾತು, ಕ್ರಿಸ್ತನ ಕೊನೆಯ ಮಾತುಗಳಿಗೆ ಸಂವಾದಿಯಾಗಿದೆ.

'You don' know what you're a-doin.'

ಅನಿರೀಕ್ಷಿತವೂ, ಅನಪೇಕ್ಷಿತವೂ ಆದ ಈ ಸಾವಿನೊಂದಿಗೆ ಟಾಮ್ ಕುಟುಂಬದ ಪಲಾಯನ ಮತ್ತೆ ಪ್ರಾರಂಭವಾಗುತ್ತದೆ. ಟಾಮ್‌ನನ್ನು ಸಾಮಾನುಗಳ ಮಧ್ಯೆ ಅಡಗಿಸಿಕೊಂಡು ಎಲ್ಲರೂ ರಾತ್ರೋರಾತ್ರಿ ತೋಟ ಬಿಟ್ಟು ಹೊರಡುತ್ತಾರೆ. ಇನ್ನು ಮೇಲೆ ಟಾಮ್ ಕುಟುಂಬದ ಜೊತೆಯಲ್ಲಿ ವಾಸ ಮಾಡುವಂತಿಲ್ಲ. ಅವರು ಹಣ್ಣಿನ ತೋಟಗಳನ್ನು ದಾಟಿ, ಹತ್ತಿ ಪ್ಲಾಂಟೇಶನ್ ಹತ್ತಿರ ಬರುತ್ತಾರೆ. ಹತ್ತಿರದ ಕಣಿವೆಯಲ್ಲಿರುವ ಪೊದೆಗಳ ನಡುವೆ ಟಾಮ್‌ನ ಏಕಾಂತವಾಸ ಪ್ರಾರಂಭವಾಗುತ್ತದೆ. ಉಳಿದವರಿಗೆ ಹತ್ತಿ ಕೀಳುವ ಕೆಲಸ ದೊರೆಯುತ್ತದೆ. ಟಾಮ್‌ಗೆ ಊಟ ತೆಗೆದುಕೊಂಡು ಹೋಗುವ ಕೆಲಸ ಅಮ್ಮನದು. ಹೀಗೆಯೇ ಹಲವು ದಿನ ಕಳೆಯುತ್ತದೆ. ಆಲ್‌ನ ಮದುವೆ ನಿಶ್ಚಯವಾಗುತ್ತದೆ. ಇದ್ದಕ್ಕಿದ್ದಂತೆ ಚಿಕ್ಕ ಹುಡುಗಿ ರುತಿ ಯಾರೊಂದಿಗೋ ಜಗಳವಾಡುವಾಗ, ತನ್ನ ಅಣ್ಣ ಇಬ್ಬರು ಮನುಷ್ಯರನ್ನು ಕೊಂದಿರುವ ಪರಾಕ್ರಮಿಯೆಂದೂ, ಅವನು ಹತ್ತಿರದಲ್ಲೇ ಅಡಗಿರುವನೆಂದೂ ಜಂಬ ಕೊಚ್ಚಿಕೊಳ್ಳುತ್ತಾಳೆ. ಸಂಸಾರದ ಗುಟ್ಟು ರಟ್ಟಾದ ಮೇಲೆ ಟಾಮ್‌ನ ನಿರ್ಗಮನ ಅನಿವಾರ್ಯವಾಗುತ್ತದೆ. ಅಮ್ಮ ಮತ್ತು ಮಗ ಕೊನೆಯ ಬಾರಿ ಸಂಧಿಸುವ ದೃಶ್ಯ ಬಹಳ ಪರಿಣಾಮಕಾರಿಯಾಗಿದೆ. ಟಾಮ್, ಕೇಸಿ ಹಿಡಿದ ದಾರಿಯಲ್ಲೇ ಮುಂದುವರಿಯುವ ನಿರ್ಧಾರ ತೆಗೆದುಕೊಂಡಿದ್ದಾನೆ. ಕಾರ್ಮಿಕರ ಸಂಘಟನೆ, ಅನ್ಯಾಯದ ವಿರುದ್ಧ ವ್ಯವಸ್ಥಿತ ಪ್ರತಿಭಟನೆ ಅವನ ಗುರಿಗಳು. ತನ್ನ ಜನರು ಹಂದಿಗಳಂತೆ ಬದುಕುವ, ಕೃಷಿಯೋಗ್ಯ ನೆಲ ಬಂಜರು ಬಿದ್ದಿರುವ, ಯಾರೋ ಒಬ್ಬ ಸಾವಿರಾರು ಎಕರೆ ಭೂಮಿಯ ಒಡೆಯನಾಗಿದ್ದು ನೂರು ಸಾವಿರ ಜನ ಉಪವಾಸದಲ್ಲಿ ನರಳುವ ಪರಿಸ್ಥಿತಿ ಅವನ ಶತ್ರುವಾಗಿದೆ. ಈ ಅನ್ಯಾಯದ ವಿರುದ್ಧ ಹೋರಾಟದಲ್ಲಿ ಹುತಾತ್ಮನಾಗುವುದೂ ಕೂಡ ಸರಿಯೆಂದು ಅವನ ತೀರ್ಮಾನ. ನೀನು ಸತ್ತು ಹೋದರೆ ಅಥವಾ ಘಾಯಗೊಂಡರೆ ನನಗೆ ತಿಳಿಯುವುದೇ ಇಲ್ಲವಲ್ಲಾ ಎಂದು ತಾಯಿ ದುಃಖಿಸಿದಾಗ ಟಾಮ್ ಕೊಡುವ ಉತ್ತರ ಬಹಳ ಪ್ರಸಿದ್ಧವಾಗಿದೆ:

'Tom laughed uneasily. 'Well, may be like Casy says, a fella ain't got a soul of his own, but only a piece of big one - an' then... and then it don' matter. Then I'll be all aroun' in the dark. I'll be ever'where, wherever you look. Wherever they's a fight so hungry people can eat, I'll

be there, wherever they'sa cop beating up a guy I'll be there. If Casy knowed, I'll be in the way guys yell when they are mad and I'll be in the way kids laugh when they are hungry, an' they know supper's ready. And when our folks eat the stuff they raise, an' live in the houses they build, - why I'll be there.'

ಬಂಡವಾಳಶಾಹೀ ರಾಷ್ಟ್ರವೊಂದರ ಸಾಹಿತಿಯು ಇಷ್ಟೊಂದು ಖಚಿತವಾಗಿ, ಹೃದಯವಿದ್ರಾವಕವಾಗಿ ಶ್ರಮಜೀವಿಗಳ ಪರವಾಗಿ ಮಾತನಾಡುವುದು ಎಲ್ಲ ಸಾಹಿತಿಗಳ ಮಾನವಪರ ನಿಲುವುಗಳಿಗೆ ನಿದರ್ಶನ. ಟಾಮ್ ತಲುಪುವ ತೀರ್ಮಾನಕ್ಕೆ ರಾಜಕೀಯ ಸಿದ್ಧಾಂತಗಳ ಅಧ್ಯಯನ ಕಾರಣವಲ್ಲ. ಅವನ ಸ್ವಂತ ಅನುಭವಗಳ ತರ್ಕಬದ್ಧ ಮುಕ್ತಾಯ ಆ ನಿರ್ಣಯದಲ್ಲಿದೆ.

ಟಾಮ್ ಹೊರಟುಹೋದ ಮೇಲೆಯೂ ಜೋಡ್ ಕುಟುಂಬದ ಜೀವನ ಹಾಗೆಯೇ ಮುಂದುವರಿಯುತ್ತದೆ. ಕೊನೆಗೊಂದು ದಿನ ಎಲ್ಲವನ್ನೂ ಕೊಚ್ಚಿಕೊಂಡು ಹೋಗುವ ಎಲ್ಲವನ್ನೂ ಮುಳುಗಿಸುವ ಮಳೆ ಬರುತ್ತದೆ. ಬಡವರ ಗುಡಿಸಲುಗಳು ತಗ್ಗಿನಲ್ಲಿರುವುದರಿಂದ ಜಲಪ್ರಳಯ ಅನಿವಾರ್ಯವೆನಿಸುತ್ತದೆ. ಹರಿಯುವ ನೀರಿಗೆ ಕಟ್ಟೆ ಕಟ್ಟುವ ಬಡವರ ಪ್ರಯತ್ನ ವಿಫಲವಾಗುತ್ತದೆ. ಈ ಜಲಧಾರೆಯ ನಡುವೆ ರೋಸಿ ಸತ್ತ ಮಗುವಿಗೆ ಜನ್ಮ ಕೊಡುತ್ತಾಳೆ. ಅವಳ ಮೊಲೆ ತುಂಬಿದ ಹಾಲು ವ್ಯರ್ಥವೆನಿಸುತ್ತದೆ. ಧಾರೆ ಧಾರೆಯಾಗಿ ಸುರಿಯುವ ಮಳೆಯಲ್ಲಿಯೇ ಎಲ್ಲರೂ ಎತ್ತರದಲ್ಲಿರುವ ಕೊಟ್ಟಿಗೆಯೊಂದ ರೊಳಗೆ ಹೋಗಿ ಸೇರಿಕೊಳ್ಳುತ್ತಾರೆ. ಅಲ್ಲೊಬ್ಬ ಹುಡುಗ ಮತ್ತು ಅವನ ತಂದೆ. ಅಲ್ಲಿ ಇಲ್ಲಿ ಸಿಕ್ಕ ಆಹಾರವನ್ನೆಲ್ಲಾ ಮಗನಿಗೆ ಕೊಟ್ಟು ತಾನು ಉಪವಾಸ ಉಳಿದ ತಂದೆ ನಿತ್ರಾಣದಿಂದ ಸಾಯುವ ಸ್ಥಿತಿಯಲ್ಲಿದ್ದಾನೆ. ಅಮ್ಮನ ಸೂಚನೆಯಂತೆ ರೋಸಿಯ ಮೊಲೆಹಾಲು ಅವನಿಗೆ ಸಂಜೀವಿನಿಯಾಗುತ್ತದೆ. ಚೈತನ್ಯದಾಯಿಯಾದ ಈ ಹಾಲಿನ ಸೆಲೆಯೊಂದಿಗೆ ಕಾದಂಬರಿ ಮುಗಿಯುತ್ತದೆ.

ಇದು ಕಾದಂಬರಿಯ ಸಂಗ್ರಹ ನಿರೂಪಣೆ ಮಾತ್ರ ; ಇಂತಹ ನಿರೂಪಣೆಯ ಮೂಲಕ ಕೃತಿಯ ಜೀವಂತತೆಯನ್ನು ಸಂವಹನ ಮಾಡಲು ಖಂಡಿತಾ ಸಾಧ್ಯವಿಲ್ಲ. ಇದರ ಯಶಸ್ಸು ವಿವರಗಳಲ್ಲಿ, ಸನ್ನಿವೇಶಗಳ ನಿರ್ಮಾಣದಲ್ಲಿ ಮತ್ತು ಓದುಗರಿಂದ ಪ್ರತಿಕ್ರಿಯೆಯನ್ನು ಮೂಡಿಸಬಲ್ಲ ಶಕ್ತಿಯಲ್ಲಿ ಅಡಗಿದೆ. ಓದುಗರ ಮನಸ್ಸನ್ನು ಕ್ರಮವಾಗಿ ತನ್ನ ಮಾನವೀಯ ಧೋರಣೆಗಳ ಕಡೆಗೆ ಒಲಿಸಿಕೊಳ್ಳಲು ಸ್ಟೀನ್‌ಬೆಕ್‌ಗೆ ಸಾಧ್ಯವಾಗಿದೆ.

3

ಅಮೆರಿಕನ್ ಕಾದಂಬರಿಯ ಇತಿಹಾಸದಲ್ಲೇ ಬಹಳ ವಿವಾದಾಸ್ಪದ ಕಾದಂಬರಿಗಳಲ್ಲಿ 'ಗ್ರೇಪ್ಸ್ ಆಫ್ ರಾತ್' ಒಂದು. 1852ರಲ್ಲಿ ಪ್ರಕಟವಾದ ಹ್ಯಾರಿಯಟ್ ಬೀಚರ್ ಸ್ಟೋವ್‌ಳ 'ಅಂಕಲ್ ಟಾಮ್ಸ್ ಕ್ಯಾಬಿನ್' ಮತ್ತು 1906ರಲ್ಲಿ ಹೊರಬಂದ ಅಪ್ಟನ್ ಸಿಂಕ್ಲೇರ್‌ನ 'ದಿ ಜಂಗಲ್'ಗಳ ಹಾಗೆ ಈ ಕೃತಿಯೂ ಕೂಡ ಸಂಯುಕ್ತಸಂಸ್ಥಾನಗಳ ಸಾಮಾಜಿಕ ವಾಸ್ತವತೆಯ ಒಂದು ರೋಗಪೀಡಿತ ಕ್ಷೇತ್ರವನ್ನು ಅನಾವರಣ ಮಾಡಿದುದರಿಂದ ಇದರ ಪರ ಮತ್ತು ವಿರೋಧವಾದ ಅನೇಕ ವಾದಗಳು ಮಂಡಿತವಾಗಿವೆ. ಇದು ಕಮ್ಯೂನಿಸ್ಟರ ಪರವಾದ, ಅತಿಶಯೋಕ್ತಿಯಿಂದ ತುಂಬಿದ ಕೃತಿಯೆನ್ನುವುದರಿಂದ ಹಿಡಿದು, ಕ್ಯಾಲಿಫೋರ್ನಿಯಾದ ನಿಜವಾದ ಪರಿಸ್ಥಿತಿಯನ್ನು ಅದು ಇದ್ದ ಹಾಗೆ ಚಿತ್ರಿಸುವ ಧೀರ ಗಂಭೀರ ಕೃತಿಯೆನ್ನುವವರೆಗೆ ವಿಮರ್ಶಕರ ನಿಲುವುಗಳು ಹರಡಿಕೊಂಡಿವೆ. ಸ್ವತಃ ಕಮ್ಯೂನಿಸ್ಟ್/ಮಾರ್ಕ್ಸಿಸ್ಟ್ ವಿಮರ್ಶಕರೂ ಕೂಡ ಇದು ತಾವು ಒಪ್ಪುವ ತಾತ್ವಿಕ ನೆಲೆಗಟ್ಟಿನ ಮೇಲೆ ರಚಿತವಾಗಿದೆಯೆಂದು ಪರಿಗಣಿಸುವುದಿಲ್ಲ, ಉದಾಹರಣೆಗೆ, ಈ. ಬಿ. ಬರ್ಗಮನನ್ನು ಉದ್ಧರಿಸುತ್ತಾ ಎಫ್. ಡಬ್ಲ್ಯು. ವ್ಯಾಟ್ ಹೇಳುವಂತೆ, 'The fickle sensibility of John Steinbeck oscillating between the poles of social awareness and decadence or amiable superficiality is therefore a symptom and victim of the instability of our society.' — ಎಂಬುದು ಅವರ ವಾದ.

ಆದರೆ ಇನ್ನೊಂದು ಗುಂಪಿನ ಪ್ರಕಾರ, ಇದು ಓದುಗರೊಂದಿಗೆ ಸಂಪೂರ್ಣವಾಗಿ ಒಂದಾಗುವ ಅಪರೂಪದ ಕೃತಿ. ಕೃತಿಕಾರ ಮತ್ತು ವಾಚಕಲೋಕದ ನಡುವಿನ ಅಂತರವು ಇಲ್ಲವೆನ್ನುವಷ್ಟು ಕಡಿಮೆಯಾಗುವುದು ಈ ಕಾದಂಬರಿಯ ವಿಶಿಷ್ಟತೆಯೆಂದು ಅವರು ಹೇಳುತ್ತಾರೆ. ಬಾರ್ಕರ್ ಫೇರ್ಲಿ, ಹ್ಯಾರಿ ಸೌಲ್ಬೊವರ್, ಮ್ಯಾಕ್ಸ್‌ವೆಲ್ ಗೀಸ್ಮರ್ ಮುಂತಾದವರು ಈ ರೀತಿ ಯೋಚಿಸುವವರಲ್ಲಿ ಪ್ರಮುಖರು. ಕಲಾಕೃತಿಯ ಸಂಕೀರ್ಣತೆ, ಅಸ್ಪಷ್ಟತೆ ಮತ್ತು ಅತಿ ತಾತ್ವಿಕತೆಗಳನ್ನು ತೊರೆದು ನೇರ, ಸರಳ, ಹೃದಯಸ್ಪರ್ಶಿ ಶೈಲಿಯಲ್ಲಿ ಬರೆಯುವುದರಿಂದ ಅವನ ಬರವಣಿಗೆ ಜನಪ್ರಿಯವೂ, ಸಮಾಜಪರವೂ ಆಯಿತು.

ಆದರೆ ಕ್ಯಾಲಿಫೋರ್ನಿಯಾ ಹಾಗೂ ಸಂಯುಕ್ತ ಸಂಸ್ಥಾನಗಳ ನೀತಿಧೋರಣೆಗಳ ಪರವಾಗಿದ್ದ ಜನರು ಈ ಕಾದಂಬರಿಯನ್ನು ತೀವ್ರವಾಗಿ ಖಂಡಿಸಿದರು. 'Grapes of Gladness,' California's Refreshing and Inspiring Answer to John Steinbeck's 'Grapes of Wrath' (Marshall V. Hartranz, 1939), 'The Truth About John Steinbeck and the Migrants' (Georege T. Miron, 1939) ಮುಂತಾದ ಪುಸ್ತಕಗಳು ಈ ಬಗೆಯ ವಾದವನ್ನು ಸಂಗ್ರಹಿಸುತ್ತವೆ.

ಹಾಗಾದರೆ ಸತ್ಯ ಯಾವುದು ? ಕೃತಿಯನ್ನು ಓದಿದಾಗ ಅದು ರಾಜಕೀಯ

ಸಿದ್ಧಾಂತವೊಂದರ ಪ್ರತಿಪಾದನೆ ಮಾಡುತ್ತಿದೆಯೆಂದಾಗಲೀ ಅಥವಾ ರಾಜಕೀಯ ಕ್ರಿಯೆಗೆ ನಮ್ಮನ್ನು ಪ್ರಚೋದಿಸುವುದೆಂದಾಗಲೀ ತೋರುವುದಿಲ್ಲ. ಸತ್ಯವನ್ನು ರಾಜಕೀಯ ಅವಶ್ಯಕತೆಗೆ ತಕ್ಕಂತೆ ಇಲ್ಲಿ ವಿಕೃತಗೊಳಿಸಲಾಗಿಲ್ಲ. ಬಡವರ ಬವಣೆಗಳನ್ನು ಅವು ಇರುವ ಹಾಗೆ ಚಿತ್ರಿಸುವುದು, ಅವರ ಹಸಿವು ತಣಿಯಬೇಕೆಂದು ನಿರೀಕ್ಷಿಸುವುದು ಕಮ್ಯೂನಿಸಂ ಆದರೆ ಇದು ಅಂತಹ ಕೃತಿ. ಸ್ಟೀನ್‌ಬೆಕ್ ಚಿತ್ರಿಸಿರುವ ಯಾಂತ್ರೀಕರಣದ ದಾರಿಯಲ್ಲೇ ಅಮೆರಿಕಾ ಮುಂದುವರಿಯಿತೆನ್ನುವುದು ಸರ್ವವಿದಿತವಾದ ಸಂಗತಿ. ಜಿಮ್ ಕೇಸಿ ಮತ್ತು ಟಾಮ್ ಜೋಡರ ಕನಸು ನನಸಾಗಲಿಲ್ಲ. ಆದರೆ ಹಾಗೆಂದ ಮಾತ್ರಕ್ಕೆ ಕನಸು ಕಾಣುವುದೇ ತಪ್ಪೆಂದು ತೀರ್ಮಾನಿಸಬಾರದು.

ಈ ಪುಸ್ತಕದ ಪ್ರತಿಗಳನ್ನು ಸುಟ್ಟು ಹಾಕಿದ್ದಾಗಲೀ, ಪುಸ್ತಕ ಭಂಡಾರಗಳಿಂದ ಅದಕ್ಕೆ ಬಹಿಷ್ಕಾರ ಹಾಕಿಸಲು ಪ್ರಯತ್ನಿಸಿದ್ದಾಗಲೀ ಅಮೆರಿಕಾದ 'ಪ್ರಜಾಪ್ರಭುತ್ವ'ಕ್ಕೆ ಭೂಷಣವಲ್ಲ.

ಎರಡನೆಯ ಸಂಗತಿ ಸ್ಟೀನ್‌ಬೆಕ್‌ನ ನೈತಿಕ-ಧಾರ್ಮಿಕ ನಿಲುವುಗಳಿಗೆ ಸಂಬಂಧ ಪಟ್ಟದ್ದು. ಜಿಮ್ ಕೇಸಿ ಪಾದ್ರಿಯಾಗಿದ್ದವನು ಕ್ರಮೇಣ ದೇವರಲ್ಲಿ ನಂಬಿಕೆ ಕಳೆದುಕೊಂಡು ಜನರೇ ದೇವರೆಂಬ ತೀರ್ಮಾನಕ್ಕೆ ಬರುವುದು ಕಾದಂಬರಿಯಲ್ಲೇ ಕಂಡು ಬರುವ ತಾತ್ವಿಕ ಬೆಳವಣಿಗೆ. ದೇವರನ್ನು ಕುರಿತಂತೆ ಮೂಡಬಹುದಾದ ಅಪನಂಬಿಕೆ, ಅನುಮಾನಗಳನ್ನು ಪ್ರಯಾಣ ಹೊರಡುವ ಮೊದಲು ಕೇಸಿ ಮಾಡುವ ಪ್ರಾರ್ಥನೆಯು ಸಂಗ್ರಹಿಸುತ್ತದೆ :

'I ain't sayin' I'm like Jesus. But I got fired like him, I got mixed up like him, an' I went into the wilderness like him... Sometimes I would pray like I always done. Only I could not figure what I was prayin' to or for.' ಈ ಧೋರಣೆಯು ದೇವರನ್ನು ಕುರಿತ ಸ್ಟೀನ್‌ಬೆಕ್‌ನ ತೀರ್ಮಾನವೆಂದು ತಿಳಿದರೆ ತಪ್ಪಾಗಲಾರದು.

ಆದರೆ ನೈತಿಕತೆಯ ಪ್ರಶ್ನೆ ಬಂದಾಗ ಸ್ಟೀನ್‌ಬೆಕ್‌ನ ಧೋರಣೆಗಳು ಹೆಚ್ಚು ಚರ್ಚಾಸ್ಪದವಾಗಿವೆ. ಮನುಷ್ಯನಲ್ಲಿರುವ ಪ್ರಕೃತಿಜನ್ಯವಾದ ಪ್ರಾಣಿಸ್ವಭಾವಕ್ಕೆ ಹೆಚ್ಚಿನ ಬೆಲೆ ಕೊಟ್ಟ ಈ ಕಾದಂಬರಿಕಾರನು ಕೊಲೆಯಿಂದ ಹಿಡಿದು ಹಾದರದವರೆಗೆ ಎಲ್ಲ ಕ್ರಿಯೆಗಳನ್ನೂ ಒಂದಲ್ಲ ಒಂದು ಸಂದರ್ಭದಲ್ಲಿ ಸಮರ್ಥನೀಯವೆಂದು ವಾದಿಸಿದನು. ಆದ್ದರಿಂದಲೇ ಅವನ ಬರವಣಿಗೆಯನ್ನು ನೈತಿಕ ಅಧಃಪತನ, ಹಿಂಸೆ, ಕ್ರೌರ್ಯ, ಅಶ್ಲೀಲತೆ, ಸದಭಿರುಚಿಯ ಕೊರತೆಗಳಿಗೆ ಮಾದರಿಯೆಂದು ಹೇಳಿದವರುಂಟು. ಇಂತಹ ಅಭಿಪ್ರಾಯಗಳಿಗೆ ಕಾರಣವಾದ ವಿವರಗಳು 'ಗ್ರೇಪ್ಸ್ ಆಫ್ ರಾತ್'ನಲ್ಲಿ ಇಲ್ಲ. ಈ ಕೃತಿಯ ನೈತಿಕ ನಿಲುವು ಯಾವಾಗಲೂ ಮಾನವೀಯವಾದುದು ; ಜನಪರವಾದುದು. ಶೋಷಕರಲ್ಲಿಯೂ ಇರಬಹುದಾದ ಮಾನವೀಯತೆಯನ್ನು ಈ ಕೃತಿ ಅಲ್ಲಲ್ಲಿ ಗುರುತಿಸುತ್ತದೆ.

ಕಾದಂಬರಿಯ ರೂಪವನ್ನು ಕುರಿತಾದ ಕೆಲವು ಸಂಗತಿಗಳನ್ನೂ ಗಮನಿಸಬೇಕು. ಒಂದು ಕುಟುಂಬದ ಅನುಭವವನ್ನು ಇಡೀ ದೇಶದ ಅನುಭವದೊಂದಿಗೆ ಸಮೀಕರಿಸಲು ಕುತೂಹಲಕಾರಿಯಾದ ತಂತ್ರವನ್ನು ಬಳಸಲಾಗಿದೆ. ಒಂದು ನಿರ್ದಿಷ್ಟ ಸಂದರ್ಭವನ್ನು ನಿರೂಪಿಸುವಾಗ ಅದರ ಸಾರ್ವತ್ರಿಕ ಹಿನ್ನೆಲೆಯನ್ನು ಒಂದು ಅಧ್ಯಾಯ ಕೊಡುತ್ತದೆ. ಈ ಹಿನ್ನೆಲೆಯಲ್ಲಿ ಜೋಡ್‌ನ ಕುಟುಂಬಕ್ಕೆ ಏನಾಯಿತೆಂಬುದನ್ನು ಮುಂದಿನ ಅಧ್ಯಾಯ ಹೇಳುತ್ತದೆ. ಉದಾಹರಣೆಗೆ 1, 3, 5, 7, 9 ಮತ್ತು 11ನೆಯ ಅಧ್ಯಾಯಗಳಲ್ಲಿ ಜೋಡ್ ಕುಟುಂಬದ ಪ್ರಸ್ತಾಪವೇ ಇಲ್ಲ. ಓಕ್ಲಹಾಮ ಮತ್ತು ಪ್ರಯಾಣದ ಮಾರ್ಗಗಳ ಸಮಗ್ರ ಸ್ಥಿತಿಯನ್ನು ವಿವರಿಸಲು ಅವು ಮೀಸಲಾಗಿವೆ. ಹಾಗೆಯೇ 19, 21, 23, 25 ಮತ್ತು 27ನೆಯ ಅಧ್ಯಾಯಗಳು ಕ್ಯಾಲಿಫೋರ್ನಿಯಾದ ವಾಸ್ತವತೆಯ ಚಿತ್ರಣಕ್ಕೆ ಮಾತ್ರ ಬಳಕೆಯಾಗಿವೆ. ಈ ಅಧ್ಯಾಯಗಳಲ್ಲಿ ಕತೆ ಮುಂದುವರಿಯುವುದೇ ಇಲ್ಲ. ಈ ರೀತಿ ಸಾರ್ವತ್ರಿಕ ಅನುಭವ ಮತ್ತು ವೈಯಕ್ತಿಕ ಅನುಭವಗಳನ್ನು ಪರಸ್ಪರ ಪೂರಕವಾಗಿ ಬಳಸಿಕೊಂಡಿರುವುದರಿಂದ ಕಾದಂಬರಿಗೆ ಮಹಾಕಾವ್ಯವೊಂದರ ವ್ಯಾಪ್ತಿ ಬಂದಿದೆ.

ಕೆಲವರು ವಿಮರ್ಶಕರು ಈ ಕಾದಂಬರಿಯನ್ನು ಜನಪದ ಮಹಾಕಾವ್ಯವೆಂದು ಕರೆದಿದ್ದಾರೆ. ಕೃಷಿಕ ಸಮುದಾಯವೊಂದರ ಆಹಾರ, ಮದುವೆ, ಹಾಡುಗಳು, ಧಾರ್ಮಿಕ ನಂಬಿಕೆಗಳು ಈ ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ಹರಿಯುತ್ತಿರುವ ರಕ್ತವನ್ನು ನಿಲ್ಲಿಸಲು ಜೇಡರ ಬಲೆ ಅಥವಾ ಸ್ವಮೂತ್ರವು ಔಷಧವೆನ್ನುವಂತಹ ಸಣ್ಣ ನಂಬಿಕೆಗಳಿಂದ, ಹಾಡೊಂದರ ಹಿಡಿತದಲ್ಲಿ ಇಡೀ ಸಮುದಾಯವೇ ಒಂದಾಗಿಬಿಡುವ ಹದಿನೇಳನೆಯ ಅಧ್ಯಾಯದವರೆಗೆ ಸಾಮಾನ್ಯ ಜನರ ಬದುಕು ಈ ಕೃತಿಯನ್ನು ತುಂಬಿದೆ :

'In the evening a strange thing happened : The twenty families became one family. The children were the children of all. The loss of home became one loss, and the golden time in the west became one dream.'

ಪ್ರಾಣಿಪ್ರಪಂಚವನ್ನು ಸಂಕೇತಗಳಾಗಿ ಬಳಸಿರುವುದು ಈ ಕಾದಂಬರಿಯ ಮತ್ತೊಂದು ಗುಣ. ಕಾದಂಬರಿಯ ಮೊದಮೊದಲ ಅಧ್ಯಾಯಗಳಲ್ಲಿಯೇ ಬರುವ ಆಮೆ ಇಂತಹ ಒಂದು ಸಂಕೇತ. ಏನೇ ತೊಂದರೆ ಬಂದರೂ, ನಿಭಾಯಿಸಿಕೊಂಡು ಪಶ್ಚಿಮದ ಕಡೆಗೆ ಮುಂದುವರಿಯುವ ಆಮೆಯು ಲಕ್ಷಾಂತರ ವಲಸೆಗಾರರಿಗೆ ಸಂಕೇತವಾಗಿ ಬಿಡುತ್ತದೆ. ಹಾಗೆಯೇ ಆರೋಗ್ಯವಂತ, ತರುಣ ಹಂದಿಗಳನ್ನು ಹಿಡಿದು, ಕೊಂದು, ಕತ್ತರಿಸಿ, ಅವುಗಳ ಮಾಂಸಕ್ಕೆ ಉಪ್ಪು ಹಾಕಿ, ಜಾಡಿಗಳಲ್ಲಿ ತುಂಬುವ ರೈತರು ಸ್ವತಃ ತಾವೂ ಕೂಡ ಅಂತಹುದೇ ಜನರ ಹಿಡಿತದಲ್ಲಿದ್ದಾರೆ. ಇದೇ ಜನಯಾತ್ರೆಯನ್ನು ಸ್ಟೀನ್‌ಬೆಕ್ ಹೀಗೆ ಬಣ್ಣಿಸುತ್ತಾನೆ :

'It is as if human sentiments and speeches had been assigned to a flock of lemmings on their way to throw themselves into the sea.'

ಪ್ರಾಣಿಲೋಕದೊಂದಿಗೆ ಮನುಷ್ಯನಿಗಿರುವ ಸಂವಾದಿಗುಣಗಳನ್ನು ತಿಳಿಸುವ ವರ್ಣನೆಗಳು ಕೂಡ ಕಾದಂಬರಿಯೊಳಗಿವೆ. ಇವು ಅವನು ರಿಕೆಟ್ಸ್‌ನೊಂದಿಗೆ ಸಾಗರ ಜೀವಿಗಳ ಅಧ್ಯಯನದ ಪರಿಣಾಮವೆಂದು ಹೇಳುವ ವಿಮರ್ಶಕರಿದ್ದಾರೆ.

ಸ್ಟೀನ್‌ಬೆಕ್‌ನ ಗದ್ಯವಿಶಿಷ್ಟವಾದುದು. ಅದು ಭಾವನೆಗಳನ್ನು ಪ್ರಚೋದಿಸಲು, ಒಂದು ಬಗೆಯ ಹರಿಗಡಿಯದ ಶೈಲಿಯನ್ನು ಬಳಸುತ್ತದೆ. 'And' ಎಂಬ ಸಮುಚ್ಚರ ಅವ್ಯಯದ (conjunction) ಮೂಲಕ ಚಿಕ್ಕ ಚಿಕ್ಕ ವಾಕ್ಯಗಳನ್ನು ಒಂದುಗೂಡಿಸಿ ಅತಿದೀರ್ಘ ವಾಕ್ಯವೊಂದು ರೂಪಿತವಾಗುತ್ತದೆ. ಅದನ್ನು ಓದುವಾಗ ಒಂದು ಬಗೆಯ ಮಂತ್ರಘೋಷದ (incantation) ಪ್ರಭಾವವು ಸಾಧಿತವಾಗುತ್ತದೆ. ವಾಕ್ಯ ಮುಂದುವರಿದಂತೆ ಕೋಪ, ಪ್ರತಿಭಟನೆ ಅಥವಾ ನೋವುಗಳು ತುಂಬಿಕೊಳ್ಳುವ ಕ್ರಿಯೆಯು ಅಭಿನೀತವಾಗುತ್ತದೆ.

ಈ ಕಾದಂಬರಿಯಲ್ಲಿ ಸಂಭಾಷಣೆಗಾಗಿ ಬಳಸಿರುವ ಗ್ರಾಮ್ಯ, ಉಪಭಾಷೆಯನ್ನು ಕುರಿತಂತೆ ಕೆಲವು ಮಾತುಗಳು. ಏಕೆಂದರೆ ಕನ್ನಡದ ಅನೇಕ ಉಪಭಾಷೆಗಳು ಸಾಹಿತ್ಯದ ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುವ ಈ ಸಂದರ್ಭದಲ್ಲಿ ಸ್ಟೀನ್‌ಬೆಕ್‌ನ ಭಾಷೆಯು ಅಧ್ಯಯನಯೋಗ್ಯವಾಗಿದೆ. ಕೆಲವು ನಿದರ್ಶನಗಳನ್ನು ನೋಡಿ.

ಶಿಷ್ಟ: I have not done anything that was not partly a sin.

ಗ್ರಾಮ್ಯ : I ain't never done nothing that wasn't part sin.

ಶಿಷ್ಟ: Where are we going ?

ಗ್ರಾಮ್ಯ : Where we gonna go ?

ಅಂಕಲ್ ಜಾನ್ ಒಂದು ಐದು ಡಾಲರ್ ನೋಟನ್ನು ಬಚ್ಚಿಟ್ಟುಕೊಂಡಿರುತ್ತಾನೆ. ಅದನ್ನು ಕುರಿತು ಅಪ್ಪನಿಗೂ ಅವನಿಗೂ ನಡೆಯುವ ಸಂಭಾಷಣೆಯನ್ನು ಗಮನಿಸಿ. ಡಾಲರ್‌ಗೆ ಸ್ತ್ರೀಲಿಂಗವನ್ನು ಬಳಸಲಾಗಿದೆ.

'Fi' dollars,' he said.
'Steal her,' pa asked.
'No. I had her, kept her out.'
'She was yourn, wasn't she ?'
'Yeah, but I didn't have no right to keep her out ?'
'I don't see much sin in that,' Ma said. 'It's yourn.'

ಇಂತಹ ಅನೇಕ ನಿದರ್ಶನಗಳನ್ನು ಪರಿಶೀಲಿಸಿದಾಗ ಶಬ್ದಕೋಶ, ವ್ಯಾಕರಣ, ಉಚ್ಚಾರಣೆ,

ಮುಂತಾದ ಹಲವು ಹಂತಗಳಲ್ಲಿ ಸ್ಟೀನ್‌ಬೆಕ್ ಆಡುಮಾತನ್ನು ಬಳಸಿರುವನೆಂಬುದು ಸ್ಪಷ್ಟವಾಗುತ್ತದೆ.

ಕೊನೆಯದಾಗಿ ಪ್ರಸ್ತುತ ಸಾಹಿತ್ಯ ಸಂದರ್ಭದಲ್ಲಿ, ಈ ಕಾದಂಬರಿಯು ಅರ್ಥಪೂರ್ಣವಾಗುವ ಬಗೆಯನ್ನು ತಿಳಿಸಿ ಇದನ್ನು ಮುಗಿಸಬಹುದು. ಬಂಡಾಯ ಸಾಹಿತಿಗಳೂ ಸೇರಿದಂತೆ ನಮ್ಮ ಬಹುಪಾಲು ಸಾಹಿತಿಗಳು, ಕೇವಲ ಬುದ್ಧಿಜೀವಿಗಳಾಗಿ ಪರಿವರ್ತಿತರಾಗುವ ಮೂಲಕ ತಮ್ಮ ಸಮುದಾಯದ ಬದುಕಿನೊಂದಿಗಿನ ನೇರ ಸಂಪರ್ಕವನ್ನು ಕಳೆದುಕೊಳ್ಳುತ್ತಿದ್ದಾರೆ. ಅನಕ್ಷರಸ್ಥರು ತುಂಬಿರುವ ಸಮಾಜದಲ್ಲಿ, ಶಿಕ್ಷಣ ಸೌಲಭ್ಯವನ್ನು ಪಡೆದವರು ಅನುಭವಿಸಬೇಕಾದ ಅನಿವಾರ್ಯಗಳಲ್ಲಿ ಇದೊಂದು. ಹೀಗೆ ಮಧ್ಯಮವರ್ಗಕ್ಕೆ ಬಡ್ತಿಪಡೆದ ಸಾಹಿತಿಯು, ವಸ್ತುವಿಗಾಗಿ ಕೇವಲ ತನ್ನ ಬಾಲ್ಯಾನುಭವಗಳ ಗಣಿಯನ್ನು ಅವಲಂಬಿಸಬೇಕಾಗುತ್ತದೆ. ಅಂತಹವರ ಸೃಜನಶೀಲ ಬರವಣಿಗೆಯು ಜನಪರವಾದರೂ, ಜನವಿದೂರವಾಗುತ್ತದೆ. ವಾಸ್ತವದ ಅನುಭವಗಳ ಪ್ರತಿಪಾದನೆಯ ಜಾಗವನ್ನು, ಅರೆಜೀರ್ಣವಾದ ರಾಜಕೀಯ ಸಿದ್ಧಾಂತಗಳು ಮತ್ತು ಪರಿಣಾಮ ಬೀರಲೆಂದೇ ರಚಿತವಾದ ಕೃತಕ ಸಂವಿಧಾನ ಮತ್ತು ವಿವರಗಳು ತುಂಬಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ತನ್ನ ನಿಜವಾದ ಅನುಭವಗಳನ್ನು, ಜನಪರವಾದ ಹೋರಾಟದ ಫಲಿತಗಳನ್ನು ನಿರೂಪಿಸಿದಾಗ ಸ್ಟೀನ್‌ಬೆಕ್ ಪಡೆಯುವ ಯಶಸ್ಸು ಮತ್ತು ಹಾಗೆ ಮಾಡದೆ ಹೋದಾಗ ಅನುಭವಿಸುವ ವಿಫಲತೆಗಳು ನಮಗೆ ಪಾಠ ಕಲಿಸಬಲ್ಲವು. ಆದ್ದರಿಂದಲೇ ರಾಜಕೀಯ ತತ್ವಗಳ ಪ್ರಚಾರ ಮಾಡದೆ, ಜನಪರವಾಗುವ 'ಗ್ರೇಪ್ಸ್ ಆಫ್ ರಾತ್' ನಮ್ಮ ಮುಂದಿರುವ ಅತ್ಯುತ್ತಮ ಮಾದರಿಗಳಲ್ಲಿ ಒಂದಾಗಿ ನಿಲ್ಲುತ್ತದೆ.

ಶೊಲೊಖೊವ್ : 'ಅಂಡ್ ಕ್ವಯೆಟ್ ಫ್ಲೋಸ್ ದಿ ಡೋನ್'

ಎ. ವಿ. ಉಪಾಧ್ಯಾಯ

'ಮತ್ತೆ ಡೋನ್ ನಿಧಾನವಾಗಿ ಹರಿಯುತ್ತಿದೆ' ('ಅಂಡ್ ಕ್ವಯೆಟ್ ಫ್ಲೋಸ್ ದಿ ಡೋನ್') ಬೃಹತ್ ಕಾದಂಬರಿಗೆ 1965ರ ನೊಬೆಲ್ ಪುರಸ್ಕಾರವನ್ನು ನೀಡುತ್ತ ಪ್ರಶಸ್ತಿ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಎಂಡರ್ಸ್ ಇಸ್ಟರ್‌ಲಿಂಗ್ ಹೇಳಿದ್ದು : 'ಇದು ಯಾವ ದೃಷ್ಟಿಯಿಂದ ನೋಡಿದರೂ ಒಂದು ಶಕ್ತಿಶಾಲಿಯಾದ ಕೃತಿ, ಪುರಸ್ಕಾರಕ್ಕೆ ಅರ್ಹವಾದ್ದು. ಪುರಸ್ಕಾರ ಸ್ವಲ್ಪ ತಡವಾಗಿ ಕೊಡಲಾಗುತ್ತಿದೆ ; ಆದರೂ ಇನ್ನೂ ಕಾಲ ಮಿಂಚಿಲ್ಲವೆಂಬುದು ಸಂತೋಷದ ವಿಷಯ. ನಮ್ಮ ಯುಗದ ಒಬ್ಬ ಶ್ರೇಷ್ಠ ಲೇಖಕನನ್ನು ಸಾಹಿತ್ಯಕ್ಕಾಗಿ ನೊಬೆಲ್ ಬಹುಮಾನ ಪಡೆದವರ ಪಟ್ಟಿಯಲ್ಲಿ ಸೇರಿಸಲಾಗಿದೆ.'

ನೊಬೆಲ್ ಪುರಸ್ಕಾರದ ಘೋಷಣೆಯಾದ ನಂತರ ಶೊಲೊಖೊವ್ ಮತ್ತು ಅವರ ಸೃಷ್ಟಿ 'ಮತ್ತೆ ಡೋನ್ ನಿಧಾನವಾಗಿ ಹರಿಯುತ್ತಿದೆ' ವಿಶ್ವದ ಪ್ರಜ್ಞಾವಂತರ ಹಾಗೂ ಸಹೃದಯಿಗಳ ಹೆಚ್ಚಿನ ಗಮನ ಸೆಳೆದುವು. ಈ ಮುಂಚೆ ಸೋವಿಯತ್ ಒಕ್ಕೂಟ ಹಾಗೂ ಕೆಲವೇ ದೇಶಗಳಿಗೆ ಸೀಮಿತವಾಗಿದ್ದ ಈ ಕೃತಿ ಸಮಸ್ತ ಸಾರಸ್ವತ ಲೋಕದ ಸೊತ್ತಾಯಿತು. ಮುಂದಿನ ಕೆಲ ವರ್ಷಗಳಲ್ಲಿ ಪ್ರಪಂಚದ ಹತ್ತು ಹಲವು ಭಾಷೆಗಳಲ್ಲಿ ಅದರ ಅನುವಾದ ಪ್ರಕಟವಾಗಿ, ನೂರಾರು ಆವೃತ್ತಿಗಳು ಬೆಳಕು ಕಂಡವು. ಆಗೊಮ್ಮೆ ಈಗೊಮ್ಮೆ ಅದರ ಅನುಕರಣೆಯೂ ನಡೆಯಿತು. ಅದು ರಾಜಕಾರಣಿಗಳ, ಸಮಾಜಶಾಸ್ತ್ರಜ್ಞರ, ಬುದ್ಧಿಜೀವಿಗಳ ಹಾಗೂ ಸಾಹಿತಿಗಳ ಆಸಕ್ತಿಯನ್ನು ಕೆರಳಿಸಿ, ವಿಶ್ವಸಾಹಿತ್ಯ ಮತ್ತು ಚಿಂತನಪದ್ಧತಿಗೆ ಹೊಸ ಆಯಾಮ ನೀಡಿತು.

'ಹೊಸ ಭೂಮಿ, ಹೊಸ ಬಾಳು', 'ಡೋನಿನ ದಡದಲ್ಲಿ', 'ಮಾನವನ ಪಾಡು', 'ಅವರು ತಾಯ್ನಾಡಿಗಾಗಿ ಹೋರಾಡಿದರು' ಇತ್ಯಾದಿ ಕೃತಿಗಳನ್ನು ಬರೆದು ಸೋವಿಯತ್ ಸಾಹಿತ್ಯದಿಗಂತವನ್ನು ವಿಸ್ತರಿಸಿದ ಶೊಲೊಖೊವ್ ರಷ್ಯಾದ ಡೋನ್ ನದಿ ಹರಿಯುವ ವ್ಯೆಶೆನ್‌ಸ್ಕಾಯಾ ಜಿಲ್ಲೆಯಲ್ಲಿ 1905ರಲ್ಲಿ ಜನಿಸಿದರು. 1917ರಲ್ಲಿ ರಷ್ಯಾದಲ್ಲಿ ಕ್ರಾಂತಿ ಸಂಭವಿಸಿ ವಿಶ್ವದಲ್ಲಿಯೇ ಪ್ರಪ್ರಥಮವಾಗಿ ಸಮಾಜವಾದಿ ನಾಡೊಂದು ಉದಯಿಸಿತು. ಶೊಲೊಖೊವ್ ಇನ್ನೂ ಹದಿಹರೆಯದಲ್ಲಿದ್ದಾಗಲೇ ಕ್ರಾಂತಿಕಾರಿಗಳೊಂದಿಗೆ ಸೇರಿಕೊಂಡು ತನ್ನ ಆದರ್ಶದ ಹೊಸ ನಾಡನ್ನು ಕಟ್ಟಲು ಹೋರಾಡಿದರು. ಸ್ಥಳೀಯ ಶಾಲೆ ಮತ್ತು ಮಾಸ್ಕೋದಲ್ಲಿ ವ್ಯಾಸಂಗ ಮಾಡಿದ ನಂತರ ಅವರು ಡೋನ್ ಪ್ರದೇಶಕ್ಕೆ ಮರಳಿ ಆ ಪ್ರದೇಶದಲ್ಲಿ ನೆಲೆಸಿದ್ದ ಕೊಸೆಕ್ ಜನಾಂಗದ ವೀರಗಾಥೆಯನ್ನು ಬರೆಯಲಾರಂಭಿಸಿದರು. ರೈತ ಹುಡುಗಿಯನ್ನು ಮದುವೆಯಾಗಿ ಕೊಸೆಕ್ ವಾತಾವರಣದಲ್ಲಿ ನೆಲೆಸಿದರು.

ಅವರ ಮುಂದೆ ಕೊಸೆಕರ ಚರಿತ್ರೆ – ಯುದ್ಧ, ಪ್ರೇಮ, ಕ್ರೌರ್ಯ ಹಾಗೂ ಸ್ವಚ್ಛಂದ ಬದುಕಿನ ಚರಿತ್ರೆ ಮಾತನಾಡತೊಡಗಿದುವು. 1925ರಲ್ಲಿ ಅವರ ಕಥಾ ಸಂಕಲನಗಳು ಪ್ರಕಟವಾದುವು. 'ಡೋನಿನ ಕಥೆಗಳು' ಮತ್ತು 'ನೀಲಾಕಾಶದಲ್ಲಿ ಇಳಿಜಾರು ಭೂಮಿ' ಎಂಬ ಸಂಕಲನಗಳಲ್ಲಿ ಡೋನ್ ನದಿ ದಡದ ಕೊಸೆಕರ ಬದುಕಿನ ಯಥಾರ್ಥ ಚಿತ್ರಣವಿದೆ. ಗೃಹಯುದ್ಧದಿಂದಾಗಿ ಕೊಸೆಕ ಪರಿವಾರಗಳಲ್ಲಿ ಉಂಟಾದ ಕಲಹದ ಸಜೀವ ದೃಶ್ಯವಿದೆ. 'ಹೊಸ ಭೂಮಿ, ಹೊಸ ಬಾಳು' ಕೃಷಿಯ ಸಾಮೂಹಿಕೀಕರಣ ನಡೆದಾಗ ಸೋವಿಯತ್ ಶಾಸನ ಎದುರಿಸಿದ ಸಮಸ್ಯೆಗಳನ್ನು ವಿವರಿಸುವ ಮಹಾನ್ ಕೃತಿಯಾಗಿದೆ.

1941ರಲ್ಲಿ ನಾಝಿಗಳ ಆಕ್ರಮಣಕ್ಕೆ ರಷ್ಯಾ ತುತ್ತಾದಾಗ ಶೊಲೊಖೊವ್ ಯುದ್ಧರಂಗದ ಬಾತ್ಮೀದಾರರಾದರು. 1943ರಿಂದ 1945ರವರೆಗೆ 'ಪ್ರಾವ್ದಾ'ದಲ್ಲಿ 'ತಿರಸ್ಕಾರದ ವಿಜ್ಞಾನ' ಎಂಬ ಅಂಕಣವನ್ನು ಬರೆದರು. 1946ರಲ್ಲಿ 'ಮಾನವನ ಪಾಡು', 'ಅವರು ತಾಯ್ನಾಡಿಗಾಗಿ ಹೋರಾಡಿದರು' ಇತ್ಯಾದಿ ಅವರ ಕೃತಿಗಳು ಪ್ರಕಟವಾದುವು.

ನಾಡು ಮತ್ತು ನುಡಿಗೆ ಅಪಾರ ಸೇವೆ ಸಲ್ಲಿಸಿದ ಶೊಲೊಖೊವ್ ಈಚೆಗೆ 1984ರಲ್ಲಿ ನಿಧನರಾದರು.

ಶೊಲೊಖೊವ್‌ರವರ ಮೇರುಕೃತಿ ಎನಿಸಿಕೊಂಡಿರುವ 'ಡೋನ್ ನದಿಯ ದಡದಲ್ಲಿ' ಕಾದಂಬರಿಯನ್ನು ಸಾಹಿತ್ಯಾಸಕ್ತರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. 1650 ಪುಟಗಳ ಈ ಬೃಹತ್ ಕಾದಂಬರಿಯನ್ನು ಕಲ್ಪನಾಲೋಕದಿಂದ ವಾಸ್ತವಿಕತೆಯ ಧರೆಗಿಳಿಸಲು ಅವರಿಗೆ 15 ವರ್ಷ ಹಿಡಿದುವು. ಇದರಲ್ಲಿ ಸೋವಿಯತ್ ಒಕ್ಕೂಟದ ಡೋನ್ ನದಿ ಹರಿಯುವ ಪ್ರದೇಶದ ಕೇವಲ ಹತ್ತು ವರ್ಷಗಳ ಇತಿಹಾಸವಿದೆ. ಕಾದಂಬರಿಯ ಅವಧಿ 1914ರಲ್ಲಿ ಪ್ರಾರಂಭವಾಗುತ್ತದೆ; 1924ರಲ್ಲಿ ಕೊನೆಗೊಳ್ಳುತ್ತದೆ.

'ಬರಹಗಾರ ತನ್ನ ನೆತ್ತರಿನಿಂದ ಬರೆದ ಸಾಹಿತ್ಯ ಮಾತ್ರ ನನಗೆ ಪ್ರಿಯವಾದ್ದು' – ಎಂದಿದ್ದ ಜರ್ಮನ್ ತತ್ವಜ್ಞಾನಿ ನೀತ್ಸೆ. 'ಡೋನ್ ನಿಧಾನವಾಗಿ ಹರಿಯುತ್ತಿದೆ' ಕೂಡ ನೆತ್ತರಿನಿಂದ ರಚಿತವಾದ ಕಾದಂಬರಿ. ಆದ್ದರಿಂದಲೇ ಪ್ರಕೃತಿ ಮತ್ತು ಮಾನವನ ಸಹಚರ್ಯದ ಹಿನ್ನೆಲೆಯಲ್ಲಿ ಜನಾಕ್ರೋಶದ ಜ್ವಾಲಾಮುಖಿ ಅಲ್ಲಿ ಸಿಡಿದೆದ್ದಿದೆ.

ಕಾದಂಬರಿಯ ಪ್ರಾರಂಭದಲ್ಲಿಯೇ ಮೆಲಖೊವ್ ಕುಟುಂಬದ ಸವಿಸ್ತಾರವಾದ ವರ್ಣನೆಯಿದೆ. ಕಥಾನಾಯಕ ಗ್ರಿಗೋರಿ ಮೆಲಖೊವ್ ಅರುಣೋದಯದಲ್ಲಿ ಯೌವನ ಸಹಜ ಕನಸುಗಳನ್ನು ಕಾಣುತ್ತಿರುವ ಒಬ್ಬ ಯುವಕ. ಕಪ್ಪಾದ ಮುಂಗುರುಳು, ಕೊಕ್ಕೆಯಂತಿರುವ ಮೂಗು ಹಾಗೂ ಕಂದುಮಿಶ್ರಿತ ಗುಲಾಬಿ ಬಣ್ಣದ ಚರ್ಮದಡಿಯಲ್ಲಿರುವ ಅಗಲವಾದ ಮತ್ತು ಮೊನಚಾದ ಕೆನ್ನೆಯ ಎಲುಬುಗಳಿಂದಾಗಿ ಈ ಯುವಕ ನಿಸರ್ಗ ಪ್ರದತ್ತ ಸೌಂದರ್ಯದ ಒಡೆಯನಾಗಿದ್ದಾನೆ.

ಆದರೆ, ಕಾದಂಬರಿಯ ಕೊನೆಯಲ್ಲಿ ಮೆಲಖೊವ್ ಕುಟುಂಬದ ಮನೆಯ ಮುಂದೆ, ಎಲ್ಲರೂ ನೋಡುವಂತೆ, ಚಿಂದಿಯಾದ ಕೊಳಕು ಮೇಲಂಗಿಯನ್ನು ಹಾಕಿಕೊಂಡು ಕಳಂಕಿತವಾದ ಮತ್ತು ವಿಕಾರವಾದ ಆಕೃತಿಯೊಂದು ಕಾಣಿಸಿಕೊಳ್ಳುತ್ತದೆ. ಅದು ಬಯಲುಪ್ರದೇಶದ ಒಂಟಿ ತೋಳವನ್ನು ಹೋಲುತ್ತದೆ. ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಕಾಣಿಸಿಕೊಳ್ಳುವ ಕಥಾನಾಯಕನೀಗ ಮುದುಕನಾಗಿದ್ದಾನೆ. ಕಾಲಗತಿ ಅವನ ಸರ್ವಸ್ವವನ್ನೂ ಕಸಿದುಕೊಂಡಿದೆ. ಇದೆಲ್ಲ ಕೇವಲ ಹತ್ತು ವರ್ಷಗಳ ಅವಧಿಯಲ್ಲಿ!

ತಂದೆ ಪ್ಯೆಂತಲಿ, ತಾಯಿ ಇಲಿನಿಚ್ನಾ, ಅಣ್ಣ ಪ್ಯೋತ್ರ, ಅತ್ತಿಗೆ ದಾರ್ಯಾ ಮತ್ತು ಕೃಶಾಂಗಿಯೂ ವಿಶಾಲಾಕ್ಷಿಯೂ ಆಗಿದ್ದ ತಂಗಿ ದುನ್ಯಾ ಎಂಬವರಿದ್ದ ಚಿಕ್ಕ ಕುಟುಂಬದಲ್ಲಿ ಬೆಳೆದ ಗ್ರಿಗೋರಿ ತನ್ನ ಸಾಹಸ, ಮಾನವೀಯತೆ, ಆತ್ಮಗೌರವ ಹಾಗೂ ಸ್ವಾತಂತ್ರ್ಯ ಪ್ರೇಮದಿಂದಾಗಿ ಗ್ರಾಮಸಮಸ್ತರ ಪ್ರೀತಿಗೆ ಪಾತ್ರನಾಗುತ್ತಾನೆ. ಅಕ್ಸಿನ್ಯಾ ಅವನ ನೆರೆಮನೆಯಲ್ಲಿ ವಾಸಿಸುತ್ತಿದ್ದ ಸ್ಟಿಫಾನ್ ಎಂಬವನ ಹೆಂಡತಿ. ಸ್ಟಿಫಾನ್ ಸೈನಿಕ ಶಿಬಿರದಲ್ಲಿ ತರಬೇತಿ ಪಡೆಯಲು ಹೋದಾಗ, ಗ್ರಿಗೋರಿ ಆ ಚೆಲುವೆಯ ಪ್ರೇಮಪಾಶದಲ್ಲಿ ಸಿಲುಕಿಕೊಳ್ಳುತ್ತಾನೆ. ಈ ಕಾಮದ ಬಲೆ ಎಷ್ಟು ಜಟಿಲವಾಗಿತ್ತೆಂದರೆ ಅದರಿಂದ ತಪ್ಪಿಸಿಕೊಳ್ಳಲು ಕೊನೆಯ ತನಕವೂ ಅವನಿಗೆ ಸಾಧ್ಯವಾಗುವುದಿಲ್ಲ. ತಂದೆಯ ಒತ್ತಾಯಕ್ಕೆ ಮಣಿದು ನತಾಲ್ಯಾ ಎಂಬುವಳನ್ನು ಮದುವೆಯಾಗುತ್ತಾನೆ. ನತಾಲ್ಯಾ ಪ್ರೇಮ, ವಾತ್ಸಲ್ಯ, ಕರ್ತವ್ಯನಿಷ್ಠೆ ಮತ್ತು ಪಾತಿವ್ರತ್ಯದ ಪ್ರತೀಕವಾಗಿದ್ದಾಳೆ. ಅಕ್ಸಿನ್ಯಾ ಮತ್ತು ನತಾಲ್ಯಾ ದಕ್ಷಿಣ ಮತ್ತು ಉತ್ತರ ಧ್ರುವಗಳಿದ್ದಂತೆ. ಗ್ರಿಗೋರಿಯ ಮನದಾಳದಲ್ಲಿ ಪ್ರಜ್ವಲಿಸುತ್ತಿದ್ದ ಕಾಮಾಗ್ನಿ ಅವನನ್ನು ಅಕ್ಸಿನ್ಯಾಳತ್ತ ತಳ್ಳುತ್ತದೆ. ಈ ಅನೈತಿಕ ಸಂಬಂಧವನ್ನರಿತ ತಂದೆ ಅವನನ್ನು ಮನೆಯಿಂದ ಹೊರಹಾಕುತ್ತಾನೆ. ಅಕ್ಸಿನ್ಯಾ ಗಂಡನನ್ನು ತೊರೆದು ಅವನೊಂದಿಗೆ ಪಲಾಯನಗೈಯುತ್ತಾಳೆ. ಅವರಿಬ್ಬರೂ ಯಾಗೊಡ್ನಿಯಿ ಎಂಬಲ್ಲಿದ್ದ ಕೃಷಿ ಕ್ಷೇತ್ರದಲ್ಲಿ ಕೆಲಸಕ್ಕೆ ಸೇರುತ್ತಾರೆ.

ಪ್ರಥಮ ವಿಶ್ವಯುದ್ಧದ ಕಿಡಿಗಳು ಭುಗಿಲೇಳುತ್ತವೆ. ರಷ್ಯಾದ ಸೇನೆ ಜರ್ಮನ್ನರ ವಿರುದ್ಧ ಹೋರಾಡಲು ತೆರಳುತ್ತದೆ. ಗ್ರಿಗೋರಿ ಆ ಯುದ್ಧದಲ್ಲಿ ಭಾಗವಹಿಸುತ್ತಾನೆ. ತನ್ನ ಶೌರ್ಯಪ್ರದರ್ಶನದಿಂದಾಗಿ ಸಂತ ಜಾರ್ಜ್‌ರ ಪದಕಗಳನ್ನು ಪಡೆಯುತ್ತಾನೆ. ಕ್ಯಾಪ್ಟನ್ ಆಗಿ ಬಡ್ತಿ ಹೊಂದುತ್ತಾನೆ. ಅವನ ಉಪೇಕ್ಷೆಗೆ ಗುರಿಯಾದ ನತಾಲ್ಯಾ ತವರು ಮನೆಗೆ ಹೋಗುತ್ತಾಳೆ. ಅಲ್ಲಿ ಅನುಭವಿಸಬೇಕಾಗಿ ಬಂದ ಜಿಗುಪ್ಸೆಯಿಂದಾಗಿ ನೊಂದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ಶೊಲೊಖೊವ್ ಆ ದೃಶ್ಯವನ್ನು ಹೀಗೆ ವರ್ಣಿಸಿದ್ದಾರೆ – 'ಅಡಿಗೆ ಮನೆಯ ಬಾಗಿಲು ತೆರೆಯಿತು. ಉಕಿನಿಚ್ನಾ ಒಳಗೆ ಬಂದಳು. ಇಗರ್ಜಿಯಿಂದ ಘಂಟಾನಾದ ಕೇಳಿಸುತ್ತಿತ್ತು. ಡೋನ್‌ನಲ್ಲಿ ಹಿಮಖಂಡಗಳು ಪ್ರವಹಿಸುತ್ತಿದ್ದುದರಿಂದ ವಿಚಿತ್ರವಾದ ಶಬ್ದ ಕೇಳಿಸುತ್ತಿತ್ತು. ಪ್ರಸನ್ನ, ಪ್ರವಾಹಮಯ ಮತ್ತು ಉನ್ಮತ್ತ ಡೋನ್ ತನ್ನ ಬಂಧನಗಳನ್ನು ಸಮುದ್ರದಲ್ಲಿ ಮುಳುಗಿಸಲು ಓಡುತ್ತಿತ್ತು ಹಾಗೂ ಈ ಮನೆಯಲ್ಲಿ...

ಆತ್ಮಹತ್ಯೆಯ ಪ್ರಯತ್ನದಲ್ಲಿ ವಿಫಲಳಾದ ನತಾಲ್ಯಾ ರಕ್ತದ ಮಡುವಿನಲ್ಲಿ ತೊಯ್ದು ಹೋಗಿ ಮೂರ್ಛಿತಳಾಗಿ ಬಿದ್ದಿದ್ದಳು.'

ಮಾವ ಪೈಂತಲಿಯ ಆಗ್ರಹಕ್ಕೆ ಮಣಿದು ನತಾಲ್ಯಾ ಪುನಃ ಗ್ರಿಗೋರಿಯ ಮನೆಗೆ ಬರುತ್ತಾಳೆ. ಅಕ್ಸಿನ್ಯಾ ಯಾಗೊಡ್ನಿಯಿಯ ಮಾಲೀಕನ ಮಗನಾದ ಲಿಸ್ತನಿಸ್ಕಿ ಎಂಬವನ ಕಾಮಲಾಲಸೆಗೆ ಬಲಿಯಾಗುತ್ತಾಳೆ. ಕಾದಂಬರಿಯ ಮೊದಲ ಭಾಗದ ಅಂತ್ಯದಲ್ಲಿ ಗ್ರಿಗೋರಿ ತುಂಬಾ ಹತಾಶನಾಗುತ್ತಾನೆ. ಅಕ್ಸಿನ್ಯಾ ಬಗೆದ ದ್ರೋಹ ಬೆಳಕಿಗೆ ಬಂದಾಗ ಅವಳನ್ನು ತೊರೆದು, ನತಾಲ್ಯಾಳನ್ನು ಸ್ವೀಕರಿಸುತ್ತಾನೆ. ನತಾಲ್ಯಾಳ ತಪಸ್ಸು ಗೆಲ್ಲುತ್ತದೆ. ಆದರೆ, ಈ ಗೆಲುವು ಕ್ಷಣಿಕ.

ಚಕ್ರವರ್ತಿ ಝಾರ್ ಪದಚ್ಯುತರಾಗುತ್ತಾರೆ. ಕೆರೆನ್‌ಸ್ಕಿಯವರ ಮುಖಂಡತ್ವದಲ್ಲಿ ತಾತ್ಕಾಲಿಕ ಸರಕಾರ ಅಸ್ತಿತ್ವಕ್ಕೆ ಬರುತ್ತದೆ. ಲೆನಿನರ ಮುಖಂಡತ್ವ ಹೊಂದಿದ್ದ ಬೊಲ್ಶೆವಿಕ್ ಪಕ್ಷ ಅಧಿಕಾರವನ್ನು ವಶಪಡಿಸಿಕೊಳ್ಳುತ್ತದೆ. ಗ್ರಿಗೋರಿ ಬೋಲ್ಶೆವಿಕರ ಕ್ರಾಂತಿಕಾರಿ ಕೆಂಪು ಸೇನೆಯನ್ನು ಸೇರುತ್ತಾನೆ. ಅವನ ಮಾನಸಿಕ ತುಮುಲವನ್ನು ಶೊಲೊಖೊವ್ ಹೀಗೆ ವರ್ಣಿಸಿದ್ದಾರೆ:

'ಇಜವಾರಿನ್ ಸಿಗರೇಟು ಸೇದುತ್ತ ಕೇಳಿದ : 'ನೀನು ಬೋಲ್ಶೆವಿಕರನ್ನು ಬೆಂಬಲಿಸಲು ನಿರ್ಧರಿಸಿದ್ದೀಯೆಂದು ಕೇಳಿದೆ.'

'ಹೆಚ್ಚುಕಮ್ಮಿ' — ಗ್ರಿಗೋರಿ ಸಮ್ಮತಿ ಸೂಚಿಸಿದ.

'ಪ್ರಾಮಾಣಿಕವಾಗಿಯೆ ? ಅಥವಾ ಕೊಸೆಕರ ಪ್ರೀತಿಯನ್ನು ಗಳಿಸಲು ಡೊಲ್ಗೊವ್ ಮಾಡಿದಂತೆಯೇ ?'

'ನನಗೆ ಯಾರ ಪ್ರೀತಿಯನ್ನೂ ಗಳಿಸುವ ಗೊಡವೆಯೇ ಇಲ್ಲ. ನಾನು ಕೇವಲ ಒಂದು ದಾರಿಯನ್ನು ಹುಡುಕುತ್ತಿದ್ದೇನೆ.'

'ನೀನು ಕತ್ತಲೆ ತುಂಬಿರುವ ಓಣಿಯಲ್ಲಿ ನುಗ್ಗಿದ್ದಿ. ನಿನಗೆ ದಾರಿ ಸಿಗಲಾರದು.'

ಇಜವಾರಿನ್‌ನ ಭವಿಷ್ಯವಾಣಿ ನಿಜವಾಗುತ್ತದೆ. ಗ್ರಿಗೋರಿಗೆ ಕೊನೆಯತನಕ ಸ್ಥಿರವಾದ ದಾರಿಯೇ ಕಾಣುವುದಿಲ್ಲ.

ಮೊದಲ ಸುತ್ತಿನಲ್ಲಿ ಬೋಲ್ಶೆವಿಕರನ್ನು ಬೆಂಬಲಿಸಿದ ಗ್ರಿಗೋರಿ ಮನೆಗೆ ಮರಳುತ್ತಾನೆ. ಅವನ ಗ್ರಾಮದ ಕೊಸೆಕರೆಲ್ಲ ಕ್ರಾಂತಿಯನ್ನು ವಿರೋಧಿಸುತ್ತಿದ್ದಾರೆ. ಅವನ ಬಂಧುಬಾಂಧವರು ಸಹ ಕ್ರಾಂತಿಯ ಕಡುವೈರಿಗಳಾಗಿದ್ದಾರೆ. ಊರಿನ ಕ್ರಾಂತಿವಿರೋಧಿ ವಾತಾವರಣದಿಂದಾಗಿ ಪ್ರಚೋದಿತನಾದ ಗ್ರಿಗೋರಿ, ಕ್ರಾಂತಿವಿರೋಧಿ ಕೊಸೆಕರ ಸೇನೆಯನ್ನು ಸೇರುತ್ತಾನೆ. ಮುಂದಿನ ನಾಲ್ಕು ವರ್ಷಗಳಲ್ಲಿ ಕ್ರಾಂತಿಕಾರಿ ಕೆಂಪುಸೇನೆ ಮತ್ತು

ಕ್ರಾಂತಿವಿರೋಧಿ ಕೊಸೆಕರ ನಡುವೆ ಭೀಕರವಾದ ಗೃಹಕಲಹ ನಡೆಯುತ್ತದೆ. ಸಾವಿರಾರು ಮಂದಿ ಸಾವನ್ನಪ್ಪುತ್ತಾರೆ.

ಡೋನ್ ಪ್ರದೇಶದ ರಾಜಕೀಯ ಪರಿಸ್ಥಿತಿ ಅನಿಶ್ಚಿತವಾಗುತ್ತದೆ. ಜಯಾಪಜಯಗಳು ಕ್ಷಣಿಕವಾಗುತ್ತವೆ. ಉದಾಹರಣೆಗೆ : 'ಉತ್ತರದಲ್ಲಿದ್ದ ಉಸ್ತ್ ಮೆಡ್ವಿಟಸ್ಕಾಯಾ ಎಂಬ ಗ್ರಾಮ ಅನೇಕ ಸಲ ಕೈಬದಲಾಯಿಸಿತು. ಪ್ರಾರಂಭದಲ್ಲಿ ಅದನ್ನು ಕೆಂಪುಸೇನೆಯ ಒಂದು ತುಕಡಿ ವಶಪಡಿಸಿಕೊಂಡಿತು. ಆದರೆ, ಒಂದು ತಾಸಿನೊಳಗೆ ಅಲೆಕ್ಸಿಯೇವ್ ಎಂಬವನ ಮುಖಂಡತ್ವದಲ್ಲಿದ್ದ ಬಿಳಿಭಟರ ತುಕಡಿ ಕೆಂಪು ಕೊಸೆಕರನ್ನು ಗ್ರಾಮದಿಂದ ಬಿಡಿಸಿತು. ಬೀದಿಗಳಲ್ಲಿ ಈ ಬಿಳಿಭಟರ ಬೆಂಬಲಿಗರ ಬೆನ್ನೆಲುಬುಗಳಂತಿದ್ದ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳ ನಿಲುವಂಗಿಗಳು ಬಿದ್ದುಕೊಂಡಿದ್ದುವು. ಪಶ್ಚಿಮದ ರಣರಂಗದಲ್ಲಿ ಕಂಡಂತೆ ಮೃತ್ಯು ಎಲ್ಲೆಲ್ಲೂ ನಲಿದಾಡುತ್ತಿತ್ತು. ಜನ ಈ ಮೃತ್ಯುಲೀಲೆಯನ್ನು ಕಂಡು ಭಯಭೀತ ರಾಗಿದ್ದರು. ಆತ್ಮರಕ್ಷಣೆ ಮಾಡಿಕೊಳ್ಳುವ ಏಕೈಕ ಬಯಕೆ ಅವರ ಮನಸ್ಸುಗಳಲ್ಲಿ ತುಂಬಿತ್ತು' – ಎಂದಿದ್ದಾರೆ ಶೊಲೊಖೊವ್. ವಿದೇಶಿ ಸರಕಾರಗಳು ಪ್ರತಿ–ಕ್ರಾಂತಿಕಾರಿಗಳಿಗೆ ನೆರವು ನೀಡಿದ್ದರಿಂದ ಈ ಗೃಹಕಲಹ ವರ್ಷಗಟ್ಟಲೆ ಮುಂದುವರಿಯಿತು. ಮಾರಣಹೋಮ ಅವ್ಯಾಹತವಾಗಿ ನಡೆಯಿತು.

ಈ ಘೋರವಾದ ಗೃಹಕಲಹದಿಂದಾಗಿ ಸಹೋದರರ ರಕ್ತದ ಹೊಳೆ ಡೋನ್ ಪ್ರದೇಶದಲ್ಲೆಲ್ಲ ಹರಿದುವು. ದೇಶ ಇಂಥ ದಾರುಣಸ್ಥಿತಿಯಲ್ಲಿದ್ದಾಗ ಗ್ರಿಗೋರಿ ಪುನಃ ತನ್ನ ಹಳೆಯ ಆಟವನ್ನು ಪ್ರಾರಂಭಿಸುತ್ತಾನೆ. ಅಕ್ಸಿನ್ಯಾಳನ್ನು ಡೋನಿನ ದಡದಲ್ಲಿ ಭೇಟಿಯಾಗಿ 'ನಿನ್ನನ್ನು ನನ್ನ ಹೃದಯದಿಂದ ಕೀಳಲು ನನ್ನಿಂದಾಗಲಿಲ್ಲ. ನನ್ನ ಮಕ್ಕಳು ದೊಡ್ಡವರಾಗು ತ್ತಿದ್ದಾರೆ. ನಾನೂ ಸಹ ಇಳಿವಯಸ್ಸಿನವನಾಗಿದ್ದೇನೆ. ಆದರೂ, ನಿನ್ನ ನೆನಪು ನನ್ನನ್ನು ಕಾಡುತ್ತಿದೆ. ನಿದ್ರೆಯಲ್ಲಿಯೂ ನಿನ್ನನ್ನೇ ಕಾಣುತ್ತೇನೆ. ಈಗಲೂ ನಿನ್ನನ್ನು ಪ್ರೀತಿಸುತ್ತೇನೆ' ಎಂದು ಅವಳಲ್ಲಿ ಪ್ರೇಮನಿವೇದನೆ ಮಾಡಿಕೊಳ್ಳುತ್ತಾನೆ. ಅವರ ಪ್ರೇಮ ಪುನಃ ಚಿಗುರುತ್ತದೆ.

ಗೃಹಕಲಹ ಕೊನೆಯ ಹಂತವನ್ನು ತಲುಪುತ್ತದೆ. ಅಕ್ಸಿನ್ಯಾ ಮತ್ತು ಗ್ರಿಗೋರಿಯರ ಕಾಮಕೇಳಿ ಬಯಲಾದಾಗ, ನತಾಲ್ಯಾ ಜಿಗುಪ್ಸೆ ತಾಳುತ್ತಾಳೆ. ಗರ್ಭಪಾತ ಮಾಡಿಸಿಕೊಂಡು ಸಾವನ್ನಪ್ಪುತ್ತಾಳೆ. ಕ್ರಾಂತಿವಿರೋಧಿಗಳು ಸೋಲುತ್ತಾರೆ. ಗ್ರಿಗೋರಿ ತಿರುಗೊಮ್ಮೆ ಕೆಂಪುಸೇನೆಯನ್ನು ಸೇರುತ್ತಾನೆ. ಕೊಪಿಲೊವ್ ಎಂಬ ಕ್ರಾಂತಿವಿರೋಧಿ ಸೈನ್ಯಾಧಿಕಾರಿ ಹೇಳಿರುವಂತೆ, 'ಈ ವ್ಯವಹಾರದಲ್ಲಿ ಗ್ರಿಗೊರಿಯ ಸ್ಥಾನ ಯಾವುದೆಂದೇ ಅರ್ಥವಾಗುತ್ತಿಲ್ಲ. ಒಂದು ಕಡೆ ನೀನು ಹಳೆಯ ಶಾಸನಪದ್ಧತಿಗಾಗಿ ಹೋರಾಡುತ್ತಿದ್ದೀ. ಆದರೆ ಮತ್ತೊಂದು ಕಡೆ ನಿನ್ನ ವಿಚಾರಗಳು ಬೋಲ್ಶೆವಿಕರ ವಿಚಾರಗಳನ್ನೇ ಹೋಲುತ್ತಿವೆ.'

ಗ್ರಿಗೋರಿ ಅಕ್ಸಿನ್ಯಾಳೊಂದಿಗೆ ಅಲೆಯುತ್ತಾನೆ. ಅವನ ತಂಗಿ ದುನ್ಯಾ ಕ್ರಾಂತಿಕಾರಿ

ಮಿಶಾಕೊಶಿವ್ಯಾ ಎಂಬುವನನ್ನು ಮದುವೆಯಾಗುತ್ತಾಳೆ. ಅಣ್ಣ ಪ್ಯೋತ್ರ ಯುದ್ಧದಲ್ಲಿ ಮಡಿಯುತ್ತಾನೆ. ಅತ್ತಿಗೆ ದಾರ್ಯಾ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಪ್ಯೆಂತಲ ಮತ್ತು ಇಲಿನಿಚ್ನಾ ವೃದ್ಧಾಪ್ಯದಿಂದಾಗಿ ನಿಧನರಾಗುತ್ತಾರೆ.

ಗ್ರಿಗೋರಿ ಕೆಂಪುಸೈನ್ಯದಿಂದ ಬಿಡುಗಡೆ ಹೊಂದಿ ಮರಳುತ್ತಾನೆ. ಆದರೆ, ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುವ ಕ್ರಾಂತಿಕಾರಿ ಸರಕಾರ ಅವನನ್ನು ನಂಬುವುದಿಲ್ಲ. ಅವನ ಕ್ರಾಂತಿವಿರೋಧಿ ಚಟವಟಿಕೆಗಳಿಗಾಗಿ ಅವನನ್ನು ವಿಚಾರಣೆಗೆ ಗುರಿಪಡಿಸಲು ಸಿದ್ಧತೆ ನಡೆಯುತ್ತದೆ. ಆತ ಫೋಮಿನ್ ಎಂಬಾತನ ಗುಂಪನ್ನು ಸೇರುತ್ತಾನೆ.

'ಸರಿ, ಆದರೂ ನಾವೀಗ ಕಮ್ಯುನಿಸ್ಟರನ್ನು ಸದೆಬಡಿಯಬೇಕು. ಗ್ರಿಗೋರಿ, ನೀನು ನಮ್ಮ ಜೊತೆ ಬರುತ್ತೀಯಲ್ಲ?' – ಫೋಮಿನ್ ಕೇಳುತ್ತಾನೆ.

'ನಾನು ನಿಮ್ಮ ಗುಂಪಿಗೆ ಸೇರುತ್ತೇನೆ. ನಾನು ಬೇರೆಲ್ಲಿಗೂ ಹೋಗುವಂತಿಲ್ಲ.' ಮುಂದೊಂದು ದಿನ ಫೋಮಿನ್‌ನ ಸೋವಿಯೆತ್ ವಿರೋಧಿ ಗುಂಪು ನಿರ್ನಾಮವಾಗುತ್ತದೆ. ಗ್ರಿಗೋರಿ ಅದು ಸಂಪೂರ್ಣ ನಿರ್ನಾಮವಾಗುವ ಮೊದಲೇ ಅದರಿಂದ ತಪ್ಪಿಸಿಕೊಂಡು, ಅಕ್ಸಿನ್ಯಾಳ ಗುಡಿಸಲಿಗೆ ಬಂದು, ಬಾಗಿಲು ತಟ್ಟುತ್ತಾನೆ.

'ನಿನ್ನನ್ನು ಕರಕೊಂಡು ಹೋಗಲು ಬಂದಿದ್ದೇನೆ. ಬರುತ್ತೀಯಲ್ಲ?'

'ಎಲ್ಲಿಗೆ?'

'ನನ್ನ ಜೊತೆ. ನಾನು ಫೋಮಿನ್‌ನ ಗುಂಪನ್ನು ಬಿಟ್ಟಿದ್ದೇನೆ. ದಕ್ಷಿಣದತ್ತ ಹೋಗುವ. ನಾನೇನಾದರೂ ಕೆಲಸ ಮಾಡುತ್ತೇನೆ. ಯಾವ ಕೆಲಸವನ್ನೂ ಮಾಡಬಲ್ಲೆ. ನನ್ನ ಕೈಗಳು ದುಡಿಯಲು ಆತುರವಾಗಿವೆ. ಹೋರಾಟದಲ್ಲಿ ನನಗೀಗ ಆಸಕ್ತಿಯಿಲ್ಲ....'

ಆದರೆ, ಅಕ್ಸಿನ್ಯಾ ಕಾವಲುಗಾರರ ಗುಂಡಿಗೆ ಬಲಿಯಾಗುತ್ತಾಳೆ.

ಗ್ರಿಗೋರಿ ಕಾಡಿನಲ್ಲಿ ಅವಿತುಕೊಂಡು ಕೆಲದಿನಗಳನ್ನು ಕಳೆಯುತ್ತಾನೆ. ಆಗ ಅವನ ಮನಸ್ಸಿನಲ್ಲಿ, 'ನನ್ನ ಪರಿಚಿತ ಸ್ಥಳಗಳನ್ನು ನೋಡಬೇಕು. ಮಕ್ಕಳನ್ನು ನೋಡಿ ಸಂತಸ ಪಡಬೇಕು. ಕಣ್ಣುಗಳಿಗೆ ಹಬ್ಬದೌತಣ ಉಣಿಸಬೇಕು. ನಂತರ ಸತ್ತರೂ ಚಿಂತೆಯಿಲ್ಲ' – ಎಂಬ ಭಾವನೆ ಪ್ರಬಲವಾಗಿ ಬೆಳೆಯುತ್ತದೆ.

'ಗ್ರಿಗೋರಿ ಡೋನಿನ ದಡವನ್ನು ತಲುಪಿದ. ತನ್ನ ರ್‍ಯಾಫಲ್ ಮತ್ತು ಪಿಸ್ತೂಲನ್ನು ನದಿಯಲ್ಲಿ ಎಸೆದ. ಗುಂಡುಗಳಿದ್ದ ಪೆಟ್ಟಿಗೆಯನ್ನೂ ಎಸೆದ. ಕೈಗಳನ್ನು ಸರಿಯಾಗಿ ತೊಳೆದುಕೊಂಡ. ಮೇಲಂಗಿಗೆ ಒರಸಿದ.'

ಡೋನ್ ನದಿಯನ್ನು ದಾಟಿ ತಾರತಾರಸ್ಕ ಗ್ರಾಮವನ್ನು ಪ್ರವೇಶಿಸಿದ. ತನ್ನ ಮನೆಯತ್ತ

ನಡೆದ. ಮನೆಯಿಂದ ತುಸು ದೂರದಲ್ಲಿದ್ದಾಗಲೇ, ಮಗ ಮಿಶಾನನ್ನು ನೋಡಿದ. 'ಕಂದಾ... ಕಂದಾ...' ಮಗನನ್ನು ಚುಂಬಿಸುತ್ತ ಗ್ರಿಗೋರಿ ಕೇಳಿದ : 'ನೀವೆಲ್ಲ ಹೇಗಿದ್ದೀರಿ ? ಅತ್ತೆ ಮತ್ತು ಪೊಲ್ಯುಶ್ಕಾ ಹೇಗಿದ್ದಾರೆ ? ಚೆನ್ನಾಗಿದ್ದಾರಾ ?'

ತಂದೆಯತ್ತ ನೋಡದೆಯೇ ಮಿಶಾ ಉತ್ತರ ಕೊಟ್ಟ: 'ದುನ್ಯಾ ಅತ್ತೆ ಚೆನ್ನಾಗಿದ್ದಾರೆ. ಪೊಲ್ಯುಶ್ಕಾ (ಗ್ರಿಗೊರಿಯ ಮಗಳು) ಕಳೆದ ಬೇಸಗೆಯಲ್ಲಿ ಡಿಫ್ತೀರಿಯಾದಿಂದಾಗಿ ತೀರಿಕೊಂಡಳು. ಮಾವ ಮಿಶಾ ಈಗ ಸೈನಿಕರಾಗಿದ್ದಾರೆ....'

ಮಗನನ್ನು ಎತ್ತಿಕೊಂಡು ಗ್ರಿಗೋರಿ ತನ್ನ ಮನೆಯ ಗೇಟಿನ ಮುಂದೆ ನಿಂತುಕೊಂಡ.

ಪ್ರಪಂಚದಲ್ಲೀಗ ಅವನ ಮಟ್ಟಿಗೆ ಮಗ ಮಾತ್ರ ಉಳಿದಿದ್ದ. ಉದಾಸೀನನಾಗಿದ್ದ ಸೂರ್ಯನ ಕೆಳಗೆ ಮಿಂಚುತ್ತಿದ್ದ ವಿಶಾಲ ಪ್ರಪಂಚ ಮತ್ತು ಭೂಮಿಯ ಜೊತೆ ಇನ್ನೂ ಸ್ವಲ್ಪ ಸಮಯ ಅವನನ್ನು ಬೆಸೆದಿದ್ದ ಸಂಪರ್ಕಸೇತುವೆಯಂತಿದ್ದ ಈ ಕಂದನನ್ನು ಮಾತ್ರ ಬದುಕು ಉಳಿಸಿತ್ತು.

ಈ ಪ್ರಧಾನ ಕತೆಗೆ ಆನುಷಂಗಿಕವಾಗಿ ಲಿಸ್ತನಿಸ್ಕಿ, ದುನ್ಯಾ, ದಾರ್ಯ, ಮಿಶಾಕೊಶಿ ವ್ಯಾ, ಬಂಚಕ್ ಮತ್ತು ಅನ್ನಾ ಮೊದಲಾದವರ ಕಥೆಗಳನ್ನು ಶೊಲೊಖೊವ್ ಬರೆದಿದ್ದಾರೆ. ಈ ಎಲ್ಲ ಉಪಕತೆಗಳು ಪ್ರಧಾನ ಕಥಾವಾಹಿನಿಯೊಂದಿಗೆ ವಿಲೀನವಾಗುತ್ತವೆ.

ತಮ್ಮ ಈ ಕಾದಂಬರಿಯನ್ನು ಸುಖಾಂತಗೊಳಿಸಲು ಶೊಲೊಖೊವ್‌ರ ಮಿತ್ರರು ಅವರಿಗೆ ಸಲಹೆ ನೀಡಿದ್ದರು. ಆದರೆ, ಶೊಲೊಖೊವ್‌ರ ಸತ್ಯನಿಷ್ಠೆ ಮತ್ತು ಕಲಾನಿಷ್ಠೆ ಯಾವುದೇ ತರದ ರಾಜೀಮನೋಭಾವವನ್ನು ಒಪ್ಪಲು ನಿರಾಕರಿಸಿತು. ಈ ಕಾದಂಬರಿ ಸುಖಾಂತ್ಯ ಪಡೆದಿದ್ದರೆ ತನ್ನೆಲ್ಲ ನೈಜತೆಯನ್ನು ಕಳೆದುಕೊಳ್ಳುತ್ತಿತ್ತು, ಕೇವಲ ಪ್ರಹಸನ ವಾಗುತ್ತಿತ್ತು. ಕಥಾನಾಯಕನ ಬದುಕಿನಲ್ಲಿ ದುರಂತದ ಕರಿನೆರಳು ಸತತ ಕಾಣಿಸಿಕೊಳ್ಳುತ್ತದೆ. ವಿರೋಧಾಭಾಸಗಳ ಆಗರವಾಗಿರುವ ಅವನ ಬದುಕು ದುರಂತದಲ್ಲಿಯೇ ಕೊನೆಗೊಳ್ಳುವುದು ಔಚಿತ್ಯಪೂರ್ಣ. ಆದ್ದರಿಂದ ಶೊಲೊಖೊವ್ ಅತ್ಯಂತ ಸಹಜತೆಯೊಂದಿಗೆ ಅದನ್ನು ದುರಂತದಲ್ಲಿಯೇ ಕೊನೆಗಾಣಿಸಿದ್ದಾರೆ.

ಕ್ರಾಂತಿ ಮತ್ತು ಪ್ರತಿಕ್ರಾಂತಿಗಳ ನಡುವೆ – ಎರಡನ್ನೂ ಮೆಟ್ಟನಿಲ್ಲುವಂಥ ಮೂರನೆಯ ದಾರಿ ಯಾವುದಾದರೂ ಇದೆಯೆ ? ಮೂರನೆಯ ದಾರಿಯ ವ್ಯಾವಹಾರಿಕ ದೃಢೀಕರಣಕ್ಕಾಗಿ ನಡೆದ ದಂಗೆ ಕೊಸೆಕರನ್ನು ಸರ್ವನಾಶದತ್ತ ಕೊಂಡೊಯ್ಯುತ್ತದೆ. 'ಕ್ರಾಂತಿ ಮತ್ತು ಪ್ರತಿಕ್ರಾಂತಿ ಎರಡೂ ನನಗೆ ಸಾಕಾಗಿವೆ. ಅವೆಲ್ಲ ನರಕಕ್ಕೆ ಹೋಗಲಿ' – ಎನ್ನುತ್ತಾನೆ ಗ್ರಿಗೋರಿ. ಕಾಲ್ಪನಿಕವಾದ ಮೂರನೆಯ ದಾರಿಯ ಶೋಧ ಗ್ರಿಗೋರಿ ಮಾಡಿದ ದೊಡ್ಡ ಪ್ರಮಾದವೆಂದರೆ ಅತಿಶಯೋಕ್ತಿಯಾಗದು.

ಈ ಕಾದಂಬರಿಯಲ್ಲಿ ಶೊಲೊಖೊವ್ ಬದುಕಿನ ಮೂರನೆಯ ಮಾರ್ಗವನ್ನು ಖಡಾಖಂಡಿತವಾಗಿ, ಸಾರ್ವಕಾಲಿಕವಾಗಿ ಖಂಡಿಸಿದ್ದಾರೆ. ಒಳ್ಳೆಯದು ಮತ್ತು ಕೆಟ್ಟದರ, ಕ್ರಾಂತಿ ಮತ್ತು ಪ್ರತಿಕ್ರಾಂತಿಯ, ಪ್ರಗತಿಶೀಲ ಮತ್ತು ಪ್ರತಿಗಾಮಿ ಸಿದ್ಧಾಂತಗಳ ನಡುವಣ ಮೂರನೆಯ ಮಾರ್ಗವನ್ನು ಖಂಡಿಸುವ ಕೃತಿ ಇದಾಗಿದೆ.

ಗ್ರಿಗೋರಿಯ ಸಂಕುಚಿತ ದೃಷ್ಟಿಕೋನ ಈ ಕಾದಂಬರಿಯ ದುರಂತ ವಸ್ತುವಿನ್ಯಾಸದ ಆಳ ಮತ್ತು ವ್ಯಾಪಕತೆಯನ್ನು ಹೆಚ್ಚಿಸಿದೆ. ಅವನ ಮಟ್ಟಿಗೆ ದೇಶ ಮತ್ತು ಜನರೆಂದರೆ ಅವನ ಕೊಸೆಕ ದೇಶ ಮತ್ತು ಜನಾಂಗವಾಗಿತ್ತು. ಈ ಪರಿಧಿಯನ್ನು ದಾಟಿ ವಿಶಾಲವಾದ ಪ್ರಪಂಚವನ್ನು ವೀಕ್ಷಿಸುವ ಸಂದರ್ಭವೇ ಅವನಿಗೆ ಲಭಿಸಿರಲಿಲ್ಲ. 'ಜನ' ರೆಂದರೆ ಸಮಸ್ತ ದೇಶದ ಕಾರ್ಮಿಕವರ್ಗವೆಂಬ ವಿಚಾರವನ್ನರಿಯಲು ಅವನಿಗೆ ಸಾಧ್ಯವಾಗಲಿಲ್ಲ. ಸಮಾಜವಾದಿ ಕ್ರಾಂತಿಯ ನೈಜಧ್ಯೇಯಗಳನ್ನರಿಯಲು ಅವನಿಂದಾಗಲಿಲ್ಲ. ಇದೊಂದು ವಿಪರ್ಯಾಸ.

ಈ ಮಹಾನ್ ಕೃತಿಯ ಮೂಲಕ ಶೊಲೊಖೊವ್ 'ಕ್ರಾಂತಿ'ಯೆಂದರೆ, 'ಚಹಾ ಕೂಟ'ವಲ್ಲವೆಂಬುದನ್ನು ಘೋಷಿಸಿದ್ದಾರೆ. ಸಾಮಾನ್ಯವಾಗಿ 'ಕ್ರಾಂತಿ' ಎಂಬ ಶಬ್ದವನ್ನು ಬಹಳ ಹಗುರವಾಗಿ ಉಪಯೋಗಿಸಲಾಗುತ್ತದೆ. ಸಣ್ಣಪುಟ್ಟ ಪರಿವರ್ತನೆಗಳನ್ನು ಸಹ ಸಾಮಾನ್ಯವಾಗಿ 'ಕ್ರಾಂತಿ'ಯೆಂದೇ ಕರೆಯಲಾಗುತ್ತಿದೆ. ಗ್ರಿಗೋರಿ ಸಹ ಕ್ರಾಂತಿಯೆಂದರೆ, ಜೀವನವನ್ನು ಮತ್ತಷ್ಟು ಸುಲಭಗೊಳಿಸುವ ಮಾರ್ಗವೆಂದೇ ತಿಳಿಯುತ್ತಾನೆ. ಕ್ರಾಂತಿಯಿಂದಾಗಿ ಕೊಸೆಕರು ತಮ್ಮ ವಿಶೇಷಾಧಿಕಾರಗಳನ್ನು ಮತ್ತು ಜಾತಿಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬಹುದೆಂಬ ಭೀತಿಯಿಂದಾಗಿ ಆತ ಕ್ರಾಂತಿಯನ್ನು ವಿರೋಧಿಸುತ್ತಾನೆ, ಕ್ರಾಂತಿಕಾರಿ ಶಿಸ್ತನ್ನು ಮನ್ನಿಸಲು ನಿರಾಕರಿಸುತ್ತಾನೆ. ಕ್ರಾಂತಿಯೆಂದರೆ ಸಮಾಜದ ಆಮೂಲಾಗ್ರ ಪರಿವರ್ತನೆ, ಉತ್ಪಾದನಾ ಸಾಧನಗಳ ಮತ್ತು ಭೂಮಿಯ ಸಾಮೂಹಿಕ ಒಡೆತನದ ಸ್ಥಾಪನೆ. ಕ್ರಾಂತಿಯೆಂದರೆ, ವ್ಯಕ್ತಿಯ ಯೋಗ್ಯತೆಯನ್ನು ಮಾತ್ರ ಪರಿಗಣಿಸಿ ಅವನಿಗೆ ಸೂಕ್ತವಾದ ಸ್ಥಾನಮಾನವನ್ನು ಕಲ್ಪಿಸಿ ಕೊಡುವುದು. ಕ್ರಾಂತಿಯೆಂದರೆ ಶೋಷಣೆಯಿಲ್ಲದ ಸಮಾಜದ ಸ್ಥಾಪನೆ ಎಂಬುದನ್ನು ಶೊಲೊಖೊವ್ ಎತ್ತಿಹಿಡಿಯುತ್ತಾರೆ.

ಗ್ರಿಗೋರಿ ತನ್ನನ್ನು ಮೆಚ್ಚಿ ಮದುವೆಯಾದ ನತಾಲ್ಯಾ ಮತ್ತು ತನ್ನನ್ನು ಅಪಾರವಾಗಿ ಪ್ರೀತಿಸಿದ್ದ ಅಕ್ಸಿನ್ಯಾಳಿಗೆ ಅನ್ಯಾಯವನ್ನೇ ಬಗೆದಿದ್ದಾನೆ. ಅಕ್ಸಿನ್ಯಾ ಅವನಿಗಾಗಿ ಎಲ್ಲವನ್ನೂ ತ್ಯಜಿಸುತ್ತಾಳೆ. ಆದರೆ, ಅವಳಿಗಾಗಿ ಅವನು ಏನನ್ನೂ ಮಾಡುವುದಿಲ್ಲ. ನತಾಲ್ಯಾ ಆದರ್ಶ ಗೃಹಿಣಿಯಾಗಿ ಬಾಳುತ್ತಾಳೆ. ಅವಳ ಪಾತಿವ್ರತ್ಯ ಮತ್ತು ಪತಿಪ್ರೇಮ ಅದ್ವಿತೀಯವಾದ್ದು. ಅಕ್ಸಿನ್ಯಾಳ ಮರಣದೊಂದಿಗೆ, ಅವಳ ಸರ್ವಸ್ವವೂ ಮಣ್ಣುಗೂಡುತ್ತದೆ. ಆದರೆ, ನತಾಲ್ಯಾ ತನ್ನ ಮಗನ ಮೂಲಕವಾದರೂ ಬದುಕುಳಿಯುತ್ತಾಳೆ. ಸತ್ ಮತ್ತು ಅಸತ್ ಪ್ರವೃತ್ತಿಗಳ ನಡುವೆ ಸಮರ ನಡೆದು, ಕೊನೆಗೊಮ್ಮೆ ಅಸತ್ ಪ್ರವೃತ್ತಿ ಮೃತ್ಯುವಶವಾಗುತ್ತದೆ. ಸಾತ್ವಿಕ ಪ್ರವೃತ್ತಿಯ ಒಂದು ಕುಡಿಯಾದರೂ ಬದುಕಿ ತನ್ನ ಅಮರತ್ವವನ್ನು ಘೋಷಿಸುತ್ತದೆ.

ಕಾಲಗತಿಯ ಮುಂದೆ ಯಾರೂ ಹೋರಾಡಲಾರರು. ಯುಗಧರ್ಮ ನಮ್ಮನ್ನು ಕೈಬೀಸಿ ಕರೆಯುತ್ತದೆ. ಈ ಮರ್ಮವನ್ನರಿತವ ಮಾತ್ರ ಬದುಕಬಲ್ಲ. ವಾಸಿಲಿ ಲಿಟ್ವಿನೊವ್ ಬರೆದಿರುವಂತೆ – 'ಪ್ರೇಮ, ನಂಬಿಕೆ ಮತ್ತು ಹೋರಾಟವನ್ನು ಕುರಿತು ಸಂಪೂರ್ಣವಾಗಿ ತಿಳಿಯಬಯಸಿದವರಿಗಾಗಿ ಶೊಲೊಖೊವ್ ಈ ಕೃತಿಯನ್ನು ರಚಿಸಿದ್ದಾರೆ. ಬದುಕಿನ ಅರ್ಥವನ್ನು ತಿಳಿಯಬಯಸುವವರಿಗೆ ಈ ಕೃತಿಯನ್ನು ರಚಿಸಿದ್ದಾರೆ.'

ರಷ್ಯಾದ ಜನಜೀವನದಲ್ಲಿ ಅಭೂತಪೂರ್ವ ಬಿಕ್ಕಟ್ಟು ತಲೆದೋರಿದ್ದ ಹಾಗೂ ಎರಡು ಸಿದ್ಧಾಂತಗಳ ನಡುವೆ ಭೀಕರ ಘರ್ಷಣೆ ನಡೆದುದರಿಂದಾಗಿ ಸಮಾಜದ ಅಡಿಪಾಯವೇ ತತ್ತರಿಸಿದ್ದ ಹಾಗೂ ಅರಾಜಕತೆಯಿಂದಾಗಿ ಅನಿಶ್ಚಿತತೆಯ ಕಾರ್ಮೋಡ ಕವಿದಿದ್ದ ಕಾಲಘಟ್ಟವನ್ನು ಶೊಲೊಖೊವ್ ಈ ಕಾದಂಬರಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಆ ಕಾರಣ ಈ ಕಾದಂಬರಿ ಇತಿಹಾಸದಂತೆ ನೀರಸವಾಗಿ ಪ್ರಪಂಚದ ಕೆಲವೇ ವಿದ್ವಾಂಸರ ಹಾಗೂ ಬುದ್ಧಿಜೀವಿಗಳ ಮೆಚ್ಚುಗೆಯನ್ನು ಗಳಿಸಬಹುದಿತ್ತು. ಅದು ಜನಸಾಮಾನ್ಯರ ಹೃದಯಗಳನ್ನು ಸೂರೆಗೊಳ್ಳುವಂತಿರಲಿಲ್ಲ. ಆದರೆ ಇಂಥ ನೀರಸ ಕಥಾವಸ್ತುವನ್ನು ಸಹ ತನ್ನ ಕಲಾವೈಖರಿಯಿಂದಾಗಿ ಶೊಲೊಖೊವ್ ರಸಸಾಗರವನ್ನಾಗಿ ಪರಿವರ್ತಿಸಿದ್ದಾರೆ.

ಪಾಶ್ಚಾತ್ಯ ವಿಮರ್ಶಕರೊಬ್ಬರು ತಾಲ್‌ಸ್ತೊಯ್‌ರವರ 'ವಾರ್ ಅಂಡ್ ಪೀಸ್' ಅನ್ನು ಕುರಿತು 'ಯುವಕನೊಬ್ಬ ತನ್ನ ಬದುಕಿನಲ್ಲಿಯೇ ಪ್ರಪ್ರಥಮವಾಗಿ ನಡೆಸಿದ ಹೋರಾಟದ ಮತ್ತು ಪಡೆದ ಸಿದ್ಧಾಂತದ ಗುಂಗು, ಯುವತಿಯು ಜೀವನದಲ್ಲಿ ಮೊತ್ತ ಮೊದಲು ಅನುಭವಿಸಿದ ಪ್ರೇಮದ ಸವಿ, ಹಾಗೂ ಮುದುಕನಿಗಾದ ಸಾವಿನ ಅನುಭವ ಆ ಕಾದಂಬರಿಯಲ್ಲಿ ಅದ್ವಿತೀಯವಾಗಿ ಮೂಡಿಬಂದಿದೆ' – ಎಂದಿದ್ದಾರೆ. ಈ ಕಾದಂಬರಿಯಲ್ಲಿಯೂ ಈ ಎಲ್ಲ ಸನ್ನಿವೇಶಗಳು ಜೀವಂತವಾಗಿ ಮೂಡಿಬಂದಿವೆ.

'ಸಾಹಿತ್ಯದ ಮಹೋನ್ನತೆ ಅದು ಪ್ರತಿಬಿಂಬಿಸುವ ಸತ್ಯದಲ್ಲಿದೆ' ಎಂದಿದ್ದಾನೆ, ಮ್ಯಾಕ್ಸಿಂ ಗೋರ್ಕಿ. ಸತ್ಯ ಏಕಪಕ್ಷೀಯವಾಗಿರಲಾರದು. ತಮ್ಮ ಶತ್ರುವಿಗೆ ಮಸಿಬಳೆದು ಅವನನ್ನು ಒಬ್ಬ ಮೂರ್ಖನನ್ನಾಗಿ ಚಿತ್ರಿಸುವ ಲೇಖಕರ ಹವ್ಯಾಸವನ್ನು ಗೋರ್ಕಿ ಖಂಡಿಸಿದ್ದರು. ಶೊಲೊಖೊವ್ ಈ ಕಾದಂಬರಿಯಲ್ಲಿ ಕೇವಲ ಕಲಾರಾಧಕನ ಮತ್ತು ಸತ್ಯಶೋಧಕನ ದೃಷ್ಟಿಯಿಂದಲೇ ತಮ್ಮೆಲ್ಲ ಪಾತ್ರಗಳನ್ನು ಕಂಡಿದ್ದಾರೆ. ಕ್ರಾಂತಿಯ ಶತ್ರುಗಳ ಚರಿತ್ರ ಚಿತ್ರಣದಲ್ಲಿಯೂ ಅವರು ತಮ್ಮ ಪಾತ್ರಗಳ ಕಪ್ಪು ಬಿಳುಪು ಮುಖಗಳನ್ನೆಲ್ಲ ನ್ಯಾಯೋಚಿತವಾಗಿ ಚಿತ್ರಿಸಿದ್ದಾರೆ. ಮಾನವೀಯ ಭಾವನೆಯ ಆಳಕ್ಕಿಳಿದಿದ್ದಾರೆ. ಅವರಲ್ಲಿ ಸಹಜತೆ ತುಂಬಿದ್ದಾರೆ. ಓದುಗರನ್ನು ಆ ಭಾವನೆಯ ಮಡುವಿನಲ್ಲಿ ಮುಳುಗಿಸಿ, ಅವರ ಆತ್ಮ ತನ್ನೆಲ್ಲ ಕಟುತ್ವವನ್ನು ಕಳೆದುಕೊಳ್ಳುವಂತೆ ಮಾಡಿದ್ದಾರೆ.

'ನಮ್ಮೆಲ್ಲ ಸಾಹಿತ್ಯದಲ್ಲಿ ಒಂದು ಜೀವಂತವಾದ ಐತಿಹಾಸಿಕ ಪೂರ್ವಾಪರ

ಸಂಬಂಧವಿದೆ. ಹಳೆಯದರಿಂದ ಹೊಸತು ಹೊರಹೊಮ್ಮುತ್ತದೆ. ನಮ್ಮ ಸಾಹಿತ್ಯದಲ್ಲಿ ಯಾವುದೂ ಪವಾಡದಂತೆ ಏಕಾಏಕಿ ಸಂಭವಿಸುವುದಿಲ್ಲ' ಎಂದಿದ್ದರು, ರಷ್ಯಾದ ಖ್ಯಾತ ವಿಮರ್ಶಕ ಬೆಲಿನ್‌ಸ್ಕಿ. ಪ್ರಸಕ್ತ ಕಾದಂಬರಿ ತೋರಿಕೆಗೆ ಹತ್ತು ವರ್ಷಗಳ ಕಾಲಾವಧಿಗೆ ಸೀಮಿತವಾಗಿದ್ದರೂ, ಶೊಲೊಖೊವ್ ಕೊಸೆಕ ಜನಾಂಗದ ಸಂಪೂರ್ಣ ಇತಿಹಾಸದ ಪಕ್ಷಿನೋಟವನ್ನು ಇದರಲ್ಲಿ ಸಮೀಕರಿಸಲು ಯಶಸ್ವಿಯಾಗಿದ್ದಾರೆ. ಡೋನ್ ಪ್ರದೇಶದ ಕತೆಯಾದರೂ, ಇದರಲ್ಲಿ ಸಮಸ್ತ ರಷ್ಯಾದ ಕತೆ ಅಡಕವಾಗಿದೆ. ಕಥಾನಾಯಕ ಯುವಕನಾದರೂ, ವಿಭಿನ್ನ ವಯಸ್ಸಿನ ಪಾತ್ರಗಳನ್ನು ಸೃಷ್ಟಿಸಿ, ಲೇಖಕರು ಸಮಗ್ರ ಜೀವನದ ಪೂರ್ಣ ಚಿತ್ರವನ್ನು ಓದುಗರ ಮುಂದಿಟ್ಟಿದ್ದಾರೆ. ಮಾನವ ಚಾರಿತ್ರ್ಯದ ಎಳೆಎಳೆಯನ್ನೂ ಸೂಕ್ಷ್ಮದರ್ಶಕದ ಮೂಲಕ ಪರಿಶೀಲಿಸಿದ್ದಾರೆ. ಆದ್ದರಿಂದಲೇ ಈ ಕಾದಂಬರಿ 'ಕೊಸೆಕ್ ಜನಾಂಗದ ಆಧುನಿಕ ಪುರಾಣ'ವೆಂದು ಕರೆಸಿಕೊಂಡಿದೆ. ಆದಾಗ್ಯೂ ಇದು ಕೇವಲ ಒಂದು ಜನಾಂಗದ, ದೇಶದ, ಸಮಾಜವಾದದ ಪ್ರಥಮಚರಣದ ಅಥವಾ ಸಿದ್ಧಾಂತದ ಪ್ರಚಾರಕ್ಕಾಗಿ ಬರೆದ ಕತೆಯೆಂಬ ಭಾವನೆ ಎಳ್ಳಷ್ಟೂ ಬಾರದಂತೆ ಲೇಖಕರು ಜಾಗ್ರತೆ ವಹಿಸಿದ್ದಾರೆ. ಆದ್ದರಿಂದಲೇ ಇದು ಎಲ್ಲ ವರ್ಗಗಳನ್ನು ಮತ್ತು ಬದುಕಿನ ಎಲ್ಲ ಅಂತಸ್ತುಗಳನ್ನು ಚಿತ್ರಿಸುವಂಥ ಕತೆಯಾಗಿದೆ.

ಶೃಂಗಾರ, ಕರುಣೆ, ವಾತ್ಸಲ್ಯ, ಹಾಸ್ಯ, ಬೀಭತ್ಸ ಇತ್ಯಾದಿ ಭಾವನೆಗಳಿಗೆ ಶಬ್ದರೂಪ ಕೊಡುವಾಗ ಶೊಲೊಖೊವ್ ತೋರಿಸಿರುವ ಜಾಣ್ಮೆ ಹಾಗೂ ತನ್ಮಯತೆ ಈ ಕಾದಂಬರಿಯ ಪುಟಪುಟಗಳಲ್ಲಿಯೂ ಎದ್ದು ಕಾಣುತ್ತಿವೆ.

ಯುದ್ಧಗಳಿಂದುಂಟಾದ ಬೀಭತ್ಸ ವಾತಾವರಣವನ್ನು ಹಿತಮಿತವಾದ ಶೈಲಿಯಲ್ಲಿ ಶೊಲೊಖೊವ್ ವರ್ಣಿಸಿದ್ದಾರೆ : 'ತಮ್ಮ ಹೃದಯಗಳಲ್ಲಿ ಯುದ್ಧ ಬಿತ್ತಿದ್ದ ದುಃಖದ ಬೀಜಗಳನ್ನು ಪ್ರತಿಯೊಬ್ಬ ಬೆಳೆಸುತ್ತಿದ್ದ. ಆ ಬಿತ್ತನೆಯ ಸ್ಪಷ್ಟ ಚಿಹ್ನೆಗಳು ಪ್ರತಿಮುಖದಲ್ಲಿಯೂ ತೋರುತ್ತಿದ್ದುವು. ಕೊಸೆಕ್ ನವಯುವಕರು ಕಡಿಯಲ್ಪಟ್ಟ ಹುಲ್ಲಿನಂತೆ ಬಗ್ಗುತ್ತಿದ್ದರು ಹಾಗೂ ಒಣಗಿಹೋಗುತ್ತಿದ್ದರು.' 'ಅನೇಕ ಕೊಸೆಕರ ಎಲುಬುಗಳು ಗೆಲಿಸಿಯಾ, ಯುಕೊನಾ ಪೂರ್ವಪ್ರಶಿಯಾ, ರುಮಾನಿಯಾ ಇತ್ಯಾದಿ ದೇಶಗಳ ಮೈದಾನಗಳಲ್ಲಿ ಕೊಳೆತು ನಾರುತ್ತಿದ್ದವು. ಅವರ ಹೆಣಗಳ ಮೇಲೆ ಸಂಗಾತಿಗಳು ಮಣ್ಣು ಹಾಕಿದ್ದರು. ಆ ಮಣ್ಣಿನಲ್ಲೀಗ ಗಿಡಗಳು ಚಿಗುರಿದ್ದುವು. ಹಿಮದ ಹೊದಿಕೆ ಅದನ್ನು ಮುಚ್ಚಿತ್ತು. ಕೊಸೆಕ ಹೆಂಗಸರು ತಮ್ಮ ಉದ್ದವಾದ ಕೂದಲನ್ನು ಬಿಚ್ಚಿ, ಗ್ರಾಮದ ಮೂಲೆಗೆ ಎಷ್ಟೋ ಸಲ ಹೋದರೂ, ಕೈಗಳಿಂದ ಕಣ್ಣನ್ನು ಮರೆಮಾಡಿಕೊಂಡು ಹೋದವರ ದಾರಿಯನ್ನು ದುರುಗುಟ್ಟುವ ಪ್ರಯತ್ನ ಮಾಡಿದರೂ, ಅವರ ಪ್ರಿಯಕರರು ಮರಳಿ ಬರುವಂತಿಲ್ಲ.' ಅನ್ನಾ ಮತ್ತು ನತಾಲ್ಯಾಳ ಸಾವಿನಿಂದಾಗಿ ಓದುಗರ ಹೃದಯ ಕರಗುತ್ತದೆ. ಪೊಲ್ಯುಶ್ಕಾ ಮತ್ತು ಮಿಶಾನ ಮಾತುಗಳನ್ನು

ಕೇಳಿದಾಗ ಓದುಗರು ಆ ವಾತ್ಸಲ್ಯದಲ್ಲಿ ತೇಲುತ್ತಾರೆ. ಅಲ್ಲಲ್ಲಿ ಹರಿದಿರುವ ತಿಳಿಹಾಸ್ಯದ ಧಾಟಿ ಮನಸ್ಸಿಗೆ ಅಮೃತಸಿಂಚನ ಮಾಡುತ್ತದೆ.

ಪ್ರಕೃತಿ ಮತ್ತು ಮಾನವನ ಅದ್ಭುತ ಸಾಹಚರ್ಯ ಈ ಕಾದಂಬರಿಯಲ್ಲಿದೆ. ಪಾತ್ರಗಳ ಸುಖದುಃಖದಲ್ಲಿ ಡೋನ್ ನದಿ ಪಾಲ್ಗೊಳ್ಳುತ್ತದೆ ; ಕಥಾಪ್ರವಾಹ ಅದರ ದಡಗಳಲ್ಲಿಯೇ ಹರಿಯುತ್ತದೆ. ಪ್ರಕೃತಿ ಮತ್ತು ಮಾನವನ ತಾದಾತ್ಮ್ಯ ಕಾದಂಬರಿಗೆ ಸೌಂದರ್ಯ ನೀಡಿದೆ. ಉದಾಹರಣೆಗೆ, ಕಥಾನಾಯಕನ ಪ್ರಥಮ ಪರಿಚಯವನ್ನು ಮಾಡಿಕೊಡುವ ಸನ್ನಿವೇಶವನ್ನಿಲ್ಲಿ ಸ್ಮರಿಸಬಹುದು. 'ಡೋನ್ ನದಿ ತೀರದಲ್ಲಿ ನಿರ್ಮಲವಾದ ಬೆಳದಿಂಗಳು ಹರಡಿಕೊಂಡಿತ್ತು. ವಾತಾವರಣದಲ್ಲಿ ಮಂಜಿನ ಕಣಗಳು ತೇಲುತ್ತಿದ್ದವು. ಆಗಸದಲ್ಲಿ ನಕ್ಷತ್ರಗಳು ಮಿನುಗುತ್ತಿದ್ದುವು. ನದಿಯಂಚಿನಲ್ಲಿ ಕುದುರೆ ಜಾಗ್ರತೆಯಿಂದ ಮುಂದಿನ ಕಾಲುಗಳನ್ನು ಕೆಳಗಿಟ್ಟಿತು. ದೂರದಿಂದ ಬಾತುಕೋಳಿಯ ಕೂಂ-ಕೂಂ ಶಬ್ದ ಕೇಳಿಬಂತು. ಒಂದು ದೊಡ್ಡ ಮೀನು ಚಿಕ್ಕ ಮೀನನ್ನು ಬೆನ್ನಟ್ಟಿಕೊಂಡು ಹೋಗುತ್ತಿತ್ತು. ಅದರ ಬಾಲ ನೀರಿನಲ್ಲಿ ಫಟಫಟ ಶಬ್ದಮಾಡುತ್ತಿತ್ತು.

'ಕುದುರೆ ನೀರು ಕುಡಿಯತೊಡಗಿತು. ಗ್ರಿಗೋರಿ ಆಕಾಶದತ್ತ ನೋಡಿದ. ಅಲ್ಲಿ ಉಷೆಯ ಪ್ರಥಮ ನೋಟ ಕಾಣಿಸಿತು.'

ವಿಷಯದ ಮಹತ್ವಕ್ಕೆ ಒಪ್ಪುವಂಥ ಶಬ್ದಗಳನ್ನೇ ಉಪಯೋಗಿಸಿರುವ ಶೊಲೊಖೊವ್ ಶಬ್ದಗಳ ಚಯನದಲ್ಲಿ ನಿಷ್ಣಾತರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಾದಂಬರಿ ಚಿತ್ರಿಸುವ ಹತ್ತು ವರ್ಷಗಳ ಪ್ರತಿನಿಮಿಷವನ್ನು ನಾವು ಗ್ರಿಗೋರಿಯ ಸಂಗಡ ಕಳೆಯುತ್ತೇವೆ. ಕಡಿವಾಣದಿಂದಾಗಿ ನಮ್ಮ ಬೆರಳುಗಳಿಗಾದ ಗಾಯಗಳ ವೇದನೆಯನ್ನೂ, ನಮ್ಮ ತಲೆಗಳ ಮೇಲೆ ಬೀಸುವ ಗಾಳಿಯನ್ನು ಸೀಳುವ ಖಡ್ಗದ ಝಣತ್ಕಾರವನ್ನೂ, ನೆಗೆಯುತ್ತಿರುವ ಗೊರಸುಗಳ ಹುಚ್ಚುಗೊಂದಲದಲ್ಲಿ ಓಡುತ್ತಿರುವ ಕಂದು ಬೂದಿ ಬಣ್ಣದ ಇಳಿಜಾರು ಪ್ರದೇಶಗಳನ್ನೂ ನಾವು ಜೀವಂತವಾಗಿ ಅನುಭವಿಸುತ್ತೇವೆ. ಶೊಲೊಖೊವ್‌ರವರ ಸುಲಲಿತ ಶೈಲಿ ನಮ್ಮನ್ನು ಗಾಢಪ್ರಭಾವ ಬೀರಿ ಅನಾಯಾಸವಾಗಿ ಓದಿಸಿಕೊಂಡು ಹೋಗುತ್ತದೆ. ಕಾದಂಬರಿಯ ಸನ್ನಿವೇಶಗಳು ಚಿರಕಾಲ ನಮ್ಮ ನೆನಪಿನಲ್ಲಿ ಉಳಿದಿರುತ್ತವೆ.

ಆಲ್ಬೇರ್ ಕಾಮ್ಯೂ : 'ದಿ ಸ್ಟ್ರೇಂಜರ್'

ಪೋಲಂಕಿ ರಾಮಮೂರ್ತಿ

ಇಂದಿಗೆ 41 ವರ್ಷದ ಹಿಂದೆ ಹೊರಬಿದ್ದ ಆಲ್ಬೇರ್ ಕಾಮ್ಯೂವಿನ The Stranger, The Outsider – 'ಪರದೇಶಿ', 'ಅನ್ಯ' (ಡಿ. ಎ. ಶಂಕರ್ ಅವರ ಅನುವಾದ) – ಎಂಬ ಕಾದಂಬರಿ 20ನೆಯ ಶತಮಾನದ ಸಾಹಿತ್ಯದಲ್ಲೇ ಒಂದು ಮೈಲಿಗಲ್ಲಾಯಿತು. ಅದರ ಬಗ್ಗೆ ಬರದ ವಿಮರ್ಶೆಗಳಂತೂ ಅದನ್ನು ಒಂದು ಕಲೆಯ ಪವಾಡವೆಂದವು. ಈ ದೇಶದಲ್ಲಂತೂ ಪ್ರಗತಿಗಾಮಿಗಳೆನಿಸಿಕೊಳ್ಳಲು ಹೊರಟ ಕ್ರಾಂತಿಕಾರಿ ಸೋಗಿನ ಜನ ಕಾಮ್ಯೂ, ಕಾಫ್ಕ, ಕ್ಯರ್ಕಿಗಾರ್ ಎಂಬ ಮೂವರು ಕಕಾರಿಗಳನ್ನು ಈ ಶತಮಾನದ ತ್ರಿಮೂರ್ತಿಗಳೆಂತಲೇ ಕೀರ್ತನೆ ಮಾಡುತ್ತಾ ಬಂದರು. ಈಗಲೂ ನಮ್ಮಲ್ಲಿ ಇಂಗ್ಲಿಷ್ ಸಾಹಿತ್ಯದ ಪರಿಶ್ರಮಗಳಿಗಂತೂ ಕಾಮ್ಯೂವಿನ ಹೆಸರುದುರಿಸುವುದು ಅವರ ಮಟ್ಟಿಗೆ ಮುಕ್ತ ಮನಸ್ಸಿನ ಪ್ರಬುದ್ಧತೆಯ ಲಕ್ಷಣವಾಗಿಬಿಟ್ಟಿದೆ.

ಈಗ, ಸುಮಾರು ಅರ್ಧ ಶತಮಾನದ ನಂತರ, ಕಾಮ್ಯೂವಿನ 'ಪರದೇಶಿ' ಪುನರ್ ವಿಮರ್ಶೆ, ನಮ್ಮ ಮಟ್ಟಿಗಾದರೂ ತುರ್ತಾಗಿ ನಡೆಯಬೇಕಾಗಿದೆ. ಮರ್ಸೊ ಆಲ್ಜೀರಿಯಾದ ಫ್ರೆಂಚ್. ಅವನು ಒಬ್ಬ ಅರಬನನ್ನು ಕೊಲ್ಲುತ್ತಾನೆ. ಅದರಿಂದ ಅವನನ್ನು ಗಲ್ಲಿಗೆ ಹಾಕಲು ತೀರ್ಮಾನವಾಗುತ್ತದೆ. ಅವನು ಸಾಯುವುದಕ್ಕೆ ಮುಂಚೆ ತನ್ನ ಈ ಕಥೆಯನ್ನು ಹೇಳುತ್ತಾನೆ.

ಮರ್ಸೊ ಆಲ್ಜೀರಿಯಾದ ಫ್ರೆಂಚನಾದ್ದರಿಂದ ಅವನು ಫ್ರಾನ್ಸಿನ ಫ್ರೆಂಚನಲ್ಲ – ಆಲ್ಜೀರಿಯಾದ, ಆಫ್ರಿಕಾದ ಫ್ರೆಂಚ. 'ನಮ್ಮ ಜನ'ವಲ್ಲ; ಪರಕೀಯ, ಪರದೇಶಿ. ಅದರಿಂದ ಅವನ ಬಗ್ಗೆ ಫ್ರಾನ್ಸಿನ ಕಾನೂನು ಒಂದು ಬಗೆಯ ಮಲತಾಯಿಯಾಗುತ್ತದೆ. ಅವನಿಗೆ ವಿಚಾರಣೆ ಇತ್ಯಾದಿಗಳೆಲ್ಲಾ ಯಥಾವತ್ತಾಗಿ ನಡೆಯುತ್ತವಾದರೂ ಅವನ ಮೇಲೆ ರಾಜ್ಯ ಮತ್ತು ಧರ್ಮ ಎರಡೂ ಮೇಲೆರಗಿ, ಅವನನ್ನು ತಮ್ಮ ವ್ಯವಸ್ಥೆಯ ಸಂಚಿನಲ್ಲಿ ಸಿಲುಕಿಸಿ ಗಲ್ಲಿಗೇರಿಸುತ್ತವೆ.

ಮರ್ಸೊ ಒಬ್ಬ ಸಾಮಾನ್ಯ : ನಾವು ಶ್ರೀಸಾಮಾನ್ಯವೆನ್ನುವ ಶ್ರೀ ಇಲ್ಲದ ಸಾಮಾನ್ಯ. ಅವನ ಪಾಡಿಗೆ ಅವನು ಬಾಳುತ್ತಿದ್ದಾನೆ. ನನ್ನ ಪಾಡಿಗೆ ನನ್ನನ್ನು ಬಿಡಿ ಮಾರಾಯ್ರಾ ಎಂದುಕೊಂಡು ಜೀವಿಸುತ್ತಿರುವವ. ಒಳ್ಳೆಯ ಊಟ, ಒಳ್ಳೆಯ ಕುಡಿತ, ಒಳ್ಳೆಯ ಸಿನಿಮಾ, ಒಳ್ಳೆಯ ಈಜು, ಒಳ್ಳೆಯ ವಿಹಾರ – ಇವೆಲ್ಲಾ ಇಷ್ಟ: ನಮ್ಮ ನಿಮ್ಮಂತೆಯೇ ಎನ್ನೋಣವೇ ? ಸರಿ : ಅವನಿಗೆ ಯಾವ ಕಾಂಕ್ಷೆ ಮಹತ್ವಾಕಾಂಕ್ಷೆಗಳಿಲ್ಲ; ಯಾವ ತತ್ವಚಿಂತನೆ, ರಾಜಕೀಯ ಪಂಥಗಳ ಸೋಗಿಲ್ಲ; ಅವನಿಗೆ ದೇವರು ದಿಂಡರ, ಸಂತರ, ಜ್ಞಾನಿಗಳ ಹಂಗಿಲ್ಲ. ಅವನು

ತನ್ನಷ್ಟಕ್ಕೇ, ತನ್ನ ಕೈಗೆ ಸಿಗಬಲ್ಲ ಇಂದ್ರಿಯಗ್ರಾಹ್ಯವಾದ ವಸ್ತುಗಳಲ್ಲೇ ತೊಡಗಿರುವ, ಯಾರ ಗೋಜಿಗೂ ಹೋಗದ ಸಂತೃಪ್ತ.

ಮರ್ಸೋೕವಿನ ಜೀವನದಲ್ಲಿ ಮೂರು ವಿಶೇಷ ಘಟನೆಗಳು ಒದಗುತ್ತವೆ : ಅವು ಮೂರೂ ಸಾವಿನ ಘಟನೆಗಳು. ಒಂದು ತನ್ನ ಮುದಿತಾಯಿ, ವಿಧವೆ, ವೃದ್ಧಾಶ್ರಮದಲ್ಲಿ ಸಾಯುವುದು ; ಎರಡು, ಮರ್ಸೋೕ ಅರಬನನ್ನು ಕೊಲ್ಲುವುದು ; ಮೂರು, ಆ ಅರಬನ ಕೊಲೆಗಾಗಿ ಮರ್ಸೋೕ ತಾನೇ ಮರಣದಂಡನೆಗೆ ಗುರಿಯಾಗಿ ಸಾಯಲು ಅಣಿಯಾಗುವುದು.

ಈಗ ಈ ಮೂರು ಸಾವಿನಂತಹ ಅತ್ಯಂತ ಗಂಭೀರ ಘಟನೆಗಳು ಮರ್ಸೋೕವಿನ ಸಾಮಾನ್ಯ ದೈನಂದಿನದಲ್ಲಿ, ಸರ್ವೇಸಾಧಾರಣ ಜೀವನದಲ್ಲಿ ಯಾವ ಪರಿಣಾಮ ಮಾಡುತ್ತವೆಂಬುದೇ ಈ 'ಪರದೇಶಿ' ಕಥೆಯ ವಸ್ತು ವಿಚಾರ.

ತಾಯಿ ಸತ್ತ ಸುದ್ದಿಯ ತಂತಿ ಬಂದಾಗ ಮರ್ಸೋೕ ಹೊರಡಲನುವಾಗುತ್ತಾನೆ. ದೂರದ ಪ್ರಯಾಣ ಮಾಡಿ ಸುಸ್ತಾಗುತ್ತಾನೆ, ತಾಯಿಯ ಶವದ ಮುಂದೆ ರಾತ್ರಿ ಕಳೆಯುತ್ತಾನೆ. ಕಾಫಿ ಕುಡಿಯುತ್ತಾನೆ, ಸಿಗರೇಟು ಸೇದುತ್ತಾನೆ. ಶವದ ಮನೆಯವ ತಾಯಿಯ ಮುಖ ನೋಡುವೆಯಾ ಎಂದು ಕಾಫಿನ್ನಿನ ಮುಚ್ಚಳ ತೆರೆಯಲು ಹೋದಾಗ ಬೇಡವೆನ್ನುತ್ತಾನೆ. ಶವವನ್ನು ಹೂಳುವ ಸಮಯದಲ್ಲಿ ಬಹಳ ದೂರ ಸೆಕೆಯಲ್ಲಿ ನಡೆದ ಪೆರೆ ಎನ್ನುವ ವೃದ್ಧ ತಾಯಿಯ ಪ್ರಿಯಕರ ಕುಸಿದುಬೀಳುತ್ತಾನೆ, ಚೇತರಿಸಿಕೊಳ್ಳುತ್ತಾನೆ. ಹಿಗೆ ತಾಯಿಯ ಅಂತ್ಯಕ್ರಿಯೆ ನಡೆಯುತ್ತದೆ.

ಎರಡನೆಯ ಸಾವು ಒಬ್ಬ ಅರಬನದು. ಮರ್ಸೋೕಗೆ ರೇಮೋ ಸ್ಯಾಂತೆ ಎಂಬ ಒಬ್ಬ ಆಗಂತುಕ ಸಂಪರ್ಕಿ ಸ್ನೇಹಿತನಿದ್ದಾನೆ. ಅವನಿಗೆ ಒಬ್ಬ ಪ್ರೇಯಸಿ ಇದ್ದಾಳೆ. ಅವಳ ವಿಷಯವಾಗಿ ಅವನಿಗೆ ಅವಳಿಗೆ ಬಹಳ ಜಗಳವಾಗುತ್ತದೆ. ಅವನು ಅವಳನ್ನು ಹೊಡೆದು ಹೊರಗೆ ಹಾಕುತ್ತಾನೆ. ಇದರಿಂದ ರೇಮೋ ಬಂಧಿತನಾಗುತ್ತಾನೆ. ಮರ್ಸೋೕ ಸಾಕ್ಷ್ಯವನ್ನು ಹೇಳಿ ಅವನನ್ನು ಬಿಡಿಸುತ್ತಾನೆ. ಇದರಿಂದ ಮರ್ಸೋೕ ರೇಮೋ ಸ್ನೇಹ ಇನ್ನೂ ಗಟ್ಟಿಗೊಳ್ಳುತ್ತದೆ. ಆದರೆ ಅವನ ಪ್ರೇಯಸಿಯ ಕಾರಣದಿಂದ ಅವನನ್ನು ಅರಬರು ಹೊಂಚುಹಾಕುತ್ತಾರೆ. ಒಮ್ಮೆ ಮರ್ಸೋೕ ರೇಮೋ ಸಮುದ್ರತೀರದ ಮನೆಯಲ್ಲಿ ವಿಹರಿಸುತ್ತಿದ್ದಾಗ ಅರಬರು ಅವರನ್ನು ಅಡ್ಡಹಾಕುತ್ತಾರೆ. ಜಗಳವಾಗುತ್ತದೆ. ರೇಮೋಗೆ ಘಾಯವಾಗುತ್ತದೆ. ಇನ್ನೇನು ಅವರು ಚೂರಿ ತೆಗೆದು ಅವನನ್ನು ಕೊಲ್ಲಬೇಕು ; ಆಗ ಮರ್ಸೋೕ ಪಿಸ್ತೂಲು ತೆಗೆಯುತ್ತಾನೆ. ಅವರು ಓಡಿಹೋಗುತ್ತಾರೆ. ಅನಂತರ ಮರ್ಸೋೕ ವಿಹಾರಕ್ಕಾಗಿ ಒಬ್ಬನೇ ತೀರದಲ್ಲಿ ನಡೆಯುತ್ತಾನೆ. ಅಲ್ಲಿ ಅರಬರು ಮತ್ತೆ ಕಾಣಿಸಿಕೊಳ್ಳುತ್ತಾರೆ. ಒಬ್ಬನು ಚಾಕು ಹೊರತೆಗೆಯುತ್ತಾನೆ. ಮರ್ಸೋೕವಿಗಾದರೆ ಸೆಕೆ, ಬಿಸಿಲಿನ ಉರಿತ, ನೀರಿನ ಝುಳಪಿನ ಇರಿತ ಇವುಗಳಿಂದ ಮುಂಚೆಯೇ ಉದ್ವಿಗ್ನನಾಗಿದ್ದವನಿಗೆ ಸೈರಣೆ ಮೀರುತ್ತದೆ. ಆ ಚಾಕುವಿನ

ಹೊಳಪಿನ ಕಣ್ಣೆರಿತವನ್ನು ಸಹಿಸಲಾರದೆ ಮರ್ಸೋ ಕೇವಲ ಉದ್ವಿಗ್ನತೆಯಿಂದ ತನ್ನ ಕೈಲಿದ್ದ ಪಿಸ್ತೂಲನ್ನು ಹಾರಿಸಿ ಅರಬನನ್ನು ಕೊಲ್ಲುವುದಷ್ಟೇ ಅಲ್ಲ – ಮತ್ತೆ ಮತ್ತೆ ಪಿಸ್ತೂಲಿನ ಗುಂಡುಗಳನ್ನೆಲ್ಲ ಆರಬನ ದೇಹಕ್ಕೆ ಹಾರಿಸುತ್ತಾನೆ. ಇದರಿಂದ ಮರ್ಸೋ ಬಂಧಿತ ನಾಗುತ್ತಾನೆ.

ಇನ್ನು ಮರ್ಸೋವಿನ ವಿಚಾರಣೆ ನಡೆಯುತ್ತದೆ. ಮ್ಯಾಜಿಸ್ಟ್ರೇಟನು ವಿಚಾರಣೆ ಮಾಡುತ್ತಾನೆ. ವಿಚಾರಣೆಯಲ್ಲಿ ಮರ್ಸೋ ಯಾವ ವಿಧವಾದ ದೇಶದ ಅಥವಾ ಧರ್ಮದ ಕಳಕಳಿಯ ಡಾಂಭಿಕತೆಯನ್ನೂ ತೋರುವುದಿಲ್ಲ. ತಾಯಿಯ ಬಗ್ಗೆಯ ಸಾಂಪ್ರದಾಯಿಕ ಪ್ರೀತಿಯನ್ನೂ ತೋರ್ಪಡಿಸುವುದಿಲ್ಲ. ಅವನ ಈ ನಾಸ್ತಿಕತೆ, ರಾಜ್ಯವ್ಯವಸ್ಥೆ ಧರ್ಮ ವ್ಯವಸ್ಥೆಗಳ ಬಗೆಗಿನ ಉಪೇಕ್ಷೆ ಹಾಗೂ ತಾಯಿಯ ಕುರಿತ ಸಾಂಪ್ರದಾಯಿಕ ಪ್ರೇಮ, ಸಾಂಪ್ರದಾಯಿಕ ಸಂವೇದನೆ – ಇವು ಇಲ್ಲದಿರುವುದು ಮ್ಯಾಜಿಸ್ಟ್ರೇಟನಿಗೆ ಕೋಪ ಹುಟ್ಟಿಸುತ್ತದೆ.

ಆಮೇಲೆ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗ ಅವನ ಫಿರ್ಯಾದಿ ವಕೀಲ ಅವನ ಈ ಸಾಂಪ್ರದಾಯಿಕ ಸಂವೇದನಶೂನ್ಯತೆಯನ್ನು ಎತ್ತಿ ತೋರಿಸುತ್ತಾನೆ. ತಾಯಿಯು ಸತ್ತಿರುವಾಗ ಸಿಗರೇಟು ಸೇದುವುದು, ತಾಯಿಯ ಮುಖ ನೋಡದಿರುವುದು, ತಾಯಿಯ ಸಂಸ್ಕಾರದ ಮರುದಿನ ಒಬ್ಬ ಪ್ರೇಯಸಿಯೊಡನೆ ಸಿನೇಮಾಕ್ಕೆ ಹೋಗುವುದು, ಅವಳೊಂದಿಗೆ ವಿಹರಿಸುವುದು – ಇವೆಲ್ಲಾ ಆ ವಕೀಲನ, ಅವನು ಪ್ರತೀಕರಿಸುವ ಸಮಾಜದ; ಕಣ್ಣಿನಲ್ಲಿ ಅಕ್ಷಮ್ಯವಾದ ಅಪರಾಧಗಳಾಗುತ್ತವೆ. ಆ ಸಮಾಜ, ಕೇವಲ ಸಾಂಪ್ರದಾಯಿಕ ವರ್ತನೆಗಳನ್ನೇ ಮೌಲ್ಯವೆಂದು ಪರಿಗಣಿಸುವ, ಆ ವರ್ತನೆಗಳ ಡಾಂಭಿಕತೆಯನ್ನು ನಂಬುವ, ಅದರ ಹಿನ್ನೆಲೆಯಲ್ಲಿರುವ ತೋರುಗಾರಿಕೆಯ ಸಮಾಜ ; ಸುಳ್ಳು, ಡಾಂಭಿಕತೆಯ ಸುರಕ್ಷತೆಯಲ್ಲಿರುವ ಪೊಳ್ಳು ಸಮಾಜ. ಅಂತಹ ಅಪದ್ಧ ಸಮಾಜಕ್ಕೆ ಮರ್ಸೋ ಸೊಪ್ಪು ಹಾಕುವುದಿಲ್ಲ. ಆ ಸಮಾಜವನ್ನು ಮೆಚ್ಚಿಸಲಾಗಲೀ, ಅಥವಾ ಅಂತಹ ಸಮಾಜದಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಲೀ ಮರ್ಸೋ ಸುಳ್ಳು ಹೇಳಲಾರ ; ತನ್ನ ಆತ್ಮವಂಚನೆಯನ್ನು ತಾನು ಮಾಡಿಕೊಳ್ಳಲಾರ. ಇದಕ್ಕಾಗಿ ಮರ್ಸೋ ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಆದರೂ ಮರ್ಸೋ ನೆಮ್ಮದಿಯಿಂದಲೇ, ತನ್ನ ಆತ್ಮಸಂತೃಪ್ತಿಯಿಂದಲೇ ತನ್ನ ಸಾವನ್ನು, ಮರಣದಂಡನೆಯನ್ನು ಅನುಭವಿಸಲು ಸನ್ನದ್ಧನಾಗುತ್ತಾನೆ.

ಇನ್ನು ತನ್ನ ಸಾವಿನ ಬಗ್ಗೆ ಮರ್ಸೋವಿನ ಪ್ರತಿಕ್ರಿಯೆ ಏನು ಎಂಬುದು ಈ ಕಥೆಯ ವಸ್ತುವಿಶೇಷವಾಗಿದೆ.

ಮರ್ಸೋ ತನ್ನ ಮುಹೂರ್ತದಲ್ಲಿ ಈ ಸಮಾಜದ ಮೌಲ್ಯಗಳನ್ನು, ಅದರ ಸಂವೇದನಾ ಸಾಂಪ್ರದಾಯಿಕತೆಯನ್ನು, ಅದರ ಬಾಳಿನ ರೀತಿಯ ಯಾಂತ್ರಿಕತೆಯನ್ನು, ರೂಢಿಯನ್ನು ತನ್ನ ಬಾಳಿನ ಮೌಲ್ಯಗಳೊಂದಿಗೆ, ಸಂವೇದನೆ ಅನುಭವಗಳೊಂದಿಗೆ

ಹೋಲಿಸಿಕೊಂಡಾಗ ಅವನಿಗೆ ಸಮಾಜದ ಠಕ್ಕು, ಡಾಂಭಿಕತೆಗಳ ಅರಿವಾಗುತ್ತದೆ. ಹಾಗೂ ತನ್ನ ಬಾಳಿನ ಪ್ರಾಮಾಣಿಕತೆ, ಸಾರ್ಥಕತೆಗಳ ಸಾಕ್ಷಾತ್ಕಾರವಾಗುತ್ತದೆ. ಅವನು ಸಾಯುವ ಮುಂಚೆ ಪಾದ್ರಿಯೊಬ್ಬನು ಬಂದು ಅವನು ದೇವರನ್ನು ಮೊರೆಹೋಗಲು, ದೇವರನ್ನು ಪ್ರಾರ್ಥಿಸಲು ನಾನಾಬಗೆಯಿಂದ ಪ್ರಚೋದಿಸುತ್ತಿರಲು, ಮರ್ಸೋ ತಾಳ್ಮೆ ಮೀರಿ ಅವನ ಕೊರಳುಪಟ್ಟಿ ಹಿಡಿದು – 'ಈ ನಿನ್ನ ವೇದಾಂತವೆಲ್ಲಾ ಒಂದು ಹೆಣ್ಣಿನ ತಲೆಗೂದಲ ನವುರಿಗೆ ಸಮನಿಲ್ಲ' ಎಂದು ಇಡಿಯ ಆಧ್ಯಾತ್ಮಿಕ ಚಿಂತನೆಗಳ ವೇದಾಂತದೆದುರು ಅನುಭವದ, ಇಂದ್ರಿಯಸುಖದ ಘನತೆಯನ್ನು, ಭೌತಿಕತೆಯನ್ನು, concrete ಅನ್ನು ಎತ್ತಿ ಹಿಡಿಯುತ್ತಾನೆ. ದೇವರು-ದಿಂಡರು, ಪಾಪ-ಪುಣ್ಯ ಎಲ್ಲಾ ಮನಸ್ಸಿನ ಊಹಾಪೋಹ ; ಆದರೆ ಹೆಣ್ಣಿನ ಮುಂಗುರುಳು ಭೌತಿಕ ನಿಜ, ಇಂದ್ರಿಯಗ್ರಾಹ್ಯವಾದ ಘನ ಸತ್ಯ. ಇದೇ ಮರ್ಸೋವಿನ ಅಂತಿಮ ಜೀವಸಾಕ್ಷಾತ್ಕಾರದ ನಿಲುವು.

ಈ ಭೌತಿಕ ನಿಜದ, ಇಂದ್ರಿಯಾನುಭವದ ಘನತೆ, concreteನ ಎದುರು, ಮಾನವ ಸಮಾಜದ ನಾಗರಿಕ ಜೀವನ ತಾನು ಉಣ್ಣುತ್ತಿದ್ದ ಹೋಟೆಲಿನಲ್ಲಿರುವ ರೋಬಟ್ ಹೆಂಗಸಿನ ಯಾಂತ್ರಿಕತೆಯಿಂದ, ಒಂದು ನಿರ್ಜೀವ, ದೈನಂದಿನ, ಯಾಂತ್ರಿಕ ರೂಢಿಯಾಗಿ ಅರ್ಥಹೀನವಾಗುತ್ತದೆ, ಜಿಗುಪ್ಸೆಯಾಗುತ್ತದೆ. ಅಂತಹ ಜೀವಚ್ಛವದ ಬದುಕಿನ ಮುಂದೆ ಮರ್ಸೋವಿನ ಸಾವು ಸಂಪದ್ಭರಿತವಾದ ಸಂವೇದನಾ ವಿಶೇಷ ವಾಗುತ್ತದೆ. ಮರ್ಸೋ ತನ್ನ ಜೀವನಸಾಕ್ಷಾತ್ಕಾರದ ತಿಳಿವಿನಲ್ಲಿ ಇಡಿಯ ಸೃಷ್ಟಿಯ, ವಿಶ್ವದ ಮಹೋಪೇಕ್ಷೆಯಲ್ಲಿ ನಿಲ್ಲುತ್ತಾನೆ. ಆ ಭವ್ಯೋಪೇಕ್ಷೆಯಲ್ಲಿ cosmic indifferenceನಲ್ಲಿ, ಮರ್ಸೋಗೆ ತನ್ನ ಸಮಾಜದ ಜನಜಂಗುಳಿಯ ಚೀತ್ಕಾರ, ಬಯ್ಗುಳು ಒಂದು ವಿಶೇಷ ನೆಮ್ಮದಿಯನ್ನು ತಂದುಕೊಡುತ್ತವೆ. ಏಕೆಂದರೆ, ಇಲ್ಲಿ ಮರ್ಸೋ ಜೀವಂತವಾಗಿ ಸಾಯುತ್ತಿದ್ದಾನೆ, ಅಲ್ಲಿ ಜನಜಂಗುಳಿ ಸತ್ತೇ ಬದುಕುತ್ತಿದೆ. ಮರ್ಸೋವಿನ ಗೆಲುವು ಇರವಿನ ಗೆಲುವು, the existential triumph — ತತ್ವಗಳ, ಹೇಳಿಕೆಗಳ, ಸಿದ್ಧಾಂತಗಳ ಅಸ್ತಿತ್ವದೆದುರು ಜೀವದ ಅಸ್ತಿತ್ವದ ನಿಜ, ಸತ್ಯ.

ಮರ್ಸೋವಿನ ಈ ಎಗ್ಸಿಸ್ಟೆನ್‌ಷಿಯಲ್ ಸಾಫಲ್ಯವೇ, ಭೌತಿಕ ಸಾಕ್ಷಾತ್ಕಾರವೇ ಈ 'ಪರದೇಶಿ' ಕಥೆಯ ಅಭೂತಪೂರ್ವ ಕಲಾಸಾಧನೆ. ಇದಕ್ಕಾಗಿಯೇ 'ಪರದೇಶಿ' 20ನೆಯ ಶತಮಾನದ ಸಾಹಿತ್ಯಸೃಷ್ಟಿಯ ಮೈಲಿಗಲ್ಲಾಗಿ ಹೆಸರು ಮಾಡಿತು ; ಮಾನ್ಯತೆ ಪುರಸ್ಕಾರ ಪಡೆಯಿತಲ್ಲದೆ ಆಲ್ಬೇರ್ ಕಾಮ್ಯೂ ನೋಬೆಲ್ ಪಾರಿತೋಷಕ ಪಡೆಯಲೂ ಕಾರಣವಾಯಿತು.

ಆದರೆ ಈ ಕಥೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ನಮಗೆ ಈ ಕಥೆಯಲ್ಲಿನ ಕೆಲವು ಸರಳೀಕರಣಗಳು ಹೊಳೆಯದಿರಲಾರವು.

ಮರ್ಸೋ ತನ್ನ ಸಮಾಜವನ್ನು ಒಂದು ಕೈಬೀಸಿನಿಂದ ತೊಡೆದು

ಹಾಕುತ್ತಾನಾದರೂ, ಆ ಸಮಾಜದಲ್ಲಿ ಹುಟ್ಟಿ ಬೆಳೆದ ತನ್ನ, ಆ ಮಾನವ ಸಮುದಾಯದಲ್ಲಿ ಒಬ್ಬ ಮಾನವನಾದ ತನ್ನ ಸ್ವಂತಿಕ ಮಾನವವಿಶೇಷ ಸಂವೇದನೆ ಏನು ಎಂಬುದನ್ನು ಸರಿಯಾಗಿ ಗುರುತಿಸಿಕೊಳ್ಳಲಾರದವನಾಗುತ್ತಾನೆ. ನೋಡಿ, ಅವನ ಪಾಲಿಗೆ ಅವನ ಪ್ರೇಯಸಿಯಾದ ಹುಡುಗಿ ಕೇವಲ 'ಕೆಂಪು ಮತ್ತು ಬಿಳಿಪಟ್ಟಿಯ ಉಡುಪಾ'ಗಿದ್ದಾಳೆ ; 'ಬಣ್ಣದ ಮುಂಗುರುಳಾ'ಗಿದ್ದಾಳೆ ; 'ಕಿಲಕಿಲ ನಗುವಾಗಿ'ದ್ದಾಳೆ : ಆದರೆ ವ್ಯಕ್ತಿವಿಶೇಷದ ಮಾನವ ಪೂರ್ಣಳಾಗಿಲ್ಲ: ಮಾರೀ ಎಂಬ ಹೆಸರಿನ ನಿರ್ದಿಷ್ಟವ್ಯಕ್ತಿಯಲ್ಲ.

ಹಾಗೆಯೇ ಮರ್ಸೋ ಕೊಲ್ಲುವ ಅರಬನು – ಒಬ್ಬ ಅನಾಮಧೇಯನಾದ 'ಅರಬ'. ಅವನ ಪಾಲಿಗೆ ಅವನೊಬ್ಬ ಚೂರಿ, ಚೂರಿಯ ಝಳಪು, ಕಣ್ಣುಕುಕ್ಕು, ಮಾನಸಿಕ ಸಿಡುಕು, ಕ್ಷೋಭೆ. ಯಾವ ರೀತಿ ಮರ್ಸೋ, ಅವನ ಸಾಂಪ್ರದಾಯಿಕ ಸಮಾಜಕ್ಕೆ ಒಬ್ಬ 'ಪರದೇಶಿ'ಯೋ ಹಾಗೆಯೇ ಮರ್ಸೋವಿನ ಸಾಂಪ್ರದಾಯಿಕ ಪರಿಗಣನೆಗೆ 'ಅರಬ' ಒಬ್ಬ ಅನಾಮಧೇಯ, ಕೊಲೆಗಡುಕ ಚೂರಿ. ಯಾವ ಸಮಾಜವನ್ನು ಅಮಾನವೀಯತೆಯ ಹೆಸರಿನಲ್ಲಿ ದೂರಿ ಅದನ್ನು ಜರೆದು ತ್ಯಜಿಸುತ್ತಾನೋ, ಅದೇ ಅಮಾನವೀಯತೆಯಲ್ಲಿ ಮರ್ಸೋವು ಅರಬನನ್ನು ದೂರಿ, ಜರೆದು ಕೊಂದುಬಿಡುತ್ತಾನೆ. ಅವನ ಪಾಲಿಗೆ ಅರಬನು ಬಿಸಿಲಿನಂತೆ, ಶೆಕೆಯಂತೆ, ಕಣ್ಣುಕುಕ್ಕಿನಂತೆ ಒಂದು ನಿರ್ಜೀವ ಮಾನಸಿಕ ಕುರಿ ಕುರಿ, ತಲ್ಲಣವಾಗಿಬಿಡುತ್ತಾನೆ.

ಇನ್ನು ಅವನ ಆಗಂತುಕ ಗೆಳೆಯ ರೇಮೋನಾದರೋ ಗೆಳೆಯನಾಗಿದ್ದಷ್ಟಕ್ಕೇ, ಅವನೊಡನೆ ತಿಂದು ಕುಡಿದ ಸ್ನೇಹಕ್ಕಾಗಿಯಷ್ಟೇ ಸರ್ವಸಮ್ಮತನಾದ 'ಸರಿ' ಮಾನವನಾಗಿ ಬಿಡುತ್ತಾನೆ. ರೇಮೋ ತನ್ನ ಪ್ರೇಯಸಿಯನ್ನು ಹೊಡೆದು ಹೊರಗೆ ಹಾಕುತ್ತಾನೆ ; ಅದು ಮರ್ಸೋವಿಗೆ ಸಮ್ಮತವಾಗುತ್ತದೆ. ಅಷ್ಟೇ ಅಲ್ಲ. ಅವನ ಪರವಾಗಿ ಅವನು ವಾದಮಾಡಿ ಅವನನ್ನು ಬಂಧನದಿಂದ ಬಿಡಿಸಿಕೊಂಡು ಬರುತ್ತಾನೆ. ಮರ್ಸೋ ಆ ಪ್ರೇಯಸಿಯ ಬಗ್ಗೆ ಅನುಕಂಪವನ್ನಾಗಲೀ, ಅವಳು ನಿರಪರಾಧಿಯೋ ಅಥವಾ ತಪ್ಪಿತಸ್ಥಳೋ ಎನ್ನುವುದನ್ನು ಲೇಶಮಾತ್ರದಲ್ಲೂ ಗಣನೆಗೆ ತಂದುಕೊಳ್ಳುವುದಿಲ್ಲ. ಅವನ ಪಾಲಿಗೆ ರೇಮೋ ಅವನ ಗೆಳೆಯ : ಅವನು ಮಾಡಿದ್ದೆಲ್ಲಾ ಅವನು ಸಮರ್ಥಿಸಿಕೊಳ್ಳುವಂತೆ ಸರಿ, ಒಪ್ಪ, ಅವನನ್ನು ಬೆಂಬಲಿಸಿ ಮರ್ಸೋ ಅರಬರನ್ನು ಕೊಲ್ಲಲು ತಯಾರಿ. ಏಕೆಂದರೆ ಅವನ ಏಕೈಕ ಮೌಲ್ಯ – ರೇಮೋ ಜೊತೆಗೆ ಕುಡಿಸಿದ, ತಿನಿಸಿದ, ತನ್ನ ಕಥೆಯನ್ನು ಆತ್ಮೀಯವಾಗಿ ವಿವರಿಸಿದ ಗೆಳೆಯನಷ್ಟೇ ; ಆ ಗೆಳೆಯತನಕ್ಕೆ ತಾನು ಅವನನ್ನು ಬೆಂಬಲಿಸುವುದು ಸರಿ ತಪ್ಪುಗಳಿಗೆ ಮೀರಿದ ಗೆಳೆತನದ ಪ್ರಶ್ನೆಯಷ್ಟೇ. ಆ ಗೆಳೆತನಕ್ಕೆ ಮರ್ಸೋ ಅರಬನನ್ನು ಕೊಲ್ಲುತ್ತಾನೆ. ಆದರೆ ಆ ಕೊಲೆಯ ಬಗ್ಗೆ ಅವನಿಗೆ ಯಾವ ಮಾನವೀಯವಾದ ಸಂವೇದನೆಯೂ ಇಲ್ಲ. ಅದೂ ಅವನನ್ನು ಕೊಲ್ಲಲು ಕಾರಣ ಅವನ ಆ ಸಮಯದ ಸೆಕೆಯ, ಬಿಸಿಲಿನ, ಕಣ್ಣು ಕುಕ್ಕಿನ ತಲ್ಲಣವಷ್ಟೇ. ಅದಿಲ್ಲದಿದ್ದರೆ ಅವನು ಅವನನ್ನು ಕೊಲ್ಲುತ್ತಿರಲಿಲ್ಲವೇನೋ. ಆದರೆ ರೇಮೋ

ಅವನಿಗೆ ಪಿಸ್ತೂಲು ಕೊಟ್ಟಿದ್ದಾನೆ : ಅದನ್ನು ಇಸಿದುಕೊಂಡ ಮರ್ಸೋ ಅರಬರನ್ನು ಕೊಲ್ಲಲು ತಯಾರಾಗಿರಲೇಬೇಕಲ್ಲವೇ. ಅದರಿಂದಲೇ ಪಿಸ್ತೂಲು ತೆಗೆದು ಅವರನ್ನು ಕೊಲ್ಲಲು ಹೊರಟಾಗ ಅರಬರು ಓಡಿಹೋಗುತ್ತಾರೆ.

ಹೀಗೆ ಮರ್ಸೋ ಆಲ್ಜೀರಿಯಾದ ಫ್ರೆಂಚನಾಗಿ ಫ್ರೆಂಚ ಫ್ರೆಂಚರಿಗೆ ಹೇಗೆ ಪರಕೀಯ ಅಥವಾ ಪರದೇಶಿಯೋ, ಹಾಗೆ ಅರಬರು ಅವನಿಗೆ ಪರಕೀಯರು, ಪರದೇಶಿಗಳು. ಅರಬರನ್ನು ಮರ್ಸೋ ಹೇಗೆ ಕೊಲ್ಲಬಲ್ಲನೋ ಹಾಗೆಯೇ ಫ್ರಾನ್ಸ್ ಮರ್ಸೋವನ್ನು ಕೊಲ್ಲಬಹುದಲ್ಲವೇ ? ಅರಬರನ್ನು ಅವನು ಹೇಗೆ ಅನಾಮಧೇಯರನ್ನಾಗಿ ಮಾಡಿ ಜೀವಿಗಳಾಗಿ ಪರಿಗಣಿಸುವುದಿಲ್ಲವೋ ಹಾಗೆಯೇ ಆಲ್ಜೀರಿಯಾದ ಪರದೇಶಿಯನ್ನು ಫ್ರಾನ್ಸ್ ಜೀವಿಯಾಗಿ ಪರಿಗಣಿಸದಿರುವುದು ಸರಿಯಾಗಿ ಕಾಣಬಹುದಲ್ಲವೇ ?

ಇನ್ನು ಕೊನೆಯದಾಗಿ ಮರ್ಸೋ ಸಮಾಜವನ್ನು ದೂರಿ, ಅದರ ಅಮಾನವೀಯ ಮೌಲ್ಯಗಳನ್ನು, ಯಾಂತ್ರಿಕತೆಯನ್ನು ಅಲ್ಲಗಳೆಯುವಲ್ಲಿ ತಾನು ತನ್ನ ಇಂದ್ರಿಯಗ್ರಾಹ್ಯ ಅನುಭವವನ್ನು, ಭೌತಿಕ ಘನತೆಯನ್ನು, ಇರವಿನ ಸತ್ಯವನ್ನು the concrete, the existential truthಗಳನ್ನು ಎತ್ತಿ ಹಿಡಿಯುವಲ್ಲಿ, ತಾನು ತನ್ನನ್ನು ವಿಶ್ವದ ಉಪೇಕ್ಷೆಗೆ ಏರಿಸಿಕೊಳ್ಳುವಲ್ಲಿ, ಒಂದು ರೀತಿಯ ರೊಮ್ಯಾಂಟಿಕ್ ಗತ್ತನ್ನು ತಳೆಯುತ್ತಾನಲ್ಲವೇ ? ಅವನ ಕೊನೆಯ ಮಾತನ್ನು ಗಮನಿಸಿ – 'ಮೊದಲ ಬಾರಿಗೆ ಮೊದಲನೆಯದಾಗಿ ನಾನು ವಿಶ್ವದ ಪ್ರಸನ್ನ ಉಪೇಕ್ಷೆಗೆ ಉದಾಸೀನಕ್ಕೆ ನನ್ನ ಹೃದಯವನ್ನು ಒಡ್ಡಿದೆ...' ಹೀಗೆ ಮಾನವ ಸಮಾಜಕ್ಕೆ ಮರ್ಸೋ ಒಂದು ರೀತಿಯ ಅಮಾನವೀಯವಾದ ಉಪೇಕ್ಷೆ, ಔದಾಸೀನ್ಯ ತೋರುವಲ್ಲಿ ತಾನು ತನ್ನ ಮಾನವೀಯತೆಯನ್ನು ಹಿಂಗಿಸಿಕೊಳ್ಳುತ್ತಾನಲ್ಲವೇ, ತನ್ನ ಸಂವೇದನೆಯನ್ನು ಜಡಗೊಳಿಸುತ್ತಾನಲ್ಲವೇ ? ಮತ್ತೆ ಇಲ್ಲಿ ನೋಡಿ :

> 'ಅದು (ವಿಶ್ವ) ನನ್ನ ಹಾಗೆಯೇ ಇರುವುದನ್ನು, ನಿಜಕ್ಕೂ ನನ್ನ ಸೋದರನಂತೆ ಇರುವುದನ್ನು ನಾನು ಅನುಭವಿಸುತ್ತಿರಲು ನಾನು ಸುಖಿಯಾಗಿದ್ದೆನೆಂದೂ, ಇನ್ನೂ ಸುಖಿಯಾಗಿಯೇ ಇದ್ದೇನೆಂದೂ ಅರಿವಾಯಿತು. ಇನ್ನು ಎಲ್ಲವನ್ನೂ ಸಾಧಿಸಲು, ಹಾಗೂ ನನ್ನ ಏಕಾಕಿತನ ಕಡಿಮೆಯಾಗಲು, ನನಗೆ ಉಳಿದದ್ದೆಂದರೆ ನಾನು ಗಲ್ಲಿಗೇರುವ ದಿನ ದೊಡ್ಡ ಪ್ರೇಕ್ಷಕರ ಜನಸಂದಣಿ ಸೇರಬೇಕು ಮತ್ತು ಅವರು ನನ್ನನ್ನು ಬಯ್ಗುಳ ಕೂಗಾಟದಿಂದ ಸ್ವಾಗತಿಸಬೇಕೆಂಬ ಬಯಕೆಯೊಂದೇ.'

ಮರ್ಸೋ ವಿಶ್ವದೊಂದಿಗೆ ತನ್ನನ್ನು ಹೋಲಿಸಿಕೊಂಡು ಆ ವಿಶ್ವದೊಂದಿಗೆ ಸೋದರತ್ವವನ್ನು ಕಂಡುಕೊಂಡು ಒಂದು ವಿಶೇಷವಾದ ಅಮಾನವೀಯ ಪ್ರಸನ್ನತೆಯನ್ನು ಗಳಿಸಿಕೊಳ್ಳುತ್ತಾನೆ. ಮಾನವನಾದ, ಮಾನವನಾಗಿ ಹೆಂಗಸಿನ ಮುಂಗುರುಳನ್ನು ತಡವಿ ಸುಖಿಸುವ, ಗೆಳೆಯರೊಂದಿಗೆ ಕುಡಿದು ತಿನ್ನುವ, ಈಜುವ, ಸಂಭಾಷಿಸುವ ಮರ್ಸೋ

ವಿಶ್ವದೊಂದಿಗೆ ಬಂಧುತ್ವವನ್ನು ಬೆಳೆಸಿ, ಅದರಂತೆ ಉದಾಸೀನ ಸಂತುಷ್ಟನಾಗುವುದು ಅವನ ಮಟ್ಟಿಗೆ ಬೆಳವಣಿಗೆಯಾಗುವುದಿಲ್ಲ; ಒಂದು ರೀತಿಯ ಸಿನಿಕತೆಯಾಗಿ ಮಾನವೀಯತೆಯ ಕುಂದಾಗುತ್ತದೆ. ಅಲ್ಲದೆ ಮರ್ಸೋ ವಿಶ್ವದ ನಿರಪೇಕ್ಷ ಉಪೇಕ್ಷೆಗಳ ಪ್ರಸನ್ನತೆಯನ್ನೂ ಮೀರಿ, ಮಾನವಸಮಾಜವನ್ನೇ ಹಳಿಯುವ ಮಾನವದ್ವೇಷಿ (misanthrope) ಸಿನಿಕನೇ ಆಗಿ ಮಾನವರು ತನ್ನನ್ನು ಬಯ್ಯುವುದನ್ನೂ ಶಪಿಸುವುದನ್ನೂ ಆನಂದಿಸುವ ಪ್ರತೀಕಾರಿಯಾಗುತ್ತಾನೆ. ಮಾನವ ಸಮಾಜದ ಕ್ಷುದ್ರ ಸಂಪ್ರದಾಯಗಳಿಗೆ ತುತ್ತಾಗಿ ಗಲ್ಲಿಗೇರಲಿರುವ ಮರ್ಸೋವಿನ ಈ ಕೊನೆಯ ಉದ್ವಿಗ್ನತೆ ಕ್ಷಮ್ಯವಾಗಿ ಕಂಡರೂ ಅವನ ಮಟ್ಟಿಗೆ ಅದು ಪ್ರಸನ್ನತೆಯಾಗಲಿ, ಅರಿವಿನ ಶಾಂತಿಯಾಗಲಿ ಆಗುವುದಿಲ್ಲ.

ಮರ್ಸೋವಿನ ಕೋಪ ಈ ಕ್ಷುದ್ರ ಸಮಾಜ, ಅಲ್ಪಮೌಲ್ಯಗಳ ಮಾನವಕುಲ ತನ್ನನ್ನು ಗಲ್ಲಿಗೇರಿಸುತ್ತಿದೆ, ಆ ಬಗ್ಗೆ ಅದಕ್ಕೆ ಯಾವ ರೀತಿಯ ಮಾನವಾನುಕಂಪವಿಲ್ಲ, ಬದಲಿಗೆ ಅದು ಅವನನ್ನು ಬಯ್ಯುತ್ತದೆ, ಶಪಿಸುತ್ತಿದೆ ಎಂದು ತಾನೆ ? ಹಾಗಾದರೆ ಮರ್ಸೋ ಅರಬನೊಬ್ಬ ನನ್ನು ಕೇವಲ ಮಾನಸಿಕ ತಲ್ಲಣಕ್ಕಾಗಿ, ಬಿಸಿಲಿನ ಝಳದ ಚಾಕುವಿನ ಕಣ್ಣುಕುಕ್ಕುವಿಕೆಯ ಆತಂಕಕ್ಕಾಗಿ ಕೊಂದವನು ; ಅವನ ಬಗೆಗಾಗಿ, ಅವನೂ ಒಬ್ಬ ಜೀವಿ, ಅವನಿಗೂ ಆಶೆ ಆಮಿಷಗಳಿವೆ, ಅವನೂ ತನ್ನಂತೆ ಹೆಣ್ಣಿನ ಮುಂಗುರುಳು ನೇವರಿಸುವ ಸುಖಿ, ಕುಡಿಯುವ ಕುಣಿಯುವ ಆಕಾಂಕ್ಷಿ ಎನ್ನುವ, ಅನಿಸಿಕೆ ಅನುಕಂಪ ಒಂದು ಕ್ಷಣಮಾತ್ರವಾದರೂ ಅವನ ಮನಸ್ಸಿನಲ್ಲಿ ಹಾಯುವುದಿಲ್ಲ. ವಧೆಯಾದವನು ಮರ್ಸೋವಿನ ದೃಷ್ಟಿಯಲ್ಲಿ ತನ್ನಂತೆ ಒಬ್ಬ ಮನುಷ್ಯನಲ್ಲ – ಅರಬ. ತಾನು ಫ್ರಾನ್ಸಿಗೆ ಫ್ರೆಂಚನಲ್ಲ : ಪರದೇಶಿ ; ಹಾಗೆಯೇ ತನಗೆ ವಧೆಗೀಡಾದವನು ಮಾನವನಲ್ಲ; ಪರಕೀಯ, ಪರದೇಶಿ : ಅರಬ.

ಒಂದು ರೀತಿಯಲ್ಲಿ 'ಪರದೇಶಿ' ಒಂದು ಅದ್ಭುತ ಭಯಾನಕ ಕಥೆ. ಇದರ ಅದ್ಭುತತೆ ಏನೆಂದರೆ ಇದು ಮಾನವೀಯತೆಯ ಸಹಜತೆಯನ್ನು ಸಾರುತ್ತದೆ ; ಇದರ ಭಯಾನಕತೆ ಏನೆಂದರೆ ಇದು ಆ ಮಾನವೀಯತೆಯ, ಸಂವೇದನಾ ಪ್ರಾಮಾಣಿಕತೆಯ ಸೋಗಿನಲ್ಲೇ ಅಮಾನವೀಯವಾಗಿ ಸಿನಿಕವಾಗಿಬಿಡುತ್ತದೆ ; ಜನಸಾಮಾನ್ಯತೆಯನ್ನು ನಿಕೃಷ್ಟವಾಗಿ ಕಾಣುವ ಬೂರ್ಜುವಾ ಹಿರಿಮೆಯಾಗಿಬಿಡುತ್ತದೆ.

ಮರ್ಸೋ ಒಂದು ಕ್ಷಣ ನಿಂತು ಪರಿಶೀಲಿಸಿದರೆ, ತನ್ನ ವಧೆಗೆ ಘೇರಾಯಿಸಿದ ಬಯ್ಯುವ ಶಪಿಸುವ ಗುಂಪಿನಲ್ಲೇ ತಾನು ಯಾರಿಗಾಗಿ ಅರಬನನ್ನು ಕೊಂದೆನೋ ಅವನಂತಹ, ರೇಮೋ ಸ್ಯಾಂತೆಯಂತಹ ಸ್ನೇಹಿತನೂ ಇರಬಹುದಲ್ಲವೇ ? ತಾನು ಉಣ್ಣುತ್ತಿದ್ದ ಹೋಟೆಲಿನ ಸೆಲೆಸ್ತ್, ತಾನು ಅನುಕಂಪದಿಂದ ಮಾತನಾಡಿಸುತ್ತಿದ್ದ, ನಾಯಿ ಸಾಕಿದ್ದ, ನಾಯಿಯನ್ನು ಕಳೆದುಕೊಂಡು ದುಃಖಿಸುತ್ತಿದ್ದ, ತನ್ನ ನೆರೆಮನೆಯವ ಸಲಮಾನೋ ಇರಬಹುದಲ್ಲವೇ ? ಏಕೆಂದರೆ ಅವರು ಜನಸಾಮಾನ್ಯರು, ಸಾಂಪ್ರದಾಯಿಕ ಸಂವೇದಿಗಳು,

ರೂಢಿಯ ಮೌಲ್ಯಗಳನ್ನು ಬೆಳೆಸಿಕೊಂಡು ಬಂದವರಲ್ಲವೇ ? ಅಷ್ಟೇಕೆ, ಆದರಲ್ಲಿ ಆವನ ಪ್ರೇಯಸಿಯಾದ ಮಾರಿಯೂ ಇರಲಿಕ್ಕೆ ಸಾಕು. ಮಾರಿ ತನ್ನನ್ನು ಮರ್ಸೋ ಪ್ರೀತಿಸುತ್ತಾನೆಯೇ ಎಂದು ಕೇಳುತ್ತಾಳೆ : ಆ ಪ್ರಶ್ನೆ ಮರ್ಸೋವಿಗೆ ಅರ್ಥಹೀನವಾದ ಪ್ರಶ್ನೆಯಾದರೂ ಆವಳಿಗೆ ಅದು ಮುಖ್ಯವಾದ ಪ್ರಶ್ನೆ: ಆವಳು ಅವನನ್ನು ಮದುವೆಯಾಗಲು ನಿರ್ಧರಿಸಬೇಕಾದ ಗಂಭೀರ ಪ್ರಶ್ನೆ. ಮಾರಿ ಹೀಗೆ ಜನ ಸಾಮಾನ್ಯಳು. ಸಾಮಾನ್ಯ ಸಂವೇದಿ. ಆದ್ದರಿಂದ ಆವಳಂಥವಳೂ ಆ ಜನರ ಗುಂಪಿನಲ್ಲಿರಲು ಸಾಧ್ಯವಲ್ಲವೇ ?

ಹೀಗೆ 'ಪರದೇಶಿ' ಏಕಕಾಲದಲ್ಲಿ ಅದ್ಭುತವೂ, ಭಯಾನಕವೂ ಆದ ನಮ್ಮ ಶತಮಾನದ ಪರ್ವಕಥೆ. ಇದರ ಭಾಗ್ಯ ಮಾನವತೆಯ, ಪ್ರಾಮಾಣಿಕ ಸಂವೇದನೆಯ ಸಂಪಾದನೆ; ಇದರ ದುರದೃಷ್ಟ ಮಾನವತೆಯ, ಅಪ್ರಾಮಾಣಿಕತೆಯ ಸರಳೀಕರಣ.

ಹ್ಯಾನ್ ಸೂಯಿನ್ : 'ಎ ಮೆನಿ-ಸ್ಪ್ಲೆಂಡರ್ಡ್ ಥಿಂಗ್'

ಪಿ. ವಿ. ನಾರಾಯಣ

ಹ್ಯಾನ್ ಸೂಯಿನ್ ಒಬ್ಬ ಚೀನೀ ವೈದ್ಯೆ. ಪೀಕಿಂಗ್‌ನಲ್ಲಿ ಹುಟ್ಟಿ ಚೀನೀ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆದವಳು. ಅನಂತರ ಎರಡು ವರ್ಷಗಳ ಕಾಲ ಯೂರೋಪಿನಲ್ಲಿ ಪ್ರವಾಸ ನಡೆಸಿ ತಾಯ್ನಾಡಿಗೆ ಗಂಡನೊಡನೆ ಬಂದು ಸ್ವದೇಶದಲ್ಲಿ ನೆಲಸಿದವಳು. ಆಗ ಚೀನೀ-ಜಾಪನೀಯರ ನಡುವೆ ಯುದ್ಧ ನಡೆಯುತ್ತಿತ್ತು. ಯುದ್ಧದ ಕೊನೆಯ ವೇಳೆಗೆ ಹ್ಯಾನ್ ಇಂಗ್ಲೆಂಡ್‌ಗೆ ಹೋಗಿ ವೈದ್ಯಕೀಯ ಶಿಕ್ಷಣ ಪಡೆದವಳು. ಏತನ್ಮಧ್ಯೆ ಅವಳ ಗಂಡನ ಸಾವು. ಇದರಿಂದಾಗಿ ತನ್ನ ಹಾಗೂ ತನ್ನ ಚಿಕ್ಕ ಮಗಳೊಬ್ಬಳ ಹೊಟ್ಟೆಪಾಡಿನ ಜವಾಬ್ದಾರಿ. ಹಾಗಾಗಿ ಮತ್ತೆ ತಾಯ್ನಾಡಿಗೆ ಮರಳುವ ಸಂಕಲ್ಪ ಅವಳದು. ಆದರೆ ಅದು ಅಷ್ಟು ಸುಲಭವಲ್ಲ – ಅದಕ್ಕೆ ಕಾರಣಗಳು ಹಲವಾರು. ಆದ್ದರಿಂದ ಸರಿಯಾದ ಸಮಯಕ್ಕೆ ಕಾದು ತಾಯ್ನಾಡಿಗೆ ಮರಳುವುದಕ್ಕಾಗಿ ಹಾಂಕಾಂಗ್‌ನಲ್ಲಿ ವಾಸ ; ಅಲ್ಲಿಯ ಮಿಶನ್ ಆಸ್ಪತ್ರೆಯಲ್ಲಿ ಕೆಲಸ.

ಹ್ಯಾನ್‌ಳು ರಚಿಸಿರುವುದು ಎರಡು ಕಾದಂಬರಿಗಳನ್ನು; ಚೀನೀ-ಜಪಾನೀ ಯುದ್ಧ ಕಾಲದಲ್ಲಿ ಸ್ವದೇಶದಲ್ಲಿ ನೆಲೆಸಿದ್ದಾಗ ಅಮೆರಿಕದ ಮಿಶನರಿ ಮಹಿಳೆಯೊಡನೆ ರಚಿಸಿದ್ದು Destination Cungking ಎಂಬ ಕಾದಂಬರಿಯನ್ನು ; ಅದು ಕಮ್ಯೂನಿಸ್ಟ್ ಪೂರ್ವದ ಚೀನಾದ ಸ್ವತಂತ್ರ ಜೀವನವನ್ನು ಚಿತ್ರಿಸುತ್ತದೆ. ಎರಡನೆಯದು A Many Splendoured Thing. ಇದು ತುಂಬ ಸಂಕೀರ್ಣ ವಸ್ತುವುಳ್ಳ ಕಾದಂಬರಿ. ವ್ಯಕ್ತಿಗತ ಆಶೋತ್ತರಗಳು, ರಾಷ್ಟ್ರೀಯ ಆಗುಹೋಗುಗಳು ; ಸ್ವಂತ ಕನಸು - ಪರಿಸ್ಥಿತಿಯ ಕಠಿಣ ವಾಸ್ತವತೆ ; ಎರಡು ಸಂಸ್ಕೃತಿಗಳ ನಡುವಣ ತುಯ್ದಾಟ – ಇವುಗಳ ಸೂಕ್ಷ್ಮ ಚಿತ್ರಣ ಇದರಲ್ಲಿದೆ.

'ಎ ಮೆನಿ-ಸ್ಪ್ಲೆಂಡರ್ಡ್ ಥಿಂಗ್' ಕಾದಂಬರಿಯಾದರೂ ಆತ್ಮಕತೆಯೇ. ಅದನ್ನೆಲ್ಲಿಯೂ ಲೇಖಕಿ ಮುಚ್ಚುಮರೆ ಮಾಡುವುದಿಲ್ಲ. ಆತ್ಮಕತೆಯ ಪ್ರಾಮಾಣಿಕತೆ ಹಾಗೂ ಕಾದಂಬರಿಯ ಕಲ್ಪಕತೆ ಇವೆರಡೂ ಅದ್ಭುತವಾಗಿ ಇಲ್ಲಿ ಮಿಳಿತವಾಗಿದೆ. ಪ್ರಾಯಃ ನಿರೂಪಣ ತಂತ್ರದಲ್ಲಷ್ಟೇ ಇದು ಕಾದಂಬರಿ ; ಮಿಕ್ಕದ್ದೆಲ್ಲ ಸ್ವಂತ ಜೀವನದ ಘಟನೆಗಳೇ. ಆ ಕಾರಣ ದಿಂದ – ಸ್ವಂತ ಜೀವನವನ್ನೇ ಕಾದಂಬರಿಯಾಗಿಸುವುದರಿಂದ – ಈ ಪುಸ್ತಕ ಹೊಸ ಸಾಹಿತ್ಯ ಪ್ರಕಾರಕ್ಕೆ ಸೇರಿಹೋಗಿಬಿಡುತ್ತದೇನೋ ! ಕಾದಂಬರಿ ಎಂಬ ನೆವದಿಂದ ತನ್ನ ಜೀವನದಲ್ಲಿ ನಡೆದ ಘಟನೆಗಳ ತಿರುಚುವಿಕೆ ಇಲ್ಲಿ ಇಲ್ಲವೇ ಇಲ್ಲ.

'ಎ ಮೆನಿ-ಸ್ಪ್ಲೆಂಡರ್ಡ್ ಥಿಂಗ್' – ಇದು ಕಾದಂಬರಿಕಾರ್ತಿಯು ಪ್ರೇಮವನ್ನು ವರ್ಣಿಸುವ ರೀತಿ. ಅದೇ ಕಾದಂಬರಿಯ ಶೀರ್ಷಿಕೆಯೂ ಹೌದು. ಹಾಗಾಗಿ ಈ

ಕಾದಂಬರಿಯ ವಸ್ತು ಪ್ರೇಮ ; ವಿಧವೆಯೊಬ್ಬಳು ವಿವಾಹಿತನೊಬ್ಬನನ್ನು ಅನಿರೀಕ್ಷಿತವೆಂಬ ಸನ್ನಿವೇಶದಲ್ಲಿ ಭೇಟಿಯಾಗಿ, ಗಾಢವಾಗಿ ಅವನೊಡನೆ ಹಂಚಿಕೊಂಡು ಅನುಭವಿಸಿದ ಪ್ರೇಮ. ಆ ಪ್ರೇಮ ಎಷ್ಟು ಗಾಢವೋ ಅಷ್ಟೇ ಹ್ರಸ್ವಕಾಲದ್ದು. ಪರಿಚಯ-ಪ್ರಣಯ ಎಲ್ಲ ಸೇರಿ ಒಂದು ವರ್ಷ ಒಂದು ತಿಂಗಳು ಕೆಲವು ದಿನ ಕಾಲ ಮಾತ್ರ ಉಳಿದಿದ್ದದ್ದು. ಆದರೆ ಆ ಪ್ರೇಮದ ಹಿನ್ನಲೆಯಲ್ಲಿ, ಆವರಣವಾಗಿ, ಸದಾ ಉರಿಯುತ್ತಿದ್ದದ್ದು ಮಾತ್ರ ಹತ್ತಾರು ವಿಷಯಗಳು. ಆ ಪ್ರೇಮ ಗಮನಿಸಬೇಕಾದದ್ದು ಕೇವಲ ಇಬ್ಬರು ವ್ಯಕ್ತಿಗಳ ವೈಯಕ್ತಿಕ ರಾಗದ್ವೇಷಗಳನ್ನಲ್ಲ; ಎರಡು ಸಂಸ್ಕೃತಿಗಳ ಸಂಘರ್ಷ ಇದರ ಬೆನ್ನಿಗಿದೆ ; ಸ್ವದೇಶದ ಎರಡು ಸ್ಥಿತಿಗಳ ನಡುವಣ ಸಂಕ್ರಮಣ ಕಾಲ ಇದರ ಸ್ವರೂಪನಿರ್ಧಾರಕ್ಕೆ ಕಾರಣವಾಗುತ್ತದೆ ; ಪ್ರೇಮಕ್ಕೆ ಒಳಗಾದ ಇಬ್ಬರೂ ವ್ಯಕ್ತಿಗಳ ಪ್ರಸ್ತುತ ಪರಿಸ್ಥಿತಿ ಇದರ ಭವಿಷ್ಯ ಸ್ವರೂಪಕ್ಕೆ ಭೂಮಿಕೆಯೊದಗಿಸುತ್ತದೆ.

ಕಾದಂಬರಿಯಲ್ಲಿ ನಾಲ್ಕು ಭಾಗಗಳಿವೆ : ಪ್ರಾರಂಭ, ಪ್ರಗತಿ, ಸಂದಿಗ್ಧತೆ ಹಾಗೂ ಮುಕ್ತಾಯಗಳೆಂಬ ಶೀರ್ಷಿಕೆಗಳಡಿಯಲ್ಲಿ ಈ ಪ್ರೇಮಗಾಥೆಯು ಮುನ್ನೂರೈವತ್ತು ಪುಟಗಳಿಗೂ ಮಿಕ್ಕಿ ಹರಿಯುತ್ತದೆ. ಕತೆಯ ಪ್ರಾರಂಭದಲ್ಲಿ ಹ್ಯಾನ್ ಸೂಯಿನ್ ಹಾಂಕಾಂಗ್‌ನಲ್ಲಿದ್ದಾಳೆ. ತಾಯ್ನಾಡಾದ ಚೀನಾ ಇನ್ನೇನು ಕ್ರಾಂತಿಯಿಂದ ಭುಗಿಲೇಳುವ ಕಾಲ ಅದು. ವಿಧವೆಯಾದ ಅವಳು ತನ್ನ ಮಗಳ ಯೋಗಕ್ಷೇಮದ ಬಗ್ಗೆ ಹೆಚ್ಚು ಕಾತರಳಾಗಿರುವುದರಿಂದಾಗಿ ವೈಯಕ್ತಿಕ ಪ್ರೇಮದ ಬಗ್ಗೆ ಯೋಚಿಸುವ ಪರಿಸ್ಥಿತಿಯಲ್ಲಿಲ್ಲ. ಆದರೆ ಪಾರ್ಟಿಯೊಂದರಲ್ಲಿ ಅವಳು ಮಾರ್ಕ್ ಎಲಿಯಟ್‌ನನ್ನು ಭೇಟಿಯಾಗುತ್ತಾಳೆ. ಅವನು ಒಬ್ಬ ಬ್ರಿಟಿಷ್ ಪತ್ರಿಕೋದ್ಯೋಗಿ ; ಇಂಡೊನೇಷಿಯದಲ್ಲಿದ್ದ ಪೀಟರ್ ಡಿಕ್ಸನ್ ಎಂಬಾತ ಹೇಳಿದ್ದನಂತೆ : 'ನೀನು ಹಾಂಕಾಂಗ್‌ಗೆ ಹೋದಾಗ ಚೀನೀ ವೈದ್ಯೆ ಡಾ॥ ಹ್ಯಾನ್‌ಳಿಗೆ ಫೋನ್ ಮಾಡಿ ಪರಿಚಯ ಮಾಡಿಕೋ. ಆಕೆ ಬುದ್ಧಿವಂತೆ' ಎಂದು. ಹೀಗೆ ಇಬ್ಬರಿಗೂ ಸಮಾನನಾದ ಸ್ನೇಹಿತನಿಂದ ಮಾರ್ಕ್-ಹ್ಯಾನ್‌ಳ ಪರಿಚಯವಾಯಿತು. ಆದರೆ ಪರಿಚಯ ಬಹುಬೇಗ ಬೆಳೆಯಿತು. ಮಾರನೇ ಬುಧವಾರ ತನ್ನೊಡನೆ ಊಟಕ್ಕೆ ಬರಬೇಕೆಂದು ಮಾರ್ಕ್ ಹ್ಯಾನ್‌ಳನ್ನು ಆಹ್ವಾನಿಸಿದ. ಆದರೆ ಹ್ಯಾನ್‌ಳಿಗೆ ಇಕ್ಕಟ್ಟು : ಚೀನಾ ಸಂಪ್ರದಾಯದ ಪ್ರಕಾರ ಕುಲೀನ ಮನೆತನದ ಹೆಣ್ಣು ವಿದೇಶೀಯನೊಡನೆ ಹೋಗುವುದು ಸರಿಯಲ್ಲ. ಆದರೆ ಮಾರ್ಕ್‌ನ ಸೆಳೆತ ತೀವ್ರವಾದದ್ದು – ಅವಳಿಗರಿವಿಲ್ಲದೆಯೇ ಅವಳು ಅವನೆಡೆಗೆ ಆಕರ್ಷಿತಳಾಗಿದ್ದಳು.

ಆಕರ್ಷಣೆ ಪ್ರೇಮಗಳ ಸುಳಿವಿನಲ್ಲಿ ಅವಳು ಮಧುರತೆಯನ್ನೆಷ್ಟು ಕಂಡಳೋ ಅಷ್ಟೇ ಮಾನಸಿಕ ವ್ಯಥೆಯನ್ನೂ ಅನುಭವಿಸಿದಳು. ಅವಳು ಒಂಟಿತನದಿಂದ ಭಗ್ನಗೊಂಡಿದ್ದಾಗಲೇ ಮಾರ್ಕ್ ತಣ್ಣನೆ ಗಾಳಿಯಂತೆ ಬಂದಿದ್ದ; ಅವನಿಗೆ ತನ್ನನ್ನರ್ಪಿಸಿಕೊಳ್ಳುವುದು ಸುಖಕರ, ನಿಜ ; ಆದರೆ ಕಠಿಣತೆಯಲ್ಲಿ ತಾನು ಕಳೆದುಕೊಳ್ಳಬೇಕಾದದ್ದೂ ಅಪಾರ. ಮಾರ್ಕ್ ಇಂಗ್ಲಿಷ್

ಜನಾಂಗದವನು, ವಿವಾಹಿತ ; ತಾನು ಯೂರೇಷಿಯನ್, ವಿಧವೆ. ಅಂತೆಯೇ ಅವಳಿಗೆ ತಾಯ್ನಾಡಿನ ಹಂಬಲ, ಆದರೆ ವಿದೇಶದ ಶಿಕ್ಷಣದ ಪರಿಣಾಮ. ಹ್ಯಾನ್ ಸೂಯಿನ್ ಹೇಳಿಕೊಳ್ಳುತ್ತಾಳೆ : 'ತಪ್ಪೋ ಸರಿಯೋ, ನನ್ನ ತಾಯ್ನಾಡು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿವಿಚಾರದ ಘನತೆ, ವೈಯಕ್ತಿಕ ಭಾವನೆ – ಆಲೋಚನೆಗಳ ಆಯ್ಕೆಯ ಹಕ್ಕು – ಇವುಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿತ್ತು.' ಅವಳ ಅಂತರಂಗ ಚೀನಾದ ಪರಂಪರೆಯಿಂದ ಮೂಡಿಬಂದಿರುವುದು ; ಬಹಿರಂಗ ಪಾಶ್ಚಾತ್ಯ ಶಿಕ್ಷಣದಿಂದ ರೂಪಿತವಾದದ್ದು. ಅನುಭವ ಪೂರ್ವದ್ದು ; ಆಲೋಚನೆ ಪಶ್ಚಿಮದ್ದು. ಅವಳ ವ್ಯಕ್ತಿತ್ವವೇ ಅಂತಹದ್ದು. ಅವಳು ಯೂರೇಷಿಯನ್ : ಪೂರ್ವ- ಪಶ್ಚಿಮಗಳ ಸಂಗಮ. ಎರಡೂ ತನ್ನದೆಂಬ ಹೆಮ್ಮೆಗೂ ಅದು ಕಾರಣವಾಗಬಹುದು. ಹೀಗಾಗಿ ಅವಳ ಮನಸ್ಸು ಪರಸ್ಪರ ವಿರುದ್ಧವಾದ ಅನಿಸಿಕೆಗಳ ಘರ್ಷಣೆಗೆ ಭೂಮಿಕೆಯಾಗುತ್ತದೆ. ವಿರುದ್ಧ ಭಾವನೆಗಳ ಸೆಳೆತಕ್ಕೆ ಸಿಕ್ಕು ಘಾಸಿಯಾಗುವ ಮನಸ್ಸಿನ ಸುಂದರ ಚಿತ್ರಣವೇ ಈ ಕಾದಂಬರಿ.

ಮಾರ್ಕ್‌ನನ್ನು ಪ್ರೇಮಿಸಿದ ಹ್ಯಾನ್ ಮದುವೆಯೇ ಪ್ರೇಮದ ಗಂತವ್ಯ ಎಂದು ನಂಬುವ ವ್ಯಕ್ತಿಯಲ್ಲ. ಮಾರ್ಕ್ ಇವಳಿಗಾಗಿ ತನ್ನ ಈಗಿನ ಹೆಂಡತಿಯಿಂದ ವಿಚ್ಛೇದನ ಪಡೆಯಲು ತಯಾರಾಗಿದ್ದಾನೆ. ಅದನ್ನು ಅವಳಿಗೆ ಅನೇಕ ಬಾರಿ ಹೇಳಿದ್ದಾನೆ ; ಅವಳು ಅನುಮತಿಯಿತ್ತತಕ್ಷಣ ಸ್ವತಂತ್ರನಾಗಿ ಹ್ಯಾನ್‌ಳನ್ನು ಮದುವೆಯಾಗುವುದಕ್ಕೆ ಸಿದ್ಧನಾಗಿದ್ದಾನೆ. ಒಮ್ಮೆ ಅಂಥ ಮಾತೊಂದಕ್ಕೆ ಉತ್ತರವಾಗಿ ಹ್ಯಾನ್ ಹೇಳುತ್ತಾಳೆ : 'ನಿನ್ನ ನೋಟ, ಧ್ವನಿ ಇವುಗಳಿಗಾಗಿ ನಾನು ಹಂಬಲಿಸಿದರೂ, ನಾನು ಮುಟ್ಟಿದ್ದೆಲ್ಲಾ ನೀನೇ ಅನ್ನಿಸಿದರೂ, ನಿನ್ನ ಕಂಡರೆ ಉಂಟಾಗುವ ಭಾವನೆ ಶ್ರೀಮತಿ ಎಲಿಯಟ್ ಆಗುವುದೇ ಗುರಿ ಎಂಬುವುದಲ್ಲ. ನಿನ್ನ ಶುಶ್ರೂಷೆ ಮಾಡಬೇಕು, ನಿನ್ನ ಆಹಾರ ಸಿದ್ಧಪಡಿಸಬೇಕು, ನಿನ್ನ ಶೂಗಳನ್ನು ಒರೆಸಬೇಕು, ನಿನ್ನ ಮಕ್ಕಳನ್ನು ಹೊತ್ತು ಹೆರಬೇಕು... ಆದರೆ ಅದಕ್ಕೂ ಮಿಗಿಲಾದ್ದು ಏನೋ ಒಂದಿದೆ ನನ್ನ ಮನಸ್ಸನ್ನಾವರಿಸಿ... ಪ್ರಾಯಶಃ ಅದು ಚೈನಾ...' ಎಂದು ವಿವರಿಸುತ್ತಾಳೆ.

ಕಾದಂಬರಿಯನ್ನು ಹ್ಯಾನ್ ತನ್ನ ದೃಷ್ಟಿಯಿಂದ ಚಿತ್ರಿಸುವುದಾದ್ದರಿಂದ ಅವಳ ಅನಿಸಿಕೆಗಳಿಗೇ ಇಲ್ಲಿ ಮಹತ್ವ. ಚೀನಾದ ಸೆಳೆತದ ಕಾರಣವಲ್ಲದೆ ಪ್ರೇಮವೆಂದರೆ ಒಂದು ವ್ಯಕ್ತಿಯ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸುವ ಹಂಬಲವಲ್ಲ ಎಂಬುದು ಹ್ಯಾನ್‌ಳ ಭಾವನೆ. ತಾನು ಮಾರ್ಕ್‌ನ ಬಗ್ಗೆ ಹೊಂದಿರುವ ಪ್ರೀತಿಯು ಅವನನ್ನು ಬಂಧಿಸಬಾರದೆಂದು, ಅವನ ಸ್ವಾತಂತ್ರ್ಯ ಅದರಿಂದಾಗಿ ಕುಂಠಿತಗೊಳ್ಳಬಾರದೆಂದು ಅವಳು ಮಿಡಿಯುತ್ತಾಳೆ. ತನ್ನ ಜೊತೆಗೇ ಸದಾ ಇರಬೇಕೆಂದು ಮಾರ್ಕ್ ಹಂಬಲಿಸುತ್ತಾನೆಂದು ಒಮ್ಮೆ ಅವಳಿಗನ್ನಿಸಿದಾಗ ಅವಳು ಉದ್ಗರಿಸುತ್ತಾಳೆ : 'Heaven, how much more love I must learn to make him free.' ಭದ್ರತೆಗಾಗಿ ಹಲುಬುವ ಹೆಣ್ಣಿನ ಬಗ್ಗೆ, ಸುಭದ್ರ ಭವಿಷ್ಯಕ್ಕಾಗಿ ತನ್ನ ಪ್ರೇಮಕ್ಕೆ ಚೌಕಟ್ಟು ಹಾಕಲು ಇಚ್ಛಿಸುವ ಹೆಣ್ಣಿನ ಬಗ್ಗೆ ಅವಳಿಗೆ ಕನಿಕರ. ಆದರೆ ತನ್ನ ಪ್ರಿಯಕರನಿದ್ದಾನೆ,

ತನಗಾಗಿ ಹಂಬಲಿಸುತ್ತಾನೆ ಎಂಬ ಭಾವನೆಯೇ ಸಾಕು ಸಂತೋಷಕ್ಕೆ. ಒಮ್ಮೆ ಭಾವುಕ ಸನ್ನಿವೇಶವೊಂದರಲ್ಲಿ ಅವರಿಬ್ಬರೂ ಸಂಭಾಷಿಸುತ್ತಿದ್ದಾರೆ. ಮಾರ್ಕ್ ಹಾಗೂ ಹ್ಯಾನ್ ಮದುವೆಯಾಗುವುದು ಸುಲಭವೂ ಅಲ್ಲ, ಸರಿಯೂ ಅಲ್ಲ ಎಂಬ ಭಾವನೆ ಅವರಲ್ಲಿದೆ. ಅವರಿಬ್ಬರೂ ಬೇರೆಯಾಗಬೇಕಾದದ್ದೂ ಅನಿವಾರ್ಯವೇ. ಮಾರ್ಕ್ ಎಷ್ಟೇ ಆಗಲಿ ಪತ್ರಿಕೆಯೊಂದರ ಪ್ರತಿನಿಧಿ, ಒಂದೆಡೆ ನಿಲ್ಲಲಾರ. ಅಂಥ ಸನ್ನಿವೇಶದಲ್ಲಿಯೂ ಅವರಿಬ್ಬರ ಹಂಬಲವೆಂದರೆ ಮುಂದಿನ ಜನ್ಮದಲ್ಲಿ ಜೋಡಿಯಾಗಿ ಹುಟ್ಟಬೇಕೆಂಬುದು ; ಅದೂ ಮಿಂಚುಳ್ಳಿಗಳಾಗಿ ಹುಟ್ಟಬೇಕೆಂದು ಬಯಸುತ್ತಾರೆ. ಆ ಪಕ್ಷಿಗಳು ಅಸಾಧಾರಣ ನಿಷ್ಠೆಯುಳ್ಳವಂತೆ. ಮಾತಿಗೆ ಮಾತು ಬಂದು ಪುನರ್ಜನ್ಮದ ನಿಯಮಗಳಂತೆ ಈಗ ಗಂಡಾದವನು ಹೆಣ್ಣು, ಹೆಣ್ಣಾದವಳು ಗಂಡಾಗಿ ಹುಟ್ಟಬೇಕೆಂದು ಮಾರ್ಕ್ ಸೂಚಿಸುತ್ತಾನೆ. ಅದಕ್ಕೆ ಹ್ಯಾನ್ ನೀಡುವ ಉತ್ತರ : 'ಕೂಡದು. ಗಂಡಾಗಿ ಹುಟ್ಟುವುದಕ್ಕೆ ನಾನು ನಿರಾಕರಿಸುತ್ತೇನೆ. ಮುಂದಿನ ಜನ್ಮ ಮಾತ್ರವಲ್ಲ, ಎಲ್ಲ ಜನ್ಮಗಳಲ್ಲೂ ಹೆಣ್ಣೇ ಆಗಬೇಕೆಂದು ನನ್ನ ಆಸೆ. ನಿನ್ನ ಭೇಟಿಯಾಗುವವರೆಗೂ ಗಂಡಾಗಿದ್ದರೆ ಚೆನ್ನಾಗಿತ್ತು ಎಂಬ ಹಂಬಲಿಕೆಯಲ್ಲಿದ್ದ ನನಗೆ, ನಿನ್ನ ಕಂಡ ನಂತರ ಹೆಣ್ಣಾಗಿರುವುದಕ್ಕೇ ಪರಿತಪಿಸುವಂತಾಗಿದೆ...' ಪೌರ್ವಾತ್ಯ ಸಂಪ್ರದಾಯದ ಅನನ್ಯ ಶರಣತೆಯೇ ಪತಿಪ್ರೇಮದ ಲಕ್ಷಣವೆಂಬ ಭಾವನೆ ಹ್ಯಾನ್‌ಳಲ್ಲಿ ಆಳವಾಗಿ ಬೇರೂರಿದೆ. ತನ್ನ ಕೆಲಸದ ಕಾರಣದಿಂದಾಗಿ ಮಾರ್ಕ್ ದೂರ ಹೋಗಬೇಕಾದಾಗ ಅವನನ್ನು ಕಟ್ಟಿಹಾಕುವುದರಲ್ಲಿ ಅವಳು ಸಂತೋಷ ಕಾಣಲಾರಳು. 'ಎಲ್ಲಿಗೆ ಬೇಕಾದರೂ ಹೋಗು, ಪೂರ್ತಿ ಹೊರಟುಹೋಗು. ಅದರಿಂದ ನನಗೆ ನೋವಾಗಲಾರದು. ಯಾಕೆಂದರೆ ನೀನು ನಿನ್ನ ಹಿಂದೆ ಬಿಟ್ಟುಹೋಗುವ ಜಗತ್ತಿನಲ್ಲಿ ನೀನೇ ತುಂಬಿರುತ್ತೀಯೆ.'

ಮಾರ್ಕ್-ಹ್ಯಾನ್‌ರ ಪ್ರೇಮದಲ್ಲಿ ದೈಹಿಕ ಸುಖವಿಲ್ಲದೆ ಇಲ್ಲ. ಆದರೆ ಅವರಿಬ್ಬರಿಗೂ ಅದೇ ಸರ್ವಸ್ವವೆಂದು ಅನ್ನಿಸುವುದಿಲ್ಲ. 'Neither of us believed in casual bland copulation' ಎಂದು ಹ್ಯಾನ್ ಒಮ್ಮೆ ಹೇಳುತ್ತಾಳೆ. ತಮ್ಮ ಇರುವಿಕೆಯ ಸಂತೋಷಕ್ಕೆ ಕಾರಣವೆಂದರೆ ತಮ್ಮ ಸಂಯಮ ಎಂದೇ ಅವಳ ನಂಬಿಕೆ.

ಸೂಯಿನ್ ಚೀನಕ್ಕೆ ಹೋಗಿ ಅಲ್ಲಿ ವೈದ್ಯೆಯಾಗಿ ಸೇವೆ ಮಾಡಲು ಬಯಸುತ್ತಾಳೆ. ಹಾಗೆ ಕೆಲವು ಕಾಲ ಅಲ್ಲಿ ಹೋಗಿ ಇದ್ದೂ ಇರುತ್ತಾಳೆ. ಆದರೆ ಆ ಪರಿಸ್ಥಿತಿಯಲ್ಲಿ ಅಲ್ಲಿರುವುದು ಅವಳಿಗೆ ಅಸಾಧ್ಯವಾಗಿ ಮತ್ತೆ ಹಾಂಕಾಂಗ್‌ಗೆ ವಾಪಸಾಗುತ್ತಾಳೆ. ಆದರೆ ಅವಳು ಮಾರ್ಕ್‌ನೊಡನೆ ಹೆಚ್ಚುಕಾಲ ಕೂಡಿರಲಾರದ ಪರಿಸ್ಥಿತಿ ಬರುತ್ತದೆ. ಮಾರ್ಕ್ ಕೊರಿಯ ಯುದ್ಧವನ್ನು ತನ್ನ ಪತ್ರಿಕೆಗೆ ವರದಿ ಮಾಡಲು ಅಲ್ಲಿಗೇ ತೆರಳಬೇಕಾಗುತ್ತದೆ. ಈ ಅಗಲುವಿಕೆಯಲ್ಲಿ ಗೋಳುಕರೆಯಿಲ್ಲ. ಇದ್ದಲ್ಲಿಂದಲೇ ಪರಸ್ಪರ ಪ್ರೇಮಿಸಬಲ್ಲ ಅದ್ಭುತಶಕ್ತಿ ಇಬ್ಬರಲ್ಲಿಯೂ ಇದೆ. ಆದ್ದರಿಂದಲೇ ದೂರದಿಂದ ಅವನು ಬರೆದ ಕಾಗದದಲ್ಲಿ ಪ್ರೇಮದ ಬಗ್ಗೆ ಈ ಮಾತುಗಳನ್ನು ಹೇಳುತ್ತಾನೆ : 'ನಾನು ಆತ್ಮತೃಪ್ತನಾಗಿರುವುದರಲ್ಲಿ ಆಶ್ಚರ್ಯವಿಲ್ಲ.

ಸದಾ ನನ್ನೊಳಗೆ ತುಂಬಿಕೊಂಡಿರುವ ನಿನ್ನ ಪ್ರೇಮವು ಸುಖದ ಕಾರಂಜಿಯಾಗಿದೆ. ಅದರಿಂದ ನನ್ನ ಇಡೀ ಅಸ್ತಿತ್ವವೇ ಸತ್ವಯುತವಾಗಿದೆ. ಸದಾ ಅದು ನೀರೆರೆಯುತ್ತಿದೆ. ನಮ್ಮ ಬಗ್ಗೆ ದೇವರು ತುಂಬ ದಯಾವಂತನಾಗಿದ್ದಾನೆ. ''ಪ್ರೇಮಿಸಲ್ಪಡದಿರುವುದೆಂದರೆ ದುರಂತವೇ ಸರಿ'' ಎಂದು ಯಾರೋ ಒಮ್ಮೆ ನನಗೆ ಹೇಳಿದ್ದರು. ಆದರೆ ಪ್ರೇಮಿಸದಿರುವುದೇ ನಿಜವಾದ ದುರಂತವಲ್ಲವೇ. ಓ ! ಸೂಯಿನ್, ನಾನು ತುಂಬ ಸಂತೋಷವಾಗಿದ್ದೇನೆ. ನೀನೂ ನಾನೂ ಇಬ್ಬರೂ ಆ ವಿವಿಧೋಜ್ವಲವಾದದ್ದರಿಂದ (ಪ್ರೇಮದಿಂದ) ವಂಚಿತವಾಗಿಲ್ಲ.'

ಕೊರಿಯಕ್ಕೆ ಹೋದ ಮಾರ್ಕ್ ಮತ್ತೆ ಮರಳಿ ಬರುವುದೇ ಇಲ್ಲ. ಒಂದು ಬೆಳಿಗ್ಗೆ 'ಸಂಡೇ ಹೆರಾಲ್ಡ್'ನಲ್ಲಿ ಹಠಾತ್ತಾಗಿ ಸುದ್ದಿ ಕಾಣಿಸಿಕೊಳ್ಳುತ್ತದೆ : ಮಾರ್ಕ್ ಸತ್ತ ಸುದ್ದಿ ಅದು. ವಿವಿಧ ಪತ್ರಿಕೆಗಳಿಗೆ ಸೇರಿದ ಇನ್ನೂರೆಪ್ಪತ್ತು ಮಂದಿ ಪ್ರತಿನಿಧಿಗಳಲ್ಲಿ ಕೆಲವರಿಗೆ ಹಿಂದೆಯೇ ಏನೋ ಆಗಿತ್ತು. ಅಷ್ಟೊಂದು ಜನರಲ್ಲಿ ಮಾರ್ಕ್‌ಗೆ ಏನೂ ಆಗಲಾರದು ಅಂದುಕೊಂಡಿದ್ದುದು ಸುಳ್ಳಾಗಿತ್ತು. ಅವನಿಗೆ ಸಾವು ಒದಗಿತ್ತು. ಆನಂತರ ಅವನು ಬರೆದಿದ್ದ ಪತ್ರಗಳು, ಒಂದಾದ ಮೇಲೆ ಒಂದರಂತೆ ಹದಿನೆಂಟು, ಅಂಚೆಯಲ್ಲಿ ಬಂದು ಹ್ಯಾನಳ ಕೈ ಸೇರಿತ್ತು ! ವಿವಿಧೋಜ್ವಲ ವಸ್ತು – ಪ್ರೇಮ – ಶಾಶ್ವತವಾಗಿ ಉಳಿದಿತ್ತು !

ಹ್ಯಾನ್‌ಳಿಗೆ ತನ್ನ ಮತ್ತು ಮಾರ್ಕ್‌ನ ಮಿಲನ ವಿಧಿಯ ಕೈವಾಡವೆಂದೇ ಕಾಣುತ್ತದೆ. ವಿಧವೆಯಾದ ಅವಳಿಗೆ ಬಯಕೆಗಳಿದ್ದರೂ ಪರಿಸರದ ಪ್ರಭಾವದಿಂದಾಗಿ ಪ್ರಣಯ ಅಸಾಧ್ಯವೆನಿಸಿತ್ತು. ಅಲ್ಲದೆ, ವೈದ್ಯೆಯಾಗಿ ಸಾವಿರಾರು ಜನಗಳ ಸಂಪರ್ಕ ಅವಳಿಗಿದ್ದರೂ ಅವಳ ಮನಸ್ಸನ್ನು ಗೆದ್ದವರಾರೂ ಇಲ್ಲ. ಹಠಾತ್ತಾಗಿ ಪಾರ್ಟಿಯೊಂದರಲ್ಲಿ ಪರಿಚಯವಾದ ಮಾರ್ಕ್ ತನ್ನ ಜೀವದ ಮೇಲೆ ಅತ್ಯಂತ ಆಳವಾದ ಪರಿಣಾಮವನ್ನುಂಟು ಮಾಡುವ ಸುಖದ ಬಿರುಗಾಳಿಯಂತೆ ದಾಳಿ ಮಾಡಿದುದು ಹ್ಯಾನ್‌ಳಿಗೆ ಲೋಕೋತ್ತರ ಕಾರಣದಿಂದ ಎಂಬ ಭಾವನೆ ಮೂಡಿಸಿತ್ತು. ತಮ್ಮಿಬ್ಬರ ಮಿತಿಗಳ ಅರಿವಿದ್ದರೂ ಪ್ರೇಮದ ಆಳದಲ್ಲಿ ಒಂದಾದದ್ದು ವಿಧಿಯಿಂದಲೇ. 'ವಿಧಿಯ ಬಲೆ' ಎಂಬ ಅಧ್ಯಾಯದಲ್ಲಿ ಮೀನು ಹಿಡಿಯುವ ಚಿತ್ರಣವನ್ನು ಕೊಡುವ ಹ್ಯಾನ್ ಕೊನೆಯಲ್ಲಿ ವಾಚ್ಯವಾಗಿಯೇ ಹೇಳುತ್ತಾಳೆ : 'ವಿಧಿ ತನ್ನ ಬಲೆಯನ್ನು ಬೀಸಿ ಹಣತೆಗಳನ್ನು ಹತ್ತಿಸಿತ್ತು. ನಾವಿಬ್ಬರೂ ಆಳ ನೀರಿನ ತೊಟ್ಟಿಯಲ್ಲಿರುವ ಮೀನುಗಳ ಹಾಗೆ, ಕಣ್ಣುಗಳನ್ನು ಅಗಲವಾಗಿ ತೆರೆದುಕೊಂಡೇ ವಿಧಿಯ ಆ ಜಾಲದಲ್ಲಿ ನುಸುಳಿದೆವು.'

ಇಂಥ ಪ್ರೇಮದ ಕೊನೆ ಹೇಗೋ ಎಂಬ ಅಳುಕು ಹ್ಯಾನ್‌ಳಲ್ಲಿ ಇದ್ದೇ ಇದೆ. ಅವಳ ಮನಸ್ಸಿನ ಆಳದಲ್ಲಿ (ವಿಧವೆಯಾದ) ಚೈನೀ ಸ್ತ್ರೀ ಸಾಂಪ್ರದಾಯಿಕವಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕೆಂಬ ನೀತಿಪ್ರಜ್ಞೆ ಜಾಗ್ರತವಾದದ್ದರ ಜೊತೆಗೆ, ಚಿಕ್ಕ ಮಗಳ ಜವಾಬ್ದಾರಿಯ ಅರಿವು, ವಿವಾಹಿತನಾದ ಮಾರ್ಕ್‌ನೊಡನೆ ಇಟ್ಟುಕೊಳ್ಳಬಹುದಾದ ಸಂಬಂಧದ ಕೊನೆ ಹೇಗೋ ಎಂಬ ಶಂಕೆ – ಇವೆಲ್ಲ ಅವಳನ್ನು ಮೊದಮೊದಲು ಕಾಡಿಸಿತು. 'ನಿರ್ಧಾರ' ಎಂಬ

ಅಧ್ಯಾಯದಲ್ಲಿ ಮೊದಲ ಬಾರಿಗೆ, ಅನೇಕ ವರ್ಷಗಳ ನಂತರ, ದೇಹಸುಖವನ್ನು ಮಾರ್ಕ್‌ನೊಡನೆ ಪಡೆದ ಸನ್ನಿವೇಶ, ಮಾರ್ಕ್ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಆವರಿಸಿಬಿಟ್ಟ ರೀತಿ, ಇವುಗಳ ಚಿತ್ರಣ ಮಾರ್ಮಿಕವಾಗಿ ಬಂದಿದೆ.

ಮಾರ್ಕ್ ಮತ್ತು ತನ್ನ ನಡುವಣ ಪ್ರೇಮಪ್ರಕರಣದಲ್ಲಿ ಪರಸ್ಪರರ ಸ್ವಾತಂತ್ರ್ಯ ಹರಣಗೊಳಿಸಿ ಸ್ವಾಮ್ಯ ಸ್ಥಾಪಿಸಿಕೊಳ್ಳುವ ಭಾವನೆಯಿಲ್ಲ. ಈ ಪ್ರೇಮದ ಕೊನೆ ಹೇಗೋ ಎಂಬ ಅಳುಕು ಹ್ಯಾನ್‌ಳಿಗೆ ಬರಲು ಮತ್ತೊಂದು ಕಾರಣ ತಾಯ್ನಾಡಿಗೆ ತನ್ನ ವೈದ್ಯಕೀಯ ಸೇವೆಯನ್ನು ಮುಡುಪಾಗಿಡಬೇಕೆಂಬ ಹಂಬಲ. ಆದರಂತೆ ಹೊಸ ವಾತಾವರಣದಲ್ಲಿ ಚೀನಾ ಹೇಗಿದೆಯೋ ಎಂಬ ಕಾರಣದಿಂದಾಗಿ, ದಿಢೀರನೆ ಒಮ್ಮೆಲೇ ಚೀನಾಕ್ಕೆ ಹೋಗುವ ಬದಲು, ಅಲ್ಲಿಯ ಪರಿಸ್ಥಿತಿಯ ಅಧ್ಯಯನ ನಡೆಸಿ ಅಲ್ಲಿ ಬಾಳಲು ತನಗೆ ಸಾಧ್ಯವಾಗುವುದೇ ಎಂಬ ತೀರ್ಮಾನಕ್ಕೆ ಬರಲು ಅನುಕೂಲವಾಗುವಂತೆ ಅಲ್ಲಿಗೆ ಹೋಗಿ ಕೆಲಕಾಲ ವಾಸಿಸುವ ನಿರ್ಧಾರ ಮಾಡುತ್ತಾಳೆ. ಮೂವತ್ತು ವರ್ಷಗಳಷ್ಟು ದೀರ್ಘಕಾಲ ಅಂತರ್ಯುದ್ಧದಲ್ಲಿ ತೊಡಗಿದ್ದ ಚೀನಾ ಕೊನೆಗೂ ಒಂದು ನಿರ್ಧಾರಕ ಪರಿಸ್ಥಿತಿಯನ್ನು ತಲುಪಿತ್ತು – ಕಮ್ಯೂನಿಸ್ಟ್ ಆಡಳಿತ ಅಲ್ಲಿ ನೆಲೆಗೊಂಡಿತ್ತು. ಆದರೆ ಇನ್ನೂ ಸಂಕ್ರಮಣ ಕಾಲವದು.

ಅಲ್ಲಿ ಹ್ಯಾನ್ ಕಾಣುವ ದೃಶ್ಯ ತಾನು ಹಿಂದೆ ಅಲ್ಲಿ ಕಂಡ ವಾತಾವರಣಕ್ಕಿಂತ ಸಂಪೂರ್ಣ ಭಿನ್ನವಾದುದು. ಹೊಸ ವ್ಯವಸ್ಥೆಯ ಬಗ್ಗೆ ಎಲ್ಲೆಲ್ಲೂ ಅಮಿತೋತ್ಸಾಹ, ಸ್ವರ್ಗ ವನ್ನೇ ಕಟ್ಟಿಬಿಡಬೇಕೆಂಬ ಛಲ – ಹಳೆಯದನ್ನೆಲ್ಲ ನಿರ್ಮೂಲ ಮಾಡಿಬಿಡಬೇಕೆಂಬ ಕೋಪ –, ಇವೆಲ್ಲ ಅತಿರೇಕ ಸ್ಥಿತಿಯಲ್ಲಿವೆ. ಪ್ರತಿನಿತ್ಯ ಊರಿನಲ್ಲಿ (ಚುಂಕಿಂಗ್) ಮೆರವಣಿಗೆ, ಉದ್ವೇಗ-ಉದ್ರೇಕಗಳಿಂದ ಕೂಡಿದ ಭಾಷಣಗಳು, ಮಾನವತೆಯಲ್ಲಿ ನಂಬಿಕೆಯಿಡುವ ಹೊಸ ಮತದ ಪ್ರಚಾರ... ಇವು ವಾತಾವರಣವನ್ನೆಲ್ಲ ವ್ಯಾಪಿಸಿಬಿಟ್ಟಿವೆ. ಹ್ಯಾನ್‌ಳಿಗೆ ಅನ್ನಿಸುತ್ತದೆ : ತಮ್ಮ ಅಭಿಪ್ರಾಯಕ್ಕೆ ತಲೆದೂಗ(ಬಾಗ)ದವರ ಖಂಡನೆ, ಇತರರನ್ನು ಗುಮಾನಿಯಿಂದ ನೋಡುವುದು, ದ್ರೋಹಿಗಳೆಂದು ಹೆಸರಿಸಿದ ವ್ಯಕ್ತಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ವಧಿಸುವುದು – ಇವೆಲ್ಲ ಈ ಹೊಸ ಆಡಳಿತದ ನಡವಳಿಕೆಯ ಹೆಜ್ಜೆಗಳು ಎಂದು.

ಹ್ಯಾನ್‌ಳಿಗೆ ಆಶ್ಚರ್ಯ ಹುಟ್ಟಿಸಿದ ಅಂಶವೆಂದರೆ 'ಯುವಕ ಸಮುದಾಯ'ದ ಸದಸ್ಯರಾದ ಕಿರಿಯ ಕಮ್ಯೂನಿಸ್ಟರ ಅಪ್ರತಿಮ ನಿಷ್ಠೆ. ಗಂಟೆಗಟ್ಟಲೆ ಜನರಿಗೆ ತಿಳುವಳಿಕೆ ನೀಡುವುದು, ಭಾಷಣ ಮಾಡುವುದು, ಪೂರ್ವಿಕರಿಗಿದ್ದ ದೇಶಪ್ರೇಮ ಮತ್ತು ತ್ಯಾಗಗಳನ್ನು ಈಗಿನವರು ಹೊಂದಿರಬೇಕಾದ ಅವಶ್ಯಕತೆಗಳ ಬಗ್ಗೆ ಮಾತನಾಡುವುದು – ಇವುಗಳಲ್ಲಿ ಅವರು ತೋರುತ್ತಿದ್ದ ತಾಳ್ಮೆ ಅಪಾರ. ಈ ಕಿರಿಯರಿಗೆ ಆಹಾರ-ಪಾನೀಯಗಳು ಬೇಡ, ನಿದ್ದೆ ಬೇಡ, ವಿಶ್ರಾಂತಿ ಬೇಡ ; ಅವರು ಅಗ್ನಿ-ಉಕ್ಕುಗಳಿಂದಾದ ಯುವಕರು ಎಂಬ ವಿಸ್ಮಯ ಹ್ಯಾನ್‌ಳಿಗೆ. ಆದರೆ ಈ ಭಾವನೆಗಳ ಪೂರದಲ್ಲಿ ಕೊಚ್ಚಿಹೋದ ಮೌಲ್ಯಗಳೆಷ್ಟೋ, ತೇಲಿಕೊಂಡು ಬಂದ ಕಸಕಡ್ಡಿಗಳೆಷ್ಟೋ — ಎಂಬ ಅಸಮಾಧಾನ ಬೇರೆ.

ಒಮ್ಮೆ ಯುವಕ ಕಮ್ಯೂನಿಸ್ಟರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಪ್ರೇಮ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಅಡ್ಡಿಯುಂಟುಮಾಡುತ್ತದೆ ಎಂದು ಹೇಳಿದುದನ್ನು ಕೇಳಿ ಹ್ಯಾನ್‌ಳ ಮನಸ್ಸು ಪಟಕ್ಕನೆ ಮಾರ್ಕ್‌ನನ್ನು ನೆನಪಿಸಿಕೊಳ್ಳುತ್ತದೆ. ತಾನು ಸ್ವಾರ್ಥಿ, ಪ್ರತಿಗಾಮಿಯೆಂಬ ಭಾವನೆ ಮೂಡುತ್ತದೆ. ಮಾರ್ಕ್‌ನ ಒಲವಿನ ರಾಜಕೀಯ ಸಿದ್ಧಾಂತ ಯಾವುದು ? ಪ್ರಾಯಶಃ ಅದಕ್ಕೆ ಹೆಸರಿಡಲು ಸಾಧ್ಯವಾಗದೆ ತಾನು ಸೇರಿರುವ ಜನಾಂಗ ದಿಂದಾಗಿ ಮಾರ್ಕ್‌ನನ್ನು ಮದುವೆಯಾಗಲು ತಾನು ಅನರ್ಹಳು ಎಂದು ಹಾಂಕಾಂಗ್‌ನಲ್ಲಿ ಅನೇಕರು ಭಾವಿಸಿದ್ದರು. ಚೀನಾದಲ್ಲಿದ್ದರೆ ಮಾರ್ಕ್‌ನನ್ನು ತನ್ನ ಜನ ಏನೆಂದು ಕರೆಯುತ್ತಿದ್ದ ರೆಂಬುದು ಊಹಾತೀತವೇನಲ್ಲ ! ಆದರೆ ಹ್ಯಾನ್‌ಳಿಗೆ ಅನ್ನಿಸುತ್ತದೆ : ಮಾನವಸ್ವಭಾವ ಎಲ್ಲಿದ್ದರೂ ಮಾನವಸ್ವಭಾವವೇ. ಇನ್ನು ಕೆಲವು ಕಾಲ ಕಳೆದರೆ ಪ್ರೇಮದ ವಿರುದ್ಧ ಭಾಷಣ ಬಿಗಿಯುತ್ತಿರುವ ಈ ಯುವ ಕಮ್ಯೂನಿಸ್ಟರು ಪ್ರೇಮಿಸಲು ತೊಡಗುತ್ತಾರೆಂಬುದರಲ್ಲಿ ಸಂಶಯವಿಲ್ಲ. ಆದರೆ ಸಂಶಯವಿದ್ದುದು ಒಬ್ಬರೊಬ್ಬರ ಮೇಲೆ. ಇದು ಯಾರ ಮೇಲೆ ತಿರುಗುತ್ತದೋ ಬಲ್ಲವರಾರು ?

ಹೊಸ ವ್ಯವಸ್ಥೆಯಲ್ಲಿ ಭಾಗಿಗಳಾಗದೆ ಉಳಿಯುವ ಸ್ವಾತಂತ್ರ್ಯವಿಲ್ಲವೇ ಇಲ್ಲ. ವ್ಯಾಪಕ ಧೋರಣೆಯ ಬಗ್ಗೆ ಭಿನ್ನಾಭಿಪ್ರಾಯ ಕೂಡದು ; ಆದರೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಸಾರ್ವಜನಿಕ ಚರ್ಚೆಗೆ ಮುಕ್ತ ಅವಕಾಶ. ತಪ್ಪಿತಸ್ಥರ ಬಗ್ಗೆ ಜನತಾ ನ್ಯಾಯಾಲಯಗಳು ವಿಚಾರಣೆ ನಡೆಸಿ ತೀರ್ಪು ನೀಡುವ ವ್ಯವಸ್ಥೆ ಬಂದಿತ್ತು. ಇದರಲ್ಲಿ ನ್ಯಾಯವಿದ್ದಂತೆ ಕೆಲವೇಳೆ ಅನ್ಯಾಯವೂ ಇತ್ತು. ಆಸ್ಪತ್ರೆಯಲ್ಲಿ ರೋಗಿಯೊಬ್ಬ ಸತ್ತ ಪ್ರಸಂಗವೊಂದನ್ನು ಹ್ಯಾನ್ ಉಲ್ಲೇಖಿಸುತ್ತಾಳೆ. ಆ ರೋಗಿ ಸತ್ತದ್ದು ವಾಸಿಯಾಗದ ಖಾಯಿಲೆಯಿಂದಾಗಿ ; ಸಮೀಪ ವೈದ್ಯರೂ ಹಾಗೆಯೇ ಸಾಕ್ಷಿ ನುಡಿದಿದ್ದರು. ಆದರೆ ರೋಗಿ ಸತ್ತದ್ದು ಮಿಷನ್ ಆಸ್ಪತ್ರೆ ಯೊಂದರಲ್ಲಿ, ಆದರಿಂದಾಗಿ ರೋಗಿ ವೈದ್ಯರ ಅನಾದರದಿಂದಾಗಿ ಸತ್ತ ಎಂಬ ಆಪಾದನೆ ಹೊರಿಸಿ ಆಸ್ಪತ್ರೆಗೆ ಜುಲ್ಮಾನೆ ವಿಧಿಸಲಾಯಿತು.

ಚೀನಾಕ್ಕೆ ಹೋಗುವಾಗ ಸೇನ್ ಎಂಬ ಅತ್ಯುತ್ಸಾಹಿ ಕಮ್ಯೂನಿಸ್ಟ್‌ನೊಡನೆ ಹೋಗಿದ್ದಳು. ಅವನು ಚೀನಾದಲ್ಲಿ ನಡೆಯುತ್ತಿದ್ದ ಎಲ್ಲವನ್ನೂ ಸಮರ್ಥಿಸುತ್ತಿದ್ದ. ಆತ ಹೊಸ ಕಮ್ಯೂನಿಸ್ಟ್ ಪಂಥದ ಪ್ರತೀಕ ; ಅವನನ್ನು ತನ್ನ ಅನುಮಾನದಿಂದ ಪ್ರಶ್ನಿಸುತ್ತಿದ್ದ ಹ್ಯಾನ್ ವಿಚಾರವಂತಿಕೆಯ ಪ್ರತೀಕ – ಆಲೋಚನಾಪರತೆಯ ಪ್ರತೀಕ. ಸೇನ್ ಯಾವ ವಿರೋಧ ವಿಚಾರಗಳಿಲ್ಲದೆ ಕಮ್ಯೂನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡವನು. ಆದರೆ ಆ ವಾತಾವರಣ ತನಗೆ ಒಗ್ಗದೆ ಮರಳಿ ಹಾಂಕಾಂಗ್‌ಗೆ ಹೋಗಲು ನಿರ್ಧರಿಸಿದಾಗ ಸೇನ್ ಹ್ಯಾನ್‌ಳನ್ನು ಪ್ರಗತಿವಿರೋಧಿ ಎಂದು ಕರೆದ. ಅದೇ ಹ್ಯಾನ್ ಹಾಂಕಾಂಗ್‌ನಲ್ಲಿ ಕಮ್ಯೂನಿಸ್ಟ್ ಎಂಬ ಅಭಿದಾನಕ್ಕೆ ಒಳಗಾಗಿದ್ದಳು : ಯಾಕೆಂದರೆ ಅವಳು ಚೀನಾವನ್ನು ಪ್ರೀತಿಸುತ್ತಿದ್ದಳು.

ಹೊಸ ರಾಜಕೀಯ ಪರಿಸ್ಥಿತಿಯಲ್ಲಿ ವ್ಯಕ್ತಿಯೊಬ್ಬ, ಅದೂ ಮುಕ್ತ ವಾತಾವರಣದಲ್ಲಿ ಬೆಳೆದ ವ್ಯಕ್ತಿ, ಅನುಭವಿಸಬೇಕಾದ ದ್ವಂದ್ವಗಳನ್ನು, ಮುಜುಗರಗಳನ್ನು ಹ್ಯಾನ್ 'ಸಾಗರ-ಭೂಮಿಗಳ ನಡುವೆ' ಎಂಬ ಅಧ್ಯಾಯದಲ್ಲಿ ವಿವರಿಸುತ್ತಾಳೆ. ಎಷ್ಟೋ ವೇಳೆ ಅವಳು ಬದಲಾದರೂ ಚೀನೀ ಪರಿಸರವನ್ನು ವಿವರಿಸುವಾಗ ಅವಳ ಧ್ವನಿಯಲ್ಲಿ ವ್ಯಂಗ್ಯವಿದೆ ಯೇನೋ ಎನ್ನಿಸುತ್ತದೆ. ಮುಕ್ತವಾದ ಪಾಶ್ಚಿಮಾತ್ಯ ವಾತಾವರಣದಲ್ಲಿ ಬೆಳೆದ ಅವಳ ಮನಸ್ಸು ಪೂರ್ವಾಗ್ರಹಪೀಡಿತವೇನೋ ಎಂದೂ ಅನ್ನಿಸಬಹುದು. 'ಹಿಂದೆ ಜನರು ಹಾದಿಬದಿಯ ಹುಲ್ಲಿನಂತೆ ಅನಾಮಧೇಯರಾಗಿದ್ದರು ; ಈಗಿನ ಉತ್ಸಾಹಪೂರ್ಣ ವಾತಾವರಣದಲ್ಲಿ ಅವರು ಭೋರ್ಗರೆವ ಅಲೆಗಳಲ್ಲಿನ ನೀರಿನ ಕಣಗಳಂತಿದ್ದಾರೆ !' ಎಂಬ ಭಾವನೆ ಅವಳಿಗಾಗುತ್ತದೆ.

ಅವಳು ಯೂರೋಪಿಯನ್ ಆದ್ದರಿಂದ ಅವಳಲ್ಲಿ ಪೂರ್ವ-ಪಶ್ಚಿಮಗಳ ಸಂಗಮವಿದೆ, ಅವುಗಳ ಘರ್ಷಣೆಯಿದೆ. ಸನಾತನ ಭೂಮಿಯಿಂದ ಬಂದ ವ್ಯಕ್ತಿಯೆಂದು ಪಾಶ್ಚಾತ್ಯರು ತನ್ನನ್ನು ಗೌರವಿಸುತ್ತಾರೆ. ಆದರೆ ಪಾಶ್ಚಾತ್ಯ ವಿದ್ಯೆ ಕಲಿತು ಕೀಳು ಭೌತಿಕ ಜೀವನವನ್ನು ನಡೆಸಿದವಳೆಂದು ತಾಯ್ನಾಡಲ್ಲಿ ಕೀಳರಿಮೆಗೆ ಒಳಗಾಗಬೇಕಾಗುತ್ತದೆ. ಈ ಇಬ್ಬಂದಿತನದ ಮಾರ್ಮಿಕ ಚಿತ್ರಣವನ್ನು ಹ್ಯಾನ್ ತನ್ನ ಕಾದಂಬರಿಯಲ್ಲಿ ನೀಡುತ್ತಾಳೆ.

ಹ್ಯಾನ್‌ಳಿಗೆ ಈ ಸಂದಿಗ್ಧತೆಯೊದಗುವಂತೆ ಅವಳ ತಂಗಿ ಸೂಶೆನ್‌ಳಿಗೆ ಉಂಟಾಗದು. ಅವಳಿಗೆ ತಾಯ್ನಾಡಿನ ಹಂಬಲಕ್ಕಿಂತ ಗಾಢವಾದುದು ವೈಯಕ್ತಿಕ ಸುಖ ಮತ್ತು ಭದ್ರತೆಗಳು. ಶತ್ರುಗಳೊಡನೆ ಸಹಕರಿಸಿದನೆಂಬ ಕಾರಣಕ್ಕಾಗಿ ಸೂಶೆನ್‌ಳ ಗಂಡನನ್ನು ಹಿಂದಿನ ಸರ್ಕಾರ ಕೊಲ್ಲಿಸಿತ್ತು. ಆದರೆ ಅವನು ಅಮೆರಿಕೆಯಲ್ಲಿ ಹೆಂಡತಿ ಮಕ್ಕಳಿಗಾಗಿ ಅಪಾರ ಆಸ್ತಿಯಿಟ್ಟಿದ್ದ. ಅಲ್ಲಿಗೆ ಹೋಗಿ ಸುಖವಾಗಿರುವುದೇ ಅವಳ ಗುರಿ. ಅವಳನ್ನು ಕರೆತರಲು ಹೋಗಿದ್ದ ಹ್ಯಾನ್ ಸೂಶೆನ್‌ಳನ್ನು 'ಮತ್ತೆಂದೂ ತಾಯ್ನಾಡಿಗೆ ಹಿಂದಿರುಗುವುದಿಲ್ಲವೇನು ?' ಎಂದು ಕೇಳಿದಾಗ ಅವಳು ಹೇಳಿದ್ದಳು : 'ಎಂದೆಂದೂ ಇಲ್ಲ; ಭಯ, ರೋಗ, ಹಸಿವು - ಸಂಕಷ್ಟಗಳು ನನಗೆ ಸಾಕಾಗಿವೆ ; ಬಡಜನರನ್ನೇ ನೋಡಿ ನೋಡಿ ಬೇಸರವಾಗಿದೆ. ಬರೀ ಜನ, ಬಡತನ, ಇವೇ ತುಂಬಿದೆ ಇಲ್ಲಿ. ನನ್ನಂತೆಯೇ ನನ್ನೊಡನೆ ಬೆಳೆದ ಅನೇಕ ಮಂದಿ ಮತ್ತೆಂದೂ ವಾಪಸಾಗದ ನಿರ್ಧಾರದಿಂದ ಚೀನಾ ಬಿಡುತ್ತಿದ್ದಾರೆ. ಸೂಯಿನ್, ನೀನು ನಕ್ಷತ್ರಲೋಕದಲ್ಲಿ ವಾಸಿಸುತ್ತೀ. ನಿನ್ನ ಆಲೋಚನಾ ರೀತಿ ಬೇರೆ. ಇನ್ನೆಂದೂ ಅಭದ್ರತೆಯಿಂದ ಭಯದಿಂದ ನಾನು ಜೀವಿಸಲಾರೆ.' ಹ್ಯಾನ್‌ಳಿಗೆ ಈ ದೃಢನಿರ್ಧಾರವಿಲ್ಲ. ಅವಳ ಮನಸ್ಸು ತಾಯ್ನಾಡಿನ ಬಗ್ಗೆ ಮೃದುವಾಗಿದೆ, ವೈಯಕ್ತಿಕ ನಂಬಿಕೆಗಳಿಂದ ಕದಡಿಹೋಗಿದೆ. ಹೀಗಾಗಿ ಅವಳಲ್ಲಿ ತುಂಬಿರುವುದು ಕಿತ್ತು ತಿನ್ನುವ ಸಂದಿಗ್ಧತೆ. ಆದರೆ ಕೊನೆಗೆ ಒಲ್ಲದ ಮನಸ್ಸಿನಿಂದ ಅವಳು ಆಯ್ದುಕೊಳ್ಳುವುದು ಸ್ವಾತಂತ್ರ್ಯವನ್ನು

ಕಾದಂಬರಿಯ ಶೀರ್ಷಿಕೆಯಿಂದಾಗಿ ಇದರ ವಸ್ತು ಪ್ರೇಮ ಎಂದು ಭಾವಿಸಬೇಕು ;

ಕಾದಂಬರಿಕಾರ್ತಿಯ ದೃಷ್ಟಿಯಲ್ಲಿ ಅದೇ ವಸ್ತುವೆಂಬುದು ಸ್ಪಷ್ಟ. ಆದರೆ ಕಾದಂಬರಿಯು ಅಷ್ಟು ಸರಳವಾಗಿ ಪ್ರೇಮವನ್ನು ಚಿತ್ರಿಸುವುದಿಲ್ಲ. ಪ್ರೇಮದ ನೋವು-ನಲಿವುಗಳು, ವೈಯಕ್ತಿಕ ಭಾವನೆಗಳು ಇಲ್ಲಿ ಹಾಸುಹೊಕ್ಕಾಗಿ ಚಿತ್ರಿತವಾಗಿರುವುದರ ಜೊತೆಗೆ, ಎರಡು ಸಂಸ್ಕೃತಿಗಳ ಸಂಗಮವಾದ ಸೂಯಿನ್‌ಳ ಸಂದಿಗ್ಧತೆಯೂ ಇಲ್ಲಿ ಸೇರಿದೆ ; ಪೂರ್ವ-ಪಶ್ಚಿಮಗಳು ಸೇರುವ ಹಾಂಕಾಂಗ್‌ನ ಜೀವನ ವಿಚಿತ್ರ ಮೇಳವಾಗಿರುವಂತೆ ಸೂಯಿನ್-ಮಾರ್ಕ್‌ರ ಮಿಲನ ವಿಚಿತ್ರವಾಗಿದೆ. ಚೀನಾ ಹಳೆಯ ಪೊರೆ ಜೊತೆಗೆ, ಹೊಸ ಬಿರುಗಾಳಿಯಿಂದಾಗಿ ಹಳೆಯ ಭವ್ಯತೆಯನ್ನು ಕಳೆದುಕೊಳ್ಳುತ್ತಿದೆ. ಹಾಗೂ ಸಂಪೂರ್ಣವಾಗಿ ಹೊಸ ಸ್ಥಿತಿಗೆ ಬಂದಿಲ್ಲದ ಅನಿಶ್ಚಿತತೆಯಲ್ಲೂ ಬೇಯುತ್ತಿದೆ. ಹೀಗಾಗಿ ಕಾದಂಬರಿಯು ಒಟ್ಟಾರೆ ಸಂದಿಗ್ಧತೆಯನ್ನು ಧ್ವನಿಸುತ್ತದೆ. ಕಾದಂಬರಿ ಈ ಕಾರಣದಿಂದಾಗಿ ಸಂಕೀರ್ಣವಾಗಿದೆ. ವ್ಯಕ್ತಿ, ದೇಶ, ರಾಜಕೀಯ ವ್ಯವಸ್ಥೆ – ಇವೆಲ್ಲವೂ ಒಂದರೊಡನೊಂದು ಸೇರಿಕೊಂಡಿರುವ ಈ ಕಾದಂಬರಿಯನ್ನು ಓದುವಾಗ ಉಸಿರುಕಟ್ಟಿಸುವ ಉದ್ವೇಗ ನಮ್ಮನ್ನಾವರಿಸುತ್ತದೆ. ಇಲ್ಲಿನ ಪ್ರೇಮದ ಚಿತ್ರಣ ನಮ್ಮನ್ನು ಮೃದುಗೊಳಿಸುತ್ತದೆ, ರಾಜಕೀಯ ಅನಿಶ್ಚಿತತೆ ತಲ್ಲಣಗೊಳಿಸುತ್ತದೆ. ಎಲ್ಲೆಡೆಗಳ ಮನುಷ್ಯನ ಸ್ವಭಾವ ವಿಸ್ಮಯಗೊಳಿಸುತ್ತದೆ, ಅವರ ನೋವು ಕಲಕುತ್ತದೆ. ಸೂಯಿನ್ ತನ್ನ ಇಡೀ ವ್ಯಕ್ತಿತ್ವವನ್ನು ಕಾದಂಬರಿಯಲ್ಲಿ ತೆರೆದುಕೊಂಡಿರುವುದರಿಂದಾಗಿ A Many-splendoured Thing ನಮ್ಮನ್ನು ಆವರಿಸಿಬಿಡುವ ಶಕ್ತಿಯನ್ನು ಪಡೆದುಕೊಂಡಿದೆ.

ಗ್ರಾಹಾಂ ಗ್ರೀನ್ : ಮೂರು ಕಾದಂಬರಿಗಳು

ಹೇಮಂತ ಕುಲಕರ್ಣಿ

ಗ್ರಾಹಾಂ ಗ್ರೀನ್ ಸಮಕಾಲೀನ ಕಾದಂಬರಿಕಾರರಲ್ಲಿ ಅಗ್ರಗಣ್ಯರೆನಿಸಿದವರಲ್ಲೊಬ್ಬನು. ಅವನು ಸೃಷ್ಟಿಸಿದ ಕಾದಂಬರಿಗಳಲ್ಲಿ ಅತಿ ತುಚ್ಛವೆನಿಸುವಂತಹ ಭಾವಾವೇಶಗಳೊಡನೆ ಗಂಭೀರವಾದ ತತ್ವಶಾಸ್ತ್ರ ಮತ್ತು ದೇವತಾ ಮೀಮಾಂಸೆಗಳ ಸಮಾವೇಶವಾಗಿರುವುದು ಅವನ ವೈಶಿಷ್ಟ್ಯ. ಭಾವಾವೇಶದೊಡನೆ ಆಧ್ಯಾತ್ಮಿಕ ಚಿಂತನ, ನಿಗೂಢವಾದ ಕುತೂಹಲ, ಪಾಪ ಮತ್ತು ವಿಮೋಚನೆಗಳ ಕುರಿತ ಅತ್ಯಾಸಕ್ತಿ – ಇವುಗಳ ಸಮಾವೇಶದಿಂದಾಗಿ ಅವನ ಕತೆಗಳನ್ನು 'ತತ್ತ್ವಾಲೋಚಕ ರೋಮಾಂಚಕಾರಿ ಕತೆ'ಗಳೆನ್ನಬಹುದು. ಇಂತಹ ಅಭಿಧಾನಕ್ಕೆ ರೋಮಾಂಚಕಾರಿ ಅನುಭವಗಳ ಆಂತರ್ಯದಲ್ಲಿ ತತ್ತ್ವಚಿಂತನೆಯಿರುವುದೊಂದೇ ಕಾರಣವಲ್ಲ. ತೆರೆತೆರೆಯಾಗಿ ತೆರೆಯುವ ಪ್ರಭಾವಶಾಲಿ ದೃಶ್ಯಗಳಲ್ಲಿ ಅವನ ನಿರೂಪಣೆ ಪಾಪ ಮತ್ತು ದೌರ್ಜನ್ಯಪೂರ್ಣವಾದ ಜೀವನದ ಆಳದಲ್ಲಿ ಬೀರುವ ಪ್ರಕಾಶದಿಂದ ಮೈನವಿರೇಳಿಸುತ್ತದೆ.

ಈ ತತ್ತ್ವಾಲೋಚಕ ರೋಮಾಂಚಕಾರಿ ಕಾದಂಬರಿಗಳ ನಿಗೂಢ ಸಮಸ್ಯೆಯ ಕೇಂದ್ರದಲ್ಲಿರುವದು ಕ್ರಿಸ್ತಧರ್ಮದ ಪ್ರತೀಕವಾದ ಮರದ ಕ್ರೂಜೆ . ಆ ಕಾದಂಬರಿಗಳ ಪಾತ್ರಗಳಲ್ಲಿ ಹೆಚ್ಚಿನವು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಲ್ಲಿಯೇ ಅತ್ಯಾಸಕ್ತವಾಗಿವೆ. ಆದ್ದರಿಂದ ಈ ಕಾದಂಬರಿಗಳ ರಚನೆಯಲ್ಲಿ ಧಾರ್ಮಿಕ ಸಮಸ್ಯೆಗಳು ಮುಖ್ಯ ಅಂಗಗಳಾಗಿ ನಿಲ್ಲುತ್ತವೆ. ಗ್ರಂಥಕರ್ತನಂತೆಯೇ ಅವನ ಮುಖ್ಯ ಪಾತ್ರಗಳೆಲ್ಲರೂ ರೋಮನ್ ಕ್ಯಾಥೊಲಿಕ್ ಪಂಗಡಕ್ಕೆ ಸೇರಿದವರು. ಅವರ ಜೀವನವನ್ನು ರೂಪಿಸುವ ವಿಶಿಷ್ಟವಾದ ಹಿನ್ನೆಲೆಯಲ್ಲಿಯೇ ಅವರನ್ನು ಕಾಡುವ ಸಮಸ್ಯೆಗಳೂ ಸಂಕಟಗಳೂ ಉದ್ಭವಿಸುತ್ತವೆ. ಆದರೆ ಆ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಆ ಧರ್ಮದ ವಿರೋಧ ನಿಷೇಧಗಳಿಂದ ಪ್ರಯೋಜನವಾಗುವದಿಲ್ಲ. ಆದ್ದರಿಂದ ಅವರು ಕೊನೆಯಲ್ಲಿ ಬೆಳಕನ್ನು ಕಾಣುವದಕ್ಕೆ ತಮ್ಮ ಪರಂಪರಾಗತವಾದ ವಿಚಾರ ಮತ್ತು ಭಾವನೆಗಳ ಹಿಡಿತದಿಂದ ಹೊರಬರಬೇಕಾಗುತ್ತದೆ. ಧರ್ಮಸಂಸ್ಥೆಯ ದೃಷ್ಟಿಯಲ್ಲಿ ಅವರ ಕೃತಿಗಳು ಧರ್ಮದ್ರೋಹವೆಂಬಂತೆ ಕಂಡರೂ ಅವುಗಳ ಮೂಲದಲ್ಲಿ ಪರಂಪರೆಗೆ ಹೊರತಾದ ನೀತಿಯ ಕಲ್ಪನೆಯೊಂದು ಗೋಚರಿಸುತ್ತದೆ. ಅದಕ್ಕೆ ಸಮರ್ಥನೆ ಬಹುಶಃ ಆ ಪಾತ್ರಗಳನ್ನು ಅವರ ಘೋರಕೃತ್ಯಗಳ ಆಳಕ್ಕೆ ತಳ್ಳುವ ಪರಿಸ್ಥಿತಿಗಳಲ್ಲಿ ಮಾತ್ರವಲ್ಲದೆ ಇನ್ನೆಲ್ಲಿಯೂ ದೊರೆಯಲಾರದು. ಈ ಪರಿಸ್ಥಿತಿಗಳು ನೂತನ ದೃಷ್ಟಿಕೋನಗಳ ಮತ್ತು ವಿವರಣೆಗಳ ಸಾಧ್ಯತೆಗಳನ್ನು ತೆರೆದು ತೋರಿಸುತ್ತವೆ. ಆದ್ದರಿಂದ ಗ್ರೀನನು ಎತ್ತಿಕೊಂಡ ಪ್ರತಿಯೊಂದು ಸಮಸ್ಯೆಯನ್ನೂ ಅಲ್ಲಿರುವ ಪಾತ್ರಗಳ ಮತ್ತು ಪರಿಸ್ಥಿತಿಗಳ ಸಂದರ್ಭದಲ್ಲಿ

ಬಿಡಿಸಿ ನೋಡಿದಾಗ ನೀತಿ ಕಲ್ಪನೆಗಳಲ್ಲಿ ಅಪೂರ್ವ ಮಾರ್ಗಗಳು ತೆರೆಯುವುದನ್ನು ಕಾಣಬಹುದು. ರೂಢಮೂಲ ತತ್ತ್ವಚಿಂತನೆಗಳ, ಇಲ್ಲವೆ ಧರ್ಮಮೀಮಾಂಸೆಗಳ ಪರಿಭಾಷೆಯಲ್ಲಿ ಅವನ್ನು ವಿವರಿಸುವುದಕ್ಕೆ ಶಬ್ದಗಳಿಲ್ಲ.

ಈ ಕಾರಣಕ್ಕಾಗಿ ಗ್ರೀನ್ ತನ್ನ ಕಾದಂಬರಿಗಳನ್ನು ಸೃಷ್ಟಿಸುವ ಪ್ರತಿಭೆ ಸ್ವತಂತ್ರವಾದದ್ದು, ತಾನು ಒಪ್ಪಿದ ಕ್ಯಾಥೊಲಿಕ್ ಪಂಥದ ಕಟ್ಟುಪಾಡುಗಳು ತನ್ನ ಕಲ್ಪನಾ ಪ್ರಪಂಚದಲ್ಲಿ ಸುಳಿಯುವುದಿಲ್ಲ ಎಂದು ಹೇಳುತ್ತಾನೆ. ಇದನ್ನು ಕುರಿತ ಅವನ ವಿಚಾರಗಳು ಅವನ ಪತ್ರವೊಂದರಲ್ಲಿ ಸ್ಪಷ್ಟವಾಗಿ ತೋರುತ್ತವೆ : 'ನನ್ನ ವ್ಯಕ್ತಿವಿಷಯವಾಗಿ ಹೇಳುವುದಾದರೆ ನಾನು ಒಂದು ಪಂಥಕ್ಕೆ ಸೇರಿದವನು. ಅದು ರೋಮನ್ ಕ್ಯಾಥೊಲಿಕ್ ಚರ್ಚ್. ಅದರ ವಿಧಿ ನಿಷೇಧಗಳು ನನ್ನ ಲೇಖನ ಪ್ರಪಂಚದಲ್ಲಿ ಗಂಭೀರವಾದ ಅಡೆತಡೆಗಳನ್ನು ಒಡ್ಡಬಹುದು. ಆದರೆ ಆ ಮಟ್ಟಿಗೆ ಆ ಧರ್ಮವನ್ನು ತ್ಯಜಿಸಿ ನಾನು ಸ್ವತಂತ್ರನಾಗಿದ್ದೇನೆ. ಆ ವಿಷಯದಲ್ಲಿ ನನ್ನ ಮನಸ್ಸಾಕ್ಷಿಯು, ಎಮ್. ಮೌರಿಯಾಕನು ತನ್ನ 'ದೇವರು ಮತ್ತು ಮೇಮನ್' ಎಂಬ ಪ್ರಬಂಧದಲ್ಲಿ ವಿವರಿಸಿರುವಷ್ಟು ಸೂಕ್ಷ್ಮವಾಗಿದ್ದರೆ ನಾನು ಒಂದೇ ಒಂದು ಪಂಕ್ತಿಯನ್ನೂ ಬರೆಯುವುದು ಸಾಧ್ಯವಿರಲಿಲ್ಲ. ಆ ಪಂಥದಲ್ಲಿ ಗಣ್ಯರಾದವರನೇಕರು ಸಾಹಿತ್ಯವೆಂದರೆ ಬೋಧನೆಗೆ ಸಾಧನ ಮಾತ್ರವೆಂದು ಭಾವಿಸುತ್ತಾರೆ. ಸಾಹಿತ್ಯಕ್ಕೂ ನೀತಿಗೂ ಸಂಬಂಧ ವಿಲ್ಲವೆಂದು ನಾನು ಪ್ರತಿಪಾದಿಸುತ್ತಿಲ್ಲ. ಅದು ಪ್ರತಿಪಾದಿಸುವ ನೀತಿ ಬೇರೆ ವಿಧವಾದದ್ದೆಂದು ಮಾತ್ರ ನಾನು ಹೇಳುತ್ತೇನೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದು ಗುಂಪಿಗೆ ಸೇರಿದವನಾಗಿದ್ದರೂ ಅವನ ನೀತಿಯೂ ಗುಂಪಿನ ನೀತಿಯೂ ಒಂದೇ ಆಗಿರುವುದು ಅಪರೂಪ. ಬಿಶಪ್ ಬ್ಲೌಗ್ರಾಮನ ಚದುರಂಗದ ಪಟ್ಟಿಯಲ್ಲಿಯೂ ಕಪ್ಪು ಬಿಳುಪು ಮನೆಗಳು ನಿಮಗೆ ನೆನಪಿರಬಹುದು. ಕಾದಂಬರಿಕಾರನಾದ ನನಗೆ ಬಿಳಿಯ ಮನೆಗಳ ಪರವಾಗಿ ಬರೆದಂತೆ ಕಪ್ಪು ಮನೆಗಳ ಪರವಾಗಿಯೂ ಬರೆಯುವ ಸ್ವಾತಂತ್ರ್ಯವಿರಬೇಕು. ಸಂಶಯ ಮತ್ತು ವಿರೋಧಗಳ ಅಭಿವ್ಯಕ್ತಿಗೂ ಅವಕಾಶ ಇರಲೇಬೇಕು. ಹಾಗಿಲ್ಲವಾದರೆ ನಮಗೆ ಲೆನಿನ್‌ಗ್ರಾಡ್ ಸಮುದಾಯದವರಿಗಿಂತ ಹೆಚ್ಚು ಸ್ವಾತಂತ್ರ್ಯವಿದೆ ಎಂದು ಹೇಗೆ ಹೇಳುವದು ?' ಈ ಅವತರಣಿಕೆಯಲ್ಲಿ ಗ್ರೀನನಿಗೆ ಧಾರ್ಮಿಕ ಕಂದಾಚಾರದವರ ಸಾಹಿತ್ಯಕ ದೃಷ್ಟಿ ಒಪ್ಪಿತವಲ್ಲವೆಂಬುದಷ್ಟೇ ಅಲ್ಲ, ಅವರ ಪ್ರತಿವಾದಿಗಳಾದ ಕಲಾಸ್ವಾತಂತ್ರ್ಯ ನೀತಿ ನಿರಪೇಕ್ಷತಾವಾದಿಗಳ ದೃಷ್ಟಿಯೂ ಒಪ್ಪಿತವಲ್ಲವೆಂಬುದು ಕಂಡುಬರುತ್ತದೆ. ಅವನು ತನ್ನ ಕಾದಂಬರಿಗಳಲ್ಲಿ ಪ್ರತಿಪಾದಿಸುವ 'ವೈಯಕ್ತಿಕ ನೀತಿಮತ್ತೆ' ಎನ್ನುವದು ಅಲ್ಲಿಯ ಸಂದರ್ಭಗಳಲ್ಲಿಯ ಪರಿಸ್ಥಿತಿಗಳ ಬಂಧನದಲ್ಲಿ ಸಿಲುಕಿರುವ ಪಾತ್ರಗಳ ನಂಬಿಕೆಗಳನ್ನು ಪ್ರತಿನಿಧಿಸುವದಷ್ಟೇ. ಆ ನಂಬಿಕೆಗಳು ಕಾದಂಬರಿಕಾರನ ವೈಯಕ್ತಿಕ ನೀತಿಕಲ್ಪನೆಯನ್ನೇ ಯಾವಾಗಲೂ ಪ್ರತಿನಿಧಿಸುವವೆಂದು ಹೇಳಲಾಗುವದಿಲ್ಲ. ಅರ್ಥಾತ್ ಒಂದು ಕಾದಂಬರಿಯು ಸಮುದಾಯದ ನೈತಿಕ ಕಟ್ಟುಪಾಡುಗಳಿಗೆ ಹೇಗೆ ಅಧೀನವಾಗಿರುವದಿಲ್ಲವೊ

ಹಾಗೆಯೇ ಕಾದಂಬರಿಕಾರನ ಸ್ವಂತ ಜೀವನವನ್ನು ರೂಪಿಸುವ ಕಟ್ಟುಪಾಡುಗಳಿಗೂ ಅಧೀನವಲ್ಲ. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಕಾದಂಬರಿಕಾರನು ತನ್ನ ವ್ಯವಸಾಯದ ಸ್ವತಂತ್ರ ಮಾರ್ಗಗಳಲ್ಲಿ ನಡೆಯುವಾಗ ತನ್ನ ಧರ್ಮಕ್ಕೆ ದ್ರೋಹ ಬಗೆದಂತೆ ತೋರುವದು ಅನಿವಾರ್ಯವಾಗುತ್ತದೆ. ಒಂದು ಧಾರ್ಮಿಕ ಪಂಥ ತನ್ನ ಅನುಯಾಯಿಗಳಿಂದ ನಿರೀಕ್ಷಿಸುವ ವಿಧೇಯತೆಯು ಒಂದು ಬೋಲ್ಶೆವಿಕ ಸರಕಾರ ತನ್ನ ಪ್ರಜೆಗಳಿಂದ ನಿರೀಕ್ಷಿಸುವ ವಿಧೇಯತೆಯಷ್ಟೇ ಕಟ್ಟುನಿಟ್ಟಾಗಿರುತ್ತದೆ. ಅದನ್ನು ಮೀರಿ ನಡೆದವರಿಗೆ ಇಂದೇ ಇಲ್ಲಿಯೇ ದೇಹದಂಡ ದ್ರವ್ಯದಂಡಗಳನ್ನು ವಿಧಿಸುವ ಅಧಿಕಾರ ಸರಕಾರಕ್ಕಿರುವಂತೆ ಧಾರ್ಮಿಕ ಸಂಸ್ಥೆಗಳಿಗೆ ಇರದಿದ್ದರೂ ಮರಣೋತ್ತರ ಕಾಲದಲ್ಲಿ ಶಾಶ್ವತ ಅಂಧಂತಮಸಿನ ಭಯವನ್ನು ತೋರಿಸುವ ಅಧಿಕಾರ ಅದಕ್ಕಿದ್ದೇ ಇದೆ. ಪ್ರಜ್ಞಾಪೂರ್ವಕವಾಗಿ ಗ್ರೀನನು ವ್ಯಕ್ತಪಡಿಸುವ ಅವಿಧೇಯತೆಯಿಂದ ಅಂಧಂತಮಸಿನ ಸಿದ್ಧಾಂತವನ್ನು ಸ್ಫುಟವಾಗಿ ಅಲ್ಲಗಳೆಯುವನೆಂದು ತೋರಬಹುದು. ಆದರೆ ಕಾದಂಬರಿಕಾರನೆಂಬ ತನ್ನ ವ್ಯವಸಾಯದಲ್ಲಿ ಅವನ ಶ್ರದ್ಧೆ ಎಷ್ಟು ಬಲವಾಗಿದೆ ಎಂದರೆ ತನ್ನ ಕಲ್ಪನಾಶಕ್ತಿಗೆ ತಾನು ನಿಷ್ಠೆಯಿಂದಿರುವುದು ತನಗೆ ತಾರಕವಾದೀತೆಂಬ ಭರವಸೆ ಅವನಿಗಿದೆ. ಇಲ್ಲಿ ಸೂಚಿಸಿರುವ ವಿರೋಧಗಳಲ್ಲಿ ಒಂದೆಡೆಗೆ ಯಾಂತ್ರಿಕವಾದ ಧರ್ಮಸಂಸ್ಥೆಯ ಕಟ್ಟಳೆಗಳು ಇನ್ನೊಂದೆಡೆಗೆ ಮಾನವ ಹೃದಯದ ಸೂಕ್ಷ್ಮ ಸಂವೇದನೆಗಳು ಎದುರುಬದುರಾಗಿ ನಿಲ್ಲುತ್ತವೆ. ಈ ಸಂವೇದನೆಗಳೇ ಲೇಖಕನಿಗೆ ಕಲ್ಪನಾಶಕ್ತಿಯ ವರವನ್ನು ಕೊಡುತ್ತವೆ. ಸ್ವತಃಸಿದ್ಧವೆಂದು ಯಾವ ಸಿದ್ಧಾಂತಗಳನ್ನೂ ಒಪ್ಪದಿರುವ ಕವಿಕಲ್ಪನೆಯು ಜೀವಂತ ಅನುಭವವು ತೋರಿಸುವ ಮಾರ್ಗವನ್ನು ಅನುಸರಿಸುವದಷ್ಟೇ. ಅದು ಯಾವ ಧಾರ್ಮಿಕ ನೈತಿಕ ಕಲ್ಪನೆಗಳನ್ನೂ ಅಲ್ಲಗಳೆಯುವುದಿಲ್ಲ. ಅಷ್ಟೇ ಅಲ್ಲದೆ, ಆ ಕಲ್ಪನೆಗಳನ್ನು ಯಾಂತ್ರಿಕ ವಿಧಿ ನಿಷೇಧಗಳ ನಿರ್ಜೀವ ಚೌಕಟ್ಟಿನಿಂದ ಹೊರತೆಗೆದು ಜೀವಂತ ಸತ್ಯದ ಒರೆಗಲ್ಲಿಗೆ ಹಚ್ಚುವದರಿಂದ, ಅವಕ್ಕೆ ಹೆಚ್ಚಿನ ಬಲವನ್ನು ನೀಡುತ್ತದೆ. ಧರ್ಮ-ಸಾಹಿತ್ಯಗಳ ನಡುವಿನ ವಿರೋಧವನ್ನು ಗ್ರೀನನು ಸಾಹಿತ್ಯದ ಪರವಾಗಿ ತೀರ್ಮಾನಿಸಿದ್ದಾನೆ. ತನ್ನ ಕಲ್ಪನಾಶಕ್ತಿಯಲ್ಲಿ, ಗ್ರೀನನು ಸ್ಫುಟವಾಗಿ ತೋರುವ ನಿಷ್ಠೆಯೇ ಅವನು ಕಾದಂಬರಿಗಳ ಮುಖ್ಯ ಪಾತ್ರಗಳು, ಧರ್ಮಸಂಸ್ಥೆಗಳ ಕಟ್ಟಳೆಗಳು ಮತ್ತು ಅಂತಃಕರಣ ಪ್ರವೃತ್ತಿಗಳ ನಡುವಿನ ವಿರೋಧವನ್ನು ಎದುರಿಸುವಾಗ ಮಾಡುವ ಆಯ್ಕೆಯಲ್ಲಿ ಪ್ರತಿಫಲಿತವಾಗುತ್ತದೆ. ಅವನ ಕಾದಂಬರಿಗಳಲ್ಲಿ ರೋಮನ್ ಕ್ಯಾಥೊಲಿಕ್ ಪಂಥದ ನಿಷ್ಠೆಗಳ ಸಮರ್ಥನವನ್ನು ಕಾಣುವದೆಂದರೆ ಅವನ ಕಾದಂಬರೀವ್ಯವಸಾಯ ಶ್ರದ್ಧೆಯನ್ನು ಅಲ್ಲಗಳೆಯುವದು ಮಾತ್ರವಲ್ಲದೆ ಅವನ ಪಾತ್ರಗಳನ್ನು ಪೂರ್ತಿಯಾಗಿ ತಪ್ಪಾಗಿ ತಿಳಿದುಕೊಂಡಂತೆ.

ಗ್ರೀನನ ಕೃತಿಗಳ ಬೆಲೆಗಾಣಿಕೆಯಲ್ಲಿ ಅವನ ಅಭಿಪ್ರಾಯಗಳನ್ನು ಮುಂದಿರಿಸಿ ಕೊಂಡೇ ಸಾಗಬೇಕು. ಅವನ ಕಾದಂಬರಿಯ ಆಂತರ್ಯಕ್ಕೆ ಬೀಗದ ಕೈ ಆ ಅಭಿಪ್ರಾಯಗಳಲ್ಲಿದೆ. ಇಲ್ಲಿ ನಾನು ಅವನ ಮೂರು ಮುಖ್ಯ ಕೃತಿಗಳ ಸಮಾಲೋಚನೆಯನ್ನು

ಮಾಡಬೇಕೆಂದಿದ್ದೇನೆ. 'ಬ್ರಾಯಿಟನ್ ರಾಕ್' (1938), 'ದಿ ಪಾವರ್ ಅಂಡ್ ದಿ ಗ್ಲೋರಿ' (1940) ಮತ್ತು 'ದಿ ಹಾರ್ಟ್ ಆಫ್ ದಿ ಮ್ಯಾಟರ್' (1948). ಅವುಗಳನ್ನು ಒಂದೇ ಕೃತಿಯ ಮೂರು ಭಾಗಗಳೆನ್ನುವದು ಪೂರ್ಣವಾಗಿ ನಿಜವಲ್ಲದಿದ್ದರೂ ಅದರಲ್ಲೊಂದು ಔಚಿತ್ಯವಿದೆ. ಈ ಸಮಾಲೋಚನೆಯಲ್ಲಿ ನಾನು ಒತ್ತುಕೊಡುವದು ಅವನ ಆಸಕ್ತಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿರುವ ಪಾಪ ಮತ್ತು ವಿಮೋಚನೆಯ ಕಲ್ಪನೆಯ ಮೇಲೆ. ಈ ಮೂರೂ ಕೃತಿಗಳಲ್ಲಿ ಅವನು ನಿರೂಪಿಸಿರುವ ಪಾಪದ ಕಲ್ಪನೆಗಳಲ್ಲಿ ಸ್ಫುಟವಾದ ಭೇದಗಳಿದ್ದರೂ ಒಂದು ವಿಧದ ಸಾಮ್ಯವೂ ಇದೆ ಎಂಬುದು ಈ ಸಮಾಲೋಚನೆಯಲ್ಲಿ ಮುಂದುವರಿದಂತೆ ಸ್ಪಷ್ಟವಾಗುವದು.

ಅನಿವಾರ್ಯ ಪರಿಸ್ಥಿತಿಗಳ ಜಾಲದಲ್ಲಿ ಸಿಲುಕಿದ ಪಾತ್ರಗಳು ಮಾಡುವ ಪಾಪ ಕಾರ್ಯಗಳೇ ಅವರ ವಿಮುಕ್ತಿಗೆ ದಾರಿಯಾಗುವ ವಿರೋಧಾಭಾಸವೇ ಈ ಮೂರರಲ್ಲಿಯೂ ಇರುವ ಸಾಮ್ಯ. ಈ ಮೂರೂ ಕೃತಿಗಳ ಕೊನೆಯ ಅಧ್ಯಾಯಗಳು ಈ ವಿರೋಧಾಭಾಸವನ್ನು ಎತ್ತಿ ತೋರಿಸಿ ಪಾಪದ ಫಲವು ಅಂಧಂತಮಸ್ಸೇ ಎಂಬ ಸಾಮಾನ್ಯವಾದ ಗ್ರಹಿಕೆಯನ್ನು ಸಂಶಯಕ್ಕೀಡುಮಾಡುತ್ತವೆ ಮತ್ತು ದೇವರ ಅಪಾರವಾದ ಕರುಣೆಯು ಯಾವ ಜೀವವನ್ನೂ ಶಾಶ್ವತವಾದ ಅಂಧಂತಮಸ್ಸಿನಲ್ಲಿ ಬೇಯುವದಕ್ಕೆ ಬಿಡುವದಿಲ್ಲವೆಂದು ಪ್ರತಿಪಾದಿಸುತ್ತವೆ. 'ಬ್ರಾಯಿಟನ್ ರಾಕ್' ಕಾದಂಬರಿಯಲ್ಲಿ ಕೊಲೆಪಾತಕಿಯಾದ ಪಿಂಕೀ ಬ್ರಾವುನನು ಪೊಲೀಸರ ಕೈಗೆ ಸಿಕ್ಕಿಬೀಳುವ ಮೊದಲೇ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನ ವಿಧವೆ ರೋಜ ಮತ್ತು ತಪ್ಪೊಪ್ಪಿಗೆಯನ್ನು ಕೇಳುವ ಒಬ್ಬ ಪಾದ್ರಿ ಇವರ ಸಂವಾದವೇ ಆ ಕಾದಂಬರಿಯ ಭರತವಾಕ್ಯವಾಗುತ್ತದೆ. ತನ್ನ ಪತಿಯ ಮರಣದ ದುಃಖವನ್ನು ತಾಳಲಾರದೆ ತಾನೂ ಆತ್ಮಹತ್ಯೆ ಮಾಡಿಕೊಂಡು ನರಕದಲ್ಲಿ ಅವನೊಡನೆ ಸೇರಬೇಕಿತ್ತು ಎಂದು ಅವಳು ಅಳುತ್ತಾಳೆ. ಅವಳಿಗೆ ಸಮಾಧಾನ ಹೇಳುತ್ತ ಪಾದ್ರಿಯು ಪಿಗಾಯ್ ಎಂಬ ಫ್ರೆಂಚ್ ಮನುಷ್ಯನ ಕತೆ ಹೇಳುತ್ತಾನೆ. ಪಿಗಾಯ್ ತನ್ನ ಜೀವಮಾನವೆಲ್ಲವನ್ನೂ ಘೋರವಾದ ಪಾಪಕರ್ಮಗಳಲ್ಲೇ ಕಳೆಯುತ್ತಾನೆ. ಒಂದೇ ಒಂದು ಜೀವಕ್ಕಾದರೂ ಅಂಧಂತಮಸ್ಸೇ ಗತಿ ಎನ್ನುವುದಾದರೆ ತಾನೂ ಅಲ್ಲಿಗೇ ಹೋಗುವನೆಂಬುದೇ ತನ್ನ ನಿಶ್ಚಯ ಎನ್ನುತ್ತಾನೆ ಪಿಗಾಯ್. ಹೀಗೆ ಇಚ್ಛಾಪೂರ್ವಕವಾಗಿ ಜೀವನದಲ್ಲಿಯೂ ಮರಣದಲ್ಲಿಯೂ ಪಾಪಿಗಳ ಜೊತೆಗೇ ಇದ್ದ ಪಿಗಾಯ್ ಸಂತನೆಂದು ಕೀರ್ತಿಯನ್ನು ಪಡೆದನು. ದೇವರ ಕರುಣೆ ಎಂತಹದೆಂಬುದನ್ನು ಯಾರೂ ತಿಳಿಯಲಾರರು ಎಂದು ಪಾದ್ರಿ ರೋಜಗೆ ಹೇಳುತ್ತಾನೆ. ಆ ಕರುಣೆ ಎಷ್ಟು ಅಪಾರವಾದದ್ದೆಂದರೆ ಯಾವ ಜೀವನೂ ಯಾವ ಕಾರಣದಿಂದಲೂ ಅದಕ್ಕೆ ಹೊರತಾಗಿರುವದು ಸಾಧ್ಯವೇ ಇಲ್ಲ ಎನ್ನುತ್ತಾನೆ. ರೋಜ ಜೀವಿಸುತ್ತಿದ್ದ ರೀತಿಯೂ ಅದೇ ಆಗಿದ್ದರೂ ಅಂತಹದೊಂದು ನಂಬಿಕೆ ಸಾಧ್ಯವೆಂಬುದನ್ನು ಅವಳು ಅರಿತಿರಲಿಲ್ಲ. ಆ ಕತೆಯ ಖಳನಾಯಕನಾದ ಪಿಂಕಿಯನ್ನು ಅವಳು ಮದುವೆಯಾದದ್ದೇ ಘೋರಪಾಪವಾಗಿತ್ತು. ಅವರಿಬ್ಬರೂ ಸೇರಿ ತಾವು ಒಪ್ಪಿ

ನಡೆಸಬೇಕಾಗಿದ್ದ ಆತ್ಮಹತ್ಯೆಯ ಕಡೆಗೆ ಅವನ ಜತೆಗೆ ಸಾಗುತ್ತಿದ್ದಾಗ ರೋಜಗೆ ತಾನು ಭಯಪಡುತ್ತಿರುವದು ನರಕಕ್ಕಲ್ಲ, ಸಾವಿಗೆ ಎಂಬ ಅರಿವಾಗುತ್ತದೆ. ಕೊನೆಯಲ್ಲಿ ನಾವು ಎದುರಿಸುವ ಘೋರತಮವಾದ ಘಟನೆ ಎಂದರೆ ರೋಜಳು ತನ್ನ ಪತಿಯ ಧ್ವನಿಮುದ್ರಿಕೆಯನ್ನು ಕೇಳಲು ಮನೆಗೆ ಹೋಗುವದು ; ಅವಳು ತಿಳಿದಿರುವದು ಅಲ್ಲಿರುವದು ಅವನ ಪ್ರೀತಿಯ ಮಾತುಗಳೆಂದು ; ಆದರೆ ಅವು ಅವನ ದುಷ್ಟಚೇತನದ ಘೋರವಾದ ಅಭಿವ್ಯಕ್ತಿಯೆನ್ನುವದು ಓದುಗನಿಗೆ ತಿಳಿದಿರುತ್ತದೆ. ಇದು ಕೊನೆಯಲ್ಲಿ ಪಿಂಕಿಯ ಮರಣಕ್ಕೆ ಕಾರಣವಾದ ಅವನ ಮುಖಕ್ಕೆರಚಿದ ಗಂಧಕಾಮ್ಲದ ಜ್ವಲನಕ್ರಿಯೆಗೆ ಸಂವಾದಿಯಾಗಿದೆ. ಈ ಮಾನಸಿಕ ಹಿಂಸೆ ರೋಜಳ ಮರಣಕ್ಕೆ ಕಾರಣವಾಗದಿದ್ದರೂ ಅದರ ನೋವು ಗಂಧಕಾಮ್ಲದ ಉರಿಗಿಂತಲೂ ಹೆಚ್ಚಾಗಿರಬಲ್ಲದು. ಅದು ರೋಜಳು ಪ್ರೀತಿಗಾಗಿ ತೆರಬೇಕಾದ ಬೆಲೆಯೆಂಬ ಉದ್ದೇಶವೂ ಇರಬಹುದು. ಅದಿಲ್ಲದಿದ್ದರೂ ಅದು ರೋಜಳ ಗತಿಗೂ ಪಿಗಾಯ್‌ನ ಗತಿಗೂ ಇರುವ ಸಾಮ್ಯವನ್ನು ಎತ್ತಿ ತೋರುವದರಿಂದ ಆ ಕಾದಂಬರಿಗೆ ಒಪ್ಪುವಂತಹ ಕೊನೆಯಾಗುತ್ತದೆ. ಅಲ್ಲಿಯೇ ಪಾದ್ರಿಯು ಅವಳಿಗೆ ಪಿಗಾಯ್‌ನ ಕತೆಯನ್ನು ದೇವರ ಕರುಣೆಯನ್ನು ಕುರಿತ ಅರ್ಥವತ್ತಾದ ಟಿಪ್ಪಣಿಗಳೊಡನೆ ಹೇಳುತ್ತಾನೆ : 'ಮಗೂ, ಅದು ನಿನ್ನ ತಿಳಿವಿಗೆ ಮೀರಿದ್ದು; ನನ್ನ ತಿಳಿವಿಗೂ ಮೀರಿದ್ದು; ಯಾರ ತಿಳಿವಿಗೂ ಮೀರಿದ್ದೇ. ಆ ದೇವರ ಕರುಣೆ ಅಂತಹ ಅದ್ಭುತವಾದದ್ದು, ಅಚಿಂತ್ಯವಾದದ್ದು.'

ಬುದ್ಧಿಪೂರ್ವಕವಾಗಿ ನರಕವಾಸವನ್ನು ಸ್ವೀಕರಿಸಿ ಸಂತಪದವಿಯನ್ನು ಪಡೆದ ಪಾಪ ಜೀವಿ ಪಿಗಾಯ್‌ನ ಕತೆ 'ಬ್ರಾಯಿಟನ್ ರಾಕ'ಗೆ ಸಮಾರೋಪವಾದದ್ದು, 'ಹಾರ್ಟ್ ಆಫ್ ದಿ ಮ್ಯಾಟರ್'ನಲ್ಲಿ ಒಂದು ರೀತಿಯ ಪ್ರಸ್ತಾವನಾ ರೂಪದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ. ಅಲ್ಲಿ ಪಾಪಿ ಮತ್ತು ಸಂತರ ಏಕರೂಪತೆಯನ್ನು ಒತ್ತಿ ಹೇಳುವ ಪಿಗಾಯ್‌ನ ಒಂದು ಹೇಳಿಕೆಯು ಒಂದು ಅಭಿಲೇಖವಾಗಿ ಉದ್ಧೃತವಾಗಿದೆ. ಅಲ್ಲಿಯ ಫ್ರೆಂಚ್ ಅವತರಣಿಕೆಯ ಅನುವಾದವನ್ನು ಸುಮಾರಾಗಿ ಹೀಗೆ ಹೇಳಬಹುದು : 'ಪಾಪಿಯು ಕ್ರೈಸ್ತತತ್ತ್ವದ ಹೃದಯಸ್ಥಾನದಲ್ಲಿದ್ದಾನೆ. ಕ್ರೈಸ್ತ ತತ್ತ್ವಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪಾಪಿಗೆ ತಿಳಿದಿರುವಷ್ಟು ಇನ್ನಾರಿಗೂ ತಿಳಿದಿರಲಾರದು. ಇನ್ನಾರಿಗೂ ಅಂದರೆ ಸಂತರಲ್ಲದವರಿಗೆ.'

ಈ ಅಭಿಲೇಖದಲ್ಲಿ ಹೇಳಿದ ವಿಷಯವೇ ಈ ಕಾದಂಬರಿಯ ಸಮಾರೋಪದಲ್ಲಿ ನಾಟಕೀಯವಾಗಿ ಕಾಣಿಸಿಕೊಳ್ಳುತ್ತದೆ. 'ಬ್ರಾಯಿಟನ್ ರಾಕ್'ನ ಸಮಾರೋಪದಲ್ಲಿರುವಂತೆಯೇ, ಇಲ್ಲಿಯೂ ನಾಯಕನ ಹೆಂಡತಿ ನರಕಶಿಕ್ಷೆಯ ಪ್ರಶ್ನೆಯನ್ನು ಒಬ್ಬ ಪಾದ್ರಿಯ ಮುಂದೆ ಪ್ರಸ್ತಾಪಿಸುತ್ತಾಳೆ. ಮೇಜರ್ ಸ್ಕೋಬಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದರಿಂದ ಆತನು ಉದ್ದೇಶಪೂರಿತವಾಗಿ ದೇವರಿಗೆ ದ್ರೋಹಿಯಾಗಿ ನರಕಕ್ಕೆ ಹೋಗಿದ್ದಾನೆ ಎಂದು ಅವಳು ಪಾದ್ರಿಯ ಮುಂದೆ ದೂರಿಕೊಳ್ಳುತ್ತಾಳೆ. ಆದರೆ ಪಾದ್ರಿಯು ಅದನ್ನೊಪ್ಪುವದಿಲ್ಲ. ನಾವು ಧರ್ಮಸಂಸ್ಥೆಯ ನಿಯಮಗಳನ್ನು ತಿಳಿದಿರಬಹುದು ; ಆದರೆ ಒಬ್ಬ ಮನುಷ್ಯನ

ಅಂತಃಕರಣದಲ್ಲಿಯ ವ್ಯಾಪಾರಗಳನ್ನು ತಿಳಿಯಲಾರೆವು. ಮೇಜರ್ ಸ್ಕೋಬಿ ತನ್ನದೇ ಒಂದು ಪರಿಯಲ್ಲಿ ದೈವಭಕ್ತನಾಗಿರಲೇಬೇಕು ಮತ್ತು ದೇವರು ಅವನ ಪಾಪಗಳನ್ನು ಕ್ಷಮಿಸಿರಲೇಬೇಕು ಎಂಬುದರಲ್ಲಿ ಫಾದರ್ ರ್‍ಯಾಂಕ್‌ಗೆ ಸಂದೇಹವೇ ಇಲ್ಲ.

'ಬ್ರಾಯಿಟನ್ ರಾಕ್' ಮತ್ತು 'ಹಾರ್ಟ್ ಆಫ್ ದಿ ಮ್ಯಾಟರ್' ಎರಡೂ ಸಮಾರೋಪಗಳು ದೇವರ ಕರುಣೆಯನ್ನು ಮಾತ್ರ ಒತ್ತಿಹೇಳುವದಿಲ್ಲ, ಪಾಪಕ್ಕೊಂದು ವಿಚಿತ್ರವಾದ ಪಾವನಶಕ್ತಿಯನ್ನೂ ಕಲ್ಪಿಸುತ್ತವೆ. ನರಕವಾಸವೂ ವಿಮೋಚನೆಯ ಒಂದು ಪ್ರಕಾರವೇ ಎಂಬಂತೆ ತೋರುತ್ತದೆ. ಪಾಪ-ಪುಣ್ಯ, ಪಾಪಿ-ಸಂತ, ನರಕವಾಸ-ವಿಮೋಚನೆ, ಇವುಗಳ ಪರಸ್ಪರ ವಿರೋಧವು ಮಸಕಾಗಿ ಅವು ಒಂದರಲ್ಲೊಂದು ಸೇರಿ ಹೋದಂತೆ ತೋರುತ್ತವೆ. ಪಿಂಕಿ, ರೋಜ, ಮೇಜರ್ ಸ್ಕೋಬಿ ಮತ್ತು ಪಿಗಾಯ್‌ರಂತಹ ಪಾಪಿಗಳ ಹಿಂದೆ ಸಂತರಿಗೆ ಉಚಿತವಾದ ಪ್ರಭಾವಲಯವೊಂದು ಮೂಡಿಬರುತ್ತದೆ. ದೌರ್ಜನ್ಯದ ತತ್ತ್ವಮಿಮಾಂಸೆಯಲ್ಲಿ ಒಂದು ಸತ್ಯದ ಸಾಕ್ಷಾತ್ಕಾರವಾದಂತೆ ಭಾಸವಾಗುತ್ತದೆ. ತಿರುಗುಮುರುಗಾದ ಮನಶ್ಶಾಸ್ತ್ರದ ವಕ್ರಮಾರ್ಗವು ನೇರವಾಗಿ ದೇವರ ನಿಗೂಢ ಪ್ರೇಮದ ಅನಂತತೆಯಲ್ಲಿ ಸಾಗುತ್ತಿರುವಂತೆ ಕಾಣತೊಡಗುತ್ತದೆ.

ಹೀಗೆ ನಿತ್ಯನರಕದ ದ್ವಾರಾ ಬರುವ ಮುಕ್ತಿಯ ಕಲ್ಪನೆಯು ಕ್ರೌರ್ಯ ಅಪರಾಧಗಳ ಕತೆಯನ್ನು ಮುಗಿಸುವದಕ್ಕೆ ಕೃತ್ರಿಮವಾಗಿ ಓದುಗನ ಮೇಲೆ ಹೇರಿದಂತೆ ಕಂಡು ಬರುವದಿಲ್ಲವೆಂಬುದೇ ಅದರ ವಿಶೇಷ. ಆಯಾ ಕಾದಂಬರಿಗಳಲ್ಲಿ ಬರುವ ಘಟನೆಗಳು ಮತ್ತು ವ್ಯಕ್ತಿಸ್ವಭಾವಗಳು ತರ್ಕಬದ್ಧವಾಗಿ ಅನಿವಾರ್ಯವಾಗಿ ಆ ಪರ್ಯವಸಾನಕ್ಕೆ ಬರುವಂತೆ ಆ ಕಲ್ಪನೆಯು ಕೌಶಲ್ಯಪೂರ್ವಕವಾಗಿ ಕತೆಯ ವಸ್ತುವಿನಲ್ಲಿ ಹಾಸು ಹೊಕ್ಕಾಗಿ ಬೆರೆತಿರುತ್ತದೆ.

ಈ ವಿರೋಧಾಭಾಸವನ್ನು ಅತಿ ಸ್ಪಷ್ಟವಾಗಿ ಇತರ ಕೃತಿಗಳಿಗಿಂತ ಹೆಚ್ಚಾಗಿ ವ್ಯಕ್ತಪಡಿಸುವ ಕೃತಿ 'ದಿ ಪಾವರ್ ಅಂಡ್ ದಿ ಗ್ಲೋರಿ' ಎಂದು ಹೇಳಬಹುದು. ಈ ಕಾದಂಬರಿಯೂ ಈ ಮೊದಲೇ ಅವಲೋಕಿಸಿದ ಎರಡು ಕಾದಂಬರಿಗಳೂ ನಾನು ಪ್ರಾರಂಭದಲ್ಲಿ ಹೇಳಿದಂತೆ ತತ್ತ್ವಾಲೋಚಕ ರೋಮಾಂಚಕಾರಿ ಕಾದಂಬರಿಗಳೆಂಬ ವರ್ಗದಲ್ಲಿ ಸೇರುತ್ತವೆ. ದೌರ್ಜನ್ಯಪೂರಿತವಾದ ಕಥಾವಸ್ತುವನ್ನು ದೈವೀಪ್ರೇಮದ ಅಲೌಕಿಕ ಸಿದ್ಧಾಂತಕ್ಕೆ ಅಧೀನ ವಾಗಿರುವಂತೆ ತೋರಿಸುವದೇ ಅವುಗಳ ವೈಶಿಷ್ಟ್ಯ. 'ದಿ ಪಾವರ್ ಅಂಡ್ ದಿ ಗ್ಲೋರಿ' ಕತೆಯ ಮುಖ್ಯ ಪಾತ್ರ 'ವ್ಹಿಸ್ಕೀ ಪಾದ್ರಿ' ಎಂದೇ ಪ್ರಸಿದ್ಧನಾದವ. ಸ್ವಭಾವತಃ ಕುಡುಕ, ವ್ಯಭಿಚಾರಿ. ಧರ್ಮಬಾಹಿರ ಸಂಬಂಧದಿಂದ ಪಡೆದ ಮಗಳೊಬ್ಬಳು ಅವನಿಗಿದ್ದಾಳೆ. ಒಂದು ಪಾಪಕೃತ್ಯದಿಂದ ಇನ್ನೊಂದು ಪಾಪಕೃತ್ಯಕ್ಕೆ ಮುನ್ನಡೆಯುವದೇ ಅವನ ಕಥೆ. ಆದರೆ ಕೊನೆಯಲ್ಲಿ ಅವನು ಪರಮ ಪ್ರಾಯಶ್ಚಿತ್ತವಿಧಿಯ ಮಾರ್ಗವಾಗಿ ಮರಣ ಹೊಂದಿ ಸಂತ ಪದವಿಯನ್ನು ಪಡೆಯುತ್ತಾನೆ. ಕತೆಯ ಪ್ರಾರಂಭದಲ್ಲಿ ಅವನು ಮೆಕ್ಸಿಕೋ ದೇಶದಿಂದ ಪರಾರಿಯಾಗಿ ಬಂದ ಒಬ್ಬ ಅಪರಾಧಿ. ಏಕೆಂದರೆ ಆ ದೇಶದಲ್ಲಿ ಧರ್ಮಬೋಧನೆಯೇ ಒಂದು ಅಪರಾಧ

ವೆನಿಸಿತ್ತು. ಅವನ ವ್ಯಕ್ತಿತ್ವವೆಂದರೆ ಒಬ್ಬ ಪಾದ್ರಿಯ ವಿಕಾರವಾದ ವ್ಯಂಗ್ಯಚಿತ್ರದಂತಿದೆ. ಕ್ಷೌರವನ್ನು ಕಾಣದ ಅಸ್ತವ್ಯಸ್ತ ಚಹರೆ ; ಸದಾ ಕುಡಿತದ ಅಮಲಿನಲ್ಲಿರುತ್ತಾನೆ. ಆಕಸ್ಮಿಕ ಘಟನೆಯೊಂದು ಅವನನ್ನು ಒಂದು ಅವ್ಯವಸ್ಥಿತ ಕಾರಾಗೃಹಕ್ಕೆ ಸೇರಿಸುತ್ತದೆ. ಅಲ್ಲಿ ನೀತಿಬಾಹಿರರ ಮತ್ತು ಅಪರಾಧಿಗಳ ಸಂತೆಯೇ ಸಂದಣಿಸಿರುತ್ತದೆ. ಆ ಕಾರಾಗೃಹವೇ ಕಥಾವಸ್ತುವಿನ ಕೇಂದ್ರವೂ ಹೌದು ; ಅದರ ಸೈದ್ಧಾಂತಿಕ ರೂಪಕವೂ ಹೌದು. ಆ ಕತ್ತಲಕೋಣೆಯಲ್ಲಿಯ ಒಂದೇ ರಾತ್ರಿಯ ಅನುಭವವು ಆ ಪಾದ್ರಿಯ ಜೀವನಕ್ಕೆ ಖಚಿತವಾದ ತಿರುವನ್ನು ಕೊಡುತ್ತದೆ. ಪಾಪಿಯ ಸ್ವಭಾವದ ಮಾರ್ಪಾಟುಗಳು ಕಾದಂಬರಿಗಳಲ್ಲಿ ಸಾಮಾನ್ಯವಾದ ಘಟನೆಗಳು. ಆದರೆ ಇಲ್ಲಿಯ ವೈಶಿಷ್ಟ್ಯವೆಂದರೆ ಆ ಮಾರ್ಪಾಟಿಗೆ ಕಾರಣವಾಗುವ ಪ್ರಭಾವ ಒಳ್ಳೆಯವರದಲ್ಲ. ದುರ್ಜನರ ತೀರ ಸಾಮಿಪ್ಯದ ಸಹವಾಸ ಇಲ್ಲಿ ಸ್ವಭಾವಬದಲಾವಣೆಗೆ ಕಾರಣವಾಗುತ್ತದೆ. ಮಲಮೂತ್ರಗಳ ದುರ್ಗಂಧ, ಅಲ್ಲಿಯೇ ನಡೆಯುತ್ತಿದ್ದ ಲೈಂಗಿಕ ಕ್ರಿಯೆಗಳ ಶಬ್ದಗಳು, ಒತ್ತೊತ್ತಾಗಿ ಉರುಳಾಡುತ್ತಿದ್ದ ಅಪರಾಧಿಗಳ ಮೈ ಬೆವರಿನ ಅಸಹ್ಯ ದುರ್ಗಂಧ – ಇನ್ನೂ ಇಂತಹವೇ ಅನೇಕ ಹೇಸಿಗೆ ಬರಿಸುವಂತಹ ಅನುಭವಗಳು ಎಲ್ಲಾ ಬೆರೆತು ವಿಚಿತ್ರ ರೀತಿಯಲ್ಲಿ ಆ ಪಾದ್ರಿಯ ಮನಸ್ಸಿಗೆ ಹೊಸ ಬೆಳಕನ್ನು ಕಾಣಿಸುತ್ತವೆ. ಆ ದುರ್ಗಂಧ ದೌರ್ಜನ್ಯಗಳ ನರಕದಲ್ಲಿ ಅವನಿಗೆ ಅನಿರೀಕ್ಷಿತವಾಗಿ ದೈವೀಕರುಣೆಯ ಸಾಕ್ಷಾತ್ಕಾರವಾಗುತ್ತದೆ. ಅದನ್ನವನು ಪಾಪದ ಸೌಂದರ್ಯವೆನ್ನುತ್ತಾನೆ. ಅವನು ಪ್ರಪಂಚವನ್ನು ಸಂತನ ಕಣ್ಣುಗಳಿಂದ ಕಾಣತೊಡಗುತ್ತಾನೆ. 'ಎಂತಹ ಅಪಾರವಾದ ಚೆಲುವದು ! ದುಃಖ ಭೋಗದಲ್ಲಿಯ ಚೆಲುವನ್ನು ಕುರಿತು ಸಂತರು ಹೇಳುತ್ತಾರೆ. ಇರಬಹುದು, ನಾವೂ ನೀವೂ ಸಂತರೇನಲ್ಲ. ನಮ್ಮ ಪಾಲಿಗೆ ದುಃಖ ಭೋಗದ ಮುಖ ಅಸಹ್ಯವಾದ ಕುರೂಪದ್ದು. ಈ ದುರ್ಗಂಧ, ಈ ಜನಸಂದಣಿ, ಈ ಕಷ್ಟ !.... ಸಂತನ ದೃಷ್ಟಿಯಿಂದ ಪ್ರಪಂಚವನ್ನು ನೋಡುವದಕ್ಕೆ ಅದೆಷ್ಟು ವಿದ್ಯಾರ್ಜನೆಯಾಗಬೇಕೊ !' ತಾನು ಸಂತನಲ್ಲವೆಂದು ಆ ಪಾದ್ರಿ ಮತ್ತೆ ಮತ್ತೆ ಹೇಳುತ್ತಾನೆ. ಆದರೂ ಒಮ್ಮಿಂದೊಮ್ಮೆಲೇ ದೌರ್ಜನ್ಯ ಮತ್ತು ಬೀಭತ್ಸತೆಯ ಅಂತರ್ಯದಲ್ಲಿ ಸಂತರು ಕಾಣುವ ಬೆಳಕು ಅವನಿಗೆ ಕಂಡಿದೆ. ಅವನ ಮಾತುಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ : 'ನಾನು ಕಂಡಿದ್ದೇನೆ ; ಸ್ವಂತ ಅನುಭವದಿಂದಲೇ ಕಂಡಿದ್ದೇನೆ ; ಸ್ವರ್ಗದಿಂದ ನರಕಕ್ಕೆ ಬೀಳುವಾಗ ಸೈತಾನನು ತನ್ನ ಜತೆಗೆ ಎಂತಹ ಸೌಭಾಗ್ಯವನ್ನು ಕೊಂಡುಹೋದನೆಂಬುದನ್ನು ಕಂಡಿದ್ದೇನೆ. ನರಕಕ್ಕೆ ಬಿದ್ದ ದೇವದೂತರೆಲ್ಲರೂ ಬೀಭತ್ಸರೂಪಿಗಳಾಗಿದ್ದರೆಂದು ಯಾರೂ ಎಲ್ಲಿಯೂ ಹೇಳಿಲ್ಲ.... ಇಲ್ಲ! ಇಲ್ಲ! ತೀವ್ರಗತಿಯಲ್ಲಿಯೂ ಪ್ರಕಾಶರೂಪದಲ್ಲಿಯೂ ಅವರು ಯಾರಿಗೂ....'

ಜೈಲಿನಿಂದ ಹೊರಗೆ ಬಂದಾಗ ಆ ಪಾದ್ರಿಯು ಹೊಸ ಮನುಷ್ಯನಾಗಿರುತ್ತಾನೆ. ಅವನ ಜೀವನದೃಷ್ಟಿಯೂ ಹೊಸತಾಗಿರುತ್ತದೆ. ಮೊದಲು ಅವನು ನಿಷ್ಪಾಪನಾಗಿದ್ದಾಗ ಯಾರನ್ನೂ ಅಷ್ಟಾಗಿ ಪ್ರೀತಿಸಿದ್ದಿರಲಿಲ್ಲ; ಈಗ ಪತಿತನಾದ ಅವನಿಗೆ ಸತ್ಯದರ್ಶನವಾಗಿದೆ.

ಮೆಕ್ಸಿಕೋ ದೇಶದ ಕಾನೂನಿನಿಂದ ಪಾರಾಗುವದಕ್ಕೆಂದು ಅವನು ದೇಶದ ಗಡಿಯನ್ನು ದಾಟಿಹೋಗಿದ್ದರೂ ಅವನು ತಾನಾಗಿಯೇ ಮೋಸಗಾರರ ಕೈಗೆ ಸಿಕ್ಕಿಬಿದ್ದು ತನ್ನನ್ನು ಬೆನ್ನಟ್ಟಿ ಬರುತ್ತಿದ್ದ ಸೇನಾಧಿಕಾರಿ ಇರುವಲ್ಲಿಯೇ ಮರಳಿ ಬಂದು ಅವನ ವಶನಾಗುತ್ತಾನೆ. ಅವನನ್ನು ವಿಚಾರಣೆಗೆ ಗುರಿಪಡಿಸಿ ಗಲ್ಲಿಗೆ ಹಾಕುತ್ತಾರೆ.

ಈ ಪಾದ್ರಿಯ ಜೀವನದಲ್ಲಿ ಕೈಸ್ತನ ಜೀವನರೀತಿಯ ಅನುಕರಣವನ್ನು ವಿಮರ್ಶಕರು ಕಂಡಿದ್ದಾರೆ. ಗ್ರೀನನ ಉದ್ದೇಶವೂ ಅದೇ ಆಗಿರುವಂತೆ ತೋರುತ್ತದೆ. ಈ ಪಾದ್ರಿಯು ಮರಣದಲ್ಲಿ ಮಾತ್ರ ಕ್ರಿಸ್ತನನ್ನು ಅನುಕರಿಸಿದ್ದಾನೆಂದಲ್ಲ; ತನ್ನ ಸಮಗ್ರ ಜೀವನ ರೀತಿಯಲ್ಲೂ ಅನುಕರಿಸಿದ್ದಾನೆ. ಆದರೆ ಹೊರನೋಟಕ್ಕೆ ಮಾತ್ರ ಅದು ದೇವರ ಸೇವಕನೆಂದುಕೊಂಡ ಪಾದ್ರಿಗೆ ಎಷ್ಟೂ ಒಪ್ಪುವಂತಹದಲ್ಲ. 'ಪಾದ್ರಿಯು ದರಿದ್ರರಿಗೂ, ತಗ್ಗಿ ನಡೆದವರಿಗೂ, ದಲಿತರಿಗೂ ಆ ಗುಡ್ಡಗಾಡಿನ ಗ್ರಾಮಾಂತರಗಳಲ್ಲಿ ಬೋಧನೆ ನೀಡುತ್ತಾ ತಿರುಗುತ್ತಾನೆ. ನಿರ್ಜನವಾದ ಕಾಡಿನಲ್ಲಿ ಅವನಿಗೆ ಪ್ರಲೋಭನ ಎದುರಾಗುತ್ತದೆ. ಅವನು ವಿಶ್ವಾಸಘಾತಿಗಳ ಕೈಗೆ ಸಿಕ್ಕಿ ವಿಚಾರಣೆಗೆ ಗುರಿಯಾಗಿ ಮರಣವನ್ನಪ್ಪುತ್ತಾನೆ. ಕೊನೆಯಲ್ಲಿ ಅವನೂ ಒಬ್ಬ ಸಾಮಾನ್ಯ ಅಪರಾಧಿಯ ಜತೆಗೆ ನಿಲ್ಲುತ್ತಾನೆ: ಆ ಯಾಂಕೀ ಕೊಲೆಪಾತಕಿ – ಅವನ ಹೆಸರಿನಲ್ಲಿ (ಜೇಮ್ಸ್ ಕ್ಯಾಲ್‌ವ್ಹರ) ಕ್ರೈಸ್ತನು ಸಿಲುಬೆಯೇರಿದ ಬೆಟ್ಟದ ಹೆಸರಿನಲ್ಲಿ ಕಾಣುವ ಎರಡು ವರ್ಣಗಳು ಕಾಣುತ್ತವೆ.... ಸಮಾರೋಪದಲ್ಲಿ ಒಂದು ವಿಧದ ಮರಣೋತ್ತರ ಪುನರುತ್ಥಾನವೂ ಇದೆ.'

'ಸಿಲುಬೆಯ ರೀತಿ'ಯೆನ್ನಬಹುದಾದ ಇಂತಹ ಪಾತ್ರನಿರೂಪಣೆಯು ಗ್ರೀನ್‌ನ ಕಥೆಗಳ ಮುಖ್ಯಪಾತ್ರಗಳಿಗೆ ವಿಶಿಷ್ಟವಾದದ್ದು. ಮೇಜರ್ ಸ್ಕೋಬಿ ಮತ್ತು ಪಿಂಕಿ ಬ್ರಾವುನ್ ಕೂಡ ಇದೇ 'ಸಿಲುಬೆಯ ರೀತಿ'ಯಲ್ಲಿ ಎರಕ ಹೊಯ್ದ ಪಾತ್ರಗಳು.

ಹೀಗೆ ಕೈಸ್ತನ ಪ್ರತಿಮೆಯನ್ನು ಉದ್ದೇಶಪೂರ್ವಕವಾಗಿ ಪಾಪಿಗಳ ಮತ್ತು ಅಪರಾಧಿಗಳ ಜತೆಗೆ ನಿಲ್ಲಿಸುವಲ್ಲಿ ಗ್ರೀನ್‌ನ ಗುರಿಯು ರುದ್ರವ್ಯಂಗ್ಯವಾಗಲಿ ಹಾಸ್ಯವ್ಯಂಗ್ಯವಾಗಲಿ ಅಲ್ಲ; ತತ್ತ್ವತಃ ಅಲ್ಲಿರುವ ಒಂದು ಏಕರೂಪತೆಯ ಅನುಭವವನ್ನು ಕಾಣಿಸುವ ಗಂಭೀರ ಉದ್ದೇಶ ಅವನದಾಗಿರುತ್ತದೆ.

ಪಿಂಕೀ ಬ್ರಾವುನನಂತಹ ದುಷ್ಟ ಪಾತ್ರಗಳಲ್ಲಿ ಕಾಣುವ ಈ ಸಿಲುಬೆಯ ಪ್ರತೀಕವು ಕೆಲವು ವಿಮರ್ಶಕರಿಗೆ ಆಘಾತವನ್ನೇ ಮಾಡಿದೆ. ಅದನ್ನೊಪ್ಪದೆ ಆ ಸಂದರ್ಭದಿಂದ ಪಾರಾಗುವುದಕ್ಕೆ ಅವರು ಗ್ರೀನನದು 'ಗೊಂದಲಗೆಡಿಸುವ ತಂತ್ರ'ವೆಂದೂ ಪಿಂಕಿಯಂಥವನ ಜೀವನವು ತಲೆಕೆಳಗಾದ ಸಂತಜೀವನವೆಂದೂ ಹೇಳಿದ್ದಾರೆ.

'ಪಿಂಕಿ ಬ್ರಾವುನನು ತನ್ನ ನಿತ್ಯ ನರಕದ ಕನಸನ್ನು ಬೆನ್ನಟ್ಟಿ ನಡೆದಂತೆ ''ಬ್ರಾಯಿಟನ್ ರಾಕ್'' ಕಾದಂಬರಿಯ ರೌದ್ರ ಮಾರ್ಗವು ಸಂತಜೀವನವನ್ನು ಬುಡಮೇಲಾಗಿ ನೋಡಿದಂತೆ

ಕಾಣುತ್ತದೆ. ಆ ಕಾದಂಬರಿಯ ಏಳು ಭಾಗಗಳು ಏಳು ಪವಿತ್ರ ವಿಧಿಗಳನ್ನು ಒಂದಾದ ಮೇಲೊಂದರಂತೆ ಬಹುಶಃ ಎಲ್ಲವನ್ನೂ ಅಣಕಿಸಿದಂತೆ ತೋರುತ್ತವೆ. ಕೊಲೆ ಪಿಂಕಿಯ ಸ್ವಭಾವದಲ್ಲೇ ದೃಢವಾಗಿ ನೆಲೆಯೂರಿದೆ. ('ಬಾಲ್ಯದಲ್ಲಿ ಅವನ ಸುತ್ತಲೂ ನರಕವೇ ಪಸರಿಸಿತ್ತು. ಇನ್ನೂ ಹೆಚ್ಚು ಕೊಲೆಗಳನ್ನು ನೋಡುವದಕ್ಕೆ ಅವನು ಸಿದ್ಧನಾಗಿದ್ದನು.') ಅವನದೇ ಆದ ಸೈತಾನ ಚರ್ಚಿಗೆ ಅವನು ಪಾದ್ರಿಯೆಂದು ದೀಕ್ಷಿತನಾಗುತ್ತಾನೆ. ('ನಾನು ಮಗುವಾಗಿದ್ದಾಗಲೇ ಪಾದ್ರಿಯೇ ಆಗುವೆನೆಂದು ಶಪಥವನ್ನೇ ಮಾಡಿದ್ದೆ– ಪಾದ್ರಿಯಾಗುವು ದರಲ್ಲಿ ತಪ್ಪೇನು ? ಯಾವುದು ಏನು ಎಂಬುದು ಅವರಿಗೆ ಗೊತ್ತು.') ಅವನು ಕುಟುಂಬಿ ಯಾಗಿ ಬಾಳುವುದು ಘೋರಪಾತಕವೆಂದೆನಿಸಿದರೂ ಅದನ್ನು ಮಾಡುತ್ತಾನೆ. ಮರಣಕಾಲದಲ್ಲಿ ಸುಡುಸುಡುವ ಗಂಧಕಾಮ್ಲದ ಪ್ರಾಯಶ್ಚಿತ್ತವನ್ನು ಪಡೆಯುತ್ತಾನೆ.'

ಇದರಂತೆಯೇ ಕ್ಯುಬಿಟ್ಟನು ಪಿಂಕಿಯನ್ನು ನಿರಾಕರಿಸುವುದರಲ್ಲಿಯೂ ಕ್ರೈಸ್ತನ ಕತೆಯ ಛಾಯೆಯನ್ನು ಕಂಡಿದ್ದಾರೆ.

ಈ ರೀತಿಯಾಗಿ ಗ್ರೀನನ ಕೆಲವು ಪಾತ್ರಗಳನ್ನು ಉದ್ದೇಶಪೂರ್ವಕವಾಗಿ ಕ್ರೈಸ್ತ ಪ್ರತೀಕದೊಡನೆ ಹೊಂದಿಸಿ ನೋಡುವ ತಂತ್ರವನ್ನು RWB ಲೆವಿಸ್‌ರು ಹೇಳುವಂತೆ 'ಗೊಂದಲಗೆಡಿಸುವ ತಂತ್ರ'ವೆನ್ನುವದು ಗ್ರೀನನ ಕಾದಂಬರಿ ತಂತ್ರವನ್ನೇ ಪೂರ್ತಿಯಾಗಿ ಮರೆಮಾಚುತ್ತದೆ. ಗೊಂದಲವೇನಾದರೂ ಇದ್ದರೆ ಅದಕ್ಕೆ ಕಾರಣ ಓದುಗರ ನೈತಿಕ ಅಭ್ಯಾಸಗಳಿಗೂ ಗ್ರೀನನ ಕಲ್ಪನೆಯ ನಾವೀನ್ಯಕ್ಕೂ ಇರುವ ವ್ಯತ್ಯಾಸವೇ ಕಾರಣವೆಂದು ನನಗೆ ತೋರುತ್ತದೆ. ಗ್ರೀನನ ತಂತ್ರವು ವಾಸ್ತವವಾಗಿ ಮೌಲ್ಯಮಾಪನದ ಗಡಿಯ ಆಚೆಗೆ ನೋಡುವ ತಂತ್ರವಾಗಿದೆ. ಅದರ ಆಶಯಗಳೇನೆಂಬುದನ್ನು ತಿಳಿಯದೆ ಅವನ ಕಾದಂಬರಿಗಳು ಅರ್ಥವಾಗುವದಿಲ್ಲ. ಇಲ್ಲಿ ನಾವು ವಿಮರ್ಶೆಯ ಮೂಲತತ್ತ್ವವೊಂದನ್ನು ಸ್ಮರಿಸಬೇಕು : ಕಲಾವಿದನ ಕನಸುಗಳು ಅವನ ಕಲಾಕೃತಿಗಳಲ್ಲಿ ಮೂರ್ತರೂಪವನ್ನು ಪಡೆಯುತ್ತವೆ. ಇಂತಹ ಕೃತಿಗಳಿಗೆ ಅರ್ಥ ಹೇಳುವಲ್ಲಿ ಅವುಗಳ ಹಿಂದಿರುವ ದರ್ಶನಕ್ಕೆ ಅನ್ವಯಿಸಿಯೇ ಹೇಳುವದು ಸರಿಯಾದ ವಿಮರ್ಶೆಯಾಗುತ್ತದೆ. ಗ್ರೀನನ ಮಟ್ಟಿಗೆ ಹೇಳುವದಾದರೆ ಅವನ ಕನಸುಗಳು ದೌಷ್ಟ್ಯದ ಅಲೌಕಿಕತೆಯನ್ನು ಒಳಹೊಕ್ಕು ನೋಡುತ್ತವೆ. ಅಲ್ಲಿ ಅದಕ್ಕೂ ದೈವಶಕ್ತಿಗೂ ಇರುವ ಸಂಬಂಧ ಪ್ರಸ್ತುತವಾಗುತ್ತದೆ. ಆ ದೌರ್ಜನ್ಯದ ಲೌಕಿಕ ವೈಪರೀತ್ಯಗಳಲ್ಲಿ ಅವನಿಗೆ ಆಸಕ್ತಿಯಿಲ್ಲ. ಗ್ರೀನನು ವಿಕೃತ ಮನೋವಿಜ್ಞಾನವನ್ನು ಬಳಸುವುದು ಅಹುದು. ಅದನ್ನವನು ಅಸಾಮಾನ್ಯವಾದ ಕಥಾಸಂದರ್ಭಗಳೊಡನೆ ಹೆಣೆಯುತ್ತಾನೆ. ಆದರೆ ಅವನ ಉದ್ದೇಶವು ಮನುಷ್ಯರ ದೌರ್ಜನ್ಯವನ್ನು ಒತ್ತಿ ಹೇಳುವುದಲ್ಲ; ರೋಮಾಂಚಕಾರಿ ಕತೆಯನ್ನು ಕಟ್ಟುವುದೂ ಅಲ್ಲ. ಅವನ ಉದ್ದೇಶ ದೌಷ್ಟ್ಯದ ಅಲೌಕಿಕ ಮೂಲವನ್ನು ಒಳಹೊಕ್ಕು ನೋಡುವುದು, ಅದರ ತಮಃಪ್ರಚುರವಾದ ಮೀಮಾಂಸೆಯನ್ನೂ ದೈವಶಕ್ತಿಯ ಅಗಾಧ ಪ್ರೀತಿಗಿರುವ ಸಂಬಂಧವನ್ನೂ ವ್ಯಕ್ತಪಡಿಸುವುದು. ಈ ಉದ್ದೇಶದಿಂದಲೇ ಗ್ರೀನನು ನಾವು

ಕೇಳುವ ಪ್ರಶ್ನಕ್ಕೆ ಉತ್ತರ ಕಂಡುಹಿಡಿಯಲು ಯತ್ನಿಸುತ್ತಾನೆ. ಆ ಪ್ರಶ್ನೆ : ಪಿಂಕಿಯಂತಹ ನಿರ್ದಯನಾದ ಕೊಲೆಪಾತಕಿ, ಕುದುರೆ ಜೂಜುಗಳ ಸಂದಣಿಯಲ್ಲಿ ಕ್ಷೌರದ ಕತ್ತಿಯಿಂದ ಅಸಿಮಸಿ ನೋಡದೆ ಕುಯ್ಯುವ ಕೇಡಿಗ, ಒಂದು ರುದ್ರ ನಾಟಕದ ನಾಯಕಪಾತ್ರದ ಉನ್ನತಿಯನ್ನು ಮುಟ್ಟುವದೇಕೆ ? ಅವನ ಪಾಪಗಳಿಗೆ ಪರಮಾತ್ಮನ ಕರುಣೆಯ ಸ್ಪರ್ಶವಾಗುವದೇಕೆ ? ಅವನ ಗತಿಯು ನಿತ್ಯನರಕವೇ ಎಂಬುದರಲ್ಲಿ ಧರ್ಮಭೀರುಗಳಿಗೂ ಸಂದೇಹ ಮೂಡುವದೇಕೆ ? 'ದಿ ಹಾರ್ಟ್ ಆಫ್ ದಿ ಮ್ಯಾಟರ್'ದ ನಾಯಕಪಾತ್ರ ಮೇಜರ್ ಸ್ಕೋಬಿಯನ್ನು ಕುರಿತೂ ಇದೇ ಪ್ರಶ್ನೆ ಉದ್ಭವಿಸುತ್ತದೆ. ಮೇಜರ್ ಸ್ಕೋಬಿ ಆತ್ಮಹತ್ಯೆಯಂತಹ ಮಹಾಪಾತಕವನ್ನು ಮಾಡುತ್ತಾನೆ. ಆದರೆ ದೇವರು ಅವನನ್ನು ಕ್ಷಮಿಸಿದ್ದಾನೆಂದು ಫಾದರ್ ರ್‍ಯಾಂಕ್ ಹೇಳುತ್ತಾನೆ.

ಗ್ರೀನನ ನಾಯಕಪಾತ್ರಗಳು ಪಾಪಿಗಳೇ ಆಗಿದ್ದರೂ ಅವರಲ್ಲಿರುವ ಕೆಲವು ಗುಣಗಳಿಂದಾಗಿ ಶೌರ್ಯ ಔದಾರ್ಯಪ್ರಚುರವಾದ ಒಂದು ಪ್ರಭಾವಲಯ ಅವರನ್ನು ಬೆಳಗಿಸುತ್ತದೆಂದು ಎಲ್ಲ ವಿಮರ್ಶಕರೂ ಒಪ್ಪುತ್ತಾರೆ. ಈ ವಿರುದ್ಧ ಗುಣಗಳ ವಿಚಿತ್ರ ಸಮವಾಯಕ್ಕೆ ನನಗೆ ತಿಳಿದಮಟ್ಟಿಗೆ ಎರಡು ವಿವರಣೆಗಳನ್ನು ಕೊಡಬಹುದು. ಇವುಗಳಲ್ಲಿ ಒಂದು ವಿವರಣ ಫ್ರೆಂಚ್ ವಿಮರ್ಶಕರಿಗೆ ಪ್ರಿಯವಾದದ್ದು ; ಅವರು 'ದೈವೀ ಮೀಮಾಂಸಾತ್ಮಕ ಕಾದಂಬರಿ' ಎಂಬ ಒಂದು ವರ್ಗವನ್ನೇ ಕಲ್ಪಿಸುತ್ತಾರೆ. ಅದರ ಮುಖ್ಯ ಅಂಶ ಪಾಪದ ಅಜ್ಞೇಯ ಸ್ವರೂಪ ; ಅವರು ಗ್ರೀನನ ಪಾತ್ರನಿರೂಪಣ ವಿಧಾನವನ್ನು 'ಪಾಪದ ವೈಭವೀಕರಣ' ಎನ್ನುತ್ತಾರೆ. ಎರಡನೆಯ ವಿವರಣಕ್ಕೆ ಆಧಾರ 'ಪಾಪ ಬೇರೆ, ಪಾಪಿ ಬೇರೆ' ಎಂದು ಕಲ್ಪಿಸುವದು. ಈ ಕಲ್ಪನೆಯ ಪ್ರಕಾರ ಗ್ರೀನನು ಪಾಪವನ್ನು ಖಂಡಿಸುತ್ತಾನೆ, ಆದರೆ ಪಾಪಿಯ ಬಗ್ಗೆ ಆಳವಾದ ಸಹಾನುಭೂತಿಯನ್ನು ಹೊಂದಿದ್ದಾನೆ. 'ಗ್ರೀನನು ಪಾಪದ ಮೇಲೆ ತೀರ್ಥಪ್ರೋಕ್ಷಣೆ ಮಾಡುವದಿಲ್ಲ ; ಅದನ್ನು 'ಸುಖಮಯ ದೋಷ'ವೆಂದು ಗೌರವಿಸುವದಿಲ್ಲ ; ಪರಿಣಾಮೇ ಸುಖಾವಹವೆಂದು ಯಾರನ್ನೂ ಪಾಪಕ್ಕೆ ಪ್ರೇರಿಸುವದಿಲ್ಲ. ಆದರೆ ಅವನು ಒಬ್ಬ ಮನುಷ್ಯನ ವ್ಯಕ್ತಿತ್ವದ ಬಗ್ಗೆ, ಅವನು ಪಾಪಿಯೇ ಆಗಿದ್ದರೂ, ಗೌರವವನ್ನು ಮೂಡಿಸುತ್ತಾನೆ ; ಈಶಕರುಣೆಯ ಉದ್ಧಾರಕ ಶಕ್ತಿಯಲ್ಲಿ ಅಗಾಧವಾದ ಶ್ರದ್ಧೆಯನ್ನುಂಟು ಮಾಡುತ್ತಾನೆ. ಪಶ್ಚಾತ್ತಾಪದಿಂದ ಹಣ್ಣಾದ ದುರಾತ್ಮನೂ ಸಿಲುಬೆಯನ್ನೇರಿದಾಗ ಸ್ವರ್ಗದಲ್ಲಿ ಹೇಗೋ ನುಸುಳಿಬಿಡುತ್ತಾನೆಂದು ತೋರಿಸುತ್ತಾನೆ.'

ಪಾಪ ಮತ್ತು ಪಾಪಿಯ ನಡುವೆ ಇಂತಹ ಭೇದಕಲ್ಪನೆ ಒಂದು ತಂತ್ರ ಮಾತ್ರವೆಂಬಂತೆ ತೋರುತ್ತದೆ. ಸೃಜನಶೀಲ ಸಾಹಿತ್ಯದಲ್ಲಿ ಅದಕ್ಕೆ ಸರಿಯಾದ ಸ್ಥಾನವಿರಬಹುದೆಂದು ಹೇಳುವದು ಕಷ್ಟ. ಏಕೆಂದರೆ ಇಂತಹ ಸಾಹಿತ್ಯದ ಆಸ್ಥೆಯಿರುವದು ಪಾಪದ ತತ್ತ್ವಮೀಮಾಂಸೆಯಲ್ಲಲ್ಲ. ಪಾಪಕೃತ್ಯಗಳು ಪಾಪಿಯ ಜೀವನದಲ್ಲಿ ಎಂತಹ

ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ಮೂರ್ತವಾದ ಘಟನೆಗಳ ರೂಪದಲ್ಲಿ ವಿವರಿಸುವದೇ ಸೃಜನಶೀಲ ಸಾಹಿತ್ಯದ ಸಹಜ ಪಾತ್ರ.

ಒಂದು ಸಂದರ್ಭದಲ್ಲಿ ಪಾಪ ಮತ್ತು ಪಾಪಿಯ ನಡುವೆ ಭೇದ ಕಲ್ಪನೆ ಮಾಡಬಹುದು : ಅದು ಪಶ್ಚಾತ್ತಾಪದಿಂದ ಶುದ್ಧನಾಗಿ ತನ್ನ ಪಾಪಕೃತ್ಯಗಳನ್ನು ಹಿಂದೆ ಬಿಟ್ಟು ಮುನ್ನಡೆದ ವ್ಯಕ್ತಿಯ ವಿಷಯದಲ್ಲಿ. ಆದರೆ ಮೇಜರ ಸ್ಕೋಬಿಗಾಗಲಿ ಪಿಂಕಿಗಾಗಲಿ ಪಶ್ಚಾತ್ತಾಪವೆಂಬುದಿಲ್ಲ. ಅವರು ಬುದ್ಧಿಪೂರ್ವಕವಾಗಿ ನರಕದತ್ತ ನುಗ್ಗಿ ನಡೆಯುತ್ತಾರೆ. ತಮಗೆ ಪಾಪಕೃತ್ಯಗಳನ್ನು ಮಾಡದೇ ಬೇರೆ ಮಾರ್ಗವೇ ಇಲ್ಲವೆಂಬಂತೆ ಅವುಗಳಲ್ಲಿ ತೊಡಗುತ್ತಾರೆ. ಆದ್ದರಿಂದ ಈ ವಿವರಣ ಸರಿಯಲ್ಲವೆನ್ನಲೇಬೇಕು. 'ಪಾಪದ ಅಜ್ಞೇಯತೆ' ಎಂಬ ಮೊದಲಿನ ವಿವರಣವನ್ನು ಒಪ್ಪುವುದೂ ಅಸಂಭವ, ಏಕೆಂದರೆ ಒಳಿತು ಕೆಡುಕುಗಳ ವಿಚಾರದಲ್ಲಿ ಗ್ರೀನನ ದೃಷ್ಟಿಯಲ್ಲಿ ಗೊಂದಲವಿಲ್ಲ. ಅವನ ಮೌಲ್ಯಕಲ್ಪನೆಗಳಲ್ಲಿ ಯಾವ ವೈಪರೀತ್ಯವೂ ಇಲ್ಲ. ಗ್ರೀನನ ಕಾದಂಬರಿಗಳಲ್ಲಿ ಪಾಪಕ್ಕೆ ಒಂದು ವಿಧದ ಪ್ರತಿಷ್ಠೆಯನ್ನು ಕಲ್ಪಿಸಿದಂತೆ ತೋರುವದಕ್ಕೆ ಕಾರಣವು ಗ್ರೀನನು ಪಾಪಮಯ ಜೀವನವನ್ನು ಸಮರ್ಥಿಸುವನೆಂದಲ್ಲ; ಅದು ದೇವರ ಕರುಣೆಗೆ ಪಾತ್ರನಾಗುವ ಉಪಾಯವೆಂದೂ ಅವನ ಅಭಿಪ್ರಾಯವಲ್ಲ. ಅವನ ಪಾತ್ರಗಳು ಎದುರಿಸಬೇಕಾದ ಸಂದರ್ಭದಲ್ಲಿ ಆ ಪಾಪಗಳನ್ನು ಏಕೆ ಎಸಗುತ್ತಾರೆಂಬುದರ ಸಮರ್ಪಕ ತಿಳಿವಳಿಕೆಯಿಂದಾಗಿ ಆ ಜೀವನ ರೀತಿಗೆ ಪ್ರಾಮುಖ್ಯ ಬಂದಂತೆ ತೋರುತ್ತದೆ. ಕಾದಂಬರಿಕಾರನಾಗಿ ಗ್ರೀನನು ಪಾಪದ ಬಗ್ಗೆ ಯಾವ ಸಾಮಾನ್ಯ ನಿಯಮವನ್ನೂ ರೂಪಿಸುವದಿಲ್ಲ. ತನ್ನ ಕಾದಂಬರಿಗಳನ್ನು ಓದುವವರು ಆಯಾ ಸಂದರ್ಭಗಳಲ್ಲಿ ಪ್ರತಿಯೊಂದು ಪಾತ್ರದ ಆಚರಣವನ್ನು ಎಚ್ಚರದಿಂದ ಪರೀಕ್ಷಿಸಿ ಅರ್ಥಮಾಡಿಕೊಳ್ಳಬೇಕೆಂದು ಮಾತ್ರ ಅವನು ಬಯಸುತ್ತಾನೆ. ಕ್ರಿಶ್ಚಿಯನ್ ತತ್ತ್ವದಲ್ಲಿ ಔದಾರ್ಯಕ್ಕಿರುವ ಪ್ರಾಧಾನ್ಯದ ಮೂಲವು ಇಂತಹ ತಿಳಿವಳಿಕೆಯೇ. ಸಮಗ್ರ ಜ್ಞಾನವಿರುವುದು ದೇವರಿಗೆ ಮಾತ್ರ ; ಆ ಸಮಗ್ರ ಜ್ಞಾನದಲ್ಲಿ ಪಾಪಿಗಳಿಗೂ ಅಪರಾಧಿಗಳಿಗೂ ನಿತ್ಯನರಕವನ್ನು ಊಹಿಸುವದು ಕಷ್ಟ, ತನ್ನ ಕಾದಂಬರಿಗಳ ಮೂಲಕ ಗ್ರೀನನು ಪ್ರತಿಪಾದಿಸುವ ದರ್ಶನವು ಓದುಗರನ್ನು ದೇವರ ಸಮಗ್ರ ಜ್ಞಾನದ ಮತ್ತು ಅಪಾರ ಕರುಣೆಯ ನಿಗೂಢತೆಯ ಹತ್ತಿರ ಒಯ್ದು ನಿಲ್ಲಿಸುತ್ತದೆ.

ಇತ್ತೀಚಿನ ಕಾದಂಬರಿಗಳಲ್ಲಿ ಚಿತ್ರಿತರಾದ ನಿಸ್ಸೀಮ ಪಾಪಿಗಳಲ್ಲಿ ಪಿಂಕಿಯೂ ಒಬ್ಬನೆಂಬುದರಲ್ಲಿ ಮತಭೇದವಿರಲಾರದು. ಅವನ ವಿಷಯದಲ್ಲಿ ಹೇಳಬಹುದಾದ ಎಂತಹ ನಿಂದನೆಯ ಮಾತುಗಳೂ ಹೊಗಳಿಕೆಯಂತೆಯೇ ತೋರುತ್ತವೆ. ಸೈತಾನನ ಸೇವೆಗೇ ತನ್ನನ್ನು ಸಮರ್ಪಿಸಿಕೊಂಡ ಅವನ ಶ್ರದ್ಧಾಸೂತ್ರ 'ನಾನು ನಂಬುವದು ಸೈತಾನನೊಬ್ಬನನ್ನೇ.' ಅವನು ಹುಟ್ಟಿ ಬೆಳೆದದ್ದೇ ನರಕದಲ್ಲಿ. 'ಅವನ ಚಿಕ್ಕಂದಿನಲ್ಲಿ ಅವನ ಸುತ್ತಲೂ ನರಕವೇ ವ್ಯಾಪಿಸಿತ್ತು.' ಅವನು ಇನ್ನೂ ಹುಡುಗನಾಗಿರುವಾಗಲೇ ಕುದುರೆ ಜೂಜಿನ

ಸಾಹಸಪ್ರಪಂಚದಲ್ಲಿಯ ಅಪರಾಧಿಗಳ ತಂಡವೊಂದಕ್ಕೆ ಮುಖಂಡನಾಗುತ್ತಾನೆ. ಅಲ್ಪಕಾಲದಲ್ಲಿಯೇ ಅವನ ಕೈಯಿಂದ ಅನೇಕ ಕೊಲೆಗಳು ನಡೆಯುತ್ತವೆ. ಸದಾಕಾಲವೂ ಅವನ ಜೇಬಿನಲ್ಲಿ ಒಂದು ಗಂಧಕಾಮ್ಲದ ಸೀಸೆ, ಕೈಯಲ್ಲಿ ಕ್ಷೌರದ ಅಲಗು, ಎದೆಯಲ್ಲಿ ಕೊಲೆಯ ವಿಚಾರವನ್ನು ಕಟ್ಟಿಕೊಂಡು ತಿರುಗುತ್ತಾನೆ. ಕೊಲೆಗಿಂತಲೂ ಭಯಂಕರವಾದ ಕೃತ್ಯವೊಂದು ಅವನು ಮಾಡಿದ್ದು ಒಬ್ಬ ಅಮಾಯಕ ಹುಡುಗಿಯನ್ನು ತನ್ನನ್ನು ಮದುವೆಯಾಗುವದಕ್ಕೆ ಒಪ್ಪಿಸಿದ್ದು ; ಕಾರಣ, ತನ್ನ ಅಪರಾಧಗಳ ಬಗ್ಗೆ ಅವಳಿಗೆ ತಿಳಿದಿರುವದನ್ನು ಅವಳು ಬೇರೆಯವರ ಮುಂದೆ ಹೇಳಕೂಡದೆಂದು. ಮದುವೆಯಾದ ಮೇಲೆ ಅವನು ಯಾವದೇ ಉದ್ವೇಗವಿಲ್ಲದೆ ಅವಳೊಡನೆ ಆತ್ಮಹತ್ಯೆಯ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ; ಅದಕ್ಕೆ ಕಾರಣ, ಅವಳು ಮೊದಲು ಸಾವನ್ನಪ್ಪಿ ತನ್ನ ಪಾಪಜೀವನದ ದಾರಿಯನ್ನು ನಿಷ್ಕಂಟಕವಾಗಿಸಬೇಕೆಂಬ ಅವನ ವಿಚಾರ. ಅವನ ಇಚ್ಛೆ ನೆರವೇರುವದಿಲ್ಲ. ಆದರೆ ಆ ಒಪ್ಪಂದ ಅವನ ಪಾಪ ಬುದ್ಧಿಯ ಪರಾಕಾಷ್ಠೆಯನ್ನು ತೋರಿಸುತ್ತದೆ.

ಪಿಂಕಿಯ ಜೀವನವನ್ನು ವಿಕೃತಗೊಳಿಸುವ ಪಾಪಗಳ ಪರಾಕಾಷ್ಠೆಯಲ್ಲಿಯೂ ಗ್ರೀನನ ಯತ್ನವಿರುವದು ಆ ಅಸಹ್ಯವಾದ ಭ್ರಷ್ಟಜೀವನದ ಅಂತರಾಳದಲ್ಲಿಯೂ ಯಾವದೋ ಒಂದು ನಿರ್ವಿಕಾರವಾದ ತಿರುಳು ಇರುವದೆಂದು ತೋರಿಸುವದಕ್ಕೆ. ಆ ತಿರುಳು ಸಿಲುಕಿದರೆ ವಿಮೋಚನೆಯ ಮೂಲವೇ ಕೈಗೆ ಬಂದಂತೆ. ಪಾದ್ರಿಯ ಮಾತಿನಲ್ಲಿ ಗ್ರೀನನು ಸ್ಪಷ್ಟವಾಗಿ ಸೂಚಿಸುವಂತೆ 'ಇನ್ನ್ಯಾರಿಂದಲೂ ಘಟಿಸದಂತಹ ಪಾಪ ಒಬ್ಬ ಕ್ಯಾಥೊಲಿಕನ ಕೈಯಿಂದ ಘಟಿಸಬಹುದು ; ನನಗೆ ತೋರುವಂತೆ ಅದಕ್ಕೆ ಕಾರಣ ಅವನಲ್ಲಿರುವ ನಮ್ಮ ವಿಶ್ವಾಸ'. ಪಾಪ-ಹೇಯ ಕರ್ಮಗಳ ಪರಾಕಾಷ್ಠೆಯಲ್ಲಿಯೂ, ದೇವರು ಯಾರನ್ನೂ ಯಾವ ಕಾಲಕ್ಕೂ ತನ್ನ ಕರುಣೆಯಿಂದ ಹೊರತುಪಡಿಸುವದಿಲ್ಲವೆಂಬ ವಿಶ್ವಾಸ ನಾಶವಾಗುವದಿಲ್ಲ. ಬಹುಶಃ ಅದಕ್ಕೆ ಆಧಾರವಾಗಿರುವದು ದೋಷಜೀವಿಯಾದ ಮನುಷ್ಯನ ಅಂತರ್ಯದಲ್ಲಿಯೂ ಒಂದು ನಿರ್ದಿಷ್ಟವಾದ ವಸ್ತುವಿರುವದೆಂಬ ಅಸ್ಪಷ್ಟವಾದರೂ ದೃಢವಾದ ಭಾವನೆ. ಪಿಂಕಿಯ ಪಾತ್ರದ ಹೃದಯಸ್ಥಾನದಲ್ಲಿ 'ಸಿಲುಬೆಯ ಪ್ರತೀಕ'ವನ್ನು ತೋರಿಸುವದರಿಂದ ಗ್ರೀನನು ಓದುಗನಿಗೆ ಈ ಭಾವನೆಯನ್ನು ಮನಗಾಣಿಸುತ್ತಾನೆ. ಮೇಲಿಂದ ಮೇಲೆ ಗ್ರೀನನು ಉದ್ದೇಶಪೂರ್ವಕವಾಗಿ ಕತೆಯ ಜಾಡನ್ನು ಬಿಟ್ಟು ಈ ವೈಶಿಷ್ಟ್ಯವನ್ನು ಒತ್ತಿ ಹೇಳುವದನ್ನು ನೋಡಿದರೆ ಅವನ ಮನಸ್ಸಿನ ಒಲವು ಸ್ಪಷ್ಟವಾಗುತ್ತದೆ. ಪಿಂಕಿಯ ಬಾಲ್ಯದ ಕನಸುಗಳಲ್ಲಿ ಪಾದ್ರಿಯಾಗುವದೂ ಒಂದಾಗಿತ್ತು ಎಂಬುದನ್ನು ಸ್ಮರಿಸುತ್ತಾನೆ : 'ನಾನು ಚಿಕ್ಕವನಾಗಿದ್ದಾಗ ನಾನು ಪಾದ್ರಿಯೇ ಆಗುವೆನೆಂದು ಶಪಥಮಾಡಿದ್ದೆ.' ತರುವಾಯದ ದಿನಗಳಲ್ಲಿ ಅವನು ಪಾಪಕೃತ್ಯಗಳಲ್ಲಿ ಮುಳುಗಿ ಮುಳುಗಿ ಏಳುತ್ತಿದ್ದರೂ ಪಾದ್ರಿಗಳ ಬಗ್ಗೆ ಅವನಿಗಿದ್ದ ಪೂಜ್ಯ ಭಾವನೆ ಕಡಿಮೆಯಾಗಿರುವುದಿಲ್ಲ; ಏಕೆಂದರೆ 'ಅವರಿಗೆ ಯಾವುದು ಏನೆಂಬುದು ಗೊತ್ತು.' ಧಾರ್ಮಿಕ ಸಂಗೀತವು ಅವನ ಹೃದಯವನ್ನು ಆಳವಾಗಿ ತಟ್ಟುತ್ತದೆ : 'ಸಂಗೀತ ಯಾವ

ಸಂಗೀತವಾದರೇನು ?– ದೇವನ ಕುರಿಮರಿ, ನೋಡುವುದೂ ಚಂದ ಮುಟ್ಟುವುದೂ ಆನಂದ, ಅಲೆದಾಟದಲ್ಲಿ ಕಂಡ ಚಿಟಗುಬ್ಬಿ, ನಾನು ನಂಬುವುದು ಒಬ್ಬನೇ ದೇವನ – ಯಾವ ಗೀತವಾದರೂ ಅಷ್ಟೆ, ಅವನಿಗೆ ತಿಳಿಯದ ಯಾವುದೋ ಪ್ರಪಂಚವನ್ನು ಕುರಿತು ನುಡಿಯುವುದು.' ಅವನು ತನ್ನ ದೇವಾಲಯದ ಭಜನಮಂಡಲದಲ್ಲೊಬ್ಬನಾಗಿದ್ದವನು, ತನ್ನಷ್ಟಕ್ಕೆ ತಾನೇ ಗುಣುಗುಣಿಸುತ್ತಿರುತ್ತಾನೆ. 'ಅದಕ್ಕೇನು ? ನಾನು ಒಂದು ಭಜನ ಮಂಡಲಿಯಲ್ಲಿದ್ದೆ !' ಎಂದವನೇ ಆ ಹುಡುಗನು ತನ್ನ ಅದೇ ಒಡೆಯುತ್ತಿದ್ದ ದನಿಯಲ್ಲಿ ಮೆಲ್ಲಗೆ ಹಾಡತೊಡಗಿದನು : 'ಎಲ್ಲವೂ ತಿಳಿದ ದೇವಿಯ ಅನುಮತಿಯನ್ನು ಪಡೆದು.' ತಾನು ಚಿಕ್ಕಂದಿನಲ್ಲಿ ದೇವಾಲಯದಲ್ಲಿ ಕಲಿತ ಹಾಡುಗಳನ್ನು ಹಾಡಿಕೊಳ್ಳುವ ಪ್ರವೃತ್ತಿಯನ್ನು ಅವನಿಂದ ತಡೆಯುವದಾಗುತ್ತಿರಲಿಲ್ಲ. ತಾನು ಕಳೆದುಕೊಂಡ ಬಾಲ್ಯದ ಪವಿತ್ರ ಪ್ರಪಂಚದೊಡನೆ ಸಂಪರ್ಕವನ್ನು ಪಡೆಯುವ ಯತ್ನ ಅದರಲ್ಲಿ ಕಾಣುತ್ತಿತ್ತು, ಅವನ ದನಿಯಲ್ಲಿ ಕಳೆದುಹೋದ ಒಂದು ಪ್ರಪಂಚವೇ ಮೂಡಿಬರುತ್ತಿತ್ತು. ಆರ್ಗನ್ ವಾದ್ಯದ ಮೂಲೆಯಲ್ಲಿ ಮೊಂಬತ್ತಿಗಳ ಬೆಳಕು, ಗಂಜಿ ಹಾಕಿ ಇಸ್ತ್ರಿ ಮಾಡಿದ ಬಟ್ಟೆಗಳ ಮತ್ತು ಧೂಪಗಳ ಸುಗಂಧ ಮತ್ತು ಆ ಸಂಗೀತ.' ತನ್ನ ಹೇಯ ಜೀವನದಲ್ಲಿ ಪದೇಪದೇ ಎದುರಾಗುತ್ತಿದ್ದ ಲೈಂಗಿಕ ಪ್ರಚೋದನಗಳನ್ನು ಗೆದ್ದು ತನ್ನ ಬ್ರಹ್ಮಚರ್ಯವನ್ನುಳಿಸಿ ಕೊಳ್ಳುವುದಕ್ಕೆ ಹೆಣಗುತ್ತಾನೆ. ಸ್ತ್ರೈಣ, ಕುಡಿತ, ಧೂಮಸೇವನೆಗಳಿಂದ ದೂರವಿದ್ದು ಕಟ್ಟು ನಿಟ್ಟಿನ ಜೀವನವನ್ನು ನಡೆಸುತ್ತಾನೆ. ಅವುಗಳಲ್ಲಿ ನಿಜವಾಗಿಯೂ ಅವನಿಗೆ ಆಸಕ್ತಿಯಿಲ್ಲ. ಅವು ಲೈಂಗಿಕ ಮತ್ತು ಐಂದ್ರಿಯಕ ಪಾಪಗಳೆಂದು ಅವುಗಳಿಂದ ಅವನು ನಿರ್ಲಿಪ್ತನಾಗಿದ್ದನೆಂದೇ ಹೇಳಬಹುದು.

ಪಿಂಕಿಯ ಭ್ರಷ್ಟಜೀವನದ ಆಂತರ್ಯದಲ್ಲಿಯ ಈ ಪಾವಿತ್ರ್ಯದ ತಿರುಳು ಅವನ ಸ್ವಭಾವದ ಮುಖ್ಯವಾದ ಅಂಗವಾಗಿದೆ. ಅವನ ಕೊನೆಯ ಕೃತ್ಯವಾದ ಆತ್ಮಹತ್ಯೆಗೆ ಬಹುಶಃ ಅದೇ ಪ್ರೇರಕವಾಯಿತೆಂದು ತೋರುತ್ತದೆ. ಈ ಕೊನೆಯ ಗಳಿಗೆಯಲ್ಲಿಯೂ ತನ್ನ ಹೆಂಡತಿಯನ್ನು ಕೊಲ್ಲುವ ಅವನ ವಿಚಾರ ಫಲಿಸಬಹುದಾಗಿತ್ತು. ಆದರೂ ಅವಳನ್ನಾಗಲಿ ತನಗೆ ದ್ರೋಹ ಬಗೆದ ಮಿತ್ರರನ್ನಾಗಲಿ ಕೊಲ್ಲುವುದನ್ನು ಬಿಟ್ಟು ತಾನೇ ತನ್ನ ಮುಖಕ್ಕೆ ಗಂಧಕಾಮ್ಲವನ್ನು ಸುರಿದುಕೊಂಡು ಸಮುದ್ರದ ನೀರಿಗೆ ಬೀಳುತ್ತಾನೆ. ತನಗೆ ತಾನೇ ಮಾಡಿಕೊಂಡ ಈ ಹಿಂಸೆಯ ನೋವು ಯಾವ ರೀತಿಯಲ್ಲೂ ನರಕದ ಉರಿಯ ನೋವಿಗೆ ಕಡಿಮೆಯಿಲ್ಲ. ಇದೊಂದು ಮಹಾ ಪ್ರಾಯಶ್ಚಿತ್ತದ ರೂಪವನ್ನು ಪಡೆಯುತ್ತದೆ. ತನ್ನ ಜೀವನದಲ್ಲಿ ಅವನು ವಿಧಿಸಿಕೊಂಡ ಅನೇಕ ಅಲ್ಪ ಪ್ರಾಯಶ್ಚಿತ್ತಗಳಿಗೆ ಇದು ಪರಾಕಾಷ್ಠೆಯಾಗುತ್ತದೆ. ಹಾಗೆ ಭಾವಿಸಿದಾಗಲೇ ದೇವರು ಏಕೆ ಕೈಚಾಚಿ ಅವನನ್ನು ಎತ್ತಿಕೊಂಡು ಅವನ ಹಿಂದಿನ ಮತ್ತು ಇಂದಿನ ಪಾಪ ಜೀವನದಿಂದ ಬಿಡುಗಡೆ ಮಾಡಿದನೆನ್ನುವದು ಅರ್ಥವಾಗುತ್ತದೆ... 'ಅವನು ನೀರಿಗೆ ಬಿದ್ದ ಶಬ್ದವೂ ಅವರಿಗೆ

ಕೇಳಿಸಲಿಲ್ಲ. ಅವನನ್ನು ಒಮ್ಮೆಲೇ ಅನಾಮತ್ತಾಗಿ ಇಲ್ಲಿಂದ ಎತ್ತಿಕೊಂಡಂತಾಗಿತ್ತು. ಹಿಂದಿನ ಇಂದಿನ ಜೀವನದ ಸಂಬಂಧ ಕಡಿದುಹೋಗಿತ್ತು. ಯಾವುದೋ ಶೂನ್ಯದಲ್ಲಿ ಅಭಾವದಲ್ಲಿ ಲಯವಾದಂತಿತ್ತು.' ಶೂನ್ಯ ಅಭಾವ ಶಬ್ದಗಳು ನರಕವನ್ನು ಸೂಚಿಸಲಾರವು. ಅದಕ್ಕೆ ಇನ್ನೂ ಮೂರ್ತವಾದ ಪದಗಳಿವೆ. ನರಕವನ್ನು ಸರ್ವಗುಣರಹಿತವಾದದ್ದೆಂದು ಊಹಿಸುವದು ಸಾಧ್ಯವಲ್ಲ. ಏಕೆಂದರೆ ಅಲ್ಲಿ ಸಾಮಾನ್ಯವಾಗಿ ಅಮಿತವಾದ ಹಿಂಸೆ ದುಃಖಗಳಿವೆಯೆಂದು ಭಾವಿಸುತ್ತೇವೆ. ಪಿಂಕಿಯನ್ನು ದಹಿಸಿದ ಉರಿಯೂ ಅವನನ್ನು ಸೆಳೆದುಕೊಂಡ ಸಮುದ್ರದ ನೀರೂ ಅವನ ಪಾಪಗಳನ್ನೆಲ್ಲ ಕಳೆದು ದೇವರ ಕ್ಷಮೆಗೂ ದಯೆಗೂ ಪಾತ್ರನಾಗುವದಕ್ಕೆ ಅವನನ್ನು ಒಂದು ನಿರ್ಗುಣ ಲೋಕದಲ್ಲಿ ನಿಲ್ಲಿಸಿದವೇನೋ ಎಂದು ಆಶ್ಚರ್ಯಪಡುತ್ತೇವೆ. ಆ ಘಟನೆಗಳ ಅಂತರಾರ್ಥವೇನೇ ಇದ್ದರೂ ಅವು ನಮ್ಮನ್ನು ಕೊನೆಯ ಪ್ರಕರಣದ ಸಮಾರೋಪವನ್ನು ಒಪ್ಪುವಂತೆ ಮಾಡುತ್ತವೆ. ಪಿಂಕಿಯು ನರಕಕ್ಕೆ ಹೋದನೆಂದು ಹೇಳಲಾರೆವು. ತದ್ವಿಪರೀತವಾಗಿ ಪಿಂಕಿಯ ವೃತ್ತಾಂತದಲ್ಲಿಯೂ ಪಿಗಾಯ್‌ನ ವೃತ್ತಾಂತ ದಲ್ಲಿಯೂ ಸಮಾನತೆಯನ್ನು ಗುರುತಿಸುತ್ತೇವೆ. ತನ್ನ ಜೀವನ ಎಷ್ಟೇ ಪಾಪಮಯವಾಗಿದ್ದರೂ ಕೊನೆಯಲ್ಲಿ ಸಂತರಿಗೆ ಉಚಿತವಾದ ಗತಿಯನ್ನು ಪಡೆದ ಪಿಗಾಯ್‌ನ ಗತಿಯ ದೃಷ್ಟಿಯಿಂದಲೇ ಪಿಂಕಿಯ ಗತಿಯನ್ನೂ ನಾವು ನೋಡುವಂತಾಗುತ್ತದೆ.

ಕಾದಂಬರಿಯ ಉದ್ದಕ್ಕೂ ಪಿಂಕಿಯು ಹೇಗೆ ತನ್ನನ್ನು ಸೈತಾನನ ಸೇವೆಗೆ ಸರ್ವಾತ್ಮನಾ ಸಮರ್ಪಿಸಿಕೊಂಡನೆನ್ನುವದರಲ್ಲಿಯೇ ಓದುಗನ ದೃಷ್ಟಿಯೂ ಕೇಂದ್ರೀಕೃತವಾಗುತ್ತದೆ. ಆದರೆ ಈ ಬಾಬತ್ತಿನಲ್ಲಿ ಧನ ಮತ್ತು ಅಧಿಕಾರಗಳನ್ನು ಬೆಳೆಸಿಕೊಳ್ಳುವುದರಲ್ಲಿಯೇ ನಿರತವಾದ ಮಿಕ್ಕ ಪ್ರಪಂಚಕ್ಕೂ ಪಿಂಕಿಗೂ ಯಾವ ವ್ಯತ್ಯಾಸವೂ ತೋರುವದಿಲ್ಲ. ಕೋಲ್ಲಿಯೋನಿ ಮತ್ತು ಅವನ ಅಪರಾಧಸಾಮ್ರಾಜ್ಯ, ಅಪರಾಧಿಗಳ ಸ್ನೇಹಕ್ಕೆ ಆತುರರಾಗಿರುವ ಪೊಲೀಸ್ ಅಧಿಕಾರಿಗಳು, ಸೇಡುಗಾರಿಕೆಯನ್ನು ತಮ್ಮ ತತ್ವಜ್ಞಾನವಾಗಿಸಿ ಕೊಂಡ ಇಡಾ ಆರ್ನೋಲ್ಡ ಮತ್ತು ಅವಳ ಸಂಗಡಿಗರು, ಇವರೇ 'ಬ್ರಾಯಿಟನ್ ರಾಕ್' ಕಾದಂಬರಿಯ ಪ್ರಪಂಚವನ್ನು ತುಂಬಿದ್ದಾರೆ. ಲೇಖಕರು ಅವರನ್ನೆಲ್ಲ ಒಂದೇ ಮಸಿಯಲ್ಲಿ ಚಿತ್ರಿಸಿರುವದರಿಂದ ಅವರಲ್ಲಿ ಯಾರೂ ಹೆಚ್ಚಿನವರು ಕಡಿಮೆಯವರು ಎನ್ನುವಂತಿಲ್ಲ. ಸೈತಾನನು ಈ ಪ್ರಪಂಚವನ್ನು ವರ್ಣಿಸುವದಕ್ಕೆ ಮಾರ್ಲೋ ಬಳಸುವ ಶಬ್ದಗಳು ಬ್ರಾಯಿಟನ್ ಪ್ರಪಂಚಕ್ಕೆ ಸರಿಯಾಗಿ ಅನ್ವಯಿಸುತ್ತವೆ – 'ನರಕವೆ ? ಇದೇ ನರಕ. ನಾವು ಅದರಲ್ಲೇ ಇದ್ದೇವೆ.' 'ಬ್ರಾಯಿಟನ್ ರಾಕ್'ನಲ್ಲಿಯ ನೈತಿಕ ವಿರೋಧಗಳನ್ನು ನಿರೂಪಿಸುವದಕ್ಕೆ ಒಳ್ಳೆಯದು ಕೆಟ್ಟದು, ಸರಿ ತಪ್ಪು ಎಂಬ ಸಾಮಾನ್ಯ ಕಲ್ಪನೆಗಳು ಸಾಲವು. ಪಿಂಕಿಯು ಕೊಲೆಪಾತಕಿ. ಅವನನ್ನು ನ್ಯಾಯ ವಿಚಾರಣೆಗೆ ಎಳೆಯುವದಕ್ಕೆ ಇಡಾ ಆರ್ನೋಲ್ಡ ಕಂಕಣ ಕಟ್ಟಿದ್ದಾಳೆ. ಇಡಾಳ ನ್ಯಾಯವು ಸಾಮಾಜಿಕ ವ್ಯವಸ್ಥೆಯು ಏರ್ಪಡಿಸಿರುವ ಕೋರ್ಟುಗಳ ನ್ಯಾಯದಿಂದ ಎಳ್ಳಷ್ಟೂ ಬೇರೆಯಾಗಿಲ್ಲ. ಇದು ಗ್ರೀನನಿಗೆ ಸಮ್ಮತವಿಲ್ಲ.

ಏಕೆಂದರೆ ಇದರ ಆಧಾರ ಸೇಡಿನ ಭಾವನೆಯಲ್ಲಿದೆ. ಕಣ್ಣು ಕಿತ್ತವನ ಕಣ್ಣು ಕಿತ್ತು ಎಂಬ ಕಾಡುಸಿದ್ಧಾಂತದಲ್ಲಿದೆ. ಪಿಂಕಿಯು ನಂಬುವದೂ ಇದೇ ನ್ಯಾಯವ್ಯವಸ್ಥೆಯನ್ನು. ತನ್ನನ್ನು ದಾರಿದ್ರ್ಯ ಮತ್ತು ಕೊಳೆಗೇರಿಯ ಜೀವನಕ್ಕೆ ತಳ್ಳಿದ ಸಮಾಜದ ವಿರುದ್ಧ ಅವನ ಪ್ರತೀಕಾರವೇ ಅವನ ಅಪರಾಧಗಳೆಂದು ಖಚಿತವಾಗಿ ವಿವರಿಸಬಹುದು. ಆದರೆ ದುರ್ದೈವವೆಂದರೆ ಈ ಪ್ರತೀಕಾರ ಶಿಕ್ಷೆಗೆ ಗುರಿಯಾಗುವವನು ಯಾವನೊ ಒಬ್ಬ ವ್ಯಕ್ತಿ; 'ಸಮಾಜ'ವೆಂಬ ಹೆಚ್ಚಿನ ಅಪರಾಧಿಗೆ ಅದರ ಬಿಸಿ ತಟ್ಟುವದೇ ಇಲ್ಲ. ಹೀಗೆ ಹೇಳುವದೆಂದರೆ ನಮ್ಮ ವಿವರಣೆಗೆ ಸಮಾಜ ವಿಜ್ಞಾನದ ಸ್ವರೂಪ ಕೊಡುವ ಯತ್ನವಲ್ಲ. ಇದರ ಉದ್ದೇಶವೆಂದರೆ ಅಪರಾಧಿಯನ್ನು ಶಿಕ್ಷೆಗೆ ಗುರಿಪಡಿಸುವದರಲ್ಲಿ ಯಶಸ್ವಿಯಾದ ಇಡಾಳ ಬಗ್ಗೆ ಓದುಗರಲ್ಲಿ ಸ್ವಲ್ಪವೂ ಸಹಾನುಭೂತಿ ಏಕೆ ಮೂಡುವದಿಲ್ಲವೆಂದು ತೋರಿಸುವದು. ಕೊನೆಯಲ್ಲಿ ಆಗುವದೆಂದರೆ, ಈ ಕಾದಂಬರಿಯಲ್ಲಿಯೇ ಹೆಚ್ಚಿನ ಪಾತಕಿಯಾದ ಪಿಂಕಿಯು ಒಂದು ಬಗೆಯ ಉನ್ನತಿಯನ್ನು ಪಡೆದು ಒಳ್ಳೆಯವಳೆಂಬ ಇಡಾಳಿಗಿಂತ ಅವನೇ ವಾಸಿ ಎನ್ನಿಸುತ್ತದೆ.

ಆದರೂ ಇಡಾಳನ್ನು ಮಾತೃತ್ವದ ಪ್ರತೀಕವೆಂದು ಭಾವಿಸಲಾಗುತ್ತದೆ. ಅವಳ ದೊಡ್ಡ ಮೊಲೆಗಳನ್ನು ನೋಡಿದರೆ ತಾಯಿಯ ಹೊಟ್ಟೆಯಲ್ಲಿ ಬೆಚ್ಚಗೆ ಸುಖವಾಗಿ ಕುಳಿತಿರುವಂತೆ ಭಾವನೆಯಾಗುತ್ತದೆ. 'ಅವನ ದೃಷ್ಟಿ ಅವಳ ದೊಡ್ಡ ಮೊಲೆಗಳತ್ತ ತಿರುಗಿತು. ಅವನ ಪಾಲಿಗೆ ಅವಳು ನೆರಳು, ಆಶ್ರಯ, ಜ್ಞಾನ, ಲೋಕನೀತಿ. ಆ ನೋಟಕ್ಕೆ ಅವನ ಎದೆ ಮುಲುಗುತ್ತಿತ್ತು. ನಿನಗೆ ಮತ್ತೆ ಗರ್ಭವಾಸ ಬೇಕೆ ? ನಿನಗೆ ತಾಯಿಯಾಗಲೆ ? ಎಂದು ಅಣಕಿಸುತ್ತಿತ್ತು.' ಇಡಾ ತಾಯಿಯೆಂಬ ಕಲ್ಪನೆಯು ಆ ಕಾದಂಬರಿಯನ್ನೆಲ್ಲ ವ್ಯಾಪಿಸಿದೆ.

ಆದರೆ ಇಡಾಳ ಪಾತ್ರದ ಚಿತ್ರಣವು ಸಂತಾನವಿಲ್ಲದ ಲೈಂಗಿಕತೆಯಾಗಿದೆ. ಅವಳಿಗೆ ಮಕ್ಕಳಿಲ್ಲ. ಅವಳ ಲೈಂಗಿಕ ವ್ಯವಹಾರಗಳಲ್ಲಿ ಕೌಟುಂಬಿಕ ಜವಾಬ್ದಾರಿಯ ಸೂಚನೆಯೇ ಇಲ್ಲ. ಇಂತಹ ಹೆಂಗಸಿಗೆ ತಾಯಿತನವನ್ನು ಕಲ್ಪಿಸುವ ವ್ಯಂಗ್ಯ ಈ ಕಾದಂಬರಿಯಲ್ಲಿ ಇವಳ ಪಾತ್ರವೊಂದೇ ಅಲ್ಲ. ಕೆಲವೇ ದಿನಗಳಲ್ಲಿ ತಾಯಿಯಾಗಲಿರುವ ಹುಡುಗಿಯೊಬ್ಬಳು ಓಡುತ್ತಿರುವ ರೈಲು ಬಂಡಿಯ ಮುಂದೆ ಬಿದ್ದು ತನ್ನ ಲಜ್ಜಾಸ್ಪದವಾದ ಮಾತೃತ್ವದ ನಿರೀಕ್ಷೆಯನ್ನು ಕೊನೆಗಾಣಿಸುತ್ತಾಳೆ. ಕಾದಂಬರಿಯ ನಾಯಿಕೆಯಾದ ರೋಜಳ ತಾಯಿ ತನ್ನ ಮಗಳನ್ನು ಒಬ್ಬ ಪ್ರಸಿದ್ಧ ಕೇಡಿಗನಿಗೆ ಕೆಲವೇ ಶಿಲಿಂಗುಗಳ ಬೆಲೆಗೆ ಮಾರುತ್ತಾಳೆ. ರೋಜಳೂ ತಾಯಿಯಾಗಲಿದ್ದಾಳೆ. ಆದರೆ ತನಗಾಗಿ ಕಾದಿರುವದು ಭಯಂಕರ ಅಧೋಗತಿ, ಶಾಶ್ವತ ವಾದ ನರಕ ಎಂಬುದನ್ನವಳು ಅರಿಯಳು. ಆದರೆ ಇಡಾಳ ಸಂತಾನವಿಲ್ಲದ ಸಂಭೋಗ ಕ್ಕಿಂತ, ರೋಜಳ ಪಾಪಮಯವಾದ ತಾಯ್ತನ ವಾಸಿ ಎಂದು ಗ್ರೀನನು ಸೂಚಿಸುತ್ತಾನೆ.

ಕಾದಂಬರಿಯ ರಚನೆಯಲ್ಲಿ ಇಡಾ ಮತ್ತು ಪಿಂಕಿಯ ಪಾತ್ರಗಳು ಕೇಂದ್ರ – ಪ್ರತಿ ಕೇಂದ್ರಗಳಾಗಿವೆಯೆನ್ನುವದು ಸ್ಪಷ್ಟವಾಗಿದೆ. ಅವರಿಬ್ಬರ ಪ್ರಪಂಚಗಳನ್ನು ವಿಭಾಗಿಸುವದು

ರೂಢವಾದ ಒಳಿತು ಕೆಡಕುಗಳ ಕಲ್ಪನೆಯಲ್ಲ. ಅದು ಗ್ರೀನನದೇ ವಿಶಿಷ್ಟವಾದ ಕಲ್ಪನೆ : ದೌರ್ಜನ್ಯದ ಅಂತರ್ಯದಲ್ಲಿನ ಆಧ್ಯಾತ್ಮಿಕ ಅರ್ಥ ಮತ್ತು ದೇವರನ್ನೇ ಮರೆತ ಯಾಂತ್ರಿಕವಾದ ಒಳಿತು-ಕೆಡಕು ಕಲ್ಪನೆಗಳ ಪೊಳ್ಳುತನ. ಇಡಾ ಸರಿಯಾದದ್ದೆಂಬುದನ್ನೂ ನ್ಯಾಯವಾದದ್ದೆಂಬುದನ್ನೂ ಎತ್ತಿ ಹಿಡಿಯುತ್ತಿದ್ದರೂ ಅವಳ ಪ್ರಪಂಚ 'ಕರುಣೆಯಿಲ್ಲದ ಪೊಳ್ಳು ಥಳುಕಿನ ಪ್ರಪಂಚ.' ಅದರಲ್ಲಿ ದೇವತ್ವವಿಲ್ಲ, ಆಧ್ಯಾತ್ಮಿಕ ಮೌಲ್ಯಗಳಿಲ್ಲ. ಆದ್ದರಿಂದಲೇ ಅವಳ ತಾಯಿತನವೆಂದರೆ ಲೈಂಗಿಕ ಪ್ರಚೋದನೆಗೆ ಕಾರಣವಾಗುವ ಮೊಲೆಗಳಾಚೆಗೆ ಏನೂ ಇಲ್ಲ ಎಂಬ ಅಣಕದಿಂದ ತುಂಬಿದೆ. ಅದೇ, ಪಿಂಕಿಯ ದೌರ್ಜನ್ಯ ಅಪರಾಧಪೂರಿತ ಪ್ರಪಂಚವು ದೇವರ ಅಸ್ತಿತ್ವವನ್ನು ಸುತ್ತಿಕೊಂಡಿದೆ ಮತ್ತು ಒಂದು ರೀತಿಯಲ್ಲಿ ಅವನ ಕರುಣೆಗೂ ವಿಮೋಚನಾಶಕ್ತಿಗೂ ಹತ್ತಿರವಾಗಿದೆ. ಒಳಿತಿನ ಕಾರ್ಯದೊಡನೆ ತನ್ನ ಕಾರ್ಯ ಸೇರದೇಹೋದರೆ ತನ್ನ ಜೀವನಕ್ಕೆ ಪರ್ಯಾಪ್ತಿ ಇಲ್ಲವೆಂದು ಪಿಂಕಿ ಕಂಡುಕೊಳ್ಳುತ್ತಾನೆ. ರೋಜಳೊಡನೆ ಮದುವೆಯಾದದ್ದು ಅವನಿಗೊಂದು ಕೃತಕೃತ್ಯತೆಯ ಭಾವನೆಯನ್ನು ಕೊಡುತ್ತದೆ. ಏಕೆಂದರೆ ಅವಳ ನಿಷ್ಕಲ್ಮಷತೆಯೂ ಪ್ರೀತಿಯೂ ತನ್ನ ಪೂರ್ತಿಗೆ ಒದಗಿದ ಇನ್ನೊಂದು ಅರ್ಥವೆಂದು ಅವನಿಗೆ ತೋರುತ್ತದೆ. 'ಅವನಲ್ಲಿ ಅನಿಷ್ಟತಮವಾದ ಅಂಶ ಅವಳನ್ನು ಬೇಡುತ್ತದೆ. ಅವಳ ಸಜ್ಜನಿಕೆಯಿಲ್ಲದೆ ಅದಕ್ಕೆ ನಿರ್ವಾಹವಿಲ್ಲ.'

ಪಿಂಕಿಯ ಪ್ರಪಂಚ ಇಡಾಳಿಗೆ ಅರ್ಥವಾಗದೆ ಹೋಯಿತು. 'ಆ ಪ್ರಪಂಚದಲ್ಲಿ ಒಳಿತು ಕೆಡಕುಗಳು ಒಂದೇ ಭೂಮಿಯಲ್ಲಿ ಹೊಂದಿಕೊಂಡಿದ್ದವು ; ಒಂದೇ ಭಾಷೆಯಲ್ಲಿ ವ್ಯಕ್ತವಾಗುತ್ತಿದ್ದವು ; ಹಳೆಯ ಸ್ನೇಹಿತರಂತೆ ಕೂಡಿ ಇದ್ದು ಪರಸ್ಪರ ಪೂರ್ತಿಯನ್ನು ಪಡೆಯುತ್ತಿದ್ದವು.' ಪಿಂಕಿ ಮತ್ತು ಇಡಾ ನಡುವಿನ ವ್ಯತ್ಯಾಸ, ಜೀವನ ಮತ್ತು ಚಾರಿತ್ರ್ಯಗಳನ್ನು ಬೆಲೆಗಟ್ಟುವಲ್ಲಿರುವ ಆಧ್ಯಾತ್ಮಿಕ ದೃಷ್ಟಿಯಲ್ಲಿದೆ. ಪಿಂಕಿಯ ದೌರ್ಜನ್ಯವನ್ನು ಸಜ್ಜನಿಕೆ ನಿಷ್ಕಲ್ಮಷತೆ ಕಟ್ಟುನಿಟ್ಟಾದ ಜೀವನದ ಪಕ್ಕದಲ್ಲಿಡುವದರಿಂದ ಗ್ರೀನನು ಪಿಂಕಿಯಲ್ಲಿದ್ದ ಪಾಪಕ್ಕೂ ದೈವೀಸಂಬಂಧವನ್ನು ಕಲ್ಪಿಸುತ್ತಾನೆ. ಪಿಂಕಿಯ ಚಾರಿತ್ರ್ಯ ಹೇಯದ ಪರಾಕಾಷ್ಠೆಯಲ್ಲಿಯೂ ದೈವೀಸಂಬಂಧವನ್ನು ಕಡಿದುಕೊಳ್ಳುವದಿಲ್ಲ. ಇಷ್ಟೇ ಅಲ್ಲದೆ, ತಾನು ಪಾಪದ ದಾರಿಯನ್ನು ಹಿಡಿದದ್ದು ತನ್ನ ಸ್ವತಂತ್ರ ಇಚ್ಛೆಯಿಂದಲ್ಲವೆಂದು ಪಿಂಕಿಯ ಭಾವನೆಯಿರುವಂತೆ ತೋರಿಸುತ್ತಾನೆ. 'ಅದು ಯಾವಾಗಲೂ ನಿನ್ನ ಕೈವಶದಲ್ಲಿರುವದಿಲ್ಲ; ಒಂದು ರೀತಿಯಾಗಿ ತಾನೇ ಬಂದುಬಿಡುತ್ತದೆ.' ಹಾಗಾಗಿ ಕೊನೆಯಲ್ಲಿ ಪಿಂಕಿಯು ತನ್ನ ಜೀವನ ಅದು ಹೇಗೋ ದೇವರು ತೋರಿದ ದಾರಿಯಲ್ಲಿ ಸಮರ್ಪಿತವಾದದ್ದು ; ಹೇಗೆಂಬುದು ತನಗೆ ತಿಳಿಯದು ಎಂದು ಭಾವಿಸುತ್ತಾನೆ.

ಗ್ರೀನನು ತನ್ನ ದೃಷ್ಟಿಯನ್ನು ನಿರೂಪಿಸುವ ರೀತಿ ಕಥನಾತ್ಮಕವೂ ಆಗಿದೆ, ಸಾಂಕೇತಿಕವೂ ಆಗಿದೆ. ಇಲ್ಲಿಯವರೆಗಿನ ವಿವರಣೆಯಿಂದ ಇಷ್ಟು ಸ್ಪಷ್ಟವಾಗಿರಲು ಸಾಕು ; ಪಿಂಕಿಯ ಪಾತ್ರ ಚಿತ್ರಣದಲ್ಲಿರುವ ಕ್ರೂಜೆಯ ಪ್ರತೀಕದ ವಿವರಣೆ ಅವನ ಕತೆಯಲ್ಲಿ ಬರುವ

ಸೌಜನ್ಯ ಮತ್ತು ನಿಷ್ಕಲ್ಮಷತೆಯ ಸಂಬಂಧಗಳು, ಈ ಮೌಲ್ಯ ನಿರೂಪಣದ ಸಮನ್ವಯ ರೀತಿಯು ಪಾಪವೂ ಕೂಡ ದೈವತ್ವಕಲ್ಪನೆಯ ಪರಿಧಿಗೆ ಹೊರತಾಗಿಲ್ಲವೆಂಬುದನ್ನು ಮನಗಾಣಿಸುತ್ತದೆ. ಈ ಅರಿವು ನಿಷ್ಕ್ರಿಯವಲ್ಲ. ಇದರಿಂದಾಗಿಯೇ ದೈವತ್ವದ ನಿಗೂಢತೆಗೆ ಹತ್ತಿರವಾಗಿರುವವರಿಗೆ ನರಕಪರ್ಯವಸಾಯಿ ಪಾಪಗಳೂ ಕೂಡ ವಿಮೋಚಕ ಶಕ್ತಿಯುಳ್ಳವಾಗಬಲ್ಲವೆಂಬುದು ಸ್ಪಷ್ಟವಾಗುತ್ತದೆ. ದೇವರ ಪ್ರೀತಿಗೆ ಯಾವದೂ ಹೊರತಾಗಿಲ್ಲ, ಅದು ಎಂತಹ ಪಾಪಿಯನ್ನೂ ಉದ್ಧರಿಸಬಲ್ಲದೆಂಬ ವಿಶ್ವಾಸದಿಂದ ಪಾಪಮಾರ್ಗವನ್ನು ಹಿಡಿದ ಪಿಗಾಯನೂ ಪಾದ್ರಿಯೂ ಅದೇ ಸಾಕ್ಷಾತ್ಕಾರದಲ್ಲಿ ಭಾಗಿಗಳಾಗುವದು ಈ ಅರಿವಿನಿಂದಲೇ. ಪಿಗಾಯ್ ಮತ್ತು ಪಿಂಕಿ ಪಾಪಿ ಮತ್ತು ಸಂತ ಇವರಲ್ಲಿ ಕಾಣುವ ಈ ಅಭೇದವೇ ಈ ಕಾದಂಬರಿಗೆ ಅರ್ಥವತ್ತಾದ ಉಪಸಂಹಾರವಾಗುತ್ತದೆ. ಇದರ ಸೂಚನೆ ಕಾದಂಬರಿಯ ಹೆಸರಿನಲ್ಲೇ ಇದೆ. 'ಬ್ರಾಯಿಟನ್ ರಾಕ್' ಒಂದು ಸಕ್ಕರೆ ಕಡ್ಡಿಯಂತಿದೆ. ಎಲ್ಲಿ ಕಡಿದರೂ ಅದೇ ಹೆಸರು ಕಾದಂಬರಿಯ ಹೃದಯದಲ್ಲಿರುವ ವಿಚಾರವನ್ನು ಸೂಚಿಸುತ್ತದೆ. ಇಲ್ಲಿಯವರೆಗೆ ಮಾಡಿದ ವ್ಯಾಖ್ಯಾನದೊಡನೆ ಹೊಂದಿಸಿ ನೋಡಿದರೆ ಅದೇ ಹೆಸರು ದೇವತ್ವದ ಸರ್ವತ್ರವ್ಯಾಪ್ತಿಯನ್ನೂ ಸೂಚಿಸುತ್ತದೆ ಎನ್ನಬಹುದು. ಪಾಪದ ಅಂತರಾಳದಲ್ಲಿ ಕೂಡ ಅದನ್ನು ಅನುಭವಿಸಬಹುದು.

ಈ ಒಳನೋಟವೇ ವಿಕಾರಪರಂಪರೆಯಲ್ಲೂ ನಿರ್ವಿಕಾರವಾದ ವಿಮೋಚನೆಯ ಕಲ್ಪನೆ, ಪಿಂಕಿಗೆ ನರಕವಾಸವೇ ಗತಿ ಎಂದು ನಂಬುವ ವಿಮರ್ಶಕರು ತಾವು ಹೇಳಿದ್ದನ್ನು ತಾವೇ ಪ್ರತಿಹೇಳಬೇಕಾಗುತ್ತದೆ. ಇಲ್ಲವೆ ಈ ಉಪಸಂಹಾರದ ಸ್ಪಷ್ಟ ಸೂಚನೆಗೆ ಬಧಿರರಾಗ ಬೇಕಾಗುತ್ತದೆ. ಈ ಉಪಸಂಹಾರ ಬಂದಿರುವದು ಯಾವನೋ ಅಜ್ಞಾನಿಯ ಬಾಯಿಂದಲ್ಲ. ರೋಮನ್ ಕ್ಯಾಥೊಲಿಕ್ ಚರ್ಚ್‌ನಲ್ಲಿ ತಪ್ಪೊಪ್ಪಿಗೆಗಳನ್ನು ಕೇಳುವ ಅಧಿಕಾರ ಪಡೆದ ಬೋಧಕನ ಬಾಯಿಂದ. ತಮ್ಮ ಸಂಶಯಗಳನ್ನು ಸ್ವೇಚ್ಛೆಯಿಂದ ಬದಿಗಿಡದೆ ಒಂದು ಕಲಾಕೃತಿಯನ್ನು ಪರಾಂಬರಿಸುವ ವಿಮರ್ಶಕರು ಎಂತಹ ಅನವಸ್ಥೆಗೆ ಈಡಾಗುವರೆಂಬುದನ್ನು ಈ ಅವತರಣಿಕೆಯಲ್ಲಿ ಕಾಣಬಹುದು. 'ಕೊನೆಯಲ್ಲಿ ಪಿಂಕೀ ಬ್ರಾವುನನು ನಿತ್ಯನರಕಕ್ಕೆ ಹೋದನೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಇದಕ್ಕೆ ಅಪವಾದವಿರಬಹುದಾದರೆ ಅದೇ ಒಂದು ಅನಿಶ್ಚಿತವಾದ ಸಂಶಯ. ಅದಕ್ಕೆ ಗ್ರೀನನ ಅಭಿಪ್ರಾಯದಂತೆ ಮಾನವನು ಮಾಡಬಹುದಾದ ಯಾವ ತೀರ್ಮಾನವೂ ಹೊರತಾಗದು.' ಸಂಶಯ-ನಿಶ್ಚಯಗಳನ್ನು ಹೊಂದಿಸುವ ಈ ವ್ಯರ್ಥ ಯತ್ನ ಏನನ್ನು ತೋರುವದೆಂದರೆ ರೂಢಿಯ ಬಲದಿಂದ ಬಿರುಸಾಗಿ ಮಣಿಯಲೊಲ್ಲದ ಓದುಗನ ಮನೋಭೂಮಿಕೆಗೂ ಮತ್ತು ಲೋಕದಲ್ಲಿಯ ಘಟನೆಗಳಲ್ಲಿ ವ್ಯಕ್ತಿಸ್ವಭಾವದ ಪರಿಣಾಮ ಬೆರೆತಾಗ ಕಾದಂಬರಿಕಾರನು ಅನಿವಾರ್ಯವೆಂದು ಕಾಣುವ ದರ್ಶನಕ್ಕೂ ನಡುವಿರುವ ದಾಟಲಾಗದ ಕಂದರವನ್ನು

ಇದೇ ತೊಡಕು 'ದಿ ಹಾರ್ಟ್ ಆಫ್ ದಿ ಮ್ಯಾಟರ್' ಎಂಬ ಕಾದಂಬರಿಯಲ್ಲೂ

ಓದುಗನಿಗೆ ಎದುರುನಿಲ್ಲುತ್ತದೆ. ಏಕೆಂದರೆ 'ಬ್ರಾಯಿಟನ್ ರಾಕ್‌ನಲ್ಲಿಯ ಪ್ರಮೇಯ'ವನ್ನೇ ಇನ್ನೂ ಪರಿಷ್ಕರಿಸಿ ಅದರಲ್ಲಿ ನಿರೂಪಿಸಲಾಗಿದೆ. ಇಲ್ಲಿಯೂ ಗ್ರೀನನು ಪಾಪ ಮತ್ತು ವಿಮೋಚನೆಯ ರಹಸ್ಯವನ್ನು ಒಳಹೊಕ್ಕು ನೋಡುತ್ತಾನೆ, ಈ ಕಾದಂಬರಿಯ ಮುಖ್ಯ ಪಾತ್ರ ಮೇಜರ್ ಸ್ಕೋಬಿ ಮುಖಾಂತರ. ಮೇಜರ್ ಸ್ಕೋಬಿ ಪಿಂಕಿಯಂತೆ ಅಪರಾಧ ಪ್ರವೃತ್ತಿಯವನಲ್ಲ. ಆದರೂ ಆತ್ಮಹತ್ಯೆಗೆ ಶರಣಾಗುತ್ತಾನೆ. ಚರ್ಚಿನ ದೃಷ್ಟಿಯಲ್ಲಿ ಅದು ಅಕ್ಷಮ್ಯ ಅಪರಾಧ, ಪಶ್ಚಾತ್ತಾಪಕ್ಕೆ ಒಲಿಯದ ನಿರಾಶೆಯ ಪರಾಕಾಷ್ಠೆ.' ಆದರೆ ತನಗೆ ತಾನೇ ವಿಧಿಸಿಕೊಂಡ ಈ ಹಿಂಸಾಚಾರದ ಘಟನೆಯನ್ನು ಒಂದು ಪ್ರಸ್ತಾವನೆ ಮತ್ತು ಸಮಾರೋಪಗಳ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ರೂಪಿಸಲಾಗಿದೆ. ಇದು ಚರ್ಚಿನ ವಿಧಿ ನಿಷೇಧಗಳನ್ನು ಅರ್ಥವಿಲ್ಲದವುಗಳೆಂದು ತೋರಿಸುವದಲ್ಲದೆ ಪಾಪಿಯನ್ನು ದೇವರು ಕ್ಷಮಿಸುವನೆಂಬ ವಿಚಾರದಲ್ಲಿ ತಲೆದೋರುವ ಸಂಶಯ ಸುಮಾರಾಗಿ ನಿಶ್ಚಯದಂತೆಯೇ ತೋರುತ್ತದೆ. ತನ್ನ ಪಾಪಮಾರ್ಗದಲ್ಲಿಯೇ ಸಂತ ಪದವಿಯನ್ನು ತಲುಪಿದ ಪಿಗಾಯನ ಪಾತ್ರವೇ ಇಲ್ಲಿಯ ಪ್ರಸ್ತಾವನೆಯೆಂದು ಆಗಲೇ ಹೇಳಿಯಾಗಿದೆ. ಸಮಾರೋಪದಲ್ಲಿಯೂ ಮತ್ತೆ ಬೋಧಕರು ಹೇಳುವ ಸಮಾಧಾನ – ದೇವರ ಕರುಣೆಯ ಆಳ ತಿಳಿಯದು. ಅದು ಯಾವ ಪಾಪಿಯನ್ನೂ ನಿತ್ಯನರಕವಾಸದಲ್ಲಿ ಬಿಡಲಾರದು ಎಂಬ ನಂಬಿಕೆ. ಪ್ರಸ್ತಾವನೆಯಂತಿರುವ ಲೇಖನಫಲಕದಲ್ಲಿ ಸ್ಪಷ್ಟವಾಗಿ ಹೇಳಿದ ಪಾಪಿ ಮತ್ತು ಸಂತರ ಏಕರೂಪತೆಯನ್ನೇ ಕಾದಂಬರಿಯ ಒಂದು ಮಾರ್ಮಿಕವಾದ ಸಂಧಿಯಲ್ಲಿ ಮತ್ತೆ ಹೇಳಲಾಗಿದೆ. ಹೆಚ್ಚಾಗಿ ತೆಗೆದುಕೊಂಡ ಎವಿಪಾನ್ ಮಾತ್ರೆಗಳ ಪರಿಣಾಮವಾಗಿ ಮೇಜರ್ ಸ್ಕೋಬಿ ನೆಲಕ್ಕೆ ಬಿದ್ದ ಕೂಡಲೆ ಒಬ್ಬ ಅನಾಮಿಕ ಸಂತನ ಪ್ರತಿರೂಪವನ್ನು ಧರಿಸಿದ ತಟ್ಟೆಯೊಂದು ಕಡಿದು ಕೆಳಕ್ಕೆ ಉರುಳುತ್ತದೆ. 'ತನ್ನ ದೇಹ ನೆಲಕ್ಕೆ ಬಿದ್ದದ್ದು ಅವನಿಗೆ ತಿಳಿಯಲೇ ಇಲ್ಲ, ನೆಲಕ್ಕೆ ಬಿದ್ದು ಉರುಳುತ್ತ ಟಣಟಣ ಶಬ್ದ ಮಾಡುತ್ತ ಐಸ್ ಪೆಟ್ಟಿಗೆಯ ಕೆಳಗೆ ಹೋದ ತಟ್ಟೆಯ ಶಬ್ದವೂ ಅವನಿಗೆ ಕೇಳಿಸಲಿಲ್ಲ... ಆ ಸಂತನ ಹೆಸರು ಯಾರ ಸ್ಮರಣೆಗೂ ಬಂದಿರಲಿಲ್ಲ.'

ಮೇಜರ್ ಸ್ಕೋಬಿಯು ಕೊನೆಯಲ್ಲಿ ನುಡಿದ ಮಾತು ಅಪೂರ್ಣವಾಗಿಯೇ ಉಳಿದಿದೆ. 'ನನ್ನ ಪ್ರಿಯತಮನಾದ ದೇವರೇ, ನಾನು ಪ್ರೀತಿಸುವ –' ಈ ವಾಕ್ಯವನ್ನು ಪೂರ್ತಿ ಮಾಡುವ ಶಕ್ತಿಯೋ ಇಚ್ಛೆಯೋ ತಮಗಿಲ್ಲವೆಂದು ವಿಮರ್ಶಕರು ಒಪ್ಪಿಕೊಂಡಿದ್ದಾರೆ. ಅವನ ಕೊನೆಯ ಗಳಿಗೆಯಲ್ಲಿ ಸ್ಕೋಬಿಯ ಅಂತರಂಗದಲ್ಲಿ ಯಾವ ಭಾವನೆ ತೇಲುತ್ತಿತ್ತೆಂಬುದನ್ನು ತಿಳಿಯುವದಕ್ಕೆ ಈ ವಾಕ್ಯವನ್ನು ಪೂರ್ತಿಗೊಳಿಸದ ಹೊರತು ಸಾಧ್ಯವಿಲ್ಲ. ಗ್ರೀನನು ಈ ಪಾತ್ರವನ್ನು ಅರ್ಧದಲ್ಲೇ ನಿಲ್ಲಿಸುವದರಲ್ಲಿ ಅವನ ಉದ್ದೇಶ ಓದುಗರನ್ನು ದಿಗಿಲುಗೊಳಿಸುವದಲ್ಲ ; ಇಲ್ಲಿ ಮುಂದಿನ ಘಟನೆಗೆ ಒಂದೇ ದಾರಿಯಲ್ಲಿ ಅನೇಕ ಸಂಭಾವ್ಯತೆಗಳಿವೆ ಎಂದು ತೋರಿಸುವದೇ ಅವನ ಉದ್ದೇಶ. ಮೇಜರ್ ಸ್ಕೋಬಿಯ ಸಲುವಾಗಿ ಈ ವಾಕ್ಯವನ್ನು ಪೂರ್ತಿಗೊಳಿಸುವ ಸಮಸ್ಯೆಯನ್ನು ನಾವು ಬಿಡಿಸ ಹೊರಟರೆ ಮೂರು ಸಂಭಾವ್ಯತೆಗಳಿವೆ.

ಏಕೆಂದರೆ ಅವನ ಜೀವನದಲ್ಲಿ ಅವನು ಪ್ರೀತಿಸಿದ್ದು ಮೂವರನ್ನು– ದೇವರು, ಅವನ ಹೆಂಡತಿ ಲೂಯಿಸ, ಅವನ ಹೆಂಗಸು ಹೆಲನ್. ತನ್ನ ನೌಕರ ಅಲಿ ವಿಷಯದಲ್ಲೂ ಸ್ಕೋಬಿಯ ಪ್ರೀತಿ ಆಳವಾಗಿತ್ತು, ಪ್ರಾಮಾಣಿಕವಾಗಿತ್ತು. ಆದರೆ ಮೊದಲಿನ ಮೂರರಂತೆ ಅದು ಅವನ ಹೃದಯಗ್ರಂಥಿಯಲ್ಲಿ ಸುತ್ತಿಕೊಂಡಿರಲಿಲ್ಲ. ಆದ್ದರಿಂದ ಇಲ್ಲಿ ಅವನ ಮೊದಲಿನ ಮೂರು ಪ್ರೀತಿಗಳನ್ನೇ ಲೆಕ್ಕಕ್ಕೆ ಹಿಡಿದರೆ ಸಾಕು. ಸ್ಕೋಬಿಯು ದೇವರಲ್ಲಿಟ್ಟ ಪ್ರೀತಿ ಅವನ ಸ್ವಭಾವದ ಒಂದು ಪ್ರಬಲ ಅಂಶವಾಗಿದೆ. ಜೀವನದ ಎಲ್ಲ ಸಂಧಿಕಾಲಗಳಲ್ಲಿಯೂ ಅದೇ ಅವನಿಗೆ ಮಾರ್ಗದರ್ಶನವಾಗುತ್ತದೆ. ಸ್ಕೋಬಿ ಆತ್ಮಹತ್ಯೆಗೆ ತನ್ನ ಮನಸ್ಸು ಗಟ್ಟಿಮಾಡಿದಾಗ ತಾನು ದೇವರಲ್ಲಿಟ್ಟ ಪ್ರೀತಿಯೇ ಅದಕ್ಕೆ ಪ್ರೇರಣೆ ಎನ್ನುವದು ಅವನಿಗೆ ಖಚಿತವಾಗಿತ್ತು. 'ಸ್ವಾಮಿ, ನೀನು ನನ್ನೊಡನೆ ಹಿತವಾಗಿಲ್ಲ. ನಾನೊಮ್ಮೆ ಇಲ್ಲವೆಂದಾದರೆ ನಿನ್ನ ಪಾಲಿನ ಕರಕರೆ ಬಿಟ್ಟು ಹೋಗುವದು. ನಾನೇನು ಮಾಡುತ್ತಿರುವೆನೆಂಬುದು ನನಗೆ ಗೊತ್ತಿದೆ. ನಾನು ಕರುಣೆಯನ್ನು ಬೇಡುವದಿಲ್ಲ. ನಾನು ನರಕದ ದಾರಿಯಲ್ಲಿ ಹೊರಟಿದ್ದೇನೆ. ಅದರರ್ಥವೇನೇ ಇರಲಿ, ಸಮಾಧಾನಕ್ಕಾಗಿ ನಾನು ಪರಿತಪಿಸಿದೆ. ಆದರೆ ಆ ಸಮಾಧಾನ ಇನ್ನೆಂದಿಗೂ ಬರುವದಿಲ್ಲವೆಂದೇ ತೋರುತ್ತದೆ. ಆದರೆ ನಿನ್ನ ಕೈ ಮೀರಿ ನಾನು ಹೊರಟುಹೋದರೆ ನಿನಗಾದರೂ ಸಮಾಧಾನ ವಾದೀತು. ನೀನು ನನ್ನನ್ನು ಮರೆತುಬಿಡುವಿ, ಸ್ವಾಮಿ, ಶಾಶ್ವತಾಗಿ ಮರೆತುಬಿಡುವಿ.'

ದೇವರ ಮೇಲೆ ಸ್ಕೋಬಿಯ ಪ್ರೀತಿ ಎಷ್ಟೆಂದರೆ ತಾನು ದೇವರಿಗೊಂದು ಭಾರವಾಗಿರುವದು ಅವನಿಗೆ ಬೇಡ. ತಾನು ನರಕಕ್ಕೆ ಹೋದರೆ ತನ್ನಿಂದ ದೇವರಿಗೆ ಯಾವ ತೊಡಕೂ ಉಳಿಯದೆಂದು ತಿಳಿದಿದ್ದಾನೆ. ಸ್ಕೋಬಿಯನ್ನು ಬಲ್ಲವರಲ್ಲಿ ಯಾರಿಗೂ ಸ್ಕೋಬಿಯ ದೈವಭಕ್ತಿಯ ಬಗೆಗೆ ಸಂಶಯವಿಲ್ಲ. ಆದರ ಬಗೆಗೆ ಸ್ವತಃ ಫಾದರ್ ರ‍್ಯಾಂಕನೇ ಆಡಿದ ಮಾತಿಗಿಂತ ಹೆಚ್ಚಿನ ಪ್ರಮಾಣವಿರಲಾರದು – 'ಅವನ ಸರಿ ತಪ್ಪು ದಾರಿಯಲ್ಲಿ ನಡೆದವನನ್ನು ಕುರಿತು ನಾನು ಹೀಗೆ ಹೇಳುವದು ವಿಚಿತ್ರವೆಂದು ತೋರಬಹುದು. ಆದರೂ ನಾನು ಕಂಡಂತೆ ಆ ಮನುಷ್ಯನಿಗೆ ದೇವರಲ್ಲಿ ನಿಜವಾದ ಪ್ರೀತಿ ಇದ್ದಿತೆಂದೇ ನಾನು ತಿಳಿದಿದ್ದೇನೆ.' ಸ್ಕೋಬಿಯ ಆತ್ಮಹತ್ಯೆಯು ದೇವರಲ್ಲಿ ಅವನಿಗಿದ್ದ ಪ್ರೀತಿಯ ಅಭಿವ್ಯಕ್ತಿ ಯಾಗಿತ್ತೆಂಬುದು ಸ್ಪಷ್ಟವಿದೆ. ದೇವರ ಅಂತಃಕರಣದಿಂದ ದೂರವಾಗುವದಕ್ಕೆ ಅದೊಂದು ಉಪಾಯವಾಗಿತ್ತು. ತಾನು ತಂದೆಯಂತೆ ಪ್ರೀತಿಸಿದ ದೇವರಿಗೆ ತಾನು ಹೊರೆಯಾಗಿ ಇರುವದು ಸಾಕು ಎಂದು ಅವನ ಭಾವನೆಯಾಗಿರಬಹುದು.

ಸ್ಕೋಬಿಯನ್ನು ಆತ್ಮಹತ್ಯೆಗೆ ತಳ್ಳುವದರಲ್ಲಿ ಮನುಷ್ಯ ಮಟ್ಟದ ಪ್ರೀತಿಗೂ ಒಂದು ಭಾಗವಿತ್ತು. ತನ್ನ ಹೆಂಡತಿ ಲೂಯಿಸಳಲ್ಲಿಯೂ ತನ್ನ ಹೆಂಗಸು ಹೆಲನ್‌ಳಲ್ಲಿಯೂ ಅವನಿಗಿದ್ದ ಪ್ರೀತಿ ಎಂತಹದೆಂಬುದನ್ನು ಹೇಳಬೇಕು. ಏಕೆಂದರೆ ಅದು ಕೇವಲ ಇಂದ್ರಿಯ ತೃಷೆಯಿಂದ ಜನಿಸಿದ ಸಾಮಾನ್ಯ ಪ್ರೀತಿಯಲ್ಲ. ಅವನ ಪ್ರೀತಿಗೆ ಆಧಾರ ಕರುಣೆ ಮತ್ತು ಹೊಣೆಗಾರಿಕೆ ; ವಿಶೇಷತಃ ಲೋಕದಲ್ಲಿ ನಿರ್ಲಕ್ಷ್ಯಕ್ಕೂ, ತಿರಸ್ಕಾರಕ್ಕೂ ಒಳಗಾದವರ ಬಗೆಗೆ ತನ್ನ ಹೊಣೆ. ತನ್ನ

ಹೆಂಡತಿಯ ಯೌವನ, ಸೌಂದರ್ಯಗಳು ಕಳೆದುಹೋದದ್ದರಿಂದಾಗಿ ಸ್ಕೋಬಿ ಅವಳನ್ನು ಪ್ರೀತಿಸುತ್ತಾನೆ. 'ಅವಳ ನರೆಯುತ್ತಿದ್ದ ತಲೆಗೂದಲು, ಮುಖದ ಮೇಲೆ ಎದ್ದು ಕಾಣುತ್ತಿದ್ದ ನರಗಳು, ದಪ್ಪನಾಗುತ್ತಿದ್ದ ಮೈಕಟ್ಟು ಅವನನ್ನು ಆಕರ್ಷಿಸಿರಲಿಲ್ಲ. ಅವನು ತಿಳಿದಿದ್ದಂತೆ ನಾವು ಪ್ರೀತಿಸುವದು ಚೆಲುವನ್ನಲ್ಲ, ಸೋಲನ್ನು ; ಚಿರಕಾಲವೂ ಯೌವನವನ್ನುಳಿಸಿಕೊಳ್ಳುವ ಯತ್ನದಲ್ಲಿ ಸೋಲು, ಧೈರ್ಯದ ಸೋಲು, ದೇಹೇಂದ್ರಿಯಗಳ ಸೋಲು. ಚೆಲುವು ವಿಜಯದಂತೆ ; ಅದನ್ನೇ ಬಹುಕಾಲ ನಚ್ಚಿಕೊಂಡಿರುವದು ಸಾಧ್ಯವಿಲ್ಲ.' ಸ್ಕೋಬಿಯು ಹೆಲನ್‌ಳತ್ತ ಆಕರ್ಷಿತನಾಗುವದಕ್ಕೂ ಇಂತಹವೇ ಕಾರಣಗಳು. ಹೆಲನ್ ಯುವತಿ ಯಾಗಿದ್ದರೂ ಕುರೂಪಿ. ಮುಳುಗುವ ಹಡಗಿನಲ್ಲಿ ಬದುಕಿ ಉಳಿದವಳು, ಏಕಾಕಿ, ದಿಕ್ಕು ತಪ್ಪಿದವಳು. ಅವಳ ಬಗೆಗೆ ತನ್ನದೊಂದು ಹೊಣೆಗಾರಿಕೆ ಇದೆಯೆಂದು ಸ್ಕೋಬಿಗೆ ತೋರಿತು. ಅವಳ ದೇಹದ ಮೇಲಿನ ಆಸೆಯಿಂದ ಅವನು ಅವಳಿಗೆ ಅಂಟಿಕೊಳ್ಳಲಿಲ್ಲ. ಅವಳತ್ತ ನೋಡುತ್ತಿದ್ದಂತೆ 'ಈ ಪ್ರಾಣಿಯನ್ನು ಬೇಟೆಗಾರರು ಬೆನ್ನಟ್ಟಿ ಅವರ ಹೊದರಿನಲ್ಲಿ ಸಿಕ್ಕಿಸಿದ್ದಾರೆ ಎಂಬ ಭಾವನೆ ಅವನಿಗುಂಟಾಯಿತು.' ಅವಳು ಚೆಲುವೆಯೂ, ಸುಕುಮಾರಳೂ, ಬುದ್ಧಿವಂತಳೂ ಆಗಿದ್ದರೆ ಅವನು ಆಕರ್ಷಿತನಾಗುತ್ತಿರಲಿಲ್ಲ. ತನ್ನ ಪ್ರೀತಿ ವಿಶ್ವಾಸಗಳನ್ನು ಅವನು ಅವಳಿಗರ್ಪಿಸಲಿಕ್ಕೆ ಕಾರಣವೆಂದರೆ 'ಆ ಮೋರೆಯನ್ನು ನೋಡುವದಕ್ಕೆ ಯಾರೂ ತಮ್ಮ ದಾರಿಯಲ್ಲಿ ತಿರುಗಿಬಾರರು, ಯಾರೂ ಅದನ್ನು ಕದ್ದು ನೋಡರು, ಅದು ಔದಾಸೀನ್ಯ ತಿರಸ್ಕಾರಗಳಿಗೆ ಹೊಂದಿಕೊಳ್ಳುವ ದಿನ ದೂರವಿರಲಿಲ್ಲ.' 'ಹೆಲನ್' ಎಂಬ ಹೆಸರು ಅವಳ ಪಾಲಿಗೆ ಅಣಕವಾಗಿತ್ತು. 'ಆ ಮುಖಕ್ಕಾಗಿ ಸಾವಿರ ಹಡಗುಗಳ ಪಡೆಯನ್ನು ಕಟ್ಟಿಕೊಂಡು' ಯಾರೂ ಬರುವಂತಿರಲಿಲ್ಲ.

ಸ್ಕೋಬಿಯ ಸ್ವಭಾವದ ಬೀಗಕ್ಕೆ ಕರುಣೆಯೇ ಕೈ. ಆದರೆ 'ಕರುಣೆ' ಶಬ್ದವೂ 'ಪ್ರೀತಿ' ಶಬ್ದದಂತೆ ಬಳಕೆಯಲ್ಲಿ ಅಗ್ಗವಾಗಿದೆ. ತಿರಸ್ಕಾರ ಮತ್ತು ಹೀನತೆಗಳನ್ನು ಸೂಚಿಸುವ ಕೀಳರ್ಥವನ್ನು ಪಡೆದಿದೆ. ಯಾವುದು ಸ್ವಭಾವದಲ್ಲಿ ಘನವಾದ ಅಂಶವಾಗಿರಬೇಕಿತ್ತೋ ಅದೊಂದು ದೋಷವಾಗಿ ಪರಿಣಮಿಸಿದೆ. ಗ್ರೀನನು ಭಾವಿಸಿರುವಂತೆ ಕರುಣೆ ಎನ್ನುವದು ದೇವರ ಗುಣಗಳಲ್ಲೊಂದು. ಪಾಪದಲ್ಲಿ ಮುಳುಗಿದ ಚೆಲುವನ್ನು ಕಂಡ 'ವ್ಹಿಸ್ಕಿ ಪಾದ್ರಿ'ಯು ಅದರ ಪ್ರಭಾವದಿಂದ ಪರವಶನಾಗಿ ಪತಿತರಿಗಾಗಿ ಕರುಣೆಯಿಂದ ಕರಗಿಹೋಗುತ್ತಾನೆ. ಆಗ ಅವನು ಕರುಣೆಯೆಂದರೆ 'ದೇವತ್ವದಿಂದ ವಿಂಗಡಿಸಲಾಗದ ಗುಣ' ಎಂದು ಹೇಳುತ್ತಾನೆ. ಸ್ವಾರ್ಥ ಮತ್ತು ಇಂದ್ರಿಯಲಾಲಸೆಗಳಿಂದ ಮುಕ್ತವಾದ ಪ್ರೀತಿಯೇ ಕರುಣೆ ಎಂದು ಹೇಳಬಹುದು. ಇದನ್ನು ತಿಳಿದುಕೊಳ್ಳುವದೇ 'ಹಾರ್ಟ್ ಆಫ್ ದಿ ಮ್ಯಾಟರ್' ('ವಿಚಾರ್ಯ ವಸ್ತುವಿನ ಹೃದಯ') ಅನ್ನು ಕಂಡುಕೊಂಡಂತೆ. ಒಂದು ರಾತ್ರಿ ನಕ್ಷತ್ರಗಳನ್ನು ನೋಡುತ್ತ ನೋಡುತ್ತ ಸ್ಕೋಬಿ ಚಕಿತನಾಗಿ ಎಂದುಕೊಳ್ಳುತ್ತಾನೆ : 'ಇದರ ಹಿಂದಿರುವದೆಲ್ಲ ಆಮೂಲಾಗ್ರವಾಗಿ ಯಾರಿಗಾದರೂ ತಿಳಿದಿದ್ದರೆ ಅಂಥವರಿಗೆ ಈ ಗ್ರಹಗಳ ಬಗೆಗೂ

ಕರುಣೆಯೆನಿಸೀತಲ್ಲವೆ ? ಅಂದರೆ ಯಾವುದನ್ನು 'ಹಾರ್ಟ್ ಆಫ್ ದಿ ಮ್ಯಾಟರ್' ಅನ್ನುತ್ತಾರೋ ಅದನ್ನು ಕಂಡವರಿಗೆ.

ಸ್ಕೋಬಿಯ ಕರುಣೆಯು ಲೂಯಿಸ ಮತ್ತು ಹೆಲನ್‌ರಿಗಷ್ಟೇ ಸೀಮಿತವಾದದ್ದಲ್ಲ. ಒಮ್ಮೆ ರೋಗಗ್ರಸ್ತಳಾದ ಒಬ್ಬ ಹುಡುಗಿಯನ್ನು ನೋಡುತ್ತ ಕರುಣಾವಶನಾಗಿ ಪ್ರಾರ್ಥನೆಗೆ ತೊಡಗುತ್ತಾನೆ. 'ತಂದೆಯೇ, ಅವಳಿಗೆ ಶಾಂತಿಯನ್ನು ಕೊಡು. ನನ್ನ ಶಾಂತಿಯನ್ನು ಸರ್ವಕಾಲಕ್ಕೂ ನೀನು ಕಿತ್ತುಕೊಂಡರೂ ಸರಿ, ಅವಳಿಗೆ ಮೊದಲು ಶಾಂತಿಯನ್ನು ಕೊಡು.' ಬೇರೆಯವರ ಬಗೆಗೆ ಅವನಿಗೆ ಅಪಾರವಾದ ಕರುಣೆಯಿದೆ ; ತನ್ನ ಬಗೆಗೆ ಎಳ್ಳಷ್ಟೂ ಇಲ್ಲ. ಬೇರೆಯವರಿಗೆ ಸುಖವಾಗುವದಕ್ಕೆ ಅವಶ್ಯವಾದರೆ ತನಗೆ ನಿತ್ಯನರಕವೇ ಇರಲಿ ಎನ್ನುತ್ತಾನೆ : 'ಸ್ವಾಮಿ, ನನ್ನಿಂದ ಬೇರೆಯವರಿಗೆ ಅಸುಖವಾಗುವಂತಿದ್ದರೆ ಅದಕ್ಕೆ ಮೊದಲೇ ನನಗೆ ಮರಣವನ್ನು ಕೊಡು.' ಅವನು ಆತ್ಮಹತ್ಯೆಗೆ ಉದ್ಯುಕ್ತನಾಗುತ್ತಿದ್ದಾಗ ಅವನ ಮನಸ್ಸಿನಲ್ಲಿದ್ದ ಏಕಮಾತ್ರ ವಿಚಾರ ಹೆಲನ್ ಮತ್ತು ಲೂಯಿಸರ ಸೌಖ್ಯ ಹೇಗೆ ಸಾಧಿಸೀತು ಎಂಬುದು : 'ನಾನು ಉನ್ಮಾದವಶನಾಗಕೂಡದು. ಇಬ್ಬರ ಸೌಖ್ಯ ತನ್ನ ಕೈಯಲ್ಲಿದೆ. ತಾನು ಧೈರ್ಯದಿಂದ ಕೈಚಳಕ ಸಾಧಿಸುವ ಅಭ್ಯಾಸ ಮಾಡಿಕೊಳ್ಳಬೇಕು. ಶಾಂತನಾಗಿರುವುದು ಬಹಳ ಮುಖ್ಯ.'

ಇನ್ನೊಬ್ಬರಿಗೆ ಸುಖವಾಗಲೆಂದು ತಾನು ಕಷ್ಟಕ್ಕೆ ತಲೆಯೊಡ್ಡುವ ಈ ಕರುಣೆಯಲ್ಲಿ ಒಂದು ಕ್ರಿಸ್ತಸದೃಶವಾದ ಛಾಯೆಯಿದೆ. ಸ್ಕೋಬಿಯ ಆತ್ಮಹತ್ಯೆಯನ್ನು ಚರ್ಚಿನ ವಿಧಿಗಳ ದೃಷ್ಟಿಯಿಂದ ತೀರ್ಮಾನಿಸದೆ ಮನುಷ್ಯಹೃದಯದ ನೈಸರ್ಗಿಕ ಭಾವನೆಯಿಂದ ನೋಡಿದರೆ ಅದರಲ್ಲಿ ಘನವಾದ ಆತ್ಮಯಜ್ಞದ ಗುಣಗಳೆಲ್ಲವೂ ಕಂಡುಬರುತ್ತವೆ ; ಅದು ಕ್ರಿಸ್ತನು ಶಿಲುಬೆ ಏರಿದ್ದಕ್ಕೆ ಎಲ್ಲ ರೀತಿಯಿಂದಲೂ ಸಮಾನವೆಂದು ಬಗೆಯಬಹುದು. ಮೂಲತಃ ಇದೇ ಉಪಮೆಯನ್ನು ತಿರುವಿ ಹೇಳಿದರೂ ಸತ್ಯವೇ. ಏಕೆಂದರೆ ಕ್ರಿಸ್ತನು ಶಿಲುಬೆ ಏರಿದ್ದೂ ಒಂದು ರೀತಿಯಲ್ಲಿ ಆತ್ಮಘಾತವೆ. ನಾವೇನು ಹೇಳಿದರೂ ಸ್ಕೋಬಿಯ ವಿಚಾರಸರಣಿಯಂತೂ ಹಾಗಿತ್ತು. 'ಕ್ರೈಸ್ತನನ್ನು ಯಾರೂ ಕೊಲ್ಲಲಿಲ್ಲ. ದೇವರನ್ನು ಕೊಲ್ಲಬಹುದೆ ? ಕ್ರೈಸ್ತ ತಾನಾಗಿಯೇ ಮರಣ ವನ್ನಪ್ಪಿದನು. ಕ್ರೂಜೆಯ ಮೇಲೆ ಅವನು ತನ್ನನ್ನು ತಾನೇ ತೂಗುಹಾಕಿಕೊಂಡನು. ಚಿತ್ರಫಲಕಗಳನ್ನು ಹಾಕುವ ಕಂಬಿಗೆ ಪೆಂಬರ್ಟನ್ ನೇಣು ಹಾಕಿ ಕೊಂಡಷ್ಟೇ ಇದೂ ಖಚಿತವಾದದ್ದು.'

ಕ್ರೈಸ್ತ ಮತ್ತು ಸ್ಕೋಬಿ ಇಬ್ಬರ ಮರಣಗಳೂ ಸ್ವೇಚ್ಛೆಯಿಂದ ಒಪ್ಪಿಕೊಂಡಂಥವು. ಎರಡರಲ್ಲೂ ಸಮಾನವಾದ ಅಂಶ ಮನುಷ್ಯರು ಬೇಡುವ ಸುಖ ತನಗಿಂತ ಮೊದಲು ಇನ್ನೊಬ್ಬರದಾಗಲಿ ಎಂಬ ಪ್ರೇರಣೆ. ತ್ಯಾಗ ಮತ್ತು ದುಃಖಾನುಭವದಲ್ಲಿ ಕ್ರೈಸ್ತ ಮತ್ತು ಸ್ಕೋಬಿಯ ಏಕರೂಪತೆ – ಈ ಕಾದಂಬರಿಯ ಕೇಂದ್ರದಲ್ಲಿರುವ ಕಲ್ಪನೆ. ಒಮ್ಮೆ ಈ ಶಿಲುಬೆಯ ಪ್ರತೀಕ ಆತ್ಮಹತ್ಯೆಯ ಪಾಪವನ್ನು ವಿಮೋಚಕ ಯಜ್ಞದ ಮಟ್ಟಕ್ಕೆ ಎತ್ತರಿಸುತ್ತದೆ

ಮತ್ತು 'ಹಾರ್ಟ್ ಆಫ್ ದಿ ಮ್ಯಾಟರ್' ಕಾದಂಬರಿಯನ್ನು ಉಳಿದ ಎರಡು ಕಾದಂಬರಿಗಳಿಗೆ ಜತೆಯಾಗಿ ನಿಲ್ಲಿಸುತ್ತದೆ. ಈ ಮೂರೂ ಕಾದಂಬರಿಗಳನ್ನು ಒಂದು 'ತ್ರಿಲೋಜೀ' (ಒಂದೇ ತತ್ವದ ಮೂರು ಅಭ್ಯಾಸಗಳು) ಎಂದು ನೋಡಬಹುದು. ಏಕೆಂದರೆ ಪಾಪದ ವಿಮೋಚಕಶಕ್ತಿಯ ದರ್ಶನವೊಂದೇ ಮೂರನ್ನೂ ಬೆಳಗುತ್ತದೆ.

ಗ್ರೀನನು ನಿಜವಾದ ಕಲಾವಿದ. ತನ್ನ ಬಾದರ್ಳರ್ಶನವನ್ನು ಅವನು ತರ್ಕ ಮತ್ತು ವಾದ ರೂಪದಲ್ಲಿ ಪ್ರತಿಪಾದಿಸುವದಿಲ್ಲ. ಅವನ ರೀತಿಗಳೆಲ್ಲ ಕಲ್ಪನಾಶಕ್ತಿಯನ್ನು ಆಧರಿಸಿದುವು. ಆದರಿಂದಾಗಿ ಕ್ರಿಸ್ತನಿಗೂ ಪಾಪಿಗಳಿಗೂ ಇರುವ ಸಂಬಂಧವನ್ನು ಆಧ್ಯಾತ್ಮಿಕ ರೀತಿಯಿಂದ ಸೂಚಿಸುತ್ತಾನೆ. ಅವನ ಪ್ರತಿಭೆಯ ಎಲ್ಲ ಅಂಶಗಳಲ್ಲಿ ಹೆಚ್ಚಿನ ಪ್ರಭಾವ ಬೀರುವದು ಅವನು ದೇವರ ಕರುಣೆಯ ನಿಸ್ಸೀಮತೆಯನ್ನು ಒತ್ತಿ ಹೇಳುವದು. ಅದೇ ಅವನ ಪಾಪ ಮತ್ತು ಪಾಪಿಗಳ ಕಲ್ಪನೆಯನ್ನು ತಿಳಿಯುವದಕ್ಕೆ ಬೀಗದ ಕೈಯಾಗುತ್ತದೆ.

ಭಾಗ ನಾಲ್ಕು

ಅನುಬಂಧಗಳು

[illegible]

[illegible]

[illegible]

[illegible]

ಅನುಬಂಧ : ಒಂದು

ಇನಾಂದಾರರ ಕೃತಿಗಳು

ಕಾದಂಬರಿಗಳು

1. ಎರಡು ಧ್ರುವ
   ಆನಂದ್ ಬ್ರದರ್ಸ್, ಬೆಂಗಳೂರು ; 1937, 1949, 1960 ; ಪು.iv + 387
2. ಮೂರಾಬಟ್ಟೆ
   ಗೀತಾ ಬುಕ್ ಹೌಸ್, ಮೈಸೂರು ; 1946, 1948, 1952, 1973 ; ಪು.248
3. ಕನಸಿನ ಮನೆ
   ಗೀತಾ ಬುಕ್ ಹೌಸ್, ಮೈಸೂರು ; 1947, 1950, 1958, 1972, 2007 ; ಪು. 224
4. ವಿಜಯಯಾತ್ರೆ
   ಗೀತಾ ಬುಕ್ ಹೌಸ್, ಮೈಸೂರು ; 1948, 1955, 1978 ; ಪು. 128
5. ಶಾಪ
   ವಿಶ್ವ ಕನ್ನಡ ಸಮ್ಮೇಳನ, ಕರ್ನಾಟಕ ಸರಕಾರ, ಬೆಂಗಳೂರು ; 1949, 1957, 1969, 1978, 1982 ; ಪು.309
6. ಸ್ವರ್ಗದ ಬಾಗಿಲು
   ಗೀತಾ ಬುಕ್ ಹೌಸ್, ಮೈಸೂರು ; 1951, 1961, 1966, 1966, 1979 ; ಪು.209
7. ಈ ಪರಿಯ ಸೊಬಗು
   ಗೀತಾ ಬುಕ್ ಹೌಸ್, ಮೈಸೂರು ; 1953, 1960, 1962, 1978 ; ಪು.165
8. ಕಟ್ಟಿದ ಮನೆ
   ಗೀತಾ ಬುಕ್ ಹೌಸ್, ಮೈಸೂರು ; 1953, 1958, 1972, 2007 ; ಪು.343
9. ಮುಗಿಯದ ಕತೆ
   ಗೀತಾ ಬುಕ್ ಹೌಸ್, ಮೈಸೂರು ; 1953, 1978 ; ಪು.130
10. ಚಿತ್ರಲೇಖಾ
    ಉಷಾ ಸಾಹಿತ್ಯ ಮಾಲೆ, ಮೈಸೂರು ; 1961, 1972, 1973, 1979 ; ಪು.369
11. ಮಂಜು ಮುಸುಕಿದ ದಾರಿ
    ಉಷಾ ಸಾಹಿತ್ಯ ಮಾಲೆ, ಮೈಸೂರು ; 1965, 1972 ; ಪು. viii + 263
12. ಊರ್ವಶಿ
    ಗೀತಾ ಬುಕ್ ಹೌಸ್, ಮೈಸೂರು ; 1968, 1979 ; ಪು.344

13. ನವಿಲು ನೌಕೆ
ಗೀತಾ ಬುಕ್ ಹೌಸ್, ಮೈಸೂರು ; 1971, 1978, ಕ.235

14. ಬಾಡಿದ ಹೂವು
ಗೀತಾ ಬುಕ್ ಹೌಸ್, ಮೈಸೂರು ; 1972, 2007 ; ಕ.344

15. ಕತ್ತಲೆಯ ಕಡಲು
ಗೀತಾ ಬುಕ್ ಹೌಸ್, ಮೈಸೂರು ; 1972 ; 2007 ; ಕ.304

16. ಯಾತ್ರಿಕರು
ಗೀತಾ ಬುಕ್ ಹೌಸ್, ಮೈಸೂರು ; 1976, ಕ.175

17. ಯಯಾತಿ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1977, 1982 ; ಡೆ. viii + 442 ಕರ್ನಾಟಕ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ – ಉತ್ತಮ ಅನುವಾದ – 1979

18. ತ್ರಿಶಂಕು
ಗೀತಾ ಬುಕ್ ಹೌಸ್, ಮೈಸೂರು ; 1980, 1987 ; ಕ.207

ಸಾಹಿತ್ಯ ವಿಮರ್ಶೆ

19. ಪಾಶ್ಚಾತ್ತ್ಯ ವಿಮರ್ಶೆಯ ಪ್ರಾಚೀನ ಪರಂಪರೆ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; 1973, 1982 ಡೆ.viii + 128

20. ವಿ.ಸೀ. 75 (ಸಂಪಾದಿತ)
ಐ.ಬಿ.ಎಚ್. ಪ್ರಕಾಶನ, ಗಾಂಧೀನಗರ, ಬೆಂಗಳೂರು ; 1974 ; ಡೆ.xx + 336

21. ಪಾಶ್ಚಾತ್ತ್ಯ ವಿಮರ್ಶೆಯ ಮಧ್ಯಯುಗ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ; 1976 ಡೆ.xii + 162

22. ಶರಚ್ಚಂದ್ರ — ವ್ಯಕ್ತಿ ಮತ್ತು ಕಲಾವಿದ (ಅನುವಾದ)
ಸಾಹಿತ್ಯ ಅಕಾದೆಮಿ, ಹೊಸ ದೆಹಲಿ ; 1977 ; ಡೆ.140

23. ಪಾಶ್ಚಾತ್ತ್ಯ ವಿಮರ್ಶೆಯ ಸಂಪ್ರದಾಯ ಯುಗ
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ; 1978 ; ಡೆ.vii + 203

24. ಶಿವರಾಮ ಕಾರಂತ : ಬದುಕು-ಬರೆಹ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1978, (ಪರಿಷ್ಕೃತ) 1982 ; ಡೆ.viii + 143

25. ಕುವೆಂಪು ಕಾದಂಬರಿಗಳು
ಉಷಾ ಸಾಹಿತ್ಯಮಾಲೆ, ಮೈಸೂರು ; 1978 ; ಡೆ. iv + 116

ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಪ್ರಶಸ್ತಿ – 1980 ; ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯ — 1981

26. ಶ್ರೀರಾಮಪಟ್ಟಾಭಿಷೇಕ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1980 ; ಡ.81
ದೇವರಾಜ ಬಹಾದ್ದೂರ ಬಹುಮಾನ — 1981

27. ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನದರ್ಶನ
ಪ್ರಸಾರಾಂಗ,ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು ; 1980 ; ಡ.viii + 81

28. ಗೋವಿಂದ ಪೈಗಳ ಕಾವ್ಯ
ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ ; 1965 ; ಕಿ. vi + 51
ಉಷಾ ಸಾಹಿತ್ಯ ಮಾಲೆ, ಮೈಸೂರು ; 1981 ; ಕಿ.viii + 152

29. ಆಲೋಕ

30. ಪಾಶ್ಚಾತ್ಯ ವಿಮರ್ಶೆಯ ರೊಮ್ಯಾಂಟಿಕ್ ಯುಗ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1982 ; ಕಿ.iv + 124

31. ಪಾಶ್ಚಾತ್ಯ ವಿಮರ್ಶೆಯ ಆಧುನಿಕ ಯುಗ
ಉಷಾ ಸಾಹಿತ್ಯ ಮಾಲೆ, ಮೈಸೂರು ; ಕಿ.iv + 168

32. ಪಾಶ್ಚಾತ್ಯ ಕಾವ್ಯ ಮೀಮಾಂಸೆ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1982 ; ಡ.viii + 619
ಪ್ರೊ. ಮಾಳವಾಡ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ — 1983; ಕರ್ನಾಟಕ ಸಾಹಿತ್ಯ ಅಕಾದೆಮಿಯ ಪ್ರಶಸ್ತಿ — ಸೃಜನೇತರ ಪ್ರಕಾರದಲ್ಲಿ 1982ರ ಅತ್ಯುತ್ತಮ ಗ್ರಂಥ — 1983

33. ಬಿ. ಎಂ. ಶ್ರೀ. : ಬದುಕು - ಬರೆಹ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1983 ; ಡ.viii + 115

ಇತರ

34. ದೃಷ್ಟಿಲಾಭ (ಅನುವಾದಿತ ಕಥೆಗಳು)
ಕರ್ನಾಟಕ ವೈಭವ ಪ್ರಕಟನಾ ಮಂದಿರ, ವಿಜಾಪುರ ; 1937 ಕಿ.xvi + 91

35. ಬಿಡುಗಡೆ (ನಾಟಕ)
ಉಷಾ ಸಾಹಿತ್ಯ ಮಾಲೆ, ಮೈಸೂರು ; 1955, 1980 ; ಕಿ.viii + 88
ಮುಂಬಯಿ ರಾಜ್ಯ ಸರ್ಕಾರದ ಬಹುಮಾನ — ವರ್ಷದ ಉತ್ತಮ ನಾಟಕ — 1955

36. ಕಾಳಿದಾಸನ ಕಥಾನಕಗಳು
ಉಷಾ ಸಾಹಿತ್ಯ ಮಾಲೆ, ಮೈಸೂರು ; 1956, 1975 ; ಕಿ. vi + 155

37. ಡಾ. ಅಂಬೇಡ್ಕರ್ (ವ್ಯಕ್ತಿ ಮತ್ತು ವಿಚಾರ)
ಉಷಾ ಸಾಹಿತ್ಯ ಮಾಲೆ, ಮೈಸೂರು ;1981, 1985, 2006 ; ಪ.208
ಅಮ್ಮಿನಭಾವಿ ಬಹುಮಾನ : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ — 1982 ; ಜೀವನ ಚರಿತ್ರೆ ಪ್ರಕಾರದಲ್ಲಿ 1982ರ ಉತ್ತಮ ಕೃತಿ — ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿಯ ಪುರಸ್ಕಾರ — 1983

38. ಮಂಗಲ್ಯಾಂಡಿನಲ್ಲಿ ಮೂರು ವಾರ
ಉಷಾ ಸಾಹಿತ್ಯ ಮಾಲೆ, ಮೈಸೂರು ; 1972, 1982 ಪ. vii + 156

39. ಕಪ್ಪು ಚೆಲುವೆ ಮತ್ತು ಇತರ ಪ್ರಬಂಧಗಳು (ಲಘು ಪ್ರಬಂಧ ಸಂಕಲನ)
ವಸಂತ ಪ್ರಕಾಶನ, ಬೆಂಗಳೂರು ; 2005

40. ಮನವೆಂಬ ಮರ್ಕಟ ಮತ್ತು ಇತರ ಪ್ರಬಂಧಗಳು (ಲಘು ಪ್ರಬಂಧ ಸಂಕಲನ)
ವಸಂತ ಪ್ರಕಾಶನ, ಬೆಂಗಳೂರು ; 2005

English

1. *Heroines in Sanskrit Drama* (Criticism)
V. N. Mandalik Gold Medal Prize, Bombay University - 1936

2. *Vidushaka in Sanskrit Drama* (Criticism)
Bharatiya Vidya Bhavan Gold Medal - 1945

3. *Uttararama Charitam - A Preface*
Pub. by Mrs. Nirmala Inamdar, Dharwar, 1957, Pp. iv + 112

4. *Shivaram Karanth*
Inst. of Kannada Studies, University of Mysore, 1973, Pp. 98

43. *Govinda Pai*
Inst. of Kannada Studies, University of Mysore, 1983, Pp.vii + 120

ಅನುಬಂಧ : ಎರಡು

ಇನಾಂದಾರರ ಜೀವನದ ಮೈಲುಗಲ್ಲುಗಳು

1912	ಒಂದನೆಯ ಅಕ್ಟೋಬರ್ : ಜನನ, ಹುದಲಿ, ಬೆಳಗಾಂವಿ ತಾಲೂಕು ; ತಂದೆ : ಮಧ್ವರಾವ್ ಇನಾಂದಾರ ; ತಾಯಿ : ಕಮಲಾಬಾಯಿ
1918-23	ಪ್ರಾಥಮಿಕ ಶಿಕ್ಷಣ : ಅಲ್ಲಿಯೇ
1923-30	ಹೈಸ್ಕೂಲು ಶಿಕ್ಷಣ : ಬೆಳಗಾಂವಿ, ಅಥಣಿ ಮತ್ತು ವಿಜಾಪುರ ; ಮುಂಬಯಿ ವಿಶ್ವವಿದ್ಯಾನಿಲಯ : ಮೆಟ್ರಿಕ್ಯುಲೇಶನ್ (1930), ರ್‍ಯಾಂಕು
1930-34	ಮುಂದುವರಿದ ಶಿಕ್ಷಣ : ಕರ್ನಾಟಕ ಕಾಲೇಜು, ಧಾರವಾಡ ; ಮತ್ತು ಎಲ್ಫಿನ್‌ಸ್ಟನ್ ಕಾಲೇಜು, ಮುಂಬಯಿ
1934	ಮುಂಬಯಿ ವಿಶ್ವವಿದ್ಯಾನಿಲಯ ಬಿ.ಎ. ಆನರ್ಸ್ (ಇಂಗ್ಲಿಷ್ ಸಾಹಿತ್ಯ) ಪದವಿ (1934), ಸುವರ್ಣ ಪದಕ
1935-40	ವಿಜಾಪುರ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಕೋರ್ಟಿನಲ್ಲಿ ಕೆಲಸ
1936	'ಸಂಸ್ಕೃತ ನಾಟಕಗಳಲ್ಲಿಯ ನಾಯಿಕೆಯರು' ಪುಸ್ತಕ ಗಾತ್ರದ ಇಂಗ್ಲಿಷ್ ಪ್ರಬಂಧಕ್ಕೆ ಮುಂಬಯಿ ವಿಶ್ವವಿದ್ಯಾನಿಲಯದ ಮಾಂಡಲಿಕ ಸುವರ್ಣ ಪದಕ ಪಾರಿತೋಷಕ
1937	'ದೃಷ್ಟಿಲಾಭ' ಅನುವಾದಿತ ಕಥೆಗಳು ಮತ್ತು 'ಎರಡು ಧ್ರುವ' ಅನುವಾದಿತ ಕಾದಂಬರಿ ಪ್ರಕಟಣೆ
1938	ಮುಂಬಯಿ ಬಾರ್ ಕೌನ್ಸಿಲ್‌ನ ಅಡ್ವೊಕೇಟ್ಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ
1940-43	'ಪಿ.ಇ..ಎನ್.' ಮತ್ತು 'ಆರ್ಯನ್ ಪಾಥ್' ಪತ್ರಿಕೆಗಳ ಉಪಸಂಪಾದಕ
1941	ಮುಂಬಯಿ ವಿಶ್ವವಿದ್ಯಾನಿಲಯ ಎಂ.ಎ. (ಇಂಗ್ಲಿಷ್ ಸಾಹಿತ್ಯ) ಪದವಿ
1943	ಇಂಗ್ಲಿಷ್ ಅಧ್ಯಾಪಕರಾಗಿ ನೇಮಕ — ಸಿಡೇನ್‌ಹ್ಯಾಂ ಕಾಲೇಜು, ಮುಂಬಯಿ (1943-47) ; ಕರ್ನಾಟಕ ಕಾಲೇಜು, ಧಾರವಾಡ (1947-50)
1945	'ಸಂಸ್ಕೃತ ನಾಟಕಗಳಲ್ಲಿ ವಿದೂಷಕ', ಪುಸ್ತಕ-ಗಾತ್ರದ ಇಂಗ್ಲಿಷ್ ಪ್ರಬಂಧಕ್ಕೆ ಭಾರತೀಯ ವಿದ್ಯಾಭವನದ ಸುವರ್ಣ ಪದಕ
1946	'ಮೂರಾಬಟ್ಟೆ' ಮೊದಲ ಸ್ವತಂತ್ರ ಕಾದಂಬರಿಯ ಪ್ರಕಟಣೆ
1950-52	ಉಪಪ್ರಾಧ್ಯಾಪಕರೆಂದು ಬಡತಿ, ಗುಜರಾಥ ಕಾಲೇಜು, ಅಹಮ್ಮದಾಬಾದ್
1952-58	ಉಪಪ್ರಾಧ್ಯಾಪಕ, ಕರ್ನಾಟಕ ಕಾಲೇಜು, ಧಾರವಾಡ
1958-60	ವೈಸ್-ಪ್ರಿನ್ಸಿಪಾಲ್, ಸರಕಾರಿ ಕಾಲೇಜು, ಮಂಗಳೂರು
1960-67	ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಡತಿ ಮತ್ತು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್
1968	ಸಹ್ಯಾದ್ರಿ ಕಾಲೇಜ್, ಶಿವಮೊಗ್ಗೆಯಿಂದ ಸೇವಾನಿವೃತ್ತಿ
1968-70	ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ಗೌರವ ಪ್ರಾಧ್ಯಾಪಕ
1970	ಇಂಗ್ಲೆಂಡ್ ಮತ್ತು ಅಮೆರಿಕಕ್ಕೆ ಪ್ರಯಾಣ (ಬ್ರಿಟಿಷ್ ಕೌನ್ಸಿಲ್‌ನ ಆಂಶಿಕ ಸಹಾಯದಿಂದ)
1970	ಕನ್ನಡ ಸಾಹಿತ್ಯ ಪರಿಷತ್ತಿನ ಸ್ವರ್ಣಮಹೋತ್ಸವ ಸಂದರ್ಭದಲ್ಲಿ ಕಾದಂಬರಿಕಾರ ಎಂದು ಗೌರವ.
1973-75	ಅಮೆರಿಕ-ಕೆನಡಾಗಳಿಗೆ ಪ್ರಯಾಣ
1977	ಕರ್ನಾಟಕ ರಾಜ್ಯ ಸಾಹಿತ್ಯ ಅಕಾದೆಮಿಯ ಗೌರವ
1981	ಮೈಸೂರಿಗೆ ಸ್ಥಳಾಂತರ
1982	'ಪಾಶ್ಚಾತ್ಯ ಕಾವ್ಯ ಮೀಮಾಂಸೆ'ಯ ಪ್ರಕಟಣೆ
1984	ಉಡುಪಿಯಲ್ಲಿ ಸಾರ್ವಜನಿಕ ಸನ್ಮಾನ ; 'ನವನೀತ : ಪ್ರೊ. ವಿ. ಎಂ. ಇನಾಂದಾರ ಅಭಿನಂದನ' ಗ್ರಂಥ ಅರ್ಪಣೆ

(ಸಂ : ಎಂ. ರಾಜಗೋಪಾಲಾಚಾರ್ಯ. ಪ್ರಕಾಶನ : ಪ್ರೊ. ಎ. ಎಂ. ಇನಾಂದಾರ್ ಸಮಿತಿ, ಉಡುಪಿ, ಪರವಾಗಿ ಗೀತಾ ಬುಕ್ ಹೌಸ್, ಮೈಸೂರು ; 1984 ; ಡೆ. 312)


1985 ಅಮೆರಿಕ-ಕೆನಡಾಗಳಿಗೆ ಮತ್ತೊಮ್ಮೆ ಪ್ರಯಾಣ

1986 ಜನವರಿ 26 ರಂದು ಪುಣೆಯಲ್ಲಿ ನಿಧನ

ಪತ್ನಿ : ಶ್ರೀಮತಿ ನಿರ್ಮಲಾ ಇನಾಂದಾರ್, ಬಿ.ಎ. (ಆನರ್ಸ್)

ಮಕ್ಕಳು : (1) ಪ್ರಿಯಂವದಾ, ಬಿ.ಎ. (ಶ್ರೀಮತಿ ಪ್ರಮಿಳಾ ಬೈಚವಾಳ್, ಟೊರೊಂಟೋ, ಕೆನಡಾ) ; (2) ಶ್ರೀಕಾಂತ ಇನಾಂದಾರ್, ಎಂ.ಎಸ್. (ಬಫೆಲೊ), ಕೆನಡಾದ ಅಣುವಿಜ್ಞಾನ ಸಂಸ್ಥೆಯಲ್ಲಿ ಸಂಶೋಧಕ ಎಂಜಿನಿಯರ್ ; (3) ಜಾನಕಿ, ಬಿ.ಎ., ಬಿ.ಜೆ. (ಶ್ರೀಮತಿ ಮೀನಾ ವಾಂಗೀಕರ್, ಪುಣೆ).





ವಿನ್ಯಾಸ: ಅಜೇರ

ಕಾದಂಬರಿ ಲೋಕ

ಪ್ರೊಫೆಸರ್ ವಿ.ಎಂ. ಇನಾಂದಾರರು (1912–86) ಕನ್ನಡದ ಅತ್ಯುತ್ತಮ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದರು. ಅವರು ಶ್ರೇಷ್ಠ ಅನುವಾದಕರೂ, ಬಹುಶ್ರುತ ವಿಮರ್ಶಕರೂ ಹೌದು. ಇಂಗ್ಲಿಷಿನಲ್ಲಿಯೂ ಕೆಲವು ಪುಸ್ತಕಗಳನ್ನು ಪ್ರಕಟಿಸಿರುವ ಅವರಿಗೆ ಕನ್ನಡ, ಮರಾಠಿ, ಸಂಸ್ಕೃತ ಭಾಷೆ–ಸಾಹಿತ್ಯಗಳಲ್ಲಿ ಖಚಿತವಾದ ಪ್ರವೇಶವಿತ್ತು. ಬದುಕಿನ ತೇಲಿಕೆಯ ಸ್ತರಗಳನ್ನೇ ಆಗಲಿ, ಆಳವಾದ ತಾತ್ವಿಕ ಮುಖಗಳನ್ನೇ ಆಗಲಿ ಅವರು ತಮ್ಮ ಕೃತಿಗಳಲ್ಲಿ ಗಂಭೀರವಾಗಿ ನಿರೂಪಿಸಿದ್ದಾರೆ; ಚರ್ಚಿಸಿದ್ದಾರೆ. ಅವರ ಶೈಲಿಯಲ್ಲಿ ಆಕರ್ಷಣೆಯಿದೆ; ಪಾತ್ರನಿರ್ವಹಣೆಯಲ್ಲಿ ಕುತೂಹಲವಿದೆ; ಸಂದರ್ಭ ಚಿತ್ರಣದಲ್ಲಿ ಗಾಂಭೀರ್ಯವಿದೆ. ಇವೆಲ್ಲದರಿಂದ ಅವರು ಕನ್ನಡ ಕಾದಂಬರಿಯ ಸಾಧ್ಯತೆಗಳನ್ನು ವಿಸ್ತರಿಸಿದ ಹಿರಿಯರಲ್ಲಿ ಒಬ್ಬರೆನಿಸಿದ್ದಾರೆ.

ಪರಿಪೂರ್ಣತೆಯ ಹಾಗೂ ಶ್ರೇಷ್ಠತೆಯ ಆರಾಧಕರಾಗಿದ್ದ ಅವರ ಅಭಿರುಚಿಗೆ ಅನುಗುಣವಾದ 'ಕಾದಂಬರಿ ಲೋಕ' ಕನ್ನಡ ವಿಮರ್ಶೆಯ ಕ್ಷೇತ್ರಕ್ಕೆ ಒಂದು ಗಣನೀಯ ಕೊಡುಗೆಯಾಗಿದೆ. ಕಾದಂಬರಿ ಪ್ರಕಾರಕ್ಕೆ ರೂಪಸ್ವರೂಪಗಳನ್ನು ತಂದುಕೊಟ್ಟ, ಜಗತ್ತಿನ ಶ್ರೇಷ್ಠ ಕಾದಂಬರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮೂವತ್ತೊಂದು ಇಂಗ್ಲಿಷ್, ಅಮೆರಿಕನ್ ಹಾಗೂ ಯೂರೋಪಿಯನ್ ಕಾದಂಬರಿಗಳ ಪರಿಚಯ, ವಿಮರ್ಶೆ, ವಿಶ್ಲೇಷಣೆ ಇಲ್ಲಿದೆ. ಈ ವ್ಯಾಪ್ತಿಯ ಪುಸ್ತಕ ಕನ್ನಡದಲ್ಲಿ ಇದೇ ಮೊದಲ ಬಾರಿಗೆ ಪ್ರಕಟವಾಗುತ್ತಿದೆ. ಕನ್ನಡದ ಹೆಸರಾಂತ ಹಿರಿಯ ಕಿರಿಯ ಲೇಖಕರು ಈ ಸಂಪುಟಕ್ಕೆ ಬರೆದಿದ್ದಾರೆ.

ಮಹತ್ವದ ಈ ವಿಮರ್ಶಾಕೃತಿ ಇನಾಂದಾರರ ಜನ್ಮಶತಾಬ್ದ ವರ್ಷದಲ್ಲಿ ಇದೀಗ ಮರುಮುದ್ರಣಗೊಂಡು ಸಾಹಿತ್ಯಾಸಕ್ತರಿಗೆ ಮತ್ತೊಮ್ಮೆ ಲಭ್ಯವಾಗುತ್ತಿದೆ.

ವಿಮರ್ಶೆ / **critique**

ISBN 938305250-3
9 789383 052509 09
ಬೆಲೆ ರೂ. 350

ವಸಂತ ಪ್ರಕಾಶನ
ನಂ. 360, 10ನೇ 'ಬಿ'ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು – 560 011
ದೂರವಾಣಿ: **22443996**
email: info@vasanthaprakashana.com
www. vasanthaprakashana.com